(B) 025245_1

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹದಿಮೂರನೇ ವಿಧಾನಸಭೆಯ ಐದನೇ ಅಧಿವೇಶನ

FIFTH SESSION OF THE THIRTEENTH LEGISLATIVE ASSEMBLY

ಸಂಪುಟ – ೨ (ಕ್ರಮಾಂಕ – ೪ ಮತ್ತು ೫)

Volume - 2 (No. 4 and 5)

(೧೦ನೇ ಮಾರ್ಚ್ ೨೦೧೦ ಮತ್ತು ೧೧ನೇ ಮಾರ್ಚ್ ೨೦೧೦)

(10th March 2010 and 11th March 2010)

ಭಾಗ – ೩

PART – III

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹದಿಮೂರನೇ ವಿಧಾನಸಭೆಯ ಐದನೇ ಅಧಿವೇಶನ

FIFTH SESSION OF THE THIRTEENTH LEGISLATIVE ASSEMBLY

ಸಂಪುಟ – ೨ (ಕ್ರಮಾಂಕ – ೪ ಮತ್ತು ೫)
Volume - 2 (No. 4 and 5)

(೧೦ನೇ ಮಾರ್ಚ್ ೨೦೧೦ ಮತ್ತು ೧೧ನೇ ಮಾರ್ಚ್ ೨೦೧೦)

(10th March 2010 and 11th March 2010)

ಭಾಗ – ೩
PART – III

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ
ಹದಿಮೂರನೇ ವಿಧಾನಸಭೆಯ
ಐದನೇ ಅಧಿವೇಶನ

ಶ್ರೀ ಕೆ.ಜಿ. ಬೋಪಯ್ಯ
ಅಧ್ಯಕ್ಷರು

ಕರ್ನಾಟಕ ವಿಧಾನಸಭೆ

ವಿಷಯಾನುಕ್ರಮಣಿಕೆ

(10ನೇ ಮಾರ್ಚ್ 2010 ಮತ್ತು 11ನೇ ಮಾರ್ಚ್ 2010)

ಸಂಪುಟ – 2 (ಕ್ರಮಾಂಕ – 4 ಮತ್ತು 5)

ಬುಧವಾರ, ದಿನಾಂಕ: 10ನೇ ಮಾರ್ಚ್ 2010

ಪುಟ ಸಂಖ್ಯೆ

1. ಪ್ರಶ್ನೋತ್ತರ : 1794–1855
   (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.
   (ಆ) ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. ಅನುಬಂಧ – I

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು : 1855–1857
   (1) ಭಾರತ ಸಂವಿಧಾನ 151(2) ನೇ ಅನುಚ್ಛೇದದ ಮೇರೆಗೆ 2008–09ನೇ ಸಾಲಿನ ಹಣಕಾಸು ಲೆಕ್ಕಪತ್ರಗಳು ಹಾಗೂ ಧನವಿನಿಯೋಗ ಲೆಕ್ಕಪತ್ರಗಳು
   (2) ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರ್ಯಾಲೋಚನೆಗಾಗಿ ಬಂದಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ, 2009
   ಅನುಬಂಧ – II

3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ : 1857–1859
   ವಿಷಯ : ಕರ್ನಾಟಕ ಗೃಹ ಮಂಡಳಿಯ ಕಾರ್ಯವೈಖರಿ ಬಗ್ಗೆ.
   – ಶ್ರೀ ನೆ.ಲ. ನರೇಂದ್ರ ಬಾಬು
   – ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಸಚಿವರು)
   (ನಿಲುವಳಿ ಸೂಚನೆಯನ್ನು ತಿರಸ್ಕರಿಸಿದರು)

ಪುಟ ಸಂಖ್ಯೆ

4. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು: 1860–1872

(I) ವಿಷಯ : ಹಾಸನದಲ್ಲಿ ಹೌಸಿಂಗ್ ಬೋರ್ಡ್‌ನವರು ರೈತರ ಫಲವತ್ತಾದ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ.

– ಶ್ರೀ ಹೆಚ್.ಎಸ್. ಪ್ರಕಾಶ್

– ಶ್ರೀ ವೈ.ಎನ್. ರುದ್ರೇಶ್‌ಗೌಡ

– ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ ಸಚಿವರು)

(II) ವಿಷಯ : ದಕ್ಷಿಣ ಕನ್ನಡ ಕೃಷಿಕರ ಸಹಕಾರಿ ಮಾರಾಟ ಸಂಘದ ಬಗ್ಗೆ.

– ಶ್ರೀಮತಿ ಮಲ್ಲಿಕಾ ಪ್ರಸಾದ್

– ಶ್ರೀ ಬಿ.ರಮಾನಾಥ್ ರೈ

– ಶ್ರೀ ಎನ್. ಯೋಗೀಶ್ ಭಟ್

– ಕುಮಾರಿ ಶೋಭಾ ಕರಂದ್ಲಾಜೆ

– ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)

5. ಶಾಸನ ರಚನೆ : 1872–1919

(ಅ) ವಿಧೇಯಕ ಮಂಡನೆ

(I) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2010 – ಅನುಬಂಧ – III

(II) ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ವಿಧೇಯಕ, 2010 – ಅನುಬಂಧ – IV

ಪುಟ ಸಂಖ್ಯೆ

– ಶ್ರೀ ಎಸ್. ಸುರೇಶ್ ಕುಮಾರ್
(ಕಾನೂನು & ಸಂಸದೀಯ
ವ್ಯವಹಾರಗಳ ಸಚಿವರು)
– ಮಂಡಿಸಲಾಯಿತು

(ಆ) ವಿಧೇಯಕಗಳನ್ನು ಪುನರ್ ಪರ್ಯಾಲೋಚಿಸುವುದು
ಹಾಗೂ ಅಂಗೀಕರಿಸುವುದು

(I) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ
ವಿಧೇಯಕ, 2009
– ಶ್ರೀ ಎಸ್. ಎ. ರವೀಂದ್ರ ನಾಥ್ (ಕೃಷಿ ಸಚಿವರು)
– ಶ್ರೀ ಟಿ. ಬಿ. ಜಯಚಂದ್ರ
– ಶ್ರೀ ಜಗದೀಶ್ ಶೆಟ್ಟರ್
– ಶ್ರೀ ವೈ. ಎನ್. ರುದ್ರೇಶ್‌ಗೌಡ
– ಶ್ರೀ ಸೈಯದ್ ಯಾಸೀನ್
– ಶ್ರೀ ಕಿಮ್ಮನೆ ರತ್ನಾಕರ್
– ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್
– ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ)
– ಡಾ: ಎಂ. ಸಿ. ಸುಧಾಕರ್
– ಶ್ರೀ ಹೆಚ್. ಕೆ. ಕುಮಾರಸ್ವಾಮಿ
– ಶ್ರೀ ಸಿದ್ದರಾಮಯ್ಯ (ವಿ.ಪ. ನಾಯಕರು)
(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ
ಪುನರ್ ಒಪ್ಪಿಗೆ ನೀಡಲಾಯಿತು)

(II) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ
ವಿಧೇಯಕ, 2009 ತೋಟಗಾರಿಕಾ ಸಚಿವರ ಪರವಾಗಿ.
– ಶ್ರೀ ಸಿ.ಎಂ. ಉದಾಸಿ
(ಲೋಕೋಪಯೋಗಿ ಸಚಿವರು)
– ಶ್ರೀ ಟಿ.ಬಿ. ಜಯಚಂದ್ರ

ಪುಟ ಸಂಖ್ಯೆ

– ಶ್ರೀ ಜಗದೀಶ್ ಶೆಟ್ಟರ್
(ಗ್ರಾಮೀಣಾಭಿವೃದ್ಧಿ ಸಚಿವರು)
(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ
ಪುನರ್ ಒಪ್ಪಿಗೆ ನೀಡಲಾಯಿತು)

(III) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ
ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ)
ವಿಧೇಯಕ, 2009

–(ಮುಂದೂಡಲಾಯಿತು)

6. ಅಧ್ಯಕ್ಷರ ತೀರ್ಪು : 1919–1922

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ
ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ)
ವಿಧೇಯಕ, 2009ರ ಸದನದ ಮುಂದೆ ಇದೆ ಇದಕ್ಕೂ
ಚುನಾವಣೆಗೂ ಯಾವುದೇ ಸಂಬಂಧ ಇರುವುದಿಲ್ಲ
ಈ ಬಿಲ್ಲನ್ನು ಮಂಡನೆ ಮಾಡಿ ಪರ್ಯಾಲೋಚನೆ
ಪ್ರಸ್ತಾವಕ್ಕೆ ಅನುಮತಿ ನೀಡಲಾಗಿದೆ.

7. ಶಾಸನ ರಚನೆ : 1922–1926

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ
ಅಂಗೀಕರಿಸುವುದು
ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ)
ವಿಧೇಯಕ, 2009

– ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಪುಟ ಸಂಖ್ಯೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ
ಒಪ್ಪಿಗೆ ನೀಡಲಾಯಿತು)

8. ವಿತ್ತೀಯ ಕಾರ್ಯಕಲಾಪಗಳು : 1926–1968

ವಿಷಯ : 2010–11ನೇ ಸಾಲಿನ ಆಯವ್ಯಯ ಅಂದಾಜುಗಳ
ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ.

– ಶ್ರೀ ಹೆಚ್. ಕೆ. ಕುಮಾರಸ್ವಾಮಿ
– ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ

9. ಗಮನ ಸೆಳೆಯುವ ಸೂಚನೆಗಳು : 1968–2021

(I) ವಿಷಯ : ಕುಮಟಾ ಮತಕ್ಷೇತ್ರದಲ್ಲಿ ಹಿಂದೂಗಳ
ಶವಸಂಸ್ಕಾರಕ್ಕೆ ಕಟ್ಟಿಗೆ ಅಭಾವವಿರುವ ಬಗ್ಗೆ.

– ಶ್ರೀ ದಿನಕರಕೇಶವ ಶೆಟ್ಟಿ
– ಶ್ರೀ ಜಗದೀಶ್ ಶೆಟ್ಟರ್
(ಗ್ರಾಮೀಣಾಭಿವೃದ್ಧಿ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)

(II) ವಿಷಯ : ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ
ಭಾಗಲಕ್ಷ್ಮಿ ಯೋಜನೆಯನ್ನು ವಿಸ್ತರಿಸುವ ಬಗ್ಗೆ.

– ಶ್ರೀ ಟಿ.ಬಿ. ಜಯಚಂದ್ರ
– ಶ್ರೀ ಪಿ.ಎಂ. ನರೇಂದ್ರಸ್ವಾಮಿ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

(III) ವಿಷಯ : ಹಳಿಯಾಳ–ಜೋಯಿಡಾ ತಾಲ್ಲೂಕುಗಳ
ಅರಣ್ಯ ಪ್ರದೇಶಗಳಲ್ಲಿ ಕಲ್ಲು ಮತ್ತು ಮರಳು
ಸಾಗಾಣಿಕೆಗೆ ಅರಣ್ಯ ಇಲಾಖೆಯವರು ತೊಂದರೆ
ನೀಡುತ್ತಿರುವ ಬಗ್ಗೆ.

ಪುಟ ಸಂಖ್ಯೆ

– ಶ್ರೀ ಸುನಿಲ್ ವಿ. ಹೆಗಡೆ
–ಶ್ರೀ ಜಗದೀಶ್ ಶೆಟ್ಟರ್
(ಗ್ರಾ. ಮತ್ತು ಪಂ. ರಾಜ್ ಸಚಿವರು)
(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ)
– ಶ್ರೀ ದಿನಕರಕೇಶವ ಶೆಟ್ಟಿ
– ಶ್ರೀ ಜೆ.ಡಿ. ನಾಯ್ಕ

(IV) ವಿಷಯ : ರಾಜ್ಯದಲ್ಲಿ ನೆಮ್ಮದಿ ಕೇಂದ್ರಗಳಿಂದ ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆಯ ಬಗ್ಗೆ.

– ಶ್ರೀ ಕೆ.ಎಂ. ಶಿವಲಿಂಗೇಗೌಡ
– ಶ್ರೀ ಜಗದೀಶ್ ಶೆಟ್ಟರ್
(ಗ್ರಾ. ಮತ್ತು ಪಂ.ರಾಜ್ ಸಚಿವರು)
(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ)

(V) ವಿಷಯ : ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ.
– ಶ್ರೀ ವೆಂಕಟರಾವ್ ನಾಡಗೌಡ
– ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು)

(VI) ವಿಷಯ : ಕೊಪ್ಪಳ ನಗರಕ್ಕೆ ಹೊಸದಾಗಿ ಸಂಚಾರಿ ಪೊಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ.
– ಶ್ರೀ ಕರಡಿ ಸಂಗಣ್ಣ ಅಮರಪ್ಪ
– ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು)

ಪುಟ ಸಂಖ್ಯೆ

(VII) ವಿಷಯ : ಸಂಡೂರು ತಾಲ್ಲೂಕಿನಲ್ಲಿರುವ ರಸ್ತೆಗಳು
ನೆರೆ ಹಾವಳಿಯಿಂದ ಸಂಪೂರ್ಣ ನಾಶವಾಗಿದ್ದು,
ಈ ರಸ್ತೆಗಳನ್ನು ದುರಸ್ತಿಗೊಳಿಸುವ ಬಗ್ಗೆ.

– ಶ್ರೀ ಇ.ತುಕಾರಾಂ
– ಶ್ರೀ ಸಿ.ಎಂ. ಉದಾಸಿ
(ಲೋಕೋಪಯೋಗಿ ಸಚಿವರು)
– ಶ್ರೀ ಸಿದ್ದರಾಮಯ್ಯ (ವಿ.ಪ.ನಾಯಕ)

(VIII) ವಿಷಯ : ಬೆಳಗಾವಿ ಜಿಲ್ಲೆ ಚಿಕ್ಕೋಡಿ–ಸದಲಗ ಮತಕ್ಷೇತ್ರ
ವ್ಯಾಪ್ತಿಯ ಕೆಲವು ಗ್ರಾಮ ಪಂಚಾಯತಿ ವ್ಯಾಪ್ತಿಯ
ಗ್ರಾಮಗಳಿಗೆ ಕುಡಿಯುವ ನೀರಿನ ಸಮರ್ಪಕ
ಕಾರ್ಯಾಚರಣೆಗೆ ಎಕ್ಸ್‌ಪ್ರೆಸ್ ಫೀಡರ್‌ಲೈನ್
ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ.

– ಶ್ರೀ ಪ್ರಕಾಶ್ ಬಿ. ಹುಕ್ಕೇರಿ
– ಶ್ರೀ ಜಗದೀಶ್ ಶೆಟ್ಟರ್
(ಗ್ರಾ. ಮತ್ತು ಪಂ. ರಾಜ್ ಸಚಿವರು)

(IX) ವಿಷಯ : ಕರ್ನಾಟಕ ಅರ್ಬನ್ ಹೌಸಿಂಗ್ ಸೊಸೈಟಿಯಲ್ಲಿ
ನಿವೇಶನ ಹಂಚಿಕೆ ಹಾಗೂ ಇನ್ನಿತರ ವಿಷಯಗಳಲ್ಲಿ
ಆಗಿರುವ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ.

– ಶ್ರೀ ನೆ.ಲ. ನರೇಂದ್ರ ಬಾಬು
– ಶ್ರೀ ಸಿ.ಎಂ. ಉದಾಸಿ
(ಲೋಕೋಪಯೋಗಿ ಸಚಿವರು)
(ಸಹಕಾರ ಸಚಿವರ ಪರವಾಗಿ)
– ಶ್ರೀ ಸಿದ್ದರಾಮಯ್ಯ (ವಿ.ಪ.ನಾಯಕ)

ಪುಟ ಸಂಖ್ಯೆ

– ಶ್ರೀ ದಿನೇಶ್ ಆರ್. ಗುಂಡೂರಾವ್
– ಶ್ರೀ ಟಿ.ಬಿ. ಜಯಚಂದ್ರ
:

10. ಪ್ರಕಟಣೆ : 2022

ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನ

11. ಅನುಬಂಧ – I, II, III, IV : 2023-2303

* * *

ಗುರುವಾರ, ದಿನಾಂಕ: 11ನೇ ಮಾರ್ಚ್ 2010

1. ಪ್ರಶ್ನೋತ್ತರಗಳು : 2304–2385

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. ಅನುಬಂಧ–1

2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು : 2386

3. ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿಕೆ : 2386–2400

ವಿಷಯ: ನಾಗಮಂಗಲ ಕ್ಷೇತ್ರದ ಶಾಸಕರ ಮೇಲೆ ಅರಣ್ಯ ಅಧಿಕಾರಿಗಳು ನಾಗಮಂಗಲ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಿರುವ ಬಗ್ಗೆ.

ಪುಟ ಸಂಖ್ಯೆ

– ಶ್ರೀ ಕೆ. ಸುರೇಶ್‌ಗೌಡ
– ಶ್ರೀ ಸಿ.ಟಿ. ರವಿ
– ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್
– ಶ್ರೀ ಸಿ.ಎಸ್. ಪುಟ್ಟರಾಜು
– ಶ್ರೀ ಟಿ.ಬಿ. ಜಯಚಂದ್ರ
– ಶ್ರೀ ಎಸ್. ಸುರೇಶ್ ಕುಮಾರ್
(ಕಾನೂನು & ಸಂಸದೀಯ
ವ್ಯವಹಾರಗಳ ಸಚಿವರು)

(ಈ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಲಾಯಿತು)

4. ವಿತ್ತೀಯ ಕಾರ್ಯಕಲಾಪಗಳು : 2400–2429

2010–11ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರಿದ ಚರ್ಚೆ.

– ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ

5. ವಿತ್ತೀಯ ಕಾರ್ಯಕಲಾಪಗಳು : 2429–2477

2009–10ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಹಾಗೂ ಅಂತಿಮ ಕಂತು) ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

– ಶ್ರೀ ಸಿದ್ದರಾಮಯ್ಯ
– ಶ್ರೀ ಕೆ.ಎಂ. ಶಿವಲಿಂಗೇಗೌಡ
– ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್
– ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)
(ಅಂಗೀಕರಿಸಲಾಯಿತು)

ಪುಟ ಸಂಖ್ಯೆ

6. ಶಾಸನ ರಚನೆ : 2477–2501

(ಅ) ವಿಧೇಯಕ ಮಂಡನೆ ಹಾಗೂ ಪರ್ಯಾಲೋಚನಾ ಪ್ರಸ್ತಾವ :

(1) ಕರ್ನಾಟಕ ಧನವಿನಿಯೋಗ ವಿಧೇಯಕ–2010.

(ಆ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು:

(1) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ–2010

– ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು)
– ಶ್ರೀ ಟಿ.ಬಿ.ಜಯಚಂದ್ರ
– ಶ್ರೀ ಡಿ.ಕೆ.ಶಿವಕುಮಾರ್
– ಶ್ರೀ ಹೆಚ್.ಡಿ.ರೇವಣ್ಣ
– ಶ್ರೀ ವೆಂಕಟರಾವ್ ನಾಡಗೌಡ

7. ಗಮನ ಸೆಳೆಯುವ ಸೂಚನೆಗಳು : 2501–2591

ಅ) ವಿಷಯ : ಬೆಂಗಳೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ತಲೆದೋರಿರುವ ಕುಡಿಯುವ ನೀರಿನ ಬಗ್ಗೆ.

– ಶ್ರೀ ದಿನೇಶ್ ಗುಂಡೂರಾವ್
– ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ & ಮಾಹಿತಿ ತಂತ್ರಜ್ಞಾನ ಸಚಿವರು)
– ಶ್ರೀ ಡಿ.ಕೆ. ಶಿವಕುಮಾರ್

ಪುಟ ಸಂಖ್ಯೆ

– ಕು. ಶೋಭಾ ಕರಂದ್ಲಾಜೆ
– ಶ್ರೀ ಎಸ್.ಎ. ಹ್ಯಾರೀಸ್

ಆ) ವಿಷಯ : ಗೋವಾ ಮಹಾರಾಷ್ಟ್ರ ರಾಜ್ಯಗಳಲ್ಲಿ ಇತ್ತೀಚೆಗೆ ಬೀಸಿದ ಪಿಯಾನ್ ಚಂಡ ಮಾರುತದಲ್ಲಿ ಕುಮಟಾ ಹಾಗೂ ಭಟ್ಕಳ ತಾಲ್ಲೂಕಿನಲ್ಲಿ ಸಾವಿಗೀಡಾದ ಹಲವಾರು ಮೀನುಗಾರರ ಕುಟುಂಬಗಳಿಗೆ ಪರಿಹಾರ ವಿತರಣೆಯಾಗದಿರುವ ಬಗ್ಗೆ.

– ಶ್ರೀ ದಿನಕರ ಶೆಟ್ಟಿ
– ಶ್ರೀ ಆನಂದ ಅಸ್ನೋಟಿಕರ್
(ಮೀನುಗಾರಿಕಾ ಸಚಿವರು)

ಇ) ವಿಷಯ : ಪಶ್ಚಿಮವಾಹಿನಿ ಯೋಜನೆ ಅನುಷ್ಠಾನವಾಗದಿರುವ ಬಗ್ಗೆ.

– ಶ್ರೀ ಬಿ.ರಮಾನಾಥ ರೈ
– ಶ್ರೀ ಗೋವಿಂದ ಎಂ. ಕಾರಜೋಳ
(ಸಣ್ಣ ನೀರಾವರಿ ಸಚಿವರು)

ಈ) ವಿಷಯ : ರಾಜ್ಯದಲ್ಲಿ ನ್ಯಾಷನಲ್ ರೂರಲ್ ಹೆಲ್ತ್ ಮಿಷನ್ (ಎನ್.ಆರ್.ಹೆಚ್.ಎಂ) ಅಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನೇಮಕ ಮಾಡಿಕೊಂಡಿರುವ ಶುಶ್ರೂಷಕ/ಶುಶ್ರೂಷಕಿಯವರನ್ನು ಖಾಯಂಗೊಳಿಸುವ ಬಗ್ಗೆ.

ಪುಟ ಸಂಖ್ಯೆ

– ಶ್ರೀ ಎಸ್.ಆರ್. ಮಹೇಶ್

– ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಸಚಿವರು)

ಉ) ವಿಷಯ : ರಾಜ್ಯದ ಖಾಸಗಿ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಗಳ ಷೇರುದಾರರಿಗೆ ಸಮನಾಗಿ ಒಂದೇ ದರದಲ್ಲಿ ಸಕ್ಕರೆ ವಿತರಿಸುವ ಬಗ್ಗೆ.

– ಶ್ರೀ ಪ್ರಕಾಶ್ ಬಿ. ಹುಕ್ಕೇರಿ

– ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಊ) ವಿಷಯ : 2500 ಜನ ಪರವಾನಿಗೆ ಭೂಮಾಪಕರಿಗೆ ಕನಿಷ್ಠ ವೇತನ ಅಥವಾ ಖಾಯಂಗೊಳಿಸುವ ಬಗ್ಗೆ.

– ಶ್ರೀ ಟಿ.ಬಿ. ಜಯಚಂದ್ರ

– ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು)

– ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)

ಋ) ವಿಷಯ : ಕರ್ನಾಟಕ ಗೃಹ ಮಂಡಳಿಯಲ್ಲಿ ಕಳೆದ ಎರಡು ವರ್ಷಗಳಿಂದ ವಸತಿ ಹೀನರಿಗೆ ಮನೆಗಳನ್ನು ನಿರ್ಮಿಸಿಕೊಡುವ ಬಗ್ಗೆ.

– ಶ್ರೀ ನೆ.ಲ.ನರೇಂದ್ರಬಾಬು

– ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ವಸತಿ ಸಚಿವರು)

ಪುಟ ಸಂಖ್ಯೆ

– ಶ್ರೀ ಹೆಚ್.ಡಿ. ರೇವಣ್ಣ

– ಶ್ರೀ ಸಿದ್ದರಾಮಯ್ಯ

– ಶ್ರೀ ತನ್ವೀರ್ ಸೇಠ್

– ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು
(ವಸತಿ ಸಚಿವರು)

ಎ) ವಿಷಯ : ಸಾರ್ವಜನಿಕ ಸ್ಮಶಾನದ ಜಮೀನನ್ನು
ತೆರವುಗೊಳಿಸುವ ಬಗ್ಗೆ.

– ಡಾ: ಎಂ.ಸಿ. ಸುಧಾಕರ್

– ಶ್ರೀ ಜಿ. ಕರುಣಾಕರ ರೆಡ್ಡಿ
(ಕಂದಾಯ ಸಚಿವರು)

8. ಪ್ರಕಟಣೆ : 2591–2592

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ
ಬಂದ ಸಂದೇಶದ ಬಗ್ಗೆ.

1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ)
ವಿಧೇಯಕ, 2009

2) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ
ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2009

9. ಅನುಬಂಧ – I : 2592–2894

* * * * *

O.17 F–3

ಕರ್ನಾಟಕ ವಿಧಾನಸಭೆ
ಬುಧವಾರ, 10ನೇ ಮಾರ್ಚ್ 2010ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ
ಸಮಾವೇಶಗೊಂಡಿತ್ತು.

ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು
ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರ :

ಅ) ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಮಂಗಳೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಯ ಬಗ್ಗೆ :

32 (675) ಶ್ರೀ ಖಾದರ್ ಯು.ಟಿ.(ಮಂಗಳೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ಗಡಿ ಭಾಗದ ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗಿರುವುದು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಮಂಗಳೂರು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 03 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿರುತ್ತವೆ.

1. ಮಂಗಳೂರು ಉತ್ತರದ ಕಾವೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇದೆ.

2. ಮಂಗಳೂರು ದಕ್ಷಿಣದ ರಥಬೀದಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹಾಗೂ
3. ಸರ್ಕಾರಿ ಮಹಿಳಾ ಕಾಲೇಜುಗಳು ಇರುತ್ತವೆ.

ಆದ್ದರಿಂದ ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮತ್ತೊಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವ ಅವಶ್ಯಕತೆ ಇರುವುದಿಲ್ಲ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ನನಗೆ ಉತ್ತರ ದೊರೆತಿದೆ. ಆದರೆ ದೊಡ್ಡ ಆಶ್ಚರ್ಯವೇನೆಂದರೆ, ಈ ಹಿಂದೆ ಕ್ಷೇತ್ರ ವಿಂಗಡಣೆಯಾಗುವ ಮೊದಲು ಉಳ್ಳಾಲ ಕ್ಷೇತ್ರವೆಂದು ಇತ್ತು, ನಂತರ ಕ್ಷೇತ್ರ ವಿಂಗಡಣೆಯಾದ ಮೇಲೆ ಮಂಗಳೂರು ಕ್ಷೇತ್ರವೆಂದು ಆಗಿದೆ. ಆದರೆ ಇಲ್ಲಿ ಮಾನ್ಯ ಯೋಗೀಶ್‌ಭಟ್ ರವರ ದಕ್ಷಿಣ ಕ್ಷೇತ್ರದ ಉತ್ತರವನ್ನು ನನಗೆ ಕೊಟ್ಟಿದ್ದಾರೆ. ಇವತ್ತು ಶಿಕ್ಷಣಾಧಿಕಾರಿಗಳಿಗೆ ಕ್ಷೇತ್ರವಾರು ಹೆಸರುಗಳನ್ನು ಕೊಡುವುದು ಸರಿಯಾಗಿ ಗೊತ್ತಿಲ್ಲವೆಂಬುದು ಇದರಿಂದ ನಮಗೆ ಅರ್ಥವಾಗುತ್ತದೆ. ಈಗ ನಾನು ಯಾವುದರ ಬಗ್ಗೆ Clarification ಕೇಳಬೇಕೆಂಬುದು ನನಗೆ ಅರ್ಥವಾಗುವುದಿಲ್ಲ. ಇಲ್ಲಿ ಮಂಗಳೂರು ದಕ್ಷಿಣಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) (ಉನ್ನತ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಇಲ್ಲಿ ಮಂಗಳೂರು ದಕ್ಷಿಣಕ್ಕೆ ಸಂಬಂಧಪಟ್ಟಂತೆ ಉತ್ತರವಿದ್ದರೂ ಸಹ ಈಗಾಗಲೇ ಮಂಗಳೂರಿನಲ್ಲಿ ಮೂರು ಪ್ರಥಮ ದರ್ಜೆ ಕಾಲೇಜುಗಳಿವೆ. ಈಗ ಮಾನ್ಯ ಯು.ಟಿ.ಖಾದರ್‌ರವರ ಬೇಡಿಕೆ ಬಹುಶಃ ಅವರ ಕ್ಷೇತ್ರದಲ್ಲೂ ಇನ್ನೊಂದು ಕಾಲೇಜ್ ಬೇಕೆನ್ನುವಂಥದ್ದು ಇರಬಹುದು ತಾವು ಆ ವಿಷಯದ ಬಗ್ಗೆ ಪ್ರಸ್ತಾಪಿಸಿದರೆ.. ..

ಶ್ರೀ ಯು.ಟಿ.ಖಾದರ್ : ನಾನು ಮಂಗಳೂರು ವಿಧಾನ ಸಭಾ ಕ್ಷೇತ್ರವೆಂದು ಕೇಳಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಲ್ಲಿ ಕ್ಷೇತ್ರ ದಕ್ಷಿಣ ಉತ್ತರ, ಎಂದು ಹೇಳುವುದಕ್ಕಿಂತಲೂ ಹೆಚ್ಚಾಗಿ ಮಂಗಳೂರಿನಲ್ಲಿ ನಿಮ್ಮ ಭಾಗದ ಮಕ್ಕಳಿಗೆ

ಅನುಕೂಲವಾಗುವಂತೆ ಇನ್ನೊಂದು ಕಾಲೇಜ್ ಬೇಕೆನ್ನುವಂತ ಅಭಿಪ್ರಾಯ ತಮ್ಮಲ್ಲಿ ಇರಬಹುದು. ತಾವು ಆ ವಿಷಯವನ್ನು ಪ್ರಸ್ತಾಪಿಸಿದರೆ ಅದಕ್ಕೆ ಸರ್ಕಾರದ ಉತ್ತರ ಏನೆಂಬುದನ್ನು ತಿಳಿಸುತ್ತೇನೆ.

ಶ್ರೀ ಯು.ಟಿ.ಖಾದರ್ : ನಾನು ನನಗೆ ಬಂದ ಉತ್ತರದ ಬಗ್ಗೆ ಹೇಳಿದ್ದೇನೆ. ನನ್ನ ಕ್ಷೇತ್ರದ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ನನಗೆ ಬಂದ ಉತ್ತರದ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಇನ್ನು ಮುಂದೆ ಆದರೂ ಎಲ್ಲಾ department ಗಳಲ್ಲಿ ಮಂಗಳೂರು ಯಾವುದು, ಮಂಗಳೂರು ದಕ್ಷಿಣ ಯಾವುದು, ಮಂಗಳೂರು ಉತ್ತರ ಯಾವುದೆಂಬುದನ್ನು ಸರಿಯಾಗಿ ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಈಗ ನನ್ನ ಕ್ಷೇತ್ರಕ್ಕೆ ಪುನರ್ ವಿಂಗಡಣೆ ನಂತರ ಮಂಗಳೂರು ಎಂದು ಹೆಸರನ್ನು ಕೊಟ್ಟಿದ್ದರೂ ಕೂಡ ಎಲ್ಲವೂ ಗ್ರಾಮೀಣ ಮಟ್ಟದಲ್ಲಿದೆ ಮಂಗಳೂರು ಸಿಟಿಯ ನಂತರ ನನ್ನ ಕ್ಷೇತ್ರ ಹಳ್ಳಿಯೂ ಅಲ್ಲ, ಪೇಟೆಯೂ ಅಲ್ಲವೆನ್ನುವ ಪರಿಸ್ಥಿತಿ ಯಾಗಿದೆ, ಏಕೆಂದರೆ ಇದು ಪೇಟೆಯಿಂದ 10 ಕಿ.ಮೀ. ಮಾತ್ರ ದೂರದಲ್ಲಿದೆ.

ಅಧ್ಯಕ್ಷರು : ನೀವು ಉಳ್ಳಾಲಕ್ಕೆ ಎಂದು ಕೇಳಬೇಕಾಗಿತ್ತು.

ಶ್ರೀ ಯು.ಟಿ.ಖಾದರ್ : ಈಗ ಅದು ಉಳ್ಳಾಲಕ್ಕೆ ಇಲ್ಲ, ನಮ್ಮ ಪ್ರದೇಶದಲ್ಲಿ ಜನ ವಸತಿ ಹೆಚ್ಚಾಗುತ್ತಿದೆ. ಈಗ ದಕ್ಷಿಣದಲ್ಲಿ 50 ಕ್ಕಿಂತಲೂ ಹೆಚ್ಚಿಗೆ Primary School ಗಳು ಇವೆ, 10 ಕ್ಕಿಂತ ಹೆಚ್ಚುಗೆ High School ಇವೆ, 2 ಪದವಿ ಪೂರ್ವ ಕಾಲೇಜ್ ಇವೆ. ಆದರೆ ಒಂದೇ ಒಂದು ಪ್ರಥಮ ದರ್ಜೆ ಕಾಲೇಜ್ ಇಲ್ಲ. ಇದನ್ನು ನಾನು ಚುನಾಯಿತನಾಗಿ ಬಂದ ಮೇಲೆ ಸತತವಾಗಿ 2, 3 ವರ್ಷಗಳಿಂದಲೂ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಮಾನ್ಯ ಶಂಕರಮೂರ್ತಿ ಯವರು ಸಚಿವರಾಗಿದ್ದಾಗ, ಈ ರಾಜ್ಯದಲ್ಲಿ ಎಲ್ಲಾ ಕಡೆ ಬಹಳಷ್ಟು ಕಾಲೇಜುಗಳನ್ನು ಕೊಟ್ಟರು, ನಮಗೆ ಅದು ಸಂತೋಷ. ನಾನು bye election ನಲ್ಲಿ ಆಯ್ಕೆಯಾಗಿ ಇಲ್ಲಿಗೆ ಬಂದು ಕೇಳಿದ ತಕ್ಷಣವೇ ಪಟ್ಟಿಯಾಗಿದೆ. ಅದು ಆದ ನಂತರ ಈ ರಾಜ್ಯದಲ್ಲಿ ಎಲ್ಲೂ ಕೊಡಲಿಲ್ಲವೆಂದು ಕಾಣುತ್ತದೆ. ಆದರೆ ನನ್ನ ಕಳಕಳಿ ಏನೆಂದರೆ ರಾಜ್ಯ ಸರ್ಕಾರ ಕೊಡಲಿಕ್ಕೆ ತೀರ್ಮಾನ ಮಾಡುತ್ತದೊ, ಇಲ್ಲವೊ ಎಂಬುದು ಗೊತ್ತಿಲ್ಲ. ನನ್ನ ಕ್ಷೇತ್ರವೂ ಸೇರಿಸಿ ಯಾವ ಕ್ಷೇತ್ರಗಳಲ್ಲಿ ಒಂದೂ ಪ್ರಥಮ ದರ್ಜೆ ಕಾಲೇಜುಗಳು ಇಲ್ಲ,

ಕನಿಷ್ಠ ಅಲ್ಲಿಗೆ ಕೊಡುವಂಥ ಕೆಲಸ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಖಾದರ್‌ರವರ ಹೊಸ ಕ್ಷೇತ್ರ ರಚನೆಯಾದ ನಂತರ ಆ ಕ್ಷೇತ್ರದಲ್ಲಿ degree college ಇಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ, High School,,Junior College ಎಲ್ಲವೂ ಅಲ್ಲಿ ಇರುವುದರಿಂದ, ಅಲ್ಲಿ degree college ಅಗತ್ಯ ಇದೆ, ಮತ್ತು ಅದು ಗಡಿ ಭಾಗ ಮತ್ತು ಗ್ರಾಮೀಣ ಭಾಗವೂ ಆಗುವುದರಿಂದ ಅಲ್ಲಿ Degree College ಅಗತ್ಯವಿದೆಯೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈಗಾಗಲೇ ತಾವು ಹೇಳಿದಂತೆ ಮಂಗಳೂರಿನಲ್ಲಿ ಮೂರು Degree College ಇವೆ, ಮೂರು aided institutions ಇವೆ, ಅದರ ಜೊತೆಗೆ ಅನುದಾನ ರಹಿತ ಶಾಲೆಗಳು ಇವೆ. ನಮ್ಮ ರಾಜ್ಯ ಮಟ್ಟದಲ್ಲಿ ಮಂಗಳೂರು ಶೈಕ್ಷಣಿಕವಾಗಿ ಉತ್ತಮವಾದಂಥ ಸೌಕರ್ಯ, ಸೌಲಭ್ಯವನ್ನು ಹೊಂದಿರುವಂಥದ್ದು. ಆದಾಗ್ಯೂ ಮಾನ್ಯ ಖಾದರ್‌ರವರು ಇನ್ನೊಂದು Degree College ಆ ಭಾಗಕ್ಕೆ ಬೇಕೆಂದು ಏನು ಹೇಳಿದ್ದಾರೆ, ಅದನ್ನು ಪರಿಶೀಲಿಸುತ್ತೇವೆ, ಆದರೆ 2006–07 ಮತ್ತು 2007–08ನೇ ಸಾಲಿನಲ್ಲಿ ಸುಮಾರು 182 ಹೊಸ ಕಾಲೇಜುಗಳನ್ನು ಕೊಟ್ಟಿದೆ. ನಿಮಗೆ ಗೊತ್ತಿರುವಂತೆ, ಆಗ ನೀವು ಇನ್ನು ಆಯ್ಕೆಯಾಗಿರಲಿಲ್ಲ. ಅದರ ನಂತರ bye election ನಲ್ಲಿ ತಾವು ಆಯ್ಕೆಯಾದಾಗ ಈ ಕಾಲೇಜುಗಳನ್ನು ಕೊಟ್ಟು ಆಗಿತ್ತು. ಈಗ ಕಾಲೇಜುಗಳನ್ನು ಹೆಚ್ಚು ಹೆಚ್ಚು ಕೊಡಬೇಕಾದಂಥ ಅಗತ್ಯತೆಗಳು ಬರುವ ದಿವಸಗಳಲ್ಲಿ ನಿರ್ಮಾಣವಾಗಬಹುದು. ಏಕೆಂದರೆ, ಮಾನ್ಯ ಯಡಿಯೂರಪ್ಪನವರು ಮೊನ್ನೆ ಮಂಡಿಸಿರುವಂಥ ಬಜೆಟ್‌ನಲ್ಲಿ ಉನ್ನತ ಶಿಕ್ಷಣಕ್ಕೆ ಶೇ. 12ರಷ್ಟು ವಿದ್ಯಾರ್ಥಿಗಳು ಹೋಗುತ್ತಿರುವುದನ್ನು ಬರುವ ವರ್ಷಗಳಲ್ಲಿ ಶೇ. 25ರ ಮಟ್ಟಕ್ಕೆ ನಮ್ಮ ರಾಜ್ಯದಲ್ಲಿ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಹಾಜರಾಗುವಂತೆ ಮಾಡಬೇಕೆನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಅದರ ಹಿನ್ನೆಲೆಯಲ್ಲಿ ಬರುವ ವರ್ಷಗಳಲ್ಲಿ ಖಾಸಗಿಯವರದ್ದಾಗಲಿ, ಸರ್ಕಾರದ್ದಾಗಲಿ, ಹೆಚ್ಚು ಹೆಚ್ಚು Degree College ಗಳನ್ನು ಕೊಡಬೇಕಾದಂಥ ಅಗತ್ಯತೆಗಳು ನಿರ್ಮಾಣವಾಗುತ್ತದೆ. ಅಂಥ ಸಂದರ್ಭದಲ್ಲಿ

ಮಾನ್ಯ ಯು.ಟಿ.ಖಾದರ್‌ರವರು ಹೇಳಿರುವಂಥ ಸಲಹೆಯನ್ನು ಪರಿಶೀಲಿಸಲಾಗುವುದು.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಏನಾದರೂ ಹಣದ ಸಮಸ್ಯೆ ಇದ್ದರೆ, ಮಂಗಳೂರು ವಿಶ್ವವಿದ್ಯಾಲಯದವರು ಪ್ರಥಮ ದರ್ಜೆಯ ಕಾಲೇಜ್ ಅನ್ನು ಪ್ರಾರಂಭಿಸಲು ತಾವು ಒಂದು direction ಕೊಟ್ಟರೆ, ಮಡಿಕೇರಿಯಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಇದೆ, ಮಂಗಳೂರು ಸಿಟಿಯಲ್ಲಿಯೂ ಇದೆ. ಆ ಕ್ಷೇತ್ರದಲ್ಲಿ ಗ್ರಾಮೀಣ ಮಟ್ಟದಲ್ಲಿ ಒಂದು ಕಾಲೇಜ್ ಅನ್ನು ವಿಶ್ವವಿದ್ಯಾಲಯದವರು ಪ್ರಾರಂಭ ಮಾಡಬಹುದಲ್ಲಾ.

ಅಧ್ಯಕ್ಷರು : ಆಯಿತು.

ಶ್ರೀ ಎ.ಎಸ್.ಪಾಟೀಲ (ನಡಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಲ್ಲಿ ಒಂದು ಮನವಿಯನ್ನು ಮಾಡುತ್ತೇನೆ. ಈ ಕ್ಷೇತ್ರಗಳ ಪುನರ್ ವಿಂಗಡಣೆಯಾದ ಮೇಲೆ ಬಹಳಷ್ಟು ಸಮಸ್ಯೆ ಇದೆ. ನನ್ನ ಮತಕ್ಷೇತ್ರ ದೇವರ ಹಿಪ್ಪರಗಿಯಲ್ಲಿ ಒಂದೇ ಒಂದು Degree College ಇಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ, ತಾವು ಹೇಳಿದ ಹಾಗೆ 12% ಇದ್ದದ್ದನ್ನು 25% ಮಾಡಬೇಕಾದರೆ College admissionಗೆ ಇಷ್ಟು problem ಇದೆಯೆಂದರೆ even P.U.C. 1st year ಗೆ admission ಮಾಡಿಸಬೇಕೆಂದರೆ, ತಾವು seat ಗಳನ್ನು limit ಮಾಡಿದ್ದೀರಿ. ಒಂದೊಂದು ಕಾಲೇಜುಗಳಲ್ಲಿ ಇಂತಿಷ್ಟೆ ತೆಗೆದುಕೊಳ್ಳಬೇಕೆಂದು ಮಾಡಿದ್ದೀರಿ.

ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ವಿದ್ಯಾರ್ಥಿಗಳಿಗೆ S.S.L.C. ಮುಗಿದ ಮೇಲೆ ಕಾಲೇಜುಗಳಲ್ಲಿ admission ಸಿಗುತ್ತಿಲ್ಲ. ಆದ್ದರಿಂದ ಕಾಲೇಜುಗಳನ್ನು ಹೆಚ್ಚು ಮಾಡಲು ವಿಳಂಬವಾಗುವುದಾದರೆ, ತಕ್ಷಣ ಸೀಟ್ಸ್ ಲಿಮಿಟ್‌ನ್ನಾದರೂ ಹೆಚ್ಚಿಗೆ ಮಾಡಿ. ವಿದ್ಯಾರ್ಥಿಗಳು P.U.C. ಮತ್ತು ಡಿಗ್ರಿಗಳಿಗೆ ಹೋಗಲು ಕಾಲೇಜುಗಳಿಗೆ ಸೀಟುಗಳನ್ನೇನು ಲಿಮಿಟ್ ಮಾಡಿದ್ದೀರಿ, ಆ ಲಿಮಿಟ್‌ನ್ನಾದರೂ ಹೆಚ್ಚಿಗೆ ಮಾಡಲು ಸರ್ಕಾರ ತಕ್ಷಣ ತೀರ್ಮಾನ ತೆಗೆದು ಕೊಳ್ಳಬೇಕು. ಇಲ್ಲದಿದ್ದರೆ ಗ್ರಾಮೀಣ ಪ್ರದೇಶಗಳಲ್ಲಿ ಬಹಳ ತೊಂದರೆಯಾಗುತ್ತದೆ. ನಮ್ಮಲ್ಲಿ ತಾಳಿಕೋಟೆ, ಮುದ್ದೆಬಿಹಾಳ, ಬಸವನ ಬಾಗೇವಾಡಿಗಳಲ್ಲಿ ಈ ರೀತಿ ತೊಂದರೆಯಾಗುತ್ತಿದೆ. ನಮ್ಮಲ್ಲಿ ಸಮಸ್ಯೆ ಏನಿದೆ ಎಂದರೆ, ಸೀಟ್ಸ್ ಲಿಮಿಟ್ ಇದೆ, ಇಷ್ಟಕ್ಕಿಂತ ಜಾಸ್ತಿ ತೆಗೆದುಕೊಳ್ಳಬಾರದು ಎಂದು ಸರ್ಕಾರದ

ಆದೇಶ ಇದೆ ಎಂದು ಹೇಳುತ್ತಾರೆ. ಅದಕ್ಕಾಗಿ, ದಯಮಾಡಿ ಮಾನ್ಯ ಮಂತ್ರಿಗಳು ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಮತ್ತು ಎಲ್ಲೆಲ್ಲಿ ಹೊಸ ಕಾಲೇಜುಗಳ ಅವಶ್ಯಕತೆ ಇದೆ, ಅಲ್ಲಿ ಹೊಸ ಕಾಲೇಜುಗಳನ್ನು ತೆಗೆಯಲು ಸರ್ಕಾರ ತಕ್ಷಣ ಮುಂದಾಗಬೇಕು ಎಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಹಾಗೆ ಇಲ್ಲಿ ಎರಡು ವಿಷಯ ಮುಖ್ಯವಾಗಿವೆ. ಮೊದಲನೆಯದು, ನಾವು ಗುಣಮಟ್ಟದ ಶಿಕ್ಷಣವನ್ನು ಕಾಯ್ದುಕೊಳ್ಳಬೇಕಾದ ಅಗತ್ಯತೆ ಇರುವುದರಿಂದ ಮಕ್ಕಳ intake ಅನ್ನು ಕಾಪಾಡಿಕೊಳ್ಳಬೇಕಾದ ಅಗತ್ಯತೆ ಇದೆ. ನಾವು ಕಾಲೇಜುಗಳಿಗೆ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡರೆ ನಮಗಿರುವಂಥ ಪ್ರಾಧ್ಯಾಪಕ ವರ್ಗದಿಂದ ಗುಣಮಟ್ಟದ ಶಿಕ್ಷಣವನ್ನು ಕೊಡಲಿಕ್ಕೆ ಸಾಧ್ಯವಾಗದೇ ಇರುವಂಥ ಸಂದರ್ಭಗಳೂ ಇವೆ. ಆ ಹಿನ್ನೆಲೆಯಲ್ಲಿ ಇದನ್ನು ನಾವು ಯೋಚಿಸ ಬೇಕಾಗಿದೆ. ಹೆಚ್ಚಿನ ಕಾಲೇಜುಗಳನ್ನು ಕೊಡುವುದೇ ಇದಕ್ಕೆ ಪರಿಹಾರ ವಾಗಬಹುದು. ಈಗಿರುವ ಕಾಲೇಜುಗಳಿಗೆ intake ಜಾಸ್ತಿ ಮಾಡುತ್ತಾ ಹೋದರೆ ನಾವು ಗುಣಮಟ್ಟವನ್ನು ಕಾಯ್ದುಕೊಳ್ಳಲು ಆಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ನಾವು ಯೋಚಿಸಬೇಕಾಗುತ್ತದೆ. ಈಗ ಕ್ಷೇತ್ರಾವಾರು ಪುನರ್ ವಿಂಗಡಣೆಯಾಗಿರುವುದರಿಂದ, ಅನೇಕ ಸದಸ್ಯರುಗಳಿಗೆ ಅವರವರ ಕ್ಷೇತ್ರದಲ್ಲಿ ಡಿಗ್ರಿ ಕಾಲೇಜು ಇಲ್ಲ ಅಥವಾ ಜೂನಿಯರ್ ಕಾಲೇಜು ಇಲ್ಲ ಎನ್ನುವ ಅಭಿಪ್ರಾಯಗಳು, ಭಾವನೆಗಳು ಬರಲಿಕ್ಕೆ ಅವಕಾಶವಿದೆ. ಆದರೆ ಇದೆಲ್ಲವನ್ನೂ ನಾವು ವೈಜ್ಞಾನಿಕವಾಗಿ ನೋಡಬೇಕಾಗುತ್ತದೆ. ಎಲ್ಲಿ ಕಾಲೇಜನ್ನು ಪ್ರಾರಂಭ ಮಾಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ನೋಡಬೇಕಾದಂಥ ಅಗತ್ಯತೆ ಇದೆಯೇ ಹೊರತು ಇದನ್ನೆಲ್ಲ ಕ್ಷೇತ್ರಾವಾರು ಲೆಕ್ಕಹಾಕಿಕೊಂಡು ಹೋದರೆ, ವಿದ್ಯಾರ್ಥಿಗಳು ಇಲ್ಲದೇ ಹೋದರೂ ಒಂದು ಕ್ಷೇತ್ರದಲ್ಲಿ ಒಂದು ಕಾಲೇಜನ್ನು ಮಾಡಬೇಕು ಎನ್ನುವ ಅಭಿಪ್ರಾಯಗಳು ಬಂದರೆ ಅದು ವಾಸ್ತವಿಕ ಆಗಲಿಕ್ಕಿಲ್ಲ. ಆಧರೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾದ, ವೈಜ್ಞಾನಿಕವಾದ ಸಮೀಕ್ಷೆಯನನು ಆಧರಿಸಿ ನಾವು ಕಾಲೇಜುಗಳನ್ನು ಪ್ರಾರಂಭಿಸುವುದು ಹೆಚ್ಚು ಸೂಕ್ತವಾಗಿರುತ್ತದೆ. ಮತ್ತು

ಖಾಸಗಿಯವರು ಕಾಲೇಜುಗಳನ್ನು ಪ್ರಾರಂಭಿಸಲು ಮುಂದೆ ಬಂದರೂ ಸಹ ನಾವು ಅವಕಾಶವನ್ನು ಮಾಡಿಕೊಡುತ್ತೇವೆ.

ಕುಣಿಗಲ್ ತಾಲ್ಲೂಕಿನಲ್ಲಿ ಅಂತರ್ಜಲದ ಬಗ್ಗೆ

33 (77) ಶ್ರೀ ರಾಮಸ್ವಾಮಿಗೌಡ ಬಿ.ಬಿ (ಕುಣಿಗಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂತರ್ಜಲ ಕೊರತೆಯಿಂದ ಕುಣಿಗಲ್ ತಾಲ್ಲೂಕಿನ ಬಹುತೇಕ ಗ್ರಾಮಗಳ ಕೊಳವೆ ಬಾವಿಗಳಲ್ಲಿ ನೀರು ಇಲ್ಲದೆ, ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು;

ಇ) ಹಾಗಿದ್ದಲ್ಲಿ, ಸಮಸ್ಯೆಯ ಖಾಯಂ ಪರಿಹಾರಕ್ಕೆ ಪರ್ಯಾಯ ಮಾರ್ಗಗಳನ್ನು ಹುಡುಕಲು ಸರ್ಕಾರ ಚಿಂತನೆ ನಡೆಸುವುದೆ; ಹಾಗೂ ಯೋಜನೆಯನ್ನು ರೂಪಿಸುವುದೇ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) ಸ್ಥಳೀಯ ಅವಶ್ಯಕತೆ ಆಧರಿಸಿ, ಪುನಃಶ್ಚೇತನ ಕಾಮಗಾರಿಗಳು ಮತ್ತು ಅನಿವಾರ್ಯವಾದಲ್ಲಿ, ಹೊಸ ಬೋರ್‌ವೆಲ್ ಕೊರೆಯುವಂತಹ ತುರ್ತು ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯತ್ ಮುಖ್ಯಸ್ಥರಿಗೆ ಅಧಿಕಾರ ನೀಡಲಾಗಿದೆ. ತಾಲ್ಲೂಕು ಪಂಚಾಯತ್ ಮುಖ್ಯಸ್ಥರಿಗೆ ಅಧಿಕಾರ ನೀಡಲಾಗಿದೆ. ತಾಲ್ಲೂಕು ಮಟ್ಟದ ನಿಯಂತ್ರಣಾ ಕೊಠಡಿಗಳನ್ನು ಸಮಸ್ಯೆಗೆ ಸ್ಪಂದಿಸಲು ಚುರುಕುಗೊಳಿಸಲಾಗಿದೆ.

ಇ) ಶಾಶ್ವತ ಕುಡಿಯುವ ನೀರಿನ ಪರಿಹಾರಕ್ಕಾಗಿ ಭೂಮಿಯ ಮೇಲ್ಮೈ ಜಲಮೂಲ ಆಧರಿಸಿ, ಬಹು ಗ್ರಾಮಗಳ ಯೋಜನೆ ರೂಪಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಪ್ರಶ್ನೆ ಸಂಖ್ಯೆ 33 (77)

ಶ್ರೀ ಬಿ.ಬಿ. ರಾಮಸ್ವಾಮಿಗೌಡ : ಮಾನ್ಯ ಸಭಾಧ್ಯಕ್ಷರೆ, ಉತ್ತರ ತಲುಪಿದೆ. ಆದರೆ ಇದು ಹಾರಿಕೆಯ ಉತ್ತರವಾಗಿದೆ ಎಂದು ನಾನಾದರೂ ಭಾವಿಸುತ್ತೇನೆ. ಕಳೆದ 8–10 ತಿಂಗಳುಗಳಿಂದ ನಾನು ಜಿಲ್ಲಾ ಉಸ್ತುವಾರಿ ಸಚಿವರಿಂದ ಹಿಡಿದು ಎಲ್ಲರಿಗೂ 10 ಪತ್ರಗಳಿಗೂ ಹೆಚ್ಚು ಪತ್ರಗಳನ್ನು ಬರೆದು ಒಂದು ಅಂದಾಜು ಪಟ್ಟಿಯನ್ನು ಕೂಡ ಸಲ್ಲಿಸಿ, ನಮ್ಮ ಕುಣಿಗಲ್ ತಾಲ್ಲೂಕಿನಲ್ಲಿ ಉಲ್ಬಣವಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಉತ್ತರದಲ್ಲಿ ಮಾನ್ಯ ಸಚಿವರು, ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ಎನ್ನುವ ಪ್ರಶ್ನೆಗೆ, ಸ್ಥಳೀಯ ಅವಶ್ಯಕತೆ ಆಧರಿಸಿ, ಪುನಃಶ್ಚೇತನ ಕಾಮಗಾರಿಗಳು ಮತ್ತು ಅನಿವಾರ್ಯವಾದಲ್ಲಿ, ಹೊಸ ಬೋರ್‌ವೆಲ್ ಕೊರೆಯುವಂಥ ತುರ್ತು ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯತ್ ಮುಖ್ಯಸ್ಥರಿಗೆ ಅಧಿಕಾರ ನೀಡಲಾಗಿದೆ. ತಾಲ್ಲೂಕು ಮಟ್ಟದ ನಿಯಂತ್ರಣಾ ಕೊಠಡಿಗಳನ್ನು ಸಮಸ್ಯೆಗೆ ಸ್ಪಂದಿಸಲು ಚುರುಕುಗೊಳಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಜಿಲ್ಲಾ ಪಂಚಾಯಿತಿಯ ಮುಖ್ಯಸ್ಥರು, ನಮಗೆ ಸರ್ಕಾರದಿಂದ ಯಾವುದೇ ಒಂದು ಹೊಸ ಬೋರ್‌ವೆಲ್ ಅನ್ನು ಕೊರೆಯಬೇಡಿ ಎಂದು ಸರ್ಕಾರದಿಂದ ಆದೇಶ ಬಂದಿದೆ, ಯಾವುದೇ ಕಾರಣಕ್ಕೂ ನಾವು ಹೊಸ ಬೋರ್‌ವೆಲ್ ಕೊರೆಯವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತಾರೆ. ಕಳೆದ ಆಗಸ್ಟ್ ತಿಂಗಳಲ್ಲೇ ನಾವು ಸುಮಾರು 1 ಕೋಟಿ 78 ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಯನ್ನು ಇಲಾಖೆಗೆ ಕಳುಹಿಸಿಕೊಟ್ಟಿದ್ದರೂ ಕೂಡ ಇವತ್ತಿನವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಈಗ ಗ್ರಾಮೀಣ ಪ್ರದೇಶಗಳಲ್ಲಿ ಊರಹಬ್ಬಗಳು ಮತ್ತು ಜಾತ್ರೆಗಳು ನಡೆಯುತ್ತಿವೆ. ನೀರಿನ ಸಮಸ್ಯೆ ಬಹಳ ಉಲ್ಬಣವಾಗಿರುವುದರಿಂದ Private tractorಗಳ ಮುಖಾಂತರ, tankerಗಳ ಮುಖಾಂತರ ನೀರನ್ನು ತರಿಸಿಕೊಳ್ಳುವಂಥ ಪರಿಸ್ಥಿತಿ ಉದ್ಭವವಾಗಿದೆ. ದಯಮಾಡಿ, ತಕ್ಷಣ ಹಣವನ್ನು ಬಿಡುಗಡೆ ಮಾಡಿ, ಹೊಸ ಬೋರ್‌ವೆಲ್‌ಗಳನ್ನು ಕೊರೆಸುವಂಥ ಕೆಲಸವನ್ನು ಮಾಡಬೇಕು ಎಂದು ಸರ್ಕಾರವನ್ನು ನಾನು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ರಾಮಸ್ವಾಮಿಗೌಡರು ಕುಣಿಗಲ್ ತಾಲ್ಲೂಕಿಗೆ ಸಂಬಂಧಿಸಿದಂತೆ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ. ಅಂತರ್ಜಲ ಕೊರತೆಯಿಂದ ಕುಣಿಗಲ್ ತಾಲ್ಲೂಕಿನಲ್ಲಿ ಮತ್ತು ಬಹುತೇಕ ಗ್ರಾಮಗಳಲ್ಲಿ ಕೊಳವೆ ಬಾವಿಗಳಲ್ಲಿ ನೀರಿಲ್ಲದೇ, ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಇದರ ಬಗ್ಗೆ ಇವತ್ತು ನಾವು ವಿಚಾರ ಮಾಡಬೇಕಾಗಿರುವುದೆಂದರೆ, ಒಂದು ತಾತ್ಕಾಲಿಕವಾದಂಥ ಪರಿಹಾರ, ಮತ್ತೊಂದು ಖಾಯಂ ಆದಂಥ ಪರಿಹಾರ. ಇವೆರಡನ್ನೂ ಇವತ್ತು ನಾವು ಹುಡುಕಬೇಕಾಗಿದೆ. ಬೋರ್‌ವೆಲ್‌ಗಳನ್ನು ಕೊರೆಯುವುದರ ಮೂಲಕ ತಾತ್ಕಾಲಿಕ ಪರಿಹಾರಗಳನ್ನು ಕೊಡಬಹುದು. ಆದರೆ ಅಂತರ್ಜಲವನ್ನು ಹೆಚ್ಚು ಮಾಡಲಿಕ್ಕೆ, recharge ಮಾಡಲಿಕ್ಕೆ ನಾವು ಯಾವ ಕೆಲವೊಂದು ಪ್ರಾಜೆಕ್ಟ್‌ಗಳನ್ನು, ಪ್ಲಾನ್‌ಗಳನ್ನು ಮಾಡಬೇಕೋ, ಅದರ ಬಗ್ಗೆ ಸರ್ಕಾರ ಹೆಚ್ಚು ಚಿಂತನೆ ಮಾಡುತ್ತದೆ ಎನ್ನುವ ಮಾತನ್ನು ನಾನು ಈ ಸದನದಲ್ಲಿ ಹೇಳಬಯಸುತ್ತಿದ್ದೇನೆ. ಈಗಾಗಲೇ ನಾವು ತುಮಕೂರು ಜಿಲ್ಲೆಯ ಮಡ್ಲೂರು ಮತ್ತು ಇತರ 11 ಗ್ರಾಮಗಳಲ್ಲಿ ಒಂದು ಪೈಲಟ್ ಪ್ರಾಜೆಕ್ಟ್ ತೆಗೆದುಕೊಂಡಿದ್ದು, ಹೇಮಾವತಿ ಕೆನಾಲ್‌ನಿಂದ ಈ ಗ್ರಾಮಗಳ ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ರಮವನ್ನು 64 ಕೋಟಿ ರೂಪಾಯಿಗಳಲ್ಲಿ ತೆಗೆದುಕೊಂಡಿದ್ದೇವೆ. ಅದರ ಪರಿಣಾಮವನ್ನು ನೋಡಿಕೊಂಡು, ಒಂದು ವೇಳೆ, ಹೇಮಾವತಿ ಕೆನಾಲ್‌ನಿಂದ ಈ ಗ್ರಾಮಗಳ ಕೆರೆಗಳಿಗೆ ನೀರು ತುಂಬುವುದು ಸಾಧ್ಯವಾದರೆ ಅದರಿಂದ ಅಂತರ್ಜಲದ ಮಟ್ಟ ಜಾಸ್ತಿಯಾಗಲು ಸಾಧ್ಯವಿದೆ. ಒಂದು ಸಲ ಇದು success ಆದರೆ, ತುಮಕೂರು ಜಿಲ್ಲೆಯ ಬೇರೆಬೇರೆ ತಾಲ್ಲೂಕುಗಳಿಗೆ, ಬೇರೆ ಬೇರೆ ಗ್ರಾಮಗಳಿಗೆ ಇದನ್ನು ವಿಸ್ತರಣೆ ಮಾಡುವಂಥ ಆಲೋಚನೆ ಸರ್ಕಾರಕ್ಕಿದೆ ಎನ್ನುವಂಥ ಮಾತನ್ನು ಹೇಳುತ್ತೇನೆ. ಅದರ ಜೊತೆಗೆ ಮೊನ್ನೆ ಮುಖ್ಯಮಂತ್ರಿಗಳು ಬಜೆಟ್ ಅನ್ನು ಮಂಡಿಸಿದಂಥ ಸಂದರ್ಭದಲ್ಲಿ ಸಹ ಅದರಲ್ಲಿ ಕೆಲವೊಂದು ಯೋಜನೆಗಳನ್ನು ನಿರೂಪಣೆ ಮಾಡಿದ್ದಾರೆ. "ಪ್ರತಿಯೊಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಮತ್ತು ಪ್ರತಿ ಗ್ರಾಮದಲ್ಲಿ ಜಲಪೂರಣ ವ್ಯವಸ್ಥೆಯನ್ನು ಕಲ್ಪಿಸಲು ನಾಲಾ ಒಡ್ಡುಗಳು, ಬಾಂದಾರಗಳು ಮುಂತಾದವುಗಳನ್ನು ನಿರ್ಮಿಸಲು ಉದ್ಯೋಗ ಖಾತರಿ ಯೋಜನೆಯ ಅನುದಾನದೊಡನೆ ವಿಶೇಷ ಅನುದಾನವನ್ನು ನೀಡಲಾಗುವುದು. ಪ್ರತಿ ತಾಲ್ಲೂಕಿನಲ್ಲಿ

ಉತ್ತಮವಾಗಿ ಜಲಪೂರಣ ಕಾಮಗಾರಿ ನಿರ್ವಹಿಸುವ ಗ್ರಾಮ ಪಂಚಾಯಿತಿಗೆ 5 ಲಕ್ಷ ರೂಪಾಯಿಗಳ ವಿಶೇಷ ಬಹುಮಾನವನ್ನು ನೀಡಲಾಗುವುದು. ರಾಜ್ಯದಲ್ಲಿ ಈ ವರ್ಷ ಕನಿಷ್ಠ 2 ಲಕ್ಷ ಜಲಪೂರಣ ಸ್ಥಾವರಗಳನ್ನು ನಿರ್ಮಿಸಲು 'ಜಲಸಿರಿ' ಆಂದೋಲನವನ್ನು 500 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು" ಎಂದು ಹೇಳಿದ್ದಾರೆ. ಅಂದರೆ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ನಾವು ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಅದರ ಜೊತೆಗೆ, "ಇನ್ನೂ ರಾಜ್ಯದ ವಿವಿಧ ಭಾಗಗಳಲ್ಲಿ, ಏತನೀರಾವರಿ ಯೋಜನೆ, ಚೆಕ್ ಡ್ಯಾಂ ಮತ್ತು ಬ್ಯಾರೇಜುಗಳ ನಿರ್ಮಾಣಕ್ಕಾಗಿ 2010-11ರಲ್ಲಿ 100 ಕೋಟಿ ರೂಪಾಯಿ ಒದಗಿಸಲಾಗುವುದು. ಸುಮಾರು 2,000 ಸಣ್ಣ ನೀರಾವರಿ ಕಾಮಗಾರಿಗಳಿಗೆ ಈ ವರ್ಷ ಒಟ್ಟು ಆಯವ್ಯಯ 842 ಕೋಟಿ ಒದಗಿಸುವ ಉದ್ದೇಶ ಮಾಡಿದೆ" ಎಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಯೋಜನೆಗಳನ್ನು ಈಗಾಗಲೇ announce ಮಾಡಿದ್ದಾರೆ ಮತ್ತು ಅವುಗಳಿಗೆ ಹಣವನ್ನೂ ಒದಗಿಸಿದ್ದಾರೆ. ಇದರ ಮುಖಾಂತರ ಅಂತರ್ಜಲ ಮಟ್ಟವನ್ನು ಸಾಕಷ್ಟು ಎತ್ತರ ಮಾಡುವುದು ಆಗುತ್ತದೆ. ಅದರ ಬಗೆ ನಾವು ಹೆಚ್ಚಿನ ಕಾಳಜಿಯನ್ನು ತೆಗೆದುಕೊಂಡಿದ್ದೇವೆ. ಇವತ್ತು ತುಮಕೂರು ಜಿಲ್ಲೆಯಲ್ಲಿ, ವಿಶೇಷವಾಗಿ ನಿಮ್ಮ ಕುಣಿಗಲ್ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ ಎನ್ನುವ ಮಾತನ್ನೇನು ಹೇಳಿದಿರಿ, ಅದಕ್ಕೆ ಒಂದು ಕಡೆ ಅಂತರ್ಜಲ ಹೆಚ್ಚು ಮಾಡುವ ಮೂಲಕ ಖಾಯಂ ಪರಿಹಾರವನ್ನು ಹುಡುಕುವುದು ಮತ್ತು ತಾತ್ಕಾಲಿಕ ಪರಿಹಾರವಾಗಿ ಎಲ್ಲೆಲ್ಲಿ ಬೋರ್‌ವೆಲ್ ಗಳನ್ನು ಕೊರೆಸಬೇಕೋ ಅದನ್ನು ಮಾಡುತ್ತೇವೆ. ನಿನ್ನೆಯೂ ಸಹ ಹಲವಾರು ಶಾಸಕರು ಕುಡಿಯುವ ನೀರಿನ ಸಲುವಾಗಿ ತಮ್ಮ ನೇತೃತ್ವದಲ್ಲಿರುವ task force ಗಳಿಗೆ ಹಣವನ್ನು ಬಿಡುಗಡೆ ಮಾಡಬೇಕು ಎನ್ನುವುದರ ಬಗ್ಗೆ ಹಲವಾರು ವಿಚಾರಗಳನ್ನು ಹೇಳಿದಾಗ, ನಿನ್ನೆಯೂ ನಾನು ಹೇಳಿದ್ದೇನೆ, ಆದಷ್ಟು ಬೇಗನೆ task force ಗಳನ್ನು ಪುನರುಜ್ಜೀವನಗೊಳಿಸಿ, ಅವುಗಳಿಗೆ ಹಣ ಬಿಡುಗಡೆ ಮಾಡುವುದಕ್ಕೆ ನಾನು ಈಗಾಗಲೇ ಯೋಚನೆ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆಯನ್ನು ಮಾಡಿದ್ದೇನೆ. ಹೀಗಾಗಿ, ಆದಷ್ಟು ಬೇಗನೆ ಬೋರ್‌ವೆಲ್‌ಗಳನ್ನು ಕೊರೆಸಲು task force

ಗಳಿಗೆ ಹಣ ಬಿಡುಗಡೆ ಮಾಡುವುದನ್ನು ನಾನು ಮಾಡುತೇನೆ ಎನ್ನುವಂಥ ಮಾತನ್ನು ಹೇಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಕುಣಿಗಲ್‌ನಲ್ಲಿ ತಕ್ಷಣ ಇರುವ ಕುಡಿಯುವ ನೀರಿನ ತೊಂದರೆಯ ಬಗ್ಗೆ ಅವರು ಕೇಳಿದರೆ, ನೀವು ಬಜೆಟ್‌ನಲ್ಲಿರುವುದನ್ನೆಲ್ಲ ಹೇಳಿದರೆ ಅದರಿಂದ ಸಮಸ್ಯೆ ಬಗೆಹರಿಯವುದಿಲ್ಲ. ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ನೀವು ಶಾಶ್ವತವಾಗಿರುವಂಥ ಏನು ಕಾರ್ಯಕ್ರಮಗಳನ್ನು ಹಾಕುತ್ತೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈಗ ಪ್ರಸ್ತುತ ಏನಾಗಿದೆ ಎಂದರೆ, ನಿಮ್ಮ ಉತ್ತರದಲ್ಲಿ ಏನು ಕೊಟ್ಟಿದ್ದೀರಿ ಎಂದರೆ, "Zilla Panchayat Chiefs' have been empowered to implement revival works and if it is inevitable to drill new bore wells for providing drinking water supply depending on the local need." ಎಂದು ಹೇಳಿದ್ದೀರಿ. ಇದು ಸರ್ಕಾರದ ಉತ್ತರ. ಆದರೆ ನೀವು ಇಲ್ಲಿ, task force ಮುಖೇನ ನಾವು ಹೆಚ್ಚು ಕಾರ್ಯಕ್ರಮಗಳನ್ನು ಹಾಕುತ್ತೇವೆ, ಅದಕ್ಕೆ ದುಡ್ಡು ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಅಲ್ಲಿ ವಸ್ತುಸ್ಥಿತಿ ಏನಾಗಿದೆ ಎಂದರೆ, ತುಮಕೂರು ಜಿಲ್ಲೆಗೆ ಕುಡಿಯುವ ನೀರಿಗೋಸ್ಕರ ಜಿಲ್ಲಾ ಪಂಚಾಯಿತಿಗೆ ಸಾಕಷ್ಟು ಹಣ ಇದುವರೆಗೆ ಬಿಡುಗಡೆಯಾಗಿಲ್ಲ. ಎಷ್ಟು ಹಣ ಬಿಡುಗಡೆಯಾಗ ಬೇಕಾಗಿತ್ತು, ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು ದಯಮಾಡಿ ಹೇಳಿ. Immediate ಆಗಿ need ಇತ್ತು ಎಂದರೆ ಅಲ್ಲಿ ಕೊಳವೆ ಬಾವಿ ಕೊರೆಯುವುದಕ್ಕೆ ಅವಕಾಶ ಇದೆಯೇ ಎನ್ನುವುದು ಮೊದಲನೆಯದಾಗಿ ನೋಡಬೇಕು. ಕೊಳವೆ ಬಾವಿ ವಿಚಾರ ಏನಾಗಿದೆ ಎಂದರೆ ಇದನ್ನು Deputy Commissioner ರವರೂ handle ಮಾಡುತ್ತಾರೆ, ಇವರೂ handle ಮಾಡುತ್ತಾರೆ. ಇವರು ಬೋರ್ ಕೊರೆದರೆ Deputy Commissioner ರವರು ತಾವು hand pump ಹಾಕುತ್ತೇವೆ ಎಂದು ಹೇಳುತ್ತಾರೆ. ನಾಲ್ಕೈದು ವರ್ಷಗಳಿಂದ ಇದುವರೆಗೆ ಕೊರೆದಿರುವ ಕೊಳವೆ ಬಾವಿಗಳಿಗೆ ಇದುವರೆಗೂ ಸಹ hand pump ಹಾಕುವುದಕ್ಕೆ ಆಗಿಲ್ಲ. ಅಧ್ಯಕ್ಷರೆ, ಈ ಸಮಸ್ಯೆ ನಿಮಗೆ ಇಲ್ಲದೇ ಇರಬಹುದು, ಬಯಲು ಪ್ರದೇಶದಿಂದ ಬಂದಿರತಕ್ಕಂಥ ನಮಗಿದೆ. ಇದನ್ನು coordinate ಮಾಡುವಂಥ ರೀತಿಯಲ್ಲಿ ಏನಾದರೂ ಒಂದು ಕಾರ್ಯಕ್ರಮವನ್ನು ಮಾಡಿದರೆ ಇದು ಖಂಡಿತ ಸಾಧ್ಯವಾಗುತ್ತದೆ. Temperature ಎಷ್ಟು raise

ಆಗಿದೆ ಎನ್ನುವುದಕ್ಕೆ ಒಂದು ಮಾಹಿತಿ ಹೇಳುತ್ತೇನೆ. ಯಾವತ್ತೂ ಕೂಡ ನಾನು temperature ಅನ್ನು test ಮಾಡುತ್ತಿರುತ್ತೇನೆ. ಇವತ್ತು 6 ಡಿಗ್ರಿ temperature ಜಾಸ್ತಿಯಾಗಿದೆ.

ನಮ್ಮ ಕ್ಷೇತ್ರದಲ್ಲಿ ಯಾವತ್ತೂ 38 degree ವರೆಗೂ ಹೋಗುವುದಕ್ಕೆ ಸಾಧ್ಯವೇ ಇರಲಿಲ್ಲ. 43–44 degree ವರೆಗೂ ಹೋಗಿದೆ ಎಂದರೆ ಇವತ್ತು ಅಂತರ್ಜಲದ ಗತಿ ಏನು, ಕುಡಿಯುವ ನೀರಿನ ಸಮಸ್ಯೆ ಏನೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಆ ಕಾರಣಕ್ಕೋಸ್ಕರ ನೀವು, ಕಂದಾಯ ಮಂತ್ರಿಗಳು ಕುಳಿತುಕೊಂಡು Coordinate ಮಾಡಿ ಕೆಲಸ ಮಾಡಿ. ಇವತ್ತು ನಿಮ್ಮ ಇಲಾಖೆಗೆ ಒಳ್ಳೆಯ ಕಾರ್ಯದರ್ಶಿ ಇದ್ದಾರೆ. ಅದಕ್ಕೆ ನೀವು ಕುಳಿತುಕೊಂಡು ಏನಾದರೊಂದು ವ್ಯವಸ್ಥೆ ಮಾಡಿ ಪರಿಹಾರ ಮಾಡತಕ್ಕ ಕೆಲಸ ಮಾಡಿ. ಬಾವಿ ಕೊರೆದು 3–4 ವರ್ಷಗಳಾದರೂ .ಅದಕ್ಕೆ hand pump ಹಾಕದಿರುವ ಪರಿಸ್ಥಿತಿ ಇರುವಾಗ immediate need ಏನಿದೆ, ಅದನ್ನು fulfill ಮಾಡುವುದಕ್ಕೆ ಜಿಲ್ಲಾಪಂಚಾಯತಿ ಮಟ್ಟದಲ್ಲಾಗುವುದಿಲ್ಲ, ಅಲ್ಲಿ ಹಣವಿಲ್ಲ. ದಯವಿಟ್ಟು, ಆ ಬಗ್ಗೆ ಉತ್ತರ ಹೇಳಿ.

ಶ್ರೀ ವಿ.ಮುನಿಯಪ್ಪ : ತುಮಕೂರು ಜಿಲ್ಲೆಯ ಒಂದೇ ಪ್ರಶ್ನೆಯಲ್ಲ. ಎಲ್ಲಿ ಮಳೆ ಬಹಳ ಕಡಿಮೆ ಬೀಳುತ್ತದೆ, ಅಂಥ ಬಯಲುಸೀಮೆ ಪ್ರದೇಶಗಳಾದ 5–6 ಜಿಲ್ಲೆಗಳ ಸಮಸ್ಯೆ ಇದಾಗಿದೆ. ಕೋಲಾರ, ಚಿಕ್ಕಬಳ್ಳಾಪುರ ದಲ್ಲಿ ಇನ್ನೂ ತೀವ್ರವಾದ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸು ತ್ತಿದ್ದೇವೆ. ಈಗಾಗಲೇ ಅನೇಕ ಕಡೆ ಕೊಳವೆ ಬಾವಿಗಳನ್ನು ಕೊರೆದಿದ್ದಾರೆ. ಕೊಳವೆ ಬಾವಿ ಕೊರೆದಿರುವ contractor ಗೆ ಹಣ ಕೊಡುತ್ತಿಲ್ಲ, ವಿದ್ಯುಚ್ಛಕ್ತಿ ಇಲ್ಲ. ಡಿ.ಸಿ.ಯವರನ್ನು ಕೇಳಿದರೆ ನಾವು equipment ಗೆ ಮಾತ್ರ ಹಣ ಕೊಡುತ್ತೇವೆ, ಕೊಳವೆ ಬಾವಿ ಕೊರೆದಿರುವುದಕ್ಕೆ ಹಣವನ್ನು ಜಿಲ್ಲಾ ಪಂಚಾಯಿತಿಯಿಂದಲೇ ಪಡೆದುಕೊಳ್ಳಬೇಕೆನ್ನುವ ಉತ್ತರ ಕೊಡುತ್ತಿದ್ದಾರೆ. ಹೀಗಾಗಿ, ಅಲ್ಲಿ ಕೊರೆದಿರುವ ಕೊಳವೆ ಬಾವಿಗಳಿಗೆ ಹಣ ಕೊಡದಿರುವು ದರಿಂದ ಯಾರೂ ಕೂಡ ಹೊಸ ಕೊಳವೆ ಬಾವಿಗಳನ್ನು ಕೊರೆಯುವುದಕ್ಕೆ ಬರುತ್ತಿಲ್ಲ. ಅಲ್ಲಿ ಬಹಳ ತೊಂದರೆಯಾಗಿದೆ. ಆದ್ದರಿಂದ, ತಕ್ಷಣ ನೀವು ಹಣ ಬಿಡುಗಡೆ ಮಾಡಬೇಕು. ಎಲ್ಲೆಲ್ಲಿ ಸಮಸ್ಯೆ ಇದೆ, task force ನಿಂದ ನಾವೇನು ಶಿಫಾರಸ್ಸು ಮಾಡುತ್ತೇವೆ, ಅಂಥ ಕಡೆ ತಕ್ಷಣ ಕೊಳವೆ ಬಾವಿ

ಕೊರೆಯುವುದಕ್ಕೆ ಹಣವನ್ನು ನೀವು reserve ಆಗಿ ಇಟ್ಟಿರಬೇಕು. ಇಂಥ ಸಂದರ್ಭದಲ್ಲಿ ನೀವು long range programme ಮಾಡಿದ್ದಕ್ಕೆ ಬಹಳ thanks. ಆದರೆ, ತಕ್ಷಣ ನೀರು ಕೊಡುವುದಕ್ಕೆ ಆದ್ಯತೆ ಮೇಲೆ ಹಣ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಈ ತರಹ ಎದ್ದು ನಿಂತು ಕೇಳಿದರೆ ಹೇಗೆ? ಬೇರೆ ರೂಪದಲ್ಲಿ ನೋಟೀಸ್ ಕೊಡಿ. ಸುಮ್ಮನೆ ಎದ್ದು ನಿಂತು ಮಾತನಾಡಿದರೆ ಹೇಗೆ? ತಾವು ಬಜೆಟ್ ಮೇಲೆ ಮಾತನಾಡುವಾಗ ಚರ್ಚೆ ಮಾಡಿ.

ಶ್ರೀ ವೆಂಕಟಶಿವಾರೆಡ್ಡಿ : ಕೋಲಾರ ಜಿಲ್ಲೆಯಲ್ಲಿ No water, No money ಎನ್ನುವ ರೀತಿ ಒಂದು circular issue ಮಾಡಿದ್ದಾರೆ. ಈಗ ಕೊಳವೆ ಬಾವಿ ಕೊರೆಯಲು ಯಾವ drillers ಸಹ ಮುಂದೆ ಬರುತ್ತಿಲ್ಲ. Immediate ಆಗಿ ಅದನ್ನು ಬದಲಾವಣೆ ಮಾಡಿ Circular change ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಎನ್. ಸಂಪಂಗಿ : ಕಳೆದ ವರ್ಷ ಏನು ಕೊಳವೆ ಬಾವಿ ಕೊರೆಯಲಾಗಿದೆ, ಅದಕ್ಕೆ ಇವತ್ತಿನವರೆಗೂ pipeline, motor ಆಗಲಿ ಅಳವಡಿಸಿರುವುದಿಲ್ಲ. ಬರ ಪ್ರದೇಶಗಳಿಗೆ ಕುಡಿಯುವ ನೀರನ್ನು immediate ಆಗಿ supply ಮಾಡಿ ಎನ್ನುವ ಆದೇಶ ಕೊಟ್ಟಿದ್ದಾರೆ. ಆದರೆ, ಯಾರೂ ಹಣ ಕೊಟ್ಟಿಲ್ಲ. ಈಗಾಗಲೇ drinking water scarcity ಸಲುವಾಗಿ taskforce committees ಗೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆದರೆ, ಇದುವರೆಗೆ ಹಣ ಬಿಡುಗಡೆ ಮಾಡಿಲ್ಲ. ಕಳೆದ ಸಲ ಬರ ಪ್ರದೇಶಗಳೆಂದು ಏನು ಘೋಷಣೆ ಮಾಡಿದರು, ಅಲ್ಲಿಗೆ ವಿಶೇಷ ಆದ್ಯತೆ ಮೇಲೆ ಹಣ ಬಿಡುಗಡೆ ಮಾಡಬೇಕೆಂದು ಮಂತ್ರಿಯವರನ್ನು ವಿನಂತಿಸುತ್ತೇನೆ.

ಶ್ರೀ ಸುರೇಶ್‌ಗೌಡ : ನಾನು ಇವತ್ತು ಬೆಳಿಗ್ಗೆ ಮಂಡ್ಯ ಡಿ.ಸಿ.ಯವರನ್ನು ಭೇಟಿಯಾಗಿದ್ದೆ. ಅವರು, borewell ಕೊರೆಯುವುದಕ್ಕೆ ನಮಗೆ ಸರ್ಕಾರದಿಂದ ಯಾವುದೇ permission ಇಲ್ಲವೆಂದು ಹೇಳುತ್ತಾರೆ. ಜೊತೆಗೆ, borewell contractors ಏನು ಹೇಳುತ್ತಿದ್ದಾರೆಂದರೆ, diesel rate ,

ಜಾಸ್ತಿಯಾಗಿರುವುದರಿಂದ ನಾವು ಹಳೆಯ S.R. rateನಲ್ಲಿ ಕೊರೆಯುವುದಿಲ್ಲ ವೆಂದು ಹೇಳುತ್ತಾರೆ. ನನ್ನ ಕ್ಷೇತ್ರದಲ್ಲಿಯೂ ಸಹ borewell ಕೊರೆಯಲು ಅವರಿಗೆ work order ಕೊಟ್ಟಿದ್ದರೂ ಸಹ diesel rate ಹೆಚ್ಚಾಗಿರುವುದರಿಂದ ನಮಗೆ ಲಾಸ್ ಆಗುತ್ತದೆ, ನಾವು ಕೊರೆಯುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ನಾವು ಶಾಸಕರು, ZP Engineers, E.O.S ಹೋಗಿ request ಮಾಡಿದರೂ ಅವರು ಕೊರೆಯುವುದಕ್ಕೆ ಬರುತ್ತಿಲ್ಲ. ದಯವಿಟ್ಟು, ಹಳೆಯ S.R. rate ಅನ್ನು revise ಮಾಡಿ.

ಶ್ರೀ ಬಿ.ಬಿ. ರಾಮಸ್ವಾಮಿಗೌಡ : ಎಲ್ಲಾ ವಾದ ವಿವಾದಗಳನ್ನು ನಾನು ಕೇಳಿದ್ದೇನೆ, ಅದು ಬೇರೆ ವಿಚಾರ. ನನ್ನ ಕ್ಷೇತ್ರಕ್ಕೆ ಪರಿಹಾರ ಸಿಕ್ಕಿಲ್ಲ. ಸರ್ಕಾರಕ್ಕೆ ಇಷ್ಟೊಂದು ಪ್ರಸ್ತಾವನೆಗಳನ್ನು ಕಳುಹಿಸಿದ್ದೇನೆ, ಇವತ್ತು ನಾನು ಆ ಊರುಗಳಿಗೆ, ಹಳ್ಳಿಗಳಿಗೆ ಹೋಗುವ ಹಾಗಿಲ್ಲ. ಎಲ್ಲಾ ಹೆಂಗಸರು ಪಾಪ ಕೊಡಗಳನ್ನು ತಂದು ಮುಂದೆ ನಿಲ್ಲುತ್ತಾರೆ, ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ. ನನ್ನ ನಿವೇದನೆಯನ್ನು ತಮ್ಮ ಮುಂದೆ ಹೇಳಿಕೊ ಳ್ಳುತ್ತಿದ್ದೇನೆ. ನಾವು ಹಳ್ಳಿಗಳಿಗೆ ಹೋಗದಂಥ ಪರಿಸ್ಥಿತಿ ಇರುವುದರಿಂದ ತಕ್ಷಣದಲ್ಲಿ ಪರಿಹಾರ ನೀಡಬೇಕೆಂದು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಜಯಚಂದ್ರ, ಇನ್ನಿತರ ಶಾಸಕ ಮಿತ್ರರು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅದರಲ್ಲಿಯೂ ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಬಹಳಷ್ಟು ವಿಷಯಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. Borewell ಕೊರೆಸುವ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಹೇಳಿದ ಹಾಗೆ, ಈ task force ಗಳಿಗೆ ಆದಷ್ಟು ಬೇಗನೆ ಹಣ ಬಿಡುಗಡೆ ಮಾಡುವಂಥದ್ದು ಮೊಟ್ಟ ಮೊದಲನೆಯದು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಕುಡಿಯುವ ನೀರಿನ ಸಮಸ್ಯೆ ತುಮಕೂರು, ಕೋಲಾರ ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಕೊಪ್ಪಳ, ರಾಯಚೂರು, ಎಲ್ಲಾ ಕಡೆ ಈ ಸಮಸ್ಯೆ ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಎಲ್ಲೆಲ್ಲಿ ಈ ರೀತಿ ಇದೆ, ಯಾವ ಭಾಗದಲ್ಲಿ ಈ ರೀತಿ ಕುಡಿಯುವ ನೀರಿನ ತೊಂದರೆ ಅನುಭವಿಸುತ್ತಿರುವಂಥದ್ದಿದೆ, ಎಲ್ಲಾ ಕಡೆಯೂ ಸಹ task force ತಂದಿದ್ದೇವೆ. ಆದಷ್ಟು ಬೇಗನೆ ಇದೇ ವಾರದಲ್ಲಿ ನಾನು ಹಣವನ್ನು release ಮಾಡುತ್ತೇನೆ. ನಮ್ಮ ಕುಣಿಗಲ್ ಶಾಸಕರು ಮತ್ತು ಮುನಿಯಪ್ಪನವರು ಹೇಳಿದ ಹಾಗೆ, ಆದಷ್ಟು ಬೇಗನೆ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೂ ಸಹ ಹಣ release ಮಾಡಿಸುತ್ತೇನೆ. ಉಳಿದ long term ಯೋಜನೆಗಳೇನಿವೆ, ಅದಕ್ಕೂ ಚಾಲನೆ ಕೊಡುವಂಥದ್ದು ಮಾಡುತ್ತೇವೆ. ಬೋರ್‌ವೆಲ್‌ಗಳನ್ನು ಕೊರೆಸುವಂಥದ್ದು ಇದು ತಾತ್ಕಾಲಿಕ ವ್ಯವಸ್ಥೆಯಾಗಿದೆ. ಇವತ್ತಿನ ಸಮಸ್ಯೆಗೆ ಪರಿಹಾರ ಹುಡುಕಬೇಕು. ಆದರೆ, ಅಂತರ್ಜಲ ಮಟ್ಟ ಹೆಚ್ಚಿಸುವ ಬಗ್ಗೆ ಕಾಳಜಿ ವಹಿಸಬೇಕು. ಜಯಚಂದ್ರರವರು ಮಾತನಾಡುತ್ತಾ, ಅಂತರ್ಜಲ ಮಟ್ಟ ಕಡಿಮೆಯಾಗುತ್ತಿದೆ, ತಾಪಮಾನ ಬದಲಾಗುತ್ತಿದೆ ಎಂದು ಹೇಳಿದರು. ಇದಕ್ಕೆಲ್ಲಾ ಖಾಯಂ ಆದ ಪರಿಹಾರವನ್ನೂ ಹುಡುಕಬೇಕಾಗುತ್ತದೆ. ಬಜೆಟ್‌ನಲ್ಲಿ ಘೋಷಣೆಯಾದದ್ದನ್ನೂ ಅನುಷ್ಠಾನ ಮಾಡುವ ಮುಖಾಂತರ ಪ್ರತಿ ವರ್ಷ ಪದೇ ಪದೇ ನಾವೇನು ತೊಂದರೆ ಅನುಭವಿಸುತ್ತೇವೆ, ಅದನ್ನು ನಿವಾರಣೆ ಮಾಡುವ ಕ್ರಮ ಕೈಗೊಳ್ಳಬೇಕಾಗುತ್ತದೆ. ಅದಕ್ಕೆ ಸರ್ಕಾರ ಬದ್ಧವಿದೆ. ಆದಷ್ಟು ಬೇಗನೆ ಬೋರ್‌ವೆಲ್ ಕೊರೆಸುವುದು ಮತ್ತು ಕುಡಿಯುವ ನೀರಿನ emergency ಏನಿದೆ, ಅದಕ್ಕೆ ಹಣವನ್ನು ಬಿಡುಗಡೆ ಮಾಡುವ ಕೆಲಸವನ್ನು ಇದೇ ವಾರದಲ್ಲಿ ಮಾಡುತ್ತೇನೆ.

ಅಧ್ಯಕ್ಷರು : ಗೋಪಾಲ ಭಂಡಾರಿಯವರೆ, ತಮ್ಮ ಪ್ರಶ್ನೆಗೆ ಎರಡು ದಿನಗಳ ಟೈಂ ಕೇಳಿದ್ದಾರೆ.

ಶ್ರೀ ಹೆಚ್, ಗೋಪಾಲ ಭಂಡಾರಿ : ನಾನು ಬಹಳ ಸರಳವಾದ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರ ನೀಡಲು ತಡವಾದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ತಾವು ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿಯ ವಿವರ ಕೇಳಿದ್ದೀರಿ. ಜಿಲ್ಲಾಪಂಚಾಯಿತಿಯಿಂದ ಮಾಹಿತಿ ಬಂದಿದೆ. ಆದರೆ, ಎಲ್ಲ mix ಆಗಿ ಬಂದಿದೆ. ಅದನ್ನೆಲ್ಲ ಸರಿಪಡಿಸಿ ನಾನು 2 days ನಲ್ಲಿ ಉತ್ತರ ಕೊಡುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಎಂ.ಎನ್.ಪಿ. ಯೋಜನೆ ಬಗ್ಗೆ

35 (707) ಶ್ರೀ ಜೆ.ಡಿ.ನಾಯ್ಕ (ಭಟ್ಕಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆ ಪಂಚಾಯತ್ ಭಟ್ಕಳ ತಾಲ್ಲೂಕಿನ ಬೆಳ್ಕೆ ಮತ್ತು ಮಾವಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಂ.ಎನ್.ಪಿ. ಯೋಜನೆ ಹಾಗೂ ಇತರೆ ವೈಯಕ್ತಿಕ ಕುಡಿಯುವ ನೀರಿನ ಯೋಜನೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; ವಿವರ ನೀಡುವುದು;

ಆ) ಈ ಕುಡಿಯುವ ನೀರಿನ ಯೋಜನೆಯಡಿ ಕೊರೆಯಲಾದ ಹಾಗೂ ತೋಡಲಾದ ಬಾವಿಗಳ ವಿವರ, ಸರ್ವೆ ನಂಬರ್ ಹಾಗೂ ಫಲಾನುಭವಿಗಳ ಹೆಸರು ಮತ್ತು ವಿಳಾಸದೊಂದಿಗೆ ಕಳೆದ ಮೂರು ವರ್ಷದಿಂದ ಖರ್ಚು ಬಾಬ್ತಿನೊಂದಿಗೆ ಕ್ಷೇತ್ರಾವಾರು ವಿವರ ನೀಡುವುದು;

ಇ) ಈ ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಕೆರೆಗಳ ಅಭಿವೃದ್ಧಿಗೆ ಖರ್ಚು ಮಾಡಲಾದ ಮೊತ್ತ ಹಾಗೂ ಕೆರೆಗಳ ವಿವರ ನೀಡುವುದು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಮತ್ತು ಆ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

ಇ) ಬೆಳ್ಕೆ ಗ್ರಾ. ಪಂ. ತಲಾನಬಾಬು ಕೆರೆ ಸುಧಾರಣೆಗಾಗಿ ರೂ.16.00 ಲಕ್ಷ ಬಿಡುಗಡೆಯಾಗಿದ್ದು, ರೂ.13.01 ಲಕ್ಷ ವೆಚ್ಚವಾಗಿದೆ. ಅಂತೆಯೇ, ಮಾವಳ್ಳಿ ಗ್ರಾ.ಪಂ.ಮಾಲೆಕೊಡ್ಲು ಕೆರೆ ಸುಧಾರಣೆಗಾಗಿ ರೂ.16.00 ಲಕ್ಷ ಬಿಡುಗಡೆಯಾಗಿದ್ದು, ರೂ.12.55 ಲಕ್ಷ ವೆಚ್ಚವಾಗಿದೆ.

ಶ್ರೀ ಜೆ.ಡಿ. ನಾಯ್ಕ : ಮಾನ್ಯ ಸಚಿವರು ನಾನು ಕೇಳಿದ ಪ್ರಶ್ನೆಗೆ ಉತ್ತರಿಸಿದ್ದಾರೆ. ಆದರೆ, ಕೆಲವು ಕಡೆ ತಗಲುವ ವೆಚ್ಚ ಒಟ್ಟು ಅಂದಾಜು ಕೊಟ್ಟಿದ್ದಾರೆ. ಎಷ್ಟು ಖರ್ಚಾಗಿದೆ, ಮುಗಿದಿದೆಯೇ ಎಂಬುದನ್ನು ಕೊಟ್ಟಿಲ್ಲ. ಇತರೆ ಕುಡಿಯುವ ನೀರಿನ ವಿವರಗಳನ್ನು ಕೊಟ್ಟಿಲ್ಲ. ನಾನು ಮುಖ್ಯವಾಗಿ ಎರಡು ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಬಾವಿ ತೆಗೆದಿದ್ದಾರೆ ಆ ಬಾವಿಗಳು ಇರುವ ಸರ್ವೆ ನಂಬರ್ ಅನ್ನು Sub Registrar Officer ನಲ್ಲಿ register

ಮಾಡಿಸಿದ್ದಾರೆ. ನನ್ನ ಪ್ರಕಾರ ಸಾಕಷ್ಟು ಹೊಸ ಬಾವಿಗಳನ್ನು ಕೊರೆದಿಲ್ಲ. ಇದ್ದ ಬಾವಿಗಳಿಗೇ ಕಟ್ಟೆ ಕಟ್ಟಿ plaster ಮಾಡಿ ಬಿಲ್ ಮಾಡುವ ವ್ಯವಸ್ಥೆಯಾಗಿದೆ. ಇತರೆ ಬಾವಿಗಳ ವಿವರಗಳನ್ನು ಎಲ್ಲಿಯೂ ಕೊಟ್ಟಿಲ್ಲ. ನಾನು ನೋಡಿದ್ದೇವೆ, ಬದಲಾವಣೆ ಎಂದು ಕೊಟ್ಟಿದ್ದೀರಿ. ಬದಲಾವಣೆಗೆ ಹಣ ಖರ್ಚಾಗಿದೆಯೋ, ಇಲ್ಲವೋ? ಅಥವಾ ಬದಲಾವಣೆ ಮಾಡಿ ಯಾರಿಗೆ ಕೊಟ್ಟಿದೆ ಎಂದು ಹೇಳಲಿಲ್ಲ. ಕೆಲವು ಕಡೆ 2007–08 ರಿಂದ ಕೂಡ ಮುಗಿದಿಲ್ಲವೆಂದು ಹೇಳಿದ್ದೀರಿ. ಸರ್ವೆ ನಂಬರ್ ಏನೂ ಕೊಟ್ಟಿಲ್ಲ. 2008-09ರಂದು ಕೂಡ ಅದೇ ರೀತಿಯ endorsement ಬಂದಿದೆ. ಅದಕ್ಕಾಗಿ ನಾನು ಮಾನ್ಯ ಸಚಿವರಿಗೆ ಕೇಳಿಕೊಳ್ಳುವುದಿಷ್ಟೆ, ಮುಖ್ಯವಾಗಿ ಇದರ ಬಗ್ಗೆ ತನಿಖೆ ಮಾಡಿಸಿ. ಕುಡಿಯುವ ನೀರಿನ ವಿಷಯದಲ್ಲಿ ಅವ್ಯವಹಾರವೇನಾಗಿದೆ ಎಂಬುದನ್ನು ತನಿಖೆ ಮಾಡಬೇಕು. ಸಂಬಂಧಪಟ್ಟ ಸರ್ವೆ ನಂಬರ್‌ಗಳಲ್ಲಿ ಬಾವಿಗಳೇ ಇಲ್ಲ, ಹಳೆಯ ಬಾವಿಗಳನ್ನೇ ಹೊಸ ಬಾವಿಗಳೆಂದು ಲೆಕ್ಕ ತೋರಿಸಿದ್ದಾರೆ. ಖರ್ಚಾಗಿದೆ ಎಂದು ಸುಮ್ಮಸುಮ್ಮನೆ ಬಿಲ್ ಮಾಡುವ ವ್ಯವಸ್ಥೆಯಾಗಿದೆ. ಅದಕ್ಕಾಗಿ ನಾನು ತಮ್ಮಲ್ಲಿ ವಿವರ ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗೌರವಾನ್ವಿತ ಸದಸ್ಯರು ಭಟ್ಕಳ ತಾಲ್ಲೂಕಿನ ವಿಷಯಗಳ ಬಗ್ಗೆ ಅದರಲ್ಲಿಯೂ ಮುಖ್ಯವಾಗಿ ಬೆಳ್ಕೆ ಮತ್ತು ಮಾವಳ್ಳಿ ಜಿಲ್ಲಾಪಂಚಾಯತ್ ಕ್ಷೇತ್ರಗಳಲ್ಲಿ ಇರುವ ಕುಡಿಯುವ ನೀರಿನ ಯೋಜನೆಗಳ ಬಗ್ಗೆ ಮಾಹಿತಿಗಳನ್ನು ಕೇಳಿದ್ದಾರೆ. ಆ ಮಾಹಿತಿಯನ್ನು ಸಂಪೂರ್ಣವಾಗಿ ಒದಗಿಸಿದ್ದೇವೆ. ಎಷ್ಟು ಅನುದಾನ ಬಂತು, ಎಷ್ಟು ಖರ್ಚು ಮಾಡಿದ್ದಾರೆ ಮತ್ತು ಕೆರೆಗಳ ಅಭಿವೃದ್ಧಿಗೆ ಎಷ್ಟು ಖರ್ಚು ಮಾಡಿದೆ, ಕೆರೆಗಳ ವಿವರ ಈ ಎಲ್ಲವನ್ನೂ detail ಆಗಿ ಒದಗಿಸಿಕೊಟ್ಟಿದ್ದೇವೆ. ಅವರೀಗ ಕೆಲವೊಂದು ಗ್ರಾಮಗಳಲ್ಲಿ ಕೆಲವು ಬಾವಿಗಳನ್ನು ಕೊರೆಯುವಂಥ ಕೆಲಸವೇನು ಮಾಡಿದ್ದಾರೆ, ಅದಾಗಿಲ್ಲವೆನ್ನುವಂಥದ್ದು ಅಥವಾ ಅದು ಖೊಟ್ಟಿಯಾಗಿದೆ, ಖೊಟ್ಟಿ ದಾಖಲೆಯನ್ನು ಸೃಷ್ಟಿಸಲಾಗಿದೆ ಎನ್ನುವಂಥ ವಿಚಾರಗಳನ್ನು ಹೇಳಿದ್ದಾರೆ. ಆದರೆ, ಈ ಎಲ್ಲಾ ಮಾಹಿತಿಗಳು ಬೇಕೆಂದು ತಮ್ಮ ಪ್ರಶ್ನೆಯಲ್ಲಿ ಕೇಳಿಲ್ಲ. ಇಲ್ಲಿ ಅವ್ಯವಹಾರವಾಗಿದೆ ಎನ್ನುವುದಾಗಲಿ, ಈ ಬಗ್ಗೆ ತನಿಖೆ ಮಾಡಬೇಕೆಂದಾಗಲಿ ಇದರ ಬಗ್ಗೆ ಪ್ರಸ್ತಾಪಿಸಿಲ್ಲ. ಅವರು ಕೇಳಿದ ಪ್ರಶ್ನೆಗೆ details ಕೊಟ್ಟಿದ್ದೇವೆ. ಎಲ್ಲಿಯಾದರೂ ಏನಾದರೂ ಅವ್ಯವಹಾರ ವಾಗಿದ್ದರೆ ಅವರು specific ಆಗಿ ಪ್ರಶ್ನೆ ಮುಖಾಂತರ ಕೇಳಿದರೆ ಅಥವಾ

ಇನ್ನಿತರ ಮೂಲಕ ಕೇಳಿದರೆ ಅದಕ್ಕೆ ನಾನು ಪ್ರತ್ಯೇಕವಾಗಿ ವಿವರವನ್ನು ಕೊಡುತ್ತೇನೆ. ಎಲ್ಲಿಯಾದರೂ ತನಿಖೆ ಮಾಡುವ ಅವಶ್ಯಕತೆ ಇದ್ದರೆ ನಾನು ತನಿಖೆಯನ್ನು ಸಹ ಮಾಡಿಸುತ್ತೇನೆ.

(11 - 40 A.M)

ಶ್ರೀ ಜೆ.ಡಿ.ನಾಯ್ಕ : ನಾನು survey number wise ಕೇಳಿದ್ದೇನೆ. ಆದರೆ, ಅವರ ಉತ್ತರದಲ್ಲಿ survey number ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಯಾವ ಗ್ರಾಮದಲ್ಲಿ ಎನುವ ವಿವರ ಕೊಟ್ಟಿದ್ದೇವೆ. ಉದಾಹರಣೆಗೆ ಕಬ್ಬೂರು ಮಂಜಯ್ಯ ಮಾಸಪ್ಪ ನಾಯ್ಕ ಮನೆ ಹತ್ತಿರ ಬಾವಿ ನಿರ್ಮಾಣ ಎಂದು ಇದೆ. ಇವರು ಸರ್ವೆ ನಂಬರ್ ಕೊಟ್ಟಿಲ್ಲ ಎಂದರೆ ಎಲ್ಲಾ ಮಾಹಿತಿ ಕೊಡಬೇಕಾದರೆ 2–3 ತಿಂಗಳು ಬೇಕಾಗುತ್ತದೆ. ಪ್ರತಿಯೊಂದು ಸರ್ವೆ ನಂಬರ್ ಮಾಹಿತಿಯನ್ನು ಕೊಡಬೇಕೆಂದರೆ question hour ನಲ್ಲೇ ಪ್ರತಿಯೊಂದನ್ನೂ ತೆಗೆದುಕೊಳ್ಳಬೇಕೆಂದರೆ 1–2 ತಿಂಗಳು time ಕೊಡಬೇಕಾಗುತ್ತದೆ.

ಶ್ರೀ ಜೆ.ಡಿ. ನಾಯ್ಕ : ನಾನು ಈ ಪ್ರಶ್ನೆಯನ್ನು ಎರಡನೇ ಸಲ ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಎಲ್ಲಿಯಾದರೂ ಅವ್ಯವಹಾರ ಆಗಿದ್ದರೆ ನೀವು ಆ ಕ್ಷೇತ್ರದ ಶಾಸಕರಿದ್ದೀರಿ, ತಮ್ಮಗೆ ಗೊತ್ತಿರುತ್ತದೆ, ಇಂಥ Village ನಲ್ಲಿ ಕೊಳವೆ ಬಾವಿ ಕೊರೆದಿದೆ ಎಂದು ಹೇಳುತ್ತೇವೆ. ಅಲ್ಲಿ ಕೊರೆದಿಲ್ಲವೆನ್ನುವುದು ನಿಮಗೆ ಗೊತ್ತಿದ್ದರೆ ನೀವು ನಮಗೆ ಆ ಬಗ್ಗೆ ಮಾಹಿತಿ ಕೇಳಿ. ತನಿಖೆ ಮಾಡಿ ಎಂದು ಕೇಳಿ. ನಾನು definite ಆಗಿ ತನಿಖೆ ಮಾಡಿಸುತ್ತೇನೆ.

ಶ್ರೀ ಜೆ.ಡಿ. ನಾಯ್ಕ : ತಾವು ತನಿಖೆ ಮಾಡಿಸಿ. ಅವ್ಯವಹಾರ ಆಗಿದೆ ಎಂದು ನಾನು ಈಗ ಹೇಳುತ್ತೇನೆ. Survey number ಅಂತೂ ತಿಳಿಸಿಲ್ಲ. ಹಣವೂ ಖರ್ಚಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ತಾವು details ಕೊಡಿ. ಯಾವ್ಯಾವ village ನಲ್ಲಿ ಎಷ್ಟೆಷ್ಟು ಕೊಳವೆ ಬಾವಿ ಕೊರೆಯಲಾಗಿದೆ ಎನ್ನುವ ವಿವರ ಕೊಟ್ಟಿದ್ದೇವೆ. ಯಾರ ಮನೆಯ ಹತ್ತಿರ ಎಂದೂ ಸಹ ಮಾಹಿತಿ ಕೊಟ್ಟಿದ್ದೇವೆ. ಯಾವ ರೀತಿಯಾಗಿ ಅವ್ಯವಹಾರವಾಗಿದೆ ಎನ್ನುವ ಬಗ್ಗೆ ಹೇಳಿ.

ಅಧ್ಯಕ್ಷರು : ನಾಯ್ಕರವರೆ, ಮಂತ್ರಿಯವರಿಗೆ ತಾವು details ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ವಿವರ ಕೊಡಿ, ನಾನು ತನಿಖೆ ಮಾಡಿಸುತ್ತೇನೆ.

ಶ್ರೀ ಜೆ.ಡಿ. ನಾಯ್ಕ : ಮಾನ್ಯ ಮಂತ್ರಿಯವರು survey number ವಿವರ ಕೊಟ್ಟಿಲ್ಲ. ಆ ಮಾಹಿತಿ ಕೊಡಲು ಬಹಳ ದಿವಸ ಬೇಕೆಂದು ಹೇಳುತ್ತಾರೆ. ತನಿಖೆಗಾದರೂ refer ಮಾಡಿದರೆ ಗೊತ್ತಾಗುತ್ತದೆ. ತನಿಖೆಯಲ್ಲಿ ಸಂಪೂರ್ಣವಾಗಿ ಗೊತ್ತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ತನಿಖೆ ಮಾಡಿಸಬಹುದು, ಆದರೆ, specific ಆಗಿ allegation ಮಾಡಿದರೆ ನಾವು ತನಿಖೆ ಮಾಡಿಸಬಹುದು. ಇಂಥ ಗ್ರಾಮದಲ್ಲಿ ಇಂಥಲ್ಲಿ ಅವ್ಯವಹಾರವಾಗಿದೆ, ಬಾವಿ ಕೊರೆಯಬೇಕಾಗಿತ್ತು ಕೊರೆದಿಲ್ಲ ಎಂದು ನೀವು ಹೇಳಿ. ಕೆಲವು ಉದಾಹರಣೆಗಳನ್ನು ಕೊಡಿ. ನಾನು definite ಆಗಿ ತನಿಖೆ ಮಾಡಿಸುತ್ತೇನೆ.

ಶ್ರೀ ಜೆ.ಡಿ. ನಾಯ್ಕ : ನಿಮ್ಮ ಉತ್ತರ ಸರಿಯಿಲ್ಲ. ನಿಮ್ಮ ಉತ್ತರದಿಂದ ನಾನು ತೃಪ್ತನಾಗಿಲ್ಲ. ಅದಕ್ಕಾಗಿ ತನಿಖೆ ಮಾಡಿಸಿ ಎಂದು ಹೇಳುತ್ತಿದ್ದೇನೆ. ನಿಮ್ಮ ಉತ್ತರ ಸರಿ ಇದ್ದಿದ್ದರೆ ನಾನು ಪ್ರಶ್ನೆ ಕೇಳದೆ ಸುಮ್ಮನೆ ಕುಳಿತುಕೊಳ್ಳುತ್ತಿದ್ದೆ. ಉತ್ತರ ಸರಿಯಿಲ್ಲ, ಇದು ಸತ್ಯಕ್ಕೆ ದೂರವಾಗಿದೆ, ಅಂಥ ಬಾವಿಗಳೇ ಇಲ್ಲ, ಬೇಕಾಬಿಟ್ಟಿ ಬಾವಿ ಕೊರೆದಿದ್ದಾರೆ, ಅಂಥ ಬಾವಿಗಳ ಬಗ್ಗೆ ತನಿಖೆ ಮಾಡಬೇಕೆಂದು ಕೇಳುತ್ತೇನೆ.

ದಾಸರಹಳ್ಳಿ ವ್ಯಾಪ್ತಿಯಲ್ಲಿ ಪದವಿ ಪೂರ್ವ ಕಾಲೇಜು ಸ್ಥಾಪನೆಯ ಬಗ್ಗೆ

36 (681) ಶ್ರೀ ಮುನಿರಾಜು ಎಸ್. (ದಾಸರಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪದವಿ ಪೂರ್ವ ಕಾಲೇಜುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಯಾವ ವರ್ಷದಿಂದ ಕಾಲೇಜುಗಳನ್ನು ಎಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 1 ಅನುದಾನಿತ ಮತ್ತು 11 ಅನುದಾನರಹಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಇರುತ್ತವೆ. ಆದರೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇರುವುದಿಲ್ಲ.

ಆ) ದಾಸರಹಳ್ಳಿ ಮತ್ತು ಹೆಗ್ಗನಹಳ್ಳಿಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಮನವಿ ಬಂದಿರುತ್ತದೆ. ಈ ಬಗ್ಗೆ ಪರಿಶೀಲಿಸಿ ವರದಿ ನೀಡಲು ಜಿಲ್ಲಾ ಉಪ ನಿರ್ದೇಶಕರಿಗೆ ತಿಳಿಸಲಾಗಿದೆ.

ಇ) ಪ್ರಸ್ತುತ ಮಂಜೂರಾಗಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವವರೆಗೆ ಹೊಸ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗಳನ್ನು ಸಲ್ಲಿಸದಿರುವಂತೆ ಸರ್ಕಾರದ ಆದೇಶ ಸಂಖ್ಯೆ: ಇಡಿ 451 ಯೋಯೋಕ 2009 ದಿ: 20–2–2010 ರಲ್ಲಿ ಸೂಚಿಸಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.: 36(681)

ಶ್ರೀ ಎಸ್. ಮುನಿರಾಜು : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಎರಡು ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿ ಎಂದು ಮನವಿ ಸಲ್ಲಿಸಿದ್ದೆವು. ಸರ್ಕಾರದ ವತಿಯಿಂದ ಈಗ ಯಾವುದನ್ನೂ ಮಂಜೂರು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಮಾನ್ಯ ಸಚಿವರು ಉತ್ತರಿಸಿದ್ದಾರೆ. ಅದಕ್ಕೆ ನಾವು ಕಟ್ಟಡವನ್ನು ಒದಗಿಸಿಕೊಡುತ್ತೇವೆ, ಪೀಠೋಪಕರಣ ಕೊಡುತ್ತೇವೆ, ಸರ್ಕಾರ ದಯಮಾಡಿ ಈ ವರ್ಷದಲ್ಲಿ ಪ್ರಥಮ ಪಿ.ಯು.ಸಿ. ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಶಿಕ್ಷಣ ಸಚಿವರಿಗೆ ಮನವಿ ಮಾಡುತ್ತೇನೆ. ವಿಶೇಷವಾಗಿ ನನ್ನ ಕ್ಷೇತ್ರ ಕೈಗಾರಿಕಾ ಪ್ರದೇಶ ಮತ್ತು ಬಡ ಜನರು ವಾಸ ಮಾಡುವ ಪ್ರದೇಶವಾಗಿದೆ. ಎಲ್ಲರೂ ಅನುದಾನಿತ ಕಾಲೇಜುಗಳಿಗೆ ಹೋಗಬೇಕೆಂದರೆ ಬಹಳಷ್ಟು ಹಣ ಕಟ್ಟಬೇಕಾಗುತ್ತದೆ. ಅಲ್ಲಿ ಹತ್ತು ಪ್ರೌಢಶಾಲೆಗಳಿವೆ. ಪ್ರತಿ ವರ್ಷ ಸುಮಾರು 800–900 ಮಕ್ಕಳು ಖಾಸಗಿ ಕಾಲೇಜುಗಳಿಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಆದ್ದರಿಂದ, ಬಿಬಿಎಂಪಿ ವತಿಯಿಂದ ಕಟ್ಟಡ ಪ್ರಾರಂಭ ಮಾಡಿದ್ದೇವೆ. 2–3 ತಿಂಗಳಲ್ಲಿ ಕಟ್ಟಡ ಕಾರ್ಯ ಮುಗಿಯುತ್ತದೆ. ದಯಮಾಡಿ ಈ ಸಾಲಿನಲ್ಲಿ ಪ್ರಥಮ

ಪಿ.ಯು.ಸಿ. ಕಾಲೇಜನ್ನು ಹೆಗ್ಗನಹಳ್ಳಿ ಮತ್ತು ದಾಸರಹಳ್ಳಿಯಲ್ಲಿ ಪ್ರಾರಂಭ ಮಾಡಬೇಕೆಂದು ಮಾನ್ಯ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಪದವಿ ಕಾಲೇಜುಗಳು ಎಲ್ಲಾ ಕಡೆ ಅವಶ್ಯಕತೆ ಇದೆ. ಅದು ಕೈಗಾರಿಕಾ ಪ್ರದೇಶವಿರುವ ನಮ್ಮ ಭಾಗದಲ್ಲಿ ಸಮಸ್ಯೆ ಇದೆ. ಉತ್ತರ ಕೊಡುವಾಗ ಹೊಸ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ತಿಳಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮುನಿರಾಜುರವರು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿನ ದಾಸರಹಳ್ಳಿ ಮತ್ತು ಹೆಗ್ಗನಹಳ್ಳಿಯಲ್ಲಿ ಜೂನಿಯರ್ ಕಾಲೇಜು ಪ್ರಾರಂಭಿಸಬೇಕೆಂದು ಸರ್ಕಾರಕ್ಕೆ ಮನವಿ ಕೊಟ್ಟಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡಿ ವರದಿ ಕೊಡುವುದಕ್ಕೆ ನಮ್ಮ ಉಪನಿರ್ದೇಶಕರಿಗೆ ಸೂಚನೆ ಕೊಟ್ಟಿದ್ದೇವೆ. ವರದಿಯನ್ನು ಆಧರಿಸಿ ಬರುವ ದಿನಗಳಲ್ಲಿ ಈ ಕುರಿತಂತೆ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತೇವೆ. ಆದರೆ, ದಾಸರಹಳ್ಳಿ ಒಳಗೆ 11 ಅನುದಾನರಹಿತ 1 ಅನುದಾನಸಹಿತ ಒಟ್ಟು 12 ಜೂನಿಯರ್ ಕಾಲೇಜುಗಳು ಈಗಾಗಲೆ ಇವೆ. ಅಲ್ಲಿಯ ಮಕ್ಕಳ ಸಂಖ್ಯೆಗೆ ಸಾಕಷ್ಟು ಜೂನಿಯರ್ ಕಾಲೇಜುಗಳ ಸೌಲಭ್ಯ ಅಲ್ಲಿದೆ. ಪಕ್ಕದ ಪೀಣ್ಯದಲ್ಲಿ ಸರಕಾರಿ ಜೂನಿಯರ್ ಕಾಲೇಜು ಇದೆ. ಹಾಗಾಗಿ ಅಲ್ಲಿ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯವಿದೆ. ಸರ್ಕಾರದ್ದೇ ಕಾಲೇಜು ಬೇಕೆನ್ನುವ ಬೇಡಿಕೆಯನ್ನು ಮುನಿರಾಜು ರವರು ಇಟ್ಟಿದ್ದಾರೆ. ವರದಿಯನ್ನಾಧರಿಸಿ ಮುಂದಿನ ದಿನಗಳಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇವೆ. ಇನ್ನುಳಿದ ಅನೇಕ ಸದಸ್ಯರು ಎಲ್ಲಾ ಕಡೆ ಜೂನಿಯರ್ ಕಾಲೇಜು ಪ್ರಾರಂಭಿಸಬೇಕೆಂಬ ಭಾವನೆ ವ್ಯಕ್ತಪಡಿಸಿದ್ದರೆ. ನಿಜವಾಗಿಯೂ ಇದು ಬಹಳ ಒಳ್ಳೆಯ ಸಂಕೇತ. High school ಗೂ ಸಹ ಬಹಳ ಬೇಡಿಕೆ ಇದೆ. ಶಿಕ್ಷಣ ಸಚಿವನಾಗಿ ಕಳೆದ ಎರಡು ವರ್ಷಗಳಿಂದ ನೋಡುತ್ತಿದ್ದೇನೆ. High school, Junior college, Degree college ಗಳು ಬೇಕೆಂದು ಇಡೀ ರಾಜ್ಯದಲ್ಲಿ ಎಲ್ಲಾ ಪ್ರತಿನಿಧಿಗಳು, ಅನೇಕ ಸಂಘಸಂಸ್ಥೆಗಳು, ಪ್ರಮುಖರಿಂದ ಬೇಡಿಕೆ ಬರುತ್ತಿದ್ದು ಇದು ಬಹಳ ಒಳ್ಳೆಯ ಸಂಕೇತವಾಗಿದೆ. ತಮ್ಮ ಮಕ್ಕಳನ್ನು ಹೆಚ್ಚು ಹೆಚ್ಚು ಶಿಕ್ಷಣವಂತರನ್ನಾಗಿ ಮಾಡಬೇಕೆಂಬ ಜಾಗೃತಿ ಪಾಲಕ ಸಮುದಾಯದಲ್ಲಿ ಬಂದಿದೆ. ಸರ್ವಶಿಕ್ಷಣ ಅಭಿಯಾನ ಯೋಜನೆ ಕೂಡ ಇದಕ್ಕೊಂದು ಕಾರಣ. ಅದು ಮುಂದುವರೆದೂ ಸಹ ಮಕ್ಕಳಿಗೆ ಹೆಚ್ಚು ಶಿಕ್ಷಣ ಕೊಡಬೇಕೆನ್ನುವ ಜಾಗೃತಿ ಸಮಾಜದಲ್ಲಿ ಬಂದಿದೆ. ಅದರಿಂದಾಗಿ ಇವತ್ತು ಈ

ರೀತಿಯ ಬೇಡಿಕೆಗಳು ಹೆಚ್ಚಾಗುತ್ತಿವೆ. ಅದರ ಹಿನ್ನೆಲೆಯಲ್ಲಿ ನಾವು ಸರ್ಕಾರವಾಗಿ ಕಳೆದ 2006–07, 2007–08ನೇ ಸಾಲಿನಲ್ಲಿ ಸುಮಾರು 500 ಜೂನಿಯರ್ ಕಾಲೇಜು ಮತ್ತು ಒಂದು ಸಾವಿರ ಹೈಸ್ಕೂಲ್‌ಗಳನ್ನು ಕೊಟ್ಟಿರುವುದಿದೆ. ಅದಕ್ಕೆ staff, infrastructure ಒದಗಿಸಿದ್ದೇವೆ, ಎಲ್ಲಾ ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ಬಹಳ ಸಂತೋಷದಿಂದ ಈ ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎನ್. ಸಂಪಂಗಿ : ತಾವು ಹೇಳುವ ಹಾಗೆ ಎಲ್ಲೂ infrastructure ಕೊಟ್ಟಿಲ್ಲ, ಕಟ್ಟಡ, furniture ಕೊಟ್ಟಿಲ್ಲ, toilets ಕಟ್ಟಿಸಿಲ್ಲ. ಶಿಕ್ಷಕರಂತೂ toilet ಸೌಲಭ್ಯವಿಲ್ಲದೆ ಬೆಳಿಗ್ಗೆ ಬಂದರೆ ಸಂಜೆಯವರೆಗೂ ತೊಂದರೆ ಅನುಭವಿಸುತ್ತಾರೆ. ಅದನ್ನು ನೋಡಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ತಮ್ಮಲ್ಲಿ ವಿನಂತಿಸುತ್ತೇನೆ, ನಿಮ್ಮ ಕ್ಷೇತ್ರದಲ್ಲಿ ಯಾವುದಾದರೂ ಕೊರತೆ ಇರುವಂಥ ಶಾಲೆಗಳಿದ್ದರೆ ಆ ಬಗ್ಗೆ ನನ್ನ ಗಮನಕ್ಕೆ ತನ್ನಿ. ಸುಮಾರು 300 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಈಗಾಗಲೇ 5000 ಕೊಠಡಿಗಳನ್ನು ಜೂನಿಯರ್ ಕಾಲೇಜುಗಳಿಗೆ ಒದಗಿಸಲು RIDF-12, 13, 14, 15 ನಲ್ಲಿ ಕಟ್ಟುತ್ತಿದ್ದೇವೆ. ಮಕ್ಕಳ ಸಂಖ್ಯೆಗಳ ಆಧರಿಸಿ ಎಲ್ಲಾ ಕ್ಷೇತ್ರಗಳಿಗೆ ಕೊಟ್ಟಿದ್ದೇವೆ. ನಿಶ್ಚಿತವಾಗಿ ಯಾವುದಾದರೂ ಆ ತರಹ ಇದ್ದರೆ ಹೇಳಿ. ನಾನು ಒಂದು ವಿವರವನ್ನು ಈ ಸದನಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಈ ವರ್ಷ ನಮ್ಮ ಸರ್ಕಾರದಲ್ಲಿ ಮುಖ್ಯಮಂತ್ರಿಯವರು, ನಮ್ಮ ಎಲ್ಲಾ ಸಚಿವಸಂಪುಟದ ಸದಸ್ಯರು, ಸದನದ ಎಲ್ಲಾ ಸದಸ್ಯರ ಅಭಿಪ್ರಾಯಗಳನ್ನು ತೆಗೆದುಕೊಂಡು ಐತಿಹಾಸಿಕ ನಿರ್ಣಯವನ್ನು ಮಾಡಿದ್ದೇವೆ. ಏನೆಂದರೆ, ಸುಮಾರು 437 ಈಗಿರುವಂಥ ಜೂನಿಯರ್ ಕಾಲೇಜುಗಳಲ್ಲಿ ಮುಂದಿನ ಶೈಕ್ಷಣಿಕ ವರ್ಷಕ್ಕೆ Science section ಕೊಡುತ್ತಿದ್ದೇವೆ, ಅದೇ ರೀತಿ ಸುಮಾರು 270 ಈಗಿರುವಂಥ ಜೂನಿಯರ್ ಕಾಲೇಜುಗಳಿಗೆ commerce section ಕೊಡುತ್ತಿದ್ದೇವೆ. ಶಿಕ್ಷಣ ಕ್ಷೇತ್ರದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ರೀತಿಯಾಗಿ ಒಂದು ಐತಿಹಾಸಿಕ ನಿರ್ಣಯವನ್ನು ನಮ್ಮ ಸರ್ಕಾರದಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಏಕೆಂದರೆ, ಗ್ರಾಮೀಣ ಭಾಗದ ಮಕ್ಕಳು ಕೇವಲ Arts subject ಅನ್ನು ಮಾತ್ರ ಓದುವಂತಾಗಬಾರದು. Science and Commerce ಅನ್ನು ಓದುವುದಕ್ಕೆ

ಹೆಚ್ಚು ಅವಕಾಶ ಕೊಡಬೇಕೆಂದು ಈ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ನಿಶ್ಚಿತವಾಗಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಹೀಗೆ ಎದ್ದು ನಿಂತು ಕೇಳಿದರೆ ಹೇಗೆ?

(ಗೊಂದಲ)

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಇದರಲ್ಲಿ ವಿದ್ಯಾರ್ಥಿಗಳ ಭವಿಷ್ಯ ಅಡಗಿದೆ. ಕೇವಲ ಉತ್ತರದಿಂದ ನಾವು ತೃಪ್ತರಾಗಲಿಕ್ಕೆ ಆಗುವುದಿಲ್ಲ. ಇದು ಬಹಳ ಮಹತ್ವವಾದ ವಿಚಾರ.

ಶ್ರೀ ಎನ್. ಸಂಪಂಗಿ : ಈ course ಗಳು ಈಗಾಗಲೇ ಪ್ರಾರಂಭವಾಗಿ ಮುಚ್ಚಿರುವಂಥದ್ದು.

(ಗೊಂದಲ)

ಅಧ್ಯಕ್ಷರು : ನಾನು ಎಂ. ಸತ್ಯನಾರಾಯಣರವರನ್ನು ಕರೆದಿದ್ದೇನೆ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್ : ಪ್ರಶ್ನೆ ಕೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

(ಗೊದಲ)

ಅಧ್ಯಕ್ಷರು : ತಾವು ಬಜೆಟ್ ಮೇಲೆ ಮಾತನಾಡುವಾಗ ಮಾತನಾಡಿ. ಎರಡು ಪ್ರಶ್ನೆ ಕೇಳಲಿಕ್ಕೆ ಮಾತ್ರ ಅವಕಾಶವಿದೆ. ಅಷ್ಟಕ್ಕೆ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಬಿ.ಸಿ. ಪಾಟೀಲ್ : ಒಂದು ಪ್ರಶ್ನೆ ಕೇಳುವುದಕ್ಕೆ ತಾವು allow ಮಾಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಇಲ್ಲ, ಆಗುವುದಿಲ್ಲ, ತಾವು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ನೋಟೀಸ್ ಕೊಡಿ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಶ್ರೀ ಮುನಿರಾಜುರವರು ದಾಸರಹಳ್ಳಿ ಕ್ಷೇತ್ರಕ್ಕೆ ಸೀಮಿತವಾಗಿ ಪ್ರಶ್ನೆ ಕೇಳಿದ್ದಾರೆ. ಇಡೀ ರಾಜ್ಯದ ಬಗ್ಗೆ ಪ್ರಶ್ನೆ ಕೇಳಬೇಕಾದರೆ ಅವರು ಎಲ್ಲಿಂದ ಉತ್ತರ ಕೊಡುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಇದು ಸರ್ಕಾರದ ಜವಾಬ್ದಾರಿ.

(ಗೊಂದಲ)

ಅಧ್ಯಕ್ಷರು : ನೀವು notice ಕೊಡಿ, ಆಗ ಚರ್ಚೆಗೆ ತೆಗೆದು ಕೊಳ್ಳೋಣ. ಈಗ Clarification ಅವಕಾಶವಿಲ್ಲ. ಅವರು ದಾಸರಹಳ್ಳಿಗೆ ಸೀಮಿತವಾಗಿ ಕೇಳಿದ್ದಾರೆ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಎಲ್ಲಿಗೆ ಪೀಠೋಪಕರಣ ಗಳನ್ನು ಕೊಡಬೇಕಾಗಿತ್ತೋ ಅಲ್ಲಿಗೆ ಕೊಟ್ಟಿಲ್ಲ. ಗ್ರಾಮೀಣ ಭಾಗದಲ್ಲಿ ತೊಂದರೆ ಇದೆ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನೀವು ಕುಳಿತುಕೊಳ್ಳದಿದ್ದರೆ ಅದು ಯಾವುದೂ ದಾಖಲೆಗೆ ಹೋಗಬಾರದು ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : Junior Collegeಗೆ ಬೇಡಿಕೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು, ಬೇಕು ಎನ್ನುವಂಥದ್ದು ಎಲ್ಲಾ ಸದಸ್ಯರ ಭಾವನೆ ಇದೆ. ನಿಶ್ಚಿತವಾಗಿ ಪ್ರತಿ ಕ್ಷೇತ್ರಗಳಲ್ಲಿಯೂ ಸಹ ಈಗಾಗಲೇ ಶಾಸಕರುಗಳು ಸರ್ಕಾರಕ್ಕೆ ಮನವಿಗಳನ್ನು ಕೊಟ್ಟಿದ್ದೀರಿ. ಎಲ್ಲಾ ಕಡೆಗೂ Junior College and High Schools ಬೇಕೆಂದು ಬೇಡಿಕೆ ಕೊಟ್ಟಿದ್ದೀರಿ. ಇದು ಬಹಳ ದೊಡ್ಡ ಚರ್ಚೆಯಾಗಬೇಕಾದರೆ ಇದಕ್ಕೆ ಸಮಯಾವಕಾಶ ಬೇಕಾಗುತ್ತದೆ. ಮಾನ್ಯ ಸದಸ್ಯರು ದಾಸರಹಳ್ಳಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮಾತ್ರ ಕೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್ : ಒಂದೂವರೆ ಕೋಟಿ ರೂಪಾಯಿಯ building ಇದ್ದದ್ದಕ್ಕೂ ನೀವು Permission ಕೊಡದಿದ್ದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : Infrastructure ಇದ್ದರೆ ಕೊಟ್ಟೇ ಕೊಡುತ್ತೇವೆ.

O.17 F - 6

ಶ್ರೀ ಬಿ.ಸಿ.ಪಾಟೀಲ್ : Infrastructure ಇದೆ ಎಂದು ನಿಮ್ಮ DDPI ರವರು ಎಲ್ಲರೂ ವರದಿ ಕೊಟ್ಟರು. ಹೀಗಾದರೂ ಕೂಡ ನೀವು ಕೊಡಲಿಲ್ಲ.

ಅಧ್ಯಕ್ಷರು : ಈ ಪ್ರಶ್ನೆಯನ್ನು ಇಲ್ಲಿಗೆ ಮುಕ್ತಾಯ ಮಾಡಿದೆ. ಮುಂದಿನ ಪ್ರಶ್ನೆ ಸತ್ಯನಾರಾಯಣರವರು ಕೇಳಿ. ನೀವು ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಕೇಳಿ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್ : ವೈಯಕ್ತಿಕವಾಗಿ ಭೇಟಿ ಮಾಡಿ ಕೇಳಿದ್ದರೂ ಆಗಿಲ್ಲ. ಅದಕ್ಕಾಗಿ ಇಲ್ಲಿ ಕೇಳಿದ್ದೇವೆ.

ಅಧ್ಯಕ್ಷರು : ನಿಮಗೆ ನಾನು ಅನುಮತಿ ಕೊಟ್ಟಿಲ್ಲ ದಯವಿಟ್ಟು ಕುಳಿತುಕೊಳ್ಳಿ, ಸತ್ಯನಾರಾಯಣರವರನ್ನು ಕರೆದಿದ್ದೇನೆ.

ಶ್ರೀ ಎಸ್. ಮುನಿರಾಜು : ಪೀಣ್ಯಾದಲ್ಲಿರುವುದರಲ್ಲಿ ಬಹಳ ಒತ್ತಡವಿದೆ. ಪೀಣ್ಯಾದಲ್ಲಿ ಕಾಲೇಜು ಇದ್ದರೂ ಸಹ ಇಲ್ಲಿಂದ ಹೋಗುವ ಸುಮಾರು 800–900 ವಿದ್ಯಾರ್ಥಿಗಳಿಗೆ ಅಲ್ಲಿ accommodation ಆಗುತ್ತಿಲ್ಲ. ಹೊಸದಾಗಿ ಕಾಲೇಜು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸದೇ ಇರುವುದೆಂದು ಹೇಳಿದ್ದಾರೆ. ದಯಮಾಡಿ ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಒತ್ತಾಯ ಮಾಡುವುದು ಏನೆಂದರೆ, ದಯಮಾಡಿ ಈ ವರ್ಷದಲ್ಲಿ ಮೊದಲನೆ ಪಿ.ಯು.ಸಿ.ಯನ್ನು ಹೆಗ್ಗನಹಳ್ಳಿ ಮತ್ತು ದಾಸರಹಳ್ಳಿಯಲ್ಲಿ ಪ್ರಾರಂಭಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : Ruling Party ಯ MLA ಗಳಿಗೆ ಈ ಕತೆ ಆದರೆ ವಿರೋಧ ಪಕ್ಷದವರ ಗತಿ ಏನು ಸ್ವಾಮಿ?

ಅಧ್ಯಕ್ಷರು : ಆಯಿತು ನೀವು ಕುಳಿತುಕೊಳ್ಳಿ, Ruling Party ಯವರನ್ನು ಅವರು ನೋಡಿಕೊಳ್ಳುತ್ತಾರೆ.

ಸರ್ಕಾರಿ ಮಹಿಳಾ ಕಾಲೇಜು ಕಟ್ಟಡ ನಿರ್ಮಾಣದ ಬಗ್ಗೆ

38 (04) ಶ್ರೀ ಸತ್ಯನಾರಾಯಣ (ಚಾಮುಂಡೇಶ್ವರಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ವಿಜಯನಗರ ಸರ್ಕಾರಿ ಮಹಿಳಾ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದೆ ಬಹಳಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಗೆ ಎಷ್ಟು ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ;

ಇ) ಈ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಎಂದು ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ರೂ.100.00 ಲಕ್ಷಗಳು

ಇ) ಹಣಕಾಸಿನ ಲಭ್ಯತೆಯನ್ನಾಧರಿಸಿ ಮುಂದಿನ ಸಾಲುಗಳಲ್ಲಿ ಹಂತ ಹಂತವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎಂ. ಸತ್ಯನಾರಾಯಣ : ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಈಗಾಗಲೇ ಮಹಿಳಾ ಕಾಲೇಜು ಪ್ರಾರಂಭಿಸಿ ನಾಲ್ಕು ವರ್ಷವಾಗಿದೆ. ಆ ಜಾಗದಲ್ಲಿ ವಾಣಿಜ್ಯ ಸಂಕೀರ್ಣದಲ್ಲಿ ಬರೀ ಎರಡು ದೊಡ್ಡ ಹಾಲ್‌ನಲ್ಲಿ ಓಪನ್ ಮಾಡಿದ್ದಾರೆ. ಶೌಚಾಲಯದ ವ್ಯವಸ್ಥೆಯಿಲ್ಲ. ಅಲ್ಲಿ ಕ್ರೀಡಾ ಮೈದಾನ ಇಲ್ಲ. ಸುತ್ತಾ ಮುತ್ತಾ ಅಂಗಡಿಗಳು ಇವೆ. ನಾನು ಚುನಾಯಿತನಾದಾಗಿನಿಂದಲೂ ಅದಕ್ಕೊಂದು ಕಟ್ಟಡ ಬೇಕೆಂದು, ಅದಕ್ಕೆ ಜಾಗ ಒದಗಿಸಬೇಕೆಂದು, ಒತ್ತಾಯ ತರುತ್ತಿದ್ದೇನೆ. ಎಲ್ಲಾ ಒದಗಿಸಿದ್ದೇವೆ. ಆದರೂ ಕಟ್ಟಡದ ಕೆಲಸ ಶುರುವಾಗಲಿಲ್ಲ. ಕಾಲೇಜು ಹತ್ತಿರ ಹೋಗಿ ಹೆಣ್ಣು ಮಕ್ಕಳ ಗೋಳನ್ನು ನೋಡುವುದಕ್ಕಾಗುವುದಿಲ್ಲ. ದಯವಿಟ್ಟು ಈ ಕೆಲಸ ತುರ್ತುಗತಿಯಲ್ಲಿ ಆಗಬೇಕು. ಹಣ ಬಂದ ಹಾಗೆ ಮಾಡಿಕೊಡುತ್ತೇವೆಂದು ಏನು ಉತ್ತರಿಸಿದ್ದೀರಿ, ಅದು ಸರಿಯಿಲ್ಲ. ಅದು ತ್ವರಿತಗತಿಯಲ್ಲಿ ಆಗಿ ಅನುಕೂಲವಾಗಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಕಟ್ಟಡ ಏಕೆ ಪ್ರಾರಂಭವಾಗಿಲ್ಲ ಎನ್ನುವುದರ ಬಗ್ಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು : ಇದು ಮೈಸೂರಿನ ವಿಜಯನಗರ ಕಾಲೇಜಿನ ವಿಷಯಕ್ಕೆ ಸಂಬಂಧಪಟ್ಟಿದ್ದು. ಪ್ರತಿಯೊಂದಕ್ಕೂ ಕೇಳಿದರೆ ಅಲೊ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನಮ್ಮ ಮೂಲ ಪ್ರಶ್ನೆ ಏನೆಂದರೆ,

ಅಧ್ಯಕ್ಷರು : ಅವರು ಕೇಳಿರುವ ಪ್ರಶ್ನೆ ಬಹಳ ನಿರ್ದಿಷ್ಟವಾಗಿ ಕೇಳಿದ್ದಾರೆ ಮೈಸೂರಿನ ವಿಜಯನಗರ ಸರ್ಕಾರಿ ಮಹಿಳಾ ಕಾಲೇಜಿಗೆ

ಅನುದಾನ ಬಿಡುಗಡೆಯಾಗಿಲ್ಲದಿರುವುದರ ಬಗ್ಗೆ ಕೇಳಿದ್ದಾರೆ. ಅದಕ್ಕೆ ಅವರು ಉತ್ತರಿಸುತ್ತಾರೆ. ನೀವು ಎಲ್ಲವನ್ನೂ ತೆಗೆದುಕೊಂಡು ಹೇಳಿದರೆ ಅವರ ಹತ್ತಿರ ಮಾಹಿತಿ ಇಲ್ಲ ಉನ್ನತ ಶಿಕ್ಷಣ ಸಚಿವರು ಈಗ ಇಲ್ಲಿ ಇಲ್ಲ. ಅವರ ಪರವಾಗಿ ಉತ್ತರಿಸುತ್ತಿದ್ದಾರೆ. ಉನ್ನತ ಶಿಕ್ಷಣ ಸಚಿವರು ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಸತ್ಯನಾರಾಯಣರವರು, ಮೈಸೂರಿನಲ್ಲಿ 2005-06 ರಲ್ಲಿ ವಿಜಯನಗರ ಸರ್ಕಾರಿ ಮಹಿಳಾ ಕಾಲೇಜು ಪ್ರಾರಂಭವಾಗಿದೆ. 360 ರಷ್ಟು ವಿದ್ಯಾರ್ಥಿಗಳು ಇದ್ದಾರೆ. ಅಲ್ಲಿ BA., B.Com., BBM., Course ಗಳು ನಡೆಯುತ್ತಿವೆ. ಅಲ್ಲಿ ಕಟ್ಟಡ ಇಲ್ಲ ಎನ್ನುವುದನ್ನು ಹೇಳಿದ್ದಾರೆ. ನಿಶ್ಚಿತವಾಗಿ ನಾನು ಅದನ್ನು ಒಪ್ಪುತ್ತೇನೆ. MUDA ದ building ಗಳಲ್ಲಿ ಈಗ ನಡೆಸುತ್ತಿದ್ದಾರೆ. ಆದರೆ, ಸರ್ಕಾರ ಈಗಾಗಲೇ ಒಂದು ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದೆ. ಸ್ಥಳದ ಅಭಾವದಿಂದಾಗಿ ತೊಂದರೆಯಾಯಿತು. ಈಗ MUDA ದಿಂದ ಜಾಗ ತೆಗೆದುಕೊಂಡಿದ್ದು ಇದಕ್ಕಾಗಿ 30 ಲಕ್ಷ ರೂಪಾಯಿ ಖರ್ಚಾಗಿದೆ. 70 ಲಕ್ಷ ರೂಪಾಯಿ ಹಣ ಇದೆ. PWD ಯವರಿಗೆ ನಾವು ಕೆಲಸ ಪ್ರಾರಂಭಿಸುವುದಕ್ಕೆ ಸೂಚಿಸಿದ್ದೇವೆ. ಹೀಗಾಗಿ ನಾನು ಶಾಸಕರಲ್ಲಿ ವಿನಂತಿಸುವುದೇನೆಂದರೆ, ನಾನು PWD ಯ ಅಧಿಕಾರಿಗಳಿಗೂ ಸೂಚಿಸುತ್ತೇವೆ. ಅವರು ತಕ್ಷಣದಲ್ಲಿ 70 ಲಕ್ಷ ರೂಪಾಯಿಯಲ್ಲಿ ಕೆಲಸ ಶುರು ಮಾಡಿದರೆ, ಉಳಿದ ಹಣವನ್ನು ಅದರ ಖರ್ಚನ್ನು ಆಧರಿಸಿ ಅಗತ್ಯೆಯಿರುವಷ್ಟು ಪೂರೈಸುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸತ್ಯನಾರಾಯಣ : MUDA ದಿಂದ hand over ಆಗಿ ಒಂದು ವರ್ಷಗಳಾಗಿದೆ. ಹಣ ಬಿಡುಗಡೆಯಾಗಿ ಒಂದು ವರ್ಷವಾಗಿದೆ. ತಮ್ಮ ಅನುಮತಿಯಿಲ್ಲದೆ ಕೆಲಸ ಶುರು ಮಾಡಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು PWD ಯವರಿಗೆ ತಕ್ಷಣ ಕೆಲಸ ಪ್ರಾರಂಭಿಸಬೇಕೆಂದು ಸೂಚಿಸುತ್ತೇವೆ. 70 ಲಕ್ಷ ಹಣ ಖರ್ಚಾದ ನಂತರದಲ್ಲಿ ವಿವಿಧ ಹಂತದಲ್ಲಿ ಉಳಿದ ಹಣ ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಶಿವಶಂಕರರೆಡ್ಡಿಯವರ ಪರವಾಗಿ ಸಂಪಂಗಿಯವರು ಪ್ರಶ್ನೆ ಕೇಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಕಾಲೇಜು ಕಟ್ಟಡಗಳಿಗೆ ಹಣ ಬಿಡುಗಡೆ ಮಾಡಿದ್ದಾರೆ. ಆಧರೆ ಕಟ್ಟಡ ಪ್ರಾರಂಭಿಸುತ್ತಿಲ್ಲ. ಅದಕ್ಕೆ clarification ಕೇಳಬೇಕೋ ಬೇಡವೋ?

ಅಧ್ಯಕ್ಷರು : Please ಕುಳಿತುಕೊಳ್ಳಿ, ನಾನು ಬೇರೆಯವರನ್ನು ಕರೆದಿದ್ದೇನೆ. ತಾವು ಬಜೆಟ್ ಭಾಷಣದಲ್ಲಿ ಹೇಳಿ. ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಪ್ರಶ್ನೋತ್ತರದಲ್ಲಿ ಅವರಿಗೆ ಕೇಳುವುದಕ್ಕೆ ಅವಕಾಶ ಕೊಡಿ. ಎಲ್ಲಾ ಕಡೆ ಹಣ ಬಿಡುಗಡೆಯಾಗಿದೆ. ಆದರೆ ಕಟ್ಟಡದ ಕೆಲಸ ಪ್ರಾರಂಭಿಸಿಲ್ಲ, ಇದಕ್ಕೇನು ಕಾರಣ ಎಂದು ಅವರು ಕೇಳುತ್ತಿದ್ದಾರೆ.

ಅಧ್ಯಕ್ಷರು : ಪ್ರಶ್ನೋತ್ತರದಲ್ಲಿ ಎರಡೇ ಪ್ರಶ್ನೆ. ನೀವು ಬೇರೆ ರೂಪದಲ್ಲಿ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇದು ನೇರವಾಗಿ ವಿಜಯನಗರ ಕಾಲೇಜಿಗೆ ಸಂಬಂಧಪಟ್ಟಿರುವ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ಆದರೂ ಸಹ ನನ್ನ ಕ್ಷೇತ್ರವೂ ಒಳಗೊಂಡಂತೆ ಎಲ್ಲಾ ಶಾಸಕರ ಭಾವನೆ ಏನು ಇದೆ ಎಂದರೆ, ನಾವು ಹಣ ಕೊಟ್ಟಿದ್ದೇವೆ, ಕೆಲಸ ಪ್ರಾರಂಭವಾಗಿಲ್ಲ ಎನ್ನುವ ಸಾರ್ವತ್ರಿಕ ಭಾವನೆ ಏನು ಇದೆ, ಈಗಾಗಲೇ ನಾವು 91 ಕೋಟಿ ಕೊಟ್ಟಿರುವುದು ಹೌದು. ಎಲ್ಲಾ ಕಡೆ ಕಾಲೇಜು ಜಾಗದಲ್ಲಿ ಬಿಲ್ಡಿಂಗ್ ಮಾಡುವುದಕ್ಕೆ ಸೂಚಿಸಿರುವುದು ಹೌದು. ಕೆಲವು ಕಡೆ ಸ್ಥಳದ ಅಭಾವವಿದೆ, ಅಲ್ಲಿ ಅದನ್ನು ಬಗೆಹರಿಸುವುದಕ್ಕೆ ಹೇಳಿದ್ದೇವೆ. ಸ್ಥಳದ ತೊಂದರೆಯಿಲ್ಲದಿರುವ ಕಡೆಯಲ್ಲಿಯೂ ಸಹ ಈಗ ನಾವು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿರುವುದರಿಂದ PWD ಯವರಿಗೆ ತಕ್ಷಣವೇ ಎಲ್ಲಾ ಕಡೆ ಕೆಲಸ ಪ್ರಾರಂಭಿಸಿ ಎಂದು ಸೂಚಿಸಿರುತ್ತೇವೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮೈಸೂರಿನ ವಿಜಯನಗರ ಕಾಲೇಜಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಹಿಂದೆ Forst Grade College ಗಳಿಗೆ building grant ಏನು release ಆಯಿತು, ಅದೆಲ್ಲಾ ಲೋಕೋಪಯೋಗಿ ಇಲಾಖೆಯ ಮುಖಾಂತರ ಕಟ್ಟಡ ನಿರ್ಮಾಣ ವಾಗಬೇಕೆಂದು ಈ ಪ್ರಕ್ರಿಯೆ ಪ್ರಾರಂಭವಾಗಿ estimate ಗಳಾಗಿ tender ಕೂಡ ಕರೆದರು. ಇನ್ನೇನು agency fix ಆಗಬೇಕು ಎನ್ನುವ ಹಂತದಲ್ಲಿ ಇದ್ದಕ್ಕಿದ್ದ ಹಾಗೆ ಉನ್ನತ ಶಿಕ್ಷಣ ಸಚಿವರು ಎಲ್ಲಾ ಕಾಮಗಾರಿಗಳನ್ನು RITES ಎನ್ನುವ ಕೇಂದ್ರ ಸರ್ಕಾರದ ಸಂಸ್ಥೆಗೆ ವಹಿಸಿದರು. again ಅವರು ಏನು

ಮಾಡಿದರು, ಮತ್ತೆ ಪ್ರಾರಂಭದಿಂದ estimate ಮಾಡಿ approval ತೆಗೆದುಕೊಂಡು tender ಮಾಡಿ soil test ಮಾಡಿ ಮತ್ತೆ ಮಾಡುವುದಕ್ಕೆ ಎರಡು ವರ್ಷ ಹಿಡಿಯಿತು. ಸರ್ಕಾರದ ಯೋಜನೆ ಹೇಗೆ ಆಗಿದೆ ಎಂದರೆ, ಹಣ ಇದ್ದು First Grade College ಗಳ ಕಟ್ಟಡಗಳು ವಿನಾ ಕಾರಣ ಎರಡು ವರ್ಷ ಮುಂದಕ್ಕೆ ಹೋದ್ರವು. ಇದರ ಪರಿಣಾಮ ಏನಾಗಿದೆ ಎಂದರೆ, escalation cost ಜಾಸ್ತಿಯಾಗಿ ಕಟ್ಟಡದ ಪ್ರಮಾಣದಲ್ಲಿ 4 ಕೊಠಡಿ ಕಟ್ಟುವ ಕಡೆ 2 ಕೊಠಡಿ ಕಟ್ಟುವ ಸ್ಥಿತಿಗೆ ಬಂತು. ಇದು ಆಡಳಿತದಲ್ಲಿ ಆದಂಥ ಕೆಲವು ಬದಲಾವಣೆಗಳಿಂದ ಈ ರೀತಿ ವಿಳಂಬವಾಗಿದೆ. ಇದು ವಾಸ್ತವವಾದ ವಿಚಾರ. ಇನ್ನು ಮುಂದೆಯಾದರೂ ಅವುಗಳನ್ನು ಆದಷ್ಟು ಬೇಗನೆ ಕಟ್ಟಿಸಿ ಪ್ರಾರಂಭಿಸುವುದಕ್ಕೆ ತಾವು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕಟ್ಟಡ ಕಟ್ಟುವುದಕ್ಕೆ ನಾವು ಸೂಚಿಸಿದ್ದೇವೆ.

ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆ

39 (720) ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ಮಂಚೇನಹಳ್ಳಿ ಮತ್ತು ತೊಂಡೇಬಾವಿಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ತೆರೆಯಲು ತೆಗೆದು ಕೊಂಡಿರುವ ಕ್ರಮಗಳೇನು;

ಆ) ಗೌರಿಬಿದನೂರಿನಲ್ಲಿ ಈ ಪದವಿ ಪೂರ್ವ ಕಾಲೇಜುಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ಥಾಪನೆ ಮಾಡುವುದು ಅಗತ್ಯವಾಗಿರುವುದರಿಂದ ಈ ಕಾಲೇಜು ಸ್ಥಾಪನೆ ಬಗ್ಗೆ ಸರ್ಕಾರವು ಆಸಕ್ತಿ ವಹಿಸಿರುವುದೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಗೌರಿಬಿದನೂರು ತಾಲ್ಲೂಕಿನ ಮಂಚೇನಹಳ್ಳಿ ಮತ್ತು ತೊಂಡೇಬಾವಿ ಗ್ರಾಮಗಳಲ್ಲಿ ತಲಾ ಒಂದೊಂದು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಆದುದರಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು ತೆರೆಯುವ ಅಗತ್ಯತೆ ಕಂಡು ಬರುವುದಿಲ್ಲ;

ಆ) ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ 39 (720)

ಶ್ರೀ ಎನ್.ಸಂಪಂಗಿ (ಶಿವಶಂಕರರೆಡ್ಡಿ ಎನ್.ಹೆಚ್. ಇವರ ಪರವಾಗಿ) : ನಮ್ಮ ಪ್ರಶ್ನೆಗೆ ಮಂಚೇನಹಳ್ಳಿ ಮತ್ತು ತೊಂಡೇಬಾವಿ ಗ್ರಾಮಗಳಲ್ಲಿ ತಲಾ ಒಂದೊಂದು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ ಎಂದು ಉತ್ತರ ಕೊಟ್ಟಿದ್ದಾರೆ. ಆದುದರಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು ತೆರೆಯುವ ಅಗತ್ಯತೆ ಕಂಡು ಬರುವುದಿಲ್ಲವೆಂದು ಹೇಳಿದ್ದಾರೆ. ಅಂದರೆ, ಇವರ ಉದ್ದೇಶ ಏನೆಂದರೆ, Private College ಗಳನ್ನು ಇವರೇ ತೆರೆಸುತ್ತಿದ್ದಾರೆ. ಖಾಸಗಿ ಕಾಲೇಜು ಇದೆ ಎಂದು ಎಲ್ಲಿಯೂ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಿಂದುಳಿದ ಪ್ರದೇಶಗಳೆಂದು ಏನು ಇವೆ, ಡಾ:ನಂಜುಂಡಪ್ಪನವರ ವರದಿ ಪ್ರಕಾರ ಗೌರಿಬಿದನೂರು ಇರಬಹುದು, ಬಾಗೇಪಲ್ಲಿ ಇರಬಹುದು, ಚಿಕ್ಕಬಳ್ಳಾಪುರ ಇರಬಹುದು, ಇಲ್ಲಿ ಹೆಚ್ಚಿಗೆ ಸರ್ಕಾರಿ ಕಾಲೇಜುಗಳನ್ನು ಪ್ರಾರಂಭಿಸುವುದಕ್ಕೆ ಏಕೆ ಸಾಧ್ಯವಿಲ್ಲವೆಂದು ನಾನು ಕೇಳುತ್ತಿದ್ದೇನೆ.

ಇವತ್ತಿನ ದಿವಸ ಸರ್ಕಾರ ಕೊಡುತ್ತಿರುವ ಅನುದಾನ ಕೂಡ ಬಹಳ ಕಡಿಮೆ ಇದೆ. ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಮಕ್ಕಳು ಶುಲ್ಕವನ್ನು ಕಟ್ಟಿ ವಿದ್ಯಾಭ್ಯಾಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಮಾನ್ಯ ಮಂತ್ರಿಯವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಶಂಕರರೆಡ್ಡಿಯವರ ಪರವಾಗಿ ಮಾನ್ಯ ಎನ್. ಸಂಪಂಗಿಯವರು ಮಂಚೇನಹಳ್ಳಿ ಮತ್ತು ತೊಂಡೇಬಾವಿ ಗ್ರಾಮಗಳಲ್ಲಿ ಜೂನಿಯರ್ ಕಾಲೇಜು ಪ್ರಾರಂಭ ಮಾಡಬೇಕೆಂಬ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ, ಈ ಎರಡು ಗ್ರಾಮಗಳಲ್ಲಿ ಈಗಾಗಲೇ ಅನುದಾನಿತ ಖಾಸಗಿ ಕಾಲೇಜು ಇರುವುದರಿಂದ ಅಲ್ಲಿಗೆ ಸರ್ಕಾರದ ಜೂನಿಯರ್ ಕಾಲೇಜು ಕೊಡತಕ್ಕಂಥ ಅಗತ್ಯತೆ ಈಗ ಇಲ್ಲವೆಂದು ಹೇಳಿದ್ದೇವೆ. ಖಾಸಗಿ ಕಾಲೇಜಿನವರು ಹೆಚ್ಚು ಡೊನೇಷನ್ ಅಥವಾ ಬೇರೆ ಬೇರೆ ರೀತಿಯ ಶುಲ್ಕವನ್ನು ಹೆಚ್ಚು ತೆಗೆದುಕೊಳ್ಳುವುದರಿಂದ ಮಕ್ಕಳಿಗೆ ಇಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಅಲ್ಲಿ ಸರ್ಕಾರಿ ಕಾಲೇಜು ಪ್ರಾರಂಭ ಮಾಡಿದರೆ ಸರಿ ಹೋಗುತ್ತದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅನುದಾನಿತ ಖಾಸಗಿ ಸಂಸ್ಥೆ ಯಾವುದೇ ಇದ್ದರೂ ಸಹ ನಮ್ಮ ಸರ್ಕಾರಿ ನಿಯಮಾವಳಿಗಳಂತೆ ಶುಲ್ಕವನ್ನು ವಸೂಲ್ಮಾಡಬೇಕೆಂದು ನಾವು ಮೇಲಿಂದ ಮೇಲೆ ಸುತ್ತೋಲೆಗಳ ಮೂಲಕ ತಿಳಿಸು

ತ್ತಿದ್ದೇವೆ. ಆದರೂ ಸಹ ಎಲ್ಲಿಯಾದರೂ ಹೆಚ್ಚು ಶುಲ್ಕವನ್ನು ಅಥವಾ ಬೇರೆ ರೀತಿಯಲ್ಲಿ ಹಣವನ್ನು ವಸೂಲ್ಮಾಡಿದ ಬಗ್ಗೆ ದೂರನ್ನು ಸಲ್ಲಿಸಿದರೆ ಆ ದೂರಿನ ಮೇಲೆ ನಾವು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಜಿಲ್ಲಾ ಮಟ್ಟದಲ್ಲಿ ಡಿ.ಸಿ. ಯವರಿಗೂ ಕೂಡ ದೂರು ಸಲ್ಲಿಸಬಹುದು. ಅವರೂ ಕೂಡ ಇದರ ಪರಿಶೀಲನೆ ಮಾಡುತ್ತಾರೆ. ನಮ್ಮ ಇಲಾಖೆಯಲ್ಲಿಯೂ ಕೂಡ ಬೇರೆ ಬೇರೆ ಹಂತದಲ್ಲಿ ಪರಿಶೀಲನೆ ಮಾಡುತ್ತೇವೆ. ಮಕ್ಕಳಿಗೆ ಶಿಕ್ಷಣ ಬಹಳ ಅಮೂಲ್ಯವಾಗಿರುವುದರಿಂದ ಶಿಕ್ಷಣ ಒಳ್ಳೆಯ ರೀತಿಯಲ್ಲಿ ಸಿಗಬೇಕೆಂಬುದರ ಬಗ್ಗೆ ಸರ್ಕಾರದ ಎಲ್ಲಾ ಪ್ರಯತ್ನಗಳು ಇವೆ. ಖಾಸಗಿ ಸಂಸ್ಥೆಯವರು ಎಲ್ಲಿಯಾದರೂ ಮಿತಿ ಮೀರಿ ಹಣ ವಸೂಲ್ಮಾಡುವ ಬಗ್ಗೆ ದೂರನ್ನು ಸಲ್ಲಿಸಿದರೆ ಅದರ ಮೇಲೆ ನಿಶ್ಚಿತವಾಗಿ ಉಗ್ರವಾದ ಕ್ರಮವನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ಎನ್. ಸಂಪಂಗಿ : ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಗಡಿನಾಡು ಪ್ರದೇಶಗಳಲ್ಲಿ ಬಸ್‌ನ ಸೌಕರ್ಯ ಇಲ್ಲದೆ ಇರುವುದರಿಂದ ಇಲ್ಲಿನ ವಿದ್ಯಾರ್ಥಿ ಗಳು ಕಾಲೇಜುಗಳಿಗೆ ಸುಮಾರು ಕಿ.ಮೀ. ದೂರದವರೆಗೆ ನಡೆದುಕೊಂಡು ಬರಬೇಕಾಗುತ್ತದೆ, ಆದ್ದರಿಂದ, ಒಂದೊಂದು ಪಂಚಾಯತ್ ವ್ಯಾಪ್ತಿಗೆ ಒಂದೊಂದು ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಗಡಿನಾಡು ಪ್ರದೇಶದಲ್ಲಿನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತನ್ನು ಕೊಡುವುದರ ಬಗ್ಗೆ ತಾವು ಗಮನದಲ್ಲಿಟ್ಟುಕೊಂಡು ಆ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಬೆಳ್ತಂಗಡಿಯಲ್ಲಿ ಶಾಲೆಯನ್ನು ಸರ್ಕಾರದ ಸುಪರ್ದಿಗೆ ನೀಡುವ ಬಗ್ಗೆ

40 (178) ಶ್ರೀ ವಸಂತ ಬಂಗೇರ (ಬೆಳ್ತಂಗಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಶ್ರೀ ಶಾರದಾ ಅನುದಾನಿತ ಶಾಲೆಯನ್ನು ಸರ್ಕಾರ ವಹಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರವು ತೆಗೆದುಕೊಂಡ ಕ್ರಮವೇನು;

ಇ) ಈ ಶಾಲೆಯನ್ನು ಸರ್ಕಾರದ ಸುಪರ್ದಿಗೆ ಎಂದು ಒಳಪಡಿಸಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ.ಗೋಪಾಲ ಭಂಡಾರಿ (ವಸಂತ ಬಂಗೇರರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಬೆಳ್ತಂಗಡಿಯಲ್ಲಿರುವ ಶ್ರೀ ಶಾರದಾ ಅನುದಾನಿತ ಶಾಲೆಯಲ್ಲಿ ಸರ್ಕಾರ ಸ್ವಾಧೀನ ಪಡಿಸಿಕೊಳ್ಳುವ ಉದ್ದೇಶ ಇದೆಯೇ ಎಂದು ಪ್ರಶ್ನೆ ಕೇಳಲಾಗಿದೆ. ಇದೊಂದು ಪ್ರಶ್ನೆಗೆ ಇಲ್ಲವೆಂದು ಸರ್ಕಾರ ಉತ್ತರ ಕೊಟ್ಟಿದೆ. ಬಹುಶಃ ನಮ್ಮ ಕರಾವಳಿ ಜಿಲ್ಲೆಯಲ್ಲಿ ಅನುದಾನಿತ ಶಾಲೆಗಳು ಬಹಳಷ್ಟಿವೆ. ಆದರೆ, ಇಲ್ಲಿರತಕ್ಕಂಥ ಎಲ್ಲಾ ಅನುದಾನಿತ ಶಾಲೆಗಳನ್ನು ಸರ್ಕಾರಕ್ಕೆ ವಾಪಸ್ಸು ಕೊಡತಕ್ಕಂಥ ಪರಿಸ್ಥಿತಿ ಇವತ್ತಿನದಿವಸ ಬಂದಿದೆ. ಕಾರಣ ಏನೆಂದರೆ, ಒಂದು ರೀತಿಯ ಅಸಮಾನತೆ ಬಂದಿದೆ. ಅಂದರೆ , ಈ ಶಾಲೆಗಳನ್ನು ನಮ್ಮಿಂದ ನಡೆಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಸರ್ಕಾರ ಇದನ್ನು ವಶಪಡಿಸಿಕೊಳ್ಳಬೇಕು ಮತ್ತೆ assets and liability ಎಲ್ಲವನ್ನು ಸರ್ಕಾರಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಇಲಾಖೆ ಕೂಡ ಶಿಫಾರಸ್ಸು ಮಾಡಿದೆ. ಆದರೆ, ಇಲ್ಲಿಯತನಕ ಆ ಶಾಲೆಯನ್ನು ಸ್ವಾಧೀನ ಪಡಿಸಿ ಕೊಳ್ಳತಕ್ಕಂಥ ಕೆಲಸ ಆಗಿಲ್ಲ. ನಮ್ಮ ಕಡೆ ಅಂದರೆ ಉಡುಪಿ ಮತ್ತು ಕರಾವಳಿ ಜಿಲ್ಲೆಗಳಲ್ಲಿರುವ ಅನುದಾನಿತ ಶಾಲೆಗಳು ಬಹಳ ಉತ್ತಮವಾದಂಥ ಕೆಲಸವನ್ನು ಮಾಡುತ್ತಿದ್ದವು. ಆದರೆ, ಇವತ್ತಿನದಿವಸ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಒಂದು ರೀತಿಯ ವ್ಯತ್ಯಾಸ ಇದೆ. ಅದೇನೆಂದರೆ, ಹೆಚ್ಚುವರಿ ಶಿಕ್ಷಕರ ಒಂದು ಪಟ್ಟಿಯನ್ನು ಮಾಡುವಾಗ ಸರ್ಕಾರಿ ಶಾಲೆಯಲ್ಲಿ 25 ರಿಂದ 30 ವಿದ್ಯಾರ್ಥಿಗಳಿಗೆ ಒಬ್ಬರು ಅಧ್ಯಾಪಕರು ಮತ್ತು ಖಾಸಗಿ ಶಾಲೆಗಳಿಗೆ 30 ರಿಂದ 50 ವಿದ್ಯಾರ್ಥಿಗಳಿಗೆ ಒಬ್ಬರು ಅಧ್ಯಾಪಕರು ಇದ್ದಾರೆ. ಮತ್ತೆ ಖಾಸಗಿ ಶಾಲೆಯಲ್ಲಿನ ಅಧ್ಯಾಪಕರು ನಿವೃತ್ತರಾದರೆ ಆ ಹುದ್ದೆಯನ್ನು

ಪುನಃ ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಇಲ್ಲದೆ ಇರುವುದರಿಂದ ಆ ಹುದ್ದೆ ಲ್ಯಾಪ್ಸ್ ಆಗುವಂಥ ಪರಿಸ್ಥಿತಿಯಿಂದ ಶಾಲೆಗಳನ್ನು ನಡೆಸುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಅನುದಾನ ರಹಿತ ಶಾಲೆಗಳಲ್ಲಿರುವ ವಿಚಾರ ಬೇರೆ. ಅನುದಾನ ಖಾಸಗಿ ಶಾಲೆಗಳಲ್ಲಿ ಸರ್ಕಾರಿ ಶಾಲೆಗಳ ರೀತಿಯಲ್ಲಿಯೇ ಉತ್ತಮ ಗುಣಮಟ್ಟದ ಶಿಕ್ಷಣ ಕೊಡತಕ್ಕಂಥ ವ್ಯವಸ್ಥೆ ಇದೆ. ಆದರೆ, ನಾನು ಹೇಳಿದ ಒಂದು ಉದಾಹರಣೆ ಹಿನ್ನೆಲೆಯಲ್ಲಿ ಅಲ್ಲಿ ಖಾಸಗಿ ಅನುದಾನಿತ ಶಾಲೆಗಳನ್ನು ನಡೆಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ಇದರ ಬಗ್ಗೆ ಮಾನ್ಯ ಸಚಿವರು ಮಾಹಿತಿ ನೀಡಬೇಕೆಂಬುದು ನನ್ನ ವಿನಂತಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಶ್ರೀ ಶಾರದಾ ಅನುದಾನಿತ ಶಾಲೆ ಇತ್ತು. ಇಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆಗೆ ನಡೆಯುತ್ತಿತ್ತು. ನಾವು ಅದನ್ನು ಅನುದಾನಕ್ಕೂ ಕೂಡ ಒಳಪಡಿಸಿದ್ದೆವು. ಅಲ್ಲಿ ಒಬ್ಬ ಶಿಕ್ಷಕರಿದ್ದರು. ಈ ಶಿಕ್ಷಕರು 2009ರ ಏಪ್ರಿಲ್ ತಿಂಗಳಲ್ಲಿ ತೀರಿ ಹೋದರು. ಆ ಶಾಲೆಯಲ್ಲಿ 36 ವಿದ್ಯಾರ್ಥಿಗಳಿದ್ದರು. ಮೊದಲು ಇದ್ದಂಥ ಶಿಕ್ಷಕರು ತೀರಿ ಹೋದ ನಂತರ ಆ ಶಾಲೆಯನ್ನು ನಡೆಸುವುದಕ್ಕೆ ಆಗದೇ ಇರತಕ್ಕಂಥ ಸ್ಥಿತಿಗೆ ಬಂತು. ಸಂಬಂಧಪಟ್ಟ ಸಂಸ್ಥೆಯವರು ನಡೆಸಲಿಲ್ಲ. ಅರಣ್ಯ ಭೂಮಿಯಲ್ಲಿ ಮೂರು ಕೊಠಡಿಯ ಒಂದು ಶಾಲಾ ಕಟ್ಟಡವನ್ನು ಕಟ್ಟಿಕೊಂಡು ಶಾಲೆಯಲ್ಲಿ ನಡೆಸುತ್ತಿದ್ದರು. ಶಾರದಾ ಸಂಸ್ಥೆಯವರಿಂದ ಆ ಶಾಲೆ ನಡೆಸುವುದಕ್ಕೆ ಸಾಧ್ಯವಾಗದೆ ಇರುವುದರಿಂದ ಅಲ್ಲಿನ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬ ಉದ್ದೇಶದಿಂದ ಸರ್ಕಾರ 2009-10 ನೇ ಸಾಲಿನಿಂದ ಅಲ್ಲಿರುವ ಶಾಲೆಗೆ ಬೇರೆ ಅಧ್ಯಾಪಕರನ್ನು ಡೆಪ್ಯೂಟ್ ಮಾಡಿ ಸರ್ಕಾರದ ಕಡೆಯಿಂದ ಆ ಶಾಲೆಯನ್ನು ಈಗ ನಡೆಸುತ್ತಿದ್ದೇವೆ. ಗ್ರಾಮೀಣ ಭಾಗದಲ್ಲಿರುವ ಮಕ್ಕಳು ಶಿಕ್ಷಣದಿಂದ ವಂಚಿತರಾಗದೆ ಇರುವುದಕ್ಕೆ ನಾವು ಒಂದು ವ್ಯವಸ್ಥೆಯನ್ನು ಈಗಾಗಲೇ ಕಲ್ಪಿಸಿದ್ದೇವೆ. ಆ ಸಂಸ್ಥೆಯನ್ನು ನಾವು ತೆಗೆದುಕೊಳ್ಳಬೇಕೆಂಬುದು ಮಾನ್ಯ ವಸಂತ ಬಂಗೇರರವರ ಪ್ರಶ್ನೆಯಾಗಿದೆ. ಅವರ assets and liability ಎಲ್ಲವನ್ನು ಬಿಟ್ಟುಕೊಡುತ್ತಾರೆಂದು ಮಾನ್ಯ ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ಹೇಳಿದರು. Assets ಇದ್ದರೆ ಪರವಾಗಿಲ್ಲ. ಆದರೆ, ಇವತ್ತಿನದಿವಸ Liability ಜಾಸ್ತಿ ಇರತಕ್ಕಂಥ ಅನೇಕ ಸಂಸ್ಥೆಗಳಿವೆ. ಆದ್ದರಿಂದ ಇಂಥವುಗಳ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಏಕೆಂದರೆ,

ಅಲ್ಲಿರತಕ್ಕಂಥ ಸ್ಥಳ ಇವರಿಗೆ ಸೇರಿಲ್ಲ. ರೆಕಾರ್ಡ್ ಪ್ರಕಾರ ಆ ಜಾಗ ಅರಣ್ಯ ಇಲಾಖೆಗೆ ಸೇರಿದೆ. Liability ಯೇ ನಮಗೆ ಜಾಸ್ತಿಯಾಗುವುದಾದರೆ ನಾವೇಕೆ ಅದನ್ನು ತೆಗೆದುಕೊಳ್ಳಬೇಕು? ಸರ್ಕಾರದ ಕಡೆಯಿಂದ ಅಧ್ಯಾಪಕರನ್ನು ಅಲ್ಲಿ ಡೆಪ್ಯೂಟ್ ಮಾಡಿ ಈಗ ಶಾಲೆಯನ್ನು ನಡೆಸುತ್ತಿದ್ದೇವೆ. ಅಲ್ಲಿನ ಮಕ್ಕಳು ಶಿಕ್ಷಣದಿಂದ ಯಾವುದೇ ರೀತಿಯಲ್ಲಿ ವಂಚಿತರಾಗದೆ ಇರುವ ಹಾಗೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಸಂಸ್ಥೆಗಳಿಗೆ ಅವರಿಗೆ ಆದಂತಹ ಕಷ್ಟ ಸುಖಗಳಿವೆ. ಆ ವಿಷಯದ ಬಗ್ಗೆ ಕೂಡ ಸರ್ಕಾರ ಸಹಾನುಭೂತಿಯಿಂದ ಯಾವತ್ತೂ ಕೂಡ ಸ್ಪಂದಿಸಿದೆ. ಮುಂದಕ್ಕೂ ಕೂಡ ಸ್ಪಂದಿಸುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ವೈ.ಎನ್.ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಖಾಸಗಿ ಅನುದಾನಿತ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಯನ್ನು ಬಹಳ ಬೇಗ ಮಾಡಿಕೊಳ್ಳಬೇಕು. ಇವತ್ತಿನದಿವಸ ಅನುದಾನಿತ ಶಾಲೆಗಳಲ್ಲಿ ನೇಮಕಾತಿ ಮಾಡಿಕೊಳ್ಳುವುದಕ್ಕೆ ನೀವು ಬೇಗ ಅನುಮತಿಯನ್ನು ಕೊಡುವುದಿಲ್ಲ. ಮೂರ್ನಾಲ್ಕು ವರ್ಷ ಹುದ್ದೆಗಳು ಖಾಲಿಯೇ ಇರುತ್ತವೆ. ಅಧ್ಯಾಪಕರ ನೇಮಕಾತಿ ಆಗದೆ ಇರತಕ್ಕಂಥ ಸಮಸ್ಯೆ ತುಂಬಾ ಶಾಲೆಗಳಲ್ಲಿವೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಕಮೀಷನರ್ ಕಛೇರಿಗೆ ನಾವು ಸಹ ಬಹಳಷ್ಟು ಸಾರಿ ಹೋಗಿ ಇದರ ಬಗ್ಗೆ ಕೇಳಿದ್ದೇವೆ. ಅನುದಾನಿತ ಶಾಲೆಗಳಲ್ಲಿ ಹುದ್ದೆಗಳು ಖಾಲಿ ಇದೆ. ಆದ್ದರಿಂದ, ಹೊಸದಾಗಿ ಆಯ್ಕೆ ಮಾಡಿಕೊಳ್ಳುವುದಕ್ಕೆ ಅನುಮತಿ ಕೊಡುವ ವಿಚಾರದ ಬಗ್ಗೆ ತಾವು ಗಮನಹರಿಸಬೇಕು.

ಶ್ರೀ ಕೆ.ಗೋಪಾಲ ಭಂಡಾರಿ : ಮಾನ್ಯ ಅಧ್ಯಕ್ಷರೆ, ಅಲ್ಲಿ ಶಾಲೆಯನ್ನು ಮುಚ್ಚುವಂಥ ವಾತಾವರಣ ಏಕೆ ಸೃಷ್ಟಿ ಆಯಿತೆಂಬುದರ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಅವರ ಉತ್ತರದಲ್ಲಿ ಹೇಳಿದ್ದಾರೆ. ಅಲ್ಲಿದ್ದಂಥ ಒಬ್ಬ ಅಧ್ಯಾಪಕರು ಮೃತರಾದ್ದರಿಂದ ಆ ಸ್ಥಳಕ್ಕೆ ಬೇರೆ ಅಧ್ಯಾಪಕರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಇಲಾಖೆ ಅನುಮತಿ ಕೊಡುತ್ತಿಲ್ಲ. ಮತ್ತೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿರುವ ಅಸಮಾನತೆ ಬಗ್ಗೆ ಕೂಡ ಗಮನಹರಿಸ ಬೇಕಾಗುತ್ತದೆ. ಅಂದರೆ, ವಿದ್ಯಾರ್ಥಿಗಳ ಸಂಖ್ಯೆ ಪ್ರಕಾರ ಅಧ್ಯಾಪಕರು ಇರಬೇಕು. ಸರ್ಕಾರಿ ಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕರೆಂದು ಇದೆಯೋ ಅದೇ ರೀತಿಯಲ್ಲಿ ಖಾಸಗಿ ಅನುದಾನಿತ

ಶಾಲೆಗಳಿಗೆ ಕೊಟ್ಟರೆ ಈ ಸಮಸ್ಯೆಗಳು ಸ್ವಲ್ಪಮಟ್ಟಿಗೆ ಪರಿಹಾರವಾಗುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಮ್ಮ ಎಲ್ಲಾ ಮಕ್ಕಳಿಗೆ ಶಿಕ್ಷಣ ಸಿಗಬೇಕೆಂಬುದು ಸರ್ಕಾರದ ಮೂಲಭೂತವಾದ ಉದ್ದೇಶವಾಗಿದೆ. ಕಡ್ಡಾಯ ಶಿಕ್ಷಣ 8ನೇ ತರಗತಿಯವರೆಗೆ ಮೊದಲು ಇತ್ತು. ನಾವು ಈಗ 12ನೇ ತರಗತಿಯವರೆಗೆ ಹೋಗುತ್ತಿದ್ದೇವೆ, ಶಿಕ್ಷಣ ಕೊಡುವಂಥದ್ದರ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಒಂದು ಆದ್ಯತೆ ವಲಯವನ್ನಾಗಿ ತೆಗೆದುಕೊಂಡಿದೆ. ಈ ಒಂದು ಹಿನ್ನೆಲೆಯಲ್ಲಿ ಸಾಕಷ್ಟು ಯೋಜನೆಗಳನ್ನು ರೂಪಿಸಿ ಶಿಕ್ಷಣ ಕೊಡುವುದಕ್ಕೆ ನಮ್ಮೆಲ್ಲಾ ಕಾರ್ಯಕ್ರಮ ಗಳನ್ನು ನಾವು ಅನುಷ್ಠಾನಗೊಳಿಸುತ್ತಿದ್ದೇವೆ. ಆದರೆ, ಖಾಸಗಿ ಶಿಕ್ಷಣ ಸಂಸ್ಥೆಗಳದು ಅವರದೇ ಅದಂಥ ಅನೇಕ ಸಮಸ್ಯೆಗಳಿವೆ. ನಮ್ಮ ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಉತ್ತಮವಾದಂಥ ಸೇವೆಯನ್ನು ಸಲ್ಲಿಸುತ್ತಿರುವು ದರಿಂದ ರಾಜ್ಯದಲ್ಲಿ ಶಿಕ್ಷಣದ ಪ್ರಗತಿ ಒಳ್ಳೆಯ ರೀತಿಯಲ್ಲಿ ಆಗುವುದಕ್ಕೆ ಕಾರಣವಾಗಿದೆ. ಆದರೂ ಸಹ ಅಲ್ಲಿ ಹುದ್ದೆಗಳನ್ನು ತುಂಬಿಕೊಳ್ಳುವಂಥ ವಿಷಯ ಅಥವಾ ಅಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಅಧ್ಯಾಪಕ ವರ್ಗದ ಕೆಲವು ವಿಷಯಗಳಿರಬಹುದು, ಈ ರೀತಿಯಾದ ಕೆಲವು ಸಮಸ್ಯೆಗಳು ಮತ್ತು ಬೇಡಿಕೆಗಳು ಇರುವಂಥದ್ದು ಸರ್ಕಾರದ ಗಮನದಲ್ಲಿದೆ.

ಇವೆಲ್ಲವನ್ನೂ ಸಹ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಿದ್ದೇವೆ. ತಮಗೆ ಗೊತ್ತಿರುವಂತೆ ಖಾಸಗಿ ಅನುದಾನಿತ ಶಾಲೆಗಳಲ್ಲಿ ತೆರವು ಆಗಿರುವಂಥ ಸುಮಾರು 2,500 ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಕಳೆದ ಸಾರಿ ಬಜೆಟ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅವಕಾಶ ಮಾಡಿಕೊಟ್ಟಿದ್ದಾರೆ. ಹುದ್ದೆಗಳನ್ನು ತುಂಬಿಕೊಳ್ಳುವಂಥ ಪ್ರಕ್ರಿಯೆಗಳನ್ನು ನಾವು ನಡೆಸುತ್ತಿದ್ದೇವೆ. ಖಾಸಗಿ ಅನುದಾನಿತ ಸಂಸ್ಥೆಗಳ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸರ್ಕಾರ ನಿರಂತರವಾಗಿ ಪ್ರಯತ್ನ ಮಾಡಿದೆ. 2006ರ ನಂತರ ತೆರವಾಗಿರುವ ಸುಮಾರು 2600 ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ನಮ್ಮ ಸರ್ಕಾರ ಕೂಡ ಅವಕಾಶ ಮಾಡಿಕೊಟ್ಟಿದ್ದು, ಈ ಪ್ರಕ್ರಿಯೆ ಈಗ ನಡೆಯುತ್ತಿದೆ. ಅವರ ಬೇಡಿಕೆಗಳು ಇನ್ನು ಏನೇನಿವೆ, ಅವುಗಳೆಲ್ಲವನ್ನು ಹಂತ ಹಂತವಾಗಿ ಪರಿಶೀಲನೆ ಮಾಡಿಕೊಂಡು ಅವುಗಳ ಬಗ್ಗೆ ನಾವು ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಇವತ್ತಿನದಿವಸ ಖಾಸಗಿ ಶಿಕ್ಷಣ

ಸಂಸ್ಥೆಗಳು ಒಳ್ಳೆಯ ಸೇವೆಯನ್ನು ಸಲ್ಲಿಸುತ್ತಿರುವುದರಿಂದ ಸರ್ಕಾರ ಅದಕ್ಕೆ ಬೆಂಬಲಿಸುವುದಕ್ಕೆ ಸಿದ್ಧವಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಗೋಪಾಲ ಭಂಡಾರಿ : ಈಗಾಗಲೇ ಸರ್ಕಾರಿ ಶಾಲೆಯಲ್ಲಿರುವಂತೆ ಖಾಸಗಿ ಶಾಲೆಯಲ್ಲಿಯೂ ಕೂಡ ಒಬ್ಬ ಅಧ್ಯಾಪಕರಿಗೆ ಇಷ್ಟೇ ವಿದ್ಯಾರ್ಥಿಗಳು ಇರುವಂತೆ ಮಾಡಬೇಕು. ಹೆಚ್ಚು ಕಡಿಮೆ ಏತಕ್ಕಾಗಿ ಮಾಡುತ್ತೀರಿ ಎಂಬುದು ನಮ್ಮ ಪ್ರಶ್ನೆಯಾಗಿದೆ.

ಅಧ್ಯಕ್ಷರು : ಆಯಿತು. ನಿಮ್ಮ ಪ್ರಶ್ನೆ ಮುಗಿಯಿತು. ಈಗ ಮಾನ್ಯ ವೆಂಕಟಸ್ವಾಮಿಯವರನ್ನು ನಾನು ಕರೆದಿದ್ದೇನೆ.

ದೇವನಹಳ್ಳಿಯಲ್ಲಿ ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ ಬಗ್ಗೆ

41 (342) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ತಾಲ್ಲೂಕಿನಲ್ಲಿ ಹೊಸದಾಗಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಇದ್ದರೆ ಯಾವಾಗ ಪ್ರಾರಂಭಿಸಲಾಗುವುದು (ವಿವರ ಒದಗಿಸುವುದು);

ಇ) ಹೊಸ ವಿಶ್ವವಿದ್ಯಾಲಯಕ್ಕೆ ಸರ್ಕಾರಿ ಜಾಗವನ್ನು ಗುರುತಿಸಲಾಗಿದೆಯೇ (ವಿವರ ಒದಗಿಸುವುದು);

ಈ) ದೇವನಹಳ್ಳಿ ಮತ ಕ್ಷೇತ್ರಕ್ಕೆ ಹೊಸದಾಗಿ ಪದವಿ ಕಾಲೇಜು ಮಂಜೂರು ಮಾಡುವ ಉದ್ದೇಶ ಸಕಾರಕ್ಕೆ ಇದೆಯೇ;

ಉ) ಹಾಗಿದ್ದರೆ, ಪ್ರಸಕ್ತ ಸಾಲಿನಲ್ಲಿಯೇ ಕಾಲೇಜನ್ನು ಪ್ರಾರಂಭಿಸಲಾಗುವುದೇ;

ಊ) ಇದಕ್ಕೆ ತಗಲುವ ಅನುದಾನ ಎಷ್ಟು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಪ್ರಸ್ತಾವನೆಯು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಈಗಾಗಲೇ ಪ್ರಾರಂಭಿಸಿರುವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿದ್ದು, ಅಗತ್ಯತೆಗನುಗುಣವಾಗಿ ಆರ್ಥಿಕ

ಇಲಾಖೆಯೊಂದಿಗೆ ಸಮಾಲೋಚಿಸಿ ಅಗತ್ಯವಿರುವೆಡೆ ಪದವಿ ಕಾಲೇಜು ಗಳನ್ನು ಪ್ರಾರಂಭಿಸಲಾಗುವುದು.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

(12-10 P.M.)

ಶ್ರೀ ವೆಂಕಟಸ್ವಾಮಿ : ಮಾನ್ಯ ಅಧ್ಯಕ್ಷರೆ, ನನ್ನ ದೇವನಹಳ್ಳಿ ಕ್ಷೇತ್ರದಲ್ಲಿ ವಿಜಿಪುರ ಪಟ್ಟಣ ಸುಮಾರು 40 ಸಾವಿರ ಜನಸಂಖ್ಯೆಯನ್ನು ಹೊಂದಿದ್ದು ಆ ಪಟ್ಟಣದ ಪಕ್ಕದಲ್ಲಿ 2 ಹೋಬಳಿಗೆ ಸುಮಾರು 80 ಹಳ್ಳಿಗಳು ಬರುತ್ತದೆ. ಪಿಯುಸಿ ಕಾಲೇಜು ಈಗಾಗಲೇ ಪದವಿಪೂರ್ವ ಕಾಲೇಜು ಒಂದು ಸರ್ಕಾರದ್ದು ಇದೆ. ಖಾಸಗಿ ಕಾಲೇಜು 6 ಇದೆ. ಒಟ್ಟು ಪಿಯುಸಿ ಕಾಲೇಜಿನಲ್ಲಿ ಅಂದರೆ. ಪ್ರಥಮ ಪಿಯುಸಿ ಕಾಲೇಜಿನಲ್ಲಿ 1553 ವಿದ್ಯಾರ್ಥಿಗಳು ಇದ್ದಾರೆ. ದ್ವಿತೀಯ ಪಿಯುಸಿಯಿಂದ 788 ವಿದ್ಯಾರ್ಥಿಗಳು ಇದ್ದಾರೆ. ಒಟ್ಟು 1936 ವಿದ್ಯಾರ್ಥಿಗಳು ಇದ್ದಾರೆ. ಈ ವಿದ್ಯಾರ್ಥಿಗಳು ತೀರಾ ಬಡಕುಟುಂಬದಿಂದ ಬಂದವರಾಗಿದ್ದಾರೆ. ನನ್ನ ಕ್ಷೇತ್ರವು Reserve Constituency ಆಗಿರುವುದರಿಂದ ರೈತರ ಮಕ್ಕಳು ಅಲ್ಲಿ ಇದ್ದಾರೆ. ಇವತ್ತು ನನಗೆ ಬಹಳ ನೋವಾಗುತ್ತದೆ, ಈ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳನ್ನು ಓದಿಸಬೇಕಾದರೆ ಬಹಳ ಕಷ್ಟವಿದೆ. ಆದರೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಓದುತ್ತಿರಬೇಕಾದರೆ ಅಲ್ಲಿ ಒಂದು ಪದವಿಪೂರ್ವ ಕಾಲೇಜು ಸಹ ಇರುವುದಿಲ್ಲ. ಆದ್ದರಿಂದ ದಯಮಾಡಿ ಅಗತ್ಯವಿದ್ದರೆ ನಾವು ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇವತ್ತು ತಾವು ಯೋಚನೆಯನ್ನು ಮಾಡಬೇಕು. ಇಲ್ಲಿ ಅದರ ಅಗತ್ಯವಿಲ್ಲವೇ? ಎಂಬುದರ ಬಗ್ಗೆ ತಾವು ಯೋಜನೆಯನ್ನು ಮಾಡಿ ನನಗೆ ಆದಷ್ಟು ಬೇಗನೆ ಪದವಿ ಕಾಲೇಜನ್ನು ವಿಜಿಪುರ ಪಟ್ಟಣಕ್ಕೆ ಮಾಡಿಕೊಡ ಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) (ಉನ್ನತ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ವೆಂಟಕಸ್ವಾಮಿಯವರ ಮೊದಲನೆಯ ಪ್ರಶ್ನೆ ದೇವನಹಳ್ಳಿ ತಾಲ್ಲೂಕಿಗೆ ಒಂದು ವಿಶ್ವವಿದ್ಯಾನಿಲಯವನ್ನು ಕೊಡಬೇಕೆಂದು ಇದೆ. ಇದನ್ನು ಯಾವಾಗ ಪ್ರಾರಂಭಿಸುತ್ತೀರಿ? ಹೊಸ ಯೂನಿವರ್ಸಿಟಿಯನ್ನು ಮಾಡುವ ಬಗ್ಗೆ ಸರ್ಕಾರ ಜಾಗವನ್ನು ಗುರುತಿಸಿದ್ದೀರಾ, ಎಂದು ಕೇಳಿದ್ದಾರೆ. ಇದರಲ್ಲಿ ಎರಡು

ಭಾಗವಿದೆ. ಅದಕ್ಕಾಗಿ ನಾನು ಸ್ಪಷ್ಟಪಡಿಸುತ್ತಿದ್ದೇನೆ. ದೇವನಹಳ್ಳಿಗೆ ಹೊಸ ವಿಶ್ವವಿದ್ಯಾನಿಲಯವನ್ನು ಕೊಡಬೇಕೆಂಬ ಬೇಡಿಕೆಯನ್ನು ಅವರು ಮುಂದಿಟ್ಟಿದ್ದಾರೆ, ಒಂದು ಹೊಸ ವಿಶ್ವವಿದ್ಯಾನಿಲಯವನ್ನು ದೇವನಹಳ್ಳಿಯಲ್ಲಿ ಪ್ರಾರಂಭಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಯೂ ಇಲ್ಲ. ನಾವು ಸ್ಥಳ ಗುರುತಿಸುವಂತಹ ಇತ್ಯಾದಿ ಪ್ರಶ್ನೆಗಳು ಉದ್ಭವವಾಗುವುದಿಲ್ಲ. ಆದರೆ ಅವರು ಒಂದು ಕೇಳಿರುವಂತಹ ಪ್ರಶ್ನೆಯೊಳಗಡೆ ಒಂದು ಸೂಕ್ಷ್ಮತೆಯು ಅಡಗಿದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಬೈಫರ್‌ಕೇಟ್ ಮಾಡುವ ಬಗ್ಗೆ ಪ್ರೊ: ರುದ್ರಯ್ಯರವರ ಸಮಿತಿಯು ರಚನೆಯಾಗಿ 3 ವಿಶ್ವವಿದ್ಯಾನಿಲಯವನ್ನು ಮಾಡಿದರೆ ಒಳ್ಳೆಯದು ಎಂದು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದು ಸರ್ಕಾರದ ಪರಿಶೀಲನೆ ಯಲ್ಲಿದೆ. ಅದನ್ನು ಏನಾದರೂ ದೇವನಹಳ್ಳಿಯಲ್ಲಿ ಪ್ರಾರಂಭಿಸಿ ಎಂದು ಏನಾದರೂ ಇರಬಹುದು. ನಾನು ಅವರಿಗೆ ನೆನಪು ಮಾಡಿಕೊಡುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ : ಅವರು Confuse ಮಾಡಿಕೊಂಡಿರುವುದಿಲ್ಲ. ಏನಾಗಿದೆ ಎಂದರೆ ಬಜೆಟ್ ಪುಸ್ತಕದಲ್ಲಿ ಓದಿದಾಗ ತುಮಕೂರು ಯೂನಿವರ್ಸಿಟಿ ಎಂದು ಹೇಳಿದ್ದಾರೆ, 'ಎಷ್ಟು ಯೂನಿವರ್ಸಿಟಿಗಳು ಇದೆಯೆಂದು ಹುಡುಕುತ್ತಿದ್ದೇವೆ. ಆದರೆ ಅದರ ಬಗ್ಗೆ ಲೆಕ್ಕವೇ ಸಿಗುತ್ತಿಲ್ಲ. ಅದಕ್ಕೋಸ್ಕರ ಅವರು ಏನಾದರೂ ನಮಗೂ ಒಂದು ಯೂನಿವರ್ಸಿಟಿ ಸಿಗುತ್ತದೆ ಎಂದು ಕೇಳಿರಬಹುದು ಅಷ್ಟೇ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ರಾಜ್ಯದಲ್ಲಿ 15 ವಿಶ್ವವಿದ್ಯಾ ನಿಲಯಗಳು ಇವೆ.

ಶ್ರೀ ಎಸ್. ಸುರೇಶ್‌ಕುಮಾರ್ : ಜಾರ್ಖಂಡ್‌ನಲ್ಲಿ ಸುಮಾರು 52 ವಿಶ್ವವಿದ್ಯಾನಿಲಯಗಳು ಇದೆ. ಅವರು ಒಂದೊಂದೆ ಮುಚ್ಚಿಕೊಂಡುಬಿಟ್ಟಿದ್ದಾರೆ. ನಾವು quality ಮತ್ತು need ಗೆ ಅನುಸಾರವಾಗಿ ನಾವು ಕೊಡುತ್ತಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ : ಅದು ಇದ್ದಿದ್ದರೆ ನೀವು ಈ ಬಜೆಟ್‌ನಲ್ಲಿ ಇಷ್ಟೊಂದು ಯೂನಿವರ್ಸಿಟಿಯನ್ನು ಕೊಡುತ್ತಿರಲಿಲ್ಲ. ಈಗ ಚರ್ಚೆಗೆ ಬರುತ್ತದೆಯಲ್ಲಾ, ಕೃಷಿ ವಿಶ್ವವಿದ್ಯಾನಿಲಯವನ್ನು ಶಿವಮೊಗ್ಗಕ್ಕೆ ಮಾಡಿದ್ದಾರೆ, ಅದು ಒಂದೇ ಒಂದು ಕಾಲೇಜು, ಒಂದು ಕಾಲೇಜಿಗೆ ಒಂದು ಯೂನಿವರ್ಸಿಟಿಯೇ? ಇದು ಅಗತ್ಯತೆನಾ? ಇದರ ಅವಶ್ಯಕತೆಯೇ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಶಿವಮೊಗ್ಗ ಮಾಡಿರುವುದು ಅದು need. ಇದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗ ದವರು ಎನ್ನುವ ಕಾರಣಕ್ಕಾಗಿ ಒಂದು ಯೂನಿವರ್ಸಿಟಿ.

ಅಧ್ಯಕ್ಷರು : ಆಯಿತು, ತಾವು ಉತ್ತರವನ್ನು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ವೆಂಕಟಸ್ವಾಮಿಯವರು ಕೇಳಿರುವಂತಹ ಮೊದಲನೆ ಪ್ರಶ್ನೆಗೆ ಉತ್ತರವನ್ನು ನಾನು ಕೊಟ್ಟಿದ್ದೇನೆ. ಅಲ್ಲಿ ಯಾವುದೇ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವಂತಹ ಪ್ರಸ್ತಾವನೆಯು ಸರ್ಕಾರದ ಮುಂದೆ ಇಲ್ಲ. ಇನ್ನು ಎರಡನೆಯ ಭಾಗ ಒಂದು ಡಿಗ್ರಿ ಕಾಲೇಜು ಕೊಡಿ ಎಂದು ಅವರು ಹೇಳಿದ್ದಾರೆ. ಆ ಕುರಿತಂತೆ ನಾವು ಪರಿಶೀಲನೆಯನ್ನು ಮಾಡುತ್ತೇವೆ.

ಅಧ್ಯಕ್ಷರು : ಆಯಿತು.

ಅಧ್ಯಕ್ಷರು : ಮಾನ್ಯ ಪ್ರಕಾಶ್ ಬಾಬಣ್ಣ ಹುಕ್ಕೇರಿಯವರ ಪ್ರಶ್ನೆ 42(577) ಗೆ ಮಾನ್ಯ ಸಚಿವರು ಸಮಯವನ್ನು ಕೇಳಿದ್ದಾರೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ನೀವು ನಮ್ಮ ಸಹಾಯಕ್ಕೆ ಬರಬೇಕು. ಕಳೆದ ಅಧಿವೇಶನದಲ್ಲಿಯೂ ನಾನು 2–3 ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕಾಗಿ ನೀವು ಸ್ಪಷ್ಟವಾಗಿ ಯಾವಾಗ ಉತ್ತರವನ್ನು ಕೊಡಿಸುತ್ತೀರೆಂದು ದಯವಿಟ್ಟು ಹೇಳಬೇಕು.

ಅಧ್ಯಕ್ಷರು : ಇದಕ್ಕೆ 15 ದಿವಸದಲ್ಲಿ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅವರ ಪ್ರಶ್ನೆಯು ತಮ್ಮ ಪೀಠದ ಮುಂದೆಯೂ ಇದೆ. ಮರಾಠಿ ಮತ್ತು ಉರ್ದು, ಕನ್ನಡ ಪ್ರೌಢ ಶಾಲೆಗಳೆಷ್ಟು? ತರಗತಿವಾರು ಮಕ್ಕಳ ಸಂಖ್ಯೆ ಹಾಗೂ ಶಿಕ್ಷಕರ ಸಂಖ್ಯೆಯನ್ನು ಕೊಡಬೇಕು ಈ ರೀತಿಯಾಗಿ ಕೇಳಿದ್ದಾರೆ. ಈಗ ಅವೆಲ್ಲವನ್ನು ಸಂಗ್ರಹಿಸಿ ಕೊಡುತ್ತೇವೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ನಾವುಗಳು ಪ್ರಶ್ನೆಯನ್ನು ಕೇಳುತ್ತೇವಲ್ಲಾ, ಗಡಿಭಾಗದಲ್ಲಿ ಏನು ಮಕ್ಕಳ ಪರಿಸ್ಥಿತಿ ಇದೆ, ಅದನ್ನು ನಾವು ಸರ್ಕಾರದ ಗಮನಕ್ಕೆ ತರುವುದಕ್ಕೆ ನಾವು ಈ ರೀತಿಯಾಗಿ ಪ್ರಶ್ನೆಯನ್ನು ಕೇಳಿದ್ದೇವೆಯೇ ಹೊರತಾಗಿ ಅಲ್ಲಿ ನಾವು ತರಗತಿವಾರು ಅವೆಲ್ಲವು ನಮಗೆ ಗೊತ್ತಿದೆ. ಅಲ್ಲಿ ಶಿಕ್ಷಕರ ಪರಿಸ್ಥಿತಿ ಏನಿದೆ, ತಾವು ಅಲ್ಲಿಗೆ ಏನೇನು ಪತ್ರವನ್ನು

ಕಳುಹಿಸುತ್ತೀರಿ, ಯಾವ್ಯಾವ ಶಿಕ್ಷಕರನ್ನು ಯಾವಾಗ ಬದಲಾವಣೆ ಮಾಡಬೇಕು. ಇವೆಲ್ಲವನ್ನು ನಿಮ್ಮ ಗಮನಕ್ಕೆ ತರಬೇಕೆಂಬ ಬಗ್ಗೆ ನಾವು ಕೇಳಿದ್ದೇವೆ. ದಯವಿಟ್ಟು ಇದಕ್ಕೆ ಯಾವಾಗ ಉತ್ತರವನ್ನು ಕೊಡಿಸುತ್ತೀರಿ.?

ಅಧ್ಯಕ್ಷರು : ಆದಷ್ಟು ಶೀಘ್ರದಲ್ಲಿ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆದಷ್ಟು ಶೀಘ್ರದಲ್ಲಿ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು : ಸೋಮವಾರ ಅಥವಾ ಮಂಗಳವಾರದಲ್ಲಿ ಕೊಡಿಸುತ್ತೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಕಳೆದ ಸಾರಿಯೂ ಶೀಘ್ರವೇ? ಯಾವಾಗ ನಾವು ಕೇಳಿದರೂ ಕೂಡ ಶೀಘ್ರ ಎಂದು ಉತ್ತರವನ್ನು ಕೊಡುತ್ತಾರೆ. ಶೀಘ್ರ ಎಂಬುದನ್ನು ಬಿಟ್ಟು ಬೇರೆ ಏನು ಹೇಳುವುದಿಲ್ಲ. ಶೀಘ್ರ ಅತಿ ಜರೂರು, ಕ್ರಮ ಕೈಗೊಳ್ಳುತ್ತೇವೆ ಇವೆಲ್ಲಾ ನಮಗೆ ಬೇಡ ಮಾನ್ಯ ಅಧ್ಯಕ್ಷರೆ, ಇವೆಲ್ಲವನ್ನು ಕೇಳಿ ನಮಗೆ 22 ವರ್ಷಗಳಾಯಿತು. ಕ್ರಮವನ್ನು ಕೈಗೊಳ್ಳುತ್ತೇವೆ, ಶೀಘ್ರ, ತ್ವರಿತವಾಗಿ...

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಹುಕ್ಕೇರಿಯವರು ಈ ಕಡೆಯಿಂದ ಸುಮಾರು 22 ವರ್ಷಗಳಾಯಿತು. ಎಲ್ಲಾ ಶಬ್ದಗಳನ್ನು ಸಹನೆಯಿಂದ ಕೇಳಿಕೊಂಡು ಅವರುಗಳು ಇದ್ದಾರೆ. ಈಗ ಅಲ್ಲಿಗೆ ಹೋದ ತಕ್ಷಣ ಆ ಕಡೆಯಿಂದ ಕುಳಿತುಕೊಂಡು ಈ ರೀತಿ ಹೇಳುತ್ತಿದ್ದಾರೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ನಾವು ಆ ತರಹ ಮಾಡಿರುವುದಿಲ್ಲ. ಆ ರೀತಿ ಉತ್ತರ ಕೊಟ್ಟೇ ಇಲ್ಲ, ನಾವು ಏನು ಮಾಡಿದರೂ ಕೂಡ ತಕ್ಷಣ ಕ್ರಮವನ್ನು ಕೈಗೊಂಡಿದ್ದೇವೆ. ಅವರು ಮಾತುಗಳನ್ನು ಹೇಳುವುದರಲ್ಲಿ ಬಹಳ ಚೆನ್ನಾಗಿದೆ. ಇಲ್ಲಿ ನಾಲ್ಕೈದು ಮಂದಿ ಶಾಸಕರು ಇದ್ದಾರೆ, ಅವರ ಭಾಷಣವನ್ನೇ ಕೇಳುವುದಕ್ಕೆ ನಾವು ಇಲ್ಲಿಗೆ ಬರುವುದು. ನಾವು ಅವರ ಕಡೆಯಿಂದ ಕೆಲಸವನ್ನು ಕೇಳುವುದಕ್ಕೆ ಇಲ್ಲಿಗೆ ಬರುವುದಿಲ್ಲ. ಇಲ್ಲಿಯೂ ಅದೇ ಪರಿಸ್ಥಿತಿಯಾಗಿದೆ. ನಾವು 3ನೇ ಮಹಡಿಗೆ ಹೋದರೂ ಕೂಡ ಅಲ್ಲಿಯೂ ಅದೇ ಪರಿಸ್ಥಿತಿ ಇದೆ. ಒಂದು ಗಂಟೆ ಬೇಕಾದರೆ ಮಾತನಾಡಿಸುತ್ತಾರೆ. ಹಾಗೆ ಆಯಿತು, ಹೀಗೆ ಆಯಿತು, ಈಗ ನಮಗೆಲ್ಲಾ ಆಗಿದೆ ಎಂದು ನಾವು ತಿಳಿದುಕೊಳ್ಳುತ್ತೇವೆ. ಮಾನ್ಯ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತಿನಲ್ಲಿ ಬಹಳ ಚತುರರಾಗಿದ್ದಾರೆ. ಇದನ್ನು ಮಾಡಿ ಎಂದು ಹೇಳಿದರೆ ಅವರ ಕಡೆಯಿಂದ ಆಗುವುದಿಲ್ಲ. ದಯವಿಟ್ಟು ಮಾನ್ಯ

O.17 F-8

ಸಚಿವರು ಈ ಬಗ್ಗೆ ಉತ್ತರವನ್ನು ಹೇಳಬೇಕು. ದಯವಿಟ್ಟು ಇದಕ್ಕೆ ಯಾವಾಗ ಉತ್ತರವನ್ನು ಕೊಡುತ್ತಾರೆಂದು ಹೇಳಬೇಕೆಂದು ನಾನು ಮಾನ್ಯ ಅಧ್ಯಕ್ಷರಲ್ಲಿ ಕಳಕಳಿಯಿಂದ ವಿನಂತಿಯನ್ನು ಮಾಡುತ್ತೇನೆ.

ಅಧ್ಯಕ್ಷರು : ಆಯಿತು, ಒಂದು ವಾರದಲ್ಲಿ ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧ ಪಟ್ಟಂತೆ ಮಂತ್ರಿಯವರು ನಮ್ಮ ಗುಲ್ಬರ್ಗಾಕ್ಕೆ ಬಂದಿದ್ದಾರೆ. ಆ ಟೈಮ್‌ನಲ್ಲಿ ನಾನು ಮಂತ್ರಿಯವರನ್ನು ಕೇಳಿದ್ದೇನೆ. ನನಗೆ ಕನ್ನಡದ ಬಗ್ಗೆ ಬಹಳ ಕಾಳಜಿ ಇದೆ. ಉರ್ದು ಸ್ಕೂಲ್‌ನಲ್ಲಿ ಕನ್ನಡ ಟೀಚರ್ಸ್‌ಗಳು ಇರುವುದಿಲ್ಲ.

ಅಧ್ಯಕ್ಷರು : ಅದಕ್ಕೂ ಇದಕ್ಕೂ ಏನು ಸಂಬಂಧವಿಲ್ಲ. ಬೇರೆ ರೀತಿಯಲ್ಲಿ ಕೇಳಿ.

ಶ್ರೀ ಖಮರುಲ್ ಇಸ್ಲಾಂ : ಕನ್ನಡದ ಬಗ್ಗೆ ನಮಗೆ ಕಾಳಜಿ ಇದೆ. ತಾವು ಒಂದು ಕೆಲಸವನ್ನು ಮಾಡಿ ಈ ಬಗ್ಗೆ ನಾನು ವಿನಂತಿಯನ್ನು ಮಾಡುತ್ತೇನೆ. 3ನೇ language, ಒಂದು mother tongue, 2nd English, 3ನೇಯ language ಉರ್ದು, ಮರಾಠಿ, ಇರಲಿ.

ಅಧ್ಯಕ್ಷರು : ಆ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಖಮರುಲ್ ಇಸ್ಲಾಂ : ಎಲ್ಲಾ ಜನರು Kannada Medium ನಲ್ಲಿ ದಾಖಲೆಯಾಗುತ್ತದೆಯೇ, ತಮಗೆ ಈ ಬಗ್ಗೆ ಕಾಳಜಿ ಇದೆಯಾ? ಸರ್ಕಾರಕ್ಕೆ ಕನ್ನಡದ ಬಗ್ಗೆ ಕಾಳಜಿ ಇದೆಯಾ? ನೀವು 3ನೇ subject introduce ಮಾಡಿ ಇದನ್ನು ನೀವು ಏತಕ್ಕಾಗಿ ಮಾಡುತ್ತಿಲ್ಲ. ಮೂರು language formula ತಾವು ಈ ಬಗ್ಗೆ ಆಶ್ವಾಸನೆಯನ್ನು ಕೊಡಲೇಬೇಕು. ಕನ್ನಡ ಪರ ನಿಮಗೆ ಕಾಳಜಿ ಇದ್ದರೆ 3ನೇ language ತಾವು ಕನ್ನಡ.........

ಅಧ್ಯಕ್ಷರು : ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಶಾಸಕರ 577 ನೇ ಪ್ರಶ್ನೆಗೆ ನಾವು ಅವಕಾಶವನ್ನು ಕೇಳಿದ್ದೇವೆ.

ಅಧ್ಯಕ್ಷರು : ಆಯಿತು.

ರಾಯಚೂರಿನಲ್ಲಿ ಕಾಲೇಜು ಉಪನ್ಯಾಸಕರ ಕೊರತೆ ಬಗ್ಗೆ

43 (350) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ತಾಲ್ಲೂಕಿನಲ್ಲಿ ವಿಷಯ ಉಪನ್ಯಾಸಕರ (Subject Lecturer) ಕೊರತೆಯಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ವಿಷಯ ಉಪನ್ಯಾಸಕರ (Subject Lecturer) ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಹಾಗಿದ್ದಲ್ಲಿ, ಯಾವಾಗ ಈ ಹುದ್ದೆಗಳನ್ನು ತುಂಬಲಾಗುವುದು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಕಾರ್ಯಭಾರಕ್ಕನುಗುಣವಾಗಿ 20 ಮಂಜೂರಾದ ಹುದ್ದೆಗಳೆದುರಾಗಿ 14 ಪೂರ್ಣಕಾಲಿಕ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಕೆಲವು ವಿಷಯಗಳಿಗೆ ಹೆಚ್ಚಿನ ಉಪನ್ಯಾಸಕರ ಅವಶ್ಯಕತೆ ಇದ್ದುದರಿಂದ ಬೇರೆ ಕಾಲೇಜುಗಳಿಗೆ 07 ಉಪನ್ಯಾಸಕರು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ 12 ಅತಿಥಿ ಉಪನ್ಯಾಸಕರು ಸಹ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ಕಾರ್ಯಭಾರಕ್ಕನುಗುಣವಾಗಿ ಅಗತ್ಯತೆ ಇರುವ ಉಪನ್ಯಾಸಕರುಗಳನ್ನು ನೇಮಿಸಿರುವುರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ನಾಡಗೌಡ ವೆಂಕಟರಾವ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನಗೆ ಉತ್ತರ ಸಮಂಜಸವಿಲ್ಲ. ಈಗ ಏನಾಗಿದೆ ಎಂದರೆ ಈ ಕಾಲೇಜು 1974 ರಲ್ಲಿ ಪ್ರಾರಂಭ ಮಾಡಿರುವ ಹಳೆಯ ಕಾಲೇಜು ಆಗಿದೆ. ಇಲ್ಲಿ ಇದುವರೆಗೂ Grade-I Principal ಇಲ್ಲ. ಇಲ್ಲಿ Deputation ಮೇಲೆ Principal ರವರು ಇದ್ದಾರೆ. ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ಕೇಳಿದರೆ Principal ಇಲ್ಲ, Kannada Lecturer ಇಲ್ಲ, English Lecturer ಇಲ್ಲ, ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ವಾಣಿಜ್ಯ ನಿರ್ವಹಣಾ ಶಾಸ್ತ್ರದಲ್ಲಿ 3 ಜನರು ಇಲ್ಲ. Computer ನಲ್ಲಿ ಇಬ್ಬರು ಇಲ್ಲ, ಇಲ್ಲಿ ಯಾರೂ ಇಲ್ಲ. ಇಲ್ಲಿ ಏನಾಗಿದೆ ಎಂದರೆ, ಇದು NAAC Committee ಮುಂದೆ ಬರುತ್ತಿದೆ. ಹೋದ ಸಲ NAAC ನಲ್ಲಿ ಬಂದಾಗ ಬಿ ಬಂದಿದೆ ಈ ಸಲ ಅಲ್ಲಿ ಬರುತ್ತಿರುವುದರಿಂದ ಕಾರ್ಯದರ್ಶಿಯವರ ಹತ್ತಿರ ಹೋಗಿದ್ದೇನೆ. ಇಲ್ಲಿ ಏನಾಗಿದೆ ಎಂದರೆ ಕೆಲವು ಕಡೆ Subject ಗಳು ಎಲ್ಲಿ ಇಲ್ಲ, ಅಲ್ಲಿ ನೀವು ಶಿಕ್ಷಕರನ್ನು ಹಾಕಿದ್ದೀರಿ. ಅಲ್ಲಿ ಶಿಕ್ಷಕರು ಕೆಲಸವಿಲ್ಲದೆ ಖಾಲಿ ಕುಳಿತ್ತಿದ್ದಾರೆ. ಆ ತರಹ ಬಗ್ಗೆ ನಾನು identity ಮಾಡಿ ನಿಮ್ಮ ಕಾರ್ಯದರ್ಶಿಯವರ ಮುಂದೆ ಹೋಗಿ ಹೇಳಿದ ಮೇಲೆ ಅವರು ಶ್ರೀಮತಿ ನಾಗಲಾಂಬಿಕರವರ ಹತ್ತಿರ ಹೋಗಿ ಹೇಳಿದ ಮೇಲೆ ಇದರಲ್ಲಿ 7 ಜನರನ್ನು deputation ಮಾಡಿದ್ದಾರೆಂದು ಇದರಲ್ಲಿ ಹೇಳಿದ್ದೀರಿ. ಆದರೆ ಅಲ್ಲಿಗೆ 4 ಜನರು ಮಾತ್ರ ಬಂದಿದ್ದಾರೆ. ಇನ್ನು 3 ಜನರು ನಿಮ್ಮ ಆದೇಶವನ್ನು ಪಾಲಿಸಿರುವುದಿಲ್ಲ. ಅವರು ಯಾರು ಇಲ್ಲಿಗೆ ಬಂದು join ಆಗಿರುವುದಿಲ್ಲ. 4 ಜನರು ಬಂದು join ಆಗಿದ್ದಾರೆ. ಇನ್ನು Non-staff ಅಂತೂ Grade-I Manager ಇರುವುದು ಒಂದು post ಅದು ಕೂಡ ಖಾಲಿ ಇದೆ. ಸಹಾಯಕ ಗ್ರಂಥಾಲಯ ಅದು ಖಾಲಿ ಇದೆ. ಅಟೆಂಡರ್ಸ್ 6 ಜನರಲ್ಲಿ ಒಬ್ಬರು ಇದ್ದಾರೆ, 5 ಖಾಲಿ ಇದೆ. ಪರಿಚಾರಕರು 6 ಹುದ್ದೆಗಳು ಇದ್ದು ಅವು ಖಾಲಿ ಇದೆ. ಕಾವಲುಗಾರರು ಖಾಲಿ, ಸ್ಕ್ಯಾವೆಂಜರ್ಸ್ ಇಲ್ಲ. ಅಷ್ಟು ದೊಡ್ಡ ಕಟ್ಟಡ ಇದ್ದರೂ ಕಸ ಹೊಡೆಯುವವರು ಇಲ್ಲ, ಬಳಿಯುವವರು ಇಲ್ಲ. ಯಾರು ಇರುವುದಿಲ್ಲ.

ಈ ಪರಿಸ್ಥಿತಿಯನ್ನು ಕಾಲೇಜಿನಲ್ಲಿಟ್ಟು ನೀವು ಒಳ್ಳೆಯ ಶಿಕ್ಷಣವನ್ನು ಕೊಡುತ್ತೇವೆ, ಹೇಗೆ ಕೊಡುತ್ತೀರಿ? ಇದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳು ತ್ತೀರೆಂದರೆ ಇದರಲ್ಲಿ ಏನೂ ಇಲ್ಲ, ನಾವು ಅತಿಥಿ ಉಪನ್ಯಾಸಕರೆಂದು

ತೆಗೆದುಕೊಂಡಿದ್ದೇವೆಂದು ಅಲ್ಲಿ ಏನು ತೊಂದರೆಯಿಲ್ಲವೆಂದು ಹೇಳುತ್ತೀರಿ. ನೀವು NAAC ಮುಂದೆ ಹೋಗುವಂತಹ ಕಾಲೇಜಿಗಾದರೂ ಇದನ್ನು ಮಾಡದೆ ಇದ್ದರೆ ಆ ಕಾಲೇಜುಗಳ ಭವಿಷ್ಯ ಏನಾಗುತ್ತದೆ? ಕಟ್ಟಡದ ರಿಪೇರಿಗೂ ಸಹ ದುಡ್ಡು ಇರುವುದಿಲ್ಲ. ನಮ್ಮ ಅನುದಾನದಲ್ಲಿ ಹಾಗೂ ಎಂಎಲ್‌ಸಿ ಗ್ರಾಂಟ್‌ನಲ್ಲಿ ಮಾಡಿದ್ದೇವೆ. ಈ ಹುದ್ದೆಗಳನ್ನು ಏನಾದರೂ ಮಾಡಿ ತುಂಬುವ ಬಗ್ಗೆ ಈಗ ಏನು ಹುದ್ದೆಗಳು ಖಾಲಿ ಇವೆ, ಮೊದಲು ಅಲ್ಲಿ ಒಬ್ಬ Principal ನ್ನಾದರೂ ಹಾಕಿ. ಇಲ್ಲದೆ ಹೋದರೆ NAAC Committee ಮುಂದೆ ಏನೆಂದು ಉತ್ತರವನ್ನು ಕೊಡುವುದು. ನಿಮ್ಮ NAAC Committee ಮುಂದೆ ಬಿ ಬಂದಿದೆ ಈ ಸಲ ಡಿ ಆಯಿತೆಂದರೆ, NAAC ಗೆ ಬಹಳ importance ನ್ನು ಕೊಡುತ್ತಿದ್ದೀರಿ. ಏಕೆಂದರೆ financial assistance ಇದು ಅವರಿಂದಲೇ ಸಿಗುವುದು. ಅಂತಹ ಪರಿಸ್ಥಿತಿಯಲ್ಲಿ ಇಟ್ಟರೆ NAAC ನವರು ಇನ್ನೆಂತಹ grade ನ್ನು ಕೊಡುವುದಕ್ಕೆ ಸಾಧ್ಯ? NAAC ಮುಂದೆ ಹೋಗತಕ್ಕಂತಹ ಕಾಲೇಜಿಗಳಿಗಾದರೂ ಆದ್ಯತೆಯನ್ನು ಕೊಟ್ಟು ಈ ವಾರದೊಳಗಡೆ ಏನಾದರೂ ಮಾಡದೆ ಇದ್ದರೆ next month NAAC Committee visit ಇದೆ. ನಾವು building ಗೆ ಬಣ್ಣವನ್ನು ಹಚ್ಚಿ ಸುಂದರ ಮಾಡಿದ್ದೇವೆ. ಒಳಗಡೆ Prinicipal, Lecturers ಗಳು ಇರದಿದ್ದರೆ ಹೇಗೆ? ಅದಕ್ಕಾಗಿ ತಾವು ದಯವಿಟ್ಟು ಕ್ರಮವನ್ನು ಕೈಗೊಳ್ಳಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) (ಉನ್ನತ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ನನಗೆ ಅರ್ಥವಾಗುವಂತಹದ್ದು ಸಿಂಧೂರಿನಲ್ಲಿ 1971–72ನೇ ಇಸವಿಯೊಳಗಡೆ ಇದು ಪ್ರಾರಂಭವಾಗಿರುವಂತಹ ಕಾಲೇಜಾಗಿದೆ. ಬಿ.ಎ. ಬಿಎಸ್ಸಿ, ಬಿಕಾಂ, ಬಿಬಿಎಂ ಎಲ್ಲಾ ಸೇರಿಸಿ ಸುಮಾರು 700 ಮಕ್ಕಳಿದ್ದಾರೆ, ಸಿಂಧೂರಿನಂತಹ ತಾಲ್ಲೂಕು ಕೇಂದ್ರಕ್ಕೆ ಇದು ಸಗತ್ಯವಾಗಿ ಸುಸಜ್ಜಿತವಾಗಿ, ವ್ಯವಸ್ಥಿತವಾಗಿ ಇರಬೇಕಾದಂತಹ ಕಾಲೇಜು ಎನ್ನುವುದನ್ನು ಅದನ್ನು ನಾವೆಲ್ಲರೂ ಒಪ್ಪಬೇಕಾದಂತಹದ್ದು. ಆದರೆ ಅಲ್ಲಿ ಏನೂ ಇಲ್ಲವೆಂದು impression ಬರುವ ರೀತಿಯಲ್ಲಿ ಮಾನ್ಯ ಸದಸ್ಯರಾದ ನಾಡಗೌಡರು ಹೇಳುತ್ತಿದ್ದಾರೆ. ತಾವು ವಿರೋಧಪಕ್ಷದ ಶಾಸಕರಾಗಿ ತಾವು ವಿಷಯವನ್ನು ಸರಿಯಾಗಿ ಪ್ರಸ್ತಾಪ

ಮಾಡಿದ್ದೀರಿ. ಆದರೆ ಅಲ್ಲಿ 20 post sanction ಆಗಿರುವುದು ಇದೆ. 20 post ನಲ್ಲಿ 14 post permanent hand ಇದೆ. 7 post ನ್ನು deputation ಮಾಡಿಕೊಟ್ಟಿದ್ದೇವೆ, ನೀವು 3 ಜನರು ಬಂದು ಸೇರಿಕೊಂಡಿಲ್ಲವೆಂದು ಹೇಳಿದ್ದೀರಿ. ಅವರು ಏತಕ್ಕಾಗಿ ಸೇರಿಕೊಂಡಿಲ್ಲವೆಂಬುದರ ಬಗ್ಗೆ ನಾವು ಪರಿಶೀಲಿಸುತ್ತೇವೆ. ಅದರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅವರು ಸರ್ಕಾರ ಆದೇಶವನ್ನು ಮೀರಿದ್ದರೆ ಅವರು ಯಾವ ಕಾರಣದಿಂದ ಈ ರೀತಿಯಾಯಿತು ಎನ್ನುವುದನ್ನು ನೋಡಿ ಅವರ ಮೇಲೆ ಕ್ರಮವನ್ನು ಕೈಗೊಳ್ಳುತ್ತೇವೆ. ಆದರೆ ಇನ್ನು 12 ಜನರು ಅತಿಥಿ ಉಪನ್ಯಾಸಕರನ್ನಾಗಿ ನಾವು ಅವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅವರು ಕೆಲಸವನ್ನು ಮಾಡುತ್ತಿದ್ದಾರೆ. ಹಾಗಾಗಿ ಯಾವುದೇ ವಿಷಯವನ್ನು ಕಲಿಸುವುದಕ್ಕೆ ಮಕ್ಕಳಿಗೆ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗದೆ ಇರುವಂತೆ ನಾವು ಆ ಕಾಲೇಜಿನ ಅಗತ್ಯತೆಗಳನ್ನು ಅಧ್ಯಾಪಕರ ಅಗತ್ಯತೆಗಳನ್ನು ಪೂರೈಸಿದ್ದೇವೆ. ತಾವು ಹೇಳಿದ ಹಾಗೆ ಡಿ ಗ್ರೂಪ್, FDC, SDC, ಇಲ್ಲವೆನ್ನುವುದು ಒಂದು ಭಾಗ ಇದೆ. ಈ ಶಿಕ್ಷಣ ಕ್ಷೇತ್ರ ಹಿಂದಿನಿಂದಲೂ ಅದಕ್ಕೆ ಸಿಗಬೇಕಾದಂತಹ ಪ್ರಾಮುಖ್ಯತೆಗಳಲ್ಲಿ ನಿರ್ಲಕ್ಷ್ಯತೆಗಳು ಆಗಿರುವುದರಿಂದ ಈಗ ನಮ್ಮ ಸರ್ಕಾರದಲ್ಲಿ ಸಾಕಷ್ಟು ಮಹತ್ವವನ್ನು ಕೊಡುತ್ತಿರುವುದರಿಂದಾಗಿ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ನೀವು NAAC Committee ಬಂದಾಗ ನಾವು ಅಲ್ಲಿ ಏನು Prinicipal ಹುದ್ದೆ ಇದ್ದರೆ ಒಳ್ಳೆಯದು ಎಂದು ಹೇಳಿದ್ದೀರಿ. ಅದನ್ನು ಪರಿಶೀಲಿಸಿ NAAC Committee ಬಂದಾಗ ನಮ್ಮ ವಿಷಯವನ್ನು ಸಮರ್ಪಕವಾಗಿ ಅಲ್ಲಿ ಏನೇನು ಸೌಲಭ್ಯಗಳು ಇವೆ, ಯಾವ ರೀತಿಯಲ್ಲಿ ನಾವು ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಳ್ಳುವುದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆಂಬುದನ್ನು ಆ ಕಮಿಟಿಯ ಮುಂದೆ ನಾವು ಪ್ರಭಾವಿಯಾಗಿ ಸಮರ್ಪಕವಾಗಿ ವಿಷಯವನ್ನು ಮಂಡಿಸುವುದಕ್ಕೆ ಸಿದ್ಧವಾಗಿರುತ್ತೇವೆ. ಮುಂದಿನ ತಾವು ಹೇಳಿರುವಂತಹದ್ದು ಏನು ಇದೆ, ಅದು ವಸ್ತುಸ್ಥಿತಿ ಇದೆ. ಮುಂದಿನ ದಿನಗಳಲ್ಲಿ ರಿಪೇರಿಗಾಗಲಿ, ಉಳಿದ ಹಂತದ ಕೆಲವು ಸಿಬ್ಬಂದಿಗಳನ್ನು ಕೊಡುವುದಕ್ಕಾಗಲಿ ಅಗತ್ಯ ಕ್ರಮವನ್ನು ಸರ್ಕಾರವು ಕೈಗೊಳ್ಳುತ್ತದೆ.

ಶ್ರೀ ನಾಡಗೌಡ ವೆಂಕಟರಾವ್ : ತಾವು ಹೇಳುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ 20 post ಎಂದು ಹೇಳಿದ್ದೀರಿ. ಇನ್ನು 17 post ಗಳ

ಅವಶ್ಯಕತೆ ಇದೆ. ನೀವು hours basis ಮೇಲೆ ನೀವು ಮಾಡುತ್ತೀರಿ. ಇಷ್ಟು hour ಇದ್ದರೆ ಇಷ್ಟು ಶಿಕ್ಷಕರು ಬೇಕೆಂಬುದರ ಮೇಲೆ ನೀವು ಮಾಡುತ್ತೀರಿ. ನಮಗೆ ಇನ್ನು 17 ಶಿಕ್ಷಕರ ಹುದ್ದೆ ಅಲ್ಲಿ vacancy ಇದೆ. ದಯವಿಟ್ಟು ಅದನ್ನು ಸಹ ತಾವು ಗಮನಿಸಬೇಕು. ಕಟ್ಟಡದ ರಿಪೇರಿಗೆ ನಮ್ಮ ಅನುದಾನ ಹಾಗೂ ಎಂಎಲ್‌ಸಿಯವರ ಅನುದಾನದಲ್ಲಿ ಮಾಡಿದ್ದೇವೆ, ಅದಕ್ಕೂ ಸಹ ಆ NAAC ಬರುವುದರೊಳಗಾಗಿ ನೀವು ಒಂದಿಷ್ಟು ಅನುಕೂಲತೆಯನ್ನು ಮಾಡಿಕೊಟ್ಟರೆ ಚೆನ್ನಾಗಿರುತ್ತದೆಂದು ನನ್ನ ಮನವಿಯಾಗಿದೆ.

ಅಧ್ಯಕ್ಷರು : ಆಯಿತು.

ಅರಸೀಕೆರೆ ಹೇಮಾವತಿ ನೀರು ಸರಬರಾಜು ಮಾಡುವ ಬಗ್ಗೆ

44 (713) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಟ್ಟು ಉತ್ತರಿಸುವರೆ?

ಅ) ಅರಸೀಕೆರೆ ಪಟ್ಟಣಕ್ಕೆ ಹೇಮಾವತಿ ಜಲಾಶಯದಿಂದ ನೀರು ಸರಬರಾಜು ಮಾಡುವ ಮಾರ್ಗ ಮಧ್ಯೆ ಎನ್ ರೂಟ್ಸ್ ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಗ್ರಾಮೀಣಾಭಿವೃದ್ಧಿ ಇಲಾಖೆ ಅನುಮತಿ ನೀಡದಿರಲು ಕಾರಣಗಳೇನು;

ಆ) ಎನ್ ರೂಟ್ಸ್ ಗ್ರಾಮಗಳಿಗೆ ಪ್ರತ್ಯೇಕ ನೀರು ಪೂರೈಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನಿರ್ಧರಿಸಿದೆಯೇ; (ವಿವರಣೆ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಮತ್ತು ಆ) ಈಗಾಗಲೇ ಗ್ರಾಮ ಅ.ಪಂ.ರಾಜ್ ಇಲಾಖೆಯಿಂದ ಸಬ್-ಮಿಷನ್ ಕಾರ್ಯಕ್ರಮದಡಿ 2008-09ರ ಸಾಲಿನಲ್ಲಿ, ಅನುಮೋದನೆ ಮಾಡಿರುವ ರೂ. 86.85 ಕೋಟಿ ಅಂದಾಜಿನ 475 ಗ್ರಾಮಗಳ 2 ಪ್ರತ್ಯೇಕ ಬಹು ಗ್ರಾಮ ಯೋಜನೆಗಳಡಿ, ಪ್ರಶ್ನಿತ 17 ಮಾರ್ಗ ಮಧ್ಯದ ಗ್ರಾಮಗಳ ಪೈಕಿ 11 ಗ್ರಾಮಗಳು ಸೇರಿವೆ. ಇವುಗಳಿಗೆ 2010-11ರಲ್ಲಿ ಚಾಲನೆ ನೀಡಲು ಉದ್ದೇಶಿಸಿದೆ. ಉಳಿದ 6 ಗ್ರಾಮಗಳ ಪೈಕಿ, ಒಂದು ಗ್ರಾಮದ ಕುಡಿಯುವ

ನೀರಿನ ಜಲಮೂಲದಲ್ಲಿ ಮಾತ್ರ TDS ಇದ್ದು, ಪರ್ಯಾಯ ಶುದ್ಧ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಮಾಡಲಾಗುವುದು, ಉಳಿದ ಗ್ರಾಮಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರಿನ ಪೂರೈಕೆಯಿದೆ. ಈ ಕಾರಣದಿಂದ, KUWSDB ಪ್ರಸ್ತಾವನೆಗೆ ಗ್ರಾಮ ಪಂ.ರಾಜ್ ಇಲಾಖೆಯ ಸಹಮತಿ ನೀಡಿರುವುದಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ಏನಾಗಿದೆ ಎಂದರೆ, ಅರಸೀಕೆರೆ ನಗರಕ್ಕೆ ನಾವು ಹೇಮಾವತಿಯಿಂದ ನೀರನ್ನು ತೆಗೆದುಕೊಂಡು ಹೋಗತಕ್ಕಂತಹ ಒಂದು ಯೋಜನೆ ಕಾರ್ಯಗತಕ್ಕೆ ಬರುವ ಹಂತದಲ್ಲಿದೆ. ಆಗ en-route villages ನಲ್ಲಿ ಆ ಊರುಗಳಿಗೆ ನೀರನ್ನು ಕೊಡದೆ ಹೋದರೆ ಬಹುಶಃ ಅವರು ಅಲ್ಲಿ ಟ್ಯಾಂಕ್ ಕಟ್ಟುವುದಕ್ಕೆ ಜಾಗವನ್ನು ಕೊಡುವುದಾಗಲಿ, ಅಲ್ಲಿ ಪೈಪ್ ಲೈನ್ ಹೋಗಬೇಕಾದರೆ ಅದನ್ನು ಒಡೆದುಹಾಕುವಂತಹದ್ದು, ಈ ಎಲ್ಲಾ ಕೆಲಸವನ್ನು ಅವರು ಮಾಡುತ್ತಾರೆ. ಅದಕ್ಕೋಸ್ಕರವಾಗಿ ಅವರಿಗೆ ನೀರನ್ನು ಕೊಟ್ಟರೆ ನಾವು ನೀರನ್ನು ಸರಾಗವಾಗಿ ತೆಗೆದುಕೊಂಡು ಹೋಗುವುದಕ್ಕೆ ಒಂದು ಉತ್ತಮವಾದಂತಹ ಕೆಲಸವಾಗುತ್ತದೆ. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರುವಂತಹ ಪದ್ಧತಿಯಾಗಿದೆ. ಇವರು ಹೇಳಿರುವಂತಹ ಉತ್ತರದಲ್ಲಿ ಗ್ರಾಮಪಂಚಾಯತಿಯಿಂದ ಈಗಾಗಲೇ ನಾವು ಕಾರ್ಯಗತ ಮಾಡುವ ಬಗ್ಗೆ ಯೋಜನೆಯನ್ನು ರೂಪಿಸಿದ್ದೇವೆನ್ನುವಂತಹ ಮಾತನ್ನು ಹೇಳಿದ್ದಾರೆ. ಈಗಾಗಲೇ 5 ಊರಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇದೆ. ಅಲ್ಲಿ ಎಂತಹ ನೀರು ಇದ್ದರೂ ಕೂಡ ಅದನ್ನು ಕುಡಿಯುತ್ತಿದ್ದಾರೆ. ಅಲ್ಲಿ ಆ ಊರುಗಳಲ್ಲಿ fluoride ನ ಅಂಶ ಜಾಸ್ತಿ ಇದ್ದು, ಇಡೀ ಅರಸೀಕೆರೆ ತಾಲ್ಲೂಕಿಗೆ ನೀರನ್ನು ಬದಲಾವಣೆ ಮಾಡದೆ ಹೋದರೆ ಬಹುಶಃ ಇನ್ನು ಹತ್ತಾರು ವರ್ಷಗಳಲ್ಲಿ ಬಹಳ ಸಂಕಷ್ಟಕ್ಕೆ ಅಲ್ಲಿಯ ಜನರು ಗುರಿಯಾಗಬೇಕಾಗುತ್ತದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಇವತ್ತು ಅತಿಹೆಚ್ಚಿನ fluoride ಅಂಶ ಇರುವಂತಹ ತಾಲ್ಲೂಕು ಅಂದರೆ ಅರಸೀಕೆರೆ. ಆದ್ದರಿಂದ ಈ En-route villages ಗೆ ನಿಮ್ಮ ಆರ್ಥಿಕ ಸಂಕಷ್ಟ ಅದರಲ್ಲಿ ಬರುವುದಿಲ್ಲ. ನೀವು ಸರ್ಕಾರದಿಂದ ಈಗ ಬರುತ್ತಿರುವಂತಹ ಲೈನ್‌ನಲ್ಲಿ ಅಲ್ಲಿಯೇ ಕೊಡುವುದು ಹೇಗೆ ಇದೆ, ಅದನ್ನು ಬಿಟ್ಟು ನೀವು ಪ್ರತ್ಯೇಕವಾಗಿ ಅಲ್ಲಿ ಯೋಜನೆಯನ್ನು ತಯಾರು ಮಾಡಿ ನಾವು ಎಲ್ಲರಿಗೂ ನೀರನ್ನು

ಕೊಡುತ್ತೇವೆಂದರೆ ಎಷ್ಟು ಕೋಟಿ ರೂಪಾಯಿಗಳಾಗುತ್ತದೆ. ಅದರ ಬದಲು en-route villages ಗಳು ಬಂದ ತಕ್ಷಣ ಅಲ್ಲಿ ಹೋಗಬೇಕಾದಾಗ ಅದರಲ್ಲಿ ಎರಡು plus point ಇದೆ. ಅರಸೀಕೆರೆ ಕುಡಿಯುವ ನೀರಿಗೆ ವ್ಯವಸ್ಥಿತವಾಗಿ ಇವತ್ತು ತಿಪಟೂರಿಗೆ ಇದರಿಂದ ಕೊಟ್ಟಾಗ ಆ ಪೈಪ್‌ಲೈನ್‌ನ್ನು ಜಜ್ಜಿ ನೀರನ್ನು ಬಿಟ್ಟುಕೊಳ್ಳತಕ್ಕಂತಹ ವ್ಯವಸ್ಥೆ ಇದೆ. ಅದಕ್ಕೋಸ್ಕರವಾಗಿ ದಯಮಾಡಿ ಆ en-route village ಗಳಿಗೆ ಕೊಟ್ಟರೆ ಲೈನ್ ವ್ಯವಸ್ಥೆಯು ಸುರಕ್ಷಿತವಾಗಿರುತ್ತದೆ, ಅದರ ಜೊತೆಗೆ ನಿಮ್ಮ cost ತಾವು ಏನು ಹೇಳಿದ್ದೀರಿ, ಆ cost ಸುಲಭವಾಗುತ್ತದೆ. ಈಗಾಗಲೇ ಎಲ್ಲಾ ನಗರಪ್ರದೇಶಗಳಿಗೆ ತೆಗೆದುಕೊಂಡು ಹೋಗತಕ್ಕಂತಹ ಸಂದರ್ಭದಲ್ಲಿ ಈಗ ಯಗಚಿಯಿಂದ ಜಾವಗಲ್ ಮಾರ್ಗವಾಗಿ ಅರಸೀಕೆರೆ ತಾಲ್ಲೂಕಿಗೆ flourideನ ನೀರುಗಳಿಗೆ ಕೊಡುತ್ತಿದ್ದಾರೆ. ಆ ಗ್ರಾಮಗಳಿಗೆ ಕೊಡುತ್ತಿರುವಂತಹ ಸಂದರ್ಭದಲ್ಲಿ En-route villages ಗಳಿಗೆ ಕೊಟ್ಟುಕೊಂಡು ಬಂದಿದ್ದೀರಿ. ಒಂದು ಕಡೆ ಒಂದು ಸ್ಕೀಮ್‌ನಲ್ಲಿ ಕೊಡುತ್ತೀರಿ. ಮತ್ತೊಂದು ಸ್ಕೀಮ್‌ನಲ್ಲಿ ಅದನ್ನು ನಿಲ್ಲಿಸುತ್ತೇವೆ. ಅದನ್ನು ನಾವೇ ಗ್ರಾಮ ಪಂಚಾಯಿತಿ ಕಡೆಯಿಂದ ಮಾಡುತ್ತೇವೆಂದು ಹೇಳುತ್ತೀರಿ.

ಅಧ್ಯಕ್ಷರು : ಮಾನ್ಯ ಶಿವಲಿಂಗೇಗೌಡರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಗ್ರಾಮಪಂಚಾಯತಿಯ ಪರಿಸ್ಥಿತಿಯನ್ನು ನಾವೆಲ್ಲರೂ ಅರ್ಥ ಮಾಡಿಕೊಂಡಿದ್ದೇವೆ. ಅದರ ಆರ್ಥಿಕ ಸಂಕಷ್ಟ ಎಷ್ಟು ಇದೆ, ಎನ್ನುವುದರ ಬಗ್ಗೆ ನಾವೆಲ್ಲರೂ ಯೋಚನೆ ಮಾಡಿ ಇದರೊಳಗಡೆಯೇ ಆಗಲಿ ಎಂದು ನಾವು ಏನು ಮಾಡಿರುತ್ತೇವೆ, ದಯಮಾಡಿ ಸಚಿವರು ದೊಡ್ಡ ಮನಸ್ಸು ಮಾಡಿ ಈ en-route villagesಗೆ ನೀರು ಕೊಡುವಂತಹ ವ್ಯವಸ್ಥೆಗೆ ಒಂದು 5 ಕೋಟಿ ರೂಪಾಯಿಗಳು ಅಷ್ಟೆ, ಹೆಚ್ಚು ಕಡಿಮೆ 25 ಊರುಗಳಿಗೆ ಆಗುತ್ತದೆ. ಇಲ್ಲಿ ಕಡಿಮೆ ಊರುಗಳನ್ನು ತೋರಿಸಿದ್ದಾರೆ. ಆದ್ದರಿಂದ ದಯಮಾಡಿ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಸನ್ಮಾನ್ಯ ಸಚಿವರು ಎಂದು ಹೇಳಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಎಂ. ಶಿವಲಿಂಗೇಗೌಡರು ಅರಸೀಕೆರೆಯ ಕೆಲವೊಂದು ಗ್ರಾಮಗಳ ಬಗ್ಗೆ ಹೇಳಿದ್ದಾರೆ. ಅದರಲ್ಲಿ ಇವತ್ತು ಈ en-route villages ಬಗ್ಗೆ ಅವರು

ಹೇಳಿದ್ದಾರೆ. ಈ ಅರಸೀಕೆರೆ ತಾಲ್ಲೂಕಿನ ಬಗ್ಗೆ ಹೇಳುವುದಾದರೆ ಇವತ್ತು 289 ಜನವಸತಿ ಗ್ರಾಮಗಳಿಗೆ 40 LPCD ಪ್ರಮಾಣದಲ್ಲಿ ನೀರು ಪೂರೈಕೆಯಾಗುತ್ತಿದೆ. ಇನ್ನು ಉಳಿದ 279 ಜನವಸತಿಗೆ ಸರಾಸರಿ 40 LPCD ಗಿಂತ ಕಡಿಮೆ ಪ್ರಮಾಣದಲ್ಲಿ ನೀರು ಪೂರೈಕೆಯಾಗುತ್ತಿದೆ. ಆಮೇಲೆ ಈ ಎರಡು ಯೋಜನೆಗಳು ಜಾರಿ ಇದೆ. ಒಂದು ಏನೆಂದರೆ ಅರಸೀಕೆರೆ ತಾಲ್ಲೂಕಿನ ಬಾಣಾವರ, ಮತ್ತು ಇತರೆ 348 ಗ್ರಾಮಗಳಿಗೆ ಯಗಚಿ ಜಲಾಶಯದಿಂದ ಜಲಮೂಲ ಆಧರಿಸಿ ಅಂದಾಜು 6,045 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ ಮಾಡುವಂತಹದ್ದು. ಇನ್ನೊಂದು ಅರಸೀಕೆರೆ ತಾಲ್ಲೂಕಿನ ಗಂಡಸಿ ಮತ್ತು ಇತರೆ 127 ಗ್ರಾಮಗಳಿಗೆ ಹೇಮಾವತಿಯಿಂದ ಜಲಮೂಲ ಆಧರಿಸಿ ಅಂದಾಜು 2,040 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕುಡಿಯುವ ನೀರು ಸರಬರಾಜು ಮಾಡುವಂತಹ ಯೋಜನೆಗೆ 2008–09ರ ಸಾಲಿನಲ್ಲಿ ಅನುಮೋದನೆಯನ್ನು ನೀಡಲಾಗಿದೆ. ಈ ಯೋಜನೆಗಳನ್ನು 2010–11ರಲ್ಲಿ ಆದ್ಯತೆಯ ಮೇರೆ ಕೈಗೆತ್ತಿಕೊಂಡು ಅನುಷ್ಠಾನ ಮಾಡುವುದಕ್ಕೆ ನಾವು decision ತೆಗೆದುಕೊಂಡಿದ್ದೇವೆ. ಹೀಗಾಗಿ ಇಲ್ಲಿ ಹೇಳುವಂತಹದ್ದು ಮಾನ್ಯ ಶಾಸಕರು ತಾವು ಏನು ಪ್ರಸ್ತಾಪ ಮಾಡಿದ್ದೀರಿ, 17 ಮಾರ್ಗ ಮಧ್ಯದ ಗ್ರಾಮಗಳ ಪೈಕಿ 11 ಗ್ರಾಮಗಳನ್ನು ಆವರಿಸಲಾಗುತ್ತಿರುವುದರಿಂದ ಹಾಗೂ ಉಳಿದ ಗ್ರಾಮಗಳಲ್ಲಿ 17 ರಲ್ಲಿ 11ನ್ನು ನಾವು ಮಾಡುತ್ತಿದ್ದೇವೆ. ಈ en-route villages ಎಂದು ತಾವು ಏನು ಹೇಳುತ್ತಿದ್ದೀರಿ, ಅದು 17 ಗ್ರಾಮಗಳು ಇವೆ. ಅದರಲ್ಲಿ 11 ಕ್ಕೆ ನಾವು ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಈ ಒಂದು ಉಳಿದ ಗ್ರಾಮಗಳಲ್ಲಿ ಬರಗೂರು ಹ್ಯಾಂಡ್‌ಪೋಸ್ಟನ್ನು ಹೊರತುಪಡಿಸಿ ಸಾಕಷ್ಟು ಪ್ರಮಾಣದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆ. ಇಲ್ಲಿ ಏನು ಆರು ಗ್ರಾಮಗಳಿವೆ, ಬರಗೂರು ಹ್ಯಾಂಡ್‌ಪೋಸ್ಟನ್ನು ಹೊರತುಪಡಿಸಿ ಉಳಿದ ಗ್ರಾಮಗಳಿಗೆ ಇವತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆ, ಆ ದೃಷ್ಟಿಯಿಂದ ಇವತ್ತು KUWSB ಅವರೇನು ಗಡಸು ನೀರು ಇದ್ದು ಅದಕ್ಕೆ ಪ್ರತ್ಯೇಕ ಪರಿಹಾರ ಇದೆಯೇ ನೋಡಬೇಕು. ಇನ್ನೊಂದು ಬರಗೂರು ಹೆಡ್ ಪೋಸ್ಟ್ ನಲ್ಲಿ TDS ಗಡಸು ನೀರು ಇದೆ. ಅದಕ್ಕೆ ಒಂದು ಪ್ರತ್ಯೇಕವಾದಂಥ ಕುಡಿಯುವ ನೀರಿನ ಯೋಜನೆಯನ್ನು ನಾವು ಮಾಡುತ್ತೇವೆ. ಅದಕ್ಕೇನು ತೊಂದರೆಯಿಲ್ಲ, ಆದರೆ ಉಳಿದ ಗ್ರಾಮಕ್ಕೆ ಈ 40 LPCD ಪ್ರಮಾಣದಲ್ಲಿ ನೀರು ಕೊಡುವಂಥ ವ್ಯವಸ್ಥೆ ಇದೆ. ಆ ದೃಷ್ಟಿಯಿಂದ ಇದನ್ನು consider

ಮಾಡಿಲ್ಲ, ಮತ್ತೆ ನಮ್ಮ ಆದ್ಯತೆ ಏನಿದೆ ಎಂಬುದನ್ನು ಮಾನ್ಯ ಶಾಸಕರು ಅರ್ಥ ಮಾಡಿಕೊಳ್ಳಬೇಕು. ಇವತ್ತು ಇಡೀ ರಾಜ್ಯದಲ್ಲಿ 60–70 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನೇ ಮಾಡಲಿಕ್ಕಾಗಿಲ್ಲ. ಅಂಥ ಗ್ರಾಮಗಳಿಗೆ ಆದ್ಯತೆಯನ್ನು ಕೊಡುವಂಥಾದ್ದು ಮತ್ತು 40 LPCD ಯಿಂದ ಕಡಿಮ್ಮೆ ಇರುವುದೇನಿದೆಯೆಲ್ಲಾ, ಅದಕ್ಕೆ ಇವತ್ತು ಆದ್ಯತೆಯನ್ನು ಕೊಡುವುದು ಆಮೇಲೆ ಉಳಿದದ್ದಕ್ಕೆ ವಿಚಾರ ಮಾಡಬಹುದು. ಆ ದೃಷ್ಟಿಯಿಂದ ಇವತ್ತು 17 ಗ್ರಾಮಗಳಲ್ಲಿ 11 ಗ್ರಾಮಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ.

ಅಧ್ಯಕ್ಷರು : ಈಗ 12.30 ಗಂಟೆಯಾಗಿದೆ, ದಯವಿಟ್ಟು ಶಿವಲಿಂಗೇಗೌಡರು ಮಾತನಾಡಲಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಹೇಮಾವತಿ ನದಿನೀರಿನಿಂದ ಬೇರೆ, ಬೇರೆ ಜಿಲ್ಲೆಗಳಿಗೆಲ್ಲಾ ನೀರು ಬರುತ್ತಿದೆ ಆದರೆ ನಮ್ಮ ಜಿಲ್ಲೆಗೆ ನೀರು ತೆಗೆದುಕೊಂಡಿಲ್ಲ, ಅರಸೀಕೆರೆಗೂ ಇಲ್ಲ, ಬೇಲೂರಿನಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇದೆ, ಆದರೆ ಚಿಕ್ಕಮಗಳೂರಿಗೆ, ಅರಸೀಕೆರೆ ತಾಲ್ಲೂಕಿಗೆ ನೀರನ್ನು ಕೊಡುತ್ತೇವೆ ಆದರೆ ಬೇಲೂರು ತಾಲ್ಲೂಕಿನವರೆಗೆ ನೀರು ಕೊಡುತ್ತಿಲ್ಲ. ಈ ಪರಿಸ್ಥಿತಿ ಇದೆ, ನಾನು ಬೇಲೂರು ಶಾಸಕನಾಗಿರುವುದರಿಂದ ಹೇಳುತ್ತಿದ್ದೇನೆ. ಈಗಾಗಲೇ ಬೇಲೂರಿನಿಂದ ನಮ್ಮ ಅರಸೀಕೆರೆಗೆ ನೀರು ಬರುತ್ತಿದೆ ಎಂದು ನಮ್ಮ ಶಿವಲಿಂಗೇಗೌಡರು ಹೇಳಿದರು, ಸಂತೋಷ, ಚಿಕ್ಕಮಗಳೂರಿಗೆ ನೀರು ಹೋಗುತ್ತಿದೆ. ಆದರೆ ಬೇಲೂರಿನಲ್ಲಿ ಕುಡಿಯುವ ನೀರಿಲ್ಲ. ಗೆಂಡೆಹಳ್ಳಿ, ಅರೆಹಳ್ಳಿ ಮತ್ತು flouride ಅಂಶ ಇರುವಂಥ ಹಳೇಬೀಡು ಹೋಬಳಿಗಳಿಗೆ ನೀರನ್ನು ಒದಗಿಸಿಲ್ಲ. ನಾನು ಹಿಂದೆ ಮಂತ್ರಿಗಳನ್ನು ಕೇಳಿದ್ದೆ. ಅದಕ್ಕೆ ಅವರು cost ಹೆಚ್ಚಾಗುತ್ತದೆಂದು ಹೇಳಿದ್ದರು. ಇದನ್ನು ದಯವಿಟ್ಟು ಬಗೆಹರಿಸಿ ಕೊಡಬೇಕು ಎಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ರುದ್ರೇಶ್‌ಗೌಡರು ಕೇಳಿರುವ ವಿಷಯವನ್ನು ಪ್ರತ್ಯೇಕವಾಗಿ ಕೊಟ್ಟರೆ ಅದಕ್ಕೆ ಮಾಹಿತಿ ಕೊಟ್ಟು ನಾನು ಉತ್ತರ ಹೇಳುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಬರಗೂರು hand post ನನ್ನ ತಾಲ್ಲೂಕಿಗೆ ಸೇರುವುದಿಲ್ಲ. ಚನ್ನರಾಯಪಟ್ಟಣ ತಾಲ್ಲೂಕು ರೇವಣ್ಣನವರ ಕ್ಷೇತ್ರಕ್ಕೆ ಬರುತ್ತದೆ. ನೀವು ಹೇಳುತ್ತಿರುವ ಆ ಆರು ಹಳ್ಳಿಗಳು ನನ್ನ ಕ್ಷೇತ್ರಕ್ಕೆ ಬರುವುದಿಲ್ಲ. ಅದು ರೇವಣ್ಣನವರ ಕ್ಷೇತ್ರಕ್ಕೆ ಆರು ಊರುಗಳು ಬರತ್ತವೆ. ನನ್ನ ಕ್ಷೇತ್ರಕ್ಕೆ ಬರುವಂಥ ಗಂಡಸಿ hand post ನಲ್ಲಿ ನೀರು ಲಿಫ್ಟ್ ಮಾಡುವ

ಅಂದಾಜು ಇದೆ. ಈ ನೀರನ್ನು ಲಿಫ್ಟ್ ಮಾಡಿ ಆದ ಮೇಲೆ ಹೋಗತಕ್ಕಂಥ en-route ನನಗೆ ಗೊತ್ತು, ರಾಜೀವ್‌ಗಾಂಧಿ ಸಬ್‌ಮಿಷನ್‌ನಲ್ಲಿ ಈಗಾಗಲೇ ಒಂದು ಯೋಜನೆ ಒಂದು ಘಟಕದಲ್ಲಿ ತಯಾರಿ ಆಗಿದೆ. 2010-11ಕ್ಕೆ ಕೊಡುತ್ತೇವೆ ಎಂದು High Level Power Committee ಯಲ್ಲಿ ಅನುಮೋದನೆ ಆಗಿದೆಯೆಂದು ತಿಳಿದಿದೆ. ಅದಾದ ಮೇಲೆ en-route villages ಏಕೆ cover ಮಾಡಿ ಎಂದು ಹೇಳುತ್ತೇನೆ ಅಂದರೆ ಅಲ್ಲಿ ನೀರು ಸರಾಗವಾಗಿ ತಲುಪಲಿ ಎಂದು ಅಷ್ಟೇ. ಅದರಲ್ಲಿ cost ಕಡಿಮೆ ಮಾಡಿಕೊಳ್ಳಿ. ಈಗ ನೀರು ಸರಾಗವಾಗಿ ಕಡಿಮೆ ಖರ್ಚಿನಲ್ಲಿ ಹೋಗುತ್ತದೆ. ಅದಕ್ಕೋಸ್ಕರ ಮಾಡಿ. ಆಗ en-route ಅದೇ ಊರಿನಲ್ಲಿ pipelines ಹಾದು ಹೋಗುತ್ತದೆ. ಆ pipe lines ಹಾದು ಹೋಗುವಾಗ ನೀರು ಕೂಡ ಬಹಳ ಸುಲಭವಾಗಿ ಹಾದು ಹೋಗುತ್ತದೆ. ಅದಕ್ಕೋಸ್ಕರ ನಾವು ಕೇಳಿದವೆ ಹೊರತು ಒಂದು ವೇಳೆ 2010-11 ರಲ್ಲಿ ತಾವು ಭರವಸೆ ಕೊಟ್ಟಂತೆ ರಾಜೀವ್ ಗಾಂಧಿ ಸಬ್‌ಮಿಷನ್ ಯೋಜನೆಯಲ್ಲಿ ಹೇಮಾವತಿ ಮೂಲದಿಂದ ನೀರು ತೆಗೆದು ಕೊಳ್ಳುತ್ತೇವೆಂದು, ನಮ್ಮ ಗಂಡಸಿ ಭಾಗದ ಎಲ್ಲಾ ಗ್ರಾಮಗಳಿಗೂ flouride ಇರತಕ್ಕಂಥದ್ದಕ್ಕೆ ನೀರನ್ನು ಕೊಡುತ್ತೇವೆಂಬ ಭರವಸೆಯನ್ನು ನೀವು ಕೊಡುವುದಾದರೆ en-route villeges ನಲ್ಲಿರುವುದನ್ನು ಕೈಬಿಟ್ಟೇ ಬೇಕಾದರೂ ಮಾಡಿ ನಮ್ಮದೇನೂ ಅಭ್ಯಂತರವಿಲ್ಲ ಎನ್ನುವಂಥ ಮಾತನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ 2010-11 ಕ್ಕೆ ದಯಮಾಡಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಪ್ಲೀಸ್, ಈಗಾಗಲೇ 12.30 ಆಯಿತು. No.

ಶ್ರೀ ಟಿ.ಬಿ.ಜಯಚಂದ್ರ : ಈಗ ನೀವು Rajiv Gandhi Submission ಯೋಜನೆಯಲ್ಲಿ ಕೈಗೊಳ್ಳುತ್ತೇವೆಂದು ಹೇಳಿದ್ದೀರಿ. ಈ ಯೋಜನೆಯಲ್ಲಿ ಸುಮಾರು 800-1000 ಕೋಟಿ ರೂಪಾಯಿಗಳಷ್ಟು projects State Level Committee ಯಲ್ಲಿ clear ಆಗಿದೆ. ಆದರೆ ಅದಕ್ಕೆ ದುಡ್ಡಿರಲಿಲ್ಲ. ಅದಕ್ಕೇನು ಮಾಡಿದರು, World Bank ಅನ್ನು ಲಿಂಕ್ ಮಾಡಿ ದುಡ್ಡು ಕೊಡುವುದು ಎಂದಾಗಿತ್ತು. ಅದೇನಾದರೂ ಪರಿಶೀಲನೆಯಲ್ಲಿದೆಯೇ, clear ಆಗಿದೆಯೇ ಏನು ಎಂದು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಇವತ್ತೇನು ನಮ್ಮ ರಾಜ್ಯದಿಂದ Rajiv Gandhi Submission programme approval ಆಗಿವೆ, ಅದಕ್ಕೆ ಕೇಂದ್ರ ಸರ್ಕಾರ approval ಕೊಟ್ಟಿದೆ. ಏನೂ ತೊಂದರೆಯಿಲ್ಲ. ಆ ಯೋಜನೆಗಳನ್ನು ಜಾರಿ ಮಾಡಲಿಕ್ಕೆ ಯಾವುದೇ ತೊಂದರೆಯಿಲ್ಲ. ಹಣದ ಕೊರತೆ ಸಹ ಇಲ್ಲ. ಈಗ ಮಾನ್ಯ ಶಿವಲಿಂಗೇಗೌಡರು ಏನು ಹೇಳಿದರು, ಈ 2010-11 ರಲ್ಲಿ Rajiv Gandhi Submission programme ನಲ್ಲಿ ತೆಗೆದುಕೊಳ್ಳುತ್ತೇವೆ, ಈಗಾಗಲೇ ನಾವು ಹೇಳಿರುವ ಈ ಎರಡು ಯೋಜನೆಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಆಗ ಇವೆಲ್ಲಾ include ಆಗುತ್ತವೆ ಮತ್ತು Fluoride ಇರುವಂತಹ ನೀರಿನ ಸಮಸ್ಯೆ ಎಲ್ಲಿ ಇವೆ, ಅವು ಖಂಡಿತವಾಗಿ ಇದರಲ್ಲಿ include ಆಗುತ್ತದೆ. ಅದರಲ್ಲಿ ಸಂಶಯವಿಲ್ಲ.

ಅಧ್ಯಕ್ಷರು : ಶ್ರೀ ಬಸವರಾಜ ಪಾಟೀಲ್ ಅಟ್ಟೂರರವರು.

ಮಾನ್ಯ ಸದಸ್ಯರೊಬ್ಬರು : ಅಧ್ಯಕ್ಷರೇ, ದಯಮಾಡಿ ಅವಕಾಶ ಕೊಡಬೇಕು, ನೀರಿನ ಸಮಸ್ಯೆ ಇದೆ.

ಅಧ್ಯಕ್ಷರು : ಬಜೆಟ್‌ನಲ್ಲಿ ಆ ವಿಷಯ ಚರ್ಚೆ ಮಾಡಿ, ಬಸವರಾಜ ಪಾಟೀಲ್ ಅಟ್ಟೂರ್‌ರವರು.

ಶ್ರೀ ವೈ.ಎನ್. ರುದ್ರೇಶ್‌ಗೌಡ : ನಾವು ಹಳ್ಳಿಗಳಿಗೆ ಹೋಗುವ ಹಾಗಿಲ್ಲ. ಜನ ನಮ್ಮನ್ನು ಹಿಡಿದುಕೊಳ್ಳುತ್ತಾರೆ, ದಯಮಾಡಿ ಬೇಗ task force ನಲ್ಲಿ ಹಣ ಬಿಡುಗಡೆ ಮಾಡಬೇಕು.

ಮಾನ್ಯ ಸದಸ್ಯರೊಬ್ಬರು : ಅಧ್ಯಕ್ಷರೇ, ಇದಕ್ಕೆ ದಯಮಾಡಿ ಅವಕಾಶ ಕೊಡಬೇಕು, ಇದು ಗಂಭೀರವಾದ ಸಮಸ್ಯೆಯಾಗಿದೆ.

ಅಧ್ಯಕ್ಷರು : ಆಯಿತು, ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್‌ರವರು.

ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯದ ಕೊರತೆ ಇರುವುದರ ಬಗ್ಗೆ.

45 (664) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳಿಗೆ ಶೌಚಾಲಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಪ್ರತೀ ಗ್ರಾಮದಲ್ಲೂ ಹೆಣ್ಣು ಮಕ್ಕಳಿಗೆ ಶೌಚಾಲಯವನ್ನು ನಿರ್ಮಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಇ) ಗ್ರಾಮಗಳಲ್ಲಿ ನೈರ್ಮಲ್ಯವನ್ನು ಕಾಪಾಡಲು ಯಾವ ಕ್ರಮಗಳನ್ನು ರೂಪಿಸಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು:

ಆ) ಗ್ರಾಮಗಳಲ್ಲಿನ ಹೆಣ್ಣು ಮಕ್ಕಳೂ ಸೇರಿದಂತೆ ಒಟ್ಟಾರೆ ಗ್ರಾಮೀಣ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬಯಲು ಮಲ ವಿಸರ್ಜನೆಯ ಪದ್ಧತಿಯನ್ನು ಮುಕ್ತಗೊಳಿಸಲು ರಾಜ್ಯದಾದ್ಯಂತ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯವನ್ನು ಕಾಪಾಡಲು ಈ ಕೆಳಕಂಡ ಕ್ರಮಗಳನ್ನು ರೂಪಿಸಲಾಗಿದೆ.

1) ಗ್ರಾಮೀಣ ಪ್ರದೇಶಗಳ ಪ್ರತೀ ಕುಟುಂಬವೂ ಶೌಚಾಲಯವನ್ನು ಹೊಂದುವಂತೆ ಪ್ರೇರೇಪಿಸುವುದು.
2) ಶಾಲೆ ಮತ್ತು ಅಂಗನವಾಡಿಗಳಲ್ಲೂ ನೈರ್ಮಲ್ಯ ಸೌಲಭ್ಯಗಳನ್ನೂ ಒದಗಿಸುವ ಮೂಲಕ ಮಕ್ಕಳಲ್ಲಿ ಸ್ವಚ್ಛತೆಯ ಅಭ್ಯಾಸಗಳನ್ನು ರೂಢಿಸುವುದು.
3) ಸ್ಥಳದ ಸಮಸ್ಯೆ ಹಾಗೂ ಜನದಟ್ಟಣೆ ಇರುವ ಪ್ರದೇಶಗಳಲ್ಲಿ ಮಾತ್ರ ಸಮುದಾಯ ಶೌಚಾಲಯಗಳನ್ನು ಒದಗಿಸಲಾಗುತ್ತಿದೆ.
4) ಗ್ರಾಮಗಳು ಘನ ಮತ್ತು ದ್ರವ ತ್ಯಾಜ್ಯಗಳ ಸೂಕ್ತ ನಿರ್ವಹಣೆಗೆ ಕ್ರಮವಹಿಸಲಾಗುತ್ತಿದೆ.

TOTAL SANITATION CAMPAIGN(TSC)

PHYSICAL PROGRESS REPORT AS ON 6-3-2010

Sl. No.	State/District	Project Objectives			Project Performance			Percentage of IHHL
		IHHLs BPL	IHHLs APL	IHHLs TOTAL	IHHLs BPL	IHHLs APL	IHHLs TOTAL	
1	BAGALKOT	62160	109155	171315	33957	29554	63511	37.07
2	BANGALORE RURAL	104920	98786	203706	65413	34325	99738	48.96
3	BANGALORE URBAN	71892	28299	100191	28226	24488	52714	52.61
4	BELGAUM	97810	491202	589012	62708	195499	258207	43.84
5	BELLARY	100252	85854	186106	39846	27474	67320	36.17
6	BIDAR	58384	109155	167539	13299	42033	55332	33.03
7	BIJAPUR	127172	108608	235780	10540	19973	30513	12.94
8	CHAMARAJANAGAR	110188	28797	138985	26976	5681	32657	23.50
9	CHICKMAGALUR	35757	80628	116385	32411	62047	94458	81.16
10	CHITRADURGA	75400	130585	205985	28602	41097	69699	33.84
11	DAVANGERE	90808	162476	253284	41977	67396	109373	43.18
12	DHARWAD	43596	76050	119646	27836	15783	43619	36.46
13	GADAG	46821	39520	86341	17320	11973	29293	33.93
14	GULBARGA	269726	172264	441990	38739	10418	49157	11.12
15	HASSAN	59939	216283	276222	53056	130432	183488	66.43
16	HAVERI	98436	57875	156311	33218	23994	57212	36.60
17	KODAGU	33996	18095	52091	20594	13700	34294	65.83
18	KOLAR	107858	174684	282542	41542	28176	69718	24.68
19	KOPPAL	60869	101815	162684	31590	33300	64890	39.89
20	MANDYA	110182	148152	258334	39570	51210	90780	35.14
21	MANGALORE(DAKSHINA KANNADA)	59478	35532	95010	59478	35532	95010	100.00
22	MYSORE	86804	186116	272920	75700	96320	172020	63.03
23	RAICHUR	104887	120627	225514	21353	19221	40574	17.99
24	SHIMOGA	99428	40151	139579	99486	45802	145288	104.09
25	TUMKUR	242872	137654	380526	50410	35629	86039	22.61
26	UDUPI	43890	34286	78176	43320	32969	76289	97.59
27	UTTAR KANNADA	104398	57489	161887	103412	60412	163824	101.20
	STATE TOTAL	2507923	3050138	5558061	1140579	1194438	2335017	42.01

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಗ್ರಾಮೀಣ ಭಾಗದಲ್ಲಿರುವಂಥ ಹೆಣ್ಣುಮಕ್ಕಳಿಗೆ ವಿಶೇಷವಾದಂಥ ರೀತಿಯಲ್ಲಿ ಶೌಚಾಲಯದ ಕೊರತೆ ಇರುವುದು ಎಲ್ಲಾ ಕಡೆ ಕೂಡ ಕಂಡುಬಂದಿದೆ. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸಹ ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ರಾಜ್ಯದಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದ್ದೇವೆ ಮತ್ತು ಪ್ರತಿ ಕುಟುಂಬಕ್ಕೂ ಶೌಚಾಲಯವನ್ನು ಒದಗಿಸುತ್ತಿದ್ದೇವೆಂದು ಹೇಳಿದ್ದಾರೆ. generally ಇರುವಂಥ ಪ್ರಶ್ನೆ ಇದು. Specific ಆಗಿ ಬಸವಣ್ಣನವರು ಹೇಳಿದಂತೆ, ಮಹಾತ್ಮ ಗಾಂಧೀಜಿಯವರು ಹೇಳಿದಂತೆ ಇವತ್ತು ನಾವು ಸ್ತ್ರೀಯರಿಗೆ 33% ಮೀಸಲಾತಿಯನ್ನು ಕೊಡುವಂಥ ಸಂದರ್ಭದಲ್ಲಿ ಎಲ್ಲಾ ಶಾಸಕರ ಮತ ಕ್ಷೇತ್ರಕ್ಕೂ ಶಾಸಕರು ಹೋದಾಗ ಪ್ರತಿ ಗ್ರಾಮದಲ್ಲಿಯೂ ಹೆಣ್ಣುಮಕ್ಕಳು ಶೌಚಾಲಯದ ತೊಂದರೆ ಇದೆ, ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯಗಳನ್ನು ಮಾಡಿ ಕೊಡಿ ಎಂದು ನಮಗೆ ಮನವಿ ಕೊಡುತ್ತಾರೆ. ರಾಜ್ಯಾದ್ಯಂತ ಎಲ್ಲಾ ಕಡೆ ಈ ಸಮಸ್ಯೆಯಿದೆ, ನಮ್ಮ ಮತಕ್ಷೇತ್ರಕ್ಕೆ ಹೋದಾಗ ಶೌಚಾಲಯದ ಕೊರತೆ ಇದೆ, ಹೆಣ್ಣುಮಕ್ಕಳಿಗೆ, ಮಹಿಳೆಯರಿಗೆ ತುಂಬಾ ಕಷ್ಟವಾಗುತ್ತಿದೆ. ಇದರ ಬಗ್ಗೆ ಸರ್ಕಾರ ಏಕೆ Specific ಆದ ಯೋಜನೆಗಳನ್ನು ಮಾಡಬಾರದು, ಸರ್ಕಾರ ಇವತ್ತು ಬೇರೆ ಬೇರೆ Scheme ಗಳಿಗೆ ಹಣವನ್ನು ಖರ್ಚು ಮಾಡುತ್ತಿದ್ದೀರಿ, ಹೆಣ್ಣುಮಕ್ಕಳಿಗೆ ಪ್ರತ್ಯೇಕವಾಗಿ ಶೌಚಾಲಯಗಳನ್ನು ಮಾಡಲಿಕ್ಕೆ ಸರ್ಕಾರದ ಏನು specific ಆದ ಕಾರ್ಯಕ್ರಮಗಳು ಇವೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಹಿರಿಯ ಶಾಸಕರಾದ ಬಸವರಾಜ ಪಾಟೀಲ್ ಅಟ್ಟೂರ್‌ರವರು ಒಂದು ಉತ್ತಮವಾದ ಪ್ರಶ್ನೆಯನ್ನು ಇಲ್ಲಿ ಕೇಳಿದ್ದಾರೆ. ಈ ಶೌಚಾಲಯದ ಬಗ್ಗೆ ನಾವು ಇಡೀ ರಾಜ್ಯದಲ್ಲಿ ಜನರದು awareness ಅನ್ನು create ಮಾಡಬೇಕಾಗುತ್ತದೆ. ಬಹಳ ಮುಖ್ಯವಾಗಿ ನಾವು create ಮಾಡಬೇಕಾಗಿದೆ. ಈ ಒಂದು ಶೌಚಾಲಯವನ್ನು ಕಟ್ಟುವುದು, ನಿರ್ಮಲ ಗ್ರಾಮಗಳನ್ನು ನಿರ್ಮಾಣ ಮಾಡುವಂತಹದು ನಾವೆಲ್ಲಾ ಕೂಡಿ ಮಾಡಬೇಕಾಗಿದೆ. ಸರ್ಕಾರ, ಸಮಾಜ ಮತ್ತು ಜನ ಪ್ರತಿನಿಧಿಗಳು ಎಲ್ಲರೂ ಕೂಡಿಕೊಂಡು ಒಂದು ಆಂದೋಲನ ರೂಪದಲ್ಲಿ ಮಾಡಿದರೆ ಬಹುಶಃ ಇವತ್ತು ಬೇರೆ ರಾಜ್ಯಗಳು ಏನು ಸಾಧನೆ ಮಾಡಿವೆ, ಅವನ್ನು ನಾವು

ಮಾಡಬಹುದು. ನಮಗೆ ಒಂದು ಖೇದಕರ ಸಂಗತಿ ಎಂದರೆ ಇಡೀ ರಾಷ್ಟ್ರದಲ್ಲಿ ನಮ್ಮ ರಾಜ್ಯ ಶೌಚಾಲಯಗಳನ್ನು ನಿರ್ಮಾಣ ಮಾಡುವುದರಲ್ಲಿ 16ನೇ ಸ್ಥಾನದಲ್ಲಿದೆ. ಇದರ ಬಗ್ಗೆ ನಾವು ಹೆಚ್ಚು ಒತ್ತು ಕೊಡಬೇಕು ಮತ್ತು ನಮ್ಮ ರಾಜ್ಯ ಸರ್ಕಾರ ಕೂಡ ಇದರ ಬಗ್ಗೆ ಹೆಚ್ಚು ಒತ್ತು ಕೊಡುತ್ತದೆ. ಇದರ ಬಗ್ಗೆ ನಾವು ನಮ್ಮ ರಾಜ್ಯದಲ್ಲಿ ಒಂದು ಆಂದೋಲನಾ ರೂಪದಲ್ಲಿ ಕೈಗೊಂಡಿದ್ದೇವೆ. 2005 ಅಕ್ಟೋಬರ್ ರಂದು ಗಾಂಧಿ ಜಯಂತಿ ದಿನದಿಂದ ಈ ಆಂದೋಲನವನ್ನು ನಮ್ಮ ರಾಜ್ಯದಲ್ಲಿ ಪ್ರಾರಂಭ ಮಾಡಿದ್ದೇವೆ. ಅವತ್ತು ಆಂದೋಲನವನ್ನು ಪ್ರಾರಂಭ ಮಾಡಿದಾಗ ನಮ್ಮ ರಾಜ್ಯದಲ್ಲಿ ಕೇವಲ 37,000 ಶೌಚಾಲಯಗಳು ಇತ್ತು. ಇಲ್ಲಿಯವರೆಗೆ ನಾವು ಸಾಧನೆ ಮಾಡಿರುವುದು 23 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದೇವೆ. ಇನ್ನು ಎರಡು ವರ್ಷಗಳಲ್ಲಿ 55 ಲಕ್ಷ 58 ಸಾವಿರ ಶೌಚಾಲಯಗಳನ್ನು ನಿರ್ಮಾಣ ಮಾಡುವ ನಮ್ಮ ಗುರಿ ಇದೆ. ನಾನು ಹೇಳುವುದೇನೆಂದರೆ ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಈ ರೀತಿ ಪ್ರತಿಯೊಂದು ಮನೆಗೆ ಶೌಚಾಲಯವನ್ನು ನಿರ್ಮಾಣ ಮಾಡಲಿಕ್ಕೆ ಎಲ್ಲಾ ರೀತಿಯ ಪ್ರೋತ್ಸಾಹ ಕೊಡಲಿಕ್ಕೆ ನಾವು ತಯಾರಿದ್ದೇವೆ. ಕೇಂದ್ರ ಸರ್ಕಾರ 1500 ರೂಪಾಯಿಗಳು ಕೊಡುತ್ತದೆ, ನಮ್ಮದು ಅದಕ್ಕೆ matching grant ರೂ.700–800 ಇದ್ದುದನ್ನು 1500 ರೂಪಾಯಿಗಳನ್ನು ಕೊಡಲಿಕ್ಕೆ ನಾವು decision ತೆಗೆದುಕೊಂಡಿದ್ದೇವೆ. ಹೀಗಾಗಿ ಪ್ರತಿಯೊಂದು ಬಿ.ಪಿ.ಎಲ್. ಕುಟುಂಬಕ್ಕೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ 3000 ರೂಪಾಯಿಗಳನ್ನು ಶೌಚಾಲಯ ನಿರ್ಮಾಣ ಮಾಡಲಿಕ್ಕೆ ನಾವು ಇವತ್ತು ಕೊಡುತ್ತಿದ್ದೇವೆ. ಇದರ ಪ್ರಯೋಜನವನ್ನು ಇವತ್ತು ನಮ್ಮ ಸಮಾಜದ ಜನ ತೆಗೆದುಕೊಳ್ಳಬೇಕಾಗಿದೆ. ನಮ್ಮ ಶಾಸಕರಾಗಲಿ, ಜನಪ್ರತಿನಿಧಿಗಳಾಗಲಿ ಇದಕ್ಕೆ ಹೆಚ್ಚು ಒತ್ತು ಕೊಟ್ಟು ಜಾಗೃತಿ ಮೂಡುವಂಥ ಕೆಲಸವಾದರೆ ಬಹಳ ಒಳ್ಳೆಯ ಕೆಲಸವಾಗುತ್ತದೆ. ಇವತ್ತು ನಾನೇನು ಹೇಳುತ್ತಿದ್ದೇನೆಂದರೆ, ಇವತ್ತು ಪ್ರತಿಯೊಂದು ಮನೆಗೆ ಶೌಚಾಲಯವನ್ನು ಕಟ್ಟಿದರೆ ಹೆಣ್ಣುಮಕ್ಕಳಿಗೆ ಬೇರೆ, ಮತ್ತೊಬ್ಬರಿಗೆ ಬೇರೆ ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಪ್ರತಿಯೊಂದು ಮನೆಗೆ ಶೌಚಾಲಯ ಒದಗಿಸುವುದು. ಈಗ ಬೇರೆ ಕಡೆ ಜಾಗವೇ ಇಲ್ಲವೆಂಬ ಒಂದು ಪ್ರಶ್ನೆ ಬರುತ್ತದೆ ಆಗ ನಾಲ್ಕೈದು ಕುಟುಂಬದವರು ಕೂಡಿ ಒಂದೆರಡು ಶೌಚಾಲಯವನ್ನು ಕಟ್ಟಬಹುದು. ಹಾಗೆ ಮಾಡಿ ಒಂದೊಂದು ಪಾಯಿಖಾನೆಯ ಕೀಲಿಯನ್ನು

ತಾವಿಟ್ಟುಕೊಂಡರೆ ಆಗುತ್ತದೆ. ಆ ರೀತಿಯಲ್ಲಿ ಮಾಡಲಿಕ್ಕೂ ಸರ್ಕಾರ ತಯಾರಿದೆ. ನಾನು ಇತ್ತೀಚೆಗೆ ಮಂಗಳೂರು, ದಕ್ಷಿಣ ಕನ್ನಡ ಆಮೇಲೆ ಉಡುಪಿ, ಚಿಕ್ಕಮಗಳೂರು ಇಲ್ಲೆಲ್ಲಾ ಹೋಗಿದ್ದೆ, ಈ ವಿಷಯದಲ್ಲಿ number one ಇದೆ. ಬಹಳ ಒಳ್ಳೆಯ ರೀತಿಯಲ್ಲಿ ಪ್ರತಿಯೊಬ್ಬರ ಮನೆಗೂ ಒಂದೊಂದು ಶೌಚಾಲಯ ಇದೆ. ಹಾಗೆಯೇ Western Ghats ಕಾರವಾರ ಜಿಲ್ಲೆಗೆ ಹೋಗಿದ್ದೆ. Western Ghats ನಲ್ಲಿ ಇವತ್ತೇನು progress ಇದೆ, ಈ ನಿರ್ಮಲ ಗ್ರಾಮ ನಿರ್ಮಾಣ ಮಾಡುವಂಥದ್ದು, ಬೇರೆ ನಮ್ಮ ಉತ್ತರ ಕರ್ನಾಟಕ, ಬಾಂಬೆ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಇನ್ನೂ ಕೆಲವು ಈ ಭಾಗಗಳಲ್ಲಿ ಕೋಲಾರ ಈ ಕಡೆಗಳಲ್ಲಿ ಇಲ್ಲ. ಈ ಕಡೆಗಳಲ್ಲಿ ಸಾಕಷ್ಟು ಜಾಗೃತಿ ಮೂಡಬೇಕು. ಈಗ ನೀವೇನು ಪ್ರಶ್ನೆಯನ್ನು ಕೇಳಿದಿರಿ, ಇದಕ್ಕೆ ಸರ್ಕಾರ ಬದ್ಧವಾಗಿದೆ. ಇವತ್ತು ಮಹಿಳೆಯರಿಗಾಗಿಯೇ ಪ್ರತಿಯೊಂದು ಮನೆಗೂ ಶೌಚಾಲಯವನ್ನು ಕಟ್ಟಬೇಕೆಂದು ಸರ್ಕಾರ ಮುಂದೆ ಬಂದಿದೆ. ಎಲ್ಲಿಯವರೆಗೆ ಅಂದರೆ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿದ್ದರು. ಅಲ್ಲಿ ನಮ್ಮ ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರನ್ನು ಬೇಟಿ ಆಗಿ ಬಂದಿದ್ದಾರೆ, ನಾನೂ ಸಹ ಹಿಂದೆ ಅವರನ್ನು ಭೇಟಿ ಮಾಡಿದ್ದೇನೆ. NREGS ನಲ್ಲಿ ಈ pits ಅನ್ನು ನಿರ್ಮಾಣ ಮಾಡಲಿಕ್ಕೆ ಸಹಿತ guidelines ನಲ್ಲಿ ಸ್ವಲ್ಪ ಬದಲಾವಣೆ ಮಾಡಿ ಎಂದು ಕೇಳಿದ್ದೇವೆ. ನಾವು ಮೂರು ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಅದರೊಂದಿಗೆ ಆ ಪಿಟ್ಸ್‌ಗಳನ್ನು ನಿರ್ಮಾಣ ಮಾಡಲಿಕ್ಕೆ ಆ NREGS ನಲ್ಲಿ ಅವಕಾಶ ಕೊಡಿ ಎಂದು ನಾವು ಕೇಳಿದ್ದೇವೆ. ಅದರಿಂದ ಇನ್ನೂ ಹೆಚ್ಚು ಅನುಕೂಲವಾಗುತ್ತದೆ. ಹಾಗಾಗಿ ರಾಜ್ಯ ಸರ್ಕಾರದಿಂದ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದ್ದೇವೆ.

(12-40 P.M)

ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗ ಕೇಂದ್ರ ಸರ್ಕಾರವೂ ಕೊಡುತ್ತದೆ ಹಾಗೂ ರಾಜ್ಯ ಸರ್ಕಾರವೂ ಕೊಡುತ್ತದೆ. ನೈರ್ಮಲ್ಯ ಗ್ರಾಮ ಮಾಡಬೇಕೆಂಬುದು ಬಹಳ ಒಂದು ಒಳ್ಳೆಯ ಯೋಜನೆ. ಆದರೆ, ಇವತ್ತು ಅದು implemenation ಸರಿಯಾಗಿ ಆಗುತ್ತಿಲ್ಲ. ಇಂತಿಷ್ಟು ಬಡ ಬಿ.ಪಿ.ಎಲ್. ಕುಟುಂಬಗಳಿಗೆ ಶೌಚಾಲಯಗಳ ಸೌಲಭ್ಯವನ್ನು ಕಲ್ಪಿಸಬೇಕೆಂದು ಹೇಳಿ ಆದರೆ, ಗ್ರಾಮಪಂಚಾಯಿತಿ ಮಟ್ಟದಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡದೇ ಇವತ್ತು ಹಣವನ್ನು ನುಂಗಿ ಹಾಕಿದ್ದಾರೆ. ಇವತ್ತು ಅದು

implement ಆಗದೇ ನಾವು ಅವರಿಗೆ ಎಷ್ಟೇ education ಮಾಡಿದರೂ ಕೂಡ ಸಾಧ್ಯವಾಗುವುದಿಲ್ಲ. ಇವತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರುಗಳೂ ಕೂಡ ಇದರ ಬಗ್ಗೆ ಸ್ಪಷ್ಟವಾದ ನಿರ್ಧಾರ ಮಾಡಿ complete ಆಗಿ implementation ಆಗುವ ರೀತಿಯಲ್ಲಿ ಮಾಡಬೇಕಾಗುತ್ತದೆ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಹಿರೇಕೆರೂರು ತಾಲ್ಲೂಕಿನ ತಡಕನಹಳ್ಳಿ ಪಂಚಾಯಿತಿಯಲ್ಲಿ ಶೌಚಾಲಯಗಳಿಗೆ ಎಂದು ಬಂದಂತಹ ಹಣವನ್ನು ಸಂಪೂರ್ಣವಾಗಿ ನುಂಗಿ ಹಾಕಿದ್ದಾರೆ. ಅದರ ಬಗ್ಗೆ ತನಿಖೆಯಾಯಿತು. ತನಿಖೆಯಲ್ಲಿ ಮುಖ್ಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಪತ್ರ ಬರೆದರು. ಪತ್ರ ಬರೆದು ಶೌಚಾಲಯಗಳು ನಿರ್ಮಾಣವಾಗದೇ ಹಣವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದರು. ಆದರೆ, ಇದನ್ನು implementation ಮಾಡಲಿಲ್ಲವೆಂದರೆ, "ಹೊಳೆಯಲ್ಲಿ ಹುಣಸೇಹಣ್ಣನ್ನು ತೊಳೆದ ರೀತಿ"ಯಲ್ಲಿ ಆಗುತ್ತದೆ. ಸರ್ಕಾರ ಎಷ್ಟೇ ಹಣವನ್ನು ಕೊಟ್ಟರೂ ಸಹ ಯೋಜನೆ ಕಾರ್ಯಗತವಾಗಿವುದಿಲ್ಲ. ಆದ್ದರಿಂದ ಸಚಿವರ ಗಮನಕ್ಕೆ ತರುವುದೇನೆಂದರೆ, ನಿಮ್ಮಲ್ಲಿ ಮನವಿ ಮಾಡುವುದೇನೆಂದರೆ, ಸಂಪೂರ್ಣವಾಗಿ implementation ಆಗುವ ರೀತಿಯಲ್ಲಿ ತಾವು ದಯಮಾಡಿ ಮಾಡಬೇಕು. ಎಲ್ಲಿ ತಪ್ಪಿತಸ್ಥರು ಸಿಗುತ್ತಾರೆ, ಅವರ ಮೇಲೆ ಶಿಕ್ಷೆಯನ್ನು ವಿಧಿಸಿ ಸೂಕ್ತ ಕ್ರಮ ಜರುಗಿಸಿದರೆ ಇಂತಹ ಮುಂದೆ ಆಗುವಂತಹ ಅನಾಹುತಗಳು ತಪ್ಪುತ್ತವೆ ಎನ್ನುವುದನ್ನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಶೌಚಾಲಯಗಳನ್ನು ನಿರ್ಮಿಸುವುದರ ಬಗ್ಗೆ ಕಡ್ಡಾಯಗೊಳಿಸುವಂತಹ ವ್ಯವಸ್ಥೆ ಮಾಡಬೇಕು.

(ಗೊಂದಲ)

ಶ್ರೀ ಎ.ಮಂಜು : APL ನವರಿಗೂ ಈ ವ್ಯವಸ್ಥೆಯಾಗಬೇಕು. ಬರೀ BPL ನವರಿಗೆ ಮಾತ್ರ ಕೊಟ್ಟರೆ ಆಗುವುದಿಲ್ಲ. BPL ನವರು ಬಹಳ ಕಡಿಮೆ ಇರುತ್ತಾರೆ. General ಆಗಿ ಶೌಚಾಲಯಗಳು ಎಲ್ಲಾ ವರ್ಗಕ್ಕೂ ಸಿಗಬೇಕು. APL ನವರಿಗೂ ಸಹ ಸಿಗುವಂತಹ ವ್ಯವಸ್ಥೆಯಾಗಬೇಕು. ಬರೀ BPL ನವರಿಗೆ ಕೊಟ್ಟರೆ ಆಗುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು : ನಮ್ಮ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಡೈನಮಿಕ್ ಆಗಿ ಇದ್ದಾರೆ. ಹೆಚ್ಚಿನದಾಗಿ ಕೆಲಸ ಮಾಡುತ್ತಿದ್ದಾರೆ. ಪಂಚಾಯತ್ ರಾಜ್ ಬಗ್ಗೆ ಅವರಿಗೆ ಕಳಕಳಿ ಇದೆ. ಸರ್ಕಾರಕ್ಕೆ ನನ್ನ ಒಂದು suggestion ಏನೆಂದರೆ, ದೊಡ್ಡ ದೊಡ್ಡ ಗ್ರಾಮಗಳಿಗೆ ಸಾರ್ವಜನಿಕ ಶೌಚಾಲಯಗಳ ವ್ಯವಸ್ಥೆಯನ್ನು specific ಆಗಿ ಬಜೆಟ್‌ನಲ್ಲಿ provision ಮಾಡಬೇಕು. ಪ್ರತಿಯೊಂದು ಊರಿನಲ್ಲಿ ಪ್ರತಿಯೊಂದು ಮನೆಗೂ ಶೌಚಾಲಯಗಳನ್ನು ಏಕೆ ಮಾಡಬಾರದು? ಈಗ ಸರ್ಕಾರದವರು ಕೊಡುತ್ತಿದ್ದಾರೆ. ಈಗ ಮಾನ್ಯ ಪಾಟೀಲ್‌ರವರು ಈ ಬಗ್ಗೆ ಹೇಳಿದರು. ನಾನು ಪಾಟೀಲರವರ ಪ್ರಶ್ನೆಗೆ ಬೆಂಬಲ ವ್ಯಕ್ತಪಡಿಸುತ್ತಿದ್ದೇನೆ. ಶೌಚಾಲಯಗಳ ನಿರ್ಮಾಣಕ್ಕೆಂದು ದುಡ್ಡು ಕೊಡುತ್ತಾರೆ. ಆದರೆ, ಆ ದುಡ್ಡನ್ನು ತಿಂದುಬಿಡುತ್ತಾರೆ. ಕೆಲಸವನ್ನು ಮಾತ್ರ ಮಾಡುವುದಿಲ್ಲ. specific ಆಗಿ ಪ್ರತಿ ಮನೆಗೂ ಶೌಚಾಲಯ ಮಾಡುವುದರ ಬಗ್ಗೆ ಸರ್ಕಾರದವರು ಏಕೆ ಗಮನಹರಿಸುವುದಿಲ್ಲ? ಕಡ್ಡಾಯವಾಗಿ ಸರ್ಕಾರಿ ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡುತ್ತೀರಿ, Water Supply Scheme ಕೊಡುತ್ತೀರಿ. ಆದರೆ, specific ಆಗಿ ಹೆಣ್ಣು ಮಕ್ಕಳಿಗೋಸ್ಕರ ಶೌಚಾಲಯಗಳ ಸೌಲಭ್ಯವನ್ನು ಪ್ರತಿ ಗ್ರಾಮದಲ್ಲೂ ಕೊಡಬೇಕಾಗುತ್ತದೆ. ಇದಕ್ಕೆ Specific ಆಗಿ ನೀವು ಏನಾದರೂ ಹಣದ ವ್ಯವಸ್ಥೆ ಮಾಡುತ್ತೀರಾ ಅಥವಾ ಹೇಗೆ? ಇದಕ್ಕೆ ಏನಾದರೂ ಒಂದು ಪ್ಲಾನ್ ಮಾಡಿದರೆ ಸರ್ಕಾರ ಇರುವವರೆಗೂ ಹೆಸರು ಇರುತ್ತದೆ. ನಾನು general ಆಗಿ ಹೇಳುತ್ತಿದ್ದೇನೆ. General Scheme ಪ್ರಕಾರ ಮಹಿಳೆಯರಿಗೆ ಯಾವುದೇ ಸೌಲಭ್ಯ ಸಿಗುವುದಿಲ್ಲ. ನನ್ನ ಮೂಲವಾದ ಪ್ರಶ್ನೆ ಏನೆಂದರೆ, ದೊಡ್ಡ ಗ್ರಾಮಗಳಲ್ಲಿರತಕ್ಕಂತಹ ಹೆಣ್ಣು ಮಕ್ಕಳಿಗೆ ಬಹಳ ಕಷ್ಟವಾಗಿದೆ. ಅವರು ನಮಗೆ ಪದೇ ಪದೇ ಅರ್ಜಿ ಕೊಡುತ್ತಿದ್ದಾರೆ. ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡುವುದರ ಬಗ್ಗೆ ಏನಾದರೂ ಬಜೆಟ್ ಪ್ರಾವಿಷನ್ ಮಾಡುತ್ತೀರೋ ಅಥವಾ ಹೇಗೆ? ಎರಡನೆಯದಾಗಿ ಎಲ್ಲಾ ಊರುಗಳ ಎಲ್ಲಾ ಮನೆಗಳಲ್ಲಿಯೂ ಕೂಡ ಶೌಚಾಲಯದ ವ್ಯವಸ್ಥೆಯಾಗಬೇಕು. ಪ್ರತಿ ಗ್ರಾಮದಲ್ಲೂ ಕೂಡ ಬಹಳ ಶೋಚನೀಯವಾದ ಪರಿಸ್ಥಿತಿ ಇದೆ. ಪ್ರತಿ ಗ್ರಾಮದ ಪ್ರತಿ ಮನೆಗಳಲ್ಲಿಯೂ ಶೌಚಾಲಯದ ವ್ಯವಸ್ಥೆಗೆ ಏನಾದರೂ Special ಆಗಿ Specific ಆಗಿ ಹಣದ ವ್ಯವಸ್ಥೆ ಮಾಡಿದರೆ ಜನರು ಅದರ

ಉಪಯೋಗ ಪಡೆಯುತ್ತಾರೆ. ಇದರ ಬಗ್ಗೆ ಸ್ಪಷ್ಟವಾದಂತಹ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀ ಪಿ.ಎಂ.ಅಶೋಕ್ ಪಟ್ಟಣ : ಮಾನ್ಯ ಅಧ್ಯಕ್ಷರೆ, ನಮ್ಮ ರಾಮದುರ್ಗ ತಾಲ್ಲೂಕಿನ ಟೌನ್‌ನಲ್ಲಿ ಒಂದೂವರೆ ವರ್ಷವಾದರೂ ಸಹ ಮುನಿಸಿಪಾಲಿಟಿಯವರು ಶೌಚಾಲಯಗಳನ್ನು hand over ಮಾಡದೇ ಹಾಗೆಯೇ ಮುಚ್ಚಿಹೋಗುತ್ತಿವೆ. ಹಾಳಾಗಿ ಹೋಗುತ್ತಿವೆ. ಆದ್ದರಿಂದ, ದಯವಿಟ್ಟು ನಿರ್ಮಿತಿ ಕೇಂದ್ರಗಳಿಗೆ ಅವುಗಳನ್ನು hand over ಮಾಡುವುದಕ್ಕೆ ಮುನಿಸಿಪಾಲಿಟಿಯವರಿಗೆ ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರುಗಳು ತಮ್ಮ ವಿಚಾರಗಳನ್ನು ಹಾಗೂ ಭಾವನೆಗಳನ್ನು ವ್ಯಕ್ತಪಡಿಸಿದರು. ಮಾನ್ಯ ಬಿ.ಸಿ.ಪಾಟೀಲ್‌ರವರು ಅವ್ಯವಹಾರ ನಡೆಯುತ್ತಿದೆ ಎನ್ನುವುದರ ಬಗ್ಗೆ ಹೇಳಿದರು. ಇದಕ್ಕೆ ನಾವು ಕಡಿವಾಣ ಹಾಕಲೇಬೇಕಾಗುತ್ತದೆ. ಇದು ಎಲ್ಲರ ಕರ್ತವ್ಯವೂ ಕೂಡ ಆಗಿದೆ. ಸರ್ಕಾರದ ಅಧಿಕಾರಿಗಳು ಎಷ್ಟರಮಟ್ಟಿಗೆ ನಿಯಂತ್ರಣ ಇಡಬೇಕು, ಎಲ್ಲಿ action ತೆಗೆದುಕೊಳ್ಳಬೇಕು ಎಂದು ನೋಡಿಕೊಂಡು ನಾವು ಮಾಡುತ್ತೇವೆ. General ಆಗಿ awareness ಕೂಡ ಬರಬೇಕಾಗುತ್ತದೆ. ಎಲ್ಲಾ ಯೋಜನೆಗಳಲ್ಲೂ ಕೂಡ ಹಣ ಹೊಡೆಯುವುದು ಎಂಬ ಪದ್ಧತಿ ಬಂದರೆ ಬಹುಶಃ ಯೋಜನೆಯ ಸಂಪೂರ್ಣ ಉಪಯೋಗ ಆಗುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಎಲ್ಲಿ ನಮ್ಮ ಗಮನಕ್ಕೆ ಇಂತಹ ಪ್ರಕರಣಗಳು ಬರುತ್ತವೆ, ಅಂತಹವರ ಮೇಲೆ action ತೆಗೆದುಕೊಳ್ಳುತ್ತೇವೆ. ತನಿಖೆ ಮಾಡಿಸಿ ಅವರ ಮೇಲೆ ಕ್ರಮ ತೆಗೆದಕೊಳ್ಳುವ ವ್ಯವಸ್ಥೆ ಮಾಡುತ್ತೇನೆ. ಆದರೆ, ಇಂತಹ ಯೋಜನೆಗಳ ದುರುಪಯೋಗ ಮಾಡಿಕೊಳ್ಳಬಾರದು ಎಂದು ನಾನು ನನ್ನ ಕಳಕಳಿಯನ್ನು ವ್ಯಕ್ತಿಪಡಿಸುತ್ತೇನೆ. ಮಾನ್ಯ ಬಸವರಾಜ್ ಪಾಟೀಲ ಅಟ್ಟೂರ್‌ರವರು ಸಹ ಹೇಳಿದರು. ಸಾರ್ವಜನಿಕವಾಗಿ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕು ಎನ್ನುವ ವಿಷಯವನ್ನು ಹೇಳಿದರು. ಇದನ್ನು ಬಹಳ ಕಡೆ ಹಳ್ಳಿಗಳಲ್ಲಿ ಪ್ರಯೋಗ ಮಾಡಿ ನೋಡಲಾಗಿದೆ. ಸಾರ್ವಜನಿಕವಾಗಿ ಶೌಚಾಲಯಗಳನ್ನು ಕಟ್ಟಿದರೆ ಅವುಗಳನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಆ ಶೌಚಾಲಯಗಳನ್ನು ನೀರು ಹಾಕಿ ನಿರ್ವಹಣೆ ಮಾಡುವವರು ಯಾರು? ಹೀಗಾಗಿ ಆ

ಶೌಚಾಲಯಗಳು almost ಎಲ್ಲಾ ಕಡೆಗಳಲ್ಲೂ fail ಆಗಿವೆ. ನಾವು ಅದರ ಬಗ್ಗೆ ಆಲೋಚನೆ ಮಾಡದೇ, ಪ್ರತಿಯೊಂದು ಮನೆಗೂ ಸಹ ಶೌಚಾಲಯ ಗಳನ್ನು ನಿರ್ಮಾಣ ಮಾಡುವಂತಹ ಆಲೋಚನೆಯನ್ನು ನಾವು ಮಾಡಬೇಕು. ಈ ರೀತಿ ಮಾಡಿದರೆ ಈ ಯೋಜನೆಯು success ಆಗುತ್ತದೆ. ಇವತ್ತು ಇದಕ್ಕೆ ಬಜೆಟ್‌ನಲ್ಲಿ ಹಣ ಕೊಟ್ಟು ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿದರೆ ಅದರಿಂದ ಅಷ್ಟೊಂದು ಪ್ರಯೋಜನವಾಗಿಲ್ಲ ಎಂದು ಇಲ್ಲಿಯವರೆಗೂ ಬಂದ ವಿಚಾರಗಳಿಂದ ಗೊತ್ತಾಗಿದೆ. ಮಾನ್ಯ ಮಂಜುರವರು ಹೇಳಿದ ಹೇಗೆ, ಈಗ BPL ನವರಿಗೆ ಶೌಚಾಲಯಗಳ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. APL ನವರಿಗೂ ಕೊಡಬೇಕೆಂದು ಇದೆ. ಮುಂದೆ ಆಲೋಚನೆ ಮಾಡೋಣ. BPL ನವರಿಗೆ ಮೊದಲು ಈ ವ್ಯವಸ್ಥೆಯಾಗಲಿ. ಒಂದೊಂದು ಗ್ರಾಮದಲ್ಲಿ 200–300 BPL ಮನೆಗಳಿವೆ. ಮೊನ್ನೆ ಒಂದು ಕಡೆ ಗ್ರಾಮಕ್ಕೆ ಭೇಟಿ ನೀಡಿದ್ದೆ. ಅಲ್ಲಿ 280 BPL ಮನೆಗಳಿದ್ದರೆ ಬರೀ 21 ಮನೆಗಳು ಮಾತ್ರ ಶೌಚಾಲಯಗಳನ್ನು ಕಟ್ಟಿಕೊಂಡಿದ್ದಾರೆ. ಇನ್ನೂ ಉಳಿದವರಿಗೆ ಮೊದಲು ಶೌಚಾಲಯ ನಿರ್ಮಾಣದ ವ್ಯವಸ್ಥೆಯಾಗಬೇಕು. ಆಮೇಲೆ APL ನವರಿಗೆ ಶೌಚಾಲಯ ನಿರ್ಮಾಣದ ವ್ಯವಸ್ಥೆ ಮಾಡೋಣ. ಅದಕ್ಕೂ APL ನವರಿಗೆ ಒಂದು ಯೋಜನೆ ಮಾಡೋಣ. ಇಷ್ಟೆಲ್ಲಾ ಆದಮೇಲೆ APL ನವರು ತಾವೇ ಕಟ್ಟಿಕೊಳ್ಳುತ್ತಾರೆ. ಎಷ್ಟೋ ರಾಜ್ಯಗಳಲ್ಲಿ ಸರ್ಕಾರದಿಂದ ಬಂದಂತಹ ಹಣದಿಂದ ಬೇಡ ನಮ್ಮ ಮನೆಗೆ ನಾವೇ ಶೌಚಾಲಯಗಳನ್ನು ಕಟ್ಟಿಕೊಳ್ಳುತ್ತೇವೆ ಎಂದು ಕಟ್ಟಿಕೊಂಡಿದ್ದಾರೆ. ಅದಕ್ಕಾಗಿ ಮೊದಲು BPL ಮನೆಗಳಿಗೆ ಈ ಯೋಜನೆಯನ್ನು ಪೂರ್ಣಗೊಳಿಸೋಣ. ಆಮೇಲೆ ಅದನ್ನೂ ಕೂಡ ವಿಚಾರ ಮಾಡೋಣ ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಗ್ರಾಮ ಪಂಚಾಯಿತಿ ಚುನಾವಣೆ ಬಂದಿದೆ. ಗ್ರಾಮ ಪಂಚಾಯಿತಿ ಕಾನೂನಿಗೆ ತಿದ್ದುಪಡಿ ತರಲಾಗಿತ್ತು. ಯಾವ ಸದಸ್ಯರು ಗ್ರಾಮ ಪಂಚಾಯಿತಿ ಚುನಾವಣೆಗೆ ನಿಲ್ಲುತ್ತಾರೆ, ಆ ಸದಸ್ಯರು ಚುನಾವಣೆಗೆ ನಿಲ್ಲುವುದಕ್ಕಿಂತ ಮುಂಚಿತವಾಗಿ ಅವರ ಮನೆಯಲ್ಲಿ ಒಂದು ಶೌಚಾಲಯದ ನಿರ್ಮಾಣವಾಗಬೇಕು. ಅಂತಹವರು ಮಾತ್ರ ನಾಮಿನೇಷನ್ ಕೊಡುವುದಕ್ಕೆ ಬರುತ್ತದೆ, ಇಲ್ಲದಿದ್ದರೆ ನಾಮಿನೇಷನ್ ರಿಜೆಕ್ಟ್ ಆಗುತ್ತದೆ ಎನ್ನುವ ಕಾನೂನು ತಿದ್ದುಪಡಿಯನ್ನು ತರಲಾಗಿತ್ತು. ಆದರೆ, ಯಾರೋ ಒಬ್ಬರು ಹೈಕೋರ್ಟ್‌ಗೆ

ಹೋಗಿ ಚಾಲೆಂಜ್ ಮಾಡಿದರು. ಆಗ ಅದು quash ಆಯಿತು. ಅದು ದುರ್ದೈವದ ಸಂಗತಿ. ಯಾರು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಚುನಾಯಿತರಾಗುತ್ತಾರೆ. ಅವರ ಮನೆಯಲ್ಲಿಯೇ ಶೌಚಾಲಯವಿಲ್ಲವೆಂದರೆ ಅವರು ಬೇರೆಯವರಿಗೆ ಏನು ಹೇಳುವುದಕ್ಕೆ ಆಗುತ್ತದೆ? ಇದನ್ನು ಮತ್ತೊಮ್ಮೆ ಕಡ್ಡಾಯ ಮಾಡಬೇಕು. ಏಕೆಂದರೆ, ಗ್ರಾಮ ಪಂಚಾಯಿತಿ ಸದಸ್ಯರು 91 ಸಾವಿರ ಜನ ಇದ್ದಾರೆ. 91 ಸಾವಿರ ಜನ ಗ್ರಾಮ ಪಂಚಾಯಿತಿ ಸದಸ್ಯರ ಮನೆಗಳಲ್ಲಿ ಶೌಚಾಲಯಗಳನ್ನು ಕಟ್ಟಿದ್ದರೆ ಎಷ್ಟೋ ಬದಲಾವಣೆ ಆಗುತ್ತದೆ. ಆ ದೃಷ್ಟಿಯಿಂದ ನಾವು ವಿಚಾರ ಮಾಡಬಹುದು. ಅದಕ್ಕೆ ನಾವು ಪರಿಶೀಲನೆ ಮಾಡುತ್ತೇವೆ. ಮಾನ್ಯ ಎಲ್ಲಾ ಶಾಸಕರುಗಳು ಏನು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಇದು ಸಾಮಾಜಿಕ ಕಳಕಳಿಯಾದ್ದರಿಂದ ಇದರ ಬಗ್ಗೆ ಸರ್ಕಾರ ಎಲ್ಲಾ ರೀತಿಯಾದ ಕ್ರಮವನ್ನು ಕೈಗೊಳ್ಳುತ್ತದೆ ಎನ್ನುವ ಮಾತನ್ನು ಈ ಸದನದಲ್ಲಿ ಹೇಳಬಯಸುತ್ತೇನೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 10-03-2010ರ ಮೂರನೇ ಪಟ್ಟಿಯಲ್ಲಿರುವ 114 ಪ್ರಶ್ನೆಗಳ ಪೈಕಿ 85 ಸಂಖ್ಯೆಯ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. (ಅನುಬಂಧ – I)

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು :

(i) ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಹೆಸರಿನ ಮುಂದಿರುವ ಭಾರತ ಸಂವಿಧಾನದ 151(2) ನೇ ಅನುಚ್ಛೇದದ ಮೇರೆಗೆ 2008-09ನೇ ಸಾಲಿನ ಹಣಕಾಸು ಲೆಕ್ಕ ಪತ್ರಗಳು ಹಾಗೂ ಧನವಿನಿಯೋಗ ಲೆಕ್ಕಪತ್ರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ii) ಶ್ರೀ ಎಸ್. ಬಿ.ಪಾಟೀಲ್ (ಕಾರ್ಯದರ್ಶಿ) : ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರ್ಯಾಲೋಚನೆಗಾಗಿ ಬಂದಿರುವ "ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2009" ನ್ನು ಈಗ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು (ಅನುಬಂಧ – II)

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಬಿಜಾಪುರದಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆ. (ಗೊಂದಲ) ಬಿಜಾಪುರದಲ್ಲಿ ಸತತವಾಗಿ ಸತ್ಯಾಗ್ರಹ ನಡೆಯುತ್ತಿದೆ. ಅದಕ್ಕೆ ತಾವು ಒಪ್ಪಿಗೆ ನೀಡಿದರೆ ನಾಳೆ ದಿವಸ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಲಿಖಿತ ಉತ್ತರಗಳು ಸಿಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಮ್ಮೆ ಹೇಳಿದರೆ ಹೇಗೆ?

ಶ್ರೀ ವೆಂಕಟರಾವ್ ನಾಡಗೌಡ : ನಿನ್ನೆ 70 ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲ. ಇವತ್ತಿನವರೆಗೂ ಲಿಖಿತ ಪ್ರಶ್ನೆಗಳಿಗೆ ಸಂಪೂರ್ಣವಾಗಿ ಉತ್ತರಗಳಿಲ್ಲ. ಪ್ರಶ್ನೆ ಏಕೆ ಕೇಳಬೇಕು? ಉತ್ತರ ಏಕೆ ಕೊಡುವುದಿಲ್ಲ? ನಿನ್ನೆ 70–80 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.

(ಗೊಂದಲ)

ಅಧ್ಯಕ್ಷರು : ಇಲಾಖೆಗಳಿಂದ ಉತ್ತರ ಬಂದ ನಂತರ ಕೊಡಿಸುವಂತಹ ವ್ಯವಸ್ಥೆ ಮಾಡುತ್ತೇವೆ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ : ಪ್ರಶ್ನೆ ಕೇಳುವುದರಲ್ಲಿ ಅರ್ಥವೇ ಇಲ್ಲದ ಹಾಗೆ ಆಗಿದೆ. ಉತ್ತರ ಕೊಡದೇ ತಪ್ಪಿಸಿಕೊಂಡರೆ ಪ್ರಶ್ನೆ ಏಕೆ ಕೇಳಬೇಕು?

(ಗೊಂದಲ)

ಅಧ್ಯಕ್ಷರು : ಮಾನ್ಯ ನರೇಂದ್ರ ಬಾಬುರವರು ನಿಲುವಳಿ ಸೂಚನೆ ತೆಗೆದುಕೊಳ್ಳುತ್ತಾರೆ. ನಿಲುವಳಿ ಸೂಚನೆಯನ್ನು ಅವರು ತಂದಿದ್ದಾರೆ. ದಯವಿಟ್ಟು ನೀವುಗಳು ಕುಳಿತುಕೊಳ್ಳಿ. ನಿಲುವಳಿ ಸೂಚನೆಗೆ ಕರೆದಿದ್ದೇನೆ. ಒಂದು ನಿಮಿಷ ನೀವುಗಳು ಕುಳಿತುಕೊಳ್ಳಿ, ಆಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :

ವಿಷಯ : ಕರ್ನಾಟಕ ಗೃಹ ಮಂಡಳಿಯ ಕಾರ್ಯ ವೈಖರಿ ಬಗ್ಗೆ.

ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮಿ ಬಡಾವಣೆ) : ಮಾನ್ಯ ಸಭಾಧ್ಯಕ್ಷರೆ, ನಿಲುವಳಿ ಸೂಚನೆಯನ್ನು ಸರ್ಕಾರದ ಮುಂದೆ ನಾನು ಈಗಾಗಲೇ ಮಂಡಿಸಿದ್ದೇನೆ. ಕರ್ನಾಟಕ ಗೃಹ ಮಂಡಳಿಯಲ್ಲಿ ಹಲವಾರು ವರ್ಷಗಳಿಂದ ಕಟ್ಟಿರುವ ಕೊಟ್ಯಾಂತರ ರೂಪಾಯಿ ಬೆಲೆ ಬಾಳುವ ನಿವೇಶನಗಳು ಮತ್ತು ಮನೆಗಳಿವೆ. 1962 ರಲ್ಲಿ ಆರಂಭಗೊಂಡಿರುವ ಹೌಸಿಂಗ್ ಬೋರ್ಡ್ ಇಂದು ಸಂಪೂರ್ಣ ನಿಷ್ಕ್ರೀಯವಾಗಿದೆ. ಈ ಹಿಂದೆ ತಿಪ್ಪೇಗೌಡರು ಎಂಬ ಸಚಿವರಿದ್ದರು. ಬಹುಶಃ, ನನಗೆ ನೆನಪಿರುವಂತೆ ಸದಾಶಿವನಗರದಿಂದಿಡಿದು ಗ್ರಾಮಾಂತರ ಪ್ರದೇಶದವರೆಗೂ ಮನೆಗಳನ್ನು ಹೌಸಿಂಗ್ ಬೋರ್ಡ್ ನಿರ್ಮಿಸಿತ್ತು. ಆದರೆ, ಇವತ್ತು ಹೌಸಿಂಗ್ ಬೋರ್ಡ್ ಎನ್ನುವುದು ಯಾವುದೋ construction corporation ತರಹ ಕೆಲಸ ಮಾಡುತ್ತಿದೆ, Land Army Corporation ತರಹ ಕಾರ್ಯ ನಿರ್ವಹಿಸುತ್ತಿದೆಯೇ ಹೊರತು ನಿಜವಾಗಿಯೂ ಹೌಸಿಂಗ್ ಬೋರ್ಡ್ ಏನು ಮಾಡಬೇಕಾಗಿತ್ತು ಎಂದರೆ, ಎಲ್ಲರಿಗೂ ನೀರು ಮತ್ತು ಸೂರು ಎಂದು ಏನು ಹೇಳುತ್ತೇವೆ, ಅದನ್ನು ಕೊಡಬಹುದಾಗಿತ್ತು. ಆದರೆ, ಅದರಲ್ಲಿ ಸಂಪೂರ್ಣ ವಿಫಲವಾಗಿರುವುದು ನೋವು ತರುವ ಸಂಗತಿಯಾಗಿದೆ.

ಅಧ್ಯಕ್ಷರು : ಈ ವಿಷಯ ನಿಲುವಳಿ ಸೂಚನೆಯಡಿ ಹೇಗೆ ಬರುತ್ತದೆಂಬುದನ್ನು ಹೇಳಬೇಕು.

ಶ್ರೀ ನೆ.ಲ.ನರೇಂದ್ರಬಾಬು : ಇವತ್ತು ಗೃಹ ಮಂಡಳಿ ರಚನೆಯಾಗಿರುವ ಉದ್ದೇಶ ಈಡೇರುತ್ತಿಲ್ಲ. ವಸತಿಹೀನರಿಗೆ ವಸತಿ ಕೊಡುವುದಕ್ಕಾಗುತ್ತಿಲ್ಲ, ನಿವೇಶನ ಇಲ್ಲದವರಿಗೆ ನಿವೇಶನ ಕೊಡುವ ಕೆಲಸವಾಗುತ್ತಿಲ್ಲ.

O.17 F – 11

ಗುಡಿಸಲುರಹಿತ ರಾಜ್ಯ ಮಾಡುತ್ತೇವೆಂದು ಸನ್ಮಾನ್ಯ ಮುಖ್ಯಮಂತ್ರಿಗಳಾದಿಯಾಗಿ ಎಲ್ಲರೂ ಇವತ್ತು ಘೋಷಿಸುತ್ತಿದ್ದಾರೆ. ಗುಡಿಸಲುರಹಿತ ರಾಜ್ಯವನ್ನಾಗಿ ಮಾಡಬೇಕಾದರೆ, ಏನು ಯೋಜನೆಗಳಿವೆ, ಲಕ್ಷಾಂತರ ಮನೆಗಳನ್ನು ಕಟ್ಟುತ್ತೇವೆಂದು ಬರೀ ಘೋಷಣೆಗಳಾಗಿವೆಯೇ ವಿನಾ ಏನೂ ಕೆಲಸವಾಗುತ್ತಿಲ್ಲ. ನನಗೆ ಬಂದಿರುವ ಮಾಹಿತಿ ರೀತ್ಯಾ....

ಅಧ್ಯಕ್ಷರು : ಇದು ನಿಲುವಳಿ ಸೂಚನೆಯಡಿ ಹೇಗೆ ಬರುತ್ತದೆಂಬುದನ್ನು ಮೊದಲು ಹೇಳಬೇಕಾಗುತ್ತದೆ. ತಾವು ಡೀಟೆಲ್ಸ್‌ಗೆ ಹೋಗಬೇಡಿ. ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ನರೇಂದ್ರಬಾಬುರವರೆ, ಇದು ನಿಲುವಳಿ ಸೂಚನೆಯಡಿ ಬರುವುದಿಲ್ಲ. ಬೇರೆ ರೂಪದಲ್ಲಿ ತಾವು ಚರ್ಚೆಗೆ ತನ್ನಿ.

ಶ್ರೀ ಎಸ್. ನರೇಂದ್ರಬಾಬು : ಮಾನ್ಯ ಸಭಾಧ್ಯಕ್ಷರೆ, ಇವತ್ತು ಹಾಸನದಲ್ಲಿ.....

ಶ್ರೀ ಎಸ್. ಸುರೇಶ್ ಕುಮಾರ್ : ಇದು ನಿಯಮ 69ರಡಿಯಲ್ಲೂ ಬರುವುದಿಲ್ಲ. ಬೇರೆ ರೂಪದಲಿ ತನ್ನಿ. ಏಕೆಂದರೆ, Rule 69 is also very important. Any Member desirous of raising discussion on a matter of urgent public importance...... ಅರ್ಧ ಗಂಟೆ ಚರ್ಚೆಗೆ ಅವಕಾಶ ಕಲ್ಪಿಸಿಕೊಡಿ, ತೆಗೆದುಕೊಳ್ಳೋಣ. Not under Rule 69:

ಅಧ್ಯಕ್ಷರು : ಇದು ನಿಲುವಳಿ ಸೂಚನೆಯಡಿ ಬರುವುದಿಲ್ಲ. ಅರ್ಧ ಗಂಟೆ ಚರ್ಚೆಗೆ ಅವಕಾಶ ಕಲ್ಪಿಸಿಕೊಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಈ ವಿಷಯ ನಿಯಮ 60 ರಡಿಯೂ ಬರುವುದಿಲ್ಲ, 69ರಡಿಯೂ ಬರುವುದಿಲ್ಲ. ಬೇರೆ ರೂಪದಲ್ಲಿ ತನ್ನಿ.

ಶ್ರೀ ನೆ.ಲ.ನರೇಂದ್ರಬಾಬು : ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಇವತ್ತು ಹೌಸಿಂಗ್ ಬೋರ್ಡ್‌ನಲ್ಲಿ, ಹಾಸನದಲ್ಲಿ......

ಶ್ರೀ ಎಸ್.ಸುರೇಶ್‌ಕುಮಾರ್ : ನರೇಂದ್ರಬಾಬುರವರೆ, ನಾನು ನಿಮ್ಮ ಇಶ್ಯೂ ಬಗ್ಗೆ ಮಾತನಾಡುತ್ತಿಲ್ಲ. ಇಶ್ಯೂ ಬಹಳ ಮಹತ್ವದ್ದಾಗಿದೆ. ಆದರೆ, ಇದು ನಿಯಮ 60ರಡಿಯಲ್ಲಾಗಲಿ, 69ರಡಿಯಲ್ಲಾಗಲಿ ಬರುವುದಿಲ್ಲ. ಬೇರೆ ರೂಪದಲ್ಲಿ ತನ್ನಿ, ಚರ್ಚಿಸೋಣ.

ಶ್ರೀ ನೆ.ಲ.ನರೇಂದ್ರಬಾಬು : ಬಹಳಷ್ಟು ಜನರಿಗೆ ಮಾತು ಕೊಟ್ಟಿರುವಂತೆ, ಸೂರು ಎನ್ನುವುದು ಮಹತ್ವದಲ್ಲವೇ? ಇವತ್ತು ಹಾಸನದಲ್ಲಿ ಹೌಸಿಂಗ್ ಬೋರ್ಡ್ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಂಡಿದೆ ಎಂದು ಅಲ್ಲಿನ ರೈತರು ಡಿ.ಸಿ. ಕಚೇರಿ ಮುಂದೆ ಧರಣಿ ಕುಳಿತಿದ್ದಾರೆ. ರೈತರು ತಮ್ಮ ಜಮೀನನ್ನು ಎಲ್ಲಿ ಕೊಡಲು ಮುಂದೆ ಬರುತ್ತಿದ್ದರೋ, ಅಲ್ಲಿ ಸರ್ಕಾರ ಭೂಮಿಯನ್ನು ತೆಗೆದುಕೊಳ್ಳುತ್ತಿಲ್ಲ.

ಶ್ರೀ ಹೆಚ್.ಎಸ್.ಪ್ರಕಾಶ್ : ರೈತರು ಅಲ್ಲಿ ಸ್ಟ್ರೈಕ್ ಮಾಡಲು ಶುರು ಮಾಡಿ 12 ದಿವಸಗಳಾದವು.

ಅಧ್ಯಕ್ಷರು : ಈ ವಿಷಯ ನಿಯಮ 69ರಡಿ ಬರುವುದಿಲ್ಲ. ಬೇರೆ ಯಾವುದಾದರೂ ರೂಪದಲ್ಲಿ, ಗಮನ ಸೆಳೆಯುವ ಸೂಚನೆ ರೂಪದಲ್ಲಿ ತನ್ನಿ.

ಶ್ರೀ ಟಿ.ಬಿ.ಜಯಚಂದ್ರ : ಅಧ್ಯಕ್ಷರೆ, ಇದರ ಬಗ್ಗೆ half an hour discussion ಗೆ ಅವಕಾಶ ಕಲ್ಪಿಸಿಕೊಡಿ.

ಶ್ರೀ ಎಸ್. ಸುರೇಶ್‌ಕುಮಾರ್ : ಜಯಚಂದ್ರರವರೆ, half an hour discussion ಯಾವಾಗ ಬರುತ್ತದೆಂದರೆ, raising out of question, through question hour, ಬೇರೆ ಸ್ವರೂಪದಲ್ಲಿ ಅವರು ತರಲಿ.

ಶ್ರೀ ಟಿ.ಬಿ.ಜಯಚಂದ್ರ : ಹೋಗಲಿ, ಗಮನ ಸೆಳೆಯುವ ಸೂಚನೆಯಡಿ ಅವಕಾಶ ಕಲ್ಪಿಸಿಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಆಗಬಹುದು. ಗಮನ ಸೆಳೆಯುವ ಸೂಚನೆಯಡಿ ಅವಕಾಶ ಕಲ್ಪಿಸಿಕೊಡಿ.

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಯಡಿ ನಾಳೆ ತೆಗೆದುಕೊಳ್ಳೋಣ.

ಶ್ರೀ ಎಸ್. ಸುರೇಶ್‌ಕುಮಾರ್ : ನಮ್ಮಲ್ಲಿ ಒಂದು ಪದ್ಧತಿ ಹೇಗಿದೆಯೆಂದರೆ, ನಿಯಮ 60 ರಡಿ ಹಾಕುವುದು, ಕನ್ವರ್ಟ್ ಮಾಡುವುದು. ಆದುದರಿಂದ, ಇದು ನಿಯಮ 60 ರಡಿಯೂ ಬರುವುದಿಲ್ಲ, 69 ರಡಿಯೂ ಬರವುದಿಲ್ಲ. ಗಮನ ಸೆಳೆಯುವ ಸೂಚನೆಯಾಗಿ ತನ್ನಿ, ನೋಡೋಣ.

ಅಧ್ಯಕ್ಷರು : ಈಗ ನಾನು ನಿಲುವಳಿ ಸೂಚನೆಯನ್ನು ತಿರಸ್ಕರಿಸಿದ್ದೇನೆ. ಹಾಗೆಯೇ, ಇದನ್ನು ಗಮನ ಸೆಳೆಯುವ ಸೂಚನೆಯಾಗಿ ನಾಳೆ ಚರ್ಚೆಗೆ ಅವಕಾಶ ಕಲ್ಪಿಸಿಕೊಡುತ್ತೇನೆ.

4. ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು :

(i) ವಿಷಯ : ಹಾಸನದಲ್ಲಿ ಹೌಸಿಂಗ್ ಬೋರ್ಡ್ ರೈತರ ಫಲವತ್ತಾದ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ.

. . . .

ಶ್ರೀ ಎ.ಮಂಜು (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ ದಿನಾಂಕ: 1.3.2010ರಿಂದ ಇಲ್ಲಿಯವರೆಗೂ ರೈತರು ಸತ್ಯಾಗ್ರಹ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಇಲ್ಲಿಯವರೆಗೂ ಸರ್ಕಾರ ಏಕೆ ಅಲ್ಲಿಗೆ ಭೇಟಿ ಕೊಟ್ಟಿಲ್ಲ? ಸುಮಾರು 521 ಎಕರೆಗಳಷ್ಟು ಫಲವತ್ತಾದ ಭೂಮಿ.....

ಅಧ್ಯಕ್ಷರು : ಇದರ ಬಗ್ಗೆ ಮಾನ್ಯ ಸದಸ್ಯರಾದ ಪ್ರಕಾಶ್‌ರವರು ಹೇಳಬೇಕು.

ಶ್ರೀ ಎ.ಮಂಜು : ವಿಷಯ ಪ್ರಸ್ತಾಪಿಸಲು ನಾನೂ ಇದನ್ನೇ ತಮಗೆ ಕಳುಹಿಸಿಕೊಟ್ಟಿರುವುದು.

ಅಧ್ಯಕ್ಷರು : ಅವರು ಕೊಟ್ಟಿದ್ದಾರೆ.

ಶ್ರೀ ಎ.ಮಂಜು: ನಾನು ಮೊದಲು ಕೊಟ್ಟಿದ್ದೇನೆ. ಮಾತನಾಡಬೇಕಲ್ಲ.

ಅಧ್ಯಕ್ಷರು : ತಾವು ಪ್ರಸ್ತಾಪಿಸಿದ್ದೀರಿ. ಈಗ ಅವರು ಪ್ರಸ್ತಾಪಿಸಲಿ.

ಶ್ರೀ ಹೆಚ್.ಎಸ್.ಪ್ರಕಾಶ್ : ....ಸುಮಾರು 1,400 ನಿವೇಶನಗಳಿಗೆ ಬೇಡಿಕೆ ಬಂದಿದೆಯೆಂದು, ಇವತ್ತು CITB ಯಿಂದ 4,000 ನಿವೇಶನಗಳು ಖಾಲಿ ಇದ್ದರೂ ಯಾರೂ ಬೇಡಿಕೆ ಸಲ್ಲಿಸಿಲ್ಲ. ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದಿಷ್ಟೆ. ಅಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಸುಮಾರು 12 ದಿವಸಗಳಿಂದಲೂ ರೈತರು ಎತ್ತು ಗಾಡಿ ಸಮೇತ ಧರಣಿ ಕುಳಿತಿದ್ದಾರಲ್ಲ, ಒಬ್ಬರು ಸಚಿವರಾಗಲಿ, ಹೌಸಿಂಗ್ ಬೋರ್ಡ್ ಕಮೀಷನರ್ ಆಗಲಿ, ಅಲ್ಲಿರುವ ಕಚೇರಿಯ ಬೋರ್ಡ್ ಅನ್ನು ಬದಲಾಯಿಸಬೇಕು.

ಅಧ್ಯಕ್ಷರು : ತಾವು ಡೀಟೆಲ್ಸ್‌ಗೆ ಹೋಗಬೇಡಿ.

ಶ್ರೀ ಹೆಚ್.ಎಸ್.ಪ್ರಕಾಶ್ : ದಯಮಾಡಿ ಉತ್ತರ ಹೇಳಲಿ. ಇಲ್ಲವೇ, ಅಲ್ಲಿ ಧರಣಿ ಕುಳಿತಿರುವ ರೈತರನ್ನು ವಾಪಸ್ಸು ಕರೆಸಿಕೊಳ್ಳಬೇಕು.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಅಧ್ಯಕ್ಷರೆ, ಇದರ ಬಗ್ಗೆ ಉತ್ತರ ಕೊಡಲೇಬೇಕು. ಏಕೆಂದರೆ, ಫಲವತ್ತಾದ ಭೂಮಿಯನ್ನು ತೆಗೆದುಕೊಳ್ಳುವಂತಿಲ್ಲವೆಂದು ಸರ್ಕಾರವೇ ಹೇಳುತ್ತದೆ. ಯಾವುದೇ ಕಾರಣಕ್ಕೂ ಫಲವತ್ತಾದ

ಭುಮಿಯನ್ನು.... ಸರ್ಕಾರವು ಸಾರ್ವಜನಿಕ ಉದ್ದೇಶಕ್ಕೋಸ್ಕರ ಭೂಸ್ವಾಧೀನ ಮಾಡಿಕೊಳ್ಳುವುದಿಲ್ಲವೆಂದು ಹೇಳಿದೆ. ಆಧರೆ, ಹಾಸನ ಜಿಲ್ಲೆಯಲ್ಲಿ 500 ಎಕರೆಯಷ್ಟು ಫಲವತ್ತಾದ ಭೂಮಿಯನ್ನು.....ಈಗ ಹಾಸನದ 10 ಕಿಲೋಮೀಟರ್ ಸುತ್ತಮುತ್ತಲೂ ಎಲ್ಲಿಯೂ ರೈತರ ಜಮೀನು ಇಲ್ಲವೆಂದು ಹೇಳಿ ಸರ್ಕಾರ ರೈತರ ಫಲವತ್ತಾದ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ. ಈ ಪರಿಸ್ಥಿತಿ ಹಾಸನದಲ್ಲಿ ಉದ್ಭವಿಸಿದೆ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕು.

ಅಧ್ಯಕ್ಷರು : ಈ ವಿಷಯ ಎರಡನೇ ಬಾರಿಗೆ ಪ್ರಸ್ತಾಪವಾಗುತ್ತಿದೆ. ಮೊನ್ನೆಯೂ ಈ ವಿಷಯ ಪ್ರಸ್ತಾಪವಾಗಿದೆ. ಪುನಃ ಪ್ರಸ್ತಾಪಿಸುವುದು ಬೇಡ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಈ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಿಲ್ಲ. ಬಹಳ ವರ್ಷಗಳ ಹಿಂದೆ ಇದನ್ನು ಪ್ರಾರಂಭಿಸಲಾಗಿದೆ. ನಾಳೆ ಆಯುಕ್ತರನ್ನು ಅಲ್ಲಿಗೆ ಕಳುಹಿಸಿಕೊಡುತ್ತೇನೆ. ಅವರೊಂದಿಗೆ ಮಾನ್ಯ ಶಾಸಕರು ಮತ್ತು ರೈತರು ಚರ್ಚಿಸಲಿ. ನಾವೇನಾದರೂ ಡಿ–ನೋಟಿಫೈ ಮಾಡಿದ್ದರೆ, ಅದೇನೋ ಬೋರ್ಡ್ ಹೇಳಿದರಲ್ಲ, ಬೋರ್ಡ್ ಹಾಕಿಕೊಂಡಿದ್ದಾರೆಂದು ಹೇಳಿದರಲ್ಲ, ಡಿ–ನೋಟಿಫೈ ಮಾಡದೇ ಇದ್ದರೆ, ರೈತರು ಗಲಾಟೆ ಮಾಡುತ್ತಾರೆ. ಅದಕ್ಕೆ ಇವರೇ ಪ್ರೋತ್ಸಾಹಿಸುತ್ತಾರೆ. ನಾಳೆ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಡುತ್ತೇನೆ. ಶಾಸಕರು ಅಲ್ಲಿಯೇ ಇರಲಿ, ರೈತರ ಜೊತೆ ಮಾತನಾಡಲಿ. ಸರ್ಕಾರದಲ್ಲಿ ಭೂಮಿ ಪಾಲುದಾರಿಕೆಯನ್ನು ಹೊಸದಾಗಿ ನಾವು ಏನು ತಂದಿದ್ದೇವೆ, ಅದಕ್ಕೆ ಒಪ್ಪಿಕೊಳ್ಳುವುದಾದರೆ, ಸರಿ ಇದೆ. ಅದರ ಬಗ್ಗೆ ಗಂಭೀರವಾಗಿ ಯೋಚಿಸುತ್ತೇವೆ ಎನ್ನುವ ಮಾತನ್ನು ನಾನು ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅವತ್ತು ರೇವಣ್ಣನವರು ಮಂತ್ರಿಯಾಗಿದ್ದರು. ರೇವಣ್ಣನವರಿಗೆ, ಕುಮಾರಸ್ವಾಮಿಯವರಿಗೆ, ಡಿ.ಟಿ.ಜಯಕುಮಾರ್‌ರವರಿಗೆ ಅದು ಫಲವತ್ತಾದ ಭೂಮಿಯೆಂದು ಅವತ್ತು ಕಾಣಲಿಲ್ಲ, ಇವತ್ತು ಮಾತ್ರ ಅದು ಫಲವತ್ತಾದ ಭೂಮಿಯೆಂದು ಕಾಣಿಸುತ್ತಿದೆಯೇ? ನಾನು ಅದೆಲ್ಲದರ ಡೀಟೆಲ್ಸ್‌ಗೆ ಹೋಗುವುದಿಲ್ಲ. ಅದನ್ನು ಯಾರೇ ಮಾಡಿರಲಿ, ರೈತರಿಗೆ ತೊಂದರೆಯಾಗಿದ್ದರೆ, ಅದರ ಬಗ್ಗೆ ಚರ್ಚೆ ಮಾಡೋಣ. ನಾನು ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ನಾಳೆ ಕಳುಹಿಸಿ ಕೊಡುತ್ತೇನೆ. ರೈತರೊಂದಿಗೆ,

ಜಿಲ್ಲಾಧಿಕಾರಿಗಳೊಂದಿಗೆ ಮತ್ತು ಶಾಸಕರೊಂದಿಗೆ ಚರ್ಚೆ ಮಾಡಿ ಅಂತಿಮ ತೀರ್ಮಾನಕ್ಕೆ ನಾವು ಬರುತ್ತೇವೆ.

(ಗೊಂದಲ)

ಅಧ್ಯಕ್ಷರು : ಆಯಿತು, ನಾಳೆ ಅಧಿಕಾರಿಗಳನ್ನು ಕಳುಹಿಸಿ ಕೊಡುವುದಾಗಿ ಹೇಳಿದ್ದಾರೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಸಮಸ್ಯೆಯನ್ನು ಯಾವ ರೀತಿ ಪರಿಹರಿಸಬೇಕೆಂಬುದನ್ನು ನೋಡಬೇಕೇ ಹೊರತು ಈ ತರಹದ ಉತ್ತರ ಕೊಟ್ಟರೆ ಹೇಗೆ?

ಶ್ರೀ ಎ.ಮಂಜು : ಅಧ್ಯಕ್ಷರೆ, 6(1) ನೋಟಿಫಿಕೇಶನ್ ಆಗುವ ಮೊದಲೇ ಇದು ಆಗಿದೆ. ಇದು ಯಾರ ಕುಮ್ಮಕ್ಕಿನಿಂದ ಆಯಿತು?

ಅಧ್ಯಕ್ಷರು : ಈಗ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಎ.ಮಂಜು : ಇದರಲ್ಲಿ ಯಾರ ಕೈವಾಡ ಇದೆ ಎಂಬುದು ಹೊರಗೆ ಬರಬೇಕಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಬಹಳ ಸಮರ್ಪಕವಾಗಿ ಹೇಳಿದ್ದೇನೆ. ನಾಳೆ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಡುತ್ತೇನೆ. ನಾವು ಹೇಳುವುದನ್ನು ಸ್ವಲ್ಪ ಕೇಳಬೇಕು. ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಸ್ಥಳದಲ್ಲಿ ಇರುವ ಸಂದರ್ಭದಲ್ಲಿ, ಅವರು ಯಾವತ್ತು ನಿಗದಿ ಮಾಡುತ್ತಾರೋ, ಅವತ್ತೇ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಕೊಡುತ್ತೇನೆ. ನಾವು ರೈತರ ಜೊತೆಗೆ ಮಾತನಾಡುತ್ತೇವೆ. ಈ ದಿಸೆಯಲ್ಲಿ ಏನು ತೀರ್ಮಾನವಾಗಬೇಕೆಂಬ ಬಗ್ಗೆ ಮುಂದಿನ ಕ್ರಮ ಜರುಗಿಸುತ್ತೇವೆ.

(ii) ವಿಷಯ : ದಕ್ಷಿಣ ಕನ್ನಡ ಕೃಷಿಕರ ಸಹಕಾರ ಮಾರಾಟ ಸಂಘದ ಬಗ್ಗೆ.

ಶ್ರೀಮತಿ ಮಲ್ಲಿಕಾ ಪ್ರಸಾದ್ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಎಸ್.ಕೆ.ಎ.ಸಿ.ಎಂ.ಎಸ್. ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮೊದಲು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ದಕ್ಷಿಣ ಕನ್ನಡ ಕೃಷಿಕರ ಸಹಕಾರಿ ಮಾರಾಟ ಸಂಘ, ಮಂಗಳೂರು ಈ ಸಂಸ್ಥೆಗೆ ಸರ್ಕಾರ ನಿಬಡ್ಡಿಯಾಗಿ ಸಾಲ ನೀಡುವ ಕುರಿತು ನಾನು ಎರಡು ಮಾತುಗಳನ್ನು ಆಡುವುದಕ್ಕೆ ಇಷ್ಟ ಪಡುತ್ತೇನೆ. ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ದಕ್ಷಿಣ ಕನ್ನಡ ಕೃಷಿಕರ ಸಹಕಾರಿ ಮಾರಾಟ ಸಂಘಕ್ಕೆ ನೂರು

ವರ್ಷಗಳ ಇತಿಹಾಸವಿದ್ದು ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ರೈತರ ಕೃಷಿ ಉತ್ಪನ್ನಗಳನ್ನು ಕಮೀಷನ್ ನೆಲೆಯಲ್ಲಿ ರೈತರಿಗೆ ಉತ್ತಮ ಮಾರುಕಟ್ಟೆ ಧಾರಣೆ ಒದಗಿಸುತ್ತಿದೆ. ಪ್ರಸ್ತುತ ಈ ಸಂಸ್ಥೆಯು ವ್ಯಾವಹಾರಿಕವಾಗಿ ಅಧುನಿಕತೆಯ ಸ್ಪರ್ಧೆಯಲ್ಲಿ ನಷ್ಟವನ್ನು ಅನುಭವಿಸುತ್ತಿದ್ದು ತನ್ನ ವ್ಯವಹಾರ ಕುಂಠಿತವಾಗಿರುವ ಈ ಸಂದರ್ಭದಲ್ಲಿ ವ್ಯವಹಾರವನ್ನು ಪುನಶ್ಚೇತನಗೊಳಿಸಲು ಹಣಕಾಸಿನ ಅವಶ್ಯಕತೆ ಇರುವುದರಿಂದ ಈ ಸಂಸ್ಥೆಗೆ ಸರ್ಕಾರದ ಆರ್ಥಿಕ ಸಹಾಯದ ಅವಶ್ಯಕತೆ ಇರುತ್ತದೆ. ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ತಾಲ್ಲೂಕುಗಳಲ್ಲಿ ಶಾಖೆಯನ್ನು ಹೊಂದಿದ್ದು ತನ್ನದೇ ಆದ ಸ್ವಂತ ಆಸ್ತಿ ಮತ್ತು ಕಟ್ಟಡಗಳನ್ನು ಹೊಂದಿದ್ದು ಮಂಗಳೂರಿನ ಹೃದಯ ಭಾಗದಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸ್ಥಳ ಮತ್ತು ಕಟ್ಟಡವನ್ನು ಹೊಂದಿರುತ್ತದೆ.

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಕೇವಲ ವಿಷಯವನ್ನು ಮಾತ್ರ ಪ್ರಸ್ತಾಪ ಮಾಡಬೇಕು. ಉತ್ತರದ ನಂತರ ಏನಾದರೂ ಇದ್ದರೆ ಕೇಳಿ.

ಶ್ರೀ ಬಿ. ರಮಾನಾಥ ರೈ : ಹಿಂದಿನ ಬಜೆಟ್‌ನಲ್ಲಿ ಆ ಸಂಸ್ಥೆಗೆ ಬಡ್ಡಿ ರಹಿತ ಸಾಲ 12 ಕೋಟಿ ಕೊಡುವುದಾಗಿ ಸರ್ಕಾರದಿಂದ ಭರವಸೆ ನೀಡಲಾಗಿತ್ತು. ಆದರೆ, ಇದುವರೆಗೆ ಆ ಸಂಸ್ಥೆಗೆ ಒಂದು ಪೈಸೆ ಸಹ ಹೋಗಿಲ್ಲ. ಅಲ್ಲಿನ ಸಿಬ್ಬಂದಿಗೆ ಸಂಬಳ ಸಹ ಕೊಡಲು ಆಗದೆ ಅವರಿಗೆ ಒಪ್ಪೊತ್ತಿನ ಊಟಕ್ಕೂ ಸಮಸ್ಯೆ ಇರುವ ಸ್ಥಿತಿ ಇದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಹಿಳೆಯರು ಅಪರೂಪಕ್ಕೆ ಮಾತನಾಡುತ್ತಿದ್ದಾರೆ. ಅವಕಾಶ ಕೊಡಿ.

ಶ್ರೀ ಬಿ. ರಮಾನಾಥ ರೈ : ಅವರ ಪರವಾಗಿ ನಾನು ಮಾತನಾಡುತ್ತಿದ್ದೇನೆ.

ಶ್ರೀಮತಿ ಮಲ್ಲಿಕಾ ಪ್ರಸಾದ್ : 30.06.2008 ರಲ್ಲಿ ಸಲ್ಲಿಸಿದ ಮನವಿಯ ಮೇರೆಗೆ 31.07.2008 ರಲ್ಲಿ ರಾಜ್ಯದ ಮುಂಗಡ ಪತ್ರದಲ್ಲಿ ಸದರಿ ಸಂಘಕ್ಕೆ 12 ಕೋಟಿ ಸಾಲವನ್ನು ಬಡ್ಡಿ ರಹಿತವಾಗಿ ಕೊಡಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಯವರು ಘೋಷಣೆ ಮಾಡಿದ್ದರು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು, ರಾಜ್ಯ ಸರ್ಕಾರದ ಮೂಲಕ ಆದಷ್ಟು ಬೇಗ 12 ಕೋಟಿ ಹಣವನ್ನು ಆ ಸಂಘಕ್ಕೆ ಬಿಡುಗಡೆ ಮಾಡುವಲ್ಲಿ ಗಮನಹರಿಸ ಬೇಕೆಂದು ಕೋರಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಇದು ಬಜೆಟ್‌ನಲ್ಲಿ ಆಗಿರುವ ಕಮಿಟ್‌ಮೆಂಟ್. ತಕ್ಷಣ 12 ಕೋಟಿ ಬಡ್ಡಿ ರಹಿತ ಹಣವನ್ನು ಸರ್ಕಾರ ಕೊಡಬೇಕು. ಬಿಡುಗಡೆ ಮಾಡಬೇಕು. ರೈತರಿಗೆ ಸಹಾಯ ಆಗುವ ಕ್ರಮವಾಗುತ್ತದೆ. ಈ ಹಿನ್ನಲೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು.

ಶ್ರೀ ಬಿ.ರಮಾನಾಥ ರೈ : ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಜೆಟ್ ಭಾಷಣ ಬರೀ ಬಂಡಲ್ ಎಂಬುದಾಗಿ ಬಂತು.

ಅಧ್ಯಕ್ಷರು : ಅವರು ಪ್ರಸ್ತಾಪ ಮಾಡಿದ್ದಾರೆ ಬಿಡಿ.

ಶ್ರೀ ಬಿ.ರಮಾನಾಥ ರೈ : ಅವರು ಕೇಳಿರುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಒಂದು ಸಂಸ್ಥೆಗೆ 12 ಕೋಟಿ ಬಡ್ಡಿ ರಹಿತ ಸಾಲ ಕೊಡುವುದಾಗಿ ಭರವಸೆ ಕೊಟ್ಟಿದ್ದಾರೆ. ಆದರೆ, ಒಂದು ಪೈಸೆಯೂ ಅಲ್ಲಿಗೆ ಹೋಗಿಲ್ಲ.

ಅಧ್ಯಕ್ಷರು : ನೀವು ಬಜೆಟ್ ಬಗ್ಗೆ ಮಾತನಾಡುವಾಗ ಇದನ್ನು ಹೇಳಿ.

ಶ್ರೀ ಎಸ್. ಸುರೇಶ್ ಕುಮಾರ್ : ರಮಾನಾಥ ರೈ ಯವರಿಗೆ ಬಜೆಟ್ ಬಗ್ಗೆ ಮಾತನಾಡಲು ಅವಕಾಶ ಕೊಡಿ. ಆಗ ಬೇಕಾದರೆ ಅದರ ಬಗ್ಗೆ ಮಾತನಾಡಲಿ.

ಅಧ್ಯಕ್ಷರು : ನೀವು ಬಜೆಟ್‌ನಲ್ಲಿ ಮಾತನಾಡಿ.

ಶ್ರೀ ಎಸ್. ಸುರೇಶ್ ಕುಮಾರ್ : ರಮಾನಾಥ ರೈ ರವರು ಹಿರಿಯ ಸದಸ್ಯರು. ಬಜೆಟ್ ಬಗ್ಗೆ ಮಾತನಾಡಬೇಕು.

ಶ್ರೀ ಬಿ. ರಮಾನಾಥ ರೈ : ಅವರು ಏನು ಮಾತನಾಡಿದ್ದಾರೆ, ಅದಕ್ಕೆ ಪೂರಕವಾಗಿ ನಾನು ಮಾತನಾಡುತ್ತಿದ್ದೇನೆ. ನಮ್ಮ ಜಿಲ್ಲೆಯ ಪ್ರಶ್ನೆ ಬಂದಾಗ ಅದಕ್ಕೆ ಪೂರಕವಾಗಿ ಮಾತನಾಡುತ್ತೇನೆ. ನಮ್ಮ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ನಾವೆಲ್ಲಾ ಒಮ್ಮತದಿಂದ ಕೆಲಸ ಮಾಡತಕ್ಕವರು.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ರಮಾನಾಥ ರೈ ರವರು ಕಾಮೆಂಟ್ ಮಾಡುವ ಸಂದರ್ಭದಲ್ಲಿ ಸ್ವಲ್ಪ ಬೇರೆ ಮಾತನ್ನು ಹೇಳಿದ್ದಾರೆ. ಅವರ ಸರ್ಕಾರವಿದ್ದಾಗ foundation stone ಮಾಡಿಬಿಡಲಾಗಿ ಇವತ್ತು ನಾಯಿಗಳು ಅಲ್ಲಿ ಮೂತ್ರ ಮಾಡುತ್ತಿವೆ. ಅದು ಇವತ್ತಿನವರೆಗೆ ಅನುಷ್ಠಾನಕ್ಕೆ ಬಂದಿಲ್ಲ. ಅಂಥ ದುಸ್ಥಿತಿ ಇದೆ. ಆದರೆ, ನಮ್ಮ ಸರ್ಕಾರ ಕನಿಷ್ಠ ಅದನ್ನು ಅನುಷ್ಠಾನಕ್ಕೆ ತರುತ್ತಿದೆ. ಅವರು ಬಜೆಟ್ ಬಂಡಲ್ ಎಂದು ಹೇಳಿದ್ದಕ್ಕೆ ಇದನ್ನು ಹೇಳಬೇಕಾಗಿದೆ.

ಶ್ರೀ ಬಿ.ರಮಾನಾಥ ರೈ : ನಾವು ಶಿಲಾನ್ಯಾಸ ಮಾಡಿದ ಮೇಲೆ ಎರಡು ಸರ್ಕಾರಗಳು ಬಂದಿವೆ. ಆಗ ನೀವು ಏನು ಮಾಡಿದ್ದಾರೆ? ನೀವು ಇದ್ದ ನಾಲ್ಕೈದು ವರ್ಷ ಏನು ಮಾಡಿದ್ದೀರಿ?

ಅಧ್ಯಕ್ಷರು : ನೀವು ಜಿಲ್ಲೆಯವರು ಮಾತನಾಡಬೇಡಿ. ನನ್ನ ಕಡೆ ನೋಡಿ ಮಾತನಾಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ : ಇವತ್ತು ಏನಾದರೂ ಕೆಲಸ ಆಗುತ್ತಿದ್ದರೆ ಅದು ಕೇಂದ್ರ ಸರ್ಕಾರದ ಹಣದಿಂದ ಆಗುತ್ತಿದೆ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು : ಮಂಗಳೂರಿಗೆ 100 ಕೋಟಿ ಹಣ ಕೊಟ್ಟಿರುವುದು ಕೇಂದ್ರ ಸರ್ಕಾರದ ಹಣವೇ? ಇಡೀ ಬಜೆಟ್ ಹಣ ಕೇಂದ್ರ ಸರ್ಕಾರದ್ದೇ ಬಿಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ : ಕೇಂದ್ರ ಸರ್ಕಾರ ಈ ವರ್ಷ 19 ಪರ್ಸೆಂಟ್ ಜಾಸ್ತಿ ಯೋಜನೆಯಲ್ಲಿ ಅವಕಾಶ ಕೊಟ್ಟಿದ್ದಾರೆ. ಹಾಗಿದ್ದರೂ ಕೇಂದ್ರದ ಮಲತಾಯಿಧೋರಣೆಯೆಂದು ಹೇಳುತ್ತೀರಿ.

(ಗೊಂದಲ)

ಅಧ್ಯಕ್ಷರು : ಇವರ ಬಗ್ಗೆ ಬಜೆಟ್‌ನಲ್ಲಿ ಮಾತನಾಡುವಾಗ ಹೇಳಿ.

ಶ್ರೀ ಬಿ. ರಮಾನಾಥ ರೈ : ಎಲ್ಲಾ ಇಲಾಖೆಯಲ್ಲೂ ಕೇಂದ್ರ ಸರ್ಕಾರದ ದುಡ್ಡು. ಅದು ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆ ಇರಬಹುದು, ಸರ್ವ ಶಿಕ್ಷಣ ಅಭಿಯಾನದ್ದು, ರಾಷ್ಟ್ರೀಯ ತೋಟಗಾರಿಕಾ ಮಿಷನ್‌ದು ಇರಬಹುದು. ಎಲ್ಲದಕ್ಕೂ ಕೇಂದ್ರ ಸರ್ಕಾರದಿಂದ ಹಣ ಬರುತ್ತಿದೆ. ಮನಮೋಹನಸಿಂಗ್ ರವರ ಸರ್ಕಾರ ಇಡೀ ದೇಶಾದ್ಯಂತ ಅದ್ಭುತವಾದ ಕೆಲಸವನ್ನು ಮಾಡುತ್ತಿದೆ. ದುಡ್ಡು ಸರಾಗವಾಗಿ ಹರಿಯುತ್ತಿದೆ. ಬೇಕಾದರೆ ಅಂಕಿಅಂಶವನ್ನು ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಇದರ ಬಗ್ಗೆ ಬಜೆಟ್‌ನಲ್ಲಿ ಹೇಳುವಾಗ ಹೇಳಿ.

ಶ್ರೀ ಬಿ.ರಮಾನಾಥ ರೈ : ಯೋಗೀಶ್ ಭಟ್‌ರವರು ಸ್ಕೈ ಬಸ್ ಬರುತ್ತದೆ, ಮಾನೋ ರೈಲ್ ಬರುತ್ತದೆ ಎಂದು ಹೇಳುತ್ತಾರೆ. ನಮ್ಮ ಜಿಲ್ಲೆಗೆ ಪಶ್ಚಿಮವಾಹಿನಿ ತರುತ್ತೇನೆಂದು ಹೇಳುತ್ತೀರಿ. ಯಾವಾಗ ತರುತ್ತೀರಿ?

O.17 F-12

(ಗೊಂದಲ)

ಶ್ರೀ ಎನ್. ಯೋಗೀಶ್ ಭಟ್ : ನಿಮ್ಮ ಕಾಲದಲ್ಲಿ..

ಅಧ್ಯಕ್ಷರು : ನೀವು ಜಿಲ್ಲೆ ಜಿಲ್ಲೆಯವರು ಏಕೆ ಮಾತನಾಡುತ್ತೀರಿ? ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು : ನಿಮ್ಮ ಶಿಫಾರಸ್ಸಿನಿಂದೇ ಬಜೆಟ್ ಆಗಿರುವುದು! ಅದು ರಮಾನಾಥ ರೈಯವರ ಬಜೆಟ್!

ಶ್ರೀ ಬಿ. ರಮಾನಾಥ ರೈ : ನಮಗೆ ಸ್ಕೈ ಬಸ್ ಬರುತ್ತದೆ, ಮಾನೋ ರೈಲು ಬರುತ್ತದೆ, ರೋಪ್ ವೇ ಬರುತ್ತದೆ ಎಂದು ಯೋಗೀಶ್ ಭಟ್‌ರವರು ಹೇಳಿದ್ದರು. ಇಲ್ಲಿ ಬಂತು? ನಮ್ಮ ಮಂಗಳೂರಿನ ಜನ ಅದನ್ನು ಮೇಲೆ ನೋಡಿ ನೋಡಿ ಸಾಕಾಗಿದೆ. ನಮ್ಮ ಭಾಗದಲ್ಲಿ ಪ್ರವಾಸೋದ್ಯಮಕ್ಕೆ ವಿಫಲವಾದ ಅವಕಾಶವಿದೆ. ಆದರೆ, ಅಲ್ಲಿ ಏನಾಗಿದೆ?

ಅಧ್ಯಕ್ಷರು : ಮಂಗಳೂರಿನವರು ಇಲ್ಲಿ ಏಕೆ ಜಗಳವಾಡುತ್ತೀರಿ?

(ಗೊಂದಲ)

ಶ್ರೀ ಎನ್. ಯೋಗೀಶ್ ಭಟ್ : ಇವರ ಆಡಳಿತದ ಅವಧಿಯಲ್ಲಿ ಏನನ್ನೂ ತರಲು ಆಗದಿದ್ದುದ್ದಕ್ಕೆ ರಮಾನಾಥ ರೈ ಯವರು ಬಹಳ ಹತಾಶೆಯಿಂದ, ನಿರಾಸೆಯಿಂದ ಮಾತನಾಡುತ್ತಿದ್ದಾರೆ. ಆದ್ದರಿಂದ ಅವರ ಬಗ್ಗೆ ನನಗೆ ಬಹಳ ಕನಿಕರವಿದೆ. ನಾವು ಅವೆಲ್ಲವನ್ನು ತರುತ್ತಿದ್ದೇವೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ : ಎನ್.ಡಿ.ಎ. ಸರ್ಕಾರವಿದ್ದಾಗ ಏನಾಯಿತು? ನಮಗೆ ಏನಾದರೂ ಹಾರ್ಬರ್ ಬಂದಿದ್ದರೆ ಎನ್.ಡಿ.ಎ. ಸರ್ಕಾರವಿದ್ದಾಗ. ವಾಜಪೇಯಿಯವರು ಇದ್ದಾಗ. ಒ.ಎನ್.ಜಿ.ಸಿ. ಬರುವ ಕೆಲಸ ಆಗಿದ್ದರೆ ಅದು ಯು.ಪಿ.ಎ. ಸರ್ಕಾರದಿಂದ ಮಾತ್ರ ಆಗಿದೆ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ನೀವು ದಕ್ಷಿಣ ಕನ್ನಡ ಜಿಲ್ಲೆಯವರು ಇಲ್ಲಿ ಏಕೆ ಜಗಳವಾಡುತ್ತೀರಿ? ಮಂಗಳೂರಿನಲ್ಲಿ ಸ್ವಲ್ಪ ಜಗಳವಾಡಿ!

ಶ್ರೀ ಕೃಷ್ಣಪಾಲೇಮಾರ್ : ಮಂಗಳೂರಿಗೆ 100 ಕೋಟಿ ಮಾತ್ರವಲ್ಲ, ಕುಡಿಯುವ ನೀರಿಗೆ 42 ಕೋಟಿ ಹಣವನ್ನು ಬೇರೆ ಕೊಟ್ಟಿದೆ.

(ಗೊಂದಲ)

ಕು. ಶೋಭಾ ಕರಂದ್ಲಾಜೆ : ಇವತ್ತು ದಕ್ಷಿಣ ಕನ್ನಡ ಜಿಲ್ಲೆ ಒಂದು ಐಲ್ಯಾಂಡ್ ಆಗಿದೆ. ಯಾವುದೇ ರೀತಿಯಾಗಿ ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆ ಹೈವೇಯನ್ನು ರಿಪೇರಿ ಮಾಡಲು ಸಾಧ್ಯವಾಗುತ್ತಿಲ್ಲ. ದಯಮಾಡಿ ರಮಾನಾಥ ರೈ ಯವರು ದೆಹಲಿಯಲ್ಲಿನ ನಿಮ್ಮ ನಾಯಕರಿಗೆ ಹೇಳಿ ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಯನ್ನು ಸರಿಪಡಿಸಿ ಚೆನ್ನಾಗಿ ಹೋಗುವಂತೆ ಮಾಡಿ. ನಿಮ್ಮ ಕಾಲದಲ್ಲಿ ಏನೇನಾಗಿದೆಯೆಂದು ನಾವು ನೋಡಿಬಿಟ್ಟಿದ್ದೇವೆ. ಏಕೆ ಈಗ ಬಾಯಿ ಮಾಡುತ್ತೀರಿ? ಏಕೆ ಕೂಗಾಡುತ್ತೀರಿ? ದಯಮಾಡಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ ಇವತ್ತು ಯಾವ ರೀತಿಯಾಗಿ ನಮ್ಮ ಹೈವೇ ಇದೆ ಎಂಬುದನ್ನು ಹೇಳಿ. ನಿಮ್ಮ ಮಂತ್ರಿಗಳು ನಾಯಕರು ಅಲ್ಲಿ ಇದ್ದಾರಲ್ಲಾ ದಯಮಾಡಿ ಹೇಳಿ. ಎಷ್ಟೊಂದು ಜೋರು ಮಾತನಾಡುತ್ತೀರಲ್ಲಾ? ಅವರ ಹತ್ತಿರ ಹೋಗಿ ಮಾತನಾಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ : ನಮ್ಮ ಅಮ್ಮನವರು ಮಂಗಳೂರಿಗೆ ಹೋಗತ್ತಾರೆ, ಬರುತ್ತಾರೆ. ಅವರು ಎಂ.ಎಲ್.ಎ. ಆಗಿರುವುದು ಬೆಂಗಳೂರು. ನಾನು ಮಂಗಳೂರಿನಿಂದ 5 ಸಲ ಎಂ.ಎಲ್.ಎ. ಆಗಿದ್ದೇನೆ.

(ಗೊಂದಲ)

ಅಧ್ಯಕ್ಷರು : ಇದು ವಿಷಯಾಂತರವಾಗುತ್ತದೆ. ಇದೇನಿದು? ಸಿದ್ದುಸಾವದಿಯವರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ನೀವು ಮಂಗಳೂರಿನಲ್ಲಿ ಆಗಿರುವುದೆಲ್ಲಾ ಮಲ್ಯರವರ ಕಾಲದಲ್ಲಿಯೆಂದು ಹೇಳುತ್ತೀರಿ. ಮಲ್ಯರವರು ಇದ್ದದ್ದು ಯಾವ ಪಕ್ಷದಲ್ಲಿ? ಮಲ್ಯರವರು ಇದ್ದದ್ದು ಕಾಂಗ್ರೆಸ್ ಪಕ್ಷದಲ್ಲಿ. ಅವರು ಸ್ವತಂತ್ರವಾಗಿ ಗೆದ್ದವರಲ್ಲ, ಮತ್ತೆ ಏನು ಮಾತನಾಡುತ್ತೀರಿ?

ಕು. ಶೋಭಾ ಕರಂದ್ಲಾಜೆ : ನೀವು ಏನು ಮಾಡಿದ್ದೀರಿ ಎಂದು ಅವರು ಮಾತನಾಡಿದ್ದಕ್ಕೆ ನಾವು ಕೇಳುತ್ತಿದ್ದೇವೆ.

(ಗೊಂದಲ)

(1-10 P.M)

(ಗೊಂದಲ)

ಅಧ್ಯಕ್ಷರು : ಯಾರು ಏನೇ ಮಾತನಾಡಿದರೂ, ಅದು ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಯಡಿಯೂರಪ್ಪನವರು ಕುಮಾರಿ ಶೋಭಾ ಕರಂದ್ಲಾಜೆಯವರನ್ನು ವಿನಾಕಾರಣ ಮಂತ್ರಿಮಂಡಲದಿಂದ ಕೈ ಬಿಟ್ಟರು. ಅವತ್ತಿನಿಂದ ಅವರು ಮಾತನಾಡುತ್ತಿರಲಿಲ್ಲ...

ಕುಮಾರಿ ಶೋಭಾ ಕರಂದ್ಲಾಜೆ : ಏಕೆ ಸಾರ್, ಆ ರೀತಿ ಮಾತನಾಡುತ್ತೀರಿ? ನಾನಿಲ್ಲಿ ಆರಾಮಾಗಿದ್ದೇನೆ.....

ಶ್ರೀ ಸಿದ್ದರಾಮಯ್ಯ : ನಿನ್ನೆ ಮಹಿಳಾ ಬಿಲ್ ರಾಜ್ಯಸಭೆಯಲ್ಲಿ ಪಾಸ್ ಆದ ತಕ್ಷಣ ಬಹಳ ಜೋರಾಗಿ ಮಾತನಾಡುತ್ತಿದ್ದಾರೆ. ಒಬ್ಬರಿಂದಲೇ ಇಷ್ಟೊಂದು ಗಲಾಟೆಯಾಗುತ್ತಿದೆ. ಇನ್ನು ಶೇಕಡ 33 ರಷ್ಟು ಮಹಿಳೆಯರು ಸದನಕ್ಕೆ ಬಂದರೆ ನಮ್ಮ ಗತಿ ಏನು? ನಿಮ್ಮೊಬ್ಬರ voice ಅನ್ನೇ ನಮಗೆ ತಡೆದುಕೊಳ್ಳಲಿಕ್ಕಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಉತ್ತರ ಹೇಳಿ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ, ನೀವು ಏನೇ ಮಾತನಾಡಿದರೂ ಅದು ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ನಾಯ್ಡುರವರೇ, ತಾವು ಕುಳಿತಲ್ಲೇ ಮಾತನಾಡುತ್ತಿದ್ದೀರಿ. ದಯವಿಟ್ಟು ಸುಮ್ಮನಿರಿ.

(ಗೊಂದಲ)

ಅಧ್ಯಕ್ಷರು : ಉತ್ತರ ಕೊಡಿ. ಇಲ್ಲದಿದ್ದರೆ ಇದನ್ನು ಮುಕ್ತಾಯ ಮಾಡೋಣ.

(ಗೊಂದಲ)

ಅಧ್ಯಕ್ಷರು : ಯಾವುದೂ ಕಡತಕ್ಕೆ ಹೋಗಿಲ್ಲ. ನೀವು ಯಾರು ಮಾತನಾಡಿದ್ದೂ ಕಡತಕ್ಕೆ ಹೋಗಿಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಸದನಕ್ಕೆ ಗೌರವ ಕೊಟ್ಟು ಮಾತನಾಡಿ.

(ಗೊಂದಲ)

ಅಧ್ಯಕ್ಷರು : ಯಾವುದೂ ಕಡತಕ್ಕೆ ಹೋಗಿಲ್ಲ. ಶಬ್ದಗಳ ಪ್ರಯೋಗ ಮಾಡುವಾಗ ಸ್ವಲ್ಪ ಎಚ್ಚರಿಕೆಯಿಂದ ಜಾಗರೂಕತೆಯಿಂದ ಮಾತನಾಡಬೇಕೆಂದು ಎಲ್ಲರಿಗೂ ಕೂಡ ನಾನು ಸೂಚನೆ ಕೊಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಯಾವುದೂ ಕಡತಕ್ಕೆ ಹೋಗಿಲ್ಲ.

(ಗೊಂದಲ)

ಶ್ರೀ ಎನ್.ಯೋಗೀಶ್ ಭಟ್ : ..... ಇಲ್ಲಿ ವೈಯಕ್ತಿಕ ಬೇಡ. ನಾವು ಎಲ್ಲರ ಮೇಲೆ ಪರಸ್ಪರ ಗೌರವ ಮತ್ತ ವಿಶ್ವಾಸವನ್ನು ಇಟ್ಟುಕೊಂಡಿದ್ದೇವೆ. ನಮ್ಮ ಕಾರ್ಯಕರ್ತರ ಮೇಲೆ ಎಷ್ಟು ಗೂಂಡಾಗಿರಿ ಕೇಸ್ ಹಾಕಿದ್ದೀರಿ ......

(ಗೊಂದಲ)

ಅಧ್ಯಕ್ಷರು : ಮಾನ್ಯ ನೆಹರೂ ಓಲೇಕಾರ್ ಕುಳಿತುಕೊಳ್ಳಿ, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಾನ್ಯ ರಮಾನಾಥ ರೈರವರು ಬಹಳ senior member. ಅವರು ಐದು ಸಾರಿ ಗೆದ್ದಿದ್ದಾರೆ. ಅವರು ಅವರ ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲವೊಂದು ಮಾತುಗಳನ್ನು ಹೇಳುತ್ತಿದ್ದರು. ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರಿಗೂ ಇದಕ್ಕೂ ಏನೂ ಸಂಬಂಧವಿಲ್ಲ. ಹಾಗೆಯೇ ಇದಕ್ಕೂ ಮಾನ್ಯ ಶೋಭ ಕರಂದ್ಲಾಜೆಯವರಿಗೂ ಸಹ ಸಂಬಂಧವಿಲ್ಲ. ಅವರು ಬೆಂಗಳೂರಿನಲ್ಲಿ ಎಂ.ಎಲ್.ಎ. ಆಗಿದ್ದಾರೆ.

ಕುಮಾರಿ ಶೋಭಾ ಕರಂದ್ಲಾಜೆ : ನಾನು ಬೆಂಗಳೂರಿನ ಎಂ.ಎಲ್.ಎ. ಆಗಿರಬಹುದು, ಆದರೆ ನಾನು ಕೇವಲ ಬೆಂಗಳೂರು ಬಗ್ಗೆ ಮಾತ್ರವೇ ಕೇಳಬೇಕೇ? ಇಡೀ ರಾಜ್ಯದ ಬಗ್ಗೆ ಕೇಳುವುದು ಬೇಡವೇ?

ಶ್ರೀ ಸಿದ್ದರಾಮಯ್ಯ : ಆಯಿತು ಬಿಡಿ. ನೀವು ಮಂಗಳೂರಿನವರು.

ಕುಮಾರಿ ಶೋಭಾ ಕರಂದ್ಲಾಜೆ : ಏಕೆ ಬೆಂಗಳೂರು, ಮಂಗಳೂರು ಎಂದು ಹೇಳುತ್ತೀರಿ. ಇಡೀ ರಾಜ್ಯದವರು ಎಂದು ಹೇಳಿ.

ಶ್ರೀ ಸಿದ್ಧರಾಮಯ್ಯ : ನಾವೂ ರಾಜ್ಯದವರೇ, ನೀವೂ ರಾಜ್ಯದವರೇ. ಆದರೆ ನೀವು ಚುನಾಯಿತರಾಗಿರುವುದು ಬೆಂಗಳೂರಿನಲ್ಲಿ; ನಾನು ಚುನಾಯಿತನಾಗಿರುವುದು ಮೈಸೂರಿನಲ್ಲಿ. ನೀವು ಮಂಗಳೂರಿನಲ್ಲಿ ಚುನಾಯಿತರಾಗಿಲ್ಲ ಎಂಬುದು ನಿಜವಲ್ಲವೇ? ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಮಂತ್ರಿಗಳಾಗಿದ್ದಾರೆ. ಅವರ ಬಗ್ಗೆ ನಮಗೆಲ್ಲಾ ಗೌರವವಿದೆ. ಆದರೆ ಅವರು ಏಕೋ ಆ ಗೌರವವನ್ನು ಉಳಿಸಿಕೊಳ್ಳಲಿಕ್ಕೆ ಇಷ್ಟ ಪಡುತ್ತಿಲ್ಲ. ಅವರನ್ನು ಏಕ ವಚನದಲ್ಲಿ 'ನೀನು ಏನು ಮಾಡಿದ್ದೀಯಾ? ಕುಳಿತುಕೋ' 'ನೀನು ಗೂಂಡಾಗಿರಿ ಮಾಡುತ್ತೀಯಾ? ಕುಳಿತುಕೋ' ಎಂದು ಹೇಳುತ್ತಿದ್ದಾರೆ. ಮಂತ್ರಿಗಳು ಏಕೆ ಈ ರೀತಿ ಮಾತನಾಡುತ್ತಿದ್ದಾರೆ? ಅವರು ಹೇಳಿದ್ದು ಆಡು ಭಾಷೆ ಎನ್ನುವುದಾದರೆ, ನಾನೂ ಸಹ 'ಏ ಕುಳಿತು ಕೊಳ್ಳಲೋ' ಎಂದು ಬಿಟ್ಟರೆ, ಅದು ಆಡು ಭಾಷೆಯಾಗುತ್ತದೆಯೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ತಾವು ಅವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಏಕ ವಚನದಲ್ಲಿ 'ಕುಳಿತುಕೊಳ್ಳಿ' ಎಂದು ಸಂಬೋಧನೆ ಮಾಡಲಿಲ್ಲವೇ?

ಶ್ರೀ ಸಿದ್ಧರಾಮಯ್ಯ : 'ಕುಳಿತುಕೊಳ್ಳಿ' ಎನ್ನುವುದು singular ಆಗುತ್ತದೆಯೇ? 'ಕುಳಿತುಕೊಳ್ಳಿ' ಎನ್ನುವುದು ಬಹುವಚನವಾಗುತ್ತದೆ. ಅದು ಗೌರವಯುತವಾಗಿ ಮಾತನಾಡುವ ಪದವಾಗಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅದು ಪಾರ್ಲಿಮೆಂಟರಿ ಪದವೇ?

(ಗೊಂದಲ)

ಅಧ್ಯಕ್ಷರು : ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : 'ಕುಳಿತುಕೊಳ್ಳಿ' ಎನ್ನುವುದು un-parliamentary ಪದ ಎಂದು ಮಾನ್ಯ ಅಧ್ಯಕ್ಷರು ಹೇಳಿದರೆ, ನಾನು ಅದಕ್ಕೆ ಕ್ಷಮೆ ಕೇಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : UN-parliamentary ಆಗಿದ್ದರೆ ಅದನ್ನು ಕಡತದಿಂದ ತೆಗೆದು ಹಾಕಲಿ.

ಶ್ರೀ ಸಿದ್ಧರಾಮಯ್ಯ : 'ಕುಳಿತುಕೊಳ್ಳಯ್ಯ' ಎಂದು ಹೇಳುವುದು Parliamentary ಪದ ಆಗುವುದಿಲ್ಲವೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : 'ಕುಳಿತುಕೊಳ್ಳಯ್ಯ' ಎಂದು ನಾನು ಹೇಳಿಲ್ಲ.

(ಗೊಂದಲ)

ಅಧ್ಯಕ್ಷರು : ಅದು ಕಡತಕ್ಕೆ ಹೋಗಿಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅವರು ಏನೇನು ಮಾತನಾಡಿದ್ದಾರೆ, ಯಾವ ರೀತಿ ಮಾತನಾಡಿದ್ದಾರೆ ಎಂಬುದನ್ನು ಕಡತ ತರಿಸಿ ನೋಡಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನೀವು ಸರ್ಕಾರ ನಡೆಸತಕ್ಕವರು, ನೀವು ಬಹಳ ಜವಾಬ್ದಾರಿಯಿಂದ ಮಾತನಾಡಬೇಕು. ಅವರು un-parliamentary ಪದ ಮಾತನಾಡಿದ್ದರೆ, ಅದನ್ನು ಕಡತದಿಂದ ತೆಗೆಸಿ ಹಾಕೋಣ. ಬೇಕಾದರೆ ಅವರ ಕಡೆಯಿಂದ ಕ್ಷಮೆ ಕೇಳಿಸೋಣ.

(ಗೊಂದಲ)

ಅಧ್ಯಕ್ಷರು : ಆಗಲೇ ಏನೇನು ಮಾತನಾಡಿದ್ದಾರೆ, ಅದು ಯಾವುದೂ ಸಹ ಕಡತಕ್ಕೆ ಹೋಗಿಲ್ಲ. ಈ ವಿಷಯವನ್ನು ಇಲ್ಲಿಗೇ ಮುಕ್ತಾಯ ಮಾಡೋಣ.

ಶ್ರೀ ಸಿದ್ಧರಾಮಯ್ಯ : ನೀವು warn ಮಾಡಬೇಕು.

ಅಧ್ಯಕ್ಷರು : ನಾನು ಈಗಾಗಲೇ ಹೇಳಿದ್ದೇನೆ. ಮತ್ತೆ ಮತ್ತೆ ಹೇಳುವ ಅಗತ್ಯವಿಲ್ಲ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಈಗ ವಿತ್ತೀಯ ಕಾರ್ಯಕಲಾಪಗಳು.

ಶ್ರೀ ಎಸ್. ಸುರೇಶ್‌ಕುಮಾರ್ : ನಾವು ವಿತ್ತೀಯ ಕಾರ್ಯಕಲಾಪ ಗಳಿಗೆ ಹೋಗುವುದಕ್ಕಿಂತ ಮುಂಚೆ ಒಂದು ಮಾತನ್ನು ಹೇಳಬಯಸುತ್ತೇನೆ. Agricultura University ದು vacuum Create ಆಗುತ್ತದೆ...

ಶ್ರೀ ಟಿ.ಬಿ.ಜಯಚಂದ್ರ : ಆ ಬಿಲ್ ಬಗ್ಗೆ ಆಮೇಲೆ ಚರ್ಚೆ ಮಾಡೋಣ. ಈಗ ಯಾವುದಾದರೂ ಬಿಲ್ ಹೊಸದಾಗಿ ಇಂಟ್ರಡಕ್ಷನ್ ಮಾಡುವುದಿದ್ದರೆ ಮಾಡಿ.

ಶ್ರೀ ಸಿದ್ಧರಾಮಯ್ಯ : ಯಾವ್ಯಾವುದು ಮಂಡಿಸುವುದಿದೆ, ಅದನ್ನೆಲ್ಲಾ ಮಂಡಿಸಿಬಿಡಿ.

ಶ್ರೀ ಎಸ್. ಸುರೇಶ್‌ಕುಮಾರ್ : ಆಯಿತು, ಬಿಲ್‌ಗಳನ್ನು ಮಂಡಿಸುತ್ತೇವೆ. ಮಾನ್ಯ ಬೆಲ್ಲದ್‌ರವರು ನಮ್ಮ ಬಿಲ್ ಮಂಡಿಸುತ್ತಾರೋ, ಇಲ್ಲವೋ ಎಂದು ನನ್ನ ಕಡೆಗೇ ನೋಡುತ್ತಿದ್ದಾರೆ.

5. ಶಾಸನ ರಚನೆ :

(ಅ) ವಿಧೇಯಕಗಳನ್ನು ಮಂಡಿಸುವುದು

(i) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2010 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು & ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2010 ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು & ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ III

(ii) ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ವಿಧೇಯಕ, 2010 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 2010ರ ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ IV

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಬಜೆಟ್ ಅಧಿವೇಶನವನ್ನು ಕರೆದು ಬಜೆಟ್ ಮೇಲೆ ಮಾತನಾಡುವುದಕ್ಕೆ ಹೆಚ್ಚು ಅವಕಾಶಗಳನ್ನು ಕೊಡಬೇಕು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಸಮಯವನ್ನು ಬೇರೆ ಬೇರೆ ವಿಷಯಗಳೇ ತಿಂದುಹಾಕುತ್ತಿದ್ದಾವೆ.

ಅಧ್ಯಕ್ಷರು : ಆಯಿತು, ಒಂದು ಪ್ರಕಟಣೆ, ಶ್ರೀ ಬಿ.ಎಸ್. ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಚಿವರುಗಳ ಹಾಗೂ ಶಾಸಕರುಗಳ ಗೌರವಾರ್ಥ ಈ ದಿನ ಮಧ್ಯಾಹ್ನ 1.30 ಗಂಟೆಗೆ, ವಿಧಾನಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ಏರ್ಪಡಿಸಿರುವ ಭೋಜನ ಕೂಟಕ್ಕೆ ತಮ್ಮೆಲ್ಲರನ್ನು ಆಹ್ವಾನಿಸಿರುತ್ತಾರೆ, ತಾವೆಲ್ಲರೂ ಭಾಗವಹಿಸಬೇಕೆಂದು ಈ ಮೂಲಕ ಕೋರಿದೆ. ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮಧ್ಯಾಹ್ನ 1 ಗಂಟೆ 22 ನಿಮಿಷಕ್ಕೆ ಮುಂದೂಡಲಾಯಿತು)

(ಸದನವು ಮತ್ತೆ ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರಾದ ಶ್ರೀ ಕೆ.ಜಿ.ಬೋಪಯ್ಯನವರು ಉಪಸ್ಥಿತರಿದ್ದರು)

O.17 F-13

ಅಧ್ಯಕ್ಷರು : ಈಗ ವಿಧೇಯಕವನ್ನು ಪುನರ್ ಪರ್ಯಾಲೋಚಿಸುವ ಬಗ್ಗೆ ತೆಗೆದುಕೊಳ್ಳೋಣ. ಮಾನ್ಯ ಕೃಷಿ ಸಚಿವರು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಸಭಾಧ್ಯಕ್ಷರಾದ ತಾವು ಸದನಕ್ಕೆ ಬಂದಮೇಲೂ ಕೂಡ ಇನ್ನೂ ಎದುರುಗಡೆ ಕುರ್ಚಿಗಳೂ ಮಾತ್ರ ಹಾಗೆಯೇ ಇದೆ.

ಶ್ರೀ ಜನಾರ್ಧನ ರೆಡ್ಡಿ : ಎರಡೂ ಕಡೆಯಲ್ಲಿಯೂ ಹಾಗೆಯೇ ಇದೆ.

ಶ್ರೀ ಟಿ.ಬಿ. ಜಯಚಂದ್ರ : ನಾನಿದ್ದೇನಲ್ಲ.

ಶ್ರೀ ಡಿ.ಎನ್. ಜೀವರಾಜ್ (ಮುಖ್ಯ ಸಚೇತಕರು) : ಮಾನ್ಯ ಉದಾಸಿಯವರು ಬರುತ್ತಿದ್ದಾರೆ.

ಅಧ್ಯಕ್ಷರು : ಆದರೆ ಇದು ಒಳ್ಳೆಯ ಲಕ್ಷಣವಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನನಗನ್ನಿಸುತ್ತದೆ ಊಟವೇನಾದರೂ ಅವರಿಗೆ ಜಾಸ್ತಿಯಾಯಿತೇನೋ ಎಂದು.

ಅಧ್ಯಕ್ಷರು : ಈಗ ವಿಧೆಯಕವನ್ನು ಪುನರ್ ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು. ಮೊದಲನೆಯದಾಗಿ ಕೃಷಿ ವಿಜ್ಞಾನ ವಿದ್ಯಾಲಯ ವಿಧೇಯಕ 2009 ಅನ್ನು ತೆಗೆದು ಕೊಳ್ಳೋಣ. ಕೃಷಿ ಸಚಿವರು ಮಂಡಿಸಬೇಕು. ಮೊದಲು ಹೇಗೆ ಪಾಸ್ ಆಗಿತ್ತು, ತದನಂತರ ರಾಜ್ಯಪಾಲರು ಯಾವ ಅಂಶದ ಮೇಲೆ ಅದನ್ನು ವಾಪಸ್ ಕಳುಹಿಸಿದ್ದಾರೆ ಎಂಬ ಬಗ್ಗೆ ಮಾತ್ರ ಸದನಕ್ಕೆ ತಿಳಿಸಿದರೆ ಸಾಕು.

ಆ) ವಿಧೇಯಕಗಳನ್ನು ಪುನರ್ ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

(I) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ, 2009 ಪುನರ್ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ.ಎಸ್.ರವೀಂದ್ರನಾಥ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ತಾವು ಆದೇಶವನ್ನು ಕೊಟ್ಟಿರಿ. ಮಾನ್ಯ ಮಂತ್ರಿಗಳು ಯಾವ ಕಾರಣಕ್ಕೋಸ್ಕರ ಮರು ಪರಿಶೀಲನೆಗೆ ವಿಧೇಯಕ ಈ ಸಭೆಯ ಮುಂದೆ ಬಂದಿದೆ ಎಂಬುವುದಕ್ಕೆ ಮಾನ್ಯ ಸಚಿವರು ಉತ್ತರವನ್ನು ಈ ಸದನದಲ್ಲಿ ಹೇಳಬೇಕಾಗಿತ್ತು. ಬಹುಶಃ ತಾವು ಕೊಟ್ಟಿರತಕ್ಕಂಥ ಬಿಲ್‌ನಲ್ಲಿ ರಾಜ್ಯಪಾಲರ ಒಕ್ಕಣೆ ಏನಿದೆ ಎನ್ನತಕ್ಕಂಥದ್ದನ್ನು ನೋಡಿದರೆ ಬಹುಶಃ ಅದನ್ನು ನೀವು ಓದಿದ್ದೀರಿ, ಅದು ನಿಮಗೂ ಅರ್ಥವಾಗಿರಬಹುದು. ಅದನ್ನು ಓದಿದವರಿಗೆ ಮಾತ್ರ ಅರ್ಥವಾಗಿರುತ್ತದೆ. ಪ್ರಜಾಪ್ರಭುತ್ವ ಎನ್ನತಕ್ಕಂಥದ್ದನ್ನು ಹರಾಜು ಹಾಕಿದ್ದಾರೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನವಿಲ್ಲ. ಬಹುಶಃ 2008ರ ನವೆಂಬರ್‌ನಲ್ಲಿ ಇಲ್ಲಿ ತಂದಂಥ ಮಸೂದೆ ಇದುವರೆವಿಗೆ ಇಡೀ ರಾಜ್ಯದಲ್ಲಿ ಯಾವುದೇ ರೀತಿಯಾದಂಥ ಒಂದು ಕಾನೂನು ಇಲ್ಲ. ಏಕೆ ಈ ರೀತಿಯಾಯಿತು? ಯಾವ ಕಾರಣಕ್ಕೋಸ್ಕರ ತಂದಿರಿ? 46 ವರ್ಷಗಳಿಂದ ಏನು ಕೃಷಿ ವಿಶ್ವವಿದ್ಯಾಲಯಕ್ಕೆ ಒಂದು ಮಸೂದೆ ಇತ್ತೋ ಆ ಮಸೂದೆಯನ್ನು ಯಾರೂ ಕೂಡ ಟಚ್ ಮಾಡುವಂತಿರಲಿಲ್ಲ. ಅಷ್ಟು ಸಮಗ್ರವಾಗಿರತಕ್ಕಂಥ ಮಸೂದೆ ಅದಾಗಿತ್ತು. ನಾನು ಒಪ್ಪುತ್ತೇನೆ, ICAR Model Act ಪ್ರಕಾರ ಒಂದು ಬದಲಾವಣೆಯನ್ನು ಮಾಡಬೇಕೆಂದು ಹೇಳಿ ಹೇಳಿದಿರಿ. ICAR Model Act ಅನ್ನು ಎಷ್ಟು ರಾಜ್ಯಗಳು adopt ಮಾಡಿಕೊಂಡಿವೆ? ಅದನ್ನು adopt ಮಾಡಿಕೊಳ್ಳುವು ದಾದರೆ ರಾಜ್ಯಕ್ಕೆ ಏನಾದರೂ ಲಾಭವಾಗುತ್ತದೆ ಎನ್ನುವುದಾದರೆ ನಾನೂ ಒಪ್ಪುತ್ತೇನೆ. ನಾನಿದ್ದಾಗಲೂ ಕೂಡ ಇದನ್ನೇ ಮಾತನಾಡುತ್ತಿದ್ದೆವು. ಅದನ್ನು adopt ಮಾಡಿಕೊಂಡರೆ ಹೆಚ್ಚು ಹಣ ಬರುತ್ತದೆಂದು. ಆದರೆ ಆಮೇಲೆ ನನಗೆ ಗೊತ್ತಾಯಿತು. ಹಣ ಬರುತ್ತದೆ ಎನ್ನುವುದಕ್ಕಿಂತ ಹೆಚ್ಚಾಗಿ ಅಲ್ಲಿ ಅಧಿಕಾರವನ್ನು ಚಲಾಯಿಸತಕ್ಕಂಥವರು ತಮಗೆ ಬೇಕಾದ ಹಾಗೆ ಅಧಿಕಾರವನ್ನು ಸೃಷ್ಟಿಸಿಕೊಳ್ಳಬಹುದು ಎನ್ನತಕ್ಕಂಥ ರೀತಿಯಲ್ಲಿ ಚಿಂತನೆ ಹೆಚ್ಚು ಮಾಡಿದರು ಎನ್ನತಕ್ಕಂಥದ್ದು ಒಂದು ಮುಖ್ಯವಾದ ವಿಚಾರ. ಈಗ ಯಾವುದೇ ರೀತಿಯಾದಂಥ ಕಾನೂನಿಲ್ಲ. ಇದರ ಜೊತೆಗೆ ಆಡಳಿತ ಮಂಡಳಿಗಳು ಕೂಡ ಯಾವ ವಿಶ್ವವಿದ್ಯಾಲಯ ಗಳಲ್ಲಿಯೂ ಕಳೆದ ಒಂದೂವರೆ ವರ್ಷದಿಂದ ಕೆಲಸವನ್ನು ಮಾಡುತ್ತಿಲ್ಲ. ಬಹುಶಃ ಅರವತ್ತು ವರ್ಷದ ಇತಿಹಾಸದಲ್ಲಿ ಇಂಥ ಒಂದು ಶೂನ್ಯ ಉಂಟಾಗಿರತಕ್ಕಂಥದ್ದು ಬಹುಶಃ ಅದು ಕರ್ನಾಟಕದಲ್ಲಿ, ಅದೂ ಈ

ಕ್ಷೇತ್ರದಲ್ಲಿ, ತಮ್ಮ ಅವಧಿಯಲ್ಲಿ ಈ ರೀತಿಯಾಗಿದೆಯೆಂದು ದುಃಖದಿಂದ ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ರೈತರ ಪರ, ರೈತರಿಗೋಸ್ಕರ, ರೈತರಿಂದ ತಾವು ಇರುವುದಾಗಿ ಏನು ಘೋಷಣೆಗಳನ್ನು ಹೇಳಿ, ಒಂದು ರೀತಿಯಲ್ಲಿ ರೈತರು ಎಂದರೆ ಯಡಿಯೂರಪ್ಪನವರನ್ನು ಬಿಟ್ಟರೆ ಅವರ ಜಾಗಕ್ಕೆ ಬೇರೆ ಯಾರೂ ಕೂಡ ಬರುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಮಟ್ಟಕ್ಕೆ ಪ್ರಚಾರ ಕೊಟ್ಟು ಮಾಡಿದಂಥ ಮುಖ್ಯಮಂತ್ರಿಗಳ ಅಧಿಕಾರದ ಅವಧಿ ಯಲ್ಲಿಯೇ ಈ ತರಹದ್ದು ಆಗುತ್ತದೆ ಎಂದು ಹೇಳಿದರೆ ಇದಕ್ಕೆ ನಾವು ಏನು ಹೇಳಬೇಕೋ ನನಗೆ ಅರ್ಥವಾಗುತ್ತಿಲ್ಲ. ಈಗಾಗಲೇ ಬಹುತೇಕ ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ಕೃಷಿ ವಿಶ್ವವಿದ್ಯಾಲಯಗಳ ಕಾಯಿದೆಯೇ ಇಲ್ಲವೆಂದು ಬಂದಿದೆ. ಇದರ ಬಗ್ಗೆ ಉದಾಸೀನ ಮಾಡತಕ್ಕಂಥದ್ದು ಸಲ್ಲದು. ಈ ರೀತಿಯಲ್ಲಿ ನಾನಾ ಹೇಳಿಕೆಗಳು ಪತ್ರಿಕೆಗಳಲ್ಲಿ ಬಂದಿದೆ. ಇವೆಲ್ಲಾ ಬಂದಾಗಿಯೂ ಕೂಡ ರಾಜ್ಯಪಾಲರಿಗೆ ಕಳುಹಿಸಿದಂಥ ವಿಧೇಯಕ ಏಕೆ ವಾಪಸ್ ಬಂತು ಎಂದು ಹೇಳಲೇ ಇಲ್ಲ.

ಶ್ರೀ ಎ.ಎಸ್. ರವೀಂದ್ರನಾಥ್ (ಕೃಷಿ ಸಚಿವರು) : ಏಕೆ ವಾಪಸ್ ಬಂತು ಎಂಬ ಬಗ್ಗೆ ಈಗ ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಹೇಳಿ.

ಶ್ರೀ ಎ.ಎಸ್. ರವೀಂಧ್ರನಾಥ್ : ಮಾನ್ಯ ಅಧ್ಯಕ್ಷರೆ, ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳ ವಿಧೇಯಕ 2009 ಕ್ಕೆ ಕರ್ನಾಟಕ ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ ಮತ್ತು ಭಾರತ ಸಂವಿಧಾನದ 200 ನೇ ಅನುಚ್ಛೇದದ ಅನ್ವಯ ಸಂದೇಶದೊಂದಿಗೆ ಪುನರ್ ಪರಿಗಣನೆಗೆ ಹಿಂತಿರುಗಿಸಿದಂತೆ ನಾನು ಸದನದ ಅನುಮೋದನೆಗೆ ಮಂಡಿಸುತ್ತೇನೆ. ಈ ಹಿಂದೆ ಈ ವಿಷಯದಲ್ಲಿ ಉಭಯ ಸದನಗಳಲ್ಲಿ ಕೂಲಂಕುಷವಾಗಿ ಚರ್ಚೆಯಾಗಿದೆ. ಉಭಯ ಸದನಗಳು ಒಪ್ಪಿಗೆ ನೀಡಿದ ರೂಪದಲ್ಲಿಯೇ ಈ ವಿಧೇಯಕವನ್ನು ಮಂಡಿಸುತ್ತಿದ್ದೇನೆ. ಮಾನ್ಯ ಘನತೆವೆತ್ತ ರಾಜ್ಯಪಾಲರು ತಮ್ಮ ಸಂದೇಶದಲ್ಲಿ ವಿಧೇಯಕ 27 ರ ವಿವಿಧ ಉಪ ಪ್ರಕರಣಗಳ ಕುರಿತು ತಮ್ಮ ಅಭಿಪ್ರಾಯವನ್ನು ನೀಡಿದ್ದಾರೆ. ಮಾನ್ಯ ಘನತೆವೆತ್ತ ರಾಜ್ಯಪಾಲರು ಪ್ರಸ್ತಾಪಿಸಿರುವ ಎರಡು ಪ್ರಮುಖ ಅಂಶಗಳೆಂದರೆ ಶೋಧನಾ ಸಮಿತಿಯ ರಚನೆಯ ಬಗ್ಗೆ ಮತ್ತು ಕುಲಪತಿಯವರ ನೇಮಕಾತಿಯ ಬಗ್ಗೆ. ಈ ಎರಡು ವಿಷಯಗಳಲ್ಲಿ ವಿಧೇಯಕದಲ್ಲಿ ಅಳವಡಿಸಿರುವ ಪದ್ಧತಿ ಮತ್ತು ಮಾನ್ಯ ಘನತೆವೆತ್ತ ರಾಜ್ಯಪಾಲರು ಸೂಚಿಸಿರುವ ರೀತಿಯಲ್ಲಿ ಹೆಚ್ಚಿನ

ಮೂಲಭೂತ ಬದಲಾವಣೆಗಳು ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರವು ವಿವರವಾಗಿ ಪರಿಶೀಲನೆಯನ್ನು ಮಾಡಿ ಒಂದು ತೀರ್ಮಾನಕ್ಕೆ ಬಂದಿರುವಂತೆ ಸದರಿ ವಿಧೇಯಕದ ಈ ಪ್ರಕರಣ ಮೊದಲು ಮೂಲವಾಗಿ ಪ್ರಸ್ತಾಪಿಸಿರುವ ರೀತಿಯಲ್ಲಿಯೇ ಅಂಗೀಕರಿಸಬೇಕೆಂದು ನಾನು ಸದನದಲ್ಲಿ ಕೋರುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ತಾವು ಹೇಳಿದಿರಿ, ಈ ಹಿಂದೆ ಯಾವ ರೀತಿಯಲ್ಲಿ ಈ ವಿಷಯದ ಬಗ್ಗೆ ಸದನದಲ್ಲಿ ಚರ್ಚೆಯಾಯಿತೋ ಅದೇ ರೀತಿಯಲ್ಲಿಯೇ ವಿಧೇಯಕವನ್ನು ನಾವು ರಾಜ್ಯಪಾಲರಿಗೆ ಕಳುಹಿಸಿದ್ದೇವೆಂದು. ದಯಮಾಡಿ ನಿಮ್ಮ ಅಧಿಕಾರಿಗಳನ್ನು ಕರೆದು ನೀವು ಚರ್ಚೆ ಮಾಡಿ. ಇಲ್ಲಿ ಏನು ಚರ್ಚೆಯಾಯಿತೋ, ಅದಕ್ಕೆ ಪೂರಕವಾಗಿರತಕ್ಕಂಥ ಒಂದು ಬದಲಾವಣೆಯನ್ನೂ ಮಾಡಲಿಲ್ಲ. ನಾನು ಒಂದೊಂದನ್ನೂ ಕೂಡ ಯಾವುದ್ಯಾವುದನ್ನು ಬದಲಾವಣೆ ಮಾಡಿದ್ದೀರಿ, ಯಾವುದನ್ನು ಬದಲಾವಣೆ ಮಾಡಿಲ್ಲವೆಂದು ಬೇಕಾದರೆ ನಾನು ನಿರ್ದಿಷ್ಟವಾಗಿ ಹೇಳಬಲ್ಲೆ. ಬಹುಶಃ ಅದನ್ನು ಈಗ ಹೇಳತಕ್ಕಂಥ ಅವಶ್ಯಕತೆ ಇಲ್ಲವೆಂದು ಹೇಳುತ್ತಿಲ್ಲ. ನೀವು ರಾಜ್ಯಪಾಲರಿಗೆ ಯಾವ ಒಕ್ಕಣೆಯನ್ನು ಹಾಕಿ ಕಳುಹಿಸಿದ್ದೀರೋ ಅಷ್ಟಕ್ಕೇ ಸೀಮಿತ ಮಾಡತಕ್ಕಂಥದ್ದರ ಜೊತೆಗೆ ಇಲ್ಲಿ ಈ ಸದನದಲ್ಲಿ ಬಹಳಷ್ಟು ಜನ ತಮ್ಮದೇ ಆದಂಥ ಅಭಿಪ್ರಾಯಗಳನ್ನು ಹಂಚಿಕೊಂಡಿರತಕ್ಕಂಥ ಹಿನ್ನೆಲೆಯಲ್ಲಿ ಎಲ್ಲರ ಅಭಿಪ್ರಾಯಗಳನ್ನೂ ಕೂಡ ಕ್ರೋಢೀಕರಿಸಿ ರಾಜ್ಯದ ಕೃಷಿಕರ ಹಿತದೃಷ್ಟಿಯಿಂದ, ಅವನ ಸಂಶೋಧನೆಯ ಹಿತದೃಷ್ಟಿಯಿಂದ, ಅವನ ಎಕ್ಸ್ ಟೆನ್‌ಶನ್ ದೃಷ್ಟಿಯಿಂದ, ಟೀಚಿಂಗ್ ದೃಷ್ಟಿಯಿಂದ ನೀವು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಅದು ಆಗಿಲ್ಲ ಎನ್ನತಕ್ಕಂಥದ್ದು.. .

ಅಧ್ಯಕ್ಷರು : ಜಯಚಂದ್ರರವರೆ, ಒಂದು ನಿಮಿಷ. ಈಗ Governor reference 105 ರಲ್ಲಿ, ಅವರು ಯಾವ point observation ಮಾಡಿ ವಿಧೇಯಕವನ್ನು ವಾಪಸ್ ಕಳುಹಿಸಿದ್ದಾರೆಯೋ ಅದರ ಬಗ್ಗೆ, ಅಷ್ಟಕ್ಕೆ ಸೀಮಿತವಾಗಿ ಹೇಳಿ. ತಾವು 105ರಲ್ಲಿ ಏನು ಹೇಳಿದೆ ನೋಡಿ.

ಶ್ರೀ ಟಿ.ಬಿ.ಜಯಚಂದ್ರ : ನಾನು 105 ರಲ್ಲಿ ಏನು ಹೇಳಲಾಗಿದೆ ಎಂಬುದನ್ನು ನೋಡಿದೆ.

ಅಧ್ಯಕ್ಷರು : 105 ರಲ್ಲಿ ಏನು ಹೇಳಲಾಗಿದೆಯೋ ಅದನ್ನು ಬಿಟ್ಟು ರೂಲ್ಸ್ ಬಿಟ್ಟು ಮಾಡಬೇಕೆಂದು ಹೇಳಿದರೆ ಹೇಗೆ ಹೇಳಿ?

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಅದನ್ನೇ ಹೇಳುವುದಕ್ಕೆ ಹೊರಟಿರುವುದು. ರಾಜ್ಯಪಾಲರು observation ಮಾಡಿ ಏನು ವಿಧೇಯಕವನ್ನು ವಾಪಸ್ ಕಳುಹಿಸಿದ್ದಾರೋ ಇವರು ಅಷ್ಟಕ್ಕೇ ಸೀಮಿತ ವಾಗಿಲ್ಲವೆಂದೇ ನಾನು ಹೇಳುತ್ತಿರುವುದು. ನನ್ನ ವಾದ ಇರತಕ್ಕಂಥದ್ದು. . .

Mr. SPEAKER : At this stage, can we go beyond that?

SRI T.B.JAYACHANDRA : Yes.

ಅಧ್ಯಕ್ಷರು : How? ನಮ್ಮ ರೂಲ್ಸ್ ಪ್ರಕಾರ ಎಲ್ಲಿದೆ?

ಶ್ರೀ ಟಿ.ಬಿ. ಜಯಚಂದ್ರ : ಇದು Act ಆಗಿಲ್ಲ. ಪಾಸ್ ಆದಮೇಲೆ ಆಗುವುದು.

ಅಧ್ಯಕ್ಷರು : ಈಗ ಇಲ್ಲಿ ಏನು ಹೇಳಿದೆಯೆಂದರೆ, ವಿಧಾನ ಮಂಡಲದ ಎರಡು ಸದನಗಳು ಅನುಮೋದಿಸಿದ ವಿಧೇಯಕವನ್ನು ರಾಷ್ಟ್ರಪತಿಯವರು ಅಥವಾ ರಾಜ್ಯಪಾಲರು ಪುನರ್ ಪರ್ಯಾಲೋಚ ನೆಗಾಗಿ ಹಿಂತಿರುಗಿಸಿದರೆ, ಪರ್ಯಾಲೋಚಿಸಲು ಸೂಚಿಸಿ ಕಳುಹಿಸಿದ ಅಂಶವನ್ನು ಅಥವಾ ಅಂಶಗಳನ್ನು ಅಧ್ಯಕ್ಷರು ಸದನದ ಮುಂದೆ ಮಂಡಿಸತಕ್ಕದ್ದು, ಮತ್ತು ಅವನ್ನು ವಿಧೇಯಕದ ತಿದ್ದುಪಡಿಗಳನ್ನು ಕುರಿತು ಚರ್ಚೆ ನಡೆಸಿ ಅಭಿಮತ ತಿಳಿಸುವಂತೆ ಅಥವಾ ಸದನವು ಅದನ್ನು ಪರ್ಯಾಲೋಚಿಸಲು ಅತ್ಯಂತ ಅನುಕೂಲವಾದ ರೀತಿ ಎಂದು ಸಭಾಪತಿ ಯವರು ಪರಿಗಣಿಸಬಹುದಾದ ರೀತಿಯಲ್ಲಿ ಚರ್ಚೆಯ ಅಭಿಮತವನ್ನು ತಿಳಿಸತಕ್ಕದ್ದು. Only with regard to the Amendment, ಅವರದೇನು, he has made some referenence, ಅದರ ಮೇಲೆ Whether you can bring Amendment ಅಥವಾ ರಾಜ್ಯಪಾಲರ observations ಸರಿ ಅಥವಾ ತಪ್ಪು ಎಂದಷ್ಟನ್ನೇ ಮಾತ್ರ ಹೇಳಬೇಕು.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ಹೇಳುತ್ತೇನೆ. ಇದು ಪ್ರಾರಂಭದ ದಿನದಿಂದ ಇಲ್ಲಿಯವರೆವಿಗೂ ಕೂಡ ಗೊಂದಲ. ಒಂದಲ್ಲ ಒಂದು ರೀತಿಯಾದಂಥ ಗೊಂದಲ.

Mr. SPEAKER : That stage has passed.

ಶ್ರೀ ಟಿ.ಬಿ. ಜಯಚಂದ್ರ : ನಾನು ಅದನ್ನು ಒಪ್ಪುತ್ತೇನೆ. ರಾಜ್ಯಪಾಲರು ಯಾವ ವಿಷಯದಲ್ಲಿ ನಿರ್ದಿಷ್ಟವಾಗಿ ಹೇಳಿದ್ದಾರೋ ಅದಕ್ಕೆ ಪೂರಕವಾಗಿ ಹೇಳಬೇಕು ಎಂದು ಹೇಳತಕ್ಕಂಥದ್ದರ ಜೊತೆಗೆ ಸದನದಲ್ಲಿ ಇಲ್ಲಿ ಚರ್ಚೆಯಾ

ಯಿತಲ್ಲ, ಸದನದಲ್ಲಿ ಚರ್ಚೆಯಾಗಿದ್ದಂಥ ಅಂಶಗಳನ್ನೂ ಕೂಡ ಬಿಟ್ಟು ಮುಖ್ಯಮಂತ್ರಿಗಳು ಮತ್ತು ಏನು ಸಂಸದೀಯ ವ್ಯವಹಾರಗಳ ಸಚಿವರು ಅವತ್ತು ಅಗ್ರಿಕಲ್ಚರ್ ಮಿನಿಸ್ಟರ್‌ಗಳು ಹೇಳಿದಂಥವುಗಳನ್ನೂ ಕೂಡ ಬಿಟ್ಟು ಬೇರೆ ಬದಲಾವಣೆಗಳನ್ನು ಮಾಡಿದ್ದೀರಲ್ಲ.

ಶ್ರೀ ಎಸ್.ಎ. ರವೀಂದ್ರನಾಥ್ : ಯಾವುದೇ ಬದಲಾವಣೆಯನ್ನೂ ಮಾಡಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾವು ಇದನ್ನು ಈಗ ಚರ್ಚೆ ಮಾಡುವುದೇ ಬೇಡ. ದಯಮಾಡಿ Agriculture and Horticulture ಇವೆರಡರದ್ದೂ ಕೂಡ ಇವತ್ತು ರಾಜ್ಯಪಾಲರಿಂದ ತಿರಸ್ಕಾರವಾಗಿ ಬಂದಿದೆ. ನಾನು ಈಗ ಒಂದು ಸಲಹೆಯನ್ನು ಕೊಡುತ್ತೇನೆ. ಇವತ್ತು ನಾನಿರಬಹುದು ಅಥವಾ ಇನ್ನೊಬ್ಬರಿರಬಹುದು, ಆದರೆ ನಾವು pass ಮಾಡಿದಂಥ Act ನಿರಂತರವಾಗಿ ಇರಬೇಕಾಗುತ್ತದೆ. ರಾಜ್ಯದ ರೈತರ ಹಿತವನ್ನು ಕಾಪಾಡತಕ್ಕಂಥ ದೃಷ್ಟಿಯಲ್ಲಿ Act ಇರಬೇಕಾಗುತ್ತದೆ. ನಾನು ಇದ್ದಾಗ ಒಂದು Act ಇನ್ನೊಬ್ಬರಿದ್ದಾಗ ಇನ್ನೊಂದು ರೀತಿಯಾದಂಥ Act ಎಂದು ಮಾಡುವುದಕ್ಕೆ ಬರುವುದಿಲ್ಲ.

46 ವರ್ಷಗಳಿಂದ ನಾವು ತಂದಂತಹ old Act ನಲ್ಲಿ ಯಾರೂ ಕೂಡ ಆಕ್ಷೇಪಣೆ ಮಾಡುವಂತಹ ರೀತಿಯಲ್ಲಿ ಇರಲಿಲ್ಲ. ಅಲ್ಲಿಂದ wordings ಆಗಲಿ, Powers ಆಗಲಿ, exhibition ಬಗ್ಗೆಯಾಗಲಿ, ಯಾವುದರ ಬಗ್ಗೆ ಕೂಡ ಮಾತನಾಡುವಂಥದ್ದು ಅದರಲ್ಲಿ ಇರಲಿಲ್ಲ. ಆದರೆ ICAR Model Act ಎನ್ನುವ ಭ್ರಮೆ ನಿಮ್ಮ ತಲೆಗೆ ಏಕೆ ಹೋಯಿತೋ ನನಗೆ ಗೊತ್ತಿಲ್ಲ. ಇಡೀ ದೇಶಕ್ಕೆ ಒಂದು uniform Act ತರಬೇಕೆಂದು ಹೊರಟರು. ಅದರಲ್ಲಿ broader guidelines ಕೊಟ್ಟರು ಅಷ್ಟೇ. ಆ guidelines ನಾವು ಇದನ್ನೇ adopt ಮಾಡಿಕೊಳ್ಳುತ್ತೇವೆಂದು ಹೇಳಬಹುದಾಗಿತ್ತು. ಅದನ್ನು ಹೇಳಲಿಲ್ಲ, ಯಾರಿಗೋ ಅವಕಾಶ ಮಾಡಿಕೊಟ್ಟಿರಿ. ಅವರು ತಮಗೆ ಬೇಕಾದಂತಹ ರೀತಿಯಲ್ಲಿ ಬದಲಾವಣೆ ಮಾಡುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಈ ಹಿನ್ನೆಲೆಯೇ ಈ ಪರಿಸ್ಥಿತಿಗೆ ಕಾರಣವಾಯಿತು. ಅದಕ್ಕೋಸ್ಕರ ನಾನು ಏನು ಹೇಳುತ್ತೇನೆಂದರೆ, ಈಗ ನೀವು ಅಷ್ಟಕ್ಕೇ ಸೀಮಿತವಾಗದೇ, ಇನ್ನು ಬೇರೆ ಬೇರೆ ವಿಚಾರಗಳೆಲ್ಲ ಕೂಡ

ಇದರಲ್ಲಿ ಇದೆ. ಅದನ್ನೂ ಕೂಡ ನಾನು ಪ್ರಸ್ತಾಪ ಮಾಡುತ್ತೇನೆ. ನೀವು ಅದನ್ನು ಆದಷ್ಟು ಅಳವಡಿಸುವುದಕ್ಕೆ ಸಾಧ್ಯವಾದರೆ ಖಂಡಿತ ಕೂಡ ಅದು ರಾಜ್ಯದ ರೈತರ ಹಿತದೃಷ್ಟಿಯಿಂದ ಒಳ್ಳೆಯದು ಎನ್ನುವುದು ನನ್ನ ಸಲಹೆ. ನನ್ನ ಆಕ್ಷೇಪ ಇರತಕ್ಕಂಥಾದ್ದು, ಸದನದಲ್ಲಿ ಏನು ಚರ್ಚೆಯಾಯಿತು, ಏನು ಅಬಿಪ್ರಾಯ ಬಂತು, ಅದು ಇವತ್ತು ಈ ಮಸೂದೆಯಲ್ಲಿ ನಮೂದಾಗಿಲ್ಲ ಎನ್ನುವುದು ಮುಖ್ಯವಾದಂತಹ ವಿಚಾರ. ಹಾಗಾಗಿ ಇದು ಅಂತಿಮವಾಗಿಲ್ಲದಿರುವಂತಹ ಹಂತದಲ್ಲಿ ಇದೆಲ್ಲವನ್ನೂ ಕೂಡ ಸಮಗ್ರವಾಗಿ ಪರಿಶೀಲನೆ ಮಾಡುವುದಕ್ಕೆ ಸರ್ಕಾರಕ್ಕೆ ಒಂದು ಅವಕಾಶ ಇದೆ. ಯಾವುದೇ ಮಸೂದೆಯಾಗಿದ್ದರೂ ಇಷ್ಟೊಂದು ಒತ್ತು ಹೇಳುವಂತಹ ವಿಚಾರ ಇಲ್ಲ. ಇದರ ಬಗ್ಗೆ ಇಲ್ಲಿ ಸುಮಾರು ಮೂರು ಗಂಟೆಗಳ ಕಾಲ ಎಂದರೆ ರಾತ್ರಿ 12.00 ಗಂಟೆಯವರೆಗೂ ಚರ್ಚೆಯಾಗಿದೆ. ಅದಕ್ಕೆ ನಿಜವಾಗಲೂ ಒಂದು ಕಾಯಕಲ್ಪ ಮಾಡುವಂತಹ ರೀತಿಯಲ್ಲಿ ನೀವು ಮಸೂದೆಯನ್ನು ತರಲಿಲ್ಲವೆಂದರೆ ಪ್ರಯೋಜನವಿಲ್ಲದಂತಾಗುತ್ತದೆ. ಖಂಡಿತವಾಗಿ ಕೂಡ ಒಂದು ಅಪಚಾರಕ್ಕೆ ಗುರಿಯಾಗುತ್ತೀರಿ. ದಯಮಾಡಿ ಆ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೆಲವು ಸಲಹೆಗಳನ್ನು ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈಗ ವಿಶ್ವವಿದ್ಯಾನಿಲಯಗಳನ್ನು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಒಂದು ಬೋರ್ಡ್‌ನಲ್ಲಿ 40 ರಿಂದ 45 ಜನ ಇದ್ದಾರೆ. ಈಗ ಆ ಯೂನಿವರ್ಸಿಟಿಯವರು ನೀವು ಮಾಡಿದ ಮಸೂದೆ ಪ್ರಕಾರ ಒಂದು ಸಭೆ ನಡೆಸಬೇಕೆಂದರೆ ಒಂದು ಹಾಲ್ ಹುಡುಕ ಬೇಕಾಗುತ್ತದೆ. ಎಲ್ಲಾದರೂ ಉಂಟೇ? ನೀವು 40–45 ಜನರನ್ನು ಸಭೆಯಲ್ಲಿ ಕೂರಿಸಿಕೊಂಡು ತೀರ್ಮಾನ ಮಾಡುವುದಕ್ಕಾಗುತ್ತದೆಯೇ? ದಯಮಾಡಿ ನೀವು ಇದರ ಬಗ್ಗೆ ಯೋಚನೆ ಮಾಡಿ. ಆ ಸಂಖ್ಯೆಯ ಗಾತ್ರವನ್ನು ಕಡಿಮೆ ಮಾಡಬೇಕು. ಒಂದು ಕಡೆ University ಗಳನ್ನು ಜಾಸ್ತಿ ಮಾಡುತ್ತಿದ್ದೀರಿ. ಒಂದಲ್ಲ, ಆರು University ಗಳು ಆಗುತ್ತಿವೆ. ಕೃಷಿಗೆ ಒಂದು, ತೋಟಗಾರಿಕೆಗೆ ಒಂದು, ಮೀನಿಗೆ ಒಂದು, ಕುರಿಗೆ ಒಂದು, ಕೋಳಿಗೆ ಒಂದು ಎನ್ನುವ ಮಟ್ಟಕ್ಕೆ University ಗಳು ಬೆಳೆಯುತ್ತಿರುವಾಗ, ತಾವು ಅರ್ಥ ಮಾಡಿಕೊಳ್ಳಿ. ಸಮಗ್ರ ಕೃಷಿ ಎನ್ನುವುದಕ್ಕೆ ಒಂದು ತತ್ವ ಇದೆ. ಇವೆಲ್ಲವೂ ಕೂಡ ರೈತನಿಗೆ ಪೂರಕವಾಗಿ ಬದುಕಿನಲ್ಲಿ ಬರುವಂಥಾದ್ದು.

ಅದಕ್ಕೆ ನಮ್ಮ ನಮ್ಮ ಅನುಕೂಲಕ್ಕೋಸ್ಕರ, ಅಧಿಕಾರಿಗಳ ಅನುಕೂಲಕ್ಕೋಸ್ಕರ, Horticulture University, Veterinary University ಎಂದು ಈ ಎಲ್ಲಾ University ಗಳನ್ನು ದೂರ ದೂರ ಮಾಡಿಕೊಂಡು ಹೋಗಿ ಪರಿಸ್ಥಿತಿ ಏನಾಗಿದೆ ಎಂದರೆ ಒಂದಕ್ಕೊಂದು ತಾಳೆಯೇ ಇಲ್ಲ. ಸಂಶೋಧನೆ ವಿಚಾರದಲ್ಲಿ ಒಂದಕ್ಕೊಂದು ಸಂಬಂಧವಿಲ್ಲ ಎನ್ನುವಂತಹ ರೀತಿಯಲ್ಲಿ ಆಗಿದೆ. ಇವತ್ತು ವಿಶ್ವವಿದ್ಯಾಲಯಗಳನ್ನು ನಾಯಿ ಕೊಡೆಗಳಂತೆ ತಯಾರು ಮಾಡುತ್ತಿದ್ದೀರಲ್ಲ, ನಾಳೆ ಈ ಎಲ್ಲಾ University ಗಳಿಗೆ ಸೇರಿ ಇನ್ನೊಂದು ಕಾಯಿದೆ ತರತಕ್ಕಂಥ ಅನಿವಾರ್ಯತೆ ಬರುತ್ತದೆ. ದಯಮಾಡಿ ಅದಕ್ಕೆ ಅವಕಾಶ ಕೊಡಬೇಡಿ. ಇದರ ಮೂಲ ತತ್ವಕ್ಕೆ ಹೊಡೆತ ಬೀಳತಕ್ಕಂಥ ರೀತಿಯಲ್ಲಿ ಆಗುತ್ತದೆನ್ನುವ ಮಾತು ಇದೆ. ಇನ್ನೊಂದು ಮುಖ್ಯವಾಗಿ ಸಂಶೋಧನಾ ಪರಿಷತ್ತು, ವಿದ್ಯಾಪರಿಷತ್ತು, ವಿಸ್ತರಣಾ ಕ್ಷೇತ್ರಗಳಿಗೆ ಮತ್ತು ಶಿಕ್ಷಣ ಪರಿಷತ್ತಿಗೆ 45 ಜನ ಬರುತ್ತಾರೆಂದರೆ ಹೇಗೆ ನೀವು ಮೀಟಿಂಗ್ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಆ ಮೀಟಿಂಗ್ ನಲ್ಲಿ ಕೋರಂ ಇಲ್ಲವೆಂದರೆ ಸಭೆಯನ್ನು ಮುಂದಕ್ಕೆ ಹಾಕಬಹುದಂತೆ, ಆಮೇಲೆ ಕೋರಂ ಬೇಕಾಗಿಲ್ಲವಂತೆ, ಅವರೇ ಮಾಡಿಕೊಳ್ಳುತ್ತಾರಂತೆ, ಇದೆಲ್ಲ ಏನು? ಇದು ಸೊಸೈಟಿಗಿಂತ ಕಡೆಯಾಗಿ ಹೋಗಿದೆ.

M.R. SPEAKER : This aspect has already been discussed and agreed.

ಶ್ರೀ ಟಿ.ಬಿ. ಜಯಚಂದ್ರ : Discuss ಆಗಿದೆ. No, ಸುರೇಶ್ ಕುಮಾರ್ ರವರು ಹೇಳಿದ್ದಾರೆ.

M.R. SPEAKER : Rule 105 is very clear.

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ಹಿಂದೆ ರಾತ್ರಿವರೆಗೂ discussion ಆಗಿ Bill pass ಮಾಡಿ ಕಳುಹಿಸಿದೆವು, ಆಮೇಲೆ ಈ Bill ಮಾನ್ಯ ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿತ್ತು, ಆದರೆ ಅವರು ಕೆಲವು ಸ್ಪಷ್ಟೀಕರಣವನ್ನು ಕೇಳಿ ಆ Bill ವಾಪಸ್ಸು ಕಳುಹಿಸಿದ್ದಾರೆ. ಹಾಗಾಗಿ ಆ ಸ್ಪಷ್ಟೀಕರಣ ಕೇಳಿರುವಂತಹ ವಿಚಾರದಲ್ಲಿ discussion ಮಾಡುವುದಕ್ಕೆ ಅಡ್ಡಿಯಿಲ್ಲ.

MR. SPEAKER : We will follow certain ....

O.17 F – 14

ಶ್ರೀ ಟಿ.ಬಿ. ಜಯಚಂದ್ರ ; ಅದು ಸರಿ. ಆದರೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಈ ಕುರ್ಚಿಯಲ್ಲಿ ಕುಳಿತಂಥ ಸಂದರ್ಭದಲ್ಲಿ ಏನು ಚರ್ಚೆಯಾಗಿತ್ತು, ಅದು ಅಡಕವಾಗಿಲ್ಲವೆಂದು ಹೇಳುತ್ತಿದ್ದೇನೆ.

MR. SPEAKER : Whatever it may be.

ಶ್ರೀ ಟಿ.ಬಿ. ಜಯಚಂದ್ರ : ಅದು ಆಗಲಿಲ್ಲವಲ್ಲ, ಅದು ಜಗದೀಶ್ ಶೆಟ್ಟರ್‌ರವರಿಗೆ ಮಾಡಿದಂತಹ ಅವಮಾನ. ಅವರು ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಯನ್ನು ಈಗ ವಹಿಸಿಕೊಂಡಿದ್ದಾರೆ. ಜಗದೀಶ್‌ಶೆಟ್ಟರ್‌ರವರೇ, ಅದು ನಿಮಗೆ ಮಾಡಿದಂತಹ ಅಪಚಾರವಾಗುತ್ತದೆ. ನಿಮ್ಮ ಕಾಲದಲ್ಲಿ ಈ ರೀತಿಯಾಯಿತು ಎಂದು ಆಕ್ಷೇಪವನ್ನು ನಾವು ಎತ್ತಬಾರದು. ದಯಮಾಡಿ ಆ ಕಾರಣಕ್ಕೋಸ್ಕರ ಹೇಳುತ್ತಿರುವುದು. ಮಾನ್ಯ ರವೀಂದ್ರನಾಥ್‌ರವರೇ, ತಾವು ಇದನ್ನು prestige ಆಗಿ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಈಗಲೂ ಕೂಡ ಬದಲಾವಣೆ ಮಾಡುವುದಕ್ಕೆ ಸಾಧ್ಯತೆ ಇದೆ. ನಾನು ಒಂದು ಮಾತು ಹೇಳುತ್ತೇನೆ, ನೀವು ಬಹಳ ಒಳ್ಳೆಯ ಮನುಷ್ಯರು, ಅದೇ ಪಾಪ, ಈಗ ತೊಂದರೆಯಾಗಿರುವುದು. ನಿಮ್ಮನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಬಹಳ ಜನ ಕುಳಿತಿದ್ದಾರೆ. ಇದಕ್ಕೆ ಖಂಡಿತವಾಗಿ ಅವಕಾಶ ಕೊಡಬೇಡಿ. ನೋಡಿ ಒಂದು ಬಾರಿ ಅಲ್ಲ, ಹತ್ತು ಬಾರಿ ಇವೆಲ್ಲ ಅವಶ್ಯಕತೆ ಇದೆಯೇ ಎಂದು ಯೋಚನೆ ಮಾಡಿ. ನೀವು ಕಳುಹಿಸಬೇಕಾದಾಗ ಮಾನ್ಯ ರಾಜ್ಯಪಾಲರು ಹೇಳಿರುವುದರ ಜೊತೆಗೆ ಕೆಲವು ಬದಲಾವಣೆಗಳನ್ನು ಬಿಟ್ಟುಹೋಗಿದೆ ಎಂದು ಹೇಳಿ ಸೇರಿಸುವುದಕ್ಕೆ ಅವಕಾಶ ಇದೆ. ಇದನ್ನು ಏಕೆ ಮಾಡಬಾರದು?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ರಾಜ್ಯಪಾಲರು ಎರಡು ಪಾಯಿಂಟ್‌ಗಳ ಬಗ್ಗೆ ಸ್ಪಷ್ಟೀಕರಣ ಕೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಅದನ್ನು ನಾನು ಒಪ್ಪಿಕೊಂಡಿದ್ದೇನೆ, ಅದನ್ನು ನಾನು dispute ಮಾಡುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಒಂದು ಪಾಯಿಂಟ್ ಶೋಧನಾ ಸಮಿತಿ ರಚನೆ ಬಗ್ಗೆ ಮತ್ತೊಂದು ಕುಲಪತಿಯವರ ನೇಮಕಾತಿ, ಇವೆರಡರ ಬಗ್ಗೆ ಅವರು objection ಮಾಡಿ ವಾಪಸ್ಸು ಕಳುಹಿಸಿದ್ದಾರೆ. ಅದರ ಬಗ್ಗೆ ಮಾತ್ರ ನಾವು ಇಲ್ಲಿ ಚರ್ಚೆಯನ್ನು ಮಾಡಬಹುದು.

ಅಧ್ಯಕ್ಷರು : ನಿಯಮ 105 ಪ್ರಕಾರ scope ಅಷ್ಟಕ್ಕೆ ಸೀಮಿತವಾಗಿರುವುದು.

ಶ್ರೀ ಟಿ.ಬಿ.ಜಯಚಂದ್ರ : ನಾನು ರಾಜ್ಯಪಾಲರ ಸಲಹೆಯನ್ನು ಒಪ್ಪಬೇಕೆಂದು ಹೇಳುವುದರ ಜೊತೆಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಆ ಪೀಠದಲ್ಲಿ ಕುಳಿತಾಗ ಚರ್ಚೆಯಾಗಿರುವಂತಹ ವಿಷಯ ಕೂಡ ಅಡಕವಾಗ ಬೇಕು ಎಂದು ಹೇಳುತ್ತೇನೆ. ಈ university ಯನ್ನು Society Registration Act ಗಿಂತ ಕಡೆಯಾಗಿ ಮಾಡುವುದಕ್ಕೆ ಹೋಗಬೇಡಿ. ಇನ್ನೊಂದು ವಿಷಯವೇನೆಂದರೆ ಈ ಬೋರ್ಡ್‌ನಲ್ಲಿ Deputy Secretary, Joint Secretary ಎಲ್ಲರನ್ನು....

ಅಧ್ಯಕ್ಷರು : ಈಗಾಗಲೇ ನೀವು ಬಿಲ್ ಬಗ್ಗೆ discuss ಮಾಡಿ ಒಪ್ಪಿಗೆ ಕೊಟ್ಟಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ : ಹೌದು. ಎಲ್ಲಾ discuss ಆಗಿದೆ. ನನಗಲ್ಲ ತೊಂದರೆಯಾಗುವುದು, ನಿಮಗೆ ತೊಂದರೆಯಾಗುವುದು. ಹೊಸದಾಗಿ University ಗಳು ಬರುತ್ತಿವೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಆಡಳಿತ ಮಂಡಳಿಗೆ ಸರ್ಕಾರೇತರ ಸದಸ್ಯರು ಬಂದರೆಂದರೆ ಒಂದು term ಗೆ ಮಾತ್ರ ಒಪ್ಪಬೇಕು, ಇನ್ನೊಂದು term ಗೆ ಬೇಡವೆಂದರೆ ಏನು ಇದೆಲ್ಲ.

ಅಧ್ಯಕ್ಷರು : ಇದೆಲ್ಲವನ್ನು ತಾವು ಹಿಂದೆ ಹೇಳಿದ್ದೀರಿ, I think ಎಲ್ಲವೂ ಚರ್ಚೆಯಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಹೇಳಿದರೂ ಏನೂ ಕೇಳಲಿಲ್ಲವಲ್ಲ.

MR. SPEAKER : That is left to the Government.

ಶ್ರೀ ಟಿ.ಬಿ. ಜಯಚಂದ್ರ : ಈಗಲಾದರೂ ಕೇಳುವುದಕ್ಕೆ ಅವಕಾಶ ಇದೆಯಲ್ಲ, ಕೇಳಿ ಎಂದು ಹೇಳುತ್ತಿದ್ದೇವೆ. ಮಾನ್ಯ ರಾಜ್ಯಪಾಲರು ವಾಪಸ್ಸು ಕಳುಹಿಸಿದ್ದಕ್ಕೆ ನಮಗೆ ಮತ್ತೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿತಲ್ಲ, ನಾವು ಅವರಿಗೆ ವಂದನೆ ಸಲ್ಲಿಸಬೇಕು.

ಅಧ್ಯಕ್ಷರು : ಈಗ ಮಾತನಾಡಬೇಕಾಗಿರುವುದು 105 ಪ್ರಕಾರ only with regard to....

ಶ್ರೀ ಟಿ.ಬಿ. ಜಯಚಂದ್ರ : ಆಯಿತು, ನಾವು ಒಪ್ಪುತ್ತೇನೆ. ಈಗ ಕೆಲವು ಸಲಹೆಗಳನ್ನು ಕೊಟ್ಟಿರುವುದನ್ನು ನಾನು ಸೂಕ್ತವಾಗಿ ರೈತರ ಹಿತದೃಷ್ಟಿಯಿಂದ ಬದಲಾವಣೆ ಮಾಡುತ್ತೇನೆ ಎಂದು ಒಂದು ಮಾತು ಹೇಳಲಿ, ಹೇಳಿ ಸ್ವಾಮಿ.

ಅಧ್ಯಕ್ಷರು : ಆಗಲಿ, ಎಲ್ಲರ ಅಭಿಪ್ರಾಯವನ್ನು ಕೇಳೋಣ.

ಶ್ರೀ ವೈ.ಎನ್.ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೇ, ಹಿಂದೆ Act ಹಾಗೆ ಇದೆ, ಹೊಸ Act ಬಂದಿಲ್ಲ, ಹೀಗಾಗಿ ಅದು ಅತಂತ್ರ ಸ್ಥಿತಿಯಲ್ಲಿದೆ. ದಯಮಾಡಿ ಕೋರಂ ಮತ್ತು ಇನ್ನಿತರ ವಿಚಾರಗಳ ಬಗ್ಗೆ ಇದ್ದರೆ ಅವುಗಳನ್ನು consider ಮಾಡಿ, ಅದನ್ನು pass ಮಾಡಿಬಿಡಿ. ಇಲ್ಲದಿದ್ದರೆ ಅದು ಅಸ್ತಿತ್ವದಲ್ಲಿ ಇರುವುದಿಲ್ಲ. ಈಗ ಏನು ಮಾಡಬೇಕು? ರಾಜೀವ್ ಗಾಂಧಿ ಯೂನಿವರ್ಸಿಟಿ ಮಾಡಿದ್ದೀರಿ, ಅಲ್ಲಿ ಏನೂ ಇಲ್ಲವೇ ಇಲ್ಲ.

MR. SPEAKER : We should not go beyond this. Scope ಅಷ್ಟಕ್ಕೆ ಮಾತ್ರ ಇರುವುದು.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ಏನು ಸಮಸ್ಯೆ ಬರುತ್ತದೆ ಎನ್ನುವುದನ್ನು ತಿಳಿದುಕೊಂಡು ಮತ್ತೆ amendment ತರುವುದಕ್ಕೆ ಬರುತ್ತದೆ. ಒಂದು ಬಾರಿ ಕೂಡ ಇದು ಪ್ರಾರಂಭವಾಗಲಿಲ್ಲ, ಕೃಷಿ ವಿಶ್ವವಿದ್ಯಾನಿಲಯದು ಬಹಳ ದಿವಸದಿಂದ ಹಾಗೆ ನಡೆಯುತ್ತದೆ. ಒಂದು ಬಾರಿ ಈ ಕೃಷಿ ವಿಶ್ವವಿದ್ಯಾಲಯ ಪ್ರಾರಂಭವಾಗಲಿ. ಇದರಲ್ಲಿ ಏನಾದರೂ practical ಆಗಿ problem ಆದರೆ ಆಮೇಲೆ ನೋಡೋಣ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಇದು ಯಾವ ಮಟ್ಟಕ್ಕೆ ಹೋಗಿದ್ದೀರಿ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಬಂದು ಅಂದು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಇವತ್ತು 5 progressive farmers ಎನ್ನುವ ಜಾಗದಲ್ಲಿ ಎಂಎಲ್‌ಎಗಳು ಮತ್ತು ಅವರ ಜೊತೆಗೆ ಎಂಎಲ್‌ಸಿಗಳು ಎಂದು ಹೇಳಿದ್ದೀರಿ. ಏನದು? ಎಂಎಲ್‌ಎಗಳು ಬೇರೆ, ಎಂಎಲ್‌ಸಿ ಗಳು ಬೇರೆನಾ? ಇದೆಲ್ಲ ಚರ್ಚೆಯಾಗಿತ್ತೇ ಅಥವಾ ಮುಖ್ಯಮಂತ್ರಿಗಳು ಹೇಳಿದ್ದರೇ? ಅದು ಹೇಗೆ ನೀವು ಸೇರಿಸಿದಿರಿ? ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಲಿಲ್ಲ, ನೀವು ರೆಕಾರ್ಡ್ಸ್ ತೆಗೆಯಿರಿ. ನಾನು ಏನು ಮಾತನಾಡಿದ್ದೇವೆ, ಏನು ಬಂದಿದೆ ಎನ್ನುವ ಎಲ್ಲಾ ಸಂಪೂರ್ಣ ಮಾಹಿತಿಯನ್ನು ಕೂಡ ಇಲ್ಲಿ tag ಮಾಡಿ ಇಟ್ಟುಕೊಂಡಿದ್ದೇನೆ. ನಾನು ಏನೇನಿದೆ ಎಂದು ಎಲ್ಲವನ್ನೂ ಕೂಡ ಹೇಳಬಲ್ಲೆ. ಖಂಡಿತವಾಗಿ ಅದಲ್ಲ. ದಯಮಾಡಿ ಈಗಲೂ ಕೂಡ ಸರ್ಕಾರಕ್ಕೆ ಅದೇನು

ದೊಡ್ಡದಲ್ಲ. ಇವೆಲ್ಲವನ್ನೂ ಕೂಡ ಸರಿಪಡಿಸುತ್ತೇವೆನ್ನುವ ಮಾತನ್ನು ಹೇಳಿದರೆ ನಾನು ಖಂಡಿತವಾಗಿ ಕೂಡ ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಒಂದು ಬಿಲ್ ಅಲ್ಲ, Agriculture Bill and Horticulture Bill ಎರಡೂ ಕೂಡ ವಾಪಸ್ಸು ಬಂದಿದೆ. ಎರಡು ಬಿಲ್‌ಗೂ ಒಂದೇ ರೀತಿಯ remarks ಬಂದಿದೆ. ಕೊನೇಪಕ್ಷ ಇದು ತಿರುಗಿ ಹೋದಂತಹ ಸಂದರ್ಭದಲ್ಲಿ ರಾಜ್ಯಪಾಲರು ನಾನು ಹೇಳಿರುವುದೇ ಬೇರೆ, ಇವರು ಮಾಡಿರುವುದೇ ಬೇರೆ ಎನ್ನುವಂತಹ ಭಾವನೆ ಬರಬಾರದು. ಈಗ ಮಾನ್ಯ ಮುಖ್ಯಮಂತ್ರಿಗಳು ಬಂದರು, ಅವರನ್ನೇ ಕೇಳಿ ತೀರ್ಮಾನ ಮಾಡೋಣ. ಅವರು ಹೇಳಿದಂಥದ್ದು ಒಂದೂ ಕೂಡ ಇಲ್ಲಿ ಸೇರಿಲ್ಲ. ಈ ರೀತಿ ಏಕೆ ಮಾಡಿದಿರಿ ಎನ್ನುವುದು ನನ್ನ ಪ್ರಶ್ನೆ.

ಈಗ Progressive farmersಗೆ ಹೆಚ್ಚು ಒತ್ತು ಕೊಡಬೇಕು. ಅದನ್ನು ಬಿಟ್ಟು ನೀವು ಎಲ್ಲವನ್ನು politicize ಮಾಡತಕ್ಕಂಥ ರೀತಿಯಲ್ಲಿ ಮಾಡುವುದಕ್ಕೆ ಹೋದರೆ ಖಂಡಿತ ಅದರಿಂದ ಒಳ್ಳೆಯದಾಗುವುದಿಲ್ಲ. ಈಗ ಒಂದು interpretation. ಒಂದು Ordinance ನಲ್ಲಿ, 'One eminent educationist not below the rank of a Professor from outside the jurisdiction of the University from the field of Agriculture and allied science to be nominated by the Chancellor' ಎನ್ನತಕ್ಕಂಥ ಮಾತನ್ನು ಸೇರಿಸಿದ್ದೀರಿ. ಅದಕ್ಕೆ ನಾನು ಬದಲಾವಣೆಯನ್ನು ಏನು ಸೂಚಿಸಿದ್ದೆ ಎಂದರೆ, 'One eminent educationist from the filed of Agriculture and allied sciences to be nominated by the Chancellor' ಸೇರಿಸಿ ಎಂದು ಹೇಳಿದೆ. Outside the Unversity or inside the University, ನೀವು ಅದೆಲ್ಲಾ ಏಕೆ ಮಾಡುತ್ತೀರಿ? Scope ಅವರಿಗೆ ಇರಲಿ, decision ತೆಗೆದುಕೊಳ್ಳಲಿ. ಅವತ್ತಿನ ಕಾಲದಲ್ಲಿ ಯಾರು ಸೂಕ್ತವಾಗುತ್ತಾರೆನ್ನುವಂಥವರನ್ನು ತೆಗೆದುಕೊಳ್ಳಲಿ. ನೀವು ಏಕೆ ಈ ರೀತಿ ಕಾನೂನನ್ನು ಮಾಡಿ, ಈ ರೀತಿ Conditions ಹಾಕಿ ಅದನ್ನು ನಿರ್ದಿಷ್ಟ ಮಾಡುವುದಕ್ಕೆ ಏಕೆ ಹೋಗುತ್ತೀರಿ? ಅದನ್ನು ಬದಲಾವಣೆ ಮಾಡುವುದಕ್ಕೆ ಏನು ಕಷ್ಟವಾಗುವುದಿಲ್ಲ. ಈಗಲೂ ಕೂಡ ಅದನ್ನು.. ..

MR. SPEAKER : I am once again requesting in Rule-105, the scope is very very limited. In Rule-105, what the Governor has made an observation, you suggest anything. Entire bill ಅನ್ನು ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇದು ಕಳೆದ ಸದನದಲ್ಲಿ ರಾತ್ರಿ 12 ಗಂಟೆಯವರೆಗೂ discussion ಆಗಿದೆ. ಸಾಕಷ್ಟು thorough discussion ಆಯಿತು, ಆಮೇಲೆ Bill pass ಆಯಿತು. ಆ ನಂತರ ವಿಧಾನ ಪರಿಷತ್ತಿನಲ್ಲಿ Bill pass ಆಯಿತು, ಆಮೇಲೆ ರಾಜ್ಯಪಾಲರ ಬಳಿಗೆ ಹೋದಾಗ ಆ 2 points ಬಗ್ಗೆ ಅವರು observation ಮಾಡಿ ವಾಪಸ್ಸು ಕಳುಹಿಸಿದ್ದಾರೆ. ಅದರ ಬಗ್ಗೆ ಏನಾದರೂ ಮಾತನಾಡುವುದಾದರೆ ಮಾತನಾಡಿ. ಉಳಿದ ಎಲ್ಲಾ ವಿಷಯಗಳ ಬಗ್ಗೆ ಅವತ್ತು more than one hour ತಾವು discussion ಮಾಡಿದ್ದೀರಿ, ಆಗ ನಾನು ಅಧ್ಯಕ್ಷ ಪೀಠದಲ್ಲಿದ್ದೆ. ಇದು ಬಹಳ ಮಹತ್ವದ್ದಾಗಿದೆ, ಇದು ಬಹಳ ದಿವಸಗಳಿಂದ ಈ Bill pending ಇದೆ.

ಶ್ರೀ ಟಿ.ಬಿ.ಜಯಚಂದ್ರ : ಇವತ್ತು ಪಾಸ್ ಮಾಡೋಣ.

ಅಧ್ಯಕ್ಷರು : ನೀವು ಮಾತನಾಡುವುದು ಬೇಡವೆಂದು ಹೇಳುವುದಿಲ್ಲ. Within that scope ನೀವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಆಮೇಲೆ ಅದರಲ್ಲಿ ಏನು loopholes ಇದೆಯೋ, ಮತ್ತೆ ಏನು ಇದೆಯೋ, ಒಂದು ಸಲ ಆ University Act ಬಂದಮೇಲೆ ಆ University ಸ್ಥಾಪನೆಯಾದ ಮೇಲೆ ಏನಾದರೂ ಸಮಸ್ಯೆ ಬಂದರೆ ನಾವು Assembly ಗೆ ತರಬಹುದು. ಅದನ್ನು ಸರಿಪಡಿಸುವಂಥ ಕೆಲಸವನ್ನು ನಾವು ನೀವು ಮಾಡಬಹುದು.

ಶ್ರೀ ಟಿ.ಬಿ. ಜಯಚಂದ್ರ : ಅನಾಹುತ ಆದಮೇಲೆ ಇಲ್ಲಿಗೆ ಬರಬೇಕು.

ಶ್ರೀ ಜಗದೀಶ್ ಶೆಟ್ಟರ್ : No, no. ಅನಾಹುತ ಆಗುತ್ತದೆಂದು ನಾವು ಏಕೆ ತಿಳಿದುಕೊಳ್ಳಬೇಕು. ನಾವು ಎಲ್ಲಾ ಒಳ್ಳೆಯದಾಗುತ್ತದೆಂದು ತಿಳಿದು ಕೊಳ್ಳಬೇಕು.

ಶ್ರೀ ಟಿ.ಬಿ. ಜಯಚಂದ್ರ : ನಿಮ್ಮ Act ನಿಂದ ಅನಾಹುತ guarantee ಆಗುವಂಥದ್ದೆ ಇರುವುದು.

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರ ಉದ್ದೇಶ ಒಳ್ಳೆಯದಾಗಬೇಕೆಂದು ಇರುತ್ತದೆ. ಕೆಲವು ಅನಾಹುತ ಆಗಬೇಕೆಂದು ಇರುವುದಿಲ್ಲ, ಒಳ್ಳೆಯ ಉದ್ದೇಶ ವಿರುತ್ತದೆ. ಅದು ಆದಮೇಲೆ ಏನೋ ಒಂದು loopholes ಇರುತ್ತದೆ, ಮತ್ತೊಂದು ಇರುತ್ತದೆ. ಅದನ್ನು ಮತ್ತೆ ನಾವು ತರಬೇಕು.

ಅಧ್ಯಕ್ಷರು : Governor observation ನಲ್ಲಿ 27(2)ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ತಮ್ಮ ಅಭಿಪ್ರಾಯ ಏನೆಂಬುದನ್ನು ಹೇಳಿ, ಅಷ್ಟು ಬಿಟ್ಟು beyond that ಬೇಡ. As per procedure I am telling.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, Procedure ಜೊತೆಗೆ ಹಿಂದೆ ನಡೆದಂಥ ನಡವಳಿಕೆ ಏನು ಆಯಿತು?

MR. SPEAKER : How can you discuss now?

ಶ್ರೀ ಟಿ.ಬಿ.ಜಯಚಂದ್ರ : ಏಕೆ ಆಗಬಾರದು? ಅಂತಿಮವಾಗಿ ರಾಜ್ಯಪಾಲರು ತಿಳಿಸಿರುವುದರ ಜೊತೆಗೆ ಅದನ್ನು ಮಾಡಿ.

MR. SPEAKER : No, no. This is a referred Bill.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಆದರೆ ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನದಟ್ಟಾದರೆ ಬದಲಾವಣೆ ಮಾಡಬಾರದೆಂದು ಏನು ಇದೆಯೆಂಬುದನ್ನು ಹೇಳಿ. Law Minister opinion ತೆಗೆದುಕೊಂಡು ಈ ಬಗ್ಗೆ ಏಕೆ ಬದಲಾವಣೆ ಮಾಡಬಾರದೆಂಬ ವಿಚಾರವಾಗಿ ಹೇಳಲಿ.

SRI SYED YASIN : Sir, it has been returned because ot two things. One is…

ಶ್ರೀ ಜಗದೀಶ್ ಶೆಟ್ಟರ್ : ಕಳೆದ ಸದನದಲ್ಲಿ ಚರ್ಚೆಯಾಗಿದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಜಗದೀಶ್‌ಶೆಟ್ಟರ್‌ರವರೆ, ಚರ್ಚೆಯಾದರೂ ಪ್ರಯೋಜನವಾಗಲಿಲ್ಲವಲ್ಲಾ.. ..

ಶ್ರೀ ಜಗದೀಶ್ ಶೆಟ್ಟರ್ : ಆವತ್ತು ಬಹಳ ಜನ ಈ ವಿಷಯದ ಮೇಲೆ discussion ಮಾಡಿದ್ದೀರಿ. ಅದು ಆದಮೇಲೆ ಮಾನ್ಯ ಮುಖ್ಯಮಂತ್ರಿಯವರು ಸಲಹೆಗಳನ್ನು ಕೊಟ್ಟರು. ಅದು ಆದ ಆಮೇಲೆ ಕೆಲವೊಂದು ತಿದ್ದುಪಡಿಯನ್ನು ತಂದು ಎಲ್ಲಾ ಆಗಿದೆ. ಇದು ಎಲ್ಲಾ ಆದಮೇಲೆ ರಾತ್ರಿ 12 ಗಂಟೆಗೆ Bill ಅನ್ನು ಪಾಸ್ ಮಾಡಿದ್ದೇವೆ. ಇಲ್ಲಿ ಪಾಸು ಆದಮೇಲೆ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗಿ ಪಾಸು ಆಯಿತು.

ಶ್ರೀ ಟಿ.ಬಿ. ಜಯಚಂದ್ರ : ಅದೇ ಎಡವಟ್ಟು ಆಯಿತಾ?

ಶ್ರೀ ಜಗದೀಶ್ ಶೆಟ್ಟರ್ : ಈಗ ಎರಡು point ಬಗ್ಗೆ clarify ಮಾಡುವುದಕ್ಕೆ ಹೇಳಿದ್ದಾರೆ. ತಾವು ಆ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದರೆ ಒಳ್ಳೆಯದಾಗುತ್ತದೆಂದು ನನ್ನ ಅಭಿಪ್ರಾಯ. ಮಾನ್ಯ ರಾಜ್ಯಪಾಲರು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಶೋಧನಾ ಸಮಿತಿ ರಚನೆ ಬಗ್ಗೆ ಮತ್ತು ಕುಲಪತಿಗಳ ನೇಮಕದ ಬಗ್ಗೆ, ಈ ಎರಡು ವಿಷಯಗಳ ಬಗ್ಗೆ ಅವರು ಕೆಲವು queries ಕಳುಹಿಸಿದ್ದಾರೆ. ಅದರ ಮೇಲೆ ತಾವು ಬೆಳಕು ಚೆಲ್ಲಿದರೆ ಒಳ್ಳೆಯದು.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಜಗದೀಶ್‌ಶೆಟ್ಟರ್‌ರವರೆ, ಆಗ ತಾವೇ Speaker ಆಗಿ ಕುಳಿತಿದ್ದೀರಿ. ಮಾನ್ಯ ರಾಜ್ಯಪಾಲರ ಒಕ್ಕಣೆ ಏನು ಇದೆಯೆಂಬುದನ್ನು ನೀವು ಓದಿ ಬಿಟ್ಟರೆ, ನಿಜವಾಗಲೂ ನಾವು ಯಾವ spirit ನಲ್ಲಿ legislation ಮಾಡಬೇಕಾಗಿತ್ತೋ, ಅದನ್ನು ನಾವು ಮಾಡುತ್ತಿದ್ದೇವೊ ಇಲ್ಲವೊ ಎಂಬುದು ಗೊತ್ತಾಗುತ್ತದೆ. ತಾವು ಅದನ್ನು Bill ನಲ್ಲಿ ಓದಿ ನೋಡಿ. ಮಾನ್ಯ ರಾಜ್ಯಪಾಲರು ಬೋಧನೆ ಮಾಡುತ್ತಾರೆ. 'The cardinal principle in the Constitution visualizes complete autonomy to the temples of higher learining in that, they should be free from the pulls and pressures of political activities in order to preserve the sanctity of the academic and research environment in them. This has been well established in our country. It is with ths intention that education was kept in the concurrent list and Governors are made the Chancellors of Universities in the States.' ಇಲ್ಲಿಂದ ಶುರು ಮಾಡಿ ಇದು ಸುಮಾರು 3, 4 pages ಇವೆ. ಪ್ರತಿಯೊಂದು ಶಬ್ದವೂ ಕೂಡ ನಿಮಗೆ ಬೋಧನೆ ಮಾಡುವ ರೀತಿಯಲ್ಲಿ ಬಂದಾಗ ಅದನ್ನು ಅನುಸಾರ ಮಾಡಿದ್ದೀರೋ ಇಲ್ಲವೊ ಎಂಬುದು ಮುಖ್ಯವಾಗುತ್ತದೆ.

MR. SPEAKER : Reservation on Section 27 in the Present Bill which deviates from the promulgation that is what he observed, ಅದರ ಬಗ್ಗೆ ತಾವು ಏನಾದರೂ ಬೆಳಕು ಚೆಲ್ಲುವುದಾದರೆ ಚೆಲ್ಲಿ ಎಂದು ಹೇಳುತ್ತೇನೆ.

SRI T.B.JAYACHANDRA : The role played by the Agricultural Universities in the Primary sector of our economy...

MR. SPEAKER : 'I have reservation on Section-27 in the Present Bill which deviates from the Ordinance promulgated in November 2008 and the UAS Act 1963, which dilutes the autonomy of the Universities as envisaged by our Constitution.' This is the main observation made by the Hon'ble Governor. ಅದರ ಬಗ್ಗೆ ಏನಾದರೂ ಸಲಹೆ ಕೊಡುವುದಿದ್ದರೆ ಅಥವಾ ಅವರು ಹೇಳಿದ್ದೆ ಸರಿ. I think that will be the proper discussuion.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಹೇಳಿರತಕ್ಕಂಥದ್ದು, 'While expressing and affirming highest regards for the Hon'ble Members of the State Legislature, I, H.R.Bhardwaj, Governor of Karnataka, in exercise of the power conferred under Article 200 of the Constitution of India, hereby return the University of Agricultural Sciences Bill, 2009 with the request to the Hon'ble legislators for reconsideration in their wisdom, keeping in view the aforesaid explanatory observations...'

MR. SPEAKER : That is the observation made by the Governor.

SRI T.B.JAYACHANDRA : '...serious wide ranging implications', ಅದಕ್ಕೆ ಏನು ಹೇಳುತ್ತೀರಿ? ತಾವು Lawyer ಆಗಿದ್ದೀರಿ, ಈಗಲೂ ಬಿಟ್ಟಿಲ್ಲ, touch ನಲ್ಲಿದ್ದೀರಿ. '. . .serious wide ranging implications, the constitutional mandate and the likely long-term impact the Ordinance may have in future in the State of Karnataka'. ನಾನು ಆ ದೃಷ್ಟಿಯಿಂದ ಹೇಳುತ್ತಿದ್ದೇನೆ.

MR. SPEAKER : What his clear point...

ಶ್ರೀ ಟಿ. ಬಿ. ಜಯಚಂದ್ರ : ನಾನು ಅದನ್ನು ಒಪ್ಪಿಕೊಂಡೆ. . .

MR. SPEAKER : . . .only with regard to the. . .

SRI T.B.JAYACHANDRA : '. . .serious wide ranging implications' . . .

MR.SPEAKER : His observation is, 'I have reservation on Section-27'.

ಶ್ರೀ ಟಿ.ಬಿ. ಜಯಚಂದ್ರ : ಅದು ಆಯಿತು.

ಅಧ್ಯಕ್ಷರು : ಅದು ಬಿಟ್ಟು ಬೇರೆ ಏನು ಅವರು ಹೇಳಿಲ್ಲ. Section-27(4) cannot provides for Chancellor appointment, only with regard to Section-27 his reservation or his observation is there. ತಾವು ಅದನ್ನು ಹೇಳಿ. I don't think, ಅದನ್ನು ಬಿಟ್ಟು under Rule-105, our own rule does not provide for discussion in other matter because, ನೀವೆಲ್ಲಾ ಒಂದು ಸಾರಿ ಸಾಕಷ್ಟು ಚರ್ಚೆ ಮಾಡಿ ಪಾಸ್ ಮಾಡಿ ಕೊಟ್ಟಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಜಗದೀಶ್‌ಶೆಟ್ಟರ್‌ರವರೆ, ನಿಯಮ 105 ಅನ್ನು ಇನ್ನೊಂದು ಸಾರಿ ಓದಿ.

SRI JAGADISH SHETTAR : 'I, H.R.Bhardwaj, Governor of Karnataka, in exercise of the power conferred under Article 200 of the Constitution of India, hereby return The University of Agricultural Sciences Bill, 2009, with the request to the Hon'ble legislators for reconsideration in their wisdom, keeping in view the aforesaid explanatory observations, serious wide ranging implications. . .' ಮಾನ್ಯ ಜಯಚಂದ್ರರವರೆ, ನಾನು ಅದಕ್ಕೆ ಹೇಳಲಿಲ್ಲ. ಇದರ ಬಗ್ಗೆ ಚರ್ಚೆ ಮಾಡಿ, ಅದು ಆದಮೇಲೆ Minister ಉತ್ತರ ಕೊಡುತ್ತಾರೆ, ಸರ್ಕಾರ ಉತ್ತರ ಕೊಡುತ್ತದೆ. ಆಮೇಲೆ Legislators ಗೆ ಬಿಡೋಣ. ಇದರ ಮೇಲೆ ನಿಮ್ಮ ಅಭಿಪ್ರಾಯ ಏನು ಇದೆ ಎಂಬುದರ ಬಗ್ಗೆ ಚರ್ಚೆ ಮಾಡಬಹುದೆಂದು ನನ್ನ ಅಭಿಪ್ರಾಯ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, English ನಲ್ಲಿ ಬೇಡ, ಇದು ಕನ್ನಡದಲ್ಲಿ correct ಆಗಿದೆ ಎಂದು ಅನಿಸುತ್ತದೆ, ನಿಯಮ 105 ಅನ್ನು ಓದುತ್ತೇನೆ.

"ವಿಧಾನ ಮಂಡಲದ ಎರಡೂ ಸದನಗಳು ಅನುಮೋದಿಸಿದ ವಿಧೇಯಕವನ್ನು ರಾಷ್ಟ್ರಪತಿಯವರು ಅಥವಾ ರಾಜ್ಯಪಾಲರು ಪುನಃ ಪರ್ಯಾಲೋಚನೆಗಾಗಿ ಹಿಂತಿರುಗಿಸಿದರೆ ಪರ್ಯಾಲೋಚಿಸಲು ಸೂಚಿಸಿ ಕಳುಹಿಸಿದ ಅಂಶವನ್ನು ಅಥವಾ ಅಂಶಗಳನ್ನು ಅಧ್ಯಕ್ಷರು ಸದನದ ಮುಂದೆ ಮಂಡಿಸತಕ್ಕದ್ದು ಮತ್ತು ಅವನ್ನು ವಿಧೇಯಕದ ತಿದ್ದುಪಡಿಗಳನ್ನು ಕುರಿತು ಚರ್ಚೆ ನಡೆಸಿ ಅಭಿಮತ ತಿಳಿಸುವಂತೆಯೇ ಅಥವಾ ಸದನವು ಅದನ್ನು ಪರ್ಯಾಲೋಚಿಸಲು ಅತ್ಯಂತ ಅನುಕೂಲವಾದ ರೀತಿ ಎಂದು ಸಭಾಪತಿಯವರು ಪರಿಗಣಿಸಬಹುದಾದ ಇತರ ರೀತಿಯಲ್ಲಿ ಚರ್ಚೆ ಮಾಡಿ ಅಭಿಮತ ತಿಳಿಸತಕ್ಕದ್ದು."

(3-40 P.M)

ಅಧ್ಯಕ್ಷರು : ನನ್ನ observation ಸಹಾ ಅಷ್ಟೇ. ಅದಕ್ಕೇ ನಾನು ಏನು ಹೇಳಿದೆ ಎಂದರೆ, ಗೌರವಾನ್ವಿತ ರಾಜ್ಯಪಾಲರು observation ಮಾಡಿ ಏನು ಕಳುಹಿಸಿಕೊಟ್ಟಿದ್ದಾರೆ. ಅಷ್ಟರ ಬಗ್ಗೆ ಮಾತ್ರ ಬೆಳಕು ಚೆಲ್ಲಿ.

ಶ್ರೀ ಜಗದೀಶ್ ಶೆಟ್ಟರ್ : ಅವರು ಏನು observation ಮಾಡಿದ್ದಾರೆ, ಅದರ ಬಗ್ಗೆ ನೀವು ಚರ್ಚೆಮಾಡಿ. ಅದರ ಮೇಲೆ ಏನಾದರೂ ಬೆಳಕು ಚೆಲ್ಲುವುದಿದ್ದರೆ ಚೆಲ್ಲಿ. ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ. ನಂತರ, in view of the observation made by the Hon'ble Governor, ಈ Bill ಅನ್ನು accept ಮಾಡುವುದೋ, ಬೇಡವೋ ಎನ್ನುವುದನ್ನು ವಿಧಾನ ಮಂಡಲಕ್ಕೆ ಬಿಡೋಣ.

SRI. SYED YASIN : Mr. Speaker, There are six points to be taken care.

ಶ್ರೀ ಟಿ.ಬಿ.ಜಯಚಂದ್ರ : ಆವತ್ತು ನಾನು Pro Chancellor ಆಗಿದ್ದವನು, Vice Chancellor ಅಲ್ಲ.

ಅಧ್ಯಕ್ಷರು : ನೀವು ಮುಗಿಸಿ, ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ನೀವು ಈ ರೀತಿಯಾಗಿ, ಹೀಗೇ ಮಾಡಿ. ಹಾಗೇ ಮಾಡಿ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು : ಹೀಗೇ ಮಾಡಿ, ಹಾಗೇ ಮಾಡಿ ಎಂದು ನಾನು ಹೇಳಲಿಲ್ಲ, as per rules ಹೇಳಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ರಾಜ್ಯಪಾಲರು ಇಡೀ Bill ಬಗ್ಗೆ comment ಮಾಡಿಲ್ಲ. ರಾಜ್ಯಪಾಲರ observations specific to two points only. ಅವರು comment ಮಾಡದೇ, ಇದನ್ನು ಇಲ್ಲಿಗೆ ವಾಪಸ್ಸು ಕಳುಹಿಸದೇ ಇದ್ದರೆ ಇದರ ಬಗ್ಗೆ ಇಲ್ಲಿ ನಾವು ಮತ್ತೆ ಚರ್ಚೆ ಮಾಡುತ್ತಿದ್ದೇವೆ?

ಶ್ರೀ ಟಿ.ಬಿ.ಜಯಚಂದ್ರ : ಹಾಲಿ Speaker, ಮಾಜಿ Speaker ಇಬ್ಬರೂ ವಕೀಲರು. Suppose, ರಾಜ್ಯದ ಹಿತದೃಷ್ಟಿಯಿಂದ ಈ Bill ಅನ್ನು ವಾಪಸ್ಸು Governor ರವರಿಗೆ ಕಳುಹಿಸಬೇಕಾದಂಥ ಸಂದರ್ಭದಲ್ಲಿ ನಾವು ಕೆಲವು ಬದಲಾವಣೆಗಳನ್ನು suggest ಮಾಡಿ, ಅವುಗಳನ್ನು ಮಾಡಿ ಕಳುಹಿಸದರೆ ಅದರಲ್ಲಿ ತಪ್ಪೇನಿದೆ? ಏನು ತಪ್ಪಿದೆ ಹೇಳಿ?

ಶ್ರೀ ಜಗದೀಶ್ ಶೆಟ್ಟರ್ : ಒಂದು ಸಲ ಇಲ್ಲಿ Bill pass ಆಗಿದೆ. ಅದರಲ್ಲಿದ್ದಂಥ ಎಲ್ಲ points, ಎಲ್ಲ articles, ಎಲ್ಲ rules, ಎಲ್ಲವನ್ನೂ discussion ಮಾಡಿ ನಾವು Bill pass ಮಾಡಿ ಕಳುಹಿಸಿದ್ದೇವೆ. ವಿಧಾನ ಪರಿಷತ್ತಿನವರೂ ಸಹ discussion ಮಾಡಿಯೇ pass ಮಾಡಿ ಕಳುಹಿಸಿದ್ದಾರೆ. ಆಮೇಲೆ, ರಾಜ್ಯಪಾಲರು 2 ಪಾಯಿಂಟ್‌ಗಳ ಬಗ್ಗೆ clarification ಕೇಳಿ ವಾಪಸ್ಸು ಕಳುಹಿಸಿದ್ದಾರೆ. ಈಗ ನಾವು ಅದರ ಬಗ್ಗೆ discussion ಮಾಡಬೇಕಾಗುತ್ತದೆ. ನೀವು ಸಮಗ್ರವಾಗಿ ಇಡೀ Bill ಬಗ್ಗೆ ಚರ್ಚೆ ಮಾಡುವುದಾದರೆ ಅದರಲ್ಲಿ ಅರ್ಥವೇನಿದೆ? ಈಗಾಗಲೇ ಇದನ್ನು pass ಮಾಡಿಬಿಟ್ಟಿದ್ದೇವಲ್ಲ.

ಶ್ರೀ ಟಿ.ಬಿ.ಜಯಚಂದ್ರ : ನಾನು ಕೆಲವೇ ಪಾಯಿಂಟ್‌ಗಳನ್ನು ಹೇಳುತ್ತಿದ್ದೇನೆ:

ಅಧ್ಯಕ್ಷರು : ಕೆಲವೇ ಪಾಯಿಂಟ್ ಅಲ್ಲ, only two points. Only on two points.

ಶ್ರೀ ಜಗದೀಶ್ ಶೆಟ್ಟರ್ : ಅಕಸ್ಮಾತ್ ರಾಜ್ಯಪಾಲರು ಆ ಎರಡು ಪಾಯಿಂಟ್‌ಗಳ ಬಗ್ಗೆ Clarification ಕೇಳಿ ವಾಪಸ್ಸು ಕಳುಹಿಸದೇ ಇದ್ದರೆ, ಅವುಗಳ ಬಗ್ಗೆ ನಮ್ಮ ಸ್ಪಷ್ಟೀಕರಣವನ್ನು ಕೇಳದೇ ಇದ್ದರೆ ಈ Bill ಬಗ್ಗೆ ಚರ್ಚೆ ಮಾಡುವ ಅವಶ್ಯಕತೆಯೇ ಇರಲಿಲ್ಲ. ಮತ್ತೆ ಇಲ್ಲಿಗೇಕೆ ಅದು

ಬರುತ್ತಿತ್ತು? ರಾಜ್ಯಪಾಲರು ಎರಡು ಪಾಯಿಂಟ್‌ಗಳ ಸ್ಪಷ್ಟೀಕರಣದ ಸಲುವಾಗಿ ಕಳುಹಿಸಿದ್ದಾರೆ.

ಅಧ್ಯಕ್ಷರು : Please, ಅಷ್ಟಕ್ಕೇ conclude ಮಾಡಿ.

ಶ್ರೀ ಟಿ.ಬಿ.ಜಯಚಂದ್ರ : ಈಗ ಒಂದು vacuum ಇದೆ, ಆ ಕಾರಣ ಕ್ಕೋಸ್ಕರ ಇದನ್ನು pass ಮಾಡಲೇಬೇಕು ಎಂದು ನಿಮ್ಮ ಮನಸ್ಸಿನಲ್ಲಿದೆ. ನಾನೂ ಲಾಯರ್ ಆಗಿರುವುದರಿಂದ ನನಗೆ ಗೊತ್ತಿರುವುದನ್ನು ಹೇಳುತ್ತೇನೆ, 1963 Act ಈಗ force ನಲ್ಲಿದೆ ಎಂದು ನೀವು ತೀರ್ಮಾನ ಮಾಡಿ, ಅದರ ಪ್ರಕಾರ function ಮಾಡುವುದಾದರೆ ಏನೂ problem ಇಲ್ಲವಲ್ಲ.

MR. SPEAKER : The Government has taken a decision to introduce a new Bill, that has been passed and the Governor made some observations.

SRI. T.B. JAYACHANDRA : Agriculture and Horticulture ಎರಡೂ Controversy ಇರುವುದರಿಂದ, ಇದನ್ನು Joint Select Committee ಗೆ ವಹಿಸಿ.

(ಗೊಂದಲ)

SRI. SYED YASIN : Sir, Government has taken a decision with the consensus of all the members of opposition.

(ಗೊಂದಲ)

ಅಧ್ಯಕ್ಷರು : ತಾವು ಮುಗಿಸಿ. ಬೇರೆ ಸದಸ್ಯರು ಮಾತನಾಡು ವವರಿದ್ದಾರೆ. ಬೇರೆಯವರಿಗೂ ಸ್ವಲ್ಪಸ್ವಲ್ಪ ಅವಕಾಶ ಕೊಡಬೇಕು. ಹಿಂದೆ ಇರುವವರೆಲ್ಲ ಅವಕಾಶ ಕೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಯಾಸೀನ್‌ರವರೇ ತಾವು ಮಾತನಾಡಿ.

SRI. SYED YASIN : (RAICHUR) Sir, there is a communication gap. The Bill has been passed. Thanks to Hon'ble Chief Minister as he has taken this subject in the first budget itself. It had been kept in the Belgaum Session. But it failed. In the Bangalore Session again it failed. In the last session i.e. on 2nd June we have passed the Bill and we have represented it to the Governor with the consensus of our opposition leader. Our opposition leader has also given the

correct picture. Actually this Bill has been returned just because His Excellency feels that his powers have been diluted. I don't think so. Because he is the supreme authority, he is the Chancellor of the University, this Bill cannot dilute the position of Chancellor. There is another important point. The appointment of Vice Chancellor. We have taken the decision as usual. Whatever it may be The Government should appoint the Chancellor. But here the Governor feels that his position has been taken by the Government. The next point is public reports. We have given public representation. There is a lobby from the Udupi Vice Chancellor. Whatever it may be. The scientists are making lobby. The Vice Chancellor should be given more power ಎಂದು ಅವರು ಕೇಳುತ್ತಿದ್ದಾರೆ. But Bill ನಲ್ಲಿ Powers ಇಲ್ಲ. We have diluted the powers because it is a democratic set up. Six representatives from the Scientists should be there according to ICAR. We are not violating the norms of the ICAR. According to ICAR six scientiste, agriculturists are appointed. They have been given. Apart from that three representatives from the House. Total three representatives from the public i.e., two M.L.A.s and one M.L.C. and three ryots representation. In democratic set up our Hon'ble Opposition Leader and also our Chief Minister, in the larger interest of the ryots, three ryots should be given representation in Directorship of the Board. It is valid. This is the old system. We are changing it into a democratic pattern. We are giving more dimensions. We are not violating the ICAR rules as well as the public representation has been increased. So, the Bill whateves we have given is a correct bill. There is a communication gap. Again we have to submit the same bill with the same representation. Because our Government has already given, our Siddarmaiahji, Mallikarjunji were also there on that day, and the Hon'ble Chief Minster also accepted it in the larger interest of the ryots. I feel that there is no further discussion on the bill.

Whatever we have decided again we have to submit the bill to the Government.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ಗವರ್ನರ್‌ರಿಂದ ವಾಪಸ್ಸು ಬಂದಿರುವ Bill ಗೆ ಸಂಬಂಧಿಸಿದಂತೆ ಸಮಸ್ಯೆ ಉಂಟಾಗಿರುವುದೆಂದರೆ, ಆ ದಿನ ಈ Bill ಬಗ್ಗೆ ಏನು ಚರ್ಚೆಯಾಗಿತ್ತು, ಸದನ ಏನು ಒಪ್ಪಿಗೆ ಕೊಟ್ಟಿತ್ತು, ಸದನದಲ್ಲಿ ಮಾನ್ಯ ಸಚಿವರು ನಾವು ಈ ತಿದ್ದುಪಡಿಗಳನ್ನು ಮಾಡುತ್ತೇವೆ ಎಂದೇನು ಹೇಳಿದ್ದರು, ಆ ತಿದ್ದುಪಡಿಗಳನ್ನು Bye law ದಲ್ಲಿ, Act ನಲ್ಲಿ ತೋರಿಸದೇ ರಾಜ್ಯಪಾಲರ ಎದುರಿಗಿಟ್ಟು, ಮತ್ತೆ ಅದನ್ನು ಇಲ್ಲಿ ನಿಯಮ 105ರ ಪ್ರಕಾರ ಚರ್ಚೆ ಮಾಡಲಿಕ್ಕೆ ಬರುವುದಿಲ್ಲ ಎಂದರೆ ನಾವು ಎಲ್ಲೋ ಒಂದು ಕಡೆ ಪ್ರಜಾತಂತ್ರಕ್ಕೆ ಅನ್ಯಾಯ ಮಾಡುತ್ತಿದ್ದೇವೆ ಎಂದು ಅನ್ನಿಸುತ್ತದೆ. We have asserted some things. ಆ ದಿನ ನಾವು ಇಲ್ಲಿ ಏನು ಮಾತನಾಡಿದ್ದೇನೆ, ಆ ದಾಖಲೆಯೂ ನನ್ನ ಹತ್ತಿರ ಉಂಟು. ಇವರೆಲ್ಲರೂ ಏನು ಮಾತನಾಡಿದ್ದಾರೆ, I am having the copy of it. ಆ ದಿನ ಸಭಾಧ್ಯಕ್ಷರು ಏನು ಮಾತನಾಡಿದ್ದಾರೆಂದರೆ, ಈ ತಿದ್ದುಪಡಿಗಳನ್ನು ಮಾಡಿ ಎಂದು he has given a direction. That is also there. If those suggestions were not referred, recommended to the Governor and were not included in the amendment, ಇಲ್ಲಿ Bill ತಂದಾಗ ನಾವು ಏನು ತಿದ್ದುಪಡಿಗೆ ಬಯಸಿದ್ದೆವು, ಆ ರೀತಿ ಬಯಸಿದ ತಿದ್ದುಪಡಿಗಳನ್ನು, ಇವುಗಳು ಆಗಬೇಕು ಎಂದು ಸಭಾಧ್ಯಕ್ಷರು ನಿರ್ಧಾರ ಮಾಡಿ ಸಚಿವರಿಗೆ ಹೇಳಿದ್ದರು, ಅದಕ್ಕೆ ಮಾನ್ಯ ಸಚಿವರು ಕೂಡ ಅದಕ್ಕೆ ಏನು ಒಪ್ಪಿಗೆ ಕೊಟ್ಟಿದ್ದರು, ಆ ರೀತಿ ಒಪ್ಪಿಗೆ ಕೊಟ್ಟಿರತಕ್ಕಂಥ ತಿದ್ದುಪಡಿಗಳನ್ನು ಮಾಡದೇ ಹಾಗೇ ಪುನಃ ತೆಗೆದುಕೊಂಡು ಹೋಗಿ ಗವರ್ನರ್ ಮುಂದೆ ಇಟ್ಟಿರಿ. ಹೀಗಾದಾಗ ನಾವು ಎಲ್ಲೋ ಒಂದು ಕಡೆ ಪ್ರಜಾತಂತ್ರದ ಮೌಲ್ಯಗಳಿಗೆ ನಾವು ತೊಂದರೆ ಮಾಡುತ್ತಿದ್ದೇವೆ ಎಂದು ಅನಿಸುತ್ತದೆ.

ಅಧ್ಯಕ್ಷರು : ಏನು ತಿದ್ದುಪಡಿಗಳನ್ನು ಸಲಹೆ ಮಾಡಿದ್ದಿರಿ?

SRI KIMMANE RATNAKAR : Now we are taking shelter under Rule 105.

MR. SPEAKER : I am asking what are the amendments you suggested? ಏನು ಅಮೆಂಡ್‌ಮೆಂಟ್‌ಗಳನ್ನು ಹೇಳಿದ್ದಿರಿ?

ಶ್ರೀ ಕಿಮ್ಮನೆ ರತ್ನಾಕರ್ : ಕೋರಂ ಅನ್ನು ತೆಗೆದುಹಾಕಬೇಕು ಎಂದು ಹೇಳಿದ್ದೆವು. ಅಲ್ಲಿ ಏನಿತ್ತು ಎಂದರೆ, ಒಂದು ದಿನ ಮೀಟಿಂಗ್ ಕರೆದು ಕೋರಂ ಇಲ್ಲದೇ ಮುಂದಕ್ಕೆ ಹಾಕಿದರೆ next meeting ನಲ್ಲಿ ಕೋರಂ ಬೇಕಾಗಿಲ್ಲ ಎನ್ನುವುದು ಅವರ ನಿರ್ಣಯ. ಅದಕ್ಕೆ ನಾವು ವಿರೋಧ ಮಾಡಿದೆವು. ಅದನ್ನು ಒಪ್ಪಿಕೊಂಡಿದ್ದರು. ಅಧಿಕಾರಿಗಳು ಜಾಸ್ತಿ ಇದ್ದರು, ಅಲ್ಲಿಗೆ ರೈತರನ್ನು ಜಾಸ್ತಿ ಹಾಕಬೇಕು ಎಂದು ಹೇಳಿದ್ದೆವು. 16 ಜನರಲ್ಲಿ 10 ಜನ ಅಧಿಕಾರಿಗಳಿದ್ದರು. ಹೆಚ್ಚು ರೈತರನ್ನು ಹಾಕಬೇಕು ಎಂದು ನಾನೂ ಕೂಡ ಆ ದಿನ ಮಾತನಾಡಿದ್ದೇನೆ. ಮೊದಲು 6 ಜನ ರೈತರು, 6 ಜನ ಅಧಿಕಾರ ವರ್ಗದವರಿದ್ದರು. ಅದಕ್ಕೆ ನಾವು ವಾದ ಮಾಡಿದ್ದು ಏನೆಂದರೆ, ಹೇಗಿದ್ದರೂ ಅಲ್ಲಿರುವವರು ಆಡಳಿತ ಪಕ್ಷದವರೇ, ನಾವಲ್ಲ ಆದ್ದರಿಂದ ಹೆಚ್ಚು ರೈತರನ್ನು ಅಲ್ಲಿ ಇಡಿ, ಅಲ್ಲಿ Vice Chancellor ಕೆಳಗೆ ಬರುವವರೆಲ್ಲರೂ subordinates. ಅವರು ಯಾರೂ ಕೂಡ Vice Chancellor ವಿರುದ್ಧ ಮಾತನಾಡುವುದಿಲ್ಲ. ತಮ್ಮಲ್ಲಿ ನಾನು ಪ್ರಶ್ನೆ ಮಾಡುವಂತದ್ದು ಏನೆಂದರೆ Vice Chancellor ರವರು ಮೀಟಿಂಗ್ ಕರೆದು ಒಂದು ನಿರ್ಣಯ ತೆಗೆದುಕೊಳ್ಳುತ್ತಾರೆ. Officers subordinate to him are more in number. ಅವರೇನು ಹೇಳುತ್ತಾರೆ? Vice Chancellor ಏನು ನಿರ್ಧಾರ ತೆಗೆದುಕೊಳ್ಳುತ್ತಾರೆ ಅದಕ್ಕೆ ಅವರು ಒಪ್ಪಿಗೆ ಕೊಡುತ್ತಾರೆ. They will not have any voice to dissent it. Next meeting ನಲ್ಲಿ quorum ಬೇಡವೆಂದು ಹೇಳಿದರೆ ಮುಗಿಸುತ್ತಾರೆ. ನಾನು ಹೇಳುವುದೇನೆಂದರೆ, ರೈತರಿಗೆ equal rights ಕೊಡಬೇಕು. ಆ ದಿನ ನಾವೇನು suggest ಮಾಡಿದೆವು that is on record. ಇದನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳಿ, ಏನೀಗ?

MR. SPEAKER : No.

ಶ್ರೀ ಜಗದೀಶ್ ಶೆಟ್ಟರ್ : ಅಂದೇನು discussion ಮಾಡಿದರು, ಆಮೇಲೆ ಅದಕ್ಕೆ ನಾವು ಕೆಲವೊಮ್ಮೆ ತಿದ್ದುಪಡಿ ತಂದೆವು. ಮಾನ್ಯ ಸದಸ್ಯರು

ಸಲಹೆ ಸೂಚನೆ ಕೊಟ್ಟಿರುತ್ತಾರೆ. ಎಲ್ಲವನ್ನೂ ತಿದ್ದುಪಡಿಗೆ ಸೇರಿಸುವುದಕ್ಕಾಗುವುದಿಲ್ಲ. ಕೆಲವು ತಿದ್ದುಪಡಿಯನ್ನೂ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ನೀವು ಸಲಹೆ ಹೇಳಿದಿರಿ. Only on Governor's observations ಬಗ್ಗೆ ಏನಾದರೂ ಹೇಳುವುದಿದೆಯೇ? Governor ರವರು observations ಮಾಡಿರುವ ಬಗ್ಗೆ ತಮ್ಮದೇನಾದರೂ ಸಲಹೆ ಸೂಚನೆಗಳಿದ್ದರೆ ಆಕ್ಷೇಪಣೆಗಳಿದ್ದರೆ ಹೇಳಿ. Don't go beyond that.

ಶ್ರೀ ಕಿಮ್ಮನೆ ರತ್ನಾಕರ್ : ನನ್ನ ವಿನಂತಿಯನ್ನು ತಮಗೆ ಹೇಳುತ್ತೇನೆ.

ಅಧ್ಯಕ್ಷರು : ಹೇಳಿದಿರಿ. If you have any points on Governor's observation ಹೇಳಿ.

ಶ್ರೀ ಕಿಮ್ಮನೆ ರತ್ನಾಕರ್ : ಈಗ ಅವರೇನು ಬಿಲ್ ತಂದಿದ್ದಾರೆ, ಅದನ್ನು ನಾಳೆಗೆ ಚರ್ಚೆಗೆ ತನ್ನಿ. ಆಗ ಚರ್ಚೆ ಮಾಡೋಣ.

ಅಧ್ಯಕ್ಷರು : That is different issue.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಕಿಮ್ಮನೆ ರತ್ನಖಾರ್‌ರವರು ಹೇಳಿರುವುದನ್ನು ನಾನೂ ಸಮರ್ಥನೆ ಮಾಡುತ್ತೇನೆ.

ಅಧ್ಯಕ್ಷರು : Rule 105 ಪ್ರಕಾರ ಅದಕ್ಕೆ ಅವಕಾಶವಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅವಕಾಶ ಕೊಟ್ಟಿಲ್ಲ. ನಾನು ಒಪ್ಪುತ್ತೇನೆ. Rule 105ನಲ್ಲಿ ಅವಕಾಶವಿಲ್ಲದಿದ್ದರೂ ಮಂತ್ರಿಯವರು ಒಪ್ಪಿಕೊಂಡು ಅದನ್ನು incorporate ಮಾಡದಿದ್ದರೆ ಇದು ಸದನಕ್ಕೆ ಅಪಮಾನವೆಂದು ನಾನಂದುಕೊಳ್ಳುತ್ತೇನೆ. It is the right of the House. You were not in the Chair at that time. I understand. ಆಗ ಜಗದೀಶ್ ಶೆಟ್ಟರ್‌ರವರು ಸಭಾಧ್ಯಕ್ಷರಾಗಿದ್ದರು. ಅವರು ತಮ್ಮ Chair ನಿಂದ direction ಕೊಟ್ಟು, incorporate this amendment ಎಂದು ಹೇಳಿದ ಮೇಲೆ . . .

MR. SPEAKER : That is only suggestion given. Not direction. Rules ತೆಗೆದು ನೋಡಿ. Speaker ರವರು ಹೇಳಿದ್ದನ್ನೂ ಸರ್ಕಾರ ಪಾಲನೆ ಮಾಡಬೇಕೆಂದೇನೂ ನಿಯಮ ಇಲ್ಲ. It is there.

O.17 F – 16

ಶ್ರೀ ಜಗದೀಶ್ ಶೆಟ್ಟರ್ : ಆ ತಿದ್ದುಪಡಿಯನ್ನು adopt ಮಾಡಿಕೊಂಡಿದ್ದಾರೆ. ಸದಸ್ಯರು ಹಲವಾರು ಸಲಹೆಗಳನ್ನು ಕೊಟ್ಟಿರಬಹುದು. ಎಲ್ಲವನ್ನೂ ತಿದ್ದುಪಡಿ ಮಾಡಿಕೊಂಡಿರಲಿಕ್ಕಿಲ್ಲ. ಆದರೆ, ಸದಸ್ಯರ ಸಲಹೆ ಸೂಚನೆ ಮೇರೆಗೆ ಕೆಲವೊಂದು ತಿದ್ದುಪಡಿಗಳನ್ನು ಮಾಡಿಕೊಂಡಿದ್ದಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅದರ ಬಗ್ಗೆ ನೀವು ಆಮೇಲೆ ಎಲ್ಲರ opinion ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳಿ. Governor ರವರೇನು ಆಕ್ಷೇಪಣೆ ಮಾಡಿದ್ದಾರೆ, it is very important. 27(2)ಯಲ್ಲಿ ಅವರೇನು ಹೇಳಿದ್ದಾರೆಂದರೆ ಈಗೇನು 4 ಜನ nominee ಇದ್ದಾರೆ, ಅವರಲ್ಲಿ ಒಬ್ಬರನ್ನು Chairman ಆಗಿ nominate ಮಾಡಿ Chancellor ಮಾಡಬೇಕೆನ್ನತಕ್ಕ ಅವರ ಸಲಹೆ ಇದೆ. ಆದರೆ, ಸರ್ಕಾರ Act ನಲ್ಲಿ ಏನು incorporate ಮಾಡಿಕೊಂಡಿದೆ ಎಂದರೆ, The Secretary for the Department or a member suggested by him of the rank of Deputy Secretary will be the Chairman ಎಂದರೆ ಇದು ಅಪಮಾನ. It is not proper. What Governor has appropriately pointed out has to be accepted. I strongly recommend this. ಇಲ್ಲವೆಂದರೆ, it will be dilution of the Act. Secondly, Governor has made an observation on 27(2) of the Act. Chairman appoint ಮಾಡುವಾಗ, Search Commettee ಇದೆ. ಆಮೇಲೆ 27(3)ಯಲ್ಲೂ ಕೂಡ appointment ಮಾಡತಕ್ಕಂಥದ್ದು the Chancellor should have the authority, not the Government. These are certain amendments. What the Governor has recommended should be accepted in toto. This is my opinion. ಇಷ್ಟೇ ಅಲ್ಲ, Governor's recommendations should be accepted in toto because they are all valid points and they are in the interest of the Act and in the interest of public and not in the interest of Chancellor. So, it has to be incorporated. ಈ ಮನೆಯಲ್ಲಿ ಇದು ಪರಿಪಾಠವಾಗಬಾರದು. ಏನೆಂದರೆ, You are in the Chair. You are protecting our rights. When we suggest some amendments, the Government should be magnanimous enough to accept them if they are in the

public interest. Why are they so adamant? ಅದರಲ್ಲಿ ego ಪ್ರಶ್ನೆ ತೆಗೆದುಕೊಂಡರೆ ನಾವಿಲ್ಲಿ ಏಕಿರಬೇಕು? Since this is my second term in the House, I have made so many suggestions for amendment in the Act. When not even on e of them is accommodated then what is the point.? ನಾವಿಲ್ಲಿ ಸದನಕ್ಕೆ ಬರುವುದೇಕೆ? ನಾವೇನಾದರೂ ಕಾನೂನು ಬಾಹಿರವಾಗಿ ಇರುವುದನ್ನು public interest ಆಗಿ ಹೇಳದಿದ್ದರೆ O.K. we accept. In public interest, in good faith and in the interest of public ಹೇಳಿದರೂ ಕೂಡ if you are not accommodating our point, then what is the point.? You have to protect our rights. ಅದಕ್ಕೆ ನನ್ನದೊಂದು suggestion ಇದೆ. All the recommendations of the Governor should be accepted and ಹಿಂದೆ ಯಾರು House ನಲ್ಲಿ amendment ಗೆ ಸರ್ಕಾರ ಒಪ್ಪಿಕೊಂಡಿತ್ತು, ನಿಮ್ಮ Chair ನಿಂದ direction ಕೊಟ್ಟಿದ್ದಾರೆ. Those things should be incorporated in the Act.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಕಳೆದ ಬಾರಿಯ ಅಧಿವೇಶನದಲ್ಲಿ ಇದರ ಬಗ್ಗೆ ಸುಮಾರು ಒಂದೂವರೆ ಗಂಟೆ ಕಾಲ ಚರ್ಚೆ ಮಾಡಿದ್ದೆವು. ಬಹುಶಃ ಇಷ್ಟು Actಗಳಲ್ಲಿ ಅತೀ ಹೆಚ್ಚು ಚರ್ಚೆ ಈ amendment ಬಗ್ಗೆಯೇ ಆಗಿದೆ. ಅನೇಕ ಜನ ಸದಸ್ಯರು ನಾವೆಲ್ಲಾ suggestion ಕೊಟ್ಟಿದ್ದೆವು.

MR. SPEAKER : Once again, I am making it clear. Governor observation ಏನಿದೆ, ಅಷ್ಟಕ್ಕೆ ಮಾತ್ರ ತಾವು ಸೀಮಿತವಾಗಿ ಮಾತನಾಡಬೇಕು. Otherwise I don't allow.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ಸಚಿವರು ಉತ್ತರ ಕೊಡುವ ಸಂದರ್ಭದಲ್ಲಿ ನಾವಿಲ್ಲಿ ಕೊಟ್ಟಿರುವ ಸಲಹೆಯನ್ನು ಖಂಡಿತವಾಗಿಯೂ ಸೇರಿಸುತ್ತೇವೆಂದು ಹೇಳಿದ್ದಾರೆ, ಬೇಕಾದರೆ ಕಡತ ತರಿಸಿ ನೋಡಿ. ಅದರಲ್ಲಿ ಯಾವ್ಯಾವುದನ್ನು ಸೇರಿಸುತ್ತೇವೆಂದು ಹೇಳಿದ್ದಾರೆ, ಅದನ್ನು ಇದರಲ್ಲಿ ಸೇರಿಸಿಲ್ಲ.

ಅಧ್ಯಕ್ಷರು : ನಾನು ಮತ್ತೆ ಮತ್ತೆ ಹೇಳುವುದಿಲ್ಲ. Governor ರವರ observation ಬಗ್ಗೆ ನಿಮ್ಮದೇನು ಅಭಿಪ್ರಾಯವಿದೆ ಅದನ್ನು ಹೇಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಹಾಗಾದರೆ ಸರ್ಕಾರ ಇಲ್ಲಿ ನಮ್ಮ ಸಲಹೆಗಳನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿ ಅದನ್ನು Act ನಲ್ಲಿ ಸೇರಿಸದಿರುವುದನ್ನು ಕೇಳದೆ ನಾವು ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ?

MR. SPEAKER : That cannot be the question now. ಈಗ ಅದನ್ನು question ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಹಾಗಾದರೆ ಇದನ್ನು ಇಲ್ಲಿ ಚರ್ಚೆ ಏಕೆ ಮಾಡಬೇಕು? ಚರ್ಚೆ ಮಾಡುವಂತ ಅವಶ್ಯಕತೆ ಏನಿದೆ? ಆವತ್ತು ಸನ್ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಅದನ್ನು ಹಿಂದಿನ Speaker ಆಗಿದ್ದಂಥ ಜಗದೀಶ್‌ಶೆಟ್ಟರ್‌ರವರು ಸುಮಾರು ಎಲ್ಲಾ ಸದಸ್ಯರಿಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದರು, ನಾವೆಲ್ಲರೂ ಸಹ ಸಲಹೆ ಕೊಟ್ಟಿದ್ದೇವೆ. ನಾವು ಸಲಹೆ ಕೊಟ್ಟಿದ್ದರಲ್ಲಿ ನನ್ನ ಪ್ರಕಾರ 100ರಲ್ಲಿ ಕನಿಷ್ಠ 50% ಕೂಡ implement ಆಗಿಲ್ಲ. Detail ಆಗಿ ಹೇಳುವುದಕ್ಕೆ ನನಗೆ ಅವಕಾಶ ಕೊಟ್ಟರೆ ಹೇಳುತ್ತೇನೆ.

ಅಧ್ಯಕ್ಷರು : Detail ಆಗಿ ಹೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಯಾವ್ಯಾವ ಸದಸ್ಯರು ಏನೇನು Suggestions ಕೊಟ್ಟಿದ್ದಾರೆ, ಅದನ್ನು ಸರ್ಕಾರ ದಯಮಾಡಿ ಒಪ್ಪಿಕೊಳ್ಳಬೇಕು ಮತ್ತು ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರದ ಅಧೀನದಲ್ಲಿಯೇ ಆಡಳಿತ ನಡೆಸತಕ್ಕಂಥ ಒಂದು ವ್ಯವಸ್ಥೆಯನ್ನು ತರಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : Governor ರವರ observation ಬಗ್ಗೆಯೇ ಚರ್ಚೆ ಮಾಡೋಣ. ಆದರೆ, ಕಳೆದ ಅಧಿವೇಶನದಲ್ಲಿ ಸನ್ಮಾನ್ಯ ಜಗದೀಶ್‌ಶೆಟ್ಟರ್‌ರವರು ಸಭಾಧ್ಯಕ್ಷರಾಗಿದ್ದ ಕಾಲದಲ್ಲಿ ಇದರ ಬಗ್ಗೆ ಚರ್ಚೆಯಾಗಿತ್ತು.

ಅಧ್ಯಕ್ಷರು : ಮತ್ತೆ ಮತ್ತೆ ಅದನ್ನು raise ಮಾಡುವುದಕ್ಕೆ ಅವಕಾಶವಿಲ್ಲ. Rule 105 ಅನ್ನು ಹೇಳಿದ್ದೇನೆ. ಆ ಸೀಮಿತದಲ್ಲಿ ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅಂದು ನಾವಿಲ್ಲಿ ಸಲಹೆಗಳನ್ನು ಕೊಟ್ಟೆವು. ನಾವು ಮಾಡಿಕೊಡುತ್ತೇವೆನ್ನುವ ಭರವಸೆಯನ್ನು ಸದನಕ್ಕೆ ಮಾನ್ಯ ಕೃಷಿ ಸಚಿವರು ನೀಡಿದ್ದರು.

ಅಧ್ಯಕ್ಷರು : That is different. ಈಗ ಅದನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶವಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಆ ಸಲಹೆಗಳನ್ನು ಏಕೆ ತೆಗೆದುಕೊಂಡಿಲ್ಲ. ನಾವು ಹೇಳಿದಂಥ ಸಲಹೆ ಸೂಚನೆಗಳನ್ನು ಬಿಟ್ಟು ರಾಜ್ಯಪಾಲರು ಅಂಗೀಕಾರ ಮಾಡಿ ಕಾನೂನು ಮಾಡುವುದಾದರೆ ಸದನ ಏಕೆ ಬೇಕು? ನಾವು ಇಲ್ಲಿಗೆ ಏತಕ್ಕೆ ಬರಬೇಕು?

ಅಧ್ಯಕ್ಷರು : ಬಜೆಟ್ ಮೇಲೆ ಚರ್ಚೆ ಮಾಡುವಾಗ ಇದನ್ನೆಲ್ಲ ಹೇಳಬಹುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾವು ಕೊಟ್ಟಿರತಕ್ಕಂಥ ಸಲಹೆ ಸೂಚನೆಗಳನ್ನು ತಿರಸ್ಕಾರ ಮಾಡಿದ್ದರೆ ಆಯಿತು. ತಿರಸ್ಕಾರ ಮಾಡದೆಯೇ ಆಯಿತು, ಇಂಥ ಸಲಹೆ ಸೂಚನೆಗಳನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿ ಅದರೊಳಗೆ ಕೈಬಿಟ್ಟಿರುವ ಕೆಲವು ನಿದರ್ಶನಗಳಿವೆ. ಅದರ ಬಗ್ಗೆ ಚರ್ಚೆಯಾಗ ಬೇಕೆನ್ನುವ ವಿಚಾರ ಬಿಟ್ಟರೆ ಮತ್ತೇನೂ ಇಲ್ಲ. ರಾಜ್ಯಪಾಲರ observation ನಲ್ಲಿ ಏನು point ಅನ್ನು find out ಮಾಡಿದ್ದಾರೆ, ಅದರ ಬಗ್ಗೆ ಬೆಳಕನ್ನು ಚೆಲ್ಲೋಣ. ಅದನ್ನು ಒಪ್ಪಿಕೊಳ್ಳುವುದು ಅಥವಾ ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಚಾರ.

ಶ್ರೀ ಜಗದೀಶ್ ಶೆಟ್ಟರ್ : ಆವತ್ತು ಬಹಳಷ್ಟು discussion ಆಯಿತು. ಕೆಲವೊಂದು ವಿಷಯಗಳ ಬಗ್ಗೆ ಕೆಲವು ತಿದ್ದುಪಡಿಗಳನ್ನು ಮಾಡಿ ಸೇರಿಸಬೇಕೆಂದು ಆಯಿತು. ಕೆಲವೊಂದು ವಿಷಯಗಳನ್ನು adopt ಮಾಡಿಕೊಂಡಿದ್ದಾರೆ. ಆವತ್ತು ಕೆಲವು ಮಾನ್ಯ ಸದಸ್ಯರುಗಳು ಕೆಲವೊಂದು ಸಲಹೆ ಸೂಚನೆಗಳನ್ನು ಕೊಟ್ಟಿದ್ದರು, ಅದರಲ್ಲಿ ಯಾವುದನ್ನು adopt ಮಾಡಿ ಕೊಳ್ಳಲಿಕ್ಕೆ ಸಾಧ್ಯವಿತ್ತೊ ಅದನ್ನು ಮಾಡಿಕೊಂಡಿದ್ದೇವೆ. ಆದರೆ ಕೆಲವೊಂದನ್ನು ಮಾಡಿಕೊಳ್ಳಲಿಕ್ಕೆ ಆಗಲಿಲ್ಲ. Discussion ಆಗುವ ಸಂದರ್ಭದಲ್ಲಿ ಗೌರವಾನ್ವಿತ ಸದಸ್ಯರು ಈ ರೀತಿ implement ಮಾಡಬೇಕೆಂದು ಹಲವಾರು ಸಲಹೆ ಸೂಚನೆಗಳನ್ನು ಕೊಟ್ಟಿರುತ್ತಾರೆ. ಅದರಲ್ಲಿ ಕೆಲವೊಂದನ್ನು ಸರ್ಕಾರ ತೆಗೆದುಕೊಳ್ಳುತ್ತದೆ, ಕೆಲವನ್ನು ತೆಗೆದುಕೊಳ್ಳುವುದಿಲ್ಲ. ಆವತ್ತು ಆಗಿದ್ದು

ಹಾಗೆಯೇ. ಆದರೆ, ಅದನ್ನು ಮತ್ತೆ ಇಲ್ಲಿ discussion ಮಾಡುವುದಾದರೆ ಏನು point ಇದೆ?

ಅಧ್ಯಕ್ಷರು : ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾವು ಕೊಟ್ಟಂಥ ಸಲಹೆ ಸೂಚನೆಗಳನ್ನು ಸೇರಿಸಿದ್ದರೆ ನಾವು ಕೇಳುವುದಿಲ್ಲ.

ಅಧ್ಯಕ್ಷರು : ಶಿವಲಿಂಗೇಗೌಡರೆ, ನಾನು ಮತ್ತೆ ಮತ್ತೆ ಹೇಳಲಿಕ್ಕೆ ಆಗುವುದಿಲ್ಲ. Please ಕುಳಿತುಕೊಳ್ಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ತಾವು ದಾಖಲಾತಿ ತರಿಸಿ ನೋಡಿ.

ಅಧ್ಯಕ್ಷರು : ದಾಖಲಾತಿ ತರಿಸುವುದಕ್ಕೆ ಈಗ ಅವಕಾಶವಿಲ್ಲ. ನೀವು ಹೇಳಿದ್ದನ್ನೇ ಹೇಳಿದರೆ ದಾಖಲಾತಿಗೆ ಹೋಗಬಾರದೆಂದು ನಾನು ಹೇಳುತ್ತೇನೆ ಅಷ್ಟೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಹಾಗಾದರೆ, ನಾವಿನ್ನೇನೂ ಮಾಡುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಮಾತನಾಡುವುದಕ್ಕೆ ಅವಕಾಶವಿಲ್ಲವೆಂದರೆ ಹೇಗೆ? ಈ ಸದನದಲ್ಲಿಯೇ ಈ ತರಹ ನಡೆಯುತ್ತದೆ ಎಂದರೆ ಇದಕ್ಕೆ ಅರ್ಥವಿಲ್ಲ.

ಡಾ: ಎಂ.ಸಿ. ಸುಧಾಕರ್ : ರಾಜ್ಯಪಾಲರು ಏನು ಈ ಬಿಲ್ ಅನ್ನು ವಾಪಸ್ಸು ಕಳುಹಿಸಿದ್ದರು, ಬಹುಶಃ ಇದರಲ್ಲಿ ಒಂದೆರಡು ವಿಚಾರವನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಮುಖ್ಯವಾಗಿ ವಿಶ್ವವಿದ್ಯಾನಿಲಯಗಳು – ಇಲ್ಲಿ ಎಲ್ಲಾ ರೀತಿಯಲ್ಲಿ ತಿದ್ದುಪಡಿ ಮಾಡುವಂಥದ್ದು, ಅಧಿಕಾರ ಕೊಡುವಂಥದ್ದು ಅನುದಾನವನ್ನು ಕೊಡತಕ್ಕಂಥ ಎಲ್ಲಾ ಕೆಲಸವನ್ನು ಈ ಎರಡು ಮನೆಗಳಲ್ಲಿ ಮಾಡುತ್ತೇವೆ. ಅಲ್ಲಿ ಕಾರ್ಯಕ್ರಮಗಳನ್ನು ಮಾಡಿದಾಗ ಕರೆಯತಕ್ಕಂಥ ಕನಿಷ್ಠ ಸೌಜನ್ಯ ಸಹ ಅವರಿಗಿಲ್ಲ. ನಾವು ಎಲ್ಲಾ ಅಧಿಕಾರವನ್ನು ಅವರಿಗೆ ಕೊಟ್ಟು ಅವರಿಂದ ನಾವು ಅವಮಾನಿತರಾಗತಕ್ಕಂಥ ಪರಿಸ್ಥಿತಿ ಇದೆ.

ಎಲ್ಲೋ ಒಂದು ಕಡೆ ಇದರ ಮೇಲೆ ಸರ್ಕಾರದ ಹಿಡಿತ ಇರಲೇಬೇಕಾಗುತ್ತದೆ. ಸಂಪೂರ್ಣವಾಗಿ ರಾಜ್ಯಪಾಲರ ಕೈಗೆ ಕೊಟ್ಟಾಗ ರಾಜ್ಯಪಾಲರ ಆದೇಶ ಅಲ್ಲಿಂದ ಬಂತು, ಇಲ್ಲಿಂದ ಬಂತು ಎಂದು ಹೇಳಿ ಸಭೆ ಸಮಾರಂಭಗಳಲ್ಲಿ ಶಾಸಕರನ್ನು ಅವಮಾನ ಮಾಡುವ ವಿಚಾರಗಳು ನಡೆಯುತ್ತವೆ. ಅದರಲ್ಲಿ ಸರ್ಕಾರದ ಅಧಿಕಾರವೇನಿದೆ, ಅದು ಮುಂದುವರಿಯಬೇಕಾಗುತ್ತದೆ. ಇದರಲ್ಲಿ Secretary to Government in-charge of

Horticulture Department ಎಂದು ಇದೆ. Deputy Secretary ಮಟ್ಟಕ್ಕೆ ತೆಗೆದುಕೊಂಡು ಹೋಗುವುದು ಬೇಡ. Secretary ಮಟ್ಟದಲ್ಲಿಯೇ ಅಧಿಕಾರ ಇರುವುದು, Search Committee Convener ಆಗುವುದಕ್ಕೆ ಜವಾಬ್ದಾರಿ ಕೊಡುವುದು ಬಹಳ ಮುಖ್ಯ. ನಾವು ಹಿಂದೆಯೂ ರೈತರ ಪ್ರಾತಿನಿಧ್ಯ ಜಾಸ್ತಿ ಮಾಡಬೇಕೆಂದು ಹೇಳಿದ್ದೆವು. ಅದರ ಬದಲಿಗೆ ರೈತರ ಪರವಾಗಿ ಈ ವಿಧಾನಸಭೆಗೆ ಸಾಕಷ್ಟು ಜನ ಶಾಸಕರಾಗಿ ಬಂದಿರುವವರಿಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿರುವುದು ಇದರಲ್ಲಿ ಅಡಕವಾಗಿದೆ. ಹೆಚ್ಚು ಸ್ವಾಯತ್ತತೆ ಕೊಡುವ ವಿಚಾರದಲ್ಲಿ ಎಲ್ಲೋ ಒಂದು ಕಡೆ ಸರ್ಕಾರದ ಹಿಡಿತವಿರಬೇಕು. ನಾನು ಕೃಷಿ ಸಚಿವರಲ್ಲಿ ಒಂದೆರಡು ವಿಚಾರವಾಗಿ ಮಾತನಾಡಿದಾಗ ಎಲ್ಲೋ ಒಂದು ಕಡೆ ಕೆಲವು Vice Chancellors ಸರ್ಕಾರದ ವ್ಯವಸ್ಥೆಗೆ ಗೌರವ ಕೊಡುವ ರೀತಿಯಲ್ಲಿ ನಡೆದುಕೊಳ್ಳುತ್ತಿಲ್ಲ. ಬಹಳ ಅಗೌರವ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದನ್ನು ನಾವು ಗಮನಿಸಿದ್ದೇವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಮನೆಗೆ ಇರುವ ಗೌರವವನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಇವತ್ತು ನಾವು ವಿರೋಧ ಪಕ್ಷದಲ್ಲಿರಬಹುದು, ನಾಳೆ ಆಡಳಿತ ಪಕ್ಷಕ್ಕೆ ಬರಬಹುದು, ಆ ವಿಚಾರ ಬೇರೆ. ಸದನದಲ್ಲಿರುವ ಸದಸ್ಯರು ಘನತೆ ಗೌರವ ಕಾಪಾಡುವ ರೀತಿಯಲ್ಲಿ ಈ ವ್ಯವಸ್ಥೆಯಲ್ಲಿ ಈ ಸದನದಿಂದ ಹೋಗುವ ತಿದ್ದುಪಡಿ ಅಥವಾ ವಿಧೇಯಕಗಳಿಗೆ ಅವರು ಬದ್ಧರಾಗಿ ಗೌರವ ಕೊಡುವ ರೀತಿಯಲ್ಲಿ ನಾವೂ ಇದರಲ್ಲಿ ಅಡಕ ಮಾಡುವುದು ಬಹಳ ಮುಖ್ಯ. ಎಲ್ಲಾ ರೀತಿಯ್ಲಲೂ ಅವರು ನಮ್ಮ ಮೇಲೆ ಸವಾರಿ ಮಾಡುವ ರೀತಿಗೆ ಅವಕಾಶ ಕೊಡಬಾರದು. ರಾಜ್ಯಪಾಲರು ಕೆಲವು ವಿಚಾರಗಳನ್ನೇನು ಪ್ರಸ್ತಾಪ ಮಾಡಿದ್ದರೆ ನಾವು ನಮಗೆ, ಈ ಸದನಕ್ಕೆ ಗೌರವ ತರುವ ರೀತಿಯಲ್ಲಿ ಅದನ್ನು ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಸರ್ಕಾರ ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದೆ ಎಂದು ಭಾವಿಸುತ್ತೇನೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರೈತರ ವಿಶ್ವವಿದ್ಯಾಲಯ ಆಗಬೇಕೇ ಹೊರತು ಅಧಿಕಾರಶಾಹಿ ವಿಶ್ವವಿದ್ಯಾಲಯ ಆಗಬಾರದು. ಅದಕ್ಕಾಗಿ ಅವರು ಏನು ತಂದಿದ್ದಾರೆ, ಅದರಲ್ಲಿ ಕೋರಂ ಬಗ್ಗೆ ಹೇಳಿದ್ದಾರೆ. ರೈತರ ಸಂಖ್ಯೆ ಎಷ್ಟಿರಬೇಕೆಂದು ಹೇಳಿದ್ದಾರೆ. ರೈತರ ಪ್ರತಿನಿಧಿಗಳಿಗಿಂತ ಎರಡು ಪಟ್ಟು ಅಧಿಕಾರಿ ಪ್ರತಿನಿಧಿಗಳೇ ಇದ್ದಾರೆ. ಅದರ

ಪ್ರಕಾರ ಅಧಿಕಾರಿಗಳೇ ಸಾಕು, ರೈತರು ಯಾರೂ ಬೇಕಾಗಿಲ್ಲ, ಕ್ಕೋರಂ ಬೇಕಾಗಿಲ್ಲ, ಈ ತರಹದ ICAR norms ನಲ್ಲಿ ಹೋಗುತ್ತಿದ್ದೇವೆ ಎನ್ನುವ ಒಂದೇ ಒಂದು ಕಾರಣ ಇಟ್ಟುಕೊಂಡು ಸರ್ಕಾರ ಏನು ಮಾಡುತ್ತಿದೆ, ಅದನ್ನು ಮಾಡಬಾರದು. ರಾಜ್ಯಪಾಲರು ತಮ್ಮ ಸಂದೇಶದಲ್ಲಿ ಹೇಳಿದ್ದಾರೆ.

ಅಧ್ಯಕ್ಷರು : ಅದು ಬಿಡಿ. Observation ಮಾತ್ರ ಹೇಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಅವರು "ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ಮತ್ತು ಸಂಶೋಧನಾ ಪರಿಸರ ಪಾವಿತ್ರ್ಯವನ್ನು ಸಂರಕ್ಷಿಸುವುದಕ್ಕಾಗಿ ಅವುಗಳನ್ನು ರಾಜಕೀಯ ಚಟುವಟಿಕೆಗಳು ಪ್ರಭಾವ ಮತ್ತು ಒತ್ತಡಗಳಿಂದ ಮುಕ್ತಗೊಳಿಸತಕ್ಕದ್ದು" ಎಂದು ಹೇಳಿದ್ದಾರೆ. ಅವರ ನಿರ್ದೇಶನ ಬಹಳ ಸ್ಫುಟವಾಗಿದೆ, ನೇರವಾಗಿದೆ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಕ್ಕಾಗಿ, ರೈತರ ಉಳಿವಿಗಾಗಿ ಈ amendment ಅನ್ನು ಅವರು ಮಾಡಿ ರೈತರ ಪರವಾಗಿ ಮಾಡಲಿ ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ತಾವು ಈಗಾಗಲೇ ಸಾಕಷ್ಟು ಬೆಳಕು ಚೆಲ್ಲಿದ್ದೀರಿ. ತಾವು ವಿಷಯ ಬಿಟ್ಟು ಹೋಗುತ್ತೀರಿ.

ಶ್ರೀ ಟಿ.ಬಿ. ಜಯಚಂದ್ರ : ನಾನು ಏನು ಹೇಳಿದರೂ ನಿಮ್ಮ ಕಿವಿಗೆ ಹೋಗುವುದಿಲ್ಲ.

ಅಧ್ಯಕ್ಷರು : ಕಿವಿಗೆ ಹೋಗುವ ಪ್ರಶ್ನೆ ಅಲ್ಲ. ಈ ನಿಯಮವನ್ನು ನಾನು ಮಾಡಿದ್ದಲ್ಲ. ನೀವು ಹಾಗೆ ಹೇಳಬಾರದು. ಕಿವಿಗೆ ಹೋಗುವುದಿಲ್ಲ. ಎಂದರೆ ಹೇಗೆ.? Governor ಹೇಳಿದ್ದರ ಬಗ್ಗೆ ಬಿಟ್ಟು ಬೇರೆ ಚರ್ಚೆಗೆ ಅವಕಾಶವಿಲ್ಲ. ಅವಕಾಶವಿಲ್ಲವೆಂದ ಮೇಲೂ ಹೇಳಿದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ : ದಯವಿಟ್ಟು ಅವಕಾಶ ಇಲ್ಲವೆಂದು ಹೇಳಬೇಡಿ. ನೀವು ಕೇಳುತ್ತಿಲ್ಲ ಎಂದು ಹೇಳಿ ಅಷ್ಟೆ.

ಅಧ್ಯಕ್ಷರು : ಅವಕಾಶ ಇಲ್ಲ ಎಂದೇ ಹೇಳಬೇಕಾಗುತ್ತದೆ. No.

ಶ್ರೀ ಟಿ.ಬಿ ಜಯಚಂದ್ರ : ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಈಗಲೂ ಕೂಡ ನನಗೆ ಎಲ್ಲೋ ಒಂದು ಕಡೆ ಸ್ವಲ್ಪವಾದರೂ ಸರ್ಕಾರದವರು ರೈತರ ಬಗ್ಗೆ ಯೋಚಿಸುತ್ತಾರೆಂದು ಸರ್ಕಾರದ ಮೇಲೆ, ಮುಖ್ಯಮಂತ್ರಿಯವರ ಮೇಲೆ ವಿಶ್ವಾಸವಿದೆ. ರೈತರ ವಿಚಾರದಲ್ಲಿ ತಾರತಮ್ಯ ಮಾಡುವುದಿಲ್ಲ ಎಂಬ ವಿಶ್ವಾಸವಿದೆ. ಅವರಿಗೆ ಎಲ್ಲೋ ಒಂದು ಕಡೆಗೆ

ಜ್ಞಾನೋದಯ ಆಗಿ ರಾಜ್ಯಪಾಲರಿಗೆ ಕಳುಹಿಸುವ ಮುಂಚೆ ಹೌದು ಬದಲಾವಣೆ ಮಾಡಬೇಕಾಗಿತ್ತು ಎನ್ನುವಾಗ ಹಿಂದೆ ಏನು ಹೇಳಿದ್ದರು ಎನ್ನುವುದು ಕಡತದಲ್ಲಿ ಸಿಗದಿದ್ದರೆ ತಪ್ಪಾಗುತ್ತದೆ. ಆ ಕಾರಣದಿಂದ ನಾನು ಹೇಳುತ್ತೇನೆ. ಶೆಟ್ಟರ್‌ರವರೇ ನಾನು ಒಂದು ಅಂಶವನ್ನು quote ಮಾಡುತ್ತೇನೆ, ಏನೆಂದರೆ "Powers and functions of the Board" ಎಂದು ordinance ನಲ್ಲಿತ್ತು. ಅದರಲ್ಲಿ "To approve the recommendation for appointment of the officers and teachers and other employees of the University of the rank of an Assistant Professor and above" ಎಂದು ಇತ್ತು. ನಾವು ಅದು ಬೇಡ ಎಂದು suggest ಮಾಡಿದ್ದೆವು. ಹಳೆಯ Act ಪ್ರಕಾರ ಮಾಡಿ ಎಂದು ಹೇಳಿದ್ದೆವು. "To approve the recommendation for appointment of Officers, teachers and other employees of the University" ಎಂದು ನಾವು Suggest ಮಾಡಿದ್ದೆವು. ಹಳೆಯ Act ನಲ್ಲಿ ಇರುವುದು correct ಆಗಿ ಇದೆ ಎಂದು ಹೇಳಿದ್ದೆವು. ಈಗ ಏನು scope ಆಗುತ್ತದೆಂದರೆ, clerks, non-teaching staff ಅನ್ನು Vice Chancellor ರವರೇ appoint ಮಾಡಿಕೊಳ್ಳಬಹುದು. Board ಮುಂದೆ ತರಬೇಕಾಗಿಲ್ಲ. Sweeping powers ಇಲ್ಲಿ ಕೊಟ್ಟಾಗ ಏನಾಗುತ್ತದೆ? ಈ ವಿಚಾರದಲ್ಲಿ checks and counter checks ಇರಬೇಕಾಗುತ್ತದೆ. ಈ ರೀತಿಯಾಗಿ sweeping powers ಕೊಡುತ್ತೇವೆ, ಪರವಾಗಿಲ್ಲವೆಂದರೆ ಬಿಡಿ, ನಮಗೇನಂತೆ? ನಾಳೆ ಏನಾದರೂ ಹೆಚ್ಚು ಕಡಿಮೆ ಆದಾಗ ಪುನಃ ಸದನದ ಮುಂದೆ ಬರಬೇಕಾಗುತ್ತದೆ. ಈಗಲೂ ನಾನು ಮುಖ್ಯಮಂತ್ರಿಯವರಲ್ಲಿ ವಿನಯದಿಂದ ಹೇಳುತ್ತೇನೆ, ಬೇಕಾದರೆ ಕಡತ ತರಿಸಿ ನೋಡಿ. ನಾನು ಎಲ್ಲವನ್ನೂ ಪ್ರಸ್ತಾಪ ಮಾಡುವುದಿಲ್ಲ. ಅಂದು ಮುಖ್ಯಮಂತ್ರಿಯವರು ಏನು ಹೇಳಿದ್ದರು, ಅದು ಕೂಡ ಇವತ್ತು ಅಡಕವಾಗಿಲ್ಲ. ಅದನ್ನೂ ಕೂಡ ಅಧಿಕಾರಿಗಳು ತಿದ್ದುವ ಕೆಲಸ ಮಾಡಿದ್ದಾರೆ. Legislators ಎಂದರೆ MLA, MLC ಬೇರೆ ಎಂದು ವ್ಯಾಖ್ಯಾನ ಮಾಡುತ್ತೀರಲ್ಲಾ, ಇದೇನಿದು? ನನಗೆ ಅರ್ಥವಾಗುತ್ತಿಲ್ಲ. ಮುಖ್ಯಮಂತ್ರಿಯವರನ್ನೇಕೆ ಇಕ್ಕಟ್ಟಿಗೆ ಸಿಲುಕಿಸುತ್ತೀರಿ ರವಿಂದ್ರನಾಥ್‌ರವರೆ, ದಯವಿಟ್ಟು ಯೋಚನೆ ಮಾಡಿ.

O.17 F – 17

ಶ್ರೀ ಜಗದೀಶ್ ಶೆಟ್ಟರ್ : ರೈತರ ಪ್ರಾತಿನಿಧ್ಯ ಇಲ್ಲವೆಂಬ ಸಲಹೆ ಬಂತು. ನಿಮ್ಮ ಸಲಹೆ ಸೂಚನೆ ನಂತರವೇ 5 ಜನ ರೈತರಿಗೆ ಪ್ರಾತಿನಿಧ್ಯ ಸಿಕ್ಕಿತು. ಆಮೇಲೆ ಜನಪ್ರತಿನಿಧಿಗಳು ಇರಬೇಕೆಂಬ ಸಲಹೆ ಬಂತು. ಜನಪ್ರತಿನಿಧಿಗಳು ಸಹ ಇರಲಿಕ್ಕೆ ಅವಕಾಶ ಬಂತು. ನಿಮ್ಮ ಸಲಹೆ ಸೂಚನೆ ಮೇಲೆಯೇ ಇವೆಲ್ಲ ಬಂದಿದ್ದು. ಈ ಸದನದಲ್ಲಿ ಆವಾಗ ಏನು discussion ಆಯಿತು, ಆಸಲಹೆ ಸೂಚನೆ ಮೇಲೆ ಅದನ್ನು ನಾವು adopt ಮಾಡಿಕೊಂಡಿದ್ದು.

ಶ್ರೀ ಟಿ.ಬಿ. ಜಯಚಂದ್ರ : ನಮ್ಮ ಸಲಹೆ ಸೂಚನೆ ಎಂದರೆ ಬೇಡವೇ ಬೇಡ ಅದನ್ನು ಕಿತ್ತು ಹಾಕಿ ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : University Act ಏನಿದೆ, ಅದರ ಪ್ರಕಾರ search Committee, ಕುಲಪತಿಗಳ ನೇಮಕ ಇರಬಹುದು, ಎಲ್ಲವೂ ಬೇರೆ ಬೇರೆ University ಗಳನ್ನು ಸರ್ಕಾರಕ್ಕೆ ಏನು ಅಧಿಕಾರ ಇದೆ, ಅದೇ ಅಧಿಕಾರ ಇದರಲ್ಲೂ ಇದೆ. ಹೀಗಾಗಿ ಅದರಲ್ಲೇನೂ ಬಹಳ difference ಮಾಡಿಲ್ಲ. ಹಾಗಾಗಿ ಮಾನ್ಯ ಸಭಾಧ್ಯಕ್ಷರೆ, ತಾವು ಇದನ್ನು ತೆಗೆದುಕೊಳ್ಳಬೇಕು. ರವೀಂಧ್ರನಾಥ್‌ರವರೇ, ತಾವು ಮಂಡಿಸಬಹುದು.

ಶ್ರೀ ವೆಂಕಟರಾವ್ ನಾಡಗೌಡ : ಈ amendment ಅನ್ನು ಏತಕ್ಕೋಸ್ಕರ ತಂದಿದ್ದಾರೆಂದು ಎಲ್ಲರಿಗೂ confusion ಇದೆ. ಇದನ್ನು ತರಬೇಕಾದ ಅವಶ್ಯಕತೆ ಇರಲಿಲ್ಲ. ಮುಂಚೆ ಇದ್ದ ಕಾನೂನು ಸರಿಯಾಗಿತ್ತು. ರಾಯಚೂರಿನಲ್ಲಿ ಹೊಸ Agricultural University ಮಾಡಿದ್ದೇವೆ ಎಂದು ಹೇಳುವುದಕ್ಕೆ Act ತಿದ್ದುಪಡಿ ಮಾಡಬೇಕಾದ ಅವಶ್ಯಕತೆ ಬಂದಾಗ ಇಷ್ಟೆಲ್ಲ ಗೊಂದಲ ಮಾಡಿ ಎಲ್ಲಾ ಕಾನೂನುಗಳನ್ನು ತಿದ್ದುವುದಕ್ಕೆ ಹೋಗಿ 2–3 ದಿನ ಚರ್ಚೆ ಮಾಡಿ ಹಲವಾರು Suggestions ಬಂತು. ಹಿಂದೆ ಇದ್ದ Act ಬಹಳ perfect ಇತ್ತು. ಯಾವುದೇ ಕಾನೂನು ತಿದ್ದುಪಡಿ ಮಾಡಬೇಕಾದರೆ ಯಾವ ಕಾರಣಕ್ಕೆ ಮಾಡಬೇಕು ಎಂದು ಹೇಳದೆ ಗೊಂದಲಮಯ ಮಾಡಿ, ಇವತ್ತು ಎಂಥ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆಂದರೆ ಯಾವ University ಗೂ ಯಾವ Act ಈಗ ಇಲ್ಲದಂತಾಗಿದೆ. ಮುಂಚೆ ಇದ್ದ Act ಹೋಗಿದೆ. ಹೊಸ Act ಯಾವುದೂ pass ಆಗಿಲ್ಲ. ಇಂಥ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿದೆ. ಅಧಿಕಾರಿಗಳು ಈ Act ಅನ್ನು ಏಕೆ ತಂದರೋ ಗೊತ್ತಿಲ್ಲ.

ಅನಾವಶ್ಯಕವಾಗಿ ಎಲ್ಲಾ ಬದಲಾವಣೆಗಳನ್ನು ಮಾಡಿದರು. ಮುಂಚೆ ಎಲ್ಲಾ ಸರಿ ಇತ್ತು. ಆ Regents ಎಂದು ಎಷ್ಟು ಚೆನ್ನಾಗಿ ಕರೆಯುತ್ತಿದ್ದರು; ಅದನ್ನೆಲ್ಲ ತೆಗೆದು ಸದಸ್ಯರು ಎಂದು ಕರೆದರು. ಏನೇನೋ ಮಂಡಳಿಗಳು ಎಂದು ಮಾಡಿದರು. ಅವಶ್ಯಕತೆ ಏನಿತ್ತು? ಏತಕ್ಕೆ ತಿದ್ದುಪಡಿ ಮಾಡಿದರೋ ಯಾರಿಗೂ ಗೊತ್ತಿಲ್ಲ, ಆದರೆ ಮಾಡಿದ್ದಾರೆ. ಈಗ ಈ ಪರಿಸ್ಥಿತಿಯಲ್ಲಿದೆ. ಯಾರೇ ಅಧ್ಯಕ್ಷರು ಆಗಬೇಕಾದರೆ ಕಾರ್ಯದರ್ಶಿ ಮಟ್ಟಕ್ಕಿಂತ ಕೆಳಗಿಳಿಸ ಬಾರದು. ಇದನ್ನು Governor point out ಮಾಡಿದ್ದಾರೆ. ಅದನ್ನು consider ಮಾಡಿ ತಿದ್ದುಪಡಿ ಮಾಡಿ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) : Agriculture University Bill Pass ಆದ 1964 ರಿಂದಲೂ SC/ST ಸದಸ್ಯರು ಇರಲಿಲ್ಲ. ನಾವು ಒಟ್ಟು 5 ಜನರಲ್ಲಿ ರೈತರಾದ ಇಬ್ಬರು SC/ST ಜನರನ್ನು ಸೇರಿಸಿ ಸದಸ್ಯರನ್ನಾಗಿ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ರಾಜ್ಯಪಾಲರು ಏನು observe ಮಾಡಿದ್ದಾರೆ? Article 200 of Constitution ಪ್ರಕಾರ ಏತಕ್ಕೆ ವಾಪಸ್ಸು ಕಳುಹಿಸಿದ್ದಾರೆ? Rule 105 ಪ್ರಕಾರವಾಗಿ ಎಷ್ಟಿರ ಬೇಕೆಂಬುದನ್ನೆಲ್ಲ ಅವರು explain ಮಾಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅದು ಮಾಡಿಲ್ಲ, ಇದು ಮಾಡಿಲ್ಲ ಎಂದು ವಿರೋಧ ಪಕ್ಷದ ಸದಸ್ಯರು ಹೇಳಿದರು. ಅದಕ್ಕೆ ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ. ನಾವು ಸಲಹೆ ಸೂಚನೆ ಕೊಟ್ಟೆವು. ಅದನ್ನು ಅಳವಡಿಸಿ ಕೊಳ್ಳಲಿಲ್ಲವೆಂದು ಹೇಳಿದ್ದಕ್ಕೆ ಅವರು ಹೇಳಿದರು.

ಶ್ರೀ ಸಿದ್ದರಾಮಯ್ಯ : ನಾವು ಅಂದು ಒಂದು ಗಂಟೆ ಕಾಲ ಮಾತನಾಡಿದೆವು, ಅದನ್ನೇನಾದರೂ ತಾವು ಸೇರಿಸಿದ್ದೀರಾ? ನೀವು ಹೇಳಿದ್ದಂಥದ್ದನ್ನು ಸೇರಿಸಿದ್ದಾರೆಯೇ? ಮುಖ್ಯಮಂತ್ರಿಯವರನ್ನು ಹೇಳಿದ್ದನ್ನು ಸೇರಿಸಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್ : ಕೆಲವು ಸದಸ್ಯರು ಸಲಹೆ ಸೂಚನೆಗಳನ್ನು ಕೊಟ್ಟಿರುತ್ತಾರೆ, ಅವೆಲ್ಲವನ್ನೂ ಸೇರಿಸಿಕೊಂಡು amendment ಮಾಡಿ adopt ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಅಂದು ಕೆಲವನ್ನು ಅವರು ಒಪ್ಪಿಕೊಂಡು ಕೆಲವನ್ನು adopt ಮಾಡಿಕೊಂಡಿದ್ದಾರೆ. Amendment ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಈಗ ಆ ಕಮಿಟಿಗೆ 24 ಜನ ಸದಸ್ಯರನ್ನು ಮಾಡಿದ್ದೀರಿ. ಹಿಂದೆ Board of Regents ಎಂದು ಇತ್ತು.

ಅದು ಬಹಳ ಗೌರವಯುತವಾದ ಕಮಿಟಿ ಇತ್ತು. ಅದನ್ನು ತೆಗೆದುಹಾಕಿ ಏಕೆ Management Committee ಎಂದು ಮಾಡಿದ್ದೀರಿ? Board of Regents ಇದ್ದಿದ್ದರೆ ನಿಮಗೆ ಏನು ತೊಂದರೆ ಆಗುತ್ತಿತ್ತು. 63ರ Act ನಲ್ಲಿ Board of Regents ಎಂದು ಇರುತ್ತಿತ್ತು. ಅದನ್ನು ಬದಲಾಯಿಸಿದ್ದು ಏಕೆ? ಹೀಗೆ ಬದಲಾಯಿಸಿದ್ದರಿಂದ ಕೃಷಿ ಉತ್ಪನ್ನ ಜಾಸ್ತಿ ಆಗಿಬಿಡುತ್ತದೆಯೇ? Research ಜಾಸ್ತಿ ಆಗುತ್ತದಾ? Extension work ಜಾಸ್ತಿ ಆಗುತ್ತದಾ? Agriculture productivity ಜಾಸ್ತಿ ಆಗುತ್ತದಾ? By Changing the name from Board of Regents to the Member of Management ಎಂದು ಬಿಟ್ಟರೆ change ಆಗಿ ಬಿಡುತ್ತದೆಯೆ? ಏನೇನು change ಆಗಿ ಬಿಟ್ಟಿದೆ ಹೇಳಿ ನೋಡೋಣ. We are facing challenges. What is our challenge? Food production is the Challenge. We are short of food. ದೇಶದಲ್ಲಿ ಈಗ food security ಆಗಬೇಕು. Does this bill address these challenges? Does this Committee by changing the name will solve the food problem? ಮತ್ತೆ ಏಕೆ ಈ ಬಿಲ್ ತಂದಿರಿ? ನಮ್ಮ ದೇಶದ ಮುಂದೆ ನಮಗೆ ಇರತಕ್ಕಂಥದ್ದು, ರೈತರಿಗೆ ನ್ಯಾಯಯುತವಾದ ಬೆಲೆ ಸಿಕ್ಕಲ್ಲ, ಹೀಗಾಗಿ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆಹಾರದ ಉತ್ಪಾದನೆ Stagnant ಆಗಿದೆ, ಆಹಾರದ ಉತ್ಪಾದನೆ ಹೆಚ್ಚಾಗುತ್ತಿಲ್ಲ, ಅದಕ್ಕಾಗಿ research ಜಾಸ್ತಿ ಆಗಬೇಕು: ಇದರ ಕಡೆಗೆ ಹೆಚ್ಚಿನ ಗಮನ ಕೊಡಬೇಕು. University ಹೆಚ್ಚು ಮಾಡುವುದರಿಂದ food production ಜಾಸ್ತಿಯಾಗುವುದಿಲ್ಲ. ಈಗ ಶಿವಮೊಗ್ಗಕ್ಕೊಂದು Agriculture University ಯನ್ನು ಘೋಷಣೆ ಮಾಡಿಕೊಂಡಿದ್ದಾರೆ. ಒಂದೇ ಒಂದು agriculture college, College ಗೆ ಒಂದು subject ಗೆ ಒಂದು university? This is not way to meet the challenges of the society today. What are our challenges? We are short of food production. ಅದಕ್ಕೇನು ಮಾಡಬೇಕೆಂದು ಇದರಲ್ಲಿ ಯೋಚಿಸಿದ್ದೀರಾ? ಇರುವ Unversity ಗಳಿಗೆ ದುಡ್ಡು ಕೊಡುವುದಿಲ್ಲ. ಇನ್ನೊಂದು University

ಇನ್ನೊಂದು ತೋಟಗಾರಿಕೆ University, ಹೊಸದಾಗಿ ನಾಲ್ಕು University ಗಳನ್ನು announce ಮಾಡಿದಿರಿ. ಶಿವಮೊಗ್ಗಕ್ಕೆ ಒಂದು. Vice-Chancellors ಆಗಲಿ ಎಂದು ಯಾರ್ಯಾರಿಗೋ ಅವಕಾಶ ಮಾಡಿಕೊಡುವುದಕ್ಕೇನಾ? ಇಲ್ಲಿ bureaucrats 24 ಜನರನ್ನು ಮಾಡಿದಿರಿ. ಇವರು ಬಂದು ಅಲ್ಲಿ ಏನು ಮಾಡುತ್ತಾರೆ? 5 ಜನ ಮಾಡಿದ್ದೇವೆ, ಅದರಲ್ಲಿ SC/ST ಗೆ ಅವಕಾಶ ಮಾಡಿದ್ದೇವೆ ಎಂದಾಕ್ಷಣವೇ University ಆಯಿತಾ? You are giving sweeping power to Vice-Chancellor and you are diluting the powers of Chancellor and there is interference of the Government with the functioning of the University. ಇದನ್ನೇ Governor observe ಮಾಡಿರುವುದು. ಇದಕ್ಕೆ ಚರ್ಚೆ ಮಾಡಬೇಡಿ ಎಂದು ಹೇಳುವುದಕ್ಕೆ ಆಗುತ್ತದೆಯೆ?

ಅಧ್ಯಕ್ಷರು : ಅದನ್ನು ಮಾಡಿ ಎಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಅದನ್ನೇ ನಾನು ಈಗ ಹೇಳುತ್ತಿರುವುದು. Governor ಏನು ಹೇಳುತ್ತಾರೆ, under the Constitution University ಗಳಿಗೆ autonomous ಇರಬೇಕೆಂದು ಹೇಳುತ್ತಾರೆ. Autonomous ಹೋಗಿ ಎಲ್ಲಾ ಸರ್ಕಾರ ತೆಗೆದುಕೊಂಡು Chancellor constitute ಮಾಡುವುದನ್ನು ನಾವೇ ಮಾಡುತ್ತೇವೆಂದು ಹೊರಟು ಬಿಟ್ಟರೆ ಹೇಗೆ? ನಂತರ ಅಧಿಕಾರಿಗಳನ್ನು ಎಂಥವರನ್ನು ಹಾಕುತ್ತಾರೆಂದರೆ, Deputy Secretary, ಅದನ್ನು ಏಕೆ ಮಾಡುತ್ತೀರಿ? Principal Secretary to the Government or Secretary to the Government, ಎಂದ ಮೇಲೆ or his nominee, Deputy Secretary ಆಗಬಹುದು ಅಥವಾ Under Secretary ಆಗಬಹುದು. ಅವರು ಬಂದು ಅಲ್ಲಿ ಕುಳಿತುಕೊಂಡು ಏನು ಮಾಡುತ್ತಾರೆ? ಅಲ್ಲಿ ಕುಳಿತುಕೊಂಡು ಅವರು ಹೇಳಿದ ಹಾಗೆ ಕೇಳಿಕೊಂಡು ಕುಳಿತಿರಬೇಕೆ? ನಾವು ನಮ್ಮ Public Accounts Committee ಯ ಮೀಟಿಂಗ್‌ಗಳಲ್ಲಿ ನೋಡುತ್ತೇವೆ, ಕೆಲವು Deputy Secretary, Under Secretary ಗಳು ಬರುತ್ತಾರೆ. ನಾನು ಒಂದು ಸಲ ಅವರನ್ನು ನೀವು ಏನು decision ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ನಿನಗೇನು ಗೊತ್ತಿಲ್ಲವೆಂದು ಹೇಳಿ ಅವರನ್ನು ಆಚೆಗೆ ಕಳುಹಿಸಿ ಬಿಡುತ್ತಿದ್ದೆ. ಪಾಪ, ಅವರೇನು ಮಾಡುತ್ತಾರೆ ಸುಮ್ಮನೆ ಕುಳಿತಿರುತ್ತಾರೆ. ನಾವೇನಾದರೂ

ಅವರನ್ನು ಏಕೆ ನೀವು ಬಂದಿರಿ ಎಂದು ಕೇಳಿದರೆ ಅದಕ್ಕೆ ಅವರು ನಮ್ಮ Secretary ಕಳುಹಿಸಿದರು ಅದಕ್ಕೆ ನಾವು ಬಂದೆವು ಎಂದು ಹೇಳುತ್ತಾರೆ. See, This is not the way. ನೀವು Agriculture University Bill ತರಬೇಕಾದರೆ 63 Act ಬಹಳ ಚೆನ್ನಾಗಿತ್ತು. I don't know ನಿಮ್ಮ ತಲೆಗೆ ಯಾರು ಇದನ್ನು ತುರುಕಿ ಬಿಟ್ಟರೋ ಗೊತ್ತಿಲ್ಲ. ಇದು ನಿಮ್ಮ Original idea ಅಲ್ಲ. ಇದು ಯಾರದೋ ಬೇರೆಯವರದು ಇರಬೇಕೆಂದು ಕಾಣುತ್ತದೆ. ರವೀಂದ್ರನಾಥ್‌ರವರೇ, ನೀವು ಏನು ಯೋಚನೆ ಮಾಡಿದ ಹಾಗೆ ಕಾಣುವುದಿಲ್ಲ. ನೀವು ಏನಾದರೂ ಯೋಚನೆ ಮಾಡಿದ್ದೀರಾ? ನೀವು ಮಾಡುವುದಿಲ್ಲವೆಂದು ಅಂದುಕೊಂಡಿದ್ದೇನೆ. ಯಾರು ನಿಮ್ಮ ತಲೆಗೆ ತುಂಬಿ ಇದನ್ನು ಮಾಡಿ ನೋಡೋಣ ಎಂದು ಹೇಳಿ ಇಟ್ಟಿದ್ದಾರೆಂದು ಕಾಣುತ್ತದೆ. ಇಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದೆವು. ಅವುಗಳನ್ನಾದರೂ ಸೇರಿಸಬಹುದಾಗಿತ್ತು. ಈ ರೀತಿ ಆದರೆ ಏನು ಮಾಡುತ್ತೀರಿ? Governor ಇಷ್ಟೆ ಹೇಳಿದ್ದಾರೆಂದರೆ ಹೇಗೆ? Governorಗೆ ನಾವು ಇದನ್ನು ಮಾಡಿ ಕಳುಹಿಸಿದೆವು ಎಂದು ಇಟ್ಟುಕೊಳ್ಳೋಣ, ಆಗ ಅವರು ಹೀಗೇಕೆ ಮಾಡಿದಿರಿ ಎಂದು ಹೇಳುತ್ತಾರೆಯೆ? ನೀವೇ ಹೇಳಿ ನೋಡೋಣ. 105 ನಲ್ಲಿ ಬೇರೆ ಉಪಯುಕ್ತವಾದ ಅಂಶ additional ಆಗಿ ಸೇರಿಸಿ ಕಳುಹಿಸಿದೆವು ಎಂದು ಇಟ್ಟುಕೊಳ್ಳೋಣ, ಆಗ ಅವರು ಏಕೆ ಮಾಡಿದಿರಿ ಎಂದು ಕೇಳುತ್ತಾರೆಯೆ? ಅವರು Section 27 ಬಗ್ಗೆ ಹೇಳಿರುವುದಲ್ಲವೆ? ಬೇರೆ Section ಬಗ್ಗೆ ಹೇಳಿದ್ದಾರೆಯೆ? ಆಯಿತು, Governor ಹೇಳಿದ ಹಾಗೆ Section 27 ಗೆ ಸೀಮಿತಗೊಳಿಸೋಣ. ಬೇರೆ ಉಪಯುಕ್ತವಾಗಿರುವುದನ್ನು ಕಳುಹಿಸಿದರೆ Governor ಏಕೆ ಬೇಡವೆನ್ನುತ್ತಾರೆ?

ಶ್ರೀ ಜಗದೀಶ್ ಶೆಟ್ಟರ್ : ಇವೆಲ್ಲಾ ಡಿಸ್‌ಕಸ್ ಆಗಿವೆ. ಈಗ Governor section 27 (2) ಪ್ರಕಾರ ಕೇಳಿದರು. Search committee, ಕುಲಪತಿಗಳ ನೇಮಕ ಮಾಡುವುದು, ಇವೆರಡು subject ಕೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ನೀವು ಅವುಗಳಲ್ಲಿ ಯಾವುದನ್ನು ಸೇರಿಸಿಲ್ಲ. ಆ Board of Regents members ಇದ್ದರಲ್ಲಾ, ಅವರನ್ನು at the pleasure of Government remove ಮಾಡುವುದು ಎಂದು ಏಕೆ ಸೇರಿಸಿಕೊಂಡಿರಿ? ಹಿಂದೆ ಇತ್ತೆ? ಅವರನ್ನು ಏಕೆ ತೆಗೆದು ಹಾಕುತ್ತೀರಿ? Reservation

ಕೊಡುತ್ತೇವೆಂದು ಹೇಳುತ್ತೀರಿ, ಮತ್ತೆ at the pleasure of Government or at the pleasure of the Vice-chancellor ಎಂದು ಇದೆ.

ಶ್ರೀ ಜಗದೀಶ್ ಶೆಟ್ಟರ್ : University Act ಪ್ರಕಾರ ಇದೆ.

ಶ್ರೀ ಸಿದ್ದರಾಮಯ್ಯ : ಎಲ್ಲಿಯೂ ಇಲ್ಲ. ಅಲ್ಲಿ ಯಾರು ಮಾತನಾಡ ಬಾರದು, ಎಲ್ಲಾ sweeping power ಅವರಿಗೆ ಇರಲಿ ಎಂದು ಮಾಡಿದಿರಿ ಅಷ್ಟೆ. There is no check and balance ಇಲ್ಲವೇ ಇಲ್ಲ. ರೈತರನ್ನು ಏಕೆ ಹಾಕಿದಿರಿ, ಅವರನ್ನು ತೆಗೆದು ಹಾಕಿಬಿಡಿ ಅವರು ಬೇಡ. ಅವರು ಯಾರಾದರೂ ಜಾಸ್ತಿ ಮಾತನಾಡಿದರೆ ಅಥವಾ Vice-Chancellor ಮಾಡುವ ತಪ್ಪುಗಳನ್ನು ಹೇಳಿದರೆ taking advantage of this provision ಅವನನ್ನು ತೆಗೆದು ಹಾಕಿ ಬಿಡುತ್ತಾರೆ. ಅಲ್ಲವೆ? ಇವೆಲ್ಲಾ ಸ್ವಲ್ಪ change ಮಾಡಿಕೊಳ್ಳುವುದು ಒಳ್ಳೆಯದು. 63 ರ Act ನಲ್ಲಿರುವಂಥವುಗಳನ್ನು ಹಾಗೆ ಇಟ್ಟುಕೊಳ್ಳಿ, ಏಕೆಂದರೆ ಅವೆಲ್ಲಾ ಬಹಳ ಒಳ್ಳೆಯದು ಇದೆ.

ಶ್ರೀ ಎಸ್.ಎ. ರವೀಂದ್ರನಾಥ್ : ICAR Act ಪ್ರಕಾರ ಈ ಒಂದು ಬಿಲ್ ಅನ್ನು ತಂದು ಎಲ್ಲಾ ರೀತಿಯಿಂದಲೂ ಎಲ್ಲಾ ವರ್ಗದವರಿಗೂ ನಾವು ಆದ್ಯತೆ ಕೊಟ್ಟಿದ್ದೇವೆ. ಇಲ್ಲಿಯವರೆಗೆ SC/ST ಯವರಿಗೂ ಆದ್ಯತೆ ಕೊಟ್ಟಿರಲಿಲ್ಲ. ನಾವು SC/ST ಯವರಿಗೂ ಆದ್ಯತೆ ಕೊಟ್ಟು ರೈತರ ಪರವಾಗಿ 5 ಜನ, ಯಾರು agriculture graduates ಇರುತ್ತಾರೆ ಅವರೊಬ್ಬರಿಗೆ, Women's social worker ಎಂದು ಇರುತ್ತಾರೆ, ಅವರಿಗೊಬ್ಬರಿಗೆ ಅವಕಾಶ ಕೊಟ್ಟಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ : ಸುಮ್ಮನೆ ಏಕೆ ಹೇಳುತ್ತೀರಿ? ಅದರಲ್ಲಿ agriculture graduates ಎಂದು ಇದೆಯೆ? ಎಲ್ಲಿದೆ ಸಾರ್? ಸುಮ್ಮನೆ ಏಕೆ ಹೇಳುತ್ತೀರಿ? ದಯಮಾಡಿ ಅವೆಲ್ಲಾ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಎ ರವೀಂದ್ರನಾಥ್ : ಎಲ್ಲಾ ಇದೆ. ಈ ರೀತಿಯಾಗಿ ಎಲ್ಲರಿಗೂ ಆದ್ಯತೆ ಕೊಟ್ಟು ಅಧಿಕಾರಿಗಳು ಸಹ ಮೊದಲು ಏನು ಇದ್ದರು, ಅದನ್ನೇ ಮುಂದುವರಿಸಿದ್ದೇವೆ. ಹೀಗಾಗಿ ಈ ಬಿಲ್ ಅನ್ನು ಅಂಗೀಕರಿಸಿ ಅನುಮೋದಿಸಲಿಕ್ಕೆ ತಮ್ಮನ್ನು ಕೋರುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅದಕ್ಕೆ modification ಮಾಡುವುದಿಲ್ಲವೆ? Governor ರವರು ಏನು Suggest ಮಾಡಿದ್ದಾರೆ,

ಅದನ್ನು incorporate ಮಾಡುತ್ತಾರೋ ಇಲ್ಲವೋ ಅದನ್ನು ಹೇಳಲಿ. ಇದಕ್ಕೆ ನಮ್ಮ objection ಇದೆ. you put for division. Division ಗೆ ಹಾಕಿ ಸಾರ್. ಇದಕ್ಕೆ ವಿರೋಧ ಇದೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ, 2009
ಪುನರ್ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, 2009 ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : "2009 ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಪುನರ್ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 69ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 69 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಖಂಡ 2 ರಿಂದ 69 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 2 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, 2009 ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೆಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2009ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪುನರ್ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಪುನರ್ ಒಪ್ಪಿಗೆ ನೀಡಲಾಯಿತು

II) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ, 2009
ಪುನರ್ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಇಲಾಖೆ ಸಚಿವರು) (ತೋಟಗಾರಿಕೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2009ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಇದರ ಬಗ್ಗೆ ಮಾತನಾಡುತ್ತೀರಾ?

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕಕ್ಕಿಂತ ಈ ವಿಧೇಯಕ ವಿವಾದಾತ್ಮಕವಾಗಿದೆ. ಆದ್ದರಿಂದ ಯಾವ ಕಾರಣಕ್ಕಾಗಿ. ಇದನ್ನು ತರಲಾಗಿದೆ ಎಂದು ಮತ್ತು ಇದರಲ್ಲಿ ಏನು ಬದಲಾವಣೆ ಮಾಡಲಾಗಿದೆ ಎಂದು ಹೇಳಿ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) : 27(3) ಮತ್ತು 27(4) ರ ಬಗ್ಗೆ ಈಗ ತಿದ್ದುಪಡಿ ಮಾಡಿರುವುದನ್ನೇ ಅನುಮೋದನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಜ್ಯಪಾಲರು ಈ ಒಂದು ಕಂಡಿಕೆಗೆ ಆಕ್ಷೇಪಣೆ ಮಾಡಿದ್ದರು. ರಾಜ್ಯ ಸರ್ಕಾರ ನಾಮಕರಣ ಮಾಡುವ ಅಧಿಕಾರವನ್ನು ರಾಜ್ಯಪಾಲರು Search Committಗೆ ನೇಮಕ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಅವರು ಕೇಳಿದ್ದಾರೆ. ಆದರೆ, ನಾವು ಮಾಡಿರುವ ತಿದ್ದುಪಡಿಯ ರೀತಿಯಲ್ಲಿಯೇ .ಇರಲೆಂದು ನಾವು ಮತ್ತೊಮ್ಮೆ ಪ್ರಸ್ತಾವನೆಯನ್ನು ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ಯಾವ ಹಿನ್ನೆಲೆಯಲ್ಲಿ ಕಳುಹಿಸಿದ್ದಾರೆಂಬುದರ ಬಗ್ಗೆ ನಾವು ಬಹಿರಂಗವಾಗಿ ಚರ್ಚೆ ಮಾಡುವುದು ಬೇಕಾಗಿಲ್ಲ. ಏಕೆಂದರೆ, ಇದು ಒಳ್ಳೆಯದಾಗುವುದಿಲ್ಲ. ಯಾವ ಹಿನ್ನೆಲೆಯಲ್ಲಿ ಕಳುಹಿಸಿದ್ದಾರೆಂಬುದು ನಿಮಗೂ ಮತ್ತು ಎಲ್ಲರಿಗೂ ಸಹ ಗೊತ್ತಿದೆ. ಸರ್ಕಾರಕ್ಕೆ ಒಂದು ಅಧಿಕಾರವನ್ನು ಇಟ್ಟುಕೊಳ್ಳತಕ್ಕಂಥ ಅವಶ್ಯಕತೆ ಇದೆ. ಆ ದೃಷ್ಟಿಯಿಂದ ಇದನ್ನು ಇಲ್ಲಿ ಪಾಸ್ ಮಾಡಿ ಕಳುಹಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಹೆಚ್.ಕೆ.ಕುಮಾರ ಸ್ವಾಮಿ : ಯಾವ ಹಿನ್ನೆಲೆ ಎಂಬುದನ್ನು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಸಚಿವರು) : ಯಾವ ಹಿನ್ನೆಲೆಯಿಂದ ಕಳುಹಿಸಿದ್ದಾರೆಂಬುದು ತಮಗೆ ಗೊತ್ತಿದೆ.

ಅಧ್ಯಕ್ಷರು : "2009ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 67 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 67 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 67 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 2 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಇಲಾಖೆ ಸಚಿವರು) (ತೋಟಗಾರಿಕೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2009ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2009ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪುನರ್ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಪುನರ್ ಒಪ್ಪಿಗೆ ನೀಡಲಾಯಿತು.

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಅಕ್ರಮ ಸಕ್ರಮಕ್ಕೆ ಸಂಬಂಧಪಟ್ಟಂಥ ಬಿಲ್ ಇದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಎರಡು ಬಿಲ್‌ಗಳನ್ನು ಪಾಸ್ ಮಾಡಿಕೊಟ್ಟಿದ್ದೇವೆ. ಅಕ್ರಮ–ಸಕ್ರಮ ಬಿಲ್ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಆ ಆಕ್ಟ್‌ಗೆ 2007ರಲ್ಲಿ ತಿದ್ದುಪಡಿಯಾಗಿದೆ. ಈಗ ಎರಡು ಸಣ್ಣ ತಿದ್ದುಪಡಿ ಇದೆ.

ಶ್ರೀ ಟಿ.ಬಿ.ಜಯಚಂದ್ರ : ನಮ್ಮಲ್ಲಿ ಒಂದು ಸಭೆ ಇದೆ. ಆದ್ದರಿಂದ, ಸದಸ್ಯರ‍್ಯಾರು ಇಲ್ಲ.

ಅಧ್ಯಕ್ಷರು : ಇದು ಸಣ್ಣ ತಿದ್ದುಪಡಿ.

ಶ್ರೀ ಟಿ.ಬಿ.ಜಯಚಂದ್ರ : ಅಷ್ಟೊಂದು ಅನುಕೂಲ ಇದ್ದರೆ ಬೆಳಿಗ್ಗೆ ಮಾಡೋಣ. ತೊಂದರೆ ಏನೂ ಆಗುವುದಿಲ್ಲ. ಬೆಂಗಳೂರಿನ ಶಾಸಕರು ಕೂಡ ಇರಬೇಕಾಗುತ್ತದೆ.

ಶ್ರೀ ಆರ್.ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಬಿಬಿಎಂಪಿ ಚುನಾವಣೆ ಇರುವುದರಿಂದ ಅಕ್ರಮ ಸಕ್ರಮ ಬಿಲ್ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಚುನಾವಣೆ ಪ್ರಕಟಣೆಯಾಗಿರುವುದರಿಂದ ಅಕ್ರಮ ಸಕ್ರಮ ಬಗ್ಗೆ ಚರ್ಚೆ ಮಾಡುವುದು ಎಷ್ಟರಮಟ್ಟಿಗೆ ಸರಿ ಇದೆ ಎಂಬುದರ ಬಗ್ಗೆ ತಾವು ಯೋಚನೆ ಮಾಡಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಇದನ್ನು ಗಡಿಬಿಡಿಯಲ್ಲಿ ಪಾಸ್ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಆರ್.ದಿನೇಶ್ ಗುಂಡುರಾವ್ : ಚುನಾವಣೆ ನಂತರ ಅಕ್ರಮ ಸಕ್ರಮ ಬಿಲ್‌ನ್ನು ತೆಗೆದುಕೊಳ್ಳತಕ್ಕಂಥದ್ದು ಒಳ್ಳೆಯದು.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಚುನಾವಣೆ ಇರುವುದರಿಂದ ಈಗ ಮಾಡುವುದು ಸೂಕ್ತವಲ್ಲ. ಏಕೆಂದರೆ, ಇದು ಬೆಂಗಳೂರು ನಗರಕ್ಕೂ ಕೂಡ ಸಂಬಂಧಪಟ್ಟಿದೆ.

(ಗೊಂದಲ)

ಶ್ರೀ ಎನ್. ಸಂಪಂಗಿ : Code of conduct ಇದಕ್ಕೆ ಅಪ್ಲೈ ಆಗುತ್ತದೆ.

ಅಧ್ಯಕ್ಷರು : ಇದಕ್ಕೆ Code of conduct ಹೇಗೆ ಬರುತ್ತದೆ? ಇದರ ಬಗ್ಗೆ ಚರ್ಚೆ ನಾಳೆ ಮಾಡುವುದಕ್ಕೆ ಏನು ತಕರಾರು ಇಲ್ಲ. ಆದರೆ, Code of conduct ಇದಕ್ಕೆ ಅಪ್ಲೈ ಆಗುವುದಿಲ್ಲ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಇದಕ್ಕೆ Code of conduct ಅಪ್ಲೈ ಆಗುವುದಿಲ್ಲ. ಇದನ್ನೇನು ಹೊಸದಾಗಿ ಮಾಡುತ್ತಿಲ್ಲ. ಈಗಾಗಲೇ ಇರತಕ್ಕಂಥ ಆಕ್ಟ್‌ಗೆ ತಿದ್ದುಪಡಿ ತರಲಾಗುತ್ತಿದೆಯಷ್ಟೆ.

ಅಧ್ಯಕ್ಷರು : ನಾಳೆ ಮಾಡುವುದಕ್ಕೆ ನನ್ನದೇನು ತಕರಾರು ಇಲ್ಲ. ಆದರೆ, Code of conduct ground ಮೇಲೆ ಚರ್ಚೆ ಮುಂದೆ ಹಾಕುವುದಕ್ಕೆ ಅವಕಾಶ ಇಲ್ಲ. Code of conduct, how it is applicable to Assembly ಎಂಬುದರ ಬಗ್ಗೆ ನೀವೇ ಹೇಳಿ? ಇದೆಲ್ಲ ಸುಮ್ಮನೆ ಹೇಳುತ್ತಾರೆ. ಮತ್ತೆ ಎಲೆಕ್ಷನ್ ಕಮೀಷನರ್‌ವರು ಹೇಳುವುದನೆಲ್ಲಾ ಕೇಳುವುದಕ್ಕೆ ಆಗುವುದಿಲ್ಲ.

ಶ್ರೀ ಆರ್. ದಿನೇಶ್ ಗುಂಡುರಾವ್ : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಇದೊಂದು ಮಹತ್ತರವಾದ ವಿಷಯವಾಗಿದೆ. ಲಕ್ಷಾಂತರ ಜನರ ಮೇಲೆ ಇದರ ಪರಿಣಾಮ ಬೀರುತ್ತದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಹೊಸದಾಗಿ ನಾವೇನು ಮಾಡುತ್ತಿಲ್ಲ. ಇವತ್ತೇ ಇದರ ಬಗ್ಗೆ ಹೊಸದಾಗಿ ಏನು ತೀರ್ಮಾನ ತೆಗೆದುಕೊಂಡಿಲ್ವಲ್ಲ?

ಶ್ರೀ ಆರ್.ದಿನೇಶ್ ಗುಂಡುರಾವ್ : ಇದು ಬಹಳ controversial subject ಆಗಿದೆ. ಆದ್ದರಿಂದ ಬಿಬಿಎಂಪಿ ಚುನಾವಣೆಯಾದ ಮೇಲೆ ಇದರ ಬಗ್ಗೆ ಪ್ರಸ್ತಾಪ ಮಾಡತಕ್ಕಂಥದ್ದು ಒಳ್ಳೆಯದು.

ಅಧ್ಯಕ್ಷರು : ನೀವು ಪ್ರಸ್ತಾಪ ಮಾಡಿ.

ಶ್ರೀ ಆರ್. ದಿನೇಶ್ ಗುಂಡುರಾವ್ : ಮಾನ್ಯ ಅಶೋಕ್‌ರವರೆ, ಚುನಾವಣೆ ಆದ ನಂತರ ಮಾಡಿ. ಏಕೆಂದರೆ, ಜನರ ಮೇಲೆ ಇದರಿಂದ ಪರಿಣಾಮ ಬೀರುತ್ತದೆ. ನಾಳೆ ದಿವಸ ಇದರ ಬಗ್ಗೆ ಸಾರ್ವಜನಿಕವಾಗಿ ಗಲಾಟೆಯಾದರೆ ಇದಕ್ಕೆ ಯಾರು ಹೊಣೆಗಾರರಾಗುತ್ತಾರೆ?

III ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್. ಅಶೋಕ್(ಸಾರಿಗೆ ಇಲಾಖೆ ಸಚಿವರು) (ಮುಖ್ಯ ಮಂತ್ರಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ತಾವು ಬಿಲ್ ಬಗ್ಗೆ ಎಕ್ಸ್‌ಪ್ಲೈನ್ ಮಾಡಿ.

ಶ್ರೀ ಆರ್. ದಿನೇಶ್ ಗುಂಡುರಾವ್ : ಮಾನ್ಯ ಅಧ್ಯಕ್ಷರೆ, ತಾವು ನಮ್ಮ ಮಾತುಗಳನ್ನು ದಯವಿಟ್ಟು ಕೇಳಬೇಕು.

(ಗೊಂದಲ)

ಶ್ರೀ ಖಮರುಲ್ ಇಸ್ಲಾಮ್ : I want ruling on this.

(ಗೊಂದಲ)

MR. SPEAKER : No code of conduct is applicable. I have clearly told you, that code of conduct to introduce this bill, or to pass this bill is not applicable.

ಶ್ರೀ ಖಮರುಲ್ ಇಸ್ಲಾಮ್ : This House is free to discuss whatever.....

(ಗೊಂದಲ)

MR. SPEAKER : I have given my ruling, why you are raising this. You have requested for ruling and I have given ruling. I have given permission to the Minister to explain.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡುತ್ತಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

SRI. QAMARUL ISLAMA : The point of order is, there is a precedent in the nation. In so many Parliaments,

Whenever elections have come, such bills which are relating to the elections for the public interest have not been discussed. (ಗೊಂದಲ) . . . So in the larger interest and respect to the code of conduct, I request that the ruling may be given on this. I can quote number of examples in the Parliament.

6. ಅಧ್ಯಕ್ಷರ ತೀರ್ಪು :

"ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ–2009 ಸದನ ಮುಂದೆ ಇದೆ. ಇದಕ್ಕೂ ಚುನಾವಣೆಗೂ ಯಾವುದೇ ಸಂಬಂಧ ಇರುವುದಿಲ್ಲ. ಮತ್ತೆ ಇದು ಚುನಾವಣೆಗೆ ಸಂಬಂಧಪಟ್ಟಂಥ ವಿಷಯ ಆಗಿಲ್ಲದೆ ಇರುವುದರಿಂದ ಈ ಬಿಲ್ಲನ್ನು ಮಂಡನೆ ಮಾಡಿ ಪರ್ಯಾಲೋಚನೆ ಪ್ರಸ್ತಾವಕ್ಕೆ ಅನುಮತಿಯನ್ನು ನೀಡಲಾಗಿದೆ."

ಅಧ್ಯಕ್ಷರು : ಆಯಿತು. I will give ruling. ಕರ್ನಾಟಕ ಪಟ್ಟಣ ಮತ್ತು ಗ್ರಾಮಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ 2009 ಸದನದ ಮುಂದೆ ಇದೆ. ಇದಕ್ಕೂ ಚುನಾವಣೆಗೂ ಯಾವುದೇ ಸಂಬಂಧ ಇರುವುದಿಲ್ಲ. ಮತ್ತೆ ಇದು ಚುನಾವಣೆಗೆ ಸಂಬಂಧಪಟ್ಟಂಥ ವಿಷಯ ಆಗಿಲ್ಲದೆ ಇರುವುದರಿಂದ ಈ ಬಿಲ್‌ನ್ನು introduce ಮಾಡಿ ಪರ್ಯಾಲೋಚನೆ ಪ್ರಸ್ತಾವಕ್ಕೆ ಅನುಮತಿಯನ್ನು ನೀಡಲಾಗಿದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನೀವು ಈ ರೀತಿಯಾಗಿ ತಪ್ಪು ಮಾಡಿದರೆ ಹೇಗೆ?

ಶ್ರೀ ಆರ್. ಅಶೋಕ್ : ಇದು ಕೇವಲ ಬೆಂಗಳೂರಿಗೆ ಮಾತ್ರ ಸಂಬಂಧಪಟ್ಟಿಲ್ಲ. ಇಡೀ ರಾಜ್ಯಕ್ಕೆ ಇದು ಸಂಬಂಧಪಟ್ಟಿದೆ. ಹೊಸದಾಗಿ ನಾವೇನು ಈ ಬಿಲ್ ಅನ್ನು ತಂದಿಲ್ಲ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಬಿಲ್ ಬೆಂಗಳೂರಿಗೆ ಅಷ್ಟೆ ಅಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥದ್ದು ಇದೆ.

(ಗೊಂದಲ)

ಶ್ರೀ ದಿನೇಶ್ ಆರ್. ಗುಂಡೂರಾವ್ : ಸರ್, point of order.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, Point of order ಇದೆ.

ಅಧ್ಯಕ್ಷರು : ಸ್ವಲ್ಪ ಕೇಳಿ, ನಾನು ಒಂದು ರೂಲಿಂಗ್ ಕೊಟ್ಟಮೇಲೆ point of order ಎತ್ತಿದ್ದರು, ಅದರ ಮೇಲೆ ರೂಲಿಂಗ್ ಕೊಟ್ಟೆ, ಮತ್ತೆ ನೀವು point of order ಎತ್ತುತ್ತೀರಿ, ಮತ್ತೆ ರೂಲಿಂಗ್ ಕೊಡುತ್ತಲೇ ಇರಬೇಕೆ? Is this the procedure?

ಶ್ರೀ ಟಿ.ಬಿ.ಜಯಚಂದ್ರ : ನಾನು point of order ಮೇಲೆ ಹೇಳುತ್ತಿದ್ದೇನೆ.

MR. SPEAKER : Now I ask the Minister to explain the Bill. ನೀವು ಏನು ಹೇಳಬೇಕು ಎನ್ನುವುದನ್ನು ಮಾನ್ಯ ಸಚಿವರು explain ಮಾಡಿದ ಮೇಲೆ ಹೇಳಿ. I will give chance. ನೀವು senior member ಅಗಿ ಈ ರೀತಿ ಮಾಡಿದರೆ ಹೇಗೆ?

ಶ್ರೀ ಟಿ.ಬಿ.ಜಯಚಂದ್ರ : time extend ಮಾಡುವುದು ಬೇರೆ.

ಶ್ರೀ ಆರ್.ಅಶೋಕ : ಇದರಿಂದ ನಿಮಗೂ help ಆಗುತ್ತದೆ. ಜನಗಳಿಗೆ ಇದರಿಂದ ಸಹಾಯ ಮಾಡಬಹುದು.

ಅಧ್ಯಕ್ಷರು : ಇದು ಬೆಂಗಳೂರಿಗೆ ಅಷ್ಟೆ ಅಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟದ್ದು.

ಶ್ರೀ ಟಿ.ಬಿ.ಜಯಚಂದ್ರ : ನೀವು ಹೇಳುವುದನ್ನು ನಾನು ಒಪ್ಪಿಕೊಂಡೆ, ಬೆಳಿಗ್ಗೆ ಮಾಡಿಕೊಡೋಣ. ಇದರಿಂದ ನಿಮಗೆ ಏನು ತೊಂದರೆ ಆಗುತ್ತದೆ. Reduction of fee for regularization of such buildings, ಆ reduction ಎನ್ನುವುದರಲ್ಲಿ ಏನಿದೆ ಎನ್ನುವುದರ ಬಗ್ಗೆ ಸ್ವಲ್ಪ ಎಲ್ಲರೂ ಚರ್ಚೆ ಮಾಡಲಿ.

ಶ್ರೀ ಆರ್. ಅಶೋಕ : ಚರ್ಚೆ ಮಾಡಿ ಅದಕ್ಕೋಸ್ಕರವೇ ನಾನು ಹೇಳುತ್ತಿರುವುದು.

ಅಧ್ಯಕ್ಷರು : ಆಯಿತು, ಚರ್ಚೆ ಮಾಡಿ.

ಡಾ: ಹೆಚ್.ಸಿ.ಮಹಾದೇವಪ್ಪ : ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ.

ಶ್ರೀ ದಿನೇಶ್ .ಆರ್. ಗುಂಡೂರಾವ್ : ಅಧ್ಯಕ್ಷರೆ, ಆಯಿತು. ಬೇಕಾದರೆ ನಾಳೆ ಬೆಳಿಗ್ಗೆ ತೆಗೆದುಕೊಂಡು ಚರ್ಚೆ ಮಾಡೋಣ.

ಶ್ರೀ ಟಿ.ಬಿ.ಜಯಚಂದ್ರ : ಬೇಕಾದರೆ 5 minute ನಲ್ಲಿ ಮಾಡಿಕೊಡೋಣ.

ಶ್ರೀ ದಿನೇಶ್. ಆರ್. ಗುಂಡೂರಾವ್ : ಪ್ರಸ್ತಾವದ ಮೇಲೆ ಚರ್ಚೆ ಮಾಡಬೇಕು.

ಅಧ್ಯಕ್ಷರು : introduce ಆಗಿದೆ.

ಶ್ರೀ ದಿನೇಶ್. ಆರ್. ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಚರ್ಚೆ ಬೇಕಾದರೆ ನಾಳೆ ಮಾಡೋಣ. ನಾವೆಲ್ಲಾ ಬೆಂಗಳೂರಿನ ಶಾಸಕರು ಮಾತನಾಡಬೇಕು. ಕಾರ್ಪೊರೇಷನ್ ಎಲೆಕ್ಷನ್ ಇರುವುದರಿಂದ ಬೆಂಗಳೂರಿನ ಯಾವ ಶಾಸಕರು ಇಲ್ಲಿಗೆ ಬರುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರು ಪ್ರಸ್ತಾವನೆ ಮಾಡಿದ್ದಾರೆ, ಚರ್ಚೆ ನಾಳೆ ಮಾಡೋಣ. (ಗೊಂದಲ) ಇಲ್ಲಿ ಹೇಳುತ್ತಿರುವುದನ್ನು ಕೇಳುವುದಕ್ಕೆ ತಾಳ್ಮೆ ಇಲ್ಲವಲ್ಲ. ಚರ್ಚೆಗೆ ನಾಳೆ ಬೆಳಿಗ್ಗೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಚರ್ಚೆ ಮಾಡಲಿಲ್ಲವೆಂದರೆ, ಇದು ಬಜೆಟ್ ಅಧಿವೇಶನ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ನೀವು ಬಿಲ್ ಮಾಡಿಕೊಳ್ಳಿ ಸ್ವಾಮಿ. ಬಜೆಟ್ ಮೇಲೆ ಮೊದಲು ಚರ್ಚೆ ಮಾಡಿ. ಒಂದೊಂದಾಗಿ ಬಿಲ್ ಪಾಸ್ ಮಾಡಿಕೊಂಡು ಹೋಗುತ್ತಿದ್ದೀರಲ್ಲಾ? ಬಿಲ್ ಪಾಸ್ ಮಾಡಿಕೊಳ್ಳಿ, ನಾವು ಬೇಡವೆಂದು ಹೇಳುವುದಿಲ್ಲ. ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಶ್ರೀ ಕಾಗೇರಿಯವರು ಬಿಲ್ ಮಂಡಿಸುತ್ತಿದ್ದಾರೆ.

ಅಧ್ಯಕ್ಷರು : Only explanation. ಮಾನ್ಯ ಅಶೋಕ್‌ರವರೆ ನಾಳೆ ಬೆಳಿಗ್ಗೆ ಮಾಡುತ್ತಾರೆ.

(ಗೊಂದಲ)

ಶ್ರೀ ಆರ್. ಅಶೋಕ : ನಾಳೆ ಪಾಸ್ ಮಾಡಿ ಕೊಡಿ.

ಅಧ್ಯಕ್ಷರು : ಆಯಿತು.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗ ಬಜೆಟ್ ಮೇಲೆ ಚರ್ಚೆಯಾಗಲಿ.

ಅಧ್ಯಕ್ಷರು : ಇನ್ನೊಂದು ಸಣ್ಣ ಬಿಲ್ ಇದೆ, ಅದನ್ನು ಮಾಡಿ ಬಿಡೋಣ. ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2009:

7. ಶಾಸನ ರಚನೆ :

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ 2009

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, The Code of Criminal Procedure Bill 2009 ಅನ್ನು ಪರ್ಯಾಲೋಚನೆಗೆ ಮಂಡಿಸುತ್ತೇನೆ.

(ಪ್ರಸ್ತಾಪವನ್ನು ಮಂಡಿಸಲಾಯಿತು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಈ Director of Prosecution ನ್ನು ನಾವು ಕರ್ನಾಟಕದಲ್ಲಿ 1973 ರಲ್ಲಿ ಪ್ರಾರಂಭಿಸಿರುತ್ತೇವೆ. ನಂತರ ಕೇಂದ್ರದಲ್ಲಿ Director of Prosecution ಪ್ರಾರಂಭಿಸಬೇಕು ಎಂದು ಅದು 2005 ರಲ್ಲಿ ಒಂದು ತಿದ್ದುಪಡಿಯಾಗಿ ಇಡೀ ದೇಶಕ್ಕೆ ಅನ್ವಯವಾಗುವಂತೆ ತಿಳಿಸಿತು. ಆದರೆ ಕರ್ನಾಟಕದಲ್ಲಿ ನಾವು ಇದಕ್ಕೊಂದು separate recruitment rules ಮಾಡಿಕೊಂಡು appointment ಮಾಡಿ promotion ಕೊಟ್ಟು ನಾವು ಬೇರೆ ಬೇರೆ ಹಂತಕ್ಕೆ ನೇಮಕಾತಿಗಳನ್ನು ಮಾಡುತ್ತೇವೆ. ಕೇಂದ್ರ ಸರ್ಕಾರ ಇದಕ್ಕೆ ಏನು ತಿದ್ದುಪಡಿಯನ್ನು ಸೂಚಿಸಿದೆ, ಅದಕ್ಕೆ 10 ವರ್ಷ ಸರ್ವಿಸ್ ಆದ Advocate ನ್ನು Director of Prosecution ಮತ್ತು Joint Director of Prosecution ನ್ನು ನೇಮಿಸಬೇಕು ಎನ್ನುವಂಥದ್ದನ್ನು ತಿದ್ದುಪಡಿ ತರಬೇಕಾಗಿದೆ. ನಮ್ಮಲ್ಲಿ ಏನಾಗಿದೆ ಎಂದರೆ, ಈ APP ಗಳನ್ನು ನಾವು Direct ಆಗಿ appointment ಮಾಡಿಕೊಳ್ಳುತ್ತೇವೆ. Direct ಆಗಿ appointment ಮಾಡಿಕೊಂಡ ನಂತರದಲ್ಲಿ ಅವರು Assistant Public Prosecutor ಎಂದು promotion ಆಗುತ್ತಾರೆ. ಆ

ನಂತರ Senior Assistant Public Prosecutor ಆಗಿ promotion ಆಗುತ್ತಾರೆ. ಹಾಗೆ Joint Director ಆಗಿ ಮತ್ತು Director of Prosecution ಆಗಿ Promotion ಆಗಿ Director of Prosecution ಆಗುವಂಥದ್ದು ರೂಢಿಯಲ್ಲಿದೆ. ಇದಕ್ಕೆ ಪ್ರತ್ಯೇಕವಾದಂಥ ರೂಲ್ಸ್‌ನ್ನು ನಾವು ಕರ್ನಾಟಕದಲ್ಲಿ ರಚಿಸಿಕೊಂಡು ಮಾಡಿಕೊಂಡಿರುತ್ತೇವೆ. ಹಾಗಾಗಿ ಈಗ ಕೇಂದ್ರದಲ್ಲಿ 2005 ರಲ್ಲಿ Director of Prosecution ನ್ನು ಜಾರಿಗೆ ತರಬೇಕೆಂದು ಹೇಳಿ 10 ವರ್ಷ Advocate ಆದವರನ್ನೇ Director of Prosecution ಮತ್ತು Joint Director of Prosecution ಆಗಿ ನೇಮಕ ಮಾಡಬೇಕೆಂದು ಹೇಳಿದೆಯೋ ಅದು ಕರ್ನಾಟಕಕ್ಕೆ ಅಗತ್ಯವಿಲ. ಹಾಗಾಗಿ ಅದಕ್ಕೆ ಒಂದು ತಿದ್ದುಪಡಿಯನ್ನು ಈ ಒಂದು ಬಿಲ್‌ಗೆ ತರುತ್ತಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ : What is the basis for this.? ಅದನು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಬೇರೆ ಇನ್ನಾವುದೇ ರೀತಿಯಲ್ಲಿ contradictory ಆಗುವುದಿಲ್ಲ. ಕರ್ನಾಟಕದಲ್ಲಿ ನಾವು 1972-73ರಲ್ಲಿಯೇ Director of Prosecution ನ್ನು ಸ್ಥಾಪಿಸಿಕೊಂಡು ಅದಕ್ಕೆ appointment procedure ಗಳೆಲ್ಲವನ್ನು ನಾವು ಮಾಡಿಕೊಂಡಿದ್ದೇವೆ. ನಾವು APP ಗಳನ್ನು appointment ಮಾಡಿಕೊಳ್ಳುತ್ತೇವೆ, ಅದರ ನಂತರ ನಾವು Promotion ಕೊಟ್ಟು ತರುತ್ತೇವೆ. ಆದರೆ ಅವರು ಹೇಳುವುದು ಏನೆಂದರೆ, 10 ವರ್ಷ ಆದಂಥವರನ್ನು Director of Prosecution ಮತ್ತು Joint Director of Prosecution ಮಾಡಿ ಎಂದು. ಈ ರೀತಿ ಮಾಡಿದರೆ ನಮ್ಮಲ್ಲಿ ಇಷ್ಟು ವರ್ಷ ಸರ್ವಿಸ್ ಮಾಡಿದವರಿಗೆ ಆ ಅವಕಾಶಗಳು ತಪ್ಪಿ ಬೇರೆ ಇನ್ಯಾರಿಗೋ Director of Prosecution ಆಗುವಂಥ ಒಂದು ಸಂದರ್ಭ ಬರುತ್ತದೆ. ಇದರಿಂದಾಗಿ ಗೊಂದಲಗಳು ಹೆಚ್ಚಾಗುತ್ತವೆ. ಮತ್ತು ಅನುಭವದ ದೃಷ್ಟಿಯಿಂದಲೂ ಈ ರೀತಿ promotion ಗಳಾಗಿ ಆ ಸ್ಥಾನಕ್ಕೆ ಹೋದರೆ ಹೆಚ್ಚು ಅನುಭವವನ್ನು ಹೊಂದಿರುವವರು ಆ ಸ್ಥಾನಕ್ಕೆ ಆ ಜವಾಬ್ದಾರಿಗೆ ಬರುತ್ತಾರೆ. ಹೀಗಾಗಿ ಆ ಬದಲಾವಣೆಗಳನ್ನು ನಮ್ಮಲ್ಲಿ ಅಗತ್ಯವಿಲ್ಲ. ನಾವು ಈಗಾಗಲೇ ಏನು Procedure ಮಾಡಿಕೊಂಡಿರುವುದು

ಇದೆ, appointment ಮಾಡಿಕೊಂಡು Promotion ಕೊಟ್ಟುಕೊಂಡು ನಮ್ಮೆಲ್ಲಾ ಚಟುವಟಿಕೆ ನಡೆಸುತ್ತಿರುವುದು ಇದೆ, ಅದಕ್ಕೆ as it is ನಾವು continue ಮಾಡುವುದಕ್ಕೆ ಈ ಒಂದು ಅಮೆಂಡ್‌ಮೆಂಟ್‌ನ್ನು ತರುತ್ತಿದ್ದೇವೆ ಅಷ್ಟೆ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಮತಕ್ಕೆ ಹಾಕುತ್ತೇನೆ.

ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) (ಮಾನ್ಯ ಗೃಹಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : "2009ನೆ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ : 2 ಇತ್ಯಾದಿ

ಅಧ್ಯಕ್ಷರು : "ಖಂಡ 2ನ್ನು ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ನೇ ಖಂಡವು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ: 1 ಇತ್ಯಾದಿ:

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಮಯಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) (ಮಾನ್ಯ ಗೃಹ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2009ರ ಸಾಲಿನ ದಂಡ ಪ್ರಕ್ರಿಯೆ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2009ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(4 - 40 P.M)

ಅಧ್ಯಕ್ಷರು : ಕರ್ನಾಟಕ ಸಂಸ್ಕೃತ-ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ಮಾನ್ಯ ಮಂತ್ರಿಗಳು ಪರ್ಯಾಲೋಚಿಸುವುದು.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2009ನೇ ಸಾಲಿನ ಕರ್ನಾಟಕ ಸಂಸ್ಕೃತ ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದು ಏನು? ಈಗ ಎರಡು ಬಿಲ್ಲುಗಳು ಪಾಸಾಗಿದೆ. ಇದನ್ನು ನಾಳೆ ತೆಗೆದುಕೊಳ್ಳಿ, ಈ ಬಿಲ್ಲನ್ನು ನಾಳೆ ಪಾಸು ಮಾಡಿಕೊಡೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಬಜೆಟ್ ಸೆಷನ್ ಕರೆದು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವವರು ಇದ್ದಾರೆ. ಇದರ ಬಗ್ಗೆ ಬೇರೆ ಯಾವ ಸದಸ್ಯರುಗಳು ಮಾತನಾಡಿರುವುದಿಲ್ಲ. ಬಜೆಟ್ ಮೇಲೆ ಚರ್ಚೆ ನಡೆಯುವುದು ಯಾವಾಗ? ಇದರ ಮೇಲೆ ಮಾತನಾಡುವ ಬಗ್ಗೆ ತಾವು ಕಾಲವನ್ನು ನಿಗಧಿ ಮಾಡಿದ್ದೀರಿ.

ಅಧ್ಯಕ್ಷರು : ಆಯಿತು. ಈ ಬಿಲ್‌ನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಮೊನ್ನೆ ದಿನ ಮೂರು ಬಿಲ್‌ಗಳು ಪಾಸಾಗಿದೆ. ನಿನ್ನೆ ಎರಡು ಬಿಲ್ ಬಗ್ಗೆ ಚರ್ಚೆ ಮಾಡಿ ಆಗಿದೆ. ಈ ಬಿಲ್ ಪಾಸು ಮಾಡಿಕೊಡಿ.

ಅಧ್ಯಕ್ಷರು : ಆಯಿತು, ಈ ಬಿಲ್‌ನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ : ಡಾ: ಮಹದೇವಪ್ಪನವರೆ, ಹಾಗೂ ಜಯಚಂದ್ರರವರೆ ಈಗ ಬಿಲ್‌ನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ಅನಗತ್ಯವಾಗಿ ಏಕೆ ಈ ರೀತಿ ಮಾಡುತ್ತೀರಿ.?

ಶ್ರೀ ಟಿ.ಬಿ. ಜಯಚಂದ್ರ : ನಾಳೆ ಇದನ್ನು ಚರ್ಚೆಗೆ ತೆಗೆದು ಕೊಳ್ಳೋಣ. ಏಕೆ ಇಷ್ಟೊಂದು ಅರ್ಜೆಂಟ್.?

ಅಧ್ಯಕ್ಷರು : ಆಯಿತು. ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪಗಳು.. ಮಾನ್ಯ ಹೆಚ್.ಕೆ.ಕುಮಾರಸ್ವಾಮಿಯವರು ತಾವು ಮಾತನಾಡಿ.

8. ವಿತ್ತೀಯ ಕಾರ್ಯಕಲಾಪಗಳು :

ವಿಷಯ : 2010–11 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಬೇಲೂರು) : ಮಾನ್ಯ ಅಧ್ಯಕ್ಷರೆ, ಈ ವರ್ಷದ ವಿತ್ತೀಯ ಕಾರ್ಯಕಲಾಪದಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂತಹ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಬಹುಶಃ ಇತ್ತೀಚಿನ ದಿನಗಳಲ್ಲಿ ಅಧಿವೇಶನವೆಂದರೆ, ಒಂದು ರೀತಿಯ ಉದಾಸೀನಕ್ಕೆ ಒಳಗಾಗಿದೆ ಎಂದು ನಾನು ಭಾವಿಸಿದ್ದೇನೆ. ರಾಜ್ಯಪಾಲರ ವಂದನಾ ನಿರ್ಣಯ, ಬಜೆಟ್ ಮೇಲಿನ ಚರ್ಚೆ, ಕಾನೂನುಗಳ ರಚನೆ ಹೀಗೆ ಅನೇಕ ವಿಶಿಷ್ಟ ಸಂದರ್ಭ ಗಳಲ್ಲಿ ನಾವು ಅಧಿವೇಶನವನ್ನು ಕರೆಯುತ್ತಿದ್ದೇವೆ. ಆದರೆ ಈಗ ರಾಜ್ಯಪಾಲರ ವಂದನಾ ನಿರ್ಣಯ ಇರಬಹುದು, ಬಜೆಟ್ ಮೇಲಿನ ಚರ್ಚೆಯಿರಬಹುದು, ಬೇಡಿಕೆಯ ಮೇಲಿನ ಚರ್ಚೆ, ಇರಬಹುದು, ಕಾನೂನುಗಳ ರಚನೆಯ ವಿವೇಚನೆಯ ಬಗ್ಗೆ ಚರ್ಚೆ ಇರಬಹುದು, ಕೇವಲ ಕೆಲವೇ ದಿನಗಳು, ಕೆಲವೇ ಗಂಟೆಗಳಿಗೆ ಸೀಮಿತವಾಗಿರುವಂತಹದ್ದು ತುಂಬಾ ದುರದೃಷ್ಟಕರ. ಹಿಂದೆ ಒಂದು ರಾಜ್ಯಪಾಲರ ನಿರ್ಣಯ ಎಂದರೆ 10 ದಿನಗಳ ಕಾಲ 2 ವಾರಗಳ

ಕಾಲ ಈ ಮನೆಯಲ್ಲಿ ಚರ್ಚೆಯನ್ನು ಮಾಡಿದಂತಹ ದಿನಗಳು ಇದೆ. ಬಜೆಟ್ ಅಧಿವೇಶನ ಎಂದರೆ ಕನಿಷ್ಟ 3–4 ವಾರಗಳು ಎಲ್ಲಾ ಸದಸ್ಯರುಗಳು ಕೂಡ ಭಾಗವಹಿಸಿರುವಂತಹ ನಿದರ್ಶನಗಳು ಇವೆ. ಇವತ್ತು ನಿನ್ನೆ ಮತ್ತು ಮೊನ್ನೆ ಮಾನ್ಯ ವಿರೋಧಪಕ್ಷದ ನಾಯಕರು ಬಹುಶಃ ಮೂರುವರೆ ಗಂಟೆಗಳ ಕಾಲ ಮಾತನಾಡಿದ್ದಾರೆ. ನಾನು ಎರಡು ದಿನದ ನಂತರ ಈಗ ಪ್ರಾರಂಭ ಮಾಡಿದ್ದೇನೆ. ಇದರ ಅಗತ್ಯ ಎಷ್ಟು ಇದೆ ಎಂದು ತಮಗೂ ಕೂಡ ಗೊತ್ತಿದೆ. ಅದು ಏನೇ ಇರಲಿ, ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಸಚಿವರು ಕೂಡ ಆಗಿದ್ದಾರೆ. ಈ ಮಧ್ಯದಲ್ಲಿ ಅವರು ಆಯವ್ಯಯವನ್ನು ಮಂಡಿಸತಕ್ಕಂತಹ ಕಾಲದಲ್ಲಿ ಕನ್ನಡ ತಾಯಿ ಭುವನೇಶ್ವರಿಯ ಕೃಪೆಯಿಂದ ಹಾಗೂ ಕರ್ನಾಟಕ ಜನತೆಯ ಆಶೀರ್ವಾದದಿಂದ ಸತತವಾಗಿ 5ನೇ ವರ್ಷದ ಬಜೆಟ್‌ನ್ನು ಮಂಡಿಸುತ್ತಿದ್ದೇನೆಂದು ಹೇಳಿದ್ದಾರೆ. ಬಹುಶಃ ಇತ್ತೀಚಿನ ದಿನಗಳಲ್ಲಿ ಪ್ರತಿ ಸಭೆ ಸಮಾರಂಭಗಳಲ್ಲಿ ಅಧಿಕಾರದಲ್ಲಿ ಮುಂದುವರೆಯುತ್ತಿರುವುದು ನಾನು ಮಠಾಧೀಶರ ಆಶೀರ್ವಾದದಿಂದ ಎನ್ನುವ ಮಾತನ್ನು ಆಗಾಗ್ಗೆ ಹೇಳುತ್ತಿರುತ್ತಾರೆ. ಆದರೆ ಬಜೆಟ್ ನಲ್ಲಿ ಮಾನ್ಯ ಮಠಾಧೀಶರ ಹೆಸರನ್ನು ಏಕೆ ಮರೆತರು ಎಂದು ನನಗೆ ಗೊತ್ತಿಲ್ಲ. ಅದು ಏನೇ ಇರಲಿ, ಇವತ್ತು ಯಾವುದೇ ಜನಪರ ಕಾರ್ಯಕ್ರಮಗಳು ಆಗಬೇಕಾದರೆ ಹಣಕಾಸು ಬಹಳ ಅಗತ್ಯವೆಂದು ಹೇಳುವುದರಲ್ಲಿ ಎರಡು ಮಾತಿಲ್ಲ. ಹಣಕಾಸೇ ಮೂಲ ಅನ್ನತಕ್ಕಂತಹ ಮಾತನ್ನು ಕೂಡ ಅವರು ಹೇಳಿದ್ದಾರೆ. ಆದರೆ ಯಾವುದೇ ಯೋಜನೆ ಕಾರ್ಯಕ್ರಮಗಳನ್ನು ಜಾರಿಯಾಗಬೇಕಾದರೆ ಕೇವಲ ಹಣಕಾಸನ್ನು ನಿಗಧಿ ಮಾಡುವುದರಿಂದ ಆ ಕಾರ್ಯಕ್ರಮಗಳು ಜಾರಿಯಾಗುವುದಕ್ಕೆ ಸಾಧ್ಯವಿಲ್ಲ. ಇಂತಹ ಒಂದು ಕಾರ್ಯಕ್ರಮಕ್ಕೆ, ಇಂತಹ ಒಂದು ಯೋಜನೆಗೆ ಇಷ್ಟು ನಾವು ಹಣವನ್ನು ನಿಗಧಿಮಾಡಿದ್ದೇವೆ. ಹಣವನ್ನು ನಿಗಧಿಮಾಡಿದ ತಕ್ಷಣ, ಸಂಬಂಧಪಟ್ಟ ಸಾಮಾಜಿಕ ವಲಯದಲ್ಲಿರುವಂತಹ ಜನರು ಇರಬಹುದು. ದುರ್ಬಲವರ್ಗದವರು ಇರಬಹುದು. ಅಲ್ಪಸಂಖ್ಯಾತರು ಇರಬಹುದು. ಹಿಂದುಳಿದ ವರ್ಗದವರು ಇರಬಹುದು. ಯಾವುದೇ ವರ್ಗದ ಜನರು ಇರಬಹುದು, ನಮ್ಮ ಏಳಿಗೆಗೆ ಇಷ್ಟು ಹಣವನ್ನು ಮೀಸಲು ಇಟ್ಟಿದ್ದಾರೆನ್ನುವಂತಹ ಸಹಜವಾದಂತಹ ಭಾವನೆ ಖುಷಿ ಬರುತ್ತದೆ. ಆದರೆ ಹಣವನ್ನು ಬಿಡುಗಡೆ ಮಾಡುವಾಗ ಆಗುವಂತಹ ಪರಿಣಾಮಗಳೇ ಬೇರೆಯಾಗಿದೆ. ಹಣವನ್ನು ಸರ್ಕಾರ ಬಿಡುಗಡೆ ಮಾಡುತ್ತಿರುವಂತಹದ್ದು ಯಾವಾಗ? ಹಣ ಶೇಖರಣೆಯಾಗುವುದು ಯಾವಾಗ? ಕಳೆದ ವರ್ಷದ ಬಜೆಟ್‌ನಲ್ಲಿ ಮಾನ್ಯ

ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದರು.. ಈ ತಿಂಗಳಲ್ಲಿಯೇ ಏಪ್ರಿಲ್‌ನಿಂದ ಪ್ರಾರಂಭವಾಗಿ ಕನಿಷ್ಠ ಜೂನ್ ಒಳಗಡೆ ಹಣ ಬಿಡುಗಡೆಯಾಗಬೇಕು, ಕಾರ್ಯಕ್ರಮಗಳು ಜಾರಿಯಾಗಬೇಕೆಂಬ ಮಾತನ್ನು ಹಿಂದಿನ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ಹೇಳುವಾಗ ಅವರು "ಸರ್ಕಾರದ ಕಾರ್ಯಕ್ರಮಗಳಲ್ಲಿ ಆಗುವ ವೆಚ್ಚವನ್ನು ಪರಿಶೀಲಿಸಿ ಕಡಿಮೆ ಪರಿಣಾಮಕಾರಿಯಾದಂತಹ ಕಾರ್ಯಕ್ರಮಗಳ ವೆಚ್ಚವನ್ನು ತಗ್ಗಿಸಿ ಹೆಚ್ಚು ಪರಿಣಾಮಕಾರಿಯಾದ ಕಾರ್ಯಕ್ರಮಗಳಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮತ್ತು ಕಾರ್ಯಕ್ರಮಗಳ ಅನುಷ್ಠಾನದ ದಕ್ಷತೆಯನ್ನು ಹೆಚ್ಚಿಸುವ ಅಗತ್ಯವಿದೆ, ಇದಕ್ಕಾಗಿ ಸೂಕ್ತ ಕಾರ್ಯನೀತಿಯನ್ನು ಸಲಹೆ ಮಾಡಲು ತಜ್ಞರನ್ನು ಒಳಗೊಂಡಂತಹ ವೆಚ್ಚ ಸುಧಾರಣಾ ಆಯೋಗವೊಂದನ್ನು ರಚಿಸಲಾಗುವುದು." ಅದನ್ನು ರಚಿಸಿದರೋ ಇಲ್ಲವೋ ಗೊತ್ತಿಲ್ಲ. "ಪ್ರತಿಯೊಂದು ಇಲಾಖೆಯ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಮುಖ್ಯಸ್ಥರು ತಮ್ಮ ಇಲಾಖೆಯ ಕಾರ್ಯಕ್ರಮಗಳ ಕಾಲಬದ್ಧ ಅನುಷ್ಠಾನಕ್ಕಾಗಿ ವೇಳಾಪಟ್ಟಿಯನ್ನು ವರ್ಷದ ಮೊದಲ ಪಾಕ್ಷಿಕದಲ್ಲಿ ಸಲ್ಲಿಸಬೇಕು. ಇದರೊಡನೆ ಕಾರ್ಯಕ್ರಮಗಳ ಕ್ರಮಬದ್ಧ ಅನುಷ್ಠಾನಕ್ಕಾಗಿ ಸರ್ಕಾರದಿಂದ ನಿರೀಕ್ಷಿಸುವ ಕ್ರಮಗಳನ್ನು ನಮೂದಿಸಬೇಕು. ಇದಕ್ಕಾಗಿ ಈಗಾಗಲೇ ರೂಪಿಸಿರುವ ಎಂಪಿಕ್ (MPIC) ನಮೂನೆಯನ್ನು ಉಪಯೋಗಿಸಬೇಕು." ಇದು ಮಾನ್ಯ ಮುಖ್ಯಮಂತ್ರಿಗಳು 2009-10ರ ಬಜೆಟ್‌ನಲ್ಲಿ ಹೇಳಿರುವಂತಹ ಮಾತುಗಳಾಗಿವೆ. ನಾವು 2010-11ರ ಬಜೆಟ್‌ನಲ್ಲಿ ಪ್ರಸ್ತಾಪವನ್ನು ಮಾಡುವಾಗ ಅವುಗಳ ಜಾರಿಯ ಬಗ್ಗೆ ಮಾತನಾಡುವಾಗ 2009-10ನೇ ಸಾಲಿನಲ್ಲಿ ಎಷ್ಟರ ಮಟ್ಟಿಗೆ ಸರ್ಕಾರವು ಹಣವನ್ನು ಬಿಡುಗಡೆ ಮಾಡಿದೆ. ಇದಕ್ಕೆ ನಿಗದಿಯಾದಂತಹ ಹಣವೆಷ್ಟು? ಬಿಡುಗಡೆಯಾದಂತಹ ಹಣವೆಷ್ಟು? ಬಿಡುಗಡೆಯಾದಂತಹ ಹಣ ಎಷ್ಟು ವೆಚ್ಚವಾಗಿದೆ? ವೆಚ್ಚವಾದಂತಹ ಹಣದಲ್ಲಿ ಆ ಫಲಾನುಭವಿ ಎಷ್ಟರಮಟ್ಟಿಗೆ ತನ್ನ ಆರ್ಥಿಕ ಶಕ್ತಿಯನ್ನು ಹೆಚ್ಚಿಸಿಕೊಂಡಿದ್ದಾನೆ. ಅದರಿಂದ ಅವನಿಗೆ ಎಷ್ಟು ಪ್ರಯೋಜನವಾಗಿದೆ ಎಂಬುದನ್ನು ನಾವು ನೋಡಬೇಕಾಗುತ್ತದೆ. Evaluation ಇಲ್ಲದೆ ಹೋದರೆ ಬಹುಶಃ ಸರ್ಕಾರ ಮಾಡತಕ್ಕಂತಹ ಖರ್ಚು ಒಂದು ರೀತಿಯ ಯಾವುದೇ ತರಹದ ಪ್ರಯೋಜನಕ್ಕೆ ಬರುವುದಿಲ್ಲವೆಂಬುದು ತಮಗೂ ಕೂಡ ಗೊತ್ತಿದೆ. ಈ ದೃಷ್ಟಿಯಲ್ಲಿ ನನಗೆ ಗೊತ್ತಿರುವ ಹಾಗೆ ಯಾವುದೇ ಇಲಾಖೆಯಲ್ಲಿರಬಹುದು,

ಆ ಇಲಾಖೆಯ ಕಾರ್ಯಕ್ರಮಗಳು ಜಾರಿಯಾಗಬೇಕಾದರೆ ಸಾಕಷ್ಟು ಸ್ಟಿಬ್ಬಂದಿಗಳು ಇರಬೇಕಾಗುತ್ತದೆ. ಮಾನ್ಯ ಸದಸ್ಯರೊಬ್ಬರು ಕೇಳಿದಂತಹ ಪ್ರಶ್ನೆಗೆ ಸರ್ಕಾರವೇ ಅಂಕಿಅಂಶವನ್ನು ಹೇಳಿದ್ದಾರೆ. ಶೇಕಡ 30 ರಷ್ಟು ಹುದ್ದೆಗಳು ಇವತ್ತು ಸರ್ಕಾರದಲ್ಲಿ ಖಾಲಿ ಇದೆ. ಎಲ್ಲಾ ಇಲಾಖೆಯಲ್ಲಿ ಸೇರಿ 1,57,000 ಹುದ್ದೆಗಳು 'ಎ' ಗುಂಪಿನಿಂದ ಹಿಡಿದು 'ಡಿ' ಗುಂಪಿನವರೆಗೆ ಖಾಲಿ ಇದೆ. ಅದರಲ್ಲಿ ಸಮಾಜಕಲ್ಯಾಣ ಇಲಾಖೆಯಲ್ಲಿ ಒಟ್ಟು 6,225 ಹುದ್ದೆಗಳು ಖಾಲಿ ಇದೆ. ಇಷ್ಟು ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಯಾವ ಇಲಾಖೆಯು ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಜಾರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. Class-C 527 ಹುದ್ದೆಗಳು, Class-D 2,650 ಹುದ್ದೆಗಳು ಈ Class-D ಅಂದರೆ ಅಡಿಗೆಯವರು. ಇರತಕ್ಕಂತಹ ಹಾಸ್ಟೆಲ್‌ಗಳಲ್ಲಿ ಮಾನ್ಯ ಸಭಾಧ್ಯಕ್ಷರೆ, ಎರಡು–ಮೂರು ಹಾಸ್ಟೆಲ್‌ಗಳಿಗೆ ಒಬ್ಬೊಬ್ಬ ಅಡಿಗೆಯವನೇ ವಾರ್ಡನ್ ಆಗಿದ್ದಾನೆ. ಅಡಿಗೆ ಕೆಲಸವನ್ನು ಮಾಡುವವನೆ ಇನ್‌ಚಾರ್ಜ್ ವಾರ್ಡನ್ ಆಗಿದ್ದಾನೆ. 3–3 ಹಾಸ್ಟೆಲ್‌ಗಳಿಗೆ ಒಬ್ಬೊಬ್ಬ Regular Warden ಇದ್ದಾನೆ. ಈ ರೀತಿ ಇದ್ದರೆ ಯಾವ ರೀತಿಯಾಗಿ ಹಾಸ್ಟೆಲ್‌ಗಳು ತನ್ನ ಆಡಳಿತವನ್ನು ತನ್ನ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮೊರಾರ್ಜಿ ವಸತಿ ಶಾಲೆಗಳಲ್ಲಿ 5,448 ಹುದ್ದೆಗಳು ಖಾಲಿ ಇದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ 8,625 ಹುದ್ದೆಗಳು ಖಾಲಿ ಇದೆ. ಸಾಮಾಜಿಕ ವಲಯದಲ್ಲಿ ಕೆಲಸವನ್ನು ಮಾಡುವಂತಹ ಈ ಇಲಾಖೆಯು ದುರ್ಬಲರ ಏಳಿಗೆಗಾಗಿ ಇರತಕ್ಕಂತಹ ಇಲಾಖೆ. ನೀವು ಎಷ್ಟರಮಟ್ಟಿಗೆ ಕಾರ್ಯಕ್ರಮವನ್ನು ಜಾರಿ ಮಾಡುತ್ತೀರಿ. ಇವತ್ತು ತಾವು ಬೇರೆ ಎಲ್ಲಾ ಇಲಾಖೆಗಳಿಗೆ ಆಗಾಗ್ಗೆ ನೇಮಕಾತಿಯನ್ನು ಮಾಡುವಂತಹ ಕೆಲಸವನ್ನು ತಾವು ಮಾಡುತ್ತಿದ್ದೀರಿ. ಆದರೆ ಈ ಇಲಾಖೆಯಲ್ಲಿ ಇಷ್ಟೆಲ್ಲಾ ಹುದ್ದೆಗಳು ಖಾಲಿ ಇದ್ದರೂ ಕೂಡ ಯಾವ ಕಾರಣಕ್ಕಾಗಿ ತಾವು ಈ ನೇಮಕಾತಿಯನ್ನು ಮಾಡುತ್ತಿಲ್ಲ. ಇವತ್ತು ಹಾಸ್ಟೆಲ್‌ಗಳ ಪರಿಸ್ಥಿತಿ ಹೇಗೆ ಇದೆ, ಇವತ್ತು ಹಾಸ್ಟೆಲ್‌ಗಳು ಏನು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ, ಅಲ್ಲಿ ಸರಿಯಾದ ರೀತಿಯಲ್ಲಿ accommodation ಇರುವುದಿಲ್ಲ. ಸುಮಾರು 10 ರಿಂದ 15 ಹುಡುಗರು ರೂಮಿನಲ್ಲಿದ್ದಾರೆ. ಸರಿಯಾದ ರೀತಿಯಲ್ಲಿ ಅಲ್ಲಿ ಶುಚಿತ್ವ ಇಲ್ಲ. ಅಲ್ಲಿ ಸರಿಯಾದ ರೀತಿಯಲ್ಲಿ ಶೌಚಾಲಯವಿಲ್ಲ, ಅಲ್ಲಿ ಸರಿಯಾದ ರೀತಿಯ ಮೂಲಭೂತ ಸೌಕರ್ಯಗಳು ಇರುವುದಿಲ್ಲ. ಈ ರೀತಿ ಹಾಸ್ಟೆಲ್‌ಗಳಲ್ಲಿ

ಮೂಲಭೂತ ಸೌಕರ್ಯಗಳಿಲ್ಲದೇನೆ ಮಕ್ಕಳಲ್ಲಿ ದಕ್ಷತೆ ಹೇಗೆ ಹೆಚ್ಚಿಸುವುದಕ್ಕೆ ಸಾಧ್ಯವಾಗುತ್ತದೆ? ಇವತ್ತು ತಾವು ಅಡಿಗೆ ವೆಚ್ಚವನ್ನು ಹೆಚ್ಚು ಮಾಡಿದ್ದೀರಿ. ಅದಕ್ಕಾಗಿ ನಾನು ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಅಡಿಗೆ ವೆಚ್ಚ 400.00 ರೂಪಾಯಿ ಇದ್ದದ್ದನ್ನು 600.00 ರೂಪಾಯಿಗಳಿಗೆ ಮಾಡಿದ್ದೀರಿ. 600.00 ರೂಪಾಯಿ ಇರುವುದನ್ನು 750 ರೂಪಾಯಿಗಳಿಗೆ ಹೆಚ್ಚು ಮಾಡಿದ್ದೀರಿ. ಕೆಲವು ಹೆಣ್ಣುಮಕ್ಕಳಿಗೆ ಮೊದಲ ದರ್ಜೆಯಲ್ಲಿ ಪಾಸಾದವರಿಗೆ ಐದು ಸಾವಿರ ರೂಪಾಯಿಗಳನ್ನು ಶೇಕಡ 75 ಕ್ಕಿಂತ ಹೆಚ್ಚು ಅಂಕವನ್ನು ಪಡೆದವರಿಗೆ ಹತ್ತು ಸಾವಿರ ರೂಪಾಯಿಗಳೆಂದು ಮಾಡಿದ್ದೀರಿ.

ಈ ರೀತಿಯ ಪ್ರೋತ್ಸಾಹ ಧನವನ್ನು ಕೊಟ್ಟಿದ್ದೀರಿ, ಅದೇ ರೀತಿಯಲ್ಲಿ ಇವತ್ತು ಒಬ್ಬ ಉತ್ತಮ, ಸುಸಂಸ್ಕೃತ, ನಾಗರೀಕ ಪ್ರಜೆಯಾಗಿ ಹೊರ ಹೊಮ್ಮಲಿಕ್ಕೆ ಅವನು ತನ್ನಲ್ಲಿರತಕ್ಕಂಥ ಪ್ರತಿಭೆಯನ್ನು ಹೊರಹೊಮ್ಮಿಸಲಿಕ್ಕೆ ಅಗತ್ಯವಾದಂಥ ಸುಸಜ್ಜಿತವಾದಂಥ ಕಟ್ಟಡಗಳು ಇವೆ, ಹೊಸ ಹಾಸ್ಟೆಲುಗಳನ್ನು ಪ್ರಾರಂಭ ಮಾಡುತ್ತೇವೆಂಬ ಮಾತನ್ನು ತಾವು ಹೇಳಿದ್ದೀರಿ, ಹೊಸ ಹಾಸ್ಟೆಲ್‌ಗಳ ಜೊತೆಗೆ ಇರತಕ್ಕಂಥ ಹಾಸ್ಟೆಲ್‌ಗಳ ಶುಚಿತ್ವ ಮತ್ತು ಹೊಸ ಹಾಸ್ಟೆಲ್‌ಗಳ ಕಟ್ಟಡ ಮಂಜೂರಾಗಬೇಕಿದೆ. Post-metric ಎರಡು ಕಟ್ಟಡಗಳು, Pre-metric ಒಂದು ಕಟ್ಟಡ ಆಗಬೇಕಾಗಿದೆ. ಆ ನಿಟ್ಟಿನಲ್ಲಿ ಸರ್ಕಾರ ಗಮನವನ್ನು ಕೊಡಬೇಕು ಎಂದು ಹೇಳುತ್ತೇನೆ. ನಮ್ಮ ಸಮಾಜ ಕಲ್ಯಾಣ ಇಲಾಖೆಯ ಅಂಬೇಡ್ಕರ್ ಅಭಿವೃದ್ಧಿ ನಿಗಮ ಇದೆ. 2009-10 ರಲ್ಲಿ ಸುಮಾರು 8,232 ಕೊಳವೆ ಬಾವಿಗಳನ್ನು ಕೊರೆಯುತ್ತೇವೆಂಬ ಮಾತನ್ನು ತಾವು ಹೇಳಿದ್ದಿರಿ. ಸುಮಾರು 67 ಗಂಗಾ ಕಲ್ಯಾಣ ಯೋಜನೆಯ ಏತನೀರಾವರಿಗಳನ್ನು ಕೊರೆಯುತ್ತೇವೆಂಬ ಮಾತನ್ನು ತಾವು ಹೇಳಿದ್ದೀರಿ. ಆದರೆ ಇಡೀ ವರ್ಷ ಇವತ್ತು ಮಾರ್ಚ್ 10, ಇಲ್ಲಿಯವರೆಗೆ ಪರಿಶಿಷ್ಟ ಜಾತಿ ವರ್ಗದವರಿಗೆ ಅಂಬೇಡ್ಕರ ಅಭಿವೃದ್ಧಿ ನಿಗಮದಿಂದ ಒಂದೇ ಒಂದು ಕೊಳವೆ ಬಾವಿಗಳನ್ನು ಕೊರೆದಿಲ್ಲ. ಇಲ್ಲಿಯವರೆಗೆ ಯಾವುದೇ ಒಂದು ನೀರಾವರಿ ಬಾವಿಯನ್ನು ಕೊರೆದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಚಂದ್ರಕಾಂತ್ ಬೆಲ್ಲದ್ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಸಮಾಜ ಕಲ್ಯಾಣ ಇಲಾಖೆಯ ಸಚಿವರು, ಅಧಿಕಾರಿಗಳು ಇಲ್ಲಿದ್ದಾರೆಯೇ ಇಲ್ಲವೇ ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಕೊಳವೆಬಾವಿಗಳನ್ನು ಕೊರೆದಿಲ್ಲ? ಇದು ಪರಿಶಿಷ್ಟ ಜಾತಿಯವರ ಏಳಿಗೆಯೇ? ಇದರಿಂದ ಅವರ ಏಳಿಗೆಯಾಗುತ್ತದೆಯೇ? ತಾವು ಕೊಟ್ಟಂಥ ಭೌತಿಕ ಗುರಿ, ಆರ್ಥಿಕ ಗುರಿಯನ್ನು ಯಾವ ಕಾರಣಕ್ಕಾಗಿ ಸಾಧಿಸಿಲ್ಲ. ಅಧಿಕಾರಿಗಳನ್ನು ಕೇಳಿದರೆ, ಇಲ್ಲ ಇನ್ನೂ ಕೂಡ ಏಜೆನ್ಸಿ ಫಿಕ್ಸ್ ಆಗಿಲ್ಲ. ತಮಗೆ ಏಜೆನ್ಸಿ ಫಿಕ್ಸ್ ಮಾಡಲಿಕ್ಕೆ ಏಪ್ರಿಲ್ ಒಂದರಿಂದ ಇಲ್ಲಿಯವರೆಗೆ ಮಾರ್ಚ್ ಹತ್ತು ಆದರೂ ಆಗಿಲ್ಲ, ಈ ವರ್ಷ ಮುಗಿಯಲಿಕ್ಕೆ ಕೇವಲ ಇನ್ನೂ ಹದಿನೈದು ದಿವಸಗಳಿವೆ, ಇಲ್ಲಿಯವರೆಗೆ ಇಲಾಖೆ, ನಿಗಮ ಒಂದು ಏಜೆನ್ಸಿ ಫಿಕ್ಸ್ ಮಾಡಿಲ್ಲವೆಂದರೆ ಬಹುಶಃ ತಮ್ಮ ಘೋಷಣೆಯಲ್ಲಿ ತಾವೇನು ಕಾಲಮಿತಿ ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಇದು ಕಾಲಮಿತಿ ಕಾರ್ಯಕ್ರಮವೇ? ಪರಿಶಿಷ್ಟ ಜಾತಿ ವರ್ಗದವರಿಗೆ ಸರ್ಕಾರ ತೋರುವಂಥ ಬದ್ಧತೆಯೇ ಇದು. ಕೆಲಸ ಮಾಡುತ್ತಿದೆಯೇ ಎನ್ನತಕ್ಕಂಥ ಮಾತನ್ನು ನಾನು ಕೇಳಬೇಕಾಗುತ್ತದೆ. ಇನ್ನೂ ಏಜೆನ್ಸಿ ಫಿಕ್ಸ್ ಮಾಡಲಿಕ್ಕಾಗಿಲ್ಲ. ಒಂದೇ ಒಂದು ಕೊಳವೆ ಬಾವಿ ಕೊರೆಯಲಿಕ್ಕೆ ಆಗಿಲ್ಲ. ಇಡೀ ರಾಜ್ಯದಲ್ಲಿ, ನನ್ನ ಕ್ಷೇತ್ರ, ನನ್ನ ಜಿಲ್ಲೆ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಎಲ್ಲಿಯೂ ಕೊಳವೆ ಬಾವಿ ಕೊರೆಯಲಿಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು, ತಮ್ಮ ಉತ್ತರದಲ್ಲಿ ತಾವು ಹೇಳಬೇಕಾಗುತ್ತದೆ. ಈ ಜನರ ಸರ್ವತೋಮುಖ ಏಳಿಗೆಗಾಗಿ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯನ್ನು ತಾವು ರಚಿಸಿದ್ದೀರಿ, ಹಿಂದಿನಿಂದಲೂ ಈ ಸಮಿತಿ ಇದೆ. ಪರಿಶಿಷ್ಟ ಜಾತಿ ಮತ್ತು ವರ್ಗದವರ ಮೇಲಿನ ದೌರ್ಜನ್ಯವನ್ನು ತಡೆಯಲಿಕ್ಕಾಗಿ ಮತ್ತು ಈ ಜನರ ಕಾರ್ಯಕ್ರಮಗಳನ್ನು ಜಾರಿ ಮಾಡುವುದಕ್ಕಾಗಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು? ಎಷ್ಟರ ಮಟ್ಟಿಗೆ ಜಾರಿ ಮಾಡಬೇಕು ಎಂಬುದರ ಬಗ್ಗೆ ಒಂದು ಸಮಿತಿ ಇದೆ. ಮಾನ್ಯ ಮುಖ್ಯಮಂತ್ರಿಗಳು, ಗಮನಿಸಬೇಕು. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಾಗ ದಿನಾಂಕ: 12.12.2006 ರಲ್ಲಿ ಈ ಸಮಿತಿ ಸಭೆ ಸೇರಿದ್ದು, ಅದಕ್ಕಿಂತ ಮುಂಚೆ 7.1.2001 ರಂದು ಸಭೆ ಸೇರಿತ್ತು. ಇದರಲ್ಲಿ ನಿರ್ದೇಶನ ಹೇಗಿದೆಯೆಂದರೆ, ಈ ಸಮಿತಿಯನ್ನು ವರ್ಷಕ್ಕೆ ಕನಿಷ್ಠ ಎರಡು ಸಾರಿ ಕರೆಯಬೇಕೆಂದು ಇದೆ. ಆದಾದ ಮೇಲೆ ಈಗ ಸಭೆ ಕರೆದಿರುವಂತದ್ದು ಮೊನ್ನೆ 22.2.2010 ರಂದು ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಸಭೆಯನ್ನು ಕರೆದಿದ್ದಾರೆ. 22.2.2010

ರಂದು ಮುಖ್ಯಮಂತ್ರಿಗಳು ಇರುವುದಿಲ್ಲವೆಂಬ ಕಾರಣಕ್ಕಾಗಿ 24.2.2010ಕ್ಕೆ ಸಭೆಯನ್ನು ಮುಂದೂಡಿದ್ದಾರೆ. 24.2.2010 ರಂದು ಮುಖ್ಯಮಂತ್ರಿಗಳು ಇರುವುದಿಲ್ಲವೆಂಬ ಕಾರಣಕ್ಕಾಗಿ ಮೊನ್ನೆ 8.3.2010 ಕ್ಕೆ ಆ ಸಭೆಯನ್ನು ಮುಂದೂಡಿದ್ದಾರೆ. 8.3.2010ರಂದು ಸಹ ಮಾನ್ಯ ಅಧ್ಯಕ್ಷರು ಇರಲಿಲ್ಲವೆಂಬ ಕಾರಣಕ್ಕಾಗಿ ಪುನಃ ಆ ಸಭೆ ಮುಂದೂಡಲಾಗಿದೆ. ಇಲ್ಲಿ ನಾನು ಸರ್ಕಾರದ ಬದ್ಧತೆಯನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಸರ್ಕಾರ ಈ ರೀತಿ ದುರ್ಬಲ ವರ್ಗದವರ ಏಳಿಗೆಗಾಗಿ ಇರುವಂಥ ಈ ರೀತಿಯ ಉನ್ನತ ಮಟ್ಟದ ಸಭೆಗಳನ್ನು ಕರೆದು ಆ ಕಾರ್ಯಕ್ರಮಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಆಗಲಿಲ್ಲವೆಂದರೆ ಅವರ ಅಸಹಾಯಕತೆಯೇ ಅಥವಾ ಯಾವ ಕಾರಣಕ್ಕಾಗಿ ಈ ರೀತಿ ಸಭೆಯನ್ನು ಕರೆಯುತ್ತಿಲ್ಲ, ಯಾವ ಕಾರಣಕ್ಕಾಗಿ ಚರ್ಚೆಯನ್ನು ಮಾಡುತ್ತಿಲ್ಲ ಎನ್ನುವುದನ್ನು ನಾವು ಕೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಈ ದೌರ್ಜನ್ಯ ಕಾಯ್ದೆಗಳ ಸಂಬಂಧವಾಗಿ ತಮಗೆ ಗೊತ್ತಿರುವಂತೆ ಶೇಕಡವಾರು ಬಹಳ ಕಡಿಮೆ ಮಟ್ಟದಲ್ಲಿ ನ್ಯಾಯಾಲಯಗಳಲ್ಲಿ ಈ ಕೇಸುಗಳು ಶಿಕ್ಷೆಗೊಳಪಟ್ಟಿರುವುದು ನಮ್ಮ ಗಮನಕ್ಕೆ ಬಂದಿದೆ. ಅಧಿಕಾರಿಗಳಿಗೂ ಕೂಡ ಗೊತ್ತಿದೆ, ಏನು ಕಾರಣ? ಪೋಲೀಸಿನವರು ಕೇಸ್ ಹಾಕುವಾಗ ತಪ್ಪು ಮಾಡುತ್ತಿದ್ದಾರೆಯೇ ಅಥವಾ ನಮ್ಮ ಸರ್ಕಾರಿ ವಕೀಲರು Directorate of Prosecution ಈಗ ಒಂದು ಕಾಯ್ದೆಯನ್ನು ತಂದಿದೆ. ಈ Directorate of Prosecution ಏನಾದರೂ ತಪ್ಪು ಮಾಡುತ್ತಿದೆಯೇ? ಯಾವ ಕಾರಣ್ಕಕಾಗಿ ಶಿಕ್ಷೆಯ ಪ್ರಮಾಣ ಕಡಿಮೆಯಾಗಿದೆ ಅಥವಾ ಸಾಕ್ಷಿಗಳನ್ನೇನಾದರೂ hostile ಮಾಡುವಂಥ ಪ್ರಯತ್ನ ನಡೆಯುತ್ತಿದೆಯೇ? ಈ ಸಂಬಂಧ ಸರ್ಕಾರ ಸರಿಯಾದ ರೀತಿಯಲ್ಲಿ ಯಾವ ಅಧಿಕಾರಿ ಆ ಜವಾಬ್ಧಾರಿಯನ್ನು ತೆಗೆದುಕೊಂಡಿರುತ್ತಾನೆ, ಆ ಅಧಿಕಾರಿಯನ್ನೆ Taluk Social Welfare Officer ಇರಬಹುದು, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಇರಬಹುದು, SP, DC ಇರಬಹುದು, ಇವರನ್ನು ನೇರವಾಗಿ ಹೊಣೆ ಮಾಡುವಂಥ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕು, ಇಲ್ಲವಾದರೆ ಜನರಿಗೆ ಅನ್ಯಾಯವಾಗುತ್ತದೆಂಬ ಮಾತನ್ನು ಹೇಳುತ್ತೇನೆ. ಅಧ್ಯಕ್ಷರೆ, ಇವತ್ತು ಅದಲ್ಲದೆ ಅನೇಕ ವಿಷಯಗಳಲ್ಲಿ, ವಸತಿ ಯೋಜನೆಗಳಲ್ಲಿ ತಾವು ಮೂರು ವರ್ಷಗಳಲ್ಲಿ ಈ ರೀತಿ ಹಣವನ್ನು ಹಂಚಿಕೆ ಮಾಡಿದ್ದೇವೆ ನಾವು ತುಂಬಾ ಸಾಧನೆ ಮಾಡಿದ್ದೇವೆಂಬ ಮಾತನ್ನು ಹೇಳಿದ್ದೀರಿ, ಆದರೆ ಅದರ ಅನುದಾನ ಬಿಡುಗಡೆ

ಮತ್ತು ಭೌತಿಕ ಗುರಿ ಕೂಡ ಕೇವಲ ಜನವರಿ ತಿಂಗಳ ನಂತರ ಆಗುತ್ತಿರುವುದರಿಂದ ಯಾವುದೇ ರೀತಿಯ ಸಾಧನೆಯನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಜೊತೆಗೆ ಇವತ್ತು ತಾವು ಪರಿಶಿಷ್ಟ ಜಾತಿ/ವರ್ಗದವರಿಗೆ SCP/TSP ಕ್ರೋಢೀಕೃತ ಹಣವನ್ನು ಖರ್ಚು ಮಾಡುತ್ತಿದ್ದೀರಿ, ಅದೂ ಕೂಡ ಈ ವರ್ಷ ಕೊನೆ ಗಳಿಗೆಯಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ನಮಗೆ ಅನುದಾನ ಬಂದಿದೆ. ಪರಿಶಿಷ್ಟ ಜಾತಿ/ ವರ್ಗದವರ ಕಲ್ಯಾಣಕ್ಕಾಗಿ ಮಾತ್ರ ಸಣ್ಣ ನೀರಾವರಿ ಇಲಾಖೆಯಿಂದ ಮಂಜೂರಾಗುವಂಥ ಹಣ ಖರ್ಚಾಗುತ್ತದೆ. ಆದರೆ ಜನರಲ್ ಆಗಿ ಇಲ್ಲಿಯವರೆಗೆ ಒಂದೇ ಒಂದು ರೂಪಾಯಿ ಸಾಮಾನ್ಯ ಅನುದಾನದಿಂದ ಸಣ್ಣ ನೀರಾವರಿ ಇಲಾಖೆಗೆ ಹಣ ಬಿಡುಗಡೆಯಾಗಿಲ್ಲ ಎನ್ನುವುದನ್ನು ಸರ್ಕಾರ ಗಮನಿಸಬೇಕು. ಜೊತೆಗೆ ಇವತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಇಲ್ಲಿಯವರೆಗೆ ಏಳು ಲಕ್ಷ ನಲವತ್ತೊಂದು ಸಾವಿರ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ವಿತರಣೆ ಮಾಡಿದ್ದೇವೆಂದು ತಾವು ಹೇಳಿದಿರಿ, ಅದೂ ಕೂಡ ತಪ್ಪು ಮಾಹಿತಿಯಿಂದ ಕೂಡಿದೆಯೆಂದು ನಾನು ಹೇಳಬಯಸುತ್ತೇನೆ. ಕಳೆದ ವರ್ಷ ಈ 2009–10 ರಲ್ಲಿ ಇಲ್ಲಿಯವರೆಗೆ ಯಾವುದೇ ಕ್ಷೇತ್ರದಲ್ಲಿ ಭಾಗ್ಯಲಕ್ಷ್ಮಿ ಬಾಂಡ್ ಅನ್ನು ವಿತರಣೆ ಮಾಡಿಲ್ಲ. ಈ ವರ್ಷ 380 ಕೋಟಿ ರೂಪಾಯಿಗಳು ಇಟ್ಟಿದ್ದೇವೆ, ಕಳೆದ ವರ್ಷ 354 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು ಎಂಬ ಅನೇಕ ಅಂಶಗಳನ್ನು ತಾವು ಹೇಳಿದ್ದೀರಿ. ಆದರೆ ಇಲ್ಲಿಯವರೆಗೆ ಯಾವುದೇ ಫಲಾನುಭವಿಗೆ ಭಾಗ್ಯಲಕ್ಷ್ಮಿ ಬಾಂಡ್ ಬಂದಿಲ್ಲ ಎನ್ನುವುದನ್ನು ಸರ್ಕಾರ ಇವತ್ತು ಗಮನಿಸಬೇಕು. ಏಳು ಲಕ್ಷ ನಲವತ್ತೊಂದು ಸಾವಿರ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ವಿತರಣೆ ಮಾಡಿದ್ದೇವೆಂದು ಹೇಳಿದ್ದೀರಿ, ಅದು ತಪ್ಪು ಅಂಕಿ ಅಂಶ ಅದು, ಅದರ ಜೊತೆಗೆ ಈ ನಮ್ಮ ಅಂಗವಿಕಲರ ಕಲ್ಯಾಣ ಇಲಾಖೆಯಲ್ಲಿ ಸುಮಾರು 2007–08ನೇ ಸಾಲಿನಲ್ಲಿ ನಾವು ಬಜೆಟ್‌ನಲ್ಲಿ ನಿಗದಿಮಾಡಿದಂಥ ಸುಮಾರು 10.00 ಕೋಟಿ ರೂಪಾಯಿಗಳು ಇನ್ನೂ ಕೂಡ ಪೂರ್ತಿ ಖರ್ಚಾಗಿಲ್ಲ. ಇವತ್ತಿಗೂ ಕೂಡ ಪೋಲಿಯೋ ಬೇರೆ ಬೇರೆ ಕಾರಣದಿಂದ ಅಂಗವಿಕಲರಾದಂಥವರು ಪೂರ್ಣವಾಗಿ ಅದರ ಸಾಧನ ಸಲಕರಣೆಗಳನ್ನು ಆ ಫಲಾನುಭವಿಗಳಿಗೆ ಪಡೆಯಲು ಸಾಧ್ಯವಾಗಿಲ್ಲ. ಆ ರೀತಿ ಪರಿಸ್ಥಿತಿ ಇನ್ನು ಕೂಡ ಇದೆ. 2006–07, 2007–08ನೇ ಸಾಲಿನಲ್ಲಿ ಆಶ್ರಯ ಯೋಜನೆಯನ್ನು ನಾವೇನು introduce ಮಾಡಿದೆವು, ಆಶ್ರಯ ಯೋಜನೆ

ಯಲ್ಲಿ ಈ ವರ್ಷವೂ ಕೂಡ ಭೌತಿಕ ಗುರಿಯನ್ನು ಆ target ಅನ್ನು ಸರ್ಕಾರ ತಲುಪಲಿಕ್ಕೆ ಸಾಧ್ಯವಾಗಿಲ್ಲ. ಸರ್ಕಾರ ಇವತ್ತು 1000 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೆ ಖರ್ಚು ಮಾಡುತ್ತೇವೆಂದು ಹೇಳಿದೆ. ಕುಡಿಯುವ ನೀರಿನ ಸಮಸ್ಯೆ ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟರ ಮಟ್ಟಿಗೆ ಇದೆ, ನಗರಗಳಲ್ಲಿ KUWSB ಇದೆ, ಬೇರೆ ಬೇರೆ ಕೇಂದ್ರಸರ್ಕಾರದ ವಿಶೇಷವಾದ ಕಾರ್ಯಕ್ರಮಗಳು ಇವೆ. ಆ ಎಲ್ಲಾ ಕಾರ್ಯಕ್ರಮಗಳಲ್ಲಿ ಮಾಡುತ್ತೇವೆ, ಆದರೆ ಆ ಹಳ್ಳಿ ಜನರ ಬವಣೆ ಇವತ್ತೂ ಅದರಲ್ಲಿಯೂ ಕೂಡ ಮಲೆನಾಡು ಪ್ರದೇಶಗಳ ಹಳ್ಳಿಗಳಿಗೂ, ಬಯಲು ಸೀಮೆ ಪ್ರದೇಶದ ಹಳ್ಳಿಗಳಿಗೂ, ಮುಂಬೈ–ಕರ್ನಾಟಕ, ಹೈದರಾಬಾದ್–ಕರ್ನಾಟಕದ ಹಳ್ಳಿಗಳೂ ಬಹಳ ವ್ಯತ್ಯಾಸ ಇದೆ.

ನಮ್ಮ ಶಿವಮೊಗ್ಗ, ಉಡುಪಿ, ಮಂಗಳೂರು, ಹಾಸನ ಹಾಗೂ ಚಿಕ್ಕಮಗಳೂರು ಹೀಗೆ ಈ ಕಡೆಯ 7–8 ಜಿಲ್ಲೆಗಳನ್ನು ಬಿಟ್ಟರೆ ಉಳಿದೆಲ್ಲಾ ಜಿಲ್ಲೆಗಳಲ್ಲಿ ಒಂದೊಂದು ಊರಿಗೆ ಹೋದರೆ 500–600 ಮನೆಗಳು ಇರುತ್ತವೆ. ಒಂದು ಮಿನಿವಾಟರ್ ಸ್ಕೀಂ ಅಥವಾ ಓವರ್ ಹೆಡ್ ಟ್ಯಾಂಕ್ ಆ ರೀತಿಯ ಒಂದು ಸ್ಕೀಂ ಅನ್ನು ಮಾಡಿ ಅಲ್ಲಿಗೆ ಪೈಪ್‌ಲೈನ್ ಹೀಗೆ ಮತ್ತೊಂದು ಮಾಡಿ ಕೊಳವೆ ನೀರಿನ ಮೂಲಕ ನೀರನ್ನು ಕೊಟ್ಟರೆ ಹೇಗೋ ಹರಿದುಹೋಗುತ್ತದೆ. ಆದರೆ, ನನ್ನ ಕ್ಷೇತ್ರದಲ್ಲಿ ಸುಮಾರು 630 ರೆವಿನ್ಯ ಹಳ್ಳಿಗಳಿವೆ. ಸುಮಾರು 400 ಚಿಲ್ಲರೆ hamlet villages ಇವೆ. ಅಂದರೆ, ಒಂದೊಂದು ಹಳ್ಳಿಯ ರೇಡಿಯಸ್ 4–5 ಕಿ.ಮೀ. ಆಗುತ್ತದೆ. ಆ ಹಳ್ಳಿಯ ಜನಸಂಖ್ಯೆ ಎಷ್ಟಿರುತ್ತದೆ ಎಂದರೆ ಸುಮಾರು 60–70. ಸುಮಾರು 15–16 ಮನೆಗಳಿರುತ್ತವೆ. ಈ ರೀತಿಯ ಮನೆಗಳಿರುತ್ತವೆ. ನಾವು ಆ ಮನೆಗಳಷ್ಟಕ್ಕೂ ಕೂಡ ನೀರು ಪೂರೈಕೆ ಮಾಡಬೇಕಾಗುತ್ತದೆ. ಪ್ರತಿಯೊಂದು ಊರಿನ ಪ್ರತಿಯೊಂದು ಮನೆಗೂ ಸಹ ಈ ವರ್ಷ ಕನಿಷ್ಠ ಮಟ್ಟದಲ್ಲಿ ನೀರು ಪೂರೈಕೆ ಮಾಡಿದೆವು ಎಂದರೆ ಮುಂದಿನ ವರ್ಷಕ್ಕೆ ಹೋಗುವಷ್ಟರಲ್ಲಿ ಇನ್ನು ಇಬ್ಬರು ಒಂದು ಕಿ.ಮೀ. ಅಥವಾ ಅರ್ಧ ಕಿ.ಮೀ. ದೂರದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ. ಅವರಿಗೆ ರಸ್ತೆ ಕೊಡಬೇಕು, ವಿದ್ಯುತ್ ಕೊಡಬೇಕು, ಕುಡಿಯುವ ನೀರು ಕೊಡಬೇಕು. ಹೀಗೆ ಅವರ ಬೇಡಿಕೆ ಹೆಚ್ಚಾಗಿರುತ್ತದೆ. ಅದರಲ್ಲೂ ಕೂಡ ಈಗ ಬೇಸಿಗೆ ಬಂತು. ಮಾರ್ಚ್, ಏಪ್ರಿಲ್, ಮೇ, ಜೂನ್ ಈ ನಾಲ್ಕು ತಿಂಗಳು ಸರ್ಕಾರಕ್ಕೆ ಅಗ್ನಿ ಪರೀಕ್ಷೆ ಕಾಲ. ಕುಡಿಯುವ ನೀರನ್ನು ಜನರಿಗೆ

ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರೆಲ್ಲರೂ ನಿನ್ನೆ ಮೊನ್ನೆ ಈ ಬಗ್ಗೆ ಮಾತನಾಡಿದ್ದಾರೆ. ಇವತ್ತು ಹಳ್ಳಿಗಳಿಗೆ ಹೋಗದೇ ಇರತಕ್ಕಂತಹ ಪರಿಸ್ಥಿತಿ ಬಂದಿದೆ. ಕೊಳವೆ ಬಾವಿಗಳಲ್ಲಿ ಇರತಕ್ಕಂತಹ ನೀರು ಕೆಳಗಡೆಗೆ ಹೋಗಿದೆ. ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಯಿರಿ ಎಂದು ಕೇಳುತ್ತಾರೆ, ಪೈಪ್ ಲೈನ್ ಹಾಕಿಕೊಡಿ ಎಂದು ಕೇಳುತ್ತಾರೆ. ಈ ರೀತಿಯ ಬೇರೆ ಬೇರೆ ಏರ್ಪಾಡುಗಳನ್ನು ಮಾಡಿಕೊಡಿ ಎಂದು ಹೇಳುತ್ತಾರೆ. ಆದರೆ, ದುಡ್ಡು ಎಲ್ಲಿದೆ? ಇವತ್ತು ಯಾವುದೇ ಡಿ.ಸಿ.ಯ ಹತ್ತಿರವೂ ಕೂಡ ಒಂದು ರೂಪಾಯಿ ದುಡ್ಡು ಇಲ್ಲ. ಮಾನ್ಯ ಆಹಾರ ಸಚಿವರು ನಮ್ಮ ಚಾಮರಾಜ ನಗರದಲ್ಲಿ ದುಡ್ಡಿದೆ ಎಂದು ಮೊನ್ನೆ ಹೇಳುತ್ತಿದ್ದರು. ದುಡ್ಡು ಎಲ್ಲಿದೆ ಎಂಬುದು ಗೊತ್ತಿಲ್ಲ. ನಮ್ಮ ಹಾಸನ ಡಿ.ಸಿ.ಯವರ ಹತ್ತಿರ ಒಂದು ರೂಪಾಯಿ ದುಡ್ಡು ಕೂಡ ಇಲ್ಲ. ಟಾಸ್ಕ್‌ಫೋರ್ಸ್‌ನಲ್ಲಿ ಇಲ್ಲಿಯ ತನಕ ಅಂದರೆ ಸುಮಾರು 6 ತಿಂಗಳುಗಳ ಹಿಂದೆ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಬಿಟ್ಟರೆ ಇಲ್ಲಿಯತನಕ ಒಂದು ರೂಪಾಯಿ ಕೂಡ ಇಲ್ಲ. ಇವತ್ತು ಮಾನ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಯಾವಾಗ ಕೊಡುತ್ತಾರೆ ಎಂಬುದು ಗೊತ್ತಿಲ್ಲ. ನಾನು ಒತ್ತಾಯ ಮಾಡುವುದು ಏನೆಂದರೆ, ಕನಿಷ್ಠ ನಮ್ಮ ನಮ್ಮ ಕ್ಷೇತ್ರಗಳಿಗೆ ಟಾಸ್ಕ್ ಫೋರ್ಸ್‌ನಲ್ಲಿ ಕನಿಷ್ಠ 50 ಲಕ್ಷ ರೂಪಾಯಿಗಳನ್ನು ಈ ಬೇಸಿಗೆ ಕಾಲದಲ್ಲಿ ನೀರಿನ ಬವಣೆಯನ್ನು ತೀರಿಸುವುದಕ್ಕೋಸ್ಕರ ಬಿಡುಗಡೆ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ತಾವು ಏನು ನಿಗದಿ ಮಾಡಿದ್ದೀರಿ, ಸಾವಿರಕೋಟಿ ರೂಪಾಯಿಗಳು ಎಂದು ಹೇಳುತ್ತಿದ್ದೀರಿ, ಆ ಹಣವನ್ನು ಮುಂದಿನ ಜನವರಿ–ಫೆಬ್ರವರಿಗೆ ಬಿಡುಗಡೆ ಮಾಡಬೇಕು. ಹಣವನ್ನು ಏಪ್ರಿಲ್–1 ರಿಂದಲೇ ಬಿಡುಗಡೆ ಮಾಡುವುದಕ್ಕೆ ಸರ್ಕಾರ ಕಾಲಮಿತಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಪ್ರತಿ ತಿಂಗಳಿನಲ್ಲಿ, ಪ್ರತಿ ಕ್ಷೇತ್ರದಲ್ಲಿ ಇಂತಿಷ್ಟು ಹಣವೆಂದು ಬಿಡುಗಡೆ ಮಾಡಬೇಕು. ಸಾವಿರ ಕೋಟಿ ರೂಪಾಯಿಗಳನ್ನು ಹಳ್ಳಿಗಳಿಗೆ ಕೊಡತಕ್ಕಂತಹ ಬದ್ಧತೆ ಸರ್ಕಾರಕ್ಕೆ ಇದೆ ಎನ್ನುವುದನ್ನು ತಾವು ತೋರಿಸಿಕೊಡಬೇಕು. ಅದೇ ರೀತಿ ತಾವು ಏನು ಇವತ್ತು ಕುಡಿಯುವ ನೀರಿಗೆ ಪೈಪ್‌ಲೈನ್ ಅನ್ನು ತೆಗೆಯುತ್ತಿದ್ದೇವೆ, ಒಂದು ಕಿ.ಮೀ.ಗೆ ಪೈಪ್‌ಲೈನ್ ತೆಗೆಯುವುದಕ್ಕೆ ಸುಮಾರು ಒಂದು–ಒಂದೂವರೆ ಲಕ್ಷದ ಎಸ್ಟಿಮೇಟ್‌ನ ಖರ್ಚಾಗುತ್ತದೆ ಎಂದು ಇಂಜಿನಿಯರ್ ಹೇಳುತ್ತಾರೆ. ಆದರೆ, ಪೈಪ್‌ಲೈನ್ ತೆಗೆಯುವಂತಹದ್ದಕ್ಕೆ NREG ಕಾರ್ಯಕ್ರಮದಲ್ಲಿ, ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸೇರಿಸುವಂತಹದ್ದನ್ನು

ಮಾಡಬೇಕು. ಶೌಚಾಲಯ ನಿರ್ಮಾಣದ ಕಾರ್ಯವನ್ನು ಉದ್ಯೋಗ ಖಾತ್ರಿ ಯೋಜನೆಯಡಿ ಸೇರಿಸಬೇಕು ಎಂಬ ಪ್ರಸ್ತಾವವನ್ನು ಇಂದು ಬೆಳಿಗ್ಗೆ ಮಾಡಲಾಗಿದೆ. ಅದೇ ರೀತಿಯಾಗಿ ಕುಡಿಯುವ ನೀರಿಗೆ ಪೈಪ್‌ಲೈನ್ ಮಾಡುವಂತಹ ಕೆಲಸವನ್ನು ಕೂಡ ಉದ್ಯೋಗ ಖಾತ್ರಿ ಯೋಜನೆಯಡಿ ಸೇರಿಸುವಂತಹ ಪ್ರಯತ್ನವನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಶೀಘ್ರವಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು ಎಂಬ ಮಾತನ್ನು ಹೇಳುತ್ತಾ ಜೊತೆಗೆ ರಸ್ತೆಗಳ ಪರಿಸ್ಥಿತಿ ಚೆನ್ನಾಗಿಲ್ಲ. ಇವರು ಹೇಳುತ್ತಾರೆ. ಕಳೆದ ವರ್ಷ ಅಷ್ಟು ದುಡ್ಡನ್ನು ಕೊಟ್ಟಿದ್ದೇವೆ ಮತ್ತೆ ಇಷ್ಟು ದುಡ್ಡು ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ, ಸರ್ಕಾರ ಈ ವಿಷಯದಲ್ಲಿ ಹಣ ಹಂಚಿಕೆ ಮಾಡುವಂತಹದ್ದು ತುಂಬಾ ಅವೈಜ್ಞಾನಿಕವಾಗಿದೆ. 10 ರಿಂದ 20 ಇಂಚು ಮಳೆ ಬೀಳತಕ್ಕಂತಹ area ಕ್ಕೂ ಅಷ್ಟೇ ಹಣವನ್ನು ಕೊಡಲಾಗುತ್ತದೆ. ಸುಮಾರು 100–200–300–400 ಇಂಚು ಮಳೆ ಬೀಳತಕ್ಕಂತಹ ಪ್ರದೇಶಕ್ಕೂ ಸಹ ಅಷ್ಟೇ ಹಣವನ್ನು ಕೊಡಲಾಗುತ್ತದೆ. ನಮ್ಮ ಜಿಲ್ಲೆಯಲ್ಲಿ, ಸಕಲೇಶಪುರ, ಆಲೂರು, ಬೇಲೂರು ಮತ್ತು ಅರಕಲಗೂಡಿನ ಕೆಲವು ಭಾಗಗಳಲ್ಲಿ ಕನಿಷ್ಠ 100 ರಿಂದ 400 ಇಂಚು ಮಳೆಯಾಗತಕ್ಕಂತಹ ಜಾಗಗಳಿವೆ. 15–20 ಕಿ.ಮೀ. ದೂರಗಳಲ್ಲಿ ಒಂದೊಂದು range ನಲ್ಲಿ ಮಳೆ ಬೀಳುತ್ತಿರುತ್ತದೆ. ಅಲ್ಲಿಯ ರಸ್ತೆಗಳ ಸ್ಥಿತಿಗಳು ಹೇಳಲಾರದಷ್ಟು ಹಾಳಾಗಿವೆ. ನಾನು ಮೊದಲಿನಿಂದಲೂ ಸಹ ಸರ್ಕಾರಕ್ಕೆ ಇದರ ಬಗ್ಗೆ ಒತ್ತಾಯ ಮಾಡಿಕೊಂಡು ಬಂದಿದ್ದೇನೆ. ಅಲ್ಲಿ ಈ ರೀತಿ ಮಳೆಯಾದಾಗ NCCF ನಲ್ಲಿರಬಹುದು, CRF ನಲ್ಲಿರಬಹುದು, ಸರ್ಕಾರದ ಹಣವಿರಬಹುದು, ಹಣ ಕೊಡುವಂತಹದ್ದು ಮುಖ್ಯವಲ್ಲ. ಆದರೆ, ಪ್ರತಿ ವರ್ಷ ಅದಕ್ಕೆ ಒಂದು ನೀತಿ ಮಾಡಬೇಕು. ನೀತಿ ಪ್ರಕಟಿಸಬೇಕು. ಆ ಭಾಗಗಳಲ್ಲಿ ಮಳೆ ಬಿದ್ದೇ ಬೀಳುತ್ತದೆ. ನಮ್ಮಲ್ಲಿ 100–400 ಇಂಚು ಮಳೆ ಬೀಳುವುದರಿಂದ ಇವತ್ತು ಯಗಚಿ ಡ್ಯಾಮ್ ಇರಬಹುದು, ಹೇಮಾವತಿ ಡ್ಯಾಮ್ ಇರಬಹುದು ತುಂಬತಕ್ಕಂತಹದ್ದು ಇದೆ. ಆ ಡ್ಯಾಮ್‌ಗಳು ತುಂಬುವುದರಿಂದ ಇವತ್ತು ತುಮಕೂರು ಜಿಲ್ಲೆಗೆ ಇರಬಹುದು ಅಥವಾ ಬೇರೆ ಜಿಲ್ಲೆಗಳಿರಬಹುದು ಅವುಗಳಿಗೆ ಇವತ್ತು 25 ಟಿ.ಎಂ.ಸಿ. ನೀರನ್ನು ಹೇಮಾವತಿ ನದಿಯಿಂದ ತುಮಕೂರು ಜಿಲ್ಲೆಗೆ ಕೊಡುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ announce ಮಾಡಿದ್ದಾರೆ. ಇದು ಯಾವ ನೀರು ಗೊತ್ತೇ? ನಮ್ಮ ಮಲೆನಾಡಿನ ಭಾಗದಲ್ಲಿ ಬಿದ್ದಂತಹ ಮಳೆ ನೀರು

ಇಲ್ಲಿ ಬರತಕ್ಕಂಹದ್ದಾಗಿದೆ. ಆದರೆ, ಆ ನೀರು ಎಲ್ಲಿಂದ ಬರುತ್ತದೆ ಎಂದರೆ, ಅಲ್ಲಿ ನಾವು ಏನು ಮಾಡಿದ್ದೇವೆ ಎಂದರೆ, ಆ ಭಾಗದ ಜನ ಇವತ್ತು ರಸ್ತೆಗಳನ್ನು ಹಾಳು ಮಾಡಿಕೊಂಡು, ಅವರ ಜಮೀನು ಹಾಳು ಮಾಡಿಕೊಂಡು ಅಲ್ಲಿಂದ erosion ನಿಂದ ಬಂದಂತಹ ಮಣ್ಣು ಎಲ್ಲವನ್ನೂ ಕಳೆದುಕೊಂಡು ನಷ್ಟಮಾಡಿಕೊಂಡು ಆ ನೀರು ಇಲ್ಲಿಗೆ ಬಂದು ಸೇರುತ್ತದೆ. ಅದಕ್ಕಾಗಿ ಆ ಭಾಗಗಳಿಗೆ ಇವತ್ತು ಹಣವನ್ನು ನಿಗದಿ ಮಾಡಬೇಕು. ಮೊನೆ ನಮ್ಮ ಹಾಸನಕ್ಕೆ NCCF ಹಣದಲ್ಲಿ ಸುಮಾರು 3 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಮೂರು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದರೆ, ವೈಜ್ಞಾನಿಕವಾಗಿ ಎಲ್ಲಿ ರಸ್ತೆಗಳು ಹಾಳಾಗಿವೆ, ಎಲ್ಲಿ ಮಳೆ ಹಾನಿಯಿಂದ ತೊಂದರೆಯಾಗಿದೆ, ಅದರ ಆಧಾರದ ಮೇಲೆ ಹಣವನ್ನು ಹೆಚ್ಚಿಗೆ ಮಾಡಬೇಕು. ಅದನ್ನು ಬಿಟ್ಟು ಡಿ.ಸಿ.ಯವರಿಗೆ ಇಂತಿಷ್ಟು, ಜಿಲ್ಲಾ ಉಸ್ತುವಾರಿ ಸಚಿವರಿಗೆ ಇಂತಿಷ್ಟು, ಎಲ್ಲಾ ಕ್ಷೇತ್ರಗಳಿಗೂ 25 ಲಕ್ಷ ರೂಪಾಯಿಗಳಂತೆ ಹಂಚಿದ್ದಾರೆ. ಒಂದು ಕಿ.ಮೀ. ರಸ್ತೆಯನ್ನು ರಿಪೇರಿ ಮಾಡುವುದಕ್ಕೆ ಆಗಿಲ್ಲ. ನನ್ನ ಕ್ಷೇತ್ರದಲ್ಲಿ ಸುಮಾರು 1,400 ಕಿ.ಮೀ. ಜಿಲ್ಲಾ ಪಂಚಾಯತ್ ರಸ್ತೆಯಿದೆ. ಇದರಿಂದ ಎಷ್ಟು ರಸ್ತೆಯನ್ನು ರಿಪೇರಿ ಮಾಡುವುದಕ್ಕೆ ಸಾಧ್ಯ? ಆ ರಸ್ತೆಗಳ ಸ್ಥಿತಿ ಹೇಳತೀರದು. ಆ ಮಟ್ಟಕ್ಕೆ ಇವತ್ತು ರಸ್ತೆಗಳಿವೆ. ಅದಕ್ಕಾಗಿ ಮಲೆನಾಡಿಗೆ ವಿಶೇಷವಾದ ಪ್ಯಾಕೇಜ್ ಅನ್ನು ಕೊಡಬೇಕು. ಕೊಡಗು ಜಿಲ್ಲೆಗೆ 25 ಕೋಟಿ ರೂಪಾಯಿಗಳ ವಿಶೇಷವಾದ ಪ್ಯಾಕೇಜ್ ಅನ್ನು ಘೋಷಿಸಿದ್ದಾರೆ. ಬಹುಶಃ ಕೊಡಗು ಜಿಲ್ಲೆಯಲ್ಲಿರತಕ್ಕಂತಹ ಎರಡೂ ಕ್ಷೇತ್ರಗಳೂ ಸಹ ಬಿ.ಜೆ.ಪಿ. ಪಾಲಾಗಿವೆ. ಆದ್ದರಿಂದ, ನಮ್ಮ ಪಕ್ಷ ಅಲ್ಲಿದೆ ಎಂಬ ವ್ಯಾಮೋಹದಿಂದ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಅದರ ವ್ಯಾಮೋಹವೇ ಇರಬೇಕು ಎನಿಸುತ್ತದೆ.

(ಗೊಂದಲ)

ಶ್ರೀ ಅಪ್ಪಚ್ಚು ರಂಜನ್ : ಮಾನ್ಯ ಛೇರ್ಮನ್‌ರವರೇ, ಹಾಸನ ಜಿಲ್ಲೆಗೆ 100 ಕೋಟಿ ರೂಪಾಯಿಗಳನ್ನೂ ಕೊಟ್ಟರೂ ಕೂಡ ನಿಮಗೆ ನಾನು ತಕರಾರು ಮಾಡುವುದಿಲ್ಲ. ತಾವು ಸ್ವಲ್ಪ ದಯವಿಟ್ಟು yield ಆಗಿ. ಕೊಡಗು ಜಿಲ್ಲೆಯಿಂದ ಕುಡಿಯುವುದಕ್ಕೆ ನೀರನ್ನು ನಾವು ಕರ್ನಾಟಕಕ್ಕೆ ಕೊಡುತ್ತಿದ್ದೇವೆ, ಅದರ ಜೊತೆಗೆ ರೈತರಿಗೆ ಕೊಡುತ್ತಿದ್ದೇವೆ, ಹಾಸನಕ್ಕೆ ಕೊಡುತ್ತಿದ್ದೇವೆ. ಮಳೆಯಿಂದ ನಾವು ಮುಳುಗಿ ಹೋಗುತೇವೆ. ನಮ್ಮ ರಸ್ತೆಗಳು ಸರಿಯಿಲ್ಲ

O.17 F – 21

ಎನ್ನುವ ಉದ್ದೇಶದಿಂದ ಹಾಗೂ ಹಾಸನದ ರೀತಿಯಲ್ಲಿ, ಬೆಂಗಳೂರಿನ ರೀತಿಯಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದರೆ ಉಳಿಯುವುದಿಲ್ಲ ಎನ್ನುವ ದೃಷ್ಟಿಯಿಂದ ಹಾಗೂ ನಂಜುಂಡಪ್ಪ ಆಯೋಗದಲ್ಲಿ ರಸ್ತೆಗೆ ಹೆಚ್ಚು ಹಣವನ್ನು ಕೊಡಬೇಕು ಎನ್ನುವ ಉದ್ದೇಶದಿಂದ ನಮಗೆ 25 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 25 ಕೋಟಿ ರೂಪಾಯಿಗಳು ಯಾವುದಕ್ಕೂ ಸಾಲುವುದಿಲ್ಲ. 100 ಕೋಟಿ ರೂಪಾಯಿಗಳನ್ನು ಆದರೂ ಕೊಡಬೇಕಾಗಿತ್ತು.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ : ನಿಮ್ಮಲ್ಲಿ ಏನು ವಸ್ತು ಸ್ಥಿತಿ ಇದೆಯೋ ಅದೇ ವಸ್ತು ಸ್ಥಿತಿ ನಮ್ಮಲ್ಲೂ ಸಹ ಇದೆ. ನಿಮ್ಮಲ್ಲಿ ಎಷ್ಟು ಮಳೆ ಬರುತ್ತದೋ ಎಂದರೆ 300 ಇಂಚು ಮಳೆ ಬರುತ್ತದೋ ಅದೇ ರೀತಿ ನಮ್ಮಲ್ಲೂ ಸಹ 300 ಇಂಚು ಮಳೆ ಬರುತ್ತದೆ. ಇದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಆದರೆ, ನಿಮಗೆ ಹಣ ಬರುತ್ತದೆ. ನಮಗೆ ಹಣವಿಲ್ಲ. ಇದು ಯಾವ ನ್ಯಾಯ? ಒಳ್ಳೆಯ ಕಥೆಯಾಯಿತಲ್ಲಾ.

(ಗೊಂದಲ)

ಶ್ರೀ ಅಪ್ಪಚ್ಚು ರಂಜನ್ : ನಮ್ಮ ಕೊಡಗಿನಲ್ಲಿ ಬೀಳುವಷ್ಟು ಮಳೆ ಎಲ್ಲಿಯೂ ಬೀಳುವುದಿಲ್ಲ. ಬೇರೆ ಕಡೆ ಎಲ್ಲಿಯೂ ಅಷ್ಟು ಮಳೆ ಬೀಳುವುದಿಲ್ಲ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ : ಅದನ್ನೇ ನಾವು ಕೇಳುತ್ತಿದ್ದೇವೆ. ಇದು ಬಜೆಟ್ ಅಧಿವೇಶನ. ಇದರಲ್ಲಿ ಕೇಳುತ್ತಿದ್ದೇವೆ. ಕೊಡಗಿನಲ್ಲಿ ಬಿ.ಜೆ.ಪಿ. ಶಾಸಕರಿರುವುದರಿಂದ ಹಣ ಕೊಟ್ಟಿದ್ದಾರೆ.

ಶ್ರೀ ಅಪ್ಪಚ್ಚು ರಂಜನ್ : ಇದು ತಪ್ಪು. ಈ ರೀತಿ ಹೇಳಬಾರದು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಛೇರ್ಮನ್‌ರವರೆ, ಕೊಡಗಿಗೆ ಹಣ ಕೊಟ್ಟಿರುವುದಕ್ಕೆ ನಮ್ಮ ವಿರೋಧವಿಲ್ಲ. 25 ಕೋಟಿ ರೂಪಾಯಿ ಗಳಲ್ಲದಿದ್ದರೆ ಏನು ಇನ್ನೂ 25 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಸೇರಿಸಿ ಕೊಡಲಿ. ಅದೇ ತರಹದಲ್ಲಿ ನಮಗೂ ಕೊಡಲಿ.

ಶ್ರೀ ಅಪ್ಪಚ್ಚು ರಂಜನ್ : ಕೊಡಗಿನಲ್ಲಿ ಇಬ್ಬರು ಬಿ.ಜೆ.ಪಿ. ಶಾಸಕರಿದ್ದುದ್ದರಿಂದ ಕೊಟ್ಟಿದ್ದಾರೆ ಎಂದು ಹೇಳಿದರು. ಅದು ತಪ್ಪು.

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಅಪ್ಪಚ್ಚು ರಂಜನ್‌ರವರೇ, ಪ್ರಕೃತಿ ಯಾರ ಮನೆಯ ಆಸ್ತಿಯೂ ಅಲ್ಲ. ಪ್ರಕೃತಿ ಕೊಡಗಿಗೂ ಮಳೆ

ಸುರಿಸುತ್ತದೆ, ಹಾಸನ ಜಿಲ್ಲೆಗೂ ಮಳೆ ಸುರಿಸುತ್ತದೆ. ಬೇರೆ ಬೇರೆ ಕಡೆಗಳಲ್ಲಿಯೂ ಮಳೆ ಸುರಿಸುತ್ತದೆ. ಬೇರೆ ಬೇರೆ ಕಡೆಗಳಲ್ಲಿ ಅಂದರೆ ಮೊನ್ನೆ ಉತ್ತರ ಕರ್ನಾಟಕದಲ್ಲಿ ನೆರೆ ಹಾವಳಿಯಾಯಿತು. ಪ್ರಕೃತಿ ಮುಂದೆ ಯಾರೂ ಕೂಡ ಇಲ್ಲ. ಉತ್ತರ ಕರ್ನಾಟಕದಲ್ಲಿ ಈ ರೀತಿ ಮಳೆ ಬಂದು ಸುಮಾರು 4,000 ಹಳ್ಳಿಗಳು ಮಳೆಯಿಂದ ತೊಯ್ದು ಹೋಗುತ್ತದೆ ಎಂದು ಯಾರೂ ಕೂಡ ನಿರೀಕ್ಷೆ ಮಾಡಿರಲಿಲ್ಲ. ಅವರ ಜೀವನ ಹಾಳಾಗುತ್ತದೆ ಎಂದು ಯಾರೂ ಕೂಡ ನಿರೀಕ್ಷೆ ಮಾಡಿರಲಿಲ. ಆದರೆ, ನಾನು ಹೇಳುತ್ತಿರುವುದು ಏನೆಂದರೆ, ಇದು ಕೊಡಗಿನ ಪರಿಸ್ಥಿತಿ ಮಾತ್ರವಲ್ಲ. ಹಾಸನ ಜಿಲ್ಲೆ ಹಾಗೂ ಶಿವಮೊಗ್ಗದಲ್ಲಿಯೂ ಸಹ ಇದೇ ಪರಿಸ್ಥಿತಿ ಇದೆ. ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಸಹ ಈ ಪರಿಸ್ಥಿತಿ ಇದೆ. ಸಮಾನವಾಗಿ ಎಲ್ಲಾ ಜಿಲ್ಲೆಗಳಿಗೂ ಹಣ ಕೊಡಲಿ ಎಂಬ ಬೇಡಿಕೆ ನಮ್ಮದು. ಸಹಜವಾಗಿ ಕೊಡಗಿಗೆ ಮಾತ್ರ ಪ್ಯಾಕೇಜ್ ಅನ್ನು ಕೊಟ್ಟು ಉಳಿದ ಜಿಲ್ಲೆಗಳಿಗೆ ಬಿಟ್ಟಾಗ ಆ ಅನುಮಾನ ಬಂದೇ ಬರುತ್ತದೆ. ಎಲ್ಲೋ ಒಂದು ಕಡೆ ಸರ್ಕಾರ ತಾರತಮ್ಯ ಮಾಡುತ್ತಿದೆ ಎನ್ನುವ ಭಾವನೆ ಬಂದೇ ಬರುತ್ತದೆ.

ಶ್ರೀ ಅಪ್ಪಚ್ಚು ರಂಜನ್ : ಕಳೆದ ಸಾರಿ ಕೊಡಗಿನಿಂದ ಮೂರು ಜನ ಶಾಸಕರಿದ್ದಿದ್ದು ಈಗ ಇಬ್ಬರು ಶಾಕರಾಗಿದ್ದೇವೆ. ಆದ್ದರಿಂದ, ನಮಗೆ 25 ಕೋಟಿ ರೂಪಾಯಿಗಳನ್ನು ಕೊಡುವುದು ಬಹಳ ಕಡಿಮೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಛೇರ್ಮನ್‌ರವರೆ, ಇದು ನಮ್ಮ ಕರ್ಮ. ನಾನು ಮಾನ್ಯ ಅಪ್ಪಚ್ಚು ರಂಜನ್‌ರವರ ಪರವಾಗಿಯೇ ನಿಲ್ಲುತ್ತೇನೆ. ಮಾನ್ಯ ಸಭಾಧ್ಯಕ್ಷರಾದ ಬೋಪಯ್ಯನವರ ಪರವಾಗಿಯೂ ನಿಲ್ಲುತ್ತೇನೆ. ಇವತ್ತು ಇಲ್ಲಿ ಮಾನ್ಯ ಜೀವರಾಜ್‌ರವರು ಕೂಡ ಇದ್ದಾರೆ. ಇದು ನಮ್ಮ ಕರ್ಮ. ಇವತ್ತು ದುರಾದೃಷ್ಟವೆಂದರೆ, ಕ್ಷೇತ್ರ ವಿಂಗಡಣೆಯಾಗಿರುವಂತಹದ್ದು ಜನಸಂಖ್ಯೆ ಆಧಾರದ ಮೇಲೆ. ಭೌಗೋಳಿಕ ವಿಸ್ತೀರ್ಣದ ಮೇಲೆ ಆಗಲಿ ಅಥವಾ ಅಲ್ಲಿನ ಸಮಸ್ಯೆಗಳ ಆಧಾರದ ಮೇಲೆ ಆಗಿಲ್ಲ. ನನ್ನ ಕ್ಷೇತ್ರ 155 ಕಿ.ಮೀ. ಉದ್ದ ಬರುತ್ತದೆ. ಹೀಗೆ ಅಂದಾಜು 100 ಕಿ.ಮೀ. ಹೆಚ್ಚು–ಕಡಿಮೆ ಉದ್ದ ಬರುತ್ತದೆ. 800 ಚಿಲ್ಲರೆ ಹಳ್ಳಿಗಳಿವೆ ಎಂದು ನಾನು ನಿಮಗೆ ಹೇಳಿದ್ದೇನೆ. ಬೆಂಗಳೂರು ಹೇಗಿದೆ? ಇಲ್ಲಿಯೂ ಸಹ ಅಷ್ಟೇ ಜನಸಂಖ್ಯೆ ಇದೆ. 2–3 ಕಿ.ಮೀ. ರೇಡಿಯಸ್‌ನಲ್ಲಿ ಒಬ್ಬರು ಶಾಸಕರು ತಿರುಗಾಡುತ್ತಾರೆ. ನಾವು ಎಷ್ಟು ಕಿ.ಮೀ. ರೇಡಿಯಸ್‌ನಲ್ಲಿ ಒಬ್ಬರು ಶಾಸಕರು ತಿರುಗಾಡಬೇಕು? ಎಷ್ಟು ಉದ್ದ ರಸ್ತೆ ಬರುತ್ತವೆ? ಅಷ್ಟು ಸಮಸ್ಯೆಗಳಿವೆ?

ಕುಡಿಯುವ ನೀರಿನ ಸಮಸ್ಯೆ ಎಷ್ಟಿದೆ? ಇಲ್ಲಿ ಏನಿದೆ? ಆದ್ದರಿಂದ, ಕೇಂದ್ರ ಸರ್ಕಾರ ಪುನರ್ವಿಂಗಡಣೆಯಲ್ಲಿ ಏನು ಮಾನದಂಡವನ್ನು ಉಪಯೋಗಿಸಿತು, ಆ ಮಾನದಂಡ ಉಪಯೋಗಿಸಿದ್ದೇ ಮೊದಲನೆಯ ತಪ್ಪು. ಇವತ್ತು ಮೇಘಾಲಯದಲ್ಲಿದೆ, ಅಸ್ಸಾಂನಲ್ಲಿದೆ.

(5 – 10 P.M)

ಇವತ್ತು ಮೇಘಾಲಯದಲ್ಲಿ, ಅಸ್ಸಾಂನಲ್ಲಿ, eastern states ಆ ಭಾಗದಲ್ಲೆಲ್ಲಾ ಸಮಸ್ಯೆಗಳ ಆದಾರದ ಮೇಲೆ, ಭೌಗೋಳಿಕ ವಿಸ್ತೀರ್ಣದ ಆಧಾರದ ಮೇಲೆ ಕ್ಷೇತ್ರ ಪುನರ್ವಿಂಗಡಣೆ ಮಾಡಿದ್ದಾರೆ. ಆ ರೀತಿ ನಮ್ಮಲ್ಲೂ ಮಾಡಬೇಕಾಗಿತ್ತು. ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ 20 ಸಾವಿರಕ್ಕೆ ಒಬ್ಬ ಎಂ.ಎಲ್.ಎ. ಇದ್ದಾರೆ, ಮೇಘಾಲಯದಲ್ಲಿ 30 ಸಾವಿರ ಜನಸಂಖ್ಯೆಗೆ ಒಬ್ಬ ಎಂಎಲ್.ಎ. ಇದ್ದಾರೆ, ಅಸ್ಸಾಂನಲ್ಲಿ 60 ಸಾವಿರ ಜನಸಂಖ್ಯೆಗೆ ಒಬ್ಬ ಎಂ.ಎಲ್.ಎ. ಇದ್ದಾರೆ. ಅದೇ ರೀತಿಯಾಗಿ ನಮ್ಮ 8–9 ಜಿಲ್ಲೆಗಳಿಗೆ ಮಾಡಿದ್ದರೆ, ಬಹುಶಃ ನಮ್ಮ ಕ್ಷೇತ್ರಕ್ಕೆ ಹೆಚ್ಚು ಅನುಕೂಲವಾಗುತ್ತಿತ್ತು, ಹೆಚ್ಚು ಅನುದಾನ ಬರುತ್ತಿತ್ತು, ಹೆಚ್ಚು ಕೆಲಸ ಆಗುತ್ತಿತ್ತು.......

ಛೇರ್ಮನ್ : ಆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಹೇಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಅದಕ್ಕಾಗಿ ನನ್ನ ಒತ್ತಾಯ ಏನೆಂದರೆ, ವಿಧಾನ ಸಭಾ ಕ್ಷೇತ್ರಗಳಿಗೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನ ನಿಗದಿಪಡಿಸುವಾಗ ಮತ್ತು ಬಿಡುಗಡೆ ಮಾಡುವಾಗ ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಳ್ಳದೆ, ಆಯಾ ಕ್ಷೇತ್ರಗಳ ಭೌಗೋಳಿಕ ವಿಸ್ತೀರ್ಣ ಮತ್ತು ಸಮಸ್ಯೆಗಳನ್ನು ಆಧಾರವಾಗಿ ಇಟ್ಟುಕೊಳ್ಳಬೇಕು. ಹಾಗೆ ಇಟ್ಟುಕೊಂಡಾಗ ಮಾತ್ರ ನಮ್ಮ ಕ್ಷೇತ್ರ ಏನಾದರೂ ಸ್ವಲ್ಪ ಅಭಿವೃದ್ಧಿ ಹೊಂದಲಿಕ್ಕೆ ಸಾಧ್ಯ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನೂ ಅನೇಕ ಸಮಸ್ಯೆಗಳು ನಮ್ಮಲ್ಲಿವೆ.

ಶ್ರೀ ಅಪ್ಪಚ್ಚು ರಂಜನ್ : ಕ್ಷೇತ್ರ ಪುನರ್ವಿಂಗಡಣೆ ಬಗ್ಗೆ ನೀವು ಹೇಳಿರುವುದಕ್ಕೆ ನಮ್ಮ ಸಹಮತ ಇದೆ.

ಶ್ರೀ ಹೆಚ್.ಕೆ.ಕುಮಾರ ಸ್ವಾಮಿ : Thank you, thank you. ಇನ್ನೊಂದು ವಿಷಯವನ್ನು .....

ಛೇರ್ಮನ್ : ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಮನವರಿಕೆ ಮಾಡಿಕೊಟ್ಟರೆ ಅನುಕೂಲ ಮಾಡಿಕೊಡುತ್ತಾರೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ನಾನು ಈಗ ಹೇಳಲು ಹೊರಟಿರುವ ವಿಷಯಕ್ಕೆ ಮಾನ್ಯ ಅಪ್ಪಚ್ಚು ರಂಜನ್‌ರವರು ಇನ್ನೂ ಕೂಡ ಸಹಮತವನ್ನು

ವ್ಯಕ್ತಪಡಿಸುತ್ತಾರೆಂದು ಭಾವಿಸುತ್ತೇನೆ. ನಮ್ಮ ಭಾಗದಲ್ಲಿ ಕಾಫಿ, ಏಲಕ್ಕಿ, ಭತ್ತ, ಆಲೂಗಡ್ಡೆ ಬೆಳೆಯುತ್ತಾರೆ. ನಮ್ಮದೊಂದು ರೀತಿಯಲ್ಲಿ ಬಯಲುಸೀಮೆ ಮತ್ತು ಮಲೆನಾಡು ಪ್ರದೇಶ ಎರಡೂ ಮಿಕ್ಸ್ ಆಗಿದೆ. ಇವತ್ತು ಪ್ರಕೃತಿ ಮುನಿದಿದೆ. ಕಳೆದ ನವೆಂಬರ್–ಡಿಸೆಂಬರ್‌ನಲ್ಲಿ ಬಂದಂತಹ ಅಕಾಲಿಕ ಮಳೆಯಿಂದಾಗಿ ಕಾಫಿ ಬೆಳೆಗೆ ಸಾಕಷ್ಟು ನಷ್ಟವಾಗಿದೆ. ನಾನು ಮಾನ್ಯ ಅಪ್ಪಚ್ಚು ರಂಜನ್‌ರವರ ಗಮನಕ್ಕೆ ಪುನಃ ಪುನಃ ಇದನ್ನು ತರಲಿಕ್ಕೆ ಬಯಸುತ್ತೇನೆ. 2007–08ರಲ್ಲಿ ಡಿ.ಸಿ.ಯವರ ನೇತೃತ್ವದಲ್ಲಿ ಸರ್ಕಾರವೇ ಸಮಿತಿಯೊಂದನ್ನು ರಚಿಸಿತು. ಕೊಡಗು ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಮತ್ತು ಹಾಸನ ಜಿಲ್ಲೆಯ ಸಕಲೇಶಪುರ, ಇಲ್ಲೆಲ್ಲಾ ಹೋಗಿ, ಏನು ನಷ್ಟವಾಗಿದೆ, ನೋಡಿಕೊಂಡು ಬನ್ನಿ ಎಂದು ಆ ಸಮಿತಿ ರಚಿಸಲಾಗಿತ್ತು. ಹಾಸನದ ಡಿ.ಸಿ.ಯವರು ಅದರಂತೆ ವರದಿಯೊಂದನ್ನು ಸರ್ಕಾರಕ್ಕೆ ಕೊಟ್ಟರು. ಕಾಫಿ ಬೋರ್ಡ್‌ನವರೂ ಸಹ ಸಮಿತಿಯ ಜೊತೆಗಿದ್ದರು. ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನಲ್ಲಿ 34 ಸಾವಿರ ಹೆಕ್ಟೇರ್‌ನಲ್ಲಿ ಕಾಫಿ ಬೆಳೆ ಬೆಳೆದಿದ್ದರು, ಅದರಲ್ಲಿ 10 ಸಾವಿರ ಚಿಲ್ಲರೆ ಹೆಕ್ಟೇರ್ ನಲ್ಲಿಯ ಕಾಫಿ ಬೆಳೆ ನಷ್ಟವಾಗಿದೆ ಎಂದು ಅವರ ವರದಿಯಲ್ಲಿ ಹೇಳಿದ್ದಾರೆ. ಆ ನಷ್ಟದ ಪ್ರಮಾಣ 6 ಕೋಟಿ 43 ಲಕ್ಷ ರೂ.ಗಳಾಗಿದೆ, ಇದನ್ನು ಬಿಡುಗಡೆ ಮಾಡಬೇಕೆಂದು ಅಂದಿನ ಡಿ.ಸಿ.ಯವರು ಸರ್ಕಾರಕ್ಕೆ 2–3 ಪತ್ರಗಳನ್ನು ಬರೆದಿದ್ದಾರೆ. ಹಿಂದಿನ ಶಾಸಕರಾದ ವಿಶ್ವನಾಥ್‌ರವರು ಮತ್ತು ನಾನು, ಎಲ್ಲರೂ ಸೇರಿ ಈ ಬಗ್ಗೆ ಸರ್ಕಾರಕ್ಕೆ ಒತ್ತಾಯ ಮಾಡಿದ್ದೆವು. ಆದರೆ ಇಲ್ಲಿಯವರೆಗೂ ಒಂದೇ ಒಂದು ರೂಪಾಯಿಯನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ಆದರೆ, ಕೊಡಗು ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಗೆ ಸರ್ಕಾರ ಹಣ ಬಿಡುಗಡೆ ಮಾಡಿದೆ. ಇದಕ್ಕೆ ಮಾನ್ಯ ಅಪ್ಪಚ್ಚು ರಂಜನ್ ರವರು ಏನು ಹೇಳುತ್ತಾರೆ? ಇದರಲ್ಲಿ ತಾರತಮ್ಯವಾಗಿದೆ ಎನ್ನುತ್ತಾರೋ, ಇಲ್ಲವೋ? ಇದನ್ನು ಏನೆಂದು ನಾವು ಭಾವಿಸಬೇಕು? ಎರಡನೆಯದಾಗಿ, ನನ್ನ ಕ್ಷೇತ್ರದ ಎಸಳೂರು ಮತ್ತು ಚಂದಿಹಳ್ಳಿ ಪಕ್ಕ ಶನಿವಾರ ಸಂತೆ ಎಂಬ ಹಳ್ಳಿ ಇದೆ. ಜನರೆಲ್ಲಾ ಹತ್ತಿರದಲ್ಲಿದೆ ಎಂಬ ಕಾರಣಕ್ಕಾಗಿ ತಮ್ಮ ವಹಿವಾಟುಗಳಿಗೆಲ್ಲಾ ಅಲ್ಲಿಗೆ ಹೆಚ್ಚಾಗಿ ಹೋಗುತ್ತಾರೆ. ಶನಿವಾರ ಸಂತೆಯಲ್ಲಿ ಕರೆಂಟ್ ಯಾವಾಗಲೂ ಇರುತ್ತದೆ, ಅಲ್ಲಿ ಆಗಾಗ್ಗೆ ಕರೆಂಟ್ ತೆಗೆಯುವುದಿಲ್ಲ. ಎಸಳೂರು ಮತ್ತು ಚಂದಿಹಳ್ಳಿಗಳಲ್ಲಿ ಕರೆಂಟ್ ತೆಗೆಯುತ್ತಾರೆ. ಕಾರಣ, ಅಲ್ಲಿ ಇವರೇ ಇದ್ದಾರೆ. ಇದರಲ್ಲೂ ಕೂಡ ತಾರತಮ್ಯವಾಗುತ್ತಿದೆ...

ಶ್ರೀಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ಕೊಡಗಿಗೆ ಹಲವಾರು ವರ್ಷಗಳಿಂದ Power cut ಅನ್ನು ಕಡಿಮೆ ಮಾಡಿದ್ದಾರೆ. ಇದಕ್ಕೆ reason ಏನೆಂದರೆ, we are paying 95% bill. ಹಾಸನದವರು 30% ಕೂಡ payment ಮಾಡುವುದಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ನಾವು ಕೊಡುತ್ತಿಲ್ಲವೇ?

ಶ್ರೀ ವೈ.ಎನ್. ರುದ್ರೇಶ್‌ಗೌಡ : ನಾವೂ ಸಹ 90% ಗಿಂತ ಹೆಚ್ಚಾಗಿ Payment ಮಾಡುತ್ತಿದ್ದೇವೆ. ನೀವೇನು 30% ಎಂದು ಹೇಳಿದರಲ್ಲಾ, ಅದು ಸುಳ್ಳು ಮಾಹಿತಿಯಾಗಿದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಈ ರೀತಿಯ ತಾರತಮ್ಯ ಆಗುತ್ತಿದೆ. ಇಲ್ಲಿಯವರೆಗೆ ನಾನು ಈ ಬಗ್ಗೆ ಮಾನ್ಯ ಮುಖ್ಯ ಕಾರ್ಯದರ್ಶಿಗಳನ್ನು ಕೇಳಿಕೊಂಡಿದ್ದೇನೆ. ನಮ್ಮ ರೈತರ ನಿಯೋಗ ಕೂಡ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದರೂ ಸಹ, ಇಲ್ಲಿಯವರೆಗೂ ಸಹ ಈ ಹಣ ಬಿಡುಗಡೆಯಾಗಿಲ್ಲ. ಆ ಹಣವನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಇದುವರೆಗೂ ನಾನು 2007–08ರ ಕಥೆ ಹೇಳಿದೆ. ಮೊನ್ನೆ ಕೂಡ ಇದೇ ತರಹ ಆಗಿದೆ. ಪುನಃ ನಷ್ಟದ ಅಂದಾಜು ಕಳುಹಿಸಿದ್ದಾರೆ. ಸರ್ಕಾರ ಯಾವುದೇ ರೀತಿಯ ಹಣವನ್ನು ಬಿಡುಗಡೆ ಮಾಡಿಲ್ಲ. ಇನ್ನೊಂದು ಕಡೆ ಆಲೂಗೆಡ್ಡೆ ಬೆಳೆಯಲ್ಲಿ ಸಹ ನಷ್ಟವಾಗಿದೆ. ನನ್ನ ಕ್ಷೇತ್ರದಲ್ಲಿ ಕಟ್ಟಾಯ ಹೋಬಳಿ ಎಂದು ಬರುತ್ತದೆ, ಅಲ್ಲಿ ಮತ್ತು ಅದಕ್ಕೆ ಸೇರಿದ ಹಾಗೆ ನಮ್ಮ ಹಾಸನ ತಾಲ್ಲೂಕು, ಇರಬಹುದು, ಚನ್ನರಾಯಪಟ್ಟಣ ತಾಲ್ಲೂಕು ಇರಬಹುದು, ಅರಸೀಕೆರೆ ತಾಲ್ಲೂಕು ಇರಬಹುದು, ಇಲ್ಲೆಲ್ಲಾ ಬೆಳೆ ನಷ್ಟವಾಗಿದೆ. ಆಲೂಗೆಡ್ಡೆ ಬೆಳೆ ಎಷ್ಟೊಂದು ಸೂಕ್ಷ್ಮ ಬೆಳೆ ಎಂಬುದು ಮಾನ್ಯ ಸಭಾಧ್ಯಕ್ಷರಿಗೆ ಗೊತ್ತಿದೆ. ಒಂದು ಸಾರಿ ಅದು ಹೋಯಿತು ಎಂದರೆ ಹೋಯಿತು. ಅದಕ್ಕೆ ಒಂದು ಎಕರೆಗೆ ಸುಮಾರು 10–15 ಸಾವಿರ ರೂ.ಗಳ ಖರ್ಚು ಬರುತ್ತದೆ.. ಆಲೂಗೆಡ್ಡೆ ಬೆಳೆ ಸಂಪೂರ್ಣವಾಗಿ ಅಂಗಮಾರಿ ರೋಗಕ್ಕೆ ತುತ್ತಾಗಿದೆ. ನಾವು ಹೋಗಿ 'ನೆಗಡಿ ಹುಷಾರು ಮಾಡಿ' ಎಂದರೆ, 'ಮೂಗನ್ನೇ ಕತ್ತರಿಸಿ' ಎನ್ನುತಕ್ಕಂಥ ಉತ್ತರವನ್ನು ನಿನ್ನೆ ಮಾನ್ಯ ಮಂತ್ರಿಗಳಾದ ಉಮೇಶ್ ಕತ್ತಿಯವರು ಹೇಳಿದರು. ಇನ್ನು ಮೇಲೆ ಆಲೂಗೆಡ್ಡೆ ಬೀಜವನ್ನೇ ಹಾಕಬೇಡಿ, ಅಲ್ಲದೆ continuous ಆಗಿ ಆಲೂಗೆಡ್ಡೆ ಬೆಳೆಯಬೇಡಿ ಎನ್ನುತಕ್ಕಂಥ ನೀತಿಯನ್ನು ಸರ್ಕಾರದವರು ರೈತರಿಗೆ

ಹೇಳುತ್ತಿದ್ದಾರೆ. ನಮಗೆ ನಾಚಿಕೆಯಾಗಬೇಕು! ಇಷ್ಟೆಲ್ಲಾ ಕೃಷಿ ವಿಜ್ಞಾನಿಗಳಿದ್ದಾರೆ, ಬೀಜ ಕಂಡು ಹಿಡಿದಿದ್ದಾರೆ, ಖಾಯಿಲೆಗಳನ್ನು ಕಂಡು ಹಿಡಿದಿದ್ದಾರೆ, ಆದರೆ ಔಷಧಿ ಕಂಡು ಹಿಡಿದಿಲ್ಲ. ಅಂದರೆ ಕೃಷಿ ವಿಜ್ಞಾನಿಗಳೂ ಸೇರಿದಂತೆ ಎಲ್ಲಾ experts ಕೂಡ ಅಸಹಾಯಕರಾಗಿದ್ದಾರೆ. 'ನಾವು ಏನ್ ಸಾರ್ ಮಾಡುವುದು? Sorry Sir, ನಾವು ಏನೂ ಮಾಡಲಿಕ್ಕಾಗುತ್ತಿಲ್ಲ' ಎನ್ನುವಂತಹ ಅಸಹಾಯಕತೆಯ ಮಾತನ್ನು ಅವರು ಹೇಳುವಂತಹ ಸ್ಥಿತಿಗೆ ಬಂದಿದ್ದಾರೆ. ಆಲೂಗೆಡ್ಡೆ ಬೆಳೆ ಸುಮಾರು 250 ಕೋಟಿ ರೂ.ಗಳಷ್ಟು ಇವತ್ತು ನಷ್ಟವಾಗಿದೆ. ಸರ್ಕಾರ ಆ ನಷ್ಟವನ್ನು ರೈತರಿಗೆ ತುಂಬಿಕೊಡಬೇಕು ಎನ್ನತಕ್ಕಂಥ ಒತ್ತಾಯವನ್ನು ಮಾಡುತ್ತೇನೆ. ಭತ್ತದ ಬೆಳೆ ಕೂಡ ಹಾಳಾಗಿದೆ. ಮಾನ್ಯ ಅಧ್ಯಕ್ಷರೆ, ನೀವು ರೈತರು, ನಿಮಗೆ ಎಲ್ಲಾ ಗೊತ್ತಾಗುತ್ತದೆ. ಭತ್ತದ ಬೆಳೆಯೆಲ್ಲಾ ಗದ್ದೆಯಲ್ಲಿ ಹಾಗೆಯೇ ಬಿದ್ದಿದೆ, ಕಣದಲ್ಲೂ ಕೂಡ ಬಿದ್ದಿದೆ. ಆ ಭತ್ತಕ್ಕೆ ಬೂಸ್ಟ್ ಕೂಡ ಬಂದಿದೆ. ಇದನ್ನು ಬೆಳೆದು ರೈತರಿಗೆ ಏನೇನೂ ಕೂಡ ಪ್ರಯೋಜನವಾಗಿಲ್ಲ. ರೈತರ ಬವಣೆ ತೀರುವುದೇ ಇಲ್ಲ. ಸಿಟಿಯವರು ಬಿಡಿ, ಅವರಿಗೂ ನಮಗೂ ಹೋಲಿಸುವ ಹಾಗಿಲ್ಲ. ಸಿಟಿಯ ಜನ ಒಳ್ಳೆಯ ರೇಟ್ ಅಕ್ಕಿಯನ್ನು ಅರಾಮಾಗಿ ಊಟ ಮಾಡುತ್ತಾರೆ. ಆದರೆ ರೈತರಿಗೆ ಎಷ್ಟು ಕಷ್ಟ ಇದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು ಎಂಬ ಮಾತನ್ನು ಹೇಳುತ್ತೇನೆ. ಇನ್ನೊಂದು ನಮ್ಮ ಭಾಗದಲ್ಲಿ ......

ಛೇರ್ಮನ್ : ರೈತರಿಗೆ ಮಾತ್ರ ಬಹಳ ಕಷ್ಟವಾಗುತ್ತಿದೆ. ಅದಕ್ಕೆ ಈಗಾಗಲೇ ವಿಜ್ಞಾನಿಗಳು ಸಾಕಷ್ಟು ಕಡೆಗೆ ಆಲೂಗೆಡ್ಡೆ ಬೆಳೆಯುವಂತಹ ಎಲ್ಲಾ ಪ್ರದೇಶದಲ್ಲಿ ಸಲಹೆಗಳನ್ನು ಕೊಡುತ್ತಿದ್ದಾರೆ. ನಿನ್ನೆ ಮಾನ್ಯ ಮಂತ್ರಿಗಳು ನಾವು ರೈತರಿಗೆ ತಿಳುವಳಿಕೆ ಮಾಡಿಕೊಡಬೇಕು ಎಂದಿದ್ದರು. ರೈತರಿಗೆ ಹಾನಿಯಾಗುವುದನ್ನು ತಪ್ಪಿಸಬೇಕಾದಂತಹ ಅವಶ್ಯಕತೆ ಇದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಆಯಿತು ಸ್ವಾಮಿ, ಅದನ್ನು ಕೃಷಿ ವಿಜ್ಞಾನಿಗಳು ಬಂದು ರೈತರಿಗೆ ಹೇಳಲಿ.....

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಕೊನೆಯ ಪಕ್ಷ ಆಲೂಗೆಡ್ಡೆ ಬೆಳೆಗೆ supporting price ಆದರೂ ಕೊಡಿ ಎಂದು ಸೂಚನೆ ಕೊಡಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಉತ್ತರ ಇಂಡಿಯಾದಲ್ಲಿ, ಅಮೆರಿಕಾದಲ್ಲಿ, ಯುರೋಪಿಯನ್ ಕಂಟ್ರೀಸ್‌ನಲ್ಲಿ

ಆಲೂಗೆಡ್ಡೆ ಬೆಳೆ ಬೆಳೆಯುತ್ತಿದ್ದಾರೆ. ಅಲ್ಲಿಗೆ ಯಾವ ಖಾಯಿಲೆಯೂ ಸಹ ಹೋಗಿಯೇ ಇಲ್ಲ. ಅವರಿಗೇನೂ ನಷ್ಟವಾಗುತ್ತಿಲ್ಲ. ಅವರೇನು ರೈತರಲ್ಲವೇ? ಅವರು ಹೇಗೆ ಬೆಳೆಯುತ್ತಿದ್ದಾರೆ? ಇವರೆಲ್ಲಾ ಹೋಗಿ ನೋಡಿ ಬರಲಿ. ಅಧಿಕಾರಿಗಳು ಸ್ವಲ್ಪ ಅಲ್ಲೆಲ್ಲಾ ಟೂರ್ ಹೋಗಿ ಈ ಬಗ್ಗೆ ಸಂಶೋಧನೆ ಮಾಡಿ ತಿಳಿದುಕೊಂಡು ಬಂದು, ನಮ್ಮ ರೈತರಿಗೆ ಸ್ವಲ್ಪ ಹೇಳಲಿ. ಅದನ್ನು ಬಿಟ್ಟು ಅಸಹಾಯಕತೆಯನ್ನು ವ್ಯಕ್ತಪಡಿಸುವುದರ ಅರ್ಥ, ತನ್ನ ಅದಕ್ಷತೆಯನ್ನು ಹೇಳಿಕೊಂಡಂತೆ ಎನ್ನುವುದನ್ನು ನಾವು ಮರೆಯಬಾರದು. ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು 2008-09ನೇ ಬಜೆಟ್‌ನಲ್ಲಿ ಆನೆ ಪಾರ್ಕ್ ಬಗ್ಗೆ ಹೇಳಿದ್ದರು. ಬಹುಶಃ ಇಡೀ ನಮ್ಮ ಭಾಗದ ರೈತರ ದುರಂತಕ್ಕೆ ಕಾರಣವಾಗಿರುವ ಆನೆ ಹಾವಳಿ ಬಗ್ಗೆ ನಾವು ಮಾತನಾಡಿದ್ದೇವೆ. ನಾವು ಆನೆ ಪಾರ್ಕ್ ಅನ್ನು ಸ್ಥಾಪಿಸುತ್ತೇವೆ, ಆನೆ ಧಾಮವನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಸರ್ಕಾರ 2008-09ನೇ ಬಜೆಟ್‌ನಲ್ಲಿ ಹೇಳಿತ್ತು. ಅದು ಇಲ್ಲಿಯತನಕ ಜಾರಿಯಾಗಲಿಲ್ಲ. 2009-10ರಲ್ಲಿ ಆ ಮಾತಿಲ್ಲ, 2010-11ರಲ್ಲಿ ಸಹ ಆ ಮಾತು ಇಲ್ಲ. ಏತಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಸುಮ್ಮನಿದ್ದಾರೆ? ಅರಣ್ಯ ಖಾತೆ ಅವರ ಹತ್ತಿರವೇ ಇದೆ. ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ತಮಗೆ ಹೇಳುತ್ತೇನೆ. ಇವತ್ತು ನಾನು ಶಾಸಕನಾದ ಮೇಲೆ ಕಳೆದ ಒಂದೂ ಮುಕ್ಕಾಲು ವರ್ಷದಿಂದ ನನ್ನ ಸ್ವಂತ ಕ್ಷೇತ್ರದಲ್ಲಿ ಸುಮಾರು 8 ಜನ ಸತ್ತಿದ್ದಾರೆ. ತಮಗೆ ಹೇಳುತ್ತೇನೆ. ಸತ್ತ ಮೇಲೆ ಶಾಸಕನಾದವನು ಸಾಂತ್ವನ ಹೇಳಬೇಕಲ್ಲವೇ? ಕನಿಷ್ಟ ಸಾಂತ್ವನವನ್ನಾದರೂ ಹೇಳುವುದಕ್ಕೆ ಶಾಸಕ ಅಲ್ಲಿಗೆ ಹೋಗಲೇ ಬೇಕು. ಒಂದು ಮಾತು ಹೇಳುವುದಾದರೆ, ನಾನು ಭಯದಿಂದ ಹೇಳುತ್ತಿಲ್ಲ, ಅದಕ್ಷತೆಯನ್ನೂ ಸಹ ನಾನು ತೋರಿಸುತ್ತಿಲ್ಲ, ಆದರೆ ಅಲ್ಲಿಗೆ ಹೋಗುವುದಕ್ಕೆ ಭಯವಾಗುತ್ತದೆ. ಏಕೆಂದರೆ, ಯಾವ ಸಂದರ್ಭದಲ್ಲಿ ಜನ ಕಾನೂನನ್ನು ಕೈಗೆತ್ತಿಕೊಳ್ಳುತ್ತಾರೋ, ಯಾವ ಸಂದರ್ಭದಲ್ಲಿ ಅಧಿಕಾರಿಗಳು ಮತ್ತು ಜನ ಪ್ರತಿನಿಧಿಗಳ ಮೇಲೆ ಹಲ್ಲೆ ಮಾಡುತ್ತಾರೋ, ಏನು ಮಾಡುತ್ತಾರೋ ಎನ್ನತಕ್ಕಂಥ ಭಯವಾಗುತ್ತಿದೆ. ಅವತ್ತು ನಾನು ಮತ್ತು ಇತರೆ ಜನ ಪ್ರತಿನಿಧಿಗಳು ಹೋದಾಗ, ನಮ್ಮ ಅಧಿಕಾರಿಗಳೂ ಬರುತ್ತಾರೆ. ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟು, ಯಾರು ಅವರ ಹತ್ತಿರದವರು ಇರುತ್ತಾರೋ, ಅವರಿಗೆ ನಾವು ಹೇಳಬಾರದ ಸುಳ್ಳನ್ನೆಲ್ಲಾ ಹೇಳಿ, ಸಮಾಧಾನ ಮಾಡಿ ತಪ್ಪಿಸಿಕೊಂಡು ಬರುತ್ತೇವೆ. ಎಷ್ಟು ಸಾರಿ ಈ ರೀತಿ ಮಾಡಬಹುದು? ಸರ್ಕಾರ ಏಕೆ ನಿರ್ದಿಷ್ಟವಾದಂತಹ ಕ್ರಮವನ್ನು ಕೈಗೊಳ್ಳುತ್ತಿಲ್ಲ? ಉದ್ಯೋಗ

ಖಾತ್ರಿ ಯೋಜನೆಯಲ್ಲಿ ನಾವು ಗುಂಡಿ ತೋಡುತ್ತೇವೆ, ನಾವು ಹುಲ್ಲನ್ನು ಬೆಳೆಸುತ್ತೇವೆ, ಅವು ಬರುವಂತಹ ಕಡೆಗಳಲ್ಲೆಲ್ಲಾ ಹರಡುತ್ತೇವೆ ಎನ್ನುತ್ತಾರೆ. ನನ್ನ ಕ್ಷೇತ್ರದ ಎಸಳೂರು ಭಾಗದಲ್ಲಿ ಆಲೂರು, ಮಜ್ಜಿಗೆ ಹೊಸಕೋಟೆ, ಐಜನೂರು ಭಾಗದಲ್ಲಿ ಸುಮಾರು 60–70 ಆನೆಗಳು ಹಿಂಡು ಹಿಂಡಾಗಿ ತಿರುಗುತ್ತಿವೆ. ನನಗೆ ಬೇಸರ ಏನೆಂದರೆ, ಇವತ್ತು ನೀವು ನಮ್ಮ ಜನಕ್ಕೆ ರಕ್ಷಣೆ ಕೊಟ್ಟರೆ, ನಾವು ಯಾವ ಒಂದೂವರೆ ಲಕ್ಷ ಕೊಡುವುದೂ ಬೇಡ, ಅವರಿಗೆ ಯಾವ ಸಾಂತ್ವನವೂ ಬೇಡ. ಎಷ್ಟು ದಿನ ರಾಜಕಾರಣಿ ಸುಳ್ಳು ಹೇಳಲಿಕ್ಕೆ ಸಾಧ್ಯ? ಇವತ್ತು ಜನ ತುಂಬಾ ಜಾಗೃತರಾಗಿದ್ದಾರೆ. ಹಿಂದೆ ನೀವು ಏನೇ ತಪ್ಪು ಮಾಡಿದ್ದರೂ ಕೂಡ, ನಮ್ಮ ಶಾಸಕರದು ತಪ್ಪಲ್ಲ, ನಮ್ಮ ಸರ್ಕಾರದ್ದು ತಪ್ಪಲ್ಲ ಎಂದು ಕಂಡು ಬಂದರೂ ಸಹ, ಇಂದು ಎಲ್ಲವನ್ನೂ ನಮ್ಮ ಮೇಲೆಯೇ ಹಾಕುತ್ತಿದ್ದಾರೆ.

ಇದು ಸಹಜ ಕೂಡ ಆಗಿದೆ. ಮಾನ್ಯ ಛೇರ್ಮನ್‌ರವರೆ, ಮಕ್ಕಳು ಶಾಲೆಗೋಸ್ಕರ ಹೊರಗಡೆ ಬರುವಂತಿಲ್ಲ. ಸಂಜೆ 4 ಗಂಟೆಯೊಳಗೆ ಮನೆ ಸೇರಿಕೊಳ್ಳಬೇಕು. ಜನರು ಕೂಲಿಗೆ ಹೊರಗಡೆ ಹೋಗುವಂತಿಲ್ಲ. ಎಂತಹ ಸ್ಥಿತಿಯಲ್ಲಿ ಈ ಜನರು ವಾಸಿಸುತ್ತಿದ್ದಾರೆ ಎಂದರೆ, 6 ತಿಂಗಳ ಹಿಂದೆ ನಮ್ಮ ಒತ್ತಾಯಕ್ಕೋಸ್ಕರ ಸಿಂಗ್ ಎನ್ನುವ ಪ್ರಧಾನ ಕಾರ್ಯದರ್ಶಿಯವರು, ಪಿಸಿಸಿಎಫ್, ಸ್ಥಳೀಯ ಡಿ.ಸಿ., ನಮ್ಮ ಸಹಪಾಠಿಗಳು, ಸ್ನೇಹಿತರು, ಶಾಸಕರು ಎಲ್ಲರೂ ಸೇರಿ ಒಂದು ಸಭೆ ನಡೆಸುವ ಮೂಲಕ ಏನಾದರೂ ಮಾಡಿ ಆನೆಗಳನ್ನು ಹಿಡಿಯಲು ಬೇರೆ ವ್ಯವಸ್ಥೆ ಮಾಡುತ್ತೇವೆನ್ನುವ ಮಾತನ್ನು ಹೇಳಿದರು. ಎರಡು ಆನೆಗಳನ್ನು ಹಿಡಿಯುವುದಕ್ಕೆ ಅವಕಾಶ ಕೊಟ್ಟರು. ವರ್ಷದ ಹಿಂದೆ ಎರಡು ಆನೆಗಳನ್ನು ಹಿಡಿದರು. ಆರು ತಿಂಗಳಿನಲ್ಲಿ ಇನ್ನು 2 ಆನೆಗಳನ್ನು ಹಿಡಿಯುವುದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿದೆ. ಆದರೆ, ಆ ಆನೆಗಳನ್ನು ಹಿಡಿಯುವ ಪ್ರಕ್ರಿಯೆಯನ್ನೇ ಇನ್ನೂ ಪ್ರಾರಂಭಿಸಿಲ್ಲ. ಕಾರಣವೇನೆಂದರೆ, ಯಾವುದೋ ಸಿರಿಂಜ್ ಅನ್ನು ಒರಿಸ್ಸಾದಿಂದ ತರಬೇಕು. ಒರಿಸ್ಸಾದಲ್ಲಿ ಇನ್ನು ಆ ಔಷಧಿ ಸಿಕ್ಕಿಲ್ಲವಂತೆ. ಇದು ನಮ್ಮ ಅಧಿಕಾರಿಗಳು ಕೊಡುವ ಉತ್ತರವಾಗಿದೆ. ಅಂದರೆ, ಆನೆ ಹಿಡಿಯುವುದೂ ಕಷ್ಟ, ಅವುಗಳನ್ನು ಸಾಗಿಸುವುದೂ ಕಷ್ಟ. ಅದಕ್ಕೋಸ್ಕರ, ನಮ್ಮ ಜನರು ಒಂದು ಬೇಡಿಕೆ ಇಟ್ಟಿರುವುದೇನೆಂದರೆ, 'ಸರ್, ದಯಮಾಡಿ ಒಂದು ಕೆಲಸ ಮಾಡಿ, ನಿಮ್ಮಿಂದ ಇದು ಆಗುವುದಿಲ್ಲ, ಆನೆ ಹಿಡಿಯುವ ಕೆಲಸ ಸರ್ಕಾರದಿಂದಲೂ ಆಗುವುದಿಲ್ಲ. ದಯಮಾಡಿ ನಮ್ಮೆಲ್ಲರನ್ನೂ ಸ್ಥಳಾಂತರಿಸಿ, ನೀವು ಎಂಎಲ್‌ಎ

ಗಳು, ಮಂತ್ರಿಗಳು ಬೆಂಗಳೂರಿನಲ್ಲಿ ಎಲ್ಲೆಲ್ಲಿದ್ದುಕೊಂಡು ಮಜವಾಗಿದ್ದೀರೋ, ನಮ್ಮನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ಕೂಡಿಟ್ಟುಕೊಳ್ಳಿ' ಎನ್ನುತ್ತಾರೆ!

2-3 ವರ್ಷಗಳಿಂದ ಯಾರೂ ವ್ಯವಸಾಯ ಆಡಿಲ್ಲ, ಗದ್ದೆ ನಾಟಿ ಮಾಡಿಲ್ಲ, ಕಾಫಿ ಬೆಳೆದಿಲ್ಲ. ನಷ್ಟ ಮಾಡಿಕೊಳ್ಳಲು ಯಾರು ಬಯಸುತ್ತಾರೆ? ದುಡ್ಡು ಕೊಟ್ಟು ನಷ್ಟ ಅನುಭವಿಸುವುದಕ್ಕಿಂತಲೂ ಮಾಡದಿರುವುದೇ ಒಳ್ಳೆಯದು. ಅವರೆಲ್ಲರೂ ಅಲ್ಲಿ ಭಯದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ನಾನು ಇವತ್ತು ಎಲ್ಲಿ ಭಾಷಣ ಮಾಡುತ್ತಿದ್ದೇನೆ. ಯಾವ ಗಳಿಗೆಯಲ್ಲಿ ಅಲ್ಲಿ ಆನೆ ಬಂದಿದೆಯೋ, ಅಲ್ಲಿ ಯಾರನ್ನು ತುಳಿದಿದೆಯೋ, ಏನಾಗಿದೆಯೋ ಗೊತ್ತಿಲ್ಲ. ಸರ್ಕಾರ ಏಕೆ ಇಷ್ಟೊಂದು ಮೌನವಾಗಿದೆ? ಏಕೆ ಇಷ್ಟೊಂದು ನಿರ್ಲಕ್ಷ್ಯ ತಾಳುತ್ತಿದೆ? ತಾವು ರೈತರೊಂದಿಗೆ ಚೆಲ್ಲಾಟವಾಡುತ್ತಿದ್ದೀರಾ? 'ಮಾಡಲಿ ಬಿಡಿ, ರೈತರು ಸಾಯುತ್ತಾರೆ. ಅಲ್ಲಿ ಇಬ್ಬರು ಅಳುತ್ತಾರೆ, ಎಂಎಲ್ಎ ಅವರನ್ನು ಜನರು ಬೈದು ಸುಮ್ಮನಾಗುತ್ತಾರೆ, ಮತ್ಯಾರನ್ನೋ ಬೈಯುತ್ತಾರೆ' ಎಂದು ಸುಮ್ಮನಿದ್ದುಕೊಂಡು, ಇದನ್ನು ಜನರ ದೌರ್ಬಲ್ಯವೆಂದು ನೀವು ದುರುಪಯೋಗಪಡಿಸಿಕೊಳ್ಳುತ್ತಿದ್ದೀರಿ ಎನ್ನುವ ಮಾತನ್ನು ನಾನು ಸರ್ಕಾರಕ್ಕೆ ಹೇಳಬೇಕಾಗುತ್ತದೆ.

ಛೇರ್ಮನ್ : ಈ ಸಂಬಂಧ ತಾವು ಸರ್ಕಾರಕ್ಕೆ ಸರಿಯಾದ, ಸಲಹೆ, ಸೂಚನೆಗಳನ್ನು ಕೊಡಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಸರ್ಕಾರಕ್ಕೆ ಈಗಾಗಲೇ ಸಲಹೆ, ಸೂಚನೆಗಳನ್ನೆಲ್ಲಾ ಕೊಡಲಾಗಿದೆ. ಸರ್ಕಾರ ಯಾವುದನ್ನು ಫಾಲೋ ಮಾಡುತ್ತಿಲ್ಲ. ನಿರ್ಲಕ್ಷ್ಯ ತೋರಿಸುತ್ತಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರ ಎರಡನ್ನೂ ಒಪ್ಪುತ್ತೇನೆ. ಬರೀ ನಿಮ್ಮ ಸರ್ಕಾರ ಮಾತ್ರವೆಂದು ಹೇಳುವುದಿಲ್ಲ.

ಛೇರ್ಮನ್ : ಎಷ್ಟೋ ವರ್ಷಗಳಿಂದ ಇದೇ ಕತೆ ಹೇಳುತ್ತಿದ್ದೀರಿ. ಎಷ್ಟೋ ವರ್ಷಗಳಿಂದ ಈ ತೊಂದರೆಯನ್ನು ಜನರು ಅನುಭವಿಸುತ್ತಿದ್ದಾರೆ. ಇದಕ್ಕೆ ಶಾಶ್ವತವಾದ ಪರಿಹಾರ ಕಂಡುಕೊಳ್ಳುವ ಬಗ್ಗೆ ತಾವು ಸರ್ಕಾರಕ್ಕೆ ಸಲಹೆ, ಸೂಚನೆಗಳನ್ನು ಕೊಡಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಈ ಕಾಲದಲ್ಲಿ ಪ್ರತಿ ತಿಂಗಳೂ ಒಬ್ಬೊಬ್ಬರು ಸಾಯುವುದೆಂದರೆ ಇದ್ಯಾವ ನ್ಯಾಯ?

ಒಬ್ಬ ಮಾನ್ಯ ಸದಸ್ಯರು : ನಮ್ಮ ನೋವು ಏನಿದೆ ಎಂಬುದನ್ನು ಹೇಳಿಕೊಂಡರೂ, ಸರ್ಕಾರದವರು ಅದಕ್ಕೆ ಗಮನ ಕೊಡಬೇಕಲ್ಲ.

ಛೇರ್ಮನ್ : ಸಂಬಂಧ ತಾವು ಸರ್ಕಾರಕ್ಕೆ ಸರಿಯಾದ ಸಲಹೆ, ಸೂಚನೆಗಳನ್ನು ಕೊಡಿ. ಬಹಳಷ್ಟು ವರ್ಷಗಳಿಂದ ಆ ಭಾಗದ ಜನರು, ರೈತರು ಇಂತಹ ಅನಾಹುತಗಳನ್ನು ಅನುಭವಿಸುತ್ತಿರುವುದು ನಿಮಗೂ ಗೊತ್ತಿದೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಸರ್ಕಾರಕ್ಕೆ ಮಾಡುತ್ತೇವೆನ್ನುವ ಇಚ್ಛಾಶಕ್ತಿ ಬೇಕು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಸರ್ಕಾರಕ್ಕೆ ಈಗಾಗಲೇ ಸಾಕಷ್ಟು ಸಲ ಸಲಹೆ, ಸೂಚನೆಗಳನ್ನು ಕೊಡಲಾಗಿದೆ, ಎಲ್ಲವೂ ಗೊತ್ತಿದೆ. ಆದರೆ, ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ, ಈ ಕುರಿತಾದ ಬದ್ಧತೆ ಇರಬೇಕಷ್ಟೆ. ಮಾನ್ಯ ಮುಖ್ಯ ಮಂತ್ರಿಗಳಿರಬಹುದು, ಮಂತ್ರಿಗಳಿರಬಹುದು, ಅಧಿಕಾರಿಗಳಿರಬಹುದು, ಆಗಿಂದಾಗ್ಗೆ ಸಭೆ ನಡೆಸಿ ಕೇಂದ್ರಕ್ಕೆ ಹೋಗಿ, ಕೇಂದ್ರ ಸರ್ಕಾರದ ಮಂತ್ರಿ ಇರಬಹುದು, ಅಧಿಕಾರಿಗಳಿರಬಹುದು, ಅವರೊಂದಿಗೆ ಕುಳಿತು ಮಾತನಾಡಿ, ಮನಸ್ಸು ಮಾಡಿದರೆ ಇದಕ್ಕೊಂದು ಪರಿಹಾರ ಕಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲವೇ? ಏಕೆ ಇಷ್ಟೊಂದು ಚೆಲ್ಲಾಟವಾಡುತ್ತಿದ್ದೀರಿ? ನೀವೇಕೆ ಹೀಗೆ ಮಾಡುತ್ತಿದ್ದೀರಿ? ಇಲ್ಲಿ ಪಕ್ಷದ ವಿಷಯ ಬಿಡಿ ಸ್ವಾಮಿ. ಇದು ಕೇವಲ ಹಾಸನ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ, ಮೈಸೂರು ಜಿಲ್ಲೆಯ ನಂಜನಗೂಡು, ಅದೇ ರೀತಿ ಬೇರೆ ಕಡೆಗಳಲ್ಲೂ ಈ ಪರಿಸ್ಥಿತಿ ಇದೆ. ಆನೆಗಳು ಈಗ ಗುಬ್ಬಿ, ರಾಮನಗರಕ್ಕೂ ಬರಲು ಪ್ರಾರಂಭಿಸಿವೆ. ತಾವೇಕೆ ಇಷ್ಟೊಂದು ಉದಾಸೀನ ಮಾಡುತ್ತಿದ್ದೀರಿ? ಕೆಲವು ಕಡೆಗಳಲ್ಲಿ ಆನೆಗಳ ಹತ್ಯೆಯಾಗುತ್ತಿದೆ. ನಾವು ಆನೆ ಹತ್ಯೆಯನ್ನು ಬೆಂಬಲಿಸುವುದಿಲ್ಲ. ಆನೆಗಳನ್ನು ನಾಶ ಮಾಡುವುದಕ್ಕೆ ನಮ್ಮ ವಿರೋಧವಿದೆ. ಮನುಷ್ಯನಿಗಿಂತಲೂ ಆನೆಗಳಿಗೆ ಹೆಚ್ಚು ಬೆಲೆ ಇದೆ, ಅಷ್ಟೆ ಬೆಲೆ ಮನುಷ್ಯನಿಗೂ ಇದೆ. ಎರಡನ್ನೂ ರಕ್ಷಿಸಬೇಕು. ವನ್ಯಪ್ರಾಣಿಯೊಂದಿಗೆ ಮನುಷ್ಯರನ್ನೂ ರಕ್ಷಿಸಬೇಕು. ಇದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಬೇಕು. ನಾವಂತೂ ತೀರ್ಮಾನ ಮಾಡಿಕೊಂಡಿದ್ದೇವೆ. ಹಾಸನದಲ್ಲಿ ಧರಣಿ ಮಾಡಬಹುದು, ವಿಧಾನಸೌಧಕ್ಕೆ ಬಂದು ಧರಣಿ ಮಾಡಬಹುದು. ಆದರೆ, ಸರ್ಕಾರ ಇಷ್ಟೊಂದು ನಿದ್ರೆ ಮಾಡುತ್ತಿದ್ದರೆ, ಉದಾಸೀನ ತೋರಿದರೆ ಏನು ಮಾಡಬಹುದು? ಜನರೇ ಕಾನೂನನ್ನು ಕೈಗೆತ್ತಿಕೊಳ್ಳುವ ದಿನ ದೂರವಿಲ್ಲ. ಅನಂತರ, ಒಂದಲ್ಲ ಒಂದು ದಿವಸ ಶಾಸಕರ ಬಲಿಯಾಗಬಹುದು. ಅದನ್ನೂ ನಾನು ಸರ್ಕಾರಕ್ಕೆ ಹೇಳುತ್ತೇನೆ.

ಒಮ್ಮೆ ನಾನೂ ಸಿಕ್ಕಿ ಹಾಕಿಕೊಂಡಿದ್ದೆ. ಶಾಲಾ ವಾರ್ಷಿಕೋತ್ಸವ ಸಮಾರಂಭ ಮುಗಿಸಿಕೊಂಡು ರಾತ್ರಿ 9.30 ಗಂಟೆಗೆ ಬರುವಾಗ ಒಂಟಿ ಸಲಗವೊಂದು ದಾರಿಯಲ್ಲಿ ಹೋಗುತ್ತಿತ್ತು. ತಕ್ಷಣ ನಮ್ಮ ಡ್ರೈವರ್ ನೋಡಿ ವಾಹನವನ್ನು ಹಿಂದಕ್ಕೆ ತೆಗೆದುಕೊಂಡ. ಹಿಂದೆ ದೊಡ್ಡ ಪ್ರಪಾತವಿತ್ತು. ಆದರೂ ಹೇಗೋ, ಏನೋ ಮಾಡಿ ವಾಹನವನ್ನು ಹಿಂದಕ್ಕೆ ವಾಪಸ್ಸು ತೆಗೆದುಕೊಂಡು ಬಂದೆವು. ಒಂದು ವೇಳೆ ಸಿಕ್ಕಿ ಹಾಕಿಕೊಂಡಿದ್ದಲ್ಲಿ, ಒಬ್ಬ ಶಾಸಕನಿಗೆ ಇಂತಹ ಪರಿಸ್ಥಿತಿಯೇನಾದರೂ ಬಂದಿದ್ದಲ್ಲಿ, ಬಹುಶಃ ಮುಖ್ಯಮಂತ್ರಿಗಳು ಬರುತ್ತಿದ್ದರೋ ಏನೋ ಗೊತ್ತಿಲ್ಲ. ಸ್ಥಳೀಯ ಮಂತ್ರಿಗಳು, ನೂರಾರು ಜನರು ಬಂದು ಶಾಸಕರಿಗೆ ಹೀಗಾಯಿತು ಎಂದು ಸಾಂತ್ವನದ ನುಡಿಗಳನ್ನಾಡಿ ಹೋಗಬಹುದು. ಅವತ್ತಿನ ದಿನಕ್ಕೆ ಏನಾದರೊಂದು ಆದೇಶ ಮಾಡಬಹುದೆಂದು ನನಗನಿಸುತ್ತದೆ. ಅಂದರೆ, ಉನ್ನತ ಮಟ್ಟದವರು ಬಲಿಯಾಗಬೇಕೆಂದು ಸರ್ಕಾರಕ್ಕೆ ಏನಾದರೂ ಇಚ್ಛೆ ಇದೆಯೇ?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ತಾವು ಯಾರನ್ನು ಉದ್ದೇಶಿಸಿ ಮಾತನಾಡುತ್ತಿದ್ದೀರಿ? ಸದನದಲ್ಲಿ ಇಬ್ಬರು ಸಚಿವರಿದ್ದಾರೆ. ಅವರ ಪೈಕಿ ಒಬ್ಬರು ಪತ್ರಿಕೆ ಓದುತ್ತಿದ್ದರೆ, ಮತ್ತೊಬ್ಬರು ಫೈಲು ನೋಡುತ್ತಿದ್ದಾರೆ.

ಛೇರ್ಮನ್ : ಸದಸ್ಯರು ಮಾತನಾಡುತ್ತಿರುವುದನ್ನು ಅವರು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ತೆಗೆದುಕೊಳ್ಳುತ್ತಿರುವವರು ಯಾರು? "ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ" ಅವರು ತಮ್ಮ ಕ್ಷೇತ್ರದ ಕಷ್ಟಗಳನ್ನು ಹೇಳುತ್ತಾ ಹೋಗುತ್ತಿದ್ದಾರೆ. ಹೇಳಿ ಸಮಾಧಾನ ಪಟ್ಟುಕೊಳ್ಳಬೇಕಷ್ಟೇ ಹೊರತು ಇದಕ್ಕೆ ಪರಿಹಾರ ಸಿಗುತ್ತದೆಂಬ ಭರವಸೆ ಯಾರಿಗೂ ಉಳಿದಿಲ್ಲ.

ಛೇರ್ಮನ್ : ನಿಮ್ಮ ಸಲಹೆಗಳನ್ನು ಕೊಡಿ, ಅವರು ತೆಗೆದು ಕೊಳ್ಳುತ್ತಿದ್ದಾರೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಅವರು ಏನು ಬರೆದು ಕೊಂಡಿದ್ದಾರೆ ಎಂಬುದನ್ನು ಹೇಳಲಿ ನೋಡೋಣ.

ಛೇರ್ಮನ್ : ಅವರು ಬರೆದುಕೊಳ್ಳುತ್ತಿದ್ದಾರೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಕಮಲಾಪುರ ಮೀಸಲು ಕ್ಷೇತ್ರ ಆಗಿದೆಯೇ? ಎಂಬುದರ ಬಗ್ಗೆ ಅವರು ಪತ್ರಿಕೆಯಲ್ಲಿ ನೋಡುತ್ತಿದ್ದಾರೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಹದೇವ ಪ್ರಸಾದ್‌ರವರೆ, ಇದನ್ನು ಅನುಭವಿಸಿದವರಿಗೇ ಮಾತ್ರ ಗೊತ್ತಾಗುವುದು. ಬಳ್ಳಾರಿಯಲ್ಲಿ ಇಬ್ಬರು ಮಂತ್ರಿಗಳಿದ್ದಾರೆ, ಅವರು ಆರಾಮವಾಗಿದ್ದಾರೆ. ಇಲ್ಲಿರುವ ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು ಬೆಂಗಳೂರಿನವರು. ಅವರಿಗೆ ನಮ್ಮ ಕಷ್ಟ ಗೊತ್ತಾಗುವುದಿಲ್ಲ. ಆದರೆ, ಸರ್ಕಾರಕ್ಕೆ ಜಂಟಿ ಜವಾಬ್ದಾರಿ ಇದೆ ಎಂಬುದು ತಮಗೆಲ್ಲರಿಗೂ ಗೊತ್ತಿರಲಿ. ಈ ಸಮಸ್ಯೆಯನ್ನು ನೀಗಿಸುವುಧಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂಬ ಮಾತನ್ನು ಹೇಳುತ್ತೇನೆ.

ಇನ್ನು ಡಾ: ನಂಜುಂಡಪ್ಪನವರು ಪ್ರಾದೇಶಿಕ ಅಸಮತೋಲನ ಸಂಬಂಧ ಸರ್ಕಾರಕ್ಕೆ ಸಲ್ಲಿಸಿರುವ ವರದಿ ಜಾರಿ ಕುರಿತು ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಅರಕಲಗೂಡು, ಬೇಲೂರು, ಚನ್ನರಾಯಪಟ್ಟಣ, ಅರಸೀಕೆರೆ ಮತ್ತು ಹೊಳೆನರಸೀಪುರ, ಈ 5 ತಾಲ್ಲೂಕುಗಳು ವರದಿಯಲ್ಲಿ ಸೇರಿದ್ದರೆ, ಆಲೂರು, ಸಕಲೇಶಪುರ ಮತ್ತು ಹಾಸನ, ಈ ಮೂರು ತಾಲ್ಲೂಕು ಗಳನ್ನು ಕೈಬಿಡಲಾಗಿದೆ. ಯಾವ ಆಧಾರದ ಮೇಲೆ ನಂಜುಂಡಪ್ಪನವರ ವರದಿ ಸಲ್ಲಿಕೆಯಾಯಿತು? ಯಾವ ಆಧಾರದ ಮೇಲೆ ವರದಿ ತಯಾರಿಸಿದರು? ಇದಕ್ಕೆ ಮಾನದಂಡಗಳೇನು? ಗೊತ್ತಿಲ್ಲ. ಬಹುಶಃ, ವರದಿ ತಯಾರಿಸುವ ಮುನ್ನ ಅಲ್ಲಿನ ಪ್ರದೇಶಗಳಲ್ಲೆಲ್ಲಾ ಅವರು ಸಂಚರಿಸಿ, ಕಾಫಿ ಬೆಳೆಯುವವರು ಚೆನ್ನಾಗಿದ್ದಾರೆ, ಸುಖವಾಗಿದ್ದಾರೆ, ಆದುದರಿಂದ ಅವರೆಲ್ಲರೂ ಚೆನ್ನಾಗಿದ್ದಾರೆ. ಇವು ಮುಂದುವರೆದ ತಾಲ್ಲೂಕುಗಳಾಗಿರುವುದರಿಂದ ವರದಿಯಲ್ಲಿ ಸೇರಿಸಬೇಕಾಗಿಲ್ಲ ಎನ್ನುವ ತೀರ್ಮಾನಕ್ಕೆ ಬಂದು ಈ ತಾಲ್ಲೂಕುಗಳನ್ನು ವರದಿಯಿಂದ ಕೈಬಿಟ್ಟಿರಬಹುದು. ಈ ನಿಟ್ಟಿನಲ್ಲಿ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ನಂಜುಂಡಪ್ಪನವರ ವರದಿ ರೀತಿಯಲ್ಲಿಯೇ ಇನ್ನೊಂದು ಆಯ್ಕೆ ಸಮಿತಿ ರಚಿಸಿ ಪುನಃ ಯಾವ್ಯಾವ ತಾಲ್ಲೂಕುಗಳು ಹಿಂದುಳಿದಿವೆಯೋ, ಅದೆಲ್ಲವನ್ನೂ ಪಟ್ಟಿಗೆ ಸೇರಿಸಿ ಅನುದಾನ ಬಿಡುಗಡೆ ಮಾಡುವ ಕೆಲಸ ಮಾಡಬೇಕೆಂಬ ಮಾತನ್ನು ಹೇಳುತ್ತೇನೆ.

ಇವತ್ತು ನೀರಾವರಿ ಸಚಿವರು ಸದನದಲ್ಲಿಲ್ಲ. ನಮ್ಮ ಕ್ಷೇತ್ರದಲ್ಲಿ seepage water ನಿಂದಾಗಿ..... ಅನೇಕ ಶೀತಪೀಡಿತ ಹಳ್ಳಿಗಳಿವೆ. ಹಿಂದೆ ಒಂದು ಸಲ ಸಭೆ ನಡೆಸಿ ಭರವಸೆ ಕೊಡುವ ಪ್ರಯತ್ನ ನಡೆಯಿತು. ಆದರೆ, ಇಲ್ಲಿಯವರೆಗೂ ಏನೂ ಆಗಿಲ್ಲ. ಸರ್ಕಾರ ನೀರನ್ನು ಶೇಖರಿಸಿ ಕೊಡುತ್ತದೆ. ಆದರೆ, ನೀರಿನಲ್ಲಿ ಮುಳುಗಡೆಯಾದವರನ್ನು ಮತ್ತು ಶೀತಪೀಡಿತ

ಪ್ರದೇಶದಲ್ಲಿರುವವರನ್ನು ನಾವು ಮರೆಯುತ್ತೇವೆ. ಇವತ್ತು ಜನರು ಹೇಗಿದ್ದಾರೆಂದರೆ, ಜೂನ್ ತಿಂಗಳಿನಿಂದ ಜನವರಿವರೆಗೆ ಭತ್ತದ ಹುಲ್ಲನ್ನು ನೆಲದ ಮೇಲೆ ಹಾಕಿ ಗೋಣಿಚೀಲ ಹಾಕಿಕೊಂಡು ಮಲಗುತ್ತಾರೆ! ಇಂತಹ ಸ್ಥಿತಿಯಲ್ಲಿರುವ ಸುಮಾರು 17 ಹಳ್ಳಿಗಳಿವೆ. ಶ್ರೀ ರುದ್ರೇಶ್ ಗೌಡರವರ ಹಾಲಿ ಕ್ಷೇತ್ರದಲ್ಲೂ 2-3 ಹಳ್ಳಿಗಳಿವೆ. ಅಲ್ಲಿಗೆ ಹೋದರೆ, ನೀರು ಬಾರದಂತೆ ಏನಾದರೂ ಮಾಡಿ ಎಂದು ಅಧಿಕಾರಿಗಳನ್ನು ಕೇಳಿದರೆ, ಒಂದು ತಡೆಗೋಡೆ ಕಟ್ಟಿಕೊಡುವುದಾಗಿ ಹೇಳುತ್ತಾರೆ. ಆದರೆ, ಮಾಡುವುದಕ್ಕಾಗುವುದಿಲ್ಲ ಎನ್ನುತ್ತಾರೆ.

ಮಾನ್ಯ ಛೇರ್ಮನ್‌ರವರೆ, ಅಧಿಕಾರಿಗಳಾದವರು ಬರೀ ಐಎಎಸ್, ಐಪಿಎಸ್ ಓದಿದರಷ್ಟೇ ಸಾಲದು, ಜೊತೆಗೆ ಮಾನವೀಯತೆಯೂ ಬೇಕು. ಸಾಮಾನ್ಯ ಜ್ಞಾನವಿಟ್ಟುಕೊಂಡು ಕೆಲಸ ಮಾಡಬೇಕು. ಸಮಾನ್ಯ ಜ್ಞಾನವಿಟ್ಟು ಕೊಂಡು ಕೆಲಸ ಮಾಡಿದರೆ ನಿಮ್ಮ ಕಾನೂನನ್ನು ಹೇಗೆ ಬೇಕಾದರೂ ಇಂಟರ್‌ಪ್ರಿಟ್ ಮಾಡಿ ಜನರಿಗೆ ಸಹಾಯ ಮಾಡಬಹುದಾಗಿದೆ. ಆ ಕೆಲಸವನ್ನು ನಮ್ಮ ಅಧಿಕಾರಿಗಳಾದರು ಮಾಡುತ್ತಿಲ್ಲ, ಮಾನವೀಯತೆಯನ್ನೂ ತೋರುತ್ತಿಲ್ಲ. ನಾನು ಆ ಅಧಿಕಾರಿ, ಈ ಅಧಿಕಾರಿ ಎಂದು ಹೇಳುತ್ತಿಲ್ಲ. ಇವತ್ತು ನಾವು ಯಾವ್ಯಾವುದೋ ಉದ್ದೇಶಗಳಿಗೆ ಎಷ್ಟೊಂದು ಹಣ ಖರ್ಚು ಮಾಡುತ್ತಿಲ್ಲ? ಮನೆಗಳ ಪಕ್ಕದಲ್ಲಿ ನೀರು ತುಂಬಿಕೊಂಡಿದ್ದರೆ ಜನರು ಸತ್ತು ಹೋಗಿರುತ್ತಿದ್ದರು. ಅವರು ತಮ್ಮ ಮನೆಗಳಿಂದ 2-3 ಕಿಲೋಮೀಟರ್‌ಗಳಷ್ಟು ದೂರ ಹೋಗಿ ನೀರು ಇಳಿಯುವ 3-4 ತಿಂಗಳ ತನಕ ಮಲಗುತ್ತಾರೆ. ಅಂತಹವರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಿಕೊಡಬೇಕಲ್ಲವೆ? 'ನಾನು ಡಿ.ಸಿ.ಯಾಗಿದ್ದೇನೆ, ನಾನು ಅಧಿಕಾರಿಯಾಗಿದ್ದೇನೆ, ನಾನು ಮಾಡುತ್ತೇನೆ, ನೀವು ಹೋಗಿ, ನಾನು ರೆಕಮೆಂಡ್ ಮಾಡಿ ಸರ್ಕಾರದಿಂದ ಮಾಡಿಸಿಕೊಡುತ್ತೇನೆ' ಎಂದು ಅಧಿಕಾರಿಗಳು ನಿಂತು ಕೆಲಸ ಮಾಡದಿದ್ದರೆ, ಇನ್ನು ಜನಪ್ರತಿನಿಧಿಗಳಾದವರು ಹೇಳುತ್ತಾರೆಯೇ? ಅವರು ಎಲ್ಲವನ್ನೂ ಹೇಳಲು ಸಾಧ್ಯವೇ? ಈ ರೀತಿ ಕೆಲಸ ಮಾಡದಿದ್ದರೆ ಕಷ್ಟವಾಗುತ್ತದೆ. ಆದುದರಿಂದ, ಈ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಸರ್ಕಾರ ಇವತ್ತು ಸುಮಾರು ಕಟ್ಟಡಗಳನ್ನು ಕಾಲೇಜುಗಳಿಗೆ ಕಟ್ಟುತ್ತೇವೆ ಎಂದು ಅನೇಕ ಸಲ ಹೇಳಿದೆ. ನನ್ನ ಕ್ಷೇತ್ರದಲ್ಲಿ ಆಲೂರು ಪಟ್ಟಣ ಮತ್ತು ಸಕಲೇಶಪುರ ತಾಲ್ಲೂಕಿನ ಹೆತ್ತೂರಿನಲ್ಲಿ ಪ್ರಥಮ ದರ್ಜೆ ಕಾಲೇಜಿನ

ಕಟ್ಟಡ ಇಲ್ಲ. ಅದನ್ನು ತಕ್ಷಣ ಮಂಜೂರು ಮಾಡಬೇಕು. ಇವತ್ತು ಆಲೂರಿನಲ್ಲಿ ನಮಗೆ ಕಟ್ಟಡವನ್ನು ಕೊಟ್ಟಿಲ್ಲವೆಂದು ವಿದ್ಯಾರ್ಥಿಗಳು ಧರಣಿ ಮಾಡುತ್ತಿದ್ದಾರೆ. ಹಿಂದೆ ಒಂದು ಕಟ್ಟಡವಾಗಿದೆ. ಆದರೆ, ಆ ಕಟ್ಟಡಕ್ಕಿಂಥಾ ಅದರ ಕಂಬಗಳೇ ದೊಡ್ಡದಾಗಿದೆ. ಅದು ಯಾವ ಸೀಮೆಯ ಇಂಜಿನಿಯರ್ ಮಾಡಿದ್ದಾರೋ ನಮಗೆ ಗೊತ್ತಿಲ್ಲ. ಆ ರೀತಿಯ ಒಂದು ಪ್ಲಾನ್‌ನ್ನು ಎಸ್ಟಿಮೇಟ್ ಮಾಡಿ ಬರೀ ಕಂಬಗಳಿಗೆ ದುಡ್ಡು ಆಗಿದೆ, ಕಟ್ಟಡಕ್ಕೆ ಏನು ಬಾಕಿ ಉಳಿದಿಲ್ಲ. ಆ ರೀತಿ ಪರಿಸ್ಥಿತಿಯಾಗಿದೆ. ಜನಸ್ಪಂದನ ಸಭೆಗಳು ಇವತ್ತು ಏನು ನಡೆಯುತ್ತಿದೆ, ಬಹುಶಃ ತಿಂಗಳಿಗೆ ಒಂದು ಜನಸ್ಪಂದನ ಸಭೆಯನ್ನು ಪ್ರತಿ ಮೊದಲ ಶನಿವಾರ ಮಾಡಿದೆಯೆಂದು ಬಜೆಟ್‌ನಲ್ಲಿ ಸೂಚನೆಯನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟ ಹಾಗೆ ಕಾಣುತ್ತದೆ. ಅದನ್ನು ಮಾಡಿದರೆ ಒಳ್ಳೆಯದು. ಪ್ರತೀ ವಾರ ಅದು ಆಗುವ ಅವಶ್ಯಕತೆ ಇಲ್ಲ. ಸುಮಾರು 8 ಲಕ್ಷದ 91 ಸಾವಿರ ಅರ್ಜಿಗಳು ಬಂದಿದೆಯೆಂದು ನೀವು ಹೇಳುತ್ತೀರಿ. ಜನರ ಕೆಲಸಗಳನ್ನು ಮಾಡುತ್ತಿರುವುದರಿಂದ ಜನರು ಕಛೇರಿಗೆ ಬರತಕ್ಕದ್ದು ಕಡಿಮೆಯಾಗಿದೆ. ಅರ್ಜಿ ಕೊಡತಕ್ಕದ್ದು ಕಡಿಮೆಯಾಗಿದೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಬಹುಶಃ ಇದು ನಗೆಪಾಟಲಿನ ವಿಷಯವೆಂಬುದನ್ನು ಮರೆಯಬಾರದು. ಜನರು ಅರ್ಜಿಯನ್ನು ಕೊಡುವುದನ್ನೇಕೆ ಕಡಿಮೆ ಮಾಡಿದ್ದಾರೆಂದರೆ, ಪ್ರತಿ ಜನಸಂಪರ್ಕ ಸಭೆಯಲ್ಲಿ ಕೊಟ್ಟಂಥ ಅರ್ಜಿ ಒಂದೂ ಕೂಡ ಕೆಲಸ ಆಗುತ್ತಿಲ್ಲ. ಕೊಟ್ಟ ಅರ್ಜಿಯನ್ನೆ ಕೊಡುತ್ತಿದ್ದಾರೆ. ರಸ್ತೆ ಕೊಡಿ. ಆಗಿಲ್ಲ. ಕುಡಿಯುವ ನೀರಿಗೆ ಕೊಡಿ. ಆಗಿಲ್ಲ. ಕುಡಿಯುವ ವಿದ್ಯುತ್ ಕೊಡಿ. ಆಗಿಲ್ಲ. ಆದ್ದರಿಂದ ಅರ್ಜಿ ಕೊಟ್ಟರೆ ಕೆಲಸ ಆಗುವುದಿಲ್ಲ. ಆದ್ದರಿಂದ ಅರ್ಜಿಗಳ ಸಂಖ್ಯೆ ಕಡಿಮೆಯಾಗಿದೆಯೇ ಹೊರತು ನೀವು ವಿಲೇವಾರಿ ಮಾಡಿದ್ದೇವೆ, ಕೆಲಸ ಮಾಡಿದ್ದೇವೆ ಎಂಬ ಭ್ರಮೆಯನ್ನು ಏನಾದರೂ ಇಟ್ಟುಕೊಂಡಿದ್ದರೆ ಅದು ಶುದ್ಧ ತಪ್ಪು. ಶುದ್ಧ ಸುಳ್ಳು. ಸಾಮಾಜಿಕ ಭದ್ರತೆಯನ್ನು ಕೊಡತಕ್ಕ ಓ.ಎಫ್. ಇರಬಹುದು ಎಸ್.ಎಸ್.ಓ., ಡಬ್ಲ್ಯೂ.ಪಿ., ಅಂಗವಿಕಲ ವೇತನ ಇರಬಹುದು, ಅಧಿಕಾರಿಗಳು ಎಷ್ಟರ ಮಟ್ಟಿಗೆ ಆಗಿದ್ದಾರೆಂದರೆ, ನಾನು ಉನ್ನತ ಮಟ್ಟದ ಅಧಿಕಾರಿಗಳ ಬಗ್ಗೆ ಹೇಳುವುದಿಲ್ಲ, ನಮ್ಮ ವಿ.ಐ. ಇರಬಹುದು ಆರ್.ಐ. ಇರಬಹುದು, ಈ ಮಟ್ಟದ ಅಧಿಕಾರಿಗಳು. ಪೋಲಿಯೋ ಆಗಿ ಅವರಿಗೆ ಎರಡೂ ಕಾಲುಗಳಿಲ್ಲ. ಆದರೆ ಕೊಡುವುದಿಲ್ಲ. 400 ರೂಪಾಯಿ ಬರೆದಿದ್ದೇವೆ, 400 ರೂಪಾಯಿ ಬರುತ್ತಿದೆ ಸಾಕು ಎಂದು ಹೇಳುತ್ತಾರೆ. 1000 ರೂಪಾಯಿ ಬರುವಂತೆ ಮಾಡಿದ್ದಾರಲ್ಲಾ

ಎಂದು ಕೇಳಿದರೆ ಇಲ್ಲಾ ಕೊಡುವುದಿಲ್ಲ. ವೈದ್ಯರು ಅವರನ್ನು ಮೀರಿಸುತ್ತಾರೆ. ವೈದ್ಯರಿಗೇ ಕಾಲು ಹೋದರೆ ಬಹುಶಃ ಅದರ ಕಷ್ಟ ಗೊತ್ತಾಗುತ್ತದೆ. ಪೂರ್ತಿ ಕೈ ಇಲ್ಲದಿರುವ ಬಗ್ಗೆ ಕಣ್ಣಿಗೆ ಕಾಣುತ್ತದೆ. ಆ ರೀತಿ ಇದ್ದಾಗ 75% ಗೆ ಕೊಡಬಾರದೇ? ಕಾಲು ಕೆಲಸ ಮಾಡುವುದಿಲ್ಲವೇ? ನಾವು ಯಾರಿಗೇ ಆಗಲಿ ಅನಧಿಕೃತವಾಗಿ ಇರುವುದಕ್ಕೆ ಸೂಚಿಸುವುದಿಲ್ಲ. ಏಕೆ ಮೋಸ ಮಾಡುತ್ತೀಯ, ನಾಚಿಕೆ ಆಗುವುದಿಲ್ಲವೆ, ನಮ್ಮ ತಲೆಯನ್ನೇಕೆ ತಿನ್ನುತ್ತೀಯಾ, ನೀನು ಚೆನ್ನಾಗಿದ್ದೀಯ, ದೇವರು ಆರೋಗ್ಯ ಕೊಟ್ಟಿದ್ದಾನೆ, ಆರೋಗ್ಯ ಕೊಟ್ಟಿರುವ ದೇಹಕ್ಕೆ ಏಕೆ 75% ಬರೆಸಿಕೊಡಿಯೆಂದು ಬಂದಿದ್ದೀಯಲ್ಲಾ ಎಂದು ನಾವೇ ಉಪಾಯ ಮಾಡಿ ಹೇಳಿಕಳುಹಿಸುತ್ತೇವೆ. ನಮ್ಮ ಹಿರಿಯ ಅಧಿಕಾರಿಗಳಿಗೆ ಒಂದು ಮಾತನ್ನು ಹೇಳುತ್ತೇನೆ. ಕೆಳಮಟ್ಟದ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿದರೆ, ನಿಮಗೆ ಕೆಲಸವೇ ಇಲ್ಲ. ಆದರೆ, ಸರ್ಕಾರ ಏನು ಮಾಡಿದೆಯೆಂದರೆ, ನಾನು ಈ ಸರ್ಕಾರವೊಂದನ್ನೇ ನಿಂದಿಸುತ್ತಿಲ್ಲ. ಎಲ್ಲಾ ಸರ್ಕಾರಗಳ ಹಣೆಯಬರಹವೂ ಅಷ್ಟೇ. ಇವತ್ತು ನಾವು ಬಲಿಯಾಗಿರುವುದು ಕೇವಲ 6 ಲಕ್ಷ ನೌಕರರಿಗೆ ಮಾತ್ರ. 6 ಲಕ್ಷ ನೌಕರರಿಗೆ ನಾವು ಎಷ್ಟು ಸಂಬಳ ಕೊಡುತ್ತಿದ್ದೇವೆ? ಬಜೆಟ್‌ನ 67% ದುಡ್ಡನ್ನು ಕೊಡುತ್ತಿದ್ದೇವೆ. ಉಳಿದಂಥ ಐದೂವರೆ ಕೋಟಿ ಜನರಿಗೆ ಎಷ್ಟು ಕೊಡುತ್ತಿದ್ದೇವೆ? ಕೇವಲ 33% ಕೊಡುತ್ತಿದ್ದೇವೆ. ಅದೂ ಈ 33% ಯಾವಾಗ ಕೊಡುತ್ತಿರುವುದು? ಹಣ ಶೇಖರಣೆಯಾಗಿ, ತೆರಿಗೆ ಸಂಗ್ರಹಣವಾಗಿ ಅದು ಬಂದರೆ ಮಾತ್ರ ರಸ್ತೆ ತೆಗೆದುಕೋ, ನೀರು, ವಿದ್ಯುತ್ ತೆಗೆದುಕೋ, ಆ ಬಿಸ್ಕೆಟ್ ತೆಗೆದುಕೋ, ಈ ಬಿಸ್ಕೆಟ್ ತೆಗೆದುಕೋ, ಮತ್ತೊಂದು ತೆಗೆದುಕೋ, ಇನ್ನೊಂದು ತೆಗೆದುಕೋ ಎಂದು ಕೊಡುತ್ತಿದ್ದೇವೆ. ಆದರೆ, ಕೆಲಸ ಇವತ್ತು ಏನಾಗುತ್ತಿದೆ, ಅವರಿಗೆ Promotion ಕೊಡಬೇಕು, ಸಂಬಳ ಹೆಚ್ಚು ಮಾಡಬೇಕು, ಒಂದೊಂದು ಸಲಕ್ಕೆ ಸಾವಿರ ಸಾವಿರ ಕೋಟಿ ಹಣವನ್ನು ಕೊಡುತ್ತೇವೆ. ಸರ್ಕಾರ ನಮಗೆ ಇವತ್ತು ಕೊಡುತ್ತಿದೆ, ನಾನು ಬಡಬೋರೇಗೌಡನ ಋಣವನ್ನು ತೀರಿಸಬೇಕು, ಕೆಲಸ ಮಾಡಬೇಕು ಎಂಬ ಭಾವನೆ ಬರದಿದ್ದರೆ ಹೇಗೆ? ನಮ್ಮ ಕೆಲಸವೇನು? ನನ್ನ ಕರ್ತವ್ಯವೇನು ಎಂಬುದನ್ನು ಅರ್ಥ ಮಾಡಿಕೊಳ್ಳದಿದ್ದರೆ ಆ ಕೆಲಸ ಆಗುವುದಿಲ್ಲ. ಆರೋಗ್ಯದ ಬಗ್ಗೆ ಹೇಳುವುದಾದರೆ, ಆಸ್ಪತ್ರೆಗಳ ಸ್ಥಿತಿ, ತಾಲ್ಲೂಕು ಆಸ್ಪತ್ರೆಗಳನ್ನು ಘೋಷಿಸಿದ್ದೀರಿ. ಆದರೆ, ಅಲ್ಲಿ ವೈದ್ಯರುಗಳು ಇಲ್ಲ. ನನ್ನ ಕ್ಷೇತ್ರದ ಸಕಲೇಶಪುರ, ಆಲೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ತಾಲ್ಲೂಕು ಕೇಂದ್ರಗಳು. ನೀವು ಅಲ್ಲಿ ಸರ್ಜನ್, ರೇಡಿಯಾಲಜಿಸ್ಟ್, ಇ.ಎನ್.ಟಿ.

ಮತ್ತೊಬ್ಬರನ್ನು ಇಟ್ಟರೆ ಜನರು ಹಾಸನಕ್ಕೂ ಬರುವುದಿಲ್ಲ, ಬೆಂಗಳೂರಿಗೂ ಬರುವುದಿಲ್ಲ. ನಿಮ್ಮ 108 ವಾಹನವೇ ಬೇಕಾಗುವುದಿಲ್ಲ. ಲೋಕಲ್ ಆಗಿ ವೈದ್ಯರುಗಳು ಇಲ್ಲದಿದ್ದಾಗ ಮಾತ್ರ ಆ 108 ಬೇಕು. ಇವರೆಲ್ಲ ಅಲ್ಲಿ ಇಲ್ಲದಿರುವುದರಿಂದ ಎಲ್ಲಾ ಕಡೆ 108 ಇಟ್ಟುಕೊಂಡು ಡಬ್ಬಲ್, ತ್ರಿಬ್ಬಲ್ ಡೀಸೆಲ್ ಬರೆದುಕೊಂಡು, ಬೇರೆ ಬೇರೆ ಲೆಕ್ಕವನ್ನೆಲ್ಲಾ ತೋರಿಸಿಕೊಂಡು ಓಡಾಡುತ್ತಾರೆ. ನೀವು 108 ರವರು ಹೇಗೆ ಸುತ್ತುತ್ತಾರೆ, ಅವರ ಕಾಟವೇನು ಎಂಬುದನ್ನು ನೋಡಬೇಕು. ಆ ನರ್ಸ್‌ಗಳು, ಅವರ ಸಿಬ್ಬಂದಿಯನ್ನು ನೋಡಬೇಕು. ಅವರು ಕಿಲೋಮೀಟರ್‌ಗೆ 40 ರೂಪಾಯಿಯನ್ನೇನೋ ತೆಗೆದುಕೊಳ್ಳುತ್ತಾರೆ. ಮಾಡಲಿ. ಆರೋಗ್ಯಕ್ಕೆ ಸಹಾಯ ಆಗುವುದಾದರೆ ಅದು ತುಂಬಾ ಸಂತೋಷದ ಕೆಲಸ. ಆದರೆ, ಅದರಿಂದ ಸಹಾಯ ಎಷ್ಟಾಗುತ್ತಿದೆ? ಮಾನ್ಯ ಆರೋಗ್ಯ ಸಚಿವರು ಇಲ್ಲೇ ಇದ್ದಾರೆ, ತಾವು ವೈದ್ಯರುಗಳನ್ನು ನೇಮಕಾತಿ ಮಾಡುತ್ತಿದ್ದೀರಿ. ಡಾಕ್ಟರ್‌ಗಳ ಬೇಡಿಕೆಯನ್ನು ಈಡೇರಿಸಿ. ತಾವು ಲೆಕ್ಚರರ್‌ಗೆ 40 ಸಾವಿರ ರೂಪಾಯಿ ಕೊಡುತ್ತೀರಿ. 6 ಗಂಟೆ ಪಾಠ ಮಾಡುವ ಅವರಿಗೆ 40 ಸಾವಿರ ಕೊಡುತ್ತೀರಿ. ಆದರೆ, 24 ಗಂಟೆ ಕೆಲಸ ಮಾಡುವ ವೈದ್ಯರಿಗೆ 18 ಸಾವಿರ ಕೊಡುತ್ತೀರಿ. ಇದು ಎಷ್ಟು ಸರಿ? ಆದ್ದರಿಂದ ಲೆಕ್ಚರರ್‌ಗೆ ನೀಡುತ್ತಿರುವ ಸಂಬಳವನ್ನು ಕಡಿಮೆ ಮಾಡಿ. ಏನೂ ಆಗುವುದಿಲ್ಲ. ಬರೀ ಪಾಠ ಮಾಡಿ ಮನೆಗೆ ಹೋಗುವಂಥವರು ಅವರು. ಆದರೆ, ವೈದ್ಯ ಪಾಪ, 24 ಗಂಟೆ risk ತೆಗೆದುಕೊಂಡು ಕೆಲಸ ಮಾಡುತ್ತಿರುತ್ತಾರೆ. ಅವರ ಬೇಡಿಕೆಗಳೇನಿದೆ ಈಡೇರಿಸಿ. ನನಗೆ ಅನ್ನಿಸಿರುವಂತೆ ವೈದ್ಯರ ಬೇಡಿಕೆಗಳೆಲ್ಲ ಮೇಲುನೋಟಕ್ಕೆ ಸರಿಯಾಗಿದೆ. ದಯಮಾಡಿ ಈಡೇರಿಸಿ. ಸರ್ಕಾರಕ್ಕೆ ನಾನು ಹೇಳತಕ್ಕದ್ದು, ಆ ಜಿ.ಡಿ.ಪಿ, ಈ ಜಿ.ಡಿ.ಪಿ. ಗ್ರೋಥ್ ಇಲ್ಲ. ಎಲ್ಲಾ ಬರಿ ಪೇಪರ್‌ನಲ್ಲಿ ನಮ್ಮ ಖುಷಿಗೆ ಬರೆಯತಕ್ಕದ್ದು. ಈ ಎಕನಾಮಿಸ್ಟ್ ಇದ್ದಾರಲ್ಲಾ, ಅವರಿಂದ ಏನೂ ಆಗುವುದಿಲ್ಲ. ಯಾವ 7.2% ಗ್ರೋಥ್ ಕೂಡ ಇಲ್ಲ. ಹಳ್ಳಿಯಲ್ಲಿ ಏನು ಗೊತ್ತಾಗುತ್ತದೆ? ಅಕ್ಕಿ 20 ರೂಪಾಯಿ ಇದ್ದದ್ದು 56 ರೂಪಾಯಿ, 40 ರೂಪಾಯಿ ಆಗಿದೆ, ಯಾವ ಗ್ರೋಥ್ ಇದೆ ನಿಮ್ಮದು? ಹಳ್ಳಿಯವರಿಗೆ ಆ ಗ್ರೋಥ್ ಏನು ಗೊತ್ತಾಗುತ್ತದೆ? ನೆಂಟರು ಬಂದರು ಎಂದು ತೊಗರಿ ಕಾಳು ತೆಗೆದುಕೊಳ್ಳಲು ಅಂಗಡಿಗೆ ಹೋದಾಗ ಆಗ ಅವನಿಗೆ ಅದರ rate ಗೊತ್ತಾಗುತ್ತದೆ. ಯಾರಿಗೆ ಯಾವುದನ್ನು ಹೇಳುತ್ತಿದ್ದೀರಿ? ಇದೆಲ್ಲಾ ಜನರಿಗೆ ಮಂಕುಬೂದಿ ಎರಚತಕ್ಕ ಕೆಲಸ

ಮಾಡುತ್ತಿರತಕ್ಕದ್ದು. ಇದಲ್ಲಾ ನಮಗೆ ಬೇಕಾಗಿರುವುದು. ಜನರಿಗೆ ಇವತ್ತು ಸೇವೆ ಮಾಡುವುದಕ್ಕೆ ಏನೇನು ಬೇಕು ಅದನ್ನು ನಮ್ಮ ಸರ್ಕಾರ ಮಾಡಬೇಕಾಗಿದೆ. ಆರೋಗ್ಯ ಸಚಿವರೇ, ಇವತ್ತು ಮೆಡಿಕಲ್ ಆಫೀಸರ್ಸ್ ಗಳನ್ನೇನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುತ್ತೀರಲ್ಲಾ, ಅವರನ್ನು ಕೂಡ ಕಡ್ಡಾಯವಾಗಿ ನೇಮಿಸಿಕೊಳ್ಳುವ ಕೆಲಸ ಮಾಡಬೇಕು. ಎಲ್ಲಿ ಖಾಲಿ ಆಗುತ್ತದೆ, ತಕ್ಷಣ call ಮಾಡಿ ಸಾಧ್ಯವಾಗದಿದ್ದರೆ ಲೋಕಲ್ ವೈದ್ಯರು ಯಾರು ಇರುತ್ತಾರೆ, ಅವರಿಗೇ ಕೊಡತಕ್ಕ ಕೆಲಸ ಮಾಡಿ. ವೈದ್ಯರು ಇಲ್ಲದಿರುವವರೆಗೆ ಹೊಸ ಆಸ್ಪತ್ರೆಯನ್ನು ತೆರೆಯಬೇಡಿ. ಮಾನ್ಯ ಮುಖ್ಯಮಂತ್ರಿಯವರು ಮಠಮಾನ್ಯಗಳಿಗೆ ದುಡ್ಡನ್ನು ಕೊಡುವ ಕೆಲಸವನ್ನು ಮುಂದುವರೆಸಿದ್ದಾರೆ. ಆದರೆ, ಆ ದುಡ್ಡು ಅನುತ್ಪಾದಕ ವೆಚ್ಚವಾಗುತ್ತದೆ. ಇವತ್ತು ಕಟ್ಟಡ ಕಟ್ಟುವುದೂ ಅಷ್ಟೇ, ವಿಧಾನ ಸೌಧವನ್ನು 600 ಕೋಟಿ ಖರ್ಚು ಮಾಡಿ ಬೆಳಗಾಂನಲ್ಲಿ ಕಟ್ಟತಕ್ಕದ್ದು, ಬೆಂಗಳೂರಿನಲ್ಲಿ ಕಟ್ಟತಕ್ಕದ್ದರಿಂದ ಯಾವುದೇ ಉತ್ಪತ್ತಿಯಾಗುವುದಿಲ್ಲ. ವಿಧಾನಸೌಧ ಕಟ್ಟಿದ ಮೇಲೆ ಒಂದು ರೂಪಾಯಿ ಲಂಚ ಇಲ್ಲದೆಯೇ ಬಡ ಬೋರೇಗೌಡ ಆಫೀಸ್‌ನ ಒಳಗೆ ಬಂದಾಗ ಅವನನ್ನು ಕೂರಿಸಿ ಚೆನ್ನಾಗಿ ಮಾತನಾಡಿಸಿ ಅವರ ಕೆಲಸವನ್ನು ತಕ್ಷಣ ಮಾಡಿಸಿ ಕಳಿಸುವುದು ಇದೆಯಲ್ಲಾ, ಅದು ನಿಜವಾದ ಸೇವೆ. ಅದಕ್ಕೆ ಭವ್ಯ ಕಟ್ಟಡ ಬೇಕಾಗಿಲ್ಲ. ಇವತ್ತು ಯಾವುದೇ ಸರ್ಕಾರ ಇರಲಿ, ಅನಗತ್ಯವಾಗಿ ಕಟ್ಟಡ ಕಟ್ಟುವ ಕೆಲಸವನ್ನು ಮಾಡುತ್ತಿರುವುದಿದೆಯೆಲ್ಲಾ, ಇದು ಶುದ್ಧ ತಪ್ಪು. ಈ ಕೆಲಸಕ್ಕೆ ಸರ್ಕಾರ ಕೈ ಹಾಕಬಾರದು.

ಛೇರ್ಮನ್ : ಬಡಬೋರೇಗೌಡನಿಗೆ ಸಹಾಯವಾಗಬೇಕಾದರೆ ನಾವು ಇಲ್ಲಿಂದ ಕೆಲಸ ಶುರುಮಾಡೋಣ. ನಮ್ಮ ಕರ್ತವ್ಯವೇನಿದೆ?

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಅದು ಬಡಬೋರೇಗೌಡನ ದುಡ್ಡೇ, ಅವನನ್ನೇ ನಾವು ಒಳಕ್ಕೆ ಬಿಡುತ್ತಿಲ್ಲವಲ್ಲಾ? ಶಾಸಕರ ಭವನ, ಇಲ್ಲಿ ಎಲ್ಲಾ ಬಾಗಿಲನ್ನು . ನಾವು ಹಾಕಿಬಿಟ್ಟಿದ್ದೇವಲ್ಲಾ? ಅವನನ್ನು ನಾವು ಎಲ್ಲಿ ಬಿಡುತ್ತಿದ್ದೇವೆ? ದುಡ್ಡು ಅವನದ್ದೇ, ಘೋಷಣೆ ಅವರ ಪರವಾಗಿ, ಮಾತು ಅವನ ಪರವಾಗಿ, ಆದರೆ ಅವನನ್ನು ನಾವು ಎಲ್ಲಿ ಒಳಗಡೆ ಬಿಡುತ್ತಿದ್ದೇವೆ? ಅವರೆಲ್ಲಾ ನಮ್ಮನ್ನು ಹೊರಗಡೆ ಕಾಯಬೇಕು. ಅವನ ಎಂ.ಎಲ್.ಎ. ಸಿಕ್ಕಿ ಚೀಟಿ ಕೊಟ್ಟರೆ ಮಾತ್ರ ಒಳಗಡೆ ಬಿಡುವುದು. ಇಲ್ಲದಿದ್ದರೆ ಇಲ್ಲ ಈ ರೀತಿಯ ಪರಿಸ್ಥಿತಿಯಾಗಿದೆ.

ಸಾರಿಗೆ ಇಲಾಖೆಯ ಬಗ್ಗೆ ಹೇಳುವುದಾದರೆ, ಕಳೆದ ಸಾರಿ ಸಾರಿಗೆ ಸಚಿವರು 4 ಸಾವಿರ ಬಸ್ಸುಗಳನ್ನು ಕೊಡುವುದಾಗಿ ಹೇಳಿದ್ದರು. ಆದರೆ, ಹಳ್ಳಿಗಳಿಗೆ ಎಲ್ಲೂ ಕೂಡ ಬಸ್ಸುಗಳು ಬಂದಂತೆ ಕಾಣುತ್ತಿಲ್ಲ. ಅವರು ಏನು ತಿಳಿದುಕೊಂಡಿದ್ದಾರೆಂದರೆ, ಸಿಟಿಯ ಜನರು ಮಾತ್ರ ಚೆನ್ನಾಗಿ ಇರಬೇಕು, ಓಲ್ವೋ ಬಸ್ಸು, ಒಳ್ಳೆಯ ಮೆತ್ತನೆ ಸೀಟು ಇರುವ ಬಸ್ಸು ಸಿಟಿಯಲ್ಲಿ ಮಾತ್ರ ಓಡಾಡಲಿ. ನಮ್ಮ ಸಕಲೇಶಪುರ ಡಿಪೋದ 113 ರೂಟ್‌ನಲ್ಲಿ ಇರುವ ಬಸ್ಸುಗಳಲ್ಲಿ 60 ಪರ್ಸೆಂಟ್ ಬಸ್ಸುಗಳು ಡಕೋಟ ಬಸ್ಸುಗಳು. ಎಲ್ಲಿ ಸ್ಟಾರ್ಟ್ ಆಗುತ್ತದೋ ಅಲ್ಲೇ ನಿಂತುಕೊಳ್ಳುತ್ತದೆ. ಹಳ್ಳಿಗಳಲ್ಲಿ ಬರುವ ಬಸ್ಸಿನ ಟೈಮಿಂಗ್ಸ್‌ನ್ನು ತಾವು ನೋಡಬೇಕು. ಬೆಳಿಗ್ಗೆ 7.30 ಗಂಟೆಗೆ ಹೋಗುವುದು ಸಂಜೆ 7.30 ಗಂಟೆಗೆ ಹೋಗುತ್ತದೆ. ನಮ್ಮ ಹಳ್ಳಿಗಳ ಕಡೆ ಒಂದು ಮಾತನ್ನು ಹೇಳುತ್ತಾರೆ. 10.30 ಗಂಟೆಗೆ ಬರುವ ಬಸ್ಸು ಎಷ್ಟೊತ್ತಿಗೆ ಬರುತ್ತದೆ ಎಂದು ಕೇಳುತ್ತಾರೆ. ಏಕೆಂದರೆ ಅವರಿಗೆ ಗೊತ್ತಿಲ್ಲ. 10.30 ಕ್ಕೆ ಬಸ್ಸು ಬರುವುದು ಅವರಿಗೆ ಅನುಮಾನ. ಆದ್ದರಿಂದ ಅವರು 10.30 ಕ್ಕೆ ಬರುವ ಬಸ್ಸು ಎಷ್ಟೊತ್ತಿಗೆ ಬರುತ್ತದೆ ಎಂದು ಕೇಳುತ್ತಾರೆ. ಹಾಗಾಗಿದೆ ನಮ್ಮ ಸ್ಥಿತಿ. ಆದರೆ, ಟೌನ್‌ನಲ್ಲಿ ನೋಡಿ. ದಯಮಾಡಿ ಹೊಸ ಬಸ್ಸುಗಳನ್ನು ಹಳ್ಳಿಗಳಿಗೆ ಕೊಡಿ. ನೀವು ಕೊಟ್ಟರೆ ಅವರೂ ಒಂದು ಎರಡು ರೂಪಾಯಿ ಹೆಚ್ಚಾಗಿ ಕೊಡುತ್ತಾರೆ. ಅವರೂ ಸಹ ಹೊಸ ಬಸ್ಸುಗಳಲ್ಲಿ ಓಡಾಡಲಿ. ಸಕಲೇಶಪುರ ಡಿಪೋ ಕಾರ್ಯನಿರ್ವಹಣೆಯಲ್ಲಿ ಕೆಟ್ಟಿದೆ. ಚೆನ್ನಾಗಿಲ್ಲ. ನನ್ನ ಹಿಂದೆ ಇದ್ದ ಮಾನ್ಯ ರುದ್ರೇಶಗೌಡರು, ನಾವು ಈಗಲೂ ಒತ್ತಾಯ ಮಾಡುತ್ತಿದ್ದೇವೆ. ನಮ್ಮ ಡಿಪೋವನ್ನು ಚಿಕ್ಕಮಗಳೂರಿಗೆ ತೆಗೆದುಕೊಂಡು ಹೋಗಿ ಹಾಕಿದ್ದಾರೆ.

(5-40 P.M)

ಅದು ಸ್ವಾರ್ಥ. ನನ್ನ ಸ್ವಾರ್ಥಕ್ಕೆ ನಾನು ಮಂತ್ರಿ ಆದರೆ ಅಲ್ಲಿ ಏನೋ ನಮ್ಮದು ಮಾಡಿಕೊಳ್ಳುವುದು, ಅದು ಜನರಿಗಾಗಿ ಅಲ್ಲ. ಸಕಲೇಶಪುರ ಡಿಪೊ, ಬೇಲೂರು ಡಿಪೊ, ಅರಸೀಕೆರೆ ಡಿಪೊ, ಚಿಕ್ಕಮಗಳೂರಿನಲ್ಲೆ ಒಂದು ಡಿಪೊ ಕ್ರಿಯೇಟ್ ಮಾಡಿದರು. ಜನರು ದೂರು ಕೊಡಲು 180 ಕಿ.ಮೀ ದೂರದಲ್ಲಿರುವ ಚಿಕ್ಕಮಗಳೂರಿಗೆ ಹೋಗಬೇಕು. ಜನರ ತೊಂದರೆಯನ್ನು ಕೇಳುವವರಿಲ್ಲ, ಜನರು ಇವತ್ತು ಸಾರಿಗೆ ಬಸ್‌ಗಳ ಮೇಲೆ ಡಿಪೆಂಡ್ ಆಗಿದ್ದಾರೆ, ಏನು ಮಾಡುವುದಕ್ಕಾಗದ ಸ್ಥಿತಿಯಲ್ಲಿ ಜನರಿದ್ದಾರೆ, ಅದಕ್ಕಾಗಿ ಮಲೆನಾಡು ಪ್ರದೇಶಕ್ಕೆ ಹೆಚ್ಚು ಬಸ್‌ಗಳನ್ನು ಸರ್ಕಾರ ಕೊಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ವಿದ್ಯುತ್ ಸಚಿವರಾದ ಮಾನ್ಯ ರೇವಣ್ಣನವರು

ಉಸ್ತುವಾರಿ ಸಚಿವರಾಗಿದ್ದಾಗ, ಯತ್ತೂರಿಗೆ ಒಂದು MUSS ವಿದ್ಯುತ್ ವಿತರಕ ಕೇಂದ್ರ ಮಂಜೂರಾಗಿತ್ತು. 2007-08ಕ್ಕೆ ನಮ್ಮ ಸರ್ಕಾರ ಹೋಯಿತು, ಅದೂ ಕೂಡ ಹೋಯಿತು. ಟೆಂಡರ್ ಆಗಿ ಟೆಕ್ನಿಕಲ್ ಕಮಿಟಿಯಲ್ಲಿ ಅಪ್ರೂವ್ ಆಗಿದೆ, 4 ಎಕರೆ ಜಾಗವನ್ನು ಕೊಟ್ಟಿದ್ದೇವೆ, MUSS ಇನ್ನು ಹಾಗೆ ಪೆಂಡಿಂಗ್ ಇದೆ. ಬಹುಶಃ ಅದನ್ನು ಕೂಡ ಒಬ್ಬ ಜನತಾದಳದವರ ಕ್ಷೇತ್ರವೆನ್ನುವ ಕಾರಣಕ್ಕಾಗಿ ನಿಂತಿದೆಯೊ ಏನೋ ಗೊತ್ತಿಲ್ಲ. ಅದೇ ರೀತಿಯಾಗಿ ಬೇರೆ ಬೇರೆ ರೀತಿಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ, ನಿನ್ನೆಯೂ ಕೂಡ ಮರಳು ನೀತಿಯ ಬಗ್ಗೆ ಹೇಳಿದ್ದಾರೆ. ಮರಳದು ಒಂದು ಅತ್ಯಂತ ದೊಡ್ಡ ದಂಧೆ. ಇದ್ದಕ್ಕಿದ್ದಂತೆ ಶ್ರೀಮಂತನಾಗಬೇಕೆಂದರೆ ಮರಳಿಗೆ ಟೆಂಡರ್ ಹಾಕಿ ಬಿಡ್ ಮಾಡಬೇಕು. ಆದರೆ ಅದನ್ನು ಅನುಭವಿಸುವಂಥವರು ನಾವು, ರಸ್ತೆಗಳು ಹಾಳಾಗುತ್ತಿದ್ದಾವೆ, ಚೆನ್ನಾಗಿ ಮಾಡಿದಂಥ ರಸ್ತೆಗಳು ಒಂದು ತಿಂಗಳಿನಲ್ಲಿ ಹೋಗುತ್ತವೆ, ವೇಟ್ ಜಾಸ್ತಿ ಮಾಡುತ್ತಾರೆ, 3-4 ಇಲಾಖೆಗಳ ಅಧಿಕಾರಿಗಳಿದ್ದಾರೆ, ನೋಡುವುದಿಲ್ಲ. ಒಂದು ದಿವಸಕ್ಕೆ 200-300 ಲೋಡ್ ಲಾರಿಗಳು ಹೋದರೆ ಅಧಿಕಾರಿಗಳು ಕೂಡ ಎಷ್ಟೆಂದು ಹಿಡಿಯುತ್ತಾರೆ? ಅದಕ್ಕಾಗಿ ತಮಿಳುನಾಡು ಮಾದರಿಯಲ್ಲಿ ಏನು ಇವತ್ತು ಮರಳು ನೀತಿಯಿದೆ, ಆ ನೀತಿಯನ್ನು ಕರ್ನಾಟಕದಲ್ಲೂ ಕೂಡ ಜಾರಿಗೆ ತರಬೇಕು, ಅದರ ಮೂಲಕ ಸರ್ಕಾರದ ಬೊಕ್ಕಸಕ್ಕೂ ಹೊರೆಯಾಗಬಾರದು, ಸರ್ಕಾರಕ್ಕೂ ಕೂಡ ಆದಾಯ ಬರಬೇಕು, ಜನಕ್ಕೂ ಕೂಡ ಆ ರೀತಿಯ ಆದಾಯ ಬರಬೇಕು, ಆ ರೀತಿಯ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳುತ್ತೇನೆ. ಇನ್ನು ಈ ರಸ್ತೆಗಳ ಬಗ್ಗೆ ಹೇಳುವುದಾದರೆ, ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ರಸ್ತೆಗಳು ತುಂಬಾ ಹಾಳಾಗಿದ್ದಾವೆ, ನನಗೆ ಮಾಡಬೇಡಿ. ಜೆಡಿಎಸ್ ಶಾಸಕ ಎನ್ನುವ ಮಾತು ಬೇಡ, ಜನರಿಗಾಗಿ ಮಾಡಿ ಅಲ್ಲಿ ಬಾಳುಪೇಟೆ, ಹರಿಹಳ್ಳಿ, ಮಾಗಲಿ ಎನ್ನುವ 20 ಕಿ.ಮೀ. ಒಂದು ರಸ್ತೆ ಇದೆ. 20 ಕಿ.ಮೀ. ಹೋಗುವುದಕ್ಕೆ ಎಷ್ಟು ನಿಮಿಷ ಬೇಕು ಸರ್? ತಮ್ಮ ಕಡೆ ಎಷ್ಟು ನಿಮಿಷದಲ್ಲಿ ಹೋಗುತ್ತೀರಿ? ಒಂದು 15, 20 30 ನಿಮಿಷದಲ್ಲಿ ಹೋಗುತ್ತೀರಾ? 20 ಕಿ.ಮೀ. ಹೋಗುವುದಕ್ಕೆ ಒಂದುವರೆ ಗಂಟೆ ಬೇಕು, 90 ನಿಮಿಷ ಬೇಕು. ನರಕವೆಂದು ಹೇಳುತ್ತೇವಲ್ಲಾ, ಅಲ್ಲಿಗೆ ಹೋಗುವುದೇ ಬೇಕಾಗಿಲ್ಲ, ಆ ರಸ್ತೆಗಳಲ್ಲಿ ಹೋಗಿ ಬಂದರೆ, ಅದೇ ನರಕ. ಅವನ್ನು ಕೂಡ ಮಾನ್ಯ ರೇವಣ್ಣನವರು 2007-08 ರಲ್ಲಿ ಸಚಿವರಾಗಿದ್ದರು, ನಮ್ಮ ಹಿಂದಿನ

ಶಾಸಕರಾದ ವಿಶ್ವನಾಥ್ ಇದ್ದರು, ಆಗಲೇ ಮಂಜೂರಾಗಿ EMD ಕಟ್ಟಿದಂಥವು ರದ್ದಾಗಿ ದುಡ್ಡನ್ನು ವಾಪಸ್ಸು ತೆಗೆದುಕೊಳ್ಳಲಾಯಿತು. ಈ ರೀತಿಯ ಕೆಲಸಗಳು ಕ್ಷೇತ್ರದಲ್ಲಾಗುತ್ತಿದ್ದಾವೆ, ಇದಾಗಬಾರದು, ತಾರತಮ್ಯ ಮಾಡುವ ಕೆಲಸವನ್ನು ಸರ್ಕಾರ ಮಾಡಬಾರದೆನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಆ ಆರ್ಥಿಕ ಗುರಿಯನ್ನು ತಲುಪುವಲ್ಲಿ ಸರ್ಕಾರ ಎಡವಿದೆ. ಇವತ್ತು 40–50% ಕ್ಕಿಂತ ಹೆಚ್ಚು ಯಾವುದೇ ತರಹದ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿಲ್ಲವೆಂದು ಹೇಳುತ್ತೇನೆ. ಇವತ್ತು ಬರೀ ಭೌತಿಕ ಗುರಿ ಇಷ್ಟು ಕೊಟ್ಟಿದ್ದೇವೆ, ಆರ್ಥಿಕ ಗುರಿ ಇಷ್ಟು ಕೊಟ್ಟಿದ್ದೇವೆಂದು ಹೇಳುವುದು ಮುಖ್ಯವಲ್ಲ, ಅದು ಫಲಾನುಭವಿಗೆ ತಲುಪಿ, ಅವನು ಸಾಮಾಜಿಕವಾಗಿ ಆರ್ಥಿಕವಾಗಿ ಎಷ್ಟು ಮೇಲೆ ಬಂದಿದ್ದಾನೆ, ಅವನಿಂದ ಎಷ್ಟು ಅನುಕೂಲವಾಗಿದೆ ಎಂಬುದು ಬಹಳ ಮುಖ್ಯವೆಂದು ಇಷ್ಟು ಹೇಳಿ, ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ಈ ಒಂದು ಆಯವ್ಯಯ ಪ್ರಸ್ತಾವಗಳನ್ನು ವಿರೋಧ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ನೆಹರೂ ಓಲೇಕಾರ್ (ಹಾವೇರಿ) : ಮಾನ್ಯ ಅಧ್ಯಕ್ಷರೆ, ಆಯವ್ಯಯದ ಮೇಲೆ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕೆ ವಂದನೆಗಳನ್ನು ಸಲ್ಲಿಸಿ, 2010–11ನೇ ಸಾಲಿನ ಆಯವ್ಯಯವನ್ನು ನಮ್ಮ ಮುಖ್ಯಮಂತ್ರಿಗಳು ಮಂಡನೆ ಮಾಡಿದ್ದಾರೆ. ಮಂಡನೆ ಮಾಡಿರುವ ಸಂದರ್ಭದಲ್ಲಿ ಇವತ್ತು ರಾಜ್ಯದ ವಿವಿಧ ಎಲ್ಲಾ ವರ್ಗಗಳಿಗೆ, ಇಲಖೆಗಳಿಗೆ ಸಂಬಂಧಿಸಿದಂತೆ 2010–11ನೇ ಸಾಲಿನ ಆಯವ್ಯಯದಲ್ಲಿ ಹಣಕಾಸಿನ ನೆರವನ್ನು ನೀಡುವ ಕೆಲಸವನ್ನು ಬಹಳ ಉತ್ತಮವಾಗಿ ಮಾಡಿದ್ದಾರೆ. ಈಗಾಗಲೇ ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ, ವಿರೋಧಪಕ್ಷದ ನಾಯಕರು ಹಾಗೂ ಜೆಡಿಎಸ್‌ನ ನಾಯಕರು ಇರಬೇಕಾಗಿತ್ತು. ಮಾತನಾಡುವ ಸಂದರ್ಭದಲ್ಲಿ ಇವತ್ತು ಬಜೆಟ್ ಅದರ sanctity ಅನ್ನು ಕಳೆದುಕೊಂಡುಬಿಟ್ಟಿದೆ ಎಂದು ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದರು. ಯಾವ ರೀತಿ ಯಾವ ಕಾರಣಕ್ಕಾಗಿ sanctity ಅನ್ನು ಕಳೆದುಕೊಂಡಿದೆ ಎನ್ನುವುದನ್ನು ಅವರು ಪ್ರಸ್ತಾಪ ಮಾಡಲಿಲ್ಲ. ಬರೀ sanctity ಕಳೆದುಕೊಂಡಿದೆ, sanctity ಕಳೆದುಕೊಂಡಿದೆ ಎಂದು ಹೇಳುವುದನ್ನು ನೋಡಿದರೆ, ಅವರು ಯಾವರೀತಿಯಾಗಿ ಲೆಕ್ಕಾಚಾರವನ್ನು ಮಾಡಿದ್ದಾರೆನ್ನುವುದನ್ನು ನಾವು ಪ್ರಶ್ನೆ ಮೂಲಕ ಕೇಳಬೇಕಾಗುತ್ತದೆ. ಹಿಂದಿನ

ವರ್ಷದ ಬಜೆಟ್ ಅನ್ನು ಘೋಷಣೆ ಮಾಡುವ ಸಂದರ್ಭದಲ್ಲಿ ಇಡೀ ರಾಜ್ಯದ ರೈತ ಸಮುದಾಯಕ್ಕೆ ಅನುಕೂಲವಾಗುವಂಥ, 18 ಲಕ್ಷ ರೈತರ ಪಂಪುಸೆಟ್‌ಗಳಿಗೆ ಪುಕ್ಕಟೆಯಾಗಿ ವಿದ್ಯುತ್ ಪೂರೈಕೆ ಮಾಡುವಂಥ ಕೆಲಸವನ್ನು ಮಾಡುವುದರ ಜೊತೆಗೆ 3% ಬಡ್ಡಿದರದಲ್ಲಿ ಸಾಲವನ್ನು ಈ ರಾಜ್ಯದ ರೈತರಿಗೆ ಕೊಡುವಂಥ ಕೆಲಸವನ್ನು ನಮ್ಮ ಮುಖ್ಯಮಂತ್ರಿಗಳು, ಸರ್ಕಾರ ಮಾಡಿದೆ ಎಂದು ಹೇಳುವುದಕ್ಕೆ ನಮಗೆ ಬಹಳ ಸಂತೋಷ ವೆನಿಸುತ್ತದೆ. ಅದರ ಜೊತೆಗೆ ವಿವಿಧ ಸಮುದಾಯಗಳಿಗೆ, ನೇಕಾರರಿಗೆ ಹಾಗೂ ಮೀನುಗಾರರಿಗೆ 3% ಬಡ್ಡಿ ದರದಲ್ಲಿ ಸಾಲವನ್ನು ವಿತರಣೆ ಮಾಡುವ ಕೆಲಸವನ್ನು ಕೂಡ ಮಾಡುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ, ಚಾಲ್ತಿಯಿರುವುದನ್ನು ಕೂಡ ನೋಡಿದ್ದೇವೆ. ರೈತರ ಪರವಾಗಿ ಬಹಳವಾಗಿ ವಿರೋಧಪಕ್ಷದವರು ಮಾತನಾಡುತ್ತಿರುತ್ತಾರೆ. ಅವರ ಆಡಳಿತವಿರುವಂಥ ಸಂದರ್ಭದಲ್ಲಿ ಏನು ಸಾಧನೆಗಳನ್ನು ಮಾಡಿದರೆನ್ನುವುದನ್ನು ಈ ಸದನಕ್ಕೆ ಅವರು ತಿಳಿಸಬೇಕಾಗುತ್ತದೆ. ನಮ್ಮ ಸರ್ಕಾರವಿದ್ದಂಥ ಸಂದರ್ಭದಲ್ಲಿ ನಮ್ಮ ಸಾಧನೆಗಳು ಇಂಥ ಸಾಧನೆಗಳನ್ನು ಮಾಡಿದ್ದೇವೆ ಎನ್ನುವುದನ್ನು ಪ್ರಸ್ತಾಪ ಮಾಡಿದರೆ, ಈಗ ಮಾಡಿರುವ ಸಾಧನೆಗಳು ಸರಿಯಿಲ್ಲವೆಂದು ಹೇಳುವು ದಕ್ಕಿಂತ ಅವರು ಮಾಡಿದ ಸಾಧನೆಗಳು ಏನು ಎನ್ನುವುದನ್ನು ಈ ಸದನಕ್ಕೆ ಪ್ರಸ್ತಾಪ ಮಾಡಬೇಕಾಗಿರುವುದು ಬಹಳ ಮುಖ್ಯವಾಗಿರುವುದು. ರೈತರಿಗೆ ಅನೇಕ ಯೋಜನೆಗಳನ್ನು ಕೃಷಿಗೆ ತರುವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿರುವಂಥ ಸಂದರ್ಭದಲ್ಲಿ ಇವತ್ತು ಕೃಷಿಕರ ಮಕ್ಕಳಿಗೆ ವಿದ್ಯೆ ಕಲಿಯುವುದಕ್ಕೋಸ್ಕರವಾಗಿ ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲ ಯವನ್ನು ಮತ್ತು ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಲಾಗಿದೆ ಹಾಗೂ ಈ ವರ್ಷವೂ ಕೂಡ 4–5 ಕಡೆಗಳಲ್ಲಿ ಕೃಷಿ ಕಾಲೇಜುಗಳಿಗೆ ಒತ್ತುಕೊಟ್ಟಿರುವುದನ್ನು ನೋಡಿದರೆ, ಕೃಷಿ ವಿಚಾರಗಳಲ್ಲಿ ಹೆಚ್ಚಿನ ಒಂದು ಕಾಳಜಿಯನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ ಎನ್ನುವ ಮಾತನ್ನು ನಿರ್ಭಿಡೆಯಿಂದ ಹೇಳಬೇಕಾಗುತ್ತದೆ. ಇವತ್ತು ರೈತರು ಬೆಳೆದಂಥ ಬೆಳೆಗೆ ಮಾರುಕಟ್ಟೆಗಳಲ್ಲಿ ಸರಿಯಾದ ಬೆಲೆ ಸಿಗಲಿಲ್ಲವೆನ್ನುವ ಸಂದರ್ಭದಲ್ಲಿ APMC ಗಳಿಂದ ಖರೀದಿ ಮಾಡುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಸುಮಾರು 1000 ಕೋಟಿ ಹಣವನ್ನು ಅದಕ್ಕಾಗಿ ಮೀಸಲಿಟ್ಟಿರು ವುದನ್ನು ನಾವು ಇವತ್ತು ನೋಡಿದರೆ, ರೈತರಿಗೆ ಅನುಕೂಲವಾಗುವ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಇಲ್ಲಿ ನಿಚ್ಚಳವಾಗಿ ಈ

ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರ ಜೊತೆಯಲ್ಲಿ ಈ ವರ್ಷದ ಬಜೆಟ್‌ನಲ್ಲಿ ರೈತರ ಬಣವೆಗಳಿಗೆ ಅಥವಾ ರೈತರು ಮರದಿಂದ ಬಿದ್ದು ಸಾವನ್ನಪ್ಪಿದ ಸಂದರ್ಭದಲ್ಲಿ ಆ ರೈತರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರ ಇವತ್ತು ಘೋಷಣೆ ಮಾಡಿರುವುದನ್ನು ಬಹಳ ಸಂತೋಷದಿಂದ ಸ್ವಾಗತ ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ : ಬಣವೆ ಸುಟ್ಟಾಗ ಒಂದು ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತದೆಯೇ?

ಶ್ರೀ ನೆಹರು ಓಲೇಕಾರ್ : ಬಣವೆ ಸುಟ್ಟಾಗ 10,000 ರೂಪಾಯಿ, ಮರದಿಂದ ಬಿದ್ದು ಜೀವಹಾನಿಯಾದಾಗ ಒಂದು ಲಕ್ಷ ರೂಪಾಯಿಗಳನ್ನು ಕೊಡಲಾಗುವುದು. ರೈತರ ಬಣವೆಗಳು ಬೆಂಕಿಗೆ ಆಹುತಿಯಾಗಿರುವ ಸಂದರ್ಭದಲ್ಲಿ ಯಾವುದೇ ರೀತಿಯಲ್ಲಿ ರೈತರಿಗೆ ಹಣವನ್ನು ಕೊಡಲು ಸಾಧ್ಯವಿರಲಿಲ್ಲ. ಆ ನಿಟ್ಟಿನಲ್ಲಿ ಇವತ್ತು ಬಣವೆಗಳನ್ನು ಕಳೆದುಕೊಂಡಂಥ ರೈತರು ಬಹಳ ಬವಣೆಯನ್ನು ಅನುಭವಿಸುವಂಥ ಪರಿಸ್ಥಿತಿ ಈ ರಾಜ್ಯದಲ್ಲಿ ನಿರ್ಮಾಣವಾಗಿತ್ತು.

ನಮ್ಮ ಸರ್ಕಾರ ಅದಕ್ಕೆ ಹೆಚ್ಚು ಒತ್ತನ್ನು ಕೊಟ್ಟು ಬಣವೆಗಳು ಸುಟ್ಟಂತಹ ಸಂದರ್ಭದಲ್ಲಿ ರೈತರಿಗೆ ತಕ್ಷಣ 10,000 ರೂ. ಕೊಟ್ಟಿರುವುದು ಬಹಳ ಉತ್ತಮವಾದ ಕರ್ತವ್ಯವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕೃಷಿ ಕೆಲಸಕ್ಕೆ ಹೋದಂತಹ ಸಂದರ್ಭದಲ್ಲಿ ತೆಂಗಿನ ಮರ ಹಾಗೂ ಅಡಿಕೆ ಮರಗಳಿಂದ ಬಿದ್ದಂತಹ ರೈತರಿಗೆ ಹೆಚ್ಚಿನ ಅನಾಹುತ ಹಾಗೂ ಹಾನಿ ಆದಂತಹ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ಮಾಡಿರುವುದು ಬಹಳ ಉತ್ತಮವಾದ ಕಾರ್ಯ. ಇದರ ಜೊತೆಯಲ್ಲಿ ರೈತರಿಗೆ ಏನು ಹೇಳಿದ್ದಾರೆ, ನಾವು ಇವತ್ತು ಸಹಕಾರ ಸಂಘಗಳಿಗೆ ಕೊಡುವ ಕೆಲಸವನ್ನು ಮಾಡುತ್ತಿದ್ದೇವೆ. ಪ್ರತಿ ಲೀಟರ್‌ಗೆ ಎರಡು ರೂಪಾಯಿ ಕೊಡುವುದರ ಮೂಲಕ ಸುಮಾರು 187 ಕೋಟಿ ರೂ.ಗಳನ್ನು ಇವತ್ತು ಈ ರಾಜ್ಯದಲ್ಲಿ ರೈತ ಸಮುದಾಯಕ್ಕೆ ಕೊಟ್ಟಿರುವುದು ಶ್ಲಾಘನೀಯ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಪಂಚಾಯಿತಿ ಮಟ್ಟದಲ್ಲಿ ಮಳೆ ಮಾಪಕ ಇಡುತ್ತೇವೆ ಎನ್ನುವ ಮಾತನ್ನು ನಮ್ಮ ಆಯವ್ಯಯದಲ್ಲಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಅದರ ಜೊತೆಗೆ ಬೆಳೆ ವಿಮೆ ಸಹಿತ ಪಂಚಾಯಿತಿ ಮಟ್ಟಕ್ಕೆ ತರುವಂಥದ್ದು ಬಹಳ ಉತ್ತಮವಾದ ಕೆಲಸ. ರೈತರ ಪರವಾಗಿ ಆಗಬೇಕೆಂದು ಹೇಳಿ ಹೋಬಳಿ

ಮಟ್ಟದಲ್ಲಿ ಏನು ಬೆಳೆ ವಿಮೆ ನಾವು ಮಾಡುತ್ತಿದ್ದೇವೆ, ಬೆಳೆ ವಿಮೆ ಮಾಡುವುದು ಹೋಬಳಿ ಮಟ್ಟದಿಂದ ಪಂಚಾಯಿತಿ ಮಟ್ಟಕ್ಕೆ ತರುವುದು ಬಹಳ ಉತ್ತಮವಾದ ಕಾರ್ಯ ಅದನ್ನು ಮುಖ್ಯಮಂತ್ರಿಗಳು ಮಾಡುತ್ತೇವೆಂದು ಹೇಳಿರುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರ ಜೊತೆಯಲ್ಲಿ ಇವತ್ತು ಅನೇಕ ಸಂದರ್ಭಗಳಲ್ಲಿ ಕೃಷಿಕರು ಅವರ ನೋವನ್ನು ಹಾಗೂ ದಣಿವನ್ನು ಆರಿಸಿಕೊಳ್ಳುವುದಕ್ಕೆ ಮನೆಗಳು ಬೇಕಾಗುತ್ತವೆ. ಬಜೆಟ್‌ನಲ್ಲಿ ಇನ್ನೊಂದು ಮಹತ್ತರವಾದ ಕಾರ್ಯವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಮನೆ ಕಟ್ಟಿಕೊಡುವುದಕ್ಕೆ ಮೊದಲು ಇದ್ದಂತಹ 40,000 ರೂ. ಬದಲಿಗೆ 60,000 ರೂ.ಗಳಿಗೆ ಏರಿಸಿ ಬಡ ಜನತೆಗೆ ಭಾಗ್ಯದ ಕುಟೀರ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಟ್ಟಿರುವುದು ಅತ್ಯಂತ ಸ್ವಾಗತಾರ್ಹ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅದರ ಜೊತೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ಬೋರ್‌ವೆಲ್ ಕೊರೆಸುವುದಕ್ಕಾಗಿ ಮೊದಲು ಇದ್ದ 30,000 ರೂ.ಗಳನ್ನು 60,000 ರೂ.ಗೆ ಏರಿಸಿ, 60,000 ರೂ.ಗಳಿಂದ ಒಂದು ಲಕ್ಷಕ್ಕೆ ಏರಿಸುವಂತಹ ಕೆಲಸವನ್ನು ಮಾಡಿದ್ದಾರೆ. ರಾಜ್ಯದ ಅನೇಕ ಕಡೆಗಳಲ್ಲಿ ಬಡ ರೈತರಿಗೆ ಬೋರ್‌ವೆಲ್‌ಗಳನ್ನು ಕೊರೆಸುವುದು ಪಂಪ್‌ಸೆಟ್‌ಗಳನ್ನು ಅಳವಡಿಸುವ ಕೆಲಸವನ್ನು ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ಮೋಟಾರು ಗಳನ್ನು ಇಳಿಸಿಲ್ಲ, ಕರೆಂಟ್ ವಿದ್ಯುತ್ ಸರಬರಾಜು ಮಾಡಿಲ್ಲ ಎನ್ನುವ ಕೊರಗು ಇದೆ. ಅದಕ್ಕೆ ಸರ್ಕಾರ ಹೆಚ್ಚಿನ ಒತ್ತನ್ನು ಕೊಡಬೇಕೆಂದು ನಾನು ಈ ರಾಜ್ಯದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರ ಪರವಾಗಿ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಜಮೀನು ಖರೀದಿ ಮಾಡುವ ಸಂದರ್ಭದಲ್ಲಿ ಮೊದಲ ರೈತರಿಗೆ 30,000 ಸಾವಿರ ರೂ. ಕೊಡುತ್ತಿದ್ದುದನ್ನು ನಮ್ಮ ಸರ್ಕಾರ ಬಂದ ನಂತರ 60,000 ಸಾವಿರ ರೂ. ಮಾಡಿದೆ. ಈ ವರ್ಷ 60,000 ಸಾವಿರ ರೂ. ಇದ್ದುದನ್ನು ಜಮೀನುಗಳು ಸಮೀಪದಲ್ಲಿ ಸಿಗುವುದಿಲ್ಲ ಎನ್ನುವ ಕಾರಣಕ್ಕಾಗಿ, ಊರಿನ ಸಮೀಪ ಹೆಚ್ಚು ಎಲೆ ಆಗುತ್ತದೆ ಎನ್ನುವ ಕಾರಣಕ್ಕಾಗಿ ಈ ವಿಷಯ ಸರ್ಕಾರದ ಗಮನಕ್ಕೆ ಬಂದಾಗ ರೈತರಿಗೆ ಕೊಡಿಸುವ ಜಮೀನಿನ ಬೆಲೆ ಎರಡು ಲಕ್ಷ ರೂಪಾಯಿಗಳವರೆಗೆ ಮಾರುಕಟ್ಟೆ ಬೆಲೆಯಲ್ಲಿ ಅದನ್ನು ಖರೀದಿ ಮಾಡುವುದಕ್ಕೆ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಇವತ್ತು ಅವಕಾಶವನ್ನು ಕಲ್ಪಿಸಿಕೊಟ್ಟಿರುವಂತದ್ದು ಸಹಿತ ಬಹಳ ಹೆಮ್ಮೆಯ ವಿಚಾರ ಎಂಬ ಮಾತನ್ನು ಈ ಸಂದರ್ಭದಲ್ಲಿ

ಹೇಳಬಯಸುತ್ತೇನೆ. ವಿಶೇಷ ಘಟಕ ಯೋಜನೆಯಲ್ಲಿ ಈ ವರ್ಷದ ಅನುದಾನದಲ್ಲಿ ಹೆಚ್ಚಿನ ಹಣದಲ್ಲಿ ನಿಗದಿಪಡಿಸಿರುವುದು ಬಹಳ ಸಂತೋಷದ ವಿಚಾರ. ಆ ವಿಚಾರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಕ್ಕಳಿಗೆ ಅನುಕೂಲ ಆಗಲಿ ಎನ್ನುವಂತಹ ನಿಟ್ಟಿನಲ್ಲಿ ಈ ಹಿಂದೆ ಇದ್ದಂತಹ 400 ರೂ.ಗಳಿಂದ 450–600 ರೂ.ಗಳಿಗೆ ಏರಿಸುವಂತಹದ್ದು, ಹಾಗೂ 450 ರೂ. ಇದ್ದುದು 650 ರೂ. ಗಳಿಗೆ ಹೋದ ಬಜೆಟ್‌ನಲ್ಲಿ ಏರಿಸಲಾಗಿತ್ತು. ಈ ವರ್ಷದ ಬಜೆಟ್‌ನಲ್ಲಿ 400 ರೂ. ಇದ್ದುದು 650, 650 ರೂ. ಇದ್ದುದನ್ನು 750 ರೂ.ಗಳಿಗೆ ಏರಿಸಿರುವುದರಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಕ್ಕಳಿಗೆ ಬಹಳ ಸಂತೋಷವಾಗಿದೆ ಎನ್ನುವಂತಹ ಮಾತನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಆ ವಿದ್ಯಾರ್ಥಿಗಳ ಪರವಾಗಿ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಅದರ ಜೊತೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಕೇರಳ ಹಾಗೂ ತಮಿಳುನಾಡುಗಳಲ್ಲಿ ಇವತ್ತು ನಾವು ಪ್ರವಾಸ ಹೋದಂಥ ಸಂದರ್ಭದಲ್ಲಿ ಕೇರಳದಲ್ಲಿ ಪ್ರಾಥಮಿಕ ಶಾಲೆಯ ಪ್ರೀ ಮೆಟ್ರಿಕ್ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುವಂಥದ್ದು 1200 ರೂ.ಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ಕೊಡುವಂತದ್ದನ್ನು ನಾವು ಕೇಳಿದ್ದೇವೆ. ತಮಿಳುನಾಡಿನಲ್ಲಿ ಸಹಿತ ಹೆಚ್ಚಿನ ಹಣವನ್ನು ಕೊಡುವಂತದ್ದನ್ನು ನಾವು ಕೇಳಿದ್ದೇವೆ. ಈಗ ಏನು ಸುಮಾರು ಒಂದು ನೂರು ರೂಪಾಯಿಗಳಷ್ಟು ಹೆಚ್ಚಿಗೆ ಮಾಡಿದ್ದಾರೆ, ಅದನ್ನು ಇನ್ನು ಹೆಚ್ಚು ಮಾಡಿ ಪ್ರೀಮೆಟ್ರಿಕ್ ವಸತಿ ನಿಲಯಕ್ಕೆ ವೆಚ್ಚವನ್ನು ಭರಿಸಲಿಕ್ಕೆ 800 ರೂ.ಗಳನ್ನು ಮಾಡಬೇಕು, ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಮಾಡಬೇಕು ಎಂದು ಹೇಳುವಂಥದ್ದನ್ನು ಸಹಿತ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ. ವಿಶೇಷ ಘಟಕ ಯೋಜನೆಯಲ್ಲಿ ಸಾಕಷ್ಟು ಹಣ ಖರ್ಚಾಗುತ್ತದೆ. ಆ ವಿಶೇಷ ಘಟಕ ಯೋಜನೆಗೆ ಹೆಚು ಹಣವನ್ನು ಕೊಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಆ ಹಣ ಬೇರೆ ಬೇರೆ ಇಲಾಖೆಗಳಲ್ಲಿ ಸ್ವಲ್ಪ ಸ್ವಲ್ಪ ಹಣ ವ್ಯಯವಾಗುವುದರಿಂದ ಅದನ್ನು ಸರಿಯಾದ ರೀತಿಯಲ್ಲಿ ವ್ಯಯ ಮಾಡುವುದಕ್ಕೆ ಅನುಕೂಲವಾಗುವುದಿಲ್ಲ. ಅದು ಸರಿಯಾಗಿ ಖರ್ಚಾಗಿ ರುವುದು ಸಹ ಯಾರಿಗೂ ಗೊತ್ತಾಗುವುದಿಲ್ಲ. ಆ ಕಾರಣದಿಂದ ಇವತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ single window system ನಲ್ಲಿ ಸಂಪೂರ್ಣ ಹಣವನ್ನು ಖರ್ಚು ಮಾಡುವಂತಹ ಕೆಲಸವನ್ನು ಮಾನ್ಯ

O.17 F – 24

ಮುಖ್ಯಮಂತ್ರಿಗಳು ಮಾಡಿದರು ಎಂದು ಹೇಳಿದರೆ, ಈ ರಾಜ್ಯದ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನರಿಗೆ ಹೆಚ್ಚಿನ ಹಣವನ್ನು ಕಲ್ಪಿಸಿದ ಹಾಗಾಗುತ್ತದೆ. ಹೆಚ್ಚು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಅಲ್ಪ ಸಂಖ್ಯಾತ ಸಮುದಾಯಕ್ಕೆ ಸಹಿತ ಸರ್ಕಾರ ಇವತ್ತಿನದಿವಸ ಹೆಚ್ಚಿನ ಹಣವನ್ನು ಕೊಟ್ಟಿದೆ. ಹೋದ ಬಜೆಟ್‌ನಲ್ಲಿ 167 ಕೋಟಿ ರೂ.ಗಳನ್ನು ನಿಗಧಿ ಮಾಡಿದ್ದರೆ, ಈ ವರ್ಷದ ಬಜೆಟ್‌ನಲ್ಲಿ 302 ಕೋಟಿ ರೂ.ಗಳನ್ನು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಕೊಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ಅಲ್ಪಸಂಖ್ಯಾತರ ಹಿತರಕ್ಷಣೆ ಮಾಡುವುದು ಎಂದರೆ ಭಾರತೀಯ ಜನತಾಪಕ್ಷದ ಸರ್ಕಾರ ಮಾನ್ಯ ಯಡಿಯೂರಪ್ಪನವರ ಮುಂದಾಳತ್ವದ ಸರ್ಕಾರ ಎಂದು ನಿರ್ಭಿಡೆಯಿಂದ ನಾವು ಹೇಳಬೇಕಾಗುತ್ತದೆ. ಇವತ್ತು ಆ ಜನರಿಗೆ ಗೊತ್ತಾಗುತ್ತದೆ, ಮಾನ್ಯ ಯಡಿಯೂರಪ್ಪನವರು ಬಂದ ನಂತರ ನಮ್ಮ ಅಭಿವೃದ್ಧಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂದು ಹೇಳುವುದನ್ನು ಇವತ್ತಿನ ದಿವಸ ಎಲ್ಲರೂ ಯೋಚನೆ ಮಾಡುತ್ತಿದ್ದಾರೆ. ಇದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಅಲ್ಪಸಂಖ್ಯಾತ ಬಂಧುಗಳ ಪರವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಮೊನ್ನೆ ದಿವಸ ಕೇಂದ್ರದಲ್ಲಿ ಬಜೆಟ್ ಅನ್ನು ಮಂಡನೆ ಮಾಡಲಾಯಿತು. ಕೇಂದ್ರ ಬಜೆಟ್‌ನ್ನು ಮಂಡನೆ ಮಾಡಿರುವಂತಹ ಸಂದರ್ಭದಲ್ಲಿ ಇವತ್ತು ಬೆಲೆಗಳು ಗಗನಕ್ಕೇರಿವೆ. ಬೆಲೆಗಳು ಗಗನಕ್ಕೇರಿರುವ ಸಂದರ್ಭದಲ್ಲಿ ಆ ಬೆಲೆಗಳನ್ನು ಹತೋಟಿಗೆ ತರುವಂತಹ ಯಾವುದೇ ಕ್ರಮಗಳನ್ನು ಪ್ರಕಟಣೆ ಮಾಡಿಲ್ಲ. ಯಾವುದೇ ಯೋಜನೆಗಳನ್ನು ಪ್ರಕಟಣೆ ಮಾಡದೆ ಇದ್ದಂತಹ ಸಂದರ್ಭದಲ್ಲಿ ಇವತ್ತಿನ ದಿವಸ ಸಾಮಾನ್ಯ ಜನರ ಗೋಳು ಹೇಳತೀರದು. ಸಾಮಾನ್ಯ ಜನರು ಬದುಕಲಿಕ್ಕೆ ಅಸಾಧ್ಯವಾಗಿರುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಈಗಲಾದರೂ ಕಣ್ಣು ತೆರೆಯುವಂತಹ ಕೆಲಸ ಮಾಡಬೇಕಾಗಿದೆ. ವಿಶೇಷವಾಗಿ ಇವತ್ತಿನ ದಿವಸ ರೈತರು ಏನು ಪೆಟ್ರೋಲ್ ಹಾಗೂ ಡೀಸೆಲ್‌ಗಳನ್ನು ಉಪಯೋಗ ಮಾಡುತ್ತಿದ್ದಾರೆ, ಅದರ ಬೆಲೆಯನ್ನು ಹೆಚ್ಚಿಸಿ ಇವತ್ತು ರೈತರ ತಲೆಯ ಮೇಲೆ ಭಾರವನ್ನು ಹೇರುವಂತಹ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ. ಕೇಂದ್ರ ಸರ್ಕಾರ ಹೆಚ್ಚು ಮಾಡಿರುವಂತಹ ಪೆಟ್ರೋಲ್ ಡೀಸೆಲ್‌ಗಳ ಬೆಲೆಗಳನ್ನು ತಕ್ಷಣದಿಂದಲೇ ಕಡಿಮೆ ಮಾಡುವಂತಹ ಕೆಲಸವನ್ನು ಮಾಡಬೇಕಾಗಿದೆ. ಬೆಲೆ ಕಡಿಮೆ ಮಾಡಿದರೆ ಇವತ್ತು ರೈತರ ಪರವಾಗಿ ಕೆಲಸ ಮಾಡಿದ್ದಾರೆಂದು

ಹೇಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಅದರ ಜೊತೆಯಲ್ಲಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರು. ರಾಜ್ಯದಲ್ಲಿ ವಿದ್ಯುತ್ತಿನ ಕ್ಷಾಮ ಭುಗಿಲೆದ್ದಿದೆ ಎಂಬ ಮಾತನ್ನು ಹೇಳುತ್ತಿದ್ದರು. ವಿದ್ಯುತ್ತಿನ ಕ್ಷಾಮ ಈ ವರ್ಷದಲ್ಲಿ ಮಾತ್ರ ಅದು ಭುಗಿಲೆದ್ದಿಲ್ಲ. ಹಿಂದಿನ ಅನೇಕ ವರ್ಷಗಳಿಂದ ಸಹಿತ ಅದು ಭುಗಿಲೆದ್ದಿರುವ ಸಮಸ್ಯೆಯಾಗಿ ಇವತ್ತಿನ ದಿವಸ ಎಲ್ಲರ ಎದುರಿಗೆ ಕಾಣುತ್ತಿದೆ. ಬೇಸಿಗೆ ಬಂತು ಎಂದರೆ ವಿದ್ಯುತ್ತಿನ ಕೊರತೆ ಎಲ್ಲಾ ಕಡೆಗಳಲ್ಲಿ ಉಂಟಾಗುವುದು ಸಹಜವಾಗಿದೆ. ಈ ಸಂದರ್ಭದಲ್ಲಿ ಇವತ್ತು ನಮ್ಮ ಸರ್ಕಾರ ಬಂದ ನಂತರ ಹಲವಾರು ಯೋಜನೆಗಳಿಗೆ ಚಾಲನೆ ಕೊಡುವುದರ ಮೂಲಕ ವಿದ್ಯುತ್ತಿನ ಕ್ಷಾಮವನ್ನು ಬಗೆಹರಿಸಬೇಕೆಂಬ ನಿಟ್ಟಿನಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಸಾಕಷ್ಟು ಕೆಲಸವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ನಾವು ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ವಿದ್ಯುತ್ ಸಮಸ್ಯೆ ಈಗ ಕಡಿಮೆ ಆಗಿದೆ. ಓಲೈಸುವಂತಹ ಪ್ರಶ್ನೆ ಇಲ್ಲ, ವಿದ್ಯುತ್ ಸಮಸ್ಯೆ ಅನೇಕ ವರ್ಷಗಳಿಂದ ಇದೆ. ಇಲ್ಲವೆಂದು ನಾವು ಹೇಳುವುದಿಲ್ಲ. ನಮ್ಮ ಸರ್ಕಾರ ಬಂದು ಕೇವಲ ಎರಡು ವರ್ಷ ಆಗಲಿಕ್ಕೆ ಬಂದಿದೆ. ಎರಡು ವರ್ಷಗಳ ಒಳಗೆ ಹೆಚ್ಚಿನ ಯೋಜನೆಗಳಿಗೆ ಚಾಲನೆ ಕೊಡುತ್ತಿರುವುದನ್ನು ನೋಡಿದರೆ ಹಿಂದಿನ ಸರ್ಕಾರಗಳೂ ಇದೇ ರೀತಿಯಲ್ಲಿ ಅವರ ಅವಧಿಯಲ್ಲಿ ಒಂದನೇ ಯೋಜನೆಗೆ ಅಥವಾ ಎರಡನೇ ಯೋಜನೆಗೆ ಚಾಲನೆ ಕೊಡುತ್ತಾ ಬಂದಿದ್ದರು ಎಂದು ಹೇಳಿದರೆ, ಏನಾದರೂ ವಿದ್ಯುತ್ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯತೆ ಇತ್ತು.

ಆದರೆ ಹಿಂದಿನ ಸರ್ಕಾರಗಳು ಯಾವುದೇ ರೀತಿಯಲ್ಲಿ ವಿದ್ಯುತ್ನ್ನು ಹೆಚ್ಚಿಗೆ ಉತ್ಪಾದನೆ ಮಾಡಬೇಕೆನ್ನುವ ಗುರಿಯನ್ನು ಹಾಕಿಕೊಂಡಿರಲಿಲ್ಲ. ಆ ನಿಟ್ಟಿನಲ್ಲಿ ಹಿಂದಿನ ಸರ್ಕಾರ ಕ್ರಮ ಕೈಗೊಳ್ಳದೇ ಹಾಗೆ ಮುಂದುವರಿದಿದ್ದರಿಂದ ಇವತ್ತಿನ ದಿವಸ ಆ ಸಮಸ್ಯೆ ಸಮಸ್ಯೆಯಾಗಿಯೇ ಮುಂದುವರಿದಿದ್ದಂಥ ಸಂದರ್ಭದಲ್ಲಿ ನಮ್ಮ ಸರ್ಕಾರ ಬಂದನಂತರ ಹೆಚ್ಚಿನ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಉತ್ತೇಜನವನ್ನು ಕೊಡುವಂಥ ಕೆಲಸವನ್ನು ಇವತ್ತು ಮಾಡುತ್ತಿರುವಂಥದ್ದನ್ನು ನಾವೆಲ್ಲರೂ ಕೇಳಿದ್ದೇವೆ. ಆ ನಿಟ್ಟಿನಲ್ಲಿ ಆ ಕಾರ್ಯವೂ ಸಹಿತ ಪ್ರಗತಿಯಲ್ಲಿದೆ ಎಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವೆನಿಸುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಜೊತೆಯಲ್ಲಿ ಜೆ.ಡಿ.(ಎಸ್) ಪಕ್ಷದ ನಾಯಕರಾದಂಥ

ಮಾನ್ಯ ರೇವಣ್ಣನವರು ಹೇಳುತ್ತಿದ್ದರು, ಮಠಗಳ ಮಠಾಧೀಶರು ಇವತ್ತಿನ ದಿವಸ-ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆಂದರು. ಆ ಮಠಾಧೀಶರಿಗೆ ಏಕೋ ಏನೋ ಅವರ ಕೆಂಗಣ್ಣು ಬಿದ್ದಿದೆ. ರಾಮಚಂದ್ರಾಪುರ ಮಠದ ಸ್ವಾಮೀಜಿಯವರು ಏನೋ ಜನಹಿತ ಕಾರ್ಯಕ್ಕಾಗಿ ಅವತ್ತಿನ ದಿವಸ ಗೋವುಗಳನ್ನು ಅಲ್ಲಿ ಸಾಕಣೆ ಮಾಡುವುದಕ್ಕೋಸ್ಕರ, ಆ ಗೋವುಗಳನ್ನು ಕಟ್ಟುವುದಕ್ಕೆ ಜಾಗವಿಲ್ಲವೆಂದು ಆ ಜಾಗವನ್ನು ಉಪಯೋಗ ಮಾಡಿಕೊಂಡರು ಎಂದ ಕೂಡಲೇ ಆ ಜಾಗವನ್ನೇ ಒತ್ತುವರಿ ಮಾಡಿಕೊಂಡರು, ಭೂಮಿಯನ್ನು ಅತಿಕ್ರಮಣ ಮಾಡಿಕೊಂಡರು ಎಂದು ಹೇಳಿರುವಂಥದ್ದನ್ನು ನೋಡಿದರೆ ನಮಗೆ ನಿಜಕ್ಕೂ ಖೇದವೆನಿಸುತ್ತದೆ. ಇವತ್ತು ಮಠಮಾನ್ಯರುಗಳು ಹೆಚ್ಚಿನ ಸಹಾಯವನ್ನು ಈ ಸಮಾಜದ ಒಳಿತಿಗಾಗಿ ಮಾಡುತ್ತಿದ್ದಾರೆಯೇ ಹೊರತು ಸಮಾಜ ಕೆಟ್ಟು ಹೋಗಲಿ ಎನ್ನುವಂಥ ಉದ್ದೇಶದಿಂದ ಅವರುಗಳು ಕೆಲಸಗಳನ್ನು ಮಾಡುತ್ತಿಲ್ಲ. ಆ ಸ್ವಾಮೀಜಿಯವರು ಆ ಮಠವನ್ನು ಬೆಳೆಸಿದರು ಎಂದು ಹೇಳಿದರೆ ಸಮಾಜದಲ್ಲಿಯೂ ಕೂಡ ಒಳ್ಳೆಯ ವಾತಾವರಣವಿರುತ್ತದೆ. ಮಠಾಧೀಶರು ಉತ್ತಮವಾದ ಕಾರ್ಯವನ್ನು ಅವತ್ತಿನ ದಿವಸ ಮಾಡಿದ್ದಾರೆ. ಒಳ್ಳೆಯ ಕಾರ್ಯವನ್ನು ಮಾಡುತ್ತಿರುವಂಥ ಸಂದರ್ಭದಲ್ಲಿ ಆ ಕಾರ್ಯಕ್ಕೆ ಅಡ್ಡಿಯನ್ನುಂಟು ಮಾಡುವುದು ಸರಿಯಾ ದಂಥದ್ದಲ್ಲ ಎನ್ನುವುದನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಈ ಸಂದರ್ಭದಲ್ಲಿ ಮಠಗಳು ಕೂಡ ಸಾರ್ವಜನಿಕರ ಅಭಿವೃದ್ಧಿಗಾಗಿ ಇತ್ತೀಚೆಗೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಅನೇಕ ಮಠಾಧೀಶರುಗಳು ಇವತ್ತು ಸಾರ್ವಜನಿಕರು ಆ ಭಾಗದಲ್ಲಿ ಏನು ಮನೆಗಳನ್ನು ಕಳೆದುಕೊಂಡಿದ್ದಾರೋ ಅಂಥವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಮುಂದೆ ಬಂದಿರುವುದನ್ನು ನಾವು ನೋಡಿದರೆ, ಆ ಮಠಗಳಿಗೆ ಸರ್ಕಾರ ಎರಡು ಕೋಟಿ, 5 ಕೋಟಿ, 10 ಕೋಟಿ ರೂ.ಗಳ ಸಹಾಯಧನವನ್ನು ಕೊಡುತ್ತದೆ ಎಂದರೆ, ಸುಮಾರು ನೂರಾರು ಕೋಟಿ ಹಣವನ್ನು ನಮ್ಮ ಸಾರ್ವಜನಿಕರ ಸಲುವಾಗಿ ಇವತ್ತು ಅವರು ಖರ್ಚು ಮಾಡುತ್ತಿರುವುದನ್ನು ನೋಡಿದರೆ ನಮಗೆ ಅವರ ಬಗ್ಗೆ ಹೆಮ್ಮೆ ಎನಿಸುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಯಲ್ಲಿ ಪ್ರವಾಹ ಪೀಡಿತ ಸಂದರ್ಭದಲ್ಲಿ ಇವತ್ತು ನಮ್ಮ ಮುಖ್ಯಮಂತ್ರಿಗಳು ಎಷ್ಟು ಸಮರೋಪಾದಿಯಲ್ಲಿ ಅದನ್ನು ತಡೆಯಬೇಕೆಂದು ಹೇಳಿ ಅವರಿಗೆ ಸಹಾಯವನ್ನು ಮಾಡಬೇಕು ಎನ್ನುವಂಥ ನಿಟ್ಟಿನಲ್ಲಿ ಇವತ್ತು ಹಗಲು ರಾತ್ರಿ ಕೆಲಸವನ್ನು ಮಾಡಿರುವಂತದ್ದನ್ನು

ನಾವೆಲ್ಲರೂ ಕಂಡಿದ್ದೇವೆ. ಪತ್ರಿಕೆಗಳು ಸಹಿತ ಸಾಕಷ್ಟು ಆ ವಿಚಾರದಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಮುಖ್ಯಮಂತ್ರಿಗಳು ಬಹಳ ಉತ್ತಮವಾಗಿ ರತಕ್ಕಂಥ ಕಾರ್ಯಗಳನ್ನು ನಿಭಾಯಿಸಿದ್ದಾರೆ ಎಂದು ಹೇಳಿ ಶಹಭಾಷ್ ಗಿರಿಯನ್ನು ಕೊಟ್ಟಿರುವಂಥ ಸಂದರ್ಭದಲ್ಲಿ ನಾವು ಸಹಿತ ಈ ರಾಜ್ಯದ ಪ್ರಜೆಗಳಾಗಿ ಕಂಡಿದ್ದೇವೆ, ಈ ಹಿಂದೆ ಇದ್ದಂಥ ಸರ್ಕಾರಗಳಾಗಲಿ, ಹಿಂದೆ ಇದ್ದಂಥ ಮುಖ್ಯಮಂತ್ರಿಗಳಾಗಲಿ, ಈ ರೀತಿಯಲ್ಲಿ ಸಮರೋಪಾದಿಯಲ್ಲಿ ಕೆಲಸವನ್ನು ಮಾಡಿರುವಂಥದ್ದನ್ನು ನಾವು ಕಂಡಿಲ್ಲ. ಆದರೆ ಮುಖ್ಯಮಂತ್ರಿಗಳು ಇವತ್ತು ಸರ್ಕಾರದಲ್ಲಿ ಹಣವಿಲ್ಲ ಎಂದು ಹೇಳುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರ ನಮಗೆ ಸಹಾಯವನ್ನು ಮಾಡಲಿಲ್ಲ ಎನ್ನುವಂಥ ಕಾರಣವನ್ನು ನೆಪವೊಡ್ಡಿ ಕೂಡಲಿಲ್ಲ. ಅವರು ಸಾರ್ವಜನಿಕರ ಬಳಿಗೆ ಸಹಾಯ ಹಸ್ತವನ್ನು ಚಾಚಿ ಹೋಗಿರುವಂಥ ಸಂದರ್ಭದಲ್ಲಿ ಸಾರ್ವಜನಿಕರು ಕೂಡ ಸಾಕಷ್ಟು ರೀತಿಯಲ್ಲಿ ಅವರಿಗೆ ಈ ವಿಚಾರದಲ್ಲಿ ಸ್ಪಂದಿಸಿ ಹಣವನ್ನು ದೇಣಿಗೆಯಾಗಿ ಕೊಟ್ಟಿದ್ದಾರೆ. ಈ ರೀತಿಯಾಗಿ ಸಾರ್ವಜನಿಕರು ದೇಣಿಗೆಯಾಗಿ ಕೊಟ್ಟಂಥ ಹಣವನ್ನು ತೆಗೆದುಕೊಂಡು ಆಸ್ತಿಪಾಸ್ತಿ ಕಳೆದುಕೊಂಡ ಸಾರ್ವಜನಿಕರಿಗೆ, ಮನೆಗಳನ್ನು ಕಳೆದುಕೊಂಡಂಥವರಿಗೆ ಆ ಹಣವನ್ನು ಕೊಟ್ಟಿರುವುದನ್ನು ನಾವು ನೋಡಿದರೆ ಮುಖ್ಯಮಂತ್ರಿಗಳಿಗೆ ರಾಜ್ಯದ ಬಡ ರೈತರ ಬಗ್ಗೆ, ಬಡ ಜನರ ಮೇಲೆ ಎಷ್ಟೊಂದು ಕಾಳಜಿ, ಕನಿಕರ ಇದೆ ಎನ್ನುವಂಥದ್ದನ್ನು ನಾವು ಇಲ್ಲಿ ಸೂಚ್ಯವಾಗಿ ಹೇಳಬಹುದು. ಆ ಕಾರಣದಿಂದ ಇವತ್ತು ಕರ್ನಾಟಕದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ರಾಜ್ಯದ ಜನತೆಗೆ ಅನುಕೂಲವಾಗುವಂಥ ಬಜೆಟ್‌ನ್ನು ಇವತ್ತಿನ ದಿವಸ ಮಂಡಿಸಿ ರುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು. ನಮ್ಮ ಮಾಧ್ಯಮದ ಸ್ನೇಹಿತರೆಲ್ಲರೂ, ಎಲ್ಲಾ ಪತ್ರಿಕೆಗಳಲ್ಲಿಯೂ ಕೂಡ ಆಯವ್ಯಯವನ್ನು ಮುಖ್ಯಮಂತ್ರಿಗಳು ಮಂಡನೆ ಮಾಡಿದ ಮರುದಿನ ಮುಖಪುಟದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಭಾವಚಿತ್ರವನ್ನು ಹಾಕಿ ಬಜೆಟ್‌ನ ವಿವರಗಳನ್ನು ಪ್ರಕಟಿಸಿ ಅದನ್ನು ಹೊಗಳಿ ಬರೆದಿದ್ದನ್ನು ನೋಡಿ ನಮಗೆಲ್ಲರಿಗೂ ಬಹಳ ಖುಷಿಯಾಯಿತು. ಮುಖ್ಯಮಂತ್ರಿಗಳು ಜನಪರವಾಗಿರತಕ್ಕಂಥ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ ಎನ್ನುವಂಥ ವಿಚಾರ ಇವತ್ತು ಪತ್ರಿಕೆಗಳ ಮೂಲಕ, ಟಿ.ವಿ. ಮಾಧ್ಯಮದ ಮೂಲಕ ಎಲ್ಲರಿಗೂ ತೋರಿಸಿದ್ದು ಬಹಳ ಉತ್ತಮವಾಗಿ ರತಕ್ಕಂಥ ಕಾರ್ಯ. ಈ ಆಯವ್ಯಯದಲ್ಲಿ ಎಲ್ಲ ವರ್ಗದ ಜನರಿಗೂ ಬಹುತೇಕ ಲಾಭವನ್ನು ತರುವಂಥ, ಅನುಕೂಲವಾಗುಂಥ ಯೋಜನೆಗಳನ್ನು

ಮಾಡಿ ಬಜೆಟ್‌ನ್ನು ಮಂಡನೆ ಮಾಡಿರುವಂಥದ್ದು ಬಹಳ ಸ್ವಾಗತಾರ್ಹ ವಾಗಿದೆ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಯಲ್ಲಿ ಗೋಹತ್ಯೆ ನಿಷೇಧ ಕಾಯಿದೆಯನ್ನು ಇವತ್ತು ಜಾರಿಗೆ ತರಬೇಕೆಂದು ಹೇಳಿ ಈಗಾಗಲೇ ವಿಧೇಯಕವನ್ನು ಮಂಡನೆ ಮಾಡಲಾಗಿದೆ. ಗೋ ಹತ್ಯೆ ನಿಷೇಧ ಕಾಯಿದೆಯನ್ನು ಖಂಡಿತವಾಗಿ ಜಾರಿಗೆ ತರಲೇಬೇಕು. ಇವತ್ತು ನಾವೆಲ್ಲರೂ ಹಿಂದೂ ರಾಷ್ಟ್ರದಲ್ಲಿ ಇರುವಂಥ ಸಂದರ್ಭದಲ್ಲಿ ಗೋವುಗಳನ್ನು ರಕ್ಷಣೆ ಮಾಡಬೇಕು. ಏಕೆಂದರೆ ಗೋವುಗಳಿಂದ ಸಾಕಷ್ಟು ರೀತಿಯಲ್ಲಿ ನಮಗೆ ಉಪಯುಕ್ತವಾಗಿರುವಂತ ಪದಾರ್ಥಗಳನ್ನು ಪಡೆಯು ವುದಕ್ಕೆ ಸಾಧ್ಯವಾಗಿದೆ ಎನ್ನುವಂಥ ಮಾತನ್ನು ಎಲ್ಲರೂ ಒಪ್ಪುತ್ತಾರೆ. ಎಲ್ಲಾ ಜನರು ಕೂಡ ಗೋವುಗಳನ್ನು ಪೂಜೆ ಮಾಡುತ್ತಾರೆ. ಪೂಜೆಯನ್ನು ಮಾಡಿ ಗೋವುಗಳೇ ಆಶೀರ್ವಾದವನ್ನು ಮಾಡಿ ಎಂದು ಬೇಡಿಕೆಯನ್ನು ಇಡುವಂಥದ್ದನ್ನು ನಮ್ಮ ಹಿಂದೂ ಸಂಪ್ರದಾಯದಲ್ಲಿ ರೂಢಿಸಿಕೊಂಡು ಬಂದಿದ್ದೇವೆ. ಇಂಥ ಸಂದರ್ಭದಲ್ಲಿ ಆವುಗಳು ಮುಗ್ಧ ಗೋವುಗಳನ್ನು ರಕ್ಷಣೆ ಮಾಡುವಂಥ ಕೆಲಸವನ್ನು ಇಡೀ ರಾಜ್ಯದ ಜನತೆ ಮಾಡಬೇಕಾಗಿದೆ. ಇಡೀ ರಾಜ್ಯದ ಜನತೆ ಆ ಕೆಲಸವನ್ನು ಮಾಡಿದರೆ ನಮ್ಮ ಸಂಪ್ರದಾಯದ ಪ್ರಕಾರ ನಮಗೆ ಒಳ್ಳೆಯದಾಗುತ್ತದೆ, ಈ ರಾಜ್ಯಕ್ಕೆ ಒಳ್ಳೆಯದಾಗುತ್ತದೆ ಎನ್ನುವಂಥದ್ದನ್ನು ನಾವು ಮತ್ತು ವಿರೋಧ ಪಕ್ಷದ ಎಲ್ಲರೂ ಅರ್ಥ ಮಾಡಿಕೊಂಡು ಇವತ್ತೇನು ಈ ಬಿಲ್ ಬಂದಿದೆ, ಇದಕ್ಕೆ ಎಲ್ಲರೂ ಸಹಮತವನ್ನು ವ್ಯಕ್ತಪಡಿಸಬೇಕೆಂದು ಹೇಳಬಯಸುತ್ತೇನೆ. ಇವತ್ತು ಈ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಗೊಂದಲಗಳು, ಗಲಾಟೆಗಳು ಉಗ್ರ ರೂಪದಲ್ಲಿ ನಡೆಯುವುದನ್ನು ನೋಡಿದ್ದೇವೆ ಎಂದರೆ ನಾವೆಲ್ಲೋ ಒಂದು ಕಡೆ ತಪ್ಪಿದ್ದೇವೆಂದು ಭಾಸವಾಗುತ್ತದೆ. ಈ ಸಂದರ್ಭದಲ್ಲಿ ನಾನು ಅಧ್ಯಕ್ಷರ ಮೂಲಕ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಈ ದೇಶದ ಲಾಂಛನವಾಗಿ ತ್ರಿಮುಖ ಇರುವಂಥ ಸಿಂಹದ ಲಾಂಛನವೇನಿದೆ, ಅದನ್ನು ತೆಗೆದು ತ್ರಿಮುಖ ಗೋವಿನ ಲಾಂಛನವನ್ನು ಈ ದೇಶದ ಲಾಂಛನವನ್ನಾಗಿ ಮಾಡುವುದಕ್ಕೆ ಈ ಸದನದ ಮೂಲಕ ಕೇಂದ್ರ ಸರ್ಕಾರಕ್ಕೆ ನಿರ್ಣಯವನ್ನು ರವಾನೆ ಮಾಡಬೇಕೆಂದು ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ. ಇವತ್ತು ಸಿಂಹ ಎಂದ ಕೂಡಲೇ ಎಲ್ಲರಿಗೂ ಭಯ ಹುಟ್ಟುತ್ತದೆ. ಏಕೆಂದರೆ ಉಗ್ರ ರೂಪ. ಆ ಉಗ್ರ ರೂಪ ಅವತ್ತಿನ ಕಾಲದಲ್ಲಿ ಬ್ರಿಟಿಷರನ್ನು ಎದುರಿಸಿ ಈ ದೇಶದಿಂದ ಓಡಿಸಬೇಕು ಎನ್ನುವಂಥ

ಕಾರಣದಿಂದ ತ್ರಿಮುಖ ಸಿಂಹದ ಲಾಂಛನವನ್ನು ಅವತ್ತಿನ ದಿವಸ ಅಂದಿನ ಹಿರಿಯರು ಮಾಡಿರಬಹುದು ಎಂದು ನನಗನಿಸುತ್ತದೆ. ಅದಕ್ಕಾಗಿ ಇವತ್ತು ಶಾಂತ ರೂಪವನ್ನು ತಾಳಬೇಕಾಗಿರುವಂಥ ಸಂದರ್ಭದಲ್ಲಿ ತ್ರಿಮುಖ ವ್ಯಾಘ್ರ ಸಿಂಹದ ಲಾಂಛನದ ಬದಲಾಗಿ ಗೋಮಾತೆಯ ಲಾಂಛನವನ್ನು ನಮ್ಮ ರಾಷ್ಟ್ರದ ಲಾಂಛನವನ್ನಾಗಿ ಮಾಡಿಕೊಳ್ಳುವಂಥದ್ದು ಬಹಳ ಸೂಕ್ತ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಬಹಳ ಉತ್ತಮವಾಗಿರುವಂಥ ಆಯವ್ಯಯವನ್ನು ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಮಂಡನೆಯನ್ನು ಮಾಡಿರುವುದಕ್ಕಾಗಿ ಈ ಸದನದ ಮೂಲಕ ಅವರಿಗೆ ಧನ್ಯವಾದಗಳನ್ನು ಹೇಳಿ, ಇದರ ಜೊತೆಯಲ್ಲಿ 2010-2011ರ ಆಯವ್ಯಯವನ್ನು ನಾನು ತುಂಬು ಹೃದಯದಿಂದ ಸ್ವಾಗತವನ್ನು ಮಾಡಬಯಸುತ್ತೇನೆ ಎನ್ನುವಂಥ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ನಾನು ನಿನ್ನೆಯಿಂದ 351 ರದ್ದನ್ನು ಪ್ರಸ್ತಾಪ ಮಾಡಲು ಕಾಯುತ್ತಿದ್ದೇನೆ.

ಅಧ್ಯಕ್ಷರು : ಅದು ಇಲ್ಲಿ ಚರ್ಚೆಗೆ ಬರುವುದಿಲ್ಲ. ಅದಕ್ಕೆ ಉತ್ತರವನ್ನು ಕೊಡುತ್ತಾರೆ. ಆ ಉತ್ತರವನ್ನು ನಾನು ನಿಮಗೆ ಕೊಡಿಸುತ್ತೇನೆ.

ಶ್ರೀ ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್ : ಬಜೆಟ್ ಮೇಲೆ ಮಾತನಾಡಲು ನನಗೆ ಅವಕಾಶವನ್ನು ಕೊಡುತ್ತೀರ?

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದು ಕೊಳ್ಳುತ್ತೇನೆ. ಒಟ್ಟು ಹತ್ತು ಗಮನ ಸೆಳೆಯುವ ಸೂಚನೆಗಳು ಇವೆ. ಈಗ ನರೇಂದ್ರಬಾಬುರವರ ಗಮನ ಸೆಳೆಯುವ ಸೂಚನೆ.

(ಶ್ರೀ ನೆ.ಲ. ನರೇಂದ್ರಬಾಬುರವರು ಸದನದಲ್ಲಿ ಆ ಸಮಯದಲ್ಲಿ ಗೈರು ಹಾಜರಿದ್ದರು)

ಅಧ್ಯಕ್ಷರು : ದಿನಕರ ಶೆಟ್ಟಿಯವರ ಗಮನ ಸೆಳೆಯುವ ಸೂಚನೆ.

9. ಗಮನ ಸೆಳೆಯುವ ಸೂಚನೆಗಳು :

ವಿಷಯ : ಕುಮಟಾ ಮತ ಕ್ಷೇತ್ರದಲ್ಲಿ ಹಿಂದೂಗಳ ಶವ ಸಂಸ್ಕಾರಕ್ಕೆ ಕಟ್ಟಿಗೆ ಅಭಾವವಿರುವ ಬಗ್ಗೆ.

ಶ್ರೀ ದಿನಕರ ಶೆಟ್ಟಿ(ಕುಮಟಾ) : ಮಾನ್ಯ ಅಧ್ಯಕ್ಷರೆ, ಕುಮಟಾ ಮತ ಕ್ಷೇತ್ರದಲ್ಲಿ ಹಿಂದುಗಳ ಶವ ಸಂಸ್ಕಾರಕ್ಕೆ ಕಟ್ಟಿಗೆಯ ಅಭಾವವಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸದಸ್ಯರಾದ ಶ್ರೀ ದಿನಕರ ಕೇಶವ ಶೆಟ್ಟಿಯವರು ನಿಯಮ 73 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರವನ್ನು ಕೊಡಬಯಸುತ್ತೇನೆ. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನಲ್ಲಿ ಒಟ್ಟು 16 ಉರುವಲು ಕಟ್ಟಿಗೆ ಡಿಪೋಗಳಿರುತ್ತವೆ. ಈ ಪೈಕಿ ಆಡಳಿತಾತ್ಮಕ ಕಾರಣಗಳಿಂದ 6 ಡಿಪೋಗಳನ್ನು ತಾತ್ಕಾಲಿಕವಾಗಿ ಡಿಸೆಂಬರ್ 2009ರ ಅಂತ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಸದರಿ ಡಿಪೋಗಳಿಂದ ಉರುವಲು ಕಟ್ಟಿಗೆ ಯನ್ನು ಖರೀದಿ ಮಾಡುತ್ತಿದ್ದ ಜನರಿಗೆ ಅಂದಾಜು 3 ಕಿ.ಮೀ. ವ್ಯಾಪ್ತಿಯ ಲ್ಲಿರುವ ಇತರ ಡಿಪೋಗಳಿಂದ ಮಾರಾಟ ಮಾಡಲಾಗುತ್ತಿದೆ. ಸಾರ್ವಜನಿಕರ ಸಮಸ್ಯೆಗಳನ್ನು ಪರಿಗಣಿಸಿ ಮುಚ್ಚಲಾಗಿದ್ದ 6 ಡಿಪೋಗಳಲ್ಲಿ 2 ಡಿಪೋಗಳನ್ನು (ಕುಮಟಾ – 3 ಡಿಪೋ ಮತ್ತು ತದಡಿ ಡಿಪೋ) ಪುನಃ ಫೆಬ್ರವರಿ 2010 ರಿಂದ ಪುನರಾರಂಭಿಸಲಾಗಿದೆ. ಉಳಿದ ಉರುವಲು ಕಟ್ಟಿಗೆ ಡಿಪೋಗಳನ್ನು ಅಗತ್ಯತೆಗನುಗುಣವಾಗಿ ಪುನಃ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಕುಮಟಾ ತಾಲ್ಲೂಕಿನ ಉರುವಲು ಕಟ್ಟಿಗೆ ಡಿಪೋಗಳಲ್ಲಿ ಈಗ ದಾಸ್ತಾನು ಕಡಿಮೆ ಇದ್ದು, ಕಟಾವು ಮಾಡಿದ ನೆಡುತೋಪುಗಳಿಂದ ಉರುವಲು ಕಟ್ಟಿಗೆಯನ್ನು ಸಾಗಾಣಿಕೆ ಮಾಡಲು ತುರ್ತು ಕ್ರಮ ಕೈಗೊಳ್ಳಲಾಗಿದೆ.

ಕುಮಟಾ ತಾಲ್ಲೂಕಿನಲ್ಲಿ ಹಿಂದೂಗಳ ಶವ ಸಂಸ್ಕಾರಕ್ಕೆ ತೊಂದರೆ ಯಾಗದಂತೆ ಉರುವಲು ಕಟ್ಟಿಗೆಯನ್ನು ಪೂರೈಸುವ ವ್ಯವಸ್ಥೆ ಮಾಡಲಾಗುವುದು.

(6 - 10 P.M.)

ಶ್ರೀ ದಿನಕರ ಕೇಶವ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ. ನಮ್ಮ ಕ್ಷೇತ್ರದಲ್ಲಿ 80% ಅರಣ್ಯ ಪ್ರದೇಶ ಹೊಂದಿದ್ದು, ಹಿಂದೂಗಳ ಶವ ಸಂಸ್ಕಾರಕ್ಕೆ ಇರಬಹುದು, ಬಡವರು ಅಡಿಗೆಯನ್ನು ಮಾಡುವುದಕ್ಕೋಸ್ಕರ ಉರುವಲು ಕಟ್ಟಿಗೆಯ ಅವಶ್ಯಕತೆ ತೀರ ಇರುವುದರಿಂದ, ಹೊನ್ನಾವರ ತಾಲ್ಲೂಕಿನಲ್ಲಿ ಆದಷ್ಟು ಬೇಗ ಎರಡು ಡಿಪೋಗಳನ್ನು ತೆರೆಯವುದರ ಬಗ್ಗೆ ನಾನು ಡಿಸಿಯವರಿಗೆ ಕಳೆದ ವರ್ಷ ವಿನಂತಿಯನ್ನು ಮಾಡಿದ್ದೆನು. ಆದರೆ ಇಲ್ಲಿಯವರೆಗೂ ಒಂದೇ ಡಿಪೋ ಪ್ರಾರಂಭವಾಗಿರುತ್ತದೆ. ಈಗ ಪ್ರಾರಂಭ ಮಾಡಿರುವಂತಹ ಆ ಒಂದು ಡಿಪೋದಲ್ಲಿ ಕೂಡ ಕಟ್ಟಿಗೆಯ ಅಭಾವ ವಿರುತ್ತದೆ. ಅದೇ ರೀತಿ ಕುಮಟಾ ತಾಲ್ಲೂಕಿನಲ್ಲಿ ಸಹ ಪ್ರಾರಂಭವಾಗಿದ್ದಂತಹ ನಾಲ್ಕು ಡಿಪೋಗಳನ್ನು ಸಹ ಬಂದ್ ಮಾಡಿದ್ದಾರೆ. ಅವುಗಳನ್ನು ಕೂಡಲೇ ಪ್ರಾರಂಭ ಮಾಡಬೇಕು. ಕೇವಲ ಡಿಪೋವನ್ನು ತೆರೆದರೆ ಆಗುವುದಿಲ್ಲ, ಅಲ್ಲಿ ಕಟ್ಟಿಗೆಯನ್ನು ಸಂಪೂರ್ಣವಾಗಿ ಕಾಲಕಾಲಕ್ಕೆ ಪೂರೈಸುವಂತಹ ವ್ಯವಸ್ಥೆ ಯನ್ನು ಮಾಡುವುದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಸೂಚನೆಯನ್ನು ನೀಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೇಟ್ಟರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಆರು ಡಿಪೋಗಳಲ್ಲಿ ಎರಡು ಡಿಪೋಗಳನ್ನು ಫೆಬ್ರವರಿ 2010ಕ್ಕೆ ಪ್ರಾರಂಭ ಮಾಡಿದ್ದೇವೆ. ಇನ್ನು ನಾಲ್ಕು ಡಿಪೋಗಳನ್ನು ಕೂಡ ಅಗತ್ಯತೆಗೆ ಅನುಗುಣ ವಾಗಿ ಏನೇನು ಅವಶ್ಯಕತೆ ಇದೆ ಎನ್ನುವುದನ್ನು ನೋಡಿ ಅದನ್ನೂ ಪ್ರಾರಂಭ ಮಾಡುತ್ತೇವೆ. ಹೀಗಾಗಿ ಕುಮಟಾ ತಾಲ್ಲೂಕಿನಲ್ಲಿ ಉರುವಲು ಕಟ್ಟಿಗೆ ದಾಸ್ತಾನು ಕಡಿಮೆಯಿದ್ದು, ದಾಸ್ತಾನನ್ನು ಹೆಚ್ಚು ಮಾಡುವುದಕ್ಕೆ ಮತ್ತು ಉರುವಲು ಕಟ್ಟಿಗೆಯನ್ನು ಸಾಗಾಣಿಕೆ ಮಾಡುವುದಕ್ಕೆ ತುರ್ತು ಕ್ರಮವನ್ನು ಕೈಗೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ಶವ ಸಂಸ್ಕಾರಕ್ಕೆ ಮತ್ತು ಇನ್ನಿತರ ಕೆಲಸಕಾರ್ಯಗಳಿಗೆ ಉರುವಲು ಕಟ್ಟಿಗೆ ತೊಂದರೆಯಾಗದ ರೀತಿಯಲ್ಲಿ ಅದನ್ನು ಕಾಯ್ದುಕೊಂಡು ಹೋಗುತ್ತೇವೆ.

O.17 F – 25

II ವಿಷಯ : ಮಹಿಳಾ ಮತ್ತು ಮಕ್ಕಳ ಇಲಾಖೆಯ ಭಾಗ್ಯಲಕ್ಷ್ಮಿ ಯೋಜನೆಯನ್ನು ವಿಸ್ತರಿಸುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಭಾಗ್ಯಲಕ್ಷ್ಮಿ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಭಾಗ್ಯಲಕ್ಷ್ಮಿ ಯೋಜನೆಯನ್ನು ಸರ್ಕಾರಿ ಆದೇಶ ಮಮಇ 99 ಮಮಅ 2006, ದಿನಾಂಕ: 17/10/06ರ ಮೂಲಕ ಅನುಷ್ಠಾನಗೊಳಿಸಲು ಸರ್ಕಾರ ಅನುಮೋದನೆ ನೀಡಿದೆ. ಸದರಿ ಆದೇಶದ ಕಂಡಿಕೆ II(4) ರ ಪ್ರಕಾರ ಯೋಜನೆಯ ಸೌಲಭ್ಯಗಳನ್ನು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ 2 ಹೆಣ್ಣು ಮಕ್ಕಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಫಲಾನುಭವಿ ಹೆಣ್ಣು ಮಗುವಿನ ತಂದೆ ಅಥವಾ ತಾಯಿ ಶಾಶ್ವತ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡಿದ್ದು, ಕುಟುಂಬದಲ್ಲಿನ ಒಟ್ಟು ಮಕ್ಕಳ ಸಂಖ್ಯೆ 03 ಕ್ಕಿಂತ ಹೆಚ್ಚಿಗೆ ಇರಬಾರದು. ಪ್ರಸ್ತತ ಮಾನ್ಯ ಶಾಸಕರ ಗಮನ ಸೆಳೆಯುವ ಸೂಚನೆಯಲ್ಲಿ ಕೆಲವು ಪ್ರಕರಣಗಳಲ್ಲಿ ಎರಡನೇ ಹೆಣ್ಣು ಮಗುವಿನ ಜನನ ಸಂದರ್ಭದಲ್ಲಿ ಅವಳಿ ಮಕ್ಕಳು ಜನಿಸಿದಾಗ ಆದೇಶ ಪ್ರಕಾರ ಸೌಲಭ್ಯವನ್ನು ವಿಸ್ತರಿಸುವ ಅವಕಾಶ ಇಲ್ಲದಿರುವುರಿಂದ, ಇಂತಹ ಪ್ರಕರಣಗಳನ್ನು ವಿಶೇಷ ಪ್ರಕರಣವೆಂದು ಪರಿಗಣಿಸುವುದಕ್ಕೆ ಸಂಬಂಧಿಸಿದ್ದಾಗಿರುತ್ತದೆ.

ಪ್ರಸ್ತುತ ಇರುವ ನಿಯಮಗಳ ಪ್ರಕಾರ ಮೊದಲನೇ ಹೆಣ್ಣು ಮಗುವಿಗೆ ಭಾಗ್ಯಲಕ್ಷ್ಮೀ ಯೋಜನೆಯನ್ನು ಮಂಜೂರು ಮಾಡಿದ್ದು, ಎರಡನೇ ಹೆಣ್ಣು ಮಗುವಿನ ಜನನದ ಸಂದರ್ಭದಲ್ಲಿ ಅವಳಿ ಹೆಣ್ಣು ಮಕ್ಕಳಾದಾಗ ಅವರುಗಳಲ್ಲಿ ಒಂದು ಹೆಣ್ಣು ಮಗುವಿಗೆ ಮಾತ್ರ ಭಾಗ್ಯಲಕ್ಷ್ಮೀ ಯೋಜನೆಯ ಸೌಲಭ್ಯವನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ಅದೂ ಕೂಡ ಹೆಣ್ಣು ಮಗುವಿನ ತಂದೆ ಅಥವಾ ತಾಯಿ ಶಾಶ್ವತ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡಿರಬೇಕಾಗಿರುತ್ತದೆ.

ಇಂತಹ ಪ್ರಕರಣಗಳು ಸಾಮಾನ್ಯವಾಗಿ ಉದ್ಭವಿಸದಿದ್ದರೂ, ಕೆಲವೊಂದು ಅಪರೂಪದ ಪ್ರಕರಣಗಳಲ್ಲಿ ಈ ರೀತಿಯ ಪ್ರಸಂಗಗಳು ಸಂಭವಿಸಬಹುದಾಗಿದೆ. ಈಗಾಗಲೇ ಒಂದು ಮಗುವಿರುವ ಕುಟುಂಬದಲ್ಲಿ ಎರಡನೇ ಹೆಣ್ಣು ಮಗುವಿಗೆ ಸೌಲಭ್ಯವನ್ನು ನೀಡಿದ್ದು, ಮೂರನೇ ಮಗುವಿನ ಜನನದ ಸಂದರ್ಭದಲ್ಲಿ ಅವಳಿ ಮಕ್ಕಳ ಜನನವಾದಾಗ ಕೇವಲ ಒಂದು ಮಗುವಿಗೆ ಮಾತ್ರ ಸೌಲಭ್ಯವನ್ನು ನೀಡಲು ಅವಕಾಶವಿರುತ್ತದೆ. ಎರಡು ಗಂಡು ಮಕ್ಕಳಿದ್ದು, 3ನೇ ಮಗುವಿನ ಜನನದ ಸಂದರ್ಭದಲ್ಲಿ ಅವಳಿ ಮಕ್ಕಳಾದರೆ 4ನೇ ಮಗುವಿಗೆ ಸೌಲಭ್ಯವನ್ನು ನೀಡಲು ಅವಕಾಶವಿರುವುದಿಲ್ಲ. ಆದ್ದರಿಂದ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ನಿಗಧಿಪಡಿಸಿರುವ ಅರ್ಹತೆಯ ಮಾನದಂಡದ 3 ಮಕ್ಕಳ ಮಿತಿಯೊಳಗೆ ಅರ್ಹತೆಯುಳ್ಳ ಎರಡು ಹೆಣ್ಣು ಮಕ್ಕಳಿಗೆ ಮಾತ್ರ ಯೋಜನೆಯ ಸೌಲಭ್ಯವನ್ನು ನೀಡಲು ಅವಕಾಶವಿರುತ್ತದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಒಂದು ಕುಟುಂಬದಲ್ಲಿ ಎರಡು ಹೆಣ್ಣುಮಕ್ಕಳಿಗೆ ಈ ಸೌಲಭ್ಯವನ್ನು ಕೊಡಬೇಕು ಎನ್ನುವುದು ನಿಮ್ಮ ತೀರ್ಮಾನ ಇದೆ. ಆ ಎರಡು ಮಕ್ಕಳು ಈ ರೀತಿಯೇ ಹುಟ್ಟಬೇಕೆಂದು ಹೇಳುವುದಕ್ಕೆ ನೀವು ಯಾರು? ಅದು ದೇವರ ಕೃಪೆ, ಇದೇರೀತಿ ಹುಟ್ಟಬೇಕೆಂದು ಹೇಳುವುದಕ್ಕಾಗುವುದಿಲ್ಲ. ನೀವು ಈ ಒಂದು ಮಹತ್ತರವಾದಂತಹ ಭಾಗ್ಯಲಕ್ಷ್ಮಿ ಯೋಜನೆಯಿಂದ ಬಹಳ ಕಲ್ಯಾಣವಾಗುತ್ತದೆಂದು ಹೇಳಿಕೊಳ್ಳುವಂತಹ ಸಂದರ್ಭದಲ್ಲಿ ಒಂದು ಸಣ್ಣ relaxation ಮಾಡಬೇಕು. ನನ್ನ ಕ್ಷೇತ್ರದಲ್ಲಿ ಒಂದು ಪ್ರಕರಣ ಕಂಡುಬಂದಿದೆ. ಅವರು ಬಹಳ ಬಡವರು, ಅವರಿಗೆ ಮೊದಲನೆ ಮಗು ಹೆಣ್ಣುಮಗು, ಎರಡನೆಯದು ಗಂಡುಮಗು ಆಗಿದೆ. ಮೂರನೇ ಬಾರಿ ಮಗುವಾದಾಗ ಅವಳಿ ಎರಡು ಹೆಣ್ಣುಮಕ್ಕಳಾಗಿವೆ. ಹಾಗಿದ್ದಾಗ ಎರಡು ಮಕ್ಕಳಿಗೆ ಸೌಲಭ್ಯವನ್ನು ಕೊಡುವುದಕ್ಕೆ ತೊಂದರೆ ಯೇನಿದೆ? ಅದರಲ್ಲಿ ಇನ್ನೊಂದು ಮಗುವಿಗೆ ಕೊಡಬಹುದಲ್ಲ. ಮಕ್ಕಳು ಈ ರೀತಿಯೇ ಹುಟ್ಟಬೇಕೆಂದು ನೀವು ಕಾನೂನು ಮಾಡುವುದಕ್ಕಾಗುವುದಿಲ್ಲ. ಎಲ್ಲರಿಗೂ ಅವಳಿ ಮಕ್ಕಳಾಗುವುದಿಲ್ಲ, ನೀವು ಏನು ಪ್ರಯತ್ನಪಟ್ಟರೂ ಅವಳಿ ಮಕ್ಕಳಾಗುವುದಿಲ್ಲ. ವಿಶೇಷವಾಗಿ ಒಂದೊಂದು ಬಾರಿ ಆಗುತ್ತವೆ. ಅದು ಒಂದು ಬೋನಸ್ ಎಂದು ಹೇಳಿ ಒಂದು ಮಗುವಿಗೆ ಕೊಟ್ಟರೇ ನಿಮಗೆ ಏನಾಗುತ್ತದೆ? ಅವಳಿ ಮಕ್ಕಳಿಗೆ ಕೊಡಲೇಬೇಕಾಗುತ್ತದೆ. ಅದರಲ್ಲೂ ಆ ಅವಳಿ ಮಕ್ಕಳಲ್ಲಿ ಎರಡೂ ಮಕ್ಕಳು ಬದುಕಿರತಕ್ಕಂಥ ಸಂದರ್ಭ ಕಡಿಮೆ

ಇದೆ. ಆದುದರಿಂದ ದಯಮಾಡಿ ಇದಕ್ಕೆ relaxation ಮಾಡಿ. ಇದರಲ್ಲಿ Prestige ಮಾಡಿಕೊಂಡು ಕಾನೂನು ಈ ರೀತಿ ಇದೆಯೆಂದು ಹೇಳುವುದು ಬೇಕಾಗಿಲ್ಲ. ಮುಖ್ಯವಾಗಿ ಇದು ಒಂದು, ಎರಡನೆಯದನ್ನು ನಾನು ಹೇಳುತ್ತೇನೆ.

ಶ್ರೀ ಸಿ.ಟಿ. ರವಿ : ಮಾನ್ಯ ಜಯಚಂದ್ರರವರು ಹಳೇ ಕಾಲದಲ್ಲಿದ್ದಾರೆ. ಈಗ technology improve ಆಗಿದೆ.

ಶ್ರೀ ಕೆ. ಅಭಯಚಂದ್ರ ಜೈನ್ : ಅವಳಿ ಮಕ್ಕಳು ನಿಮ್ಮಂತಹ ಶ್ರೀಮಂತರಿಗೆ ಆಗುತ್ತವೆ, ಬಡವರಿಗೆ ಆಗುವುದಿಲ್ಲ. ಬಡವರು ಎಲ್ಲಿ scanning ಗೆ ಹೋಗುತ್ತಾರೆ, ಶ್ರೀಮಂತರು Scanning ಗೆ ಹೋಗಬಹುದು.

ಶ್ರೀ ಸಿ.ಟಿ. ರವಿ : ಜಯಚಂದ್ರರವರೆ, ಅವಳಿ, ತ್ರಿವಳಿ ಮಕ್ಕಳು ಆಗುವುದು ಶ್ರೀಮಂತರಿಗೆ ಅಲ್ಲ, ಬಡವರಿಗೆ ಆಗುವುದು.

ಶ್ರೀ ಕೆ. ಅಭಯಚಂದ್ರ ಜೈನ್ : Scanning ಗೆ ಹೋಗುವುದಕ್ಕೆ ಬಡವರಿಗೆ ಎಲ್ಲಿ ಸಾಧ್ಯವಾಗುತ್ತದೆ? ನಿಮ್ಮ ಭಾಗ್ಯಲಕ್ಷ್ಮಿ ಯೋಜನೆಗೆ ಬರುತ್ತಾರೆಯೇ?

ಶ್ರೀ ಟಿ.ಬಿ. ಜಯಚಂದ್ರ : ಮೂರು ಮಕ್ಕಳು ಆದಂತಹ ಕೇಸುಗಳು ಇವೆ. ಅಂತಹ ಕೇಸುಗಳು ನಮಗೆ ಬಂದಿಲ್ಲ, ಆ ರೀತಿಯ ಕೇಸ್ ಬಂದಾಗ ನೋಡೋಣ. ಈಗ ಅವಳಿ ಮಕ್ಕಳು ಇರುವುದು ನಿಜ. ದಯಮಾಡಿ ನೀವು ಎರಡು ಮಕ್ಕಳಿಗೆ ಎಂದಮೇಲೆ how do you deny the benefit for the third child? ಒಂದು ಮಗುವಿಗೆ ಕೊಟ್ಟು ಇನ್ನೊಂದು ಮಗುವಿಗೆ ಹೇಗೆ deny ಮಾಡುವುದಕ್ಕೆ ಬರುತ್ತದೆ? ದಯಮಾಡಿ ನೀವು ವಿಶೇಷ ಪ್ರಕರಣ ಎಂದು ಮಾಡಿ. ಈ ಯೋಜನೆ ನಿಮ್ಮ ಕನಸಿನ ಕೂಸು.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಎರಡು ಅವಳಿ ಜವಳಿ ಆದಾಗ ಯಾವ ಮಗುವಿಗೆ ಕೊಡಬೇಕೆಂದು ಹೇಗೆ ತೀರ್ಮಾನ ಮಾಡುತ್ತಾರೆ?

ಶ್ರೀ ಟಿ.ಬಿ. ಜಯಚಂದ್ರ : ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎನ್ನುವುದು ಒಂದು ವಿಚಾರ, ದಯಮಾಡಿ ತಾವು ಸಚಿವ ಸಂಪುಟದಲ್ಲಿ ಕುಳಿತು ಇದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡಿ. ಇನ್ನು ಎರಡನೆಯದಾಗಿ ಬಾಂಡ್‌ನಲ್ಲಿ ನಿಮ್ಮ conditions ಇದೆಯಲ್ಲ, ತಾವು ಬಾಂಡ್ ನೋಡಿದ್ದೀರೋ ಇಲ್ಲವೋ, ತಾವು ಒಮ್ಮೆ ಬಾಂಡ್ ನೋಡಿ. ತಾವು ಬೆನಿಫಿಟ್ 18 ವರ್ಷವಾದ ಮೇಲೆ ಕೊಡುವುದು. ನಾನು ಹೇಳುತ್ತೇನೆ, 18

ವರ್ಷವಾದ ಮೇಲೆ ನೀವು ಹಾಕಿರುವಂತಹ condition ಪ್ರಕಾರ 50% ಜನಗಳಿಗೆ ಬೆನಿಫಿಟ್ ಬರುವುದಿಲ್ಲ. ನಾನು ಈ ಬಗ್ಗೆ ಇಲಾಖೆಯ ಮುಖ್ಯಸ್ಥರ ಜೊತೆ ಏನು ಈ ರೀತಿ ಮಾಡಿದ್ದೀರೆಂದು ಚರ್ಚೆ ಮಾಡಿದೆ. ಅವರು ಹೌದು, ತಪ್ಪಾಗಿದೆ, ನಾವು ಅವತ್ತು ಇದನ್ನು ನೋಡಲಿಲ್ಲವೆಂದು ಒಪ್ಪಿಕೊಂಡರು. ದಯಮಾಡಿ ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ನಾನು ಎಲ್ಲದನ್ನು ಬಿಚ್ಚಿಡಬೇಕಾಗಿಲ್ಲ, ಇದರ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ನಿಮ್ಮ ಯೋಜನೆಯಲ್ಲಿ ಸಾಕಷ್ಟು ಲೋಪದೋಷವಿದೆ. ಇದರ ಬಗ್ಗೆ ಯಾರೂ ಯೋಚನೆ ಮಾಡಲಿಲ್ಲ. 50% ಜನರಿಗೆ ಬೆನಿಫಿಟ್ ಸಿಗುವುದಿಲ್ಲ. ದಯಮಾಡಿ ಇದು ಯಾವುದೋ ಒಂದು insurance companyಗೆ ಸಹಾಯ ಮಾಡುವುದಕ್ಕೆ ಮಾಡಿದಂತಹ ಯೋಜನೆಯಾಗುತ್ತದೆ. ಇದು ನಿಜವಾಗಲೂ ಹೆಣ್ಣುಮಕ್ಕಳಿಗೆ ಸಹಾಯ ಮಾಡುವಂತಹ ಯೋಜನೆಯಲ್ಲ. ನೀವು ಬಜೆಟ್‌ನಲ್ಲಿ ಏನು invest ಮಾಡಿರುತ್ತೀರಿ, ಅಷ್ಟು ಕೂಡ ಖರ್ಚಾಗುವುದಕ್ಕೆ ಸಾಧ್ಯವಿಲ್ಲ. ಆ ಕಾರಣಕ್ಕೋಸ್ಕರ ಇಂತಹ ವಿಶೇಷ ಪ್ರಕರಣಗಳನ್ನು ವಿಶೇಷ ಎಂದು ತೀರ್ಮಾನ ಮಾಡಿ ಕೊಡುವಂತಹ ಕೆಲಸ ಮಾಡಿ. ಮೊದಲನೆಯದು ಹೆಣ್ಣುಮಗುವಿಗೆ ಕೊಡಿ, ಎರಡನೆಯದು ಗಂಡು ಮಗುವಾಗಿ, ಮೂರನೆಯ ಮಕ್ಕಳು ಎರಡು ಹೆಣ್ಣು ಮಕ್ಕಳಾದರೆ ದಯಮಾಡಿ ಮೂರು ಮ್ಕಕಳಿಗೂ ಕೊಡುವ ಬಗ್ಗೆ ತೀರ್ಮಾನ ಮಾಡಿ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ : ಈಗಿರುವಂತಹ ನಿಯಮಾವಳಿ ಪ್ರಕಾರ ಯೋಜನೆಯ ಸೌಲಭ್ಯಗಳನ್ನು ಬಡತನದ ರೇಖೆಯಿಂದ ಕೆಳಗಿರುವ ಕುಟುಂಬದ ಎರಡು ಹೆಣ್ಣುಮಕ್ಕಳಿಗೆ ಸೀಮಿತಗೊಳಿಸಲಾಗಿದೆ. ಫಲಾನುಭವಿಯ ತಂದೆ ಅಥವಾ ತಾಯಿ ಶಾಶ್ವತ ಕುಟುಂಬ ಯೋಜನೆ ಯನ್ನು ಅಳವಡಿಸಿಕೊಂಡಿರತಕ್ಕದ್ದು ಮತ್ತು ಕುಟುಂಬದಲ್ಲಿನ ಮಕ್ಕಳ ಸಂಖ್ಯೆ ಮೂರಕ್ಕಿಂತ ಹೆಚ್ಚಿಗೆ ಇರಬಾರದೆನ್ನುವುದು ಉದ್ದೇಶವಿದೆ. ಈಗ ತಾವು ವಿಶೇಷ ಪ್ರಕರಣದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರಿ. ಆದರೆ ನಮ್ಮ ರಾಜ್ಯ ಸರ್ಕಾರದ ನಿಯಮ ಏನಿದೆ ಎಂದರೆ "ಒಂದು ಬೇಕು, ಎರಡು ಸಾಕು" ಎಂದಿದೆ. ಅದರ ಬಗ್ಗೆ ನಾವು ಗಮನಹರಿಸಬೇಕಾಗಿದೆ. ಆದರೆ ನಮ್ಮ ನಿಯಮವನ್ನು ಸಡಿಲಪಡಿಸುವುದು ಏನಿದೆ, ಅದು ನಮ್ಮ ನೀತಿಗೆ ತದ್ವಿರುದ್ಧ ವಾದಂತಹ ವಾದ ನಿಮ್ಮಲ್ಲಿ ಇಲ್ಲಿ ಎದ್ದು ಕಾಣುತ್ತಿದೆ. ಜನಸಂಖ್ಯೆಯನ್ನು

ಮಿತಿಗೊಳಿಸಬೇಕು ಎನ್ನುವ ದಿಕ್ಕಿನಲ್ಲಿ ಯೋಚನೆ ಮಾಡುತ್ತಿರುವಂತಹ ಸಂದರ್ಭದಲ್ಲಿ ತಾವು ಏಕೆ ಈ ಕಲ್ಪನೆಯಲ್ಲಿ ಇದ್ದೀರೆಂದು ಗೊತ್ತಿಲ್ಲ.

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ಅಧ್ಯಕ್ಷರೆ, ಅವರು ಹೇಳುತ್ತಿರುವುದು, ಅವಳಿ ಮಕ್ಕಳೆಂದರೆ accident birth ಆದರೆ ಅವಳಿ ಮಕ್ಕಳಾಗುತ್ತದೆ. ನಾವೇನು ಮೂರನೆ ಮಗುವಿಗೆ ಕೊಡಿ ಎಂದು ಹೇಳುತ್ತಿಲ್ಲ. ಅವಳಿ ಮಕ್ಕಳಾದರೆ ಆಗ ನೀವು ಕಾನೂನಿನಲ್ಲಿ ಒಂದು exception ಕೊಡಿ ಎಂದು ಹೇಳುತ್ತಿರುವುದು.

ಶ್ರೀ ಪಿ.ಎ. ನರೇಂದ್ರಸ್ವಾಮಿ : ಮಾನ್ಯ ಅಧ್ಯಕ್ಷರೆ, ಒಂದನೇ ಹೆರಿಗೆಯಲ್ಲಿ ಅವಳಿ ಜವಳಿ ಹುಟ್ಟಿ ಎಂದು ಹೆಣ್ಣುಮಕ್ಕಳಾದಾಗ ಸ್ಪಷ್ಟವಾಗಿ ಅವಕಾಶ ಸಿಗುತ್ತದೆ. ಆಗ ಯಾವುದೇ ತಾರತಮ್ಯ ಮಾಡುವುದಾಗಲಿ, ನೀವು ಹೇಳಿದಂತೆ ಲೋಪವಾಗುವುದಿಲ್ಲ. ನೀವು ಹೇಳಿದಂಥಾದ್ದು ವಿಶೇಷ ಪ್ರಕರಣ, ಎರಡು ಮಕ್ಕಳಾಗಿರುತ್ತದೆ, ಮೂರನೇ ಮಗು ಆ ಸಮಯದಲ್ಲಿ ಅವಳಿ–ಜವಳಿ ಹುಟ್ಟಿತು ಎನ್ನುವ ಪ್ರಥಮ ಪ್ರಕರಣ ನಿಮ್ಮಿಂದಲೇ ನಮ್ಮ ಗಮನಕ್ಕೆ ಬಂದಿರುವುದು. ಇಲ್ಲಿಯವರೆಗೆ ಅಂತಹ ಪ್ರಕರಣಗಳು ಬಂದಿಲ್ಲ. ಅಂತಹ ವಿಶೇಷ ಪ್ರಕರಣಗಳಲ್ಲಿ ನಾವು ನಿಯಮಾವಳಿ ಪ್ರಕಾರ ಪರಿಶೀಲಿಸಿ, ಹಣಕಾಸು ಇಲಾಖೆ ವಹಿಸಿಕೊಂಡಿರುವಂತಹ ಮಾನ್ಯ ಮುಖ್ಯಮಂತ್ರಿಯವರ ಬಳಿ ಚರ್ಚೆ ಮಾಡಿ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಮಾನ್ಯ ಸದಸ್ಯರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಯಾವುದೋ ಒಂದು insurance companyಗೆ ಅನುಕೂಲವಾಗಲಿ ಎನ್ನುವ ರೀತಿಯಲ್ಲಿ ನಿಮ್ಮ ಯೋಜನೆ ಇದೆಯೆನ್ನುವಂಥ ಅಂಶವನ್ನು ನಾನು ಇಲ್ಲಿ ತಿರಸ್ಕಾರ ಮಾಡುತ್ತೇನೆ. ಇದಕ್ಕೆ ಕಾರಣ ಏನೆಂದರೆ, ಅದು ಯಾವುದೋ ಬೇಕಾ ಬಿಟ್ಟಿ ಸಂಸ್ಥೆ ಅಲ್ಲ. LIC, Government of India ಕ್ಕೆ ಕೆಳಗೆ ಇರುವಂಥ ಸಂಸ್ಥೆ, ಯಾವ ಮಧ್ಯವರ್ತಿ ಸಂಸ್ಥೆ ಮುಖಾಂತರ ಈ ಕ್ರಮ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನಾವು LIC ಯನ್ನು ಟೀಕೆ ಮಾಡಿಲ್ಲ, LIC ಯಿಂದ ಲಾಭವಾಗುತ್ತದೆ. ತಾವು ಈ ಯೋಜನೆಯನ್ನು ತಂದಿದ್ದೀರೆಂದು ನಾವು ಯಾರು ಏನು ಕೈಯಿಂದ ಅದನ್ನು ಕೊಡುವುದಿಲ್ಲ. ಅದರಲ್ಲೇ ಉಳಿಸಿ ಕೊಡಬೇಕಾಗುತ್ತದೆ, ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ನೀವು amount ಅನ್ನು deposit ಮಾಡುತ್ತಿರಲ್ಲಾ, ಅದನ್ನು

insurance company ಯನ್ನು ಬಿಟ್ಟು Bank ನಲ್ಲಿಡಿ. LIC is going to be benefited out of this but not the girl child. ತಾವು ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಿ, ನಾನು ಆರೋಪ ಮಾಡುತ್ತಿಲ್ಲ, ನಾನು ವಿಚಾರ ಮಾಡಿ ಇಲ್ಲಿ ತಂದಿರುವಂಥದ್ದು, ನೀವು ಅದನ್ನು ವಿಚಾರ ಮಾಡಿ. ನೀವು ಮೂರನೆ ಮಗುವಿಗೆ operation ಮಾಡಿಸಿಕೊಳ್ಳಬೇಕು, ನಾಲ್ಕನೆಯದು ಹೆರಿಗೆ ಆಗಬೇಕೆಂದು ನಿಯಮಾವಳಿಗಳನ್ನು ಹಾಕಿದ್ದೀರಲ್ಲಾ, ಅದನ್ನು ಯಾರು prove ಮಾಡುವುದಕ್ಕೆ ಆಗುವುದಿಲ್ಲ. ಇದರಿಂದ ಶೇ. 50 ಜನರಿಗೂ ಸಹಾಯವಾಗುವುದಿಲ್ಲ. ದಯಮಾಡಿ ಇದರ ಬಗ್ಗೆ ಯೋಚನೆ ಮಾಡಿ, ಇನ್ನು ಮಕ್ಕಳಿಗೆ ವಿಶೇಷವಾಗಿ ಕೊಡುತ್ತೇವೆಂಬ ಔದಾರ್ಯವನ್ನು ತೋರಿಸಿದಾಗ ನೀವು ಎರಡು ಮಕ್ಕಳಿಗೆ ಮಾತ್ರ, ಮೂರು ಮಕ್ಕಳಿಗೆ ಮಾತ್ರ, ಎನ್ನುವಂಥದ್ದು ಏಕೆ? ಈ ಚೌಕಾಸಿ ವ್ಯಾಪಾರವನ್ನು ಏಕೆ ಮಾಡುತ್ತೀರಿ? ದೇಶದಲ್ಲಿ, ರಾಜ್ಯದಲ್ಲಿ ಹೀಗೆ ಹುಟ್ಟಿಸುವಂಥ ಗಂಡಸರು ಎಷ್ಟು ಜನರು ಇರುತ್ತಾರೆ? ಎಲ್ಲೋ ನೂರು ಜನರು ಇರಬಹುದು. ಅದಕ್ಕೆ ನೀವು ಏಕೆ ಚೌಕಾಸಿ ವ್ಯವಹಾರವನ್ನು ಮಾಡುತ್ತೀರಿ? ಏನೋ ಅನಿವಾರ್ಯವಾಗಿ ಆಗುತ್ತದೆ. ಅದು ಯಾರಿಗೆ ಗೊತ್ತಿರುತ್ತದೆ, ಅವರಿಗೆ ಗೊತ್ತಿರುತ್ತದಾ? ಒಂದೇ ಮಗುವನ್ನು ಮಾಡಿಕೊಳ್ಳಬೇಕು, ಎರಡೇ ಮಕ್ಕಳನ್ನು ಮಾಡಿಕೊಳ್ಳಬೇಕೆಂದು, ಗೊತ್ತಿರುತ್ತದಾ? ದೇವರು ಕೊಡುತ್ತಾನೆ. ಅದು ಆಗುತ್ತದೆ. ಅದಕ್ಕೆ ದಯಮಾಡಿ ನನ್ನ ಕ್ಷೇತ್ರದಲ್ಲಿ ಮೊದಲನೆಯದು ಹೆಣ್ಣು ಮಗು ಆಗಿದೆ, ಎರಡನೆಯದು ಗಂಡು ಮಗುವಾಗಿದೆ, ಮೂರನೆಯದು ಎರಡೂ ಹೆಣ್ಣು ಮಗುವಾಗಿದೆ. ತಾವು ದಯಮಾಡಿ ಮೂರು ಮಕ್ಕಳಿಗೂ ಕೊಡಿ. ನೀವು ಇದಕ್ಕೆ ಯೋಚನೆ ಮಾಡಬೇಡಿ, ನೀವು ಹೋಗಿ. ಮಾನ್ಯ ಮುಖ್ಯಮಂತ್ರಿಯವರಿಗೆ ಹೆಣ್ಣು ಮಕ್ಕಳು ಎಂದರೆ ಬಹಳ ಅಭಿಮಾನವಿದೆ, ಬಹಳ ಪ್ರೀತಿ ಇದೆ. ಅವರು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಾರೆ. ಆಕಸ್ಮಾತ್ ನೀವು ಅವರ ಹತ್ತಿರ ಹೋಗಿ ಅವರು ಒಪ್ಪಿಕೊಳ್ಳಲಿಲ್ಲವೆಂದರೆ, ಅವರನ್ನು ಒಪ್ಪಿಸುವುದಕ್ಕೆ ನಾನೂ ಬರುತ್ತೇನೆ. ನಾನು ಬರುವ ಅವಶ್ಯಕತೆ ಇಲ್ಲ,. ಅವರ ಹತ್ತಿರ ಹೆಣ್ಣು ಮಕ್ಕಳ ಬಗ್ಗೆ ಪ್ರಸ್ತಾಪ ಮಾಡಿ ಅವರು ಖಂಡಿತ ಒಪ್ಪಿಕೊಳ್ಳುತ್ತಾರೆ.

ಅಧ್ಯಕ್ಷರು : ಸುನೀಲ್ ವಿ. ಹೆಗಡೆಯವರು.. . .

III ವಿಷಯ: ಹಳಿಯಾಳ-ಜೋಯಿಡಾ ತಾಲ್ಲೂಕುಗಳ ಅರಣ್ಯ ಪ್ರದೇಶಗಳಲ್ಲಿ ಕಲ್ಲು ಮತ್ತು ಮರಳು ಸಾಗಾಣಿಕೆಗೆ ಅರಣ್ಯ ಇಲಾಖೆಯವರು ತೊಂದರೆ ನೀಡುತ್ತಿರುವ ಬಗ್ಗೆ.

****

ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ನನ್ನ ಕ್ಷೇತ್ರದಲ್ಲಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಇತರ ಪ್ರದೇಶಗಳಲ್ಲಿ ಕಲ್ಲುಮತ್ತು ಮರಳು ಸಾಕಾಣಿಕೆಗೆ ಅರಣ್ಯ ಇಲಾಖೆಯವರು ತೊಂದರೆ ನೀಡುತ್ತಿರುವ ಬಗ್ಗೆ, ಸನ್ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ) ಮಾನ್ಯ ಅಧ್ಯಕ್ಷರೆ,

ಉತ್ತರ ಕನ್ನಡ ಜಿಲ್ಲೆ ಹಳಿಯಾಳ-ಜೊಯಿಡಾ ಕ್ಷೇತ್ರವು ಅತೀ ಹೆಚ್ಚು ಪ್ರದೇಶವನ್ನು ಹೊಂದಿದ್ದು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಬರುತ್ತದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 115 ಎಫ್‌ಎಫ್‌ಎಂ 2001 ದಿನಾಂಕ: 26-02-2004 ರಲ್ಲಿ ಕೆಲವು ಮಾರ್ಗಸೂಚನೆಗಳನ್ನು ಹೊರಡಿಸಲಾಗಿದೆ. ಈ ಮಾರ್ಗ ಸೂಚಿಗಳನ್ವಯ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಯಾದ ಗೃಹ ನಿರ್ಮಾಣ, ರಸ್ತೆ, ಸೇತುವೆ ಇತ್ಯಾದಿಗಳಿಗೆ ಅವಶ್ಯವಾದ ಕಲ್ಲು, ಜಲ್ಲಿ, ಮರಳು ಮುಂತಾದ ಸಾಮಗ್ರಿ ಪಡೆಯಲು 0.5 ಹೆಕ್ಟೇರ್‌ಗೆ ಮೀರದಂತೆ ಗಣಿಗಾರಿಕೆ ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ. ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಪರಿಸರ ಹಾನಿಯಾಗದಿರುವಂತೆ ಕಾಪಾಡುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಅರಣ್ಯ (ಸಂರಕ್ಷಣೆ) ಕಾಯ್ದೆ 1980ರ ಕಟ್ಟುನಿಟ್ಟಿನ ಆದೇಶದನುಸಾರ ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೇ ಅರಣ್ಯ ಪ್ರದೇಶಗಳಲ್ಲಿ ಯಾವುದೇ ಅರಣ್ಯೇತರ ಚಟುವಟಿಕೆಗೆ ಅವಕಾಶ ಇಲ್ಲದಿರುವುದರಿಂದ ಪರವಾನಿಗೆಯನ್ನು ನೀಡಲಾಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ಕಲ್ಲು ಗಣಿಗಾರಿಕೆಗೆ ಅವಕಾಶ ನೀಡಲಾಗುವುದು.

ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಅಭಿವೃದ್ಧಿ ಕಾಮಗಾರಿಗಳಿಗೆ ಬೇಕಾಗುವ ಜಲ್ಲಿ, ಮರಳು ಇತ್ಯಾದಿಗಳ ಅವಶ್ಯಕತೆಯನ್ನು ಗಮನದಲ್ಲಿ ಇಟ್ಟುಕೊಂಡು ಲೋಕೋಪಯೋಗಿ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಇವರುಗಳಿಗೆ ಪ್ರತಿ ತಾಲ್ಲೂಕಿನಲ್ಲಿ 2 ರಿಂದ 3 ಕ್ವಾರಿಗಳನ್ನು ನಡೆಸಲು ಅರಣ್ಯ (ಸಂರಕ್ಷಣೆ) ಕಾಯ್ದೆ 1980ರನ್ವಯ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆದು ಅನುಮತಿ ನೀಡಬಹುದೆಂದು ಹಾಗೂ ಉಪಯೋಗಿ ಸಂಸ್ಥೆಯಿಂದ ನಿಯಮಾನುಸಾರ NPV ಮೊತ್ತವನ್ನು ಪಾವತಿಸಿಕೊಳ್ಳುವಂತೆ ಮತ್ತು ಈ ಕ್ವಾರಿಗಳನ್ನು 5 ವರ್ಷಗಳವರೆಗೆ ಗುತ್ತಿಗೆಯನ್ನು ನೀಡಿ ತದನಂತರ ನವೀಕರಣ ಮಾಡಬಹುದೆಂದು ದಿನಾಂಕ: 16–01–2010 ರಂದು ತೀರ್ಮಾನಿಸಲಾಗಿದೆ.

ಜಿಲ್ಲಾಧಿಕಾರಿಗಳು, ಕಾರವಾರ ರವರು, ಕ್ವಾರಿಗಳನ್ನು ನಡೆಸಲು ಉತ್ತರ ಕನ್ನಡ ಜಿಲ್ಲೆಯಲ್ಲಿ 5 ತಾಲ್ಲೂಕುಗಳನ್ನು ಗುರ್ತಿಸಿರುತ್ತಾರೆ ಮತ್ತು ಇನ್ನು 4 ತಾಲ್ಲೂಕುಗಳಲ್ಲಿ ಗುರ್ತಿಸಿ ಕೂಡಲೇ ಸಲ್ಲಿಸುವುದಾಗಿ ತಿಳಿಸಿರುತ್ತಾರೆ. ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆ ಬಂದಲ್ಲಿ ಅರ್ಜಿಗಳನ್ನು ಪರಿಶೀಲಿಸಿ ಹಾಗೂ ಹಳಿಯಾಳ ಮತ್ತು ಜೋಯಿಡಾ ತಾಲ್ಲೂಕುಗಳ ಉಪಯೋಗಿ ಸಂಸ್ಥೆಗಳು ಕ್ವಾರಿಗಳನ್ನು ನಡೆಸಲು ಅರ್ಜಿಗಳನ್ನು ಸಲ್ಲಿಸಿದಲ್ಲಿ ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಅಡಿಯಲ್ಲಿ ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಸರ್ಕಾರದ ಅಭಿವೃದ್ಧಿ ಕಾಮಗಾರಿಗಳಿಗೆ ಅವಶ್ಯವಿರುವ ಕಲ್ಲು, ಜಲ್ಲಿ, ಮರಳು ಇತ್ಯಾದಿ ಸಾಮಗ್ರಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು. ಮಾನ್ಯ ಸುನೀಲ್ ಹೆಗಡೆಯವರು ಈ ವಿಷಯವನ್ನು ಮೊದಲು ಪ್ರಸ್ತಾಪ ಮಾಡಿದ್ದಾರೆ. ಈಗ ಮತ್ತೊಂದು ಸಾರಿ ಸರ್ಕಾರದಿಂಧ ಉತ್ತರವನ್ನು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಸುನೀಲ್ ವಿ. ಹೆಗಡೆ : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಇವತ್ತು ಮತ್ತೊಮ್ಮೆ ಸರ್ಕಾರದ ಗಮನ ಸೆಳೆಯಲು ಕಾರಣವೇನೆಂದರೆ, ಕಳೆದ ಒಂದು ತಿಂಗಳಿನಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಇಡೀ ಅರಣ್ಯ ಇಲಾಖೆಯವರು ಎಲ್ಲೆಲ್ಲಿ ಕ್ವಾರಿಗಳನ್ನು ಮಾಡಿದ್ದಾರೆ, ಎಲ್ಲೆಲ್ಲಿ ನಮ್ಮ hot mix plant ಗಳು ಇವೆ. ಈಗಾಗಲೇ ಕಲ್ಲಿಗೆ royalty ತುಂಬಿ ಕಲ್ಲನ್ನು stock

ಮಾಡಿದ್ದಾರೆ, ಆ ಜಲ್ಲಿಯನ್ನು ಸಹ ಉಪಯೋಗ ಮಾಡುವುದಕ್ಕೆ ಕೊಡದೇ ಬೆಳಿಗ್ಗೆ ಎದ್ದ ತಕ್ಷಣ ಕ್ವಾರಿಗಳ ಮುಂದೆ Forester ಗಳು, Ranger ಗಳು, ಹೋಗಿ ಕುಳಿತು ಗಾಡಿಗಳನ್ನು ಹಿಡಿದು cease ಮಾಡಿ, ಇಡೀ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ತಿಂಗಳಿಂದ ಯಾವುದೇ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಸರ್ಕಾರ ಇಡೀ ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ಬಿಡುಗಡೆ ಮಾಡುತ್ತಿದೆ. ಅಲ್ಲಿ ಅಭಿವೃದ್ಧಿ ಆಗುತ್ತಿಲ್ಲ. ಮಾರ್ಚ್ 31ನೇ ತಾರೀಖಿಗೆ ಅಭಿವೃದ್ಧಿ ಕೆಲಸಗಳು ಆಗಲಿಲ್ಲವೆಂದರೆ ಎಲ್ಲಾ ಅಭಿವೃದ್ಧಿ ಕೆಲಸಗಳು ಆಗಲಿಲ್ಲವೆಂದರೆ ಎಲ್ಲಾ ದುಡ್ಡು lapse ಆಗುತ್ತದೆ. ನಾನು ಹೇಳುವುದೇನೆಂದರೆ ಅರಣ್ಯ ಇಲಾಖೆ ಎಲ್ಲಾ Ranger ಗಳ ಸಂಬಳ Conservator ಗಳ ಸಂಬಳ, ಎಲ್ಲವನ್ನು ರಾಜ್ಯ ಸರ್ಕಾರ ಕೊಡುವುದು. ರಾಜ್ಯ ಸರ್ಕಾರ ಹಣವನ್ನು invest ಮಾಡುತ್ತದೆ, ಕೇಂದ್ರ ಸರ್ಕಾರವನ್ನು ತೋರಿಸುವುದು. ಗೋವಾ ರಾಜ್ಯದಲ್ಲಿ ಯಾವುದೇ ರೀತಿಯ restrictions ಇಲ್ಲ, ಮಹಾರಾಷ್ಟ್ರದಲ್ಲೂ ಯಾವುದೇ restrictions ಇಲ್ಲ. ಅರಣ್ಯ ಇಲಾಖೆಯವರು ಕೇವಲ ಉತ್ತರ ಕನ್ನಡ ಜಿಲ್ಲೆಗೆ ಮಾತ್ರ ಈ restrictions ಅನ್ನು ತರುತ್ತಿದ್ದಾರೆ. ಇದೇ ರೀತಿ ಆಗುತ್ತಾ ಹೋದರೆ ಹಲವಾರು ಕುಟುಂಬಗಳು, ಹಲವಾರು ಅಭಿವೃದ್ಧಿ ಕಾರ್ಯಗಳು ನಿಲ್ಲುತ್ತವೆ. ಈಗ ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ 0.5 ಹೆಕ್ಟೇರ್ ಜಮೀನನ್ನು ಗಣಿಗಾರಿಕೆಗೆ ಇಡುತ್ತೇವೆ. ಇದನ್ನು ಲೋಕೋಪ ಯೋಗಿ ಮತ್ತು national ನವರಿಗೆ ಕೊಡುತ್ತೇವೆಂದರೆ, ಇದು ಖಂಡಿತ ವಾಗಿಯೂ ಮುಂದಿನ ದಿವಸಗಳಲ್ಲಿ ಜಾರಿಗೆ ಬರುವುದಕ್ಕೆ ಸಾಧ್ಯವಿಲ್ಲ. ಇದರಿಂದ ಸಾಮಾನ್ಯ ಜನರಿಗೆ, ಮಧ್ಯಮ ವರ್ಗದ ಜನ, ಬಡ ಜನ ಆಶ್ರಯ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ, private ಮನೆಗಳನ್ನು ಕಟ್ಟಿಕೊಳ್ಳುತ್ತಾರೆ, private buildingsಗಳನ್ನು ಕಟ್ಟಿಕೊಳ್ಳುತ್ತಾರೆ, ಅವರಿಗೆ ಎಲ್ಲಾ ರೀತಿಯ ತೊಂದರೆಗಳು ಆಗುವ ಸಾಧ್ಯತೆಗಳು ಇವೆ. ಇದರಲ್ಲಿ ಭ್ರಷ್ಟಾಚಾರ ದೊಡ್ಡ ಪ್ರಮಾಣದಲ್ಲಿ ನಡೆಯುವಂಥ ಸಾಧ್ಯತೆಗಳು ಇವೆ. ದಯವಿಟ್ಟು ಈ ಕೂಡಲೇ ಒಂದು ಗಂಟೆಯ ಅವಧಿಯಲ್ಲಿ ಇದನ್ನು ಬಗೆಹರಿಸಲು ಸಾಧ್ಯ. ಇದರಲ್ಲಿ ಲೋಕಾಯುಕ್ತ ಇಲಾಖೆಯವರು interefere ಆಗಿದ್ದಾರೆ. ಅರಣ್ಯ ಇಲಾಖೆ ಯವರು ಏಕೆ ಹೆದರುತ್ತಿದ್ದಾರೆಂದರೆ, ನಾಳೆ ದಿವಸ ಲೋಕಾಯುಕ್ತದವರು ನಮ್ಮನ್ನು suspend ಮಾಡುತ್ತಾರೆಂದು ಹೇಳುತ್ತಾರೆ. ಈಗಾಗಲೇ

ಯಲ್ಲಾಪುರದಲ್ಲಿ ಒಬ್ಬ DFO ಯವರು suspension stage ನಲ್ಲಿದ್ದಾರೆ. ಹೀಗಾಗಿ ಬಹಳಷ್ಟು ಜನ ಅಧಿಕಾರಿಗಳು ಇದಕ್ಕೆ ಸಹಕಾರ ಕೊಡುತ್ತಿಲ್ಲ. ನಾವು ಈ ವಿಷಯವನ್ನು ಸನ್ಮಾನ್ಯ ಉಸ್ತುವಾರಿ ಸಚಿವರಿಗೂ ಹೇಳಿದ್ದೇವೆ. ದಯವಿಟ್ಟು ಲೋಕಾಯುಕ್ತರಾದ ಶ್ರೀ ಸಂತೋಷ್ ಹೆಗ್ಡೆಯವರಿಗೆ convince ಮಾಡಿ, ಈಗ ಎಲ್ಲೆಲ್ಲಿ stock ಇವೆ, ಎಲ್ಲೆಲ್ಲಿ ಗಣಿಗಳಲ್ಲಿ stock ಇವೆ. ಈಗ ಹೊಸದನ್ನು ತೆಗೆದುಕೊಳ್ಳುವುದಕ್ಕೆ ಹೊಸ ಕಾಯಿದೆಯನ್ನು ಮಾಡಿ, ಹೊಸ ಗಣಿಗಾರಿಕೆ ನೀತಿಯನ್ನು ತೆಗೆದುಕೊಂಡು ಬನ್ನಿ, ಅದರ ಪ್ರಶ್ನೆ ಇಲ್ಲ. ಆದರೆ ಈಗಾಗಲೇ ಎಲ್ಲೆಲ್ಲಿ stock ಮಾಡಿ ಇಟ್ಟುಕೊಂಡಿದ್ದಾರೆ, ಎಲ್ಲೆಲ್ಲಿ ಕೆಲಸ stop ಆಗಿದೆ. ಅದನ್ನು immediate ಆಗಿ ಬಿಡುಗಡೆ ಮಾಡಿದರೆ, ಮುಂದಿನ ಕಾಮಗಾರಿಯನ್ನು ತೆಗೆದುಕೊಳ್ಳಲು ಆಗುತ್ತದೆ. ದಯವಿಟ್ಟು ಸರ್ಕಾರ ಇದಕ್ಕೆ ಉತ್ತರವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ದಿನಕರ ಶೆಟ್ಟಿ (ಕುಮಟಾ) : ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವಾರದ ಹಿಂದೆ ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಬಂದಿದೆ. ಆದರೆ ಆ ಉತ್ತರ ಬಂದ ನಂತರ ಇಲ್ಲಿಯವರೆಗೂ ನಮ್ಮ ಜಿಲ್ಲೆಯಲ್ಲಿ ಎಲ್ಲೂ ಸಹ ಕಲ್ಲಿನ ಕ್ವಾರಿಗಳನ್ನು ಪ್ರಾರಂಭ ಮಾಡಿಲ್ಲ, ಮತ್ತು ರಸ್ತೆ ಕಾಮಗಾರಿಗಳು ನಿಂತಿದೆ. ಮಾನ್ಯ ಮುಖ್ಯಮಂತ್ರಿಯವರ ಉತ್ತರದಿಂದ ಯಾವುದೇ ಕೆಲಸಗಳು ಆಗುತ್ತಾ ಇಲ್ಲ. ಅದಕ್ಕಾಗಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ನೀಡುವಂಥ ಪ್ರಸ್ತಾಪ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಜೆ.ಡಿ.ನಾಯಕ್ (ಭಟ್ಕಳ) : ಮಾನ್ಯ ಅಧ್ಯಕ್ಷರೆ, ಈಗ ಜಾಸ್ತಿ minor forest ನಲ್ಲಿ ಮಾಡುತ್ತಿದ್ದಾರೆ. Reserve forest ನಲ್ಲಿ ಮಾಡುತ್ತಿಲ್ಲ. ಮಾಡುತ್ತಿದ್ದಾರೆ. ಈಗ ಹಲವಾರು ವರ್ಷಗಳಿಂದ ಮಾಡಿಕೊಂಡು ಬರುತ್ತಿದೆ. ನಮ್ಮಲ್ಲಿ 70% forest ಇರುವಂಥದ್ದು, 30% revenue land ಇರುವಂಥದ್ದು. Minor forest ನಲ್ಲಿ ಕ್ವಾರಿ ಮಾಡದಿದ್ದರೆ ನಾವು ಏನು development ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಮಾರ್ಚ್‌ನಲ್ಲಿ ಬಹಳ ತೊಂದರೆಯಾಗಿದೆ. ಸುಮಾರು ಎರಡು ತಿಂಗಳುಗಳಿಂದ ಮಾನ್ಯ ಸುನೀಲ್ ಹೆಗಡೆಯವರು ಹೇಳಿದ ಹಾಗೆ ಎಲ್ಲಾ ಕ್ವಾರಿಗಳು ಜಿಲ್ಲೆಯಲ್ಲಿ ಬಂದ್ ಆಗಿವೆ. ಅದಕ್ಕಾಗಿ ಸರ್ಕಾರ ಅಧಿಕಾರಿಗಳ ಮೇಲೆ ಒತ್ತಡ ತರುವಂಥ ಕೆಲಸ ಮಾಡಬೇಕಾಗಿದೆ.

ಶ್ರೀ ವಿ.ಎಸ್.ಪಾಟೀಲ(ಯಲ್ಲಾಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಂತೋಷ್ ಹೆಗ್ಡೆಯವರು 200 ಕೋಟಿ ರೂಪಾಯಿಗಳು ಲಾಸ್ ಆಗುತ್ತಿದೆ. ಅದಕ್ಕಾಗಿ ನಾವು ಎಲ್ಲಾ ಕ್ವಾರಿಗಳನ್ನು ಬಂದ್ ಮಾಡಿದ್ದೇವೆಂಬ ವಿಚಾರವನ್ನು ಹೇಳಿದರು. ಮಾನ್ಯ ಉದಾಸಿಯವರು ಇಲ್ಲೇ ಇದ್ದಾರೆ. ಅವರು ಏನು royalty ತೆಗೆದುಕೊಳ್ಳುತ್ತಾರೊ, ಅದನ್ನು Forest Departmentಗೆ ತುಂಬುವಂಥ ವ್ಯವಸ್ಥೆ ಆದರೆ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸುನೀಲ್ ಹೆಗಡೆಯವರು ಮತ್ತು ಇನ್ನಿತರ ಶಾಸಕರು ಕೆಲವೊಂದು ವಿಚಾರಗಳನ್ನು ಹೇಳಿದ್ದಾರೆ. ಈ ವಿಷಯವಾಗಿ ಹಿಂದಿನ ಸದನದಲ್ಲೂ ಉತ್ತರ ಕೊಡಲಾಗಿತ್ತು. ಅದು ಆದ ಮೇಲೂ ಇನ್ನೂ ಏನು ಕ್ರಮ ಕೈಗೊಂಡಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ಈಗ ಮಾನ್ಯ ಶಾಸಕರು ತಮ್ಮ ವಿಚಾರಗಳನ್ನು ಹೇಳಿದ್ದಾರೆ, ಅದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಚರ್ಚೆ ಮಾಡಿ, ಅವರಿಗೆ ಇನ್ನು ಹೆಚ್ಚಿನ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಂಡು ಸರ್ಕಾರ ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗೆ ಅವಶ್ಯವಿರುವ ಕಲ್ಲು, ಜಲ್ಲಿ, ಮರಳು, ಇತ್ಯಾದಿ ಸಾಮಗ್ರಿಗಳಿಗೆ ತೊಂದರೆಯಾಗದಂತೆ, ಈ ಬಗ್ಗೆ ಅಧಿಕಾರಿಗಳಿಗೆ ಏನು direction ಕೊಡಬೇಕು, ಸೂಚನೆಗಳನ್ನು ಕೊಡಬೇಕು, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಆ direction ಅನ್ನು ನಾನು ಕೊಡಿಸುತ್ತೇನೆ.

ಶ್ರೀ ಸುನೀಲ್ ವಿ. ಹೆಗಡೆ : ಮಾನ್ಯ ಅಧ್ಯಕ್ಷರೆ, ಈಗ ಗಣಿಗಳಲ್ಲಿ stock ಏನು ಇದೆ. ಅದನ್ನಾದರೂ ಈಗ ಬಿಡುಗಡೆ ಮಾಡಿದರೆ ಎರಡು ತಿಂಗಳು ಕೆಲಸ ನಡೆಯುತ್ತದೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಸೂಚನೆ ಕೊಡುತ್ತಾರೆ, ಅರಣ್ಯ ಇಲಾಖಾಧಿಕಾರಿಗಳಿಗೆ ಹೇಳಿ.

IV ವಿಷಯ : ರಾಜ್ಯದಲ್ಲಿ ನೆಮ್ಮದಿ ಕೇಂದ್ರಗಳಿಂದ ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆಯ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನೆಮ್ಮದಿ ಕೇಂದ್ರಗಳಿಂದ ರೈತಾಪಿ ಜನಗಳಿಗೆ ಮತ್ತು ಸಾರ್ವಜನಿಕರಿಗೆ ಆಗುತ್ತಿರುವಂಥ ತೊಂದರೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರಾದ ಶಿವಲಿಂಗೇಗೌಡರು ರಾಜ್ಯದಲ್ಲಿ ನೆಮ್ಮದಿ ಕೇಂದ್ರಗಳಿಂದ ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ಸಂಬಂಧವಾಗಿ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಹೇಳಿಕೆಯನ್ನು ಕೊಡುತ್ತಿದ್ದೇನೆ.

1. ನೆಮ್ಮದಿ – ಕರ್ನಾಟಕ ಟೆಲಿಸೆಂಟರ್ ಯೋಜನೆಯು, ಗ್ರಾಮೀಣ ಜನರಿಗೆ ಹೋಬಳಿ ಮಟ್ಟದಲ್ಲಿ, ಸರ್ಕಾರಿ ಸೇವೆಗಳನ್ನು ತಲುಪಿರುವ ಯೋಜನೆಯಾಗಿದೆ. ಈ ಯೋಜನೆಯಡಿ ಒಟ್ಟು 799 ಟೆಲಿಸೆಂಟರ್‌ಗಳನ್ನು ಹೋಬಳಿ ಮಟ್ಟದಲ್ಲಿ ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗಿದೆ. ನಾಗರೀಕ ಸೇವೆಗಳಿಗಾಗಿ ಬರುವ ಕೋರಿಕೆಗಳನ್ನು ತಾಲ್ಲೂಕು ಮಟ್ಟದಲ್ಲಿ ಪ್ರಕ್ರಿಯೆಗೊಳಿಸಲು 203 ತಾಲ್ಲೂಕುಗಳು ಮತ್ತು ವಿಶೇಷ ತಾಲ್ಲೂಕುಗಳಲ್ಲಿ ಹಿಂಬದಿ ಕಛೇರಿಗಳು (Back Officers) ಕಾರ್ಯೋನ್ಮುಖವಾಗಿವೆ. ಎಲ್ಲಾ ಟೆಲಿಸೆಂಟರ್‌ಗಳಲ್ಲಿ ಸರ್ಕಾರ–ನಾಗರೀಕ ಸೇವೆಗಳಾದ ಭೂದಾಖಲೆ, ಮ್ಯುಟೇಷನ್, ಜನನ–ಮರಣ ಪ್ರಮಾಣ ಪತ್ರಗಳು ಇತ್ಯಾದಿಗಳನ್ನು ವಿತರಣೆ ಮಾಡಲಾಗುತ್ತಿದೆ.

2. ಸಾಧನೆಗಳು :

- ಅಕ್ಟೋಬರ್ 2006ರಿಂದ ಫೆಬ್ರವರಿ 2010ರ ವರೆಗೆ 153.93 ಲಕ್ಷ ಸಂಖ್ಯೆಯ ಪಹಣಿ ಪತ್ರಿಕೆ / ಮ್ಯುಟೇಷನ್ ದಾಖಲಾತಿಗಳು ನೆಮ್ಮದಿ ಕೇಂದ್ರಗಳ ಮೂಲಕ ನಾಗರಿಕರಿಗೆ ವಿತರಿಸಲ್ಪಟ್ಟಿವೆ.
- ಕೇವಲ 2 ನಿಮಿಷಗಳ ಅವಧಿಯಲ್ಲಿ ಗ್ರಾಮೀಣ ಜನರು ನೆಮ್ಮದಿ ಕೇಂದ್ರಗಳ ಮೂಲಕ ತಮ್ಮ ಭೂ ದಾಖಲೆಗಳನ್ನು ಪಡೆಯ ಬಹುದಾಗಿದೆ.
- ಅಕ್ಟೋಬರ್ 2006ರಿಂದ ಫೆಬ್ರವರಿ 2010ರ ವರೆಗೆ 108.49 ಲಕ್ಷ ಸಂಖ್ಯೆಯ ಆರ್‌ಡಿಎಸ್ ಪ್ರಮಾಣ ಪತ್ರಗಳನ್ನು (ಮುಖ್ಯವಾಗಿ ಜಾತಿ, ವರಮಾನ, ವಾಸಸ್ಥಳ, ಕೃಷಿ ಕಾರ್ಮಿಕ ದೃಢೀಕರಣ ಪತ್ರ,

ಜಮೀನು ಹಿಡುವಳಿ ಪತ್ರ ಇತ್ಯಾದಿ) ನೆಮ್ಮದಿ ಕೇಂದ್ರಗಳ ಮೂಲಕ ನಾಗರೀಕರಿಗೆ ವಿತರಿಸಲಾಗಿದೆ. ಅನುಬಧವನ್ನು ಲಗತ್ತಿಸಲಾಗಿದೆ.

- ಆರ್‌ಡಿಎಸ್ ಪ್ರಮಾಣ ಪತ್ರಗಳು ಡಿಜಿಟಲ್ ಸಹಿಯನ್ನು ಹೊಂದಿದ್ದು, ಕಾನೂನು ಮಾನ್ಯತೆಯನ್ನು ಪಡೆದಿವೆ.
- ನೆಮ್ಮದಿ ಕೇಂದ್ರಗಳ ಸ್ಥಾಪನೆಯಿಂದಾಗಿ ಗ್ರಾಮೀಣ ಭಾಗದ ಜನರು ತಮಗೆ ಅಗತ್ಯವಾಗಿರುವ ಪ್ರಮಾಣ ಪತ್ರಗಳನ್ನು ಪಡೆಯಲು ದೂರದ ತಾಲ್ಲೂಕು ಕಛೇರಿಗೆ ಹೋಗುವ ತೊಂದರೆಯಿಲ್ಲದೇ ತಮಗೆ ಸಮೀಪ ಇರುವ ನೆಮ್ಮದಿ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗಿರುವುದರಿಂದ, ಅವರಿಗೆ ಗಣನೀಯ ಪ್ರಮಾಣದ ವೇಳೆ ಮತ್ತು ಹಣದ ಉಳಿತಾಯವಾಗಿರುತ್ತದೆ.

3. **ತೊಂದರೆಗಳು ಮತ್ತು ಅವುಗಳ ನಿವಾರಣೆ :** ನೆಮ್ಮದಿ ಕೇಂದ್ರಗಳ ಸುಗಮ ಕಾರ್ಯ ನಿರ್ವಹಣೆಗೆ ಮುಖ್ಯವಾಗಿ ತೊಡಕಾಗಿರುವುದು ನಿರಂತರ ವಿದ್ಯುತ್ ಸರಬರಾಜು. ಕೆಲವು ಕೇಂದ್ರಗಳಲ್ಲಿ ನುರಿತ ಆಪರೇಟರ್‌ಗಳ ಕೊರತೆ, ಇಂಟರ್‌ನೆಟ್ ಕನೆಕ್ಟಿವಿಟಿ, ಲೇಖನಾ ಸಾಮಗ್ರಿಗಳು, ಪ್ರಿಂಟರ್ ಕಾಟ್ರಿಡ್ಜ್ ಮುಂತಾದ ಮೂಲಭೂತ ಸೌಕರ್ಯಗಳ ಕೊರತೆಗಳು ಇವೆಯೆಂದು ಇಲಾಖೆಯ ಗಮನಕ್ಕೆ ಬಂದಿದ್ದು ಅವುಗಳನ್ನು ನಿವಾರಿಸಲು ಹಾಗೂ ನೆಮ್ಮದಿ ಕೇಂದ್ರಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸಲು ಅನುವಾಗಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:–

(1) ನಿರಂತರ ವಿದ್ಯುತ್ ಸರಬರಾಜಿಗಾಗಿ ತೆಗೆದುಕೊಂಡಿರುವ ಕ್ರಮಗಳು :

i) ಎಲ್ಲಾ ನೆಮ್ಮದಿ ಕೇಂದ್ರಗಳಿಗೂ ಯುಪಿಎಸ್‌ಗಳನ್ನು ಅಳವಡಿಸಲಾಗಿದೆ.

ii) ಅಧಿಕ ಕಾರ್ಯ ಒತ್ತಡವಿರುವ 201 ಟೆಲಿಸೆಂಟರ್‌ಗಳಿಗೆ ಜನರೇಟರ್‌ಗಳನ್ನು ಒದಗಿಸಲಾಗಿದೆ.

iii) 422 ಟೆಲಿಸೆಂಟರ್‌ಗಳಲ್ಲಿ ಹೊಸದಾದ ಅಧಿಕ ವಿದ್ಯುಚ್ಛಕ್ತಿ ನೀಡುವ ಸಾಮರ್ಥ್ಯವುಳ್ಳ ಬ್ಯಾಟರಿಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗಿದೆ.

iv) ನೆಮ್ಮದಿ ಕೇಂದ್ರಗಳಲ್ಲಿ ವಿದ್ಯುತ್ ಸುಧಾರಣೆಗಾಗಿ ಕ್ರಮ ಕೈಗೊಳ್ಳಲು ಪ್ರಾಯೋಗಿಕವಾಗಿ ರಾಜ್ಯದ ತೀರಾ ಹಿಂದುಳಿದ ಜಿಲ್ಲೆಗಳಲ್ಲಿರುವ

10 ನೆಮ್ಮದಿ ಕೇಂದ್ರಗಳಿಗೆ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗಿದೆ.

(2) ಜಿಲ್ಲಾಧಿಕಾರಿಗಳಿಗೆ ನೆಮ್ಮದಿ ಕೇಂದ್ರಗಳ ಮೇಲ್ವಿಚಾರಣೆಗಾಗಿ ಹೆಚ್ಚಿನ ಅಧಿಕಾರವನ್ನು ನೀಡಿರುವುದು;

i) ದಿನಾಂಕ: 05.12.2009ರ ಸರ್ಕಾರಿ ಆದೇಶ ಸಂ: ಡಿಪಿಎಆರ್ 148 ಇಜಿವಿ 2009ರನ್ವಯ ಜಿಲ್ಲಾಮಟ್ಟದ ಸಮನ್ವಯ ಸಮಿತಿಯನ್ನು ಪುನರ್ ರಚಿಸಲಾಗಿದೆ ಹಾಗೂ ಜಿಲ್ಲೆಯ ನೆಮ್ಮದಿ ಕೇಂದ್ರಗಳ ಸಂಪೂರ್ಣ ನಿರ್ವಹಣಾ ಜವಾಬ್ದಾರಿಯನ್ನು ಆಯಾಯ ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.

ii) ಆಯಾ ಜಿಲ್ಲೆಯ ನೆಮ್ಮದಿ ಕೇಂದ್ರಗಳ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಆಡಳಿತಾತ್ಮಕ ಮತ್ತು ಹಣಕಾಸಿನ ಅಧಿಕಾರವನ್ನು ಕೂಡಾ ನೀಡಲಾಗಿದೆ.

iii) ಯೋಜನೆಯ ಪಾಲುದಾರರು ತೊಡಗಿಸಿದ ಜನರನ್ನು ದುರ್ನಡತೆ, ಸಾರ್ವಜನಿಕ ದೂರು, ಅಸಮರ್ಪಕ ಕಾರ್ಯನಿರ್ವಹಣೆ ಇತ್ಯಾದಿ ಕಾರಣಗಳಿಗಾಗಿ ಬದಲಾಯಿಸುವ ಸಂಪೂರ್ಣ ಅಧಿಕಾರವನ್ನು ಜಿಲ್ಲಾ ಸಮನ್ವಯ ಸಮಿತಿಗೆ ನೀಡಲಾಗಿದೆ.

iv) ನೆಮ್ಮದಿ ಕೇಂದ್ರಗಳಲ್ಲಿ ಕೆಲಸದ ಒತ್ತಡ ಇದ್ದಂತಹ ಸಂದರ್ಭಗಳಲ್ಲಿ, ಹೆಚ್ಚಿನ ಜನರನ್ನು ತೊಡಗಿಸಲು ಖಾಸಗಿ ಪಾಲುದಾರರಿಗೆ ಸೂಚಿಸಬಹುದಾಗಿದ್ದು, ಅದರಂತೆ ಪಾಲುದಾರರು ಕ್ರಮಕೈಗೊಳ್ಳದಿದ್ದಲ್ಲಿ, ಸ್ಥಳೀಯರನ್ನು ತಾತ್ಕಾಲಿಕವಾಗಿ ಆಪರೇಟರ್‌ಗಳಾಗಿ ತೊಡಗಿಸುವ ಅಧಿಕಾರವನ್ನು ಜಿಲ್ಲಾ ಸಮನ್ವಯ ಸಮಿತಿಗೆ ನೀಡಲಾಗಿದೆ.

v) ಜಿಲ್ಲೆಯ ನೆಮ್ಮದಿ ಕೇಂದ್ರಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಪಡೆಯುವ ಪೂರ್ಣ ಅಧಿಕಾರವನ್ನು ಜಿಲ್ಲಾ ಸಮನ್ವಯ ಸಮಿತಿಗೆ ನೀಡಲಾಗಿದೆ.

(3) ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ :

i) ನೆಮ್ಮದಿ ಕೇಂದ್ರಗಳಲ್ಲಿ ವಿದ್ಯುಚ್ಛಕ್ತಿ, ನೀರು, ಲೇಖನ ಸಾಮಗ್ರಿ ದಾಸ್ತಾನು, ಇಂಟರ್‌ನೆಟ್ ಕನೆಕ್ಟಿವಿಟಿ ಇನ್ನಿತರೆ ಯಾವುದೇ ಮೂಲಭೂತ

ಸೌಕರ್ಯಗಳ ಕೊರತೆ ನೀಗಿಸುವ ಸಲುವಾಗಿ ಪ್ರತಿ ಜಿಲ್ಲಾಧಿಕಾರಿಗಳಿಗೆ ತಲಾ 2.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ii) ಮಾಹೆಯಾನ ನೆಮ್ಮದಿ ಉಸ್ತುವಾರಿ ಕೋಶ ಸ್ವೀಕರಿಸುವ ಆರ್‌ಟಿಸಿ, ಆರ್‌ಡಿಎಸ್ ವಹಿವಾಟಿನ ಸಂಪೂರ್ಣ ಹಣವನ್ನು ಜಿಲ್ಲಾಧಿಕಾರಿಗಳಿಗೆ ಸಮನಾಗಿ ಹಂಚಲು ಆಸ್ಪದ ಕಲ್ಪಿಸಲಾಗಿದೆ.

(4) ನೆಮ್ಮದಿ ಕೇಂದ್ರಗಳ ಆಪರೇಟರ್‌ಗಳ ಸಾಮರ್ಥ್ಯ ಪರೀಕ್ಷೆ:

i) ನೆಮ್ಮದಿ ಕೇಂದ್ರಗಳ ಆಪರೇಟರ್‌ಗಳಿಗೆ ಆಯಾಯ ಯೋಜನೆಯಲ್ಲಿ ಲಭ್ಯವಿರುವ ಸೇವೆಗಳ ಮಾಹಿತಿಯನ್ನು ತಿಳಿಯಲು ಆಗಿಂದಾಗ್ಗೆ ಆನ್‌ಲೈನ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ii) ಇದಲ್ಲದೆ ಆಪರೇಟರ್‌ಗಳಿಗಿರುವ ತಾಂತ್ರಿಕ ಮತ್ತು ಆಡಳಿತಾತ್ಮಕ ಸಾಮರ್ಥ್ಯವನ್ನು ತಿಳಿಯಲು ಕಂದಾಯ ಇಲಾಖೆಯ ತಹಶೀಲ್ದಾರ್‌ಗಳ ಉಸ್ತುವಾರಿಯಲ್ಲಿ, ನೇರ ಪರೀಕ್ಷೆಯಲ್ಲಿ ನಡೆಸಲು ಕ್ರಮ ಕೈಗೊಳ್ಳಲಾಗಿದೆ.

(5) ನೆಮ್ಮದಿ ಕೇಂದ್ರಗಳ ಕಾರ್ಯನಿರ್ವಹಣೆಯ ಬಗ್ಗೆ ನಿರಂತರ ಪರಿಶೀಲನೆ:

i) ನೆಮ್ಮದಿ ಕೇಂದ್ರಗಳ ಉಸ್ತುವಾರಿಗೆಂದೇ ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಯನ್ನು ನೇಮಿಸುವಂತೆ ಜಿಲ್ಲಾಧಿಕಾರಿಗಳಿಗೆ ದಿನಾಂಕ: 24.10.2009ರ ಸುತ್ತೋಲೆ ಸಂ:ಇಡಿಸಿಎಸ್/ಎನ್‌ಎಂಸಿ/02/ ಆರ್‌ಇವಿ/ 2009ರ ಅನ್ವಯ ಸೂಚಿಸಲಾಗಿದೆ.

ii) ನೆಮ್ಮದಿ ಕೇಂದ್ರಗಳ ಕಾರ್ಯನಿರ್ವಹಣೆ ಕುರಿತು ಎಲ್ಲಾ ವಿಭಾಗಾಧಿಕಾರಿಗಳು/ ಜಿಲ್ಲಾಧಿಕಾರಿಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಇ-ಆಡಳಿತ) ಇವರ ನೇತೃತ್ವದಲ್ಲಿ ವಿಡಿಯೋ ಕಾನ್‌ಫರೆನ್ಸ್ ನಡೆಸಲಾಗುತ್ತಿದೆ.

4. ನೆಮ್ಮದಿ ಯೋಜನೆಯಡಿ ನೀಡುತ್ತಿರುವ ಸೇವೆಗಳು ತಾಲ್ಲೂಕು ಕಛೇರಿಯಿಂದ ಗ್ರಾಮೀಣ ಟೆಲಿಸೆಂಟರ್‌ವರೆಗೆ ಆಗಿರುವ ನಿಜವಾದ ಆಡಳಿತ ವಿಕೇಂದ್ರಿಕರಣವಾಗಿರುವುದರಿಂದ ಇದೊಂದು ಮಹತ್ವದ ಯೋಜನೆಯಾಗಿದೆ.

ಅನುಬಂಧ

ಅಕ್ಟೋಬರ್ 2006 ರಿಂದ ಫೆಬ್ರವರಿ 2010ರ ಅಂತ್ಯದ ವರೆಗೆ ನೆಮ್ಮದಿ ಕೇಂದ್ರಗಳಲ್ಲಿ ವಿತರಿಸಲಾಗಿರುವ ಪ್ರಮಾಣ ಪತ್ರಗಳ ವಿವರ

ಕ್ರಮ ಸಂಖ್ಯೆ	ಸೇವೆಗಳು	ಸಂಖ್ಯೆ
1	ಜನನ ಪ್ರಮಾಣ ಪತ್ರ	7072
2	ಸಾಲ ತೀರಿಸುವ ಶಕ್ತಿ ಪ್ರಮಾಣ ಪತ್ರ	776
3	ವ್ಯವಸಾಯಗಾರ ದೃಢೀಕರಣ ಪತ್ರ	16526
4	ಗೇಣಿ ರಹಿತ ದೃಢೀಕರಣ ಪತ್ರ	42058
5	ಮರಣ ನೋಂದಣಿ	9911
6	ನಿರ್ಗತಿಕ ವಿಧವಾ ವೇತನ	365085
7	ಸರ್ಕಾರಿ ನೌಕರಿ ಇಲ್ಲದಿರುವ ಬಗ್ಗೆ ಪ್ರಮಾಣ ಪತ್ರ	4137
8	ಆದಾಯ ದೃಢೀಕರಣ ಪತ್ರ (ಅನುಕಂಪದ ಆಧಾರದ ನೇಮಕಾತಿಗೆ)	6702
9	ಸಣ್ಣ/ಅತೀಸಣ್ಣ ಹಿಡುವಳಿದಾರ ಪ್ರಮಾಣ ಪತ್ರ	82954
10	ಸಂಧ್ಯಾ ಸುರಕ್ಷಾಯೋಜನೆ	746865
11	ವೃದ್ಧಾಪ್ಯ ವಿರಾಮ ವೇತನ	184965
12	ಮರಣ ಪ್ರಮಾಣ ಪತ್ರ	17852
13	ಅಸಿಂಧು	1
14	ವಾಸಸ್ಥಳ ಪ್ರಮಾಣ ಪತ್ರ	325868
15	ಬೋನಫೈಡ್ ದೃಢೀಕರಣ ಪತ್ರ	21954
16	ಜಮೀನು ಇಲ್ಲದಿರುವ ಬಗ್ಗೆ ದೃಢೀಕರಣ ಪತ್ರ	10381
17	ಭೂಹಿಡುವಳಿ ಪ್ರಮಾಣ ಪತ್ರ	47482
18	ಜಾತಿ ಮತ್ತು ಆದಾಯ ಪ್ರಮಾಣ ಪತ್ರ	3972996
19	ಹಿಂದುಳಿದ ವರ್ಗ ಪ್ರಮಾಣ ಪತ್ರ (ಕೇ.ಸ)	50475
20	ವಿಧವೆ ಪ್ರಮಾಣ ಪತ್ರ	1067
21	ಜಾತಿ ಪ್ರಮಾಣ ಪತ್ರ (ಪ್ರವರ್ಗ–ಎ)	610995
22	ನಿರುದ್ಯೋಗಿ ದೃಢೀಕರಣ ಪತ್ರ	2774

OLI E-31

23	ಮರಣ ಪ್ರಮಾಣ ಪತ್ರ (ಹಳೆ)	469
24	ಜೀವಂತ ದೃಢೀಕರಣ ಪತ್ರ	3059
25	ಮರು ವಿವಾಹವಾಗದಿರುವ ಬಗ್ಗೆ ದೃಢೀಕರಣ ಪತ್ರ	2764
26	ಜಾತಿ ಪ್ರಮಾಣ ಪತ್ರ (ಅ.ಜಾ/ಅ.ಸಂ)	2336438
27	ವ್ಯವಸಾಯಗಾರರ ಕುಟುಂಬದ ದೃಢೀಕರಣ ಪತ್ರ	27022
28	ಮೇಲುಸ್ಥರಕ್ಕೆ ಸೇರಿಲ್ಲವೆಂದು ದೃಢೀಕರಣ ಪತ್ರ	20673
29	ಕೃಷಿ ಕಾರ್ಮಿಕ ಪ್ರಮಾಣ ಪತ್ರ	34563
30	ಆದಾಯ ಪ್ರಮಾಣ ಪ್ತರ	1605466
31	ಮೃತರ ಕುಟುಂಬ ಸದಸ್ಯರ ದೃಢೀಕರಣ ಪತ್ರ	83970
32	ಜನನ ನೋಂದಣಿ	4898
33	ಜನಸಂಖ್ಯಾ ಪ್ರಮಾಣ ಪತ್ರ	385
34	ಇಂದಿರಾಗಾಂಧಿ ವೃದ್ಧಾಪ್ಯ ವಿರಾಮ ವೇತನ	38969
35	ಸಾಮಾಜಿಕ ಭದ್ರತಾ ಯೋಜನೆ	14828
36	ಜನನ ಪ್ರಮಾಣ ಪತ್ರ (ಹಳೆ)	123
37	ಅಂಗವಿಕಲ ಪೋಷಣಾ ವೇತನ	247664
	ಒಟ್ಟು	10849067

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಪರವಾಗಿ ಬಹಳ ಸಮರ್ಪಕವಾದ ಉತ್ತರವನ್ನು ಹೇಳಿದ್ದಾರೆ. ಆದರೆ ನೀವೇನಾದರೂ ಈ ಉತ್ತರದಲ್ಲಿದ್ದಂತೆ ಕಾರ್ಯಾಚರಣೆ ಮಾಡಿಬಿಟ್ಟರೆ ಈ ದೇಶದ ರೈತರು ಮತ್ತು ಈ ದೇಶದ ಜನ ಬಹಳ ನೆಮ್ಮದಿಯಾಗಿರುತ್ತಾರೆ. ನಾವು ದಿನನಿತ್ಯವೂ ಅಲ್ಲಿರುವಂಥವರು. ಅಲ್ಲಿ ಏನು ನಡೆಯುತ್ತದೆ ಎನ್ನುವ ವಾಸ್ತವಾಂಶವನ್ನು ತಮ್ಮ ಗಮನಕ್ಕೆ ನಾನು ಈ ಸಂದರ್ಭದಲ್ಲಿ ತರಲಿಕ್ಕೆ ಇಚ್ಛೆಪಡುತ್ತೇನೆ. ಎಲ್ಲ ಕಡೆ U.P.S. ಇದೆ ಎಂದು ಹೇಳಿದಿರಿ. ಯಾವ ನೆಮ್ಮದಿ ಕೇಂದ್ರದಲ್ಲಿ U.P.S. ಸರಿಯಾದ ರೀತಿ ಕೆಲಸ ಮಾಡುತ್ತಿದೆ ಎಂದು ನೀವು ದಯಮಾಡಿ ಹೇಳಬೇಕು. ನನ್ನ ಕ್ಷೇತ್ರವಾದ ಅರಸೀಕೆರೆಯಲ್ಲಿ ನಾಲ್ಕು ನೆಮ್ಮದಿ ಕೇಂದ್ರಗಳಿವೆ. ಅವುಗಳಲ್ಲಿ ಯಾವುದರಲ್ಲಿ training

ತೆಗೆದುಕೊಂಡಂಥವರು ಇದ್ದಾರೆ ಎಂದು ಹೇಳಿ. ತಿಂಗಳಿಗೆ ಒಂದೂವರೆ ಸಾವಿರವನ್ನೋ, ಎರಡು ಸಾವಿರವನ್ನೋ ಕೊಟ್ಟು, ಏನೂ training ಇಲ್ಲದೇ ಇರುವಂಥ ಹೆಣ್ಣುಮಕ್ಕಳನ್ನು ಕರೆದುಕೊಂಡು ಬಂದು ಅಲ್ಲಿ ಕೂರಿಸುತ್ತಾರೆ. ನಾವು ಅಲ್ಲಿಗೆ ಹೋಗಿ ಅವರಿಗೆ ಒಂದು ಮಾತನ್ನೂ ಆಡುವುದಕ್ಕೆ ಆಗುವುದಿಲ್ಲ. ಅಲ್ಲಿ ಹೋಗಿ ಏನಾದರೂ ಕೇಳಿದರೆ, ಕರೆಂಟ್ ಇಲ್ಲ ಎಂದು ಹೇಳುತ್ತಾರೆ, ಇಲ್ಲದಿದ್ದರೆ ಸರ್ವರ್ ವರ್ಕ್ ಮಾಡುವುದಿಲ್ಲ ಎಂದು ಹೇಳುತ್ತಾರೆ. ನೆಮ್ಮದಿ ಕೇಂದ್ರಗಳಲ್ಲಿ ಕೆಲಸ ಮಾಡುವ ಯಾರಿಗೂ ತರಬೇತಿಯೇ ಇಲ್ಲ. ನೀವು ಹೋಗಿ ಪರೀಕ್ಷೆ ಮಾಡಿ. ನಾನು ನಿಮ್ಮ ಮೇಲೆ ದ್ವೇಷಕ್ಕೇನು ಹೇಳುವುದಿಲ್ಲ. Comet ಸಂಸ್ಥೆಯನ್ನೇನಾದರೂ ಕರ್ನಾಟಕ ರಾಜ್ಯದವರು ದತ್ತು ತೆಗೆದುಕೊಂಡಿರುವಿರಾ? ಏಕೆಂದರೆ, ಪಡಿತರ ಚೀಟಿಯನ್ನೂ ಅವರಿಗೇ ಕೊಡುತ್ತೀರಿ, ಜನನ-ಮರಣವನ್ನೂ ಅವರಿಗೇ ಕೊಡುತ್ತೀರಿ, ಎಲೆಕ್ಷನ್ ಕಾರ್ಡ್ ಕೊಡುವುದನ್ನೂ ಅವರಿಗೇ ಕೊಡುತ್ತೀರಿ, ಮೋಜಣಿಯನ್ನೂ ಅವರಿಗೇ ಕೊಡುತ್ತೀರಿ. ಕರ್ನಾಟಕ ರಾಜ್ಯದ ಜನಪರವಾಗಿರತಕ್ಕಂಥ ಯಾವುದೇ ಯೋಜನೆಯಲ್ಲಿ, ಯಾವುದೇ ಫಲಾನುಭವಿ ಏನಾದರೂ ಪ್ರಮಾಣ ಪತ್ರಗಳನ್ನು ತೆಗೆದುಕೊಳ್ಳಬೇಕಾದರೂ ಈ comet ಸಂಸ್ಥೆಗೇ ಹೋಗಬೇಕು. ತಾಲ್ಲೂಕು ಆಫೀಸಿನಲ್ಲಿ income certificate ತೆಗೆದುಕೊಳ್ಳು ವುದಿರಲಿ, ಪಹಣಿ ತೆಗೆದುಕೊಳ್ಳುವುದಿರಲಿ, ರೆವಿನ್ಯೂ ಡಾಕ್ಯುಮೆಂಟ್‌ಗಳನ್ನು ತೆಗೆದುಕೊಳ್ಳುವುದಿರಲಿ, ಪಡಿತರ ಕಾರ್ಡುಗಳನ್ನು ಕೊಡುವುದಿರಲಿ ಹೀಗೆ ಯಾವುದನ್ನೇ ತೆಗೆದುಕೊಳ್ಳುವುದಿರಲಿ, ಎಲ್ಲವನ್ನೂ ಅದೊಂದೇ ಸಂಸ್ಥೆಗೆ ಕೊಟ್ಟಿದ್ದೀರಿ. ಆ Comet ಸಂಸ್ಥೆಯ ಪಾಲುದಾರರು ಯಾರು? ಅದರ ಮೂಲ ಯಾರು? ಅವರಿಗೊಬ್ಬರಿಗೇ ಏಕೆ ಕೊಡುತ್ತೀರಿ? ಕರ್ನಾಟಕ ರಾಜ್ಯದಲ್ಲಿ ಇನ್ಯಾರೂ ಇಲ್ಲವೇ? ಸಹಭಾಗಿತ್ವ ಅಂದರೆ ಏನು? ಅದು ಕರ್ನಾಟಕ ರಾಜ್ಯದ ಜನಗಳಿಗೆ ಗೊತ್ತಾಗುವುದು ಬೇಡವೇ? ಅದಕ್ಕೆ ಟೆಂಡರ್ ಕರೆದಿರುವಿರಾ? ಇವತ್ತು ನಮ್ಮಲ್ಲಿ ಲಕ್ಷಾಂತರ ಜನ graduates ಕೆಲಸವಿಲ್ಲದೇ ಬೀದಿಬೀದಿ ಅಲೆಯುತ್ತಿದ್ದಾರೆ. ಅವರೆಲ್ಲ computerನಲ್ಲಿ ಬಹಳ specialists ಆಗಿದ್ದಾರೆ. ಅವರುಗಳು ಯಾವುದೋ ಪ್ರೈವೇಟ್ ಅಂಗಡಿಯಲ್ಲಿ 1,000–2,000 ಸಂಬಳಕ್ಕೆ computer ಒತ್ತುತ್ತಾ ಕುಳಿತುಕೊಳ್ಳುತ್ತಾರೆ. ಅವರನ್ನು ಕರೆದು ನೇರವಾಗಿ ಅವರಿಗೆ ತಾಲ್ಲೂಕು ಕಛೇರಿಯಲ್ಲಿ ಕೆಲಸ ಕೊಟ್ಟರೆ, ಅವರು ಕೆಲಸ ಮಾಡುವುದಿಲ್ಲವೇ?

ಏತಕ್ಕೋಸ್ಕರ ಇಂಥ ಒಂದೇ ಒಂದು ಸಂಸ್ಥೆಗೆ ಕೊಟ್ಟಿದ್ದೀರಿ? ಅವರ ಕೆಲಸವೆಂದರೆ ದುಡ್ಡು ವಸೂಲಿ ಮಾಡುವುದು. ಪಡಿತರ ಚೀಟಿ ಅವ್ಯವಹಾರಕ್ಕೆ ಏನಾದರೂ ಕಾರಣವಿದ್ದರೆ ಅದು Comet ಸಂಸ್ಥೆಯವರು ಎಂದು ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ಆ ಸಂಸ್ಥೆಯವರು 200–300–500 ರೂಪಾಯಿ ದುಡ್ಡು ತೆಗೆದುಕೊಂಡು, ಯಾವುದು ಬೇಕೋ ಅದೆಲ್ಲವನ್ನು ಹೊಡೆದು, ಯಾರ ಕಾರ್ಡನ್ನು ಯಾರಿಗೋ ಹೊಡೆದು, ಇವತ್ತು ಆ ಕಾರ್ಡ್‌ಗಳ ಪರಿಸ್ಥಿತಿ ಏನಾಗಿದೆ ಎನ್ನುವುದು ಗ್ರಾಮಾಂತರ ಪ್ರದೇಶಗಳಲ್ಲಿರುವ ನಮ್ಮಂಥವರಿಗೆ ಗೊತ್ತು. ಅದನ್ನು ತೆಗೆದುಕೊಂಡು ನ್ಯಾಯಬೆಲೆ ಪಡಿತರ ಅಂಗಡಿಗೆ ಹೋದರೆ, ಇದನ್ನು ಮಾಡಿಕೊಟ್ಟವರು ಯಾರ? ತಪ್ಪಾಗಿದೆ, account zero ಬಂಧಿದೆ ಎಂದು ಹೇಳಿ ಅವರಿಗೆ ಕೊಡಬೇಕಾದ ಅಕ್ಕಿಯನ್ನು ನಿಲ್ಲಿಸುತ್ತಾರೆ ಅಥವಾ ಅವರ ಫೋಟೋ ಬಂದಿಲ್ಲ, ಅದಕ್ಕೂ ಅಕ್ಕಿಯನ್ನು ನಿಲ್ಲಿಸುತ್ತಾರೆ. ಇಂಥ ಸಮಸ್ಯೆಗಳು ಬರುತ್ತಿವೆ. ಹೀಗಾಗಿ ಈ Comet ಸಂಸ್ಥೆಯಿಂದ ಇವತ್ತು ಕರ್ನಾಟಕ ರಾಜ್ಯದಲ್ಲಿ ರೈತರಿಗೆ ಮತ್ತು ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ.

(6-40 PM)

ನೆಮ್ಮದಿ ಕೇಂದ್ರ ತಂದು ರೈತರ ಸಮಯ ಉಳಿಸಿದ್ದೇವೆಂದು ಹೇಳಿದ್ದೀರಿ. ನೀವು ಸಮಯ ಉಳಿಸಿಲ್ಲ. ಅವನು ನೆಮ್ಮದಿ ಕೇಂದ್ರಕ್ಕೆ ಹೋಗಬೇಕು, ಮತ್ತೆ ನೆಮ್ಮದಿ ಕೇಂದ್ರದಲ್ಲಿ ಕೊಡುವ ಅರ್ಜಿಯನ್ನು ಪಡೆದುಕೊಳ್ಳಬೇಕು, ಆದರೆ, ಅಲ್ಲಿಗೆ ಹೋದಾಗ ಕರೆಂಟ್ ಇಲ್ಲ ಎಂದು ನೆಮ್ಮದಿ ಕೇಂದ್ರದಲ್ಲಿ ಹೇಳಿದಾಗ ರೈತ ವಾಪಸ್ಸು ಬರಬೇಕಾಗುತ್ತದೆ. ಪುನಃ ಇನ್ನೊಂದು ದಿವಸ ನೆಮ್ಮದಿ ಕೇಂದ್ರಕ್ಕೆ ಹೋದರೆ ಅಲ್ಲಿ computer ಕೆಟ್ಟುಹೋಗಿದೆ ಎಂಧು ಹೇಳುತ್ತಾನೆ ಪುನಃ ವಾಪಸ್ಸು ರೈತ ಬರಬೇಕಾಗುತ್ತದೆ. ನಂತರ ಏನೋ ಕಷ್ಟಪಟ್ಟು 3 ದಿವಸಗಳ ನಂತರ ಅರ್ಜಿ ತೆಗೆದುಕೊಂಡರೆ ಪುನಃ ರೈತ village accountant ಹತ್ತಿರ ಹೋಗಿ report ಬರೆಸಿಕೊಳ್ಳಲೇಬೇಕು. Village Accountant ರಿಂದ report ಹಾಕಿಸಿ ಅಲ್ಲಿಂದ Revenue Inspector ರವರ ಹತ್ತಿರ ಹೋಗಲೇಬೇಕು. Revenue Inspector ರವರ ಹತ್ತಿರ ಬರೆಸಿ ತಹಶೀಲ್ದಾರರ ಹತ್ತಿರ ಹೋಗಲೇಬೇಕು. ತಹಶೀಲ್ದಾರರ ಕಛೇರಿಯಲ್ಲಿ thumb impression ಹಾಕಬೇಕು ಸ್ವಲ್ಪ ತಡೆಯಿರಿ ಎಂದು ಹೇಳಿ 15 ದಿವಸ ನಂತರ certificate ಕೊಡುತ್ತಾರೆ. ಇದು ಬಹಳ ಗಹನವಾದ ವಿಚಾರ.

ಏಕೆಂದರೆ, ಈ ನೆಮ್ಮದಿ ಕೇಂದ್ರ ತೆರೆದು ನೆಮ್ಮದಿಯೇ ಹಾಳಾಗಿ ಹೋಗಿದೆ. ಬಹುಶಃ ಇದು ಶಾಸಕರುಗಳಿಗೂ ಅರ್ಥವಾಗಿರಬೇಕು. ಆ ನೆಮ್ಮದಿ ಕೇಂದ್ರದಿಂದ ಬಹಳಷ್ಟು ಸಮಸ್ಯೆ ಉದ್ಭವವಾಗಿದ್ದು, ಆ ಸಮಸ್ಯೆ ಬಗೆಹರಿಸುವುದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯಬೇಕಲ್ಲವೇ? ಶಾಸನಸಭೆಗೆ ಬಂದು ನಾವು ಇಲ್ಲಿ ಕುಳಿತುಕೊಂಡು, ರೈತರು ನಮಗೆ ಮತ ಹಾಕುವಂಥ ಧಣಿಗಳು, ಅವರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಇಂಥ ಸಾಮಾನ್ಯವಾದ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿ ಸರ್ಕಾರದ ಗಮನಕ್ಕೆ ತರಬೇಕಲ್ಲವೇ? ಇದು ಸರ್ಕಾರದ ಗಮನಕ್ಕೆ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಈ COMAT ಸಂಸ್ಥೆಯವರಿಗೆ ಏಕೆ ಹಣ ಕೊಡಬೇಕು? ಅವರಿಗೆ ಕೊಟ್ಟ ಹಣದಲ್ಲಿ ಉಳಿದಿರುವುದನ್ನು ತೆಗೆದುಕೊಂಡು ಹೋಗಿ PD account ನಲ್ಲಿ ಹಾಕಿಕೊಂಡು ಅದರಲ್ಲಿ ಎಷ್ಟು ಹಣ ಕೊಡುತ್ತಾರೆಂದರೆ ಹತ್ತು ರೂಪಾಯಿ ಎಂದು ಯರೋ ಹೇಳಿದರು. ಇದು ಸಚಿವರಿಗೆ ಗೊತ್ತಿಲ್ಲ. ಅವರು ಹತ್ತು ರೂಪಾಯಿಗೆ ಒಂದು ಕಾಪಿ ಎಂದು ಹೇಳಿದರೆ, ನಾನು 5 ರೂಪಾಯಿಗಳಿಗೆ ಒಂದು ಕಾಪಿ ಮಾಡಿಕೊಡುತ್ತೇನೆಂದು ಹೇಳಿದೆ. ಪ್ರತಿಯೊಂದು ಹೋಬಳಿಗೆ ಒಬ್ಬೊಬ್ಬರನ್ನು ಕೂರಿಸಿ ನಾನು ಕಾಪಿ ತೆಗೆಸಿಕೊಡುತ್ತೇನೆಂದು ಹೇಳಿದೆ. ಸಹಭಾಗಿತ್ವವೆಂದು ಹೇಳಿಕೊಂಡು ಯಾವುದೋ ಒಂದು ಸಂಸ್ಥೆಯನ್ನು, ಯಾರನ್ನೋ ಕಾಪಾಡುವುದಕ್ಕೋಸ್ಕರ ಇಂಥ ಯೋಜನೆಗಳನ್ನೆಲ್ಲ ವಹಿಸುವುದು ಸರಿಯಿಲ್ಲ. ಯೋಜನೆ ಚೆನ್ನಾಗಿದೆ. ದಾಖಲಾತಿಗಳು ಕೂಡ ಒಂದೇ ಕಡೆ ಸಿಗುತ್ತವೆ, ತೆಗೆದುಕೊಳ್ಳಬಹುದೆಂಬುದು ಚೆನ್ನಾಗಿದೆ. ಆದರೆ, ರೈತರ ಸಮಯವನ್ನು ಯಾವ ರೀತಿ ಉಳಿಸಿದ್ದೀರಿ? ರೈತರ ಸಮಯವನ್ನು ಉಳಿಸುವುದಕ್ಕಾ ಗುವುದಿಲ್ಲ. ತಹಶೀಲ್ದಾರವರ ಹತ್ತಿರ ಒಂದು Certificate ತೆಗೆದುಕೊಳ್ಳುವುದಕ್ಕೆ minimum 500 ರೂ. ಖರ್ಚಾಗುತ್ತದೆ. ಹಿಂದೆ ರೈತರು Village Accountant ರ ಮನೆಗೆ ಹೋದರೆ ಸಾಯಂಕಾಲದ ವೇಳೆಗೆ ತಹಶೀಲ್ದಾರ್‌ರವರಿಂದ certificate ತೆಗೆದುಕೊಂಡು ಮನೆಗೆ ಬರುತ್ತಿದ್ದ. ಈಗ ನೆಮ್ಮದಿ ಕೇಂದ್ರದಿಂದಾಗಿ ರೈತನಿಗೆ ಒಂದು certificate ತೆಗೆದುಕೊಳ್ಳುವುದಕ್ಕೆ 500 ರೂ. ಖರ್ಚಾಗುತ್ತಿದೆ. ಒಂದು ವಾರ, 10–15 ದಿವಸಗಳಲ್ಲದೆ ಅದಕ್ಕಿಂತ ಮುಂಚೆ ಕೊಡುವುದಿಲ್ಲ. ಅವನು ಆ certificate ಅನ್ನು ತನ್ನ ಸರ್ಕಾರಿ ಹುದ್ದೆಗೆ ಅರ್ಜಿ ಸಲ್ಲಿಸಲು ಕೊಡಬೇಕಾಗುತ್ತದೆ, ಕೊನೆ ದಿನಾಂಕವಿರುತ್ತದೆ, ಅಲ್ಲಿ ಅವರು

ಕಾಯುತ್ತಿರುವಾಗ ನೆಮ್ಮದಿ ಕೇಂದ್ರದಲ್ಲಿ ಕರೆಂಟ್ ಇರುವುದಿಲ್ಲ. ನಾವೇನು ಮಾಡೋಣ ಸಾರ್ ಎಂದು ನೆಮ್ಮದಿ ಕೇಂದ್ರದವರು ಹೇಳುತ್ತಾರೆ. ತಹಶೀಲ್ದಾರ್‌ರವರು ಬಂದು ಸಹಿ ಹಾಕುವವರೆಗೆ ಆ certificate ಸಿಗುವುದಿಲ್ಲ. ಈ ಎಲ್ಲಾ ಸಮಸ್ಯೆಗಳು ಕಾಡುತ್ತಿವೆ. ಸಹಭಾಗಿತ್ವ ಸಂಸ್ಥೆಯ ಪುಣ್ಯಾತ್ಮರು ಯಾರೋ ಗೊತ್ತಿಲ್ಲ, ಅವರ ಹೆಸರನ್ನಾದರೂ ಹೇಳಿದರೆ ಅವರನ್ನು ನೋಡಬಹುದು, ಆ ದೊಡ್ಡ ಮನುಷ್ಯರಿಗೆ ಸನ್ಮಾನವಾದರೂ ಮಾಡಬೇಕಾಗುತ್ತದೆ. ಅವರು ಅಲ್ಲಿ ಮಾಡುತ್ತಿರುವಂಥ ಅವ್ಯವಹಾರ ಅತಿಯಾಗಿದೆ. ಅಲ್ಲಿ ಕೆಲಸ ಮಾಡುವವರಿಗೆ ಸಂಬಳ ಕೊಡುವುದಿಲ್ಲ. ಏಕೆ ಇಷ್ಟು ತಡವಾಗುತ್ತಿದ್ದೀಯಮ್ಮ ಎಂದು ನಾನೇ ಅಲ್ಲಿ ಗೇಟ್ ಮುಂದೆ ನಿಂತು ಕೇಳಿದರೆ ನನಗೆ ಸಂಬಳ ಕೊಡದೆ 3 ತಿಂಗಳಾಯಿತೆಂದು ಹೇಳುತ್ತಾರೆ. ಇಂಥ ಅನೇಕ ಸಮಸ್ಯೆಗಳಿವೆ. ಏನಾದರೂ ಮಾಡಿ ಆ ಕಂಪನಿಯವರಿಗೆ ಸ್ವಲ್ಪ ಒತ್ತಡ ಕಡಿಮೆ ಮಾಡಿ. ಇಡೀ ರಾಜ್ಯದಲ್ಲಿರುವ ಎಲ್ಲಾ printing ಕೆಲಸವನ್ನೂ ಅವರಿಗೇ ಕೊಡಬೇಡಿ. ಯಾವುದಾದರೊಂದು Printing ಕೆಲಸವನ್ನು ಅವರಿಗೆ ಕೊಡಿ. ಇಲ್ಲವೆಂದರೆ, ನಮ್ಮಲ್ಲಿ computer ಕಲಿತಂಥ ಬಹಳಷ್ಟು ನಿರುದ್ಯೋಗಿಗಳಿದ್ದು ಅವರು 2–3 ಸಾವಿರ ರೂಪಾಯಿಗಳಿಗೆ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಈ ಕೆಲಸವನ್ನು ವಹಿಸಿಕೊಡಿ. ಅವರು ಒಂದೊಂದು ಹೋಬಳಿಯಲ್ಲಿ ಕುಳಿತು ಬರೆಯುತ್ತಾರೆ. ಇದರಿಂದ ಭ್ರಷ್ಟಾಚಾರ ತಪ್ಪುತ್ತದೆ. ಎಲ್ಲಿ generators ಇವೆ? ಅಲ್ಲಿ ಯಾರ ಹತ್ತಿರವಾದರೂ UPS ಇದೆಯೇ? ಅಲ್ಲಿ ಎಂಥದ್ದೂ ಇಲ್ಲ. ಎರಡು ಖಾಲಿ ಡಬ್ಬ ಇಟ್ಟುಕೊಂಡು ಒಂದು ದಿವಸಕ್ಕೆ ಎಷ್ಟು ಕೋಟಿ ರೂಪಾಯಿಗಳನ್ನು ಗಳಿಸುತ್ತಿದ್ದಾರೆ? ಸಹಭಾಗಿತ್ವದಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ಗಳಿಸುತ್ತಿದ್ದಾರೆ? ಆ ಹಣ ರೈತರದಲ್ಲವೇ? ರೈತರಿಗೆ ಪುಕ್ಕಟೆಯಾಗಿ ಪಹಣಿಯನ್ನು ಸರ್ಕಾರ 10 ರೂಪಾಯಿಗಳಿಗೆ ಕೊಡುವುದಕ್ಕಾಗುವುದಿಲ್ಲವೇ? ಸರ್ಕಾರವೇಕೆ ಈ ಕೆಲಸ ಮಾಡಬಾರದು? ದಯಮಾಡಿ ಇಂಥ ಸಮಸ್ಯೆ ಯನ್ನು ಪ್ರಾಮಾಣಿಕವಾಗಿ ಬಗೆಹರಿಸತಕ್ಕ ಕೆಲಸ ಮಾಡಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಒಂದು ನಿಮಿಷ ನನಗೆ ಅವಕಾಶ ಕೊಡಿ.

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆ. ಬೇಕಾದರೆ ಬೇರೆ ನಿಯಮದಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ಸಮಸ್ಯೆ ದೊಡ್ಡದಿದೆ. ಆದರೆ, ಗಮನ ಸೆಳೆಯುವ ಸೂಚನೆಯಡಿಯಲ್ಲಿ ಎಲ್ಲರಿಗೂ ಅವಕಾಶವಿಲ್ಲ.

ಇದು ಗಂಭೀರವಾದ ಸಮಸ್ಯೆ. ಅದರಲ್ಲಿ ಎರಡು ಮಾತಿಲ್ಲ. ಹಾಗಿದ್ದರೆ, ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ಸಂಬಂಧಪಟ್ಟ ಮಂತ್ರಿಯವರು ಒಪ್ಪಿಕೊಳ್ಳುತ್ತಿದ್ದಾರೆ. ನೀವೇಕೆ ಅವಕಾಶ ಕೊಡುತ್ತಿಲ್ಲ?

ಅಧ್ಯಕ್ಷರು : ಸಮಸ್ಯೆ ಗಂಭೀರವಾಗಿದೆ. ಎಲ್ಲರೂ ಒಪ್ಪಿದರೆ ಈ ಬಗ್ಗೆ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚಿಸೋಣ.

ಶ್ರೀ ಹೆಚ್.ಡಿ.ರೇವಣ್ಣ : ಎರಡೇ ನಿಮಿಷಗಳಲ್ಲಿ ತಮಗೆ ಹೇಳಿಬಿಡುತ್ತೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಇನ್ನೂ ಬಹಳ ಜನ ಈ ವಿಷಯದ ಮೇಲೆ ಮಾತನಾಡುವವರಿದ್ದೇವೆ. ಏಕೆಂದರೆ ಎಲ್ಲಾ ಕಡೆ ಈ ಸಮಸ್ಯೆ ಇದೆ. ದಯಮಾಡಿ, ಈ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ಆಯಿತು. ಅರ್ಧ ಗಂಟೆ ಕಾಲಾವಧಿ ಚರ್ಚೆಗಾದರೂ ಅವಕಾಶ ಕೊಡಿ.

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆಯಾಗಿದ್ದರಿಂದ ಇದನ್ನು ಅರ್ಧ ಗಂಟೆ ಕಾಲಾವಧಿಗೆ ಬದಲಾಯಿಸುವುದಕ್ಕೆ ನಿಯಮದಲ್ಲಿ ಅವಕಾಶವಿಲ್ಲ. ಆದ್ದರಿಂದ, ಬೇರೆ ರೂಪದಲ್ಲಿ ನೋಟೀಸ್ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾವುದೇ ರೂಪದಲ್ಲಿ ಅವಕಾಶ ಕೊಡಿ. ನೆಮ್ಮದಿ ಯೋಜನೆ ಏನಿದೆ, ಇದು ಹಿಂದಿನ ವ್ಯವಸ್ಥೆಗಿಂತ ಬಹಳ ಒಳ್ಳೆಯ ಯೋಜನೆಯಾಗಿದೆ. ಮಾನ್ಯ ಶಿವಲಿಂಗೇಗೌಡರವರು ಮತ್ತು ಇತರೆ ಶಾಸಕರು ಹೇಳುತ್ತಿರುವ ಹಾಗೆ ಸಮಸ್ಯೆ ಇದೆ, ಇಲ್ಲವೆಂದು ಹೇಳುತ್ತಿಲ್ಲ. ನಾವು ಹೊಸ ಪ್ರಯೋಗವನ್ನು ಮಾಡಿದ್ದೇವೆ. ಹೊಸ ಪ್ರಯೋಗ ಮಾಡಿದಾಗ ಒಂದಿಷ್ಟು ಸಮಸ್ಯೆಗಳು ಬರುತ್ತವೆ.

ಅಧ್ಯಕ್ಷರು : ಸಮಸ್ಯೆಗಳು ಇದರಲ್ಲಿ ಸ್ವಲ್ಪವಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ. ಎಲ್ಲಿ ತಪ್ಪಿದೆ ಅಲ್ಲಿ ಸರಿಪಡಿಸೋಣ. ನಾವು open mind ನಲ್ಲಿದ್ದೇವೆ.

(ಗೊಂದಲ)

ಅಧ್ಯಕ್ಷರು : ಇದನ್ನು ವಿಶೇಷ ಪ್ರಕರಣವೆಂದು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೇನೆ.

V) ವಿಷಯ : ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ

ಶ್ರೀ ವೆಂಟಕರಾವ್ ನಾಡಗೌಡ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ,

ಇದರಲ್ಲಿ ಸಣ್ಣ Correction ಇದೆ. ಇದನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಮಾಡುತ್ತೇವೆ.

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನಲ್ಲಿ ಸಂಚಾರಿ ಅರಕ್ಷಕ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದ್ದು, ಮುಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಪೊಲೀಸ್ ಠಾಣೆಗಳನ್ನು ತೆರೆಯಲು ಒದಗಿಸುವ ಅನುದಾನದ ಲಭ್ಯತೆಯನ್ನನುಸರಿಸಿ ಸಿಂಧನೂರು ತಾಲ್ಲೂಕಿನಲ್ಲಿ ಸಂಚಾರ ಪೊಲೀಸ್ ಠಾಣೆ ತೆರೆಯಲು ಪರಿಶೀಲಿಸಲಾಗುವುದು.

ಶ್ರೀ ವೆಂಕಟರಾವ್ ನಾಡಗೌಡ : ಕಳೆದ ಸಲ ಮಾನ್ಯ ಮುಖ್ಯಮಂತ್ರಿಯವರೂ ಸಹ ಪತ್ರ ಕೊಟ್ಟು ಅಲ್ಲಿ ಪೊಲೀಸ್ ಠಾಣೆ ತೆರೆಯಬೇಕೆಂದು ಹೇಳಿದ್ದಾರೆ. ಅದಲ್ಲದೆ, ಮೊನ್ನೆ 25 ಠಾಣೆಗಳನ್ನು ರಾಜ್ಯದಲ್ಲಿ ಹೊಸದಾಗಿ sanction ಮಾಡಿದ್ದೀರಿ. ನಮ್ಮ ರಾಯಚೂರು ಜಿಲ್ಲೆಯ ದೇವದುರ್ಗಕ್ಕೆ ಕೊಡುತ್ತೀರಿ, ಸಿಂಧನೂರಿಗೆ ಕೊಡುವುದಿಲ್ಲ. ಸಿಂಧನೂರು ನಗರದಲ್ಲಿ 60–65 ಸಾವಿರ population ಇದೆ. ಪ್ರತಿ ದಿನ 1 ಲಕ್ಷ 25 ಸಾವಿರಕ್ಕಿಂತ ಹೆಚ್ಚು ಜನ ಹಳ್ಳಿಗಳಿಂದ ಕೇಂದ್ರ ಸ್ಥಾನಕ್ಕೆ ಬಂದು ಹೋಗುತ್ತಾರೆ. ಸಣ್ಣ ಸಣ್ಣ ಊರುಗಳಿಗೆ ಪೊಲೀಸ್ ಠಾಣೆಗಳಿಗೆ sanction ಮಾಡುತ್ತಾರೆ, ಇಂಥ ಪ್ರಮುಖ ನಗರಗಳಿಗೆ ಕೊಡಲಿಲ್ಲವೆಂದು ಕೇಳಿದರೆ ಪರಿಶೀಲಿಸುತ್ತೇವೆಂದು ಹೇಳುತ್ತಾರೆ.

ಅಧ್ಯಕ್ಷರು : ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ವೆಂಕಟರಾವ್ ನಾಡಗೌಡ : ಸರ್ಕಾರ ಈ ಬಗ್ಗೆ ಆಶ್ವಾಸನೆ ಕೊಡಬೇಕೆಂದು ನಾನು ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ.

ಡಾ: ವಿ.ಎಸ್. ಆಚಾರ್ಯ : ಈ ವರ್ಷದ ಪರಿಸ್ಥಿತಿ ಅಂದರೆ September October ನಲ್ಲಿ ಏನಾಯಿತೆಂದು ತಮಗೆಲ್ಲಾ ಗೊತ್ತಿದೆ. ಹಾಗಾಗಿ, ಹೊಸ ಪೋಲೀಸ್ ಸ್ಟೇಷನ್ ಪ್ರಾರಂಭಿಸಲಿಕ್ಕೆ ಈ ವರ್ಷ ಆರ್ಥಿಕ ಇಲಾಖೆಯಿಂದ ನಮಗೆ ಅನುಮತಿ ಸಿಗಲಿಲ್ಲ ಇದ್ದ ಸಂಗತಿ ಹೇಳಬೇಕಾಗಿದೆ, ಹೇಳಿದ್ದೇನೆ. ಆದರೂ ಸಹ A,B,C ಎಂದು ನಾವು categorize ಮಾಡಿಟ್ಟದ್ದರಲ್ಲಿ ಒಟ್ಟು 50 police Station ಗಳನ್ನು ತೆರೆಯಬೇಕೆಂದು ಇದ್ದುದರಲ್ಲಿ 25 police Stations ಅನ್ನು categorize ಮಾಡುವಾಗ ಅದರಲ್ಲಿ ಸಿಂಧನೂರು ಬರಲಿಲ್ಲ. ಆದರೆ, ನಾನು ಅದರ ಬಗ್ಗೆ ವಿಶೇಷ ಪ್ರಸ್ತಾವನೆಯನ್ನು ಈಗಾಗಲೇ D.G. ಯವರಿಂದ ಪಡೆದುಕೊಂಡಿದ್ದೇನೆ. 2010-11ರಲ್ಲಿ ಅಲ್ಲಿ ಒಂದು ಸಂಚಾರಿ ಪೋಲೀಸ್ ಠಾಣೆಯನ್ನು ಪ್ರಾರಂಭ ಮಾಡುತ್ತೇವೆ. ಬಜೆಟ್ ಇದೆ, ಅದಕ್ಕೆ ಅಲ್ಲಿ ಜಾಗವೂ ಇದೆ.

ಶ್ರೀ ವೆಂಕಟರಾವ್ ನಾಡಗೌಡ : ಧನ್ಯವಾದಗಳು.

VI) ವಿಷಯ : ಕೊಪ್ಪಳ ನಗರಕ್ಕೆ ಹೊಸದಾಗಿ ಸಂಚಾರಿ ಪೋಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ಕೊಪ್ಪಳ ನಗರಕ್ಕೆ ಹೊಸದಾಗಿ ಸಂಚಾರಿ ಪೋಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿಂದಿನ ಉತ್ತರವೇ ಇದಕ್ಕೂ apply ಆಗುತ್ತದೆ.

ಕೊಪ್ಪಳ ನಗರದಲ್ಲಿ ಸಂಚಾರಿ ಆರಕ್ಷಕ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರಿಂದ ಪಡೆದು, ಮುಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಪೋಲೀಸ್ ಠಾಣೆಗಳನ್ನು ತೆರೆಯಲು ಒದಗಿಸುವ ಅನುದಾನದ ಲಭ್ಯತೆಯನ್ನ ನುಸರಿಸಿ ಕೊಪ್ಪಳ ನಗರದಲ್ಲಿ ಸಂಚಾರಿ ಪೋಲೀಸ್ ಠಾಣೆ ತೆರೆಯಲು ಪರಿಶೀಲಿಸಲಾಗುವುದು.

O 17 F - 28

ಪ್ರಸ್ತುತ ಹಾಲಿ ಕೊಪ್ಪಳ ನಗರ ಠಾಣೆಯ ಸಿಬ್ಬಂದಿಗಳ ಜೊತೆಗೆ ಬೇರೆ ಬೇರೆ ಪೊಲೀಸ್ ಠಾಣೆಗಳ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಸರದಿ ಪ್ರಕಾರ ನಿಯೋಜಿಸಿಕೊಂಡು ಸಂಚಾರ ನಿಯಂತ್ರಣ ತೊಂದರೆಯನ್ನು ನಿವಾರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಏಕೆಂದರೆ, ನಾವು 25 Police Stations ಬಗ್ಗೆ list ತಯಾರು ಮಾಡಿದ ಮರುದಿವಸವೇ ಗೊತ್ತಾಯಿತು ಹಳೆಯ ಹೊಸ ಜಿಲ್ಲೆಗಳಾದಂಥ ಭಟ್ಕಳ ಮತ್ತು ಹಾವೇರಿಯಲ್ಲಿ ಒಂದೊಂದು ಸಂಚಾರಿ Police Station ಹಾಗೂ traffic Police Station ಅನ್ನು ತೆರೆಯಬೇಕಾಗಿದ್ದು ಅದು ಎರಡೂ ಕಡೆ National Highway ಹಾದು ಹೋಗುವಂಥ ಸ್ಥಳವಾಗಿದ್ದು ಅದರ ಜೊತೆಯಲ್ಲಿ ಯಾದಗಿರಿ ಹೊಸ ಜಿಲ್ಲೆಯಾಗಿದೆ. ನಾನೇ ಇದನ್ನು ಗಮನಿಸಿ ದಿ: 2–02–2010ಕ್ಕೆ ಸಂಚಾರಿ police Station ತೆರೆಯುವುದಕ್ಕೆ ಬೇಕಾದಂಥ ಪ್ರಸ್ತಾವನೆ ಬಿಡುಗಡೆ ಮಾಡಿ ಮುಂದೆ ಹೋಗಬೇಕೆಂದಿದ್ದೇವೆ. 2010–11 ರಲ್ಲಿ ಅದು ಪ್ರಾರಂಭವಾಗುತ್ತದೆ. ಈ ವರ್ಷ ಏನೂ ಇಲ್ಲ, ಆದರೆ, ಮುಂದಿನ ವರ್ಷಕ್ಕೆ ನಮಗೆ ಬೇಕಾದ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ಅದನ್ನು ನಾವು ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಜಿಲ್ಲಾ ಕೇಂದ್ರದಲ್ಲಿ Police Station ತೆರೆಯಬೇಕೆಂದು ಸುಮಾರು ವರ್ಷಗಳಿಂದ ನಾವು remind ಮಾಡುತ್ತಿದ್ದೇವೆ. 5000-6000 Mines Lorries ಓಡಾಡುತ್ತವೆ. ಎರಡು ಲಾರಿಗಳಲ್ಲಿ ಒಂದು ಲಾರಿ ಹೋಟೆಲ್ ಒಳಕ್ಕೆ ನುಗ್ಗಿದೆ, ಇನ್ನೊಂದು ಗುಡಿಸಲಿಗೆ ನುಗ್ಗಿದೆ ಎಂದು ಬೆಳಿಗ್ಗೆ ನನಗೆ ಪತ್ರಿಕೆಯವರು ಫೋನ್ ಮಾಡಿ ಹೇಳಿದ್ದರು. ಹಾಗಾಗಿ, accident ಗಳಿಂದ death rate ಅನ್ನು ತಮಗೆ ಹೇಳುತ್ತೇನೆ, ತಮಗೆ ಆಶ್ಚರ್ಯವಾಗಬಹುದು. 2009ರಲ್ಲಿ ಮುನಿರಾಬಾದ್ cross ನಿಂದ ಬನ್ನಿಕೊಪ್ಪ ರಾಷ್ಟ್ರೀಯ ಹೆದ್ದಾರಿ–63ರಲ್ಲಿ ಸಂಭವಿಸಿದ ರಸ್ತೆ ಅಪಘಾತಗಳ ಅಂಕಿಅಂಶಗಳ ವಿವರ. ಮೃತಪಟ್ಟವರು–705 ಜನರು, Case register ಆದದ್ದು–190 IPC 279, 304. ಗಾಯಗೊಂಡವರು 1706 ಜನರು. Case register 644 IPC 379, 337, 338. ತಿಂಗಳವಾರು ಮೃತಪಟ್ಟವರ ಮಾಹಿತಿ ಹೇಳುತ್ತೇನೆ. ಜನವರಿ ತಿಂಗಳಲ್ಲಿ 21 ಜನ ಮೃತಪಟ್ಟವರು, ಗಾಯ ಗೊಂಡವರು 95 ಜನರು. ಫೆಬ್ರವರಿಯಲ್ಲಿ 17 ಜನ ಮೃತಪಟ್ಟವರು, 153

ಜನರು ಗಾಯಾಳುಗಳು. ಮಾರ್ಚ್‌ನಲ್ಲಿ ಮೃತಪಟ್ಟವರು 16 ಜನ 89 ಗಾಯಾಳುಗಳು. ಹಾಗೆಯೇ ಏಪ್ರಿಲ್‌ನಲ್ಲಿ 29 ಜನ ಮೃತಪಟ್ಟವರು 115 ಗಾಯಾಳುಗಳು, ಮೇ ತಿಂಗಳಲ್ಲಿ 17 ಜನ ಮೃತಪಟ್ಟವರು, 105 ಗಾಯಾಳುಗಳು, ಜೂನ್‌ನಲ್ಲಿ ಮೃತಪಟ್ಟವರು 19 ಜನ, 329 ಗಾಯಾಳುಗಳು. ಜುಲೈನಲ್ಲಿ 12 ಜನ ಮೃತಪಟ್ಟವರು 375 ಗಾಯಾಳುಗಳು.

ಅಧ್ಯಕ್ಷರು : ತಾವು Police Station ಮಾಹಿತಿ ಕೇಳಿದ್ದೀರಿ, ಅದನ್ನಿಲ್ಲಿ ಹೇಳುತ್ತಿದ್ದೀರಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಇದು Police Station ಗಳಿಗನುಗುಣವಾಗಿ ಇರುವಂಥ ಮಾಹಿತಿಯನ್ನು ಹೇಳುತ್ತಿದ್ದೇನೆ. ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಏನರ್ಥ? ಇವರು ನಿರ್ಣಯ ಮಾಡಿದ್ದೇವೆಂದು ಹೇಳುತ್ತಾರೆ. ಮೊನ್ನೆ order ಮಾಡಿದ್ದಾರೆ. ಈ ತಾರತಮ್ಯವೇಕೆ? ದೇವದುರ್ಗಕ್ಕೆ ಸಂಚಾರಿ Police Station ಅನ್ನು ಮೊನ್ನೆ ಮಂಜೂರು ಮಾಡಿದ್ದಾರೆ. ನಮ್ಮ ಜಿಲ್ಲಾ ಕೇಂದ್ರದಲ್ಲಿ ಇಷ್ಟೊಂದು vehicles ಓಡಾಡುತ್ತಿವೆ. ನಮಗೆ Police Station ನ ಅವಶ್ಯಕತೆ ಇದೆ ಎಂದು ಕಳೆದ ಸಲ ಕೂಡ ಪ್ರಶ್ನೆ ಕೇಳಿದ್ದೆ. ಅವತ್ತೂ ಕೂಡ ಕೊಡುತ್ತೇವೆಂದು ವಾಗ್ದಾನ ಮಾಡಿದ್ದರು. ಇಲ್ಲಿಯವರೆಗೆ ಆಗಿಲ್ಲ. ಅಂದರೆ "ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ" ತರಹ ಮಾಡಿದರೆ ಹೇಗೆ?

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು) : ಆಗಲೇ ಹೇಳಿದ ಹಾಗೆ, ಕೊಪ್ಪಳ, ಹಾವೇರಿ ಇವು 1997 ರಲ್ಲಿ ಆಗಿರತಕ್ಕಂಥ ಜಿಲ್ಲೆಗಳು. ನಾವು 2008ರಲ್ಲಿ ಅಧಿಕಾರಕ್ಕೆ ಬಂದೆವು. ಈ ವಿಷಯ ಗೊತ್ತಾದ ತಕ್ಷಣ ನಾನು 2ನೇ ತಾರೀಖು ಫೆಬ್ರವರಿಯಂದು ಹಾವೇರಿ ಮತ್ತು ಕೊಪ್ಪಳ ಬಗ್ಗೆ ಮತ್ತು ಹೊಸ ಜಿಲ್ಲೆಯಾದ ಯಾದಗೀರ್ ಬಗ್ಗೆ ಮುಂದಿನ ಈ 25 police Stations ಜೊತೆಗೆ ಅದೂ ಪ್ರಾರಂಭವಾಗುತ್ತದೆ.

ಶ್ರೀ ವೆಂಕಟರಾವ್ ನಾಡಗೌಡ : ಆ 25 police Stations ಜೊತೆಗೆ ಅದು ಮೂರು ಅಲ್ಲ ನಾನು ಹೇಳಿದ್ದನ್ನೂ ಸಹ ಸೇರಿಸಿ ಮಾಡಬೇಕು.

VII) ವಿಷಯ : ಸಂಡೂರು ತಾಲ್ಲೂಕಿನಲ್ಲಿರುವ - ರಸ್ತೆಗಳು ನೆರೆ ಹಾವಳಿಯಿಂದ ಸಂಪೂರ್ಣ ನಾಶವಾಗಿದ್ದು, ಈ ರಸ್ತೆಗಳನ್ನು ದುರಸ್ಥಿಗೊಳಿಸುವ ಬಗ್ಗೆ.

ಶ್ರೀ ಇ. ತುಕಾರಾಂ (ಸಂಡೂರು) : ಮಾನ್ಯ ಅಧ್ಯಕ್ಷರೆ, ಸಂಡೂರು ತಾಲ್ಲೂಕಿನಲ್ಲಿರುವ ರಸ್ತೆಗಳು ನೆರೆ ಹಾವಳಿಯಿಂದ ಸಂಪೂರ್ಣ ನಾಶವಾಗಿದ್ದು, ಈ ರಸ್ತೆಗಳನ್ನು ದುರಸ್ಥಿಗೊಳಿಸುವ ಬಗ್ಗೆ ಮಾನ್ಯ ಲೋಕೋಪ ಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ,

ಸಂಡೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗದ ವ್ಯಾಪ್ತಿಯಲ್ಲಿ 124.60 ಕಿಮೀ ಉದ್ದದ ರಾಜ್ಯ ಹೆದ್ದಾರಿಗಳು ಹಾಗೂ 287.85 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು ಉಸ್ತುವಾರಿಯಲ್ಲಿರುತ್ತವೆ. ಈ ತಾಲ್ಲೂಕಿನ ಬಹುತೇಕ ರಸ್ತೆಗಳ ಮೇಲೆ ಅಧಿರನ್ನು ತುಂಬಿದ ಅಧಿಕ ಭಾರ ಹೊತ್ತ ವಾಹನಗಳ ಸಂಚಾರದಿಂದಾಗಿ ರಸೆಗಳ ಸ್ಥಿತಿ ಹದಗೆಟ್ಟಿರುತ್ತದೆ.

ಅದಿರು ಸಾಗಾಣಿಕೆ ವಾಹನಗಳಿಂದ ಸರ್ಕಾರಕ್ಕೆ ಆದಾಯ ಬರುತ್ತಿದ್ದರೂ ಸಹ ಸರ್ಕಾರದಿಂದ ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಿದ ಅನುದಾನದಲ್ಲಿಯೇ ರಸ್ತೆಯ ದುರಸ್ತಿ ಹಾಗೂ ಸುಧಾರಣೆ ಕಾಮಗಾರಿಗಳನ್ನು ಕೈಕೊಂಡು ರಸ್ತೆಗಳನ್ನು ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿ ಇಡಬೇಕಾಗುತ್ತದೆ. ಅದರಂತೆ 2009–10ನೇ ಸಾಲಿನಲ್ಲಿ ಒಟ್ಟು 23 ರಸ್ತೆ ಕಾಮಗಾರಿಗಳನ್ನು ರೂ.1096.63 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 19 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಬಾಕಿ 4 ಕಾಮಗಾರಿಗಳನ್ನು ಸಧ್ಯದಲ್ಲಿಯೇ ಪ್ರಾರಂಭಿಸಲಾಗುವುದು. ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಕ್ರಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಆಗಿರುವ ವೆಚ್ಚ (ರೂ. ಲಕ್ಷಗಳಲ್ಲಿ)	ಪ್ರಸ್ತಾಪಿಸಿದ ಉದ್ದ (ಕಿಮೀ.)	ಷರಾ
ಅ)	5054-ಯೋಜನೆ-ಇತರೆ ರಸ್ತೆಗಳ ನಿರ್ಮಾಣ				
1)	Strengthening to Sandur-Kumaraswamy temple road from 7.00 to 11.40(from km1.20 to 2.60) (MDR)	50.00	0.36	1.40	Work commenced.
2)	Widening and Improvements to road from SH-131 to join Metriki from km 0.00 to 1.60 (MDR)	50.00	0.60	1.60	Grade-2 metalling completed. Grade-3 metal collection is in progress.
3)	Strengthening of road from NH-63 to Metriki via Sultanpura from km 0.00 to 6.00(from km 2.00 to 4.50) (MDR)	50.00	0.00	2.50	Out of 2.50kms, only for a length of 1.50kms, both metalling and asphiting have been proposed. For the balance 1.00km length, only asphalting has been proposed. This reach has been severely damaged due to rains. Hence the contractor has expressed his inability to execute the asphalting work on the damaged metalled surface. Hence work is stopped.
4)	Strengthening and concreting in Ranjitpura villge limits on Sandur-Navalatti road from km 6.00 to 12.80 (from km 8.50 to 8.73) (MDR)	50.00		0.23	Concrete pavement completed on one side.

ಕ್ರಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಆಗಿರುವ ವೆಚ್ಚ (ರೂ. ಲಕ್ಷಗಳಲ್ಲಿ)	ಪ್ರಸ್ತಾಪಿಸಿದ ಉದ್ದ (ಕಿಮೀ.)	ಷರಾ
5)	Widening and improvements to road from NH-13 to join Yeshwanthanagar via Garaga from km 17.00 to 21.00 (frokm km 19.00 to 21.00) (MDR)	50.00	0.60	2.00	Gravel sub-base completed. Grade-2 metal collection is in progress.
6)	Widening and improvements to road from NH-13 to Nidagurti via Girenahalli-Hulikunte-Katinakamba from km 0.00 to 6.60 (MDR)	60.00	0.52	4.30	CD work completed. Grade-2 metalling work in progress.
ಬಿ)	5054-ನಬಾರ್ಡ್				
1)	Improvements to Navalatti-Narayanapura-Rajapura road in sandur taluk(MDR)	83.80		4.00	3 CDs and Gravel Sub-base work completed, Grade-2 metalling work in progress.
2)	Improvements to Road from D.Anthapura to Lingadahalli via Koracharahatti from km 0.00 to 4.00 in Sandur Taluk (Phase-1) (MDR)	77.60		3.07	Financial bids submitted to Central office for approval
ಸಿ)	5054-ಕೇಂದ್ರ ರಸ್ತೆ ನಿಧಿ				
1)	Improvements to Mylara-Toranagallu Road (SH-40) from km 118.00 to 128.00 in Sandur taluk (Job No CRF-KNT-2008-1035)	125.00	23.09	2.23	Metalling completed. Surface dressing and asphalting to be done.
ಡಿ)	5054-ವಿಶೇಷ ಅಭಿವೃದ್ಧಿ ಯೋಜನೆ				
1)	Improvements and re-carpeting to Sandur-Siruguppa road (SH-49) from km 0.00 to 1.00	62.01		1.00	Tender submitted for approval to the Circle office through e procurement Portal.

ಕ್ರಮ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಆಗಿರುವ ವೆಚ್ಚ (ರೂ. ಲಕ್ಷಗಳಲ್ಲಿ)	ಪ್ರಸ್ತಾವಿಸಿದ ಉದ್ದ (ಕಿ.ಮೀ.)	ಷರಾ
2)	Improvements and re-carpeting to Mylara-Toranagal road (SH-40) from km 124.05 to 127.25 and providing repairs to LLCs and Hard passages in between km 116.40 to 124.00.	124.10		3.20	Tender published through e_procurement portal. Last date of submission is 09-02-2010
3)	Improvements and re-carpeting to Mylara-Toranagal road (SH-40) from km 121.15 to 124.05.	99.25		2.90	2nd call invitation of Tender publication is awaited from the circle office through e_procurement portal,
ಉ)	5054-ಸುವರ್ಣ ರಸ್ತೆ ವಿಕಾಸ ಯೋಜನೆ				
1)	Improvements and re-carpeting to Mylara-Toranagallu (SH-40) from km 127.25 to 128.20 in Sandur taluk	49.66		0.95	Agency Fixed. Work to be started
2)	Improvements and re-carpeting to Mylara-Toranagallu (SH-40) from km 131.60 to 136.10 in Sandur taluk	54.50		4.00	Tender submitted to Circle for approval through e_procurement portal.
ಊ)	5054-ಎಸ್‌ಸಿಪಿ ಕಾಮಗಾರಿಗಳು				
	Construction of concrete road and drain in Tokenahalli village limits	12.00		0.19	Work in progress.
	Construction of concrete road and drain in Thimmalapura-Koracharahatti village limits	11.30		0.08	Work in progress.
	Construction of concrete road and drain in Bhujanganagar Harijan colony	10.00		0.12	Work in progress.
	Construction of concrete road and drain in Sushilanagar village limits	10.41		0.22	Work in progress.

ಕ್ರಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಆಗಿರುವ ವೆಚ್ಚ (ರೂ. ಲಕ್ಷಗಳಲ್ಲಿ)	ಪ್ರಸ್ತಾಪಿಸಿದ ಉದ್ದ (ಕಿ.ಮೀ)	ಷರಾ
7)	5054- ಟಿಎಸ್‌ಪಿ ಕಾಮಗಾರಿಗಳು				
	Construction of concrete road and drain in mallarahalli village limits	11.34		0.33	Work in progress
	Construction of concrete road and drain in Devarabuddenahalli village limits	11.25		0.35	Work in progress
	Construction of concrete road and drain in Hulikunta village limits	8.10		0.19	Work in progress
	Construction of concrete road and drain in M.Lakkanahalli village limits	8.20		0.19	Work in progress
	Construction of concrete road and drain in U.Mallapura village limits	8.21		0.19	Work completed. Final bill to be received from sub-Division.
	ಒಟ್ಟು	1096.63	46.18		

Total no of work = 23 nos
Work taken and under progress = 19 nos
Balance work to be taken up = 4 nos

ಮಾನ್ಯ ಸದಸ್ಯರ ತಿಳುವಳಿಕೆಗೆ ಮತ್ತೊಂದು ವಿಷಯವನ್ನು ತರುತ್ತೇನೆ. ಜಿಲ್ಲಾ ಉಸ್ತುವಾರಿ ಸಚಿವರ ಜೊತೆಗೆ ನಾವು ಚರ್ಚೆ ಮಾಡಿದಾಗ ಅವರು ಆದ್ಯತೆ ಮೇಲೆ ತೆಗೆದುಕೊಳ್ಳಬೇಕಾಗಿರುವಂಥ ಮೂರು ರಸ್ತೆಗಳನ್ನು ಗಣನೆಗೆ ತೆಗೆದುಕೊಂಡು ಕೆಲಸವನ್ನು ಪ್ರಾರಂಭ ಮಾಡುತ್ತಿದ್ದಾರೆ. ಸಂಡೂರು-ಹೊಸಪೇಟೆ ರಸ್ತೆ 27 ಕಿ.ಮೀ., ಸಂಡೂರು-ಕೂಡ್ಲಿಗಿ ರಸ್ತೆ 43 ಕಿ.ಮೀ., ಸಂಡೂರು-ತೋರಣಗಲ್ ರಸ್ತೆ 20 ಕಿ.ಮೀ. ಈ ಮೂರೂ ರಸ್ತೆಗಳನ್ನು PGS ನಲ್ಲಿ viable gap pending ಯೋಜನೆಯಲ್ಲಿ DPR ready ಮಾಡಿದ್ದೇವೆ, 370 ಕೋಟಿ ರೂ.ಗಳಲ್ಲಿ ಏಪ್ರಿಲ್ ಮೊದಲ ವಾರದಲ್ಲಿ ಟೆಂಡರ್ ಕರೆಯುವ ಕಾರ್ಯಕ್ರಮವಿದೆ. ಈಗಾಗಲೇ Reliance, L & T and Jindal, KMC, RM ಈ 5 ಕಂಪನಿಯವರೂ ಈ ಯೋಜನೆಯಲ್ಲಿ ಆಸ್ಥೆ ವಹಿಸಿದ್ದಾರೆ. ಈ ರಸ್ತೆಗಳು ಗುಣಮಟ್ಟದ ರಸ್ತೆಗಳಾಗುತ್ತಿರುವು ದರಿಂದ ಸಮಸ್ಯೆಗೆ ಸ್ವಲ್ಪಮಟ್ಟಿಗೆ ಪರಿಹಾರವಾಗುತ್ತದೆನ್ನುವ ಭರಸವೆಯನ್ನು ನಾನಿಟ್ಟು ಕೊಂಡಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ನಿಮ್ಮ ಹೇಳಿಕೆ ನೋಡಿದರೆ ನಮಗೆ ಸಮಾಧಾನವಾಗುವುದಿಲ್ಲ. ನಾನು ಯಾವುದೋ ಒಂದು ಮದುವೆಗೆ ಸಂಡೂರಿಗೆ ಹೋಗಬೇಕಾಗಿತ್ತು, ಹೋಗಿದ್ದೆ. ಅದರಲ್ಲಿಯೂ ಹೊಸಪೇಟೆ-ಸಂಡೂರು ರಸ್ತೆಯಲ್ಲಿ ಹೋದಾಗ ಕರ್ನಾಟಕದಲ್ಲಿ ಇಂಥ ರಸ್ತೆ ಇತ್ತೇ ಎಂದು ಇತಿಹಾಸದಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಸಂಡೂರು ತಾಲ್ಲೂಕು ಎಂದರೆ ಇಡೀ ದೇಶದಲ್ಲಿ highest Helicopters ಇರುವಂಥ ತಾಲ್ಲೂಕಾಗಿದೆ ಮತ್ತು richest taluk in the country. ಅಷ್ಟೊಂದು Helicopters ಇಟ್ಟಿರುವಂಥ ಶ್ರೀಮಂತ ತಾಲ್ಲೂಕಿನಲ್ಲಿ ರಸ್ತೆ ಈ ಮಟ್ಟದಲ್ಲಿದೆ ಎಂದರೆ ಇದೇನು ಕತೆ? ಎಲ್ಲರೂ ಆಕಾಶವನ್ನೇ ನೋಡಿಕೊಂಡು ಹೋದರೆ ನೆಲದ ಮೇಲೆ ಓಡಾಡುವವರ ಕತೆ ಏನು? ಅಲ್ಲಿಗೆ ಹೋಗುವುದು ಒಂದು ಕರ್ಮ ಎಂದು ನನಗನಿಸಿತು.

ಶ್ರೀ ಸಿ.ಎಂ. ಉದಾಸಿ : ತಾವೂ ಮಂತ್ರಿಯಾಗಿ ಕೆಲಸ ಮಾಡಿದಂಥವರು. ತಮಗೆ ಗೊತ್ತಿಲ್ಲದಿರುವ ವಿಚಾರವೇನಿಲ್ಲ. ಅವರೊಂದು ಮಾತು ಹೇಳಿದರು, ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿಯೇ 4 ಕೋಟಿ ಟನ್ ಅದಿರು ಒಂದು ವರ್ಷದಲ್ಲಿ ಅಲ್ಲಿಂದ ಸಾಗಾಣಿಕೆಯಾಗುತ್ತಿದೆ ಎನ್ನುವುದನ್ನು ಹೇಳಿದ್ದಾರೆ. ಹೀಗಿರುವಾಗ ಆ density of workload ಏನಾಗುತ್ತದೆ? ಆ

O.17 F-29

ರಸ್ತೆ ಮೇಲೆ ಹೋಗುವ ಭಾರದಿಂದಾಗಿ ಆ roads ಪರಿಸ್ಥಿತಿ ಏನಿದೆ ಎನ್ನುವುದನ್ನು ಅರ್ಥ ಮಾಡಿಕೊಂಡರೆ ಇವತ್ತು ಈ ರೀತಿಯಲ್ಲಿ ನಾವು ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ 360 ಕೋಟಿ ರೂ.ಗಳಲ್ಲಿ ಮೂರು ಯೋಜನೆಗಳಿಗೆ ಕ್ರಮ ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಅಷ್ಟಕ್ಕೇ ಸಮಾಧಾನವಾಗುವುದಿಲ್ಲ. ಅದಿರು ಸಾಗಾಣಿಕೆಯಿಂದಾಗಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ.

(ಗೊಂದಲ)

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆ. ಈಗ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಇದು ಅವರ ಕ್ಷೇತ್ರದ ಸಮಸ್ಯೆ. ಅವರು ಕೇಳಲಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಸಂಪತ್ತು ಹೋಗುತ್ತಿರುವುದನ್ನು ತಡೆಯುವುದಕ್ಕಾಗುತ್ತಿಲ್ಲ.

(ಗೊಂದಲ)

SRI QAMARUL ISLAM : Hon'ble Minister for Animal Husbandry is the richest man.. .. all the cement factories from wadi to Shahabad...... density. . .

MR. SPEAKER : Whatever it is, it is the problem of his constituency.

ಶ್ರೀ ಖಮರುಲ್ ಇಸ್ಲಾಂ : Density ಸಲುವಾಗಿ ತಾವು ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಸಿ.ಎಂ. ಉದಾಸಿ : ಟೆಂಡರ್ ಕರೆದಿದ್ದೇವೆ, ಅದಕ್ಕೆ ಗುತ್ತಿಗೆದಾರರನ್ನು ಗೊತ್ತು ಮಾಡಲಾಗಿದೆ.

ಶ್ರೀ ಇ. ತುಕಾರಾಂ : ನಂಜುಂಡಪ್ಪ ವರದಿ ಪ್ರಕಾರ ನನ್ನ ಕ್ಷೇತ್ರ ಅತ್ಯಂತ ಹಿಂದುಳಿದ ಕ್ಷೇತ್ರವಾಗಿದೆ. ಏಕೆಂದರೆ, ಅಲ್ಲಿ ಸರಿಯಾದ ರಸ್ತೆಗಳಿಲ್ಲ. ಸಂಡೂರು ತಾಲ್ಲೂಕಿನಲ್ಲಿ ಅತೀ ಹೆಚ್ಚು ಗಣಿ ಪ್ರದೇಶ ಹೊಂದಿದ್ದು, ಸುಮಾರು 40 ಮಿಲಿಯನ್ ಟನ್‌ನಷ್ಟು production ಆಗಿ ಅದರಲ್ಲಿ 20–25 ಮೆಟ್ರಿಕ್ ಟನ್‌ನಷ್ಟು movement ರಸ್ತೆಗಳ ಮೂಲಕ ಆಗುತ್ತಿದೆ. ಇದರಿಂದಾಗಿ ಈಗೇನು ನಾವು ಮಂತ್ರಿಯವರಿಗೆ ಮನವಿ ಕೊಟ್ಟಿದ್ದೇವೆ, ಅದರಲ್ಲಿ State and National Highways ಬಗ್ಗೆ ಮಾತ್ರ ಕೊಟ್ಟಿದ್ದೇವೆ. ಜಿಲ್ಲಾ ರಸ್ತೆಗಳೂ

ಸ್ಮಶಾನದ ಸ್ಥಿತಿಗೆ ಬಂದಿವೆ. ಇಂಥ ಗಂಭೀರ ಪರಿಸ್ಥಿತಿಯನ್ನು ಪರಿಗಣಿಸ ಬೇಕು. ಈ ಬಗ್ಗೆ ನಾನು ಹಲವಾರು ಸಾರಿ ಮಂತ್ರಿಯವರಿಗೆ ಮನವಿ ಮಾಡಿದ್ದೇನೆ. ಅದೇ ರೀತಿ ಡಿಸೆಂಬರ್ 23ನೇ ತಾರೀಖು ಸದನದ ಗಮನ ಸೆಳೆದಿದ್ದೇನೆ. ಇವತ್ತಿನವರೆಗೂ ಯಾವುದೇ ರೀತಿಯಾಗಿ ಸಮರ್ಪಕವಾಗಿ ಮಂತ್ರಿಯವರಿಂದ ಉತ್ತರ ಬಂದಿಲ್ಲ. ಅದೇ ರೀತಿ, 135 ಕೋಟಿ ರೂ.ಗಳ ಪ್ರಸ್ತಾವನೆಯನ್ನೂ ಸಹ ಸಲ್ಲಿಸಿದ್ದೇನೆ. ಈಗ PPP System ನಲ್ಲಿ ಅದನ್ನು ನಾವು ತೆಗೆದುಕೊಳ್ಳುತ್ತಿದ್ದೇವೆಂದು ಹೇಳುತ್ತಿದ್ದಾರೆ. ನಾನು ಎಂಎಲ್ಎ ಯಾದಾಗಿನಿಂದಲೂ ಅಂದರೆ ಕಳೆದ ಎರಡು ವರ್ಷಗಳಿಂದಲೂ ಇದೇ ರೀತಿ ಹೇಳುತ್ತಿದ್ದಾರೆ. ಅಲ್ಲಿ ಈಗ ಯಾವ ಸ್ಥಿತಿ ಇದೆ ಎಂದರೆ, ಬಹಳ ದುಸ್ಥಿತಿ ಬಂದೊದಗಿದೆ. ಸಂಡೂರು ಜನರು ಈಗ ಆಸ್ಪತ್ರೆಯ ಹಾಸಿಗೆ ಮೇಲೆ ಇದ್ದಾರೆ, ಅವರಿಗೆ PPP System ಆದಮೇಲೆ ಒಳ್ಳೆಯ treatment. ಈಗ ನಮಗೆ ಗಂಜಿನೀರು ಅದನ್ನು ಕೊಡಿ. ಏಕೆಂದರೆ, ಇವತ್ತು ಬಸ್‌ಗಳು ಕೂಡ ಹೋಗುವ ಪರಿಸ್ಥಿತಿಯಲ್ಲಿಲ್ಲ. ಶಾಲಾ ಕಾಲೇಜುಗಳಿಗೆ ಮಕ್ಕಳು ಹೋಗಲಾರದ ಪರಿಸ್ಥಿತಿ ಬಂದಿದೆ. ಅದೇ ರೀತಿ ಸಾಮಾನ್ಯ ಜನಜೀವನದ ಮೇಲೆ ದುಷ್ಪರಿಣಾಮ ಬೀರಿದೆ. ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ. ಈ ರಸ್ತೆಗಳ ದುರಸ್ಥಿಯನ್ನು ಮಾಡಲಿಕ್ಕೆ immediate ಆಗಿ ಅಂದಾಜು ಪಟ್ಟಿಯಲ್ಲಿ ಪರಿಗಣಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಸಿ.ಎಂ.ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಏಪ್ರಿಲ್ ತಿಂಗಳಿನಲ್ಲಿ ಟೆಂಡರ್ ಕರೆಯುತ್ತಿದ್ದೇವೆ. ಗುತ್ತಿಗೆದಾರರಿಗೆ ಆ ರಸ್ತೆ ನಿರ್ಮಿಸುವ ಪೂರ್ವದಲ್ಲಿ ನಿರ್ವಹಣೆಯ ಜವಾಬ್ದಾರಿಯೂ ಅವರಿಗೆ ಇರುತ್ತದೆ. ಹೀಗಿರುವುದರಿಂದ ಅವರಿಗೆ ಈ ಸಮಸ್ಯೆ ಪರಿಹಾರವಾಗುತ್ತದೆನ್ನುವ ಭರವಸೆ ಕೊಡುತ್ತಿದ್ದೇನೆ. ಉಳಿದ ರಸ್ತೆಗಳ ಬಗ್ಗೆ ಹೇಳಿದ್ದಾರೆ. ಅವುಗಳ ಬಗ್ಗೆ ಗಮನಹರಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಉದಾಸಿಯವರೆ, ತಾವು ಒಂದು ಸಾರಿ ಸಂಡೂರಿನಿಂದ ಹೊಸಪೇಟೆಗೆ ದಯವಿಟ್ಟು ಹೋಗಿಬರುತ್ತೀರಾ? ಬೇಕಾದರೆ ನಾನು ನೀವು ಜೊತೆಯಲ್ಲಿ ಹೋಗೋಣ. ಅಲ್ಲಿ ಏನಾಗಿದೆ ಎಂದರೆ, ಕಳೆದ ವಾರ ನಾನು ಅಲ್ಲಿಗೆ ಹೋಗಿದ್ದೆ. ಅಲ್ಲಿ ರಸ್ತೆ ಏಕೆ ರಿಪೇರಿ ಮಾಡುತ್ತಿಲ್ಲವೋ ನನಗೆ ಗೊತ್ತಿಲ್ಲ. ಬಹುಶಃ ಅದನ್ನು ಮಾಡಲೂಬಾರದು ಎಂದು ಇರಬೇಕು, ಅಧಿಕಾರಿಗಳು ಶಾಮೀಲು ಆಗಿಬಿಟ್ಟಿದ್ದಾರೆ. ಕಳ್ಳ ಗಣಿಗಾರಿಕೆಯಲ್ಲಿ ಅದಿರು

ಕದ್ದೊಡೆಯುವುದಕ್ಕೆ, ಅಲ್ಲಿ ಮೋಟಾರು ಬೈಕ್ ತಿರುಗಾಡುವುದಕ್ಕೆ ಆಗುವುದಿಲ್ಲ. ಕಾರು ಬಸ್ಸುಗಳು ಹೋಗುವುದು ಬಿಡಿ, ನನ್ನನ್ನು ತುಕರಾಂ ರವರು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿದರು. ನನ್ನ ಕಾರು ಹೋಗುವುದಕ್ಕೆ ಆಗದೇ ಜೀಪು ತರಿಸಿಕೊಂಡು ವಾಪಸ್ ಬಂದೆ. ನಾನು ಅಲ್ಲೆಲ್ಲೋ ಅಕ್ರಮ ಗಣಿಗಾರಿಕೆ ನಡೆಯುತ್ತದೆಂದು ಹೋಗಿದ್ದೆ. ಅಲ್ಲಿ ಕಾರು ಹೋಗುವುದಕ್ಕೆ ಆಗದೇ, ನನ್ನ ಕಾರು ನಿಂತು ಹೋಗಿ, ಇವರು ಜೀಪು ತರಿಸಿದ ಮೇಲೆ ಅದರಲ್ಲಿ ನಾನು ಬಂದೆ. ದಯವಿಟ್ಟು ಪಾಪ ಅವರು ಹೇಳುವ ರಸ್ತೆ ಇದೆಯೆಲ್ಲ, ಅಲ್ಲಿ ನಿಮಗೆ ರಾಯಲ್ಟಿಯಿಂದ ದುಡ್ಡು ಬರುತ್ತದೆ, ಅಲ್ಲಿ ಏನು ಮಾಡಿದ್ದಾರೆಂದರೆ ಯಾರೂ ತಿರುಗಾಡದೆ ಇರಲಿ, ಎಲ್ಲಾ ಕದ್ದೊಡೆಯುವುದಕ್ಕೆ ಲಾರಿಗಳು ಹೋಗುವುದಕ್ಕೆ ಮಾತ್ರ ಮಾಡಿಕೊಂಡಿದ್ದಾರೆ. ಏಕೆಂದರೆ ಕದ್ದೊಡೆಯುವುದು ಬೇರೆ ಜನಗಳಿಗೆ ಗೊತ್ತಾಗಿ ಬಿಡುತ್ತದೆ ಅಲ್ಲವೆ, ಅದರಿಂದ ನೀವು ಕೂಡಲೇ ಸಂಡೂರು ಮತ್ತು ಆ ಕ್ಷೇತ್ರದಲ್ಲಿ ಬಸ್ಸುಗಳು ಅಲ್ಲಿ ಓಡಾಡುವುದಕ್ಕಾಗುವುದಿಲ್ಲ, ಎಂದು ಬಸ್‌ಗಳನ್ನು ತೆಗೆದು ಹಾಕಿಬಿಟ್ಟರು. ಸಂಡೂರಿನಿಂದ ಹೊಸಪೇಟೆಗೆ ಬಸ್‌ಗಳೇ ಇಲ್ಲ. ಏಕೆಂದರೆ ಹೆಲಿಕಾಪ್ಟರ್ ಇರುವವರು ಸ್ವಂತ ಅವರು ಹೋಗುತ್ತಾರೆ. What about the common man? ಅದಕ್ಕೆ ದಯವಿಟ್ಟು ನೀವು ಬೇರೆ ಬೇರೆ ಕಡೆಗೆ ನಿಮ್ಮ ಕ್ಷೇತ್ರಕ್ಕೆ ನಿಮ್ಮ ಜಿಲ್ಲೆಗೆ ಶಿಕಾರಿಪುರಕ್ಕೆ ಎಲ್ಲವನ್ನೂ ಕೊಡಬೇಡಿ. ಶಿಕಾರಿಪುರಕ್ಕೆ ಎಷ್ಟು ದುಡ್ಡು ಕೊಟ್ಟಿದ್ದೀರಿ? ನಿಮ್ಮಲ್ಲಿ ಎಷ್ಟು ದುಡ್ಡು ಕೊಟ್ಟಿದ್ದೀರಿ? ಅವರ ರಸ್ತೆಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಹೇಳಿ ನೋಡೋಣ. ಅಲ್ಲಿ ಬಸ್‌ಗಳನ್ನಾದರೂ ತಿರುಗಾಡುವ ತರಹ ಮಾಡಿ. ಮಾನ್ಯ ಉದಾಸಿಯವರು ಮೊದಲು ಉದಾರವಾಗಿದ್ದರು, ಏಕೆ ನೀವು ಹೀಗೆ ಆಗಿ ಬಿಟ್ಟಿರಿ? ಈಗ ಉದಾರತೆ ಹೋಗಿಬಿಟ್ಟಿತು. ಹಿಂದೆ ನಮ್ಮ ಕಾಲದಲ್ಲಿ ಲೋಕೋಪಯೋಗಿ ಇಲಾಖೆಯ ಸಚಿವರು ಆಗಿದ್ದಾಗ ಚೆನ್ನಾಗಿದ್ದೀರಿ. ಈಗ ಬಿಜೆಪಿಗೆ ಹೋದ ಮೇಲೆ ಇಷ್ಟೊಂದು ದುಡ್ಡು ತೆಗೆದುಕೊಂಡು ಶಿಕಾರಿಪುರಕ್ಕೆ, ಹಾನಗಲ್‌ಗೆ ತೆಗೆದುಕೊಂಡು ಹೋಗಿ ಹಾಕುತ್ತೀರಿ. ಬೇರೆ ಕಡೆಗೆ ಏನು ಮಾಡಬೇಕು? ನಮ್ಮ ಮತಕ್ಷೇತ್ರದಲ್ಲಿ ದುಡ್ಡು ಎಲ್ಲಿ ಬೇಡವೋ ಅಲ್ಲಿಗೆ ತೆಗೆದುಕೊಂಡು ಹೋಗಿ ಹಾಕಿ ಬಿಟ್ಟಿದ್ದೀರಿ. ಅದು ಯಾವುದು influence ಎಂದುಕೊಂಡು, ಮಾನ್ಯ ಅಧ್ಯಕ್ಷರೆ, ನೀವು ಒಂದು ಸಾರಿ ಬೇಕಾದರೆ ಸಂಡೂರಿನಿಂದ ಹೊಸಪೇಟೆಗೆ ಹೋಗಿ ಬನ್ನಿ.

ಅಧ್ಯಕ್ಷರು : ಎಲ್ಲಾ ಕಡೆ ಇದೆ, ನಮ್ಮೂರಿನಲ್ಲೂ ಅದೇ ಪರಿಸ್ಥಿತಿ ಇದೆ.

ಶ್ರೀ ಸಿದ್ಧರಾಮಯ್ಯ : ಅಲ್ಲಿ ರೋಡೆ ನೋಡಿಲ್ಲ. ಅಲ್ಲಿ ಏನಿದ್ದರೂ ಕಳ್ಳ ಅದಿರು ಸಾಗಾಣಿಕೆ ಹೊಡೆಯುವ ಲಾರಿಗಳು ಮಾತ್ರ ಇಟ್ಟುಕೊಂಡಿದ್ದಾರೆ. ಬಸ್ಸುಗಳು, ಕಾರುಗಳು, ಮೋಟಾರ್ ಬೈಕ್‌ಗಳು ಹೋಗಬಾರದು, ಜನಗಳು ಹೋಗಲಾರದ ರೀತಿಯಲ್ಲಿ ಮಾಡಿ ಇಟ್ಟಿದ್ದಾರೆ. ದಯವಿಟ್ಟು ಮಾನ್ಯ ಸದಸ್ಯರು ಕೇಳಿರುವುದರ ಬಗ್ಗೆ ಉದಾರವಾಗಿ, ಧಾರಾಳವಾಗಿ, ಮಾನ್ಯ ಮಂತ್ರಿಗಳು ಹೇಳಬೇಕು. Public Private Partnership ಅದು ಯಾವ ಕಾಲಕ್ಕೆ ಆಗುತ್ತದೊ ಅದು ಬೇಡ.

ಶ್ರೀ ಸಿ.ಎಂ.ಉದಾಸಿ : ಧಾರವಾಡ – ರಾಮನಗರ, ರಿಬ್ಬನ್ ಪಳ್ಳಿ – ವಾಗ್ಜರಿ ರಸ್ತೆಗಳನ್ನು ಮಾಡಿ ಕೊಡಲಾಗುವುದು.

ಶ್ರೀ ಇ.ತುಕಾರಾಂ : ಅಲ್ಲಿ ರಸ್ತೆಗಳು ಯಾವ ರೀತಿ ಇದೆ ಎನ್ನುವ ಬಗ್ಗೆ ಚಿತ್ರಗಳನ್ನು ತಮಗೆ ಬೇಕಾದರೆ ಕೊಡುತ್ತೇನೆ. ಸಿ.ಡಿ. ಬೇಕಾದರೆ ತಮಗೆ ಕೊಡುತ್ತೇನೆ.

ಶ್ರೀ ಸಿ.ಎಂ.ಉದಾಸಿ : ಒಂದು ನಿಮಿಷ ಕೇಳಿ. ಮಾನ್ಯ ಸಿದ್ಧರಾಮಯ್ಯ ನವರಿಗೆ ಗೊತ್ತಿದೆ. ನಾನು ಉತ್ತರ ಕೇಳಿದ ಮೇಲೆ ತಾವು ಮಾತನಾಡಿ. ನಾವು ಕೆಲಸ ಮಾಡುವಾಗ ಒಬ್ಬರಿಗೊಂದು ಮತ್ತೊಬ್ಬರಿಗೊಂದು ಎಂದೂ ಮಾಡಲಿಕ್ಕೆ ಹೋಗಿಲ್ಲ. ಮಾಡಿಲ್ಲ. ಇಲ್ಲಿ ಬಂದಿರುವ ಪ್ರಶ್ನೆ ಏನೆಂದರೆ, ರಸ್ತೆಗಳ ದುರವಸ್ಥೆಯ ಬಗ್ಗೆ ಹೇಳಿದಿರಿ, ಇದು ನನ್ನ ಅನುಭವಕ್ಕೂ ಬಂದಿದೆ. ನಾನು ಅಲ್ಲಿಗೆ ಹೋಗಿಲ್ಲ ಎನ್ನುವ ಒಂದೇ ಕಾರಣದಿಂದ ಏನೂ ಗೊತ್ತಿಲ್ಲವೆಂದು ತಿಳಿದುಕೊಂಡು ನಾನು ಸುಮ್ಮನೆ ಇದ್ದೇನೆ. ಈ ರಸ್ತೆಗಳನ್ನು ಒಂದು ಕಿಲೋಮೀಟರ್‌ನ್ನು ಕೇವಲ 20–30 ಲಕ್ಷ ರೂಪಾಯಿಗಳಲ್ಲಿ ಮಾಡುವಂಥ ರಸ್ತೆಗಳಲ್ಲ. ಕನಿಷ್ಟ ಒಂದು ಕಿಲೋಮೀಟರ್‌ಗೆ ಎರಡು ಕೋಟಿ ರೂಪಾಯಿ ಗಳನ್ನಾದರೂ ಖರ್ಚು ಮಾಡಿ ಗುಣಮಟ್ಟದ ರಸ್ತೆ ಮಾಡಬೇಕೆನ್ನುವ ಉದ್ದೇಶದಿಂದಲೇ PGF ನಲ್ಲಿ ಇದನ್ನು ತಯಾರಿಸಿದಾಗ violation gap vending ನಲ್ಲಿ ಸುಮಾರು 4–5 ಕಂಪನಿಗಳವರು ಅದನ್ನು ಒಪ್ಪಿಕೊಂಡು ಮುಂದೆ ಬಂದಿದ್ದಾರೆ. ಏಪ್ರಿಲ್‌ನಲ್ಲಿ ಟೆಂಡರ್ ಕರೆಯುತ್ತೇವೆ. ಟೆಂಡರ್ ಕರೆದು ಕೆಲಸ ಮಾಡಬೇಕಾಗಿದ್ದರೆ 3–4 ತಿಂಗಳಿನಲ್ಲಿ ಕೆಲಸ ಪ್ರಾರಂಭವಾಗಿ ಉತ್ತಮ ಗುಣಮಟ್ಟದ ರಸ್ತೆಗಳು ಆಗಬೇಕಾಗಿತ್ತು ಎನ್ನುವ ಮಾತು ಬೇರೆ. ಅದರ

ಮಧ್ಯದಲ್ಲಿ ಆಗತಕ್ಕಂಥ ರಿಪೇರಿ ದುರಸ್ತಿ ಕೆಲಸವನ್ನು ಮಾಡಿಸುತ್ತೇನೆಂದು ಹೇಳಲಿಕ್ಕೆ ಬಯಸುತ್ತೇನೆ.

(ಗೊಂದಲ)

ಶ್ರೀ ಇ.ತುಕರಾಂ : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಇದೆ. ದಯಮಾಡಿ ತಾವು ನಮ್ಮ ರಕ್ಷಣೆಗೆ ಬರಬೇಕು. ಮಾನ್ಯ ಲೋಕೋಪಯೋಗಿ ಸಚಿವರು ಒಂದು ಸಾರಿ ಅಲ್ಲಿಗೆ ಹೋಗಿ ಬಂದರೆ ಅವರಿಗೆ ಅದರ ಪರಿಸ್ಥಿತಿ ಏನು ಇದೆ ಎಂಬುದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ : ಮಾಡಿಸಿ ಕೊಡುತ್ತೇನೆ. ಬಿಡಿ.

ಅಧ್ಯಕ್ಷರು : ಮಾಡಿಸಿ ಕೊಡುತ್ತೇನೆಂದು ಹೇಳಿದ್ದಾರೆ. ಗುಂಡಿ ಮುಚ್ಚುವ ಕೆಲಸ ಮಾಡಿಸುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಇ.ತುಕರಾಂ : ಅಲ್ಲಿ ರಸ್ತೆಗಳೆಲ್ಲ ಹಾಳಾಗಿ ಹೋಗಿದೆ.

ಶ್ರೀ ಸಿ.ಎಂ.ಉದಾಸಿ : ಸಧ್ಯದಲ್ಲಿಯೇ ರಿಪೇರಿ ಮಾಡಿಸುತ್ತೇನೆ.

ಅಧ್ಯಕ್ಷರು : ಆಯಿತು ಬಿಡಿ. ದಿನೇಶ್ ಗುಂಡುರಾವ್‌ರವರು ತಾವು ಕೇಳಿ.

ಶ್ರೀ ಆರ್. ದಿನೇಶ್ ಗುಂಡುರಾವ್ : ಮಾನ್ಯ ಅಧ್ಯಕ್ಷರೆ ನನ್ನ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುವುದಕ್ಕೆ ಮಾನ್ಯ ಸಚಿವರಾದ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಇಲ್ಲಿ ಇಲ್ಲವಲ್ಲ.

ಶ್ರೀ ಸಿ.ಎಂ. ಉದಾಸಿ : ಅವರು ನನಗೆ ಹೇಳಿ ಹೋಗಿದ್ದಾರೆ.

ಶ್ರೀ ಆರ್.ದಿನೇಶ್ ಗುಂಡುರಾವ್ : ಮಾನ್ಯ ಸಚಿವರೆ, ಅವರು ಈಗ ತಾನೆ ಇದ್ದರಲ್ಲಾ. ಅರ್ಧಗಂಟೆಯ ಹಿಂದೆ ಅವರು ಇದ್ದರು.

ಅಧ್ಯಕ್ಷರು : ಸಂಚೇತಕರೆ, ಸಚಿವರು ಎಲ್ಲಿಗೆ ಹೋಗಿದ್ದಾರೆ ನೀವು ಗಮನಿಸಬೇಕು.

ಶ್ರೀ ಆರ್.ರೋಷನ್ ಬೇಗ್ : ಸಚಿವರು ಇರಬೇಕು ಅಲ್ಲವೆ? ಎಲ್ಲಿಗೆ ಹೋಗಿದ್ದಾರೆ ಕರೆಸಿ.

ಶ್ರೀ ಸಿ.ಎಂ.ಉದಾಸಿ : ನಾನು ಉತ್ತರ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಇಲಾಖೆಯ ಬಗ್ಗೆ ಉತ್ತರ ಹೇಳುವುದಕ್ಕೆ ಅವರು ಇರಬೇಕು ಅಲ್ಲವೆ? ಹಾಗಾದರೆ ಅವರು ಏಕೆ ಇರಬೇಕು, ಹಾಗಾದರೆ ರಾಜೀನಾಮೆ ತೆಗೆದುಕೊಳ್ಳಿ.

ಶ್ರೀ ಆರ್. ದಿನೇಶ್ ಗುಂಡುರಾವ್ : ಈಗ ಅರ್ಧಗಂಟೆಯ ಹಿಂದೆ ಇಲ್ಲಿ ಇದ್ದರು. ಕುಡಿಯುವ ನೀರಿನ ಬಗ್ಗೆ ಸರ್ಕಾರಕ್ಕೆ ಗಂಭೀರತೆಯಿಲ್ಲವೇ? ಪಾಪ, ಮಾನ್ಯ ಉದಾಸಿಯವರಿಗೆ ನೀರಿನ ಸಮಸ್ಯೆ ಬಗ್ಗೆ ಉತ್ತರ ಕೊಡುವುದಕ್ಕೆ ಆಗುತ್ತದೆಯೆ?

ಶ್ರೀ ಆರ್.ರೋಷನ್ ಬೇಗ್ : ಕುಡಿಯುವ ನೀರಿನ ಬಗ್ಗೆ ಸರ್ಕಾರಕ್ಕೆ ಸೀರಿಯೆಸ್ ಇಲ್ಲವೆ? ಯಾರ್‍ಯಾರು ಕಂಟ್ರಾಕ್ಟರ್ಸ್ ಇದ್ದಾರೆ? ಕಂಟ್ರಾಕ್ಟರ್ಸ್ ಮಾಫಿಯಾ ಏನು? ಕುಡಿಯುವ ನೀರಿನ ಸಮಸ್ಯೆ ಏಕೆ ಆಗುತ್ತಿದೆ? ಎಷ್ಟು ಜನ ಕಂಟ್ರಾಕ್ಟರ್ಸ್ ಇದ್ದಾರೆ?

(ಗೊಂದಲ)

ಅಧ್ಯಕ್ಷರು : ಅವರು ಈಗ ಉತ್ತರ ಕೊಡಲಿ ನೋಡೋಣ.

ಶ್ರೀ ಸಿ.ಎಂ.ಉದಾಸಿ : ತಾವು ಬಯಸಿದರೆ ಈಗ ಉತ್ತರ ಹೇಳುತ್ತೇನೆ. ತಾವು ಅಪೇಕ್ಷೆ ಪಟ್ಟರೆ ನಾಳೆ ಉತ್ತರ ಹೇಳಿಸಬಹುದು.

ಶ್ರೀ ಅರ್.ರೋಷನ್ ಬೇಗ್ : ಎಷ್ಟು ಜನ ಕಂಟ್ರಾಕ್ಟರ್ಸ್ ಇದ್ದಾರೆಂದು ಗೊತ್ತಿದೆಯೆ?

ಶ್ರೀ ಸಿ.ಎಂ.ಉದಾಸಿ : ಹಿಂದಿನ ದಿನಗಳಲ್ಲಿ ಇದೇ ವಿಧಾನ ಸಭೆಯಲ್ಲಿ ತಾವು ಇಂಥ ಸಮಯದಲ್ಲಿ ಉತ್ತರ ಹೇಳಿದ್ದು ಇದೆ.

ಅಧ್ಯಕ್ಷರು : ಈಗ ಅವರು ಉತ್ತರ ಹೇಳಬೇಕೋ ಬೇಡವೋ ಹೇಳಿ.

ಶ್ರೀ ಆರ್.ರೋಷನ್ ಬೇಗ್ : ಇಲ್ಲ, ಅವರು ಬಂದ ಮೇಲೆ ಉತ್ತರ ಕೊಡಿಸಿ.

ಶ್ರೀ ಆರ್. ದಿನೇಶ್ ಗುಂಡೂರಾವ್ : ಅವರನ್ನು ಕರೆಸಿ, ಏಕೆಂದರೆ ಇಲ್ಲಿ ಸುಮಾರು ಸಮಸ್ಯೆಗಳಿವೆ. ನಾಳೆ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಸಿ.ಎಂ.ಉದಾಸಿ : ನಾಳೆ ಉತ್ತರ ಕೊಡಿಸೋಣ.

ಅಧ್ಯಕ್ಷರು : ಆಯಿತು ಬಿಡಿ, ನಾಳೆ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ಕುಡಿಯುವ ನೀರಿನ ಸಮಸ್ಯೆ ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗದೆ ಇಡೀ ರಾಜ್ಯಕ್ಕೆ ಸೀಮಿತವಾಗಿರುವುದರಿಂದ ಅನೇಕ ಸಮಸ್ಯೆಗಳು ಇವೆ. ಅದಕ್ಕಾಗಿ ಸಂಬಂಧಪಟ್ಟ ಮಂತ್ರಿಗಳು ಇರಬೇಕು.

ಅಧ್ಯಕ್ಷರು : ಆಯಿತು ಬಿಡಿ, ನಾಳೆ ಅವರನ್ನು ಕರೆಸಿ.

ಶ್ರೀ ಸಿದ್ದರಾಮಯ್ಯ : ಅದನ್ನು ಅರ್ಧಗಂಟೆ ಚರ್ಚೆಗೆ ಅವಕಾಶ ಕೊಟ್ಟರೂ ಆಗುತ್ತದೆ.

ಶ್ರೀ ನೆ.ಲ.ನರೇಂದ್ರ ಬಾಬು : ಈ ರೀತಿಯಾದರೆ ನಾವು ಶಾಸಕರುಗಳು ನಾಳೆ ಚುನಾವಣೆಯಲ್ಲಿ ಮತ ಕೇಳುವುದಕ್ಕೆ ಜನಗಳ ಮುಂದೆ ಹೇಗೆ ಹೋಗುವುದು?

ಶ್ರೀ ಆರ್.ದಿನೇಶ್ ಗುಂಡುರಾವ್ : ಅಧ್ಯಕ್ಷರೆ, ತಾವು ಇದನ್ನು ನಾಳೆಯೇ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಆಯಿತು ಬಿಡಿ. ಪ್ರಕಾಶ್ ಬಿ.ಹುಕ್ಕೇರಿಯವರು ತಾವು ಕೇಳಿ.

(7-10 PM)

VIII) ವಿಷಯ : ಬೆಳಗಾವಿ ಜಿಲ್ಲೆ ಚಿಕ್ಕೋಡಿ –ಸದಲಗ ಮತಕ್ಷೇತ್ರ ವ್ಯಾಪ್ತಿಯ ಕೆಲವು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಮರ್ಪಕ ಕಾರ್ಯಾಚರಣೆಗೆ 'ಎಕ್ಸ್‌ಪ್ರೆಸ್ ಫೀಡರ್ ಲೈನ್' ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ(ಚಿಕ್ಕೋಡಿ–ಸದಲಗ) : ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ ಚಿಕ್ಕೋಡಿ–ಸದಲಗ ಮತಕ್ಷೇತ್ರ ವ್ಯಾಪ್ತಿಯ ಕೆಲವು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಮರ್ಪಕ ಕಾರ್ಯಾಚರಣೆಗೆ 'ಎಕ್ಸ್‌ಪ್ರೆಸ್ ಫೀಡರ್ ಲೈನ್' ಕಾಮಗಾರಿಯನ್ನು ಪೂರ್ಣ ಗೊಳಿಸುವ ಬಗ್ಗೆ ಗ್ರಾಮೀಣಾಭಿವೃಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ರಾಜೀವಗಾಂಧಿ ಕುಡಿಯುವ ನೀರಿನ ಯೋಜನೆಯಡಿ ಚಿಕ್ಕೋಡಿ ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗದ ವ್ಯಾಪ್ತಿಯಲ್ಲಿ ದಿನಾಂಕ: 18–12–2007 ರಲ್ಲಿ ನಡೆದ SLEC ಸಭೆಯಲ್ಲಿ ಒಟ್ಟು ರೂ.308.00 ಲಕ್ಷ ಅಂದಾಜಿನ 12 ಎಕ್ಸ್‌ಪ್ರೆಸ್ ಫೀಡರ್ ಲೈನ್ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಚಿಕ್ಕೋಡಿ – ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿ 6 ಕಾಮಗಾರಿ

ಗಳನ್ನು ರೂ. 180.72 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೊಂಡು ದಿನಾಂಕ: 28-02-2009ರಲ್ಲಿ ಕೆಲಸ ಪ್ರಾರಂಭಿಸಲಾಗಿದೆ. ಟೆಂಡರ್ ಕರೆಯುವಾಗ, HESCOM ರವರು ನಿಗದಿಪಡಿಸಿರುವ ಐಟಂಗಳಂತೆ ಕಾಮಗಾರಿಗಳನ್ನು ಕೈಗೊಳಲಾಗಿದೆ. ತದನಂತರ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಮುನ್ನ KPTCL ರವರು ಪ್ರತಿಯೊಂದು ಯೋಜನೆಗೂ 11 KV Feeder Breaker ಗಳನ್ನು ಕಡ್ಡಾಯವಾಗಿ ಅಳವಡಿಸಲೇಬೇಕೆಂದು ಸೂಚಿಸಿದಾಗ ಕೆಲವು ಬದಲಾವಣೆ ಗಳನ್ನು ಮಾಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಶಿರಗಾಂವ್, ಕೆರೂರು, ರೂಪಿನಾಳ – ಸಿದ್ಧಾಪುರವಾಡಿ ಹಾಗೂ ಎಕ್ಸಾಂಬಾ ಗ್ರಾಮಗಳ ಎಕ್ಸ್‌ಪ್ರೆಸ್ ಫೀಡರ್‌ಲೈನ್ ಕಾಮಗಾರಿಗಳನ್ನು ಪೂರ್ಣ ಗೊಳಿಸಲಾಗಿದೆ. HESCOM ರವರಿಂದ ಪರಿವೀಕ್ಷಣೆ ಮಾಡಿದ್ದು, ಮಾರ್ಚ್ 2010ರ ಅಂತ್ಯಕ್ಕೆ ಯೋಜನೆ ಕಾರ್ಯಗತವಾಗಲಿದೆ. ಇಂಗಳಿ ಮತ್ತು ಯಡೂರ ಗ್ರಾಮಗಳ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವಾಗ ಕೃಷ್ಣ ನದಿಗೆ ಅಡ್ಡಲಾಗಿ Towerಗಳನ್ನು ನಿರ್ಮಿಸಿ ಕಾಮಗಾರಿ ಕೈಗೊಳ್ಳ ಬೇಕಾಗಿದ್ದು, ಕೆಲಸವು ಸ್ವಲ್ಪಮಟ್ಟಿಗೆ ವಿಳಂಭವಾಗಿದ್ದು, ಜುಲೈ 2010 ರೊಳಗಾಗಿ ಪೂರ್ಣಗೊಳಿಸಲಾಗುವುದು. ಉಳಿದ 2 ಕಾಮಗಾರಿಗಳಾದ ಮಾಂಗೂರ ಹಾಗೂ ಆದಿ ಮತ್ತು ಬೋಳೆವಾಡಿ ಯೋಜನೆಗಳಲ್ಲಿ ಎಲ್ಲಾ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಏಪ್ರಿಲ್ 2010 ರೊಳಗೆ ಪೂರ್ಣಗೊಳಿಸಲಾಗುವುದು. ಚಿಕ್ಕೋಡಿ ತಾಲ್ಲೂಕಿನ ಕರೋಶಿ ಗ್ರಾಮದ ಯೋಜನೆಯನ್ನು ಜೈನಾಪುರ ಕುಡಿಯುವ ನೀರಿನ ಯೋಜನೆಯಲ್ಲಿ ಅಳವಡಿಸಲಾಗಿದೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, 2008ರಲ್ಲಿ ಆರ್ ಡಿಪಿಆರ್‌ನಿಂದ ಪ್ರತಿ ಗ್ರಾಮಪಂಚಾಯತ್‌ಗೆ ಹಣ ಬಿಡುಗಡೆ ಆಯಿತು. ಅನಂತರ ಗ್ರಾಮ ಪಂಚಾಯತ್‌ನವರು ಕೆಇಬಿಗೆ ಹಣ ಕಟ್ಟಿದ್ದರು. ಹಣ ಕಟ್ಟಿದ ಮೇಲೆ ಟೆಂಡರ್ ಕರೆಯಬೇಕೆಂದು ನಾವು ಕೆಇಬಿರವರಿಗೆ ಹೇಳಿದ್ದೇವೆ. ಆದರೆ, ಏನೊ ಒಂದು ಕುಂಟು ನೆಪ ಹೇಳುತ್ತಾ ಇರುವ ಎಸ್ಟಿಮೇಟ್‌ನ್ನು ಕಡಿಮೆ, ಹೆಚ್ಚು ಮಾಡುತ್ತಾ ಹೋದರು. ಮತ್ತೆ ಇದನ್ನು ಜಿಲ್ಲಾ ಪಂಚಾಯತ್‌ಗೆ ವಹಿಸಿಕೊಟ್ಟರು. ಜಿಲ್ಲಾಪಂಚಾಯತ್ ಮೂಲಕ ಅದಕ್ಕೆ ಟೆಂಡರ್ ಕರೆಯತಕ್ಕಂಥದ್ದನ್ನು ಮಾಡಿದ್ದಾರೆ. ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯಲ್ಲಿ 12 ಗ್ರಾಮಗಳನ್ನು ಸೇರಿಸಿಕೊಂಡು ಒಂದು

ಯೋಜನೆ ಮಾಡಿದ್ದಾರೆ. ಆದ್ದರಿಂದ, ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಆದಷ್ಟು ಬೇಗನೆ ಈ ಕಾರ್ಯವನ್ನು ಪೂರ್ಣಗೊಳಿಸಿ ಎಲ್ಲಾ ಗ್ರಾಮಗಳಿಗೆ ಸಮರ್ಪಕವಾಗಿ 24 ಗಂಟೆ ನೀರನ್ನು ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕಳಕಳಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹಿಂದೆ ಕಾಮಗಾರಿ ಏಕೆ ತಡವಾಯಿತೆಂಬುದರ ಬಗ್ಗೆ ಮತ್ತು ಹೆಸ್ಕಾಂನವರು ಏನು ಮಾಡಿದ್ದಾರೆಂಬುದನ್ನು ನಾನು ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ಮತ್ತೆ ಈಗ ಪ್ರಕಾಶ್ ಹುಕ್ಕೇರಿಯವರು ಸಹ ಅದೇ ವಿಷಯವನ್ನು ಹೇಳಿದ್ದಾರೆ. ಹಿಂದೆ ತಾವೂ ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಆದ್ದರಿಂದ ಅಲ್ಲಿ ಏನು ಸಮಸ್ಯೆ ಎಂಬುದು ತಮಗೂ ಸಹ ಗೊತ್ತಿದೆ. ಈಗ ಅವೆಲ್ಲಾ ಸಮಸ್ಯೆಯನ್ನು ಮೀರಿ ಈಗ ಕೆಲಸವನ್ನು ನಾವು ಪ್ರಾರಂಭ ಮಾಡಿದ್ದೇವೆ. ಜುಲೈ 2010 ರೊಳಗಾಗಿ ಇದನ್ನು ಪೂರ್ಣಗೊಳಿಸುತ್ತೇವೆ. ಹಾಗೆಯೇ ಮತ್ತೊಂದು ಕಾಮಗಾರಿ ಏಪ್ರಿಲ್ 2010 ರೊಳಗಾಗಿ ಮುಗಿಸುತ್ತೇವೆ. ತಾವು ಈಗ ಹೇಳಿರುವಂತೆ ಇದಕ್ಕೆ ಹೆಚ್ಚು ಮುತುವರ್ಜಿ ವಹಿಸಿ ಆದಷ್ಟು ಬೇಗನೆ ಈ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇನೆ.

IX) ವಿಷಯ : ಕರ್ನಾಟಕ ಅರ್ಬನ್ ಹೌಸಿಂಗ್ ಸೊಸೈಟಿಯಲ್ಲಿ ನಿವೇಶನ ಹಂಚಿಕೆ ಹಾಗೂ ಇನ್ನಿತರ ವಿಷಯಗಳಲ್ಲಿ ಆಗಿರುವ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅರ್ಬನ್ ಹೌಸಿಂಗ್ ಸೊಸೈಟಿಯಲ್ಲಿ ನಿವೇಶನ ಹಂಚಿಕೆ ಹಾಗೂ ಇನ್ನಿತರ ವಿಷಯಗಳಲ್ಲಿ ಆಗಿರುವ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಸಹಕಾರ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) (ಸಹಕಾರ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಬಸವೇಶ್ವರ ನಗರ. ":ಕರ್ನಾಟಕ ನಗರ ವಸತಿ ಸೊಸೈಟಿ" ಎಂಬ ಈ ಸಂಘವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ನಿಯಮಗಳು 1960 ರಡಿಯಲ್ಲಿ ನೋಂದಣಿ ಯಾಗಿರುವುದಿಲ್ಲ. ಆದಾಗ್ಯೂ, ಈ ಗಮನ ಸೆಳೆಯುವ ಸೂಚನೆಯಲ್ಲಿ ತಿಳಿಸಿರುವ ಸಹಕಾರಿ ಸಂಘವು ಬೆಂಗಳೂರು

ನಗರದ ಬಸವೇಶ್ವರ ನಗರದಲ್ಲಿ, ಬಡಾವಣೆ ರಚಿಸಿರುವ "ಕರ್ನಾಟಕ ಅರ್ಬನ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ.," ಬೆಂಗಳೂರು ಎಂದು ಭಾವಿಸಿ, ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಈ ಸಂಘವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ನಿಯಮಗಳು 1960 ರಡಿಯಲ್ಲಿ ದಿನಾಂಕ: 18.07.1973 ರಂದು ನೋಂದಣಿಯಾಗಿದ್ದು, ಇದರ ಕಾರ್ಯವ್ಯಾಪ್ತಿಯು ಬೆಂಗಳೂರು ನಗರದ ಗುಡ್ಡದಹಳ್ಳಿ, ರಾಜಾಜಿನಗರದ 5ನೇ ಮತ್ತು 6ನೇ ಬ್ಲಾಕಿಗೆ ಸೀಮಿತ ವಾಗಿರುತ್ತದೆ. ಈ ಸಂಘದ ಹಾಲಿ ವಿಳಾಸವು ಸಂ: 276, 12ನೇ-ಎ ಮುಖ್ಯ ರಸ್ತೆ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10 ಆಗಿರುತ್ತದೆ.

ಸದರಿ ಸಂಘವು ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಅಗ್ರಹಾರ ದಾಸರಹಳ್ಳಿಯ ಸರ್ವೆ ನಂ: 60/1, 61/1 ಮತ್ತು 69/2 ರಲ್ಲಿ ಒಟ್ಟು 8 ಎಕರೆ 30 ಗುಂಟೆ ಜಮೀನಿನಲ್ಲಿ ಬಡಾವಣೆಯಲ್ಲಿ ನಿರ್ಮಿಸಲು ಉದ್ದೇಶಿಸಿರುತ್ತದೆ. ಸದರೀ ಜಮೀನು ಸಂಘದ ಪರವಾಗಿ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆಯಾಗಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ಮಂಜೂರಾತಿ (Layout approval) ಆಗಿರುತ್ತದೆ.

ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರು ನೀಡಿದ ಆದೇಶದಂತೆ ಸಂಘದ ಆಡಳಿತ ಮಂಡಳಿಗೆ ದಿನಾಂಕ: 07.10.2007 ರಂದು 2007-2008 ರಿಂದ 2011-2012ನೇ ಸಾಲುಗಳಿಗೆ ಚುನಾವಣೆಯು ಜರುಗಿದ್ದು ಸಂಘದ ಹೊಸ ಆಡಳಿತ ಮಂಡಳಿಯ ದಿ:10-10-2007 ರಂದು ಅಧಿಕಾರವನ್ನು ವಹಿಸಿ ಕೊಂಡಿರುತ್ತದೆ.

ಚುನಾಯಿತ ಆಡಳಿತ ಮಂಡಳಿಯು 2007-2008ನೇ ಸಾಲಿನ "ಸರ್ವ ಸದಸ್ಯರ ಸಭೆ"ಯನ್ನು ದಿ: 21-09-2008 ರಂದು ನಡೆಸಿರುತ್ತದೆ.

ಚುನಾಯಿತ ಆಡಳಿತ ಮಂಡಳಿಯ ಅಧಿಕಾರವನ್ನು ವಹಿಸಿಕೊಂಡ ನಂತರ ಸಂಘದಲ್ಲಿ ಯಾವುದೇ ನಿವೇಶನಗಳನ್ನು ನೋಂದಣಿ ಮಾಡಿರುವುದಿಲ್ಲ.

ಈ ಮಧ್ಯೆ ವಿಧಾನ ಸಭೆ ಸದಸ್ಯರಾದ ಶ್ರೀ ನೆ.ಲ.ನರೇಂದ್ರಬಾಬು ಇವರು ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಅಧಿವೇಶನದಲ್ಲಿ ನಿಯಮ 73 ರಡಿ ಗಮನ ಸೆಳೆಯುವ ನೋಟೀಸ್ ನೀಡಿದ್ದು, ಸದನದಲ್ಲಿ ಆ

ಕುರಿತು ಉತ್ತರವನ್ನು ನೀಡಲಾಗಿರುತ್ತದೆ. ತರುವಾಯ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

1. ಸದನದಲ್ಲಿ ನೀಡಿದ್ದ ಭರವಸೆಯಂತೆ ದಿನಾಂಕ: 01-02-2009 ರಂದು ಸಂಘದ ವಿವಾದಿತ ಬಡಾವಣೆಗೆ ನಾನೇ ಖುದ್ದು ಭೇಟಿ ನೀಡಿ ಪರಿಶೀಲಿಸಿರುತ್ತೇನೆ.
2. ಸರ್ಕಾರದ ಸಹಕಾರ ಇಲಾಖೆಯ ಕಾರ್ಯದರ್ಶಿಯವರು ದಿನಾಂಕ: 18-02-2009 ರಂದು ಬೆಂಗಳೂರು ನಗರದ ಪೊಲೀಸ್ ಆಯುಕ್ತರಿಗೆ ಪತ್ರವನ್ನು ಉದ್ದೇಶಿಸಿ ಸಂಘದ ವಿವಾದಿತ ಜಮೀನಿನಲ್ಲಿ ಯಾವುದೇ ಕಟ್ಟಡ, ತಂತಿ ಬೇಲಿ, ಕಾಂಪೌಂಡ್ ಇತ್ಯಾದಿಗಳನ್ನು ನಿರ್ಮಿಸಲು ಅವಕಾಶ ನೀಡದಿರಲು ಹಾಗೂ ನಿವೇಶನಗಳು ಪರಭಾರ ಆಗದಂತೆ ಸಂಘದ ಆಸ್ತಿಗೆ ಸೂಕ್ತ ರಕ್ಷಣೆಯನ್ನು ನೀಡಲು ಕೋರಿರುತ್ತಾರೆ.
3. ಈ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತರು ಕಾಮಾಕ್ಷಿಪಾಳ್ಯ ಪೋಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಇವರಿಗೆ ಪತ್ರವನ್ನು ಬರೆದು "ನ್ಯಾಯಾಲಯದ ಆಜ್ಞೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿ ವಿಷಯವು ಅಂತಿಮವಾಗಿ ತೀರ್ಮಾಣ ಆಗುವವರೆಗೆ ನ್ಯಾಯಾಲಯದ ಆಜ್ಞೆಯ ಪ್ರಕಾರ ಯಾವುದೇ ತಂತಿಬೇಲಿ, ಕಟ್ಟಡ ಇತ್ಯಾದಿ ನಿರ್ಮಿಸಲು ಅವಕಾಶ ಕೊಡಬೇಡಿ" ಎಂದು ಸೂಚನೆಯನ್ನು ನೀಡಿರುತ್ತಾರೆ.
4. ಈ ಮಧ್ಯೆ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ನೆ.ಲ.ನರೇಂದ್ರಬ್ರಾಬು ದಿ: 21-07-2009 ರಂದು ಪತ್ರವೊಂದನ್ನು ನೀಡಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು 60/1, 61/1, 69/1 ಸರ್ವೆ ನಂಬರುಗಳ ಅಗ್ರಹಾರ ದಾಸರಹಳ್ಳಿಯಲ್ಲಿಯ ಸದರಿ ಸಂಘದ ಜಾಗದಲ್ಲಿ ನೂರಾರು ಕೋಟಿ ಬೆಲೆ ಬಾಳುತ್ತಿದ್ದು, ಬೆಂಗಳೂರು ಮಹಾನಗರ ಪಾಲಿಕೆಯು ಮೆಸರ್ಸ್ ಜೈ ಪದ್ಮ ಬಿಲ್ಡರ್ಸ್, ಎಂಬುವವರಿಗೆ 3 ಎಕರೆ 7 ಗುಂಟೆ ಜಮೀನನ್ನು 5 ಖಾತೆಗಳಲ್ಲಿ ವರ್ಗಾಯಿಸಿದ್ದು, ಅಲ್ಲಿ ಒಂದು ಪೆಟ್ರೋಲ್‌ಪಂಪ್ ತೆರೆಯಲು ಎಲ್ಲಾ ಸಿದ್ಧತೆಗಳು ನಡೆಯುತ್ತಿವೆ ಎಂದು ತಿಳಿಸಿ ಪ್ರಕರಣವನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಲು ಮನವಿ ಮಾಡಿರುತ್ತಾರೆ.

ಮಾನ್ಯ ವಿಧಾನಸಭಾ ಸದಸ್ಯರ ದೂರಿನ ಹಿನ್ನೆಲೆಯಲ್ಲಿ ಸರ್ಕಾರದ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು–1, ಬೆಂಗಳೂರು ನಗರ ಜಿಲ್ಲೆ ಸ್ಥಳಕ್ಕೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಿ ವರದಿಯನ್ನು ನೀಡಿರುತ್ತಾರೆ.

5. ವರದಿಯಲ್ಲಿ ಮೆ:ಜೈ ಪದ್ಮಾವತಿ ಡೆವಲಪರ್ಸ್ ಪ್ರೈವೇಟ್ ಲಿ., ಇವರು ಸದರಿ ಸಂಘಕ್ಕೆ ಸೇರಿರುವ ಆಸ್ತಿಯ ಸರ್ವೆ ಸಂ: 60/1 ರಲ್ಲಿ 1 ಎಕರೆ 19 ಗುಂಟೆ ಹಾಗೂ 61/1– 1 ಎಕರೆ 28 ಗುಂಟೆ, ಒಟ್ಟು 3.07 ಎಕರೆ ಜಮೀನು, ಅಂದರೆ 1,39,000 ಚದರ ಅಡಿ ವಿಸ್ತೀರ್ಣದ ಪೂರ್ಣ ಆಸ್ತಿಗೆ ಖಾತೆ ವರ್ಗಾವಣೆಯನ್ನು ಬೆಂಗಳೂರು ಮಹಾನಗರ ಪಾಲಿಕೆಯ ಶ್ರೀರಾಮಮಂದಿರ ವಲಯದ ಸಹಕಂದಾಯ ಅಧಿಕಾರಿ ಇವರಿಂದ ಪಡೆದಿರುವುದಾಗಿ ಸಹಕಾರ ಸಂಘಗಳ ಉಪ ನಿಬಂಧಕರು–1, ಬೆಂಗಳೂರುರವರು ತಿಳಿಸಿರುತ್ತಾರೆ.

6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಪರ ಆಯುಕ್ತರು ದಿನಾಂಕ: 11–06–2009 ರ ಆದೇಶದಲ್ಲಿ ಸರ್ವೆ ನಂ.60/1, 61/1 ರಲ್ಲಿ ಒಟ್ಟು 3 ಎಕರೆ 7 ಗುಂಟೆ ಜಮೀನನ್ನು ಕಾನೂನುಬಾಹಿರವಾಗಿ ಕರ್ನಾಟಕ ಅರ್ಬನ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಬಡಾವಣೆ ಎಂದು ನೀಡಲಾಗಿರುವ 41 ಖಾತೆಗಳನ್ನು ಕೆ.ಎ.ಟಿ/ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ರದ್ದುಗೊಳಿಸಲು ಹಾಗೂ ಜಮೀನಿನ ಮಾಲೀಕತ್ವವನ್ನು ಹೊಂದಿರುವ ಮಾಲೀಕರನ್ನು ಗುರುತಿಸಿ ಸೂಕ್ತ ದಾಖಲೆಗಳನ್ನು ಪಡೆದು ಖಾತೆ ನೋಂದಾಯಿಸಲು ಆದೇಶ ಮಾಡಿರುವುದು ಕಂಡುಬಂದಿರುತ್ತದೆ.

7. ಈ ಮೇಲಿನ ಆದೇಶವನ್ನು ಸರಿಯಾಗಿ ಅರ್ಥೈಸದೆ ಅಂದರೆ ಜಮೀನಿನ ಮಾಲೀಕತ್ವವನ್ನು ಹೊಂದಿರುವ ಮಾಲೀಕರನ್ನು ಗುರುತಿಸದೆ, ಸೂಕ್ತ ದಾಖಲಾತಿಗಳನ್ನು ಪಡೆಯದೆ ಸಹ ಕಂದಾಯ ಅಧಿಕಾರಿ, ಶ್ರೀರಾಮಮಂದಿರ ವಲಯ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಇವರು ದಿ: 16–06–2009ರ ಹಿಂಬರಹದಲ್ಲಿ ಕರ್ನಾಟಕ ಅರ್ಬನ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿಯವರು ಸದರಿ ಪ್ರದೇಶದಲ್ಲಿ ನಿವೇಶನ

ಹಂಚಿಕೆ ಮಾಡಿ ಈ ಹಿಂದೆ ಮಾಡಿಸಲಾಗಿದ್ದ 41 ಖಾತೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸುವುದು ದಾಖಲೆ ಯಿಂದ ಕಂಡು ಬಂದಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ ಸಂಘದ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಆಡಳಿತ ಮಂಡಳಿ, ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ಪೋಲೀಸ್ ಇಲಾಖೆಯ ಅಧಿಕಾರಿಗಳು ಹೀಗೆ ಹಲವರು ಮೇಲಧಿಕಾರಿಗಳು ನೀಡಿರುವ ನಿರ್ದೇಶನಗಳನ್ನು ಹಾಗೂ ಆದೇಶಗಳನ್ನು ಸರಿಯಾಗಿ ಪಾಲಿಸದೆ ಮತ್ತು ನೀಡಿದ್ದ ಆದೇಶಗಳನ್ನು ತಪ್ಪಾಗಿ ಅರ್ಥೈಸಿಕೊಂಡು ನಿಯಮಬಾಹಿರವಾಗಿ ಖಾತೆಗಳನ್ನು ನೋಂದಾಯಿಸಿ ರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಸಂಬಂಧಪಟ್ಟ ಎಲ್ಲರನ್ನು ನ್ಯಾಯಸಮ್ಮತವಾದ ತನಿಖೆಗೆ ಒಳಪಡಿಸಿ ಸತ್ಯಸಂಗತಿಯನ್ನು ಹೊರಗೆಳೆ ಯಲು ಸದರಿ ವಿಷಯವನ್ನು ತನಿಖೆಗೆ ಒಳಪಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಅದರಂತೆ ಸದರಿ ಸಂಘವು ಅದರ ಸದಸ್ಯರಿಗೆ ನಿವೇಶನ ನೀಡುವಲ್ಲಿ ಆಗಿರುವ ಅವ್ಯವಹಾರ ಮತ್ತು ಅನೇಕ ಕಾನೂನುಬಾಹಿರ ಚಟುವಟಿಕೆಗಳ ಕುರಿತು ತನಿಖೆ ನಡೆಸಲು ಪ್ರಕರಣವನ್ನು ಸಿಐಡಿಗೆ ವಹಿಸಿ, ಸರ್ಕಾರದ ಒಳಾಡಳಿತ ಇಲಾಖೆ (ಅಪರಾಧಗಳು) ಸಚಿವಾಲಯವು ಆದೇಶ ಸಂಖ್ಯೆ ಒಇ:126:ಸಿಐಡಿ:2009 ದಿನಾಂಕ:13-11-2009 ರಲ್ಲಿ ಆದೇಶಿಸಿರುತ್ತದೆ.

ಮುಂದುವರಿದು, ಸಂಘದ ಆಡಳಿತ ಮಂಡಳಿಯವರು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ಹಾಗೂ ಸಂಘದ ನೋಂದಾಯಿತ ಉಪವಿಧಿಗಳ ಅವಕಾಶದಂತೆ ಕಾರ್ಯನಿರ್ವಹಿಸದೇ ಸಂಘದ ಆಸ್ತಿಯನ್ನು ಸಂಘದ ಸದಸ್ಯರಲ್ಲದವರಿಗೆ ಪರಭಾರೆಯಾಗಲು ಅವಕಾಶ ಮಾಡಿಕೊಟ್ಟಿರುವ ಮೇರೆಗೆ ಹಾಗೂ ಸಂಘದ ಲೆಕ್ಕಪತ್ರಗಳನ್ನು ಕಾಲಕಾಲಕ್ಕೆ ನಿಯಮಾನುಸಾರ ಬರೆದು ದಾಖಲಿಸದೇ ಇರುವ ಕಾರಣ ಮತ್ತಿತರ ಆರೋಪಗಳ ಮೇರೆಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30(1)ರ ಅನ್ವಯ ಆಡಳಿತ ಮಂಡಳಿಯನ್ನು ರದ್ದುಪಡಿಸಿ, ದಿನಾಂಕ: 22.02.2010 ರಂದು ಆಡಳಿತಗಾರರನ್ನು ನೇಮಿಸಿದ್ದು ಸದರಿ ಆಡಳಿತಗಾರರು ದಿನಾಂಕ:

25.02.2010 ರಂದು ದಿನಾಂಕ: 25.02.2010 ರಂದು ಪ್ರಭಾರವನ್ನು ವಹಿಸಿ ಕೊಂಡಿರುತ್ತಾರೆ.

ಈ ರೀತಿ ಸಹಕಾರ ಇಲಾಖೆಯಿಂದ ಈ ಪ್ರಕರಣದಲ್ಲಿ ಅವಶ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಬಹಳ ಆಶ್ಚರ್ಯ ಮತ್ತು ನೋವು ತರತಕ್ಕಂಥ ಸಂಗತಿ ಇದಾಗಿದೆ. ಕಾರ್ಡ್‌ರೋಡ್ ರಸ್ತೆಯಲ್ಲಿರುವ ನ್ಯಾಷನಲ್ ಸ್ಕೂಲ್‌ನಿಂದ ಹಾವನೂರ್ ಸರ್ಕಲ್ ಮಧ್ಯ ಇರತಕ್ಕಂಥ 8 ಎಕರೆ ಜಮೀನು ಕೋಟ್ಯಾಂತರ ರೂಪಾಯಿ ಬೆಲೆ ಬಾಳುತ್ತದೆ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಬೆಳಕು ಚೆಲ್ಲಿದಾಗ ಮಾನ್ಯ ಸಹಕಾರ ಸಚಿವರು ಇದಕ್ಕೆ ಆಸಕ್ತಿ ವಹಿಸಿ ಇದರ ಬಗ್ಗೆ ಕ್ರಮ ಕೈಗೊಂಡರು. ಇಲ್ಲಿ ಕೆಲವರು ರಾಜಕೀಯ ಕಾರ್ಯದರ್ಶಿಗಳೆಂದು ಘೋಷಣೆ ಮಾಡಿಕೊಂಡು ಅಧಿಕಾರಿಗಳಿಗೆ ಬೆದರಿಕೆ ಹಾಕಿ ಈ ಜಾಗದಲ್ಲಿ ಕಟ್ಟಡ ಕಟ್ಟುವುದಕ್ಕೆ ಒಳಗೆ ಬಂದರೆ ಸಸ್ಪೆಂಡ್ ಮಾಡಿಸುತ್ತೇನೆ ಎಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಸೊಸೈಟಿ ಆಕ್ಟ್‌ನಲ್ಲಿ ಇದು ರಿಜಿಸ್ಟರ್ ಆಗಿಲ್ಲ. ಆದ್ದರಿಂದ, ಸೊಸೈಟಿ ಆಕ್ಟ್ ಮೂಲಕ ಇದರ ಬಗ್ಗೆ ಹೇಗೆ ಕ್ರಮ ಕೈಗೊಳ್ಳುವುದು?

ಶ್ರೀ ನೆ.ಲ.ನರೇಂದ್ರಬಾಬು : ತಮ್ಮ ಗಮನಕ್ಕೆ ತರುತ್ತೇನೆ, ಮಾನ್ಯ ಸಚಿವರು ಭೇಟಿ ನೀಡಿದಾಗ ಈ ರೀತಿ ಇತ್ತು, (ಮೊದಲು ಖಾಲಿಯಿದ್ದ ಮತ್ತು ಈಗ ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಫೋಟೋಗಳನ್ನು ಪ್ರದರ್ಶಿಸಿದರು), ಖಾಲಿ ನಿವೇಶನವಿತ್ತು, ಇವತ್ತು ಅಲ್ಲಿ multi storyed building ಕಟ್ಟುತ್ತಿದ್ದಾರೆ. ಸರ್ಕಾರದ ಹೆಸರನ್ನು ಬಳಸಿಕೊಂಡು ಈ ರೀತಿ ಬೃಹತ್ ಕಟ್ಟಡವನ್ನು ಕಟ್ಟುತ್ತಿದ್ದಾರೆ. ದಯವಿಟ್ಟು ತಾವು ಇದನ್ನು ಗಮನಿಸಬೇಕು. ಇಲ್ಲಿ ನಿಜವಾಗಿಯೂ ಸರ್ಕಾರ ಇದೆಯೇ? ಸತ್ಯಕ್ಕೆ ಜಯ ಸಿಗುತ್ತದೆಯೇ? ಸತ್ಯಕ್ಕೆ ರಕ್ಷೆ ಸಿಗುತ್ತದೆಯೇ ಎಂದು ನಾನು ಕೇಳುತ್ತೇನೆ. ರಾಜಕೀಯ ಅಧಿಕಾರವನ್ನು ಬಳಸಿಕೊಂಡು ಅಲ್ಲಿರತಕ್ಕಂಥ ಪೋಲೀಸ್ ಅಧಿಕಾರಿಗಳಿಗೆ ಮತ್ತು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಧಮಕಿ ಹಾಕಿ, ಯಾರಾದರೂ ಈ ಕಟ್ಟಡಕ್ಕೆ ಪ್ರವೇಶ ಮಾಡಿದರೆ . . . . .

ಶ್ರೀ ಹೆಚ್.ಡಿ.ರೇವಣ್ಣ : ಆ ರಾಜಕೀಯ ಕಾರ್ಯದರ್ಶಿ ಯಾರು ಎಂದು ಹೇಳಿ.

ಶ್ರೀ ನೆ.ಲ.ನರೇಂದ್ರಬಾಬು : ಯಾರು ಎನ್ನುವುದನ್ನು ಹೇಳುತ್ತೇನೆ. ಬೆಳಗಾಂ ಅಧಿವೇಶನದಲ್ಲಿ ಮಾನ್ಯ ಸಚಿವರು ಇದನ್ನು ರದ್ದು ಮಾಡಬೇಕು ಎಂದು ಹೇಳುತ್ತಾರೆ. 5 ಎಕರೆ ಲ್ಯಾಂಡನ್ನು, ಲೇಔಟ್ ಅಪ್ರೂವ್ ಆಗಿರುವುದನ್ನು ಕಾರ್ಪೊರೇಷನ್ ಖಾತೆ ಮಾಡಿಕೊಡುತ್ತದೆ. ಇಲ್ಲಿಗೆ ಮಂತ್ರಿಗಳು ಭೇಟಿ ಮಾಡಿ ಆದಮೇಲೆ, ನಿವೇಶನ ಮಾಡಿ, ಲೇಔಟ್ ಮಾಡಿರುವುದನ್ನು ಪದ್ಮಾವತಿ ಬಿಲ್ಡರ್ಸ್ ಎನ್ನುವವರಿಗೆ ಎಕರೆಗಟ್ಟಲೆ ಜಮೀನನ್ನು ಒಂದು ಎಕರೆಗೆ ಕೇವಲ ಒಂದು ಲಕ್ಷ ರೂ. ಎಂದು ತೋರಿಸಿದ್ದಾರೆ. ಬೆಂಗಳೂರು ನಗರದಲ್ಲಿ ಹೌಸಿಂಗ್ ಬೋರ್ಡ್ ಪ್ರಶ್ನೆಗಳು ಬಂದರೆ ಅದನ್ನು ಹಾಗೇ ಮುಚ್ಚಿಹಾಕಿಬಿಡುತ್ತಾರೆ. ನಾನು ಹೇಳುತ್ತೇನೆ, ಇದರಲ್ಲಿ stamp duty avoid ಮಾಡಿರುವುದು, ಸದಸ್ಯರಲ್ಲದವರಿಗೆ ಜಮೀನನ್ನು ಕೊಟ್ಟಿರುವುದು ಆಗಿದೆ. ಮಂತ್ರಿಗಳೇ ಇಲ್ಲಿ ಹೇಳಿಕೆ ಕೊಟ್ಟಿದ್ದಾರೆ. 3 ಎಕರೆಯಲ್ಲಿ 3 ಖಾತೆಗಳನ್ನು ಪದ್ಮಾವತಿ ಬಿಲ್ಡರ್ಸ್ ಎನ್ನುವವರಿಗೆ ಮಾಡಿದ್ದಾರೆ. ನೈಜ ಸದಸ್ಯರು ಮೌನವಾಗಿದ್ದಾರೆ. ಅವರಲ್ಲಿ ಕೆಲವರು ರಿಟೈರ್ಡ್ ಆಗಿದ್ದಾರೆ, ಕೆಲವರು ಸತ್ತುಹೋಗಿದ್ದಾರೆ. ಆದರೆ ಸದಸ್ಯರಲ್ಲದವರಿಗೆ ಕೊಟ್ಟಿದ್ದಾರೆ. ಸಿ.ಐ.ಡಿ. ತನಿಖೆಗೆ ದಿನಾಂಕ:13–11–2009ರಂದೇ ವಹಿಸಿದ್ದರೂ ಇವತ್ತು ಅಲ್ಲಿ ಅನಾಯಾಸವಾಗಿ ಕಟ್ಟಡವನ್ನು ಕಟ್ಟುತ್ತಿದ್ದಾರೆ. ಇವತ್ತೂ ನೀವು ಅಲ್ಲಿಗೆ ಯಾರನ್ನಾದರೂ ಕಳುಹಿಸಿ, video camera ತೆಗೆದುಕೊಂಡು record ಮಾಡಿ ತೋರಿಸುತ್ತೇನೆ. ಅಲ್ಲಿ ಈಗ ಪೆಟ್ರೋಲ್ ಬಂಕ್ ಬಂದಿದೆ. ಮಾನ್ಯ ಸಚಿವರು ಹೋದಾಗ ಅದು ಇರಲಿಲ್ಲ. ಅಲ್ಲಿ ಒಂದು ಚದರ ಅಡಿ ಭೂಮಿಗೆ 3,500–4,000 ರೂಪಾಯಿ ಇದೆ. ಅದನ್ನು ಎಕರೆಗೆ ಒಂದು ಲಕ್ಷ ರೂ. ಎಂದು ತೋರಿಸುತ್ತಾರೆ. ಇದು clear violation ಆಗಿದೆ. ಇದರಲ್ಲಿ Revenue department ನವರು ಶಾಮೀಲಾಗಿದ್ದಾರೆ ಎಂದು ನಾನು ಹೇಳುತ್ತೇನೆ. ಇದನ್ನು ಬೆಂಗಳೂರು ಮಹಾನಗರಪಾಲಿಕೆಯವರು ಹೇಗೆ ಖಾತೆ ಮಾಡುತ್ತಾರೆ? ಸರ್ಕಾರದ ಆದೇಶವಿದ್ದು, ನೈಜ ಸದಸ್ಯರಿಗೆ ಕೊಡಿ, ಅವರಿಗೆ ರಕ್ಷಣೆ ಕೊಡಿ ಎಂದು ಕೇಳಲು ಹೋದರೆ ಅವರೇ ಭಕ್ಷಣೆ ಮಾಡುತ್ತಿದ್ದಾರೆ. ಪಟ್ಟಭದ್ರವಾದ shady Characters are playing here. ಹಿಂದೆ ಅಲ್ಲಿ ನಾನು ಶಾಸಕನಾಗಿದ್ದವನು, ಇವತ್ತು ಪಕ್ಕದ ಕ್ಷೇತ್ರದಲ್ಲಿ ಶಾಸಕನಾಗಿದ್ದೇನೆ. ಸತ್ಯ ಹೊರಗೆ ಬರಲಿ. ಈ ಜಮೀನು ಸರ್ಕಾರಕ್ಕೆ ಹೋಗಲಿ, ಚಿಂತೆಯಿಲ್ಲ. ಆದರೆ ಸದಸ್ಯರಲ್ಲದವರು ಇವತ್ತು ಅಲ್ಲಿ

ಅನಾಯಾಸವಾಗಿ ಕಟ್ಟಡ ಕಟ್ಟುತ್ತಿದ್ದಾರೆ ಎಂದರೆ ಏನು ಸ್ವಾಮಿ, ಸರ್ಕಾರ ಇದೆಯೋ, ಇಲ್ಲವೋ ಸದಸ್ಯರನ್ನು ರಕ್ಷಣೆ ಮಾಡಿ ಎಂದರೆ, ಸರ್ಕಾರದಲ್ಲಿರತಕ್ಕಂಥ ಒಬ್ಬ ರಾಜಕೀಯ ಕಾರ್ಯದರ್ಶಿ ಧಮಕಿ ಹಾಕುತ್ತಾರೆ ಎಂದರೆ ಏನು? ಇವತ್ತು ಬೆಂಗಳೂರು ನಗರದ ಮಧ್ಯಭಾಗದಲ್ಲಿ , heart of the city, 8 ಎಕರೆ ಎಂದರೆ ಅದರ value ಏನಾಯಿತು? ನೈಜ ಸದಸ್ಯರಿಗೂ ಇಲ್ಲ. ಇವತ್ತು ಅಲ್ಲಿ ಸದಸ್ಯರಲ್ಲದವರು ಕಟ್ಟಡವನ್ನು ಕಟ್ಟುತ್ತಿದ್ದಾರೆ. ಮಾನ್ಯ ಸಚಿವರು ಏನು ಭರವಸೆ ಕೊಟ್ಟಿದ್ದಾರೆ, ಕೂಡಲೇ ಖಾತೆಗಳನ್ನು revoke ಮಾಡಿ, ಕಟ್ಟಡ ಕಟ್ಟುತ್ತಿರುವುದನ್ನು ನಿಲ್ಲಿಸಬೇಕು. ಪೊಲೀಸ್ ಅಧಿಕಾರಿಗಳಿಗಾಗಲೀ ಮತ್ತು ಸ್ಥಳೀಯ ಮಹಾನಗರಪಾಲಿಕೆಯ ಇಂಜಿನಿಯರುಗಳಿಗೆ ಧಮಕಿ ಹಾಕುತ್ತಿರುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ನಾನು ಆ ಸ್ಥಳದಲ್ಲಿ ಸತ್ಯಾಗ್ರಹಕ್ಕಾಗಿ ಕುಳಿತುಕೊಳ್ಳಬೇಕಾಗುತ್ತದೆ. ಮುಖ್ಯಮಂತ್ರಿಗಳು ಭರವಸೆ ಕೊಟ್ಟರು, ಸಹಕಾರ ಸಚಿವರು ಭರವಸೆ ಕೊಟ್ಟರು. ಗೃಹ ಸಚಿವರನ್ನು ನಾನು ಕೇಳುತ್ತೇನೆ, ಗೃಹ ಇಲಾಖೆಯ ಅಧಿಕಾರಿಗಳನ್ನು ಅಲ್ಲಿಗೆ ಕೂಡಲೇ ಕಳುಹಿಸಿ, shady characters ಯಾರು ಎಂದು ಗೊತ್ತಾಗಲಿ. ಅಕ್ರಮವಾಗಿರುವ ಯಾವ ದಾಖಲೆಯನ್ನೂ ವಶಪಡಿಸಿಕೊಂಡಿಲ್ಲ. Co-operative Societies Additional Registrar ರವರ ಸನ್ನಿಧಾನಕ್ಕೆ ನಾನು ದಿನಾಂಕ: 4-11-2009 ರಂದು ಒಂದು ಪತ್ರವನ್ನು ಬರೆದೆ. ಏನೆಂದರೆ, ಸೊಸೈಟಿ ಮಂಡಳಿಯ ಪದಾಧಿಕಾರಿಗಳು ಮತ್ತು ಮಾಜಿ ಪದಾಧಿಕಾರಿಗಳ ಅಕ್ರಮ ವಶದಲ್ಲಿರುವ ದಾಖಲಾತಿಗಳನ್ನು ತೆಗೆದುಕೊಳ್ಳಿ, ನಗದು ಪುಸ್ತಕ ತೆಗೆದುಕೊಳ್ಳಿ, general ledger ತೆಗೆದುಕೊಳ್ಳಿ, ಸಭಾ ನಡವಳಿಗಳ ಪುಸ್ತಕ ತೆಗೆದುಕೊಳ್ಳಿ, ಸದಸ್ಯರ ಷೇರು ಖಾತೆ ಪುಸ್ತಕ ತೆಗೆದುಕೊಳ್ಳಿ, ಜಮಾ ಖರ್ಚಿನ ಪುಸ್ತಕ ತೆಗೆದುಕೊಳ್ಳಿ, ಇವುಗಳನ್ನೆಲ್ಲ ಅವರಿಂದ ವಶಪಡಿಸಿಕೊಳ್ಳಿ ಎಂದರೂ ಇದುವರೆಗೂ ಅವರಿಂದ ತೆಗೆದುಕೊಳ್ಳಲು ಆಗುತ್ತಿಲ್ಲ. ಈ ಅಮೂಲ್ಯವಾದ ದಾಖಲಾತಿಗಳನ್ನು ತೆಗೆದುಕೊಳ್ಳದೇ ನಾಳೆಯ ದಿವಸ ಹೇಗೆ ತನಿಖೆಗೆ ಒಳಪಡಿಸಲು ಸಾಧ್ಯವಾಗುತ್ತದೆ? ಇಂಥ ಹೌಸಿಂಗ್ ಬೋರ್ಡ್ ಹಗರಣಗಳು ಸಾಕಷ್ಟಿವೆ. ನಾನು ಸತ್ಯಕ್ಕೋಸ್ಕರ ಹೋರಾಟ ಮಾಡುತ್ತೇನೆ. ಈ ಸದನದಲ್ಲಿ ಹಿಂದೆಯೂ ನನು ಕೇಳಿದ್ದೆ, ಇವತ್ತೂ ನಾನು ಬಿಡುವುದಿಲ್ಲ, ಇದನ್ನು ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೂ ತಂದಿದ್ದೇನೆ,

ಸಭಾನಾಯಕರ ಗಮನಕ್ಕೂ ತಂದಿದ್ದೇನೆ. ಇಷ್ಟೆಲ್ಲಾ ಹೇಳಿದರೂ ಸಹ ಸತ್ಯಕ್ಕೆ ರಕ್ಷಣೆ ಸಿಗಲಿಲ್ಲವೆಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ : Illegal ಆಗಿ ನಡೆಯುತ್ತಿದೆ ಎನ್ನುವುದನ್ನು ನೀವೇ ಒಪ್ಪಿಕೊಳ್ಳುತ್ತೀರಿ. ಅದಕ್ಕೆ ಈಗ ಸ್ಪಷ್ಟವಾಗಿ ಒಂದು ಉತ್ತರ ಕೊಟ್ಟುಬಿಡಿ. ಅವರು ಏನೇನು ಕೇಳಿದ್ದಾರೆ, ಅದೆಲ್ಲವನ್ನೂ ಮಾಡುತ್ತೇವೆ ಎಂದು ಹೇಳಿಬಿಟ್ಟರೆ, ಚರ್ಚೆ ಕಡಿಮೆಯಾಗುತ್ತದೆ. ಮತ್ತು ಸರ್ಕಾರ ಇದೆ ಎನ್ನುವುದು ಜನರಿಗೆ ಗೊತ್ತಾಗುತ್ತದೆ. ಕಾನೂನು ಪ್ರಕಾರವಾಗಿ ಸರ್ಕಾರ ನಡೆಯುತ್ತಿದೆ ಎನ್ನುವುದು ಜನಗಳಿಗೆ ಗೊತ್ತಾಗುತ್ತದೆ. ಇಲ್ಲದಿದ್ದರೆ ಯಾರು ಏನು ಬೇಕಾದರೂ ಮಾಡಬಹುದು ಎನ್ನುವ ತರಹ ಆಗುತ್ತದೆ. "ಹುಚ್ಚಿ ಮದುವೇಲಿ ಉಂಡವರೇ ಜಾಣ" ಎನ್ನುವ ರೀತಿ ಆಗುತ್ತದೆ.

ಶ್ರೀ ದಿನೇಶ್ ಆರ್. ಗುಂಡೂರಾವ್ : ಸರ್ಕಾರದ ಹಸ್ತಕ್ಷೇಪದಿಂದಲೇ ಇದು ಆಗುತ್ತಿದೆ ಎಂದು ಅವರು ಹೇಳಿದರು. ಒಂದು ಕಡೆ ನೀವು, ಇದು ಸರಿಯಿಲ್ಲ ಎಂದು ಹೇಳುತ್ತಿದ್ದೀರಿ. ಇನ್ನೊಂದು, ಕಡೆ ಸರ್ಕಾರದ interference ನಿಂದ, ಬೆಂಬಲದಿಂದ ಇದು ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಮುಖ್ಯಮಂತ್ರಿಗಳ ಸಲಹೆಗಾರರು ಮಾಡುತ್ತಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ. ಅಂದರೆ ಇದರಲ್ಲಿ ಸರ್ಕಾರದ involvement ಇದೆಯಾ? ಸರ್ಕಾರಕ್ಕೆ ಸಲಹೆ ಮಾಡತಕ್ಕಂಥ ಜನ ಇದರಲ್ಲಿ involve ಆಗಿದ್ದಾರೆಯೇ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ನೆ.ಲ.ನರೇಂದ್ರಬಾಬು : ಫೋಟೋಗಳನ್ನು ಕಳುಹಿಸುತ್ತೇನೆ, ನೋಡಿ. ಅಲ್ಲಿ ಕಟ್ಟಡ ಕಟ್ಟುತ್ತಿರುವವರು ಯಾರು ಎಂದು ಗೊತ್ತಾಗುತ್ತದೆ.

ಶ್ರೀ ಸಿ.ಎಂ.ಉದಾಸಿ : ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತರುತ್ತಿರುವ ವಿಷಯದಲ್ಲಿ, ಅಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ, ಕಾನೂನು ಮೀರಿ ನಡೆಯುತ್ತಿದ್ದಾರೆ ಎನ್ನುವ ಬಗ್ಗೆ ಬೆಳಕು ಚೆಲ್ಲುವಂಥ ಕೆಲಸ ಮಾಡಿದ್ದಾರೆ. ಇದು ಈಗಾಗಲೇ ಇಲಾಖೆಯಿಂದ ವಿಚಾರಣೆಗಾಗಿ ಸಿ.ಐ.ಡಿ.ಗೆ ಹೋಗಿದೆ, ಮುಂದಿನ ಕ್ರಮ ಕೈಗೊಳ್ಳುವುದರಲ್ಲಿ ವಿಳಂಬವಾಗಿರಬಹುದು ಎನ್ನುವ ಭಾವನೆಯನ್ನು ಅವರು ವ್ಯಕ್ತಪಡಿಸುತ್ತಿದ್ದಾರೆ. ಇದನ್ನು ಮಾನ್ಯ ಗೃಹ ಸಚಿವರ ಗಮನಕ್ಕೆ ತಂದು, ಸಿ.ಐ.ಡಿ.ಗೆ ವಹಿಸಿರುವ ಈ ಪ್ರಕರಣಕ್ಕೆ ವಿಶೇಷ ಗಮನ ಹರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎನ್ನುವುದನ್ನು ಮತ್ತು ಇವತ್ತು ಸದಸ್ಯರು ಬೆಳಕು ಚೆಲ್ಲಿರುವ ಎಲ್ಲಾ ವಿಷಯಗಳನ್ನು ಅವರ ಗಮನಕ್ಕೆ ತಂದು ಅತಿ ಶೀಘ್ರದಲ್ಲೆ ಕ್ರಮ

ಕೈಗೊಳ್ಳುತ್ತೇವೆ. ಸಹಕಾರಿ ಸಂಘ ಚುನಾಯಿತ ಪ್ರತಿನಿಧಿಗಳ ಕೈಯಲ್ಲಿ ಇತ್ತು. ಅದನ್ನು ಕಾನೂನು ಪ್ರಕಾರ ಅಂದರೆ ನಿಯಮ 30(1)ರ ಪ್ರಕಾರ ಸಂಪೂರ್ಣ ಆಡಳಿತವನ್ನು ಇವರು ತೆಗೆದುಕೊಂಡಿದ್ದರೆ, ಸಂಬಂಧಪಟ್ಟ ಎಲ್ಲ ಕಾಗದ ಪತ್ರಗಳನ್ನು ಅವರು ಇಟ್ಟುಕೊಂಡಿರಬೇಕು ಎನ್ನುವ ಭಾವನೆ ನನ್ನದಾಗಿದೆ. ಹೀಗಿರುವಾಗ ಸದಸ್ಯರು ಇವತ್ತು ಬೆಳಕು ಚೆಲ್ಲಿದ ವಿಚಾರದಲ್ಲಿ, ಅವರ ಕೆಲವು ಲೋಪದೋಷಗಳನ್ನು ಸರಿಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಅಧಿಕಾರಿಗಳ ಮೇಲೂ ಸಹ ಅವರ ಆರೋಪ ಇದೆ. ಅತಿ ಶೀಘ್ರದಲ್ಲಿಯೇ ಇದಕ್ಕೆ ಕ್ರಮ ಕೈಗೊಳ್ಳುವಂಥ ವ್ಯವಸ್ಥೆಯನ್ನು ಮಾಡುತ್ತೇವೆ ಮತ್ತು ಅವ್ಯವಹಾರ ತಡೆಗಟ್ಟುವಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಸಿದ್ಧರಾಮಯ್ಯ : ಅಲ್ಲಿ ಕಟ್ಟಡ ಕಟ್ಟುತ್ತಿರುವುದನ್ನು ನಿಲ್ಲಿಸಬೇಕು.

ಅಧ್ಯಕ್ಷರು : ನಿಲ್ಲಿಸಲು ಸೂಚನೆ ಕೊಡಿ.

ಶ್ರೀ ಸಿ.ಎಂ.ಉದಾಸಿ : ಕಟ್ಟಡ ಕಟ್ಟುತ್ತಿರುವುದ್ನು ನಿಲ್ಲಿಸುವ ಕೆಲಸ ಮಾಡಲು ಸೂಚನೆಯನ್ನು ಕೊಡಲಿಕ್ಕೆ ಹೇಳುತ್ತೇನೆ.

ಶ್ರೀ ನೆ.ಲ.ನರೇಂದ್ರಬಾಬು : ಅಲ್ಲಿ ಅನಾಯಾಸವಾಗಿ ಕಟ್ಟಡ ಕಟ್ಟುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಕಟ್ಟಡ ಕಟ್ಟುತ್ತಿರುವುದನ್ನು ನಾಳೆಯಿಂದಲೇ ನಿಲ್ಲಿಸುತ್ತೇವೆ ಎಂದು ಹೇಳಿ.

ಶ್ರೀ ಸಿ.ಎಂ. ಉದಾಸಿ : ಸೂಚನೆ ನೀಡುತ್ತೇವೆ. ಇಲಾಖಾಧಿಕಾರಿಗಳ ಕಡೆಯಿಂದ ಆ ಕೆಲವನ್ನು ತಡೆಹಿಡಿಯುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ : ಈಗಾಗಲೇ ಸಿ.ಐ.ಡಿ. ತನಿಖೆಗೆ ಆದೇಶ ಮಾಡಿದ್ದೀರಿ. ಅದಾದ ಮೇಲೂ ಕೂಡ ಅಲ್ಲಿ illegal ಆಗಿ ನಡೆಯುತ್ತಿದೆ ಎಂದು ಸದಸ್ಯರು ಹೇಳುತ್ತಿದ್ದಾರೆ. Whether the Government is sleeping over the matter? Admittedly illegal activities are going on. Construction is going on against the law. ಮುನಿಸಿಪಾಲಿಟಿಯವರು involve ಆಗಿದ್ದಾರೆ, ರೆವಿನ್ಯೂ ಡಿಪಾರ್ಟ್‌ಮೆಂಟಿನವರು involve ಆಗಿದ್ದಾರೆ ಎಂದು ಹೇಳುತ್ತಿದ್ದಾರೆ. ಎಲ್ಲರೂ involve ಆದಮೇಲೆ, ...

ಶ್ರೀ ಸಿ.ಎಂ.ಉದಾಸಿ: C.I.D.ಗೆ refer ಮಾಡಿದ್ದು 13-11-2009ರಲ್ಲಿ.

ಶ್ರೀ ಸಿದ್ದರಾಮಯ್ಯ : ಅದಾದಮೇಲೆ ನೀವು ಆ ಸೊಸೈಟಿಯ ಆಡಳಿತ ಮಂಡಳಿಯನ್ನೂ ರದ್ದು ಮಾಡಿ Administrator ಹಾಕಿದ್ದೀರಿ. ಇಷ್ಟೆಲ್ಲಾ ಆದಮೇಲೆ ಅಲ್ಲಿ ಕಟ್ಟಡ ಕಟ್ಟುವುದಕ್ಕೆ ಏಕೆ ಬಿಟ್ಟಿರಿ?

ಶ್ರೀ ಸಿ.ಎಂ.ಉದಾಸಿ : ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ನಾಳೆಯೇ ಇಲಾಖಾಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : Whether there is a Government or not ಎಂದು ಜನಗಳಿಗೆ doubt ಬರುತ್ತಿದೆ. ಸರ್ಕಾರ ಇದೆಯೋ, ಇಲ್ಲವೋ ಎನ್ನುವುದು ಗೊತ್ತಾಗಬೇಕು. ಸರ್ಕಾರ ಇದೆ ಎನ್ನುವುದನ್ನು ಈಗ ತೋರಿಸಿ.

ಶ್ರೀ ಸಿ.ಎಂ.ಉದಾಸಿ : ನಾಳೆಯೇ ಇದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ. ಸೂಚನೆ ಕೊಡುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ : ಕಟ್ಟಡ ಕಟ್ಟುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಪೆಟ್ರೋಲ್‌ಬಂಕ್ ಹಾಕುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಎಂದು ನರೇಂದ್ರ ಬಾಬುರವರು ನೇರವಾಗಿ charge ಮಾಡುತ್ತಿದ್ದಾರೆ, photo ತೋರಿಸುತ್ತಿದ್ದಾರೆ.

ಶ್ರೀ ನೆ.ಲ.ನರೇಂದ್ರಬಾಬು : ಆ ಬಿಲ್ಡಿಂಗ್ ಯಾರದು ಎಂದು ಕೇಳಿ ಸ್ವಾಮಿ? ಅಲ್ಲಿ ಕಟ್ಟಡ ಕಟ್ಟುತ್ತಿರುವವರು ಯಾರು? ನಾನು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂದು ಹೇಳಿ ಅಧಿಕಾರಿಗಳಿಗೆ ಧಮಕಿ ಹಾಕಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ಆ ರಾಜಕೀಯ ಕಾರ್ಯದರ್ಶಿ ಯಾರು? ಚಾರ್ಜ್ ಮಾಡಿದ ಮೇಲೆ ನೇರವಾಗಿ ಮಾಡಬೇಕು, ಅರ್ಧಂಬರ್ಧ ಮಾಡಬೇಡಿ. ರಾಜಕೀಯ ಕಾರ್ಯದರ್ಶಿ ಯಾರು ಎಂದು ಹೇಳಿ.

ಅಧ್ಯಕ್ಷರು : ಆಯಿತು, ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ನೆ.ಲ.ನರೇಂದ್ರಬಾಬು : ಸಮಯ ಬಂದಾಗ ನಾನು ಹೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ರಾಜಕೀಯ ಕಾರ್ಯದರ್ಶಿ ಯಾರು ಎಂದು ಹೇಳಬೇಕು. ಇಲ್ಲದಿದ್ದರೆ, ಪೇಪರ್‌ನಲ್ಲಿ ಬರಲಿ ಎಂದು ನೀವು ಈ ರೀತಿ ಚಾರ್ಜ್‌ಮಾಡಲು ಹೋಗಬೇಡಿ.

ಅಧ್ಯಕ್ಷರು : ಆಯಿತು, ಮುಕ್ತಾಯ ಮಾಡೋಣ.

ಶ್ರೀ ನೆ.ಲ.ನರೇಂದ್ರಬಾಬು : ತಮ್ಮ ಮುಖೇನ ವಿನಂತಿ ಮಾಡುವುದೇನೆಂದರೆ, ಮಂತ್ರಿಗಳು ಆದೇಶ ಕೊಟ್ಟು, ಇಲ್ಲಿ ಭರವಸೆ ಕೊಟ್ಟ ಮೇಲೂ, ಭೂ ಪರಿವರ್ತನೆಯಾಗಿ, ಲೇಔಟ್ ಆಗಿರುವಂಥ ಜಮೀನನ್ನು,

ರೆವಿನ್ಯೂ ನಿವೇಶನ ಎಂದು ಖಾತೆ ಮಾಡಿಕೊಡುತ್ತಾರೆ ಎಂದರೆ ಏನಿದು? ಬೆಂಗಳೂರಿನಂಥ ನಗರದಲ್ಲಿ, ವಿದ್ಯಾವಂತರು, ಪ್ರಜ್ಞಾವಂತರು ಇರತಕ್ಕಂಥ ನಗರದಲ್ಲಿ ಈ ರೀತಿಯಾದರೆ ಹೇಗೆ? ನಾನು ಈಗ ಆ ಕ್ಷೇತ್ರದ ಪ್ರತಿನಿಧಿಯಾಗಿಲ್ಲದೇ ಇರಬಹುದು. ಪಟ್ಟಭದ್ರ ಹಿತಾಸಕ್ತಿಗಳಿಗೆ, real estate ನವರಿಗೆ ಅಥವಾ land grabbers ಜೊತೆ ಶಾಮೀಲಾಗಿದ್ದಾರೆಯೇ ಎಂದು ಕೇಳಬೇಕಾಗುತ್ತದೆ. ನೀವು ಶಾಮೀಲಾಗಿದ್ದೀರಿ ಎಂದು ನಾನು ಹೇಳುತ್ತಿಲ್ಲ. ಆದರೆ, ದಯವಿಟ್ಟು ಇಂಥವುಗಳನ್ನು encourage ಮಾಡಬೇಡಿ. ದಯವಿಟ್ಟು ಕೂಡಲೇ ಕ್ರಮ ತೆಗೆದುಕೊಳ್ಳಿ, ಖಾತೆ revoke ಮಾಡಿ, ಕಟ್ಟಡ ಕಟ್ಟುತ್ತಿರುವುದನ್ನು ನಿಲ್ಲಿಸಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ, ಇಲ್ಲದಿದ್ದರೆ ಜನಗಳಿಗೆ ನಿಜವಾಗಲೂ ಸರ್ಕಾರದ ಮೇಲೆ ವಿಶ್ವಾಸ ಹೊರಟು ಹೋಗುತ್ತದೆ. ಅಲ್ಲಿ ನಾವು ಪ್ರತನಿತ್ಯ ಹೋಗಿ ನಿಂತುಕೊಳ್ಳಬೇಕು ಎಂದರೆ ರೌಡಿಗಳು ಬರುತ್ತಾರೆ. ಸರ್ಕಾರದಿಂದ ದಯವಿಟ್ಟು ಭರವಸೆ ಕೊಡಿ ಸ್ವಾಮಿ.

ಶ್ರೀ ಸಿ.ಎಂ.ಉದಾಸಿ : ತಾವು ಹೇಳಿರುವಂಥ ಮಾತುಗಳನ್ನು ಗಂಭೀರವಾಗಿ ಪರಿಗಣಿಸಿ, ಅಗತ್ಯ ಕ್ರಮ. ಕೈಗೊಳ್ಳುವುದರ ಸಲುವಾಗಿ ಸೂಚನೆಯನ್ನು ಕೊಡುತ್ತೇವೆ. ಭೂಮಿ ಪರಭಾರೆ ಆಗಿದ್ದನ್ನು ರದ್ದು ಪಡಿಸುವಂಥ ಕೆಲಸಕ್ಕೂ ಸೂಚನೆ ಕೊಡಿಸುವಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನಿನ್ನೆ ದಿವಸ ಬಹಳಷ್ಟು ಜನ ಶಾಸಕರೆಲ್ಲರೂ ಕೂಡ ಈ ಶಾಸಕರಿಗೆ ಬರತಕ್ಕಂಥ ನಿಧಿಯನ್ನು P.D. Account ನಲ್ಲಿ ಇಡದಿದ್ದರೆ lapse ಆಗುತ್ತದೆ. ಅದಕ್ಕೆ ಮುಖ್ಯಮಂತ್ರಿಗಳು ಬಂದ ಮೇಲೆ Statement ಮಾಡಿಸುತ್ತೇವೆಂದು ಹೇಳಿದ್ದಿರಿ. ದಯಮಾಡಿ ನಾಳೆ ಹೇಳಿಕೆ ಕೊಡಿಸಿದರೆ ಅಲ್ಲಿ ಖರ್ಚು ಮಾಡಲಿಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ನಾಳೆ ಮುಖ್ಯಮಂತ್ರಿಗಳು ಬಂದ ಮೇಲೆ ಹೇಳಿಕೆ ಕೊಡಿಸುತ್ತೇನೆ. ಆಯಿತು.

10. ಪ್ರಕಟಣೆ :

ಕಾರ್ಯಕಲಾಪಗಳ ಸಲಹಾ ಸಮಿತಿ ತೀರ್ಮಾನ

ಈಗ ದಿನಾಂಕ: 10.3.2010 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ:

1. ಸದನವನ್ನು ದಿನಾಂಕ: 11.3.2010, 12.3.2010 ಹಾಗೂ 17.3.2010, 18.03.2010 ಮತ್ತು 19.03.2010 ರ ದಿವಸಗಳಂದು ನಡೆಸಲಾಗುವುದು.

2. ದಿನಾಂಕ: 11.3.2010 ರಂದು ಮಧ್ಯಾಹ್ನ ಪೂರಕ ಅಂದಾಜುಗಳ ಮೇಲೆ ಚರ್ಚೆ ಹಾಗೂ ಸರ್ಕಾರದ ಉತ್ತರ ಹಾಗೂ ವಿತ್ತೀಯ ವಿಧೇಯಕದ ಅಂಗೀಕಾರ.

3. ದಿನಾಂಕ: 18.3.2010 ರಂದು ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಹಾಗೂ ವಿತ್ತೀಯ ವಿಧೇಯಕಗಳ ಮಂಡನೆ ಹಾಗೂ ಅಂಗೀಕಾರ.

ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಾರ್ಯಕಲಾಪವು ರಾತ್ರಿ 7.31 ಗಂಟೆಗೆ ಮುಕ್ತಾಯಗೊಂಡು ಪುನಃ ಮರುದಿವಸ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ನಿರ್ಣಯಿಸಿತು)

(+) ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

11. ಅನುಬಂಧ – 1

ವಿಷಯ : ಸಹ ಶಿಕ್ಷಕರುಗಳ ಪದೋನ್ನತಿ

256 (345) ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಕುಷ್ಟಗಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಗಳಲ್ಲಿ ಸಹ ಶಿಕ್ಷಕರುಗಳಾಗಿ ಸೇವೆಯನ್ನು ಸಲ್ಲಿಸುತ್ತಿರುವವರಿಗೆ ಕಾಲಕಾಲಕ್ಕೆ ಪದೋನ್ನತಿಯನ್ನು ನೀಡಲಾಗಿದೆಯೇ;

ಆ) ನೀಡಲಾಗಿದ್ದಲ್ಲಿ, ಅದಕ್ಕೆ ಕಾರಣಗಳನ್ನು ತಿಳಿಸುವುದು;

ಇ) ಸಹ ಶಿಕ್ಷಕರುಗಳಿಗೆ ಇಲಾಖೆಯು ಎಂದು ಪದೋನ್ನತಿಯನ್ನು ನೀಡಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) – ಹೌದು –

ದಿ: 30–10–2009 ರಂದು 20 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪದೋನ್ನತಿ ನೀಡಲಾಗಿದೆ.

ಪ್ರೌಢಶಾಲಾ ಶಿಕ್ಷಕರಿಗೆ ಪದೋನ್ನತಿ ನೀಡಿದ ವಿವರಗಳು :

ದಿ: 31–10–2009 ರಂದು	– 46
ದಿ: 18–01–2009 ರಂದು	– 01
ದಿ: 15–12–2009 ರಂದು	– 01
ದಿ: 19–12–2009 ರಂದು	– 04
ದಿ: 22–12–2009 ರಂದು	– 01
ದಿ: 12–01–2010 ರಂದು	– .02
ದಿ: 23–02–2010 ರಂದು	– 02
ಒಟ್ಟು	**57**

ಆ) ಮತ್ತು ಇ) ಉದ್ಭವಿಸುವುದಿಲ್ಲ.

2009–10ನೇ ಸಾಲಿನ ಗ್ರಾಮೀಣ ಉದ್ಯೋಗ ಖಾತರಿ – ಯೋಜನೆ ಬಗ್ಗೆ.

258 (596) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಬಿಡುಗಡೆಯಾದ ಹಣವೆಷ್ಟು;

ಆ) ರಾಜ್ಯದಲ್ಲಿ ಯಾವ್ಯಾವ ರೀತಿಯ ಯೋಜನೆಗಳಿಗೆ ಬಳಸಲಾಗಿದೆ ಹಾಗೂ ಈ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಂಡಿರುತ್ತದೆಯೇ;

ಇ) ರಾಜ್ಯಕ್ಕೆ ಬಿಡುಗಡೆಯಾದ ಹಣ ಯಾವ ರೀತಿಯಲ್ಲಿ ಬಳಸಲಾಗಿದೆ ಹಾಗೂ ಈ ಯೋಜನೆ ಸಮರ್ಪಕವಾಗಿ ಅನುಷ್ಠಾನ ಆಗುತ್ತಿದೆಯೇ (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 2009–10ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಂದಿರುವ ಹಣ ರೂ.1903.08 ಕೋಟಿಗಳು.

ಆ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಾರ್ಗಸೂಚಿಗಳನುಸಾರ, ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನದಲ್ಲಿ ತೆಗೆದುಕೊಳ್ಳಲು ನಿಗದಿಪಡಿಸಿದೆ.

(i) ಜಲ ಸಂರಕ್ಷಣೆ ಮತ್ತು ನೀರಿನ ಕೊಯ್ಲು

(ii) ಬರಗಾಲ ತಡೆಗಟ್ಟುವಿಕೆ (ಅರಣ್ಯೀಕರಣ ಮತ್ತು ಗಿಡ ನೆಡುವುದೂ ಸೇರಿದಂತೆ)

(iii) ಕಿರು ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಸೇರಿದಂತೆ, ನೀರಾವರಿ ಕಾಲುವೆಗಳು

(iv) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಕುಟುಂಬಗಳ ಒಡೆತನದ, ಭೂ ಸುಧಾರಣಾ ಫಲಾನುಭವಿಗಳ, ಭಾರತ ಸರ್ಕಾರದ ಇಂದಿರಾ ಆವಾಸ್ ಯೋಜನೆ ಫಲಾನುಭವಿಗಳ ಜಮೀನಿನಲ್ಲಿ, ನೀರಾವರಿ ಸೌಲಭ್ಯವನ್ನು ಒದಗಿಸುವುದು.

(v) ಸಾಂಪ್ರದಾಯಿಕ ನೀರು ಸಂಚಯಗಳ ಜೀರ್ಣೋದ್ಧಾರ ಸೇರಿದಂತೆ ಕೆರೆಗಳ ಹೂಳು ತೆಗೆಯುವುದು

(vi) ಜಮೀನಿನ ಅಭಿವೃದ್ಧಿ

(vii) ನೀರು ನಿಂತ ಪ್ರದೇಶಗಳಲ್ಲಿ ಚರಂಡಿಯೂ ಸೇರಿದಂತೆ, ಪ್ರವಾಹ ನಿಯಂತ್ರಣ ಮತ್ತು ಸಂರಕ್ಷಣಾ ಕಾಮಗಾರಿಗಳು

(viii) ಎಲ್ಲಾ ರೀತಿಯ ಹವಾಮಾನ ಪರಿಸ್ಥಿತಿಯಲ್ಲಿ ಉಪಯೋಗಿಸಬಹುದಾದ ಗ್ರಾಮೀಣ ಸಂಪರ್ಕಗಳ ನಿರ್ಮಾಣ

(ix) ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಕೇಂದ್ರ

(x) ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರ ಅಧಿಸೂಚಿಸುವ ಇತರೆ ಯಾವುದೇ ಕಾಮಗಾರಿ.

ಸದರಿ ಯೋಜನೆಯು ಸಮರ್ಪಕವಾಗಿ ಅನುಷ್ಠಾನಗೊಂಡಿರುತ್ತದೆ.

ಇ) ರಾಜ್ಯಕ್ಕೆ ಬಿಡುಗಡೆಯಾದ ಹಣವನ್ನು ಯೋಜನೆಗೆ ಸಮರ್ಪಕವಾಗಿ ಬಳಸಲಾಗಿದೆ ಮತ್ತು ಯೋಜನೆಯನ್ನು ಸಮರ್ಪಕವಾಗಿ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಯೋಜನೆಯಲ್ಲಿ ಸಾಧಿಸಿದ ಪ್ರಗತಿಯ ವರದಿಯನ್ನು ಇದರೊಂದಿಗೆ ಲಗತ್ತಿಸಿದೆ.

ಅನುಬಂಧ-1

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ –ತಾಲ್ಲೂಕುವಾರು ಪ್ರಗತಿ ವಿವರ 6ನೇ ಫೆಬ್ರವರಿ, 2010 ರಲ್ಲಿದ್ದಂತೆ

No	District	Name of the Taluk	Jobcards Issued	HHs provided Employment	Persondays Generated	Expenditure (in lakhs)
1	Bagalkote	BADAMI	43149	34341	1890221	2561.26
2	Bagalkote	BAGALKOT	28072	19696	1019036	1039.61
3	Bagalkote	BILAGI	21500	15817	758672	889.09
4	Bagalkote	HUNGUND	32101	22840	1431233	1824.91
5	Bagalkote	JAMKHANDI	48946	31460	1622971	1767.36
6	Bagalkote	MUDHOL	31633	23790	1577501	1817.12
7	Bangalore	ANEKAL	31334	13930	678750	957.85
8	Bangalore	BANGALORE EAST	3864	1575	68288	127.41
9	Bangalore	BANGALORE NORTH	19167	9521	572865	960.00
10	Bangalore	BANGALORE SOUTH	17472	11280	790055	1026.55
11	Bangalore rural	DEVANHALLI	18637	6383	411326	929.10
12	Bangalore rural	DODBALLAPUR	22719	9844	441936	766.57
13	Bangalore rural	HOSKOTE	27790	11243	626179	1349.94
14	Bangalore rural	NELAMANGALA	27595	12382	638458	834.41
15	Belgaum	ATHNI	77896	35331	1578559	2487.28
16	Belgaum	BELGAUM	57540	23586	1233244	1608.23
17	Belgaum	BILAHONGAL	51257	25471	1124092	1662.10
18	Belgaum	CHIKODI	79501	33229	1736135	2381.46
19	Belgaum	GOKAK	67790	39697	2101396	2311.06
20	Belgaum	HUKERI	61002	37489	2092338	3107.43
21	Belgaum	KHANAPUR	42651	29287	1653198	2351.09
22	Belgaum	RAMDURG	33941	20045	1268804	1642.50
23	Belgaum	RAYBAG	46998	13953	855170	1209.14
24	Belgaum	SAVADATHI	48450	25181	1115676	1589.82
25	Bellary	BELLARY	43512	15772	918895	1560.52
26	Bellary	HADAGALLI	25881	6833	453953	534.65
27	Bellary	HAGARIBOMMANAHALLI	23724	8916	783054	948.59
28	Bellary	HOSPET	23536	9890	561350	872.43
29	Bellary	KUDLIGI	47738	20407	1865130	2539.11
30	Bellary	SANDUR	28123	8280	581333	763.19
31	Bellary	SIRUGUPPA	25571	10595	387732	714.78
32	Bidar	AURAD	53558	23336	1005209	1359.05
33	Bidar	BASAVAKALYAN	38758	15093	736037	1404.28
34	Bidar	BHALKI	44769	14236	522761	1041.32
35	Bidar	HUMNABAD	33755	16537	532113	722.64
36	Bidar	BIDAR	48570	23045	891389	1104.81
37	Bijapur	BASAVANA BAGEVADI	44273	23133	1368146	1998.70
38	Bijapur	BIJAPUR	58162	28158	1609351	2038.99
39	Bijapur	INDI	47833	34072	2168185	2531.39
40	Bijapur	MUDDEBIHAL	31702	12945	732944	877.23
41	Bijapur	SINDGI	60078	24033	1388530	1848.33
42	Chamarajanagara	CHAMARAJANAGAR	42859	16636	531505	665.22
43	Chamarajanagara	KOLLEGALA	51726	20527	844690	1007.52
44	Chamarajanagara	GUNDLUPET	32472	8551	273753	439.05
45	Chamarajanagara	YELANDUR	15234	7588	223277	202.84
46	Chickballapura	BAGEPALLI	59325	51904	2652047	2781.45
47	Chickballapura	CHIKBALLAPUR	18932	8802	499872	598.68
48	Chickballapura	CHINTAMANI	35736	21761	1303925	1932.88
49	Chickballapura	GAURIBIDANUR	36670	18988	964885	1160.77
50	Chickballapura	GUDIBANDA	14834	13382	406731	550.70
51	Chickballapura	SIDLAGHATTA	22829	10606	582176	678.48
52	Chickmagalur	CHICKMAGALUR	22678	11241	681680	888.43
53	Chickmagalur	KADUR	38812	7214	358634	492.59
54	Chickmagalur	KOPPA	7653	2525	96267	125.82

No	District	Name of the Taluk	Jobcards Issued	HHs provided Employment	Persondays Generated	Expenditure (in lakhs)
55	Chickmagalur	MUDIGERE	12367	5590	252556	383.80
56	Chickmagalur	SRINGERI	4113	1475	58895	80.43
57	Chickmagalur	TARIKERE	31637	6597	315445	472.86
58	Chickmagalur	NARASIMHARAJAPURA	4826	2354	108435	148.89
59	Chitrdurga	CHALLAKERE	58538	16780	1126684	1941.28
60	Chitrdurga	CHITRADURGA	53047	12814	675807	895.62
61	Chitrdurga	HIRIYUR	44671	20215	999974	1723.31
62	Chitrdurga	HOLALKERE	55690	35966	2166321	2498.42
63	Chitrdurga	HOSDURGA	35703	8409	552456	581.00
64	Chitrdurga	MOLAKALMURU	27451	12311	499031	599.67
65	Dakshina Kannada	BANTVAL	20142	7614	345225	395.81
66	Dakshina Kannada	BELTANGADI	22424	6504	246190	362.55
67	Dakshina Kannada	MANGALORE	11438	2424	116910	181.42
68	Dakshina Kannada	PUTTUR	13674	4698	191626	224.12
69	Dakshina Kannada	SULYA	10228	4018	155162	153.19
70	Davangere	CHANNAGIRI	50254	25930	1041606	1493.36
71	Davangere	DAVANAGERE	48235	32227	1780359	2390.17
72	Davangere	HARAPPANAHALLI	57490	39720	2444899	3434.02
73	Davangere	HARIHARA	22828	12409	597764	758.70
74	Davangere	HONNALI	28511	19157	1011617	1494.43
75	Davangere	JAGALUR	35836	19133	1183161	1698.74
76	Dharwar	DHARWAD	25928	11444	589992	934.80
77	Dharwar	HUBLI	16596	6634	324125	648.60
78	Dharwar	KALGHATGI	23840	12020	542140	1022.04
79	Dharwar	KUNDGOL	23285	12376	567183	858.11
80	Dharwar	NAVALGUND	16665	6753	276511	506.19
81	Gadag	GADAG	31507	11974	529807	843.92
82	Gadag	MUNDARAGI	23888	15450	578199	796.62
83	Gadag	NARAGUND	8811	7086	290878	299.55
84	Gadag	RON	26954	16311	668708	871.56
85	Gadag	SHIRAHATT	23382	12044	557421	617.79
86	Gulbarga	AFZALPUR	29723	18950	977195	1175.89
87	Gulbarga	ALAND	45232	20058	1170141	1742.21
88	Gulbarga	CHINCHOLI	54656	38233	2316011	3155.50
89	Gulbarga	CHITAPUR	36786	22716	1123951	1734.53
90	Gulbarga	GULBARGA	46363	20773	1053893	1748.21
91	Gulbarga	JEVARGI	45922	24493	1684196	2093.43
92	Gulbarga	SEDAM	19117	13557	556790	743.03
93	Gulbarga	SHAHPUR	67755	46328	2532071	3026.89
94	Gulbarga	SHORAPUR	91130	39233	2928084	4708.60
95	Gulbarga	YADGIR	47874	35673	2285690	3074.49
96	Hassan	ALUR	9676	2638	85325	101.46
97	Hassan	ARKALGUD	37599	11561	606001	1041.05
98	Hassan	ARSIKERE	34142	6551	278057	380.07
99	Hassan	BELUR	21681	6949	258921	292.65
100	Hassan	CHANNARAYAPATNA	40285	11181	439893	578.41
101	Hassan	HASSAN	40490	11762	471169	897.32
102	Hassan	HOLENARSIPUR	22353	4810	182482	238.81
103	Hassan	SAKALESHPUR	16234	2632	131439	159.07
104	Haveri	BYADGI	15034	7807	421832	818.11
105	Haveri	HANAGAL	28774	19768	840319	1342.24
106	Haveri	HAVERI	34131	20914	1030030	2079.49
107	Haveri	HIREKERUR	37769	22818	1282843	1547.96
108	Haveri	RANEBENNUR	21503	8267	296890	650.07
109	Haveri	SAVANUR	10441	6672	404325	719.81
110	Haveri	SHIGGAON	18172	9576	504009	995.45
111	Kodagu	MADIKERI	12335	4917	203302	269.59
112	Kodagu	SOMVARPET	15101	4049	181268	273.16
113	Kodagu	VIRAJPET	14474	4590	260740	405.33
114	Kolar	BANGARAPET	47864	37337	2235615	2497.74

No	District	Name of the Taluk	Jobcards Issued	HHs provided Employment	Persondays Generated	Expenditure (In lakhs)
115	Kolar	KOLAR	63609	47406	2792293	3365.24
116	Kolar	MALUR	30762	26871	1410057	1906.18
117	Kolar	MULBAGAL	68432	54929	3737044	3910.60
118	Kolar	SRINIVASPUR	48195	26082	1689965	1721.02
119	koppal	GANGAVATHI	66258	31542	1492752	1529.84
120	koppal	KOPPAL	52099	22365	1584696	1482.31
121	koppal	KUSHTAGI	66684	37533	2708810	2486.69
122	koppal	YELBURGA	62566	32316	1978986	1810.98
123	Mandya	KRISHNARAJPET	17472	7555	339977	443.63
124	Mandya	MADDUR	28424	5901	267185	287.19
125	Mandya	MALVALLI	25482	10437	417662	447.50
126	Mandya	MANDYA	23992	10609	550359	651.00
127	Mandya	NAGAMANGALA	31667	9384	531377	552.04
128	Mandya	PANDAVAPURA	11987	2988	176193	218.82
129	Mandya	SHRIRANGAPATTANA	12340	1775	88200	123.04
130	Mysore	HEGGADADEVANKOTE	36640	18831	733418	849.42
131	Mysore	HUNSUR	26202	13780	547625	629.03
132	Mysore	KRISHNARAJANAGARA	37577	17717	1143953	1287.48
133	Mysore	MYSORE	23125	11449	512841	794.21
134	Mysore	PIRIYAPATNA	38383	19404	840672	1171.89
135	Mysore	NANJANGUD	35161	13364	624721	798.75
136	Mysore	TIRUMAKUDAL-NARSIPUR	29052	14766	743294	771.28
137	Raichur	DEVADURGA	46500	29701	1912984	2800.90
138	Raichur	LINGSUGUR	55651	25586	1689984	2448.45
139	Raichur	RAICHUR	44585	20492	1044950	1450.51
140	Raichur	SINDHNUR	55356	92228	1681720	2284.73
141	Raichur	MANVI	63777	35043	1600360	1830.25
142	Ramanagara	CHANNAPATNA	30838	12008	511579	787.61
143	Ramanagara	KANAKAPURA	40971	12724	601932	924.11
144	Ramanagara	RAMANAGARAM	20280	7988	421699	780.24
145	Ramanagara	MAGADI	23605	6377	341845	550.34
146	Shimoga	BHADRAVATI	25602	12556	518109	851.32
147	Shimoga	HOSANAGARA	23753	15024	729014	836.82
148	Shimoga	SAGAR	26634	20285	786144	959.42
149	Shimoga	SHIKARPUR	29443	18343	401174	589.33
150	Shimoga	SHIMOGA	30693	13264	471234	729.93
151	Shimoga	SORAB	36631	28688	979875	1305.65
152	Shimoga	TIRTHAHALLI	25018	11913	336925	490.77
153	Tumkur	CHIKNAYAKANHALLI	32606	11035	621870	715.21
154	Tumkur	GUBBI	41172	25986	1614091	1478.24
155	Tumkur	KORATAGERE	23356	13608	922397	986.01
156	Tumkur	KUNIGAL	34429	20758	1208244	1349.50
157	Tumkur	MADHUGIRI	42911	23737	1585191	1640.78
158	Tumkur	PAVAGADA	62927	29039	1655343	2249.46
159	Tumkur	SIRA	69806	46104	2779531	3471.40
160	Tumkur	TIPTUR	18925	7502	330509	338.85
161	Tumkur	TUMKUR	33594	19549	1352332	1731.48
162	Tumkur	TURUVEKERE	25398	12410	576463	535.45
163	Udupi	KARKAL	8201	4412	183857	198.21
164	Udupi	KUNDAPURA	17022	7435	241992	244.34
165	Udupi	UDUPI	11484	4898	172612	156.11
166	Uttara Kannada	BHATKAL	7769	1622	73780	92.92
167	Uttara Kannada	ANKOLA	11969	6457	327432	481.99
168	Uttara Kannada	HALIYAL	12767	5203	150716	146.75
169	Uttara Kannada	HONAVAR	14689	4696	177315	254.17
170	Uttara Kannada	KARWAR	5639	1516	54631	90.51
171	Uttara Kannada	KUMTA	18100	8499	375337	539.99
172	Uttara Kannada	MUNDGOD	12893	8170	266996	333.84
173	Uttara Kannada	SIDDAPUR	13497	6876	158856	176.51

No	District	Name of the Taluk	Jobcards issued	Hhs provided Employment	Persondays Generated	Expenditure (in lakhs)
174	Uttara Kannada	SIRSI	14992	4712	182072	235.55
175	Uttara Kannada	SUPA	6773	3725	149297	313.14
176	Uttara Kannada	YELLAPUR	9228	4773	122697	163.03
		Total	5818556	2922993	154976348	20426342

ಮುಳಬಾಗಿಲು ಕ್ಷೇತ್ರದಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೀಡಿರುವ ಅನುದಾನದ ಬಗ್ಗೆ

259 (597) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿರುವ ಒಟ್ಟು ಅನುದಾನವೆಷ್ಟು (ಗ್ರಾಮ ಪಂಚಾಯಿತಿವಾರು ವಿವರ ನೀಡುವುದು);

ಆ) ಈ ಅನುದಾನವು ಸಮರ್ಪಕವಾಗಿ ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) 2008–09 ನೇ ಸಾಲಿಗೆ ಬಿಡುಗಡೆಯಾಗಿರುವ ಅನುದಾನದ ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಸಮರ್ಪಕವಾಗಿ ಬಳಕೆಯಾಗಿರುತ್ತದೆ.

ಇ) 'ಆ' ಭಾಗಕ್ಕೆ ಉತ್ತರ ನೀಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ - 1

ತಾಲ್ಲೂಕು ಪಂಚಾಯತಿ ಮುಳಬಾಗಿಲು, ಕಾರ್ಯಾಲಯ

2008-09ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಿರುವ ಅನುದಾನದ ವಿವರಗಳು.

ವಿಧಾನಸಭೆ ಪ್ರಶ್ನೆ ಸಂಖ್ಯೆ:697

ಕ್ರಮ ಸಂಖ್ಯೆ	ಗ್ರಾಮ ಪಂಚಾಯತಿ ಹೆಸರು	ಮುದ್ರಾಂಕ ಶುಲ್ಕ ಯೋಜನೆ	ಸ್ವಚ್ಛ ಗ್ರಾಮ	ಸಂಪೂರ್ಣ ಸ್ವಚ್ಛತಾ ಆಂದೋಲನ	ಬಸವ ವಸತಿ ಯೋಜನೆ	NREGA ಯೋಜನೆ	ಶಾಸನಬದ್ಧ ಅನುದಾನ	ಒಟ್ಟು ಮೊತ್ತ
1	ಅಗರ	56755	0	0	231700	199183	218000	705638
2	ಹೆಚ್.ಗೊಲ್ಲಹಳ್ಳಿ	53474	0	0	211400	199500	212000	676374
3	ಗುಡಿಪಲ್ಲಿ	53088	0	0	206400	499215	212000	970703
4	ರಾಜೇಂದ್ರಹಳ್ಳಿ	52895	0	0	223300	399550	218000	893745
5	ಹೆಬ್ಬಣಿ	53860	0	0	263700	2400000	212000	2929560
6	ಮುಷ್ಟೂರು	57527	0	0	255300	300000	218000	830827
7	ಅಂಬ್ಲಿಕಲ್ಲು	54246	0	0	258900	199434	218000	730580
8	ಬೈರಕೂರು	53474	0	0	299400	300000	212000	864874
9	ಕುರುಡುಮಲೆ	56369	2000000	0	267900	100000	218000	2642269
10	ಮುದಿಯನೂರು	57720	0	0	223980	497890	212000	991590
11	ಉತ್ತನೂರು	58492	0	0	241700	1600000	218000	2118192
12	ಕಪ್ಪಲಮಡಗು	54439	0	0	283600	599209	218000	1155248
13	ನಂಗಲಿ	52509	0	0	293100	121865	212000	679474
14	ಮುಡಿಗೆರೆ	53667	0	0	380600	200000	212000	846267
15	ಆಲಂಗೂರು	53088	0	0	273257	899209	218000	1443554

ಕ್ರಮ ಸಂಖ್ಯೆ	ಗ್ರಾಮ ಪಂಚಾಯಿತಿ ಹೆಸರು	ಕುಡಿಯುವ ನೀರಿನ ಯೋಜನೆ	ಸ್ವಚ್ಛ ಗ್ರಾಮ	ಸಂಪೂರ್ಣ ಸ್ವಚ್ಛತಾ ಆಂದೋಲನ	12ನೇ ಹಣಕಾಸು ಯೋಜನೆ	NREGA ಯೋಜನೆ	ಶಾಸನಬದ್ಧ ಅನುದಾನ	ಒಟ್ಟು ಮೊತ್ತ
16	ಹನುಮನಹಳ್ಳಿ	57334	0	0	218400	600000	218000	1093734
17	ದೇವರಾಯಸಮುದ್ರ	54825	0	300000	274700	800000	212000	1641525
18	ಸೊಣ್ಣವಾಡಿ	53088	0	0	231100	799950	212000	1296138
19	ಪಿಚ್ಚಗುಂಟ್ಲಹಳ್ಳಿ	54825	0	0	228500	100000	212000	595325
20	ಮಲ್ಲನಾಯಕನಹಳ್ಳಿ	51544	0	0	234100	614845	218000	1118489
21	ಗುಮ್ಮಕಲ್ಲು	54246	0	0	331200	500000	212000	1097446
22	ಎಮ್ಮೆನತ್ತ	53281	0	300000	216200	700000	212000	1481481
23	ಬಳ್ಳ	53088	0	0	249400	998928	212000	1513416
24.	ಆವಣಿ	53088	0	0	223864	497575	212000	986527
25	ಊರುಕುಂಟೆಮಿಟ್ಟೂರು	52509	0	0	200200	697040	212000	1161749
26	ಮೋತಕಪಲ್ಲಿ	53474	0	0	240300	900000	212000	1405774
27	ತಾಯಲೂರು	52509	0	0	199200	650000	218000	1119709
28	ತಿಮ್ಮರಾವುತನಹಳ್ಳಿ	52895	0	0	258000	198930	218000	727825
29	ದುಲಪಲ್ಲಿ	53860	0	0	152400	600000	212000	1018260
30	ಅಂಗೊಂಡಹಳ್ಳಿ	55790	0	0	232600	888928	212000	1389318
	ಒಟ್ಟು	1627959	2000000	600000	7404401	18081251	6432000	36125611

ಮುಳಬಾಗಿಲು ತಾಲ್ಲೂಕಿನಲ್ಲಿರುವ ಪಶುಸಂಗೋಪನಾ ಕೇಂದ್ರಗಳ ಸಿಬ್ಬಂದಿ ವರ್ಗಗಳ ಬಗ್ಗೆ

260 (598) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕಿನಲ್ಲಿರು ಪಶುಸಂಗೋಪನಾ ಕೇಂದ್ರಗಳೆಷ್ಟು ಹಾಗೂ ಪಶುಸಂಗೋಪನಾ ಕೇಂದ್ರಗಳಲ್ಲಿರುವ ಸಿಬ್ಬಂದಿ ವರ್ಗಗಳೆಷ್ಟು (ವರ್ಗವಾರು ವಿವರ ನೀಡುವುದು);

ಆ) ತಾಲ್ಲೂಕಿನ ಪಶುಸಂಗೋಪನಾ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕಿಗೆ 2007–08, 2008–09 ರಲ್ಲಿ ಸರ್ಕಾರದಿಂದ ಹೊಸದಾಗಿ ಎಷ್ಟು ಪಶುಸಂಗೋಪನಾ ಕೇಂದ್ರಗಳು ಮಂಜೂರಾಗಿರುತ್ತವೆ: ಮಂಜೂರಾಗಿದ್ದಲ್ಲಿ, ಯಾವ್ಯಾವ ಗ್ರಾಮ ಪಂಚಾಯಿತಿಗಳಿಗೆ ಮಂಜೂರು ಮಾಡಲಾಗಿದೆ (ವಿವರ ನೀಡುವುದು)?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) 22. ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ ವಿವಿಧ ಪಶುವೈದ್ಯ ಸಂಸ್ಥೆಗಳು ಹಾಗೂ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೃಂದಾವಾರು ವಿವರ ಕೆಳಕಂಡಂತಿದೆ:

ಕ್ರ.ಸಂ.	ಸಂಸ್ಥೆಯ ಹೆಸರು	ಸಂಖ್ಯೆ
1	ಪಶುಆಸ್ಪತ್ರೆ	01
2	ಪಶುಚಿಕಿತ್ಸಾಲಯ	11
3	ಸಂಚಾರಿ ಪಶುಚಿಕಿತ್ಸಾಲಯ	01
4	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	04
5	ತೀವ್ರತಳಿ ಅಭಿವೃದ್ಧಿ ಘಟಕ	05
	ಒಟ್ಟು	22

ಸಿಬ್ಬಂದಿ ವಿವರಗಳು

ಕ್ರಮ ಸಂ.	ಹುದ್ದೆ	ಮಂಜೂರಾತಿ	ಭರ್ತಿ	ಖಾಲಿ
1	ಸಹಾಯಕ ನಿರ್ದೇಶಕರು	01	01	00
2	ಪಶುವೈದ್ಯಾಧಿಕಾರಿ	13	06	07
3	ಪಶುವೈದ್ಯ ಮೇಲ್ವಿಚಾರಕರು	01	01	00
4	ಹಿರಿಯ ಪಶುವೈದ್ಯ ಪರೀಕ್ಷಕರು	09	04	05
5	ಪಶುವೈದ್ಯ ಪರೀಕ್ಷಕರು	11	07	04
6	ಪಶುವೈದ್ಯ ಸಹಾಯಕರು	07	04	03
7	ದ್ವಿತೀಯ ದರ್ಜೆ ಸಹಾಯಕರು	01	01	00
8	ವಾಹನ ಚಾಲಕರು	01	00	01
9	ಡಿ– ದರ್ಜೆ	34	28	06
	ಒಟ್ಟು	**78**	**52**	**26**

ಆ) ಹೌದು.

ಖಾಲಿ ಹುದ್ದೆಗಳನ್ನು ತುಂಬಲು ತೆಗೆದುಕೊಳ್ಳಲಾಗುವ ಕ್ರಮಗಳು :

1. **ಪಶುವೈದ್ಯಾಧಿಕಾರಿ ಹುದ್ದೆ :** ವಿಶೇಷ ನೇರ ನೇಮಕಾತಿ ನಿಯಮಗಳ ಮೂಲಕ ಇಲಾಖೆಯಲ್ಲಿ ಖಾಲಿ ಇರುವ 487 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಜಾರಿಯಲ್ಲಿದ್ದು, ನೇಮಕಾತಿ ಸಂದರ್ಭದಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

2. **ಹಿರಿಯ ಪಶುವೈದ್ಯ ಪರೀಕ್ಷಕರು** : ಪಶುವೈದ್ಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ಮುಂಬಡ್ತಿ ನೀಡುವ ಸಂದರ್ಭದಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಖಾಲಿ ಇರುವ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುವುದು.
3. **ಪಶುವೈದ್ಯ ಪರೀಕ್ಷಕರು** : 300 ಪಶುವೈದ್ಯ ಪರೀಕ್ಷಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಆಯ್ಕೆ ಮಾಡಲಾಗಿದ್ದು, ನೇಮಕಾತಿ ಮಾಡುವ ಸಂದರ್ಭದಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಖಾಲಿ ಇರುವ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುವುದು.
4. **ಪಶುವೈದ್ಯ ಸಹಾಯಕರು** : ನೇರ ನೇಮಕಾತಿ ಮೂಲಕ 642 ಪಶುವೈದ್ಯ ಸಹಾಯಕರ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದ್ದು. ನೇಮಕಾತಿ ಸಂದರ್ಭದಲ್ಲಿ ಮುಳಬಾಗಿಲು ತಾಲ್ಲೂಕಿನ ಖಾಲಿ ಇರುವ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುವುದು.
5. **ವಾಹನ ಚಾಲಕರು** : ಖಾಲಿ ಇರುವ ವಾಹನ ಚಾಲಕರ ಹುದ್ದೆಗಳನ್ನು ಕೋಲಾರ ಜಿಲ್ಲಾ ಉಪ ನಿರ್ದೇಶಕರ ಮೂಲಕ ಹೊರ ಗುತ್ತಿಗೆ ಆಧಾರದ ಮೇಲೆ ಹಾಗೂ ಎಸ್.ಎಸ್.ಎಲ್.ಸಿ. ಪಾಸು ಮಾಡಿರುವ ಹಾಗೂ ವಾಹನ ಚಾಲನೆ ತರಬೇತಿ ಪಡೆದಿರುವ 'ಡಿ' ದರ್ಜೆ ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
6. **'ಡಿ' ದರ್ಜೆನೌಕರರು** : ಖಾಲಿ ಇರುವ 'ಡಿ ದರ್ಜೆ' ಹುದ್ದೆಗಳನ್ನು ಆದ್ಯತೆ ಮೇರೆಗೆ ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಹೊರ ಗುತ್ತಿಗೆ ಆಧಾರದ ಮೇರೆಗೆ ತುಂಬಲು ಕ್ರಮ ಕೈಗೊಳ್ಳಲಾಗುವುದು..

ಇ) 2007-08 ಮತ್ತು 2008-09 ರಲ್ಲಿ ಮುಳಬಾಗಿಲು ತಾಲ್ಲೂಕಿಗೆ 2 ಹೊಸ ಪಶುಚಿಕಿತ್ಸಾಲಯಗಳು ಮಂಜೂರಾಗಿರುತ್ತವೆ. ವಿವರ ಈ ಕೆಳಕಂಡಂತಿದೆ :-

1. ಪಶುಚಿಕಿತ್ಸಾಲಯ, ತಿಮ್ಮರಾವುತನಹಳ್ಳಿ.
   ತಿಮ್ಮರಾವುತನಹಳ್ಳಿ ಗ್ರಾಮಪಂಚಾಯತಿ ವ್ಯಾಪ್ತಿ.

2. ಪಶುಚಿಕಿತ್ಸಾಲಯ, ಮಡಿಯನೂರು.
   ಮಡಿಯನೂರು ಗ್ರಾಮಪಂಚಾಯತಿ ವ್ಯಾಪ್ತಿ.

ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

262 (71) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯರ ಹುದ್ದೆಗಳೆಷ್ಟು;

ಆ) ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯರ ಹುದ್ದೆಗಳೆಷ್ಟು;

ಇ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) 979.

ಆ) 19.

ಇ) ವಿಶೇಷ ನೇಮಕಾತಿ ನಿಯಮಗಳ ಮೂಲಕ ಇಲಾಖೆಯಲ್ಲಿ ಖಾಲಿ ಇರುವ 487 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬಲು ಉದ್ದೇಶಿಸಿದ್ದು, ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ನೇಮಕಾತಿ ಸಂದರ್ಭದಲ್ಲಿ ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕೊರತೆ

264 (703) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

18	ಹಾವೇರಿ	72	74	78	34	34	34
19	ಕೊಡಗು	88	88	89	63	63	64
20	ಕೊಪ್ಪಳ	55	55	57	18	18	18
21	ಕೋಲಾರ	103	103	103	83	83	83
22	ಮಂಡ್ಯ	94	96	101	80	81	82
23	ಮೈಸೂರು	169	175	178	135	135	136
24	ರಾಮನಗರ	83	84	86	51	51	50
25	ರಾಯಚೂರು	91	91	92	67	67	68
26	ಶಿವಮೊಗ್ಗ	123	125	124	49	52	52
27	ತುಮಕೂರು	187	189	191	92	92	93

28	ಉಡುಪಿ	88	88	87	197	198	197
29	ಉತ್ತರ ಕನ್ನಡ	82	82	80	32	32	32
30	ಯಾದಗಿರಿ	0	0	45	0	0	19
		3762	3807	3846	3438	3463	3465

ಅನುಬಂಧ –ಉ
ಸರ್ಕಾರದ ಗಮನಕ್ಕೆ ಬಂದಿರುವ ನಕಲಿ ಮದ್ಯ ಮಾರಾಟ ಮಾಡುತ್ತಿರುವ ಮದ್ಯದಂಗಡಿಗಳ ವಿರುದ್ಧ ತೆಗೆದುಕೊಂಡಿರುವ ಕ್ರಮದ ವಿವರ.

ಕ್ರ ಸಂ.	ಜಿಲ್ಲೆಯ ಹೆಸರು	
1	ಬೆಂಗಳೂರು ನಗರ	ಬೆಂಗಳೂರು ನಗರ ಜಿಲ್ಲೆಯ ಉತ್ತರ ವಿಭಾಗ ವ್ಯಾಪ್ತಿಯಲ್ಲಿ 5 ನಕಲಿ ಮದ್ಯದ ಪ್ರಕರಣಗಳು, ದಕ್ಷಿಣ ವಿಭಾಗದಲ್ಲಿ ಒಂದು ನಕಲಿ ಮದ್ಯದ ಪ್ರಕರಣ ಮತ್ತು ಬೆಂಗಳೂರು ನಗರ ಜಿಲ್ಲೆಯ ಪೂರ್ವ ವ್ಯಾಪ್ತಿಯಲ್ಲಿ 2 ನಕಲಿ ಮದ್ಯದ ಪ್ರಕರಣ ಪತ್ತೆಯಾಗಿರುತ್ತದೆ.
2	ಬೆಂಗಳೂರು ಗ್ರಾಮಾಂತರ	ಇಲ್ಲ
3	ಬಾಗಲಕೋಟೆ	ಇಲ್ಲ
4	ಬೀದರ್	ಒಂದು ಪ್ರಕರಣ ಪತ್ತೆಯಾಗಿದ್ದು ಸದರಿ ಮದ್ಯದಂಗಡಿಯನ್ನು ರದ್ದು ಗೊಳಿಸಲಾಗಿದೆ.
5	ಬೆಳಗಾಂ	ಒಂದು ಪ್ರಕರಣ ಪತ್ತೆ ಹಚ್ಚಿದ್ದು ಸನ್ನದನ್ನು ರದ್ದುಪಡಿಸಲಾಗಿದೆ.
6	ಬಳ್ಳಾರಿ	ಇಲ್ಲ
7	ಬಿಜಾಪುರ	ಇಲ್ಲ
8	ಚಿಕ್ಕಮಗಳೂರು	ಇಲ್ಲ
9	ಚಿಕ್ಕಬಳ್ಳಾಪುರ	2007–08 ರಲ್ಲಿ ಒಂದುಪ್ರಕರಣ ದಾಖಲಾಗಿರುತ್ತದೆ. 2008–09,

		2009–10 ರಲ್ಲಿ ಇಲ್ಲ.
10	ಚಿತ್ರದುರ್ಗ	ಇಲ್ಲ
11	ಚಾಮರಾಜನಗರ	ಯಾವುದೇ ಮೊಕದ್ದಮೆ ದಾಖಲಾಗಿಲ್ಲ, ಆಗ್ಗಿಂದಾಗ್ಗೆ ಮದ್ಯದಂಗಡಿಗಳ ತಪಾಸಣೆ ಮಾಡಲಾಗುತ್ತಿದೆ.
12	ದಾವಣಗೆರೆ	ಒಂದು ಪ್ರಕರಣ ದಾಖಲಾಗಿದ್ದು ಸದರಿ ಸನ್ನದನ್ನು ರದ್ದುಪಡಿಸಿದೆ.
13	ಧಾರವಾಡ	ಒಂದು ಪ್ರಕರಣ ದಾಖಲಾಗಿರುತ್ತದೆ. ಸನ್ನದನ್ನು ನಿಯಮಿತವಾಗಿ ತಪಾಸಣೆಗೆ ಒಳಪಡಿಸಲಾಗುತ್ತಿದೆ.
14	ದಕ್ಷಿಣ ಕನ್ನಡ	2007–08ನೇ ಸಾಲಿನಲ್ಲಿ 6 ಪ್ರಕರಣಗಳು ಪತ್ತೆಯಾಗಿದ್ದು ಸದರಿ ಸನ್ನದುಗಳ ವಿರುದ್ಧ ಕಾನೂನಿನನ್ವಯ ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.
15	ಗದಗ	ಇಲ್ಲ
16	ಗುಲ್ಬರ್ಗಾ	ಇಲ್ಲ
17	ಹಾಸನ	ಇಲ್ಲ
18	ಹಾವೇರಿ	ಇಲ್ಲ
19	ಕೊಡಗು	2007–08ನೇ ಸಾಲಿನಲ್ಲಿ 2 ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ.
20	ಕೊಪ್ಪಳ	ಇಲ್ಲ
21	ಕೋಲಾರ	5 ಪ್ರಕರಣಗಳನ್ನು ಪತ್ತೆ ಹಚ್ಚಿದ್ದು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ಸನ್ನದು ರದ್ದು ಮಾಡಲಾಗಿರುತ್ತದೆ.
22	ಮಂಡ್ಯ	ಮದ್ಯದಂಗಡಿಯಲ್ಲಿ ನಕಲಿ ಮದ್ಯ ಮಾರಾಟ ಮಾಡುತ್ತಿದ್ದುದು ಗಮನಕ್ಕೆ ಬಂದಿರುತ್ತದೆ. ಸನ್ನದು ರದ್ದು ಪಡಿಸಲು ಕ್ರಮ ಜರುಗಿಸಲಾಗಿದೆ.

23	ಮೈಸೂರು	ಇಲ್ಲ
24	ರಾಮನಗರ	ರಾಮನಗರ ಜಿಲ್ಲೆಯಲ್ಲಿ ಒಂದು ಸಿಎಲ್–9 ಸನ್ನದಿನಲ್ಲಿ ನಕಲಿ ಮದ್ಯ ಮಾರಾಟ ದೃಢಪಟ್ಟ ಕಾರಣ ಜಿಲ್ಲಾಧಿಕಾರಿಗಳು ಸದರಿ ಸನ್ನದು ರದ್ದುಪಡಿಸಿದ್ದಾರೆ.
25	ರಾಯಚೂರು	ಇಲ್ಲ
26	ಶಿವಮೊಗ್ಗ	ಇಲ್ಲ
27	ತುಮಕೂರು	ಇಲ್ಲ
28	ಉಡುಪಿ	13 ಪ್ರಕರಣಗಳನ್ನು ಪತ್ತೆ ಹಚ್ಚಿದ್ದು ಮೊಕದ್ದಮೆ ದಾಖಲಿಸಲಾಗಿರುತ್ತದೆ.
29	ಉತ್ತರ ಕನ್ನಡ	ಪ್ರಕರಣ ಕಂಡುಬಂದಿಲ್ಲ.
30	ಯಾದಗಿರಿ	ಇಲ್ಲ

ಚಾಮರಾಜನಗರಕ್ಕೆ ಇಂಜಿನಿಯರಿಂಗ್ ಕಾಲೇಜ್ ಮಂಜೂರಾಗಿರುವ ಬಗ್ಗೆ

322 (680) ಶ್ರೀ ಪುಟ್ಟರಂಗಶೆಟ್ಟಿ. ಸಿ(ಚಾಮರಾಜನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರದ ಇಂಜನಿಯರಿಂಗ್ ಕಾಲೇಜಿಗೆ ಬಿಡುಗಡೆ ಯಾಗಿರುವ ಅನುದಾನ ಎಷ್ಟು?

ಆ) ಕಾಮಗಾರಿ ಯಾವಾಗ ಪ್ರಾರಂಭವಾಗುತ್ತದೆ;

ಇ) ಇದುವರೆವಿಗೂ ಕಾಮಗಾರಿ ಪ್ರಾರಂಭವಾಗದೆ ಇರುವುದಕ್ಕೆ ಕಾರಣವೇನು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ರೂ. 1750.00 ಲಕ್ಷಗಳು

ಆ) ಶೀಘ್ರದಲ್ಲೇ ಪ್ರಾರಂಭಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಶಾಲೆಗಳಲ್ಲಿ ಶಿಕ್ಷಕರಿಗೆ ಮೊಬೈಲ್ ನಿಷೇಧ

323 (337) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಶಾಲೆಗಳ ಅನುದಾನ ಪಡೆಯುವ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಶಿಕ್ಷಕರು ಮೊಬೈಲ್ ಬಳಸುವುದನ್ನು ನಿಷೇಧಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಶಾಲಾ ಶಿಕ್ಷಕರು ತರಗತಿಗಳಲ್ಲಿ ಮಾತ್ರ ಮೊಬೈಲ್ ನಿಷೇಧಿಸಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು. ನಿಷೇಧಿಸಲಾಗಿದೆ.

ಆ) ಶಿಕ್ಷಕ ಮತ್ತು ನೌಕರ ವರ್ಗದವರು ಅವರುಗಳು ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಲ್ಲಿ ಮೊಬೈಲ್ ಗಳನ್ನು ಉಪಯೋಗಿಸುತ್ತಿರುವುದರಿಂದ ಬೋಧನಾ ಚಟುವಟಿಕೆಗಳಿಗೆ ಅತೀವ ತೊಂದರೆಯಾಗಿರುತ್ತದೆ. ಶಿಕ್ಷಕರು ಮೊಬೈಲ್ ಬಳಕೆ ಮಾಡಲಾಗುತ್ತಿರುವುದರಿಂದ ಶಾಲೆಗಳಲ್ಲಿ ಶೈಕ್ಷಣಿಕ ವಾತಾವರಣವನ್ನು ಕಲುಷಿತಗೊಳಿಸಿದಂತಾಗಿ ಬೋಧನಾ ಕ್ರಮಕ್ಕೆ ಅಡ್ಡಿಯಾಗುತ್ತಿರುತ್ತದೆ. ಈ ಕಾರಣದಿಂದ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳ ಅನುದಾನ ಪಡೆಯುವ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಶಿಕ್ಷಕರು ಮೊಬೈಲ್‌ಗಳ ಬಳಕೆ ಮಾಡುವುದನ್ನು ನಿಷೇಧಿಸಲಾಗಿದೆ.

ಇ) ಹೌದು. ಶಾಲಾ ಶಿಕ್ಷಕರು ತರಗತಿಯಲ್ಲಿ ಮಾತ್ರ ಮೊಬೈಲ್ ನಿಷೇಧಿಸಲು ಸರ್ಕಾರದಿಂದ ಮತ್ತು ಇಲಾಖೆಯಿಂದ ಸುತ್ತೋಲೆ ಹೊರಡಿಸಲಾಗಿದೆ. ಆದರೆ ಶಾಲಾ ಮುಖ್ಯ ಶಿಕ್ಷಕರಿಗೆ ಈ ನಿಷೇಧದಿಂದ ವಿನಾಯಿತಿ ನೀಡಲಾಗಿದ್ದರೂ ಸಹ ಅವರು ತಮ್ಮ ಬೋಧನಾ ಕಾರ್ಯದ ಅವಧಿಯಲ್ಲಿ ಮೊಬೈಲ್‌ಗಳನ್ನು ಬಳಸುವುದನ್ನು ನಿಷೇಧಿಸಿದೆ. ಯಾವುದೇ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಶಾಲಾ ವೇಳೆಯಲ್ಲಿ ಮೊಬೈಲ್ ಉಪಯೋಗಿಸುತ್ತಿ

ರುವುದು ಗಮನಕ್ಕೆ ಬಂದಲ್ಲಿ ಶಾಲೆಯ ಮುಖ್ಯ ಶಿಕ್ಷಕರೇ ಹೊಣೆಗಾರರಾಗುತ್ತಾರೆ ಎಂದು ಎಚ್ಚರಿಕೆ ಸಹ ನೀಡಲಾಗಿದೆ.

ರಾಜ್ಯದಲ್ಲಿ ಪಶು ಚಿಕಿತ್ಸಾಲಯಗಳಲ್ಲಿ ಪಶು ವೈದ್ಯರ ಕೊರತೆ

326 (340) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಕೃತಕ ಗರ್ಭಧಾರಣಾ ಕೇಂದ್ರ ಹಾಗೂ ತೀವ್ರ ತಳಿ ಅಭಿವೃದ್ಧಿ ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಖಾಲಿ ಇರುವ ಪದವಿ ಪಡೆದ ಪಶುವೈದ್ಯರುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಇ) ಈ ಖಾಲಿ ಇರತಕ್ಕ ಪಶುವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ರಾಜ್ಯದ ಎಷ್ಟು ಹೋಬಳಿಗಳಲ್ಲಿ ಇಲ್ಲಿಯವರೆಗೆ ಪಶುಚಿಕಿತ್ಸಾ ಸೌಲಭ್ಯಗಳಿಲ್ಲ?

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ರಾಜ್ಯದಲ್ಲಿ 1181 ಪ್ರಾಥಮಿಕ ಪಶು ಚಿಕಿತ್ಸ ಕೇಂದ್ರ, 231 ಕೃತಕ ಗರ್ಭಧಾರಣಾ ಕೇಂದ್ರ ಹಾಗೂ 19 ತೀವ್ರ ತಳಿ ಅಭಿವೃದ್ಧಿ ಕೇಂದ್ರಗಳಿರುತ್ತದೆ.

ಆ) ಈ ಸಂಸ್ಥೆಗಳಲ್ಲಿ ಪದವಿ ಪಡೆದ ಪಶುವೈದ್ಯರುಗಳು ಕಾರ್ಯನಿರ್ವಹಿಸುವುದಿಲ್ಲ. ಅರೆ ತಾಂತ್ರಿಕ ಪಶುವೈದ್ಯಕೀಯ ಸಿಬ್ಬಂದಿಗಳು (ಪಶುವೈದ್ಯಕೀಯ ಮೇಲ್ವಿಚಾರಕರು, ಹಿರಿಯ ಹಾಗೂ ಪಶುವೈದ್ಯಕೀಯ ಸಹಾಯಕರು) ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ.

ಇ) ವಿಶೇಷ ನೇರ ನೇಮಕಾತಿ ನಿಯಮಗಳ ಮೂಲಕ ಇಲಾಖೆಯಲ್ಲಿ ಖಾಲಿ ಇರುವ 487 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬಲು ಉದ್ದೇಶಿಸಿದ್ದು, ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ನೇಮಕಾತಿ ಸಂದರ್ಭದಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ) ರಾಜ್ಯದ 61 ಹೋಬಳಿ ಕೇಂದ್ರಗಳಲ್ಲಿ ಪಶುಚಿಕಿತ್ಸಾ ಸೌಲಭ್ಯಗಳಿರುವುದಿಲ್ಲ.

ಕುಣಿಗಲ್ ಕಾಲೇಜಿಗೆ ಶಿಕ್ಷಕರು ಹಾಗೂ ಭೋದಕರನ್ನು ಭರ್ತಿ ಮಾಡುವ ಬಗ್ಗೆ

327 (73) ಶ್ರೀರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಪಟ್ಟಣದ ಮಹಾತ್ಮ ಗಾಂಧಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢ ಶಾಲೆಗಳಲ್ಲಿ ಕೊರತೆ ಇರುವ ಶಿಕ್ಷಕರ / ಬೋಧಕರ ಸಂಖ್ಯೆ ಎಷ್ಟು;

ಆ) ಕೊರತೆಯಿಂದ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಕುಣಿಗಲ್ ಪಟ್ಟಣದ ಮಹಾತ್ಮ ಗಾಂಧಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಕೊರತೆ ಇರುವ

ಶಿಕ್ಷಕರ ಸಂಖ್ಯೆ : 10.

ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಒಟ್ಟು 22 ಉಪನ್ಯಾಸಕರ ಹುದ್ದೆ ಮಂಜೂರಾಗಿದ್ದು 13 ಉಪನ್ಯಾಸಕರ ಹುದ್ದೆಗಳು ಭರ್ತಿಯಾಗಿರುತ್ತದೆ.

ಕನ್ನಡ, ಇಂಗ್ಲೀಷ್, ಉರ್ದು, ಅರ್ಥಶಾಸ್ತ್ರ, ವಾಣಿಜ್ಯ, ಸಮಾಜಶಾಸ್ತ್ರ, ತಲಾ 01 ರಂತೆ 06 ಹುದ್ದೆಗಳು ಮತ್ತು ಇತಿಹಾಸ – 03 ಹುದ್ದೆಗಳು ಸೇರಿ ಒಟ್ಟು 09 ಹುದ್ದೆಗಳು ಖಾಲಿ ಇರುತ್ತವೆ.

ಆ) **ಪ್ರೌಢಶಾಲೆ :**

ಖಾಲಿ ಇರುವ ಬೋಧಕ ಹುದ್ದೆಗಳಿಗೆ ಈಗಾಗಲೇ ಹತ್ತಿರದ ಶಾಲೆಗಳಿಂದ ಹೆಚ್ಚುವರಿ ಶಿಕ್ಷಕರನ್ನು ನಿಯೋಜಿಸಲಾಗಿದೆ ಹಾಗೂ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಶಾಲಾ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಯಾವುದೇ ಧಕ್ಕೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಪ್ರೌಢಾಶಾಲಾ ಶಿಕ್ಷಕರ ಅಂತಿಮ ಆಯ್ಕೆ ಪಟ್ಟಿಯನ್ನು

ಪ್ರಕಟಿಸಲಾಗಿದ್ದು, 2010ರ ಏಪ್ರಿಲ್ ಮಾಹೆಯಲ್ಲಿ ಕೌನ್ಸಿಲಿಂಗ್ ಮೂಲಕ ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಪದವಿ ಪೂರ್ವ ಕಾಲೇಜು :

ಸರ್ಕಾರಿ ಆದೇಶ ಸಂಖ್ಯೆ : ಇಡಿ 88 ಟಿಪಿಯು 2009, ದಿ:16-06-2009ರ ಪ್ರಕಾರ ಖಾಲಿ ಇರುವ ಉಪನ್ಯಾಸಕರ 09 ಹುದ್ದೆಗಳಿಗೆ 2009-10ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಲಾಗಿದೆ.

ಹುಲಿಯೂರು ದುರ್ಗ ಹೋಬಳಿಗೆ ಪದವಿ ಪೂರ್ವ ಕಾಲೇಜಿನ ಸ್ಥಾಪನೆ

328 (74) ಶ್ರೀ ರಾಮಸ್ವಾಮಿಗೌಡ ಬಿ.ಬಿ (ಕುಣಿಗಲ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ತಾಲ್ಲೂಕು, ಹುಲಿಯೂರು ದುರ್ಗ ಹೋಬಳಿ ಕೇಂದ್ರಕ್ಕೆ ಅತೀ ತುರ್ತಾಗಿ ಒಂದು ಪದವಿ ಕಾಲೇಜು ಬೇಡಿಕೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಬಾರದಿದ್ದಲ್ಲಿ, ಹೋಬಳಿ ಕೇಂದ್ರದ ಸುತ್ತಮುತ್ತಲಿನ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಂದು ಪದವಿ ಕಾಲೇಜನ್ನು ಸರ್ಕಾರ ಮಂಜೂರು ಮಾಡುವುದೇ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಹಣಕಾಸಿನ ಅಗತ್ಯತೆ ಹಾಗೂ ಲಭ್ಯತೆಯನ್ನಾಧರಿಸಿ ಮುಂದಿನ ಸಾಲುಗಳಲ್ಲಿ ಕಾಲೇಜು ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಉದ್ಭವಿಸುವುದಿಲ್ಲ.

ಕುಣಿಗಲ್ ಕ್ಷೇತ್ರದಲ್ಲಿರುವ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಯ ಭರ್ತಿ

330 (76) ಶ್ರೀ ರಾಮಸ್ವಾಮಿಗೌಡ ಬಿ.ಬಿ (ಕುಣಿಗಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರುಗಳ ಸಂಖ್ಯೆ ಎಷ್ಟು ;

ಆ) ಸದರಿ ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 34 ಹುದ್ದೆಗಳು.

ಆ) ಕುಣಿಗಲ್ ತಾಲ್ಲೂಕಿನಲ್ಲಿ ಮಕ್ಕಳ ಶಿಕ್ಷಕರ ಅನುಪಾತ 1 : 19 ಇದ್ದು, ರಾಜ್ಯದ ಅನುಪಾತ 1 : 28 ಇರುತ್ತದೆ. ಆದ್ದರಿಂದ, ಸದರಿ ಖಾಲಿ ಇರುವ ಹುದ್ದೆಗಳು ಹೆಚ್ಚುವರಿ ಹುದ್ದೆಗಳಾಗಿದೆ. ಈ ಹುದ್ದೆಗಳನ್ನು ಮಕ್ಕಳ ಸಂಖ್ಯೆ ಹೆಚ್ಚಿಗೆ ಇರುವ ಅಥವಾ ಶಿಕ್ಷಕರ ಹುದ್ದೆ ಖಾಲಿ ಇರುವ ಇತರೆ ಶಾಲೆಗಳಿಗೆ ಸ್ಥಳಾಂತರಿಸಿ ಭರ್ತಿ ಮಾಡಲು ಕ್ರಮವಹಿಸಲಾಗಿದೆ.

ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹಾಸನ ಜಿಲ್ಲೆಗೆ ಮಂಜೂರಾದ ಅನುದಾನದ ಬಗ್ಗೆ

331 (722) ಶ್ರೀ ರುದ್ರೇಶ್‌ಗೌಡ. ವೈ.ಎನ್ (ಬೇಲೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008-09 ಮತ್ತು 2009-10ನೇ ಸಾಲಿನಲ್ಲಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹಾಸನ ಜಿಲ್ಲೆಗೆ ಮಂಜೂರಾದ ಅನುದಾನ ಎಷ್ಟು;

ಆ) ಈ ಅನುದಾನದಲ್ಲಿ ಹಾಸನ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ಹಂಚಿಕೆ ಮಾಡಿದ ಅನುದಾನವೆಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಇ) ಹಂಚಿಕೆಯಾದ ಅನುದಾನದಲ್ಲಿ ಇದುವರೆವಿಗೂ ತಾಲ್ಲೂಕುವಾರು ಖರ್ಚು ಮಾಡಿದ ಹಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಈ) ಹಂಚಿಕೆಯಾದ ಅನುದಾನ ಖರ್ಚಾಗದಿದ್ದರೆ ಕಾರಣಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 2008-09ನೇ ಸಾಲಿನಲ್ಲಿ ಆರಂಭಿಕ ಶಿಲ್ಕು ಮತ್ತು ಬಿಡುಗಡೆ ಸೇರಿದಂತೆ ಒಟ್ಟು ರೂ.3081.466 ಲಕ್ಷಗಳು ಲಭ್ಯವಿರುತ್ತದೆ.

2009-10ನೇ ಸಾಲಿನಲ್ಲಿ ಆರಂಭಿಕ ಶಿಲ್ಕು ಮತ್ತು ಬಿಡುಗಡೆ ಸೇರಿದಂತೆ ಒಟ್ಟು ರೂ.4732.478 ಲಕ್ಷಗಳು ಲಭ್ಯವಿರುತ್ತದೆ.

ಆ) ವರ್ಷವಾರು ತಾಲ್ಲೂಕುವಾರು ಅನುದಾನದ ಹಂಚಿಕೆ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ.	ತಾಲ್ಲೂಕುವಾರು/ಜಿಲ್ಲಾ ಮಟ್ಟದ ಇಲಾಖೆ ಹೆಸರು	ಹಂಚಿಕೆಯಾಗಿರುವ ಅನುದಾನ ವಿವರ	
		2008-09	**2009-10**
1	ಆಲೂರು	183.863	158.383
2	ಅರಕಲಗೂಡು	225.996	1057.609
3	ಅರಸೀಕೆರೆ	355.442	547.261
4	ಬೇಲೂರು	314.923	413.302
5	ಚನ್ನರಾಯಪಟ್ಟಣ	307.877	770.873
6	ಹಾಸನ	453.510	1085.582
7	ಹೊಳೆನರಸೀಪುರ	228.730	354.087
8	ಸಕಲೇಶಪುರ	140.678	249.889
9	ಅರಣ್ಯ ಇಲಾಖೆ	59.650	0
10	ಜಿಲ್ಲಾ ಪಂಚಾಯತ್‌ನಲ್ಲಿ	810.797	85.492

	ಇರುವ ಅನುದಾನ		
11	ಪ್ರಧಾನ ಅಂಚೆ ಕಚೇರಿ (ಡಿಪಾಸಿಟ್)	0.000	10.00
	ಒಟ್ಟು	**3081.466**	**4732.478**

ಇ) ವರ್ಷವಾರು ತಾಲ್ಲೂಕುವಾರು ಖರ್ಚು ಮಾಡಿದ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ.	ತಾಲ್ಲೂಕುವಾರು/ಜಿಲ್ಲಾ ಮಟ್ಟದ ಇಲಾಖೆ ಹೆಸರು	ಖರ್ಚಾಗಿರುವ ಅನುದಾನ ವಿವರ	
		2008–09	**2009–10**
1	ಆಲೂರು	24.341	99.635
2	ಅರಕಲಗೂಡು	120.784	1022.798
3	ಅರಸೀಕೆರೆ	106.948	376.246
4	ಬೇಲೂರು	49.476	290.272
5	ಚನ್ನರಾಯಪಟ್ಟಣ	64.982	568.59
6	ಹಾಸನ	329.017	890.844
7	ಹೊಳೆನರಸೀಪುರ	99.016	236.797
8	ಸಕಲೇಶಪುರ	17.195	158.910
9	ಅರಣ್ಯ ಇಲಾಖೆ	46.46	0.000
10	ಜಿಲ್ಲಾ ಪಂಚಾಯತ್	21.769	2.278
	ಒಟ್ಟು	**879.988**	**3646.370**

ಈ) ಸದರಿ ಯೋಜನೆಯಡಿ ಕಾಮಗಾರಿಗಳನ್ನು ಗ್ರಾಮ ಪಂಚಾಯತಿ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯು ಒಂದು ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿದ್ದು, ಕಾರ್ಮಿಕರ ಬೇಡಿಕೆಯ ಅನುಸಾರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಿದ ಎಲ್ಲಾ ಕೂಲಿಕಾರರಿಗೆ ಉದ್ಯೋಗವನ್ನು ನೀಡಲಾಗುತ್ತಿದೆ.

332 (723) ಶ್ರೀ ರುದ್ರೇಶಗೌಡ ವೈ.ಎನ್ (ಬೇಲೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಗರಿ ಗ್ರಾಮದಲ್ಲಿ ಶಾಲಾ ಆಟದ ಮೈದಾನ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಎಷ್ಟು ಜಾಗ ಒತ್ತುವರಿಯಾಗಿರುತ್ತದೆ;

ಇ) ಈ ಒತ್ತುವರಿ ಜಾಗ ತೆರವಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಆಟದ ಮೈದಾನ 0.1/2 ಗುಂಟೆ ಪ್ರದೇಶ ಒತ್ತುವರಿ ಯಾಗಿರುತ್ತದೆ.

ಇ) ಬೇಲೂರು ನ್ಯಾಯಾಲಯದಲ್ಲಿ ಸಿವಿಲ್ ದಾವೆ ನಂ:ಓ.ಎಸ್. 16/04 ರಲ್ಲಿ ಮೊಕದ್ದಮೆ ನಡೆಯುತ್ತಿದ್ದು, ಇನ್ನೂ ತೀರ್ಮಾನವಾಗಿರುವುದಿಲ್ಲ. ನ್ಯಾಯಾಲಯ ತೀರ್ಮಾನದನ್ವಯ ಕ್ರಮ ಕೈಗೊಳ್ಳಲಾಗುವುದು.

ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಪಶುಸಂಗೋಪನಾ ಇಲಾಖೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ

335 (688) ಶ್ರೀ ಸಂಪಂಗಿ. ಎನ್. (ಬಾಗೇಪಲ್ಲಿ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಯಾವ ಕಾರ್ಯಕ್ರಮಗಳನ್ನು ಪಶುಸಂಗೋಪನಾ ಇಲಾಖಾ ವತಿಯಿಂದ ಹಮ್ಮಿಕೊಳ್ಳ ಲಾಗಿದೆ (ಜಿಲ್ಲಾವಾರು ವಿವರಗಳನ್ನು ನೀಡುವುದು);

ಆ) ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿನ ಪಶುವೈದ್ಯ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಸಿಬ್ಬಂದಿಗಳ ಔಷಧಿಗಳ ಕೊರತೆ ಇರುವುದು

ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) 2009-10ನೇ ಸಾಲಿನಲ್ಲಿ ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದೆ.

1. ವಿಶೇಷ ಘಟಕ ಯೋಜನೆ :- ಈ ಯೋಜನೆಯಡಿ ಜಿಲ್ಲಾ ವಲಯದಲ್ಲಿ 22 ಫಲಾನುಭವಿಗಳಿಗೆ ರೂ. 2.20 ಲಕ್ಷಗಳ ಸಬ್ಸಿಡಿಯನ್ನು ಮತ್ತು ರಾಜ್ಯವಲಯದಲ್ಲಿ 3 ಫಲಾನುಭವಿಗಳಿಗೆ ರೂ. 0.36 ಲಕ್ಷಗಳ ಸಬ್ಸಿಡಿಯನ್ನು ಮಿಶ್ರತಳಿ, ಹಸುಗಳ ಖರೀದಿಗಾಗಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ನೀಡಲಾಗಿದೆ.

2. ಗಿರಿಜನ ಉಪಯೋಜನೆ :- ಈ ಯೋಜನೆಯಡಿ ಜಿಲ್ಲಾವಲಯದಲ್ಲಿ 7 ಫಲಾನುಭವಿಗಳಿಗೆ ರೂ. 0.70 ಲಕ್ಷಗಳು ಹಾಗೂ ರಾಜ್ಯವಲಯದಲ್ಲಿ 6 ಫಲಾನುಭವಿಗಳಿಗೆ ರೂ. 0.90 ಲಕ್ಷಗಳ ಸಬ್ಸಿಡಿಯನ್ನು ಮಿಶ್ರತಳಿ ಹಸುಗಳ ಖರೀದಿಗಾಗಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ನೀಡಲಾಗಿದೆ.

ಜಿಲ್ಲಾ ವಲಯದಲ್ಲಿ 3 ಫಲಾನುಭವಿಗಳಿಗೆ ರೂ. 0.30 ಲಕ್ಷಗಳು ಹಾಗೂ ರಾಜ್ಯವಲಯದಲ್ಲಿ 4 ಫಲಾನುಭವಿಗಳಿಗೆ ರೂ. 0.60 ಲಕ್ಷಗಳು ಸಬ್ಸಿಡಿಯನ್ನು ಮಿಶ್ರತಳಿ ಹಸುಗಳ ಖರೀದಿಗಾಗಿ ಗುಡಿಬಂಡೆ ತಾಲ್ಲೂಕಿನಲ್ಲಿ ನೀಡಲಾಗಿದೆ.

3. ವಿಶೇಷ ಅಭಿವೃಧಿ ಯೋಜನೆ :- ಈ ಯೋಜನೆಯಡಿ ಎರಡು ತಾಲೂಕುಗಳಿವೆ ತಲಾ 1.00 ಲಕ್ಷ ಅನುದಾನವನ್ನು 25 ಮಂಎಇ ರೈತರಿಗೆ 10 ಗುಂಟೆ ಭೂ ಪ್ರದೇಶದಲ್ಲಿ ಹಸಿರು ಮೇವಿನ ಬೆಳೆಗಳನ್ನು ಬೆಳೆಯಲು ನೀಡಲಾಗಿದೆ.

4. ಅಜೋಲ್ಲಾ ಬೆಳೆಯಲು ಸಬ್ಸಿಡಿ :- ಒಂದೊಂದು ತಾಲ್ಲೂಕಿಗೆ ರೂ.4,000/- ರಂತೆ ಸಹಾಯಧನವನ್ನು ಪ್ರತಿ ತಾಲ್ಲೂಕಿಗೆ 4 ರೈತರು ಅಜೋಲ್ಲಾ ಬೆಳೆಯಲು ನೀಡಲಾಗಿದೆ.

5. ಮೇವಿನ ಬೀಜಗಳ ಮಿನಿಕಿಟ್ ಸರಬರಾಜು ಕಾರ್ಯಕ್ರಮ :- ಈ ಕಾರ್ಯಕ್ರಮದಲ್ಲಿ ಬಾಗೇಪಲ್ಲಿ ತಾಲ್ಲೂಕಿನ 3258 ರೈತರಿಗೆ ರೂ. 8.31 ಲಕ್ಷ ಮೊತ್ತದ ಮೇವಿನ ಬೀಜಗಳ ಮಿನಿಕಿಟ್‌ಗಳನ್ನು ಸರಬರಾಜು ಮಾಡಲಾಗಿದೆ

ಮತ್ತು ಗುಡಿಬಂಡೆ ತಾಲ್ಲೂಕಿನ 3258 ರೈತರಿಗೆ ರೂ. 8.309 ಲಕ್ಷ ಮೊತ್ತದ ಮೇವಿನ ಬೀಜಗಳ ಮಿನಿ ಕಿಟ್‌ಗಳನ್ನು ಸರಬರಾಜು ಮಾಡಲಾಗಿದೆ.

6. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್.ಕೆ.ವಿ.ವೈ) :– ಈ ಯೋಜನೆಯಡಿ ಗುಡಿಬಂಡೆ ತಾಲ್ಲೂಕಿನ ಸಂಚಾರಿ ಪಶುಚಿಕಿತ್ಸಾ ಘಟಕಕ್ಕೆ ರೂ. 2.10 ಲಕ್ಷಗಳ ವೆಚ್ಚದಲ್ಲಿ ಒಂದು ವಾಹನವನ್ನು ಖರೀದಿಸಲಾಗಿದೆ.

7. ಆಸ್ಕಾಡ್ ಯೋಜನೆ :– ಈ ಯೋಜನೆಯಡಿ ಈ ಉಖಾಲ ಜ್ವರ ಮತ್ತು ಪಿ.ಪಿ.ಆರ್ ರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮಗಳನ್ನು ಉಚಿತವಾಗಿ ಎರಡು ತಾಲ್ಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಆ) ಬಂದಿದೆ ವಿವರಗಳು ಕೆಳಕಂಡಂತಿವೆ :

ಕ್ರ ಸಂ.	ಹುದ್ದೆ	ತಾಲ್ಲೂಕು	
		ಬಾಗೇಪಲ್ಲಿ	ಗುಡಿಬಂಡೆ
1.	ಪಶುವೈದ್ಯಾಧಿಕಾರಿ	04	–
2.	ಪಶುವೈದ್ಯಕೀಯ ಮೇಲ್ವಿಚಾರಕರು	01	01
3.	ಹಿರಿಯ ಪಶುವೈದ್ಯ ಪರೀಕ್ಷಕರು	01	02
4.	ಪಶುವೈದ್ಯ ಪರೀಕ್ಷಕರು	05	02
5.	ಪಶುವೈದ್ಯ ಸಹಾಯಕರು	–	04
6.	ದ್ವಿದ.ಸ	–	01
7.	ವಾಹನ ಚಾಲಕರು	01	01
8.	ಗ್ರೂಪ್ 'ಡಿ'	04	01
	ಒಟ್ಟು	**16**	**12**

I. ಖಾಲಿ ಹುದ್ದೆಗಳನ್ನು ತುಂಬಲು ತೆಗೆದುಕೊಳ್ಳಲಾಗುವ ಕ್ರಮಗಳು :

1. **ಪಶುವೈದ್ಯಾಧಿಕಾರಿ ಹುದ್ದೆ :** ವಿಶೇಷ ನೇರ ನೇಮಕಾತಿ ನಿಯಮ 2009 ರಡಿ 487 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ತುಂಬಲು ಅನುಮತಿ ಹೊರಡಿಸಲಾಗುತ್ತಿದ್ದು, ವಿಶೇಷ ನಿಯಮಾವಳಿ ಹೊರಡಿಸಿದ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು.

ಈ ಸಂದರ್ಭದಲ್ಲಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

2. **ಪಶುವೈದ್ಯಕೀಯ ಮೇಲ್ವಿಚಾರಕರು** : ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಮುಂಬಡ್ತಿ ನೀಡುವಾಗ ಆದ್ಯತೆ ಮೇರೆಗೆ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.
3. **ಹಿರಿಯ ಪಶುವೈದ್ಯ ಪರೀಕ್ಷಕರು** : ಪಶುವೈದ್ಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ನಡೆಯುತ್ತಿದ್ದು, ಈ ಸಂದರ್ಭದಲ್ಲಿ ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕಿನ ಖಾಲಿ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲು ಕ್ರಮ ವಹಿಸಲಾಗುವುದು.
4. **ಪಶುವೈದ್ಯ ಪರೀಕ್ಷಕರು** : 300 ಪಶುವೈದ್ಯ ಪರೀಕ್ಷಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಕೆ.ಪಿ.ಎಸ್.ಸಿ ಮೂಲಕ ಆಯ್ಕೆ ಮಾಡಲಾಗಿದ್ದು, ನೇಮಕಾತಿ ಮಾಡುವಾಗ ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕಿನ ಖಾಲಿ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲು ಕ್ರಮವಹಿಸಲಾಗುವುದು.
5. **ಪಶುವೈದ್ಯ ಸಹಾಯಕರು** : ನೇರ ನೇಮಕಾತಿ ಮೂಲಕ 642 ಪಶುವೈದ್ಯ ಸಹಾಯಕರ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದ್ದು, ನೇಮಕಾತಿ ಮಾಡುವಾಗ ಗುಡಿಬಂಡೆ ತಾಲ್ಲೂಕಿನ ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲು ಕ್ರಮವಹಿಸಲಾಗುವುದು.
6. **ದ್ವಿತೀಯ ದರ್ಜೆ ಸಹಾಯಕರು** : ನೇರ ನೇಮಕಾತಿ ಮೂಲಕ ದ್ವಿತೀಯ ದರ್ಜೆ ಸಹಾಯಕರ ಖಾಲಿ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲು ಕ್ರಮ ವಹಿಸಲಾಗುವುದು.
7. **ವಾಹನ ಚಾಲಕರು** : ಖಾಲಿ ಇರುವ ವಾಹನ ಚಾಲಕರ ಹುದ್ದೆಗಳನ್ನು ಕೋಲಾರ ಜಿಲ್ಲಾ ಉಪ ನಿರ್ದೇಶಕರ ಮೂಲಕ ಹೊರ ಗುತ್ತಿಗೆ ಆಧಾರದ ಮೇಲೆ ಹಾಗೂ ಎಸ್.ಎಸ್.ಎಲ್.ಸಿ. ಪಾಸು ಮಾಡಿರುವ ಹಾಗೂ ವಾಹನ ಚಾಲನೆ ತರಬೇತಿ

ಪಡೆದಿರುವ 'ಡಿ ದರ್ಜೆ' ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ಆದ್ಯತೆ ಮೇರೆಗೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

8. **'ಡಿ ದರ್ಜೆ' ನೌಕರರು :** ಖಾಲಿ ಇರುವ 'ಡಿ ದರ್ಜೆ' ಹುದ್ದೆಗಳನ್ನು ಆದ್ಯತೆ ಮೇರೆಗೆ ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಹೊರ ಗುತ್ತಿಗೆ ಆಧಾರದ ಮೇರೆಗೆ ತುಂಬಲು ಕ್ರಮ ವಹಿಸಲಾಗುವುದು.

II. ಔಷಧಿಗಳು : ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ ರಾಜ್ಯ ವಲಯ, ಜಿಲ್ಲಾ ವಲಯ ಮತ್ತು ಪ್ರಕೃತಿ ವಿಕೋಪ ಪರಿಹಾರ ನಿಧಿಯಾಗಿ ಲಭ್ಯವಿರುವ ಅನುದಾನದಲ್ಲಿ ಔಷಧಿಗಳನ್ನು ಖರೀದಿಸಿ ಎಲ್ಲಾ ಸಂಸ್ಥೆಗಳಿಗೆ ಸರಬರಾಜು ಮಾಡಲಾಗಿದೆ.

337 (690) ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಹಾಗೂ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ವಂತ ಕಟ್ಟಡ ಹೊಂದಿರುವ ಪದವಿ ಕಾಲೇಜುಗಳು ಎಷ್ಟು ಮತ್ತು ಯಾವುವು;

ಇ) ಸ್ವಂತ ಕಟ್ಟಡಗಳು ಇಲ್ಲದ ಪದವಿ ಕಾಲೇಜುಗಳು ಎಷ್ಟು ಮತ್ತು ಯಾವುವು;

ಈ) ಸ್ವಂತ ಕಟ್ಟಡ ಹೊಂದಿರುವ ಕಾಲೇಜುಗಳಿಗೆ ಸರ್ಕಾರದಿಂದ ನೀಡಿರುವ ಅನುದಾನವೆಷ್ಟು; ಸ್ವಂತ ಕಟ್ಟಡ ಇಲ್ಲದ ಸರ್ಕಾರಿ ಪದವಿ ಕಾಲೇಜುಗಳಿಗೆ ಮೀಸಲಿಟ್ಟ ಹಣ ಎಷ್ಟು (ಪೂರ್ಣ ಮಾಹಿತಿ ನೀಡುವುದು);

ಉ) ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಸರ್ಕಾರಿ ಪದವಿ ಕಾಲೇಜುಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ಕಾಲೇಜುಗಳಲ್ಲಿ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ವರ್ಗದವರ ಕೊರತೆಯಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಪೂರ್ಣ ವಿವರಣೆ ನೀಡುವುದು);

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ)

1) ಇಂಜಿನಿಯರಿಂಗ್ ಕಾಲೇಜು – ಇಲ್ಲ

2) ಮೆಡಿಕಲ್ ಕಾಲೇಜು – ಇಲ್ಲ

3) ಪದವಿ ಕಾಲೇಜು – 08

1) ಚಿಕ್ಕಬಳ್ಳಾಪುರ 2) ಚಿಂತಾಮಣಿ (ಬಾಲಕಿಯರ ಸಪ್ರದಕಾ) 3) ಚಿಂತಾಮಣಿ (ಬಾಲಕರ.ಸಪ್ರದಕಾ) 4) ಶಿಡ್ಲಘಟ್ಟ 5) ಗುಡಿಬಂಡೆ 6) ಗೌರಿಬಿದನೂರು 7) ಬಾಗೇಪಲ್ಲಿ 8) ವೇಮಗಲ್ಲು

ಆ) 04

1) ಚಿಕ್ಕಬಳ್ಳಾಪುರ 2) ಚಿಂತಾಮಣಿ (ಬಾಲಕಿಯರ ಸಪ್ರದಕಾ) 3) ಚಿಂತಾಮಣಿ (ಬಾಲಕರ.ಸಪ್ರದಕಾ) 4) ಶಿಡ್ಲಘಟ್ಟ

ಇ)

1) ಗುಡಿಬಂಡೆ 2) ಗೌರಿಬಿದನೂರು 3) ಬಾಗೇಪಲ್ಲಿ

4) ವೇಮಗಲ್ಲು

ಈ) ಅನುಬಂಧ ಲಗತ್ತಿಸಿದೆ.

ಉ) ಬಂದಿದೆ.

ಹಣಕಾಸಿನ ಲಭ್ಯತೆಯನ್ನಾಧರಿಸಿ ಮುಂದಿನ ಸಾಲುಗಳಲ್ಲಿ ಕಟ್ಟಡ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಬಂದಿದೆ. ಪ್ರಸ್ತುತ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡಿರುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿಲ್ಲ. ಕೆಪಿಎಸ್‌ಸಿಯಿಂದ ಬಾಕಿ ಇರುವ 04 ಪ್ರಾಧ್ಯಾಪಕರನ್ನು ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಧಾನಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 690ರ ಪ್ರಶ್ನೆ ಈ ಗೆ ಅನುಬಂಧ

ಸ್ವಂತ ಕಟ್ಟಡ ಹೊಂದಿರುವ ಕಾಲೇಜುಗಳು

1. ಚಿಕ್ಕಬಳ್ಳಾಪುರ
2. ಚಿಂತಾಮಣಿ (ಬಾಲಕರ ಸ.ಪ್ರದಕಾ)

3. ಚಿಂತಾಮಣಿ (ಬಾಲಕಿಯರ ಸಪ್ರದಕಾ)

4. ಶಿಡ್ಲಘಟ್ಟ

ಅನುದಾನದ ವಿವರಗಳು

1. ಚಿಕ್ಕಬಳ್ಳಾಪುರ – 2004–05ರಲ್ಲಿ 15 ಲಕ್ಷಗಳು
2005–06ರಲ್ಲಿ 15 ಲಕ್ಷಗಳು
2006–07ರಲ್ಲಿ 15 ಲಕ್ಷಗಳು
2006–07 ರಲ್ಲಿ 09 ಲಕ್ಷಗಳು (ಕಾಲೇಜಿನ ಹೆಚ್ಚುವರಿ ಕೊಠಡಿಗಳ ಕಾಮಗಾರಿಗೆ)
2007–08ರಲ್ಲಿ 3.20 ಲಕ್ಷಗಳು
2008–09ರಲ್ಲಿ 11.76 ಲಕ್ಷಗಳು

2. ಚಿಂತಾಮಣಿ (ಬಾಲಕರ ಸಪ್ರದಕಾ) 2007–08ರಲ್ಲಿ 33,00 ಲಕ್ಷಗಳು
2008–09ರಲ್ಲಿ 33,00 ಲಕ್ಷಗಳು
2009–10ರಲ್ಲಿ 45,00 ಲಕ್ಷಗಳು

3. ಚಿಂತಾಮಣಿ (ಬಾಲಕಿಯರ ಸಪ್ರದಕಾ) 2005–06ರಲ್ಲಿ 15 ಲಕ್ಷಗಳು
2008–09ರಲ್ಲಿ 40,00 ಲಕ್ಷಗಳು

4. ಶಿಡ್ಲಘಟ್ಟ 2007–08ರಲ್ಲಿ (4202 ರಡಿಯಲ್ಲಿ) 50;00 ಲಕ್ಷಗಳು
30.00 (ಅಪೆಂಡಿಕ್ಸ್–ಇ ರಡಿಯಲ್ಲಿ)

ಷರಾ: ಪ್ರಸ್ತುತ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.

ಸ್ವಂತ ಕಟ್ಟಡ ಇಲ್ಲದ ಕಾಲೇಜುಗಳು :

1. ಗೌರಿಬಿದನೂರು – 75.00 ಲಕ್ಷಗಳು
2. ವೇಮಗಲ್ಲು – ಇಲ್ಲ
3. ಗುಡಿಬಂಡೆ – 24 + 30 ಲಕ್ಷಗಳು
4. ಬಾಗೇಪಲ್ಲಿ – ಇಲ್ಲ

ಷರಾ: ಗುಡಿಬಂಡೆ ಸರ್ಕಾರಿ ಪ್ರದ.ಕಾಲೇಜಿನ ಕಟ್ಟಡ ಕಾಮಗಾರಿಯು ಲಿಂಟಲ್ ಮಟ್ಟಕ್ಕೆ ಬಂದಿದ್ದು, ಪ್ರಗತಿಯಲ್ಲಿದೆ.

O.17 F–48

ಮೈಸೂರು ಜಿಲ್ಲೆಯಲ್ಲಿರುವ ಪ್ರೌಢ ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಬಿಡುಗಡೆಯಾಗಿರುವ ಅನುದಾನ

338 (5) ಶ್ರೀ ಸತ್ಯನಾರಾಯಣ ಎಂ (ಚಾಮುಂಡೇಶ್ವರಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹಾಗೂ ತಾಲ್ಲೂಕಿನಲ್ಲಿ ಕಳೆದೆರಡು ವರ್ಷಗಳಿಂದ ಮಂಜೂರಾದ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳೆಷ್ಟು (ವಿವರ ನೀಡುವುದು);

ಆ) ಮಂಜೂರಾಗಿದ್ದಲ್ಲಿ ಈ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಕಟ್ಟಡಗಳಿಗೆ ಬಿಡುಗಡೆಯಾದ ಅನುದಾನವೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು);

ಇ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಯಾವ ನಿಯಮಾವಳಿಗಳನ್ನು ಅನುಸರಿಸಲಾಗುವುದು;

ಉ) ಮೈಸೂರು ತಾಲ್ಲೂಕು ಇಲವಾಲ ಗ್ರಾಮದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ಹೊಸದಾಗಿ ವಾಣಿಜ್ಯ ವಿಭಾಗ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣ ಸಚಿವರು) :

ಅ) ಕಳೆದೆರಡು ಸಾಲಿನಲ್ಲಿ ಯಾವುದೇ ಸರ್ಕಾರಿ ಪ್ರೌಢಶಾಲೆ ಮಂಜೂರಾಗಿರುವುದಿಲ್ಲ.

14 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿದೆ. (ವಿವರವನ್ನು ಅನುಬಂಧದಲ್ಲಿ ಒದಗಿಸಿದೆ)

ಆ) ಪ್ರೌಢಶಾಲೆ – ಪ್ರಶ್ನೆ ಉದ್ಭವಿಸುವುದಿಲ್ಲ.

ಪದವಿ ಪೂರ್ವ ಕಾಲೇಜು– ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) 2010–11ನೇ ಸಾಲಿನಲ್ಲಿ ಪ್ರಾರಂಭಿಸಲು ಪರಿಗಣಿಸಲಾಗುವುದು.

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ– 18ನೇ ಅಡ್ಡರಸ್ತೆ, ಬೆಂಗಳೂರು–12

ಮೈಸೂರು ಜಿಲ್ಲೆಗೆ 2007–08ನೇ ಸಾಲಿನಲ್ಲಿ ಮಂಜೂರಾಗಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅನುಮೋದನೆ ಆಗಿರುವ ಕಟ್ಟಡ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

ತಾಲ್ಲೂಕು	ಕ್ರ. ಸಂ.	ಸರ್ಕಾರಿ ಪಪೂ ಕಾಲೇಜು ಮಂಜೂರಾಗಿರುವ ಸ್ಥಳ	ಆರ್‌ಐಡಿಎಫ್–13		ಆರ್‌ಐಡಿಎಫ್–14		ಆರ್‌ಐಡಿಎಫ್–15	
			ಕೊಠಡಿಗಳ ಸಂಖ್ಯೆ	ಮೊತ್ತ	ಕೊಠಡಿಗಳ ಸಂಖ್ಯೆ	ಮೊತ್ತ	ಕೊಠಡಿಗಳ ಸಂಖ್ಯೆ	ಮೊತ್ತ
1	2	3	4	5	6	7	8	9
ನಂಜನಗೂಡು	1.	ಕೌರ್ಯ, ಕೌಲಂದ ಹೋಬಳಿ	3	22.67	—	—	—	—
ಟಿ. ನರಸೀಪುರ	2.	ಮುಸುವಿನಕೊಪ್ಪಲು	—	—	2	15.94	—	—
	3.	ಹಲಗನಹಳ್ಳಿ	ಹೊಸ ಕಟ್ಟಡ	54.08	—	—	—	—
	4.	ಹಾರನಹಳ್ಳಿ	—	—	—	—	2	16.30
ಹೆಚ್‌ಡಿ ಕೋಟೆ	5.	ದೀಚನಹಳ್ಳಿ	2	15.12	—	—	—	—
	6.	ಬಿ ಮಟಗೇರಿ	2	15.12	—	—	—	—
	7.	ಅಂತರಸಂತೆ	2	15.12	—	—	—	—
ಮೈಸೂರು	8.	ಕಂಬಾರಕೊಪ್ಪಲು	—	—	2	15.94	—	—
ಕೆ ಆರ್ ನಗರ	9.	ಹೆಬ್ಬಾಳು	2	15.12	—	—	—	—
	10.	ಗಂಧನಹಳ್ಳಿ	—	—	2	15.94	2	16.30
	11.	ಹೊಸೂರು	—	—	—	—	2	16.30
ಹುಣಸೂರು	12	ಬನ್ನಿಕುಪ್ಪೆ	2	15.12	—	—	2	16.30
	13.	ರತ್ನಗಿರಿ	2	15.12	—	—	—	—
	14.	ಗೆರಸನಹಳ್ಳಿ, ಕೊಮ್ಮೇಗೌಡನ ಕೊಪ್ಪಲು	—	—	2	15.94	—	—
ಒಟ್ಟು				167.47		63.76		65.2

ಅರಸೀಕೆರೆ ಪಟ್ಟಣದಲ್ಲಿ ಸಾರ್ವಜನಿಕ ಗ್ರಂಥಾಲಯ ಕಟ್ಟಡದ ನಿರ್ಮಾಣ

340 (714) ಶ್ರೀ ಶಿವಲಿಂಗೇಗೌಡ ಕೆ.ಎಂ (ಅರಸೀಕೆರೆ) : ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ಪಟ್ಟಣದಲ್ಲಿ ಹೊಸದಾಗಿ ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಕಟ್ಟಡ ನಿರ್ಮಿಸಲು ನಿಗಧಿಪಡಿಸಿರುವ ಅನುದಾನವೆಷ್ಟು;

ಇ) ಈ ಕಟ್ಟಡ ನಿರ್ಮಿಸಲು ಸರ್ಕಾರದ ಸ್ವಾಮ್ಯದಲ್ಲಿರುವ ಯಾವ ಸಂಸ್ಥೆ/ಇಲಾಖೆಗೆ ಅನುಮತಿ ನೀಡಲಾಗಿದೆ;

ಈ) ಹಾಗಿದ್ದಲ್ಲಿ, ಈ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಕೆ. ಶಿವನಗೌಡ ನಾಯಕ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ಉದ್ದೇಶಿಸಲಾಗಿದೆ.

ಆ) ರೂ. 92. ಲಕ್ಷಗಳು

ಇ) ನಿರ್ಮಿತಿ ಕೇಂದ್ರ ಗಂಡಸಿ

ಈ) ಸದರಿ ಕಟ್ಟಡದ ನಿರ್ಮಾಣ ಕಾಮಗಾರಿಯ ಅಂದಾಜು ವೆಚ್ಚ ರೂ. 92.00 ಲಕ್ಷಕ್ಕೆ ಆಡಳಿತ ಮಂಜೂರಾತಿ ನೀಡಲಾಗಿದೆ. ಕೂಡಲೇ ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

341 (715) ಶ್ರೀ ಶಿವಲಿಂಗೇಗೌಡ, ಕೆ.ಎಂ (ಅರಸೀಕೆರೆ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಾದ್ಯಂತ ಎಂ.ಎಸ್.ಐ.ಎಲ್. ಮುಖಾಂತರ ಲೈಸನ್ಸ್ ನೀಡಿ ಹೊಸದಾಗಿ ಮದ್ಯದಂಗಡಿಗಳನ್ನು ತೆರೆಯಲು ನಿರ್ಧರಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಎಲ್ಲೆಲ್ಲಿ ತೆರೆಯಲು ನಿರ್ಧರಿಸಿದೆ (ಸಂಪೂರ್ಣ ಮಾಹಿತಿ ನೀಡಿ);

ಇ) ಈ ಮದ್ಯದಂಗಡಿಗಳನ್ನು ತೆರೆಯಲು ಯಾವ ಮಾನದಂಡವನ್ನು ಅನುಸರಿಸಲಾಗಿದೆ?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಹೌದು.

ಆ) ರಾಜ್ಯಾದ್ಯಂತ ಪ್ರತಿ ತಾಲ್ಲೂಕಿಗೆ ಕನಿಷ್ಠ ಎರಡು ಸನ್ನದುಗಳಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರ ಸ್ಥಾನಕ್ಕೆ ತಲಾ ಎರಡರಂತೆ 58 ಸನ್ನದುಗಳು ಹಾಗೂ ಎಂ.ಎಸ್.ಐ.ಎಲ್. ಸಂಸ್ಥೆಯವರ ಪ್ರಾದೇಶಿಕ ಬೇಡಿಕೆ ಅಧ್ಯಯನವನ್ನು ಆಧರಿಸಿ ಕೋರಿಕೆ ಸಲ್ಲಿಸುವ ಇತರೆ 53 ಸ್ಥಳಗಳಿಗೆ ಸನ್ನದುಗಳನ್ನು ನೀಡಲು ನಿರ್ಧರಿಸಲಾಗಿದೆ.

ಇ) ಕರ್ನಾಟಕ ಅಬಕಾರಿ (ದೇಶೀ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 3(11-C) ರನ್ವಯ ಸರ್ಕಾರಿ ಸ್ವಾಮ್ಯದ ಕಂಪನಿ/ ಸಂಸ್ಥೆಗಳಿಗೆ ಚಿಲ್ಲರೆ ಮದ್ಯ ಮಾರಾಟದ ಅಂಗಡಿಗಳ ಸನ್ನದುಗಳನ್ನು ನೀಡಲು ಇರುವ ಅವಕಾಶವನ್ನು ಹಾಗೂ ಮಂಜೂರಾಗಿದ್ದ 463 ಸನ್ನದುಗಳು ನವೀಕರಣಗೊಳ್ಳದೆ ಇದ್ದುದರಿಂದ, ಸದರಿ ಸಂಖ್ಯೆಯಷ್ಟೇ ಸನ್ನದುಗಳನ್ನು ನೀಡಲು ಪರಿಗಣನೆಗೆ ತೆಗೆದುಕೊಂಡು ಸರ್ಕಾರಿ ಸಾಮ್ಯದ ಎಂ.ಎಸ್.ಐ.ಎಲ್. ಸಂಸ್ಥೆಗೆ ನಮೂನೆ ಸಿಎಲ್- (11-C) ಯಲ್ಲಿ ಚಿಲ್ಲರೆ ಮದ್ಯ ಮಾರಾಟದ ಅಂಗಡಿಗಳನ್ನು ತೆರೆಯಲು ಅನುಮತಿಸಲಾಗಿರುತ್ತದೆ.

ಪ್ರೌಢ ಶಿಕ್ಷಣ ಇಲಾಖೆಗೆ ಗ್ರೂಫ್ "ಡಿ" ನೌಕರರನ್ನು ಖಾಯಂಗೊಳಿಸುವ ಬಗ್ಗೆ

342 (716) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರೌಢಶಿಕ್ಷಣ ಇಲಾಖೆಗೆ ಸಕಾರವು "ಡಿ" ಗ್ರೂಪ್ ನೌಕರರನ್ನು ಹೊರಸಂಪನ್ಮೂಲ ದಿಂದ ತೆಗೆದುಕೊಳ್ಳಲು ನಿರ್ಧರಿಸಿರುವ ಕಾರಣವೇನು;

ಆ) ಸದರಿ "ಡಿ" ಗ್ರೂಫ್ ನೌಕರರನ್ನು ಖಾಯಂ ಆಗಿ ನೇಮಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ದಿ: 17.01.2005 ಹಾಗೂ ದಿ: 22.02.2005 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುತ ಸಮಿತಿಯ ಸಭೆಯ ತೀರ್ಮಾನದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 1233 'ಡಿ'–ಗ್ರೂಫ್ ಹುದ್ದೆಗಳಿಗೆ ಬಾಹ್ಯ ಮೂಲದಿಂದ ಭರ್ತಿ ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ.

ಆ) ಇಲ್ಲ.

ಗ್ರಾಮ ಪಂಚಾಯತಿ ಚುನಾವಣೆಯ ಅಧಿಸೂಚನೆ

344 (718) ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್. (ಗೌರಿಬಿದನೂರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯತಿ ಸದಸ್ಯರ ಅವಧಿಯು ಮುಗಿದಿದ್ದು ಮಾರ್ಚ್‌ನಲ್ಲಿ ಚುನಾವಣೆ ನಡೆಸಬೇಕಾಗಿದ್ದು ಯಾವಾಗ : ಅಧಿಸೂಚನೆ ಹೊರಡಿಸಲಾಗುವುದು;

ಆ) ಯಾವಾಗ ಚುನಾವಣೆಯನ್ನು ನಡೆಸಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಹಾಲಿ ಇರುವ ಗ್ರಾಮ ಪಂಚಾಯತಿಗಳ ಅವಧಿಯು 2010 ಮಾರ್ಚ್ ಕೊನೆಯವಾರದಲ್ಲಿ ಮತ್ತು ಏಪ್ರಿಲ್ ಮಾಹೆಯಲ್ಲಿ ಮುಕ್ತಾಯವಾಗಲಿದೆ. ಚುನಾವಣೆಯನ್ನು ನಡೆಸಲು ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಲು ಸೂಚನೆಗಳನ್ನು ನೀಡಲಾಗಿದೆ.

2010 ರ ಏಪ್ರಿಲ್/ಮೇ ಮಾಹೆಯಲ್ಲಿ ಗ್ರಾಮ ಪಂಚಾಯತಿಗಳಿಗೆ ಚುನಾವಣೆಯನ್ನು ನಡೆಸಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿರುವುದಾಗಿ ರಾಜ್ಯ ಚುನಾವಣಾ ಆಯೋಗ ತಿಳಿಸಿದ್ದು, ಚುನಾವಣಾ ವೇಳಾಪಟ್ಟಿಯನ್ನು ಆಯೋಗವೇ ಹೊರಡಿಸುತ್ತದೆ.

2009-10ನೇ ಸಾಲಿನ ಸುವರ್ಣ ಗ್ರಾಮೀಣ ಯೋಜನೆಯ ಬಗ್ಗೆ

345 (719) ಶ್ರೀ ಶಿವಶಂಕರ ರೆಡ್ಡಿ. ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009-10ನೇ ಸಾಲಿನಲ್ಲಿ ರಾಜ್ಯದಲ್ಲಿ ಸುವರ್ಣ ಗ್ರಾಮ ಯೋಜನೆಯಲ್ಲಿ ಆಯ್ಕೆಯಾದ ಗ್ರಾಮಗಳು ಯಾವುವು;

ಆ) ಎಷ್ಟು ಹಳ್ಳಿಗಳಲ್ಲಿ ಕೆಲಸ ಪ್ರಾರಂಭವಾಗಿದೆ; (ವಿವರ ನೀಡುವುದು);

ಇ) ಅನೇಕ ಹಳ್ಳಿಗಳಲ್ಲಿ ಕೆಲಸವೇ ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಣಕಾಸಿನ ಲಭ್ಯತೆ ಇಲ್ಲದೇ ಇರುವುದರಿಂದ ಯೋಜನೆಯ ಅನುಷ್ಠಾನಗೊಳ್ಳಲು ತೊಂದರೆ ಇದೆಯೇ;

ಉ) ಹಾಗಿಲ್ಲದಿದ್ದಲ್ಲಿ, ಕೆಲಸ ಪ್ರಾರಂಭವಾಗದಿರಲು ಕಾರಣವೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಸುವರ್ಣ ಗ್ರಾಮೋದಯ ಯೋಜನೆಯ 3ನೇ ಹಂತದಡಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 1547 ಗ್ರಾಮಗಳು ಆಯ್ಕೆಯಾಗಿರುತ್ತವೆ (ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ).

ಆ) ಗ್ರಾಮಾಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಅನುಮೋದನೆ ನೀಡಲಾಗುತ್ತಿದೆ.

ಇ) ಗ್ರಾಮಾಭಿವೃದ್ಧಿ ಯೋಜನೆಗಳ ಅನುಮೋದನೆ ನಂತರ ಕಾಮಗಾರಿಗಳು ಪ್ರಾರಂಭವಾಗುತ್ತದೆ.

ಈ) ಅನುದಾನದ ಕೊರತೆ ಇರುವುದಿಲ್ಲ.

ಉ) ಗ್ರಾಮಾಭಿವೃದ್ಧಿ ಯೋಜನೆಗಳ ಅನುಮೋದನೆ ನಂತರ ಕಾಮಗಾರಿಗಳು ಪ್ರಾರಂಭವಾಗುತ್ತವೆ.

ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ. ಶಿವಶಂಕರ ರೆಡ್ಡಿ. ಎನ್.ಹೆಚ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 719 ರ ಅನುಬಂಧ

ಸುವರ್ಣ ಗ್ರಾಮೋದಯ ಯೋಜನೆಯ 3ನೇ ಹಂತಡಿ ಆಯ್ಕೆಯಾದ ಗ್ರಾಮಗಳ ಸಂಖ್ಯೆ

ಕ್ರ.ಸಂ.	ಜಿಲ್ಲೆ	3ನೇ ಹಂತ
1	ಬಾಗಲಕೋಟೆ	42
2	ಬೆಂಗಳೂರು–ನ	32
3	ಬೆಂಗಳೂರು–ಗ್ರಾ	40
4	ಬೆಳಗಾವಿ	88
5	ಬಳ್ಳಾರಿ	38
6	ಬೀದರ್	46
7	ಬಿಜಾಪುರ	47
8	ಚಿಕ್ಕಬಳ್ಳಾಪುರ	55
9	ಚಾಮರಾಜನಗರ	25
10	ಚಿಕ್ಕಮಗಳೂರು	52
11	ಚಿತ್ರದುರ್ಗ	51
12	ದಕ್ಷಿಣ ಕನ್ನಡ	33
13	ದಾವಣಗೆರೆ	47
14	ಧಾರವಾಡ	16
15	ಗದಗ	20
16	ಗುಲ್ಬರ್ಗಾ	106
17	ಹಾಸನ	118
18	ಹಾವೇರಿ	39
19	ಕೊಡಗು	16
20	ಕೋಲಾರ	85
21	ಕೊಪ್ಪಳ	32
22	ಮಂಡ್ಯ	83
23	ಮೈಸೂರು	76

24	ರಾಮನಗರ	54
25	ರಾಯಚೂರು	59
26	ಶಿವಮೊಗ್ಗ	57
27	ತುಮಕೂರು	98
28	ಉತ್ತರ ಕನ್ನಡ	66
29	ಉಡುಪಿ	26
	ಒಟ್ಟು	1547

ಗೌರಿ ಬಿದರಿನೂರಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ತೆರೆಯುವ ಬಗ್ಗೆ

346 (721) ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್ (ಗೌರಿಬಿದನೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ). ಗೌರಿಬಿದನೂರಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ತೆರೆಯಲು 2009–10ನೇ ಸಾಲಿನಲ್ಲಿ ಪ್ರಾರಂಭವಾಗುವ ಪಟ್ಟಿಯಲ್ಲಿ ಆದ್ಯತೆ ನೀಡಲಾಗಿದೆಯೇ; ಆದ್ಯತೆ ನೀಡಿದ್ದಲ್ಲಿ ಕಾರಣಗಳೇನು;

ಆ) ಗೌರಿಬಿದನೂರಿನಲ್ಲಿ ಐ.ಟಿ.ಐ. ಕಾಲೇಜು ಮಂಜೂರಾತಿಗೆ ಅರ್ಜಿ ಸಲ್ಲಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 2009–10ನೇ ಸಾಲಿನಲ್ಲಿ ಐ.ಟಿ.ಐ ಕಾಲೇಜು ತೆರೆಯಲು ಆದ್ಯತೆ ನೀಡಲಾಗಿದೆಯೇ; ನೀಡದಿದ್ದಲ್ಲಿ ಕಾರಣಗಳೇನು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಉದ್ಭವಿಸುವುದಿಲ್ಲ.

ಆ) ಗೌರಿಬಿದನೂರು ಈಗಾಗಲೇ ಸರ್ಕಾರಿ ಐ.ಟಿ.ಐ. ಕಾರ್ಯನಿರ್ವಹಿಸುತ್ತಿದ್ದು ಎಲೆಕ್ಟ್ರಾನಿಕ್, ಮೆಕ್ಯಾನಿಕ್ ಮತ್ತು ಕಟಿಂಗ್ & ಸೂಯಿಂಗ್ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಇ) ಈಗಾಗಲೇ ಒಂದು ಸರ್ಕಾರಿ ಐ.ಟಿ.ಐ ಕಾರ್ಯನಿರ್ವಹಿಸುತ್ತಿದ್ದು, ಮತ್ತೊಂದು ಐ.ಟಿ.ಐ ತೆರೆಯುವ ಬಗ್ಗೆ ಪ್ರಸಾವನೆ ಇರುವುದಿಲ್ಲ.

O.17 F – 49

ಜಮಖಂಡಿ ತಾಲ್ಲೂಕಿನಲ್ಲಿ ಕಳ್ಳ ಭಟ್ಟಿಯನ್ನು ತಡೆಯುವುದನ್ನು ಕುರಿತು

348 (171) ಶ್ರೀ ಸಿದ್ದುಸವದಿ (ತೇರದಾಳ್) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿ ಭಾರಿ ಪ್ರಮಾಣದ ಕಳ್ಳಭಟ್ಟಿ ತಯಾರಿಕೆ ಮತ್ತು ಅಕ್ರಮ ಮಾರಾಟದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು (ವಿವರಗಳನ್ನು ನೀಡುವುದು)?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಜಮಖಂಡಿ ತಾಲ್ಲೂಕಿನಲ್ಲಿ 8 ಸಣ್ಣ ಮತ್ತು 3 ಮಧ್ಯಮ ಪ್ರಮಾಣ ಕಳ್ಳಭಟ್ಟಿ ತಯಾರಿಕಾ ಮತ್ತು ಮಾರಾಟ ಕೇಂದ್ರಗಳು ಇರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಆ) ಜಮಖಂಡಿ ತಾಲ್ಲೂಕಿನಲ್ಲಿ ಪ್ರಸಕ್ತ ಅಬಕಾರಿ ಸಾಲಿನಲ್ಲಿ ಜಾರಿ ಮತ್ತು ತನಿಖಾ ಚಟುವಟಿಕೆಗಳನ್ನು ಚುರುಕುಗೊಳಿಸಿ 212 ಅಬಕಾರಿ ದಾಳಿ ಮತ್ತು ಕಾಲಕಾಲಕ್ಕೆ ಸಾಮೂಹಿಕ ಅಬಕಾರಿ ದಾಳಿಗಳನ್ನು ಸಹ ನಡೆಸಿ, ಅಬಕಾರಿ ಅಕ್ರಮಗಳನ್ನು ಪತ್ತೆ ಹಚ್ಚಿ 18 ಘೋರ ಮೊಕದ್ದಮೆ ದಾಖಲಿಸಿ 9 ಆರೋಪಿಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ಒಪ್ಪಿಸಲಾಗಿರುತ್ತದೆ. 3 ದ್ವಿಚಕ್ರ ವಾಹನಗಳನ್ನು 1 ಸೈಕಲ್‌ನ್ನು ಮತ್ತು 14.500 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಜಪ್ತು ಪಡಿಸಲಾಗಿರುತ್ತದೆ ಅಲ್ಲದೆ 206 ಕಳ್ಳಭಟ್ಟಿ ತಯಾರಿಕಾ ಸಲಕರಣೆಗಳನ್ನು ಸಹ ನಾಶಪಡಿಸಲಾಗಿರುತ್ತದೆ.

ಕಳ್ಳಭಟ್ಟಿ ಪಿಡುಗನ್ನು ತಡೆಗಟ್ಟುವ ಸಲುವಾಗಿ ಕಳ್ಳಭಟ್ಟಿ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ಮೂಡಿಸಲು ಗ್ರಾಮ ಸಭೆಗಳನ್ನು ನಡೆಸಲಾಗುತ್ತದೆ. ಹಳೆಯ ಆರೋಪಿಗಳ ಚಲನವಲನಗಳ ಮೇಲೆ ನಿಗಾ ಇರಿಸಲಾಗಿದೆ. ಗ್ರಾಮ ಪಂಚಾಯತಿ ಸದಸ್ಯರು, ಸ್ತ್ರೀ ಶಕ್ತಿ ಸಂಘಗಳು, ಯುವಕ ಸಂಘ ಇವುಗಳನ್ನೊಳಗೊಂಡಂತೆ ಸಂಬಂಧಿಸಿದ ಎಲ್ಲರಿಗೂ ಅಕ್ರಮಗಳ ಬಗ್ಗೆ ಇಲಾಖೆಗೆ ಮಾಹಿತಿ ನೀಡಲು ಅಬಕಾರಿ ಕಾಯ್ದೆ ಕಲಂ 50ರಡಿ ತಿಳುವಳಿಕೆ ಪತ್ರ ನೀಡಲಾಗಿದೆ. ಜಮಖಂಡಿ ತಾಲ್ಲೂಕಿನಲ್ಲಿ 8 ಮಾರ್ಗಗಳನ್ನು ರಚಿಸಿದ್ದು, 47 ಪಾಯಿಂಟ್ ಪುಸ್ತಕಗಳನ್ನು ನಿರ್ವಹಿಸಿ

ಗುರುತಿಸಿರುವ ಕಳ್ಳಭಟ್ಟಿ ಕೇಂದ್ರಗಳ ಮೇಲೆ ನಿರಂತರ ದಾಳಿ ಕಾರ್ಯಗಳನ್ನು ನಡೆಸಲಾಗುತ್ತಿದೆ.

349 (172) ಶ್ರೀ ಸಿದ್ದು ಸವದಿ (ತೇರದಾಳ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಡ್ಡಾಯ ಶಿಕ್ಷಣ ಕಾನೂನನ್ನು ಜಾರಿಗೆ ತರಲಾಗಿದೆಯೆ; ಇಲ್ಲವಾದಲ್ಲಿ, ಕಾರಣಗಳೇನು;

ಆ) ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಎಷ್ಟು; ಈ ಮಕ್ಕಳನ್ನು ಶಾಲೆಗೆ ಸೇರಿಸುವ ಬಗ್ಗೆ ಇವರ ಕಾರ್ಯಕ್ರಮಗಳೇನು;

ಇ) ಬಹುತೇಕ ಯೋಜನೆಗಳು ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಏನು ಕ್ರಮ ಜರುಗಿಸಲಾಗಿದೆ;

ಈ) ಯಾವ ಯಾವ ಯೋಜನೆಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಲಾಗಿದೆ (ವಿವರವನ್ನು ನೀಡುವುದು)?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಕಡ್ಡಾಯ ಶಿಕ್ಷಣ ಕಾನೂನನ್ನು ಜಾರಿಗೆ ತರಲಾಗಿದೆ.

ಆ) 2009–10 ನೇ ಸಾಲಿನಲ್ಲಿ ರಾಜ್ಯದಲ್ಲಿ 7 ರಿಂದ 14 ವಯಸ್ಸಿನ ಒಟ್ಟು 35637 ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲಾಗಿದೆ. ಸದರಿ ಮಕ್ಕಳನ್ನು ಶಾಲಾ ವಾತಾವರಣಕ್ಕೆ (ಮುಖ್ಯವಾಹಿನಿಗೆ) ಸೇರಿಸಲು ಸರ್ವ ಶಿಕ್ಷಣ ಅಭಿಯಾನದಿಂದ ಈ ಕೆಳಗೆ ನಮೂದಿಸಿರುವ ಸೇತುಬಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. 2 ತಿಂಗಳ ಚಿಣ್ಣರ ಅಂಗಳ (ವಸತಿಸಹಿತ)
2. 2 ತಿಂಗಳ ಚಿಣ್ಣರ ಅಂಗಳ (ವಸತಿರಹಿತ)
3. 12 ತಿಂಗಳ ವಸತಿಸಹಿತ ಸೇತುಬಂಧ ಕಾರ್ಯಕ್ರಮ
   - ✓ 12 ತಿಂಗಳ ವಸತಿಯುತ ಸೇತುಬಂಧ
   - ✓ ಆಶಾಕಿರಣ

4. 12 ತಿಂಗಳ ವಸತಿರಹಿತ ಕಾರ್ಯಕ್ರಮ
   - ✓ ಪೂರಕ ಶಾಲೆ
   - ✓ ಸಾರಿಗೆ ಸೌಲಭ್ಯ
   - ✓ 12 ತಿಂಗಳ ವಸತಿರಹಿತ ಸೇತುಬಂಧ
5. ಟೆಂಟ್ ಶಾಲೆ
6. ಸಂಚಾರಿ ಶಾಲೆ
7. 6 ತಿಂಗಳ ಋತುಮಾನ ವಸತಿಯುತ ಸೇತುಬಂಧ ಕೇಂದ್ರ
8. ವಿಶೇಷ ದಾಖಲಾತಿ ಆಂದೋಲನ.

1. ಎನ್.ಸಿ.ಎಲ್.ಪಿ
2. ಮದರಸ
3. ಗೃಹಾಧಾರಿತ ಶಿಕ್ಷಣ
4. ಕೆ.ಜಿ.ಬಿ.ವಿ

ಇ) ಇಲ್ಲ.

ಈ) ಸರ್ವ ಶಿಕ್ಷಣ ಅಭಿಯಾನದಿಂದ ನಡೆಸಲಾಗುತ್ತಿರುವ ಕೆಳಕಂಡ ಕಾರ್ಯತಂತ್ರಗಳ ಮೂಲಕ 2009-10 ನೇ ಸಾಲಿನಲ್ಲಿ ಒಟ್ಟು 35553 ಮಕ್ಕಳನ್ನು ಸೇರಿಸಲಾಗಿದ್ದು, ಸದರಿ ಮಕ್ಕಳನ್ನು ಮಾರ್ಚ್ 2010ರ ಒಳಗೆ ಮುಖ್ಯವಾಹಿನಿಗೆ ಸೇರಿಸಲು ಕ್ರಮ ವಹಿಸಲಾಗಿದೆ.

ಕಾರ್ಯತಂತ್ರವಾರು ಮಕ್ಕಳ ಸಂಖ್ಯೆ ನಮೂದಿಸಿದೆ.

ಕ್ರಸಂ.	ಕಾರ್ಯತಂತ್ರಗಳು	ಮಕ್ಕಳ ಸಂಖ್ಯೆ
1.	2 ತಿಂಗಳ ಚಿಣ್ಣರ ಅಂಗಳ (ವಸತಿರಹಿತ)	4319
2.	2 ತಿಂಗಳ ಚಿಣ್ಣರ ಅಂಗಳ (ವಸತಿರಹಿತ)	6308
3.	12 ತಿಂಗಳ ವಸತಿರಹಿತ ಸೇತುಬಂಧ	2964
4.	ಪೂರಕ ಶಾಲೆ	665

5.	ಸಾರಿಗೆ ಸೌಲಭ್ಯ	643
6.	12 ತಿಂಗಳ ವಸತಿರಹಿತ ಸೇತುಬಂಧ	836
7.	ಟೆಂಟ್ ಶಾಲೆ	1204
8.	ಸಂಚಾರಿ ಶಾಲೆ	423
9.	ವಿಶೇಷ ದಾಖಲಾತಿ ಆಂದೋಲನ	9365
10.	ಎನ್.ಸಿ.ಎಲ್.ಪಿ	963
11.	ಮದರಸ	3722
12.	ಗೃಹಾಧಾರಿತ ಈಶಿಕ್ಷಣ	2666
13.	ಕೆ.ಜಿ.ಬಿ.ವಿ	1475
	ಒಟ್ಟು	**35553**

ತೇರದಾಳ ಕ್ಷೇತ್ರದಲ್ಲಿ 5 ಪದವಿ ಪೂರ್ವ ಕಾಲೇಜುಗಳ ಸ್ಥಾಪನೆ

350 (173) ಶ್ರೀ ಸಿದ್ದುಸವದಿ (ತೆರೆದಾಳ್) : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ ಮತಕ್ಷೇತ್ರದಲ್ಲಿ 5 ದೊಡ್ಡ ಗ್ರಾಮಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಹಿಪ್ಪರಗಿ, ಚಿಮ್ಮಡ, ಕುಲ್ಹಳ್ಳಿ, ಜಗದಾಳ ಮತ್ತು ಢವಳೇಶ್ವರಗಳಲ್ಲಿ ಎಂದು ಕಾಲೇಜನ್ನು ಪ್ರಾರಂಭಿಸಲಾಗುವುದು;

ಇ) ಕಾಲೇಜನ್ನು ಪಾರಂಭಿಸಲು ಮಕ್ಕಳ ಸಂಖ್ಯೆಯನ್ನು ಪರಿಗಣಿಸಲಾಗುವುದಿಲ್ಲವೇ; ಹಾಗಿದ್ದಲ್ಲಿ, 25ಕ್ಕಿಂತ ಕಡಿಮೆ ಮಕ್ಕಳನ್ನು ಹೊಂದಿರುವ ಪದವಿ ಪೂರ್ವ ಕಾಲೇಜುಗಳು ಎಷ್ಟು ರಾಜ್ಯದಲ್ಲಿ 50 ಮಕ್ಕಳಿಗಿಂತ ಕಡಿಮೆ ಇರುವ ಕಾಲೇಜುಗಳು ಎಷ್ಟು;

ಈ) ಈ ರೀತಿ ಕಡಿಮೆ ಇರುವ ಕಾಲೇಜುಗಳನ್ನಾದರೂ ವರ್ಗಾಯಿಸಿ ನಮ್ಮಲ್ಲಿ ಪ್ರಾರಂಭಿಸಲಾಗುವುದೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ತೇರದಾಳ ಮತಕ್ಷೇತ್ರದಲ್ಲಿ ಚಿಮ್ಮಡ, ಜಗದಾಳ, ಹಿಪ್ಪರಗಿ ಮತ್ತು ಕುಲ್ಲಳ್ಳಿ ಗ್ರಾಮಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡುವಂತೆ ಜಿಲ್ಲಾ ಉಪ ನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೆ. ಧವಳೇಶ್ವರದ ಬಗ್ಗೆ ಮನವಿ ಮತ್ತು ಶಿಫಾರಸ್ಸು ಇರುವುದಿಲ್ಲ.

ಆ) ಸರ್ಕಾರವು 2008–09 ಮತ್ತ 2009–10ನೇ ಸಾಲಿನಲ್ಲಿ ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿರುವುದಿಲ್ಲ.

ಹಾಲಿ ಪ್ರಾರಂಭಿಸಲಾಗಿರುವ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವವರೆಗೆ ಯಾವುದೇ ಹೊಸ ಕಾಲೇಜುಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಬಾರದೆಂದು ಸರ್ಕಾರವು ಆದೇಶ ಸಂಖ್ಯೆ: ಇಡಿ 451 ಯೋಯೋಕ 2009 ದಿ: 20–2–2010 ರಲ್ಲಿ ಸೂಚಿಸಿರುತ್ತದೆ.

ಇ)

1. ಪರಿಗಣಿಸಲಾಗುವುದು.
2. 25 ಕ್ಕಿಂತ ಕಡಿಮೆ ಮಕ್ಕಳನ್ನು ಹೊಂದಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ:21
3. 50 ಕ್ಕಿಂತ ಕಡಿಮೆ ಮಕ್ಕಳನ್ನು ಹೊಂದಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ:95

ಈ) ಈ ಬಗ್ಗೆ ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಕಾಲೇಜು ವಿದ್ಯಾರ್ಥಿಗಳು ಶುಲ್ಕ ವಿನಾಯ್ತಿ ಬಗ್ಗೆ

351 (672) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ

ಪೋಷಕರುಗಳ ವರಮಾನ ರೂ.11,000/– ಮತ್ತು ಅದಕ್ಕಿಂತ ಕಡಿಮೆ ಇರುವ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಾಡಲು ಸರ್ಕಾರ ಆದೇಶ ಹೊರಡಿಸಿದೆಯೇ;

ಆ) ಈ ಕಾಲೇಜುಗಳಲ್ಲಿ ಪ್ರವೇಶ ಪಡೆದಾಗ ಪಾವತಿ ಮಾಡಿರುವ ಪೂರ್ಣ ಶುಲ್ಕವನ್ನು ಕಾಲೇಜಿನ ಆಡಳಿತ ಮಂಡಳಿಯವರು ಮರು ಪಾವತಿ ಮಾಡುವರೇ;

ಇ) ಈ ವಿಷಯಗಳ ಬಗ್ಗೆ ಪೂರ್ಣ ಮಾಹಿತಿ ನೀಡುವುದು;

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರದ ಆದೇಶ ಸಂಖ್ಯೆ: ಸಕಇ 5 ಬಿಸಿಎ 95 ದಿನಾಂಕ: 1–9–1995 ರನ್ವಯ ಸರ್ಕಾರಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗ 2ಎ, 2ಬಿ, 3ಎ ಮತ್ತು 3ಬಿಗಳಿಗೆ ಸೇರಿದ ವಿದ್ಯಾರ್ಥಿಗಳ ಪೋಷಕರ ವರಮಾನ ರೂ.11,000/– ಕ್ಕಿಂತ ಕಡಿಮೆ ಇದ್ದಲ್ಲಿ ಬೋಧನಾ ಶುಲ್ಕ, ಪರೀಕ್ಷಾ ಶುಲ್ಕ, ಮತ್ತು ಪ್ರಯೋಗಾಲಯ ಶುಲ್ಕಗಳಿಂದ ವಿನಾಯಿತಿ ಪಡೆಯಲು ಅವಕಾಶವಿರುತ್ತದೆ.. ಅನುದಾನರಹಿತ ಖಾಸಗಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಈ ವಿನಾಯಿತಿ ಅನ್ವಯವಾಗುವುದಿಲ್ಲ.

ಆ) ವಿದ್ಯಾರ್ಥಿಗಳ ದಾಖಲಾತಿ ಸಮಯದಲ್ಲಿ ಸದರಿ ಶುಲ್ಕಗಳನ್ನು ವಸೂಲು ಮಾಡಲು ಅವಕಾಶ ಇರುವುದಿಲ್ಲ. ಆದುದರಿಂದ ನಂತರ ಮರು ಪಾವತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಮೇಲೆ ಒದಗಿಸಲಾಗಿದೆ.

ಮಂಡ್ಯ ಕ್ಷೇತ್ರದ ಬಸರಾಳು ಗ್ರಾಮದಲ್ಲಿ ಪದವಿ ಕಾಲೇಜು ಪ್ರಾರಂಭಿಸುವುದು

352 (674) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಸರಾಳು ಗ್ರಾಮವು ಹಿಂದುಳಿದ ಹೋಬಳಿ ಕೇಂದ್ರವಾಗಿದ್ದು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅಲ್ಲಿ ಪದವಿ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅಲ್ಲಿನ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಬೇರೆ ಕಡೆಗೆ ಹೋಗಲು ಸುಮಾರು 30 ಕಿ.ಮೀ. ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಬಸರಾಳು ಈ ಗ್ರಾಮದಲ್ಲಿ ಪದವಿ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಕ್ರಮಕೈಗೊಳ್ಳುವುದೇ;

ಉ) ಹಾಗಿದ್ದಲ್ಲಿ, ಎಂದಿನಿಂದ ಪದವಿ ಕಾಲೇಜನ್ನು ಪ್ರಾರಂಭಿಸಲಾಗುವುದು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) ಬಂದಿದೆ.

ಈ) ಹಣಕಾಸಿನ ಅಗತ್ಯತೆ ಮತ್ತು ಲಭ್ಯತೆಯನ್ನಾಧರಿಸಿ ಮುಂದಿನ ಸಾಲುಗಳಲ್ಲಿ ಕಾಲೇಜು ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ಉದ್ಭವಿಸುವುದಿಲ್ಲ.

ಆಳಂದ ತಾಲ್ಲೂಕಿನ ಪಂಚಾಯತ್ ನಿವೇಶನಗಳು

353 (341) ಶ್ರೀ ಸುಭಾಷ ಆರ್. ಗುತ್ತೇದಾರ್ (ಆಳಂದ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ನಗರದಲ್ಲಿರುವ ತಾಲ್ಲೂಕು ಪಂಚಾಯತಿ ಕಚೇರಿಯ ನಿವೇಶನದ ಅಳತೆ ಎಷ್ಟು (ಪೂರ್ಣ ವಿವರಗಳನ್ನು ನೀಡುವುದು);

ಆ) ತಾಲ್ಲೂಕು ಪಂಚಾಯತಿಯ ವಸತಿ ಗೃಹಗಳ ನಿವೇಶನಗಳ ಅಳತೆ ಎಷ್ಟು (ನಿವೇಶನವಾರು ಪೂರ್ಣ ವಿವರಗಳನ್ನು ನೀಡುವುದು);

ಇ) ಈ ನಿವೇಶನಗಳು ಸರ್ಕಾರದ ಯಾವ ಇಲಾಖೆಯ ವ್ಯಾಪ್ತಿಗೆ ಬರುತ್ತವೆ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಆಳಂದ ತಾಲ್ಲೂಕು ಪಂಚಾಯತ್ ಕಛೇರಿ ಕಟ್ಟಡದ ಕುರಿತು ಪುರಸಭೆ ಆಳಂದರವರು ಆಸ್ತಿ ಸಂಖ್ಯೆ: 11–3–38 ಮತ್ತು 11–3–39 ಇವುಗಳಿಗೆ ಸಂಬಂಧಿಸಿದಂತೆ ಖಾತಾ ಉತಾರಾ ನೀಡಿದ್ದು, ಅದರಲ್ಲಿ ಕಚೇರಿ ಕಟ್ಟಡದ ಅಳತೆ ಇರುವುದಿಲ್ಲ. ಕಚೇರಿಗೆ ಸುತ್ತು ಗೋಡೆ ಇರುವುದರಿಂದ ಕಾರ್ಯಾಲಯದಲ್ಲಿ ಯಾವುದೇ ದಾಖಲೆ ಇರುವುದಿಲ್ಲ. ಕಾರಣ ಅಳತೆ ತಿಳಿಸಲು ಕಷ್ಟಸಾಧ್ಯವಾಗಿದೆ.

ಹಾಲಿ ಇರುವ ತಾಲ್ಲೂಕು ಪಂಚಾಯತ್ ಕಚೇರಿಯ ಪಶ್ಚಿಮ ದಿಕ್ಕಿಗೆ 4700 ಚದರ ಅಡಿ ಅಳತೆಯ ಖಾಲಿ ನಿವೇಶನ ಕಾರ್ಯನಿರ್ವಾಹಕ ಅಧಿಕಾರಿಗಳು ತಾ.ಪಂ. ಆಳಂದ ಇವರ ಹೆಸರಿಗೆ ನೋಂದಣಿಯಾಗಿರುತ್ತದೆ.

ಆ) ತಾಲ್ಲೂಕು ಪಂಚಾಯತ್ ವಸತಿ ಗೃಹಗಳಿಗೆ ಸಂಬಂಧಿಸಿದಂತೆ ಪುರಸಭೆ ಆಳಂದರವರು ಖಾತಾ ಉತಾರ ನೀಡಿದ್ದು, ಕಟ್ಟಡಗಳ ಅಳತೆ ನಮೂದಿಸಿರುವುದಿಲ್ಲ. ವಸತಿ ಗೃಹಗಳಿಗೆ ಸುತ್ತುಗೋಡೆ ಇದ್ದು, ಇದರ ಆಧಾರದ ಮೇಲೆ ವಸತಿ ಗೃಹಗಳ ಕಟ್ಟಡ ಹಾಗೂ ಅದಕ್ಕೆ ಹೊಂದಿರುವ ಖಾಲಿ ಜಾಗದ ಅಳತೆ ಮಾಡಲಾಗಿದೆ. ಅಳತೆಯ ವಿವರ ಈ ಕೆಳಗಿನಂತಿದೆ.

1) ವಸತಿ ಗೃಹ ಸಂಖ್ಯೆ 1 : ಅಳತೆ 190 ಚ.ಮೀ.
2) ವಸತಿ ಗೃಹ ಸಂಖ್ಯೆ 2 : ಅಳತೆ 396 ಚ.ಮೀ.
3) ವಸತಿ ಗೃಹ ಸಂಖ್ಯೆ 3 ರಿಂದ 8 : ಅಳತೆ 938 ಚ.ಮೀ.
4) ವಸತಿ ಗೃಹ ಸಂಖ್ಯೆ 9.10 : ಅಳತೆ 136 ಚ.ಮೀ.
5) ವಸತಿ ಗೃಹ ಸಂಖ್ಯೆ 11.12 : ಅಳತೆ 516 ಚ.ಮೀ.

ಇ) ತಾಲ್ಲೂಕು ಪಂಚಾಯತ್ ಆಳಂದರವರ ಅಧೀನದಲ್ಲಿ ಬರುತ್ತದೆ.

ಖಾಸಗಿ ಅನುದಾನಿತ ವಿದ್ಯಾಸಂಸ್ಥೆಗಳ ಅಕ್ಷರ ದಾಸೋಹ

354 (668) ಶ್ರೀ . ಸುರೇಶ್ ಬಾಬು ಸಿ.ಬಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಅನುದಾನಿತ ವಿದ್ಯಾ ಸಂಸ್ಥೆಗಳಿಗೆ ಅಕ್ಷರ ದಾಸೋಹ ಯೋಜನೆಯನ್ನು ವಿಸ್ತರಿಸಿದ್ದು, ಅಸಮರ್ಪಕ ವಿತರಣೆಯಾದಲ್ಲಿ ಆ ಸಂಸ್ಥೆಯ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಅಧಿಕಾರ ವ್ಯಾಪ್ತಿಯನ್ನು ಯಾವ ಅಧಿಕಾರಿಗೆ ವಹಿಸಲಾಗಿದೆ;

ಆ) ಹಾಗಿದ್ದಲ್ಲಿ, ಅಧಿಕಾರ ವ್ಯಾಪ್ತಿಯನ್ನು ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಗೆ ವಹಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಖಾಸಗಿ ಅನುದಾನಿತ ವಿದ್ಯಾ ಸಂಸ್ಥೆಗಳಿಗೆ ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ 1 ರಿಂದ 10 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಅಕ್ಕಿ ಹಾಗೂ ಅಡುಗೆ ತಯಾರಿಕಾ ವೆಚ್ಚವನ್ನು ಮುಖ್ಯ ಶಿಕ್ಷಕರ ಖಾತೆಗೆ ಜಮಾ ಮಾಡಲಾಗುತ್ತಿದೆ. ಇದರ ಅಸಮರ್ಪಕ ವಿತರಣೆಯಾದಲ್ಲಿ ಅಥವಾ ದುರುಪಯೋಗವಾಗಿರುವುದು ಸಾಬೀತಾದಲ್ಲಿ ಅದರ ಮೊತ್ತವನ್ನು ಸಂಬಂಧಪಟ್ಟವರಿಂದ ಕಟಾಯಿಸಿ ಸರ್ಕಾರಕ್ಕೆ ಜಮಾ ಮಾಡಲಾಗುತ್ತದೆ. ಈ ರೀತಿ ದುರುಪಯೋಗವಾದ ಹಣವನ್ನು ಕಟಾಯಿಸಿ ಸರ್ಕಾರಕ್ಕೆ ಜಮಾ ಮಾಡುವವರೆಗೆ ಇದರ ಸಂಪೂರ್ಣ ಜವಾಬ್ದಾರಿಯನ್ನು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು; ಹಾಗೂ ತಾಲ್ಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕರುಗಳು, ಇವರು ವಹಿಸುತ್ತಾರೆ.

ಶಿಕ್ಷಣ ಕಾಯ್ದೆ ಅಧಿನಿಯಮಕ್ಕೆ ಅನುದಾನಿತ ಶಾಲೆಗಳು ಒಳಪಡುವುದರಿಂದ ಅಧಿನಿಯಮದ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು, ಖಾಸಗಿ ಅನುದಾನಿತ ವಿದ್ಯಾಸಂಸ್ಥೆಗಳಿಗೆ ಶಿಸ್ತು ಪ್ರಾಧಿಕಾರವು ಆಡಳಿತ ಮಂಡಳಿಯೇ ಆಗಿರುತ್ತದೆ. ಆದ್ದರಿಂದ ಅಕ್ಷರ ದಾಸೋಹ ಅಸಮರ್ಪಕ ವಿತರಣೆಯಾದಲ್ಲಿ ಆ ಸಂಸ್ಥೆಯ ಆಡಳಿತ ಮಂಡಳಿಯವರೇ ಅಸಮರ್ಪಕ ವಿತರಣೆಗೆ ಹಾಗೂ ದುರುಪಯೋಗಕ್ಕೆ ಕಾರಣರಾದವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಆ) ಈಗಾಗಲೇ ಕ್ಷೇತ್ರ ಶಿಕ್ಷಣಾಧಿಕಾರಿಗಳು ಖಾಸಗಿ ಅನುದಾನಿತ ವಿದ್ಯಾ ಸಂಸ್ಥೆಗಳ ಎಲ್ಲಾ ಬಿಲ್ಲುಗಳಿಗೂ ಮೇಲು ಸಹಿ ಮಾಡುವ ಪ್ರಾಧಿಕಾರ ವಾಗಿದ್ದು, ದುರುಪಯೋಗವಾದ ಮೊತ್ತದ ಕಟಾವಣೆಯನ್ನು ನೋಡಿಕೊಳು ತ್ತಿರುವುದರಿಂದ ಪುನಃ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಗೆ ಅಧಿಕಾರ ವಹಿಸುವ ಅಗತ್ಯತೆ ಕಂಡುಬರುವುದಿಲ್ಲ.

ಚಿಕ್ಕನಾಯಕನಹಳ್ಳಿ ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

357 (671) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಕ್ಷೇತ್ರದ ಹುಳಿಯಾರು ಮತ್ತು ಬುಕ್ಕಾಪಟ್ಟಣ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆ ಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

ಇ) ಇನ್ನೆಷ್ಟು ದಿನಗಳಲ್ಲಿ ಆದೇಶ ಹೊರಡಿಸಲಾಗುವುದು?

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಕರ್ನಾಟಕ ಪುರಸಭೆ ಕಾಯ್ದೆ, 1964ರ ಕಲಂ 3 ಮತ್ತು 349 ರನ್ವಯ ಹಾಗೂ 2001ರ ಜನಗಣತಿಯನ್ವಯ 10,000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಒಟ್ಟು 247 ಗ್ರಾಮ ಪಂಚಾಯಿತಿಗಳ ಪಟ್ಟಿ ಮಾಡಿ ಮೇಲ್ದರ್ಜೆಗೇರಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಕೋರಿದ್ದು, ಸದರಿ ಪ್ರಸ್ತಾವನೆಯಲ್ಲಿ ಚಿಕ್ಕನಾಯಕನಹಳ್ಳಿ ಕ್ಷೇತ್ರದ ಹುಳಿಯಾರು ಗ್ರಾಮ ಪಂಚಾಯತಿ ಮಾತ್ರ ಸೇರಿದೆ ಹಾಗೂ ಬಕ್ಕಾಪಟ್ಟಣ ಹಾಗೂ ಪಂಚಾಯತಿಯು ಸದರಿ ಪ್ರಸ್ತಾವನೆಯಲ್ಲಿ ಸೇರಿರುವುದಿಲ್ಲ.

ಆ) ಮತ್ತು ಇ) ಕಂದಾಯ ಇಲಾಖೆಯ ಆದೇಶ ಸಂಖ್ಯೆ ಆರ್‌ಡಿ 70 ಭೂದಪು 2009 ದಿನಾಂಕ: 24.12.2009 ರಲ್ಲಿ ಕರ್ನಾಟಕ ರಾಜ್ಯದಲ್ಲಿ 2011ರ ಜನಗಣತಿಯ ಕಾರ್ಯವು ಪ್ರಗತಿಯಲ್ಲಿರುವುದರಿಂದ ದಿನಾಂಕ: 31.03.2011ರವರೆಗೆ ಯಾವುದೇ ಪ್ರದೇಶವನ್ನು ಮೇಲ್ದರ್ಜೆಗೇರಿಸದಂತೆ

ನಿರ್ಭಂದಿಸಲಾಗಿದೆ. ಆದ್ದರಿಂದ ದಿನಾಂಕ: 31.03.2010ರ ನಂತರ ಸದರಿ ವಿಷಯದ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ಆರ್ಥಿಕ ಹಾಗೂ ಆಡಳಿತಾತ್ಮಕ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಗ್ರಂಥಾಲಯ ಸಿಬ್ಬಂದಿಯ ಕೊರತೆ

364 (177) ಶ್ರೀ ವಸಂತಬಂಗೇರ. ಕೆ (ಬೆಳ್ತಂಡಿ) : ಮಾನ್ಯ ಲೋಕ ಶಿಕ್ಷಣ, ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ಕೇಂದ್ರದಲ್ಲಿರುವ ಸಾರ್ವಜನಿಕ ಗ್ರಂಥಾಲಯದಲ್ಲಿರುವ ಸಿಬ್ಬಂದಿಗಳ ಸಂಖ್ಯೆಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು;

ಆ) ಈ ಗ್ರಂಥಾಲಯದಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ ಕೊರತೆಯನ್ನು ನೀಗಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;

ಇ) ಈ ಗ್ರಂಥಾಲಯಕ್ಕೆ ನೀಡಲಾಗುವ ವಾರ್ಷಿಕ ಅನುದಾನವೆಷ್ಟು;

ಈ) ಗ್ರಂಥಾಲಯವನ್ನು ಉನ್ನತೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಶ್ರೀ ಕೆ. ಶಿವನಗೌಡ ನಾಯಕ್ (ಲೋಕ ಶಿಕ್ಷಣ, ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ಸಿಬ್ಬಂದಿ ಸಂಖ್ಯೆ 2

ಖಾಲಿ ಇರುವ ಹುದ್ದೆಗಳ ಸಂಖ್ಯೆ 1

ಆ) ಗಮನಿಸಿದೆ.

ಸ್ವಂತ ಕಟ್ಟಡವನ್ನು ನಿರ್ಮಿಸಲು ಸೂಕ್ತ ನಿವೇಶನವನ್ನು ಪಡೆದುಕೊಳ್ಳಲಾಗುತ್ತಿದೆ.

ಇ) ರೂ. 20.000 ರಿಂದ 25.000/-

ಈ) – ಇಲ್ಲ –

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸಫಾಯಿ ನೇಮಕ ಮಾಡುವ ಬಗ್ಗೆ

366 (1344) ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ-ಧಾರವಾಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಂದಲೇ ಸ್ವಚ್ಛತಾ ಕಾರ್ಯ ನಡೆಯುತ್ತಿದ್ದು, ಇದನ್ನು ತಪ್ಪಿಸಲು ಪ್ರತಿ ಪ್ರಾಥಮಿಕ ಶಾಲೆಗೊಬ್ಬ ಸಫಾಯಿ ನೇಮಕಾತಿ ಮಾಡುವ ಪ್ರಸ್ತಾವನೆ ಸರಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ, ಎಂದಿನಿಂದ ಕಾರ್ಯಗತ ಮಾಡಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಪರಿಚಾರಕರನ್ನು ನೇಮಕ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

11. ಅನುಬಂಧ – II

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ 2009

(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 12)

ಕರ್ನಾಟಕ ರಾಜ್ಯದಲ್ಲಿ ಒಂದು ಪ್ರತ್ಯೇಕ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕಾಗಿ ಮತ್ತು ನಿಗಮಿತಗೊಳಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧಕಲ್ಪಿಸಲು ಒಂದು ವಿಧೇಯಕ;

ಕರ್ನಾಟಕ ರಾಜ್ಯದಲ್ಲಿ ಒಂದು ಪ್ರತ್ಯೇಕ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

ಅಧ್ಯಾಯ – I

ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು, 2008ರ ನವೆಂಬರ್ 22ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ವಿದ್ಯಾವಿಷಯಕ ಪರಿಷತ್ತು (ಅಕಾಡೆಮಿಕ್ ಕೌನ್ಸಿಲ್)" ಎಂದರೆ, ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತು;

(2) "ಸಂಯೋಜಿತ ಕಾಲೇಜು" ಎಂದರೆ, ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರದಲ್ಲಿ ಇರುವ ಮತ್ತು ನಿಯಮಿಸಲಾದ ಶಾಸನಗಳಿಗೆ ಅನುಸಾರವಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಮತ್ತು ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೋಮಾಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ನಡೆಸುವ ಪರೀಕ್ಷೆಗಳಿಗೆ ಪ್ರವೇಶ ಪಡೆಯಲು ಅವಶ್ಯವಾದ ವ್ಯಾಸಂಗ ಕ್ರಮಗಳನ್ನು ಒದಗಿಸುವ ಕಾಲೇಜು ಅಥವಾ ಸಂಸ್ಥೆ;

(3) "ಪ್ರಾಧಿಕಾರ" ಎಂದರೆ, 12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ;

(4) "ಮಂಡಳಿ" ಎಂದರೆ, ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ;

(5) "ಅಧ್ಯಯನ ಮಂಡಳಿ" ಎಂದರೆ ಫ್ಯಾಕಲ್ಟಿ ಹಂತದಲ್ಲಿ ವಿದ್ಯಾ ವ್ಯವಹಾರಗಳ ಸಮಿತಿ;

(6) "ಕ್ಯಾಂಪಸ್" ಎಂದರೆ ತೋಟಗಾರಿಕೆಗೆ ಸಂಬಂಧಿಸಿದಂತೆ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗೆ ಸಂಬಂಧಿಸಿದ ಕಾಲೇಜು, ವಿದ್ಯಾರ್ಥಿನಿಲಯಗಳು, ಸಿಬ್ಬಂದಿ ನಿವಾಸಗಳು, ಹೊಲಭೂಮಿಗಳು, ಮತ್ತಿತರ ಸೊತ್ತುಗಳನ್ನು ಒಳಗೊಳ್ಳುವ ಒಂದು ಆವರಣ;

(7) "ಕಾಲೇಜು" ಎಂದರೆ, ವಿಶ್ವವಿದ್ಯಾಲಯದ ನೇರ ಆಡಳಿತದ ಅಡಿಯಲ್ಲಿ ಬರುವ ಮತ್ತು ಅದರ ವ್ಯವಸ್ಥಾಪನೆ ಅಡಿಯಲ್ಲಿ ಬರುವ ಕೇಂದ್ರ ಕಾರ್ಯಸ್ಥಾನದಲ್ಲಿ, ಕ್ಯಾಂಪಸ್‌ನಲ್ಲಿ ಅಥವಾ ಯಾವುದೇ ಇತರ ಸ್ಥಳದಲ್ಲಿ ಇರುವಂಥ ಘಟಕ ಕಾಲೇಜು;

(8) "ಕುಲಾಧಿಪತಿ"ಎಂದರೆ ವಿಶ್ವವಿದ್ಯಾಲಯದ ಕುಲಾಧಿಪತಿ;

(9) "ಲೆಕ್ಕ ನಿಯಂತ್ರಕರು " ಎಂದರೆ ವಿಶ್ವವಿದ್ಯಾಲಯದ ಲೆಕ್ಕ ನಿಯಂತ್ರಕರು;

(10) "ಡೀನ್" ಎಂದರೆ, ವಿಶ್ವವಿದ್ಯಾಲಯದ ಘಟಕ ಕಾಲೇಜಿನ ಅಥವಾ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಮುಖ್ಯಸ್ಥ;

(11) "ಡೀನ್ – ವಿದ್ಯಾರ್ಥಿ ಕ್ಷೇಮಾಭಿವೃದ್ಧಿ" ಎಂದರೆ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಸಲಹೆ ನೀಡಿಕೆ ಮತ್ತು ವಿದ್ಯಾರ್ಥಿಗಳ ಉದ್ಯೋಗ ನಿಯೋಜನೆಯ ಡೀನ್;

(12) "ನಿರ್ದೇಶಕ" ಎಂಬುದು ವಿದ್ಯಾ ನಿರ್ದೇಶಕರು, ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ನಿರ್ದೇಶಕರನ್ನು ಒಳಗೊಂಡಿರುತ್ತದೆ;

(13) "ದೂರ ಶಿಕ್ಷಣ" ಎಂದರೆ ವ್ಯಾಸಂಗ ಕ್ರಮಗಳನ್ನು ಖುದ್ದು ಹಾಜರಾಗಿ ಕಲಿಯಲಾಗದ ಭೌತಿಕವಾಗಿ ಬೋಧನಾ ಸ್ಥಳದಿಂದ ದೂರ ಇರುವಂಥ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ತಲುಪಿಸುವ ಉದ್ದೇಶವುಳ್ಳ ಶಿಕ್ಷಣ ಕ್ಷೇತ್ರ, ಇಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ತಮಗೆ ಅನುಕೂಲವಾದಂಥ ಸಮಯದಲ್ಲಿ ಮುದ್ರಿತ/ವಿದ್ಯುನ್ಮಾನ/ಅಥವಾ ಇತರ ತಾಂತ್ರಿಕ ಮಾಧ್ಯಮಗಳ ಮೂಲಕ ವಿಚಾರ ವಿನಿಮಯ ಮಾಡಿ ಪರಸ್ಪರ ಸಂವಾದ ನಡೆಸಬಹುದು;

(14) "ವಿಸ್ತರಣಾ ಶಿಕ್ಷಣ ಪರಿಷತ್ತು" ಎಂದರೆ, ವಿಶ್ವವಿದ್ಯಾನಿಲಯದ ವಿಸ್ತರಣಾ ಶಿಕ್ಷಣ ಪರಿಷತ್ತು;

(15) "ವಿಸ್ತರಣಾ ಶಿಕ್ಷಣ" ಎಂದರೆ, ತೋಟಗಾರಿಕೆ ಮತ್ತು ಸಂಬಂಧಪಟ್ಟ ವಿಜ್ಞಾನಗಳು ಹಾಗೂ ತೋಟಗಾರಿಕೆ ಉತ್ಪಾದನೆಗಳು ಮತ್ತು ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದ ವೈಜ್ಞಾನಿಕ ತಂತ್ರಜ್ಞಾನದ ವಿವಿಧ ಹಂತಗಳಿಗೆ ಸಂಬಂಧಪಟ್ಟ ರೈತರು, ಗೃಹಿಣಿಯರು, ಉದ್ಯಮಿಗಳು ಮತ್ತಿತರ ಸಮೂಹಗಳಿಗೆ ತರಬೇತಿಯನ್ನು ನೀಡುವುದಕ್ಕಾಗಿ ಸಂಬಂಧಪಟ್ಟ ಶೈಕ್ಷಣಿಕ ಚಟುವಟಿಕೆಗಳು ಮತ್ತು ಇದು ವಿಶ್ವವಿದ್ಯಾಲಯದ ವಿಭಾಗಗಳು, ವಿಜ್ಞಾನ ಕೇಂದ್ರಗಳು ಮತ್ತು ಅದಕ್ಕೆ ಸಂಯೋಜಿತವಾದ ಕಾಲೇಜುಗಳ ಮೂಲಕ ಹೊಸ ಹೊಸ ತಂತ್ರಜ್ಞಾನಗಳು ಮತ್ತು ಸಂಶೋಧನೆಗಳನ್ನು ಹೊಲಗಳು ಮತ್ತು ಹೊಲಮನೆಗಳ ಬಾಗಿಲುಗಳಿಗೆ ಕೊಂಡೊಯ್ಯುವಂಥ ಪ್ರಾತ್ಯಕ್ಷಿಕೆಗಳನ್ನೂ ಒಳಗೊಳ್ಳುತ್ತದೆ;

(16) "ಫ್ಯಾಕಲ್ಟಿ" ಎಂದರೆ, ಅಧ್ಯಾದೇಶ ಮತ್ತು ಶಾಸನಗಳಲ್ಲಿ ನಿರ್ದಿಷ್ಟವಾಗಿ ಹೇಳಿರುವ ವಿಶ್ವವಿದ್ಯಾಲಯದ ಫ್ಯಾಕಲ್ಟಿ;

(17) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(18) "ವಿಭಾಗ ಮುಖ್ಯಸ್ಥ" ಎಂದರೆ ವಿಶ್ವವಿದ್ಯಾಲಯ ಮತ್ತು ಘಟಕ ಕಾಲೇಜುಗಳ ಒಂದು ವಿಭಾಗದ ಮುಖ್ಯಸ್ಥ;

(19) "ತೋಟಗಾರಿಕೆ" ಎಂಬುದು,

(ಎ) ತರಕಾರಿಗಳು, ಹಣ್ಣುಗಳು, ಹೂ, ಸಾಂಬಾರ ಪದಾರ್ಥಗಳು ನೆಡುತೋಪು ಬೆಳೆಗಳು, ಔಷಧೀಯ ಮತ್ತು ಸುಗಂಧ ಸಸ್ಯಗಳು ಮುಂತಾದ ತೋಟಗಾರಿಕೆ ಬೆಳೆಗಳ ಎಲ್ಲಾ ಅಂಶಗಳು;

(ಬಿ) ಕೃಷಿ ಬೆಳೆಗಳು;

(ಸಿ) ಪ್ರಾಕೃತಿಕ ಸಂಪನ್ಮೂಲ ನಿರ್ವಹಣೆ;

(ಡಿ) ಭೂಸಾರ ಮತ್ತು ಜಲನಿಧಿ ನಿರ್ವಹಣೆ;

(ಇ) ಉತ್ಪಾದನೆ ಮತ್ತು ಸಂರಕ್ಷಣೆಯೂ ಸೇರಿದಂತೆ ಬೆಳೆ ಸುಧಾರಣೆ;

(ಎಫ್) ನೀರಾವರಿ ಮತ್ತು ಕಳೆ ನಿರ್ವಹಣೆ;

(ಜಿ) ಬೀಜ ಮತ್ತು ಸಸಿ ಸಾಮಾಗ್ರಿಗಳ ಉತ್ಪಾದನೆ;

(ಎಚ್) ಭೂಬಳಕೆ ಯೋಜನೆ ಮತ್ತು ನಿರ್ವಹಣೆ;

(ಐ) ಭೂ–ಪ್ರಸಾಧನ ಕಲೆ;

(ಜೆ) ತೋಟದ ಮರಗಳ ಕೃಷಿ, ಫಾರಂ ವನ ವಿಜ್ಞಾನ ಮತ್ತು ಅರಣ್ಯ ಹಾಗೂ ವನ್ಯಜೀವಿ ನಿರ್ವಹಣೆ;

(ಕೆ) ತೋಟಗಾರಿಕೆ ಅರ್ಥಶಾಸ್ತ್ರ;

(ಎಲ್) ಮಾರಾಟಗಾರಿಕೆ, ಸಹಕಾರ ಮತ್ತು ವ್ಯವಹಾರ ನಿರ್ವಹಣೆ;

(ಎಂ) ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ;

(ಎನ್) ಸಂಸ್ಕರಣೆಯೂ ಸೇರಿದಂತೆ ಸುಗ್ಗಿ ತರುವಾಯದ ನಿರ್ವಹಣೆ;

(ಒ) ಜೈವಿಕ ತಂತ್ರಜ್ಞಾನ;

(ಪಿ) ಅಣಬೆ ಕೃಷಿ;

(ಕ್ಯೂ) ತೋಟಗಾರಿಕೆ ಇಂಜಿನಿಯರಿಂಗ್;

(ಆರ್) ಕೋಳಿ ಸಾಗಾಣಿಕೆಯೂ ಸೇರಿದಂತೆ ಪಶು ವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನಗಳು;

(ಎಸ್) ಹೈನುಗಾರಿಕೆ ವಿಜ್ಞಾನ ಮತ್ತು ತಂತ್ರಜ್ಞಾನ;

(ಟಿ) ಮೀನು ಕೃಷಿ ಮತ್ತು ಮೀನುಗಾರಿಕೆ ನಿರ್ವಹಣೆ;

(ಯು) ಗ್ರಾಮೀಣಾಭಿವೃದ್ಧಿ;

(ವಿ) ಆಕರ ವಿಜ್ಞಾನಗಳು ಮತ್ತು ಮಾನವಿಕ ಶಾಸ್ತ್ರಗಳು;

(ಡಬ್ಲ್ಯೂ) ಜೇನು ಸಾಕಾಣಿಕೆ ;

(ಎಕ್ಸ್) ಸರ್ಕಾರ/ ಭಾರತೀಯ ಕೃಷಿ ಸಂಶೋಧನೆ ಪರಿಷತ್ತು ಸಲಹೆ ನೀಡುವ ತೋಟಗಾರಿಕೆಗೆ ಸಂಬಂಧಿಸಿದ ಯಾವುದೇ ಇತರ ವಿಷಯ.

– ಇವುಗಳ ಮೂಲಭೂತ ಮತ್ತು ಅನ್ವಯಿಕ ವಿಜ್ಞಾನಗಳು ಒಳಗೊಳ್ಳುತ್ತವೆ.

(20) "ತೋಟಗಾರಿಕೆ ಸಂಶೋಧನಾ ಕೇಂದ್ರ" ಎಂದರೆ ವಲಯ ತೋಟಗಾರಿಕೆ ಸಂಶೋಧನಾ ಕೇಂದ್ರ, ಪ್ರಮುಖ ತೋಟಗಾರಿಕೆ ಸಂಶೋಧನಾ ಕೇಂದ್ರ, ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಕೇಂದ್ರ, ವಿಶ್ವವಿದ್ಯಾಲಯದ ತೋಟಗಾರಿಕೆ ಸಂಶೋಧನಾ ಕೇಂದ್ರ ಅಥವಾ ಇನ್ನಾವುದೇ ಸಂಶೋಧನಾ ಕೇಂದ್ರ .

(21) "ವಿದ್ಯಾರ್ಥಿನಿಲಯ" ಎಂದರೆ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ವಿಶ್ವವಿದ್ಯಾಲಯದ ಭಾಗವಾಗಿ ಅಥವಾ ಪ್ರತ್ಯೇಕವಾಗಿ ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ಮನ್ನಣೆ ನೀಡಿರುವ ಒಂದು ನಿವಾಸ ಘಟಕ;

(22) "ಅಧಿಕಾರಿ" ಎಂದರೆ, ಅಧಿನಿಯಮ ಅಥವಾ ಶಾಸನಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ವಿಶ್ವವಿದ್ಯಾಲಯದ ಅಧಿಕಾರಿ.

(23) "ಸಾರ್ವಜನಿಕ – ಖಾಸಗಿ ಪಾಲುಗಾರಿಕೆ" ಎಂದರೆ, ತೋಟಗಾರಿಕೆ ಅಭಿವೃದ್ಧಿ ಮತ್ತು ಉತ್ತೇಜನಕ್ಕಾಗಿ ವಿಶ್ವವಿದ್ಯಾನಿಲಯ ಮತ್ತು ಸಾರ್ವಜನಿಕ/ಖಾಸಗಿ ಸಂಘಗಳ ನಡುವೆ ಮಾಡಿಕೊಂಡ ಜಂಟಿ ಉದ್ಯಮ.

(24) "ಸಂಶೋಧನೆ" ಎಂದರೆ, ತಂತ್ರಜ್ಞಾನಗಳ ಅಭಿವೃದ್ಧಿ.

(25) "ಆವರ್ತಕ ನಿಧಿ" ಎಂದರೆ, ತಂತ್ರಜ್ಞಾನಗಳನ್ನು, ಬೀಜ ಮತ್ತು ಸಸಿ ಸಾಮಾಗ್ರಿಗಳನ್ನು ಅಭಿವೃದ್ಧಿಪಡಿಸಲು ಮತ್ತು ಮುಂದಿನ ಅಭಿವೃದ್ಧಿಗಾಗಿ ಅದೇ ಹಣವನ್ನೇ ಪುನರಾವರ್ತಿಸಿ

ತೊಡಗಿಸುವುದಕ್ಕಾಗಿ ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ ಹಂಚಲಾದ ಬಜೆಟ್.

(26) "ನಿಯಮಿಸಲಾದುದು" ಎಂದರೆ, ವಿಶ್ವವಿದ್ಯಾಲಯದ ಶಾಸನಗಳಿಂದ ನಿಯಮಿಸಲಾದುದು;

(27) "ಕುಲಸಚಿವ" ಎಂದರೆ ವಿಶ್ವವಿದ್ಯಾಲಯದ ಕುಲಸಚಿವ.

(28) "ವಿನಿಯಮಗಳು" ಎಂದರೆ, 54ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ವಿನಿಯಮಗಳು;

(29) "ಸಂಶೋಧನಾ ಪರಿಷತ್ತು" ಎಂದರೆ ವಿಶ್ವವಿದ್ಯಾಲಯದ ಸಂಶೋಧನಾ ಪರಿಷತ್ತು.

(30) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(31) "ಶಾಸನಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನೀತಿಗಳು, ಕಾರ್ಯವಿಧಾನಗಳು ಮುಂತಾದ ಅಂಶಗಳಿಗೆ ವ್ಯಾಪಿಸುವ ವಿಶ್ವವಿದ್ಯಾಲಯದ ಶಾಸನಗಳು;

(32) "ವಿದ್ಯಾರ್ಥಿ" ಎಂದರೆ, ವಿಶ್ವವಿದ್ಯಾಲಯದಲ್ಲಿ ಕ್ರಮಬದ್ಧವಾಗಿ ಸ್ಥಾಪಿಸಲಾದ ಪದವಿ, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪಡೆಯಲು ವ್ಯಾಸಂಗ ಕ್ರಮದಲ್ಲಿ ಅಧ್ಯಯನ ಮಾಡುವುದಕ್ಕಾಗಿ ವಿಶ್ವವಿದ್ಯಾಲಯದ ಘಟಕ ಕಾಲೇಜಿನಲ್ಲಿ ಅಥವಾ ಒಂದು ಸಂಯೋಜಿತ ಕಾಲೇಜಿನಲ್ಲಿ ಪ್ರವೇಶ ನೀಡಿ ಹೆಸರುಪಟ್ಟಿಯಲ್ಲಿ ಸೇರಿಸಲಾಗಿರುವಂಥ ಒಬ್ಬ ವ್ಯಕ್ತಿ;

(33) "ಅಧ್ಯಾಪಕರು" ಎಂದರೆ, ಸಹಾಯಕ ಪ್ರಾಧ್ಯಾಪಕರ ದರ್ಜೆಗೆ ಕಡಿಮೆಯಿಲ್ಲದ ಬೋಧನೆ ನೀಡುವ ಅಥವಾ ಸಂಶೋಧನೆ ಮತ್ತು /ಅಥವಾ ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುವ ಮತ್ತು ಅದಕ್ಕೆ ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದಿಂದ ನೇಮಕಗೊಂಡ ಅಥವಾ ಮಾನ್ಯತೆ ಪಡೆದ ಒಬ್ಬ ವ್ಯಕ್ತಿ ಮತ್ತು ಇದು ಅಧ್ಯಾಪಕರೆಂದು ಶಾಸನಗಳ ಮೂಲಕ ಘೋಷಿಸಲ್ಪಡಬಹುದಾದ ಇತರೆ ಯಾವುದೇ ವ್ಯಕ್ತಿಯನ್ನೂ ಒಳಗೊಳ್ಳಬಹುದು.

(34) "ತಂತ್ರಜ್ಞಾನ ವರ್ಗಾವಣೆ (ಟಿಓಟಿ) ಘಟಕಗಳು" ಎಂದರೆ, ವಿಜ್ಞಾನ ಕೇಂದ್ರ, ವಿಸ್ತರಣಾ ಶಿಕ್ಷಣ ಘಟಕಗಳು (ಇಇಯುಎಸ್),

ಸಿಬ್ಬಂದಿ ತರಬೇತಿ ಘಟಕಗಳು(ಎಸ್‌ಟಿಯು), ತೋಟಗಾರಿಕೆ ತಂತ್ರಜ್ಞಾನ ಮಾಹಿತಿ ಕೇಂದ್ರ (ಹೆಚ್‌ಟಿಐಸಿ). ಬೇಕರಿ ತರಬೇತಿ ಘಟಕ(ಬಿಟಿಯು), ಸುಗ್ಗಿ ತರುವಾಯದ ತಂತ್ರಜ್ಞಾನದ ಸಂಸ್ಥೆ (ಪಿಹೆಚ್‌ಟಿಐ) ಮತ್ತು ವಿಶ್ವವಿದ್ಯಾಲಯವು ಸ್ಥಾಪಿಸಿದಂಥ ಇತರ ಕೇಂದ್ರಗಳು.

(35) "ಘಟಕ" ಎಂದರೆ, ಕಾಲೇಜು/ಸಂಶೋಧನಾ ಕೇಂದ/ ವಿಸ್ತರಣಾ ಶಿಕ್ಷಣ ಘಟಕಗಳು/ ತೋಟಗಾರಿಕೆ ವಿಜ್ಞಾನ ಕೇಂದ್ರಗಳು ಮತ್ತು ತೋಟಗಾರಿಕೆಗೆ ಸಂಬಂಧಪಟ್ಟ ಇತರ ಸಂಸ್ಥೆಗಳು.

(36) "ವಿಶ್ವವಿದ್ಯಾಲಯ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ;

(37)"ವಿಶ್ವವಿದ್ಯಾಲಯ ಪ್ರದೇಶ" ಎಂದರೆ, ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿನ ಪ್ರದೇಶ;

(38) "ಕುಲಪತಿ" ಎಂದರೆ, ವಿಶ್ವವಿದ್ಯಾಲಯದ ಕುಲಪತಿ.

(39) "ವಿಜ್ಞಾನ ಕೇಂದ್ರ " ಎಂದರೆ, ತೋಟಗಾರಿಕೆ ವಿಜ್ಞಾನ ಕೇಂದ್ರ (ಟಿವಿಕೆ), ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ).

ಅಧ್ಯಾಯ – II
ವಿಶ್ವವಿದ್ಯಾಲಯ

3. ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ನಿಗಮನ.– (1) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಕೂಡಲೇ ರಾಜ್ಯದಲ್ಲಿ "ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ" ಎಂಬ ಹೆಸರಿನ ಒಂದು ವಿಶ್ವವಿದ್ಯಾಲಯವು ಸ್ಥಾಪನೆಯಾಗತಕ್ಕದ್ದು.

(2) ವಿಶ್ವವಿದ್ಯಾಲಯವು ಒಂದು ನಿಗಮಿತ ನಿಕಾಯವಾಗಿರತಕ್ಕದ್ದು, ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಈ ಅಧಿನಿಯಮದಲ್ಲಿ ನಮೂದಿಸಲಾದಂತೆ ಅಥವಾ ಶಾಸನಗಳಲ್ಲಿ ಉಪಬಂಧ ಕಲ್ಪಿಸಲಾದಂತೆ, ವಿಶ್ವವಿದ್ಯಾಲಯವು ಕುಲಾಧಿಪತಿಯವರು, ಒಬ್ಬರು ಕುಲಪತಿಯವರು, ವ್ಯವಸ್ಥಾಪನಾ ಮಂಡಳಿ,

ವಿದ್ಯಾ ವಿಷಯಕ ಪರಿಷತ್ತು, ಸಂಶೋಧನಾ ಪರಿಷತ್ತು, ವಿಸ್ತರಣಾ ಶಿಕ್ಷಣ ಪರಿಷತ್ತು ಮತ್ತು ಇತರ ಪ್ರಾಧಿಕಾರಗಳು ಹಾಗೂ ಅಧಿಕಾರಿಗಳು ಮತ್ತು ಘಟಕ ನಿಕಾಯಗಳನ್ನು ಹೊಂದಿರತಕ್ಕದ್ದು.

(4) ವಿಶ್ವವಿದ್ಯಾಲಯವು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸಲು ಮತ್ತು ಧಾರಣ ಮಾಡಲು, ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ಅದರಲ್ಲಿ ನಿಹಿತವಾಗಿರಬಹುದಾದ ಅಥವಾ ಅದರಿಂದ ಆರ್ಜಿತವಾಗಿರಬಹುದಾದ ಯಾವುದೇ ಚರ ಮತ್ತು ಸ್ಥಿರ ಸ್ವತ್ತನ್ನು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಡನೆ ಗುತ್ತಿಗೆಗೆ ನೀಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಮತ್ತು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಇತರ ಯಾವುದೇ ಅನುಮೋದಿತ ಮೂಲಗಳಿಂದ ಹಣವನ್ನು ಸಾಲ ಪಡೆದು ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಾದ ಇತರ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಸಕ್ಷಮವಾಗಿರತಕ್ಕದ್ದು.

(5) ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದ ಪ್ರತಿವಾದ ಪತ್ರಗಳಿಗೆ ಕುಲಸಚಿವರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂತಹ ದಾವೆಗಳಲ್ಲಿನ ಹಾಗೂ ವ್ಯವಹರಣೆಗಳಲ್ಲಿನ ಎಲ್ಲಾ ಆದೇಶಿಕೆಗಳನ್ನು ಕುಲಸಚಿವರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

(6) ವಿಶ್ವವಿದ್ಯಾಲಯದ ಕೇಂದ್ರ ಕಛೇರಿಯು ಬಾಗಲಕೋಟೆಯಲ್ಲಿ ಇರತಕ್ಕದ್ದು.

4. ಅಧಿಕಾರ ಕ್ಷೇತ್ರ ವ್ಯಾಪ್ತಿ ಮತ್ತು ಘಟಕ ನಿಕಾಯಗಳು.– (1) ಈ ಅಧಿನಿಯಮದಲ್ಲಿ ಪರಿಭಾಷಿಸಲಾದಂತೆ, ವಿಶ್ವವಿದ್ಯಾಲಯದ ಅಥವಾ ಕಾಲೇಜು ಮಟ್ಟದಲ್ಲಿ ತೋಟಗಾರಿಕೆ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳ ಭೋಧನೆಗೆ ಸಂಬಂಧಪಟ್ಟಂತೆ ಈ ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿ ಮತ್ತು ಜವಾಬ್ದಾರಿಯು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗಿರತಕ್ಕದ್ದು.

(2) ವಿಶ್ವವಿದ್ಯಾಲಯವು ಸ್ಥಾಪನೆಯಾದ ದಿನಾಂಕದಂದು ಮತ್ತು ದಿನಾಂಕದಿಂದ ವಿಶ್ವವಿದ್ಯಾಲಯದ ಘಟಕ ಅಥವಾ ಸಂಯೋಜಿತ ಕಾಲೇಜು ಆಗಿ ಅಲ್ಲದೆ ಅನ್ಯಥಾ ತೋಟಗಾರಿಕೆಯಲ್ಲಿ ಶಿಕ್ಷಣವನ್ನು ನೀಡುವ ಯಾವುದೇ ಹೊಸ ಕಾಲೇಜನ್ನು ಸ್ಥಾಪಿಸತಕ್ಕದ್ದಲ್ಲ.

(3) ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿ ಮತ್ತು ಪ್ರಾಧಿಕಾರದಡಿಯಲ್ಲಿ ಬರುವ ಎಲ್ಲಾ ತೋಟಗಾರಿಕೆ ಕಾಲೇಜುಗಳು, ತೋಟಗಾರಿಕೆ ಸಂಶೋಧನಾ ಕೇಂದ್ರಗಳು, ತೋಟಗಾರಿಕೆ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳು ವಿಶ್ವವಿದ್ಯಾಲಯದ ಘಟಕ ಭಾಗಗಳಾಗಿ ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಪ್ರಾಧಿಕಾರಗಳ ಪೂರ್ಣ ಆಡಳಿತ ನಿರ್ವಹಣೆ ಮತ್ತು ನಿಯಂತ್ರಣದಡಿಯಲ್ಲಿ ಬರತಕ್ಕದ್ದು. ವಿಶ್ವವಿದ್ಯಾಲಯದಿಂದ ಸಂಯೋಜಿತ ಕಾಲೇಜು ಎಂದು ಮಾನ್ಯತೆ ಪಡೆದ ಹೊರತು ಯಾವ ಘಟಕವನ್ನು ಸಂಯೋಜಿತ ಕಾಲೇಜು ಎಂದು ಮಾನ್ಯ ಮಾಡತಕ್ಕದ್ದಲ್ಲ.

(4) ವಿಶ್ವವಿದ್ಯಾಲಯವು ಪ್ರಾದೇಶಿಕ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ಹಾಗೂ ಅಧಿಕಾರ ವ್ಯಾಪ್ತಿಯಿಂದ ಹೊರಗೆ ಸಂಶೋಧನೆ ವಿಸ್ತರಣೆ ಮತ್ತು ನಿರ್ವಹಣೆಗಳನ್ನೊಳಗೊಂಡ ತನ್ನ ಘಟಕ ನಿಕಾಯಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಜವಾಬ್ದಾರಿಯನ್ನು ವಹಿಸಿಕೊಳ್ಳಬಹುದು.

(5) ಪ್ರತಿಯೊಂದು ವಿಶ್ವವಿದ್ಯಾಲಯವು ಅನೇಕ ವಿಭಿನ್ನ ಶಾಸ್ತ್ರಗಳ ದೃಷ್ಟಿಯಿಂದ ಅಧ್ಯಯನ ಮಾಡುವ ವಿದ್ಯಾ ವಿಷಯಕ ಕಾರ್ಯಕ್ರಮಗಳ ಮತ್ತು ಸಂಶೋಧನಾ ಯೋಜನೆಗಳ ಸಂಬಂಧದಲ್ಲಿ ಇತರ ವಿಶ್ವವಿದ್ಯಾಲಯಗಳು ಅಥವಾ ಭಾರತದ ಮತ್ತು ವಿದೇಶದ ಖ್ಯಾತ ಸಂಸ್ಥೆಗಳೊಂದಿಗೆ ವಿದ್ಯಾವಿಷಯಕ ಕಾರ್ಯಕ್ರಮಗಳ ಸಹಯೋಗ ಮಾಡಿಕೊಳ್ಳಬಹುದು.

5. ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು.– ಈ ವಿಶ್ವವಿದ್ಯಾಲಯವನ್ನು ಈ ಮುಂದಿನ ಧ್ಯೇಯೋದ್ದೇಶಗಳಿಗಾಗಿ ಸ್ಥಾಪಿಸಲಾಗಿದೆ ಮತ್ತು ನಿಗಮಿತಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

(ಎ) 2ನೇ ಪ್ರಕರಣದ (19)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದಂತೆ ಅಧ್ಯಯನದ ವಿವಿಧ ಶಾಖೆಗಳಲ್ಲಿ ಉತ್ತಮ

ಗುಣಮಟ್ಟದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಶಿಕ್ಷಣ ನೀಡುವುದಕ್ಕೆ ಏರ್ಪಾಡು ಮಾಡುವುದು;

(ಬಿ) ದೂರ ಶಿಕ್ಷಣವೂ ಸೇರಿದಂತೆ ಕಲಿಕೆ ಮತ್ತು ಸಂಶೋಧನೆಗೆ ಅದರಲ್ಲೂ ತೋಟಗಾರಿಕೆ ಮತ್ತು ಇತರೆ ಸಂಬಂಧಿತ ವಿಜ್ಞಾನದ ಕಲಿಕೆ ಮತ್ತು ಸಂಶೋಧನೆಯ ಮುನ್ನಡೆಗೆ ಉತ್ತೇಜನ ನೀಡುವುದು;

(ಸಿ) ಜನತೆಗೆ ವಿಶೇಷವಾಗಿ ರಾಜ್ಯದ ಗ್ರಾಮಾಂತರ ಜನರಿಗೆ, ಅಂಥ ವಿಜ್ಞಾನ ಮತ್ತು ತಂತ್ರಜ್ಞಾನಗಳ ವಿಸ್ತರಣಾ ಶಿಕ್ಷಣವನ್ನು ಕೈಗೊಳ್ಳುವುದು;

(ಡಿ) ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಹಾಗೂ ಅರೆಸರ್ಕಾರಿ/ಸರ್ಕಾರಿ/ಖಾಸಗಿ ಮತ್ತಿತರ ಶೈಕ್ಷಣಿಕ, ಕೈಗಾರಿಕಾ, ಸಂಶೋಧನೆ ಸಂಸ್ಥೆಗಳೊಂದಿಗೆ ಪಾಲುಗಾರಿಕೆ ಮತ್ತು ಜೋಡಣೆಗಳನ್ನು ಉತ್ತೇಜಿಸುವುದು.

(ಇ) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ . ಕಾಲದಿಂದ ಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಉದ್ದೇಶಗಳು;

6. **ವಿಶ್ವವಿದ್ಯಾಲಯಕ್ಕೆ ಪ್ರವೇಶ.**– (1) ವಿಶ್ವವಿದ್ಯಾಲಯವು ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು ಎಲ್ಲ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಪ್ರವೇಶಕ್ಕಾಗಿ ಅಥವಾ ವಿಶ್ವವಿದ್ಯಾಲಯದ ಪಟ್ಟಿಗಳಲ್ಲಿ ಉಳಿದುಕೊಳ್ಳುವುದಕ್ಕಾಗಿ ನಿಯಮಿಸಲಾದ ಶೈಕ್ಷಣಿಕ ಗುಣಮಟ್ಟಗಳನ್ನು ಪೂರೈಸದಿರುವ ಯಾವೊಬ್ಬ ವ್ಯಕ್ತಿಗೆ ಅಥವಾ ಯಾವ ವ್ಯಕ್ತಿಗಳ ಶೈಕ್ಷಣಿಕ ದಾಖಲೆಗಳು, ಪದವಿಯನ್ನು ನೀಡುವುದಕ್ಕಾಗಿ ಅಗತ್ಯಪಡಿಸಲಾದ ಕನಿಷ್ಠ ಗುಣಮಟ್ಟಕ್ಕಿಂತ ಕಡಿಮೆ ಇವೆಯೋ ಆ ವ್ಯಕ್ತಿಗಳಿಗೆ ಅಥವಾ ಯಾರ ವೈಯಕ್ತಿಕ ನಡತೆಯು ವಿಶ್ವವಿದ್ಯಾಲಯದ ಹಿತದೃಷ್ಟಿಗೆ ಅಥವಾ ಇತರ ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಯ ಸೂಕ್ತ ಹಕ್ಕುಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಹಾನಿಕಾರಕವಾಗಿರುವಂಥದ್ದಾಗಿದೆಯೋ ಆ ವ್ಯಕ್ತಿಗಳಿಗೆ ಯಾವುದೇ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡಲು ವಿಶ್ವವಿದ್ಯಾಲಯವನ್ನು ಅಗತ್ಯಪಡಿಸತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದಲ್ಲಿರುವುದಾವುದೂ, ವಿದ್ಯಾವಿಷಯಕ ಪರಿಷತ್ತು ನಿರ್ಧರಿಸಿದಂತೆ ವಿಶ್ವವಿದ್ಯಾಲಯದ ಅಥವಾ ಯಾವುದೇ ನಿರ್ದಿಷ್ಟ ಕಾಲೇಜಿನ ಅಥವಾ ವಿಭಾಗದ ಲಭ್ಯವಿರುವ ಫ್ಯಾಕಲ್ಟಿಗಳಲ್ಲಿ ಸ್ಥಳಾವಕಾಶ ನೀಡಬಹುದಾದದ್ದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ವ್ಯಾಸಂಗ ಕ್ರಮಗಳಿಗೆ ಪ್ರವೇಶ ನೀಡಲು ವಿಶ್ವವಿದ್ಯಾಲಯವನ್ನು ಅಗತ್ಯಪಡಿಸುತ್ತದೆಂದು ಭಾವಿಸತಕ್ಕದ್ದಲ್ಲ.

(2) (1) ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿದ ಮಹಿಳೆಯರಿಗೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ, ಕೃಷಿಕರ ಮಕ್ಕಳಿಗೆ ಇತರೆ ರಾಜ್ಯಗಳ ವಿದ್ಯಾರ್ಥಿಗಳಿಗೆ, ವಿದೇಶಿ ವಿದ್ಯಾರ್ಥಿಗಳಿಗೆ ಮತ್ತು ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಕೃಷಿ ಕುರಿತ ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸ್ವಾತಂತ್ರ ಹೋರಾಟಗಾರರ, ಸೈನಿಕರ ಮತ್ತು ಮಾಜಿ ಸೈನಿಕರ ಮಕ್ಕಳಿಗೆ ಹಾಗೂ ಪ್ರತಿಪಾಲಿತರಿಗೆ ಮತ್ತು ಸರ್ಕಾರವು ಈ ಸಂಬಂಧದಲ್ಲಿ ಘೋಷಿಸಬಹುದಾದಂಥ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ನಾಗರಿಕರಿಗೆ ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು ಎಂದು ನಿರ್ದೇಶಿಸತಕ್ಕದ್ದು ಮತ್ತು ಹಾಗೆ ನಿರ್ದೇಶನಗಳನ್ನು ನೀಡಿದಾಗ ವಿಶ್ವವಿದ್ಯಾಲಯವು ಅದರಂತೆ ಮೀಸಲಾತಿಗಳನ್ನು ಮಾಡತಕ್ಕದ್ದು.

ವಿವರಣೆ:– ಈ ಉಪಪ್ರಕರಣದ ಉದ್ದೇಶಕ್ಕಾಗಿ,–

(i) "ಕೃಷಿಕ" ಎಂದರೆ, ಮಾಲೀಕನಾಗಿ ಭೂಮಿಯನ್ನು ಹೊಂದಿರುವ ವ್ಯಕ್ತಿ ಹಾಗೂ ಯಾರ ಮುಖ್ಯ ಆದಾಯವು ಸ್ವಂತ ಸಾಗುವಳಿ ಮಾಡುವುದರಿಂದ ಬರುತ್ತದೋ ಆ ವ್ಯಕ್ತಿ ಮತ್ತು ಇದು ಮುಖ್ಯವಾಗಿ ಕೃಷಿ ಭೂಮಿಗಳಲ್ಲಿ ದೈಹಿಕ ದುಡಿಮೆಯಿಂದ ತನ್ನ ಜೀವನ ನಿರ್ವಹಣೆ ಮಾಡುತ್ತಿರುವ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

(ii) "ಸ್ವಾತಂತ್ರ ಹೋರಾಟಗಾರ" ಎಂದರೆ, ಸರ್ಕಾರವು ಕಾಲ ಕಾಲಕ್ಕೆ ಹಾಗೆಂದು ಘೋಷಿಸುವ ಪ್ರವರ್ಗದ ವ್ಯಕ್ತಿ.

7. **ವಿಶ್ವವಿದ್ಯಾಲಯದ ಅಧಿಕಾರ ಮತ್ತು ಪ್ರಕಾರ್ಯಗಳು.-** ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:-

(1) ತೋಟಗಾರಿಕೆ ಮತ್ತು ಸಂಬಂಧಿತ ಇತರ ಕಲಿಕೆಯ ವಿಭಾಗಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಸೂಕ್ತ ಎಂದು ಭಾವಿಸಬಹುದಾದ ಶಿಕ್ಷಣವನ್ನು ಒದಗಿಸುವುದು;

(2) ತೋಟಗಾರಿಕೆ ಮತ್ತು ಸಂಬಂಧಿತ ಕಲಿಕೆಯ ವಿಭಾಗಗಳಲ್ಲಿ ಸಂಶೋಧನೆಯನ್ನು ನಡೆಸುವುದಕ್ಕೆ ಅವಕಾಶವನ್ನು ನೀಡುವುದು.

(3) ಸಂಶೋಧನೆಯಿಂದ ತಿಳಿದುಬಂದ ವಿಷಯಗಳನ್ನು ಮತ್ತು ತಾಂತ್ರಿಕ ಮಾಹಿತಿಗಳನ್ನು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳ ಮೂಲಕ ಪ್ರಸಾರ ಮಾಡಲು ಅವಕಾಶ ಕಲ್ಪಿಸುವುದು;

(4) ಯಾವುದೇ ಇತರ ವಿಶ್ವವಿದ್ಯಾಲಯದಲ್ಲಿ ಅಥವಾ ಈ ಉದ್ದೇಶಕ್ಕಾಗಿ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಅರೆಕಾಲಿಕ ವ್ಯಾಸಂಗ ಕ್ರಮ ಮತ್ತು / ಅಥವಾ ಸಂಶೋಧನೆಯು ಸೇರಿದಂತೆ ವಿಶ್ವವಿದ್ಯಾಲಯದಲ್ಲಿ ನಿಯಮಿಸಿದ ವ್ಯಾಸಂಗ ಕ್ರಮದಲ್ಲಿ ಅಧ್ಯಯನ ಮಾಡುವ ಅಥವಾ ಸಂಶೋಧನೆ ನಡೆಸುವ ಅಥವಾ ಅವರೆಡನ್ನೂ ಮಾಡುವ ವ್ಯಕ್ತಿಗಳಿಗೆ ಪದವಿಗಳು, ಡಿಪ್ಲೊಮಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಾಗಿ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವುದು ಹಾಗೂ ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿ, ಡಿಪ್ಲೋಮಾ ಮತ್ತಿತರ ಶೈಕ್ಷಣಿಕ ಪ್ರಶಸ್ತಿ ನೀಡುವುದು;

(5) ನಿಯಮಿಸಬಹುದಾದಂಥ ಗೌರವ ಪದವಿಗಳು ಮತ್ತು ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(6) ರೈತರಿಗೆ, ಕ್ಷೇತ್ರ ಕೆಲಸಗಾರರಿಗೆ, ಗ್ರಾಮೀಣ ಮುಖಂಡರಿಗೆ ಮತ್ತು ವಿಶ್ವವಿದ್ಯಾಲಯದಲ್ಲಿ ಕ್ರಮಬದ್ಧ ವಿದ್ಯಾರ್ಥಿಗಳಾಗಿ ಭರ್ತಿಯಾಗಿರದ ಇತರ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುವುದು;

(7) 4ನೇ ಪ್ರಕರಣದಲ್ಲಿ ನಮೂದಿಸಿರುವ ಮಿತಿಗಳಿಗೊಳಪಟ್ಟು, ವಿಶ್ವವಿದ್ಯಾಲಯವು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳೊಡನೆ ಜೊತೆಗೂಡಿ ಕೆಲಸಮಾಡುವುದು;

O.17 F-52

(8) ತೋಟಗಾರಿಕೆ ಮತ್ತು ಸಂಬಂಧಿತ ವಿಜ್ಞಾನಗಳಿಗೆ ಸಂಬಂಧಿಸಿದ ಕಾಲೇಜುಗಳು ಮತ್ತು ಇತರ ಸಂಸ್ಥೆಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(9) ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಪ್ರಯೋಗಾಲಯಗಳು, ಗ್ರಂಥಾಲಯಗಳು, ಸಂಶೋಧನಾ ಕೇಂದ್ರಗಳು ಮತ್ತು ಸಂಸ್ಥೆಗಳು ಮತ್ತು ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(10) ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಿಸುವುದು;

(11) ಆಡಳಿತಾತ್ಮಕವಾದ ಮತ್ತು ಇತರ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕ ಮಾಡುವುದು;

(12) ಶಾಸನಗಳನ್ವಯ ಫೆಲೋಶಿಪ್, ವಿದ್ಯಾರ್ಥಿವೇತನಗಳು, ಸ್ಟೈಪೆಂಡುಗಳು ಮತ್ತು ಬಹುಮಾನಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(13) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ನಿವಾಸ ಗೃಹಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸಿಕೊಂಡು ಬರುವುದು;

(14) ನಿಯಮಿಸಲಾದಂಥ ಫೀಜು ಮತ್ತು ಇತರೆ ಚಾರ್ಜುಗಳನ್ನು ನಿಗದಿಪಡಿಸುವುದು, ಕೋರುವುದು ಮತ್ತು ಸ್ವೀಕರಿಸುವುದು;

(15) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸ, ನಡತೆ ಮತ್ತು ಶಿಸ್ತನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಹಾಗೂ ಅವರ ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಯನ್ನು ವರ್ಧಿಸುವುದಕ್ಕಾಗಿ ಏರ್ಪಾಡುಗಳನ್ನು ಮಾಡುವುದು;

(16) ವಿದೇಶಗಳಿಂದ ಮತ್ತು ದೇಶದ ಒಳಗಿನಿಂದ ವಂತಿಗೆಗಳನ್ನು ಸ್ವೀಕರಿಸುವುದು:

ಪರಂತು, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು ವಿಶ್ವವಿದ್ಯಾಲಯವು ವಿದೇಶದಿಂದ, ವಿದೇಶಿ ಪ್ರತಿಷ್ಠಾನಗಳು ಮತ್ತು ಅಂಥ ದೇಶದ ಯಾವುದೇ ವ್ಯಕ್ತಿಯಿಂದ ವಂತಿಗೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(17) ಭಾರತದ ಹೊರಗೆ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ತನ್ನ ವಿಶೇಷಾಧಿಕಾರಕ್ಕೆ ಪ್ರವೇಶಾವಕಾಶವನ್ನು ನೀಡಲು ವಿಶ್ವವಿದ್ಯಾಲಯಕ್ಕೆ ಅನುಮತಿಸುವುದು;

(18) ವಿವಿಧ ಶಾಸನಗಳಡಿಯಲ್ಲಿ ನಿರ್ಧರಿಸಿದಂತೆ ತೋಟಗಾರಿಕೆ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಲಿಕೆಯನ್ನು ನಡೆಸಲು ಖಾಸಗಿ ತೋಟಗಾರಿಕೆ ಸಂಸ್ಥೆಗಳಿಗೆ ಸಂಯೋಜನೆ ನೀಡುವುದು.

(19) ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳ ಪುರೋಭಿವೃದ್ಧಿಗೆ ಅಗತ್ಯವಾಗಬಹುದಾದ ಎಲ್ಲಾ ಚಟುವಟಿಕೆಗಳು ಮತ್ತು ಕಾರ್ಯಗಳನ್ನು ಅವು ಮೇಲೆ ಹೇಳಿದ ಅಧಿಕಾರಗಳಿಗೆ ಪ್ರಾಸಂಗಿಕವಾಗಿರಲಿ ಇಲ್ಲದಿರಲಿ ಮಾಡುವುದು:

8. ವಿಶ್ವವಿದ್ಯಾಲಯದ ಕೆಲವು ಕಾಲೇಜುಗಳ, ಸಂಸ್ಥೆಗಳ ಮತ್ತು ನೌಕರರ ವರ್ಗಾವಣೆ.- (1) ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 1963ರಲ್ಲಿ (1963ರ ಕರ್ನಾಟಕ ಅಧಿನಿಯಮ 22) ಏನೇ ಇದ್ದರೂ ಅನುಸೂಚಿ – I ರಲ್ಲಿ ನಿರ್ದಿಷ್ಟಪಡಿಸಿದ ಕಾಲೇಜುಗಳು, ಸಂಶೋಧನಾ ಕೇಂದ್ರಗಳು, ತೋಟಗಾರಿಕೆ ಬೆಳೆಗಳ ಬಗ್ಗೆ ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆಗಳು ಮತ್ತಿತರ ಸಂಸ್ಥೆಗಳು ಹಾಗೂ ಕೃಷಿ ಮತ್ತು ತೋಟಗಾರಿಕೆಯ ರಾಜ್ಯ ಸರ್ಕಾರದ ಇಲಾಖೆಗಳ ಫಾರಂಗಳು ಮತ್ತು ಅವಕ್ಕೆ ಲಗತ್ತಾದ ವಿದ್ಯಾರ್ಥಿ ನಿಲಯಗಳು ಹಾಗೂ ಇತರ ಕಟ್ಟಡಗಳು, ತಮ್ಮ ಪೀಠೋಪಕರಣ ಸಾಮಾಗ್ರಿಗಳು, ಗ್ರಂಥಾಲಯಗಳು, ಪುಸ್ತಕಗಳು, ಪ್ರಯೋಗಾಲಯಗಳು, ದಾಸ್ತಾನು ಮಳಿಗೆಗಳು, ಉಪಕರಣಗಳು, ಸಾಧನಗಳು, ಪರಿಕರಗಳು ಮತ್ತು ಸಲಕರಣೆಗಳ ಸಮೇತವಾಗಿ ಹಾಗೂ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಹಾಗೂ ರಾಜ್ಯ ಸರ್ಕಾರವು ಮಾಲೀಕತ್ವ ಹೊಂದಿದ್ದ ಮತ್ತು ನಿರ್ವಹಿಸುತ್ತಿದ್ದ ಚರ ಮತ್ತು ಸ್ಥಿರ ಸ್ವತ್ತುಗಳೆರಡು ಸೇರಿದಂತೆ ಇತರ ಎಲ್ಲಾ ಸ್ವತ್ತುಗಳು, ಆಸ್ತಿಗಳು, ಹೊಣೆಗಾರಿಕೆಗಳು ಮತ್ತು ದಾಯಿತ್ವಗಳ ಸಹಿತವಾಗಿ ಅದರ ಎಲ್ಲಾ ಸ್ವತ್ತುಗಳು ಈ ವಿಶ್ವವಿದ್ಯಾಲಯಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(2) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು ಸಂದರ್ಭಾನುಸಾರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಅಥವಾ ಕೃಷಿ ವಿಜ್ಞಾನಗಳ

ವಿಶ್ವವಿದ್ಯಾಲಯ, ಧಾರವಾಡದಲ್ಲಿ ಯಾವುದೇ ಪರೀಕ್ಷೆಗಾಗಿ ವ್ಯಾಸಂಗ ಮಾಡುತ್ತಿರುವ, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಕಾಲೇಜಿನ ಅಥವಾ ಸಂಸ್ಥೆಯ ಯಾವೊಬ್ಬ ವಿದ್ಯಾರ್ಥಿಯು ಅದಕ್ಕಾಗಿ ಸಿದ್ಧತೆ ನಡೆಸಿದ ತನ್ನ ವ್ಯಾಸಂಗ ಕ್ರಮವನ್ನು ಪೂರ್ಣಗೊಳಿಸಲು ಅನುಮತಿ ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಂತಹ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಗಳನ್ನು ನಡೆಸಲು ವ್ಯವಸ್ಥೆ ಮಾಡತಕ್ಕದ್ದು.

(3) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಇವು ಪರೀಕ್ಷೆಗಳನ್ನು ನಡೆಸಿ ಫಲಿತಾಂಶಗಳನ್ನು ಘೋಷಿಸಿದ್ದರೆ ಮತ್ತು ಸಂಬಂಧಪಟ್ಟ ಪದವಿಯನ್ನು ಪ್ರದಾನ ಮಾಡಿರದಿದ್ದರೆ ಅಥವಾ ನೀಡಿರದಿದ್ದರೆ ಅಥವಾ ವ್ಯಾಸಂಗ ಕ್ರಮದ ಅಗತ್ಯತೆಗಳನ್ನು ಪೂರೈಸಿದ್ದರೂ ಅಂತಹ ಪರೀಕ್ಷೆಯ ಫಲಿತಾಂಶಗಳನ್ನು ಘೋಷಿಸಿರದಿದ್ದರೆ, ಆಗ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಸಂದರ್ಭಾನುಸಾರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಇವುಗಳು ಫಲಿತಾಂಶವನ್ನು ಘೋಷಿಸತಕ್ಕದ್ದು ಮತ್ತು ಪದವಿಯನ್ನು ಪ್ರದಾನ ಮಾಡತಕ್ಕದ್ದು.

(4) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಇವುಗಳಿಂದ ನಿಯೋಜಿತರಾಗಿದ್ದ, ಯಾವುದೇ ಕಾಲೇಜಿನಲ್ಲಿ, ಸಂಶೋಧನಾ ಕೇಂದ್ರದಲ್ಲಿ ಅಥವಾ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಂಸ್ಥೆಗಳಲ್ಲಿ ಸೇವೆಸಲ್ಲಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ನಿರ್ದಿಷ್ಟಪಡಿಸಿದ ದಿನಾಂಕದಿಂದ ಈ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸತಕ್ಕದ್ದು ಹಾಗೂ ಷರತ್ತುಗಳನ್ನು ಮಾರ್ಪಾಡಿಸಿದ ಹೊರತು ಮತ್ತು ಮಾರ್ಪಾಡಿಸುವ ವರೆಗೆ ಹಾಗೇ ವರ್ಗಾವಣೆ ಮಾಡುವ ಬದಲು ಅನ್ವಯವಾಗುತ್ತಿದ್ದ ಸೇವಾ ಷರತ್ತುಗಳ ಮೇಲೆ ಆತನು ವರ್ಗಾಯಿತನಾಗತಕ್ಕದ್ದು ಮತ್ತು ಅವೇ ಸೇವಾ ಷರತ್ತುಗಳು ಅನ್ವಯಿಸುವುದು ಮುಂದುವರೆಯತಕ್ಕದ್ದು.

(5) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಅಥವಾ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಇವುಗಳಿಂದ ನಿಯೋಜಿತರಾಗಿದ್ದ ಯಾವುದೇ ಕಾಲೇಜಿನಲ್ಲಿ ಸಂಶೋಧನಾ ಕೇಂದ್ರದಲ್ಲಿ ಅಥವಾ (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರದ ಸಂಸ್ಥೆಗಳಲ್ಲಿ ಸೇವೆಸಲ್ಲಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ನಿರ್ದಿಷ್ಟಪಡಿಸಿದ ದಿನಾಂಕದಿಂದ ಆತನ ಆಯ್ಕೆಯ ಮೇಲೆ

ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಹುದ್ದೆಗಳ ಲಭ್ಯತೆಯ ಆಧಾರದ ಮೇಲೆ ವರ್ಗಾಯಿತನಾಗತಕ್ಕದ್ದು. ಅಂತಹ ವ್ಯಕ್ತಿಯ ಒಪ್ಪಿಗೆಯೊಡನೆ ಷರತ್ತುಗಳನ್ನು ಮಾರ್ಪಾಡಿಸಿದ ಹೊರತು ಮತ್ತು ಮಾರ್ಪಾಡಿಸುವವರೆಗೆ, ಹಾಗೆ ವರ್ಗಾವಣೆ ಮಾಡುವುದಕ್ಕೆ ಮೊದಲು ಅನ್ವಯವಾಗುತ್ತಿದ್ದ ಸೇವಾ ಷರತ್ತುಗಳ ಮೇಲೆ ಆತನು ವರ್ಗಾಯಿತನಾಗತಕ್ಕದ್ದು ಹಾಗೂ ಅವೇ ಸೇವಾ ಷರತ್ತುಗಳು ಅನ್ವಯಿಸುವುದು ಮುಂದುವರೆಯತಕ್ಕದ್ದು.

(6) (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ ಇವುಗಳ ಯಾವುದೇ ಕಾಲೇಜುಗಳಲ್ಲಿ ಸಂಶೋಧನಾ ಕೇಂದ್ರಗಳು/ಸಂಸ್ಥೆಗಳಲ್ಲಿ ಬೋಧಕೇತರ ಸಿಬ್ಬಂದಿಯನ್ನು ಹೊರತುಪಡಿಸಿ ಪ್ರತಿಯೊಬ್ಬ ವ್ಯಕ್ತಿಯು ನಿರ್ದಿಷ್ಟಪಡಿಸಿದ ದಿನಾಂಕದಿಂದ ಆತನ ಆಯ್ಕೆಯ ಮೇಲೆ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಹುದ್ದೆಗಳ ಲಭ್ಯತೆಯ ಆಧಾರದ ಮೇಲೆ ವರ್ಗಾಯಿತನಾಗತಕ್ಕದ್ದು. ಅಂತಹ ವ್ಯಕ್ತಿಯ ಒಪ್ಪಿಗೆಯೊಡನೆ ಷರತ್ತುಗಳನ್ನು ಮಾರ್ಪಾಡಿಸಿದ ಹೊರತು ಮತ್ತು ಮಾರ್ಪಾಡಿಸುವವರೆಗೆ, ಹಾಗೆ ವರ್ಗಾವಣೆ ಮಾಡುವುದಕ್ಕೆ ಮೊದಲು ಅನ್ವಯವಾಗುತ್ತಿದ್ದ ಸೇವಾ ಷರತ್ತುಗಳ ಮೇಲೆ ಆತನು ವರ್ಗಾಯಿತನಾ ಗತಕ್ಕದ್ದು ಹಾಗೂ ಅವೇ ಸೇವಾ ಷರತ್ತುಗಳು ಅನ್ವಯಿಸುವುದು ಮುಂದುವರೆಯತಕ್ಕದ್ದು.

(7) ಕೃಷಿ ಮತ್ತು ಸಂಬಂಧಿಸಿದ ವಿಜ್ಞಾನಗಳ ಯಾವೊಬ್ಬ ಅಧ್ಯಾಪಕ ಮತ್ತು ಬೋಧಕೇತರ ವ್ಯಕ್ತಿಯು ತನ್ನ ಮಾತೃ ವಿಶ್ವವಿದ್ಯಾಲಯದಲ್ಲೇ ಉಳಿದು ಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದರೆ ಮೂರು ವರ್ಷಗಳ ತರುವಾಯ ಮಾತ್ರವೇ ಅವರನ್ನು ತೋಟಗಾರಿಕೆ ವಿಶ್ವವಿದ್ಯಾಲಯ ಮತ್ತು ಮಾತೃ ವಿಶ್ವವಿದ್ಯಾಲಯ ಈ ಎರಡೂ ವಿಶ್ವವಿದ್ಯಾಲಯಗಳ ಕುಲಪತಿಗಳ ಪರಸ್ಪರ ಒಪ್ಪಿಗೆಯ ಮೇಲೆ ಹೊಸ ವಿಶ್ವವಿದ್ಯಾಲಯದಿಂದ ವರ್ಗಾವಣೆ ಮಾಡತಕ್ಕದ್ದು:

ಪರಂತು, ರಾಜ್ಯ ಸರ್ಕಾರದಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡಕ್ಕೆ ಪ್ರತಿನಿಯೋಜಿಸಲಾದ ಯಾವ ವ್ಯಕ್ತಿಯನ್ನೂ ರಾಜ್ಯ ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸತಕ್ಕದ್ದಲ್ಲ:

ಮತ್ತು ಪರಂತು, ರಾಜ್ಯ ಸರ್ಕಾರವು ನಿಯೋಜಿಸಿದ ಆದರೆ ಅನುಸೂಚಿಯಲ್ಲಿ ಹೇಳಿದ ಕಾಲೇಜುಗಳಲ್ಲಿ, ಸಂಶೋಧನಾ ಕೇಂದ್ರಗಳಲ್ಲಿ ಅಥವಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವೊಬ್ಬ ವ್ಯಕ್ತಿಯನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸತಕ್ಕದ್ದು. ಆತನ ನಿಯೋಜನೆಯ ದರ್ಜೆ ಬಗ್ಗೆ ರಾಜ್ಯ ಸರ್ಕಾರವು ತೀರ್ಮಾನವನ್ನು ಕೈಗೊಂಡ ಹೊರತು ಮತ್ತು ಅಲ್ಲಿಯವರೆಗೆ ಅವನು ಯಾವ ವೃಂದ ಮತ್ತು ನೇಮಕಾತಿ ನಿಯಮಗಳಡಿಯಲ್ಲಿ ನೇಮಕವಾಗಿರುವನೋ ಅವೇ ನಿಯಮಗಳಿಗೆ ಒಳಪಟ್ಟಿರುವುದು ಮುಂದುವರಿಯತಕ್ಕದ್ದು.

(8) ತೋಟಗಾರಿಕೆಯ ಸ್ನಾತಕೋತ್ತರ ಶಿಕ್ಷಣ ವಿಭಾಗವು ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಸೂಚನೆಯನ್ನು ಹೊರಡಿಸುವವರೆಗೆ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಜಿಕೆವಿಕೆ ಕ್ಯಾಂಪಸ್‌ನಲ್ಲಿಯೇ ಮುಂದುವರೆಯತಕ್ಕದ್ದು.

(9) ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಫ್ಯಾಕಲ್ಟಿಯನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಜಿಕೆವಿಕೆ ಕ್ಯಾಂಪಸ್ ಇಲ್ಲಿಯ ತೋಟಗಾರಿಕೆ ವಿಭಾಗದಿಂದ ರಾಜ್ಯ ಸರ್ಕಾರವು ಪಡೆದುಕೊಳ್ಳತಕ್ಕದ್ದು.

(10) ಜಿಕೆವಿಕೆ ಕ್ಯಾಂಪಸ್‌ನ ಅರವತ್ತು ಹೆಕ್ಟೇರುಗಳನ್ನು ಒಳಗೊಂಡ ತೋಟಗಾರಿಕೆ ವಿಭಾಗದ ಮೂಲಭೂತ ಸೌಲಭ್ಯವನ್ನು ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸತಕ್ಕದ್ದು.

9. ತಪಾಸಣೆ ಮತ್ತು ನಿಯಂತ್ರಣ.– (1) ಕುಲಾಧಿಪತಿಯವರು, ಸರ್ಕಾರವು ತಪಾಸಣೆ ಕೋರಿದ್ದರೆ ಅಥವಾ ಸ್ವಪ್ರೇರಣೆಯಿಂದ ತಾನು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ವಿಶ್ವವಿದ್ಯಾಲಯದ ಕಟ್ಟಡಗಳ, ಪ್ರಯೋಗ ಶಾಲೆಗಳ, ಗ್ರಂಥಾಲಯಗಳ, ವಸ್ತು ಸಂಗ್ರಹಾಲಯಗಳ, ವಿದ್ಯಾರ್ಥಿನಿಲಯಗಳ, ಕಾರ್ಯಾಗಾರಗಳ ಮತ್ತು ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ; ಆಡಳಿತ ನಡೆಸುತ್ತಿರುವ ಮಾನ್ಯತೆ ನೀಡಿದ ಅಥವಾ ಅನುಮೋದಿಸಿದ ಸಂಸ್ಥೆಯ ಸಲಕರಣೆಗಳ ಮತ್ತು ವಿಶ್ವವಿದ್ಯಾಲಯವು ನಡೆಸಿದ ಮತ್ತು ಕೈಗೊಂಡ ಪರೀಕ್ಷೆಗಳ, ಅಧ್ಯಾಪನದ ಮತ್ತು ಇತರ ಕಾರ್ಯದ ಬಗ್ಗೆ ತಪಾಸಣೆ ಮಾಡುವಂತೆ ಮಾಡತಕ್ಕದ್ದು

ಮತ್ತು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಇತರ ಯಾವುದೇ ವಿಷಯದ ಬಗ್ಗೆ ಅದೇ ರೀತಿಯಲ್ಲಿ ತಪಾಸಣೆ ಮಾಡುವಂತೆ ಅಥವಾ ವಿಚಾರಣೆ ನಡೆಸುವಂತೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ತಪಾಸಣೆ ಅಥವಾ ವಿಚಾರಣೆ ನಡೆಸುವುದಕ್ಕಾಗಿ, ನಿರ್ದೇಶಿತರಾದ ವ್ಯಕ್ತಿ ಅಥವಾ ವ್ಯಕ್ತಿಗಳು, ಆ ಉದ್ದೇಶಕ್ಕಾಗಿ, ಸಂಬಂಧಪಟ್ಟ ಸಂಸ್ಥೆಗಳನ್ನು ಮತ್ತು ಆವರಣಗಳನ್ನು ಪ್ರವೇಶಿಸಲು ಮತ್ತು ಅವಶ್ಯಕವಾಗಬಹುದಾದಂಥ ಲೆಕ್ಕಪತ್ರಗಳನ್ನು ಅಥವಾ ಇತರ ದಾಖಲೆಗಳನ್ನು ಪಡೆದುಕೊಳ್ಳಲು ಅವಕಾಶವಿರತಕ್ಕದ್ದು.

(3) ಅಂಥ ವ್ಯಕ್ತಿ ಅಥವ ವ್ಯಕ್ತಿಗಳು, ತಪಾಸಣೆ ಅಥವಾ ವಿಚಾರಣೆಯ ಒಂದು ವರದಿಯನ್ನು ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ವರದಿಯನ್ನು ಸ್ವೀಕರಿಸಿದ ಮೇಲೆ ಕುಲಾಧಿಪತಿಯವರು ಅದರ ಮೇಲೆ ತನ್ನ ತೀರ್ಮಾನಗಳನ್ನು ದಾಖಲಿಸತಕ್ಕದ್ದು ಮತ್ತು ಅದನ್ನು ಅವಶ್ಯಕವಾಗಬಹುದಾದ ಅಥವಾ ತಾನು ನೀಡುವ ನಿರ್ದೇಶನಗಳಿಗೆ ಅನುಸಾರವಾಗಿ ಮುಂದಿನ ಕ್ರಮ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) ರಾಜ್ಯ ಸರ್ಕಾರವು, ವಿಚಾರಣೆಯ ವರದಿಯಲ್ಲಿಯ ತೀರ್ಮಾನಗಳಿಗೆ ಸಂಬಂಧಿಸಿದಂತೆ ಕುಲಾಧಿಪತಿಯವರು ಮತ್ತು ಸರ್ಕಾರವು ನೀಡಿದ ನಿರ್ದೇಶನಗಳಿಗೆ ಅನುಸಾರವಾಗಿ ಕ್ರಮ ಕೈಗೊಳ್ಳಲು ಕುಲಪತಿಯವರಿಗೆ ನಿರ್ದೇಶನವನ್ನು ನೀಡತಕ್ಕದ್ದು ಮತ್ತು ಅಂಥ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಕಾಲಮಿತಿಯನ್ನು ನಿಗದಿಗೊಳಿಸತಕ್ಕದ್ದು.

(6) ಕುಲಪತಿಯು, ಹಾಗೆ ನಿಗದಿಗೊಳಿಸಿದ ಕಾಲಮಿತಿಯೊಳಗೆ, ಸರ್ಕಾರದ ನಿರ್ದೇಶನಗಳಿಗೆ ಅನುಸಾರವಾಗಿ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ಬಗ್ಗೆ ರಾಜ್ಯ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸತಕ್ಕದ್ದು.

(7) ಸರ್ಕಾರವು, ನಿಗದಿಪಡಿಸಲಾದ ಕಾಲಮಿತಿಯೊಳಗೆ ತನಗೆ ತೃಪ್ತಿಕರವಾಗುವಂತೆ ವಿಶ್ವವಿದ್ಯಾಲಯವು ಕ್ರಮಕೈಗೊಳ್ಳದಿದ್ದಲ್ಲಿ ಮತ್ತು ವಿಶ್ವವಿದ್ಯಾಲಯವು ನೀಡಿದ ಯಾವುದೇ ವಿವರಣೆ ಅಥವಾ ಸಲ್ಲಿಸಿದ ಮನವಿಯನ್ನು ಪರಿಶೀಲಿಸಿದ ತರುವಾಯ, ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ವಿಶ್ವವಿದ್ಯಾಲಯವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(8) ಹಿಂದೆ ಹೇಳಿದ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ವಿಶ್ವವಿದ್ಯಾಲಯದ ವ್ಯವಹಾರಗಳನ್ನು ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳ ಈಡೇರಿಕೆಗೆ ಅಥವಾ ಈ ಅಧಿನಿಯಮದ ಅಥವಾ ಶಾಸನಗಳ ಅಥವಾ ವಿನಿಯಮಗಳ ಉಪಬಂಧಗಳಿಗೆ ಅಥವಾ ಬೋಧನೆ, ಪರೀಕ್ಷೆಗಳು, ಸಂಶೋಧನೆ ಅಥವಾ ವಿಸ್ತರಣಾ ಶಿಕ್ಷಣದ ಗುಣಮಟ್ಟಗಳನ್ನು ಕಾಯ್ದುಕೊಂಡು ಬರುವಲ್ಲಿ ಅಪೇಕ್ಷಣೀಯವಾದ ವಿಶೇಷ ಕ್ರಮಗಳಿಗೆ ಅನುಸಾರವಾಗಿ ನಿರ್ವಹಿಸುತ್ತಿಲ್ಲವೆಂದು ಯಾವುದೇ ಸಮಯದಲ್ಲಿ ಕುಲಾಧಿಪತಿಯವರು ಅಭಿಪ್ರಾಯಪಟ್ಟರೆ, ತಾವು ಯಾವ ವಿಷಯದ ಬಗ್ಗೆ ವಿವರಣೆಯನ್ನು ಅಪೇಕ್ಷಿಸುವರೋ, ಆ ವಿಷಯವನ್ನು ವಿಶ್ವವಿದ್ಯಾಲಯದ ಗಮನಕ್ಕೆ ತರತಕ್ಕದ್ದು ಮತ್ತು ಕುಲಾಧಿಪತಿಯವರು ನಿರ್ದಿಷ್ಟಪಡಿಸಬಹುದಾದ ಕಾಲಮಿತಿಯ ಒಳಗೆ ಅಂಥ ವಿವರಣೆಯನ್ನು ಕೊಡುವಂತೆ ವಿಶ್ವವಿದ್ಯಾಲಯವನ್ನು ಕೇಳಬಹುದು. ಕುಲಾಧಿಪತಿಯವರು ನಿರ್ದಿಷ್ಟಪಡಿಸಬಹುದಾದ ಅವಧಿಯೊಳಗೆ ಯಾವುದೇ ವಿವರಣೆಯನ್ನು ನೀಡಲು ತಪ್ಪಿದರೆ ಅಥವಾ ನೀಡಿದ ವಿವರಣೆಯು ತೃಪ್ತಿಕರವಾಗಿಲ್ಲವೆಂದು ಕುಲಾಧಿಪತಿಯವರು ಅಭಿಪ್ರಾಯಪಟ್ಟರೆ, ಕುಲಾಧಿಪತಿಯವರು ತಾವು ಅವಶ್ಯಕವೆಂದು ಮತ್ತು ಆ ಪ್ರಕರಣದ ಸನ್ನಿವೇಶಗಳಲ್ಲಿ ಅಪೇಕ್ಷಣೀಯವೆಂದು ಅಭಿಪ್ರಾಯಪಡುವಂಥ ಸೂಚನೆಗಳನ್ನು ನೀಡಬಹುದು ಮತ್ತು ಆ ಸೂಚನೆಗಳನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯಕವಾದಂಥ ಅಧಿಕಾರಗಳನ್ನು ಚಲಾಯಿಸಬಹುದು.

(9) ಕುಲಾಧಿಪತಿಯವರು ಅಗತ್ಯವೆಂದು ನಿರ್ದೇಶಿಸಬಹುದಾದಂಥ ವಿಶ್ವವಿದ್ಯಾಲಯದ ಆಡಳಿತಕ್ಕೆ ಸಂಬಂಧಪಡುವ ಮಾಹಿತಿಯನ್ನು ವಿಶ್ವವಿದ್ಯಾಲಯವು ಒದಗಿಸತಕ್ಕದ್ದು.

(10) ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ವಿಶ್ವವಿದ್ಯಾಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುದೇ ವ್ಯವಹರಣೆಗಳು ಈ ಅಧಿನಿಯಮದ ಅಥವಾ ಶಾಸನಗಳು, ವಿನಿಯಮಗಳು ಅಥವಾ ಪರಿನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಇಲ್ಲವೆಂದು ಅಥವಾ ಅನ್ಯಥಾ ರಾಜ್ಯ ಸರ್ಕಾರದ ನೀತಿಗಳಿಗೆ ಅಸಂಗತವಾಗಿವೆ ಎಂದು ಅಭಿಪ್ರಾಯಪಟ್ಟಲ್ಲಿ ಅವುಗಳನ್ನು ರದ್ದುಗೊಳಿಸಬಹುದು:

ಪರಂತು, ಅಂಥ ಆದೇಶವನ್ನು ಮಾಡುವ ಮೊದಲು ರಾಜ್ಯ ಸರ್ಕಾರವು, ಅಂಥ ಆದೇಶವನ್ನು ಏಕೆ ಮಾಡಕೂಡದೆಂಬ ಬಗ್ಗೆ ಕಾರಣ ತೋರಿಸುವಂತೆ ವಿಶ್ವವಿದ್ಯಾಲಯವನ್ನು ಕೇಳತಕ್ಕದ್ದು ಮತ್ತು ಸಮಂಜಸ ಕಾಲವಧಿಯೊಳಗೆ ಕಾರಣವನ್ನು ತೋರಿಸಿದರೆ ಅದನ್ನು ಪರಿಶೀಲಿಸತಕ್ಕದ್ದು.

10. ನಿರ್ದೇಶನಗಳನ್ನು ನೀಡಲು ಅಧಿಕಾರ.– ಕುಲಾಧಿಪತಿಯು, ತಾನಾಗಿಯೇ ಅಥವಾ ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ, ವಿಶ್ವ ವಿದ್ಯಾಲಯದ ಆಡಳಿತ ಮತ್ತು ವಿದ್ಯಾ ವಿಷಯಕ ಕಾರ್ಯ ನಿರ್ವಹಣೆಯ ಹಿತದೃಷ್ಟಿಯಿಂದ ಅದರಲ್ಲೂ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡು ಬರುವ ದೃಷ್ಟಿಯಿಂದ ಮತ್ತು ಸ್ವತ್ತು ಹಾಗೂ ಹಣಕಾಸುಗಳನ್ನು ಸಂರಕ್ಷಿಸು ವುದಕ್ಕಾಗಿ ಅವಶ್ಯಕ ಅಥವ ಯುಕ್ತವಾಗಬಹುದಾದಂಥ ನಿರ್ದೇಶನಗಳನ್ನು ನೀಡಬಹುದು.

ಅಧ್ಯಾಯ– III

ವಿಶ್ವವಿದ್ಯಾಲಯದ ಪ್ರಾಧಿಕಾರಗಳು

11. ವಿಶ್ವವಿದ್ಯಾಲಯದ ಪ್ರಾಧಿಕಾರಗಳು:– ಈ ಮುಂದಿನವು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು ಎಂದರೆ:–

(1) ವ್ಯವಸ್ಥಾಪನಾ ಮಂಡಳಿ

(2) ವಿದ್ಯಾವಿಷಯಕ ಪರಿಷತ್ತು

(3) ಸಂಶೋಧನಾ ಪರಿಷತ್ತು

(4) ವಿಸ್ತರಣಾ ಶಿಕ್ಷಣ ಪರಿಷತ್ತು

(5) ಸ್ನಾತಕೋತ್ತರ ಅಧ್ಯಯನ ಕೇಂದ್ರಗಳು ಮತ್ತು ಅವುಗಳ ಅಧ್ಯಯನ ಮಂಡಳಿಯನ್ನು ಒಳಗೊಂಡಂತೆ ಫ್ಯಾಕಲ್ಟಿಗಳು

O.17 F–53

(6) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಎಂಬುದಾಗಿ ಘೋಷಿಸಿರಬಹುದಾದಂಥ ವಿಶ್ವವಿದ್ಯಾಲಯದ ಇತರ ನಿಕಾಯಗಳು

12. ವ್ಯವಸ್ಥಾಪನಾ ಮಂಡಳಿ ಮತ್ತು ಅದರ ರಚನೆ:– (1) ಕುಲಾಧಿಪತಿಯವರು ಆದಷ್ಟು ಬೇಗನೆ ಒಂದು ವ್ಯವಸ್ಥಾಪನಾ ಮಂಡಳಿಯನ್ನು ರಚಿಸತಕ್ಕದ್ದು.

(2) ವ್ಯವಸ್ಥಾಪನಾ ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು:–

(i) ಕುಲಪತಿ – ಇವರು ಅಧ್ಯಕ್ಷರಾಗಿರತಕ್ಕದು.

(ii) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ತೋಟಗಾರಿಕೆ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು.

(iii) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು.

(iv) ಸಭಾಧ್ಯಕ್ಷರು ನಾಮನಿರ್ದೇಶಿಸಿದ ಕರ್ನಾಟಕ ರಾಜ್ಯ ವಿಧಾನ ಸಭೆಯ ಇಬ್ಬರು ಸದಸ್ಯರು ಮತ್ತು ಸಭಾಪತಿಗಳು ನಾಮನಿರ್ದೇಶಿಸಿದ ಕರ್ನಾಟಕ ವಿಧಾನ ಪರಿಷತ್ತಿನ ಒಬ್ಬರು ಸದಸ್ಯರು ;

(v) ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

(vi) ಕುಲಾಧಿಪತಿಯವರು ನಾಮನಿರ್ದೇಶಿಸಿದ ತೋಟಗಾರಿಕೆ ಕ್ಷೇತ್ರದಿಂದ (ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ) ಒಬ್ಬ ಖ್ಯಾತ ಶಿಕ್ಷಣ ತಜ್ಞರು.

(vii) ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯಲ್ಲಿರುವ ಮೂವರು ಪ್ರಗತಿಪರ ತೋಟಗಾರಿಕಾ ರೈತರು

ಇವರ ಪೈಕಿ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವ ರಾಗಿದ್ದು ಸರ್ಕಾರದಿಂದ ನಾಮನಿರ್ದೇಶಿತರಾ ಗಿರತಕ್ಕದ್ದು;

(viii) ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಒಬ್ಬ ತೋಟಗಾರಿಕೆ ಉದ್ಯಮಿ;

(ix) ಗ್ರಾಮೀಣ ಚಟುವಟಿಕೆಯ ಹಿನ್ನೆಲೆಯುಳ್ಳ, ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ, ಒಬ್ಬ ಮಹಿಳಾ ಕಾರ್ಯಕರ್ತೆಯವರು;

(x) ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಮಹಾ ನಿರ್ದೇಶಕರು ನಾಮನಿರ್ದೇಶನ ಮಾಡಿದ ಒಬ್ಬ ಪ್ರತಿನಿಧಿ;

(xi) ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರು;

(xii) ಕುಲಪತಿಯವರು ನಾಮನಿರ್ದೇಶನ ಮಾಡಿದ ಒಬ್ಬ ಡೀನ್ – ಸುತ್ತು ಸರದಿಯ ಮೇಲೆ ಎರಡು ವರ್ಷಗಳ ಅವಧಿಯವರೆಗೆ;

(xiii) ಕುಲಸಚಿವರು, ಇವರು ಸದಸ್ಯ ಕಾರ್ಯದರ್ಶಿ ಯಾಗಿರತಕ್ಕದ್ದು;

(3) ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರ ಪದಾವಧಿಯು ಸಂಧರ್ಭಾನುಸಾರ ಸರ್ಕಾರ ಅಥವಾ ಕುಲಾಧಿಪತಿಯವರ ಇಚ್ಛೆಗೊಳಪಟ್ಟು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಅವರುಗಳು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಯಾವುದೇ ಪ್ರವರ್ಗದಲ್ಲಿ ಪುನರ್ ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದ್ದಲ್ಲ;

(4) ಪದಾವಧಿ ಮುಕ್ತಾಯವಾದ ಸಂದರ್ಭವನ್ನು ಹೊರತುಪಡಿಸಿ ಮರಣ, ರಾಜೀನಾಮೆ, ತೆಗೆದು ಹಾಕುವಿಕೆ ಅಥವಾ ಯಾವುದೇ ಇತರ ಕಾರಣಗಳಿಂದಾಗಿ ಯಾವೊಬ್ಬ ಸದಸ್ಯರ ಸ್ಥಾನವು ಖಾಲಿಯಾದಾಗ ಆ ಖಾಲಿ ಸ್ಥಾನವನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಭರ್ತಿ ಮಾಡತಕ್ಕದ್ದು ಮತ್ತು ಅಂತಹ ಖಾಲಿ ಸ್ಥಾನವನ್ನು ತುಂಬುವ ವ್ಯಕ್ತಿಯು ಯಾರ ಖಾಲಿ ಸ್ಥಾನಕ್ಕೆ ಆತನು ನಾಮನಿರ್ದೇಶಿತನಾಗಿದ್ದಾನೆಯೋ ಆ

ವ್ಯಕ್ತಿಯ ಉಳಿದ ಪದಾವಧಿವರೆಗೆ ಆ ಸ್ಥಾನವನ್ನು ಹೊಂದಿರತಕ್ಕದ್ದು.

(5) ಮಂಡಳಿಯ ಸಭೆಗಾಗಿ ಮಂಡಳಿಯ ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ಸಭೆಯ ಕೋರಂ ಆಗಿರತಕ್ಕದ್ದು:

ಪರಂತು, ಕೋರಂ ಇಲ್ಲದಿದುದರಿಂದಾಗಿ ಮಂಡಳಿಯ ಒಂದು ಸಭೆಯನ್ನು ಮುಂದೂಡಿದ್ದರೆ, ಅದೇ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಕೋರಂನ ಅವಶ್ಯಕತೆ ಇರುವುದಿಲ್ಲ.

(6) ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರು ಈ ಅಧಿನಿಯಮದ ಅಡಿಯಲ್ಲಿ ತಾವು ನೆರವೇರಿಸಿದ ಪ್ರಕಾರ್ಯಗಳಿಗೆ, ನಿಯಮಿಸಬಹುದಾದಂಥ ದಿನ ಭತ್ಯೆ, ಪ್ರಯಾಣ ಭತ್ಯೆಯನ್ನು ಹೊರತುಪಡಿಸಿ ಯಾವುದೇ ಸಂಭಾವನೆಯನ್ನು ಪಡೆಯಲು ಅರ್ಹರಾಗಿರತಕ್ಕದ್ದಲ್ಲ.

(7) ಮಂಡಳಿಯು ತನ್ನ ಸಭೆಯಲ್ಲಿ ಪರಿಶೀಲಿಸುತ್ತಿರುವ ಯಾವುದೇ ವಿಷಯಗಳ ಬಗ್ಗೆ ತಜ್ಞ ಸಲಹೆ ಪಡೆಯಲು ಆ ವಿಷಯಗಳಲ್ಲಿ ಪರಿಣತಿ ಅಥವಾ ವಿಶೇಷ ಜ್ಞಾನವನ್ನು ಉಳ್ಳ ಯಾವೊಬ್ಬ ವ್ಯಕ್ತಿಯನ್ನು ತನ್ನ ಸಭೆಗೆ ಹಾಜರಾಗಲು ಆಹ್ವಾನಿಸಬಹುದು. ಅಂತಹ ವ್ಯಕ್ತಿಯು ಅಂತಹ ಸಭೆಯ ವ್ಯವಹರಣೆಗಳಲ್ಲಿ ಮಾತನಾಡಬಹುದು ಅಥವಾ ಅನ್ಯಥಾ ಭಾಗವಹಿಸ ಬಹುದು. ಆದರೆ ಆತನು ಮತದಾನದ ಹಕ್ಕನ್ನು ಹೊಂದಿರುವುದಿಲ್ಲ. ಹಾಗೆ ಆಹ್ವಾನಿತರಾದ ಯಾವೊಬ್ಬ ವ್ಯಕ್ತಿಯು ಸಭೆಗೆ ಹಾಜರಾಗಿದ್ದಕ್ಕಾಗಿ ನಿಯಮಿಸಬಹುದಾದಂತಹ ಭತ್ಯೆ ಪಡೆಯಲು ಅರ್ಹರಾಗಿರತಕ್ಕದ್ದು.

(8) ಸಾಮಾನ್ಯವಾಗಿ ಮಂಡಳಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕನಿಷ್ಠ ಒಂದು ಬಾರಿಯಾದರೂ ಕುಲಪತಿಯವರು ನಿಗದಿಪಡಿಸುವಂಥ ದಿನಾಂಕ ಮತ್ತು ಸ್ಥಳದಲ್ಲಿ ಸೇರತಕ್ಕದ್ದು. ಆದಾಗ್ಯೂ ಕುಲಪತಿಯವರು ತಾನು ಸೂಕ್ತವೆಂದು ಭಾವಿಸದಾಗಲೆಲ್ಲ, ಮಂಡಳಿಯ ಅರ್ಧಕ್ಕಿಂತ ಕಡಿಮೆಯಲ್ಲದ ಸದಸ್ಯರು ಬರೆದು ಸಹಿ ಮಾಡಿ ಕೋರಿಕೊಂಡಾಗ ಮಂಡಳಿಯ ವಿಶೇಷ ಸಭೆಯನ್ನು ಕರೆಯಬಹುದು.

13. ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.– (1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು, ಮಂಡಳಿಯು ವಿಶ್ವವಿದ್ಯಾಲಯದ ಮುಖ್ಯ ಕಾರ್ಯಕಾರಿ ನಿಕಾಯ ಆಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಸ್ವತ್ತುಗಳು ಮತ್ತು ಚಟುವಟಿಕೆಗಳನ್ನು

ನಿರ್ವಹಿಸತಕ್ಕದ್ದು ಹಾಗೂ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರದ ಹೊರತು ವಿಶ್ವವಿದ್ಯಾಲಯದ ಎಲ್ಲಾ ಆಡಳಿತಾತ್ಮಕ ವ್ಯವಹಾರಗಳನ್ನು ನಡೆಸಲು ಜವಾಬ್ದಾರಿಯಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಮಂಡಳಿಯು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(i) ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳು ಮತ್ತು ಆಯವ್ಯಯವನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು;

(ii) ವಿಶ್ವವಿದ್ಯಾಲಯದ ಸ್ವತ್ತನ್ನು ಮತ್ತು ನಿಧಿಗಳನ್ನು ಹೊಂದಿರುವುದು ಮತ್ತು ನಿಯಂತ್ರಿಸುವುದು ಹಾಗೂ ವಿಶ್ವವಿದ್ಯಾಲಯದ ಪರವಾಗಿ ಯಾವುದೇ ಸಾಮಾನ್ಯ ನಿರ್ದೇಶನಗಳನ್ನು ಹೊರಡಿಸುವುದು;

(iii) ಸರ್ಕಾರದ ಪೂರ್ವ ಅನುಮೋದನೆಯೊಡನೆ, ವಿಶ್ವವಿದ್ಯಾಲಯದ ಪರವಾಗಿ ಯಾವುದೇ ಸ್ಥಿರ ಅಥವಾ ಚರ ಸ್ವತ್ತನ್ನು ಸ್ವೀಕರಿಸುವುದು ಅಥವಾ ವರ್ಗಾವಣೆ ಮಾಡುವುದು;

(iv) ವಿಶ್ವವಿದ್ಯಾಲಯದ ವಶದಲ್ಲಿ ಇರುವ ನಿಧಿಗಳನ್ನು ಅವನ್ನು ಇಟ್ಟಿರುವ ಉದ್ದೇಶಕ್ಕಾಗಿ ವಿನಿಯೋಗಿಸುವುದು;

(v) ವಿಶ್ವವಿದ್ಯಾಲಯದ ನಿಧಿಗಳನ್ನು ಹೂಡುವುದಕ್ಕಾಗಿ ಮತ್ತು ಹಿಂಪಡೆಯುವುದಕ್ಕಾಗಿ ವ್ಯವಸ್ಥೆ ಮಾಡುವುದು;

(vi) ಸರ್ಕಾರದ ಪೂರ್ವಾನುಮೋದನೆಯೊಡನೆ ಬಂಡವಾಳವನ್ನು ಹೂಡುವುದಕ್ಕಾಗಿ ಹಣವನ್ನು ತರುವುದು ಮತ್ತು ಅದರ ವಾಪಸಾತಿಗೆ ಸೂಕ್ತ ವ್ಯವಸ್ಥೆಯನ್ನು ಮಾಡುವುದು;

(vii) ವಿಶ್ವವಿದ್ಯಾಲಯದ ಪರವಾಗಿ ದತ್ತಿ, ಮರಣ ಶಾಸನದಾನ ಮತ್ತು ವಂತಿಕೆಗಳನ್ನು ಒಪ್ಪಿಕೊಳ್ಳುವುದು;

(viii) ಅಗತ್ಯವಿದ್ದಲ್ಲೆಲ್ಲಾ ವಿದ್ಯಾವಿಷಯಕ ಪರಿಷತ್ತು, ಸಂಶೋಧನಾ ಪರಿಷತ್ತು ಮತ್ತು ವಿಸ್ತಾರಣಾ ಶಿಕ್ಷಣ ಪರಿಷತ್ತಿನ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು.

(ix) ವಿಶ್ವವಿದ್ಯಾಲಯದ ಸಾಮಾನ್ಯ ಮೊಹರಿನ ನಮೂನೆ ಮತ್ತು ಉಪಯೋಗದ ಬಗ್ಗೆ ನಿರ್ದೇಶಿಸುವುದು;

(x) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಅನುಸಾರವಾಗಿ ತಾನು ಅವಶ್ಯವೆಂದು ಭಾವಿಸಬಹುದಾದಂಥ ಸಮಿತಿಗಳನ್ನು ಮತ್ತು ನಿಕಾಯಗಳನ್ನು ನೇಮಿಸುವುದು ಮತ್ತು ಅವುಗಳ ಪರಿಶೀಲನಾಂಶಗಳನ್ನು ನಿರ್ಧರಿಸುವುದು;

(xi) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಹೊಸ ವಿಭಾಗ, ಕೇಂದ್ರ, ಸಂಶೋಧನಾ ಕೇಂದ್ರ ಅಥವಾ ಉಪ ಕೇಂದ್ರವನ್ನು ಸ್ಥಾಪಿಸುವುದು ಅಥವಾ ಅವುಗಳ ಪೈಕಿ ಯಾವುದಾದರೊಂದನ್ನು ರದ್ದುಗೊಳಿಸುವುದು ಅಥವಾ ವಿಭಾಗ, ಸಂಶೋಧನಾ ಕೇಂದ್ರ, ಉಪ ಕೇಂದ್ರ ಅಥವಾ ಕೇಂದ್ರವನ್ನು ಪುನರ್ ರಚಿಸುವ ಬಗ್ಗೆ ಪರಿಗಣಿಸುವುದು ಮತ್ತು ಅನುಮೋದಿಸುವುದು;

(xii) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಹೊಸ ಕಾಲೇಜು ಅಥವಾ ಫ್ಯಾಕಲ್ಟಿಯನ್ನು ಸ್ಥಾಪಿಸುವುದು ಅಥವಾ ಎರಡು ಅಥವಾ ಹೆಚ್ಚು ಕಾಲೇಜುಗಳನ್ನು ಅಥವಾ ಫ್ಯಾಕಲ್ಟಿಗಳನ್ನು ಒಂದೇ ಕಾಲೇಜಿನಲ್ಲಿ ಅಥವಾ ಫ್ಯಾಕಲ್ಟಿಯಲ್ಲಿ ಸೇರಿಸುವುದು ಅಥವಾ ಕಾಲೇಜನ್ನು ಅಥವಾ ಫ್ಯಾಕಲ್ಟಿಯನ್ನು ಮುಚ್ಚುವುದು ಅಥವಾ ಪ್ರಸ್ತುತ ಇರುವ ಯಾವುದೇ ಫ್ಯಾಕಲ್ಟಿಯನ್ನು ಪುನರ್ ರಚಿಸುವ ಬಗ್ಗೆ ಪರಿಗಣಿಸುವುದು ಮತ್ತು

ಅನುಮೋದಿಸುವುದು;

(xiii) ರಾಜ್ಯ ಸರ್ಕಾರದ ಅನುಮೋದನೆಯೊಡನೆ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸುವುದು.

(xiv) ವಿಶ್ವವಿದ್ಯಾಲಯದ ಅಧಿಕಾರಿಗಳು, ಅಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕ ಮತ್ತು ಹೆಚ್ಚಿನ ಶ್ರೇಣಿಯ ನೌಕರರ ನೇಮಕಾತಿಗಾಗಿ ಶಿಫಾರಸ್ಸುಗಳನ್ನು ನಿಯಮಿಸಬಹುದಾದಂತೆ ಅನುಮೋದಿಸಬಹುದು.

(xv) ತುರ್ತು ಸನ್ನಿವೇಶದ ಸಂದರ್ಭದಲ್ಲಿ ಯಾವುದೇ ಮಂಡಳಿಯ ಬಾಬನ್ನು ಕಡತ ಪರಿಚಲಿಸುವ ಮೂಲಕ ಪರಿಗಣಿಸುವುದು ಮತ್ತು ಅನುಮೋದಿಸುವುದು.

14. ವಿದ್ಯಾವಿಷಯಕ ಪರಿಷತ್ತು.– (1) ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು ಅಂದರೆ :–

(i) ಕುಲಪತಿಯವರು, ಇವರು ಅಧ್ಯಕ್ಷರಾಗಿರುತ್ತಾರೆ;

(ii) ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದ ನಿರ್ದೇಶಕರು;

(iii) ಘಟಕ ಕಾಲೇಜುಗಳ ಡೀನುಗಳು;

(iv) ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯದ ಇಬ್ಬರು ವಿಭಾಗ ಮುಖ್ಯಸ್ಥರು ಸುತ್ತು ಸರದಿಯ ಮೇಲೆ;

(v) ಕುಲಪತಿಯವರು ನಾಮನಿರ್ದೇಶನ ಮಾಡಿದ ಪ್ರತಿಯೊಂದು ಫ್ಯಾಕಲ್ಟಿಯಿಂದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಒಬ್ಬ ಅಧ್ಯಾಪಕರು ಸುತ್ತು ಸರದಿಯ ಮೇಲೆ;

(vi) ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯದ ಹೊರಗಿನಿಂದ ಒಬ್ಬ ಪ್ರಖ್ಯಾತ ತೋಟಗಾರಿಕೆ ಶಿಕ್ಷಣ ತಜ್ಞರು;

(vii) ಕುಲಸಚಿವರು;

(viii) ತೋಟಗಾರಿಕೆ ನಿರ್ದೇಶಕರು, ಕರ್ನಾಟಕ ಸರ್ಕಾರ ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು;

(ix) ಕುಲಪತಿಯವರು ನಾಮನಿರ್ದೇಶನ ಮಾಡಿದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಸಂಯೋಜಿತ ಕಾಲೇಜಿನ ಒಬ್ಬ ಪ್ರತಿನಿದಿ ;

(X) ಶಿಕ್ಷಣ ನಿರ್ದೇಶಕರು – ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(2) ತೋಟಗಾರಿಕೆ ಮತ್ತು ಸಂಬಂಧಿತ ಕ್ಷೇತ್ರದ ವಿವಿಧ ವಲಯಗಳ ಸಾಕಷ್ಟು ಪ್ರಾತಿನಿಧ್ಯ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ನಿಯಮಿಸಬಹುದಾದಂತಹ ಅವಧಿಗಾಗಿ ಮತ್ತು ಅಂತಹ ರೀತಿಯಲ್ಲಿ ಇಬ್ಬರು ವ್ಯಕ್ತಿಗಳನ್ನು ಮೀರದಂತೆ ಸದಸ್ಯರನ್ನು ವಿದ್ಯಾವಿಷಯಕ ಪರಿಷತ್ತು ಸಹ–ಆಯ್ಕೆ (ಕೋ–ಆಪ್ಟ್) ಮಾಡಿಕೊಳ್ಳತಕ್ಕದ್ದು.

(3) ಪದನಿಮಿತ್ತ ಸದಸ್ಯರ ಹೊರತಾಗಿ ಇತರ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ಎರಡು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(4) ವಿದ್ಯಾವಿಷಯಕ ಪರಿಷತ್ತಿನ ಮೂರನೇ ಒಂದರಷ್ಟು ಸದಸ್ಯರ ಹಾಜರಾತಿ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಕೋರಂ ಆಗಿರತಕ್ಕದ್ದು :

ಪರಂತು ಕೋರಂ ಇಲ್ಲದಿದ್ದುದರಿಂದಾಗಿ ವಿದ್ಯಾವಿಷಯಕ ಪರಿಷತ್ತಿನ ಒಂದು ಸಭೆಯನ್ನು ಮುಂದೂಡಿದ್ದರೆ, ಅದೇ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಕೋರಂನ ಅವಶ್ಯಕತೆ ಇರುವುದಿಲ್ಲ.

(5) ವಿದ್ಯಾವಿಷಯಕ ಪರಿಷತ್ತಿಗೆ ನಾಮನಿರ್ದೇಶನಗೊಂಡ ಯಾವೊಬ್ಬ ಸದಸ್ಯನನ್ನು ಕುಲಪತಿಯವರು ಯಾವುದೇ ಸಮಯದಲ್ಲಿ ದುರ್ವರ್ತನೆ, ದುರ್ನಡತೆ ಅಥವಾ ಅನ್ಯಥಾ ಕಾರಣದ ಮೇಲೆ ವಿಚಾರಣೆ ನಡೆಸಿದ ತರುವಾಯ ಅಂತಹ ಸದಸ್ಯತ್ವದಿಂದ ತೆಗೆದು ಹಾಕಬಹುದು.

(6) ಸಾಮಾನ್ಯವಾಗಿ ವಿದ್ಯಾವಿಷಯಕ ಪರಿಷತ್ತು ಕುಲಪತಿಯವರು ನಿಗದಿಪಡಿಸಬಹುದಾದಂತಹ ದಿನಾಂಕದಂದು, ಕೊನೆಪಕ್ಷ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು. ಆದಾಗ್ಯೂ ಕುಲಪತಿಯವರು ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯನ್ನು ಕರೆಯಬಹುದು

15. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು.- (1) ವಿದ್ಯಾವಿಷಯಕ ಪರಿಷತ್ತು ಈ ಅಧ್ಯಾದೇಶದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು ಎಲ್ಲಾ ವ್ಯಾಸಂಗ ಕ್ರಮಗಳನ್ನು ಮತ್ತು ಪಠ್ಯ ವಿಷಯಗಳನ್ನು ನಿರ್ಧರಿಸುವುದಕ್ಕಾಗಿ ಈ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದೊಳಗೆ ಬೋಧನೆ ಮತ್ತು ಇತರ ಶೈಕ್ಷಣಿಕ ಕಾರ್ಯಕ್ರಮಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ಅವುಗಳ ಗುಣಮಟ್ಟವನ್ನು ಕಾಯ್ದುಕೊಂಡು ಬರುವುದಕ್ಕೆ ಹೊಣೆಯಾಗಿರತಕ್ಕದ್ದು.

(2) ವಿದ್ಯಾವಿಷಯಕ ಪರಿಷತ್ತು ತನ್ನ ನಿಯಂತ್ರಣಕ್ಕೊಳಪಡುವ ಎಲ್ಲಾ ವಿದ್ಯಾ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮಕ್ಕೆ ಮತ್ತು ಪರಿನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ರಚಿಸಲು ಮತ್ತು ಅಂತಹ ವಿನಿಯಮಗಳನ್ನು ನಿರಸನಗೊಳಿಸಲು ಅಧಿಕಾರ ಹೊಂದಿರತಕ್ಕದ್ದು. (1)ನೇ ಉಪ ಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಪ್ರತಿಕೂಲ ವಾಗದಂತೆ ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ :-

(i) ಗ್ರಂಥಾಲಯಗಳ ನಿಯಂತ್ರಣ ಮತ್ತು ನಿರ್ವಹಣೆಯೂ ಸೇರಿದಂತೆ, ಎಲ್ಲಾ ವಿದ್ಯಾ ವಿಷಯಗಳ ಬಗ್ಗೆ ಮಂಡಳಿಗೆ ಮತ್ತು ಕುಲಪತಿಯವರಿಗೆ ಸಲಹೆ ನೀಡುವುದು;

(ii) ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದಲ್ಲಿನ ಹುದ್ದೆಗಳೂ ಸೇರಿದಂತೆ ಪ್ರಾಧ್ಯಾಪಕರ, ಸಹವರ್ತಿ ಪ್ರಾಧ್ಯಾಪಕರ, ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಪ್ರಾರಂಭಿಸುವುದು ಮತ್ತು ಅವುಗಳ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಶಿಫಾರಸ್ಸುಗಳನ್ನು ಮಾಡುವುದು;

(iii) - ಫ್ಯಾಕಲ್ಟಿ, ಕಾಲೇಜು, ಬೋಧನ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ವಿಭಾಗಗಳನ್ನು ಸ್ಥಾಪಿಸಲು/ಸಮ್ಮಿಲನ/ ರದ್ದುಗೊಳಿಸಲು ಶಿಫಾರಸ್ಸು ಗಳನ್ನು ಮಾಡುವುದು;

(iv) ವಿಶ್ವವಿದ್ಯಾಲಯಕ್ಕೆ, ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ವಿನಿಯಮಗಳನ್ನು ರಚಿಸುವುದು ಮತ್ತು ಪ್ರವೇಶ ನೀಡಬೇಕಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿರ್ಧರಿಸುವುದು;

(v) ಪದವಿಗಳು, ಡಿಪ್ಲೋಮಾಗಳು ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಬೇಕಾದ ವ್ಯಾಸಂಗ ಕ್ರಮಗಳಿಗೆ ಸಂಬಂಧಿಸಿದ ವಿನಿಯಮಗಳನ್ನು ರಚಿಸುವುದು;

(vi) ಪರೀಕ್ಷೆಗಳನ್ನು ನಡೆಸುವುದಕ್ಕೆ ಸಂಬಂಧಪಡುವ ವಿನಿಯಮಗಳನ್ನು ರಚಿಸುವುದು ಮತ್ತು ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಂಡು ಬರುವುದು ಮತ್ತು ಸುಧಾರಿಸುವುದು;

(vii) ಗೌರವ ಪದವಿಗಳನ್ನು ಪ್ರದಾನ ಮಾಡುವುದಕ್ಕೆ ಸಂಬಂಧಿಸಿದಂತೆ ಮಂಡಳಿಗೆ ಶಿಫಾರಸ್ಸುಗಳನ್ನು ಮಾಡುವುದು;

(viii) ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಮತ್ತು ಸೇವಾ ಸಿಬ್ಬಂದಿಗೆ ನಿಯಮಿಸತಕ್ಕ ವಿದ್ಯಾರ್ಹತೆಗಳಿಗೆ ಸಂಬಂಧಿಸಿದಂತೆ ಶಿಫಾರಸ್ಸು ಮಾಡುವುದು;

(ix) ಶೈಕ್ಷಣಿಕ, ಸಂಶೋಧನಾ ಸಂಸ್ಥೆಗಳು, ನಿಗಮಗಳು ಮತ್ತು ಇತರ ಸಂಸ್ಥೆಗಳೊಡನೆ ವಾಗ್ದಾನ ಪತ್ರ ಮತ್ತು ಒಪ್ಪಂದ ಪತ್ರಗಳನ್ನು ಪರಿಶೀಲಿಸುವುದು ಹಾಗೂ ಅನುಮೋದಿಸುವುದು;

(x) ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಮಂಡಳಿಯು ಅಥವಾ ಕುಲಪತಿಯವರು ತನಗೆ ವಹಿಸಬಹುದಾದಂತಹ ಅಥವಾ ವಿಧಿಸಬಹುದಾದಂತಹ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

16. ಸಂಶೋಧನಾ ಪರಿಷತ್ತು.– ಈ ಮುಂದಿನ ಸದಸ್ಯರನ್ನು ಒಳಗೊಂಡ ಒಂದು ಸಂಶೋಧನಾ ಪರಿಷತ್ತು ಇರತಕ್ಕದ್ದು, ಎಂದರೆ:–

(i) ಕುಲಪತಿಯವರು – ಇವರು ಅಧ್ಯಕ್ಷರಾಗಿರತಕ್ಕದ್ದು;

(ii) ತೋಟಗಾರಿಕೆ ನಿರ್ದೇಶಕರು;

(iii) ಕೃಷಿ ಮಾರಾಟ ಇಲಾಖೆ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(iv) ಕೃಷಿ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(v) ಜಲವಿಭಾಜಕ ಕ್ಷೇತ್ರ ನಿರ್ವಹಣೆ ಇಲಾಖೆಯ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(vi) ಅರಣ್ಯ, ಸಂಶೋಧನೆ ಮತ್ತು ತರಬೇತಿಯ ಮುಖ್ಯ ಸಂರಕ್ಷಣಾಧಿಕಾರಿ;

(vii) ವಿಶ್ವವಿದ್ಯಾಲಯದ ಎಲ್ಲಾ ನಿರ್ದೇಶಕರು;

(viii) ಎಲ್ಲಾ ಡೀನುಗಳು;

(ix) ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಎಲ್ಲಾ ಸಹವರ್ತಿ ನಿರ್ದೇಶಕರುಗಳು;

(x) ತೋಟಗಾರಿಕೆ ಮತ್ತು ಸಂಬಂಧಿಸಿದ ವಿಭಾಗ ಗಳಲ್ಲಿ ವಿಶೇಷ ಪರಿಣತಿಯನ್ನು ಹೊಂದಿರುವ ರೈತರ ವಿಶೇಷ ಜ್ಞಾನ ಮತ್ತು ಅನುಭವದ ಪ್ರಯೋಜನವನ್ನು ಪಡೆದುಕೊಳ್ಳಲು ಕುಲಪತಿ ಯವರು ನಾಮನಿರ್ದೇಶನ ಮಾಡಿದಂಥ ತೋಟಗಾರಿಕೆ ಕ್ಷೇತ್ರದ ಪರಿಣಿತರಾದ ಇಬ್ಬರು ಪ್ರಗತಿಪರ ರೈತರು;

(xi) ಯಾವುದೇ ಸಭೆಯ ಸಂಬಂಧದಲ್ಲಿ ಪ್ರಸಿದ್ಧ ವಿಜ್ಞಾನಿಗಳ ವಿಶೇಷ ಜ್ಞಾನದ ಪ್ರಯೋಜನವನ್ನು

ಪಡೆಯುವುದಕ್ಕಾಗಿ ಕುಲಪತಿಯವರು ನಾಮ ನಿರ್ದೇಶನ ಮಾಡಿದ, ರಾಜ್ಯ ತೋಟಗಾರಿಕೆ ವಿಶ್ವವಿದ್ಯಾಲಯಗಳ ಹೊರಗಿನಿಂದ ಅಥವಾ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಅಥವಾ ಭಾರತದ ಕೃಷಿ ಸಂಶೋಧನಾ ಪರಿಷತ್ತು ಸಂಸ್ಥೆಗಳಿಂದ ಒಬ್ಬ ಪ್ರಸಿದ್ಧ ತೋಟಗಾರಿಕಾ ವಿಜ್ಞಾನಿ;

(xii) ಯಾವುದೇ ಸಭೆಯ ಸಂಬಂಧದಲ್ಲಿ ಅಂತಹ ಸಭೆಯ ಕಾರ್ಯಸೂಚಿಯಲ್ಲಿರುವ ವಿಷಯಗಳ ಬಗ್ಗೆ ಕೃಷಿ ಕೈಗಾರಿಕೋದ್ಯಮಿಯ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆಯುವುದಕ್ಕಾಗಿ ಕುಲಪತಿಯವರು ನಾಮನಿರ್ದೇಶನ ಮಾಡಿದ, ಒಬ್ಬ ಕೃಷಿ ಕೈಗಾರಿಕೋದ್ಯಮಿ;

(xiii) ಸಫಲ್ ಮಾರುಕಟ್ಟೆ ಘಟಕ, ಬೆಂಗಳೂರು (ಮದರ್ ಡೈರಿ ಆಹಾರ ಸಂಸ್ಕರಣಾ ನಿಯಮಿತ) ಇದರ ಮಹಾ ವ್ಯವಸ್ಥಾಪಕರು ಅಥವಾ ಮುಖ್ಯಸ್ಥರು;

(xiv) ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು;

(xv) ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ, ಮೈಸೂರು ಇದರ ನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು;

(xvi) ಕರ್ನಾಟಕ ರಾಜ್ಯ ವ್ಯವಸಾಯೋತ್ಪನ್ನ ಸಂಸ್ಕರಣಾ ಮತ್ತು ರಫ್ತು ನಿಗಮ ನಿಯಮಿತ (ಕೆಎಪಿಪಿಇಸಿ), ಬೆಂಗಳೂರು ಇದರ ವ್ಯವಸ್ಥಾಪಕ ನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು;

(xvii) ತೋಟಗಾರಿಕೆ ಉತ್ಪನ್ನ ಬೆಳೆಗಾರರ ಸಹಕಾರಿ ಮಾರಾಟ ಸಂಘ ಇದರ ವ್ಯವಸ್ಥಾಪಕ ನಿರ್ದೇಶಕರು;

(xviii) ಕುಲಸಚಿವರು;

(xix) ಕುಲಪತಿಗಳು ನಾಮನಿರ್ದೇಶಿಸಿದ ಸಂಯೋಜಿತ ಕಾಲೇಜಿನ ಒಬ್ಬ ಡೀನ್/ಪ್ರಾಂಶುಪಾಲರು;

(xx) ಸಂಶೋಧನಾ ನಿರ್ದೇಶಕರು – ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಸಂಶೋಧನಾ ಪರಿಷತ್ತಿನ ಎಲ್ಲಾ ಸದಸ್ಯರ ಪದಾವಧಿಯು ಎರಡು ವರ್ಷಗಳಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಮರುನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದ್ದಲ್ಲ.

17. ಸಂಶೋಧನಾ ಪರಿಷತ್ತಿನ ಪ್ರಕಾರ್ಯಗಳು.– ಸಂಶೋಧನಾ ಪರಿಷತ್ತು ಈ ಮುಂದಿನವುಗಳಿಗೆ ಸಂಬಂಧಿಸಿದುವುಗಳನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(i) ಪರಿಣಾಮಕಾರಿ ಸಮನ್ವಯವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ತೋಟಗಾರಿಕೆ ಮತ್ತು ಇತರ ಸಂಬಂಧಿತ ವಿಜ್ಞಾನಗಳ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯದ ವಿವಿಧ ಘಟಕಗಳು ಕೈಗೊಂಡ ಅಥವಾ ಕೈಗೊಳ್ಳಬೇಕಾದ ಸಂಶೋಧನಾ ಕಾರ್ಯಕ್ರಮಗಳು ಮತ್ತು ಯೋಜನೆಗಳು;

(ii) ಸಂಶೋಧನಾ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಅಗತ್ಯವಾದ ಭೌತಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಸೌಲಭ್ಯಗಳು;

(iii) ರೈತರ ಮತ್ತು ಇತರ ಹಿತಾಸಕ್ತಿದಾರರ ಅಗತ್ಯತೆಗಳನ್ನು ಪೂರೈಸುವ ಕಡೆಗೆ ಸಂಶೋಧನೆಯು ಅಭಿಮುಖವಾಗಿರುವಂತೆ ಮಾಡುವುದು.

(iv) ಸಂಶೋಧನೆ, ವಿಸ್ತರಣಾ ಶಿಕ್ಷಣ ಮತ್ತು ಬೋಧನೆಗಳನ್ನು ಸಮ್ಮಿಲನಗೊಳಿಸುವುದು ಮತ್ತು ಸಂಶೋಧಕರು ಬೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು.

(v) ಸಂಶೋಧನೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆಯನ್ನು ಪೋಷಿಸುವುದು ಮತ್ತು ಸಮನ್ವಯಗೊಳಿಸುವುದು;

(vi) ಕುಲಪತಿಯವರು ಅಥವಾ ಮಂಡಲಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರವು ತನಗೆ ಪರಿಶೀಲಿಸಲು ಕಳುಹಿಸಬಹುದಾದ ಸಂಶೋಧನಾ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಯಾವುದೇ ಇತರೆ ವಿಷಯ.

18. **ವಿಸ್ತರಣಾ ಶಿಕ್ಷಣ ಪರಿಷತ್ತು.**– (1) ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ವಿಸ್ತರಣಾ ಶಿಕ್ಷಣ ಪರಿಷತ್ತು ಇರತಕ್ಕದ್ದು, ಎಂದರೆ:–

(i) ಕುಲಪತಿಯವರು – ಅಧ್ಯಕ್ಷರು;

(ii) ತೋಟಗಾರಿಕೆ ಇಲಾಖೆಯ ನಿರ್ದೇಶಕರು, ಕರ್ನಾಟಕ ಸರ್ಕಾರ ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(iii) ಕೃಷಿ ಇಲಾಖೆಯ ನಿರ್ದೇಶಕರು, ಕರ್ನಾಟಕ ಸರ್ಕಾರ ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(iv) ಕೃಷಿ ಮಾರುಕಟ್ಟೆ ಇಲಾಖೆಯ ನಿರ್ದೇಶಕರು, ಕರ್ನಾಟಕ ಸರ್ಕಾರ ಅಥವಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(v) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ;

(vi) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ;

(vii) ಭಾರತೀಯ ತೋಟಗಾರಿಕೆ ಸಂಸ್ಥೆಯ ನಿರ್ದೇಶಕರು, ಬೆಂಗಳೂರು ಅಥವಾ ಅವರ

ನಾಮನಿರ್ದೇಶಿತರು;

(viii) ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ, ಮೈಸೂರು ಇದರ ನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು;

(ix) ಕರ್ನಾಟಕ ರಾಜ್ಯ ವ್ಯವಸಾಯೋತ್ಪನ್ನ ಸಂಸ್ಕರಣಾ ಮತ್ತು ರಫ್ತು ನಿಗಮ ನಿಯಮಿತ (ಕೆಎಪಿಪಿಇಸಿ), ಬೆಂಗಳೂರು ಇದರ ನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು;

(x) ಸಫಲ್ ಮಾರುಕಟ್ಟೆ ಘಟಕ, ಬೆಂಗಳೂರು (ಮದರ್ ಡೈರಿ ಆಹಾರ ಸಂಸ್ಕರಣಾ ನಿಯಮಿತ) ಇದರ ಮಹಾ ವ್ಯವಸ್ಥಾಪಕರು ಅಥವಾ ಮುಖ್ಯಸ್ಥರು;

(xi) ಜಲವಿಭಾಜಕ ಕ್ಷೇತ್ರ ಅಭಿವೃದ್ಧಿ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ;

(xii) ವಿಶ್ವವಿದ್ಯಾಲಯದ ಎಲ್ಲಾ ನಿರ್ದೇಶಕರು ಮತ್ತು ಡೀನ್‌ಗಳು;

(xiii) ಕುಲಸಚಿವರು;

(xiv) ಸಂಶೋಧನೆಯ ಎಲ್ಲಾ ಸಹವರ್ತಿ ನಿರ್ದೇಶಕರು ಮತ್ತು ವಿಸ್ತರಣಾ ಶಿಕ್ಷಣದ ಸಹವರ್ತಿ ನಿರ್ದೇಶಕರುಗಳು;

(xv) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು;

(xvi) ತೋಟಗಾರಿಕೆ ಮತ್ತು ಇತರ ಸಂಬಂಧಿತ ಶಾಖೆಗಳಲ್ಲಿ ವಿಶೇಷ ಪರಿಣಿತಿಯುಳ್ಳ, ಪ್ರಗತಿಪರ ರೈತರ ವಿಶೇಷ ಜ್ಞಾನ ಹಾಗೂ ಅನುಭವದ ಪ್ರಯೋಜನವನ್ನು ಪಡೆದುಕೊಳ್ಳಲು ಕುಲಪತಿ ಯವರು ನಾಮನಿರ್ದೇಶನ ಮಾಡಿದಂಥ ಇಬ್ಬರು ಪ್ರಗತಿಪರ ರೈತರು;

(xvii) ಯಾವುದೇ ಸಭೆಯ ಸಂಬಂಧದಲ್ಲಿ ಅಂಥ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳ ಬಗ್ಗೆ

ಅವರ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕಾಗಿ ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಒಬ್ಬ ಖ್ಯಾತ ವಿಸ್ತರಣಾ ಶಿಕ್ಷಣ ತಜ್ಞರು;

(xviii) ಯಾವುದೇ ಸಭೆಯ ಸಂದರ್ಭದಲ್ಲಿ ಅಂಥ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳ ಬಗ್ಗೆ ಅವರ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕಾಗಿ ಕುಲಪತಿಯವರು ನಾಮ ನಿರ್ದೇಶನ ಮಾಡಿದ ಒಬ್ಬ ವ್ಯವಸಾಯೋದ್ಯಮಿಗಳು;

(xix) ವ್ಯವಸ್ಥಾಪಕ ನಿರ್ದೇಶಕರು, ತೋಟಗಾರಿಕೆ ಉತ್ಪನ್ನ ಬೆಳೆಗಾರರ ಸಹಕಾರಿ ಮಾರುಕಟ್ಟೆ ಸಂಸ್ಥೆ;

(xx) ಕುಲಪತಿಗಳು ನಾಮನಿರ್ದೇಶಿಸಿದ ತೋಟಗಾರಿಕೆಗೆ ಸಂಬಂಧಿಸಿದ ಸರ್ಕಾರೇತರ ಸಂಸ್ಥೆಗಳಿಂದ ಒಬ್ಬ ಪ್ರತಿನಿಧಿ;

(xxi) ಕುಲಪತಿಯವರ ಕೋರಿಕೆಗನುಸಾರ ಐವರಿಗೆ ಮಿತಿಗೊಳಿಸಿದ ಈ ಮುಂದಿನ ಸಂಸ್ಥೆಗಳ ಒಬ್ಬೊಬ್ಬ ಪ್ರತಿನಿಧಿ.–

(ಎ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.

(ಬಿ) ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ.

(ಸಿ) ಜಲಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ.

(ಡಿ) ಭಾರತದ ರಸಗೊಬ್ಬರ ನಿಗಮ.

(ಇ) ರಾಷ್ಟ್ರೀಯ ಬೀಜಗಳ ನಿಗಮ

(ಎಫ್) ಯಾವುದೇ ಇತರ ವ್ಯವಸಾಯೋದ್ಯಮ ಅಥವಾ ವ್ಯವಸಾಯ ಸೇವಾಸಂಸ್ಥೆ/ಬೀಜ ಕಂಪೆನಿಗಳು.

(ಜಿ) ಕರ್ನಾಟಕ ರಾಜ್ಯ ಬೀಜಗಳ ನಿಗಮ.

(ಎಚ್) ಕರ್ನಾಟಕ ರಾಜ್ಯ ಬೀಜ ಪ್ರಮಾಣಪತ್ರ ನೀಡಿಕೆ ಏಜೆನ್ಸಿ.

(xxii) ವಿಸ್ತರಣಾ ಶಿಕ್ಷಣ ನಿರ್ದೇಶಕರು – ಸದಸ್ಯ ಕಾರ್ಯದರ್ಶಿ.

(2) ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ವಿಸ್ತರಣಾ ಶಿಕ್ಷಣ ಪರಿಷತ್ತಿನ ಎಲ್ಲಾ ಸದಸ್ಯರುಗಳ ಪದಾವಧಿಯು ಎರಡು ವರ್ಷಗಳಾಗಿರತಕ್ಕದ್ದು ಮತ್ತು ಅವರು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಮರುನಾಮನಿರ್ದೇಶನ ಹೊಂದಲು ಅರ್ಹರಾಗಿರತಕ್ಕದ್ದಲ್ಲ.

19. ವಿಸ್ತರಣಾ ಶಿಕ್ಷಣ ಪರಿಷತ್ತಿನ ಪ್ರಕಾರ್ಯಗಳು.– ವಿಸ್ತರಣಾ ಶಿಕ್ಷಣ ಪರಿಷತ್ತು ಈ ಮುಂದಿನವುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆ ಬಗ್ಗೆ ಶಿಫಾರಸ್ಸು ಮಾಡತಕ್ಕದ್ದು ಎಂದರೆ:–

(i) ವಿಶ್ವವಿದ್ಯಾಲಯದ ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳು ಮತ್ತು ಯೋಜನೆಗಳು.

(ii) ತೋಟಗಾರಿಕೆ ಮತ್ತು ಸಂಬಂಧಿತ ಶಾಖೆಗಳ ಸುಧಾರಣೆಗಾಗಿ ಮತ್ತು ಗ್ರಾಮೀಣ ಸಮುದಾಯಗಳ ಅಭಿವೃದ್ಧಿಗಾಗಿ, ವಿಸ್ತರಣಾ ಶಿಕ್ಷಣವನ್ನು ಸಮನ್ವಯಗೊಳಿಸುವುದು.

(iii) ರೈತರ ಶಿಕ್ಷಣ ಮತ್ತು ತರಬೇತಿಯನ್ನು ಮತ್ತು ಸಲಹಾ ಸೇವೆಗಳನ್ನು ಅಭಿವೃದ್ಧಿಗೊಳಿಸುವುದು.

(iv) ಕ್ಷೇತ್ರ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವುದು ಮತ್ತು ಮಾಹಿತಿಯ ಪ್ರಸಾರ ಮಾಡುವುದು.

(v) ವಿಸ್ತರಣಾ ಶಿಕ್ಷಣದ ವಿಧಾನ:

(vi) ತೋಟಗಾರಿಕೆ/ತೋಟಗಾರಿಕೆ ವಿಜ್ಞಾನ ಕೇಂದ್ರ/ವಿಸ್ತರಣಾ ಶಿಕ್ಷಣ ಘಟಕಗಳ ಕೆಲಸಕಾರ್ಯಗಳನ್ನು ಮೌಲ್ಯಮಾಪನ ಮಾಡುವುದು;

(vii) ಕುಲಪತಿಯವರು ಅಥವಾ ಮಂಡಳಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರವು ತನಗೆ ಪರಿಶೀಲನೆಗಾಗಿ ಕಳುಹಿಸಿಕೊಟ್ಟ ಯಾವುದೇ ಇತರ ವಿಷಯ.

O.17 F – 55

20. ಅಧ್ಯಯನ ಮಂಡಳಿಗಳು, ಅವುಗಳ ರಚನೆ ಮತ್ತು ಪ್ರಕಾರ್ಯಗಳು.– (1) ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಬೇರೆ ಬೇರೆ ಅಧ್ಯಯನ ಮಂಡಳಿಯಿರತಕ್ಕದ್ದು. ಅಧ್ಯಯನ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಶಾಸನಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು.

(2) ಪದವಿ ಕಾರ್ಯಕ್ರಮಗಳಿಗೆ ಅಧ್ಯಯನ ಮಂಡಳಿಯ ರಚನೆಯು ಈ ಮುಂದಿನಂತೆ ಇರತಕ್ಕದ್ದು, ಎಂದರೆ:–

(i) ಶಿಕ್ಷಣ ಇಲಾಖೆ ನಿರ್ದೇಶಕರು – ಅಧ್ಯಕ್ಷರು.

(ii) ಎಲ್ಲಾ ಘಟಕ ಕಾಲೇಜುಗಳ ಡೀನ್‌ಗಳು.

(iii) ಕುಲಪತಿಯವರು ನಾಮನಿರ್ದೇಶಿಸಿದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಸಂಯೋಜಿತ ಕಾಲೇಜಿನ ಒಬ್ಬರು ಪ್ರತಿನಿಧಿ.

(iv) ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ಶಿಕ್ಷಣ ನಿರ್ದೇಶಕರು.

(v) ಕುಲಸಚಿವರು.

(vi) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್.

(vii) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು.

(viii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ, ಅಧ್ಯಕ್ಷರು ನಾಮನಿರ್ದೇಶನದ ಇಲಾಖಾ ಮುಖ್ಯಸ್ಥರಲ್ಲದ ವಿಶ್ವವಿದ್ಯಾಲಯದ ಪ್ರತಿಯೊಂದು ಇಲಾಖೆಯ ಒಬ್ಬ ಪ್ರೊಫೆಸರ್.

(ix) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಸಹವರ್ತಿ ಪ್ರೊಫೆಸರರ ಕೇಡರ್‌ನಲ್ಲಿನ ಐವರು ಅಧ್ಯಾಪಕರು.

(x) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಸಹಾಯಕ ಪ್ರೊಫೆಸರರ ಕೇಡರ್‌ನಲ್ಲಿನ ಐವರು ಅಧ್ಯಾಪಕರು.

(xi) ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿರುವ ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಇಬ್ಬರು ತೋಟಗಾರಿಕೆಯ ಪ್ರಖ್ಯಾತ ಪ್ರೊಫೆಸರುಗಳು.

(xii) ವಿಶ್ವವಿದ್ಯಾಲಯ ಕುಲಪತಿಯವರು ನಾಮನಿರ್ದೇಶನ ಮಾಡಿದ ಕಾಲೇಜಿನ ಒಬ್ಬರು ಡೀನ್ ಸದಸ್ಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.

(3) ಪದವಿ ಕಾರ್ಯಕ್ರಮಗಳಿಗೆ ಅಧ್ಯಯನ ಮಂಡಳಿಗಳ ಪ್ರಕಾರ್ಯಗಳು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

(i) ಪದವಿ ಬೋಧನಾ ಕಾರ್ಯಕ್ರಮದ ಅಡಿಯಲ್ಲಿ ಪುನರಾವಲೋಕನ ಮಾಡುವುದು ಮತ್ತು ಅದರ ಸುಧಾರಣೆಗಳಿಗೆ ಸಲಹೆ ನೀಡುವುದು;

(ii) ಅಧ್ಯಯನಗಳ ಮಂಡಳಿಯು ರಚಿಸಿದಂಥ ವ್ಯಾಸಂಗ ಕ್ರಮಗಳ, ಪಠ್ಯವಿಷಯಗಳ, ಸಮಿತಿಯ ಅಥವಾ ಅದೇ ತರಹದ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ಅವನ್ನು ಪರ್ಯಾಲೋಚನೆ ಮತ್ತು ಅಂಗೀಕಾರಕ್ಕಾಗಿ ವಿದ್ಯಾವಿಷಯಕ ಪರಿಷತ್ತಿನ ಮುಂದೆ ಮಂಡಿಸುವುದು;

(iii) ವಿದ್ಯಾವಿಷಯಕ ಪರಿಷತ್ತು ಅಥವಾ ಕುಲಪತಿಯವರು ಗೊತ್ತುಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು;

(4) ಸ್ನಾತಕೋತ್ತರ ಕಾರ್ಯಕ್ರಮಗಳಿಗಾಗಿ ಅಧ್ಯಯನಗಳ ಮಂಡಳಿಯ ರಚನೆಯು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

(i) ಶಿಕ್ಷಣ ಇಲಾಖೆಯ ನಿರ್ದೇಶಕರು – ಅಧ್ಯಕ್ಷರು.

(ii) ಘಟಕ ಕಾಲೇಜುಗಳ ಡೀನ್‌ಗಳು.

(iii) ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ಶಿಕ್ಷಣದ ನಿರ್ದೇಶಕರು.

(iv) ಕುಲಸಚಿವರು.

(v) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್.

(vi) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು.

(vii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು

ನಾಮನಿರ್ದೇಶಿಸಿದ ಪ್ರೊಫೆಸರ್ ದರ್ಜೆಯ ಹತ್ತು ಜನ ಸ್ನಾತಕೋತ್ತರ ಅಧ್ಯಾಪಕರು.

(viii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮ ನಿರ್ದೇಶಿಸಿದ ಸಹವರ್ತಿ ಪ್ರೊಫೆಸರ್ ದರ್ಜೆಯ ಹತ್ತು ಜನ ಸ್ನಾತಕೋತ್ತರ ಅಧ್ಯಾಪಕರು.

(ix) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮ ನಿರ್ದೇಶಿಸಿದ ಸಹಾಯಕ ಪ್ರೊಫೆಸರ್ ದರ್ಜೆಯ ಹತ್ತು ಜನ ಸ್ನಾತಕೋತ್ತರ ಅಧ್ಯಾಪಕರು.

(x) ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ವಿಶ್ವವಿದ್ಯಾಲಯಕ್ಕೆ ಹೊರಗಿನ ವರಾದ ಇಬ್ಬರು ಖ್ಯಾತ ಪ್ರೊಫೆಸರ್‌ಗಳು.

(xi) ಸ್ನಾತಕೋತ್ತರ ವ್ಯಾಸಂಗದ ಡೀನ್ ಅವರು ಸದಸ್ಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸತಕ್ಕದ್ದು.

(5) ಸ್ನಾತಕೋತ್ತರ ವ್ಯಾಸಂಗ ಕ್ರಮದ ಅಧ್ಯಯನ ಮಂಡಳಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(i) ಸ್ನಾತಕೋತ್ತರ ಮತ್ತು ಡಿಪ್ಲೊಮಾ ಬೋಧನಾ ಕಾರ್ಯಕ್ರಮಗಳ ಪುನರಾವಲೋಕನ ಮಾಡುವುದು ಮತ್ತು ಅವುಗಳ ಸುಧಾರಣೆಗೆ ಸಲಹೆಗಳನ್ನು ನೀಡುವುದು;

(ii) ಅಧ್ಯಯನ ಮಂಡಳಿಯು ರಚಿಸಿದ ವ್ಯಾಸಂಗ ಕ್ರಮಗಳು, ಪಠ್ಯಕ್ರಮಗಳ, ಸಮಿತಿಗಳ ಅಥವಾ ಅಂತಹುದೇ ಸಮಿತಿಗಳ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ವಿದ್ಯಾವಿಷಯಕ ಪರಿಷತ್ತಿನ ಮುಂದೆ ಅವುಗಳನ್ನು ಪರ್ಯಾಲೋಚನೆ ಮತ್ತು ಅನುಮೋದನೆಗಾಗಿ ಮಂಡಿಸುವುದು;

(iii) ವಿದ್ಯಾವಿಷಯಕ ಪರಿಷತ್ತು ಅಥವಾ ಕುಲಪತಿಯವರು ವಹಿಸಬಹುದಾದಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

21. ಸಮಿತಿಗಳ ರಚನೆ.- ಪ್ರತಿಯೊಂದು ಪ್ರಾಧಿಕಾರವು ಸಮಿತಿಗಳನ್ನು ನೇಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂಥ ಸಮಿತಿಯು ಈ ಅಧಿನಿಯಮ ಅಥವಾ ಶಾಸನಗಳಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು, ಪ್ರಾಧಿಕಾರದ ಸದಸ್ಯರುಗಳನ್ನು ಅಥವಾ ತಾನು ಸರಿಯೆಂದು ಭಾವಿಸ ಬಹುದಾದ ಇತರ ವ್ಯಕ್ತಿಗಳನ್ನೊಳಗೊಂಡಿರತಕ್ಕದ್ದು

22. ಪ್ರಾಧಿಕಾರಗಳ ಸದಸ್ಯರ ಸ್ಥಾನವು ಖಾಲಿಯಾದ ಸಂದರ್ಭದಲ್ಲಿ ಉಪಬಂಧ.- (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರು ವುದನ್ನುಳಿದು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಇತರ ಯಾವುದೇ ಸದಸ್ಯರು ಮರಣ, ರಾಜೀನಾಮೆ, ತೆಗೆದುಹಾಕುವಿಕೆ ಅಥವಾ ಅನ್ಯಥಾ ಹಾಜರಾಗಲು ಅಥವಾ ತನ್ನ ಪೂರ್ಣ ಪದಾವಧಿಯನ್ನು ಪೂರ್ತಿಗೊಳಿಸಲು ಸಾಧ್ಯವಾಗದಿದ್ದಲ್ಲಿ, ಹಾಗೆ ಉಂಟಾದ ಖಾಲಿ ಸ್ಥಾನವನ್ನು ಅನುಕೂಲವಾದಷ್ಟು ಬೇಗನೆ, ಸಂದರ್ಭಾನುಸಾರ, ನೇಮಕಾತಿ, ನಾಮ ನಿರ್ದೇಶನ ಅಥವಾ ಸಹ ಸದಸ್ಯನನ್ನಾಗಿ ಸೇರಿಸುವಿಕೆಯಿಂದ ಭರ್ತಿಗೊಳಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ, ನಾಮನಿರ್ದೇಶಿತನಾದ ಅಥವಾ ಸಹ ಸದಸ್ಯನಾಗಿ ಸೇರಿಕೊಂಡ ವ್ಯಕ್ತಿಯು, ಅಂಥ ಖಾಲಿ ಸ್ಥಾನವನ್ನು ತಾನು ಯಾರ ಸ್ಥಾನದಲ್ಲಿ ನೇಮಕಗೊಂಡಿರುವನೋ, ನಾಮ ನಿರ್ದೇಶಿತನಾಗಿರುವನೋ ಅಥವಾ ಸಹ ಸದಸ್ಯನಾಗಿ ಸೇರಿಕೊಂಡಿರುವನೋ ಆ ವ್ಯಕ್ತಿಯು ಸದಸ್ಯನ ಸ್ಥಾನದಲ್ಲಿ ಮುಂದುವರೆಯುತ್ತಿದ್ದ ಉಳಿದ ಭಾಗದ ಅವಧಿಯವರೆಗೆ ಅಂಥ ಖಾಲಿ ಸ್ಥಾನವನ್ನು ಭರ್ತಿಗೊಳಿಸತಕ್ಕದ್ದು.

(2) ಮಂಡಳಿಯು ಯಾವುದೇ ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ನಿಕಾಯದ ಸದಸ್ಯನಾದ ಯಾವುದೇ ವ್ಯಕ್ತಿಯನ್ನು ಅಂಥ ವ್ಯಕ್ತಿಯು ನೈತಿಕ ಪತನವನ್ನೊಳಗೊಂಡ ಯಾವುದೇ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯೆಂಬ ಅಥವಾ ಸಂಬಂಧಪಟ್ಟ ಸದಸ್ಯನು ನಿರ್ವಹಿಸು ತ್ತಿರುವ ಹುದ್ದೆಯ ಘನತೆಗೆ ಆತನ ನಡತೆಯು ಸರಿಹೊಂದುತ್ತಿಲ್ಲವೆಂಬ ಕಾರಣದ ಮೇಲೆ ಕುಲಾಧಿಪತಿಯವರ ಅನುಮೋದನೆ ಪಡೆದು ಸದಸ್ಯತ್ವ ದಿಂದ ತೆಗೆದುಹಾಕಬಹುದು. ಅಂಥ ವ್ಯಕ್ತಿಯು ಸಕ್ಷಮ ನ್ಯಾಯಾಲಯದಿಂದ

ಹಾಗೆ ಅಪರಾಧಿಯಾಗಿ ನಿರ್ಣೀತನಾಗಿದ್ದರೆ ಕುಲಾಧಿಪತಿಯವರ ಪೂರ್ವಾನುಮೋದನೆಯು ಅವಶ್ಯಕವಾಗುವುದಿಲ್ಲ:

ಪರಂತು, ಯಾವುದೇ ವ್ಯಕ್ತಿಗೆ ತನ್ನ ಅಹವಾಲು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ನೀಡಿದ ಹೊರತು ಅವರ ವಿರುದ್ಧ ಅಂಥ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(3) ಬೇರೊಂದು ನಿಕಾಯದ ಸದಸ್ಯನಾದ ಯಾವನೇ ವ್ಯಕ್ತಿಯು ಆ ಸಂಸ್ಥೆಯು ವಿಶ್ವವಿದ್ಯಾಲಯದ ಒಂದು ನಿಕಾಯವಾಗಿರಲಿ ಇಲ್ಲದಿರಲಿ, ಅದರ ಪ್ರತಿನಿಧಿಯಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರುವ ಸಂದರ್ಭದಲ್ಲಿ, ಆತನು ತನ್ನ ಸದಸ್ಯತ್ವದ ಅವಧಿ ಮುಕ್ತಾಯವಾಗುವುದಕ್ಕಿಂತ ಮುಂಚೆ, ತನ್ನನ್ನು ನೇಮಿಸಿದ ಅಥವಾ ನಾಮನಿರ್ದೇಶನ ಮಾಡಿದ ನಿಕಾಯದ ಸದಸ್ಯನಾಗಿರುವುದು ಮುಕ್ತಾಯವಾಗಿದ್ದರೆ, ವಿಶ್ವವಿದ್ಯಾಲಯದ ಆ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯತ್ವವೂ ನಿಂತುಹೋಗತಕ್ಕದ್ದು.

(4) ಯಾವುದೇ ವ್ಯಕ್ತಿಯು ತಾನು ಹೊಂದಿರುವ ಹುದ್ದೆಯ ಬಲದಿಂದಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯನಾಗಿರುವಲ್ಲೆಲ್ಲಾ, ತನ್ನ ಸದಸ್ಯತ್ವದ ಅವಧಿಯು ಮುಕ್ತಾಯವಾಗುವ ಮುನ್ನವೆ ಆತ ಆ ಹುದ್ದೆಯಲ್ಲಿರುವುದು ನಿಂತುಹೋದರೆ, ಆತ/ಆಕೆಯು ಹೊಂದಿರುವ ಅಂಥ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯತ್ವವೂ ನಿಂತುಹೋಗತಕ್ಕದ್ದು:

ಪರಂತು, ನಾಲ್ಕು ತಿಂಗಳಿಗೆ ಮೀರದ ಅವಧಿಗೆ ಆತನು ರಜೆಯ ಮೇಲೆ ಹೋಗಿದ್ದರೆ ಅದನ್ನು ಆತನು ಹುದ್ದೆಯಲ್ಲಿರುವುದು ನಿಂತುಹೋಗಿದೆಯೆಂದು ಭಾವಿಸತಕ್ಕದ್ದಲ್ಲ.

(5) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಪದನಿಮಿತ್ತ ಸದಸ್ಯನಲ್ಲದ ಇತರ ಯಾವುದೇ ಸದಸ್ಯನು ಕುಲಪತಿಯವರ ವಿಳಾಸಕ್ಕೆ ಒಂದು ಪತ್ರವನ್ನು ಬರೆದು ರಾಜೀನಾಮೆ ನೀಡಬಹುದು ಮತ್ತು ಅಂಥ ರಾಜೀನಾಮೆಯು ಅದನ್ನು ಸ್ವೀಕರಿಸಿದ ದಿನಾಂಕದಿಂದ ಜಾರಿಗೆಬರತಕ್ಕದ್ದು.

23. ಕ್ರಮಗಳ ಸಿಂಧುತ್ವ ಮತ್ತು ಅದಕ್ಕೆ ರಕ್ಷಣೆ.– (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಯಾವುದೇ ಕ್ರಮ ಅಥವಾ ವ್ಯವಹರಣೆಯು ಅದರ ಸದಸ್ಯರುಗಳ ಸ್ಥಾನಗಳಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಕಾರಣದಿಂದಾಗಿ ಅಥವಾ ಯಾವೊಬ್ಬ ವ್ಯಕ್ತಿಯು ಮೊದಲು ವ್ಯವಹರಣೆಗಳಲ್ಲಿ ಭಾಗವಹಿಸಿದ್ದು ನಂತರ ಹಾಗೆ ಮಾಡಲು ಹಕ್ಕುಳ್ಳವನಲ್ಲವೆಂದು ಕಂಡುಬಂದ ಕಾರಣದಿಂದಾಗಿ ಅಸಿಂಧುವಾಗತಕ್ಕದ್ದಲ್ಲ

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ವಿಶ್ವವಿದ್ಯಾಲಯದಿಂದ ಅಥವಾ ಅದರ ಪ್ರಾಧಿಕಾರಗಳಿಂದ ಸದ್ಭಾವನೆಯಿಂದ ಕೈಗೊಂಡ ಎಲ್ಲಾ ಕ್ರಮಗಳು ಅಥವಾ ಹೊರಡಿಸಿದ ಎಲ್ಲಾ ಆದೇಶಗಳು ಅಂತಿಮವಾಗಿರತಕ್ಕದ್ದು ಮತ್ತು ಈ ಅಧ್ಯಾದೇಶ ಅಥವಾ ಶಾಸನಗಳು ಅಥವಾ ವಿನಿಯಮಗಳನ್ನು ಅನುಸರಿಸಿ ಮಾಡಿದೆ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗಿರುವ ಯಾವುದೇ ಕಾರ್ಯದ ಸಂಬಂಧದಲ್ಲಿ ವಿಶ್ವವಿದ್ಯಾಲಯ ಅಥವಾ ಅದರ ಪ್ರಾಧಿಕಾರದ ವಿರುದ್ಧವಾಗಿ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ ಅಥವಾ ಹಾನಿ ಪರಿಹಾರವನ್ನು ಕ್ಲೈಮು ಮಾಡತಕ್ಕದ್ದಲ್ಲ.

(3) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿರುವ ಯಾವುದೇ ಶಾಸನಗಳ ಪಾಲನೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

ಅಧ್ಯಾಯ – IV
ವಿಶ್ವವಿದ್ಯಾಲಯದ ಅಧಿಕಾರಿಗಳು

24. ವಿಶ್ವವಿದ್ಯಾಲಯದ ಅಧಿಕಾರಿಗಳು.– ಈ ಮುಂದಿನವರುಗಳು ವಿಶ್ವವಿದ್ಯಾಲಯದ ಅಧಿಕಾರಿಗಳಾಗಿರತಕ್ಕದ್ದು, ಎಂದರೆ:–

(1) ಕುಲಾಧಿಪತಿಯವರು;

(2) ಸಹಕುಲಾಧಿಪತಿಯವರು;

(3) ಕುಲಪತಿಯವರು;

(4) ನಿರ್ದೇಶಕರುಗಳು;

(5) ಡೀನ್‌ಗಳು;

(6) ಕುಲಸಚಿವರು;

(7) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್;

(8) ವಿಶ್ವವಿದ್ಯಾಲಯ ಗ್ರಂಥಪಾಲಕರು;

(9) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಘೋಷಿಸಬಹುದಾದಂತಹ ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಇತರ ವ್ಯಕ್ತಿಗಳು; ಮತ್ತು

(10) ಲೆಕ್ಕ ನಿಯಂತ್ರಕರು;

25. ಕುಲಾಧಿಪತಿ.– (1) ಕರ್ನಾಟಕ ರಾಜ್ಯದ ರಾಜ್ಯಪಾಲರು ತಮ್ಮ ಹುದ್ದೆಯ ಬಲದಿಂದಾಗಿ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕದ್ದು.

(2) ಕುಲಾಧಿಪತಿಯವರು ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಹಾಜರಿದ್ದಾಗ ವಿಶ್ವವಿದ್ಯಾಲಯದ ಘಟಿಕೋತ್ಸವಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಗೌರವ ಪದವಿಯನ್ನು ನೀಡುವ ಪ್ರತಿಯೊಂದು ಪ್ರಸ್ತಾವಕ್ಕೂ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ನೀಡಿ ಕುಲಾಧಿಪತಿಯವರು ಸ್ಥಿರೀಕರಿಸಿರತಕ್ಕದ್ದು.

(4) ಈ ಅಧಿನಿಯಮ ಮತ್ತು ಶಾಸನಗಳಿಗೆ ಅನುಸಾರವಾಗಿರದ ವಿಶ್ವವಿದ್ಯಾಲಯದ ಯಾವುದೇ ಅಧಿಕಾರಿಯ ಅಥವಾ ಪ್ರಾಧಿಕಾರದ ಯಾವುದೇ ಆದೇಶ ಅಥವಾ ವ್ಯವಹರಣೆಗಳನ್ನು ಕುಲಾಧಿಪತಿಯವರು ಲಿಖಿತದ ಆದೇಶದ ಮೂಲಕ ಶೂನ್ಯಗೊಳಿಸಬಹುದು :

ಪರಂತು ಅಂತಹ ಆದೇಶವನ್ನು ಹೊರಡಿಸುವ ಮೊದಲು ಅವರು ಅಂತಹ ಆದೇಶವನ್ನು ಏಕೆ ಹೊರಡಿಸಬಾರದು ಎಂದು ಕಾರಣ ಕೇಳುವ ನೋಟೀಸನ್ನು ಸಂಬಂಧಪಟ್ಟ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ನೀಡತಕ್ಕದ್ದು ಮತ್ತು ಅಂತಹ ಆದೇಶದಲ್ಲಿ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಯಾವುದೇ ಕಾರಣವನ್ನು ನೀಡಿದಲ್ಲಿ ಅದನ್ನು ಅವರು ಪರಿಗಣಿಸತಕ್ಕದ್ದು.

(5) ಕುಲಾಧಿಪತಿಯವರು ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ತಮಗೆ ಪ್ರದತ್ತವಾದಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

26. ಸಹಕುಲಾಧಿಪತಿಯವರು.– (1) ಕರ್ನಾಟಕ ರಾಜ್ಯದ ತೋಟಗಾರಿಕೆ ಸಚಿವರು ತಮ್ಮ ಹುದ್ದೆಯ ಬಲದಿಂದಾಗಿ ಸಹಕುಲಾಧಿಪತಿಗಳಾಗಿರತಕ್ಕದ್ದು.

(2) ಸಹಕುಲಾಧಿಪತಿಯವರು ಈ ಅಧಿನಿಯಮದ ಮೂಲಕ ಅದರಡಿಯಲ್ಲಿ ಅಥವಾ ಶಾಸನಗಳ ಅಡಿಯಲ್ಲಿ ತಮಗೆ ಪ್ರದತ್ತವಾಗಬಹುದಾದಂತಹ ಕುಲಾಧಿಪತಿಯವರ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು. ಕುಲಾಧಿಪತಿಯವರು ಸಹಕುಲಾಧಿಪತಿಯವರಿಗೆ ಲಿಖಿತ ಆದೇಶದ ಮೂಲಕ ಪ್ರತ್ಯಾಯೋಜಿಸಬಹುದಾದಂತಹ ಕುಲಾಧಿಪತಿಯವರ ಅಧಿಕಾರಗಳನ್ನು ಸಹ ಅವರು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ಸಹ ನಿರ್ವಹಿಸತಕ್ಕದ್ದು ಹಾಗೂ ಅಂತಹ ಪ್ರತ್ಯಾಯೋಜನೆಯು ಆದೇಶದಲ್ಲಿ ನಿರ್ದಿಷ್ಟಪಡಿಸಿದಂತಹ ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು.

(3) ಅವರು ಕುಲಾಧಿಪತಿಯವರ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

27. ಕುಲಪತಿಯವರು.– (1) ಕುಲಪತಿಯವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ಈ ಮುಂದಿನ ವ್ಯಕ್ತಿಗಳನ್ನು ಒಳಗೊಂಡ ಒಂದು ಶೋಧನಾ ಸಮಿತಿಯನ್ನು ರಚಿಸತಕ್ಕದ್ದು, ಎಂದರೆ:–

(i) ಮಹಾ ನಿರ್ದೇಶಕರು, ಭಾರತದ ಕೃಷಿ ಸಂಶೋಧನಾ ಪರಿಷತ್ತು

(ii) ಅಧ್ಯಕ್ಷರು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಅವರ ನಾಮನಿರ್ದೇಶಿತರು

(iii) ಕುಲಾಧಿಪತಿಯವರ ಒಬ್ಬ ನಾಮನಿರ್ದೇಶಿತರು;

(iv) ರಾಜ್ಯ ಸರ್ಕಾರದ ಒಬ್ಬ ನಾಮನಿರ್ದೇಶಿತರು;

ರಾಜ್ಯ ಸರ್ಕಾರವು ಅಂಥ ಸಮಿತಿಯ ಸದಸ್ಯರಲ್ಲಿ ಒಬ್ಬರನ್ನು ಸಮಿತಿಯ ಅಧ್ಯಕ್ಷರಾಗಿ ನೇಮಕಮಾಡತಕ್ಕದ್ದು. ತೋಟಗಾರಿಕೆ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳು ಅಥವಾ ಸರ್ಕಾರದ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು ಶೋಧನಾ ಸಮಿತಿಯ ಸಂಚಾಲಕರಾಗಿರತಕ್ಕದು.

(3) ಶೋಧನಾ ಸಮಿತಿಯು ಖ್ಯಾತ ತೋಟಗಾರಿಕೆ ತಜ್ಞರಾದ ಮೂರು ವ್ಯಕ್ತಿಗಳ ಹೆಸರಿನ ಪಟ್ಟಿಯನ್ನು ಅಕಾರದಿಯಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯ ಸರ್ಕಾರವು ಕುಲಾಧಿಪತಿಯವರಿಗೆ ಆ ಪಟ್ಟಿಯನ್ನು ಕಳುಹಿಸತಕ್ಕದ್ದು. ಕುಲಾಧಿಪತಿಯವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರದ ಸಹಮತಿಯೊಡನೆ ಸದರಿ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಿಸತಕ್ಕದ್ದು:

ಪರಂತು, ಕುಲಾಧಿಪತಿಯವರು, ಅವಶ್ಯವಿದ್ದಲ್ಲಿ ರಾಜ್ಯ ಸರ್ಕಾರದ ಸಹಮತಿಯೊಡನೆ ಎರಡನೇ ಪಟ್ಟಿಯನ್ನು ಕೇಳಬಹುದು ಮತ್ತು ಶೋಧನಾ ಸಮಿತಿಯು ಎರಡನೇ ಪಟ್ಟಿಯನ್ನು ಕಳುಹಿಸತಕ್ಕದ್ದು ಮತ್ತು ಅದು ಅಂತಿಮವಾಗಿರತಕ್ಕದ್ದು.

(4) (3)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ವಿಶ್ವವಿದ್ಯಾಲಯದ ಮೊದಲ ಕುಲಪತಿಯವರನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರು ನೇಮಕ ಮಾಡತಕ್ಕದ್ದು.

(5) ಕುಲಪತಿಯವರು ನಾಲ್ಕು ವರ್ಷಗಳವರೆಗೆ ಅಥವಾ ಅವರಿಗೆ ಅರವತ್ತೈದು ವರ್ಷಗಳಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಪದಧಾರಣೆಯನ್ನು ಮಾಡಿರತಕ್ಕದ್ದು. ಅವರು ಪುನರ್ ನೇಮಕಾತಿಗೆ ಅರ್ಹರಾಗಿರತಕ್ಕದ್ದಲ್ಲ.

(6) ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಅವುಗಳನ್ನು ಅವರು ಕುಲಪತಿಯಾಗಿ ನೇಮಕವಾದ ತರುವಾಯ ಅವರಿಗೆ ಅನಾನುಕೂಲವಾಗುವಂತೆ ಬದಲಾಯಿಸತಕ್ಕದಲ್ಲ.

(7) ಕುಲಪತಿಯವರು ಕುಲಾಧಿಪತಿಯವರಿಗೆ ತನ್ನ ಕೈ ಬರಹದಲ್ಲಿ ರಾಜಿನಾಮೆ ಪತ್ರವನ್ನು ಬರೆದು ತಾನು ಬಿಡುಗಡೆಗೊಳ್ಳಲು ಇಚ್ಛಿಸುವ ದಿನಾಂಕದಿಂದ ಅರವತ್ತು ದಿನಗಳಿಗೆ ಮೊದಲು ಅದನ್ನು ಕುಲಾಧಿಪತಿಯವರಿಗೆ ಕಳುಹಿಸುವ ಮೂಲಕ ತನ್ನ ಸ್ಥಾನವನ್ನು ತ್ಯಜಿಸಬಹುದು ಆದರೆ ಕುಲಾಧಿಪತಿಯವರು ಅವರನ್ನು ಅದಕ್ಕೂ ಮೊದಲೇ ಬಿಡುಗಡೆಗೊಳಿಸಬಹುದು.

(8) ಕುಲಪತಿಯವರ ಹುದ್ದೆಯು ತಾತ್ಕಾಲಿಕವಾಗಿ ಖಾಲಿ ಯಾದರೆ ಅಥವಾ ಅವರ ರಜೆಯ ಕಾರಣದಿಂದಾಗಿ ಗೈರುಹಾಜರಾದಲ್ಲಿ

ಅಥವಾ ಇನ್ನಾವುದೇ ಕಾರಣಗಳಿಗಾಗಿ ಖಾಲಿಯಾದರೆ ಶಿಕ್ಷಣ ನಿರ್ದೇಶಕರು ಮತ್ತು ಶಿಕ್ಷಣ ನಿರ್ದೇಶಕರ ಗೈರು ಹಾಜರಿಯಲ್ಲಿ, ಕುಲಸಚಿವರು ಅಥವಾ ಕೇಂದ್ರ ಕಾರ್ಯಸ್ಥಾನದಲ್ಲಿರುವ ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ನಿರ್ದೇಶಕರು, ಕುಲಾಧಿಪತಿಯವರ ಅನುಮೋದನೆ ಪಡೆದು ಕುಲಪತಿಯವರ ಕರ್ತವ್ಯಗಳನ್ನು ನಿರ್ವಹಿಸಬಹುದು. ಆದರೆ ಅವರ ಪದಾವಧಿಯು ಆರು ತಿಂಗಳುಗಳನ್ನು ಮೀರತಕ್ಕದ್ದಲ್ಲ.

(9) ಕುಲಪತಿಯವರನ್ನು, ಅವರ ದುರ್ನಡತೆಯ ಕಾರಣದ ಮೇಲೆ ಅಥವಾ ಅಸಮರ್ಥತೆಯ ಕಾರಣದ ಮೇಲೆ ಅಥವಾ ಕುಲಪತಿಯವರು ತಮ್ಮ ಪದದಲ್ಲಿ ಮುಂದುವರಿಯುವುದರಿಂದ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ದಕ್ಕೆ ಉಂಟಾಗುತ್ತದೆಂದು ಕುಲಾಧಿಪತಿ ಯವರು ಮನಗಂಡರೆ ಆಗ ಕುಲಾಧಿಪತಿಯವರು ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯವರನ್ನು ಅಥವಾ ನ್ಯಾಯಮೂರ್ತಿ ಆಗಿದ್ದವರನ್ನು ನಾಮನಿರ್ದೇಶನ ಮಾಡಿ ಅವರಿಂದ ಯುಕ್ತ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಆ ವಿಚಾರಣೆಯಲ್ಲಿ ಕುಲಪತಿಯವರಿಗೆ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿ, ಕುಲಾಧಿಪತಿಯವರು ಹೊರಡಿಸಿದ ಆದೇಶದ ಮೂಲಕವಾಗಿ ಹೊರತು ಅನ್ಯಥಾ ಕುಲಪತಿಯವರನ್ನು ಅವರ ಸ್ಥಾನದಿಂದ ತೆಗೆಯತಕ್ಕದ್ದಲ್ಲ.

28. ವಿಶೇಷಾಧಿಕಾರಿ.– (1) ಸರ್ಕಾರವು ಒಬ್ಬ ಅಧಿಕಾರಿಯನ್ನು ವಿಶೇಷಾಧಿಕಾರಿಯಾಗಿ ನೇಮಕ ಮಾಡತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ವಿಶೇಷಾಧಿಕಾರಿಯು ವಿಶ್ವವಿದ್ಯಾಲಯದ ಸ್ಥಾಪನೆಗೆ ಅವಶ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವಿಶ್ವವಿದ್ಯಾಲಯದ ಕುಲಪತಿಗಳ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) ವಿಶೇಷಾಧಿಕಾರಿಯು ಮೊದಲನೇ ಕುಲಪತಿಯವರು ನೇಮಕವಾಗುವವರೆಗೆ ಪದಧಾರಣೆಯನ್ನು ಮಾಡಿರುತ್ತಾರೆ.

29. ಕುಲಪತಿಯವರ ಅಧಿಕಾರಗಳು ಮತ್ತು ಕರ್ತವ್ಯಗಳು.– (1) ಕುಲಪತಿಯವರು ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಾಹಕ ಶೈಕ್ಷಣಿಕ ಅಧಿಕಾರಿ ಮತ್ತು ಮಂಡಳಿಯ, ವಿದ್ಯಾವಿಷಯಕ ಪರಿಷತ್ತಿನ ಮತ್ತು ಇತರ

ಪ್ರಾಧಿಕಾರಗಳ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು ಹಾಗೂ ಕುಲಾಧಿಪತಿಯವರ ಮತ್ತು ಸಹಕುಲಾಧಿಪತಿಯವರ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಹಾಗೂ ಪದವಿಗಳನ್ನು ಪಡೆಯಲು ಅರ್ಹರಾದವರಿಗೆ ಪದವಿಗಳನ್ನು ಪ್ರದಾನ ಮಾಡತಕ್ಕದ್ದು.

(2) ಕುಲಪತಿಯವರು ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಶಿಸ್ತನ್ನು ಕಾಪಾಡುವುದಕ್ಕೆ ಜವಾಬ್ದಾರರಾಗಿರತಕ್ಕದ್ದು.

(3) ಕುಲಪತಿಯವರು ಮಂಡಳಿಯ, ವಿದ್ಯಾವಿಷಯಕ ಪರಿಷತ್ತಿನ, ಸಂಶೋಧನಾ ಪರಿಷತ್ತಿನ ವಿಸ್ತರಣಾ ಶಿಕ್ಷಣ ಪರಿಷತ್ತಿನ ಸಭೆಗಳನ್ನು ಏರ್ಪಡಿಸತಕ್ಕದ್ದು.

(4) ಕುಲಪತಿಯವರು ಈ ಅಧಿನಿಯಮದ, ಶಾಸನಗಳ ಮತ್ತು ವಿನಿಯಮಗಳ ಉಪಬಂಧಗಳು ಸರಿಯಾಗಿ ಪಾಲನೆಯಾಗುವಂತೆ ನೋಡಿಕೊಳ್ಳತಕ್ಕದ್ದು.

(5) ಕುಲಪತಿಯವರು ವಾರ್ಷಿಕ ಹಣಕಾಸು ಅಂದಾಜುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಳಿಗೆ ಮಂಡಿಸುವುದಕ್ಕೆ ಹೊಣೆಗಾರ ರಾಗಿರತಕ್ಕದ್ದು.

(6) ಕುಲಪತಿಯವರು ಯಾವುದೇ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ತಕ್ಷಣ ಕ್ರಮಕೈಗೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟಲ್ಲಿ ಅವರು ಅಂಥ ಯಾವುದೇ ಕ್ರಮವನ್ನು ಕೈಗೊಳ್ಳಬಹುದು. ಅಂತಹ ಸಂದರ್ಭದಲ್ಲಿ ಅವರು ತದನಂತರ ತಾನು ಕೈಗೊಂಡ ಕ್ರಮಗಳ ಬಗ್ಗೆ, ಆದಷ್ಟು ಬೇಗನೆ ಒಂದು ವರದಿಯನ್ನು ಸಾಮಾನ್ಯವಾಗಿ ಅಂತಹ ವಿಷಯ ಗಳನ್ನು ನಿರ್ವಹಿಸುವ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ಸಲ್ಲಿಸತಕ್ಕದ್ದು. ಕುಲಪತಿಯವರ ಕ್ರಮವನ್ನು ಆ ಪ್ರಾಧಿಕಾರ ಅಥವಾ ನಿಕಾಯವು ಒಪ್ಪಿಕೊಳ್ಳದಿದ್ದಲ್ಲಿ ಅಂತಹ ವಿಷಯವನ್ನು ಕುಲಾಧಿಪತಿಯವರಿಗೆ ಕಳುಹಿ ಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(7) ಕುಲಪತಿಯವರು ಕೈಗೊಂಡ ಕ್ರಮದಿಂದಾಗಿ ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಯಾವುದೇ ವ್ಯಕ್ತಿಗೆ ತೊಂದರೆ ಉಂಟಾದಲ್ಲಿ, ಅಂತಹ ವ್ಯಕ್ತಿಯು ಕೈಗೊಂಡ ಕ್ರಮದ ಬಗ್ಗೆ ನೋಟೀಸನ್ನು

ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಮಂಡಳಿಗೆ ಅಪೀಲನ್ನು ಸಲ್ಲಿಸಬಹುದು.

(8) ಮಂಡಳಿಯ ಮೇಲ್ಮನವಿ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಅಂತಹ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕುಲಾಧಿಪತಿಯವರಿಗೆ ಎರಡನೇ ಅಪೀಲನ್ನು ಸಲ್ಲಿಸಬಹುದು ಮತ್ತು ಅಂತಹ ಅಪೀಲಿನ ಮೇಲೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(9) ಕುಲಪತಿಯವರು, (8)ನೇ ಉಪ ಪ್ರಕರಣದಡಿಯಲ್ಲಿಯ ತೀರ್ಮಾನವನ್ನು ಹೊರತುಪಡಿಸಿ ಮಂಡಳಿಯ ತೀರ್ಮಾನವು ಅಧಿನಿಯಮಗಳ ಮತ್ತು ಶಾಸನಗಳ ಉಪಬಂಧಗಳಿಗೆ ಸರ್ಕಾರದ ವಿನಿಯಮಗಳಿಗೆ ಅನುಗುಣವಾಗಿಲ್ಲವೆಂದು, ಹಾಗೂ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಪೂರಕವಾಗಿ ಇಲ್ಲವೆಂದು ಅಭಿಪ್ರಾಯಪಟ್ಟಲ್ಲಿ ಆತನು ಹದಿನೈದು ದಿನಗಳೊಳಗಾಗಿ ಅದನ್ನು ಕುಲಾಧಿಪತಿಯವರಿಗೆ ಅವರ ತೀರ್ಮಾನವನ್ನು ಕೋರಿ ಕಳುಹಿಸಿಕೊಡತಕ್ಕದ್ದು. ಅದರ ಮೇಲೆ ಕುಲಾಧಿಪತಿಯವರು ಕೈಗೊಂಡ ತೀರ್ಮಾನವು ಅಂತಿಮವಾಗಿರತಕ್ಕದ್ದು. ಕುಲಾಧಿಪತಿಯವರು ಹಾಗೆ ಕಳುಹಿಸಿಕೊಟ್ಟ ವಿಷಯವನ್ನು ವಿಲೆಮಾಡುವವರೆಗೆ ಮಂಡಳಿಯ ತೀರ್ಮಾನವನ್ನು ಜಾರಿಗೊಳಿಸತಕ್ಕದ್ದಲ್ಲ.

(10) ಮೇಲಿನ ಉಪ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಕುಲಪತಿಯವರು ವಿಶ್ವವಿದ್ಯಾಲಯದ ಅಧಿಕಾರಿಗಳು, ಅಧ್ಯಾಪಕರು ಹಾಗೂ ಇತರ ನೌಕರರ ನೇಮಕಾತಿಗಳು, ಮುಂಬಡ್ತಿಗಳು ಮತ್ತು ವಜಾ ವಿಷಯಗಳಿಗೆ ಸಂಬಂಧಿಸಿದ ಮಂಡಳಿಯ ತೀರ್ಮಾನಗಳನ್ನು ಜಾರಿಗೊಳಿಸತಕ್ಕದು.

(11) ಕುಲಪತಿಯವರು ವಿಶ್ವವಿದ್ಯಾಲಯದ ವ್ಯವಹರಣೆಗಳ ಸೂಕ್ತ ಆಡಳಿತಕ್ಕೆ ಮತ್ತು ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಶಿಕ್ಷಣ ಇವುಗಳ ನಿಕಟ ಸಹವರ್ತನೆ ಮತ್ತು ಒಗ್ಗೂಡುವಿಕೆಗೆ ಜವಾಬ್ದಾರನಾ ಗಿರತಕ್ಕದ್ದು.

(12) ಕುಲಪತಿಯವರು ಈ ಅಧಿನಿಯಮ ಮತ್ತು ಶಾಸನಗಳ ಉಪಬಂಧಗಳ ಅಡಿಯಲ್ಲಿ ತಮಗೆ ಪ್ರದಾನ ಮಾಡಿದ ಅಥವಾ ವಹಿಸಿದಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

30. ವಿಶ್ವವಿದ್ಯಾಲಯದ ಇತರ ಅಧಿಕಾರಿಗಳ ಸಾಮಾನ್ಯ ನಿಬಂಧನೆಗಳು ಮತ್ತು ಷರತ್ತುಗಳು.– (1) 24ನೇ ಪ್ರಕರಣದ (4) ರಿಂದ (9)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ನಿಯಮಿಸಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮಂಡಳಿಯ ಅನುಮೋದನೆಯೊಂದಿಗೆ ಕುಲಪತಿಯವರು ನೇಮಿಸತಕ್ಕದ್ದು:

ಪರಂತು, ಕುಲಪತಿಯವರು ಅಂಥ ಅಧಿಕಾರಿಗಳ ನೇಮಕಾತಿಗಳನ್ನು ವಿಶ್ವವಿದ್ಯಾಲಯದ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮಾಹಿತಿ ಒದಗಿಸಿ ತಾತ್ಕಾಲಿಕ ಕ್ರಮವಾಗಿ ಮಾಡಬಹುದು.

(2) 24ನೇ ಪ್ರಕರಣದ (4) ರಿಂದ (10)ರ ವರೆಗಿನ ಖಂಡಗಳಲ್ಲಿ ಉಲ್ಲೇಖಿಸಿದ ವಿಶ್ವವಿದ್ಯಾಲಯದ ಅಧಿಕಾರಿಗಳು ತಮ್ಮ ವೇತನ, ಭತ್ಯೆಗಳು, ಇತರ ಸೇವಾ ಷರತ್ತುಗಳನ್ನು ಕುರಿತು ಶಾಸನಗಳು ಅಥವಾ ಇತರ ಆದೇಶಗಳಲ್ಲಿ ವಿನಿಯಮಿಸಲಾದುದನ್ನು ಉಳಿದು ವಿಶ್ವವಿದ್ಯಾಲಯದ ಯಾವುದೇ ಕೆಲಸಕ್ಕಾಗಿ ಅವರಿಗೆ ಯಾವುದೇ ಸಂಭಾವನೆಯನ್ನು ಕೊಡಮಾಡತಕ್ಕದ್ದಲ್ಲ ಅಥವಾ ಅವರು ಸ್ವೀಕರಿಸತಕ್ಕದ್ದಲ್ಲ.

31. ನಿರ್ದೇಶಕರುಗಳು, ಡೀನ್‌ಗಳು, ಕುಲಸಚಿವರು, ಲೆಕ್ಕ ನಿಯಂತ್ರಕರು ಇತ್ಯಾದಿ.–

(1) ಶಿಕ್ಷಣ ನಿರ್ದೇಶಕರು:

(ಎ) ಇವರು ವಿಶ್ವವಿದ್ಯಾಲಯದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸಲು ಜವಾಬ್ದಾರರಾಗಿರತಕ್ಕದ್ದು. ವಿಶ್ವವಿದ್ಯಾಲಯದಲ್ಲಿನ ಕಾರ್ಯನೀತಿ ವಿಷಯಗಳ ಮತ್ತು ನಿವಾಸಿ ಬೋಧನೆ ಬಗೆಗಿನ ಪದ್ಧತಿಗೆ ಮತ್ತು ಶೈಕ್ಷಣಿಕ ತಂತ್ರಜ್ಞಾನ ಮತ್ತು ಅಧ್ಯಾಪಕರ ತರಬೇತಿ ಕಾರ್ಯಕ್ರಮಗಳ ಬಗ್ಗೆ ಕಾರ್ಯನಿರ್ವಹಿಸುತ್ತಾರೆ. ಇವರು ಪರೀಕ್ಷೆಯ ಮೇಲ್ವಿಚಾರಣೆಯನ್ನೂ ಮಾಡತಕ್ಕದ್ದು;

(ಬಿ) ವಿದ್ಯಾವಿಷಯಕ ಪರಿಷತ್ತು, ಪದವಿ ಕಾರ್ಯಕ್ರಮಗಳ ಅಧ್ಯಯನಗಳ ಮಂಡಳಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಅಧ್ಯಯನ ಮಂಡಳಿಗಳ

ಶಾಶ್ವತವಾದ ದಾಖಲೆಗಳನ್ನು ನಿರ್ವಹಿಸಲು ಮತ್ತು ವಿದ್ಯಾರ್ಥಿಗಳ ಶಿಸ್ತನ್ನು ಕಾಪಾಡಿಕೊಂಡು ಬರಲು ಜವಾಬ್ದಾರರಾಗಿರತಕ್ಕದ್ದು;

(ಸಿ) ವಿದ್ಯಾವಿಷಯಕ ಪರಿಷತ್ತಿನ ಸದಸ್ಯ ಕಾರ್ಯದರ್ಶಿಯಾಗಿ ಮತ್ತು ಪದವಿ ಹಾಗೂ ಸ್ನಾತಕೋತ್ತರ ಕಾರ್ಯಕ್ರಮಗಳ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸತಕ್ಕದ್ದು;

(ಡಿ) ವಿಶ್ವವಿದ್ಯಾಲಯದಲ್ಲಿ ಎಲ್ಲಾ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳ ಸಮನ್ವಯ ನಡೆಸತಕ್ಕದ್ದು ಮತ್ತು ಪುನರಾವಲೋಕಿಸತಕ್ಕದ್ದು;

(ಇ) ಮಾಹಿತಿ ಕೇಂದ್ರ ಮತ್ತು ವಿಶ್ವವಿದ್ಯಾಲಯದ ಪ್ರಕಟಣೆ ವಿಭಾಗದ ಚಟುವಟಿಕೆಗಳ ಮೇಲ್ವಿಚಾರಣೆ ಮಾಡತಕ್ಕದ್ದು.

(2) **ಸಂಶೋಧನಾ ನಿರ್ದೇಶಕರು**: ಇವರು 51ನೇ ಪ್ರಕರಣದಲ್ಲಿ ಹೇಳಿದಂತೆ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಕಾರ್ಯಕ್ರಮಗಳ ನಿರ್ದೇಶನ ಮತ್ತು ಸಮನ್ವಯ ಮತ್ತು ಸಂಶೋಧನೆ ಕೇಂದ್ರಗಳ ದಕ್ಷ ಕಾರ್ಯನಿರ್ವಹಣೆಗೆ ಜವಾಬ್ದಾರರಾಗಿರತಕ್ಕದ್ದು.

(3) **ವಿಸ್ತರಣಾ ನಿರ್ದೇಶಕರು:** ಇವರು 52ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ತೋಟಗಾರಿಕೆ ವಿಸ್ತರಣಾ ಶಿಕ್ಷಣದ ಕಾರ್ಯನಿರ್ವಹಣೆಗೆ ಜವಾಬ್ದಾರರಾಗಿರತಕ್ಕದ್ದು.

(4) **ಡೀನ್:** ಇವರು ಕಾಲೇಜಿನ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಕಾಲೇಜಿನಲ್ಲಿ ಕಲಿಸುವ, ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಚಟುವಟಿಕೆಗಳ ಆಡಳಿತಕ್ಕೆ ಮತ್ತು ಅನುಷ್ಠಾನಕ್ಕೆ ಜವಾಬ್ದಾರರಾಗಿರತಕ್ಕದ್ದು.

(5) **ಸ್ನಾತಕೋತ್ತರ ಅಧ್ಯಯನಗಳ ಡೀನ್:** ಇವರು ಸ್ನಾತಕೋತ್ತರ ಅಧ್ಯಯನಗಳು ಮತ್ತು ಡಿಪ್ಲೊಮೊಗಳನ್ನೊಳಗೊಂಡಂತೆ ಇತರ ಶೈಕ್ಷಣಿಕ ಕಾರ್ಯಕ್ರಮಗಳ ಆಡಳಿತ ಮತ್ತು ಅನುಷ್ಠಾನಕ್ಕೆ ಜವಾಬ್ದಾರರಾಗಿರತಕ್ಕದ್ದು.

(6) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್:

(ಎ) ಇವರು ವಿದ್ಯಾರ್ಥಿಗಳ ಸಲಹೆ ನೀಡಿಕೆ ಮತ್ತು ಕೌನ್ಸಿಲಿಂಗ್ ಕಾರ್ಯಕ್ರಮವನ್ನು ಯೋಜಿಸುವುದು ಮತ್ತು ನಿರ್ದೇಶನ ಮಾಡುವುದು ಮತ್ತು ವಿಶ್ವವಿದ್ಯಾಲಯದ ಪದವೀಧರರಿಗೆ ಉದ್ಯೋಗ ದೊರಕಿಸಿಕೊಡಲು ಸಹಾಯ ಮಾಡುವುದಕ್ಕಾಗಿ ಭಾವೀ ಉದ್ಯೋಗದಾತರು ಮತ್ತು ಉದ್ಯೋಗ ಏಜೆನ್ಸಿಗಳ ಸಹಕಾರವನ್ನು ಪಡೆದುಕೊಳ್ಳುವುದು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಪ್ರೋತ್ಸಾಹಿಸತಕ್ಕದ್ದು;

(ಬಿ) ಕ್ರೀಡೆಗಳು, ಸಾಂಸ್ಕೃತಿಕ ಮತ್ತು ಇತರ ಮನರಂಜನಾ ಚಟುವಟಿಕೆಗಳು, ರಾಷ್ಟ್ರೀಯ ಯುವಸೇನಾದಳ (ಎನ್.ಸಿ.ಸಿ.), ಎನ್‌ಎಸ್‌ಎಸ್, ಮಾತುಗಾರಿಕೆ ಕೌಶಲ್ಯ ಸುಧಾರಣೆ ಮುಂತಾದ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳು ಹಾಗೂ ಅದೇ ತರಹದ ಇತರ ಚಟುವಟಿಕೆಗಳನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಯೋಜಿಸುವುದು ಮತ್ತು ಏರ್ಪಡಿಸುವುದು.

(ಸಿ) ವಿದ್ಯಾರ್ಥಿ ನಿಲಯ ಹಾಗೂ ಕೆಫೆಟೆರಿಯಾಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆಯಲ್ಲಿ ಕ್ರೀಡೆಗಳನ್ನು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಡೀನ್‌ಗಳಿಗೆ ಸಹಾಯ ಮಾಡತಕ್ಕದ್ದು;

(ಡಿ) ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ವೈದ್ಯಕೀಯ ಮತ್ತು ಆರೋಗ್ಯ ಸೇವೆಗಳು ಮತ್ತು ಇತರ ಕ್ಷೇಮಾಭಿವೃದ್ಧಿ ಕ್ರಮಗಳ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ನಿಯಂತ್ರಿಸತಕ್ಕದ್ದು.

(7) ಕುಲಸಚಿವರು:

(ಎ) ಇವರು ವಿಶ್ವವಿದ್ಯಾಲಯದ ಪ್ರೊಫೆಸರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ತೋಟಗಾರಿಕೆ ವಿಜ್ಞಾನಗಳ ಕ್ಷೇತ್ರದ ಒಬ್ಬ ವಿದ್ವಾಂಸರಾಗಿರತಕ್ಕದ್ದು ಅಥವಾ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿಯಾಗಿರತಕ್ಕದ್ದು;

(ಬಿ) ವ್ಯವಸ್ಥಾಪನಾ ಮಂಡಳಿಯ, ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಎಲ್ಲಾ ಪರಿಷತ್ತುಗಳಿಗೆ ಇವರು ಖಾಯಂ ಆಹ್ವಾನಿತರಾಗಿರತಕ್ಕದ್ದು.

(ಸಿ) ವಿಶ್ವವಿದ್ಯಾಲಯದ ದಾಖಲೆಗಳು ಮತ್ತು ಸಾಮಾನ್ಯ ಮೊಹರಿನ ಕ್ರಮಬದ್ಧ ಅಭಿರಕ್ಷೆಗೆ ಜವಾಬ್ದಾರರಾಗಿರತಕ್ಕದ್ದು:

(ಡಿ) ನಿಯಮಿಸಲಾದಂತೆ ವಿಶ್ವವಿದ್ಯಾಲಯದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮಾನ್ಯ ಆಡಳಿತ ನಡೆಸಲು ಜವಾಬ್ದಾರರಾಗಿರತಕ್ಕದ್ದು.

(8) ವಿಶ್ವವಿದ್ಯಾಲಯದ ಗ್ರಂಥಪಾಲಕ.–

ವಿಶ್ವವಿದ್ಯಾಲಯದ ಗ್ರಂಥಾಲಯ ಮಾಹಿತಿ ಪದ್ಧತಿಯ ನಿರ್ವಹಣೆ ಮತ್ತು ವ್ಯವಸ್ಥಾಪನೆಗೆ ಮತ್ತು ವಿಶ್ವವಿದ್ಯಾಲಯದ ಎಲ್ಲಾ ಘಟಕಗಳ ಗ್ರಂಥಾಲಯ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಲು ಮತ್ತು ಸಮನ್ವಯ ನಡೆಸುವುದಕ್ಕೆ ಇವರು ಜವಾಬ್ದಾರರಾಗಿರತಕ್ಕದ್ದು.

ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, 24ನೇ ಪ್ರಕರಣದ (4) ರಿಂದ (9)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ವಿಶ್ವವಿದ್ಯಾಲಯದ ಅಧಿಕಾರಿಗಳು, ಕುಲಪತಿಯವರು ಕಾಲಕಾಲಕ್ಕೆ ನಿಯಮಿಸಬಹುದಾದ ಅಥವಾ ಅವರಿಗೆ ವಹಿಸಿಕೊಡಬಹುದಾದಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(9) ಲೆಕ್ಕ ನಿಯಂತ್ರಕರು.–

(ಎ) ಲೆಕ್ಕ ನಿಯಂತ್ರಕರು, ವಿಶ್ವವಿದ್ಯಾಲಯದ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಇವರು, ಕುಲಪತಿಯವರು ವ್ಯವಸ್ಥಾಪನಾ ಮಂಡಳಿಗೆ ಶಿಫಾರಸು ಮಾಡಿದ ಲೆಕ್ಕ ಪರಿಶೋಧನೆ, ಲೆಕ್ಕಪತ್ರ ನಿರ್ವಹಣೆ ಮತ್ತು ಹಣಕಾಸು ಆಡಳಿತದಲ್ಲಿ ಅನುಭವವುಳ್ಳ ರಾಜ್ಯ ಲೆಕ್ಕಪತ್ರ ಇಲಾಖೆಯ ಜಂಟಿ ನಿಯಂತ್ರಕರ ಕೇಡರ್‌ನ ಅಧಿಕಾರಿಗಳು ಅಥವಾ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಉಪಮಹಾಲೇಖಾಪಾಲರ ದರ್ಜೆಯ ಒಬ್ಬ ಅಧಿಕಾರಿ – ಇವರುಗಳ ಹೆಸರುಗಳುಳ್ಳ ಮೂವರಿಗೆ ಕಡಿಮೆಯಿಲ್ಲದ ವ್ಯಕ್ತಿಗಳ ಒಂದು ಹೆಸರುಪಟ್ಟಿಯಿಂದ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿದ ಮತ್ತು ಕುಲಪತಿಯವರು ನೇಮಿಸಿದ ಅಧಿಕಾರಿಯಾಗಿರತಕ್ಕದ್ದು. ಹೆಸರು

ಪಟ್ಟಿಯಲ್ಲಿರುವ ಯಾರನ್ನೂ ವ್ಯವಸ್ಥಾಪನಾ ಮಂಡಳಿಯು ಮೂವತ್ತು ದಿನಗಳೊಳಗೆ ಅನುಮೋದಿಸದಿದ್ದಲ್ಲಿ, ಕುಲಾಧಿಪತಿಯವರು ಕುಲಪತಿಯ ವರೊಡನೆ ಸಮಾಲೋಚಿಸಿ, ಲೆಕ್ಕ ನಿಯಂತ್ರಕರಾಗಲು ಸೂಕ್ತ ವ್ಯಕ್ತಿಯೆಂದು ತಾವು ಭಾವಿಸುವಂಥ ಇತರ ವ್ಯಕ್ತಿಯನ್ನು ಲೆಕ್ಕ ನಿಯಂತ್ರಕರನ್ನಾಗಿ ನೇಮಿಸಬಹುದು.

(ಬಿ) ಲೆಕ್ಕ ನಿಯಂತ್ರಕರ ನೇಮಕಾತಿಯ ಅವಧಿಯು ನಾಲ್ಕು ವರ್ಷಗಳಾಗಿರತಕ್ಕದ್ದು.

(ಸಿ) ಲೆಕ್ಕ ನಿಯಂತ್ರಕರು, ಹಣಕಾಸು ಸಮಿತಿಯ ನಿಯಂತ್ರಣ ಕ್ಕೊಳಪಟ್ಟು, ಶಾಸನಗಳು ಮತ್ತು ವಿನಿಯಮಗಳಲ್ಲಿ ನಿಯಮಿಸಬಹುದಾದ ಅಥವಾ ಕುಲಪತಿಯವರು ಅಥವಾ ಕುಲಸಚಿವರು ಕಾಲದಿಂದ ಕಾಲಕ್ಕೆ ಅಗತ್ಯ ಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವರು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯರಾಗಿರತಕ್ಕದ್ದು ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

ಅಧ್ಯಾಯ – V

ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ

32. ಶಿಕ್ಷಣ.– (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯದಲ್ಲಿ ಶಿಕ್ಷಣವು ನಿಯಮಿಸಲಾದಂತೆ ತೋಟಗಾರಿಕೆ ಹಾಗೂ ಅದಕ್ಕೆ ಸಂಬಂಧಿಸಿದ ವಿಜ್ಞಾನಗಳ ವಿಷಯದಲ್ಲಿ ಪದವಿಯ, ಸ್ನಾತಕೋತ್ತರ ಪದವಿಯ ಮತ್ತು ಡಾಕ್ಟರಲ್ ಡಿಗ್ರಿ ಕಾರ್ಯಕ್ರಮಗಳು ಮತ್ತು ಅಲ್ಪಾವಧಿ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸುಗಳನ್ನು ಒಳಗೊಂಡಿರತಕ್ಕದ್ದು.

(2) ಈ ಶೈಕ್ಷಣಿಕ ಕಾರ್ಯಕ್ರಮಗಳು ರಾಜ್ಯ ಮತ್ತು ರಾಷ್ಟ್ರೀಯ ಕಾರ್ಯನೀತಿಗಳಿಗೆ ಅನುಗುಣವಾಗಿರತಕ್ಕದ್ದು.

(3) ವಿಶ್ವವಿದ್ಯಾಲಯವು ಇ–ಕಲಿಕೆ, ವಿತರಿತ/ದೂರ ಶಿಕ್ಷಣ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಆಧಾರಿತ ಜ್ಞಾನವನ್ನು ಹಂಚಿಕೊಳ್ಳುವುದು ಈ ಸಾಧನಗಳನ್ನು ಬಳಸಿಕೊಳ್ಳತಕ್ಕದ್ದು.

(4) ಸಕ್ಷಮ ಮತ್ತು ಕುಶಲ ಪದವೀಧರರನ್ನು ಮತ್ತು ಸ್ನಾತಕೋತ್ತರ ಪದವೀಧರರನ್ನು ತಯಾರಿಸುವ ಗುರಿಯನ್ನು ತೋಟಗಾರಿಕೆ ಶಿಕ್ಷಣ ಕಾರ್ಯಕ್ರಮಗಳು ಹೊಂದಿರತಕ್ಕದ್ದು.

33. **ಸಂಶೋಧನೆ.**- (1) ಈ ಅಧಿನಿಯಮ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯವು ತೋಟಗಾರಿಕೆ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಾರ್ಯತಂತ್ರದ, ಮೂಲಭೂತ ಮತ್ತು ಆನ್ವಯಿಕ ಸಂಶೋಧನೆಗಳನ್ನು ಮಾಡತಕ್ಕದ್ದು.

(2) ವಿಶ್ವವಿದ್ಯಾಲಯವು ತನ್ನ ಸಂಶೋಧನಾ ಸಂಸ್ಥೆಯ ಮೂಲಕ ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುವ ತೋಟಗಾರಿಕೆ ಮತ್ತಿತರ ಸಂಬಂಧಪಟ್ಟ ಶಾಖೆಗಳಲ್ಲಿನ ಸಂಶೋಧನಾ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ಹೊಂದಿರುವ ಪ್ರಧಾನ ಏಜೆನ್ಸಿಯಾಗಿರತಕ್ಕದ್ದು.

(3) ವಿಶ್ವವಿದ್ಯಾಲಯವು ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಸಂಶೋಧನೆಯೂ ಸೇರಿದಂತೆ ಸಂಶೋಧನೆಗಳನ್ನು ನಡೆಸುವುದಕ್ಕೆ ಬೇರೆ ಬೇರೆ ಕೃಷಿ-ವಾತಾವರಣ ವಲಯಗಳಲ್ಲಿ ಸರ್ಕಾರದ ಸಹಮತಿಯೊಂದಿಗೆ ಪ್ರಾದೇಶಿಕ ವಲಯ ಸಂಶೋಧನಾ ಕೇಂದ್ರಗಳು ಮತ್ತು ಉಪಕೇಂದ್ರಗಳನ್ನು ಸ್ಥಾಪಿಸಬಹುದು.

34. **ವಿಸ್ತರಣಾ ಶಿಕ್ಷಣ.**- (1) ತಾಂತ್ರಿಕ ಮೌಲ್ಯಮಾಪನ ಮತ್ತು ಪರಿಷ್ಕರಣೆಯಾಗುವಂತೆ ನೋಡಿಕೊಳ್ಳಲು ಮತ್ತು ಸಂಶೋಧನೆಗಳಲ್ಲಿ ಕಂಡುಬಂದ ವಿಚಾರಗಳನ್ನು ಆಧರಿಸಿದ ತಂತ್ರಜ್ಞಾನವನ್ನು ತ್ವರಿತ ತೋಟ ಗಾರಿಕೆ ಬೆಳವಣಿಗೆಗಾಗಿ ರೈತರು ಮತ್ತು ಇತರರು ಅಳವಡಿಸಿಕೊಳ್ಳುವುದಕ್ಕೆ ಅವಕಾಶಕಲ್ಪಿಸಲು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲ ಯದಲ್ಲಿ ಈ ಅಧಿನಿಯಮ ಮತ್ತು ಶಾಸನಗಳಿಗೊಳಪಟ್ಟು ಸ್ಥಾಪಿಸತಕ್ಕದ್ದು. ಈ ವಿಭಾಗವು ವಿವಿಧ ಹಿತಾಸಕ್ತಿದಾರರ ಅನುಕೂಲಕ್ಕಾಗಿ ಪ್ರಾತ್ಯಕ್ಷಿಕೆಗಳನ್ನು ಮತ್ತು ತರಬೇತಿಯನ್ನು ನಡೆಸತಕ್ಕದ್ದು. ಈ ವಿಸ್ತರಣಾ ಕಾರ್ಯವನ್ನು ವಿಶ್ವವಿದ್ಯಾಲಯದ ವಿವಿಧ ಘಟಕಗಳು ಮತ್ತು ಕೇಂದ್ರ ಹಾಗೂ ರಾಜ್ಯದ ಇತರ ಸಮುಚಿತ ಏಜೆಂಟ್‌ಗಳೊಂದಿಗೆ ಸಮನ್ವಯದಿಂದ ಮಾಡತಕ್ಕದ್ದು.

(2) ರಾಜ್ಯದಲ್ಲಿ ವಿಸ್ತರಣಾ ತೋಟಗಾರಿಕೆ ಮಾದರಿಗಳನ್ನು

35. ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣಗಳ ಸಮ್ಮಿಲನ.– (1) ವಿಶ್ವವಿದ್ಯಾಲಯದ ಯುಕ್ತ ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ವಿಶ್ವವಿದ್ಯಾಲಯದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದ ಚಟುವಟಿಕೆಗಳು ಸಂಪೂರ್ಣವಾಗಿ ಬೆರೆತು ಕೆಲಸಮಾಡುವುದಕ್ಕೆ ಅವಶ್ಯವಾಗಬಹುದಾದ ಕ್ರಮಗಳನ್ನು ತೆಗೆದುಕೊಳ್ಳಲು ಕುಲಪತಿಯವರು ಜವಾಬ್ದಾರರಾಗಿರತಕ್ಕದ್ದು.

(2) ಬೋಧಕರ ಕೇಡರ್‌ನಲ್ಲಿರತಕ್ಕ ಪ್ರತಿಯೊಬ್ಬ ಫ್ಯಾಕಲ್ಟಿ ಸದಸ್ಯರು ಬೋಧನೆಯ ಕಾರ್ಯದ ಜೊತೆಗೆ ತಮ್ಮ ಶೇಕಡ ಮೂವತ್ತರಷ್ಟು ಸಮಯವನ್ನು ಸಂಶೋಧನೆ ಮತ್ತು ವಿಸ್ತರಣೆ ಶಿಕ್ಷಣ ಕೈಗೊಳ್ಳಲು ಮೀಸಲಿಡತಕ್ಕದ್ದು. ಹಾಗೆಯೇ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದಲ್ಲಿರತಕ್ಕ ಫ್ಯಾಕಲ್ಟಿ ಸದಸ್ಯರು ಸಂದರ್ಭಾನುಸಾರ ಬೋಧನೆ ಅಥವಾ ವಿಸ್ತರಣೆ ಅಥವಾ ಸಂಶೋಧನೆಯ ಕೆಲಸಕ್ಕೆ ತಮ್ಮ ಶೇಕಡಾ ಮೂವತ್ತರಷ್ಟು ಸಮಯವನ್ನು ವಿನಿಯೋಗಿಸತಕ್ಕದ್ದು.

(3) ಕಾಲೇಜಿನಲ್ಲಿರುವ ಎಲ್ಲಾ ಬೋಧನೆ, ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಸಿಬ್ಬಂದಿಯು ಸಂದರ್ಭಾನುಸಾರ ಕಾಲೇಜಿನ ಡೀನ್‌ರವರ ಆಡಳಿತ ನಿಯಂತ್ರಣ ಅಥವಾ ನಿರ್ದೇಶಕರು (ಸಂಶೋಧನೆ) ಮತ್ತು ನಿರ್ದೇಶಕರು (ವಿಸ್ತರಣಾ ಶಿಕ್ಷಣ) ಇವರ ತಾಂತ್ರಿಕ ನಿಯಂತ್ರಣದಲ್ಲಿರತಕ್ಕದ್ದು.

(4) ವಿಶ್ವವಿದ್ಯಾಲಯವು ರಾಜ್ಯದ ಪ್ರಾದೇಶಿಕ ಅವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಹಾಗೂ ಇತರ ಹಿತಾಸಕ್ತಿದಾರರಿಗೆ ಸೂಕ್ತವಾದ ತಾಂತ್ರಿಕ ಬೆಂಬಲ ಒದಗಿಸತಕ್ಕದ್ದು.

ಅಧ್ಯಾಯ – VI

ನಿಧಿಗಳು ಮತ್ತು ಲೆಕ್ಕಪತ್ರಗಳು

36. ವಿಶ್ವವಿದ್ಯಾಲಯದ ನಿಧಿಗಳು.– (1) ವಿಶ್ವವಿದ್ಯಾಲಯವು ಒಂದು ಸಾಮಾನ್ಯ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಅದಕ್ಕೆ ಈ ಮುಂದಿನವುಗಳು ಜಮೆಯಾಗತಕ್ಕದ್ದು,–

(ಎ) ಶುಲ್ಕಗಳಿಂದ, ದತ್ತಿಗಳಿಂದ ಮತ್ತು ಯಾವುದಾದರೂ ದಾನಗಳು ಇದ್ದರೆ ಅವುಗಳಿಂದ ಬರುವ ಆದಾಯ, ವಿದ್ಯಾರ್ಥಿ ನಿಲಯ,

ಪ್ರಯೋಗ ಕೇಂದ್ರಗಳು ಹಾಗೂ ಫಾರ್ಮುಗಳೂ ಸೇರಿದಂತೆ ವಿಶ್ವವಿದ್ಯಾಲಯದ ಸ್ವತ್ತುಗಳಿಂದ ಬರುವ ಆದಾಯ;

(ಬಿ) ಈ ಅಧಿನಿಯಮದ ಉಪಬಂಧಗಳಿಗೆ ಸುಸಂಗತವಾಗಿರುವಂತಹ ಷರತ್ತುಗಳಿಗೆ ಒಳಪಟ್ಟು ಸರ್ಕಾರವು ನೀಡಿದ ವಂತಿಕೆಗಳು ಅಥವಾ ಅನುದಾನಗಳು;

(ಸಿ) ಇತರ ವಂತಿಕೆಗಳು, ಅನುದಾನಗಳು, ದೇಣಿಗೆಗಳು, ಲಾಭಗಳು, ಸಾಲಗಳು ಮತ್ತು ಇತರ ಸ್ವೀಕೃತಿಗಳು.

(2) ವಿಶ್ವವಿದ್ಯಾಲಯವು ಪ್ರತಿಷ್ಠಾನ ನಿಧಿ ಎಂಬ ಹೆಸರಿನ ನಿಧಿಯನ್ನು ಹೊಂದಿರತಕ್ಕದ್ದು. ಇದಕ್ಕೆ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಅನುಮೋದಿತ ಏಜೆನ್ಸಿಯು ನೀಡುವ ವಂತಿಕೆಗಳು ಮತ್ತು ಅನುದಾನಗಳು ಹಾಗೂ ಮಂಡಳಿಯು ನಿರ್ದಿಷ್ಟಪಡಿಸಬಹುದಾದಂತಹ ಇತರ ಮೊತ್ತಗಳು ಜಮೆಯಾಗತಕ್ಕದ್ದು. ಮಂಡಳಿಯು ಅವಶ್ಯವಿದ್ದಾಗಲೆಲ್ಲ ಅಂತಹ ಮೊಬಲಗನ್ನು ನಿರ್ದಿಷ್ಟಪಡಿಸಬಹುದಾದಂತೆ ಪ್ರತಿಷ್ಠಾನ ನಿಧಿಯಿಂದ ಸಾಮಾನ್ಯ ನಿಧಿಗೆ ನಿಯಮಿಸಬಹುದಾದ ವಿಧಾನದಲ್ಲಿ ವರ್ಗಾಯಿಸಬಹುದು.

(3) ವಿಶ್ವವಿದ್ಯಾಲಯವು, ಸರ್ಕಾರವು ನೀಡಿದ ಯಾವುದೇ ಅನುದಾನಗಳ ಸಂಬಂಧದಲ್ಲಿ ಲೆಕ್ಕಪತ್ರ ತ:ಖ್ತೆಗಳನ್ನು, ವರದಿಗಳನ್ನು ಮತ್ತು ಇತರ ವಿವರಗಳನ್ನು ಸರ್ಕಾರಕ್ಕೆ ನೀಡತಕ್ಕದ್ದು ಹಾಗೂ ಸರ್ಕಾರವು ನಿರ್ದೇಶಿಸಬಹುದಾದಂತಹ ಅವಧಿಯೊಳಗೆ ಮತ್ತು ವಿಧಾನದಲ್ಲಿ ಯಾವುದೇ ಅನುದಾನದ ಬಳಕೆಗೆ ಸಂಬಂಧಿಸಿದಂತೆ ತ:ಖ್ತೆಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ಸಲ್ಲಿಸತಕ್ಕದ್ದು.

(4) ವಿಶ್ವವಿದ್ಯಾಲಯವು ಸರ್ಕಾರದಿಂದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರಗಳಿಂದ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಶಾಸನಾತ್ಮಕ ನಿಕಾಯಗಳಿಂದ ಅಥವಾ ದತ್ತಿಗಳಿಂದ ಅಥವಾ ದಾನಗಳಿಂದ, ವಿಶ್ವವಿದ್ಯಾಲಯವು ಮತ್ತು ದಾನಿ ಅಥವಾ ಅನುದಾನದಾತರ ನಡುವೆ ಮಾಡಿಕೊಂಡ ಒಪ್ಪಂದಗಳಲ್ಲಿಯ ಷರತ್ತುಗಳಿಗೆ ಒಳಪಟ್ಟು ತನ್ನ ಧ್ಯೇಯೋದ್ದೇಶಗಳ ಸಾಧನೆಗಾಗಿ ಅನುದಾನ ಸ್ವೀಕರಿಸಲು ಸಕ್ಷಮವಾಗಿರತಕ್ಕದ್ದು.

37. ನಿಧಿಯ ಆಡಳಿತ.– ವಿಶ್ವವಿದ್ಯಾಲಯದ ಸಾಮಾನ್ಯ ನಿಧಿ, ಪ್ರತಿಷ್ಠಾನ ನಿಧಿ ಮತ್ತು ಇತರ ನಿಧಿಗಳನ್ನು ಶಾಸನಗಳಲ್ಲಿ ಹೇಳಿದ ಉಪಬಂಧಗಳಿಗೆ ಅನುಗುಣವಾಗಿ ನಿರ್ವಹಿಸತಕ್ಕದ್ದು.

38. ಲೆಕ್ಕಪರಿಶೋಧನೆಗೆ ಆದೇಶಿಸಲು ಸರ್ಕಾರದ ಅಧಿಕಾರ.– ಸರ್ಕಾರವು, ಯಾವುದೇ ಸಮಯದಲ್ಲಿ ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಪರಿಶೋಧನೆಯನ್ನು ತಾನು ನಿರ್ದೇಶಿಸಬಹುದಾದಂತಹ ಲೆಕ್ಕಪರಿಶೋಧಕರಿಂದ ಮಾಡಿಸಬೇಕೆಂದು ಆದೇಶಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

39. ಹಣಕಾಸಿನ ಅಂದಾಜುಗಳು.– (1) ಕುಲಪತಿಯು ಮುಂಬರುವ ವರ್ಷಕ್ಕಾಗಿ ವಿಶ್ವವಿದ್ಯಾಲಯದ ಹಣಕಾಸಿನ ಅಂದಾಜುಗಳನ್ನು ತಯಾರಿಸುವಂತೆ ಮಾಡತಕ್ಕದ್ದು ಮತ್ತು ಅನುಮೋದನೆಗಾಗಿ ಅದನ್ನು ಮಂಡಳಿಯ ಮುಂದೆ ಮಂಡಿಸತಕ್ಕದ್ದು.

(2) ಮಂಡಳಿಯು, ತಾನು ಸೂಕ್ತವೆಂದು ಭಾವಿಸಬಹುದಾದಂತಹ ಮಾರ್ಪಾಡುಗಳಿಗೆ ಒಳಪಟ್ಟು ಹಣಕಾಸಿನ ಅಂದಾಜುಗಳನ್ನು ಅನುಮೋದಿಸಬಹುದು ಮತ್ತು ಮಂಡಳಿಯು ಅನುಮೋದಿಸಿದ ಹಣಕಾಸಿನ ಅಂದಾಜಿಗೆ ಅನುಸಾರವಾಗಿ ಅಲ್ಲದೆ ಯಾವ ವೆಚ್ಚವನ್ನು ಮಾಡತಕ್ಕದ್ದಲ್ಲ.

40. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ಲೆಕ್ಕಪತ್ರ ನಿರ್ವಹಣೆಯು ಜೋಡಿ ದಾಖಲಾತಿ ಪದ್ಧತಿಯನ್ನು ಆಧರಿಸಿದ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಕುಲಪತಿಯವರ ನಿರ್ದೇಶನದ ಮೇರೆಗೆ ಲೆಕ್ಕ ನಿಯಂತ್ರಕರು ತಯಾರಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಯಾವುದೇ ಮೂಲಗಳಿಂದ ಪ್ರಾಪ್ತವಾಗುವ ಅಥವಾ ಅದು ಸ್ವೀಕರಿಸುವ ಎಲ್ಲಾ ಮೊಬಲಗುಗಳನ್ನು ಹಾಗೂ ವಿಶ್ವವಿದ್ಯಾಲಯವು ವಿತರಣೆ ಮಾಡುವ ಅಥವಾ ಸಂದಾಯ ಮಾಡುವ ಎಲ್ಲಾ ಮೊಬಲಗುಗಳನ್ನು ಈ ಲೆಕ್ಕಪತ್ರಗಳಲ್ಲಿ ದಾಖಲಿಸತಕ್ಕದ್ದು.

(2) ವಾರ್ಷಿಕ ಲೆಕ್ಕಪತ್ರ ಮತ್ತು ಜಮಾ ಖರ್ಚು ಪಟ್ಟಿಯನ್ನು ಕುಲಪತಿಯವರು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ತಾನು ನೇಮಿಸಬಹುದಾದಂತಹ ವ್ಯಕ್ತಿಗಳು ಲೆಕ್ಕ ಪರಿಶೋಧನೆಯನ್ನು ನಡೆಸುವಂತೆ ಮಾಡತಕ್ಕದ್ದು ಲೆಕ್ಕಪತ್ರಗಳನ್ನು

ಮಂಡಲಿಗೆ ಮತ್ತು ಕುಲಾಧಿಪತಿಯವರಿಗೆ ಮಂಡಿಸತಕ್ಕದ್ದು.

(3) ಮಂಡಳಿಯು, ಲೆಕ್ಕಪತ್ರಗಳ ಪ್ರತಿಯನ್ನು ಹಾಗೂ ವರದಿಯನ್ನು ಲೆಕ್ಕಪರಿಶೋಧನೆಯ ವರದಿಯ ಮೇಲೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮದ ಬಗ್ಗೆ ಒಂದು ಹೇಳಿಕೆಯೊಡನೆ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ಹಾಗೂ ರಾಜ್ಯ ಸರ್ಕಾರವು ಅವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(4) ವಿಶ್ವವಿದ್ಯಾಲಯವು ಯೋಜನೆಗಳ ಸಂಬಂಧದಲ್ಲಿ ಮತ್ತು ಭಾರತದ ಕೃಷಿ ಸಂಶೋಧನಾ ಪರಿಷತ್ತು, ಭಾರತ ಸರ್ಕಾರ ಮತ್ತು ಇತರ ಯೋಜನೆಗಳು/ಚಾರ್ಟೆಡ್ ಆಕೌಂಟೆಟ್ ಪ್ರಮಾಣ ಪತ್ರ ನೀಡಿದ ಸಂಸ್ಥೆಗಳು ಪ್ರಾಯೋಜಿಸಿದ ಕೃಷಿ ವಿಜ್ಞಾನ ಕೇಂದ್ರಗಳು/ತೋಟಗಾರಿಕೆ ವಿಜ್ಞಾನ ಕೇಂದ್ರಗಳ ಸಂಬಂಧದಲ್ಲಿ ಲೆಕ್ಕಪರಿಶೋಧನೆ ಬಳಕೆ ಪ್ರಮಾಣ ಪತ್ರಗಳನ್ನು ನೀಡುವಂತೆ ಮಾಡತಕ್ಕದ್ದು.

41. ಭವಿಷ್ಯ ನಿಧಿ, ನಿವೃತ್ತಿ ವೇತನ ಮತ್ತು ವಿಮೆ.– (1) ಸರ್ಕಾರದ ಪೂರ್ವಾನುಮೋದನೆಯೊಡನೆ ವಿಶ್ವವಿದ್ಯಾಲಯವು ತನ್ನ ಅಧಿಕಾರಿಗಳು, ಪ್ರಾಧ್ಯಾಪಕರು, ಲಿಪಿಕ ಸಿಬ್ಬಂದಿ ಮತ್ತು ಇತರ ನೌಕರರ ಪ್ರಯೋಜನಕ್ಕಾಗಿ ನಿಯಮಿಸಬಹುದಾದಂತಹ ವಿಧಾನಗಳು ಮತ್ತು ಷರತ್ತುಗಳಿಗೆ ಒಳಪಟ್ಟು ತಾನು ಸೂಕ್ತವೆಂದು ಭಾವಿಸಬಹುದಾದಂತಹ ನಿವೃತ್ತಿ ವೇತನ, ಉಪದಾನ, ವಿಮೆ ಅಥವಾ ಭವಿಷ್ಯ ನಿಧಿ, ವಂತಿಗೆ, ನಿವೃತ್ತಿ ವೇತನ ನಿಧಿ ಮತ್ತು ಇನ್ನಾವುದೇ ಅಂತಹ ನಿಧಿಗಳನ್ನು ರಚಿಸತಕ್ಕದ್ದು.

(2) ಸರ್ಕಾರವು, ಭವಿಷ್ಯ ನಿಧಿ ಅಧಿನಿಯಮ 1925 (1925ರ ಕೇಂದ್ರ ಅಧಿನಿಯಮ 19) ವಿಶ್ವವಿದ್ಯಾಲಯವು ಹಾಗೆ ರಚಿಸಿದ ಭವಿಷ್ಯ ನಿಧಿ ಅಥವಾ ನಿವೃತ್ತಿ ವೇತನ ನಿಧಿಗಳಿಗೆ ಅವು ಸರ್ಕಾರದ ಭವಿಷ್ಯ ನಿಧಿಗಳು ಆಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದೆಂದು ಘೋಷಿಸಬಹುದು:

ಪರಂತು, ವಿಶ್ವವಿದ್ಯಾಲಯವು ಹಣಕಾಸು ಸಮಿತಿ ಮತ್ತು ಮಂಡಳಿಯೊಡನೆ ಸಮಾಲೋಚಿಸಿ ತಾನು ನಿರ್ಧರಿಸಬಹುದಾದಂತಹ ವಿಧಾನದಲ್ಲಿ ಭವಿಷ್ಯ ನಿಧಿಯ ಮೊಬಲಗನ್ನು ತೊಡಗಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

42. ಸರ್ಕಾರದ ಅನುದಾನಗಳು.- (1) ರಾಜ್ಯ ಸರ್ಕಾರವು, ಪ್ರತಿ ವರ್ಷವೂ ವಿಶ್ವವಿದ್ಯಾಲಯಕ್ಕೆ ಲುಪ್ತವಾಗದಂತಹ ಇಡಿಗಂಟು ಅನುದಾನವನ್ನು ನೀಡತಕ್ಕದ್ದು, ಎಂದರೆ :-

(i) ವಿಶ್ವವಿದ್ಯಾಲಯದ ಸೂಕ್ತ ಕಾರ್ಯನಿರ್ವಹಣೆಗಾಗಿ ವಿಶ್ವವಿದ್ಯಾಲಯದ ಸಿಬ್ಬಂದಿಯ ವೇತನ, ಭತ್ಯೆಗಳು, ಸಾದಿಲ್ವಾರು, ಇತರ ಸರಬರಾಜು ಮತ್ತು ಸೇವೆಗಳ ಮೇಲಿನ ಅಂದಾಜು ವೆಚ್ಚಕ್ಕಿಂತ ಕಡಿಮೆಯಲ್ಲದ ಒಂದು ಅನುದಾನ;

(ii) ರಾಜ್ಯ ಸರ್ಕಾರವು ವಿಶ್ವವಿದ್ಯಾಲಯದ ಸೂಕ್ತ ಕಾರ್ಯನಿರ್ವಹಣೆಗಾಗಿ ಅವಶ್ಯವೆಂದು ಭಾವಿಸಬಹುದಾದಂತಹ ಹೆಚ್ಚುವರಿ ಬಾಬುಗಳ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಭರಿಸುವುದಕ್ಕೆ ಒಂದು ಅನುದಾನ.

(2) ರಾಜ್ಯ ಸರ್ಕಾರವು, ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ ಮತ್ತು ವಿಶ್ವವಿದ್ಯಾಲಯವು ಜಾರಿಗೊಳಿಸಲೆಂದು ವರ್ಗಾಯಿಸಿದ ಯೋಜನೆಗಳ ಸಂಬಂಧದಲ್ಲಿ ವಿಶ್ವವಿದ್ಯಾಲಯಕ್ಕೆ ಕೇಂದ್ರ ಸರ್ಕಾರ ಮತ್ತು ಅಂತಹ ಯೋಜನೆಗಳನ್ನು ಪ್ರಾಯೋಜಿಸಿದ ಇತರ ಏಜೆನ್ಸಿಗಳಿಂದ ನಿರೀಕ್ಷಿತ ಸಹಾಯವನ್ನು ಕಳೆದ ತರುವಾಯ ವಾರ್ಷಿಕ ಯೋಜನೆಯಲ್ಲಿ ತೋರಿಸಿದ ನಿವ್ವಳ ವೆಚ್ಚದ ಏರ್ಪಾಡಿಗೆ ಸಮನಾದ ಮೊತ್ತದ ಲುಪ್ತವಾಗದಂತಹ ಇಡಿಗಂಟು ಅನುದಾನವನ್ನು ಸಹ ನೀಡತಕ್ಕದ್ದು.

(3) ರಾಜ್ಯ ಸರ್ಕಾರವು ಯಾವುದೇ ಅನುದಾನವನ್ನು ನೀಡುವ ಮೊದಲು ಅದು ಅಗತ್ಯಪಡಿಸಬಹುದಾದಂತಹ ಅಂಕಿಅಂಶಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ರಾಜ್ಯ ಸರ್ಕಾರಕ್ಕೆ ವಿಶ್ವವಿದ್ಯಾಲಯವು ಸಲ್ಲಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯವು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತಹ ಅವಧಿಯೊಳಗೆ ಹಾಗೂ ಅಂತಹ ವಿಧಾನದಲ್ಲಿ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಯಾವುದೇ ಅನುದಾನವನ್ನು ಬಳಸಿಕೊಂಡಿರುವುದಕ್ಕೆ ಸಂಬಂಧಪಟ್ಟ ಅಂಕಿಅಂಶಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ಒದಗಿಸತಕ್ಕದ್ದು.

(4) ವಿಶ್ವವಿದ್ಯಾಲಯವು ಸರ್ಕಾರದಿಂದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರಗಳಿಂದ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಶಾಸನಾತ್ಮಕ ನಿಕಾಯಗಳಿಂದ ಅಥವಾ ದತ್ತಿಗಳಿಂದ ಅಥವಾ ದಾನಗಳಿಂದ, ವಿಶ್ವವಿದ್ಯಾಲಯವು ಮತ್ತು ದಾನಿ ಅಥವಾ ಅನುದಾನದಾತರ ನಡುವೆ ಮಾಡಿಕೊಂಡ ಒಪ್ಪಂದಗಳಲ್ಲಿಯ ಷರತ್ತುಗಳಿಗೆ ಒಳಪಟ್ಟು ತನ್ನ ಧ್ಯೇಯೋದ್ದೇಶಗಳ ಸಾಧನೆಗಾಗಿ ಅನುದಾನ ಸ್ವೀಕರಿಸಲು ಸಕ್ಷಮವಾಗಿರತಕ್ಕದ್ದು.

43. ಹಣಕಾಸು ಸಮಿತಿ.– (1) ಮಂಡಳಿಯು ಈ ಮುಂದಿನ ಸದಸ್ಯರುಗಳನ್ನೊಳಗೊಂಡ ಒಂದು ಹಣಕಾಸು ಸಮಿತಿಯನ್ನು ರಚಿಸತಕ್ಕದ್ದು ಎಂದರೆ :–

(i) ಕುಲಪತಿಯವರು – ಅಧ್ಯಕ್ಷರಾಗಿರತಕ್ಕದ್ದು;

(ii) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು;

(iii) ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು;

(iv) ಕುಲಪತಿಯವರು ನಾಮನಿರ್ದೇಶಿಸಿದ ವ್ಯವಸ್ಥಾಪನಾ ಮಂಡಳಿಯ ಒಬ್ಬ ಸದಸ್ಯರು;

(v) ಕುಲಸಚಿವರು;

(vi) ಲೆಕ್ಕ ನಿಯಂತ್ರಕರು – ಸದಸ್ಯ ಕಾರ್ಯದರ್ಶಿ.

(2) ಹಣಕಾಸು ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ಮತ್ತು ಆಯವ್ಯಯ ಅಂದಾಜುಗಳನ್ನು ಪರೀಕ್ಷಿಸುವುದು ಮತ್ತು ಅದರ ಮೇಲೆ ಮಂಡಳಿಗೆ ಸಲಹೆಗಳನ್ನು ನೀಡುವುದು;

(ii) ವಿಶ್ವವಿದ್ಯಾಲಯದ ಹಣಕಾಸಿನ ಪರಿಸ್ಥಿತಿಯನ್ನು ಕಾಲಕಾಲಕ್ಕೆ ಪರಿವೀಕ್ಷಿಸುವುದು;

(iii) ವಿಶ್ವವಿದ್ಯಾಲಯದ ಹಣಕಾಸಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಮೇಲೆ ಮಂಡಳಿಗೆ ಶಿಫಾರಸ್ಸುಗಳನ್ನು ಮಾಡುವುದು;

(iv) ಮಂಡಳಿಗೆ ಕಟ್ಟುನಿಟ್ಟಾದ ಆರ್ಥಿಕ ಮಿತವ್ಯಯವನ್ನು ಅನುಸರಿಸಲು ಕಠಿಣ ಕ್ರಮಗಳನ್ನು ಅಳವಡಿಸಿಕೊಳ್ಳಲು ಶಿಫಾರಸ್ಸುಗಳನ್ನು ಮಾಡುವುದು ಮತ್ತು ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸಲು ಸಲಹೆಗಳನ್ನು ನೀಡುವುದು;

(v) ವಿಶ್ವವಿದ್ಯಾಲಯದ ಹಣ ಬಲವನ್ನು ಉತ್ತಮ ಗೊಳಿಸಲು ಸಂಶೋಧನೆ ಮತ್ತು ಬೋಧನೆ ಗಳೆರಡರಲ್ಲೂ ವೆಚ್ಚ ವಸೂಲಿ ವಿಧಾನಗಳ ಬಗ್ಗೆ ಮಂಡಳಿಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು.

ಅಧ್ಯಾಯ – VII

ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳಿಗೆ ಮನ್ನಣೆ

44. ಕಾಲೇಜುಗಳ ಸಂಯೋಜನೆ.– (1) ವಿಶ್ವವಿದ್ಯಾಲಯದ ಪ್ರದೇಶದಲ್ಲಿರುವ ಕಾಲೇಜುಗಳನ್ನು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದ ತರುವಾಯ ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸುಗಳ ಮೇಲೆ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜಿಸತಕ್ಕದ್ದು.

(2) ಕುಲಸಚಿವರು, ಹೊಸ ಕಾಲೇಜುಗಳ ಸಂಯೋಜನೆಯ ಬಗ್ಗೆ, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳ ಬಗ್ಗೆ, ಸಂಯೋಜಿತ ಕಾಲೇಜುಗಳಲ್ಲಿ ಹೊಸ ವಿಷಯಗಳು ಮತ್ತು ಮಂಜೂರಾದ ಪ್ರವೇಶ ಅವಕಾಶದಲ್ಲಿನ ಬದಲಾವಣೆಯ ಬಗ್ಗೆ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿಗಳ ಸ್ವೀಕೃತಿಗೆ ಕೊನೆಯ ದಿನಾಂಕವನ್ನು ನಿಗದಿಪಡಿಸಿ, ಒಂದು ಇಂಗ್ಲಿಷ್ ವೃತ್ತ ಪತ್ರಿಕೆ ಮತ್ತು ಒಂದು ಕನ್ನಡ ವೃತ್ತ ಪತ್ರಿಕೆ ಹೀಗೆ ಕಡೆಯ ಪಕ್ಷ ಎರಡು ಪ್ರಮುಖ ವೃತ್ತ ಪತ್ರಿಕೆಗಳಲ್ಲಿ ಅಧಿಸೂಚಿಸತಕ್ಕದ್ದು. ಈ

ಜಾಹಿರಾತು, ವಿಶ್ವವಿದ್ಯಾಲಯವು ಅಗತ್ಯ ಪಡಿಸಬಹುದಾದಂತಹ ಇತರ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಕಾಲೇಜುಗಳು ಭಾರತದ ಕೃಷಿ ಸಂಶೋಧನಾ ಪರಿಷತ್ತು ಅಥವಾ ಅಂತಹ ಇತರ ಪ್ರಾಧಿಕಾರಗಳ ಅನುಮೋದನೆ ಅಥವಾ ಮನ್ನಣೆಯನ್ನು ಪಡೆಯಬೇಕೆಂಬುದನ್ನು ಅಗತ್ಯಪಡಿಸಿದಲ್ಲಿ, ಆ ಬಗ್ಗೆ ನಿರ್ದಿಷ್ಟ ಸೂಚನೆ ನೀಡತಕ್ಕದು ಮತ್ತು ಸಂಯೋಜನೆಗಾಗಿ ಸಲ್ಲಿಸಬೇಕಾದ ಶುಲ್ಕದ ಮೊಬಲಗನ್ನು ಸಹ ನಿರ್ದಿಷ್ಟಪಡಿಸತಕ್ಕದ್ದು.

(3) ವಿಶ್ವವಿದ್ಯಾಲಯಕ್ಕೆ ಸಂಯೋಜನೆಗಾಗಿ ಅರ್ಜಿಸಲ್ಲಿಸುವ ಕಾಲೇಜು, ಈ ಮುಂದಿನವುಗಳಿಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಒದಗಿಸಿ ಜಾಹಿರಾತಿನಲ್ಲಿ ನಿಗದಿಪಡಿಸಿದ ಕಾಲಮಿತಿಯೊಳಗೆ ಅರ್ಜಿಯನ್ನು ಕುಲಸಚಿವರಿಗೆ ಕಳುಹಿಸತಕ್ಕದ್ದು, ಎಂದರೆ:—

(i) ಆ ಕಾಲೇಜು ಒದಗಿಸಲು ಉದ್ದೇಶಿಸಿದ ಶಿಕ್ಷಣದ ಮಾದರಿಯನ್ನು ನೆರೆಹೊರೆಯಲ್ಲಿರುವ ಇತರ ಕಾಲೇಜುಗಳು ಅದೇ ಮಾದರಿಯ ಶಿಕ್ಷಣಕ್ಕೆ ಮಾಡಿರುವ ಪ್ರಸ್ತುತ ಏರ್ಪಾಟನ್ನು ಮತ್ತು ಕಾಲೇಜನ್ನು ಯಾವ ಸ್ಥಳದಲ್ಲಿ ಸ್ಥಾಪಿಸಬೇಕಾಗಿದೆಯೋ ಆ ಸ್ಥಳದ ಸೂಕ್ತತೆಯನ್ನೂ ಗಮನದಲ್ಲಿಟ್ಟುಕೊಂಡು, ಆ ಕಾಲೇಜು ಸ್ಥಳೀಯ ಅವಶ್ಯಕತೆಯನ್ನು ಪೂರೈಸುತ್ತದೆ;

(ii) ಅದು ಕ್ರಮಬದ್ಧವಾಗಿ ರಚಿಸಲಾದ ಆಡಳಿತ ಮಂಡಳಿಯ ಆಡಳಿತ ನಿರ್ವಹಣೆಗೆ ಒಳಪಟ್ಟಿದೆ;

(iii) ಬೋಧಕ ಸಿಬ್ಬಂದಿಯ ಸಂಖ್ಯೆ ಮತ್ತು ಅರ್ಹತೆಗಳು ಮತ್ತು ಅವರ ಪದಾವಧಿಯನ್ನು ನಿಯಂತ್ರಿಸುವ ಷರತ್ತುಗಳು ಆ ಕಾಲೇಜಿನಲ್ಲಿ ಕೈಗೊಳ್ಳಬೇಕಾದ ಶಿಕ್ಷಣ, ಬೋಧನೆ ಅಥವಾ ತರಬೇತಿಗಳ ವ್ಯಾಸಂಗ ಕ್ರಮಗಳಿಗೆ ತಕ್ಕ ಏರ್ಪಾಟನ್ನು ಮಾಡುವಂಥದ್ದಾಗಿದೆ;

(iv) ಕಾಲೇಜನ್ನು ನಡೆಸುವಂಥ ಕಟ್ಟಡಗಳು ಸೂಕ್ತವಾಗಿವೆ ಮತ್ತು ತಂದೆ ತಾಯಿಗಳ ಅಥವಾ ಪಾಲಕರ ಜೊತೆಯಲ್ಲಿ ವಾಸವಾಗಿರದೆ ಇರುವ

ವಿದ್ಯಾರ್ಥಿಗಳಿಗಾಗಿ ಆ ಕಾಲೇಜಿನಲ್ಲಿ ಅಥವಾ ಆ ಕಾಲೇಜು ಅನುಮೋದಿಸಿದ ವಸತಿಗಳಲ್ಲಿ ನಿವಾಸಕ್ಕಾಗಿ ಹಾಗೂ ಮೇಲ್ವಿಚಾರಣೆ ಮತ್ತು ಕ್ಷೇಮಾಭಿವೃದ್ಧಿಗಾಗಿ, ಶಾಸನಗಳು ಮತ್ತು ವಿನಿಯಮಗಳಿಗೆ ಅನುಗುಣವಾಗಿ ಏರ್ಪಾಟು ಮಾಡಲಾಗುವುದು;

(v) ಗ್ರಂಥಾಲಯಕ್ಕೆ ಹಾಗೂ ಇತರ ಸೇವಾ ಕೇಂದ್ರಗಳಿಗೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ;

(vi) ಪ್ರಾಯೋಗಿಕ ವಿಜ್ಞಾನದ ಯಾವುದೇ ಶಾಖೆಯಲ್ಲಿ ಸಂಯೋಜನೆಯನ್ನು ಕೋರಿರುವಲ್ಲಿ, ಶಾಸನಗಳು ಮತ್ತು ವಿನಿಯಮಗಳಿಗೆ ಅನುಗುಣವಾಗಿ ಆ ವಿಜ್ಞಾನದ ಶಾಖೆಯಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಸರಿಯಾದ ರೀತಿಯಲ್ಲಿ ಸಜ್ಜುಗೊಳಿಸಿದ ಪ್ರಯೋಗಶಾಲೆ ಅಥವಾ ವಸ್ತು ಸಂಗ್ರಹಾಲಯ, ಪ್ರಯೋಗಿಕ ಕ್ಷೇತ್ರಗಳ ವ್ಯವಸ್ಥೆಗಳನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮಾಡಲಾಗಿದೆ ಅಥವಾ ಮಾಡಲಾಗುವುದು;

(vii) ಸನ್ನಿವೇಶಗಳಲ್ಲಿ ಅವಕಾಶವಿರುವಷ್ಟರ ಮಟ್ಟಿಗೆ ಕಾಲೇಜಿನ ಪರಿಮಿತಿಯಲ್ಲಿ ಅಥವಾ ಅದರ ಹತ್ತಿರ ಅಥವಾ ವಿದ್ಯಾರ್ಥಿಗಳ ನಿವಾಸಕ್ಕಾಗಿ ಒದಗಿಸಿರುವ ಸ್ಥಳದಲ್ಲಿ ಪ್ರಾಂಶುಪಾಲರ ಮತ್ತು ಬೋಧಕ ಸಿಬ್ಬಂದಿಯ ಸದಸ್ಯರ ವಸತಿಗಾಗಿ ಸೂಕ್ತ ಏರ್ಪಾಟು ಮಾಡಲಾಗುವುದು;

(viii) ಕಾಲೇಜಿನ ನಿರಂತರ ನಿರ್ವಹಣೆ ಮತ್ತು ದಕ್ಷ ಕಾರ್ಯ ನಿರ್ವಹಣೆಗಾಗಿ ತಕ್ಕ ಏರ್ಪಾಟು ಮಾಡುವಷ್ಟು ಕಾಲೇಜಿನ ಹಣಕಾಸು ಸಂಪನ್ಮೂಲಗಳಿವೆ; ಮತ್ತು

(ix) ವಿದ್ಯಾರ್ಥಿಗಳು ಸಂದಾಯ ಮಾಡಬೇಕಾದ ಫೀಜು ಏನಾದರೂ ಇದ್ದರೆ ಅದನ್ನು ನಿಗದಿಮಾಡುವ ನಿಯಮಗಳನ್ನು ರಚಿಸಲಾಗಿದೆ.

(4) ಹೊಸ ಕಾಲೇಜುಗಳಿಗೆ ಸಂಯೋಜನೆಯ ಅರ್ಜಿಗಳನ್ನು ವ್ಯಕ್ತಿಗಳಿಂದ ಅಂಗೀಕರಿಸತಕ್ಕದ್ದಲ್ಲ, ರಾಜ್ಯ ಸರ್ಕಾರದ ನೆರವು ಇಲ್ಲದೆಯೇ ಕಾಲೇಜುಗಳನ್ನು ನಡೆಸಲು ಸಾಧ್ಯವಾಗುವ ಹಣಕಾಸು ಚೈತನ್ಯ ಹೊಂದಿರುವ, ನೋಂದಾಯಿತ ಸಂಘ ಅಥವಾ ನೋಂದಾಯಿತ ಸಾರ್ವಜನಿಕ ಟ್ರಸ್ಟ್‌ಗಳಿಂದ ಮಾತ್ರವೇ ಅಂಗೀಕರಿಸತಕ್ಕದ್ದು.

(5) ಅರ್ಜಿಯ ಜೊತೆಗೆ, ಕಾಲೇಜನ್ನು ಸಂಯೋಜಿಸಿದ ನಂತರ ರಾಜ್ಯ ಸರ್ಕಾರ ಮತ್ತು ವಿಶ್ವವಿದ್ಯಾಲಯದ ಪೂರ್ವಾನುಮೋದನೆ ಇಲ್ಲದೆ ವ್ಯವಸ್ಥಾಪನೆಯನ್ನು ವರ್ಗಾವಣೆ ಮಾಡುವುದಿಲ್ಲ ಅಥವಾ ಕಾಲೇಜಿನ ಹೆಸರು ಮತ್ತು ಅಭಿನಾಮವನ್ನು ಬದಲಾವಣೆ ಮಾಡುವುದಿಲ್ಲವೆಂಬ ಒಂದು ಮುಚ್ಚಳಿಕೆಯು ಇರತಕ್ಕದ್ದು.

(6) (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅದನ್ನು ಪರಿಶೀಲನೆಗಾಗಿ ಮಂಡಳಿಯ ಮುಂದೆ ಇಡತಕ್ಕದ್ದು. ಮಂಡಳಿಯು ಸಂಯೋಜನೆಯ ಪ್ರತಿಯೊಂದು ಅರ್ಜಿಯನ್ನು ಪರಿಶೀಲಿಸಿದ ತರುವಾಯ ಒಂದು ಸ್ಥಳೀಯ ವಿಚಾರಣಾ ಸಮಿತಿಯಿಂದ ಸ್ಥಳೀಯ ವಿಚಾರಣೆ ಮಾಡಬೇಕೆಂದು ನಿರ್ದೇಶನ ನೀಡತಕ್ಕದ್ದು.

(7) ಸ್ಥಳೀಯ ವಿಚಾರಣಾ ಸಮಿತಿಯು, ಅದನ್ನು ರಚಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಒಂದು ವರದಿಯನ್ನು ವಿದ್ಯಾ ವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು.

(8) ವಿದ್ಯಾವಿಷಯಕ ಪರಿಷತ್ತು, ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಸ್ವೀಕರಿಸಿದ ತರುವಾಯ ಕೂಡಲೇ ವರದಿಯಲ್ಲಿ ವಿವರಿಸಿದ ಸಮಿತಿಯ ತೀರ್ಮಾನಗಳನ್ನು ಪರಿಗಣಿಸತಕ್ಕದ್ದು ಮತ್ತು ತನಗೆ ಅವಶ್ಯಕವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಅಂಥ ಮನವಿಯ ಮೇಲೆ ತನ್ನ ಅಭಿಪ್ರಾಯವನ್ನು ದಾಖಲು ಮಾಡತಕ್ಕದ್ದು ಮತ್ತು ಅದನ್ನು ಮಂಡಳಿಗೆ ಕಳುಹಿಸತಕ್ಕದ್ದು.

(9) ಮಂಡಳಿಯು, ಸಮಿತಿಯ ವರದಿಯನ್ನು ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಗೊತ್ತುವಳಿಯನ್ನು ಪರಿಗಣಿಸತಕ್ಕದ್ದು ಹಾಗೂ ತಾನು ಅವಶ್ಯವೆಂದು ಭಾವಿಸಬಹುದಾದಂತಹ ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ ಮನವಿಯನ್ನು ಪೂರ್ಣವಾಗಿ ಅಥವಾ ಭಾಗಶಃ ಮಂಜೂರುಮಾಡಬೇಕೆ ಅಥವಾ ನಿರಾಕರಿಸಬೇಕೆ ಎಂಬ ಪ್ರಶ್ನೆಯ ಬಗ್ಗೆ ತನ್ನ ಅಭಿಪ್ರಾಯವನ್ನು ದಾಖಲಿಸತಕ್ಕದ್ದು.

(10) ಕುಲಸಚಿವರು ಅರ್ಜಿಯನ್ನು ಅದರ ಅಡಕವನ್ನು, ಅನುಬಂಧಗಳನ್ನು ಸ್ಥಳೀಯ ವಿಚಾರಣಾ ಸಮಿತಿಯ ವರದಿ ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಹಾಗೂ ಮಂಡಳಿಯ ಎಲ್ಲಾ ನಡವಳಿಗಳನ್ನು ಮುಂಬರುವ ವರ್ಷದ ಮಾರ್ಚ್ ಮೂವತ್ತೊಂದಕ್ಕೆ ಮೊದಲು ತೀರ್ಮಾನ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(11) ರಾಜ್ಯ ಸರ್ಕಾರವು, ಸ್ಥಳಿಯ ವಿಚಾರಣಾ ಸಮಿತಿಯ, ವಿದ್ಯಾ ವಿಷಯಕ ಪರಿಷತ್ತಿನ ಮತ್ತು ಮಂಡಳಿಯ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸತಕ್ಕದ್ದು ಮತ್ತು ಅವಶ್ಯಕವೆಂದು ಅದಕ್ಕೆ ಕಂಡುಬರಬಹುದಾದಂತಹ ವಿಚಾರಣೆಯ ತರುವಾಯ ಪ್ರವೇಶಾವಕಾಶದಲ್ಲಿ ವ್ಯತ್ಯಾಸಗಳು ಸೇರಿದಂತೆ, ಸಂದರ್ಭಾನುಸಾರ ಸಂಯೋಜಿಸಲು ಅಥವಾ ಸಂಯೋಜನೆಯನ್ನು ಅಥವಾ ಅದರ ಯಾವುದೇ ಭಾಗವನ್ನು ನಿರಾಕರಿಸಲು ವಿಶ್ವವಿದ್ಯಾಲಯಕ್ಕೆ ತನ್ನ ಶಿಫಾರಸ್ಸನ್ನು ಮಾಡತಕ್ಕದ್ದು.

(12) ವಿಶ್ವವಿದ್ಯಾಲಯವು ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದರಂತೆ ಔಪಚಾರಿಕ ಆದೇಶಗಳನ್ನು ಹೊರಡಿಸತಕ್ಕದ್ದು.

(13) ಆದಾಗ್ಯೂ ಸಂಯೋಜನೆಯ ಮಂಜೂರಾತಿಯು ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಅಥವಾ ಸಂಬಂಧಪಟ್ಟಂತಹ ಇತರ ಪ್ರಾಧಿಕಾರಗಳು ಅಥವಾ ನಿಕಾಯಗಳ ಪೂರ್ವಾನುಮೋದನೆ ಪಡೆಯುವುದಕ್ಕೆ ಒಳಪಟ್ಟಿರತಕ್ಕದ್ದು ಮತ್ತು ನಿರ್ಧರಿಸಲಾದ ಪ್ರವೇಶಾವಕಾಶದ ಸಂಖ್ಯೆಯು, ಅಂತಹ ಪ್ರಾಧಿಕಾರಗಳು ಅಥವಾ ನಿಕಾಯಗಳು ಆ ಸಂಖ್ಯೆಯನ್ನು ನಿರ್ದಿಷ್ಟಪಡಿಸಿದ್ದರೆ ಅದನ್ನು ಮೀರತಕ್ಕದ್ದಲ್ಲ.

(14) ಸಂಯೋಜನೆಗಾಗಿ ಅಥವಾ ಪ್ರವೇಶಾವಕಾಶದ ಸಂಖ್ಯೆಯನ್ನು ನಿಗದಿಪಡಿಸುವುದಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ, ಅರ್ಜಿಯನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯವು ಮಂಜೂರು ಮಾಡಿದ್ದರೆ, ವಿಶ್ವವಿದ್ಯಾಲಯವು, ನಿರ್ದಿಷ್ಟ ಷರತ್ತುಗಳೊಡನೆ ಅಥವಾ ಷರತ್ತುಗಳಿಲ್ಲದೆ ನಿರ್ದಿಷ್ಟ ಪ್ರವೇಶಾವಕಾಶದ ಸಂಖ್ಯೆಯೊಡನೆ ಯಾವ ವ್ಯಾಸಂಗಕ್ರಮಗಳ ಸಂಬಂಧದಲ್ಲಿ ಮತ್ತು ಯಾವ ಅವಧಿಗಾಗಿ, ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಸಂಯೋಜಿಸಲಾಗಿದೆಯೋ, ಆ ವ್ಯಾಸಂಗ ಕ್ರಮಗಳನ್ನು ಮತ್ತು ಅವಧಿಯನ್ನು ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(15) ಅಂತಹ ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ರಾಜ್ಯ ಸರ್ಕಾರವು ಅಥವಾ ವಿಶ್ವವಿದ್ಯಾಲಯವು ನಿರಾಕರಿಸಿದ್ದರೆ, ಹಾಗೆ ನಿರಾಕರಿಸಲು ಕಾರಣಗಳನ್ನು ತಿಳಿಸತಕ್ಕದ್ದು.

(16) (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಯಾವುದೇ ಅರ್ಜಿಯನ್ನು (12)ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವುದಕ್ಕೆ ಮೊದಲು ಯಾವುದೇ ಸಮಯದಲ್ಲಿ ಅರ್ಜಿದಾರನು ಹಿಂದಕ್ಕೆ ಪಡೆಯಬಹುದು.

(17) ಪ್ರತಿಯೊಂದು ಶೈಕ್ಷಣಿಕ ವರ್ಷಕ್ಕಾಗಿ, ಪ್ರಸಕ್ತ ಇರುವ ವ್ಯಾಸಂಗ ಕ್ರಮಗಳಿಗಾಗಿ ಮತ್ತು ಹೊಸ ವ್ಯಾಸಂಗ ಕ್ರಮಗಳನ್ನು ಹೊರತುಪಡಿಸಿ ಅನುಸರಣಾ ವ್ಯಾಸಂಗ ಕ್ರಮಗಳಿಗೆ ಸಂಯೋಜನೆಯನ್ನು ನವೀಕರಿಸುವುದಕ್ಕಾಗಿ ಅಥವಾ ಮುಂದುವರೆಸುವುದಕ್ಕಾಗಿ ಮಂಜೂರಾತಿಯನ್ನು ಮಂಡಳಿಯು ಹೊಸ ಸಂಯೋಜನೆಯ ಮಂಜೂರಾತಿಗೆ ಅನ್ವಯವಾಗುವ ರೀತಿಯಲ್ಲಿಯೇ, ವಿದ್ಯಾ ವಿಷಯಕ ಪರಿಷತ್ತಿನೊಡನೆ ಸಮಾಲೋಚಿಸಿ ನೀಡಬಹುದು.

(18) ರಾಜ್ಯ ಸರ್ಕಾರವು ಪ್ರತಿಯೊಂದು ವ್ಯಾಸಂಗ ಕ್ರಮದ ಸಂಬಂಧದಲ್ಲಿ ಪ್ರವೇಶಾವಕಾಶವನ್ನು ವಾರ್ಷಿಕ ಆಧಾರದಲ್ಲಿ ನಿರ್ಧರಿಸತಕ್ಕದ್ದು.

45. ಹೊಸ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವುದಕ್ಕೆ ನಿರ್ಬಂಧ.– (1) ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಯೋಜನೆಯನ್ನು ಕೋರುತ್ತಿರುವ ಒಂದು ಹೊಸ ಕಾಲೇಜು ಹೊಸ ವ್ಯಾಸಂಗ ಕ್ರಮಕ್ಕೆ ಸಂಯೋಜನೆಯನ್ನು ಕೋರುತ್ತಿರುವ ಅಥವಾ ನಿರ್ದಿಷ್ಟಪಡಿಸಲಾದಂಥ ಪ್ರವೇಶಾವಕಾಶಕ್ಕಿಂತಲೂ ಹೆಚ್ಚು ಪ್ರವೇಶಾವಕಾಶವನ್ನು ಕೋರುತ್ತಿರುವ ಈಗಾಗಲೇ ಇರುವ ಒಂದು ಕಾಲೇಜು ಸಂದರ್ಭಾನುಸಾರ ಆ ಹೊಸ ಕಾಲೇಜಿಗೆ ಸಂಯೋಜನೆಯನ್ನು ಅಥವಾ ಈಗಾಗಲೇ ಇರುವ ಸಂಯೋಜಿತ ಕಾಲೇಜಿನಲ್ಲಿ ಒಂದು ಹೊಸ ವ್ಯಾಸಂಗ ಕ್ರಮವನ್ನು ಅಥವಾ ಅಂಥ ಒಂದು ವ್ಯಾಸಂಗ ಕ್ರಮದ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಪ್ರವೇಶಾವಕಾಶವನ್ನು ಬದಲಾಯಿಸಲು ವಿಶ್ವ ವಿದ್ಯಾಲಯವು ಮಂಜೂರಾತಿ ನೀಡಿದ್ದ ಹೊರತು ಅವುಗಳು ಆ ಸಂಬಂಧದಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಸಿಕೊಳ್ಳತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧವನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆಯು ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜನೆ ಹೊಂದಿರದ ವಿದ್ಯಾ ಸಂಸ್ಥೆಗಳಿಗೆ ಪ್ರವೇಶ ನಿಷೇಧ ಅಧಿನಿಯಮ, 1992ರ (1993ರ ಕರ್ನಾಟಕ ಅಧಿನಿಯಮ 7) ಅಡಿಯಲ್ಲಿ ಕೈಗೊಳ್ಳುವ ಕ್ರಮಕ್ಕೆ ಗುರಿಯಾಗತಕ್ಕದ್ದು.

46. ಪರೀಕ್ಷೆಗಳಿಗೆ ಹಾಜರಾಗಲು ನಿರ್ಬಂಧ.– ತನ್ನ ಪ್ರವೇಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾಲಯದಿಂದ ತನ್ನ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶಪಡೆದಿರುವ ಯಾವೊಬ್ಬ ವಿದ್ಯಾರ್ಥಿಯು, ಕಾಲೇಜು ಅಥವಾ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹನಾಗಿರತಕ್ಕದ್ದಲ್ಲ.

47. ಖಾಯಂ ಸಂಯೋಜನೆ.– (1) ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ನಿರಂತರವಾಗಿ ಸಂಯೋಜನೆಗೊಂಡಿರುವ ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿರ್ದಿಷ್ಟಪಡಿಸಿದ ಸಂಯೋಜನೆಯ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಮತ್ತು ವಿದ್ಯಾ ವಿಷಯದಲ್ಲಿ ಉತ್ಕೃಷ್ಟತೆಯನ್ನು ಸಾಧಿಸಿದ ಹಾಗೂ ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜು ಖಾಯಂ ಸಂಯೋಜನೆಯ ಮಂಜೂರಾತಿಗೆ ಅರ್ಹವಾಗಿರತಕ್ಕದ್ದು.

(2) 45ನೇ ಪ್ರಕರಣದ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಖಾಯಂ ಸಂಯೋಜನೆಯ ಮಂಜೂರಾತಿಗೆ ಅನ್ವಯವಾಗತಕ್ಕದ್ದು.

(3) ಖಾಯಂ ಆಗಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜಿನ, ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕಾರ್ಯ ವೈಖರಿಯನ್ನು ಐದು ವರ್ಷಗಳ ಅವಧಿಯಲ್ಲಿ ಕೊನೆಪಕ್ಷ ಒಂದು ಸಲದಂತೆ ಆಗಾಗ್ಗೆ, ವಿಶ್ವವಿದ್ಯಾಲಯ ಮತ್ತು ರಾಜ್ಯ ಸರ್ಕಾರಗಳು ಪರಿಶೀಲನೆ ಮಾಡತಕ್ಕದ್ದು.

(4) ಪೂರ್ವೋಕ್ತ ಉಪ ಪ್ರಕರಣಗಳಲ್ಲಿ ಏನೇ ಇದ್ದರೂ, ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜು, (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಷರತ್ತುಗಳನ್ನು ಪೂರೈಸಲು ವಿಫಲವಾಗಿದ್ದಲ್ಲಿ, ಅದರ ಖಾಯಂ ಸಂಯೋಜನೆಯನ್ನು ರದ್ದುಪಡಿಸತಕ್ಕದ್ದು:

ಪರಂತು, ಸಂಬಂಧಪಟ್ಟ ಕಾಲೇಜಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ವಿಶ್ವವಿದ್ಯಾಲಯವು ಒಂದು ಅವಕಾಶಕೊಟ್ಟ ಹೊರತು ಖಾಯಂ ಸಂಯೋಜನೆಯನ್ನು ರದ್ದುಗೊಳಿಸತಕ್ಕದ್ದಲ್ಲ:

ಮತ್ತು ಪರಂತು, ಖಾಯಂ ಸಂಯೋಜನೆಯನ್ನು ರದ್ದುಗೊಳಿಸಿದ ತರುವಾಯ ಸಂಬಂಧಪಟ್ಟ ಕಾಲೇಜು, ಸಂಯೋಜನೆಯನ್ನು ವಾರ್ಷಿಕ ಆಧಾರದ ಮೇಲೆ ತಾತ್ಕಾಲಿಕವಾಗಿ ಮುಂದುವರೆಸಲು ಕೋರತಕ್ಕದ್ದು.

48. ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು.– (1) ಸಂಯೋಜನೆಗೊಂಡ ಕಾಲೇಜು ಈ ಅಧಿನಿಯಮದ ಯಾವುದೇ ಉಪಬಂಧವನ್ನು ಪಾಲಿಸಲು ವಿಫಲವಾದರೆ ಅಥವಾ ಸಂಯೋಜನೆಯ ಯಾವುದೇ ಷರತ್ತುಗಳನ್ನು ಪಾಲಿಸಲು ವಿಫಲವಾದರೆ ಅಥವಾ ಕಾಲೇಜನ್ನು ಶಿಕ್ಷಣದ ಹಿತಾಸಕ್ತಿಗಳಿಗೆ ದಕ್ಕೆ ಉಂಟು ಮಾಡುವ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದರೆ, ಸಂಯೋಜನೆಯ ಮೂಲಕ ಕಾಲೇಜಿಗೆ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಪ್ರದತ್ತವಾದ ಹಕ್ಕುಗಳನ್ನು ಪೂರ್ಣವಾಗಿ ಅಥವಾ ಭಾಗಶ: ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಡು ಮಾಡಬಹುದು.

(2) ಅಂತಹ ಹಕ್ಕುಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಮಾರ್ಪಾಟುಮಾಡುವುದಕ್ಕೆ ಸೂಚನೆಯನ್ನು ಮಂಡಳಿಯ ಸಭೆಯಲ್ಲಿ ಮಾತ್ರ ಮಂಡಿಸತಕ್ಕದ್ದು. ಮಂಡಳಿಯ ಪದನಿಮಿತ್ತ ಸದಸ್ಯನೂ ಒಳಗೊಂಡಂತೆ ಅಂತಹ ಸೂಚನೆಯನ್ನು ಮಂಡಿಸಲು ಉದ್ದೇಶಿಸುವ ಯಾವೊಬ್ಬ ಸದಸ್ಯನು ಯಾವ ಕಾರಣದ ಮೇಲೆ ಅಂತಹ ಸೂಚನೆಯನ್ನು ಮಂಡಿಸಲಾಗಿದೆಯೋ ಆ ಕಾರಣಗಳನ್ನು ಲಿಖಿತದಲ್ಲಿ ನಿರೂಪಿಸಿ ಅಂಥ ಒಂದು ನೋಟೀಸನ್ನು ನೀಡತಕ್ಕದ್ದು.

(3) ಸದರಿ ಸೂಚನೆಯನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಮಂಡಳಿಯು, ನೋಟೀಸಿನ ಒಂದು ಪ್ರತಿಯನ್ನು, ತನ್ನ ತಿಳುವಳಿಕೆ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಕಾಲೇಜು ಸದರಿ ಸೂಚನೆಯ ಬಗ್ಗೆ ತನ್ನ ಯಾವುದೇ ಮನವಿಯನ್ನು ಬರೆದು ಸಲ್ಲಿಸತಕ್ಕದೆಂದು ಮತ್ತು ಅದನ್ನು ಮಂಡಳಿಯು ಪರ್ಯಾಲೋಚಿಸುವುದೆಂದು ನಿರ್ದಿಷ್ಟವಾಗಿ ತಿಳಿಸಿದ ಪತ್ರದೊಂದಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸತಕ್ಕದ್ದು.

O.17 F – 59

(4) (3)ನೇ ಉಪ ಪ್ರಕರಣದಲ್ಲಿ ಹಾಗೆ ನಿರ್ದಿಷ್ಟಪಡಿಸಿದ ಅವಧಿಯನ್ನು ಅವಶ್ಯವಿದ್ದಲ್ಲಿ, ಮಂಡಳಿಯು ಸಮಂಜಸ ಸಮಯದವರೆಗೆ ವಿಸ್ತರಿಸಬಹುದು.

(5) ಮನವಿಯನ್ನು ಸ್ವೀಕರಿಸಿದ ಮೇಲೆ ಅಥವಾ ಹಿಂದಿನ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಗಿದ ಮೇಲೆ, ಮಂಡಳಿಯು ಸೂಚನೆಯ ನೋಟೀಸನ್ನು, ಅದರಲ್ಲಿ ತಿಳಿಸಿದ ಕಾರಣಗಳನ್ನು ಮತ್ತು ಅದರ ಮೇಲೆ ಸಲ್ಲಿಸಿದ ಮನವಿಯನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಈ ಸಂಬಂಧದಲ್ಲಿ ತಾನು ರಚಿಸಿದ ಮತ್ತು ಪ್ರಾಧಿಕಾರ ನೀಡಿದ ಒಂದು ಸಮಿತಿಯು ತನಗೆ ಅವಶ್ಯವೆಂದು ಕಂಡು ಬರಬಹುದಾದಂತಹ ಪರಿಶೀಲನೆಯನ್ನು ನಡೆಸಿದ ತರುವಾಯ ಮತ್ತು ಅಂತಹ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ, ಒಂದು ನಿರ್ಣಯವನ್ನು ಅದಕ್ಕೆ ಕಾರಣಗಳನ್ನು ದಾಖಲಿಸಿ ಅಂಗೀಕರಿಸತಕ್ಕದ್ದು ಮತ್ತು ಅದನ್ನು ವಿದ್ಯಾವಿಷಯಕ ಪರಿಷತ್ತಿಗೆ ಕಳುಹಿಸಿಕೊಡತಕ್ಕದ್ದು.

(6) (5)ನೇ ಉಪ ಪ್ರಕರಣದ ಅಡಿಯಲ್ಲಿನ ಒಂದು ವರದಿಯನ್ನು ಸ್ವೀಕರಿಸಿದ ಮೇಲೆ, ವಿದ್ಯಾ ವಿಷಯಕ ಪರಿಷತ್ತು ಅದಕ್ಕೆ ಅವಶ್ಯವೆಂದು ಕಂಡುಬರಬಹುದಾದಂತಹ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ಮಾಡಿದ ತರವಾಯ, ಆ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ದಾಖಲಿಸತಕ್ಕದ್ದು ಮತ್ತು ಅದನ್ನು ಮಂಡಳಿಗೆ ವಾಪಸ್ಸು ಕಳುಹಿಸಿಕೊಡತಕ್ಕದ್ದು.

(7) ಮಂಡಳಿಯು, ವಿದ್ಯಾ ವಿಷಯಕ ಪರಿಷತ್ತಿನ ನಿರ್ಣಯವನ್ನು ಪರ್ಯಾಲೋಚಿಸಿದ ತರುವಾಯ ಸಂಯೋಜನೆಯನ್ನು ಹಿಂತೆಗೆದುಕೊಳ್ಳ ಬೇಕೆಂದು ಶಿಫಾರಸ್ಸು ಮಾಡಿದ ಅಂತಿಮ ನಿರ್ಣಯವನ್ನು ಅಂಗೀಕರಿ ಸತಕ್ಕದ್ದು. ಅಂತಹ ನಿರ್ಣಯಕ್ಕೆ ಮಂಡಳಿಯ ಸಭೆಯಲ್ಲಿ ಹಾಜರಿದ್ದ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಬೆಂಬಲ ದೊರೆತ ಹೊರತು ನಿರ್ಣಯವು ಮಂಡಳಿಯಿಂದ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(8) ಕುಲಸಚಿವರು ಪ್ರಸ್ತಾವವನ್ನು, ಸೂಚನೆಯ ನೋಟೀಸು, ಕಾಲೇಜಿನ ಉತ್ತರ, ಮಂಡಳಿಯ ಮತ್ತು ವಿದ್ಯಾ ವಿಷಯಕ ಪರಿಷತ್ತಿನ ನಿರ್ಣಯವೂ ಒಳಗೊಂಡಂತೆ ಎಲ್ಲಾ ದಸ್ತಾವೇಜುಗಳ ಸಮೇತ ತೀರ್ಮಾನ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(9) ರಾಜ್ಯ ಸರ್ಕಾರವು ತನಗೆ ಅವಶ್ಯವೆಂದು ಕಂಡುಬರಬಹುದಾದಂತಹ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರವಾಯ, ಒಂದು ನಿರ್ದಿಷ್ಟ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ, ಸಂಯೋಜನೆಯನ್ನು ಪೂರ್ತಿಯಾಗಿ ಅಥವಾ ಭಾಗಶ: ಹಿಂತೆಗೆದುಕೊಳ್ಳುವಂತೆ ಅಥವಾ ಮಾರ್ಪಾಟು ಮಾಡುವಂತೆ ಅಥವಾ ಪ್ರಸ್ತಾವವನ್ನು ತಿರಸ್ಕರಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಬಹುದು.

(10) ವಿಶ್ವವಿದ್ಯಾಲಯವು ಅಂತಹ ನಿರ್ದೇಶನವನ್ನು ಸ್ವೀಕರಿಸಿದ ಮೇಲೆ, ಅಂತಹ ನಿರ್ದೇಶನಕ್ಕೆ ಅನುಸಾರವಾಗಿ ಔಪಚಾರಿಕ ಆದೇಶವನ್ನು ಹೊರಡಿಸತಕ್ಕದ್ದು.

(11) ಸಂಯೋಜನೆಯನ್ನು ಪೂರ್ಣವಾಗಿ ಅಥವಾ ಭಾಗಶ: ಹಿಂತೆಗೆದುಕೊಂಡ ಕಾಲೇಜಿನ ವಿದ್ಯಾರ್ಥಿಗಳಿಗೆ, ನಿರ್ದಿಷ್ಟ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಹಾಗೆ ಸ್ಥಳಾವಕಾಶ ಕಲ್ಪಿಸಬೇಕಾದಂತಹ ವಿದ್ಯಾರ್ಥಿಗಳ ಸಂಖ್ಯೆಯಷ್ಟರ ಮಟ್ಟಿಗೆ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ, ವಿಶ್ವವಿದ್ಯಾಲಯವು, ಹತ್ತಿರದಲ್ಲಿರುವ ಕಾಲೇಜಿನಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವನ್ನು ಕಲ್ಪಿಸುವ ವ್ಯವಸ್ಥೆ ಮಾಡತಕ್ಕದ್ದು. ಅಂತಹ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಸಂಯೋಜನೆಯನ್ನು ಹಿಂತೆಗೆದು ಕೊಂಡ ಕಾಲೇಜಿನಿಂದ ವಿಶ್ವವಿದ್ಯಾಲಯವು ಅವರನ್ನು ವರ್ಗಾಯಿಸಿದ ಕಾಲೇಜಿಗೆ ವರ್ಗಾಯಿಸತಕ್ಕದ್ದು.

49. ಕಾಲೇಜು ಅಥವಾ ವ್ಯಾಸಂಗ ಕ್ರಮವನ್ನು ಸ್ವಯಂ ಮುಚ್ಚುವಿಕೆ.– (1) ತನ್ನ ಅಸಾಮರ್ಥ್ಯದ ಅಥವಾ ಹಣಕಾಸು ದೃಷ್ಟಿಯಿಂದ ಉರ್ಜಿತವಾಗದ ಕಾರಣದಿಂದ ಅಥವಾ ಆಡಳಿತ ವ್ಯವಸ್ಥೆಯ ಕುಸಿತದ ಕಾರಣದಿಂದ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚಲು ಉದ್ದೇಶಿಸಿರುವಂತಹ ಯಾವುದೇ ಕಾಲೇಜಿನ ಆಡಳಿತ ಮಂಡಳಿಯು ವಿಶ್ವವಿದ್ಯಾಲಯಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ, ಕಾಲೇಜನ್ನು ಮುಚ್ಚುವುದಕ್ಕೆ ಮೊದಲು ಮೂರು ತಿಂಗಳುಗಳಿಗಿಂತ ಕಡಿಮೆ ಇಲ್ಲದಂತೆ, ಆ ಬಗ್ಗೆ ಕಾರಣಗಳನ್ನು ತಿಳಿಸಿ, ನೋಟೀಸನ್ನು ನೀಡತಕ್ಕದ್ದು.

(2) ಕಾಲೇಜಿನ ಅಥವಾ ವ್ಯಾಸಂಗ ಕ್ರಮದ ಮುಚ್ಚುವಿಕೆಯ ಅರ್ಜಿಯನ್ನು ವಿದ್ಯಾವಿಷಯಕ ಪರಿಷತ್ತು ಮತ್ತು ಮಂಡಳಿಗಳು

ಪರಿಗಣಿಸತಕ್ಕದ್ದು ಮತ್ತು ಅವು ಅದರ ಮೇಲೆ ಸೂಕ್ತ ಗೊತ್ತುವಳಿಗಳನ್ನು ಅಂಗೀಕರಿಸತಕ್ಕದ್ದು.

(3) ಕುಲಸಚಿವರು, ಅರ್ಜಿಯನ್ನು ಮತ್ತು ವಿದ್ಯಾವಿಷಯಕ ಪರಿಷತ್ತಿನ ಮತ್ತು ಮಂಡಳಿಯ ಗೊತ್ತುವಳಿಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ಅದು ಅವುಗಳನ್ನು ಪರಿಗಣಿಸಿದ ತರುವಾಯ ಮುಚ್ಚುವ ಬಗ್ಗೆ ಅನುಮತಿ ನೀಡಬೇಕೆಂದು ಅಥವಾ ಮುಚ್ಚುವಿಕೆಗೆ ಅನುಮತಿ ನಿರಾಕರಿಸಬೇಕೆಂದು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಂಥ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದಕ್ಕನುಸಾರ ಆದೇಶಗಳನ್ನು ಹೊರಡಿಸತಕ್ಕದ್ದು.

(4) ಆಡಳಿತ ಮಂಡಳಿಯು, ಶೈಕ್ಷಣಿಕ ವರ್ಷದ ಚಾಲ್ತಿ ಅವಧಿಯಲ್ಲಿ ಮತ್ತು ವಿಶ್ವವಿದ್ಯಾಲಯವು ಸಂಬಂಧಪಟ್ಟ ವ್ಯಾಸಂಗಕ್ರಮದ ವಾರ್ಷಿಕ ಪರೀಕ್ಷೆಗಳನ್ನು ನಡೆಸುವವರೆಗೆ ಮತ್ತು ವಿಶ್ವವಿದ್ಯಾಲಯವು ಮುಚ್ಚಬಹುದೆಂದು ಒಂದು ಔಪಚಾರಿಕ ಆದೇಶವನ್ನು ಹೊರಡಿಸುವವರೆಗೆ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚತಕ್ಕದ್ದಲ್ಲ.

(5) ಹಾಗೆ ಮುಚ್ಚಲಾದ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅವರ ವರ್ಗಾವಣೆಯ ನಂತರ, ವಿಶ್ವವಿದ್ಯಾಲಯವು, ಹತ್ತಿರವಿರುವ ಕಾಲೇಜಿನಲ್ಲಿ ಸಂಬಂಧಪಟ್ಟ ವ್ಯಾಸಂಗಕ್ರಮದಲ್ಲಿ ಪ್ರವೇಶ ಸಂಖ್ಯೆಯನ್ನು ಅಂಥ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡುವಷ್ಟರಮಟ್ಟಿಗೆ ಹೆಚ್ಚಿಸಿ ಪ್ರವೇಶವನ್ನು ನೀಡತಕ್ಕದ್ದು ಮತ್ತು ಅಂಥ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಹಾಗೆ ಮುಚ್ಚಲ್ಪಟ್ಟ ಕಾಲೇಜಿನಿಂದ, ಯಾವ ಕಾಲೇಜಿನಲ್ಲಿ ಅಂಥ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುವರೋ ಅಲ್ಲಿಗೆ ವರ್ಗಾಯಿಸತಕ್ಕದ್ದು.

(6) (1)ನೇ ಉಪಪ್ರಕರಣದ ಅಡಿಯಲ್ಲಿ ನೋಟೀಸಿನ ಅವಧಿಯು ಮುಕ್ತಾಯವಾದ ತರುವಾಯ ತೊಂಬತ್ತು ದಿನಗಳೊಳಗೆ, ಹಾಗೆ ಮುಚ್ಚುವ ಬಗ್ಗೆ ಅನುಮತಿ ನೀಡುವ ಅಥವಾ ನಿರಾಕರಿಸುವ ಯಾವುದೇ ನಿರ್ದೇಶನವನ್ನು ರಾಜ್ಯ ಸರ್ಕಾರವು ನೀಡದಿದ್ದರೆ, (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಕಾಲೇಜನ್ನು ಅಥವಾ ಸಂದರ್ಭಾನುಸಾರ ವ್ಯಾಸಂಗಕ್ರಮವನ್ನು ಮುಚ್ಚಲು ಆಡಳಿತ ಮಂಡಳಿಗೆ ಅನುಮತಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

50. ಕೆಲವು ಸಂಸ್ಥೆಗಳಿಗೆ ಮಾನ್ಯತೆ.- (1) ಸಂಶೋಧನೆ ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ಅಥವಾ ವಿಶೇಷ ಅಧ್ಯಯನಗಳನ್ನು ನಡೆಸುವ ಕಾಲೇಜುಗಳನ್ನು ಹೊರತುಪಡಿಸಿ, ವಿಶ್ವವಿದ್ಯಾಲಯ ಪ್ರದೇಶದ ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು, ಶಾಸನಗಳ ಮೂಲಕ ನಿಯಮಿಸಬಹುದಾದಂಥ ಉದ್ದೇಶಕ್ಕಾಗಿ ಮತ್ತು ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಮಾನ್ಯತೆ ಪಡೆದ ಸಂಸ್ಥೆಯೆಂದು ಮಂಡಳಿಯು ಮಾನ್ಯತೆ ನೀಡಬಹುದು.

(2) ಯಾವುದೇ ಅಂಥ ಮಾನ್ಯತೆಯನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಕಾರಣಗಳಿಗಾಗಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

51. ಕಾಲೇಜುಗಳ ಪರಿವೀಕ್ಷಣೆ ಮತ್ತು ವರದಿಗಳು.-(1) ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜುಗಳೂ ಒಳಗೊಂಡಂತೆ ಸಂಯೋಜನೆಗೊಂಡ ಪ್ರತಿಯೊಂದು ಕಾಲೇಜು, ಮಂಡಳಿಯು ವಿದ್ಯಾವಿಷಯಕ ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ, ಆ ಕಾಲೇಜಿನ ಅಥವಾ ಸಂಸ್ಥೆಯ ದಕ್ಷತೆಯನ್ನು ಮತ್ತು ಅದು ಸಾಧಿಸಿದ ಶೈಕ್ಷಣಿಕ ಗುಣಮಟ್ಟವನ್ನು ನಿರ್ಣಯಿಸುವುದಕ್ಕೆ ಸಾಧ್ಯವಾಗುವಂತೆ ಅಗತ್ಯಪಡಿಸಬಹುದಾದಂಥ ವರದಿಗಳನ್ನು, ವಿವರಣ ಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ಕುಲಸಚಿವರಿಗೆ ಒದಗಿಸತಕ್ಕದ್ದು.

(2) ಮಂಡಳಿಯು, ಅಂಥ ಪ್ರತಿಯೊಂದು ಕಾಲೇಜನ್ನು ಈ ಉದ್ದೇಶಕ್ಕಾಗಿ ರಚಿಸಿದ ಒಂದು ಸಮಿತಿಯು ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸುವಂತೆ ಮಾಡತಕ್ಕದ್ದು.

(3) ಮಂಡಳಿಯು, ಹಾಗೆ ಪರಿವೀಕ್ಷಣೆ ನಡೆಸಿದ ಮೇಲೆ ಯಾವುದೇ ಕಾಲೇಜನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ, ಯಾವುವೇ ವಿಷಯಗಳ ಸಂಬಂಧದಲ್ಲಿ ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಕ್ರಮವನ್ನು ಕೈಗೊಳ್ಳಲು ಕೋರಬಹುದು.

(4) ಪ್ರತಿಯೊಂದು ಕಾಲೇಜು, ವಿಶ್ವವಿದ್ಯಾಲಯವು ವಿದ್ಯಾವಿಷಯಕ್ಕೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಮತ್ತು ಅದಕ್ಕೆ

ಪೂರಕವಾದ ವಿಷಯಗಳ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

ಅಧ್ಯಾಯ – VIII

ಶಾಸನಗಳು ಮತ್ತು ವಿನಿಯಮಗಳು

52. ಶಾಸನಗಳು.– ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯದ ಶಾಸನಗಳು, ವಿಶ್ವವಿದ್ಯಾಲಯದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು ಮತ್ತು ವಿಶೇಷವಾಗಿ, ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸತಕ್ಕದ್ದು, ಎಂದರೆ:–

(1) ಪ್ರಾಧಿಕಾರಗಳ ರಚನೆ, ಅಧಿಕಾರಗಳು ಮತ್ತು ಕರ್ತವ್ಯಗಳು;

(2) ವಿಶ್ವವಿದ್ಯಾಲಯದ ವಿದ್ಯಾವಿಷಯಕ ಜೀವನವನ್ನು ಉತ್ತಮಗೊಳಿಸಲು ಅವಶ್ಯವಾದ ಅಥವಾ ಅಪೇಕ್ಷಣೀಯವಾದ ಇತರ ನಿಕಾಯಗಳ ಅಥವಾ ಸಮಿತಿಗಳ ರಚನೆ, ಸಂಯೋಜನೆ ಮತ್ತು ಪ್ರಕಾರ್ಯಗಳು;

(3) ಕುಲಪತಿಯವರನ್ನು ಹೊರತುಪಡಿಸಿ ವಿಶ್ವವಿದ್ಯಾಲಯದ ಅಧಿಕಾರಿಗಳ ಪದನಾಮಗಳು, ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ನೇಮಕಾತಿಯ ರೀತಿ ಮತ್ತು ಆಯ್ಕೆಗಳು ಮತ್ತು ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು;

(4) ವಿಶ್ವವಿದ್ಯಾಲಯದ ಬೋಧಕರ ಮತ್ತು ಇತರ ಸಿಬ್ಬಂದಿಗಳ ವರ್ಗೀಕರಣ, ವಿದ್ಯಾರ್ಹತೆ ಮತ್ತು ನೇಮಕಾತಿಯ ರೀತಿ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಕರ್ತವ್ಯಗಳು;

(5) ವಿಶ್ವವಿದ್ಯಾಲಯಗಳ ಫ್ಯಾಕಲ್ಟಿಗಳು, ಇಲಾಖೆಗಳು, ಸಂಶೋಧನಾ ಸಂಸ್ಥೆಗಳು, ಕೇಂದ್ರಗಳು ಮತ್ತು ಇತರ ಘಟಕಗಳ ಸ್ಥಾಪನೆ, ಸಮ್ಮಿಲನ, ಉಪವಿಭಜನೆ ಅಥವಾ ರದ್ಧತಿ;

(6) ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕರು ಮತ್ತು ಇತರ ಸಿಬ್ಬಂದಿಗಳ ಪ್ರಯೋಜನಕ್ಕಾಗಿ ವಿಶ್ರಾಂತಿ ವೇತನ ಮತ್ತು ವಿಮಾ ಯೋಜನೆಗಳ ರಚನೆ ಮತ್ತು ಅಂಥ ಯೋಜನೆಗಳ ನಿಯಮಗಳು, ನಿಬಂಧನೆಗಳು ಮತ್ತು ಷರತ್ತುಗಳು;

(7) ಪದವಿ ಮತ್ತು ಡಿಪ್ಲೋಮಾಗಳನ್ನು ಪ್ರದಾನ ಮಾಡಲು ಘಟಕೋತ್ಸವಗಳನ್ನು ನಡೆಸುವುದು;

(8) ಗೌರವ ಪದವಿಗಳು ಮತ್ತು ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು ಮತ್ತು ಹಿಂಪಡೆಯುವುದು;

(9) ವಿಶ್ವವಿದ್ಯಾಲಯದಡಿಯಲ್ಲಿ, ನೇಮಕವಾದ ಅಧಿಕಾರಿಗಳು, ಬೋಧಕರು ಮತ್ತು ಇತರ ವ್ಯಕ್ತಿಗಳ ಸೇವಾಷರತ್ತುಗಳು ಸಂದಾಯ ಮಾಡಬೇಕಾದ ಪರಿಶ್ರಮಧನ ಮತ್ತು ಪ್ರಯಾಣ ಮತ್ತು ದಿನ ಭತ್ಯೆಗಳೂ ಸೇರಿದಂತೆ ಭತ್ಯೆಗಳು;

(10) ಪರೀಕ್ಷಾ ನಿಕಾಯಗಳು ಮತ್ತು ಪರೀಕ್ಷಕರ ನೇಮಕಾತಿಯ ಷರತ್ತುಗಳು ಮತ್ತು ವಿಧಾನ;

(11) ವಿಶ್ವವಿದ್ಯಾಲಯವು ಸ್ಥಾಪಿಸಿದ ಅಥವಾ ನಿರ್ವಹಿಸುವ ಕಾಲೇಜುಗಳು, ಕೇಂದ್ರಗಳು, ವಿಭಾಗಗಳು, ಇಲಾಖೆಗಳು, ವಲಯ ಮತ್ತು ಪ್ರಾದೇಶಿಕ ಸಂಸ್ಥೆಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳ ನಿರ್ವಹಣೆ;

(12) ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕರು ಮತ್ತು ಇತರ ಸಿಬ್ಬಂದಿಗಳ ನೇಮಕಾತಿಗಾಗಿ ಆಯ್ಕೆ ಸಮಿತಿಗಳ ರಚನೆ;

(13) ಈ ಅಧಿನಿಯಮದ ಮೂಲಕ ಶಾಸನಗಳ ಉಪಬಂಧ ಕಲ್ಪಿಸಬೇಕಾದ ಇತರ ಎಲ್ಲಾ ವಿಷಯಗಳು.

53. ಶಾಸನಗಳ ರಚನೆ.– (1) ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಮಂಡಳಿಯು ಯಾವುದೇ ಶಾಸನವನ್ನು ರಚಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(2) ಈ ಅಧಿನಿಯಮದಡಿಯಲ್ಲಿ ರಚಿಸಿದ ಶಾಸನಗಳನ್ನು ಮಂಡಳಿಯು ಪ್ರಸ್ತಾಪಿಸತಕ್ಕದ್ದು ಮತ್ತು ಸರ್ಕಾರದ ಮೂಲಕ ಕುಲಾಧಿಪತಿಯವರಿಗೆ ಅವರ ಅನುಮತಿ ಕೋರಿ ಸಲ್ಲಿಸತಕ್ಕದ್ದು ಮತ್ತು ಕುಲಾಧಿಪತಿಯವರ ಅನುಮತಿ ಪಡೆದ ಮತ್ತು ಸರ್ಕಾರಿ ರಾಜ್ಯಪತ್ರದಲ್ಲಿ ಅದು ಪ್ರಕಟಣೆಯಾದ ತರುವಾಯ ಮಾತ್ರವೇ ಇದು ಜಾರಿಗೆ ಬರತಕ್ಕದ್ದು.

(3) ಈ ಅಧಿನಿಯಮದಡಿಯಲ್ಲಿ ರಚಿಸಲಾದ ಎಲ್ಲಾ ಶಾಸನಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಗೊಳ್ಳತಕ್ಕದ್ದು.

54. ವಿನಿಯಮಗಳು.– (1) ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಈ ಅಧಿನಿಯಮಕ್ಕೆ ಮತ್ತು ಶಾಸನಗಳಿಗೆ ಸುಸಂಗತವಾದ ವಿನಿಯಮಗಳನ್ನು,–

(ಎ) ತಮ್ಮ ಸಭೆಗಳ ಕಾರ್ಯ ವಿಧಾನ ಮತ್ತು ಕೋರಂಗಾಗಿ ಅಗತ್ಯವಿರುವ ಸದಸ್ಯರ ಸಂಖ್ಯೆ ನಿಗದಿಪಡಿಸುವುದಕ್ಕಾಗಿ:

(ಬಿ) ಈ ಅಧಿನಿಯಮ ಅಥವಾ ಶಾಸನಗಳ ಪ್ರಕಾರ ವಿನಿಯಮಗಳ ಮೂಲಕ ನಿಯಂತ್ರಿಸಬೇಕಾದ ವಿಷಯಗಳನ್ನು ಉಪಬಂಧಿಸುವುದಕ್ಕಾಗಿ:

(ಸಿ) ಈ ಅಧಿನಿಯಮ ಮತ್ತು ಶಾಸನಗಳಿಂದ ಉಪಬಂಧಿಸಿರದ ಮತ್ತು ಪ್ರಾಧಿಕಾರಗಳಿಗೇ ಪೂರ್ಣವಾಗಿ ಸಂಬಂಧಪಟ್ಟ ಯಾವುದೇ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ:

- ರಚಿಸಬಹುದು.

(2) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ರಚಿಸಿದ ವಿನಿಯಮಗಳು, ಈ ಬಗ್ಗೆ ಮಂಡಳಿಯು ಕಾಲದಿಂದ ಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಒಳಪಟ್ಟಿರತಕ್ಕದ್ದು.

(3) ವಿದ್ಯಾವಿಷಯಕ ಪರಿಷತ್ತು, ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು, ವ್ಯಾಸಂಗ ಕ್ರಮಗಳು, ಪರೀಕ್ಷಾ ಪದ್ಧತಿ, ಶೈಕ್ಷಣಿಕ ಕರ್ತವ್ಯಗಳ ಕಾಲಾನುಕ್ರಮ, ವಿಶ್ವವಿದ್ಯಾಲಯದ ಪದವಿಗಳು ಮತ್ತು ಡಿಪ್ಲೊಮಾಗಳನ್ನು ನೀಡುವುದು ಮತ್ತು ಶಿಕ್ಷಣ ನಿರ್ದೇಶಕರಿಗೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ವಿನಿಯಮಗಳನ್ನು ರಚಿಸತಕ್ಕದ್ದು.

(4) ವಿದ್ಯಾವಿಷಯಕ ಪರಿಷತ್ತು, ಹಿಂದಿನ ಉಪಪ್ರಕರಣಗಳ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಧಕ್ಕೆಯಾಗದಂತೆ, ವಿನಿಯಮಗಳನ್ನು,-

(ಎ) ಪದವಿಗಳು ಮತ್ತು ಡಿಪ್ಲೊಮಾಗಳನ್ನು ಪ್ರದಾನ ಮಾಡಲು ಘಟಕೋತ್ಸವಗಳನ್ನು ನಡೆಸುವುದಕ್ಕಾಗಿ;

(ಬಿ) ಗೌರವ ಪದವಿಗಳು, ವಿದ್ಯಾ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು, ಪದವಿ ಹಿಂಪಡೆಯುವುದಕ್ಕಾಗಿ;

(ಸಿ) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಸ್ಥಾಪನೆ ಮತ್ತು ರದ್ಧತಿಗಾಗಿ;

(ಡಿ) ಫೆಲೋಶಿಪ್‌ಗಳು, ಸ್ಕಾಲರ್‌ಶಿಪ್‌ಗಳು, ಸ್ಟೈಪೆಂಡುಗಳು; ಶಿಷ್ಯವೇತನಗಳು, ಪದಕಗಳು

ಮತ್ತು ಪ್ರಶಸ್ತಿಗಳನ್ನು ಸ್ಥಾಪಿಸುವುದು ಮತ್ತು ಅವುಗಳನ್ನು ನೀಡುವ ಬಗ್ಗೆ ಷರತ್ತುಗಳಿಗಾಗಿ;

(ಇ) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪ್ರವೇಶ ಮತ್ತು ಅದರ ಪಟ್ಟಿಯಲ್ಲಿ ಹೆಸರು ಸೇರಿಸುವ ಮತ್ತು ವಿದ್ಯಾರ್ಥಿಗಳಾಗಿ ಮುಂದುವರಿಸುವ ಮತ್ತು ಪಟ್ಟಿಯಿಂದ ವಿದ್ಯಾರ್ಥಿಗಳನ್ನು ಬಿಟ್ಟುಬಿಡುವ ಬಗ್ಗೆ ಷರತ್ತುಗಳು ಮತ್ತು ಪ್ರಕ್ರಿಯೆಗಾಗಿ;

(ಎಫ್) ವಿಶ್ವವಿದ್ಯಾಲಯವು ಚಾರ್ಜು ಮಾಡಬಹುದಾದ ಶುಲ್ಕಕ್ಕಾಗಿ;

(ಜಿ) ವಿಶ್ವವಿದ್ಯಾಲಯದ ಎಲ್ಲಾ ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣ ಪತ್ರಗಳಿಗಾಗಿ ರಚಿಸಲಾಗುವ ವ್ಯಾಸಂಗಕ್ರಮಗಳಿಗೆ ;

(ಎಚ್) ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೊಮಾಗಳು ಅಥವಾ ಇತರ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಪ್ರವೇಶಿಸಲು ಷರತ್ತುಗಳು ಹಾಗೂ ಪದವಿಗಳು ಮತ್ತು ಡಿಪ್ಲೊಮಾಗಳನ್ನು ಪಡೆಯುವುದಕ್ಕಾಗಿ ಅಗತ್ಯ ವಾದ ಅರ್ಹತೆಗಾಗಿ;

(ಐ) ಪದವಿಗಳು ಮತ್ತು ಇತರ ವಿದ್ಯಾ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಷರತ್ತುಗಳಿಗಾಗಿ;

(ಜೆ) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಪಾಡುವುದಕ್ಕಾಗಿ;

(ಕೆ) ವಿದ್ಯಾರ್ಥಿನಿಯರ ವಸತಿ, ಶಿಸ್ತು ಮತ್ತು ಅವರಿಗೆ ಬೋಧನೆಗೆ ಯಾವುದಾದರೂ ವಿಶೇಷ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಮತ್ತು ವಿದ್ಯಾರ್ಥಿನಿಯರಿಗಾಗಿಯೇ ವಿಶೇಷ ವ್ಯಾಸಂಗ ಕ್ರಮಗಳಿಗೆ ಉಪಬಂಧಕಲ್ಪಿಸುವುದಕ್ಕಾಗಿ;

(ಎಲ್) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸದ ಷರತ್ತುಗಳು ಮತ್ತು ವಿದ್ಯಾರ್ಥಿನಿಲಯಗಳ ನಿವಾಸಿ ಸುವುದಕ್ಕಾಗಿ ಶುಲ್ಕವನ್ನು ವಿಧಿಸುವುದಕ್ಕಾಗಿ;

(ಎಂ) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಮಾನ್ಯತೆ ಮತ್ತು ನಿರ್ವಹಣೆಗಾಗಿ;

– ರಚಿಸತಕ್ಕದ್ದು.

ಅಧ್ಯಾಯ – IX

ಸಂಕೀರ್ಣ

55. ಕಾರ್ಯಗಳ ಹಾಗೂ ವ್ಯವಹರಣೆಗಳ ಸಿಂಧುತ್ವದ ಉಳಿಸುವಿಕೆಗಳು.– (1) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ವ್ಯವಹರಣೆಗಳನ್ನು ಕೇವಲ ಈ ಮುಂದಿನ ಕಾರಣಗಳಿಗಾಗಿ ಪ್ರಶ್ನಿಸತಕ್ಕದ್ದಲ್ಲ, ಎಂದರೆ:–

(i) ಯಾವುದೇ ಪ್ರಾಧಿಕಾರದ ರಚನೆಯಲ್ಲಿ ಯಾವುದೇ ಖಾಲಿಸ್ಥಾನ ಅಥವಾ ದೋಷ ಇರುವುದು, ಅಥವಾ

(ii) ಪ್ರಕರಣದ ಗುಣಾಂಶಗಳಿಗೆ ಬಾಧೆ ಉಂಟುಮಾಡದ ಆ ಕಾರ್ಯ ಅಥವಾ ವ್ಯವಹರಣೆಗಳಲ್ಲಿರುವ ಯಾವುದೇ ದೋಷ ಅಥವಾ ಕ್ರಮಬಾಹಿರತೆ.

56. ವಿದ್ಯಾರ್ಥಿಗಳ ವಾಸಸ್ಥಳ.– ವಿಶ್ವವಿದ್ಯಾಲಯವು ನಿರ್ವಹಿಸುವ ಅಥವಾ ಕುಲಪತಿಯವರು ಅನುಮೋದಿಸಿದ ವಾಸಸ್ಥಳದಲ್ಲಿ ವಿದ್ಯಾರ್ಥಿಗಳು ನಿಯಮಿಸಲಾದಂಥ ಷರತ್ತುಗಳಗೊಳಪಟ್ಟು ವಾಸಿಸತಕ್ಕದ್ದು. ಆದಾಗ್ಯೂ, ವಿಶ್ವವಿದ್ಯಾಲಯದಲ್ಲಿ ಅಂಥ ವಾಸಸ್ಥಳವು ದೊರಕದಿದ್ದಲ್ಲಿ ವಿಶ್ವವಿದ್ಯಾಲಯದ ಕುಲಪತಿಯವರು ಅಥವಾ ಅಧಿಕೃತರಾದ ಒಬ್ಬ ಅಧಿಕಾರಿಯು ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಯವರೊಂದಿಗೆ ಅಥವಾ ಖಾಸಗಿ ವಾಸಸ್ಥಳಗಳಲ್ಲಿ ವಾಸಿಸಲು ಅನುಮತಿಸಬಹುದು.

57. ವಾರ್ಷಿಕ ವರದಿ.– ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಕುಲಸಚಿವರು ಅಥವಾ ಕುಲಪತಿಯವರ ನಿರ್ದೇಶನಗಳಡಿಯಲ್ಲಿ ಇತರ ಯಾವೊಬ್ಬ ಅಧಿಕಾರಿಯು ಹಣಕಾಸು ವರ್ಷದ ಮುಕ್ತಾಯದಿಂದ ಆರು ತಿಂಗಳೊಳಗೆ ತಯಾರಿಸತಕ್ಕದ್ದು ಮತ್ತು ಇದನ್ನು ಪರಿಗಣನೆಗೆ ತೆಗೆದು ಕೊಳ್ಳುವ ಸಭೆಯು ನಡೆಯುವುದಕ್ಕಿಂತ ಒಂದು ತಿಂಗಳ ಮೊದಲು ಮಂಡಳಿಯ ಸದಸ್ಯರುಗಳಿಗೆ ಪರಿಚಲನೆ ಮಾಡತಕ್ಕದ್ದು. ಮಂಡಳಿಯು ವಾರ್ಷಿಕ ವರದಿಯ ಪರಿಗಣನೆಯ ತರುವಾಯ ಅದರ ಪ್ರತಿಯನ್ನು

ಸರ್ಕಾರದ ಮುಂದಿಡತಕ್ಕದ್ದು, ಅದನ್ನು ವಿಧಾನಮಂಡಲದ ಎರಡೂ ಸದನಗಳ ಮುಂದೆ ಮಂಡಿಸತಕ್ಕದ್ದು.

58. ಅಧಿಕಾರಗಳ ಪ್ರತ್ಯಾಯೋಜನೆ.– ಕುಲಪತಿಯವರು, ಆದೇಶದ ಮೂಲಕ, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾಗಿರುವ ಶಾಸನಗಳಡಿಯಲ್ಲಿ ತಾನು ಚಲಾಯಿಸಬಹುದಾದ ಅಧಿಕಾರಗಳನ್ನು ಕುಲಪತಿಯವರು ಸರಿಯಾಗಿದೆಯೆಂದು ಭಾವಿಸಬಹುದಾದಂಥ ಷರತ್ತುಗಳು ಮತ್ತು ಮಿತಿಗಳಿಗೊಳಪಟ್ಟು ಯಾವುದೇ ಪ್ರಾಧಿಕಾರ, ಅಧಿಕಾರಿ, ಕಾಲೇಜುಗಳ ಮುಖ್ಯಸ್ಥರು, ಇಲಾಖೆಗಳು, ಸಂಸ್ಥೆಗಳು ಅಥವಾ ಘಟಕಗಳು ಅಥವಾ ಕಚೇರಿಗೆ ಪ್ರತ್ಯಾಯೋಜಿಸಬಹುದು.

59. ಅಡ್-ಹಾಕ್ ಸಮಿತಿಗಳ ರಚನೆ.– ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಈ ಅಧಿನಿಯಮ ಅಥವಾ ಶಾಸನಗಳು ಅಥವಾ ವಿನಿಯಮಗಳ ಉಪಬಂಧಗಳನ್ವಯ ವಿಶ್ವವಿದ್ಯಾಲಯಗಳ ಪ್ರಾಧಿಕಾರಗಳು ಅಥವಾ ನಿಕಾಯಗಳು ರಚನೆಯಾಗುವವರೆಗೆ ಕುಲಾಧಿಪತಿಯವರ ಪೂರ್ವಾನುಮೋದನೆಗೊಳಪಟ್ಟು ಕುಲಪತಿಯವರು, ಈ ಅಧಿನಿಯಮ ಅಥವಾ ಶಾಸನಗಳು ಅಥವಾ ವಿನಿಯಮಗಳಡಿಯಲ್ಲಿನ ಅಂಥ ಪ್ರಾಧಿಕಾರಗಳ ಅಥವಾ ನಿಕಾಯಗಳ ಯಾವುದೇ ಅಧಿಕಾರಗಳನ್ನು ಚಲಾಯಿಸಲು, ಪ್ರಕಾರ್ಯಗಳನ್ನು ನಿರ್ವಹಿಸಲು ಮತ್ತು ಕರ್ತವ್ಯಗಳನ್ನು ಮಾಡಲು ತಾತ್ಕಾಲಿಕವಾಗಿ ಅಡ್-ಹಾಕ್ ಸಮಿತಿಗಳನ್ನು ನೇಮಿಸಬಹುದು.

60. ಪ್ರಾಧಿಕಾರಗಳು ಅಥವಾ ನಿಕಾಯಗಳ ಸ್ಥಾಪನೆಯಲ್ಲಿ ವಿವಾದಗಳು.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನಾಗಿ ನೇಮಕಾತಿ ಹೊಂದಲು ಅಥವಾ ಸದಸ್ಯನಾಗಲು ಯಾವುದೇ ವ್ಯಕ್ತಿಯ ಅರ್ಹತೆಯ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದಲ್ಲಿ, ಆ ವಿಷಯವನ್ನು ಕುಲಾಧಿಪತಿಯವರಿಗೆ ತೀರ್ಮಾನಕ್ಕಾಗಿ ಕಳುಹಿಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಪರಂತು, ಯಾವುದೇ ಅಂಥ ತೀರ್ಮಾನವನ್ನು ತೆಗೆದುಕೊಳ್ಳುವ ಮುಂಚೆ, ಕುಲಾಧಿಪತಿಯವರು ಅದರಿಂದ ಬಾಧಿತನಾಗುವ ವ್ಯಕ್ತಿಗೆ ತನ್ನ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

61. ವಿಶ್ವವಿದ್ಯಾಲಯದ ಪುನರವಲೋಕನ ಆಯೋಗದ ನೇಮಕ.- (1) ಕುಲಾಧಿಪತಿಯು, ಪ್ರತಿ ಐದು ವರ್ಷಗಳಿಗೊಮ್ಮೆ ವಿಶ್ವವಿದ್ಯಾಲಯದ ಕಾರ್ಯ ನಿರ್ವಹಣೆಯನ್ನು ಪುನರವಲೋಕಿಸುವುದಕ್ಕಾಗಿ ಮತ್ತು ಶಿಫಾರಸುಗಳನ್ನು ಮಾಡುವುದಕ್ಕಾಗಿ ಒಂದು ಆಯೋಗವನ್ನು ರಚಿಸತಕ್ಕದ್ದು.

(2) ಆಯೋಗವು, ಮೂವರಿಗೆ ಕಡಿಮೆಯಿಲ್ಲದಂತೆ, ಕುಲಾಧಿಪತಿಯವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ನೇಮಿಸಿದ ತೋಟಗಾರಿಕೆ ಕ್ಷೇತ್ರದಲ್ಲಿ ಪ್ರಸಿದ್ಧ ಶಿಕ್ಷಣ ತಜ್ಞರನ್ನು ಒಳಗೊಂಡಿರತಕ್ಕದ್ದು. ಅವರಲ್ಲಿ ಒಬ್ಬರು ಅಧ್ಯಕ್ಷರಾಗತಕ್ಕದ್ದು.

(3) ಸದಸ್ಯರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು, ಕುಲಾಧಿಪತಿಯವರು ನಿರ್ಧರಿಸಬಹುದಾದಂಥವುಗಳು ಆಗಿರತಕ್ಕದ್ದು.

(4) ಆಯೋಗವು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಕುಲಾಧಿಪತಿಯವರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡತಕ್ಕದ್ದು.

(5) ಕುಲಾಧಿಪತಿಯವರು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಶಿಫಾರಸ್ಸಿನ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಕ್ರಮವನ್ನು ಕೈಗೊಳ್ಳಬಹುದು.

(6) ರಾಜ್ಯ ಸರ್ಕಾರವು, ಕೈಗೊಂಡ ಕ್ರಮವನ್ನು ವಿವರಿಸುವ ಜ್ಞಾಪನ ಪತ್ರದೊಡನೆ ಶಿಫಾರಸುಗಳ ಒಂದು ಪ್ರತಿಯನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

62. ವಿಶ್ವವಿದ್ಯಾಲಯದ ವ್ಯವಹರಣೆಗಳ ಸಂಬಂಧದಲ್ಲಿ ಹುದ್ದೆಗಳಿಗೆ ನೇಮಕಾತಿ.- (1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು ವಿಶ್ವವಿದ್ಯಾಲಯದ ವ್ಯವಹರಣೆಗಳಿಗೆ ಸಂಬಂಧಿಸಿದ ಹುದ್ದೆಗಳಿಗೆ ನೇಮಕಾತಿ ಮತ್ತು ಸೇವೆಗಳನ್ನು ನಿಯಮಿಸಲಾದಂತೆ ಮಂಡಳಿಯ ಪೂರ್ವಾನುಮತಿಯೊಡನೆ ಕುಲಪತಿಯವರು ಮಾಡಬಹುದು:

ಪರಂತು, ಬೋಧಕ ಸಿಬ್ಬಂದಿಯ ಸಹಾಯಕ ಪ್ರಾಧ್ಯಾಪಕರ ಮತ್ತು ಬೋಧಕೇತರ ಸಿಬ್ಬಂದಿಯ 'ಎ' ವೃಂದದ ಸಿಬ್ಬಂದಿಗಳ ವೇತನ ಶ್ರೇಣಿಯದ್ದಕ್ಕಿಂತ ಕಡಿಮೆ ವೇತನಶ್ರೇಣಿಯನ್ನು ಹೊಂದಿರುವ ಹುದ್ದೆಗಳ ನೇಮಕಾತಿಯ ಸಂಬಂಧದಲ್ಲಿ ಮಂಡಳಿಯ ಅಂಥ ಅನುಮೋದನೆಯ ಅವಶ್ಯಕತೆ ಇರತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಶಾಸನಗಳು ರಚನೆಯಾಗುವ ಅಥವಾ ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಸ್ಥಾಪನೆಯಾಗುವವರೆಗಿನ ಅವಧಿಗೆ, ವಿಶ್ವವಿದ್ಯಾಲಯದ ವ್ಯವಹರಣೆಗಳ ಸಂಬಂಧದಲ್ಲಿ ಹುದ್ದೆಗಳು ಮತ್ತು ಸೇವೆಗಳಿಗೆ ನೇಮಕಾತಿಗಳನ್ನು, ಕುಲಾಧಿಪತಿಯವರು ಅನುಮೋದಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಕುಲಪತಿಯವರು ಮಾಡಬಹುದು.

63. ತಾತ್ಕಾಲಿಕ ಉಪಬಂಧಗಳು.– ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕುಲಪತಿಯು ಕುಲಾಧಿಪತಿಯವರ ಪೂರ್ವಾನುಮೋದನೆಯೊಂದಿಗೆ ಈ ಅಧಿನಿಯಮದ ಪ್ರಾರಂಭದಿಂದ ಒಂದು ವರ್ಷದ ಅವಧಿಗಾಗಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಈ ಅಧಿನಿಯಮದ ಮೂಲಕ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ಅಥವಾ ನಿಕಾಯವು ಚಲಾಯಿಸಬೇಕಾದ ಯಾವುವೇ ಅಧಿಕಾರಗಳನ್ನು ಅಥವಾ ನಿರ್ವಹಿಸಬೇಕಾದ ಯಾವುವೇ ಕರ್ತವ್ಯಗಳನ್ನು ಈ ಅಧಿನಿಯಮದಲ್ಲಿ ಅಥವಾ ಶಾಸನಗಳಲ್ಲಿ ಅಥವಾ ವಿನಿಯಮಗಳಲ್ಲಿ ಉಪಬಂಧಿಸಿದಂತೆ ಅಂಥ ಪ್ರಾಧಿಕಾರವು ಅಥವಾ ನಿಕಾಯವು ಅಸ್ತಿತ್ವಕ್ಕೆ ಬರುವವರೆಗೆ ಚಲಾಯಿಸಬಹುದು ಅಥವಾ ನೆರವೇರಿಸಬಹುದು.

64. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಶಾಸನಗಳು ಅಥವಾ ವಿನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ವಿಶ್ವವಿದ್ಯಾಲಯದ ಅಥವಾ ಅದರ ಪ್ರಾಧಿಕಾರಗಳ, ನಿಕಾಯಗಳ ಅಥವಾ ಅಧಿಕಾರಿಗಳ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆ ನಡೆಸಲು ಅವಕಾಶ ಇರತಕ್ಕದ್ದಲ್ಲ ಮತ್ತು ಅವರಿಂದ ಯಾವುದೇ ನಷ್ಟ ಪರಿಹಾರಗಳನ್ನು ಕ್ಲೈಮ್ ಮಾಡತಕ್ಕದ್ದಲ್ಲ.

65. ತೊಂದರೆಗಳ ನಿವಾರಣೆಗೆ ಅಧಿಕಾರ.– (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಮೊದಲ ರಚನೆಯ ಅಥವಾ ಪುನಾರಚನೆಯ ಸಂಬಂಧದಲ್ಲಿ ಅಥವಾ ಈ ಅಧಿನಿಯಮದ

ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಹಾಗೂ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧ ಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು 8ನೇ ಉಪ-ಪ್ರಕರಣದಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರ ಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನಮಂಡಲದ ಯಾವೊಂದು ಸದನವು ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಡು ಮಾಡಿದರೆ, ಅಥವಾ ಆ ಅಧಿಸೂಚನೆಯು ಪರಿಣಾಮಕ್ಕೆ ಬರತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಹಾಗೂ ಆ ಮಾರ್ಪಾಡು ಅಥವಾ ನಿರ್ದೇಶನವನ್ನು ಇನ್ನೊಂದು ಸದನವು ಒಪ್ಪಿದರೆ ತದನಂತರ ಅಂಥ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಈ ಅಧಿಸೂಚನೆಯ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧೆ ಉಂಟುಮಾಡತಕ್ಕದ್ದಲ್ಲ.

66. ಕಾನೂನು ವ್ಯವಹರಣೆ.– ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧವಾದ ಎಲ್ಲಾ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ವಿಶ್ವವಿದ್ಯಾಲಯದ ಪರವಾಗಿ ಕುಲಸಚಿವರು ಅಥವಾ ಕುಲಪತಿಯವರು ಇದರ ಬಗ್ಗೆ ಅಧಿಕಾರ ನೀಡಿದ ಯಾವೊಬ್ಬ ಇತರ

ಅಧಿಕಾರಿಯು ಪ್ರಾರಂಭಿಸತಕ್ಕದ್ದು, ಪ್ರಾಸಿಕ್ಯೂಟ್ ಮಾಡತಕ್ಕದ್ದು ಅಥವಾ ಪ್ರತಿರಕ್ಷಿಸತಕ್ಕದ್ದು.

67. ನಿರಸನ ಮತ್ತು ಉಳಿಸುವಿಕೆಗಳು.– (1) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ 3) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಅನುಸೂಚಿ

(2(31)ನೇ ಪ್ರಕರಣವನ್ನು ನೋಡಿ)

I. **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.**

1. ತೋಟಗಾರಿಕೆ ಕಾಲೇಜು, ಮೂಡಿಗೆರೆ
2. ಭತ್ತ ಸಂಶೋಧನೆಯ ಮತ್ತು ಕೃಷಿ ವಿಜ್ಞಾನ ಕೇಂದ್ರದ ಪ್ರದೇಶಗಳನ್ನು ಹೊರತುಪಡಿಸಿ ವಲಯ ಕೃಷಿ ಸಂಶೋಧನಾ ಕೇಂದ್ರ, ಮೂಡಿಗೆರೆ
3. ತೆಂಗು ಸಂಶೋಧನಾ ಕೇಂದ್ರ, ಅರಸೀಕೆರೆ
4. ಕೃಷಿ ವಿಜ್ಞಾನ ಕೇಂದ್ರ ಪ್ರದೇಶವನ್ನು ಹೊರತುಪಡಿಸಿ ವಲಯ ಕೃಷಿ ಸಂಶೋಧನಾ ಕೇಂದ್ರ, ಹಿರಿಯೂರು
5. ಗೋಡಂಬಿ ಸಂಶೋಧನಾ ಕೇಂದ್ರ, ಉಲ್ಲಾಳ
6. ಅಡಿಕೆ ಸಂಶೋಧನಾ ಕೇಂದ್ರ, ಸೀಬಿನಕೆರೆ ತೋಟಗಾರಿಕೆ ಇಲಾಖೆಯ ಫಾರಂ, ತೀರ್ಥಹಳ್ಳಿ

II. **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ.**

1. ಕಿತ್ತೂರು ರಾಣಿ ಚೆನ್ನಮ್ಮ ತೋಟಗಾರಿಕೆ ಕಾಲೇಜು, ಅರಭಾವಿ
2. ತೋಟಗಾರಿಕೆ ಸಂಶೋಧನಾ ಕೇಂದ್ರ, ಕಣಬರಗಿ
3. ತೋಟಗಾರಿಕೆ ಸಂಶೋಧನಾ ಕೇಂದ್ರ, ಕುಂಬಾಪುರ
4. ತೋಟಗಾರಿಕೆ ಸಂಶೋಧನಾ ಕೇಂದ್ರ, ತಿಡಗುಂಡಿ

5. ಮೆಣಸು ಸಂಶೋಧನಾ ಕೇಂದ್ರ, ಶಿರಸಿ
6. ಮುಸುಕಿನ ಜೋಳ ಬೆಳೆದ ಪ್ರದೇಶವನ್ನು ಹೊರತುಪಡಿಸಿ ಮೆಣಸಿನಕಾಯಿ ಸಂಶೋಧನಾ ಕೇಂದ್ರ, ದೇವಿ ಹೊಸೂರು
7. ಬೀದರ್ ತೋಟಗಾರಿಕೆ ಕಾಲೇಜು, ಹೊಸ ಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳುವವರೆಗೆ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಸ್ಥಾಪಿಸುವವರೆಗೆ ಜನವಾಡ ಸಂಶೋಧನಾ ಕೇಂದ್ರದಲ್ಲಿ ಕಾರ್ಯನಿರ್ವಹಿಸತಕ್ಕದ್ದು.
8. ಬಾಗಲಕೋಟೆ ತೋಟಗಾರಿಕೆ ಕಾಲೇಜು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಬಾಗಲಕೋಟೆಯಲ್ಲಿ ಸ್ಥಾಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಇದನ್ನು ಕಾರ್ಯಗತಗೊಳಿಸಲು ಈ ಮುಂದಿನವುಗಳಿಗೆ ಉಪಬಂಧಗಳನ್ನು ಕಲ್ಪಿಸಲಾಗಿದೆ.

(i) ತೋಟಗಾರಿಕೆ ಮತ್ತು ತತ್ಸಂಬಂಧಿತ ವಿಜ್ಞಾನಗಳಲ್ಲಿ ಬೋಧನೆ, ತರಬೇತಿ ಒದಗಿಸಲು ಮತ್ತು ಸಂಶೋಧನೆ ನಡೆಸಲು ಹಾಗೂ ತೋಟಗಾರಿಕೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪದವಿಗಳು, ಡಿಪ್ಲೋಮಾ ಪ್ರಮಾಣ ಪತ್ರಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ನೀಡಲು ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ;

(ii) ಅನುಸೂಚಿಯಲ್ಲಿ ನಿರ್ದಿಷ್ಟವಾಗಿ ಹೇಳಿರುವ, ಪ್ರಸ್ತುತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯಲ್ಲಿರುವ ಕೆಲವು ಕಾಲೇಜುಗಳು, ಸಂಶೋಧನಾ ಸಂಸ್ಥೆಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳನ್ನು ಹಾಗೂ ಅಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ಈ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವುದು;

(iii) ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಇತರ ಅಧಿಕಾರಿಗಳನ್ನು ನೇಮಿಸುವುದು;

(iv) ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ, ವಿದ್ಯಾವಿಷಯಕ ಪರಿಷತ್ತು, ಸಂಶೋಧನಾ ಪರಿಷತ್ತು, ಹಣಕಾಸು ಸಮಿತಿ, ಅಧ್ಯಯನ ಮಂಡಳಿ ಮತ್ತು ವಿಶ್ವವಿದ್ಯಾಲಯದ ಇತರ ನಿಕಾಯಗಳನ್ನು ರಚಿಸುವುದು ಮತ್ತು ಅವುಗಳ ಅಧಿಕಾರ ಮತ್ತು ಪ್ರಕಾರ್ಯಗಳನ್ನು ನಿಯಮಿಸುವುದು;

(v) ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಇರುವ ಕಾಲೇಜುಗಳನ್ನು ಸಂಯೋಜಿಸುವುದು ಮತ್ತು ಸಂಸ್ಥೆಗಳಿಗೆ ಮಾನ್ಯತೆ ನೀಡುವುದು;

(vi) ವಿಶ್ವವಿದ್ಯಾಲಯದ ಪುನರವಲೋಕನಾ ಆಯೋಗವನ್ನು ನೇಮಿಸುವುದು...

O.17 F - 61

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ರಾಜ್ಯ ಉಭಯ ಸದನಗಳು ಅಧಿವೇಶನದಲ್ಲಿ ಇರದಿದ್ದುದರಿಂದ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:2) ಪ್ರಖ್ಯಾಪಿಸಲಾಗಿತ್ತು.

ಸದರಿ ಅಧ್ಯಾದೇಶದ ಬದಲಾಗಿ ಈ ವಿದೆಯಕವನ್ನು ತರಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ವಾರ್ಷಿಕ ಹತ್ತು ಕೋಟಿ ರೂಪಾಯಿಗಳ ಹೆಚ್ಚಿನ ವೆಚ್ಚ ಉಂಟಾಗುತ್ತದೆ.

ಕರ್ನಾಟಕ ವಿಧಾನಸಭೆಯ ನಡವಳಿಗಳು ಮತ್ತು ಕಾರ್ಯವಿಧಾನಗಳ ನಿಯಮಗಳ ನಿಯಮ 80(1)ರ ಅಡಿಯಲ್ಲಿ ಅಗತ್ಯಪಡಿಸಿರುವಂತೆ ವಿವರಣಾತ್ಮಕ ಹೇಳಿಕೆ

ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಬಾಗಲಕೋಟೆಯಲ್ಲಿ ಸ್ಥಾಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಹಾಗೆ ಮಾಡುವುದಕ್ಕಾಗಿ ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ :–

(i) ತೋಟಗಾರಿಕೆ ಮತ್ತು ತತ್ಸಂಬಂಧಿತ ವಿಜ್ಞಾನವಿಷಯದಲ್ಲಿ ಬೋಧನೆ, ತರಬೇತಿ ಒದಗಿಸಲು ಮತ್ತು ಸಂಶೋಧನೆ ಹಾಗೂ ತೋಟಗಾರಿಕೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪದವಿಗಳು, ಡಿಪ್ಲೋಮಾ ಸರ್ಟಿಫಿಕೇಟ್ ಮತ್ತು ಇತರ ಶೈಕ್ಷಣಿಕ ಪದವಿ ನೀಡುವುದು.

(ii) ಅನುಸೂಚಿಯಲ್ಲಿ ನಿರ್ದಿಷ್ಟವಾಗಿ ಹೇಳಿರುವ, ಪ್ರಸ್ತುತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯಲ್ಲಿರುವ ಕೆಲವು ಕಾಲೇಜುಗಳು, ಸಂಶೋಧನಾ ಸಂಸ್ಥೆಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳನ್ನು ಹಾಗೂ ಅಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ಈ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವುದು;

(iii) ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಇತರ ಅಧಿಕಾರಿಗಳನ್ನು ನೇಮಿಸುವುದು;

(iv) ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ, ವಿದ್ಯಾವಿಷಯಕ ಪರಿಷತ್ತು, ಸಂಶೋಧನಾ ಪರಿಷತ್ತು, ಹಣಕಾಸು ಸಮಿತಿ, ಅಧ್ಯಯನ ಮಂಡಳಿ ಮತ್ತು ವಿಶ್ವವಿದ್ಯಾಲಯದ ಇತರ ನಿಕಾಯಗಳನ್ನು ರಚಿಸುವುದು ಮತ್ತು ಅವುಗಳ ಅಧಿಕಾರ ಮತ್ತು ಪ್ರಕಾರ್ಯಗಳನ್ನು ನಿಯಮಿಸುವುದು;

(v) ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಅಧ್ಯಯನಕ್ಕಾಗಿ ಕಾಲೇಜುಗಳನ್ನು ಸಂಯೋಜಿಸುವುದು ಮತ್ತು ಸಂಸ್ಥೆಗಳನ್ನು ಮಾನ್ಯ ಮಾಡುವುದು;

(vi) ವಿಶ್ವವಿದ್ಯಾಲಯದ ಪುನರೀಕ್ಷಣಾ ಆಯೋಗವನ್ನು ನೇಮಿಸುವುದು.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ರಾಜ್ಯ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:2) ಪ್ರಖ್ಯಾಪಿಸಲಾಗಿತ್ತು.

ಉಮೇಶ್ ವಿ. ಕತ್ತಿ
ತೋಟಗಾರಿಕೆ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ – III

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನಸಭೆ

ಐದನೇ ಅಧಿವೇಶನ

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 2010 (2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 5)

ಕರ್ನಾಟಕದ ಗಡಿ ಪ್ರದೇಶದ ಅಭಿವೃದ್ಧಿಗಾಗಿ *ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ*ವೊಂದರ ಸ್ಥಾಪನೆಗೆ ಮತ್ತು ಕರ್ನಾಟಕ ಗಡಿ ಅಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ.

ಕರ್ನಾಟಕದ ಗಡಿ ಪ್ರದೇಶದ ಅಭಿವೃದ್ಧಿಗಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವೊಂದರ ಸ್ಥಾಪನೆಗೆ ಮತ್ತು ಕರ್ನಾಟಕದ ಗಡಿ ಪ್ರದೇಶದ ಅಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ,

ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ***ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2010*** ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪ್ರಾಧಿಕಾರ" ಎಂದರೆ, 3 ನೇ ಪ್ರಕರಣದ ಮೇರೆಗೆ ರಚಿಸಲಾದ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ;

(ಬಿ) "ಗಡಿ ಪ್ರದೇಶ" ಎಂದರೆ ಅನುಸೂಚಿಯಲ್ಲಿ ನಮೂದಿಸಲಾಗಿರುವ ಕರ್ನಾಟಕ ರಾಜ್ಯದ ಗಡಿ ಭಾಗದಲ್ಲಿರುವ ತಾಲ್ಲೂಕುಗಳು ಹಾಗೂ ಇತರ ಪ್ರದೇಶಗಳು;

(ಸಿ) "ಅಧ್ಯಕ್ಷ" ಎಂದರೆ ಪ್ರಾಧಿಕಾರದ ಅಧ್ಯಕ್ಷ;

(ಡಿ) "ಇಲಾಖೆ" ಎಂದರೆ ಯಾವುದೇ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಯಾವುದೇ ನಿಕಾಯ ಅಥವಾ ನಿಗಮ ಅಥವಾ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು ಪಡೆಯುತ್ತಿರುವ ಯಾವುದೇ ಸಂಸ್ಥೆ ಅಥವಾ ನಿಕಾಯವೂ ಸೇರಿದಂತೆ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು:

(ಇ) "ಸದಸ್ಯ " ಎಂದರೆ ಪ್ರಾಧಿಕಾರದ ಸದಸ್ಯ ;

(ಎಫ್) "ಯೋಜನೆಗಳು ಮತ್ತು ಕಾರ್ಯಕ್ರಮಗಳು" ಎಂದರೆ, ವಿವಿಧ ಇಲಾಖೆಗಳಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿಗಾಗಿ ಪ್ರಾಧಿಕಾರದಿಂದ ಸಿದ್ಧಪಡಿಸಿದ ವಾರ್ಷಿಕ ಯೋಜನೆಗಳು ಮತ್ತು ಕಾರ್ಯಕ್ರಮಗಳು;

(ಜಿ) "ಕಾರ್ಯದರ್ಶಿ" ಎಂದರೆ ಪ್ರಾಧಿಕಾರದ ಕಾರ್ಯದರ್ಶಿ;

(ಹೆಚ್) "ವಿನಿಯಮಗಳು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳು;

ಅಧ್ಯಾಯ – II

3. ಪ್ರಾಧಿಕಾರದ ರಚನೆ :– (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಸಾಧ್ಯವಾದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲಾಗುವ ಪ್ರಾಧಿಕಾರವನ್ನು ರಚಿಸತಕ್ಕದ್ದು ಮತ್ತು ಅದರ ಕೇಂದ್ರ ಸ್ಥಳವು ಬೆಂಗಳೂರಿನಲ್ಲಿ ಇರತಕ್ಕದ್ದು.

(2) ಪ್ರಾಧಿಕಾರವು ಕರಾರು ಮಾಡಿಕೊಳ್ಳಲು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿ ಇರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ಪ್ರಾಧಿಕಾರವು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕದ್ದು:-

(ಎ) ಗಡಿ ಪ್ರದೇಶ ಅಭಿವೃದ್ಧಿಗಾಗಿ ಕೆಲಸ ಮಾಡಿರುವಂಥ ಸರ್ಕಾರದಿಂದ ನಾಮ ನಿರ್ದೇಶಿತನಾದ ಒಬ್ಬ ವ್ಯಕ್ತಿಯು ಪ್ರಾಧಿಕಾರದ ಅಧ್ಯಕ್ಷರಾಗಿರತಕ್ಕದ್ದು.

(ಬಿ) ಗಡಿ ಪ್ರದೇಶಗಳ ಸಮಸ್ಯೆಗಳ ಅರಿವಿರುವ ಹಾಗೂ ಸಾಹಿತ್ಯ, ಆಡಳಿತ, ಶಿಕ್ಷಣ ಅಥವಾ ಕಾನೂನು ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವ ಹೊಂದಿರುವ ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಏಳು ಜನ .... ಸದಸ್ಯರು

(ಸಿ) ಸರ್ಕಾರದ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ
.... ಪದನಿಮಿತ್ತ ಸದಸ್ಯರು

(ಡಿ) ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ
.... ಪದನಿಮಿತ್ತ ಸದಸ್ಯರು

(ಇ) ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
.... ಪದನಿಮಿತ್ತ ಸದಸ್ಯರು

(ಎಫ್) ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ
.... ಪದನಿಮಿತ್ತ ಸದಸ್ಯರು

(ಜಿ) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ .... ಪದನಿಮಿತ್ತ ಸದಸ್ಯರು

(ಹೆಚ್) ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ... ಪದನಿಮಿತ್ತ ಸದಸ್ಯ

(ಐ) ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ ... ಪದನಿಮಿತ್ತ ಸದಸ್ಯ

(ಜೆ) ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ... ಪದನಿಮಿತ್ತ ಸದಸ್ಯ

(ಕೆ) ಪ್ರಾಧಿಕಾರದ ಕಾರ್ಯದರ್ಶಿ ಸದಸ್ಯ.. ಕಾರ್ಯದರ್ಶಿ

4. ಪದಾವಧಿ ಮತ್ತು ಸೇವಾ ಷರತ್ತುಗಳು.– (1) ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಅಧ್ಯಕ್ಷ ಮತ್ತು ಇತರೆ ಅಧಿಕಾರೇತರ ಸದಸ್ಯರುಗಳು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು. ಸರ್ಕಾರದ ಅಧಿಕಾರಿ ಸದಸ್ಯರಿಗೆ ಸಂಬಂಧಿಸಿದಂತೆ ಇದು ಅನ್ವಯವಾಗತಕ್ಕದಲ್ಲ.

(2) ಅಧ್ಯಕ್ಷರು ಅಥವಾ ಪದನಿಮಿತ್ತ ಸದಸ್ಯರ ಹೊರತಾಗಿ ಯಾವೊಬ್ಬ ಸದಸ್ಯರೂ ಅದಕ್ಕೆ ತಮ್ಮ ಸಹಿ ಹಾಕಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಬಹುದು. ಆದರೆ ಅವರ ರಾಜೀನಾಮೆಯು ಅಂಗೀಕಾರವಾಗುವವರೆಗೆ ಹುದ್ದೆಯಲ್ಲಿ ಮುಂದುವರೆಯತಕ್ಕದ್ದು

(3) ಅಧ್ಯಕ್ಷರ ಅಥವಾ ಯಾವೊಬ್ಬ ಸದಸ್ಯರ ಹುದ್ದೆಗಳಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಕ್ಕೆ ರಾಜ್ಯ ಸರ್ಕಾರವು ಒಬ್ಬ ವ್ಯಕ್ತಿಯನ್ನು ಸಂದರ್ಭಾನುಸಾರ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ನಾಮ ನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶಿತರಾದ ಅಧ್ಯಕ್ಷ ಅಥವಾ ಸದಸ್ಯರು ತನಗಿಂತ ಮೊದಲಿದ್ದ ವ್ಯಕ್ತಿಯ ಪದಾವಧಿಯಲ್ಲಿ ಪೂರ್ಣವಾಗದೆ ಉಳಿದ ಭಾಗದವರೆಗೆ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಅಧ್ಯಕ್ಷರು ಮತ್ತು ಇತರ ಸದಸ್ಯರು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

(5) ಅಧ್ಯಕ್ಷರು ಮತ್ತು ಇತರ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

(6) ಪ್ರಾಧಿಕಾರದ ಯಾವುದೇ ಕ್ರಮ ಅಥವಾ ವ್ಯವಹರಣೆಯು ಪ್ರಾಧಿಕಾರದಲ್ಲಿ ಯಾವುದೇ ಖಾಲಿಸ್ಥಾನವಿರುವುದರಿಂದ ಅಥವಾ ಪ್ರಾಧಿಕಾರದ ರಚನೆಯಲ್ಲಿ ದೋಷವಿದೆ ಎಂಬ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕದ್ದಲ್ಲ.

5. ಹುದ್ದೆಯ ಸದಸ್ಯತ್ವಕ್ಕೆ ಅನರ್ಹತೆ.– (1) ಒಬ್ಬ ವ್ಯಕ್ತಿಯು, ಅವನು, –

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧ:ಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧ ನಿರ್ಣಿತನಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ, ಅಥವಾ

(ಬಿ) ಅಸ್ವಸ್ಥಚಿತ್ತದವನಾಗಿದ್ದು, ಹಾಗೆಂದು ಒಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ : ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ : ಅಥವಾ

(ಡಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಒಂದು ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದುಹಾಕಲಾದವನಾಗಿದ್ದರೆ ಅಥವಾ ವಜಾ ಆದವನಾಗಿದ್ದರೆ : ಅಥವಾ

(ಇ) ಪ್ರಾಧಿಕಾರದ ಆದೇಶದಿಂದ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಡನೆ ಅಥವಾ ಅದರ ಮೇರೆಗೆ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವತ: ಅವನು ಅಥವಾ ಅವನ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ:

(ಎಫ್) ಪ್ರಾಧಿಕಾರದ ಪರವಾಗಿ ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾದರೆ ಅಥವಾ ಪ್ರಾಧಿಕಾರದ ವಿರುದ್ಧವಾಗಿ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

– ಸದಸ್ಯನಾಗಿ ನೇಮಿತನಾಗುವುದಕ್ಕೆ ಮತ್ತು ಸದಸ್ಯನಾಗುವುದಕ್ಕೆ ಅನರ್ಹನಾಗಿರತಕ್ಕದ್ದು.

(2) ಯಾವೊಬ್ಬ ವ್ಯಕ್ತಿಯನ್ನು, ಆತನು ಪ್ರಾಧಿಕಾರದ ವ್ಯವಹಾರ ಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತನ್ನು ಪ್ರಕಟಿಸಲಾಗಿರುವ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆ ಎಂಬ ಕಾರಣ ಮಾತ್ರದಿಂದಲೇ ಉಪಪ್ರಕರಣ (1)ರ (ಇ) ಖಂಡದ ಅಡಿಯಲ್ಲಿ ಅನರ್ಹಗೊಳಿಸತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಷೇರು ಅಥವಾ ಹಿತಾಸಕ್ತಿ ಹೊಂದಿರುವನೆಂದು ಭಾವಿಸತಕ್ಕದ್ದಲ್ಲ.

6. ಸದಸ್ಯನನ್ನು ತೆಗೆದುಹಾಕುವುದು.– (1) ರಾಜ್ಯ ಸರ್ಕಾರವು ಅಧ್ಯಕ್ಷ ಅಥವಾ ಇತರ ಸದಸ್ಯನನ್ನು ಅವನು,–

(ಎ) 5ನೇ ಪ್ರಕರಣದಲ್ಲಿ ಹೇಳಲಾದ ಯಾವುದೇ ಅನರ್ಹತೆಗಳಿಗೆ ಒಳಪಟ್ಟರೆ:

ಪರಂತು, ಅಧ್ಯಕ್ಷ ಅಥವಾ ಸದಸ್ಯನನ್ನು ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ಅವನು ಸದರಿ ಪ್ರಕರಣದ (1)ನೇ ಉಪ–ಪ್ರಕರಣದ (ಇ) ಖಂಡದಲ್ಲಿ ಹೇಳಲಾದ ಅನರ್ಹತೆಗೆ ಒಳಗಾಗಿದ್ದಾನೆಂಬ ಕಾರಣದ ಮೇಲೆ ತೆಗೆದುಹಾಕತಕ್ಕದ್ದಲ್ಲ ; ಅಥವಾ

(ಬಿ) ಅವನು ಕಾರ್ಯವನ್ನು ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ ; ಅಥವಾ

(ಸಿ) ಗೈರು ಹಾಜರಾಗಲು ಪ್ರಾಧಿಕಾರದಿಂದ ಅನುಮತಿ ಪಡೆಯದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ : ಅಥವಾ

(ಡಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ತನ್ನ ಸ್ಥಾನವನ್ನು ಅವನು ದುರುಪಯೋಗ ಪಡಿಸಿಕೊಂಡಿದ್ದು, ಅವನನ್ನು ಆ ಪದದಲ್ಲಿ

ಮುಂದುವರಿಸಿದರೆ ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುವುದೆಂದು ಕಂಡುಬಂದರೆ,

– ಸದಸ್ಯತ್ವದಿಂದ ಅವನನ್ನು ತೆಗೆದು ಹಾಕತಕ್ಕದ್ದು:

ಪರಂತು ಯಾವೊಬ್ಬ ಸದಸ್ಯರನ್ನು ಅವರಿಗೆ ಅಂಥ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಒಂದು ಅವಕಾಶವನ್ನು ಕೊಟ್ಟ ಹೊರತು, ಈ ಖಂಡದ ಮೇರೆಗೆ ತೆಗೆದುಹಾಕತಕ್ಕದ್ದಲ್ಲ.

7. **ಕಾರ್ಯದರ್ಶಿ.**– (1) ರಾಜ್ಯ ಸರ್ಕಾರವು, ಗ್ರೂಪ್ – ಎ ದರ್ಜೆಗೆ ಕಡಿಮೆಯಿಲ್ಲದ ಒಬ್ಬ ಅಧಿಕಾರಿಯನ್ನು ಪ್ರಾಧಿಕಾರದ ಕಾರ್ಯದರ್ಶಿಯಾಗಿ ನೇಮಕ ಮಾಡತಕ್ಕದ್ದು. ಕಾರ್ಯದರ್ಶಿಯು ರಾಜ್ಯ ಸರ್ಕಾರವು ಆಗಿಂದಾಗ್ಗೆ ನಿರ್ಧರಿಸಬಹುದಾದಂಥ ವೇತನ ಮತ್ತು ಇತರ ಭತ್ಯೆಗಳನ್ನು ಪಡೆಯತಕ್ಕದ್ದು.

(2) ರಾಜ್ಯ ಸರ್ಕಾರವು, ಕಾಲಕಾಲಕ್ಕೆ ಕಾರ್ಯದರ್ಶಿಯವರಿಗೆ ರಜೆಗಳನ್ನು ಮಂಜೂರು ಮಾಡಬಹುದು.

(3) ಕಾರ್ಯದರ್ಶಿಯು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕರಾಗಿರತಕ್ಕದ್ದು;

(ಎ) ಪ್ರಾಧಿಕಾರದಿಂದ ಅನುಮೋದಿತವಾದ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರನಾಗಿರತಕ್ಕದ್ದು;

(ಬಿ) ಪ್ರಾಧಿಕಾರದ ನಿಧಿಯನ್ನು ನಿರ್ವಹಿಸತಕ್ಕದ್ದು;

(ಸಿ) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವಂತೆ ಮಾಡತಕ್ಕದ್ದು ;

(ಡಿ) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅವನಿಗೆ ಪ್ರದಾನ ಮಾಡಲಾಗಿರುವಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ; ಮತ್ತು

(ಇ) ಅಧ್ಯಕ್ಷರು ತಪಾಸಣೆ ಮಾಡುವ ಸಮಯದಲ್ಲಿ, ಕಚೇರಿಯ ದಾಖಲೆಗಳನ್ನು ಹಾಜರುಪಡಿಸಲು ಜವಾಬ್ದಾರನಾಗಿರತಕ್ಕದ್ದು.

8. ಪ್ರಾಧಿಕಾರದ ಅಧಿಕಾರಿಗಳು ಮತ್ತು ಅವರ ಸೇವಾ ಷರತ್ತುಗಳು.– (1) ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಪ್ರಾಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯು ಪ್ರಾಧಿಕಾರವು ಅದರ ಪ್ರಕಾರ್ಯಗಳನ್ನು ಪರಿಣಾಮ ಕಾರಿಯಾಗಿ ನಿರ್ವಹಿಸಲು ಅವಶ್ಯವೆಂದು ಭಾವಿಸಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡಬಹುದು ಅಥವಾ ಪ್ರತಿನಿಯೋಜಿಸಬಹುದು.

(2) ಮೇಲೆ ನಿರ್ದಿಷ್ಟಪಡಿಸಲಾದ ಅಧಿಕಾರಿಗಳ ಮತ್ತು ನೌಕರರ ಆಯ್ಕೆ ಹಾಗೂ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

9. ಪ್ರಾಧಿಕಾರದ ಸಭೆಗಳು.– (1) ಪ್ರಾಧಿಕಾರದ ಸಭೆಗಳನ್ನು ಅಧ್ಯಕ್ಷರು ಅಥವಾ ಅಧ್ಯಕ್ಷರ ಪೂರ್ವಾನುಮತಿ ಪಡೆದು ಕಾರ್ಯದರ್ಶಿಯು ಕರೆಯತಕ್ಕದ್ದು ಮತ್ತು ಅವು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಯಾವುದೇ ಸ್ಥಳದಲ್ಲಿ ನಡೆಸತಕ್ಕದ್ದು.

(2) ಪ್ರಾಧಿಕಾರವು ಕಡೇ ಪಕ್ಷ ಎರಡು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(3) ಅಧ್ಯಕ್ಷರು ವಿಶೇಷ ಸಭೆಯನ್ನು ಕರೆಯುವುದು ಅವಶ್ಯವೆಂದು ಭಾವಿಸಿದರೆ ಅಧ್ಯಕ್ಷರು ಅಥವಾ ಅಧ್ಯಕ್ಷರ ಪೂರ್ವಾನುಮತಿ ಪಡೆದು ಕಾರ್ಯದರ್ಶಿಯು ಅಂಥ ಸಭೆಯನ್ನು ಕರೆಯಬಹುದು.

(4) ಪ್ರಾಧಿಕಾರವು ತನ್ನ ಸಭೆಗಳಲ್ಲಿ ಕಾರ್ಯಕಲಾಪದ ಸಂಬಂಧದಲ್ಲಿ ವಿನಿಯಮಗಳ ಮೂಲಕ ಉಪಬಂಧ ಕಲ್ಪಿಸಬಹುದಾದಂಥ ಕಾರ್ಯವಿಧಾನದ ನಿಯಮಗಳನ್ನು ಅನುಸರಿಸತಕ್ಕದ್ದು.

(5) ಅಧ್ಯಕ್ಷರು ಪ್ರತಿಯೊಂದು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಯಾವುದೇ ಕಾರಣದಿಂದ ಅಧ್ಯಕ್ಷರಿಗೆ ಯಾವುದೇ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ, ಸಭೆಯಲ್ಲಿ ಹಾಜರಿದ್ದ ಸದಸ್ಯರ ಪೈಕಿ ಆರಿಸಲ್ಪಟ್ಟ ಯಾವುದೇ ಇತರ ಸದಸ್ಯರು ಸಭೆಯಲ್ಲಿ ಅಧ್ಯಕ್ಷತೆ ವಹಿಸತಕ್ಕದು.

(6) ಗಣಪೂರ್ತಿ (ಕೋರಂ) ಆಗಲು ಒಂಬತ್ತು ಜನ ಸದಸ್ಯರಿರತಕ್ಕದ್ದು.

10. ವ್ಯವಹರಣೆಗಳು ಸರಿಯಾಗಿವೆ ಮತ್ತು ಸಿಂಧುವಾಗಿವೆ ಎಂಬ ಪೂರ್ವಭಾವನೆ.– ಪ್ರಾಧಿಕಾರದ ಯಾವುದೇ ಕ್ರಮ ಅಥವಾ ವ್ಯವಹರಣೆ ಅನ್ಯಥಾ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಇರುವಾಗ ಅಂಥ ಕ್ರಮ ಅಥವಾ ವ್ಯವಹರಣೆಯು ಅಧ್ಯಕ್ಷರು ಅಥವಾ ಸದಸ್ಯನಾಗಿ ಕೆಲಸ ಮಾಡುತ್ತಿರುವ ಯಾವುದೇ ವ್ಯಕ್ತಿಯ ಅನರ್ಹತೆಯ ಕಾರಣದಿಂದ ಅಥವಾ ನೇಮಕಾತಿಯಲ್ಲಿನ ದೋಷದ ಕಾರಣದಿಂದ ದೋಷಪೂರಿತವಾಗುತ್ತದೆ ಎಂದು ಭಾವಿಸತಕ್ಕದ್ದಲ್ಲ.

11. ಉಪ ಸಮಿತಿ.– ಪ್ರಾಧಿಕಾರವು ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ತನ್ನ ಸದಸ್ಯರ ಪೈಕಿಯಿಂದ ಆರು ಜನರನ್ನು ಮೀರದಷ್ಟು ಸಂಖ್ಯೆಯ ಸದಸ್ಯರಿರುವ ಒಂದು ಉಪ ಸಮಿತಿಯನ್ನು ರಚಿಸಬಹುದು. ಪ್ರಾಧಿಕಾರದ ಅಧ್ಯಕ್ಷರು ಈ ಉಪಸಮಿತಿಯ ಅಧ್ಯಕ್ಷರು ಸಹ ಆಗಿರತಕ್ಕದ್ದು.

12. ಉಪ ಸಮಿತಿಯ ಅಧಿಕಾರಗಳು ಮತ್ತು ಕರ್ತವ್ಯಗಳು.– (1)ಉಪಸಮಿತಿಯು, ಪ್ರಾಧಿಕಾರವು ತನಗೆ ಪ್ರತ್ಯಾಯೋಜಿಸಲಾದಂಥ ಪ್ರಾಧಿಕಾರದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) ಉಪ ಸಮಿತಿಯು ಕಡೇಪಕ್ಷ ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(3) ಉಪಸಮಿತಿಯು, ಪ್ರಾಧಿಕಾರದ ನಿರ್ಧಾರಗಳನ್ನು ಸೂಕ್ತವಾಗಿ ಕಾರ್ಯಗತ ಗೊಳಿಸಲಾಗುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸಿ ನೋಡಲು ತುರ್ತು ಸ್ವರೂಪದ ವಿಷಯಗಳ ಬಗ್ಗೆ ಅಗತ್ಯ ನಿರ್ಧಾರ ಕೈಗೊಳ್ಳತಕ್ಕದ್ದು ಮತ್ತು ರಾಜ್ಯ ಸರ್ಕಾರವು ತುರ್ತು ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಸಲಹೆ ನೀಡತಕ್ಕದ್ದು.

(4) ಉಪ ಸಮಿತಿಯು, ತನ್ನ ಸಭೆಗಳಲ್ಲಿ ಕಾರ್ಯನಿರ್ವಹಣೆಯ ಸಂಬಂಧದಲ್ಲಿ, ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಕಾರ್ಯವಿಧಾನದ ನಿಯಮಗಳನ್ನು ಅನುಸರಿಸತಕ್ಕದ್ದು.

13. ತಜ್ಞರ ಸೇವೆಗಳನ್ನು ಪಡೆದುಕೊಳ್ಳುವುದು.– (1) ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ, ಪ್ರಾಧಿಕಾರವು

ಅವಶ್ಯವಾದರೆ, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಧಾನದಲ್ಲಿ ತಜ್ಞರ ಸೇವೆಗಳನ್ನು ಅಥವಾ ನೆರವನ್ನು ಪಡೆದುಕೊಳ್ಳಬಹುದು.

(2) ಅಂಥ ತಜ್ಞರು ಸಲ್ಲಿಸಿದ ಸೇವೆ ಅಥವಾ ನೆರವಿನ ಬಗ್ಗೆ ಸಂಧಾಯಮಾಡತಕ್ಕ ಗೌರವಧನ ಮತ್ತು ಭತ್ಯೆಗಳು, ನಿಯಮಗಳಲ್ಲಿ ಗೊತ್ತುಪಡಿಸಬಹುದಾದಂಥ ಮೊಬಲಾಗಿರತಕ್ಕದ್ದು.

ಅಧ್ಯಾಯ – III

14. ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು.– (1) ಪ್ರಾಧಿಕಾರವು, ಪ್ರತಿವರ್ಷವೂ, ಗಡಿ ಪ್ರದೇಶಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಮಾರ್ಪಾಟನ್ನು ಮಾಡಿ ಅಥವಾ ಮಾರ್ಪಾಟಿಲ್ಲದೆ ಅನುಮೋದಿಸಬಹುದು.

15. ಪ್ರಾಧಿಕಾರದ ಪ್ರಕಾರ್ಯಗಳು.– ಪ್ರಾಧಿಕಾರವು, ಕೆಳಕಂಡ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು:–

(1) ಗಡಿ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವುದು. ಇದಲ್ಲದೆ, ನೆರೆಹೊರೆಯ ರಾಜ್ಯದ ಗಡಿ ಭಾಗಗಳಲ್ಲಿ ಕನ್ನಡ ಮಾತನಾಡುವ ಜನರ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಯನ್ನು ಸುಧಾರಿಸುವುದು.

(2) ರಾಜ್ಯದ ಹೊರಭಾಗದ ಗಡಿಯಲ್ಲಿ ಅವಶ್ಯವಿರುವಷ್ಟು ಕನ್ನಡ ಶಾಲೆಗಳನ್ನು ತೆರೆಯಲು ಸಹಾಯ ಒದಗಿಸುವುದು. ನೆರೆ ರಾಜ್ಯದವರು ಕನ್ನಡ ಶಾಲೆಗಳನ್ನು ಮುಚ್ಚಿರುವಂತಹ ಗ್ರಾಮಗಳಲ್ಲಿ ಕನ್ನಡಿಗರಿಗೆ ಕನ್ನಡ ಮಾಧ್ಯಮದ ಮೂಲಕ ಶಿಕ್ಷಣ ನೀಡಲು ಕನ್ನಡ ಮಾಧ್ಯಮದ ಶಾಲೆಗಳನ್ನು ತೆರೆಯುವುದು. ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡುವುದು.

(3) ಗಡಿ ಪ್ರದೇಶದಲ್ಲಿ ಕನ್ನಡದಲ್ಲಿ ಶಿಕ್ಷಣ ನೀಡುವುದಕ್ಕೆ ಅವಶ್ಯವಾದ ಶಿಕ್ಷಕರನ್ನು ನೇಮಕ ಮಾಡಲು ಸಹಾಯ ಮಾಡುವುದು. ಕನ್ನಡದಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದ ಪಠ್ಯ ಪುಸ್ತಕಗಳನ್ನು ಕಾಲಕಾಲಕ್ಕೆ ಒದಗಿಸುವುದು.

(4) ಕನ್ನಡಿಗರಿಗೆ–ಕನ್ನಡ ಭಾಷೆಯಲ್ಲಿ ದೈನಂದಿನ ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳಲು –ಕನ್ನಡ ವೃತ್ತ ಪತ್ರಿಕೆಗಳು, ಮಾಸ ಪತ್ರಿಕೆಗಳು, ವಾರ ಪತ್ರಿಕೆಗಳು ಆ ಭಾಗಗಳಲ್ಲಿ ದೊರಕುವಂತೆ ಮಾಡಲು ಗ್ರಂಥಾಲಯಗಳನ್ನು ಗಡಿ ಭಾಗಗಳಲ್ಲಿ ಪ್ರಾರಂಭ ಮಾಡುವುದು.

(5) ಕನ್ನಡ ಭಾಷೆ ಬೆಳವಣಿಗೆ ದೃಷ್ಟಿಯಿಂದ ನೋಂದಣಿಯಾದ ಕನ್ನಡಪರ ಸಂಘಟನೆಗಳಿಗೆ – ವಾರ್ಷಿಕವಾಗಿ ಭಾಷಾ ಚಟುವಟಿಕೆಗಳನ್ನು ನಡೆಸಲು ಅನುದಾನ ನೀಡುವುದು.

(6) ಗಡಿ ಪ್ರದೇಶದಲ್ಲಿ ಕನ್ನಡಪರ ಸಂಘಟನೆಗಳು ಕನ್ನಡಪರವಾಗಿ ಕ್ರಿಯಾಶೀಲರಾಗಿ ಕೆಲಸ ಮಾಡುವಂತೆ ಮಾಡುವ ಉದ್ದೇಶದಿಂದ ಹೆಚ್ಚು ಹೆಚ್ಚು ಸಂಘಗಳನ್ನು ಗಡಿ ಭಾಗಗಳಲ್ಲಿ ಕಟ್ಟಲು ಮತ್ತು ಈ ಸಂಘಟನೆಗಳು ಭಾಷಾ ಉಪನ್ಯಾಸ ಮಾಲಿಕೆಗಳನ್ನು ಸಂಘಟಿಸಲು ಸಹಾಯ ಮಾಡುವ ದೃಷ್ಟಿಯಿಂದ ಪ್ರಚಾರ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುವುದು.

(7) ಸಾಂಸ್ಕೃತಿಕ ಚಟುವಟಿಕೆಗಳನ್ನು ಗಡಿ ಪ್ರದೇಶಗಳಲ್ಲಿ ಹಮ್ಮಿಕೊಂಡು, ಗಡಿ ಕನ್ನಡಿಗರ ಸಾಂಸ್ಕೃತಿಕ ಅವಶ್ಯಕತೆಗಳನ್ನು ಪೂರೈಸುವುದು.

(8) ಕನ್ನಡ ಸಾಹಿತ್ಯ, ಚಲನಚಿತ್ರ, ನಾಟಕ, ಜಾನಪದ, ನೃತ್ಯ, ಯಕ್ಷಗಾನ, ಲಾವಣಿ, ಬಯಲಾಟ, ತೊಗಲುಬೊಂಬೆ ಆಟ, ಹರಿಕಥೆ, ಸಂಗೀತ, ಇತ್ಯಾದಿ ಕಲೆಗಳು ನಶಿಸಿಹೋಗದಂತೆ ಪ್ರದರ್ಶನಕ್ಕೆ ಸೂಕ್ತವಾದ ವೇದಿಕೆಗಳನ್ನು ಕಲ್ಪಿಸುವುದು. ರಾಜ್ಯದ ಗಡಿ ಭಾಗದ ತಾಲ್ಲೂಕುಗಳು ಹಾಗೂ ಗ್ರಾಮಗಳ ಕನ್ನಡಿಗರು ಹೊರ ರಾಜ್ಯಗಳ ಕನ್ನಡಿಗರಿಗೆ ಈ ಕಲೆಗಳನ್ನು ಪ್ರದರ್ಶಿಸಲು ಸಾಂಸ್ಕೃತಿಕ ಭವನಗಳನ್ನು ಕಟ್ಟುವುದು.

(9) ಗಡಿ ಪ್ರದೇಶ ಹಾಗೂ ಹೊರನಾಡು ಉತ್ಸವಗಳನ್ನು ಹಮ್ಮಿಕೊಳ್ಳುವುದು, ಕನ್ನಡ ಭವನಗಳನ್ನು ಕಟ್ಟುವುದು, ಗಡಿ ಪ್ರದೇಶದ ಜನರ ಪರಿಸ್ಥಿತಿಯನ್ನು ಸುಧಾರಿಸಲು ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು, ಅವರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಆಶೆ ಆಕಾಂಕ್ಷೆಗಳನ್ನು ಈಡೇರಿಸುವುದು.

(10) ಗಡಿ ಪ್ರದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನತೆಯ ಜೀವನ ಭದ್ರತೆಯ ದೃಷ್ಟಿಯಿಂದ ನೀಡಬಹುದಾದ ಸೌಲಭ್ಯಗಳ ಬಗ್ಗೆ ಅಧ್ಯಯನ ಮಾಡಿ ಸಂಬಂಧಿತ ಇಲಾಖೆಗಳ ಮೂಲಕ ನೆರವು ನೀಡುವುದು

(11) ಗಡಿ ಪ್ರದೇಶಗಳಲ್ಲಿ ಕರಕುಶಲ ಕೈಗಾರಿಕೆ, ಗುಡಿ ಕೈಗಾರಿಕೆ ಹಾಗೂ ಇತರೆ ಉದ್ಯಮಗಳಿಗೆ ಪ್ರೋತ್ಸಾಹದಾಯಕ ಕ್ರಮ ಕೈಗೊಳ್ಳುವುದು.

(12) ಗಡಿ ಪ್ರದೇಶದ ಹಳ್ಳಿಗಳಿಗೆ ಕುಡಿಯುವ ನೀರು, ಆರೋಗ್ಯ, ವ್ಯವಸಾಯ, ನೀರಾವರಿ, ರಸ್ತೆ, ಮುಂತಾದ ಅಭಿವೃದ್ಧಿ ಕೆಲಸಗಳಿಗೆ ಅಗತ್ಯವಾದ ಸೌಲಭ್ಯಗಳನ್ನು ಆಯಾಯ ಇಲಾಖೆಗಳು ಒದಗಿಸುವುದನ್ನು ಮೇಲ್ವಿಚಾರಣೆ ಮಾಡುವುದು.

16. ಅಧಿನಿಯಮದ ಉದ್ದೇಶಗಳನ್ನು ಅನುಷ್ಠಾನಗೊಳಿಸುವುದು.– ಪ್ರಾಧಿಕಾರವು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ, ಉಪ ವಿಭಾಗ ಮಟ್ಟದಲ್ಲಿ ಉಪ ವಿಭಾಗಾಧಿಕಾರಿ ಮತ್ತು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಇವರ ಮೂಲಕ ಅಧಿನಿಯಮದ ಉದ್ದೇಶಗಳನ್ನು ಅನುಷ್ಠಾನಗೊಳಿಸತಕ್ಕದ್ದು.

17. ಮಾಹಿತಿ ಪಡೆದುಕೊಳ್ಳುವುದು.– ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರದ ಯಾವ ಅಧಿಕಾರಿ ಯಿಂದಲಾದರೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕೋರಬಹುದು ಮತ್ತು ಪಡೆದುಕೊಳ್ಳಬಹುದು ಮತ್ತು ಅಂಥ ಅಧಿಕಾರಿಯು ಪ್ರಾಧಿಕಾರವು ಕೋರಬಹುದಾದ ಮಾಹಿತಿಯನ್ನು ಒದಗಿಸಲು ಬದ್ಧನಾಗಿರತಕ್ಕದ್ದು.

18. ಪ್ರಾಧಿಕಾರದ ಸಲಹೆಗಳು.– ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ತನ್ನ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆಗಳನ್ನು ನೀಡಬಹುದು.

19. ಕರ್ತವ್ಯ ಲೋಪವನ್ನು ದಾಖಲಿಸುವ ಮತ್ತು ನೇಮಕಾತಿ ಪ್ರಾಧಿಕಾರಕ್ಕೆ ತಿಳಿಸುವ ಅಧಿಕಾರ.– ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ, ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಅಥವಾ ಈಗಾಗಲೇ ಜಾರಿಯಲ್ಲಿರುವ ಯಾವುದೇ

ಆದೇಶವನ್ನು ರಾಜ್ಯ ಸರ್ಕಾರ ಮತ್ತು ಸ್ಥಳೀಯ ನಿಕಾಯಗಳ ಅಧಿಕಾರಿಗಳು ಮತ್ತು ನೌಕರರು ಉಲ್ಲಂಘಿಸಿದರೆ, ಅಂಥ ಉಲ್ಲಂಘನೆಯನ್ನು ಕರ್ತವ್ಯ ಲೋಪವೆಂದು ದಾಖಲಿಸತಕ್ಕದ್ದು ಮತ್ತು ಅಂಥ ವ್ಯಕ್ತಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ನೇಮಕಾತಿ ಪ್ರಾಧಿಕಾರಕ್ಕೆ ಸಲಹೆಗಳನ್ನು ನೀಡತಕ್ಕದ್ದು.

ಅಧ್ಯಾಯ - IV

20. ಪ್ರಾಧಿಕಾರದ ನಿಧಿ.– (1) ಪ್ರಾಧಿಕಾರವು, ಪ್ರಾಧಿಕಾರದ ನಿಧಿಯೆಂದು ಕರೆಯಲಾಗುವ ಒಂದು ನಿಧಿಯನ್ನು ಹೊಂದಿರತಕ್ಕದು.

(2) ಈ ಮುಂದಿನವುಗಳು ಪ್ರಾಧಿಕಾರದ ನಿಧಿಯ ಒಂದು ಭಾಗವಾಗಿರತಕ್ಕದ್ದು ಅಥವಾ ಪ್ರಾಧಿಕಾರದ ನಿಧಿಗೆ ಸಂದಾಯವಾಗತಕ್ಕದ್ದು, ಎಂದರೆ:–

(i) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ, ನಿಗಮಿತವಾದ ಅಥವಾ ನಿಗಮಿತವಾಗಿರದ ಯಾವುದೇ ನಿಕಾಯ ಅಥವಾ ಯಾರೇ ವ್ಯಕ್ತಿಗಳು ಮಾಡುವ ಎಲ್ಲ ಅನುದಾನಗಳು, ಧನಸಹಾಯಗಳು, ದಾನಗಳು ಮತ್ತು ಕೊಡುಗೆಗಳು ; ಮತ್ತು

(ii) ಯಾವುದೇ ರೀತಿಯ ಯಾವುದೇ ಮೂಲದಿಂದ ಪ್ರಾಧಿಕಾರದಿಂದ ಅಥವಾ ಅದರ ಪರವಾಗಿ ಸ್ವೀಕರಿಸಲಾದ ಇತರ ಎಲ್ಲ ಮೊತ್ತಗಳು :

(3) ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು, ನಿಧಿಗೆ ಜಮೆ ಮಾಡಲಾದ ಎಲ್ಲ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಹೂಡತಕ್ಕದ್ದು.

(4) ಪ್ರಾಧಿಕಾರದ ಕಾರ್ಯದರ್ಶಿ ಮತ್ತು ಅದರ ಅಧಿಕಾರಿಗಳು ಮತ್ತು ನೌಕರರಿಗೆ ಸಂದಾಯವಾಗತಕ್ಕ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನಗಳೂ ಸೇರಿದಂತೆ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

21. ಯೋಜನೆ ಮತ್ತು ಕಾರ್ಯಕ್ರಮಗಳಿಗಾಗಿ ಹಂಚಿಕೆ.– ರಾಜ್ಯ ಸರ್ಕಾರವು ಪ್ರಾಧಿಕಾರದ ಯೋಜನೆ ಮತ್ತು ಕಾರ್ಯಕ್ರಮಗಳನ್ನು

ಗಮನದಲ್ಲಿಟ್ಟುಕೊಂಡು ರಾಜ್ಯದ ವಾರ್ಷಿಕ ಬಜೆಟ್ಟಿನಲ್ಲಿ ಪ್ರಾಧಿಕಾರಕ್ಕೆ ಹಣಕಾಸಿನ ಹಂಚಿಕೆಗಳನ್ನು ಮಾಡಬಹುದು.

22. ರಾಜ್ಯ ಸರ್ಕಾರದಿಂದ ಅನುದಾನ.– ರಾಜ್ಯ ಸರ್ಕಾರವು ಪ್ರತಿ ವರ್ಷ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ಮೊಬಲಗನ್ನು ಪ್ರಾಧಿಕಾರಕ್ಕೆ ಅನುದಾನವಾಗಿ ನೀಡಬಹುದು.

23. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ಪ್ರಾಧಿಕಾರದ ನಿಧಿಯ ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ಗೊತ್ತುಪಡಿಸಬಹುದಾದಂಥ ನಿಯಮಗಳ ಅನುಸಾರವಾಗಿ ಇಡತಕ್ಕದ್ದು;

(2) ಪ್ರಾಧಿಕಾರವು ಗೊತ್ತುಪಡಿಸಬಹುದಾದಂಥ ಪ್ರಪತ್ರದಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ತಯಾರಿಸತಕ್ಕದ್ದು.

(3) ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಲೆಕ್ಕ ಪರಿಶೋಧಕರಿಂದ ಪ್ರಾಧಿಕಾರದ ಲೆಕ್ಕಪತ್ರಗಳ ವಾರ್ಷಿಕ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(4) ಲೆಕ್ಕ ಪರಿಶೋಧಕರು ಲೆಕ್ಕ ಪರಿಶೋಧನೆಯ ಉದ್ದೇಶಗಳಿಗಾಗಿ ಪ್ರಾಧಿಕಾರದ ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡುವ ಅಧಿಕಾರ ಹೊಂದಿರತಕ್ಕದ್ದು.

(5) ಪ್ರಾಧಿಕಾರವು, ಲೆಕ್ಕ ಪರಿಶೋಧನೆಗಾಗಿ ಗೊತ್ತುಪಡಿಸಬಹುದಾದಂಥ ವೆಚ್ಚಗಳನ್ನು ತನ್ನ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(6) ಲೆಕ್ಕ ಪರಿಶೋಧಕರ ವರದಿಯನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗ, ಪ್ರಾಧಿಕಾರವು ಲೆಕ್ಕ ಪರಿಶೋಧಕರ ವರದಿಯ ಒಂದು ಪ್ರತಿಯೊಂದಿಗೆ ಲೆಕ್ಕಪತ್ರಗಳ ವಾರ್ಷಿಕ ವಿವರಣಾಪಟ್ಟಿಯ ಪ್ರತಿಯೊಂದನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ಪ್ರಕಟಿಸುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು, ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿದ ತರುವಾಯ ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ನೀಡಬಹುದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

ಅಧ್ಯಾಯ – V
ಸಂಕೀರ್ಣ

24. ವರದಿ.– ಪ್ರಾಧಿಕಾರವು, ನಿಯಮಿಸಬಹುದಾದಂಥ ದಿನಾಂಕಗಳ ಒಳಗೆ ಅಂಥ ರೀತಿಯಲ್ಲಿ ಮತ್ತು ಅಂಥ ಕಾಲಾಂತರಗಳಲ್ಲಿ ನಿಯಮಿಸಬಹುದಾದ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

25. ಪ್ರಾಧಿಕಾರದ ಆಯವ್ಯಯ.– ಪ್ರಾಧಿಕಾರವು ಪ್ರತಿವರ್ಷ, ಮುಂದಿನ ಏಪ್ರಿಲ್ ತಿಂಗಳ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ಆದಾಯ ಮತ್ತು ವೆಚ್ಚದ ಅಂದಾಜನ್ನು ನಿಯಮಿಸಬಹುದಾದಂಥ ದಿನಾಂಕದಂದು ಮತ್ತು ಅಂಥ ಪ್ರಪತ್ರದಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

26. ನಿಯಮಗಳ ರಚನಾಧಿಕಾರ.– (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲವು ಅಧಿವೇಶನದಲ್ಲಿರುವಾಗ ಅದರ ಪ್ರತಿಯೊಂದು ಸದನದ ಮುಂದೆ ಒಂದು ಅಥವಾ ಎರಡು ಅಥವಾ ಅದಕ್ಕೂ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ಅದರ ನಿಕಟ ತರುವಾಯದ ಅಧಿವೇಶನ ಮುಕ್ತಾಯವಾಗುವ ಮೊದಲು ಉಭಯ ಸದನಗಳೂ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ಯಾವುದೇ ನಿಯಮ ರಚಿಸಬಾರದೆಂದು ನಿರ್ಧರಿಸಿದರೆ ಆ ತರುವಾಯ, ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮ ಕಾರಿಯಾಗತಕ್ಕದು ಅಥವಾ ಯಾವುದೇ ಪರಿಣಾಮ ಹೊಂದತಕ್ಕದ್ದಲ್ಲ. ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಅಡಿಯಲ್ಲಿ ಆ ಮೊದಲು ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕ ವಾಗತಕ್ಕದ್ದಲ್ಲ.

27. ವಿನಿಯಮಗಳನ್ನು ರಚಿಸಲು ಪ್ರಾಧಿಕಾರದ ಅಧಿಕಾರ.– ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 26ನೇ ಪ್ರಕರಣದ ಮೇರೆಗೆ ಮಾಡಲಾದ ನಿಯಮಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಈ ಅಧಿನಿಯಮದ ಉದ್ದೇಶ ಗಳನ್ನು ನೆರವೇರಿಸಲು ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

ಅನುಸೂಚಿ

(ಪ್ರಕರಣ (2) (ಬಿ) ಖಂಡ ಗಮನಿಸಿ)

ಕ್ರಮ ಸಂಖ್ಯೆ	ತಾಲ್ಲೂಕಿನ ಮತ್ತು ಇತರೆ ಪ್ರದೇಶಗಳ ಹೆಸರುಗಳು
(1)	(2)
1	ಆನೇಕಲ್
2	ಹೊಸಕೋಟೆ
3	ಕನಕಪುರ
4	ಚಳ್ಳಕೆರೆ
5	ಹಿರಿಯೂರು
6	ಮೊಳಕಾಲ್ಮೂರು
7	ಬಾಗೇಪಲ್ಲಿ
8	ಬಂಗಾರುಪೇಟೆ
9	ಚಿಂತಾಮಣಿ
10	ಗೌರಿಬಿದನೂರು
11	ಗುಡಿಬಂಡೆ
12	ಮಾಲೂರು
13	ಮುಳಬಾಗಿಲು
14	ಶ್ರೀನಿವಾಸಪುರ

15	ಮಧುಗಿರಿ
16	ಪಾವಗಡ
17	ಸಿರಾ
18	ಬಂಟ್ವಾಳ
19	ಮಂಗಳೂರು
20	ಪುತ್ತೂರು
21	ಸುಳ್ಯ
22	ಮಡಿಕೇರಿ
23	ವಿರಾಜಪೇಟೆ
24	ಚಾಮರಾಜನಗರ
25	ಗುಂಡ್ಲುಪೇಟೆ
26	ಹೆಗ್ಗಡದೇವನಕೋಟೆ
27	ಕೊಳ್ಳೇಗಾಲ
28	ಬಿಜಾಪುರ
29	ಇಂಡಿ
30	ಬಳ್ಳಾರಿ
31	ಸಂಡೂರು
32	ಸಿರಿಗುಪ್ಪೆ
33	ಅಫಜಲ್ಪುರ
34	ಆಳಂದ
35	ಚಿಂಚೋಳಿ
36	ಸೇಡಂ
37	ಶಹಪುರ
38	ಯಾದಗೀರ್
39	ಮಾನ್ವಿ

40	ರಾಯಚೂರು
41	ಅಥಣಿ
42	ಬೆಳಗಾವಿ
43	ಹುಕ್ಕೇರಿ
44	ಚಿಕ್ಕೋಡಿ
45	ಖಾನಾಪುರ
46	ಕಾರವಾರ
47	ಜೋಯಿಡಾ
48	ಔರಾದ್
49	ಬಸವಕಲ್ಯಾಣ
50	ಭಾಲ್ಕಿ
51	ಬೀದರ್
52	ಹುಮ್ನಾಬಾದ್

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ ಉಪಬಂಧವನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

(ಎ) "ಗಡಿ ಪ್ರದೇಶ"ದ ವ್ಯಾಪ್ತಿಯಲ್ಲಿ ಗುರುತಿಸಿರುವ 52 ತಾಲ್ಲೂಕುಗಳಲ್ಲಿ ಕನ್ನಡ ಭಾಷೆ, ಸಂಸ್ಕೃತಿ, ಶಿಕ್ಷಣ, ನೀರಾವರಿ, ಪರಿಸರ, ಉದ್ದಿಮೆ, ಆರೋಗ್ಯ ಮತ್ತು ಕೃಷಿ ಇಂತಹ ಜನಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದುವುದು;

(ಬಿ) ಕನ್ನಡ ಜನರು, ನೆರೆಯ ರಾಜ್ಯದ ಭಾಷೆ ಸಂಸ್ಕೃತಿ ಪ್ರಭಾವಕ್ಕೆ ಸಿಲುಕಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಕನ್ನಡ ಪರಿಸರದಿಂದ ದೂರ ಸರಿಯದಂತೆ ಅವರನ್ನು ರಕ್ಷಿಸುವುದು;

(ಸಿ) ಕನ್ನಡ ಮಾಧ್ಯಮದ ಮೂಲಕ ಶಿಕ್ಷಣ ನೀಡುವುದಕ್ಕಾಗಿ, ಪಠ್ಯ ಪುಸ್ತಕಗಳನ್ನು, ಗ್ರಂಥಾಲಯ ಸೌಲಭ್ಯ ಒದಗಿಸುವುದಕ್ಕಾಗಿ, ಉಪನ್ಯಾಸ ಕಾರ್ಯಕ್ರಮ ಹಾಗೂ ಕನ್ನಡ ಭಾಷೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು;

(ಡಿ) ಕನ್ನಡಿಗರ ಪ್ರಯೋಜನೆಗಾಗಿ ಅಗತ್ಯವಾದ ಕರಕುಶಲ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು ಮತ್ತು ಇತರ ಸೌಲಭ್ಯಗಳನ್ನು ಪ್ರೋತ್ಸಾಹಿಸುವುದು;

(ಇ) ಗಡಿ ಪ್ರದೇಶದಲ್ಲಿನ ಜನರ ಸ್ಥಿತಿಯನ್ನು ಮತ್ತು ಗಡಿ ಪ್ರದೇಶದ ನೆರೆಹೊರೆಯಲ್ಲಿರುವ ಕನ್ನಡ ಮಾತನಾಡುವ ಜನರ ಸ್ಥಾನಮಾನಗಳನ್ನು ಸುಧಾರಿಸುವುದು;

(ಎಫ್) ಕನ್ನಡಿಗರ ಅಭದ್ರತೆ ಭಾವನೆಯನ್ನು ತೊಡೆದುಹಾಕಿ ಕನ್ನಡಿಗರಿಗೆ ಆತ್ಮಾಭಿಮಾನ ಉಂಟಾಗುವಂತೆ ಮಾಡುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನ ರಚನಾ ಕ್ರಮದಿಂದಾಗಿ 711 ಲಕ್ಷ ರೂಪಾಯಿಗಳ ಆವರ್ತಕ ವೆಚ್ಚ ಮತ್ತು 289 ಲಕ್ಷ ರೂಪಾಯಿಗಳ ಅನಾವರ್ತಕ ವೆಚ್ಚ ಉಂಟಾಗುತ್ತದೆ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ

ಖಂಡ 4: (4) ನೇ ಉಪ ಖಂಡವು, ಪ್ರಾಧಿಕಾರದ ಅಧ್ಯಕ್ಷರು ಮತ್ತು ಇತರ ಸದಸ್ಯರುಗಳಿಗೆ ಪಾವತಿಸಬೇಕಾದ ಭತ್ಯೆಗಳ ಬಗ್ಗೆ ನಿಯಮಗಳನ್ನು ರಚಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 8: (i) (1)ನೇ ಉಪ ಖಂಡವು, ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರ ನೇಮಕಾತಿ ಅಥವಾ ನಿಯೋಜನೆಯ ವಿಧಾನಗಳ ಬಗ್ಗೆ ನಿಯಮಗಳನ್ನು ರಚಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

(ii) (2)ನೇ ಉಪ ಖಂಡವು, ಪ್ರಾಧಿಕಾರದ ಅಧಿಕಾರಿಗಳ ಮತ್ತು ನೌಕರರ ನೇಮಕಾತಿಯ ವಿಧಾನ ಮತ್ತು ಅವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 13: (2)ನೇ ಉಪ ಖಂಡವು, ಪ್ರಾಧಿಕಾರಕ್ಕೆ ಸಲ್ಲಿಸಿದ ಸೇವೆಗಳು ಅಥವಾ ನೆರವಿಗಾಗಿ ತಜ್ಞರುಗಳಿಗೆ ಸಂದಾಯ ಮಾಡತಕ್ಕ ಗೌರವಧನ ಮತ್ತು ಭತ್ಯೆಗಳ ಮೊತ್ತದ ಬಗ್ಗೆ ನಿಯಮಗಳನ್ನು ರಚಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 23: (i) (1)ನೇ ಉಪ ಖಂಡವು, ಪ್ರಾಧಿಕಾರದ ಲೆಕ್ಕಪತ್ರಗಳನ್ನು ಇಡುವ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ

(ii) (2)ನೇ ಉಪ ಖಂಡವು ಪ್ರಾಧಿಕಾರದ ಲೆಕ್ಕಪತ್ರಗಳ ವಾರ್ಷಿಕ ವರದಿಯನ್ನು ತಯಾರಿಸುವ ವಿಧಾನದ

ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

(iii) (5)ನೇ ಉಪ ಖಂಡವು, ಪ್ರಾಧಿಕಾರವು ಸಂದಾಯ ಮಾಡಬೇಕಾದ ಲೆಕ್ಕ ಪರಿಶೋಧನಾ ವೆಚ್ಚಗಳ ಬಗ್ಗೆ ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

(iv) (6)ನೇ ಉಪ ಖಂಡವು, ಪ್ರಾಧಿಕಾರದ ಲೆಕ್ಕಪತ್ರಗಳ ವಾರ್ಷಿಕ ವರದಿಯ ಪ್ರಕಟಣೆ ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುವ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 26: ಪೂರ್ವ ಪ್ರಕಟಣೆಯ ತರುವಾಯ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ – IV

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನಸಭೆ
ಐದನೇ ಅಧಿವೇಶನ

ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ವಿಧೇಯಕ, 2010
(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 6)

ರಾಜ್ಯ ಸರ್ಕಾರದ, ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳ, ಶಾಸನಬದ್ಧ ಸಂಸ್ಥೆಗಳ ಮತ್ತು ನಿಗಮಗಳ, ರಾಜ್ಯ ಸರ್ಕಾರವು ಸ್ಥಾಪಿಸಿದ ಆಯೋಗಗಳು ಮತ್ತು ಸಮಿತಿಗಳ ಸಾರ್ವಜನಿಕ ದಾಖಲೆಗಳ ನಿರ್ವಹಣೆ, ಆಡಳಿತ ಮತ್ತು ಸಂರಕ್ಷಣೆಯನ್ನು ನಿಯಂತ್ರಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಪಟ್ಟ ಹಾಗೂ ಪ್ರಾಸಂಗಿಕ ವಿಷಯಗಳಿಗೆ ಉಪಬಂಧ ಕಲ್ಪಿಸುವ ಒಂದು ವಿಧೇಯಕ.

ಇದು, ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು :-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ***ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ಅಧಿನಿಯಮ, 2010*** ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಳಿ" ಎಂದರೆ, 13ನೇ ಪ್ರಕರಣದ (1)ನೇ ಉಪ ಪ್ರಕರಣದಡಿಯಲ್ಲಿ ರಚಿಸಲಾದ ರಾಜ್ಯ ಪತ್ರಾಗಾರ ಸಲಹಾ ಮಂಡಳಿ ;

(ಬಿ) "ನಿರ್ದೇಶಕರು" ಎಂದರೆ, ರಾಜ್ಯ ಸರ್ಕಾರವು ನೇಮಿಸಿದ ಪತ್ರಾಗಾರ ನಿರ್ದೇಶಕರು ಮತ್ತು ಇದರಲ್ಲಿ ನಿರ್ದೇಶಕರ ಕರ್ತವ್ಯಗಳನ್ನು ನೆರವೇರಿಸಲು ಸರ್ಕಾರದಿಂದ ಅಧಿಕೃತರಾದ ಯಾವೊಬ್ಬ ಅಧಿಕಾರಿಯೂ ಒಳಗೊಳ್ಳುತ್ತಾರೆ ;

(ಸಿ) "ಪತ್ರಾಗಾರದ ಮುಖ್ಯಸ್ಥರು" ಎಂದರೆ, ರಾಜ್ಯ ಪತ್ರಾಗಾರಗಳ ಪ್ರಭಾರ ಹೊಂದಿರುವ ವ್ಯಕ್ತಿ;

(ಡಿ) "ಸಾರ್ವಜನಿಕ ದಾಖಲೆಗಳು" ಎಂಬುದು,–

(i) ಯಾವುದೇ ದಾಖಲೆ, ಹಸ್ತಪ್ರತಿ ಮತ್ತು ಕಡತ ;

(ii) ಒಂದು ದಾಖಲೆಯ ಯಾವುದೇ ಮೈಕ್ರೊ ಫಿಲ್ಮು, ಮೈಕ್ರೋಫೀಶ್ ಮತ್ತು ಪಡಿಯಚ್ಚು ಪ್ರತಿ ;

(iii) ಮೈಕ್ರೋಫಿಲ್ಮಿನಲ್ಲಿ ಒಳಗೊಂಡ ಬಿಂಬ ಅಥವಾ ಬಿಂಬಗಳನ್ನು ವಿಶಾಲಗೊಳಿಸಿ ಅಥವಾ ಹಾಗೆಯೇ ನಕಲು ತೆಗೆಯುವುದು ; ಮತ್ತು

(iv) ಯಾವುದೇ ದಾಖಲೆಗಳ ಸೃಜನಾ ಏಜೆನ್ಸಿಯ ಗಣಕಯಂತ್ರದಿಂದ ಅಥವಾ ಯಾವುದೇ ಇತರ ಸಾಧನದಿಂದ ಉತ್ಪಾದಿತವಾದ ಯಾವುದೇ ಇತರ ವಸ್ತು

– ಇವುಗಳನ್ನು ಒಳಗೊಳ್ಳುತ್ತದೆ.

(ಇ) "ದಾಖಲೆಗಳ ಸೃಜನಾ ಏಜೆನ್ಸಿ" ಎಂಬುದು ಈ ಮುಂದಿನವುಗಳನ್ನು ಒಳಗೊಳ್ಳುತ್ತದೆ,

(i) ರಾಜ್ಯ ಸರ್ಕಾರದ ಸಂಬಂಧದಲ್ಲಿ, ರಾಜ್ಯ ಸರ್ಕಾರದ ಯಾವುದೇ ಮಂತ್ರಾಲಯ, ಇಲಾಖೆ ಅಥವಾ ಕಛೇರಿ;

(ii) ರಾಜ್ಯ ಸರ್ಕಾರದ ಪೂರ್ಣ ಅಥವಾ ಗಣನೀಯ ನಿಯಂತ್ರಣದಲ್ಲಿರುವ ಅಥವಾ ಅದರಿಂದ ಹಣಕಾಸಿನ ನೆರವು ಪಡೆಯುವ ಯಾವುದೇ ಶಾಸನ ಬದ್ಧ ಸಂಸ್ಥೆ ಅಥವಾ ನಿಗಮದ ಸಂಬಂಧದಲ್ಲಿ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಯಾವುದೇ ಆಯೋಗ ಅಥವಾ ಯಾವುದೇ ಸಮಿತಿಯ ಸಂದರ್ಭದಲ್ಲಿ, ಸದರಿ ಸಂಸ್ಥೆಯ, ನಿಗಮದ, ಆಯೋಗದ ಅಥವಾ ಸಮಿತಿಯ ಕಚೇರಿಗಳು.

(ಎಫ್) "ದಾಖಲೆಗಳ ಅಧಿಕಾರಿ" ಎಂದರೆ, 5ನೇ ಪ್ರಕರಣದ (1) ಉಪ–ಪ್ರಕರಣದ ಅಡಿಯಲ್ಲಿ ದಾಖಲೆಗಳ ಸೃಜನಾ ಏಜೆನ್ಸಿಯಿಂದ ನಾಮನಿರ್ದೇಶನ ಮಾಡಿದ ಅಧಿಕಾರಿ ;

(ಜಿ) "ರಾಜ್ಯ" ಎಂದರೆ, ಕರ್ನಾಟಕ ರಾಜ್ಯ.

3. ಸಾರ್ವಜನಿಕ ದಾಖಲೆಗಳ ಆಡಳಿತ, ನಿರ್ವಹಣೆಗೆ ಮುಂತಾದವುಗಳಿಗೆ ಸಂಬಂಧಿಸಿದ ಕಾರ್ಯಾಚರಣೆಗಳ ಸಮನ್ವಯ, ನಿಯಂತ್ರಣ ಮತ್ತು ಮೇಲ್ವಿಚಾರಣೆ ಮಾಡಲು ರಾಜ್ಯ ಸರ್ಕಾರದ ಅಧಿಕಾರ.– (1) ಈ ಅಧಿನಿಯಮದ ಅಡಿಯಲ್ಲಿನ ಸಾರ್ವಜನಿಕ ದಾಖಲೆಗಳಿಗೆ ಸಂಬಂಧಿಸಿದ ಆಡಳಿತ, ನಿರ್ವಹಣೆ, ಸಂರಕ್ಷಣೆ, ಆಯ್ಕೆ, ವಿಲೆ ಮತ್ತು ನಾಶಪಡಿಸುವಿಕೆಗೆ ಸಂಬಂಧಿಸಿದ ಕಾರ್ಯಾಚರಣೆಗಳ ಸಮನ್ವಯ, ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಅಧಿಕಾರವನ್ನು ರಾಜ್ಯ ಸರ್ಕಾರವು ಹೊಂದಿರತಕ್ಕದ್ದು.

(2) ದಾಖಲೆಗಳ ಸೃಜನಾ ಏಜೆನ್ಸಿಗಳ ಸಾರ್ವಜನಿಕ ದಾಖಲೆಗಳ ಸಂಬಂಧದಲ್ಲಿ, ರಾಜ್ಯ ಸರ್ಕಾರವು, ಆದೇಶದ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಿಸಬಹುದಾದಂಥ ಷರತ್ತುಗಳ ಮೇಲೆ ಪತ್ರಾಗಾರದ ನಿರ್ದೇಶಕರಿಗೆ ಈ ಕೆಳಗಿನ ಎಲ್ಲಾ ಅಥವಾ ಯಾವುವಾದರೂ ಪ್ರಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ನೀಡಬಹುದು, ಎಂದರೆ :–

(ಎ) ಪತ್ರಾಗಾರಗಳ ಮೇಲ್ವಿಚಾರಣೆ, ನಿರ್ವಹಣೆ ಮತ್ತು ನಿಯಂತ್ರಣ ;

(ಬಿ) ನಿಯಮಿಸಬಹುದಾದಂಥ ಅವಧಿಯ ತರುವಾಯ ಶಾಶ್ವತ ಸ್ವರೂಪದ ಸಾರ್ವಜನಿಕ ದಾಖಲೆಗಳನ್ನು ತನ್ನಲ್ಲಿ ಇಟ್ಟುಕೊಳ್ಳಲು ಒಪ್ಪಿಕೊಳ್ಳುವುದು ;

(ಸಿ) ಸಾರ್ವಜನಿಕ ದಾಖಲೆಗಳ ಅಭಿರಕ್ಷೆ, ಬಳಕೆ ಮತ್ತು ಹಿಂದಕ್ಕೆ ಪಡೆಯುವುದು;

(ಡಿ) ಸಾರ್ವಜನಿಕ ದಾಖಲೆಗಳನ್ನು ಜೋಡಿಸಿಡುವುದು, ಸಂರಕ್ಷಣೆ ಮತ್ತು ಪ್ರದರ್ಶನ;

(ಇ) ಸಾರ್ವಜನಿಕ ದಾಖಲೆಗಳ ವಿವರಣಾ ಪಟ್ಟಿಗಳು, ಸೂಚಿಗಳು (ಇಂಡಿಸಿಸ್), ವಿಷಯಪಟ್ಟಿಗಳು (ಕ್ಯಾಟಲಾಗುಗಳು) ಮತ್ತು ಇತರ ಪರಾಮರ್ಶನಾ ಮಾಧ್ಯಮಗಳನ್ನು ತಯಾರಿಸುವುದು ;

(ಎಫ್) ದಾಖಲೆಗಳ ನಿರ್ವಹಣಾ ಪದ್ಧತಿಯ ಸುಧಾರಣೆಗಾಗಿ ಗುಣಮಟ್ಟಗಳು, ಪ್ರಕ್ರಿಯೆಗಳು ಮತ್ತು ತಂತ್ರಜ್ಞಾನಗಳನ್ನು ವಿಶ್ಲೇಷಿಸುವುದು, ಅಭಿವೃದ್ಧಿ ಪಡಿಸುವುದು, ಪ್ರೋತ್ಸಾಹಿಸುವುದು ಮತ್ತು ಸಮನ್ವಯಗೊಳಿಸುವುದು ;

(ಜಿ) ಪತ್ರಾಗಾರದಲ್ಲಿ ಮತ್ತು ದಾಖಲೆಗಳ ಸೃಜನಾ ಏಜೆನ್ಸಿಯಲ್ಲಿ ಸಾರ್ವಜನಿಕ ದಾಖಲೆಗಳನ್ನು ಸರಿಯಾಗಿ ನಿರ್ವಹಿಸುವಂತೆ, ಜೋಡಿಸುವಂತೆ ಮತ್ತು ಸುರಕ್ಷವಾಗಿಡುವಂತೆ ನೋಡಿಕೊಳ್ಳುವುದು ;

(ಎಚ್) ಸಾರ್ವಜನಿಕ ದಾಖಲೆಗಳ ಸಂರಕ್ಷಣೆಗಾಗಿ ಲಭ್ಯವಿರುವ ಸ್ಥಳಾವಕಾಶವನ್ನು ಉಪಯೋಗಿಸುವಂತೆ ಮತ್ತು ಸಾಧನಗಳನ್ನು ಚೆನ್ನಾಗಿ ಇಟ್ಟುಕೊಂಡು ಬರುವಂತೆ ಉತ್ತೇಜಿಸುವುದು ;

(ಐ) ದಾಖಲೆಗಳ ಸಂಕಲನ, ವರ್ಗೀಕರಣ ಮತ್ತು ವಿಲೆಯ ಬಗ್ಗೆ ಮತ್ತು ದಾಖಲೆಗಳ ನಿರ್ವಹಣೆಯ ಗುಣಮಟ್ಟಗಳು, ಪ್ರಕ್ರಿಯೆಗಳು ಮತ್ತು

ತಂತ್ರಜ್ಞಾನಗಳನ್ನು ಅನ್ವಯಿಸುವುದರ ಬಗ್ಗೆ ದಾಖಲೆಗಳ ಸೃಜನಾ ಏಜೆನ್ಸಿಗಳಿಗೆ ಸಲಹೆಯನ್ನು ನೀಡುವುದು;

(ಜೆ) ಸಾರ್ವಜನಿಕ ದಾಖಲೆಗಳ ಸಮೀಕ್ಷೆ ಮತ್ತು ಪರಿವೀಕ್ಷಣೆಗಳನ್ನು ಮಾಡುವುದು ;

(ಕೆ) ಪತ್ರಾಗಾರ ಆಡಳಿತ ಮತ್ತು ದಾಖಲೆಗಳ ನಿರ್ವಹಣೆಯ ವಿವಿಧ ವಿದ್ಯಾವಿಭಾಗಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು;

(ಎಲ್) ಯಾವುದೇ ಖಾಸಗಿ ಮೂಲದಿಂದ ದಾಖಲೆಗಳನ್ನು ಸ್ವೀಕರಿಸುವುದು ;

(ಎಂ) ಸಾರ್ವಜನಿಕ ದಾಖಲೆಗಳನ್ನು ನೋಡುವ ಅವಕಾಶವನ್ನು ನಿಯಂತ್ರಿಸುವುದು ;

(ಎನ್) ನಿಷ್ಕ್ರಿಯ ಸಂಸ್ಥೆಗಳ ದಾಖಲೆಗಳನ್ನು ಸ್ವೀಕರಿಸುವುದು ಮತ್ತು ರಾಷ್ಟ್ರೀಯ / ರಾಜ್ಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸಾರ್ವಜನಿಕ ದಾಖಲೆಗಳನ್ನು ಪಡೆದುಕೊಳ್ಳುವುದಕ್ಕಾಗಿ ವ್ಯವಸ್ಥೆ ಮಾಡುವುದು ;

(ಓ) ದಾಖಲೆಗಳ ಅಧಿಕಾರಿಯಿಂದ ದಾಖಲೆಗಳ ನಿರ್ವಹಣೆ ಮತ್ತು ವಿಲೆ ಪದ್ಧತಿಗಳ ಬಗ್ಗೆ ವರದಿಗಳನ್ನು ಸ್ವೀಕರಿಸುವುದು ;

(ಪಿ) ಸಾರ್ವಜನಿಕ ದಾಖಲೆಗಳ ಅಧಿಪ್ರಮಾಣಿತ ಪ್ರತಿಗಳು ಅಥವಾ ಅವುಗಳ ಉದ್ಧೃತ ಭಾಗಗಳನ್ನು ನೀಡುವುದು ;

(ಕ್ಯೂ) ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸುವುದು ಅಥವಾ ವಿಲೆ ಮಾಡುವುದು ;

(ಆರ್) ಚಾರಿತ್ರಿಕ, ರಾಜ್ಯ ಅಥವಾ ರಾಷ್ಟ್ರೀಯ ಮಹತ್ವದ ಯಾವುದೇ ದಸ್ತಾವೇಜನ್ನು ಬಾಡಿಗೆಯ ಮೇಲೆ ಅಥವಾ ಖರೀದಿಸಿ ಪಡೆಯುವುದು ಅಥವಾ ಕೊಡುಗೆಯಾಗಿ ಸ್ವೀಕರಿಸುವುದು.

4. ಸಾರ್ವಜನಿಕ ದಾಖಲೆಗಳನ್ನು ರಾಜ್ಯದಿಂದ ಹೊರಕ್ಕೆ ತೆಗೆದುಕೊಂಡು ಹೋಗದಂತೆ ನಿಷೇಧಿಸುವುದು.– ಯಾವ ವ್ಯಕ್ತಿಯೂ ರಾಜ್ಯ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ಯಾವುವೇ ಸಾರ್ವಜನಿಕ ದಾಖಲೆಗಳನ್ನು ರಾಜ್ಯದಿಂದ ಹೊರಕ್ಕೆ ತೆಗೆದುಕೊಂಡು ಹೋಗತಕ್ಕದ್ದಲ್ಲ ಅಥವಾ ತೆಗೆದುಕೊಂಡು ಹೋಗುವಂತೆ ಮಾಡತಕ್ಕದ್ದಲ್ಲ.

5. ದಾಖಲೆಗಳ ಅಧಿಕಾರಿ.– (1) ಪ್ರತಿಯೊಂದು ದಾಖಲೆಗಳ ಸೃಜನಾ ಏಜೆನ್ಸಿಯು ಈ ಅಧಿನಿಯಮದಡಿಯಲ್ಲಿನ ಕರ್ತವ್ಯಗಳನ್ನು ನಿರ್ವಹಿಸಿಕೊಂಡುಹೋಗಲು ಒಬ್ಬ ಅಧಿಕಾರಿಯನ್ನು ದಾಖಲೆಗಳ ಅಧಿಕಾರಿ ಎಂದು ನಾಮನಿರ್ದೇಶನ ಮಾಡತಕ್ಕದ್ದು.

(2) ಪ್ರತಿಯೊಂದು ದಾಖಲೆಗಳ ಸೃಜನಾ ಏಜೆನ್ಸಿಯು ತಾನು ಸೂಕ್ತವೆಂದು ಭಾವಿಸಿದಂಥ ಸ್ಥಳಗಳಲ್ಲಿ ಅಂಥ ಸಂಖ್ಯೆಯ ದಾಖಲೆ ಕೊಠಡಿಗಳನ್ನು ನಿರ್ಮಿಸತಕ್ಕದ್ದು ಹಾಗೂ ಪ್ರತಿಯೊಂದು ದಾಖಲೆ ಕೊಠಡಿಯನ್ನು ಒಬ್ಬ ದಾಖಲೆಗಳ ಅಧಿಕಾರಿಯ ಪ್ರಭಾರದಡಿಯಲ್ಲಿ ಇಡತಕ್ಕದ್ದು.

6. ದಾಖಲೆಗಳ ಅಧಿಕಾರಿಯ ಜವಾಬ್ದಾರಿಗಳು.– (1) ದಾಖಲೆಗಳ ಅಧಿಕಾರಿಯು ಈ ಕೆಳಗಿನವುಗಳಿಗೆ ಜವಾಬ್ದಾರನಾಗಿರತಕ್ಕದ್ದು.

(ಎ) ತನ್ನ ಪ್ರಭಾರದಲ್ಲಿರುವ ಸಾರ್ವಜನಿಕ ದಾಖಲೆಗಳನ್ನು ಓರಣವಾಗಿ ಜೋಡಿಸಿಡುವುದು, ನಿರ್ವಹಿಸಿಕೊಂಡು ಬರುವುದು ಮತ್ತು ಸಂರಕ್ಷಣೆ ಮಾಡುವುದು ;

(ಬಿ) ಎಲ್ಲಾ ಸಾರ್ವಜನಿಕ ದಾಖಲೆಗಳ ನಿಯತಕಾಲಿಕ ಪುನರೀಕ್ಷಣೆ ಮಾಡುವುದು ಮತ್ತು ಅಲ್ಪಕಾಲಿಕ ಮೌಲ್ಯದ ಸಾರ್ವಜನಿಕ ದಾಖಲೆಗಳನ್ನು ನಾಶಗೊಳಿಸುವುದು;

(ಸಿ) ಶಾಶ್ವತ ಮೌಲ್ಯದ ಸಾರ್ವಜನಿಕ ದಾಖಲೆಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ರಾಜ್ಯ ಪತ್ರಾಗಾರದೊಡನೆ ಸಮಾಲೋಚಿಸಿ ಇಪ್ಪತ್ತೈದು

ವರ್ಷಗಳಿಗಿಂತ ಹಳೆಯದಾದ ದಾಖಲೆಗಳ ಮೌಲ್ಯ ನಿರ್ಣಯ ಮಾಡುವುದು ;

(ಡಿ) 8ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸುವುದು ;

(ಇ) ರಾಜ್ಯ ಪತ್ರಾಗಾರದೊಡನೆ ಸಮಾಲೋಚಿಸಿ ಉಳಿಸಿಕೊಂಡಿರುವ ಸಾರ್ವಜನಿಕ ದಾಖಲೆಗಳಿಗೆ ಅನುಸೂಚಿಯನ್ನು ಸಂಕಲನ ಮಾಡುವುದು ;

(ಎಫ್) ನಿಯಮಿಸಬಹುದಾದಂಥ ರೀತಿಯಲ್ಲಿ ವರ್ಗೀಕರಣವಾದ ಸಾರ್ವಜನಿಕ ದಾಖಲೆಗಳನ್ನು ಕೆಳದರ್ಜೆಗೆ ಇಳಿಸುವುದಕ್ಕಾಗಿ ನಿಯತಕಾಲಿಕ ಪುನರೀಕ್ಷಣೆ ಮಾಡುವುದು;

(ಜಿ) ದಾಖಲೆ ನಿರ್ವಹಣಾ ಪದ್ಧತಿಯ ಸುಧಾರಣೆಗಾಗಿ ಮತ್ತು ಸಾರ್ವಜನಿಕ ದಾಖಲೆಗಳ ಭದ್ರತೆಗಾಗಿ ರಾಜ್ಯಪತ್ರಾಗಾರದವರು ಕಾಲಕಾಲಕ್ಕೆ ಶಿಫಾರಸ್ಸು ಮಾಡಬಹುದಾದಂಥ ಗುಣಮಟ್ಟಗಳು, ಪ್ರಕ್ರಿಯೆಗಳು ಮತ್ತು ತಂತ್ರಜ್ಞಾನಗಳನ್ನು ಅಳವಡಿಸಿ ಕೊಳ್ಳುವುದು ;

(ಎಚ್) ಸಾರ್ವಜನಿಕ ದಾಖಲೆಗಳ ವಾರ್ಷಿಕ ವಿಷಯ ಸೂಚಿಗಳ ಸಂಕಲನ ಮಾಡುವುದು ;

(ಐ) ಸಂಘಟನಾ ಚರಿತ್ರೆ ಮತ್ತು ಅದರ ವಾರ್ಷಿಕ ಪುರವಣಿಯ ಸಂಕಲನ ಮಾಡುವುದು ;

(ಜೆ) ಸಾರ್ವಜನಿಕ ದಾಖಲೆಗಳ ನಿರ್ವಹಣೆಯಲ್ಲಿ ರಾಜ್ಯ ಪತ್ರಾಗಾರಕ್ಕೆ ನೆರವು ನೀಡುವುದು;

(ಕೆ) ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ದೇಶಕರಿಗೆ ವಾರ್ಷಿಕ ವರದಿಗಳನ್ನು ಸಲ್ಲಿಸುವುದು ;

(ಎಲ್) ಯಾವುದೇ ನಿಷ್ಕ್ರಿಯ ಸಂಸ್ಥೆಯ ದಾಖಲೆಗಳನ್ನು ಸಂರಕ್ಷಣೆಗಾಗಿ ರಾಜ್ಯ ಪತ್ರಾಗಾರಕ್ಕೆ ವರ್ಗಾವಣೆ ಮಾಡುವುದು ;

(2) (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ದಾಖಲೆಗಳ ಅಧಿಕಾರಿಯು ನಿರ್ದೇಶಕರ ನಿರ್ದೇಶನದಡಿಯಲ್ಲಿ ಕರ್ತವ್ಯನಿರ್ವಹಿಸತಕ್ಕದ್ದು.

7. ದಾಖಲೆಗಳ ಅಧಿಕಾರಿಯು ತನ್ನ ಅಭಿರಕ್ಷೆಯಲ್ಲಿರುವ ಸಾರ್ವಜನಿಕ ದಾಖಲೆಗಳನ್ನು ಅನಧಿಕೃತವಾಗಿ ತೆಗೆದುಕೊಂಡು ಹೋದ, ನಾಶಪಡಿಸಿದ ಮುಂತಾದ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು.– (1) ದಾಖಲೆಗಳ ಅಧಿಕಾರಿಯು, ತನ್ನ ಪ್ರಭಾರದಲ್ಲಿರುವ ಯಾವುದೇ ಸಾರ್ವಜನಿಕ ದಾಖಲೆಗಳನ್ನು ಅನಧಿಕೃತವಾಗಿ ತೆಗೆದುಕೊಂಡುಹೋದಾಗ, ನಾಶಪಡಿಸಿದಾಗ, ವಿರೂಪಗೊಳಿಸಿದಾಗ ಅಥವಾ ಮಾರ್ಪಡಿಸಿದಾಗ ಅಂಥ ಸಾರ್ವಜನಿಕ ದಾಖಲೆಗಳನ್ನು ಮತ್ತೆ ಪಡೆದುಕೊಳ್ಳುವುದಕ್ಕೆ ಅಥವಾ ಅದನ್ನು ಪೂರ್ವಸ್ಥಿತಿಗೆ ತರುವುದಕ್ಕೆ ಸೂಕ್ತವಾದ ಕ್ರಮವನ್ನು ಕೂಡಲೇ ತೆಗೆದುಕೊಳ್ಳತಕ್ಕದ್ದು.

(2) ದಾಖಲೆಗಳ ಅಧಿಕಾರಿಯು, ತನ್ನ ಪ್ರಭಾರದಲ್ಲಿರುವ ಯಾವುದೇ ಸಾರ್ವಜನಿಕ ದಾಖಲೆಗಳನ್ನು ಅನಧಿಕೃತವಾಗಿ ತೆಗೆದುಕೊಂಡು ಹೋದ, ನಾಶಪಡಿಸಿದ, ವಿರೂಪಗೊಳಿಸಿದ ಅಥವಾ ವ್ಯತ್ಯಾಸಮಾಡಿದ ಬಗ್ಗೆ ಯಾವುದೇ ಮಾಹಿತಿಯನ್ನು ಮತ್ತು ತಾನು ಪ್ರಾರಂಭಿಸಿರುವ ಕ್ರಮದ ಬಗ್ಗೆ ಯಾವುದೇ ವಿಳಂಬವಿಲ್ಲದೆ ಒಂದು ಲಿಖಿತ ವರದಿಯನ್ನು ನಿರ್ದೇಶಕರಿಗೆ ಸಲ್ಲಿಸತಕ್ಕದ್ದು ಮತ್ತು ನಿರ್ದೇಶಕರು ಯಾವುದಾದರೂ ನಿರ್ದೇಶನಗಳನ್ನು ನೀಡಿದ್ದರೆ, ಅವುಗಳಿಗೊಳಪಟ್ಟು ತಾನು ಅವಶ್ಯವೆಂದು ಭಾವಿಸಬಹುದಾದ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

(3) ದಾಖಲೆಗಳ ಅಧಿಕಾರಿಯು, ಸಾರ್ವಜನಿಕ ದಾಖಲೆಗಳನ್ನು ಮತ್ತೆ ಪಡೆಯುವ ಅಥವಾ ಅದನ್ನು ಪೂರ್ವಸ್ಥಿತಿಗೆ ತರುವ ಉದ್ದೇಶಕ್ಕಾಗಿ ಯಾವೊಬ್ಬ ಸರ್ಕಾರಿ ಅಧಿಕಾರಿಯ ಅಥವಾ ಇತರ ಯಾವುದೇ ವ್ಯಕ್ತಿಯ ನೆರವನ್ನು ಕೋರಬಹುದು ಮತ್ತು ಅಂಥ ಅಧಿಕಾರಿ ಅಥವಾ ವ್ಯಕ್ತಿಯು ದಾಖಲೆಗಳ ಅಧಿಕಾರಿಗೆ ಎಲ್ಲಾ ನೆರವನ್ನು ನೀಡತಕ್ಕದ್ದು.

8. ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸುವುದು ಅಥವಾ ವಿಲೆಮಾಡುವುದು.– (1) ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮತ್ತು ಅಂಥ ರೀತಿಯಲ್ಲಿ ಹೊರತು ಯಾವುದೇ ಸಾರ್ವಜನಿಕ ದಾಖಲೆಯನ್ನು ನಾಶಪಡಿಸತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ.

(2) ನೂರುವರ್ಷಗಳಿಗಿಂತ ಹಳೆಯದಾಗಿರುವ ಯಾವುವೇ ದಾಖಲೆಗಳನ್ನು, ಅವು ಪತ್ರಾಗಾರದ ಯಾವುದೇ ಬಳಕೆಗೆ ಉಪಯೋಗಿಸಿ ಕೊಳ್ಳಲಾಗದ ಹಾಗೆ ವಿರೂಪಗೊಂಡಿವೆ ಅಥವಾ ದುಸ್ಥಿತಿಯಲ್ಲಿವೆ ಎಂದು ನಿರ್ದೇಶಕರ ಅಭಿಪ್ರಾಯಪಟ್ಟ ಹೊರತು ನಾಶಪಡಿಸತಕ್ಕದ್ದಲ್ಲ.

9. ಉಲ್ಲಂಘನೆಗೆ ದಂಡನೆ.– 4ನೇ ಪ್ರಕರಣದ ಅಥವಾ 8ನೇ ಪ್ರಕರಣದ ಯಾವುವೆ ಉಪಬಂಧಗಳನ್ನು ಯಾರೇ ಉಲ್ಲಂಘಿಸಿದರೂ, ಅವರು ಐದು ವರ್ಷಗಳ ಅವಧಿವರೆಗಿನ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗಿನ ದಂಡದಿಂದ ಅಥವಾ ಇವೆರಡರಿಂದಲೂ ದಂಡಿತರಾಗತಕ್ಕದ್ದು.

10. ಭದ್ರತೆಯ ವರ್ಗೀಕರಣವನ್ನು ಹೊಂದಿರುವ ಸಾರ್ವಜನಿಕ ದಾಖಲೆಗಳು.– ಭದ್ರತೆಯ ವರ್ಗೀಕರಣವನ್ನು ಹೊಂದಿರುವ ಯಾವುವೇ ಸಾರ್ವಜನಿಕ ದಾಖಲೆಗಳನ್ನು ರಾಜ್ಯ ಪತ್ರಾಗಾರಕ್ಕೆ ವರ್ಗಾಯಿಸತಕ್ಕದ್ದಲ್ಲ.

11. ಖಾಸಗಿ ಮೂಲಗಳಿಂದ ದಾಖಲೆಗಳ ಸ್ವೀಕೃತಿ.– (1) ರಾಜ್ಯಪತ್ರಾಗಾರವು, ಚಾರಿತ್ರಿಕ ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯ ಯಾವುದೇ ದಾಖಲೆಯನ್ನು ಯಾವುದೇ ಖಾಸಗಿ ಮೂಲದಿಂದ ದಾನವಾಗಿ, ಖರೀದಿ ಮಾಡಿ ಅಥವಾ ಅನ್ಯಥಾ ಸ್ವೀಕರಿಸಬಹುದು.

(2) ರಾಜ್ಯ ಪತ್ರಾಗಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು (1)ನೇ ಉಪಪ್ರಕರಣದಲ್ಲಿ ಉಲ್ಲೇಖವಾದ ಯಾವುದೇ ದಾಖಲೆಯನ್ನು ಯಾವೊಬ್ಬ ನೈಜ ಸಂಶೋಧನಾ ವಿದ್ವಾಂಸರಿಗೆ ಲಭ್ಯವಾಗುವಂತೆ ಮಾಡಬಹುದು.

12. ಸಾರ್ವಜನಿಕ ದಾಖಲೆಗಳನ್ನು ನೋಡುವ ಅವಕಾಶ.– (1) ಮೂವತ್ತು ವರ್ಷಗಳಿಗಿಂತ ಹಳೆಯದಾದ ವರ್ಗೀಕೃತವಾಗಿಲ್ಲದ ಮತ್ತು ರಾಜ್ಯ ಪತ್ರಾಗಾರಕ್ಕೆ ವರ್ಗಾವಣೆಯಾಗಿರುವ ಎಲ್ಲಾ ಸಾರ್ವಜನಿಕ ದಾಖಲೆಗಳನ್ನು

ನಿಯಮಿಸಬಹುದಾದಂಥ ವಿನಾಯಿತಿಗಳು ಮತ್ತು ನಿರ್ಬಂಧಗಳಿಗೊಳಪಟ್ಟು ಯಾವೊಬ್ಬ ನೈಜ ಸಂಶೋಧನಾ ವಿದ್ವಾಂಸರಿಗೆ ಲಭ್ಯವಾಗುವಂತೆ ಮಾಡಬಹುದು.

ವಿವರಣೆ :– ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಮೂವತ್ತು ವರ್ಷಗಳ ಅವಧಿಯನ್ನು ಸದರಿ ಸಾರ್ವಜನಿಕ ದಾಖಲೆಯನ್ನು ತೆರೆದ ವರ್ಷದಿಂದ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

(2) ಯಾವುದೇ ದಾಖಲೆಗಳ ಸೃಜನಾ ಏಜೆನ್ಸಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಯಾವುದೇ ವ್ಯಕ್ತಿಯು ತನ್ನ ಅಭಿರಕ್ಷೆಯಲ್ಲಿರುವ ಯಾವುದೇ ಸಾರ್ವಜನಿಕ ದಾಖಲೆಯನ್ನು ನೋಡಲು ಅನುಮತಿಯನ್ನು ನೀಡಬಹುದು.

13. ಪತ್ರಾಗಾರ ಸಲಹಾ ಮಂಡಳಿ.– (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಒಂದು ಪತ್ರಾಗಾರ ಸಲಹಾ ಮಂಡಳಿಯನ್ನು ಸ್ಥಾಪಿಸಬಹುದು.

(2) ಮಂಡಳಿಯು ಈ ಮುಂದಿನ ಸದಸ್ಯರುಗಳನ್ನೊಳಗೊಂಡಿರತಕ್ಕದ್ದು, ಎಂದರೆ :–

(ಎ)	ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳು	ಅಧ್ಯಕ್ಷರು, ಪದನಿಮಿತ್ತ ;
(ಬಿ)	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆರ್ಥಿಕ ಇಲಾಖೆ, ಕಾನೂನು ಇಲಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ – ಈ ಪ್ರತಿಯೊಂದು ಇಲಾಖೆಗಳಿಂದ ಕರ್ನಾಟಕ ಸರ್ಕಾರದ ಜಂಟಿ	ಸದಸ್ಯರು, ಪದನಿಮಿತ್ತ ;

	ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬೊಬ್ಬ ಅಧಿಕಾರಿಗಳು	
(ಸಿ)	ರಾಜ್ಯ ಸರ್ಕಾರವು ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ನಾಮನಿರ್ದೇಶನ ಮಾಡಿದ ಮೂವರು ವ್ಯಕ್ತಿಗಳು, ಅವರುಗಳಲ್ಲಿ ಒಬ್ಬರು ವೃತ್ತಿಯಿಂದ ಪತ್ರಪಾಲಕರಾಗಿರತಕ್ಕದ್ದು, ರಾಜ್ಯದ ಮಾನ್ಯತೆ ಪಡೆದ ಯಾವುವೇ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಚರಿತ್ರೆ ವಿಭಾಗದ ಪ್ರಾಧ್ಯಾಪಕರಾಗಿರುವ ಇಬ್ಬರು	ಸದಸ್ಯರುಗಳು
(ಡಿ)	ಪತ್ರಾಗಾರದ ನಿರ್ದೇಶಕರು	ಸದಸ್ಯ-ಕಾರ್ಯದರ್ಶಿಗಳು, ಪದನಿಮಿತ್ತ

(3) (2)ನೇ ಉಪಪ್ರಕರಣದ (ಸಿ) ಖಂಡದಡಿಯಲ್ಲಿ ನಾಮನಿರ್ದೇಶಿತರಾದ ಸದಸ್ಯರುಗಳಿಗೆ ನಿಯಮಿಸಬಹುದದಾಂಥ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

14. ಮಂಡಳಿಯ ಪ್ರಕಾರ್ಯಗಳು.– ಮಂಡಳಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ :-

(ಎ) ಸಾರ್ವಜನಿಕ ದಾಖಲೆಗಳ ಆಡಳಿತ, ನಿರ್ವಹಣೆ, ಸಂರಕ್ಷಣೆ ಮತ್ತು ಬಳಕೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು ;

(ಬಿ) ಪತ್ರಪಾಲಕರ ತರಬೇತಿಗಾಗಿ ಮಾರ್ಗದರ್ಶನಗಳನ್ನು ರಚಿಸುವುದು ;

(ಸಿ) ಖಾಸಗಿಯವರ ಅಭಿರಕ್ಷೆಯಲ್ಲಿರುವ ದಾಖಲೆಗಳನ್ನು ಅವರಿಂದ ಪಡೆದುಕೊಳ್ಳುವ ಬಗ್ಗೆ ನಿರ್ದೇಶನಗಳನ್ನು ನೀಡುವುದು ;

(ಡಿ) ನಿಯಮಿಸಬಹುದಾದಂಥ ಇತರ ವಿಷಯಗಳ ಬಗ್ಗೆ ವ್ಯವಹರಿಸುವುದು.

15. ಪತ್ರಪಾಲನಾ ವಿಜ್ಞಾನದಲ್ಲಿ ವ್ಯಾಸಂಗ ಕ್ರಮಗಳಿಗಾಗಿ ಪ್ರಮಾಣಕಗಳು ಮತ್ತು ಮಾನಕಮಟ್ಟಗಳನ್ನು ರಚಿಸಲು ನಿರ್ದೇಶಕರ ಅಧಿಕಾರ.– ಪತ್ರಪಾಲನಾ ವಿಜ್ಞಾನ ಮತ್ತು ಇತರ ಪೂರಕ ವಿಷಯಗಳಲ್ಲಿ ತರಬೇತಿಗೆ ಸಂಬಂಧಿತ ವ್ಯಾಸಂಗಕ್ರಮಗಳು, ಪಠ್ಯವಿಷಯಗಳು, ಮೌಲ್ಯಮಾಪನ ಮತ್ತು ಪರೀಕ್ಷೆಗಳಿಗಾಗಿ ಪ್ರಮಾಣಕಗಳು ಮತ್ತು ಮಾನಕ ಗುಣಮಟ್ಟಗಳನ್ನು ರಚಿಸುವ ಅಧಿಕಾರವನ್ನು ನಿರ್ದೇಶಕರು ಹೊಂದಿರತಕ್ಕದ್ದು.

16. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.– ಈ ಅಧಿನಿಯಮದ, ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಪಾಲನೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕ್ರಮಕ್ಕಾಗಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

17. ನಿಯಮಗಳನ್ನು ರಚಿಸುವ ಅಧಿಕಾರ.– (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವಾದರೂ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ :–

(ಎ) 3ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದಡಿಯಲ್ಲಿ ಶಾಶ್ವತ ಸ್ವರೂಪದ ಸಾರ್ವಜನಿಕ ದಾಖಲೆಗಳನ್ನು ಯಾವ ಅವಧಿಯ ತರುವಾಯ ಸ್ವೀಕರಿಸಬಹುದೋ ಆ ಅವಧಿ ;

(ಬಿ) 6ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದಡಿಯಲ್ಲಿ ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸತಕ್ಕ ರೀತಿ ಮತ್ತು ಅದಕ್ಕೆ ಅನ್ವಯಿಸುವ ಷರತ್ತುಗಳು ;

(ಸಿ) 6ನೇ ಪ್ರಕರಣದ (1)ನೇ ಉಪಪ್ರಕರಣದ (ಎಫ್) ಖಂಡದಡಿಯಲ್ಲಿ ವರ್ಗೀಕೃತ ಸಾರ್ವಜನಿಕ ದಾಖಲೆಗಳನ್ನು ಕೆಳದರ್ಜೆಗೆ ಇಳಿಸುವುದಕ್ಕಾಗಿ ನಿಯತಕಾಲಿಕ ಪುನರೀಕ್ಷಣೆಯನ್ನು ಮಾಡುವ ರೀತಿ ;

(ಡಿ) 6ನೇ ಪ್ರಕರಣದ (1)ನೇ ಉಪಪ್ರಕರಣದ (ಕೆ) ಖಂಡದಡಿಯಲ್ಲಿ ಹೇಳಿರುವಂತೆ ದಾಖಲೆಗಳ ಅಧಿಕಾರಿಯು ನಿರ್ದೇಶಕರಿಗೆ ವರದಿ ನೀಡತಕ್ಕ ರೀತಿ ;

(ಇ) 8ನೇ ಪ್ರಕರಣದ (ಇ) ಉಪಪ್ರಕರಣದಡಿಯಲ್ಲಿ ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸುವ ಅಥವಾ ವಿಲೆ ಮಾಡತಕ್ಕ ರೀತಿ ಮತ್ತು ಅದಕ್ಕೆ ಅನ್ವಯಿಸುವ ಷರತ್ತುಗಳು ;

(ಎಫ್) 11ನೇ ಪ್ರಕರಣದ (2)ನೇ ಉಪ ಪ್ರಕರಣದಡಿಯಲ್ಲಿ ಚಾರಿತ್ರಿಕ ಅಥವಾ ರಾಷ್ಟ್ರೀಯ ಅಥವಾ ರಾಜ್ಯಮಟ್ಟದ ಪ್ರಾಮುಖ್ಯತೆಯುಳ್ಳ ದಾಖಲೆಗಳನ್ನು ಸಂಶೋಧನಾ ವಿದ್ವಾಂಸರುಗಳಿಗೆ ಲಭ್ಯವಾಗುವಂತೆ ಮಾಡತಕ್ಕ ರೀತಿ ಮತ್ತು ಅದಕ್ಕೆ ಅನ್ವಯಿಸುವ ಷರತ್ತುಗಳು ;

(ಜಿ) 12ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿ ಒಬ್ಬ ಸಂಶೋಧನಾ ವಿದ್ವಾಂಸರಿಗೆ ಸಾರ್ವಜನಿಕ ದಾಖಲೆಗಳನ್ನು ನೋಡಲು ಕೊಡುವುದಕ್ಕೆ ಅನ್ವಯಿಸುವ ವಿನಾಯಿತಿಗಳು ಮತ್ತು ನಿರ್ಬಂಧಗಳು ;

(ಎಚ್) 13ನೇ ಪ್ರಕರಣದ (3)ನೇ ಉಪಪ್ರಕರಣದಡಿಯಲ್ಲಿ ಮಂಡಳಿಯ ಸದಸ್ಯರುಗಳಿಗೆ ಸಂದಾಯವಾಗಬೇಕಾದ ಭತ್ಯೆಗಳು ;

(ಐ) 14ನೇ ಪ್ರಕರಣದ (ಡಿ) ಖಂಡದಡಿಯಲ್ಲಿ ಮಂಡಳಿಯು ತನ್ನ ಪ್ರಕಾರ್ಯಗಳನ್ನು ನೆರವೇರಿಸಬಹುದಾದ ವಿಷಯಗಳು ;

(ಜೆ) ನಿಯಮಿಸತಕ್ಕ ಅಥವಾ ನಿಯಮಿಸಬಹುದಾದ ಯಾವುವೇ ಇತರ ವಿಷಯಗಳು,

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ. ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು

ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಈ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮವು ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

18. ತೊಂದರೆ ನಿವಾರಣೆಗೆ ಅಧಿಕಾರ.– (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ತಾನು ಅವಶ್ಯಕ ಅಥವಾ ಯುಕ್ತವೆಂದು ಭಾವಿಸುವಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಪೂರ್ಣಗೊಂಡ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಕೆಳಗಿನವುಗಳಿಗಾಗಿ ಉಪಬಂಧ ಕಲ್ಪಿಸುವುದಕ್ಕಾಗಿ, ಕರ್ನಾಟಕ ಸಾರ್ವಜನಿಕ ದಾಖಲೆಗಳ ಅಧಿನಿಯಮವನ್ನು ಅಧಿನಿಯಮಿತಗೊಳಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ,-

(ಎ) ಭಾರತೀಯ ಐತಿಹಾಸಿಕ ದಾಖಲೆಗಳ ಆಯೋಗದ ಸಲಹೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರದ ಸಾರ್ವಜನಿಕ ದಾಖಲೆಗಳ ಅಧಿನಿಯಮಕ್ಕೆ ಅನುಸಾರ ಸಾರ್ವಜನಿಕ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಒಂದು ಶಾಸನವನ್ನು, ನಿಯಮಿಸಿದ ಅವಧಿಯೊಳಗೆ, ಸಿದ್ಧಪಡಿಸಿ ಅನುಷ್ಠಾನಗೊಳಿಸುವುದು;

(ಬಿ) ಕರ್ನಾಟಕ ರಾಜ್ಯದಲ್ಲಿ ದೈನಂದಿನ ಆಡಳಿತದಲ್ಲಿ ಹಾಗೂ ಸಂಶೋಧನೆಯನ್ನು ನಡೆಸುವ ವ್ಯಕ್ತಿಗಳಿಗೆ ಉಪಯೋಗವಾಗುವ ಸರ್ಕಾರಿ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದನ್ನು ಮತ್ತು ಸಂರಕ್ಷಿಸುವುದನ್ನು ಖಚಿತಪಡಿಸಬಹುದು;

(ಸಿ) ಜಿಲ್ಲಾಡಳಿತ, ಸಾರ್ವಜನಿಕ ಉದ್ದಿಮೆಗಳು, ನಿಗಮಗಳು ಅಥವಾ ಮಂಡಳಿಗಳು, ಆಯೋಗಗಳು ಅಥವಾ ಸಮಿತಿಗಳ ದಾಖಲೆಗಳ ಸೂಕ್ತ ಸಂಗ್ರಹಣೆ, ನಿರ್ವಹಣೆ, ಆಡಳಿತ ಮತ್ತು ಸಂರಕ್ಷಣೆ ಮಾಡುವುದನ್ನು ಹಾಗೂ ಐತಿಹಾಸಿಕ ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯ ದಾಖಲೆಗಳನ್ನು ಖಾಸಗಿ ಮೂಲಗಳಿಂದ ಪಡೆಯುವುದನ್ನು, ಕೂಡಾ ಖಚಿತಪಡಿಸಿಕೊಳ್ಳುವುದು;

(ಡಿ) ಸಾರ್ವಜನಿಕ ದಾಖಲೆಗಳ ನಿರ್ವಹಣೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಲು ರಾಜ್ಯ ಪತ್ರಾಗಾರ ಸಲಹಾ ಮಂಡಳಿಯನ್ನು ರಚಿಸುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ 25 ಲಕ್ಷ ರೂಪಾಯಿಗಳ ಆವರ್ತಕ ವೆಚ್ಚ ಮತ್ತು 75 ಲಕ್ಷ ರೂಪಾಯಿಗಳ ಅನಾವರ್ತಕ ವೆಚ್ಚ ಉಂಟಾಗುತ್ತದೆ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ

ಖಂಡ 3 : (2)ನೇ ಉಪ ಖಂಡದ (ಬಿ) ಬಾಬು, ಶಾಶ್ವತ ಸ್ವರೂಪದ ಸಾರ್ವಜನಿಕ ದಾಖಲೆಗಳನ್ನು ತನ್ನಲ್ಲಿ ಇಟ್ಟುಕೊಳ್ಳಲು ಒಪ್ಪಿಕೊಳ್ಳುವ ಅವಧಿಯನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 6 : (1) ನೇ ಉಪ ಖಂಡದ,-

(i) (ಡಿ) ಬಾಬು, ದಾಖಲೆಗಳ ಅಧಿಕಾರಿಯು ಸಾರ್ವಜನಿಕ ದಾಖಲೆಗಳ ನಾಶಪಡಿಸುವುದಕ್ಕೆ, ನಿಯತಕಾಲಿಕವಾಗಿ ಪುನರೀಕ್ಷಣೆಯನ್ನು ಮಾಡಬೇಕಾದ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

(ii) (ಎಫ್) ಬಾಬು, ದಾಖಲೆಗಳ ಅಧಿಕಾರಿಯು ವರ್ಗೀಕರಣವಾದ ಸಾರ್ವಜನಿಕ ದಾಖಲೆಗಳನ್ನು ಕೆಳದರ್ಜೆಗೆ ಇಳಿಸುವುದಕ್ಕಾಗಿ ನಿಯತಕಾಲಿಕ ಪುನರೀಕ್ಷಣೆಯನ್ನು ಮಾಡಬೇಕಾದ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

(iii) (ಕೆ) ಬಾಬು, ದಾಖಲೆಗಳ ಅಧಿಕಾರಿಯು, ನಿರ್ದೇಶಕರಿಗೆ ವಾರ್ಷಿಕ ವರದಿಗಳನ್ನು ಸಲ್ಲಿಸುವ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 8: (1)ನೇ ಉಪ ಖಂಡವು, ಸಾರ್ವಜನಿಕ ದಾಖಲೆಗಳನ್ನು ನಾಶಪಡಿಸುವ ವಿಧಾನವನ್ನು ಮತ್ತು ಷರತ್ತುಗಳನ್ನು ನಿಯಮಗಳ ಮೂಲಕ ನಿಯಮಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 11: (2)ನೇ ಉಪ ಖಂಡವು, ಯಾವೊಬ್ಬ ನೈಜ ಸಂಶೋಧನಾ ವಿದ್ವಾಂಸರಿಗೆ ಐತಿಹಾಸಿಕ ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯ ಯಾವುದೇ ಖಾಸಗಿ ದಾಖಲೆಯು ಲಭ್ಯವಾಗುವಂತೆ ಮಾಡಲು, ರಾಜ್ಯ ಪತ್ರಾಗಾರಕ್ಕೆ ವಿನಾಯಿತಿಗಳನ್ನು ಮತ್ತು ನಿರ್ಬಂಧಗಳನ್ನು ನಿಯಮಗಳ ಮೂಲಕ ನಿಯಮಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 12:

(i) (1)ನೇ ಉಪ ಖಂಡವು, 12ನೇ ಖಂಡ (1)ನೇ ಉಪ ಖಂಡದಲ್ಲಿ ಹೇಳಿರುವ ಯಾವುದೇ ದಾಖಲೆಯನ್ನು ಯಾವೊಬ್ಬ ನೈಜ ಸಂಶೋಧನಾ ವಿದ್ವಾಂಸರಿಗೆ ಲಭ್ಯವಾಗುವಂತೆ ಮಾಡುವ ವಿಧಾನ ಮತ್ತು ಷರತ್ತುಗಳನ್ನು ನಿಯಮಗಳ ಮೂಲಕ ನಿಯಮಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

(ii) (2)ನೇ ಉಪಖಂಡವು, ದಾಖಲೆಗಳ ಸೃಜನಾ ಏಜೆನ್ಸಿಯು ತನ್ನ ಅಭಿರಕ್ಷೆಯಲ್ಲಿರುವ ಸಾರ್ವಜನಿಕ ದಾಖಲೆಯನ್ನು ಯಾವೊಬ್ಬ ವ್ಯಕ್ತಿಯು ನೋಡಲು ಅನುಮತಿಯನ್ನು ನೀಡಬಹುದಾದ ವಿಧಾನ ಮತ್ತು ಒಳಪಡಬೇಕಾದ ಷರತ್ತುಗಳನ್ನು ನಿಯಮಗಳ ಮೂಲಕ ನಿಯಮಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 13: (3)ನೇ ಉಪ ಖಂಡವು, (2)ನೇ ಉಪ ಪ್ರಕರಣದ (ಸಿ) ಖಂಡದಡಿಯಲ್ಲಿ ನಾಮನಿರ್ದೇಶಿತರಾದ ಸದಸ್ಯರುಗಳಿಗೆ ಸಂದಾಯ ಮಾಡತಕ್ಕ ಭತ್ಯೆಗಳನ್ನು ನಿಯಮಗಳ ಮೂಲಕ ನಿಯಮಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 14: (ಡಿ) ಬಾಬು, ಮಂಡಳಿಯು ನೆರವೇರಿಸಬಹುದಾದ ಇತರ ಪ್ರಕಾರ್ಯಗಳನ್ನು ನಿಯಮಗಳ ಮೂಲಕ ನಿಯಮಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 17: ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವು ದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಬಿ. ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

* * * * *

ಕರ್ನಾಟಕ ವಿಧಾನ ಸಭೆ

ಗುರುವಾರ, 11ನೇ ಮಾರ್ಚ್ 2010ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೆ.ಜಿ.ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು :

ಅಧ್ಯಕ್ಷರು : ಹೆಚ್.ಪಿ.ಮಂಜುನಾಥ್‌ರವರೆ, ನಿಮ್ಮ ಪ್ರಶ್ನೆ ಸಂಖ್ಯೆ 736 ಕ್ಕೆ 18ನೇ ತಾರೀಖು ಉತ್ತರ ಕೊಡುತ್ತಾರಂತೆ.

ಶ್ರೀ ಟಿ.ಬಿ.ಜಯಚಂದ್ರ : ಮಂಜುನಾಥ್‌ರವರು ದೊಡ್ಡ ಪ್ರಶ್ನೆಯನ್ನೇನು ಕೇಳಿಲ್ಲ. ಇಂಥ ಪ್ರಶ್ನೆಗಳಿಗೆಲ್ಲ ಟೈಂ ತೆಗೆದುಕೊಳ್ಳುತ್ತಾರೆಂದರೆ ಇದು ಏನೆಂದು ನನಗೆ ಅರ್ಥವಾಗುವುದಿಲ್ಲ. ಮಂತ್ರಿಗಳು ಯುವಕರು, active ಆಗಿದ್ದಾರೆ. ಆದರೂ ಏಕೆ ಉತ್ತರಗಳು ಬರುವುದಿಲ್ಲ.

ಅಧ್ಯಕ್ಷರು : ಅವರು ತಮ್ಮ ಇಲಾಖೆಯನ್ನು ಬಿಗಿ ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ : ಈಗ ಅಧ್ಯಕ್ಷರಿಂದಲೇ ಆದೇಶವಾಗಿದೆ, ನೀವು ನಿಮ್ಮ ಇಲಾಖೆಯನ್ನು ಬಿಗಿ ಮಾಡಬೇಕು.

ವಿಷಯ : ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿರುವ ಬಗ್ಗೆ

47 (391) ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಕುಷ್ಟಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06 ಹಾಗೂ 2006–07 ನೇ ಸಾಲಿನಲ್ಲಿ ಸರ್ಕಾರದಿಂದ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆಯೇ; ಮಂಜೂರಾಗಿದ್ದಲ್ಲಿ, ಎಷ್ಟು ಹಾಗೂ ಎಲ್ಲಿ ಎಂಬುದರ ಬಗ್ಗೆ ವಿವರ ನೀಡುವುದು;

ಆ) ಈ ಪೈಕಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ; ಅವು ಯಾವುವು;

ಇ) ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಪ್ರಾರಂಭವಾಗಿಲ್ಲ; ಅದಕ್ಕೆ ಕಾರಣಗಳೇನು;

ಈ) ಈ ಪೈಕಿ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಬಯ್ಯಾಪುರ ಗ್ರಾಮಕ್ಕೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭವಾಗದಿರಲು ಕಾರಣ ಏನು;

ಉ) ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ 1) ಕೂಡಿದರ್ಗಾ 2) ಗಂವಾರ 3) ಜೇರಟಗಿ ಈ 2 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ 2005–06 ನೇ ಸಾಲಿನಲ್ಲಿ ಮೇಲ್ದರ್ಜೆಗೇರಿಸಲಾಗಿದೆ. 2006–07ರಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿರುವುದಿಲ್ಲ.

ಆ) ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ

1) ಕೂಡಿದರ್ಗಾ 2) ಗಂವಾರ 3) ಜೇರಟಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) 2007–08ನೇ ಸಾಲಿನಲ್ಲಿ ದಿನಾಂಕ: 4–10–2007ರ ಸರ್ಕಾರಿ ಆದೇಶದಲ್ಲಿ ಒಟ್ಟು 200 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ರಾಜ್ಯಾದ್ಯಂತ ಮಂಜೂರು ಮಾಡಲಾಗಿತ್ತು. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭ ಮಾಡಲು ಗ್ರಾಮಸ್ಥರು ರೂ. 1 ಲಕ್ಷ ವಂತಿಗೆ ಮತ್ತು 2 ಎಕರೆ ಜಮೀನು ಹಾಗೂ ತಾತ್ಕಾಲಿಕ ಕಟ್ಟಡವನ್ನು ಉಚಿತವಾಗಿ ಒಂದು ವರ್ಷದೊಳಗೆ ನೀಡಬೇಕೆಂದು ನಿಬಂಧನೆ ವಿಧಿಸಲಾಗಿತ್ತು. ನಂತರ, 3 ತಿಂಗಳ ಕಾಲಾವಕಾಶವನ್ನು ಸಹ ವಿಸ್ತರಿಸಲಾಗಿತ್ತು. ಕಾಲಾವಕಾಶ ವಿಸ್ತರಿಸಿದ ಅವಧಿಯಲ್ಲಿ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಬಯ್ಯಾಪುರ ಗ್ರಾಮಸ್ಥರು ನಿಬಂಧನೆಗಳನ್ನು ಪೂರೈಸಿದ್ದು, ಸದರಿ ಸ್ಥಳದಲ್ಲಿ

ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಿಸಲು ಅನುಮತಿಯನ್ನು ನೀಡುವ ಬಗ್ಗೆ ಪರಿಶೀಲನೆಯಲ್ಲಿದೆ.

ಉ) ರಾಜ್ಯಾದ್ಯಂತ ಒಟ್ಟು 2193 ಪ್ರಾಥಮಿಕ ಆರೋಗ್ಯ ಕೇಂದ್ರಗಳು (2007-08ನೇ ಸಾಲಿನಲ್ಲಿ) ಮಂಜೂರಾದ 200 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹೊರತುಪಡಿಸಿ) ಕಾರ್ಯನಿರ್ವಹಿಸುತ್ತಿದ್ದು, ಆ ಪೈಕಿ 677 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ. ಹಣಕಾಸಿನ ಲಭ್ಯತೆ ಹಾಗೂ ನಿವೇಶನ ಲಭ್ಯತೆಯನ್ನು ಆಧರಿಸಿ ಹಂತ-ಹಂತವಾಗಿ ಸ್ವಂತ ಕಟ್ಟಡಗಳನ್ನು ಕಟ್ಟಲು ಕ್ರಮವಹಿಸಬೇಕಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಅಮರೇಗೌಡ ಲಿಂಗನಗೌಡ ಬಯ್ಯಾಪುರರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2005-06 ಹಾಗೂ 2006-07ನೇ ಸಾಲಿನಲ್ಲಿ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆಯೇ? ಎಷ್ಟು ಮಾಡಿದ್ದೀರಿ ಎನ್ನುವ ಪ್ರಶ್ನೆಯನ್ನು ಕೇಳಿದ್ದೇವೆ. 2006-07ರಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಪ್ರಾರಂಭವಾಗಿಲ್ಲ ಮತ್ತು ಅದಕ್ಕೆ ಕಾರಣಗಳೇನು ಎನ್ನುವ ಪ್ರಶ್ನೆಗೆ ಉದ್ಭವಿಸು ವುದಿಲ್ಲ ಎಂದು ಹೇಳಿದ್ದಾರೆ. 2007-08ನೇ ಸಾಲಿನಲ್ಲಿ ಒಟ್ಟು 200 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ರಾಜ್ಯಾದ್ಯಂತ ಮಂಜೂರು ಮಾಡಲಾಗಿತ್ತು, ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭ ಮಾಡಲು 1 ಲಕ್ಷ ರೂಪಾಯಿಗಳ ವಂತಿಗೆ ಮತ್ತು 2 ಎಕರೆ ಜಮೀನನ್ನು ಒಂದು ವರ್ಷದೊಳಗೆ ನೀಡಬೇಕೆಂದು ಒಂದು ನಿಬಂಧನೆ ಹಾಕಿದ್ದರು. ತಾವೇನು ನಿಬಂಧನೆ ಹಾಕಿದ್ದಿರಿ ಅದರಂತೆ ಲಿಂಗಸೂರಿನ ಸ್ಥಳೀಯರು ನಿಬಂಧನೆ ಗಳನ್ನು ಪೂರೈಸಿದ್ದಾರೆ. ಅದಕ್ಕಾಗಿ, ನಾನು ಮಾನ್ಯ ಆರೋಗ್ಯ ಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ, ಅದು ಬಹಳ ಹಿಂದುಳಿದಂಥ ಪ್ರದೇಶ ಮತ್ತು ಅಮರೇಗೌಡರ ಸ್ವಂತ ಊರು. ಸಚಿವರಾದ ಶ್ರೀರಾಮುಲುರವರು ನಮ್ಮ ಭಾಗದವರಾಗಿರುವುದರಿಂದ ಇದಕ್ಕೆ ಒತ್ತನ್ನು ಕೊಡುತ್ತಾರೆ ಮತ್ತು ಈ ಆಸ್ಪತ್ರೆಯನ್ನು ಪ್ರಾರಂಭ ಮಾಡಲು ಅವರು ಸೂಚನೆಯನ್ನು ಕೊಡುವರೇ ಎಂದು ನಾನು ತಮ್ಮ ಮೂಲಕ ಅವರನ್ನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, 2007–08ನೇ ಸಾಲಿನಲ್ಲಿ 200 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿದ್ದವು. ಇದನ್ನು ಪ್ರಾರಂಭ ಮಾಡಲು 1 ಲಕ್ಷ ರೂಪಾಯಿ ವಂತಿಗೆ ಮತ್ತು 2 ಎಕರೆ ಜಮೀನನ್ನು ಕೊಡಬೇಕು. ಕೆಲವರು ಕೊಟ್ಟಿದ್ದಾರೆ, ಕೆಲವರು ಕೊಟ್ಟಿಲ್ಲ. ಹಾಗಾಗಿ ಇನ್ನೂ ಮೂರು ತಿಂಗಳ ಕಾಲಾವಕಾಶವನ್ನು ಕೊಟ್ಟಿದ್ದೇವೆ. ಬಯ್ಯಾಪುರರವರು ತಮ್ಮ ಸ್ವಂತ ಗ್ರಾಮದಲ್ಲಿ ಈಗಾಗಲೇ 2 ಎಕರೆ ಜಮೀನನ್ನು ಕೊಟ್ಟು 1 ಲಕ್ಷ ರೂಪಾಯಿಗಳ ವಂತಿಗೆಯನ್ನೂ ಕೊಟ್ಟಿದ್ದಾರೆ. ಅದನ್ನು ಆದಷ್ಟು ಬೇಗ ನಾವು ಮಂಜೂರಾತಿ ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಪ್ರಾರಂಭ ಮಾಡಲು ಹೇಳಬೇಕು.

ಶ್ರೀ ಬಿ. ಶ್ರೀರಾಮುಲು : ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂಧ್ರ : ಈ ಪ್ರಶ್ನೆ ಕೇವಲ ಬಯ್ಯಾಪುರರವರ ಗ್ರಾಮಕ್ಕೆ ಮಾತ್ರ ಸೀಮಿತವಾಗಿಲ್ಲ. ಇದೇ ಉತ್ತರವನ್ನು ನನ್ನ ಪ್ರಶ್ನೆಗೂ ಸಹ 2 ವರ್ಷಗಳಿಂದ ಹೇಳುತ್ತಿದ್ದೀರಿ. ಈಗ 3ನೇ ವರ್ಷಕ್ಕೆ ಕಾಲಿಡುತ್ತಿದ್ದೇವೆ. ಯಾವಾಗ ನೀವು ಮಂಜೂರು ಮಾಡುತ್ತೀರಿ? ಇದುವರೆಗೂ ನಮಗೆ ಆಸ್ಪತ್ರೆಗಳು ಮಂಜೂರಾಗಿಲ್ಲ. ಒಂದು ದಿವಸ ನೀವು ಸದನದಲ್ಲಿ ಇಲ್ಲದೇ ಇದ್ದಾಗ, ನಿಮ್ಮ ಪರವಾಗಿ ಕಾಗೇರಿಯವರು ಉತ್ತರ ಕೊಟ್ಟರು, ಆಸ್ಪತ್ರೆ ಮಂಜೂರಾಗಿದೆ, ನಾಳೆ ಆರ್ಡರ್ ಕೊಡುತ್ತೇವೆ ಎಂದು ಹೇಳಿದರು. ಅವರು ಹೀಗೆ ಹೇಳಿ ಒಂದು ವರ್ಷವಾಯಿತು, ಇದುವರೆಗೂ ಆರ್ಡರ್ ಬಂದಿಲ್ಲ. ಆ ಫೈಲ್ ಅಲ್ಲೇ ಕೊಳೆಯುತ್ತಾ ಬಿದ್ದಿದೆ, ನಾನು ಹತ್ತು ಸಾರಿ ಹೋಗಿ ಅದನ್ನು ನೋಡಿದ್ದೇನೆ. ದಯಮಾಡಿ ಅದನ್ನು ತರಿಸಿ, clear ಮಾಡುವುದನ್ನಾದರೂ ಮಾಡಿ. ಜಮೀನು ಕೊಟ್ಟಿದ್ದಾರೆ, ದುಡ್ಡು ಕಟ್ಟಿದ್ದಾರೆ, ಇನ್ನೂ ಆಸ್ಪತ್ರೆಗಳು ಪ್ರಾರಂಭವಾಗಿಲ್ಲ. ಕೆಲವು ಕಡೆ ಆಸ್ಪತ್ರೆಗಳು ಪ್ರಾರಂಭವಾಗಿದ್ದರೆ ಅಲ್ಲಿ ಮೆಡಿಸನ್‌ಗಳಿಲ್ಲ. ಏನಿದು ಅವ್ಯವಸ್ಥೆ ಎಂದು ನನಗರ್ಥವಾಗುತ್ತಿಲ್ಲ. I can understand that there was a problem in the beginning. But two years have lapsed. After two years also, you are coming with the same reply ಎಂದರೆ, what does it mean? ದಯಮಾಡಿ ಅದನ್ನು ನೀವು ನೋಡಬೇಕು.

ಒಬ್ಬ ಮಾನ್ಯ ಸದಸ್ಯರು : ಬೆಳಗಾಂ ಅಧಿವೇಶನದಲ್ಲಿ ಒಂದು ಲಕ್ಷ ರೂಪಾಯಿ ವಂತಿಗೆಯನ್ನು ತುಂಬಿಕೊಡುವುದು ಬೇಡ ಎಂದು ಹೇಳಿದರು. ಏಕೆಂದರೆ, ಇದರ ಜೊತೆಗೆ 2 ಎಕರೆ ಜಮೀನನ್ನೂ ಕೊಡಬೇಕಾಗಿದೆ.

ಹಳ್ಳಿಗಾಡಿನಲ್ಲಿ ಒಂದು ಎಕರೆ ಜಮೀನಿಗೆ 2 ರಿಂದ 4 ಲಕ್ಷ ರೂಪಾಯಿಗಳಾಗುತ್ತದೆ. ಜಮೀನನ್ನೂ ಕೊಟ್ಟು, ದುಡ್ಡನ್ನೂ ಕಟ್ಟಬೇಕೆಂದರೆ ಬಹಳ ಕಷ್ಟವಾಗುತ್ತದೆ. ಅದಕ್ಕೋಸ್ಕರ ಒಂದು ಲಕ್ಷ ರೂಪಾಯಿಗಳ ವಂತಿಗೆಯನ್ನು ಕೈಬಿಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು. ಈಗ ಮುಂದಿನ ಪ್ರಶ್ನೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆ

48 (930) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ) ಈ ಯೋಜನೆಯಡಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ, ವಿವರ ನೀಡುವುದು;

ಆ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಂದಿರುವ ಹಣ ಎಷ್ಟು; ಕಳೆದ 2 ವರ್ಷಗಳ: ವಿವರ ನೀಡುವುದು;

ಇ) ಈ ಯೋಜನೆಗಾಗಿ ವೆಚ್ಚ ಮಾಡಿರುವ ಹಣ ಎಷ್ಟು (ಪೂರ್ಣ ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯಡಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಜಾರಿಗೊಳಿಸುತ್ತಿರುವ ಪ್ರಮುಖ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ– 1 ರಲ್ಲಿ ನೀಡಲಾಗಿದೆ.

ಆ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ:–

1. 2008–09 ನೇ ಸಾಲಿನಲ್ಲಿ ರೂ. 323.72 ಕೋಟಿಗಳು
2. 2009–10ನೇ ಸಾಲಿನಲ್ಲಿ (ಫೆಬ್ರವರಿ 2010ರ ಅಂತ್ಯದವರೆಗೆ) ರೂ. 310.18 ಕೋಟಿಗಳು.

ಇ) ಈ ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ ಆಗಿರುವ ವೆಚ್ಚದ ವಿವರ ಕೆಳಗಿನಂತಿದೆ:-

1. 2008–09 – ರೂ.316.66 ಕೋಟಿಗಳು.
2. 2009–10 (ಜನವರಿ 2010 ರ ಅಂತ್ಯಕ್ಕೆ) ರೂ. 327.85 ಕೋಟಿಗಳು

(ವೆಚ್ಚದ ಅಂಕಿ ಅಂಶಗಳು ರಾಜ್ಯ ಸರ್ಕಾರದ ಶೇ.15 ರ ವಂತಿಗೆಯನ್ನು ಒಳಗೊಂಡಿದೆ).

ವಿವಿಧ ಕಾರ್ಯಕ್ರಮವಾರು ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ–2 ರಲ್ಲಿ ನೀಡಲಾಗಿದೆ.

ಅನುಬಂಧ – 1

ಎನ್.ಆರ್.ಹೆಚ್.ಎಂ. ಅಡಿಯಲ್ಲಿ ಕೈಗೊಳ್ಳಲಾಗುತ್ತಿರುವ ಪ್ರಮುಖ ಯೋಜನೆಗಳು :

ಜನನಿ ಸುರಕ್ಷಾ ಯೋಜನೆಯ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಆದಾಯದ ಗರ್ಭಿಣಿಯರಿಗೆ ಮನೆಯಲ್ಲಿ ಹೆರಿಗೆಯಾದವರಿಗೆ ರೂ.500/–, ಗ್ರಾಮಾಂತರ ಆಸ್ಪತ್ರೆಯಲ್ಲಿ ಹೆರಿಗೆಯಾದವರಿಗೆ ರೂ.700/–, ನಗರ ಆಸ್ಪತ್ರೆಗಳಲ್ಲಿ ಹೆರಿಗೆಯಾದವರಿಗೆ ರೂ. 600/– ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆಯಾದಲ್ಲಿ ರೂ.1,500/– ರಂತೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಮಡಿಲು ಯೋಜನೆ ಅಡಿಯಲ್ಲಿ ಸರ್ಕಾರಿ ಉಪಕೇಂದ್ರಗಳಲ್ಲಿ ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಹೆರಿಗೆ ಮಾಡಿಸಿಕೊಳ್ಳುವಂತೆ ಉತ್ತೇಜಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಆದಾಯದ ಗರ್ಭಿಣಿಯರನ್ನು ಪ್ರೋತ್ಸಾಹಿಸುವುದಕ್ಕಾಗಿ ಸುರಕ್ಷಿತ ಬಾಣಂತನಕ್ಕೆ ಅಗತ್ಯ ವಸ್ತುಗಳನ್ನು ಹೊಂದಿರುವ ಕಿಟ್‌ಗಳನ್ನು ನೀಡಲಾಗುತ್ತಿದೆ. ಈ ಯೋಜನೆಯು ರಾಜ್ಯ ಸರ್ಕಾರ ರೂಪಿಸಿದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಎನ್.ಆರ್.ಹೆಚ್.ಎಂ. ಕಾರ್ಯಕ್ರಮದಡಿಯಲ್ಲಿ ಭಾಗಶಃ ಆರ್ಥಿಕ ನೆರವು ದೊರೆಯುತ್ತಿದೆ.

- **24x7 ಆರೋಗ್ಯ ಕೇಂದ್ರಗಳು :** ಒಟ್ಟು 975 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ವಾರದ ಎಲ್ಲಾ ದಿನಗಳಲ್ಲಿ 24 ಗಂಟೆಗಳ ನಿರಂತರ ಸೇವೆ ನೀಡಲು, ಮೂರು ಶುಶ್ರೂಷಕಿಯರ ಸೇವೆಯನ್ನು ಒದಗಿಸಿ 24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮಾರ್ಪಾಡಿ ಸಲಾಗಿದೆ.

- 143 ತಾಲ್ಲೂಕು ಆಸ್ಪತ್ರೆಗಳನ್ನು ಎಫ್.ಆರ್.ಯು. (First Referral Unit) ಕೇಂದ್ರಗಳನ್ನಾಗಿ ಕಾರ್ಯಗತಗೊಳಿಸಲಾಗುತ್ತಿದೆ.

- **ಸುವರ್ಣ ಆರೋಗ್ಯ ಚೈತನ್ಯ** ಕಾರ್ಯಕ್ರಮದಡಿಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಸರ್ಕಾರಿ, ಖಾಸಗಿ ಹಾಗೂ ವಸತಿ ಶಾಲೆಯಲ್ಲಿ ಓದುವ 1 ರಿಂದ 10ನೇ ತರಗತಿ ಎಲ್ಲಾ ಶಾಲಾ ಮಕ್ಕಳ ಆರೋಗ್ಯ ತಪಾಸಣೆಯನ್ನು ಕೈಗೊಂಡು ಕಂಡುಬಂದ ಖಾಯಿಲೆಗಳಿಗೆ ಉಚಿತ ಔಷಧೋಪಚಾರ ಮತ್ತು ಶಸ್ತ್ರ ಚಿಕಿತ್ಸೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

- **ಆರೋಗ್ಯ ಕವಚ** ಕಾರ್ಯಕ್ರಮದಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ತುರ್ತು ಚಿಕಿತ್ಸಾ ಸೌಲಭ್ಯ ಮತ್ತು ಅಕಾಲಿಕ ಸಾವು ತಡೆಯುವ ಸಲುವಾಗಿ ಒಟ್ಟು 517 ಅಂಬುಲೆನ್ಸ್‌ಗಳ ಸೇವೆಯನ್ನು ಒದಗಿಸಲಾಗಿದ. ಈ ಯೋಜನೆಯು ರಾಜ್ಯ ಸರ್ಕಾರ ರೂಪಿಸಿದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಎನ್.ಆರ್.ಹೆಚ್.ಎಂ. ಕಾರ್ಯಕ್ರಮದಡಿಯಲ್ಲಿ ಭಾಗಶಃ ಆರ್ಥಿಕ ನೆರವು ದೊರೆಯುತ್ತಿದೆ.

- **ಆಶಾ ಕಾರ್ಯಕರ್ತೆಯರ ಸೇವೆ:** ಗ್ರಾಮೀಣ ಮಟ್ಟದಲ್ಲಿ ಉತ್ತಮ ಆರೋಗ್ಯ ಸೇವೆಯನ್ನು ಒದಗಿಸುವ ಗುರಿಯೊಂದಿಗೆ ಪ್ರತಿ 1000 ಜನ ಸಂಖ್ಯೆಗೆ ಒಂದರಂತೆ ಆಶಾ ಕಾರ್ಯಕರ್ತೆಯರನ್ನು ಗುರುತಿಸಲಾಗಿದ್ದು, ಈಗಾಗಲೇ 21,000 ಆಶಾ ಕಾರ್ಯಕರ್ತೆಯರಿಗೆ ತರಬೇತಿಯನ್ನು ನೀಡಿ ಸೇವೆಯನ್ನು ಒದಗಿಸಲಾಗುತ್ತಿದೆ. ಅದಲ್ಲದೆ, ಮುಂಬರುವ ದಿನಗಳಲ್ಲಿ ಒಟ್ಟು 39,000 ಆಶಾ ಕಾರ್ಯಕರ್ತೆಯರ ಸೇವೆಯನ್ನು ಒದಗಿಸಲಾಗುವುದು.

- ಹೊಸದಾಗಿ ಆರೋಗ್ಯ ಮೂಲಭೂತ ಸೌಕರ್ಯ ಹೆಚ್ಚಿಸುವ ನಿಟ್ಟಿನಲ್ಲಿ 236 ಹೊಸ ಕಟ್ಟಡ ನಿರ್ಮಾಣ (138 ಉಪ ಕೇಂದ್ರಗಳು, 94 ಪ್ರಾಥಮಿಕ ಆರೋಗ್ಯ ಕೇಂದ್ರ, 4 ಸಮುದಾಯ ಆರೋಗ್ಯ ಕೇಂದ್ರ) ಕಾರ್ಯ ಹಾಗೂ 161 ಕಟ್ಟಡಗಳ ಉನ್ನತೀಕರಣ (1 ಪ್ರಾಥಮಿಕ ಆರೋಗ್ಯ ಕೇಂದ್ರ, 76 ಸಮುದಾಯ ಆರೋಗ್ಯ ಕೇಂದ್ರ, 59 ತಾಲ್ಲೂಕು ಆಸ್ಪತ್ರೆ, 11 ಸಾರ್ವಜನಿಕ ಆಸ್ಪತ್ರೆ, 14 ಜಿಲ್ಲಾ ಆಸ್ಪತ್ರೆ) ಕಾಮಗಾರಿಗಳು ಕೈಗೊಳ್ಳಲಾಗುತ್ತಿದೆ.

- ಸ್ಥಳೀಯ ಮಟ್ಟದ ಆರೋಗ್ಯ ಸಮಸ್ಯೆಗಳಿಗೆ ಸ್ಪಂದಿಸಿ ಕಾರ್ಯಕ್ರಮಗಳನ್ನು ಕೈಗೊಳ್ಳಲು 17 ಜಿಲ್ಲಾ ಆಸ್ಪತ್ರೆಗಳಿಗೆ ತಲಾ ವಾರ್ಷಿಕ ರೂ.5 ಲಕ್ಷ, 325 ಸಮುದಾಯ ಆರೋಗ್ಯ ಕೇಂದ್ರಗಳಿಗೆ ತಲಾ ರೂ. 2.5 ಲಕ್ಷಗಳನ್ನು, 2195 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತಲಾ ವಾರ್ಷಿಕ ರೂ.1.75 ಲಕ್ಷ, 8143 ಉಪ ಕೇಂದ್ರಗಳಿಗೆ ಹಾಗೂ 23026 ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿಗಳಿಗೆ ತಲಾ ವಾರ್ಷಿಕ ರೂ.10,000 ರಂತೆ ಮುಕ್ತ ನಿಧಿ ನೀಡಲಾಗುತ್ತಿದೆ.

- ಸಂತಾನ ಹರಣ ಶಸ್ತ್ರಚಿಕಿತ್ಸೆಗೆ 5.22 ಲಕ್ಷ ಗುರಿ ಹೊಂದಿದ್ದು, ವಂತಿ ಅಳವಡಿಕೆ, ಗರ್ಭನಿರೋಧಕ ನುಂಗುವ ಗುಳಿಗೆಗಳ ವಿತರಣೆ ಇತ್ಯಾದಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- 34 ನಗರ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಇದಕ್ಕೆ ಅಗತ್ಯ ಸಿಬ್ಬಂದಿಯನ್ನು ನೀಡಲಾಗಿರುತ್ತದೆ.

- ಆಯುಷ್ ಕಾರ್ಯಕ್ರಮದಡಿಯಲ್ಲಿ 560 ಆಯುಷ್ ವೈದ್ಯಾಧಿಕಾರಿಗಳ ಸೇವೆಯನ್ನು ಒದಗಿಸಲಾಗಿರುತ್ತದೆ.

- ಸಾರ್ವಜನಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ ಸುಮಾರು 10 ಲಕ್ಷ ಮಕ್ಕಳಿಗೆ ಲಸಿಕೆ ನೀಡಲಾಗಿರುತ್ತದೆ.

- ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ, ಶಾಲಾ ಮಕ್ಕಳ ತಪಾಸಣೆ ಕಾರ್ಯಕ್ರಮ, ನೇತ್ರ

ಸಂಗ್ರಹಣೆ, ನೇತ್ರ ತಜ್ಞರಿಗೆ ನೂತನ ತಂತ್ರಜ್ಞಾನ ತರಬೇತಿ, ಸ್ವಯಂ ಸೇವಾ ಸಂಸ್ಥೆಗಳ ಅಧೀನದಲ್ಲಿರುವ ಕಣ್ಣಿನ ಆಸ್ಪತ್ರೆಗಳ ಅಭಿವೃದ್ಧಿ, ನೇತ್ರ ಬ್ಯಾಂಕ್ ಅಭಿವೃದ್ಧಿ, ದೃಷ್ಟಿ ಪರೀಕ್ಷಾ ಕೇಂದ್ರ ಅಭಿವೃದ್ಧಿ ಮತ್ತು ವೈದ್ಯಕೀಯ ಕಾಲೇಜುಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

0.17-F-68

ಅನುಬಂಧ - 2

Government of Karnataka
Karnataka State Health Society ® Bangalore

(Rs. in lakhs)

Sl. No.	COMPONENT	2008-2009				2009-2010 (upto Jan 2010)			
		Amount received from GOI	Amount received as State Share	Total fund	Cumulative expenditure incurred Dist/SHS	Amount received from GOI	Amount received as State Share	Total fund	Cumulative expenditure incurred Dist/SHS
1	NRHM-Additionalties	15840.90	6273.51	22114.41	15960.33	13945.00	4027.00	17972.00	20669.50
2	RCH-II	12292.00	1000.00	13292.00	11410.77	13037.00	1550.00	14587.00	9579.85
3	Routine Immunization	718.22	0.00	718.22	717.99	341.36	0.00	341.36	348.62
4	Pulse Polio Programme	999.12	0.00	999.12	802.62	991.01	0.00	991.01	349.05
6	NLEP	134.03	0.00	134.03	163.84	100.00	0.00	100.00	89.02
7	NVBDCP	440.00	0.00	440.00	395.90	200.47	0.00	200.47	242.32
8	IDSP	0.00	0.00	0.00	146.71	70.24	0.00	70.24	53.46
9	RNTCP	797.00	0.00	797.00	921.95	1064.33	0.00	1064.33	641.45
10	NPCB	1041.61	0.00	1041.61	1091.43	1184.41	0.00	1184.41	708.90
11	NIDDCP	0.00	0.00	0.00	0.00	0.00	0.00	0.00	0.00
12	NPPCD	109.73	0.00	109.73	4.79	84.30	0.00	84.30	96.30
Total for SHS		**32372.61**	**7273.51**	**39646.12**	**31616.33**	**31018.12**	**5577.00**	**36595.12**	**32785.64**

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ. ಬಹಳಷ್ಟು ಕಾರ್ಯಕ್ರಮಗಳು ಈ ಯೋಜನೆ ಮೂಲಕ ಆರೋಗ್ಯ ಇಲಾಖೆಯಲ್ಲಿವೆ. ಇದನ್ನು ಅಳವಡಿಸಲು ಕೆಲವು ತೊಂದರೆಗಳಾಗುತ್ತಿವೆ. APL ಮತ್ತು BPL Card ಎಂದು ಇದೆ. ಜನನಿ ಸುರಕ್ಷಾ ಯೋಜನೆ ಇರಲಿ, ಮಡಿಲು ಯೋಜನೆ ಇರಲಿ ಅದಕ್ಕೆ BPL Card ಬೇಕೆನ್ನುವ ನಿರ್ದೇಶನವಿದೆ. ಆದರೆ, ರಾಜ್ಯದಲ್ಲಿ ಸರಿಯಾಗಿ BPL Card ಅನ್ನು ವಿತರಿಸುವ ವ್ಯವಸ್ಥೆಯಾಗಿಲ್ಲ. ಆದಕಾರಣ, ನಿಜವಾದ ಫಲಾನುಭವಿ, ಬಡವರು ಯಾರಿದ್ದಾರೆ, ಅವರು ಈ ಯೋಜನೆಯ ಫಲ ಸಿಗದೆ ವಂಚಿತರಾಗುವ ಕೆಲಸವಾಗುತ್ತದೆ. ಆದ್ದರಿಂದ, BPL Card ಬೇಕೆಂದು ಏನು ನಿರ್ದೇಶನ ನೀಡಿದ್ದಾರೆ ಅದನ್ನು ರದ್ದುಪಡಿಸಿ ಬಡವರಿಗೆ ಆ ಯೋಜನೆ ತಲುಪುವ ಹಾಗೆ ಆಗಬೇಕು. BPL Card ಸಿಗದಿದ್ದವರಿಗೆ ಪಂಚಾಯತಿಯಿಂದ ಒಂದು ಲೆಟರ್ ಅನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಿದರೆ ಬಹಳಷ್ಟು ಉತ್ತಮವಾಗಿ ಇದರ ಪ್ರಯೋಜನ ಖಂಡಿತವಾಗಿ ಆಗುತ್ತದೆಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಹಾಗೆಯೇ, ಈ ಯೋಜನೆ ಸಮರ್ಪಕವಾಗಿ ಬಡವರಿಗೆ ಫಲಾನುಭವಿಗಳಿಗೆ ಮುಟ್ಟಬೇಕಾದರೆ ಬಹಳಷ್ಟು ಹಣ, ಬಹಳಷ್ಟು ಮೂಲಭೂತ ಸೌಕರ್ಯಗಳ ಜೊತೆಗೆ ಅದಕ್ಕೆ ತಕ್ಕಷ್ಟು ಸಿಬ್ಬಂದಿಗಳ ಅಗತ್ಯತೆ ಬಹಳವಾಗಿ ಬೇಕಾಗಿದೆ, ನಮ್ಮ ತಾಲ್ಲೂಕಿನಲ್ಲಿ nurse ಗಳ ಕೊರತೆ ಬಹಳಷ್ಟು ಇದೆ. ಆದ್ದರಿಂದ, ಇಂಥ ಯೋಜನೆ ಬಡ ಜನರಿಗೆ ಸಮರ್ಪಕವಾಗಿ ಮುಟ್ಟಬೇಕಾದರೆ ಸಿಬ್ಬಂದಿ ವರ್ಗ ಎಲ್ಲಿ ಕಡಿಮೆ ಇದೆಯೋ ಅಲ್ಲಿಗೆ ಸಾಕಷ್ಟು ಸಿಬ್ಬಂದಿಯನ್ನು ಸಹ ನೇಮಿಸುವ ಕೆಲಸ ಆರೋಗ್ಯ ಇಲಾಖೆಯಿಂದ ಆಗಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ರಾಜ್ಯದ 30 ಜಿಲ್ಲೆಗಳಲ್ಲಿ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯ 2008–09ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣದಲ್ಲಿ 323.72 ಕೋಟಿ ರೂ. ವೆಚ್ಚದಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದೆ. 2009–10ನೇ ಸಾಲಿನಲ್ಲಿ ಫೆಬ್ರವರಿ 2010ರ ಅಂತ್ಯದವರೆಗೆ 310.18 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಮಾನ್ಯ ಸದಸ್ಯರು NRHM ಅಡಿಯಲ್ಲಿ ಏನೇನು ಕೆಲಸಗಳಾಗುತ್ತಿವೆ ಎಂಬುದನ್ನು ಪ್ರಸ್ತಾಪಿಸಿದರು. ಜನನಿ ಸುರಕ್ಷಾ ಯೋಜನೆ, ಮಡಿಲು

ಯೋಜನೆ, ಹೀಗೆ ಎಲ್ಲಾ ಕೂಡ BPL Card ಉಳ್ಳವರಿಗೆ ಉಪಯೋಗವಾಗುವಂಥದ್ದು. ಈ ರಾಜ್ಯದಲ್ಲಿ 85 ಲಕ್ಷ ಜನ BPL Card ಏನು ಪಡೆದುಕೊಳ್ಳಬೇಕು, ಮುಂಬರುವಂಥ ದಿನಗಳಲ್ಲಿ ಎಲ್ಲಾ ರೀತಿಯಲ್ಲೂ ಕೂಡ, ಇವತ್ತು BPL Card ಕೊಡಬೇಕಾಗಿರುವುದು ಏನಿದೆ ಅದನ್ನು ಸಂಬಂಧಪಟ್ಟ ಮಂತ್ರಿಯವರು ಕೊಡಬೇಕಾಗಿದೆ. ಅದಕ್ಕೋಸ್ಕರ, ಕೇಂದ್ರ ಸರ್ಕಾರದ rules ಪ್ರಕಾರ BPL Card holders ಮಾತ್ರ ಈ ಯೋಜನೆಯನ್ನು ಉಪಯೋಗಿಸಿಕೊಳ್ಳಬೇಕೆಂದು ಇರುವ ಕಾರಣ ಅವರಿಗೆ ಒದಗಿಸುತ್ತೇವೆ ಎನ್ನುವ ಮಾತನ್ನು ಹೇಳುತ್ತಾ, ಇವತ್ತು ಏನೇ ಕಾರ್ಯಕ್ರಮಗಳು ಇದ್ದರೂ ಕೂಡ ಸಂಪೂರ್ಣವಾಗಿ ರಾಜ್ಯ ಸರ್ಕಾರದ್ದು 15% ಮತ್ತು ಕೇಂದ್ರ ಸರ್ಕಾರದ್ದು 85% ಹಣ ಇರುವ ಕಾರಣ ಅವರು rules frame ಮಾಡಿರುವ ಪ್ರಕಾರವೇ ನಾವು ಮಾಡಿಕೊಡಬೇಕಾಗುತ್ತದೆ. ಅದಕ್ಕೋಸ್ಕರ ನಾವು ಮುಂಬರುವ ದಿನಗಳಲ್ಲಿ ಈ BPL Card ಗಳನ್ನು ಕೊಡುವ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಆಹಾರ ಮಂತ್ರಿಗಳು ವಿವರಗಳನ್ನು ಕೊಡಬೇಕಾಗುತ್ತದೆ. ಏನೇನು ಕಾರ್ಯಕ್ರಮಗಳಿವೆ ಅವೆಲ್ಲವನ್ನೂ ಬಡವರಿಗೆ ಮುಟ್ಟಿಸುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಯು.ಟಿ.ಖಾದರ್ : ಆರೋಗ್ಯ ಕವಚ 108 ಯೋಜನೆ ಅತ್ಯುತ್ತಮವಾಗಿದೆ. ಬಹಳ ಸಂತೋಷ. ಆಂಬುಲೆನ್ಸ್ ವಾಹನಕ್ಕೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ಆರೋಗ್ಯ ಸಚಿವರ ಭಾವಚಿತ್ರ ಹಾಕಿಕೊಂಡಿದ್ದಾರೆ. ಅದಕ್ಕೂ ಕೂಡ ನಮಗೆ ಸಂತೋಷವಾಗಿದೆ. ಅದರ ಜೊತೆಯಲ್ಲಿ ಈ ದೇಶದ ಪ್ರಧಾನ ಮಂತ್ರಿಯವರ photo ಇದ್ದಿದ್ದರೆ ನಮ್ಮ ಗ್ರಾಮೀಣ ಮಕ್ಕಳಿಗೆ ನಮ್ಮ ಪ್ರಧಾನ ಮಂತ್ರಿ ಯಾರು ಎಂದು ಪರಿಚಯವಾಗುತ್ತಿತ್ತು. ಇದರಿಂದ ಮಕ್ಕಳಿಗೆ ಉಪಕಾರವಾಗುತ್ತಿತ್ತು. ಆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಮಾನ್ಯ ಅಧ್ಯಕ್ಷರೆ, ಸರ್ಕಾರದ ಯೋಜನೆಗಳೇನು ಬಡವರಿಗೆ ಸಿಗುತ್ತದೆ ಅದಕ್ಕೆ BPL Card ಗಳನ್ನು base ಮಾಡಬಾರದೆಂದು ಕಳೆದ ಅಧಿವೇಶನದಲ್ಲಿ ಇಲ್ಲಿ ಚರ್ಚೆಯಾಗಿತ್ತು. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರೂ ಸಹ ಒಪ್ಪಿಕೊಂಡಿದ್ದರು. ಇದರ ಬಗ್ಗೆ ದೊಡ್ಡ ಚರ್ಚೆಯಾಗಿತ್ತು. ಅನೇಕ ಜನ ಬಡವರಿಗೆ BPL Card ಗಳು ಸಿಕ್ಕಿಲ್ಲ, ಅದಕ್ಕೆ

ಸರ್ಕಾರವೇ ಒಪ್ಪಿಕೊಂಡಿದೆ, ಇದು ತಮಗೂ ಗೊತ್ತಿದೆ. ಕನಿಷ್ಟಪಕ್ಷ ಈ ಆರೋಗ್ಯಕ್ಕೆ ಸಂಬಂಧಪಟ್ಟಂಥ ಏನು ಮೂಲಭೂತ ಸೌಲಭ್ಯಗಳಿವೆ ಅದನ್ನು ಪಡೆಯುವುದಕ್ಕಾದರೂ BPL Card ಅನ್ನು ತೆಗೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಆರೋಗ್ಯ ಕವಚ 108-Ambulance ವಾಹನದಲ್ಲಿ ಪ್ರಧಾನ ಮಂತ್ರಿಯವರ photo ಹಾಕಬೇಕೆಂದು ಏನು ಒತ್ತಾಯ ಮಾಡಿದ್ದಾರೆ, ಇವತ್ತು ಕೇಂದ್ರ ಸರ್ಕಾರದ್ದು ಆಗಿರಬಹುದು, ರಾಜ್ಯ ಸರ್ಕಾರದ್ದು ಆಗಿರುಬಹುದು, ಕೇಂದ್ರ ಸರ್ಕಾರದಿಂದ ಕೇವಲ 6 ಕೋಟಿ ರೂ. ಮಾತ್ರ ಇದರಲ್ಲಿ ಇದೆ, ಜಾಸ್ತಿಯೇನೂ ಇಲ್ಲ, ಮಿಕ್ಕಿದ ಹಣವನ್ನೆಲ್ಲ ರಾಜ್ಯ ಸರ್ಕಾರ ಹಾಕಿದ ಕಾರಣ ಇವತ್ತು ರಾಜ್ಯ ಸರ್ಕಾರದ ವತಿಯಿಂದ ಮಾನ್ಯ ಮುಖ್ಯಮಂತ್ರಿಯವರು ಮತ್ತು ಆರೋಗ್ಯ ಮಂತ್ರಿಯವರ photo ಹಾಕಿರುವ ಕಾರಣ ಮುಂಬರುವ ದಿನಗಳಲ್ಲಿ ಇದರ ಬಗ್ಗೆ ಚರ್ಚೆ ಆದನಂತರ ನಾವು ಒಂದು ತೀರ್ಮಾನಕ್ಕೆ ಬರುತ್ತೇವೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಮಾನ್ಯ ಅಧ್ಯಕ್ಷರೆ, ಆ ಯೋಜನೆಗಳ ಫಲಾನುಭವಿಗಳಾಗುವುದಕ್ಕೆ BPL card holder ಆಗಿರಬೇಕೆಂಬುದನ್ನು ತೆಗೆಯಬೇಕು. ಅದನ್ನು ತೆಗೆಯದಿದ್ದರೆ ಹಳ್ಳಿಯಲ್ಲಿ ಬಡವರಿಗೆ ಬಹಳ ತೊಂದರೆಯಗುತ್ತದೆ. BPL card ಇರಬೇಕೆನ್ನುವ condition ಹಾಕಿದ್ದಾರೆ ದಯಮಾಡಿ ಅದನ್ನು ತೆಗೆದುಹಾಕಿ.

ಶ್ರೀ ಟಿ.ಬಿ. ಜಯಚಂದ್ರ : ಉತ್ತರದಲ್ಲಿ ಭಾಗಶಃ ಎಂದು ಹೇಳಿದ್ದಾರೆ. ಭಾಗಶಃ ಎಂದರೆ ಎಷ್ಟು? ಇಂಥ ಸಂಪೂರ್ಣವಾದಂಥ ಯೋಜನೆಗೆ ಕೇಂದ್ರ ಸರ್ಕಾರದ NRHM ನಿಂದ ಎಷ್ಟು ಹಣ ಬರುತ್ತಿದೆ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಹಣ ಕೊಡುತ್ತಿದ್ದೀರಿ ದಯಮಾಡಿ ಹೇಳಬೇಕು.

ಅಧ್ಯಕ್ಷರು : ಇದು ಪ್ರಶ್ನೋತ್ತರ.

ಶ್ರೀ ಟಿ.ಬಿ. ಜಯಚಂದ್ರ : ಪೂರ್ಣ ಉತ್ತರವನ್ನು ಅವರು ಹೇಳಬೇಕಲ್ಲವೆ?

ಅಧ್ಯಕ್ಷರು : ರಾಜ್ಯದ ಹಣವೆಷ್ಟು, ಕೇಂದ್ರ ಸರ್ಕಾರದ ಹಣವೆಷ್ಟು ಎಂದು ಅವರು ಉತ್ತರದಲ್ಲಿ ಹೇಳಿದ್ದಾರಲ್ಲಾ. Clear ಆಗಿ ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಸದಸ್ಯರಿಗೆ ಸಮರ್ಪಕವಾದ ಉತ್ತರ ಕೊಡಬೇಕಾದದ್ದು ಸರ್ಕಾರದ ಜವಾಬ್ದಾರಿ. NRMH ನಲ್ಲಿ ಎಷ್ಟು ಹಣ ಬಂದಿದೆ ಎನ್ನುವುದನ್ನು ಮಂತ್ರಿಗಳು ಹೇಳಲಿ.

ಅಧ್ಯಕ್ಷರು : Please, ನೀವು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ನೋಟೀಸ್ ಕೊಡಿ. ಆಗ ತೆಗೆದುಕೊಳ್ಳೋಣ.

ಶ್ರೀ ಟಿ.ಬಿ. ಜಯಚಂದ್ರ : ಸದನದಲ್ಲಿ ಸದಸ್ಯರು ಪ್ರಶ್ನೆ ಕೇಳಿರುತ್ತಾರೆ. ಸಮರ್ಕವಾದ ಉತ್ತರ ಕೊಡುವುದು ಸರ್ಕಾರದ ಜವಾಬ್ದಾರಿ.

ಅಧ್ಯಕ್ಷರು : ಮಾನ್ಯ ಸದಸ್ಯರು ಏನು ಕೇಳಿದ್ದಾರೆ ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಮಂತ್ರಿಯವರು ಕೊಟ್ಟಿದ್ದಾರೆ. ನೀವು ಹಿರಿಯ ಸದಸ್ಯರಾಗಿದ್ದು ಹೀಗೆ ಮಾಡಿದರೆ ಸದನ ನಡೆಸುವುದು ಹೇಗೆ?

ವಕ್ಫ್ ಮಂಡಳಿಯಿಂದ ಜೇವರ್ಗಿ ತಾಲ್ಲೂಕಿಗೆ ಮಂಜೂರಾದ ಹಣ

49-958 ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನಾರಿಬೋಳ್ (ಜೇವರ್ಗಿ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಿಂದ ಜೇವರ್ಗಿ ತಾಲ್ಲೂಕಿಗೆ ವಕ್ಫ್ ಮಂಡಳಿಯಿಂದ ಮಂಜೂರಾದ ಹಣ ಎಷ್ಟು; ಮಸೀದಿವಾರು ವಿವರ ನೀಡುವುದು;

ಆ) ವಕ್ಫ್ ಮಂಡಳಿಯಿಂದ ಜೇವರ್ಗಿ ತಾಲ್ಲೂಕಿನಲ್ಲಿ ಎಷ್ಟು ಮಸೀದಿ/ ದರ್ಗಾಗಳು ನೊಂದಣಿಯಾಗಿವೆ; ಗ್ರಾಮಗಳವಾರು ವಿವರ ನೀಡುವುದು, ನೊಂದಣಿ ಸಂಖ್ಯೆ ಸಮೇತ ವಿವರ ನೀಡಿ?

ಶ್ರೀ ಪ್ರೊ.ಡಾ. ಮುಮ್ತಾಜ್ ಅಲಿ ಖಾನ್, (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) 2007-08ನೇ ಸಾಲಿನಲ್ಲಿ ಜೇವರ್ಗಿ ತಾಲ್ಲೂಕಿಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ. 2008-09ನೇ ಸಾಲಿನಲ್ಲಿ ರೂ.2.00 ಲಕ್ಷಗಳ ಅನುದಾನವನ್ನು ಜಾಮಿಯಾ ಮಸೀದಿ, ರೆಡ್ಡಿವಾಡ್ಗಿ ಗ್ರಾಮ, ಜೇವರ್ಗಿ ತಾಲ್ಲೂಕು, ಈ ಸಂಸ್ಥೆಗೆ ಮಂಜೂರಾಗಿದೆ.

ಆ) ಜೇವರ್ಗಿ ತಾಲ್ಲೂಕಿನಲ್ಲಿ 149 ಮಸೀದಿ/ ದರ್ಗಾಗಳಿರುತ್ತವೆ. ವಿವರವಾದ ತಖ್ತೆ ಲಗತ್ತಿಸಿದೆ.

ಅನುಬಂಧ –1

Gazette Notified Mosque and Dargahs of Jewargi Taluk, Gulbarga Dist.

Sl. No.	Name of Institution	Gz. No.
1	Dawal Malik Katta (Sunni) Needalagi	83
2	Lal Sab Katta (Sunni) Needalgi	84
3	Mosque (Sunni) Gudur	85
4	Salu Syed Sab Dargah (Sunni) Yatnoor	93
5	Takiya (Sunni) Belundgi	96
6	Masjid (Sunni) Beludgi	97
7	Mullangiri (Sunni) Narayanpur	101
8	Takiya (Sunni) Holoor	102
9	Mosque (Sunni) Ankala	118
10	Yamnur Peer Dargah (Sunni) Ankalga	119
11	Malang Shah Dargah (Sunni), Yadrani	121
12	Syed Peer Dargah (Sunni) Saidapur	122
13	Dawak Nakuj Dargah (Sunni) Manganera	127
14	Nabi Shah Dargah (Sunni) Mangaaaangera	128
15	Mosque (Sunni) Sumbad	130
16	Bade Masjid (Sunni) Sumad	132
17	Chand Sab Dargah (Sunni) wadgera	137
18	Khader Sab Dargah (Sunni) Keralkera.	140
19	Dawal Malik Dargah (Sunni) Allapur	145
20	Shah Hussain Dargah (Sunni) Kanmeshwar	149
21	Shaik Sab Dargah (Sunni) Konasirasgi	153
22	Dastagir Sab Dargah (Sunni) Kuknoor	156

23	Khaja Bande - Nawaz (Sunni) Argundagi	159
24	Moula Ali Dargah (Sunni) Vasthari	161
25	Peer dargah (Sunni) Kandgoli	163
26	Dawak Malik Dragah (Sunni) Kandgoli	165
27	Fakir Sab Dargah (Sunni) Honhal	255
28	Shakir Peer Sab Dargah (Sunni) Honal	258
29	Nazariuddin Awliya Dargah (Sunni) Hothinmadu	260
30	Mardar Gaib Dargah, Beriyal	262
31	Nazruddin (Sunni) Dargah Beriyal. K.	264
32	Darwal Malik Gumbal (Sunni) Berial.K.	266
33	Shah Hussaiah SAb Dargah (Sunni) Malla. K.	268
34	Dargah Quadri (Sunni) Malla.K	271
35	Zinde Madar Shah (Sunni) Naribol	273
36	Mosque Janab Ali Dargah	279
37	Dawal Malik Dargah (Sunni) Channur	275
38	Katta Peer Dargah (Sunni) Katti Sangavi	279
39	Jama Masjid (Sunni) (old Mosque) Jewargi	01
40	New Mosque (Sunni) Jewargi	06
41	Kundamir Sab (Sunni) Jewargi	07
42	Moulana Sab Dargah (Sunni) Rasongi	11
43	Dargah Baba Fakruddin Sab (Sunni) Kuv	15
44	Aminuddin Sab Dargah (Sunni) Hipperga Konha	18
45	Kutubuddin Dargah (Sunni) Kolkur	23
46	Jama Masjid (Sunni) Kolkur	25

47	Dargah Shah Mohammed Matani (Sunni) Kolkur	27
48	Dargah Laka Hussaini (Sunni) Radwadgi	29
49	Jama Masjid (Sunni) Jewargi (K)	31
50	Shah Hussain Dargah (Sunni) Sonna	34
51	Bele Peer Katta (Sunni) Rawoor	39
52	Mahboob Subhani Katti (Sunni) Mawnoor	42
53	Shaik Farees Shaker Gunj Dargah (Sunni) Harnoor	44
54	Masjid (Sunni) Kallur	46
55	Raja Baksh Dargah (Sunni), Hanchnal Sulekhan	49
56	Shah Hussaini Dargah (Katta) Sunni) Hangal	52
57	Takiya (Sunni) Nelogi	56
58	Mahboob Subhani Katta Nelogi	57
59	Dargah Hazeath Ladle Mashaik (Sunni) Nelogi	58
60	Jama Masjid (Sunni) Nelogi	59
61	Manna Peer Dargah (Sunni) Mandewal	62
62	Jamia Masjid (Sunni) Hipparga	65
63	Dawal Malik Dragah (Sunni) Kurnalli	69
64	Hazrath Mathi Shah Wali Dargah (Sunni) Ranjangi	73
65	Jama Masjid 9sunni) Ranjangi	74
66	Jalauddin Dargah (Sunni) Badnihal	77
67	Dargah Hazrath Gaib Peer Sab (Sunni) Badnihal	78
68	Mosque (Sunni) Moolhalli	80
69	Syed Aminuddin Sab Dargah (Sunni) Ijeri.	169
70	Syed Peer Dargah (Sunni) Ijeri.	171
71	Daval Malik Dargah (Sunni) Kumansiragi.	177

72	Masjid (Sunni) K. Sirasgi.	179
73	Yammur Peer Dargah (Sunni), Satkhed.	180
74	Jama Masjid (Sunni), kaar Bhosga.	184
75	Raja Bakhsar Dargah (Sunni), Mutkhed	190
76	Moula Ali Dargah (Sunni), Bennur.	195
77	Shaik Fareed Shaker Gunj Dargah (Sunni) Mallanad.	205
78	Ladle Masak Dargah Mangaloor	207
79	Dargah Shakar Peer (Sunni), Karkihalli	217
80	Mosque (Sunni), Anadagi	219
81	Raja Bagh Sawar Dargah (Sunni), Anadagi.	221
82	Dawal Malik Dargah (Sunni), Andola.	228
83	Syed Meer Md. Mosque (Sunni).	229
84	Bandanawaz Dargah (Sunni), Andola	232
85	Jama Masjid (Sunni), Andola.	235
86	Old Jama Masjid (Sunni), Andola.	238
87	Hakkani Peet Dargah (Sunni), Ganwar.	243
88	Baba Sab Dargah (Sunni) Yalwar	245
89	Masjid (Sunni), Mudbal (B)	246
90	Baba Fakruddin Dargah (Sunni), Mudbal (B).	247
91	Kondamtai Dargah (Sunni), Shegarthalli.	253
92	Masjid and Khabrasthan, Mangangeera Village, Jewargi Taluk.	KBW/REG/33/GBA/09-10 Dated 18-01-2010
93	Martuja Quadri Dargah, Ranjinnigi Village, Jewargi Taluk.	KBW/REG/95/GBA/08-09 Dated 12-11-2009

0.17F-69

94	Jamiya Masjid, Biryal (B) Village, Jewargi Taluk,	KBW/REG/62/GBA/08-09 Dated 10-02-2009
95	Masjid, Kondagooli Village, Jewargi Taluk,	KBW/REG/33/GBA/08-09 Dated 10-11-2009
96	Masjid, Andola Village, Jewargi Taluk.	KBW/REG/24/GBA/02-03 Dated 23-08-2008
97	Jamiya Masjid, Raddewadgi Village, Jewargi Taluk.	KBW/REG/103/GBA/06-07 Dated 18-05-2007
98	Jamiya Masjid, Channur Village, Jewargi Taluk.	KBW/REG/71/GBA/06-07 Dated 07-03-2007
99	Baba Saheb Dargah, Akhandalli Village,Jewargi Taluk.	KBW/REG/22/GBA/06-07 Dated 21-02-2007
100	Masjid-e-Bilal, Behind Bus Stand, Jewargi Taluk.	KBW/REG/37/GBA/06-07 Dated 14-12-2006
101	Jamiya Masjid, Kuralgera Village, Jewargi Taluk.	KBW/REG/60/GBA/05-06 Dated 27-04-2006
102	Mahboob Subhan Dargah, Itagi Taluk, Jewargi	KBW/REG/11/GBA/05-06 Dated 05-10-2005
103	Kalima Masjid and Dargah Dhosga (B) Village, Jewargi.	KBW/REG/12/GBA/05-06 Dated 21-09-2005
104	Mahamadia Masjidm Jewargi (B) Taluk	KBW/REG/22/GBA/04-05 Dated 17-08-2009.
105	Jamia Masjid – Sunni, Guddur-S-Andola.	
106	Dawal Malik Dargah-Sunni, Channur.	
107	Kattapeer Dargah-Sunni, Kattisangeri.	
108	Daval Malik Dargah (Sunni) Kumansiragi.	
109	Moulana Sab Dargah (Sunni) Rasongi	
110	Mahboob Subhani, Ankalga.	
111	Malang Shah Dargah (Sunni), Yadrani	
112	Jama Masjid (Sunni) Nelogi	
113	Manna Peer Dargah (Sunni) Mandewal	
114	Jamiya Masjid (Sunni) Hipparga	

115	Shaik Sab Dargah (Sunni) Konasirasgi	
116	Dastagir Sab Dargah (Sunni) Kuknoor	
117	Khaja Bande – Nawaz (Sunni) Argundagi	
118	Syed Peer Dargah (Sunni) Ijeri.	
119	Raja Bakhsar Dargah (Sunni), Mutkhed	
120	Dargah Shakar Peet (Sunni), Karkihalli	
121	Khader Sab Dargah (Sunni) Keralkera	
122	Dawal Malik Dargah (Sunni) Allapur	
123	Jama Masjid (Sunni) Nelogi	
124	Manna Peer Dargah (Sunni) Mandewal	

ADDITIONAL WAKF PROPERTY IN JEWARGI TALUKA

Sl. No.	Name Of Wakf Institution	Registration No.
1	Jamia Masjid, Mudbal (B)	KTW/REG/9/GBA/1990-91
2	Jamia Masjid (Sunni), Wastari	KTW/REG/12/GBA/1997-98
3	Dargah Mahboob Subhani (Sunni) Shivpur	KTW/REG/35/GBA/2003-04
4	Mohammediya Islani Masjid, Harwal	KTW/REG/16/GBA/2000-01
5	Jamia Masjid, Desangi	KTW/REG/12/GBA/1989-90
6	Jamia Masjid, Yadrami	KBW/REG/15/GBA/1997-98
7	Jamia Masjid(Sunni), Aloor	KTW/REG/10/GBA/2001-02
8	Jamia Masjid, Banami	KBW/REG/52/GBA/1993-94
9	Jamia Masjid, Kotnoor	KTW/REG/8/GBA/2002-03
10	Jamia Masjid, (Sunni), Kobal	KTW/REG/18/GBA/1995-96
11	Jamia Masjid, (Sunni), Kolkur	KTW/REG/19/GBA/1997-98
12	Jamia Masjid, (Sunni), Gudur SA	REG/35/GBA/2001-02
13	Jamia Masjid, (Sunni), Bilwar	KBW/REG/86/GBA/2000

14	Dargah Mahboob Subhani, Kumman Sirasgi	DWAC/GLB/REG/18/94-95
15	Jamia Masjid (Sunni), Hipparga	KTW/REG/17/GBA/1987-88
16	Mahboob Subhani Dargah, Yadrami	DWAC/GLB/REG/10/93-94
17	Jamia Masjid, (Sunni), Malli	DWAC/GLB/REG/40/2002
18	Jamia Masjid, (Sunni), Ganwar	KTW/REG/8/GBA/1989-90
19	Jamia Masjid, (Sunni), Mallabad	KBW/REG/32/GBA/2002-03
20	Jamia Masjid, (Sunni), Itga.	DWAC/GLB/REG/216/03-04
21	Jamia Masjid, (Sunni), Jeratgi	KTW/REG/7/GBA/1997-98
22	Madeena Masjid, (Sunni), Jewargi	KTW/REG/5/GBA/2001-02
23	Masjid, Kulgera.	KTW/REG/60/GBA/2005-06
24	Jamia Masjid, (Sunni), Kachur	KTW/REG/34/GBA/2001-02
25	Jamia Masjid, (Sunni), Mandewal	KTW/REG/17/GBA/1980-81

ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನಾರಿಬೋಳ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರಕ್ಕೆ 2 ಲಕ್ಷ ರೂಪಾಯಿಗಳ ಅನುದಾನವನ್ನು ಈ ಇಲಾಖೆಯಿಂದ ಕೊಟ್ಟಿದ್ದಾರೆ. ಅದರ ಜೊತೆಗೆ ನಮ್ಮ ತಾಲ್ಲೂಕಿನಲ್ಲಿ 149 ಮಸೀದಿ ಮತ್ತು ದರ್ಗಾಗಳಿವೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. 149 ಮಸೀದಿಗಳು ಮತ್ತು ದರ್ಗಾಗಳಿರುವಂಥ ನನ್ನ ಕ್ಷೇತ್ರದಲ್ಲಿ ಕೇವಲ 2 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಸಮಂಜಸವಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮುಂದಿನ ಬಜೆಟ್‌ನಲ್ಲಿ ಸರ್ಕಾರ ವಿಶೇಷವಾಗಿ ಅಲ್ಪಸಂಖ್ಯಾತರಿಗೆ 2009-10ನೇ ಸಾಲಿನಲ್ಲಿ 167 ಕೋಟಿ ರೂಪಾಯಿಗಳನ್ನು ಒದಗಿಸಿರುವುದರ ಜೊತೆಗೆ ಈ ವರ್ಷದ ಬಜೆಟ್‌ನಲ್ಲೂ ಸಹ ವಿಶೇಷ ಕಾಳಜಿ ವಹಿಸಿ ಸನ್ಮಾನ್ಯ ಮುಖ್ಯಮಂತ್ರಿಯವರು 207 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿ ಈ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಕೊಟ್ಟಿರುವುದರಿಂದ, ನನ್ನ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಕೊಟ್ಟು ದರ್ಗಾ, ಮಸೀದಿಗಳ ಅಭಿವೃದ್ಧಿಗೆ ಸಹಾಯ-ಸಹಕಾರ ನೀಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಪ್ರೋ. ಡಾ: ಮುಮ್ತಾಜ್ ಅಲಿ ಖಾನ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಎರಡೂವರೆ ಲಕ್ಷ ರೂ. ಬಿಡುಗಡೆ ಮಾಡಿದ್ದೇವೆ. 50 ಸಾವಿರ ರೂ. ಲೆಕ್ಕಾಚಾರ ಪ್ರಕಾರ ರಾಜ್ಯದಲ್ಲಿರುವ ಎಲ್ಲಾ ತಾಲ್ಲೂಕುಗಳಿಗೆ ಕೊಡಲಿಕ್ಕೆ

ಹೋದರೆ ಮೂರೂವರೆ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮಸೀದಿ, ದರ್ಗಾ, ಖಬರಸ್ಥಾನ್, ಆಶುಖಾನ ಎಲ್ಲಾ ಸೇರಿ ಕೇವಲ 4 ಕೋಟಿ ರೂ. ಮಂಜೂರು ಆಗಿತ್ತು. ಆದ್ದರಿಂದ, ಮಸೀದಿಗಳಿಗೆ, ದರ್ಗಾಗಳಿಗೆ ಹೆಚ್ಚು ಹಣ ಕೊಡಲಿಕ್ಕೆ ಸಾಧ್ಯವಿಲ್ಲ. ಆದಷ್ಟು ಮಟ್ಟಿಗೆ ನಾವು ಬಹುತೇಕವಾಗಿ ಶಿಕ್ಷಣ ಕ್ಕೋಸ್ಕರ ಖರ್ಚು ಮಾಡುತ್ತಿದ್ದೇವೆ. ಮಸೀದಿ ಮತ್ತು ದರ್ಗಾಗಳಿಗೆ ಹಣ ಕೊಡುವಂಥ ಪುಣ್ಯಾತ್ಮರು ಬೇಕಾದಷ್ಟು ಇದ್ದಾರೆ. ಮಸೀದಿ, ದರ್ಗಾಕ್ಕೆ ಹೋದರೆ ಮೋಕ್ಷಕ್ಕಕೆ ಹೋಗುತ್ತೇವೆಂದು ಸಾಮಾನ್ಯವಾಗಿ ಅವರಿಗೆ ನಂಬಿಕೆ ಇದೆ. ಶಿಕ್ಷಣದ ಕಡೆಗೆ ಗಮನ ಕೊಡುವುದಿಲ್ಲ. ಆದ್ದರಿಂದ ನಾವೇನು ಬಿಡುಗಡೆ ಮಾಡಿದ್ದೇವೆ, ಆ ಹಣ ಸಮಂಜಸವಾಗಿದೆ. ಬೇಕಾದರೆ ಮುಂದಿನ ವರ್ಷದಲ್ಲಿ ಇನ್ನೂ ಬೇಕಾದರೆ ಸ್ವಲ್ಪ ನಿಮ್ಮ ಕಡೆಗೆ ಗಮನ ಕೊಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳಿಗೆ ಹಣ ಬಿಡುಗಡೆ ಮಾಡುತ್ತಾರೆ. ಅದೇ ರೀತಿ Wakf Board ನಿಂದಲೂ ಕೂಡ ತಾವು ಹಣ ಬಿಡುಗಡೆ ಮಾಡಿದರೆ ಒಂದು ರೀತಿ ಅನುಕೂಲವಾಗುತ್ತದೆ. ನಾವು ನಿಮಗೆ ಮನವಿ ಕೊಡುವುದು, ನೀವು ಒಂದು ಲಕ್ಷ ರೂ. ಕೊಡುವುದು, 50 ಸಾವಿರ ರೂ. ಕೊಡುವುದಕ್ಕಿಂತ ಹೇಗೆ ಧಾರ್ಮಿಕ ದತ್ತಿ ಇಲಾಖೆಯಲ್ಲಿ ತಾಲ್ಲೂಕುವಾರು ಆರಾಧನಾ ಯೋಜನೆಯಲ್ಲಿ ಅನುದಾನ ಕೊಡುತ್ತಾರೆ ಅದೇ ತರಹ ನೀವು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನಾರಿಬೋಳ : ಜಾತ್ರೆ ಮಹೋತ್ಸವ ಇರಬಹುದು ಅಂಥ ಕಡೆ ಬಹಳಷ್ಟು ಜನ ಬಂದು ಹೋಗುವಂಥದ್ದು ಮಾಡುತ್ತಿರುತ್ತಾರೆ. ಅಂಥ ಕಡೆಗೆ ಸರ್ಕಾರ ವಿಶೇಷ ಗಮನಹರಿಸಿ ಅಭಿವೃದ್ಧಿಗೋಸ್ಕರ, ಬಂದು ಹೋಗುವ ಜನರಿಗೆ ಯಾತ್ರಿನಿವಾಸದ ಮುಖಾಂತರ ತಾವು ಹೆಚ್ಚಿನ ಅನುದಾನ ಕೊಡಬೇಕೆಂದು ಮನವಿ ಮಾಡುತ್ತೇನೆ. ನೀವು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ಕೊಟ್ಟಿರುವುದು ಸ್ವಾಗತಾರ್ಹವಾಗಿದೆ. ಆದರೂ ಕೂಡ ಈ ಮಸೀದಿ ಮತ್ತು ಮಂದಿರಗಳಿಗೆ, ಖಬರಸ್ಥಾನಗಳಿಗೆ ವಿಶೇಷವಾಗಿ ಪ್ರತಿ ತಾಲ್ಲೂಕಿನಲ್ಲಿ ಒಂದು ಶಾದಿಮಹಲ್ ಕಟ್ಟಿತಕ್ಕಂಥ ಯೋಜನೆಯನ್ನು ತಾವು ಹಮ್ಮಿಕೊಳ್ಳಬೇಕೆಂದು ನಾನು ಅಧ್ಯಕ್ಷರ ಮೂಲಕ ಒತ್ತಾಯ ಮಾಡುತ್ತೇನೆ.

ವಿಷಯ : ಬೆಂಗಳೂರಿನ ಗ್ರಾಮಾಂತರ ಪ್ರದೇಶದಲ್ಲಿ ಖಾಸಗಿ ಬಸ್ಸುಗಳಿಗೆ ಓಡಾಡಲು ಪರ್ಮಿಟ್‌ಗಳನ್ನು ನೀಡಿರುವ ಬಗ್ಗೆ

50 (605) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಂದ ಬೆಂಗಳೂರಿಗೆ ಗ್ರಾಮಾಂತರ ಪ್ರದೇಶ ಮಾರ್ಗವಾಗಿ ಖಾಸಗಿ ಬಸ್ಸುಗಳಿಗೆ ಓಡಾಡಲು ಪರವಾನಗಿ ಪರ್ಮಿಟ್‌ಗಳನ್ನು ನೀಡಲಾಗಿದೆಯೇ;

ಆ) ಅಂತರ ರಾಜ್ಯ ಪ್ರವಾಸಿ ಕೇಂದ್ರಗಳಿಗೆ ಬೆಂಗಳೂರಿನಿಂದ ಮುಂತಾದ ಸ್ಥಳಗಳಿಗೆ ನೀಡಿರುವ ಪರ್ಮಿಟ್‌ಗಳೆಷ್ಟು;

ಇ) ಈ ಬಸ್ಸುಗಳು ಗ್ರಾಮಾಂತರ ಪ್ರದೇಶಗಳಿಗೆ ಹೋಗದೇ ನೇರವಾಗಿ ಬೆಂಗಳೂರಿಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳಿಗೆ ಆಗುತ್ತಿರುವ ನಷ್ಟ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಗ್ರಾಮಾಂತರ ಪ್ರಯಾಣಿಕರಿಗೆ ನೇರವಾಗಿ ಬೆಂಗಳೂರು ಕೇಂದ್ರಕ್ಕೆ ಬಂದು ಹೋಗಲು ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಗುವುದು;

ಋ) ಇದಕ್ಕೆ ಸಂಬಂಧಪಟ್ಟ ಪರವಾನಗಿದಾರರ ಮೇಲೆ ಹಾಗೂ ಇದನ್ನು ತಡೆಯಲು ವಿಫಲವಾಗಿರುವ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮ ಏನು;

ಎ) ಅಂತರ ರಾಜ್ಯ ಪರ್ಮಿಟ್ ಪಡೆದಿರುವ ಖಾಸಗಿ ಬಸ್ಸುಗಳು ಅವರಿಗೆ ನೀಡಿರುವ ಮಾರ್ಗ ಬಿಟ್ಟು ನೇರವಾಗಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಏ) ಬಂದಿದ್ದರೆ ಕೈಗೊಂಡಿರುವ ಕ್ರಮವೇನು?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ನೀಡಲಾಗಿದೆ.

ಆ) ಬೆಂಗಳೂರಿನಿಂದ ಪ್ರವಾಸಿ ಕೇಂದ್ರಗಳಿಗೆ ರಹದಾರಿಗಳನ್ನು ನೀಡಲಾಗಿರುವುದಿಲ್ಲ.

ಇ) ಹೌದು.

ಈ) ಹೌದು.

ಉ) ಬಂದಿರುತ್ತದೆ.

ಊ), ಋ), ಎ) ಮತ್ತು ಏ)

ಖಾಸಗಿ ಬಸ್ಸುಗಳು ಪರವಾನಗಿ ನಿಬಂಧನೆಯನ್ನು ಉಲ್ಲಂಘಿಸಿ ಸಂಚರಿಸುವ ಪ್ರಕರಣಗಳನ್ನು ಪತ್ತೆ ಹಚ್ಚಿ ಕಾನೂನು ರೀತಿಯ ಕ್ರಮಕೈಗೊಳ್ಳಲಾಗುತ್ತಿದೆ. ದಿನಾಂಕ: 01-04-2009 ರಿಂದ 27-02-2010ರ ಅವಧಿಯಲ್ಲಿ ಅಂತಹ 150 ಪ್ರಕರಣಗಳನ್ನು ಪತ್ತೆ ಮಾಡಿ ಮಾನ್ಯ ನ್ಯಾಯಾಲಯದಲ್ಲಿ ದಾಖಲಿಸಿ ರೂ. 4,50,400 ದಂಡ ವಸೂಲಿ ಮಾಡಲಾಗಿದೆ.

ಗ್ರಾಮಾಂತರ ಮಾರ್ಗಕ್ಕೆ ಬದಲಾಗಿ ರಾಷ್ಟ್ರೀಕೃತ ಮಾರ್ಗದಲ್ಲಿ ಆಚರಣೆ ಮಾಡಿದ ರಹದಾರಿಧಾರರ ವಿರುದ್ಧ ಮೋಟಾರು ವಾಹನ ಕಾಯ್ದೆ ಪ್ರಕಾರ ಪರವಾನಿಗೆಗಳನ್ನು ಅಮಾನತ್ತು ಅಥವಾ ರದ್ದು ಮಾಡುವ ಕ್ರಮ ಜರುಗಿಸಲು ದಿನಾಂಕ: 17-02-2010 ಮತ್ತು 27-02-2010 ರಂದು ನಡೆದ ಬೆಂಗಳೂರು ಗ್ರಾಮಾಂತರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿದೆ. ಪ್ರಾಧಿಕಾರದ ನಿರ್ಣಯ ಬಾಕಿ ಇರುತ್ತದೆ.

ಶ್ರೀ ಮುಮ್ತಾಜ್ ಅಲಿ ಖಾನ್ : ಪರಿಶೀಲಿಸಲಾಗುವುದು.

(ಗೊಂದಲ)

ಶ್ರೀ ಅಮರೇಶ್ : ಮನ್ಯ ಅಧ್ಯಕ್ಷರೆ, ನಮ್ಮ ಕೋಲಾರ ಜಿಲ್ಲೆ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಸುಮಾರು 780 trip ಗಳಲ್ಲಿ ಖಾಸಗಿ ಬಸ್‌ಗಳು ಓಡಾಡುತ್ತಿವೆ. ಈಗಾಗಲೇ ನಾನು ಅದರ ಬಗ್ಗೆ ಪ್ರಶ್ನೆ ಕೇಳಿದ್ದೇನೆ, ಆದರೆ, ಸರ್ಕಾರ ಸಮರ್ಪಕವಾದ ಉತ್ತರ ಕೊಟ್ಟಿಲ್ಲ. ಇಡೀ ಜಿಲ್ಲೆಗೆ ಇಷ್ಟಾದರೆ ಇನ್ನು ಇಡೀ ರಾಜ್ಯದಲ್ಲಿ ಯಾವ ರೀತಿ ಖಾಸಗಿ ಬಸ್‌ಗಳ ಹಾವಳಿ ಇರಬಹುದು? ಎಂಬ ಬಗ್ಗೆ ತಾವು ಅಲೋಚಿಸಬೇಕು. ಏಕೆಂದರೆ, ಕೋಲಾರ ಜಿಲ್ಲೆಯಲ್ಲಿ ಮುಳಬಾಗಿಲು-ಕೆ.ಜಿ.ಎಫ್ ಗೆ 30 trip ಗಳಲ್ಲಿ ಖಾಸಗಿ ಬಸ್ಸುಗಳು ಓಡುತ್ತಿದೆ, ಮುಳಬಾಗಿಲು-ವಿ. ಕೋಟಗೆ 42 trips, ಮುಳಬಾಗಿಲು-ಬೆಂಗಳೂರಿಗೆ 88 trips, ಓಡುತ್ತಿವೆ ಅದೂ without ಪರವಾನಗಿಯಲ್ಲಿ. ಇಂಥ ಖಾಸಗಿ ಬಸ್

ಗಳ ಹಾವಳಿಯನ್ನು ತಾವು ನಿಲ್ಲಿಸಬೇಕು. ಸರ್ಕಾರಕ್ಕೆ ಬರುವ ಆದಾಯದಲ್ಲಿ ಬೇಕಾದಷ್ಟು ಕಡಿತವಾಗಿದೆ. ಇದರ ಬಗ್ಗೆ ಸಚಿವರು ಹೆಚಿನ ಗಮನಹರಿಸ ಬೇಕು. ಸಚಿವರು ತಮ್ಮ ಉತ್ತರದಲ್ಲಿ, 4 ಲಕ್ಷದ 50 ಸಾವಿರದ 400 ರೂ.ಗಳ ದಂಡ ವಸೂಲಿ ಮಾಡಿದ್ದೇವೆಂದು ಹೇಳಿದ್ದಾರೆ. ಸರ್ಕಾರಕ್ಕೆ ಆಗುತ್ತಿರುವ ಲಾಸ್ ಅನ್ನು ತಪ್ಪಿಸಬೇಕು. ಇದನ್ನು ಪರಿಶೀಲಿಸಬೇಕು. ಖಾಸಗಿ ವಾಹನಗಳ ಪರವಾನಗಿಯನ್ನು ರದ್ದು ಮಾಡುವಂಥದ್ದು, without ಪರವಾನಗಿ ಓಡುವಂಥ ವಾಹನಗಳನ್ನು ನಿಲುಗಡೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಅವರೇ ಪರಿಶೀಲನೆ ಮಾಡಬೇಕೆಂದು ಉತ್ತರ ಹೇಳಿದ್ದಾರೆ. ಮುಖ್ಯವಾಗಿ ಅವರು ಕೇಳುತ್ತಿರುವ ಪ್ರಶ್ನೆ ಸರಿ ಇದೆ. ಖಾಸಗಿ ಬಸ್‌ಗಳು Nationalized routes ನಲ್ಲಿ ಓಡಾಡುತ್ತಿವೆ. ಬಹಳ ವರ್ಷಗಳಿಂದ ಇದರ ಬಗ್ಗೆ ವಾದವಿವಾದಗಳ ನಡೆದಿವೆ. ಆ ಬಗ್ಗೆ ಕೋರ್ಟ್ ಮೆಟ್ಟಿಲು ಸಹ ಹತ್ತಲಾಗಿದೆ. ಹಿಂದೆ ಸರ್ಕಾರದಿಂದ ಅಲ್ಲಿ ಹೆಚ್ಚು ಬಸ್‌ಗಳನ್ನು ಓಡಿಸುವುದಕ್ಕಾಗುವುದಿಲ್ಲವೆಂದು ಕೋರ್ಟ್‌ನಲ್ಲಿ affidavit ಹಾಕಲಾಗಿತ್ತು. ಆದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮತ್ತೊಂದು affidavit ಹಾಕಿದ್ದೇವೆ. ಎಲ್ಲೆಲ್ಲಿ Private buses ಓಡಾಡುತ್ತಿವೆ, ಅಲ್ಲಿ ಸರ್ಕಾರಿ ಬಸ್‌ಗಳನ್ನು ಓಡಿಸಲಿಕ್ಕೆ ತಮ್ಮಿಂದ ಸಾಧ್ಯವೇ ಎಂದು High Court ನವರು ಕೇಳಿದ್ದರು. ಅದಕ್ಕೆ ನಾವು ಉತ್ತರ ಕೊಟ್ಟು, ಸಾಧ್ಯವಿದೆ, ನಾವು ಬಸ್‌ಗಳನ್ನು ಓಡಿಸುತ್ತೇವೆಂದು ಹೇಳಿದ್ದೇವೆ. ಆ ಕೇಸ್ High Court ನಲ್ಲಿ pending ಇದೆ. ಇಷ್ಟಿದ್ದರೂ ಸಹ, ನಾವು ಯಾವುದೇ ಕಾರಣಕ್ಕೂ ಈ Private buses lobbyಗೆ ಮಣಿಯುವುದಿಲ್ಲ. ದಿನದಿಂದ ದಿನಕ್ಕೆ ನೋಡಿ, ಇವತ್ತು ನಮ್ಮ ರಾಜ್ಯದಲ್ಲಿ 25 ಸಾವಿರ ಬಸ್‌ಗಳು ಓಡಾಡುತ್ತಿವೆ. ಇವತ್ತಿಗೂ ಸಹ ಬೇರೆ ಬೇರೆ ರಾಜ್ಯಗಳಿಗೆ ಕಂಪೇರ್ ಮಾಡಿದರೆ ನಮ್ಮ ರಾಜ್ಯವೇ highest buses ಓಡಿಸುತ್ತಿದೆ. ದಿನದಿಂದ ದಿನಕ್ಕೆ ನಾವು ಹೊಸ ಹೊಸ ಬಸ್‌ಗಳನ್ನು ಜೋಡಣೆ ಮಾಡುತ್ತಿದ್ದೇವೆ. ಮೊದಲು ನಾವು nationalized routes ನಲ್ಲಿ ಮಾತ್ರ ಬಸ್‌ಗಳನ್ನು ಓಡಿಸುತ್ತಿದ್ದೆವು. ಇವತ್ತು private sector ನಲ್ಲೂ ನಮ್ಮ ಸರ್ಕಾರಿ ಬಸ್‌ಗಳನ್ನು ಓಡಿಸುತ್ತಿದ್ದೇವೆ. ಇದು ನಮ್ಮ ಮಾಜಿ ಉಪಮಂತ್ರಿಯವರಿಗೆ ಗೊತ್ತಿದೆ.

ಚಾಮರಾಜನಗರ ಇರಬಹುದು, ಮೈಸೂರು–ಕೆ.ಆರ್.ಎಸ್.ಗೆ ಹೋಗುವ ಮಾರ್ಗದಲ್ಲಿ ಸುಮಾರು 45 Private buses ಓಡಾಡುತ್ತಿದ್ದವು. ಅಲ್ಲಿ ಇವತ್ತು ಒಂದು ಬಸ್ ಸಹ Private ನವರದು ಓಡುತ್ತಿಲ್ಲ. ಅಲ್ಲಿ ಎಲ್ಲ ಬಸ್‌ಗಳೂ ಸರ್ಕಾರಿ ಬಸ್‌ಗಳೇ ಓಡಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಕೋಲಾರದಲ್ಲಿ ಖಾಸಗಿ ಬಸ್‌ಗಳ ಸಮಸ್ಯೆ ಇದೆ. ಅವರು ಹಳ್ಳಿಗಳಲ್ಲಿ ರಸ್ತೆಗಳಲ್ಲಿ ಓಡಿಸುವುದಕ್ಕೆ ಪರ್ಮಿಟ್ ತೆಗೆದುಕೊಳ್ಳುತ್ತಾರೆ ಆದರೆ nationalized routes ನಲ್ಲಿ 5–6 ಕಿ.ಮೀ. ಓಡಿಸುತ್ತಾರೆ. ಅದರ ಬಗ್ಗೆಯೂ ಚರ್ಚೆ ಇದೆ. ಈ ವಿಷಯ Court ನಲ್ಲಿದೆ. ಇಷ್ಟಿದ್ದರೂ ಸಹ ನಾವು ಸುಮಾರು 4 ಲಕ್ಷದ 50 ಸಾವಿರ ರೂ. ದಂಡ ವಸೂಲಿ ಮಾಡಿ, 150 ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. ಈ ಪ್ರಶ್ನೆ ಕೇಳಿದ ನಂತರ ಇವತ್ತಿನಿಂದ 15 ದಿವಸಗಳ ಕಾಲ ಕೋಲಾರ ಭಾಗದಲ್ಲಿ ಅಕ್ರಮವಾಗಿ, ಪರ್ಮಿಟ್ ಇಲ್ಲದೆ ಬೇರೆ ಬೇರೆ ಕಡೆ ಖಾಸಗಿ ಬಸ್‌ಗಳನ್ನು ಓಡಿಸುತ್ತಿದ್ದರೆ ಕೂಡಲೇ ಅವುಗಳನ್ನು Seize ಮಾಡಬೇಕೆಂದು ನಾನು ಇವತ್ತು ಆದೇಶ ಮಾಡಿದ್ದೇನೆ. ಇವತ್ತಿನಿಂದ ಆ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ನಮ್ಮ ದೃಷ್ಟಿಯಲ್ಲಿ ಸಾರಿಗೆ ವ್ಯವಸ್ಥೆ ಬದಲಾವಣೆ ಯಾಗಬೇಕು. Private ಬಸ್‌ನವರ ಹಾವಳಿಯನ್ನು ತಡೆಯಬೇಕೆನ್ನುವುದರಲ್ಲಿ ನಿಮ್ಮ ಜೊತೆ ನಮ್ಮ ಸಹಕಾರವೂ ಇದೆ. ಅದನ್ನು ತಡೆಯುವಂಥ ಎಲ್ಲ ಕ್ರಮಗಳನ್ನು ನಾನು ಕೈಗೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಇದರಲ್ಲಿ ಪೋಲೀಸರೂ ಸೇರಿರುತ್ತಾರೆ. ಪೋಲೀಸ್‌ನವರೇ ಇದನ್ನೆಲ್ಲ regulate ಮಾಡಿ line ಬಿಟ್ಟು ನೀವು national High way ಯಲ್ಲಿ ಹೋಗಿ ಎಂದು regulate ಮಾಡುತ್ತಾರೆ. ಈ ಪೋಲೀಸ್ ನವರಿಗೂ ಮತ್ತು Private transporters ನವರಿಗೂ ಇರುವ understanding ಅನ್ನು nexus ಅನ್ನು ನೀವು ಬೇಧಿಸಿದರೆ ಇದೆಲ್ಲ ಸರಿಹೋಗುತ್ತದೆ. Actual ಆಗಿ ನೀವು ಕೋರ್ಟ್‌ಗೆ ಹೋಗಿರಬಹುದು, fight ಮಾಡುತ್ತಿರಬಹುದು, ಅದೆಲ್ಲ ಸರಿ. ಅದೆಲ್ಲದರ ಜೊತೆಗೆ, ಕೆಲ ಹಂತದಲ್ಲಿ ಪೋಲೀಸರು ಕುಮ್ಮಕ್ಕು ಕೊಡುತ್ತಾರೆ. ಇದು ಅದರಿಂದಾಗುತ್ತಿರುವ Problem. ತಾವು ಹೇಳಿದ ಹಾಗೆ, NRHM ನಲ್ಲಿ ಸಾಕಷ್ಟು ಹಣ ಬರುತ್ತಿದೆ. ಈ ಕಾರಣಕ್ಕೋಸ್ಕರ ಬೇರೆ ರಾಜ್ಯಗಳಿಂದ ಇಲ್ಲಿ ಹೆಚ್ಚು ಬಸ್‌ಗಳನ್ನು ಓಡಿಸುತ್ತಿದ್ದೀರಿ, ಅದೆಲ್ಲ O.K. ಆದರೆ, ಮೊದಲು private ನವರೇ ಬಸ್

0.17F-70

ಓಡಿಸುತ್ತಿದ್ದರು. ಎಲ್ಲೋ ಒಂದು ಕಡೆ Public and Private Partnership ಇರಬೇಕಾಗುತ್ತದೆ. ಅವರೂ ಉಳಿಯಬೇಕಾಗುತ್ತದೆ, ನೀವೂ ಉಳಿಯ ಬೇಕಾಗುತ್ತದೆ. ನಮ್ಮಲ್ಲಿ ಏನಾಗುತ್ತದೆಂದರೆ, ಯಾರೋ private ನವರು ಬಸ್ ಓಡಿಸುತ್ತಾರೆಂದರೆ ಆ ಬಸ್ ಹೊರಡುವ ಎರಡು ನಿಮಿಷ ಮೊದಲು ಅಥವಾ ಎರಡು ನಿಮಿಷ ನಂತರ ಸರ್ಕಾರಿ ಬಸ್‌ಗಳನ್ನು ಓಡಿಸುತ್ತಾರೆ. ಈ ರೀತಿಯಾಗಿ competition ಮಾಡುವುದರಲ್ಲಿ ಅರ್ಥವಿಲ್ಲ. Healthy Competition ಇರಬೇಕು ಮತ್ತು ಸಮರ್ಪಕವಾಗಿ ಎಲ್ಲರಿಗೂ reach ಆಗುವ ಹಾಗಿರಬೇಕು. ಇದು ನನ್ನ ಸಲಹೆ.

ಶ್ರೀ ಆರ್. ಅಶೋಕ್ : ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೂ ಮತ್ತು ಜಯಚಂದ್ರರವರು ಹೇಳುತ್ತಿರುವ ವಿಷಯಕ್ಕೂ ಅಜಗಜಾಂತರ ಇದೆ. ಜಯಚಂದ್ರರವರು, Private ನವರನ್ನೇನೂ ಮಾಡುವುದಕ್ಕೆ ಹೋಗಬೇಡಿ ಅವರ ಮೇಲೆ ಕರುಣೆ ಇರಲಿ ಎಂದು ಹೇಳಿದರು. ಆದರೆ, ಮಾನ್ಯ ಸದಸ್ಯರು, Private ನವರು ಅಕ್ರಮ ಮಾಡುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರು. ಆದ್ದರಿಂದ, ನಾವು ಯಾವುದೇ ಕಾರಣಕ್ಕೂ Private ನವರನ್ನು ಮುಳುಗಿಸಬೇಕೆಂದು ಇಲ್ಲ. ಅವರು ಹೇಳಿದ ಹಾಗೆ, health competition ಇರಲಿ. ನಮಗೆ ಇವತ್ತು ಶಕ್ತಿ ಇದೆ. ಹಿಂದೆ ಹೆಚ್ಚು ಬಸ್‌ಗಳನ್ನು ಓಡಿಸುವುದಕ್ಕೆ ನಮಗೆ ಶಕ್ತಿ ಇರಲಿಲ್ಲ. ಹಿಂದೆ ನಾವು Private ನವರ ಜೊತೆ compete ಮಾಡುವುದಕ್ಕಾಗುತ್ತಿರಲಿಲ್ಲ. ಅವರು ಓಡಿಸುತ್ತಿದ್ದಂಥ ಹೊಸ ಹೊಸ ಬಸ್‌ಗಳ ತರಹದಲ್ಲಿ ನಾವು ಖರೀದಿಸಿ ಓಡಿಸುವುದಕ್ಕಾ ಗುತ್ತಿರಲಿಲ್ಲ. ಇವತ್ತು ಕರ್ನಾಟಕ ಸರ್ಕಾರಕ್ಕೆ ಅದು ಸಾಧ್ಯವಾಗಿದೆ. ಒಳ್ಳೆಯ ಬಸ್‌ಗಳನ್ನು ಓಡಿಸುತ್ತೇವೆ. 45 ವರ್ಷಗಳಿಂದ ಮಂಗಳೂರು ಭಾಗದಲ್ಲಿ ಖಾಸಗಿ ಬಸ್‌ನವರು ಸರ್ಕಾರಿ ಬಸ್‌ಗಳನ್ನು ಓಡಿಸುವುದಕ್ಕೇ ಬಿಟ್ಟಿರಲಿಲ್ಲ. First time, ಇವತ್ತು ನಾವು ಮಂಗಳೂರಿನಲ್ಲಿ ಸರ್ಕಾರಿ ಬಸ್‌ಗಳನ್ನು ಓಡಿಸುವುದಕ್ಕೆ 6 ಪರ್ಮಿಟ್‌ಗಳನ್ನು ತೆಗೆದುಕೊಂಡಿದ್ದೇವೆ. ಕಳೆದ ಎರಡು ವರ್ಷಗಳಿಂದ ಈ ಬಗ್ಗೆ fight ಮಾಡಿದ ಮೇಲೆ ಈಗ ಪರ್ಮಿಟ್ ಸಿಕ್ಕಿದೆ. ಅಂದರೆ, healthy competition ಮಾಡುತ್ತೇವೆ. ಅವರನ್ನು ಮುಳುಗಿಸ ಬೇಕೆನ್ನುವ ಉದ್ದೇಶವಿಲ್ಲ. ಅವರೂ ಬೆಳೆಯಲಿ. ಜನರು ನಮ್ಮ ಬಸ್‌ಗಳು ಚೆನ್ನಾಗಿದ್ದರೆ ನಮ್ಮ ಬಸ್‌ನಲ್ಲಿ ಓಡಾಡಲಿ ಅಥವಾ ಖಾಸಗಿ ಬಸ್ ಚೆನ್ನಾಗಿದರೆ

ಅವ ಬಸ್‌ಗಳಲ್ಲಿ ಓಡಾಡಲಿ. ಜನರಿಗೆ ನಾವು ಇವತ್ತು choice ಕೊಡಬೇಕೇ ಹೊರತು ಇದೇ ಬಸ್ ಓಡಿಸಬೇಕು, ಹೀಗೇ ಓಡಿಸಬೇಕೆಂದು ಹೇಳುವುದು ಸರಿಯಲ್ಲವೆನ್ನುವುದು ನನ್ನ ಅಭಿಪ್ರಾಯ. ಅದನ್ನು ತಮ್ಮ ಮೂಲಕ ಸದನಕ್ಕೆ ತಿಳಿಸುತ್ತಿದ್ದೇನೆ. ಪೊಲೀಸ್‌ನವರು ಸೇರಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಕೆಲವು routes ನಲ್ಲಿ Private bus ನವರೇ ಬಸ್ ಓಡಿಸುತ್ತಿರುತ್ತಾರೆ. ಅಲ್ಲಿ ನಮ್ಮ ಸರ್ಕಾರಿ ಬಸ್‌ಗಳನ್ನು ಓಡಿಸುವಾಗ ನಮ್ಮ Drivers,Conductors ಗೆ ಹೊಡೆದಿರುವುದು, ಅವರಿಗೆ ಸರಿಯಾದ security ಕೊಡದಿರುವುದು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ, ಅದರ ಬಗ್ಗೆ ಎಚ್ಚರಿಕೆ ವಹಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : Jnnurm ಅಡಿಯಲ್ಲಿ ಎಷ್ಟು ಬಸ್ ಖರೀದಿಸಿದ್ದೀರಿ?

ಅಧ್ಯಕ್ಷರು : ಆ ಪ್ರಶ್ನೆಗೂ ಈ ಪ್ರಶ್ನೆಗೂ ಏನು ಸಂಬಂಧ? ಅಮರೇಶ್‌ರವರೆ ಪ್ರಶ್ನೆ ಕೇಳಿ. ಇಲ್ಲವೆಂದರೆ, ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

ಶ್ರೀ ಅಮರೇಶ್ : ಖಾಸಗಿ ಬಸ್‌ಗಳು national High way ಮೂಲಕ ನೇರವಾಗಿ ಬೆಂಗಳೂರಿಗೆ ಬರುವಂಥದ್ದನ್ನು ನೀವು ಪರಿಶೀಲನೆ ಮಾಡಬೇಕು. ನೀವು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಗಮನಹರಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಬಸ್‌ಗಳನ್ನು ಓಡಿಸುವುದಕ್ಕೆ ಸೌಕರ್ಯ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ.ಎನ್.ರುದ್ರೇಶ್‌ಗೌಡ : ನಮ್ಮ ರಾಜ್ಯದಲ್ಲಿ ಬಸ್‌ಗಳೇ ಓಡಾಡದೇ ಇರುವ ತಾಲ್ಲೂಕುಗಳು ಇವೆ.

ಅಧ್ಯಕ್ಷರು : ಆಯಿತು, ತಾವು ಬೇರೆ ರೂಪದಲ್ಲಿ ನೋಟೀಸ್ ಕೊಡಿ. ಉತ್ತರ ಕೊಡುತ್ತಾರೆ. ಪ್ರಶ್ನೋತ್ತರದಲ್ಲಿ ಎಲ್ಲರೂ ಕೇಳುವ ಉಪ ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದರೆ ಆಗುವುದಿಲ್ಲ. ಮಾನ್ಯ ಬಗಲಿಯವರೆ, ತಮ್ಮ ಪ್ರಶ್ನೆಯನ್ನು ಸಹಕಾರ ಇಲಾಖೆಗೆ ವರ್ಗಾಯಿಸಲಾಗಿದೆ.

ಮಸ್ಕಿ ಪಟ್ಟಣದ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಬಗ್ಗೆ

53 (378) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಸ್ಕಿ ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಇದ್ದಲ್ಲಿ, ಯಾವ ಹಂತದಲ್ಲಿದೆ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮಾರ್ಗಸೂಚಿಗಳ ಪ್ರಕಾರ, 1,20,000 ಜನಸಂಖ್ಯೆಗೆ ಒಂದರಂತೆ ಸಮುದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಅವಕಾಶವಿದೆ. 2001 ನೇ ಜನಗಣತಿ ಪ್ರಕಾರ, ಲಿಂಗಸುಗೂರು ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ 2,47,376 ಆಗಿದ್ದು, 2 ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿದ್ದರೂ ಈಗಾಗಲೇ 3 ಸಮುದಾಯ ಆರೋಗ್ಯ ಕೇಂದ್ರಗಳು ಸದರಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಆದುದರಿಂದ, ಮಸ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಮಾರ್ಗಸೂಚಿಗಳ ಅಡಿಯಲ್ಲಿ ಅವಕಾಶವಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪ್ರತಾಪಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಸ್ಕಿ 25 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರವಾಗಿದೆ. ಇಲ್ಲಿ ಕೇವಲ 10 ಖಾಸಗಿ ಆಸ್ಪತ್ರೆಗಳಿವೆ. ಅಲ್ಲಿ ಸುಮಾರು 30 ಸಾವಿರಕ್ಕಿಂತ ಹೆಚ್ಚು ಜನರು ಆ ಗ್ರಾಮಕ್ಕೆ ಬಂದು ಹೋಗುತ್ತಿದ್ದಾರೆ. ಈಗಾಗಲೇ ದೂರವಾಣಿ ಸಂ: 108ರ Ambulance ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿದೆ. ಅಲ್ಲಿ ಬಹಳಷ್ಟು ಮಹಿಳೆಯವರು ಹೆರಿಗೆ ಸಲುವಾಗಿ ಬರುತ್ತಾರೆ.

ಹೀಗಾಗಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು ಬಹಳ ಅವಶ್ಯಕತೆಯಿದೆ. ಈಗಾಗಲೇ ಹಿಂದೆ ಅಲ್ಲೊಂದು ಹೆರಿಗೆ ಆಸ್ಪತ್ರೆ ಮಂಜೂರಾಗಿತ್ತು ಮತ್ತು ಸಾರ್ವಜನಿಕವಾಗಿ ಒಂದು ಲಕ್ಷ ರೂಪಾಯಿಗಳ ವಂತಿಗೆಯನ್ನು ಕೂಡ ತುಂಬಿದ್ದೆವು. ಆದರೆ ಇದುವರೆಗೆ ಆ ಆಸ್ಪತ್ರೆ ಆಗಲಿಲ್ಲ. ಆ ನಿಟ್ಟಿನಲ್ಲಿ ಮಸ್ಕಿ ಪಟ್ಟಣ ಬಹಳಷ್ಟು ಬೆಳದಿರುವುದರಿಂದ ಮತ್ತು ಅದೊಂದು ಹೊಸ ವಿಧಾನಸಭಾ ಕ್ಷೇತ್ರವಾಗಿರುವುದರಿಂದ ಹಾಗೂ ತಾಲ್ಲೂಕು ಆಗುವ ಪ್ರಪೋಸಲ್ ಇರುವುದರಿಂದ ಇದನ್ನು ವಿಶೇಷ ಪ್ರಕರಣವೆಂದು

ಪರಿಗಣಿಸಿ ಅಲ್ಲಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಬಿ. ಶ್ರೀರಾಮುಲು : 2001ರ ಜನಗಣತಿಯ ಆಧಾರದ ಮೇಲೆ ಲಿಂಗಸೂರು ತಾಲ್ಲೂಕಿನಲ್ಲಿ 2,47,376 ಜನಸಂಖ್ಯೆ ಇರುವ ಕಾರಣ ಇಲ್ಲಿ ಸಮುದಾಯ ಆರೋಗ್ಯ ಕೇಂದ್ರ 2 ಇರಬೇಕಾಗಿತ್ತು. ಈಗಾಗಲೇ ಅಲ್ಲಿ 3 ಕಾರ್ಯನಿರ್ವಹಿಸುತ್ತಿವೆ. ಅದಕ್ಕಾಗಿ ಇನ್ನೊಂದು ಸಮುದಾಯ ಆರೋಗ್ಯ ಕೇಂದ್ರ ಕೊಡುವುದಕ್ಕೆ ಬರುವುದಿಲ್ಲ. ಏಕೆಂದರೆ, ರಾಜ್ಯದಲ್ಲಿ ಇವತ್ತು ಸುಮಾರು 325 ಸಮುದಾಯ ಆರೋಗ್ಯ ಕೇಂದ್ರಗಳು ಕೆಲಸ ಮಾಡುತ್ತಿವೆ.

ಶ್ರೀ ಪ್ರತಾಪಗೌಡ ಪಾಟೀಲ್ : ಈ ಹಿಂದೆ ಅಲ್ಲಿ ಒಂದು ಹೆರಿಗೆ ಆಸ್ಪತ್ರೆ ಮಂಜೂರಾಗಿತ್ತು. ನಾವು ಸಾರ್ವಜನಿಕವಾಗಿ ಒಂದು ಲಕ್ಷ ರೂಪಾಯಿ ವಂತಿಗೆ ತುಂಬಿದ್ದು ಇದೆ. ಕೊನೆಗೆ ಹೆರಿಗೆ ಆಸ್ಪತ್ರೆಯಾದರೂ ಮಾಡಬಹುದು. ಏಕೆಂದರೆ, ಸುಮಾರು 25,000 ಜನಸಂಖ್ಯೆ ಇರುವ ಪಟ್ಟಣ ಅದು. ಹೀಗಾಗಿ ಇದನ್ನು ಪರಿಗಣಿಸಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಇದರ ಬಗ್ಗೆ ನಾನು ನೋಡುತ್ತೇನೆ. ಅದು ನನ್ನ ಗಮನಕ್ಕೆ ಇನ್ನು ಬಂದಿಲ್ಲ. ಅದರ ಬಗ್ಗೆ ನಾನು ಸಂಪೂರ್ಣವಾದ ಮಾಹಿತಿ ತರಿಸಿಕೊಂಡು ಆದಷ್ಟು ಬೇಗ ಅಲ್ಲಿ ಏನು ಹೆರಿಗೆ ಆಸ್ಪತ್ರೆ ಆಗಬೇಕೆಂದು ಹೇಳುತ್ತಾರೆ ಅದನ್ನು ನೋಡಿಕೊಂಡು ವ್ಯವಸ್ಥೆ ಮಾಡಿಕೊಡುತ್ತೇನೆ.

ಅಧ್ಯಕ್ಷರು : ಆಯಿತು ಮುಂದಿನ ಪ್ರಶ್ನೆ ಪ್ರಕಾಶ್ ಹುಕ್ಕೇರಿಯವರು ತಾವು ಕೇಳಿ.

(ಗೊಂದಲ)

ನಾನು ಪ್ರಕಾಶ್ ಹುಕ್ಕೇರಿಯವರನ್ನು ಕರೆದಿದ್ದೇನೆ. ನೀವು ಪ್ರಶ್ನೆ ಕೇಳಿ. ನೀವು ಬಜೆಟ್ ಮೇಲೆ ಮಾತನಾಡಿ.

ಶ್ರೀ ವೈ.ಎನ್.ರುದ್ರೇಶ್‌ಗೌಡ : ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಒಬ್ಬರೇ ಒಬ್ಬರು ಡಾಕ್ಟರ್ ಕೆಲಸ ಮಾಡುತ್ತಾರೆ. ಅಲ್ಲಿ ನೀವು ಯಾವುದೇ ಕಟ್ಟಡ ಕಟ್ಟಿಲ್ಲ.

ಅಧ್ಯಕ್ಷರು : ನೀವು ಕೇಳುವ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ ನೀವು ಬೇಕಾದರೆ ಬೇರೆ ರೂಪದಲ್ಲಿ ಕೇಳಿ. ನೀವು ನಿಮ್ಮ ಕ್ಷೇತ್ರದ ಬಗ್ಗೆ ಪ್ರಶ್ನೆ ಕೇಳಿದರೆ ಅವರ ಹತ್ತಿರ ಏನು ಮಾಹಿತಿ ಇರುತ್ತದೆ? ಇಲ್ಲ. ಅವರು ಉಪ

ಪ್ರಶ್ನೆಯಾಗಿ ಅವರ ಊರಿನಲ್ಲಿ ಹೆರಿಗೆ ಆಸ್ಪತ್ರೆಯ ಬಗ್ಗೆ ಕೇಳಿದ್ದಾರೆ. ಅದಕ್ಕೂ ಇದಕ್ಕೂ ಏನು ಸಂಬಂಧ? No. ನಾನು allow ಮಾಡುವುದಿಲ್ಲ.

ಶ್ರೀ ಬಿ.ಸಿ. ಪಾಟೀಲ್ : ನಾನು ಸಂಬಂಧಪಟ್ಟಂತೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಲಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಮಾತನಾಡುವುದಕ್ಕೆ ಅವಕಾಶ ಕೊಡುವುದಲ್ಲ. ಇದು ಪ್ರಶ್ನೋತ್ತರ. ಇಲ್ಲ ನಾನೀಗ ದಾಖಲೆಗೆ ಹೋಗಬಾರದು ಎಂದು ಹೇಳುತ್ತೇನೆ... ನೀವು ಈ ರೀತಿ ಪ್ರಶ್ನೋತ್ತರಕ್ಕೆ interfere ಆದರೆ, ಹೇಗೆ? No. I will not allow it.

ಶ್ರೀ ಬಿ.ಸಿ.ಪಾಟೀಲ್ : ಸಮಸ್ಯೆಗಳು ಬಗೆಹರಿಸಬೇಕು ಅಲ್ಲವೆ? ನೀವು ನಮಗೆ ಯಾವಾಗ ಅವಕಾಶ ಕೊಡುವುದು? ಯಾವ ರೂಪದಲ್ಲಿ ನಾವು ನಮ್ಮ ಸಮಸ್ಯೆಗಳನ್ನು ಹೇಳುವುದು.

ಅಧ್ಯಕ್ಷರು : ಸಮಸ್ಯೆ ಇದ್ದರೆ ಬೇರೆ ರೂಪದಲ್ಲಿ ತನ್ನಿ. ಅವಕಾಶ ಕೊಡುತ್ತೇನೆ. ನಿಯಮದ ಪ್ರಕಾರ ಎರಡೇ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವಿರುವುದು. ನೀವು ಆ ತರಹ ಕೇಳಿದರೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ನಾವು ಸಮುದಾಯ ಆರೋಗ್ಯ ಕೇಂದ್ರಗಳ ಬಗ್ಗೆ ಕೇಳುತ್ತಿರುವುದು.

ಶ್ರೀ ಬಿ.ಸಿ.ಪಾಟೀಲ್ : ಸಚಿವರು ಉತ್ತರ ಕೊಡುವುದಕ್ಕೆ ಸಿದ್ಧರಿದ್ದಾರೆ. ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಲಿಲ್ಲವೆಂದರೆ ಹೇಗೆ? ನಾವು ಅಸೆಂಬ್ಲಿಗೆ ಸುಮ್ಮನೆ ಬಂದು ಹಾಜರಾತಿಗೆ ಸಹಿ ಹಾಕಿ ಸ್ಯಾಲರಿ ತೆಗೆದುಕೊಳ್ಳುವುದಕ್ಕೆ ಬರಬೇಕೆ? ಒಂದು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಲ್ಲ ಎಂದರೆ ಹೇಗೆ?

ಪ್ರಾಥಮಿಕ ಪ್ರೌಢ ಶಾಲಾ ಅಲ್ಪಸಂಖ್ಯಾತರ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡುವ ಬಗ್ಗೆ

54(608) ಶ್ರೀ ಪ್ರಕಾಶ ಬಿ. ಹುಕ್ಕೇರಿ (ಚಿಕ್ಕೋಡಿ ಸದಲಗ ಕ್ಷೇತ್ರ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರಿಗೆ ಯಾವ ಯೋಜನೆ ಅಡಿಯಲ್ಲಿ 'ವಿದ್ಯಾರ್ಥಿ ವೇತನ' ನೀಡಲಾಗಿದೆ; (ಆದೇಶ ಪ್ರತಿ ನೀಡುವುದು);

ಆ) ಈ ವಿದ್ಯಾರ್ಥಿ ವೇತನವು ಕೇಂದ್ರ ಸರ್ಕಾರ ಪುರಸ್ಕೃತವೋ, ರಾಜ್ಯ ಸರ್ಕಾರ ಪುರಸ್ಕೃತವೋ; ಎರಡೂ ಸರ್ಕಾರಗಳ ಪಾಲಿದ್ದಲ್ಲಿ ಸರಾಸರಿ ವಿವರ ನೀಡುವುದು;

ಇ) ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಯಾವ ಯಾವ ತರಗತಿಯ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರಿಗೆ ಈ ಸೌಲಭ್ಯ ಕಲ್ಪಿಸಲಾಗಿದೆ; ಇನ್ನುಳಿದ ತರಗತಿಯ ವಿದ್ಯಾರ್ಥಿನಿಯರಿಗೆ ಈ ಸೌಲಭ್ಯ ವಿಸ್ತರಿಸಲು ಇರುವ ಅನಾನುಕೂಲಗಳೇನು (ವಿವರ ನೀಡುವುದು);

ಶ್ರೀ ಪ್ರೊ|ಡಾ: ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಪ್ರಸ್ತುತ ವರ್ಷ 2009–10ರಲ್ಲಿ ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ರಾಜ್ಯದಾದ್ಯಂತ 46488 ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಅಲ್ಪಸಂಖ್ಯಾತರ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಈ ವಿದ್ಯಾರ್ಥಿವೇತನವು 1ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿನಿಯರಿಗೆ ನೀಡಲಾಗುತ್ತಿದೆ. (ಆದೇಶದ ಪ್ರತಿ ಲಗತ್ತಿಸಿದೆ).

ರಾಜ್ಯ ಸರ್ಕಾರದ ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನದ ಯೋಜನೆಯಡಿಯಲ್ಲಿ ರಾಜ್ಯದಾದ್ಯಂತ 13638 ಪ್ರೌಢ ಶಾಲಾ ಮುಸ್ಲಿಂ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡಲಾಗಿದೆ. (ಆದೇಶ ಪ್ರತಿ ಲಗತ್ತಿಸಿದೆ)

ಆ) ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಯೋಜನೆಯಲ್ಲಿ ಭಾರತ ಸರ್ಕಾರದ ಪಾಲು ಶೇಕಡ 75% ಮತ್ತು ಕರ್ನಾಟಕ ಸರ್ಕಾರದ ಪಾಲು ಶೇ.25% ರಷ್ಟು ಇರುತ್ತದೆ.

ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನದಿಂದ ನೀಡುವ ವಿದ್ಯಾರ್ಥಿವೇತನದ ಯೋಜನೆಗೆ ಶೇ.100% ರಷ್ಟು ಅನುದಾನ ರಾಜ್ಯ ಸರ್ಕಾರ ಭರಿಸುತ್ತಿದೆ.

ಇ) ಕೇಂದ್ರ ಸರ್ಕಾರದಿಂದ ನೀಡುತ್ತಿರುವ ವಿದ್ಯಾರ್ಥಿವೇತನ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ.

ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದಿಂದ 8 ಮತ್ತು 9ನೇ ತರಗತಿಯ ಅನಾಥ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಹಾಗೂ 10ನೇ ತರಗತಿಯ ಎಲ್ಲಾ ಮುಸ್ಲಿಂ ವಿದ್ಯಾರ್ಥಿನಿಯರಿಗೆ ನೀಡಲಾಗುತ್ತಿದೆ. ಈ ವಿದ್ಯಾರ್ಥಿವೇತನ ನೀಡವಲ್ಲಿ ಯಾವುದೇ ಅನಾನುಕೂಲಗಳು ಇರುವುದಿಲ್ಲ.

PROCEEDINGS OT THE KARNATAKA STATE WAKF FOUNDATION FOR WOMEN DEVELOPMENT.

Sub : Sanction of Scholarship to Muslim girl students studying in High schools under the scheme of Karnataka State Wakf Foundation for Women Development.

READ :

1) Order No.RD 39 WGA 91, Dated: 27-03-1992.
2) Re-allocation of Budget Grants G.O.No. MWD 06 WGA 2009 dated 4th April 2009.
3) Budget allotted G.O.No. MWD 06 WGA 2009 Dated 09-04-2009. 13-08-2009 & 08-12-2009.
4) G.O.No. MWD 01 WFW 2010, Dated 06-01-2010.

PREAMBLE:

Government has provided a sum of Rs.1573.71 lakhs during the current financial year 2009-10 as Grant-in-Aid under the Head of Accont "2250-00-102-5-02-101" Wakf Board and related activities – o59-Other Expenditure (Non-Plan) out of which Rs. 525.00 lakhs earmarked for Karnataka State Wakf Foundation for Women Developmnt scheme in the order read at (2) above.

In the order at (3) above, Government has released a total sum of Rs.380.00 lakhs, under which Rs.114.64 lakhs scholarship was sanctioned to Muslim girl students studying in Professional courses for the year 2009-10, as in the order at (4) above and the balance amount available at KSWFWD account

is Rs.265.36 lakhs. During September 2009 applications are invited for sanction of scholarship to Mualim girl students studying in High school X Std and for Orphan girl students of VIII & IX Std., and the last date fixed for receipt of application as on 16-12-2009. Karnataka State Wakf Foundation for Women Development has received around 16500 applications for sanctions. After scrutiny of applications only 13638 students are eligible for sanctions. Hence this order.

GOVERNMENT ORDER No. mwd 02 wfw 2010,
BANGALORE DATED 13th JANUARY 2010.

Karnataka State Wakf Foundation for Women Development is pleases to sanction an amount of Rs. 1,36,38,000 (Rupees One Crore Thirty Six Lakhs & Thirty Eight Thousand only) as scholarship at Rs. 1000 per student per year to 13638 Muslim girl students studying in High School X Std and Orphan students of VIII & IX Std, in the State for the financial year 2009-10 as shown in the Annexure. The Scholarship sanctioned above is in the form of FREE Grants.

The Expenditure in this behalf shall be met out of the Budget under the Head of Account 2250-00-102-5-02-101-Grant-in-Aid (Non-Plan) for the year 2009-10, subject to the following conditions.

1. The Scholarship sanctioned to the student shall be for pursuing the studies only.
2. The Head of the Institution consequent upon the receipt of the cheque amount towards the scholarship shall distribute the same to the concerned students and shall obtain acknowledgement and forward the same to the Member-Secretary, Karnataka State Wakf Foundation for Women Development, Room No.215, 2nd Floor, Vikasa Soudha, Bangalore-560001, without fail. They shall also furnish utilization certificate to Government,

0.17F-71

failing which scholarship for the subsequent years will not be considered.

3. The Karnataka State Wakf Foundation for Women Development shall release the sanctioned amount through cheque to the Head of the Institutions for distribution to the concerned students.
4. Karnataka State Wakf Foundation for Women Development reserves the right to cancel the sanction if found that the Institution/student are not eligible for sanction.

BY ORDER AND IN THE NAME OF THE CHAIRMAN,
KARNATAKA STATE WAKF
FOUNDATION FOR WOMEN DEVELOPMENT.

(R NISAR AHAMED)
I/c. Membeer Secretary,
Karnataka State Wakf Foundation for Women Development
Minority Welfare Department.

PLAN
NON-RECURRING

No. 11/26/2009-PP (PPR)
Government of India
Ministry of Minority Affairs
*****

Paryavaran Bhavan, 11th Floor
CGO Complex, Lodhi Road
New Delhi – 110003
Date: 15th December, 2009

To

The Pay & Accounts Officer,
Ministry of Minority Affairs,
Paryavaran Bhavan.
New Delhi.

Subject : Grant-in-aid under the Centrally Sponsored Scheme of Pre-matric scholarship for students belonging to the minority communities to the Government of Karnataka for the year 2009-10.

Sir,

I am directed to convey the sanction of the President for release of non-recurring grant in-aid of Rs.13,93,38,338/- (Rupees Thirteen Crore Ninety Three Lakh Thirty Eight Thousand and Three Hundred Thirty Eight only) as 75% Central share to the Government of Karnataka for implementation of the Scheme of Pre-matric scholarship for students belonging to the minority communities, for the year 2009-10, as per details given below and enclosed at Annexure:-

Sl. No	Particulars	Amount
1	For renewal of Pre-matric scholarships to 1216 students	21,90,000
2	For award of new Pre-matric scholarships to 85613 students	13,57,68,750
3	Administrative expenses	13,79,588
	Total	**13,93,38,338**

2. The non-recurring grant may be released to the Government of Karnataka through CAS, Reserve Bank of India, Nagpur.

3. The expenditure is debitable to Demand No.66-Ministry of Minority Affairs – 3601 – Grant-in-aid to State Government (Major Head) – 04 – Grants for Central Plan Scheme (Sub-major Head) – 378 – General (Welfare of Scheduled Castes, Scheduled Tribes and Other Backward Classes) – other grants – 05 – Pre-Matric Scholarship for Minorities 05.00.31 Grants-in-aid for the year 2009-10 (Plan).

4. As per Rule 211(1) of G.F.R., the accounts of the grantee shall be open to inspection by the sanctioning authority and audit, both by the Comptroller and Auditor General of India under the Provision of CAG (DPC) Act, 1971 and internal Audit by the Principal Accounts Office of the Ministry.

5. As per Rule 212 (1) of G.F.R., utilization Certificate for this grant should be submitted by the grantee in the prescribed format (GFR 19-A) within 12 months of the Closure of the Financial year. It is to be certified by the grantee that no utilization certificate is pending in respect of previous grant/grants.

6. The State Government should ensure that necessary budget provision is made through contingency fund advance, if required and that the sanctioned amount is disbursed to the students within one month from the receipt of fund in the State Account.

7. The Utilization Certificate for 2008-09 has been received from the State Government and is enclosed. No Utilization Certificate is pending with the State Government.

8. The Utilization of the above amount by implementing agency is subject to the following terms & conditions:-

(i) Scholarships will be available to the students of minority communities studying in classes I to X. The continuance of award will be subject to securing 50% marks in

the previous examination. Maintenance allowance will be provided to hostellers and day scholars. Maintenance allowance will be given for 10 months only in an academis year.

(ii) The award will be discontinued if a student fails to secure 50% marks in the annual examination except in case of unavoidable reasons to be certified by the Principal/competent authority of the school and recommended by the State Government/Union Territory Administration.

(iii) The annual income of the parents/guardian, from all sources does not exceed Rs.1 lakh. Income certificate should be on self-certafication basis by way of affidavit on non-judicial stamp paper of self-employed parents/guardian and from employer for employed parents/ guardian.

(iv) Scholarship will not be given to more than two students from a family.

(v) If a student is found to have obtained a scholarship by false statement, his/her scholarship will be cancelled forth with and the amount of the scholarship paid shall be recovered, at the discretion of the concerned State Govt/UT Admn;

(vi) Tuition fee and Maintenance Allowance will be creditd to the student's bank account. Efforts should be made for transferring the same electronically through the bank.

(vii) The State Govt./ UT Admn. Will maintain a separate account and records relating to the funds received from the Ministry and they will be sunjected to inspection by the officers of the Ministry or any other agency designated by the Ministry;

(viii) The student obtaining benefits under this scholarship scheme shall not be allowed to avail of benefits under any other scholarship scheme for the same purpose;

(ix) The fund for distribution of scholarship in subsequent year will be released after receiving the utilization certificate for the previous year.

(x) The State/Union Territory shall place all relevant details of financial and physical achievements on their website.

9. This sanction issues with approval of AS&FA vide Dy.No.029/AS&FA/(MA) dated 13.01.2010.

Yours faithfully,

(Brij Mohan)
Under Secretary to the Government of India

Annexure

Community-wise allocation of Pre-matric scholarships Scheme for 2009-10 to State of Karnataka made by the Ministry.

Sl. No	Community	No. of Scholar ships allocated for renew and new	No.of scholar ships for girl students (30%)	No. of Scholar ships for boy students (70%)
1	Muslim	75020	22506	52514
2	Christian	11660	3495	8162
3	Sikh	220	66	154
4	Buddhist	4620	1386	3234
5	Parsi	0	0	0
Total		**91520**	**27456**	**64064**

Details of renewal of Pre-matric scholarships sanctioned for 2009-10.

Community	No. of Scholarships		No. of Scholarships for girl Students		No. of Scholarships for boy Students	
	Sanctioned for 2008-09	Renewal for 2009-10	Sanctioned for 2008-09	Renewal for 2009-10	Sanctioned for 2008-09	Renewal for 2009-10
Muslim	20460	1139	11983	714	8477	425
Christian	556	77	254	47	302	30
Sikh	2	0	0	0	2	0
Buddhist	0	0	0	0	0	0
Parsis	0	0	0	0	0	0
Total	21018	1216	12237	716	8781	455

Details of new Pre-matric scholarships sanctioned for 2009-10.

Community	Total No. of Scholarships for 2009-10	No. of Schalarships for girl students for 2009-10	No. of Schalarships for boy students for 2009-10
Muslim	73881	39575	34306
Christian	11583	6090	5493
Sikh	16	9	7
Buddhist	133	53	80
Parsi	0	0	0
Total	**85613**	**45727**	**39886**

ಶ್ರೀ ಪ್ರಕಾಶ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಸರಿಯಾದ ಉತ್ತರ ಸಿಕ್ಕಿರುವುದರಿಂದ ಇದರ ಬಗ್ಗೆ ನಮ್ಮ ವಾದವಿಲ್ಲ. ಕೇಂದ್ರ ಸರ್ಕಾರದವರು 75% ರಾಜ್ಯ ಸರ್ಕಾರದವರು 25% ಸೇರಿಸಿ 10ನೇ ತರಗತಿಯ ವಿದ್ಯಾರ್ಥಿಯನಿಯರಿಗೆ ಸ್ಕಾಲರ್‌ಶಿಪ್ ಕೊಡುತ್ತಿದ್ದೀರಿ. ಇದಕ್ಕಿಂತ ಮೊದಲು 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವಂಥ ವಿದ್ಯಾರ್ಥಿನಿಯರಿಗೆ ಕೂಡ ಸ್ಕಾಲರ್‌ಶಿಪ್ ಕೊಡುತ್ತಿದ್ದೀರಿ.

ಈಗ ತಾವು ಕೊಟ್ಟಿರುವ ಉತ್ತರದಲ್ಲಿ ಏನು ಹೇಳಿದಿರಿ ಎಂದರೆ, 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವಂಥ ಅನಾಥ ವಿದ್ಯಾರ್ಥಿನಿಯರಿಗೆ ಮಾತ್ರ ಸ್ಕಾಲರ್ ಶಿಪ್ ಕೊಡುತ್ತಿದ್ದೇವೆಂದು ಹೇಳಿದಿರಿ. ಅದನ್ನು ಬಂದ್ ಮಾಡುವ ಪರಿಸ್ಥಿತಿ ಏಕೆ ಬಂತು? ತಾವು ಮುಖ್ಯವಾಗಿ ಗಮನಿಸಬೇಕಾದ ಅಂಶ ಏನೆಂದರೆ, ಮಕ್ಕಳು ಮೊದಲು ಪ್ರಾಥಮಿಕ ಶಾಲೆಗೆ ಹೋಗುತ್ತಾರೆ, ನಂತರ ಪ್ರೌಢ ಶಾಲೆಗೆ ಹೋಗುತ್ತಾರೆ: ನೀವು 10 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಯನಿರಿಗೆ ಸ್ಕಾಲರ ಶಿಪ್ ಕೊಡಿ, ಅದರ ಬಗ್ಗೆ ನಮ್ಮ ತಕರಾರು ಇಲ್ಲ. ಆದರೆ, ಮುಖ್ಯವಾಗಿ 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವಂಥ ಮಕ್ಕಳಿಗೆ ತಾವೇನು ಹಿಂದೆ ಕೊಡುತ್ತಿದ್ದೀರಿ ಅದೇ ತರಹ ಕೊಡಬೇಕೆಂದು ಮನವಿ ಮಾಡುತ್ತೇನೆ. ಹಣದ ಕೊರತೆಯಾದರೆ ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆ ಸಲ್ಲಿಸಿ 13 ಕೋಟಿಗಿಂತಲೂ ಜಾಸ್ತಿ ತೆಗೆದುಕೊಳ್ಳಬಹುದಾಗಿತ್ತು. ನೀವು ಈ ರೀತಿ ಮಾಡದೇ ಏಕೆ ಈ ರೀತಿ ನಿರ್ಣಯ ತೆಗೆದುಕೊಂಡಿದ್ದೀರಿ? ತಾವು ಒಳ್ಳೆಯ ಸಚಿವರು ಇದ್ದೀರಿ. ಏಕೆಂದರೆ, ನಾವು ಏನೋ ಒಂದು ವಿಚಾರಕ್ಕೆ ತಮ್ಮ ಹತ್ತಿರ ಬಂದಾಗ ತಾವು ಪರ್ಸನಲ್ ಆಗಿ ನಮ್ಮನ್ನು ಕರೆದು, ಯಾವುದೇ ಶಾದಿಮಹಲ್, ಮಸೀದಿಗಳಿಗೆ ದುಡ್ಡು ಕೇಳಿದಾಗ, ತಾವು ವೈಯಕ್ತಿಕವಾಗಿ ಕರೆದು ನಮ್ಮನ್ನು ಮಾತನಾಡಿಸಿ ಒಳ್ಳೆಯ ನಿರ್ಣಯ ತೆಗೆದುಕೊಳ್ಳುತ್ತೀರಿ. ನಿಮ್ಮ ಬಗ್ಗೆ ಅಪಾರವಾದ ಗೌರವ ನಮಗೆ ಇದೆ. ಜೊತೆಗೆ ಎಲ್ಲಾ ಶಾಸಕರಿಗೂ ಪತ್ರ ಕಳುಹಿಸಿದ್ದೀರಿ. ಈ ವರ್ಷ 2009–10ನೇ ಸಾಲಿಗೆ ಯಾರ್‍ಯಾರು ಶಾದಿಮಹಲ್ ಕೇಳಿದ್ದೀರಿ ಅದರ ಬಗ್ಗೆ ಮಾಹಿತಿ ಕೊಡಿ ಎಂದು ಕೇಳಿದ್ದೀರಿ. ಇದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಅರ್ಪಿಸುತ್ತೇನೆ. ಆದರೆ, 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವಂಥ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡುವುದನ್ನು ಏಕೆ ಕೈಬಿಟ್ಟಿರಿ. ಇದನ್ನು ಮುಂದಿನ ವರ್ಷದಿಂದಾರೂ ಆ ಮಕ್ಕಳಿಗೆ ಅನುಕೂಲ ಮಾಡಿ ಕೊಡಬೇಕು. ಏಕೆಂದರೆ ನನ್ನ ಮತಕ್ಷೇತ್ರದಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಬಹಳ ಇರುವುದರಿಂದ ದಯವಿಟ್ಟು ಆ ಯೋಜನೆಯನ್ನು ಮತ್ತೆ ಪ್ರಾರಂಭಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಕಾಕಾಸಾಹೇಬ ಪಾಂಡುರಂಗ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಪೂರಕವಾಗಿ ಹೇಳುವುದಾದರೆ, 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಸ್ಕಾಲರ್ ಶಿಪ್ ಕೊಡಲೇಬೇಕು. 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಸ್ಕಾಲರ್‌ಶಿಪ್

ಕೊಡಲಿಲ್ಲವೆಂದರೆ ಅವರು ಮುಂದೆ 10ನೇ ತರಗತಿಗೆ ಹೋಗುವುದು ಹೇಗೆ? ಏಕೆಂದರೆ ಬೇಸಿಕಲಿ ನಾವು ಆ ಹೆಣ್ಣು ಮಕ್ಕಳಿಗೆ ಅವಕಾಶ ಕಲ್ಪಿಸಿ ಕೊಡಲಿಲ್ಲ ವೆಂದರೆ ಹೇಗೆ? ಹೀಗಾಗಿ ಮಾನ್ಯ ಅಧ್ಯಕ್ಷರ ಮೂಲಕ ತಮಗೆ, 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಸ್ಕಾಲರ್‌ಶಿಪ್ ಕೊಡಲೇ ಬೇಕೆಂದು ಮನವಿ ಮಾಡುತ್ತೇನೆ. ಇದರ ಜೊತೆಯಲ್ಲಿ Government of India ದವರು, Minorities ನಲ್ಲಿ Community wise ಏನು ಬಿಡುಗಡೆ ಮಾಡಿದ್ದಾರೆ, ಮುಸ್ಲಿಂ, ಕ್ರಿಶ್ಚಿಯನ್ಸ್, ಬುದ್ಧಿಸ್ಟ್, ಪಾರ್ಸಿ, ಈ ಸಮಾಜದವರು ಇದ್ದಾರೆ. ಇದರ ಜೊತೆಗೆ ಜೈನ ಸಮಾಜದವರು ಕೂಡ ಕರ್ನಾಟಕದಲ್ಲಿ ಅಲ್ಪಸಂಖ್ಯಾತರ ಪಟ್ಟಿಯಲ್ಲಿ ಬರುತ್ತಾರೆ. ತಾವು ಈ ಬಗ್ಗೆ ಗಮನಹರಿಸಬೇಕು. ಏಕೆಂದರೆ, ಕೇಂದ್ರ ಸರ್ಕಾರದಿಂದ ಆ ಜನಾಂಗದ ಸ್ಟುಡೆಂಟ್‌ಗೂ ಕೂಡ ಸ್ಕಾಲರ್‌ಶಿಪ್ ಬರುವ ವ್ಯವಸ್ಥೆ ನಾವು ಮಾಡಲೇ ಬೇಕು. ಏಕೆಂದರೆ, ನಮ್ಮ ಬೆಳಗಾವಿ ಜಿಲ್ಲೆಯಲ್ಲಿ ಅಥವಾ ಉತ್ತರ ಕರ್ನಾಟಕದ ಭಾಗದ ಕೆಲವು ಜಿಲ್ಲೆಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಮೈನಾರಿಟಿಯಲ್ಲಿ ಜೈನ್ ಸಮಾಜದವರನ್ನು ಪರಿಗಣಿಸಿ ಕೊಡುತ್ತಿದ್ದೇವೆ. ಹೀಗಿರುವಾಗ ಕೇಂದ್ರ ಸರ್ಕಾರದಿಂದ ಬರುವ ಹಣ ತೆಗೆದುಕೊಳ್ಳುವುದಕ್ಕೆ ನಾವು ಏಕೆ ಕಡಿಮೆ ಬೀಳಬೇಕು? ಎನ್ನುವ ಮನವಿಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುತ್ತೇನೆ. ಮತ್ತೊಮ್ಮೆ ಕಳಕಳಿಯ ವಿನಂತಿ ಏನೆಂದರೆ, 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಸ್ಕಾಲರ್ ಶಿಪ್ ಕೊಡಲೇಬೇಕು.

ಪ್ರೋ: ಡಾ: ಮುಮ್ತಾಜ್ ಅಲಿ ಖಾನ್ : ಮಾನ್ಯ ಅಧ್ಯಕ್ಷರೆ, ಇಬ್ಬರು ಶಾಸಕರು ಮಾತನಾಡಿರುವುದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಮಾತನಾಡಿದ್ದರೆ ತುಂಬಾ ಸಂತೋಷ. ಕೇಂದ್ರ ಸರ್ಕಾರದಿಂದ ಬರುವಂಥ ವಿದ್ಯಾರ್ಥಿ ವೇತನವನ್ನು 1 ರಿಂದ 10ನೇ ತರಗತಿಯವರೆಗೆ ಎಲ್ಲಾ ವರ್ಗದವರಿಗೂ ಕೊಡಲಾಗುತ್ತದೆ. ಇದರಲ್ಲಿ ಮುಸ್ಲಿಂ, ಜೈನರು, ಕ್ರಿಶ್ಚಿಯನ್‌ರು, ಎಲ್ಲರಿಗೂ ಕೊಡುತ್ತೇವೆ. ಮತ್ತೊಂದು ರೀತಿಯಲ್ಲಿ ನಾವು ಸಹಾಯ ಮಾಡುತ್ತಿರುವುದು, ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನದ ಮೂಲಕ, ಇದು ವಕ್ಫ್ ಬೋರ್ಡಿಗೆ ಸಂಬಂಧಪಟ್ಟಿದ್ದು. ಎಲ್ಲಿ ವಕ್ಫ್ ಬರುತ್ತದೆ ಅಲ್ಲಿ ಮುಸ್ಲೀಂರಿಗೆ ಸೀಮಿತ ಇರುತ್ತದೆ. 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಸ್ಕಾಲರ್‌ಶಿಪ್ ಏಕೆ ಕೊಡಲಿಲ್ಲವೆಂದು ತಾವು

0.17F-72

ಕೇಳಿದಿರಿ. ಇದಕ್ಕೆ ಉತ್ತರ ಇಷ್ಟೆ, ನಮ್ಮಲ್ಲಿರುವ ಹಣವನ್ನು 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಕೊಡುವುದಕ್ಕೆ ಬಳಸುವುದಕ್ಕೆ ಸಾಧ್ಯವಿಲ್ಲ. 10ನೇ ತರಗತಿಗಳ ವಿದ್ಯಾರ್ಥಿಗಳ ಕಡೆಗೆ ಹೆಚ್ಚಿನ ಗಮನ ಕೊಟ್ಟಿದ್ದೇವೆ. 8 ಮತ್ತು 9 ನೇ ತರಗತಿಯವರಿಗೆ ಈ ಸಲ ಸಧ್ಯಕ್ಕೆ ಅನಾಥ ಹೆಣ್ಣು ಮಕ್ಕಳಿಗೆ ಮಾತ್ರ ಕೊಟ್ಟಿದ್ದೇವೆ. ಹಣ ಬಂದ ನಂತರ ಖಂಡಿತವಾಗಿ 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ತಾರತಮ್ಯ ವಿಲ್ಲದೆ ಸ್ಕಾಲರ್ ಶಿಪ್ ಕೊಡುತ್ತೇವೆ. ಈಗ ಸಧ್ಯಕ್ಕೆ ಆಗುತ್ತಿಲ್ಲ.

ಶ್ರೀ ಪ್ರಕಾಶ ಬಿ.ಹುಕ್ಕೇರಿ : 8 ಮತ್ತು 9 ನೇ ತರಗತಿಯವರಿಗೆ ಮೊದಲು ಕೊಡುತ್ತಿದ್ದರು. ಈಗ ಆ ಹಣದ ಕೊರತೆ ಏಕೆ ಬಂತು? ಜೊತೆಗೆ ತಾವು ಬಡವರ ಮೇಲೆ ಕಳಕಳಿವುಳ್ಳ ಮಂತ್ರಿಗಳು. ಹೀಗಿರುವಾಗ ನೀವು ಹಣ ಕೇಳಬೇಕಾಗಿತ್ತು. ಇನ್ನೊಂದು ವಿಚಾರ ಹೇಳುವುದಾದರೆ, ಈಗೇನು ತಾವು ಸ್ಕಾಲರ್ ಶಿಪ್ ಕೊಡುತ್ತೀರಿ, ಆದಷ್ಟು ಮಟ್ಟಿಗೆ ಜೂನ್ ತಿಂಗಳಿನಲ್ಲಿ ಶಾಲೆಗಳು ಪ್ರಾರಂಭವಾಗುತ್ತವೆ. ಎರಡು ಮೂರು ತಿಂಗಳೊಳಗೆ ಸ್ಕಾಲರ್ ಶಿಪ್ ಆ ಮಕ್ಕಳಿಗೆ ಮುಟ್ಟುವಂಥ ವ್ಯವಸ್ಥೆಯಾಗಬೇಕು. ನವೆಂಬರ್-ಡಿಸೆಂಬರ್-ಜನವರಿ ತಿಂಗಳಿನಲ್ಲಿ ಆ ಸ್ಕಾಲರ್‌ಶಿಪ್‌ನ ಆದೇಶವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ದಯವಿಟ್ಟು ಅದನ್ನು ವರ್ಷದಿಂದ ಜೂನ್, ಜುಲೈ, ಆಗಸ್ಟ್ ತಿಂಗಳೊಳಗೆ ಆ ಮಕ್ಕಳಿಗೆ ಸ್ಕಾಲರ್‌ಶಿಪ್ ಮುಟ್ಟಿಸುವಂತ ವ್ಯವಸ್ಥೆಯಾಗ ಬೇಕು. ದಯವಿಟ್ಟು ತಾವು ಮನಸ್ಸು ಮಾಡಿದರೆ 8 ಮತ್ತು 9 ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೂ ಸ್ಕಾಲರ್‌ಶಿಪ್ ಕೊಡುವುದಕ್ಕೆ ಸಾಧ್ಯವಿದೆ. ಮತ್ತೊಮ್ಮೆ ತಮ್ಮಲ್ಲಿ ಕಳಕಳಿಯಿಂದ ಈ ಬಗ್ಗೆ ಗಮನಹರಿಸ ಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮನ್ಯ ಅಧ್ಯಕ್ಷರೆ, ನಮ್ಮ ಬೆಳಗಾಂ ಶಾಸಕರು ನನಗೆ ಸಪೋರ್ಟ್ ಮಾಡುತ್ತಿಲ್ಲ.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ಸಚಿವರೆ, ತಾವು ಉತ್ತರ ಕೊಡಿ?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಚರ್ಚೆ ಮಾಡುವುದಕ್ಕೆ ಏನಾದರೂ ಹೊಸ ವಿಷಯ ತೆಗೆದುಕೊಂಡು ಬರುವುದಕ್ಕೆ ಬೆಳಗಾಂ ಜಿಲ್ಲೆಯ ಶಾಸಕರುಗಳಿಗೆ ಹೇಳಿ. ಆದರೆ, ಇವತ್ತಿನ ದಿವಸ ಪರಿಸ್ಥಿತಿ ಏನಾಗಿದೆ ಎಂದರೆ, ನೀವುಗಳೇ ಮಾತನಾಡಿ ಎಂದು ಮಾನ್ಯ ಉಮೇಶ್ ಕತ್ತಿ ಮತ್ತು ಮಾನ್ಯ ಲಕ್ಷ್ಮಣ್ ಸವದಿಯವರಿಗೆ ಎಲ್ಲವನ್ನು ಅವರು

ಕೊಟ್ಟು ಬಿಟ್ಟಿದ್ದಾರೆ. ನಮ್ಮ ಬೆಳಗಾಂ ಜಿಲ್ಲೆಯ ಪರಿಸ್ಥಿತಿ ಈ ತರಹ ಆಗಿದೆ. ಆದ್ದರಿಂದ, ಅವರುಗಳು ಸದನದಲ್ಲಿ ಮಾತನಾಡುವುದಕ್ಕೆ ತಾವು ದಯವಿಟ್ಟು ಸ್ವಲ್ಪ ಹೇಳಿ ಎಂದು ತಮ್ಮಲ್ಲಿ ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವನಾಥ ಮಾಮನಿ : ಮಾನ್ಯ ಪ್ರಕಾಶ್ ಹುಕ್ಕೇರಿಯವರೆ, ತಾವು ಹಿಂದೆ ಸಚಿವರಾಗಿ ಕೆಲಸ ಮಾಡಿದ್ದೀರಿ. ತಮಗೆ ಹೆಚ್ಚು ಅನುಭವ ಕೂಡ ಇದೆ.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ಸಚಿವರೆ, ತಾವು ಉತ್ತರ ಕೊಡಿ.

ಪ್ರೋ.ಡಾ. ಮುಮ್ತಾಜ್ ಆಲಿ ಖಾನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. 8 ಮತ್ತು 9 ನೇ ತರಗತಿಯ ಹೆಣ್ಣು ಮಕ್ಕಳಿಗೆ ಕೊಡಬೇಕೆಂದು ಕೇಳಿದ್ದಾರೆ. ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಡೆಯಿಂದ ಬರತಕ್ಕಂಥ ಹಣವನ್ನು ಸರಿಸಮನಾಗಿ ಅಂದರೆ ಯಾವುದೇ ತಾರತಮ್ಯ ಮಾಡದೆ ಕೊಡುತ್ತಿದ್ದೇವೆ. ವಿಶೇಷವಾದ ಹಣದ ಮೂಲ ನಮ್ಮಲ್ಲಿರುವುದಿಲ್ಲ. ಈಗ ಮಹಿಳಾ ಪ್ರತಿಷ್ಠಾನ ಮೂಲದಿಂದ ಬರುತ್ತಿರುವ ಹಣ ಸಧ್ಯಕ್ಕೆ ಸಾಕಾಗುತ್ತಿಲ್ಲ. ಇನ್ನು ಹೆಚ್ಚಿನ ದುಡ್ಡು ಬಂದಾಗ 8 ಮತ್ತು 9 ನೇ ತರಗತಿಯವರಿಗೂ ಸಹ ನಾವು ಕೊಡುತ್ತೇವೆ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಸರ್ಕಾರ 146 ಕೋಟಿ ರೂಪಾಯಿ ಘೋಷಣೆ ಮಾಡಿದಂಥ ಹಣದಲ್ಲಿ 100 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದರು ಕೂಡ ಕೇವಲ 46 ಕೋಟಿ ರೂಪಾಯಿ ಮಾತ್ರ ಬಳಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಆದ್ದರಿಂದ, ಹಣದ ಕೊರತೆ ನಿಮಗೆ ಯಾವ ಕಾರಣಕ್ಕಾಗಿ ಬರುತ್ತದೆಂಬುದನ್ನು ಹೇಳಬೇಕು. ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದಿಂದ ತಾವು ಕಾರ್ಯಕ್ರಮಗಳನ್ನು ರೂಪಿಸಿ ರಾಜ್ಯದಲ್ಲಿನ 10ನೇ ತರಗತಿ ಹೆಣ್ಣುಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುವಂಥ ಕಾರ್ಯಕ್ರಮ ಹಾಕಿಕೊಂಡಿರುವುದು ಸ್ವಾಗತಾರ್ಹ. ಮಾನ್ಯ ಸದಸ್ಯರ ಕಳಕಳಿ ಏನಿದೆ ಎಂದರೆ, ಈ ವರ್ಗದ ಹೆಣ್ಣು ಮಕ್ಕಳಿಗೆ ಶೈಕ್ಷಣಿಕವಾಗಿ ಹೆಚ್ಚಿನ ಒಂದು ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವಂಥ ಹಣವನ್ನು ನೀವು ಬಳಕೆ ಮಾಡಿಕೊಳ್ಳುವುದಕ್ಕೆ ಏಕೆ ಸಾಧ್ಯವಾಗುತ್ತಿಲ್ಲವೆಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಪ್ರೊ.ಡಾ. ಮುಮ್ತಾಜ್ ಆಲಿ ಖಾನ್ : ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ನೀಡಿರುವ ಹಣವನ್ನು ನಾವು ಬಹುತೇಕವಾಗಿ ಖರ್ಚು ಮಾಡಿದ್ದೇವೆ. ಆದ್ದರಿಂದ, ಇದರ ಬಗ್ಗೆ ಅನುಮಾನ ಪಡುವ ಅವಶ್ಯಕತೆ ಇಲ್ಲ. ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಹಣವನ್ನು ನಾವು ಪ್ರಾಮಾಣಿಕವಾಗಿ ಖರ್ಚು ಮಾಡಿದ್ದೇವೆ.

ಶ್ರೀ ತನ್ವೀರ್ ಸೇಠ್ : 146 ಕೋಟಿಯಲ್ಲಿ ರಾಜ್ಯ ಸರ್ಕಾರ ಎಷ್ಟು ಬಿಡುಗಡೆ ಮಾಡಿತ್ತೆಂಬುದರ ಬಗ್ಗೆ ಈ ಸದನದ ಗಮನಕ್ಕೆ ತರಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ. ಏಕೆಂದರೆ, ನಿಮ್ಮ Performance budget ನಲ್ಲಿ ನಿಮಗೆ ಕೇವಲ 100 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದು, ಇದರಲ್ಲಿ 46 ಕೋಟಿ ರೂಪಾಯಿಗಳನ್ನು ಮಾತ್ರ ಡಿಸೆಂಬರ್ ಅಂತ್ಯದವರೆಗೆ ಬಳಕೆ ಮಾಡಿಕೊಂಡಿದ್ದೀರಿ.

ಅಧ್ಯಕ್ಷರು : ಆಯಿತು. ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ ಈಗ ಮುಂದಿನ ಪ್ರಶ್ನೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ, ಎದ್ದು ನಿಂತುಕೊಂಡು ಏನು ಬೇಕಾದರು ಕೇಳುವುದಕ್ಕೆ ಆಗುವುದಿಲ್ಲ.

ಬೆಂಗಳೂರು – ಮಂಗಳೂರು ರಾಜಹಂಸ ಬಸ್ಸುಗಳು ಹದಗೆಟ್ಟಿರುವ ಬಗ್ಗೆ

55 (726) ಶ್ರೀ ರಮಾನಾಥ್ ರೈ.ಬಿ. (ಬಂಟ್ವಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸಾರಿಗೆ ಸಂಸ್ಥೆಯಲ್ಲಿ ಓಡಾಡುತ್ತಿರುವ ರಾಜಹಂಸ ಬಸ್ಸುಗಳ ಸಂಖ್ಯೆ ಎಷ್ಟು;

ಆ) ಇದರಲ್ಲಿ ಬೆಂಗಳೂರು–ಹಾಸನ–ಮಂಗಳೂರು ಈ ಮರ್ಗದಲ್ಲಿ ಸಂಚರಿಸುತ್ತಿರುವ ರಾಜಹಂಸ ಬಸ್ಸುಗಳು ತೀರಾ ಹದಗೆಟ್ಟಿರುವ ಬಸ್ಸುಗಳು ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಸಂಸ್ಥೆಯು ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

ಈ) ಹಾಗಿದ್ದಲ್ಲಿ, ಹೊಸ ಬಸ್ಸುಗಳನ್ನು ಹಾಕುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಉ) ಇದ್ದರೆ ಯಾವಾಗ ಹಾಕಲಾಗುವುದು?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಟ್ಟು 392 ರಾಜಹಂಸ ಬಸ್ಸುಗಳು ಸಂಚರಿಸುತ್ತಿವೆ.

ಆ) ಬೆಂಗಳೂರು-ಹಾಸನ-ಮಂಗಳೂರು ಮಾರ್ಗಗಳಲ್ಲಿ ಸಂಚರಿಸುತ್ತಿರುವ ರಾಜಹಂಸ ವಾಹನಗಳು ಅಧಿಕ ಕಿ.ಮೀ. ಕ್ರಮಿಸಿದ್ದು ಅವುಗಳನ್ನು ಮಾರ್ಗಗಳಿಗೆ ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಹಳೆಯ ವಾಹನಗಳನ್ನು ಬದಲಾಯಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಈ) ಹೌದು.

ಉ) ಮಾರ್ಚ್-2010 ರಿಂದ ಮೇ-2010ರ ಅವಧಿಯಲ್ಲಿ ಬದಲಾವಣೆ ಮಾಡಲಾಗುವುದು.

ಶ್ರೀ ಬಿ. ರಮಾನಾಥ್ ರೈ : ಸನ್ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ನಮ್ಮ ಕಾಲದಲ್ಲಿ ರಾಜಹಂಸ ಬಸ್‌ಗಳನ್ನು ಹಾಕುವಂಥ ಕಾರ್ಯ ಆಯಿತು. ಆದರೆ, ಇತ್ತೀಚೆಗೆ ನಮ್ಮ ಭಾಗಕ್ಕೆ ಹೋಗುವಂಥ ಬಸ್‌ಗಳು ತೀರಾ ಹಾಳಾಗಿವೆ. ಒಂದು ಕಾಲದಲ್ಲಿ ಕೆಎಸ್‌ಆರ್‌ಟಿಸಿ ನಷ್ಟದಲ್ಲಿದ್ದಂಥ ಸಂಸ್ಥೆಯಾಗಿತ್ತು. ಈ ಸಂಸ್ಥೆಯಲ್ಲಿ Accumulated loss ಇರಬಹುದು. ಆದರೆ, ಈಗ ಲಾಭದಲ್ಲಿರುವಂಥ ಸಂಸ್ಥೆಯಾಗಿರುವುದರಿಂದ ಕಾಲಕಾಲಕ್ಕೆ ಹೊಸ ಬಸ್‌ಗಳನ್ನು ಹಾಕತಕ್ಕಂಥ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಈಗ ಪೆಟ್ರೋಲ್ ದರ ಜಾಸ್ತಿಯಾದರೆ, ಸಾರಿಗೆ ದರವನ್ನು ಜಾಸ್ತಿ ಮಾಡುತ್ತೀರಿ. ನಮ್ಮ ಕಾಲದಲ್ಲಿ ಮೂರು ಸಾರಿ ಪೆಟ್ರೋಲ್ ದರ ಜಾಸ್ತಿಯಾದರೂ ಕೂಡ ಸಾಮಾನ್ಯ ಜನರ ಪ್ರಯಾಣ ದರವನ್ನು ನಾವು ಒಂದು ಪೈಸೆಯಷ್ಟು ಜಾಸ್ತಿ ಮಾಡಲಿಲ್ಲ. ಸ್ವಲ್ಪಮಟ್ಟಿಗೆ ಸಂಸ್ಥೆ ಲಾಭದಲ್ಲಿದೆ ಎಂಬ ದೃಷ್ಟಿಯಿಂದ ಈ ನಿರ್ಧಾರವನ್ನು ಮಾಡಿದ್ದೆವು. ಬಹುಶಃ ಈಗ ಯಾವ ಸ್ಥಿತಿಯಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ರಾತ್ರಿ ಸಮಯದಲ್ಲಿ ಕೆಂಪು ಬಸ್‌ಗಳಲ್ಲಿ ಪ್ರಯಾಣ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ನಮ್ಮ ಜಿಲ್ಲೆಯಲ್ಲಿ ಖಾಸಗಿ ಬಸ್‌ಗಳಲ್ಲಿ

ಟಿಕೆಟ್ ಸಿಗದಿದ್ದರೆ ಮಾತ್ರ ಸರ್ಕಾರಿ ಬಸ್‌ನಲ್ಲಿ ಹೋಗುತ್ತಿದ್ದರು. ಆದರೆ, ಈಗ ಏನಾಗಿದೆ ಎಂದರೆ, ರಾಜಹಂಸ ಬಸ್‌ಗೆ ಟಿಕೆಟ್ ಇಲ್ಲದಿದ್ದರೆ ಖಾಸಗಿ ಬಸ್‌ಗೆ ಹೋಗುವಂಥ ಸ್ಥಿತಿ ಬಂದಿದೆ. ಇಂಥ ಒಂದು ಒಳ್ಳೆಯ ವಾತಾವರಣ ಇದ್ದಂಥ ಈ ಸಂಸ್ಥೆಯನ್ನು ಇದೇ ರೀತಿಯಾಗಿ ಮುಂದುವರಿಸಿಕೊಂಡು ಹೋಗುವಂಥ ಹೊಣೆಗಾರಿಕೆ ತಮಗೆ ಇದೆ ಎಂಬ ವಿಚಾರವನ್ನು ಹೇಳುತ್ತಾ ಕಾಲಕಾಲಕ್ಕೆ ಹೊಸ ಬಸ್‌ಗಳನ್ನು ಹಾಕಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಮಂಗಳೂರು-ಬೆಂಗಳೂರಿಗೆ ಬಹಳಷ್ಟು ಪ್ರಯಾಣಿಕರ ಒತ್ತಡ ಇರುವ ಸಂದರ್ಭದಲ್ಲಿ ಹೊಸ ಬಸ್‌ಗಳನ್ನು ಹಾಕುವುದಕ್ಕೆ ತಾವು ಕ್ರಮವನ್ನು ಕೈಗೊಳ್ಳಬೇಕು.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಹಿರಿಯರಾದಂಥ ಸನ್ಮಾನ್ಯ ರಮಾನಾಥ್ ರೈರವರು ಹಿಂದೆ ಸಾರಿಗೆ ಸಚಿವರಾಗಿ ಕೆಲಸ ಮಾಡಿದ್ದಾರೆ. ಅವರಿಗೆ ನಮ್ಮ ಕಷ್ಟ ಸುಖಗಳೆಲ್ಲಾ ಗೊತ್ತಿದೆ. ರಾಜಹಂಸ ಬಸ್‌ಗಳನ್ನು ಕಾಲಕಾಲಕ್ಕೆ ಬದಲಾವಣೆ ಮಾಡಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಈಗಾಗಲೇ ಆ ರೂಟ್‌ನಲ್ಲಿ ಸಂಚರಿಸುವ 27 ಬಸ್‌ಗಳನ್ನು ಬದಲಾವಣೆ ಮಾಡಬೇಕಾಗಿದೆ. ಏಕೆಂದರೆ, ಎಷ್ಟು ಕಿ.ಮೀ. ವ್ಯಾಪ್ತಿವರೆಗೆ ಅವು ಸಂಚರಿಸಬೇಕಾಗಿತ್ತೋ ಅಷ್ಟು ಈಗಾಗಲೇ ಸಂಚಾರ ಮಾಡಿವೆ. ಆದ್ದರಿಂದ, 27 ಬಸ್‌ಗಳನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದು ಕೊಂಡಿದೆ. ಮತ್ತೆ ಟೆಂಡರ್ ಪ್ರಕ್ರಿಯೆ ಮುಗಿದಿದೆ. ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆ ಕೊಡುವುದೇನೆಂದರೆ, ಮಾರ್ಚ್‌ನಿಂದ ಮೇ ತಿಂಗಳ 10 ರೊಳಗೆ ಈ ಎಲ್ಲಾ ಬಸ್‌ಗಳನ್ನು ಬದಲಾವಣೆ ಮಾಡಿ ಹೊಸ ಬಸ್ ಗಳನ್ನು ಹಾಕಲಾಗುತ್ತದೆ. ಮಾನ್ಯ ರಮಾನಾಥ್‌ರೈರವರು ಆರಾಮವಾಗಿ ಸುಖಕರವಾಗಿ ಪ್ರಯಾಣ ಮಾಡುವ ರೀತಿಯಲ್ಲಿ ಮಾಡುತ್ತೇವೆ. ಏಕೆಂದರೆ, ಅವರು ಈ ಇಲಾಖೆಯ ಅಧ್ಯಕ್ಷರಾಗಿದ್ದರು. ಅವರ ಕಾಲದಲ್ಲಿಯೂ ಕೂಡ ಸಾರಿಗೆ ಸಂಸ್ಥೆ ಚೆನ್ನಾಗಿ ನಡೆದುಕೊಂಡು ಬಂದಿದೆ. ಆದ್ದರಿಂದ, ಒಳ್ಳೆಯ ಬಸ್‌ಗಳನ್ನು ಹಾಕುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ.ಅಭಯ ಚಂದ್ರ : ಅವರು ಸಚಿವರಾಗಿದ್ದಾಗ ಮತ್ತು ಈಗಲೂ ಕೂಡ ಅವರು ಬಸ್‌ನಲ್ಲಿಯೇ ಪ್ರಯಾಣ ಮಾಡುತ್ತಿದ್ದಾರೆ.

ಶ್ರೀ ಬಿ.ರಮಾನಾಥ್ ರೈ : ಮಾನ್ಯ ಅಭಯ ಚಂದ್ರರವರು ಹೇಳಿದ ಹಾಗೆ ಈಗಲೂ ಕೂಡ ಸಾರಿಗೆ ಬಸ್‌ನಲ್ಲಿ ಪ್ರಯಾಣ ಮಾಡತಕ್ಕಂಥ ಮಾಜಿ

ಮಂತ್ರಿ ಮತ್ತು ಶಾಸಕ ಕೂಡ ಆಗಿದ್ದೇನೆ. ನಾನು ಬಸ್‌ನಲ್ಲಿ ಪ್ರಯಾಣ ಮಾಡುವುದರಿಂದ ನಮ್ಮ ಕಡೆ ಹೋಗುವಂಥ ಬಸ್‌ಗಳನ್ನು ಬದಲಾವಣೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎನ್. ವೈ.ರುದ್ರೇಶ್ ಗೌಡ : ಮಾನ್ಯ ಅಧ್ಯಕ್ಷರೆ, ರಾಜ ಹಂಸ ಬಸ್‌ಗಳು ಮಂಗಳೂರಿಗೆ ಶಿರಾಡಿಘಾಟ್ ಕಡೆ ಮಾತ್ರ ಸಂಚಾರ ಮಾಡುತ್ತಿವೆ. ಚಾರ್ಮುಡಿ ಘಾಟ್ ಮೂಲಕ ಕೂಡ ಮಂಗಳೂರಿಗೆ ಹೋಗುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಮನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮೊದಲ ಚಾರ್ಮುಡಿ ಘಾಟ್ ಮೇಲೆ ಐದಾರು ಬಸ್‌ಗಳು ಹೋಗುತ್ತಿತ್ತು. ಆದರೆ, ಈಗ ಈ ರೂಟ್‌ನಲ್ಲಿ ಹೋಗತಕ್ಕಂಥದ್ದನ್ನು ನಿಲ್ಲಿಸಲಾಗಿದೆ. ಮಂಗಳೂರಿಗೆ ಹೋಗಬೇಕಾದರೆ, ಚಾರ್ಮುಡಿ ಘಾಟ್ ಮೇಲೆ ಅಂದರೆ ಬೇಲೂರು ಮೂಲಕ ಹೋಗುವಂಥ ಐದಾರು ಬಸ್‌ಗಳನ್ನು ಈಗ ಏನು ರದ್ದು ಮಾಡಲಾಗಿದೇ ಅದನ್ನು ರಾತ್ರಿ ಸಮಯ ಪ್ರಯಾಣ ಮಾಡುವುದಕ್ಕೆ ಅದೇ ರೂಟ್‌ನಲ್ಲಿ ಬಸ್ ಗಳನ್ನು ಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಶಿರಾಡಿ ಘಾಟ್ ಮತ್ತು ಚಾರ್ಮುಡಿ ಘಾಟ್ ಮೇಲೆ ಬೆಂಗಳೂರಿನಿಂದ ಮಂಗಳೂರಿಗೆ ಹೋಗುವುದಕ್ಕೆ ಅವಕಾಶ ಇದೆ. ಈಗ ಚಾರ್ಮುಡಿ ಘಾಟ್ ಮೇಲೆ ಸಂಚಾರ ಮಾಡುವುದನ್ನು ಈಗ ರದ್ದು ಮಾಡಿದ್ದಾರೆ. ಹಿಂದೆ ಈ ರೂಟ್‌ನಲ್ಲಿ ನಾಲ್ಕೈದು ಬಸ್‌ಗಳು ಸಂಚಾರ ಮಾಡುತ್ತಿತ್ತು. ಅದನ್ನು ಈಗ ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಎರಡು ಹೊಸ ಬಸ್‌ಗಳನ್ನು ಆ ರೂಟ್‌ನಲ್ಲಿ ಬಿಡಿ.

ಶ್ರೀ ಬಿ. ರಮಾನಾಥ್ ರೈ : ಹಿಂದಿನ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ. ಹೊಸ ಬಸ್‌ಸ್ಟ್ಯಾಂಡ್ ನಿರ್ಮಾಣ ಮತ್ತು ಹೊಸ ಬಸ್‌ಗಳನ್ನು ಅಂದರೆ ವೋಲ್ವೋ ಬಸ್‌ಗಳನ್ನು ಹಾಕತಕ್ಕಂಥ ಕೆಲಸ ಇರಬಹುದು. ಅಂದರೆ ನಮ್ಮ ಸರ್ಕಾರ ಇದ್ದಾಗ ಎಲ್ಲಾ ರೀತಿಯಲ್ಲಿ ಒಳ್ಳೆಯ ಕೆಲಸ ಆಗಿದೆ.

ಹಾಸನ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜಿನ ಕಾಮಗಾರಿ ಬಗ್ಗೆ

56 (750) ಶ್ರೀ ಹೆಚ್.ಡಿ.ರೇವಣ್ಣ (ಹೊಳೆ ನರಸೀಪುರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ವೈದ್ಯಕೀಯ ಕಾಲೇಜಿನ ಕಾಮಗಾರಿ ಪೂರ್ಣಗೊಂಡಿದೆಯೇ;

ಆ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು;

ಇ) ಈ ಕಾಲೇಜಿಗೆ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಂಡಿದೆಯೇ? (ಮಾಹಿತಿ ನೀಡುವುದು)

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು.

ಆ) ಉದ್ಭವಿಸುವುದಿಲ್ಲ.

ಇ) ಬಂದಿದೆ.

ಈ) ಬೋಧನೆಗೆ ತೊಂದರೆಯಾಗದಂತೆ ಕ್ರಮಗಳನ್ನು ಕೈಗೊಂಡಿದೆ.

ಉ) ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಸಂದರ್ಶನದ ಮೂಲಕ ತುಂಬಲಾಗಿದೆ. ಭಾರತೀಯ ವೈದ್ಯಕೀಯ ಪರಿಷತ್ತಿನ ಮಾನದಂಡಗಳ ಪ್ರಕಾರ ಸ್ನಾತಕೋತ್ತರ ಪದವಿ ಮತ್ತು ಬೋಧನಾನುಭವವನ್ನು ಹೊಂದಿರುವ ಅರ್ಹ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ನೇರ ನೇಮಕಾತಿ ಸಂದರ್ಶನಕ್ಕೆ ಹಾಜರಾಗುತ್ತಿಲ್ಲ. ತತ್ಫಲವಾಗಿ ಉಂಟಾಗುವ ಈ ಕನಿಷ್ಠ ಕೊರತೆಯನ್ನು ಇತರೆ ಸ್ವಾಯತ್ತ ಸಂಸ್ಥೆಗಳ ಬೋಧಕರನ್ನು ನಿಯೋಜಿಸುವ ಮೂಲಕ ಸರಿದೂಗಿಸಲಾಗಿದೆ.

ಖಾಲಿಯಿರುವ ಬೋಧಕೇತರ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಪ್ರಕ್ರಿಯೆ ಜರುಗುತ್ತಿದೆ. ಕೆಲವೊಂದು ವರ್ಗಗಳ ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆಯಿಂದ ಪಡೆಯಲಾಗುತ್ತಿದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಏನು ಕೊರತೆ ಇಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಮತ್ತೆ ಆಸ್ಪತ್ರೆ ಕೆಲಸ ಕೂಡ ಮುಗಿದಿದೆ ಎಂದೂ ಸಹ ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಗಮನಕ್ಕೆ ತರುವುದೇನೆಂದರೆ, ಹಾಸನ ಮೆಡಿಕಲ್ ಕಾಲೇಜಿನಲ್ಲಿ 17 ಹುದ್ದೆಗಳು ಖಾಲಿ ಇವೆ. 17 ಹುದ್ದೆಗಳ ಜೊತೆಗೆ ಈ ವರ್ಷ 5 ಕಾಲೇಜಿಗೆ MCI ಮಾನ್ಯತೆ ಕೊಟ್ಟಿಲ್ಲ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಕೇವಲ ಶಿವಮೊಗ್ಗದ ವೈದ್ಯಕೀಯ ಕಾಲೇಜಿಗೆ ಮಾತ್ರ ಮಾನ್ಯತೆ ಕೊಡುವಂತೆ ಮಾಡಿದ್ದಾರೆ. ಇದನ್ನು ದುರುದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆಯೋ

ಅಥವಾ ಇಲ್ಲವೋ ಗೊತ್ತಿಲ್ಲ. 6 ಕಾಲೇಜುಗಳಲ್ಲಿ ಶಿವಮೊಗ್ಗ ಕಾಲೇಜಿಗೆ ಮಾತ್ರ MCI ನಿಂದ ಮಾನ್ಯತೆ ಸಿಕ್ಕಿದೆ. ಬಾಕಿ ಉಳಿದಿರುವ 5 ಕಾಲೇಜುಗಳು MCI ಮಾನ್ಯತೆಯನ್ನು ಕಳೆದುಕೊಳ್ಳುವಂಥ ಪರಿಸ್ಥಿತಿಗೆ ಬಂದಿವೆ. ಇದರ ಜೊತೆಗೆ ಮೂರನೇ ಹಂತದಲ್ಲಿ ಏನು ಕಾಮಗಾರಿ ಆಗಬೇಕಾಗಿತ್ತೋ ಅದನ್ನು ಕೇವಲ ಶಿವಮೊಗ್ಗಕ್ಕೆ ಮಾತ್ರ ಅನುಮತಿ ಕೊಟ್ಟು ಬಾಕಿ ಕಾಲೇಜುಗಳಿಗೆ ಯಾವುದೇ ಪೂರ್ವಾನುಮತಿ ಕೊಟ್ಟಿಲ್ಲ. ಇದನ್ನು ಸಹ ದುರುದ್ದೇಶ ಪೂರ್ವಕವಾಗಿ ಮಾಡುತ್ತಿದ್ದಾರೋ ಅಥವಾ ಇಲ್ಲವೋ ಎಂಬುದು ಗೊತ್ತಿಲ್ಲ. ಹಾಸನ ಜಿಲ್ಲೆಯ ಆಸ್ಪತ್ರೆ ಕಟ್ಟಡಕ್ಕೆ 34 ಕೋಟಿ ರೂಪಾಯಿ ಕಾಮಗಾರಿ 3ನೇ ಹಂತದಲ್ಲಿದೆ ಇದಕ್ಕೆ ಅನುಮತಿ ಕೊಟ್ಟು ಸದರಿ ಕೆಲಸವನ್ನು ಮಾಡಿಸಬೇಕೆಂದು ಮತ್ತು 17 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು ಹಾಗೆಯೇ MCI ನಿಂದ ಮಾನ್ಯತೆ ದೊರಕುವುದಕ್ಕೋಸ್ಕರ ಟೀಚರ್ಸ್ ಕೊರತೆ ಇರತಕ್ಕಂಥದ್ದನ್ನು ಭರ್ತಿ ಮಾಡಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಯಾವುದೇ ದುರುದ್ದೇಶವಿಲ್ಲ. ಸರ್ಕಾರವೆಂದ ಮೇಲೆ ಒಂದು ಸದುದ್ದೇಶದಿಂದಲೇ ಕೆಲಸ ಮಾಡುವುದು. ಈ ಸಂದರ್ಭದಲ್ಲಿ MCI ನವರು ಕೆಲವು ಅಧ್ಯಾಪಕರುಗಳನ್ನು consider ಮಾಡಲಿಲ್ಲ. ಕಳೆದ ವರ್ಷ ಯಾರ್ಯಾರನ್ನು consider ಮಾಡಿದ್ದರು ಈ ವರ್ಷ ಅವರನ್ನು consider ಮಾಡಲಿಲ್ಲ. ಅದಕ್ಕಾಗಿ ನಾವು ಈಗಾಗಲೇ ಪುನರ್ ಪರಿಶೀಲನೆ ಮಾಡಬೇಕೆಂದು ನಾವು ಕೇಂದ್ರಕ್ಕೆ ಕಾಗದವನ್ನು ಬರೆದಿದ್ದೇವೆ. ಕೇಂದ್ರದ ಆರೋಗ್ಯ ಇಲಾಖೆಯ ಮಂತ್ರಿಗಳ ಜೊತೆಯಲ್ಲಿ ನಾನು ಈಗಾಗಲೇ ಮಾತನಾಡಿದ್ದೇನೆ. 14 ಜನ ಅಧ್ಯಾಪಕರುಗಳನ್ನು ನಿಯೋಜನೆ ಮೇಲೆ ಈಗಾಗಲೇ ನಾವು ಅಲ್ಲಿಗೆ ಹಾಕಿದ್ದೇವೆ. ಕೆಲವರು outsource ಮೇಲೆ ಕೆಲಸವನ್ನು ಮಾಡುತ್ತಿದ್ದಾರೆ. ಒಂದು ಮತ್ತು ಎರಡನೆಯ ಹಂತದಲ್ಲಿ ಎಲ್ಲ ಕಾರ್ಯಕ್ರಮಗಳು ಪೂರ್ಣ ಹೊಂದಿದ್ದು ಮೂರನೆಯ ಹಂತದ ಕಾರ್ಯಕ್ರಮಗಳನ್ನು ನಾವು ಚಾಲನೆಗೆ ತೆಗೆದುಕೊಳ್ಳುವವರು ಇದ್ದೇವೆ. ಯಾವುದೆ ದುರುದ್ದೇಶವಿಲ್ಲದೆ ನೀವು ಮಾಡಿರುವಂಥ ಕಾಲೇಜನ್ನು ಚೆನ್ನಾಗಿ ಮುಂದುವರೆಸಿಕೊಂಡು ಹೋಗುವಂಥ ಒಂದು ಪ್ರಯತ್ನ ಅಷ್ಟೆ ಅಲ್ಲ ಮುಂದುವರೆಸಿಕೊಂಡು ಚೆನ್ನಾಗಿ ಮಾಡುತ್ತೇವೆ. ಆದ್ದರಿಂದ ತಾವು ಅದರಲ್ಲಿ

0.17F-73

ಏನು ಆತಂಕಪಡುವ ಅಗತ್ಯವಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು 14 ಜನರನ್ನು ಅಲ್ಲಿಗೆ ನಿಯೋಜನೆ ಮಾಡಿದ್ದೇವೆಂದು ಹೇಳುತ್ತಾರೆ. 17 ಜನ ಡಾಕ್ಟರ್‌ಗಳ ಕೊರತೆ ಇದೆ. 16% ಕೊರತೆ ಇದೆ ಎಂದು MCI ನವರು ಬಂದವರು ಹೇಳಿದ್ದಾರೆ. ಇವತ್ತು ಅದಕ್ಕೋಸ್ಕರ MCI ನವರು permission ಕೊಟ್ಟಿಲ್ಲ. ಅದರ ಜೊತೆಯಲ್ಲಿರುವ 5 ಕಾಲೇಜುಗಳಿಗೆ MCI ನವರು permission ಕೊಟ್ಟಿಲ್ಲ. ಶಿವಮೊಗ್ಗ ಒಂದು ಕಾಲೇಜಿಗೆ ಮಾತ್ರ permission ಬಂದಿದೆ. ಅದು ಆ ರೀತಿ ಆಗಬಾರದು. ಮೂರನೆಯ ಹಂತದ ಆಸ್ಪತ್ರೆ ಕಟ್ಟುವ ಕೆಲಸ 34 ಕೋಟಿ ರೂ.ಗಳಿಗೆ ಯಾವಾಗ approval ಮಾಡುತ್ತೀರಿ. Approval ಆಗಿ ಅದರ ಕಾಮಗಾರಿಯನ್ನು ದುರುದ್ದೇಶ ಪೂರ್ವಕವಾಗಿ ನಿಲ್ಲಿಸಿದ್ದಾರೆಯೆ ಕೇಳಿ? ದಯಮಾಡಿ ಅದಕ್ಕೆ ಯಾವಾಗ ಕೆಲಸ ಚಾಲನೆ ಆಗುತ್ತದೆ. ಆ 16 ಜನ ಡಾಕ್ಟರ್‌ಗಳನ್ನು ಯಾವಾಗ ತುಂಬುತ್ತೀರಿ ಎನ್ನುವುದನ್ನು ಹೇಳಲಿ.

ಶ್ರೀ ರಾಮಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಈಗ ಅದು 4 ವರ್ಷವಾಗಿದೆ ಇನ್ನೊಂದು ವರ್ಷವಾಗಬೇಕು. 5 ವರ್ಷವಾದಾಗ ಅದಕ್ಕೆ ನಾವು ಸಂಪೂರ್ಣವಾಗಿ ಮಾಡುವಂಥದ್ದು. ಇವತ್ತು ಅಧ್ಯಾಪಕರುಗಳ ಕೊರತೆ ಇದ್ದು, ನಮಗೆ ಅಧ್ಯಾಪಕರುಗಳು ಸಿಗುತ್ತಿಲ್ಲ. ಇವತ್ತು ನಾವು reservation ಕೂಡ ಯೋಚನೆ ಮಾಡದೆ ಯಾರು ಬರುತ್ತಾರೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಕೆಲಸಕ್ಕೆ ಬರದಿರುವಂಥ ಈ ಸಂದರ್ಭದಲ್ಲಿ ಮಹಾರಾಷ್ಟ್ರದಿಂದ, ತಮಿಳುನಾಡಿನಿಂದ ಆಂಧ್ರಪ್ರದೇಶದಿಂದ ನಾವು ಹೋಗಿ ದಮ್ಮಯ್ಯ ಎಂದು ಕರೆದುಕೊಂಡು ಬರುವಂಥ ಸ್ಥಿತಿಯೊಳಗಿದ್ದೇವೆ. ಹಾಗಾಗಿ ನಾವು ನಮ್ಮ ರಾಜ್ಯದಲ್ಲಿ PG seat ಗಳನ್ನು ಜಾಸ್ತಿ ಮಾಡಿ, ಕೇಂದ್ರ ಸರ್ಕಾರದವರು PG seat ಗಳನ್ನು ಜಾಸ್ತಿ ಮಾಡಿರುವಂಥ ಹಿನ್ನಲೆಯೊಳಗೆ ಇನ್ನೊಂದೆರಡು ವರ್ಷದಲ್ಲಿ PG ಮಾಡ್ಡಿದಂಥ ಅಭ್ಯರ್ಥಿಗಳು ಬಹಳಷ್ಟು ಜನರು ಬರುತ್ತಾರೆ. ಅಧ್ಯಾಪಕರ ಕೊರತೆ ಆಗುವುದಿಲ್ಲ. ಮೂರನೆಯ ಹಂತದ ಕಾಮಗಾರಿಯನ್ನು ನಾವು ಆದಷ್ಟು ಬೇಗ ಪ್ರಾರಂಭ ಮಾಡುತ್ತಿದ್ದೇವೆ.

ಅಧ್ಯಕ್ಷರು : ಮಾನ್ಯ ವೆಂಕಟಸ್ವಾಮಿಯವರು ಇಲ್ಲ, ರಾಮಸ್ವಾಮಿಗೌಡ ಬಿ.ಬಿ. ಇಲ್ಲ, ವಿ. ಮುನಿಯಪ್ಪನವರು ಇಲ್ಲ. ಮಾನ್ಯ ಎಂ. ಸತ್ಯನಾರಾಯಣ ರವರು ಮಾತನಾಡಿ.

ಮೈಸೂರಿನ ಬೆಳವಾಡಿಯಲ್ಲಿ ಸರ್ಕಾರಿ ಐ.ಟಿ.ಐ ತರಬೇತಿ ಕೇಂದ್ರ ಸ್ಥಾಪನೆ

60 (14) ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕು ಬೆಳವಾಡಿ ಗ್ರಾಮದಲ್ಲಿ ಸರ್ಕಾರಿ ಐಟಿಐ ತರಬೇತಿ ಸಂಸ್ಥೆಯು ಆರಂಭಗೊಂಡು 12–13 ವರ್ಷಗಳೇ ಕಳೆದಿದ್ದು, ಈ ಕಾಲೇಜು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ಹಾಗೂ ಅನುದಾನವನ್ನು ನೀಡಲಾಗಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ ಹಾಗೂ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು; ಮಾಹಿತಿಯನ್ನು ಒದಗಿಸುವುದು?

ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಆರ್.ಐ.ಡಿ.ಎಫ್. – ನಬಾರ್ಡ್ ಯೋಜನೆ ಅಡಿಯಲ್ಲಿ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ನಬಾರ್ಡ್‌ಗೆ ಪ್ರಸ್ತಾವನೆಯನ್ನು ಕಳುಹಿಸಲಾಗುವುದು.

ಶ್ರೀ ಎಂ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಈ ಒಂದು institute ಶುರು ಆಗಿ 13 ವರ್ಷವಾಗಿದೆ. ಮೈಸೂರು ಗ್ರಾಮಾಂತರ ಅಂಥ ಹೇಳಿ ಶುರು ಮಾಡಿದ್ದಾರೆ. ಆದರೆ ಮೈಸೂರು ನಗರದಲ್ಲಿ ಆ institute ನಡೆಯುತ್ತಿದೆ. ಆ institute ನ ಅನುಕೂಲವನ್ನು ಗ್ರಾಮಾಂತರದವರು ಪಡೆಯುವುದಕ್ಕೆ ಅನುಕೂಲವಾಗುತ್ತಿಲ್ಲ. ಅದಕ್ಕಾಗಿ ಈಗ open ಮಾಡಿರುವ ಕಡೆಗೂ, ಈಗ ಜಗ ತೆಗೆದುಕೊಂಡಿರುವ

ಕಡೆಗೂ ಸುಮಾರು 8–10 ಕಿ.ಮೀ. ಅಂತರವಿದೆ. ಇದರಿಂದ ಗ್ರಾಮಾಂತರದ ಮಕ್ಕಳಿಗೆ ಅನಾನುಕೂಲವಾಗುತ್ತಿದೆ. ಆ ದೃಷ್ಟಿಯಿಂದ ಈ ಕೂಡಲೇ ಕಟ್ಟಡದ ಕಾಮಗಾರಿಗೆ ತಾವು ಶೀಘ್ರವಾಗಿ ತೆಗೆದುಕೊಳ್ಳಬೇಕು. ಸಿಟಿಯೊಳಗೆ ಇರುವ ಜಾಗವನ್ನು ಬಿಟ್ಟು ಯಾವುದಾದರೊಂದು ಬೆಳವಾಡಿ industrial area ದಲ್ಲಿಯೆ ನಿಂತು ಹೋಗಿರತಕ್ಕಂಥ ಒಂದು unit ನ್ನು ತೆಗೆದುಕೊಂಡು ಅಲ್ಲಿ ಪ್ರಾರಂಭ ಮಾಡುವುದು ಉತ್ತಮ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅನುಕೂಲವಾಗುವಂತೆ ಮಾಡಬೇಕು. ಅಲ್ಲಿ ಕಟ್ಟಡ ಆಗುವುದಕ್ಕೆ ಇನ್ನು ಬಹಳ ನಿಧಾನವಾಗುತ್ತದೆ. ಸಿಟಿಯಲ್ಲಿರುವ instituteನ್ನು ತಂದು ಗ್ರಾಮಾಂತರ ಪ್ರದೇಶದಲ್ಲಿ ಹಾಕುವುದು ಉತ್ತಮ ಎನ್ನುವುದನ್ನು ತಿಳಿಸುತ್ತಾ ತಾವು ಈಗಾಗಲೇ ಅಲ್ಲಿ ಮೂರು subject ಗಳನ್ನು ಮಾತ್ರ ಮಾಡುತ್ತಿದ್ದೀರಿ. ಸಿಟಿಯೊಳಗೆ ನಡೆಯುತ್ತಿರುವಂಥ ಬೇರೆ ಹಳೆಯ instituteನಲ್ಲಿ 16 subject ಗಳು ನಡೆಯುತ್ತಿದೆ. ಆದರೆ ಇಲ್ಲಿ ಬರಿ ಮೂರು subject ಗಳು ನಡೆಯುತ್ತಿರುವುದರಿಂದ ಅನಾನುಕೂಲವಾಗುತ್ತದೆ. ಆದ್ದರಿಂದ ದಯವಿಟ್ಟು ತಾವು ಇಲ್ಲಿ 8 subjectಗಳನ್ನು ತೆರೆಯುವ ರೀತಿ ಮಾಡಿ ನಿಂತುಹೋಗಿ ರುವಂಥ ಒಂದು unitನ್ನು ಬಾಡಿಗೆಗೆ ತೆಗೆದುಕೊಂಡು ಬೆಳವಾಡಿ industrial area ದಲ್ಲಿಯೆ ನೀವು ಮಾಡಿದರೆ ಹಳ್ಳಿಗಾಡಿನ ಮಕ್ಕಳಿಗೆ ಅನುಕೂಲವಾಗುತ್ತದೆನ್ನುವುದನ್ನು ತಮಗೆ ತಿಳಿಸುತ್ತಾ ಇದನ್ನು ತಾವು ಕಾರ್ಯಗತ ಮಾಡಿಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದರ ಬಗ್ಗೆ ಈಗಾಗಲೇ ನನ್ನ ಹತ್ತಿರ ಚರ್ಚೆ ಮಾಡಿರುತ್ತಾರೆ. ಇವತ್ತು ಆ ಪ್ರಶ್ನೆಯ ಬಗ್ಗೆ ಇವತ್ತಿನ ಸದನದಲ್ಲಿ ತಂದಿದ್ದಾರೆ. ಸುಮಾರು 10–12 ವರ್ಷಗಳ ಹಿಂದೆ 8 ಎಕರೆ ಜಮೀನು ಕೊಟ್ಟು ಆ ಜಮೀನಿಗೆ 18 ಲಕ್ಷ ರೂ.ಗಳ compound ಸಹ ಹಾಕಿದೆ. ಅದು ತಮಗೆ ಗೊತ್ತಿದೆ. ಕಟ್ಟಡವನ್ನು ಕಟ್ಟುವ ದೃಷ್ಟಿಯಿಂದ ನಕ್ಷೆ ಸಿದ್ಧಪಡಿಸಿ, 425 ಲಕ್ಷ ರೂ.ಗಳಾಗಿದೆ. ಕಳೆದ ವರ್ಷ ನಾವು ನಬಾರ್ಡ್ 15ರಲ್ಲಿ ತೆಗೆದುಕೊಂಡು 3 ಕೋಟಿ ರೂ.ಗಳಿಗೆ ಒಂದರಂತೆ ನಬಾರ್ಡ್‌ದಲ್ಲಿ ತೆಗೆದುಕೊಂಡಿದ್ದೇವೆ. ಹಾಗೆಯೇ ಈ ಸಲ 2010–11ನೇ ಸಾಲಿನಲ್ಲಿ ಮತ್ತೆ ನಬಾರ್ಡ್‌ನಲ್ಲಿ ಇದನ್ನು ಸೇರಿಸಿದ್ದೇವೆ. ತಾವು ಹೇಳಿದ್ದೀರಿ ಕಟ್ಟಡವನ್ನು ಕಟ್ಟಿ ಕೊಡುವುದು ಒಂದು. ತಾವು ಅವಶ್ಯಕತೆ

ಇರುವ ಟ್ರೇಡ್ಸ್‌ಗಳನ್ನು ಜಾಸ್ತಿ ಮಾಡಿ ಕೊಡಿ ಎಂದು ಹೇಳುತ್ತಿದ್ದೀರಿ, ಆ ವೃತ್ತಿಗಳನ್ನು ಕೊಡುವಂಥ ಕೆಲಸಗಳನ್ನು ಈಗ ಮಾಡುತ್ತೇವೆ. ನೀವು ಕೈಗಾರಿಕೆಯ ಪ್ರದೇಶದಲ್ಲಿಯೆ ಮಾಡಿ ಎಂದರೆ ನಾವು ನೀವು ನೇರವಾಗಿ ಚರ್ಚೆ ಮಾಡಿ. ಕೈಗಾರಿಕಾ ಪ್ರದೇಶದಲ್ಲಿ ಪ್ರತ್ಯೇಕ ಜಮೀನು ಇದ್ದು ಅವಶ್ಯಕತೆ ಇರುವಷ್ಟನ್ನು ನಾವು ತೆಗೆದುಕೊಂಡು ಏನು ಬೇಕು ನೀವು ಬನ್ನಿ, ನಮ್ಮ ಕಛೇರಿಯಲ್ಲಿ ಕುಳಿತುಕೊಂಡು ಮಾಡೋಣ. ಇದು ಬೇಡ ಎನ್ನುವುದರಿಂದ ಏನು ಎನ್ನುವ ಪ್ರಶ್ನೆ ಆ ರೀತಿ ಅದು ಆಗುತ್ತದೆ. ಬೆಳವಾಡಿಯಲ್ಲಿಯೆ ಮಾಡಿ ಎಂದರೆ ಅಲ್ಲಿ ಯಾವ ರೀತಿ ಆಗಬೇಕು ಎನ್ನುವ ಪ್ರಶ್ನೆ ಬರುತ್ತದೆ. ಇಲ್ಲಿ ಬೇಡ ಎನ್ನುವುದರ ಬಗ್ಗೆಯೂ ತಾವೇ ವಿಷಯವನ್ನು ತಿಳಿಸಬೇಕಾಗುತ್ತದೆ. ಅದರ ಬಗ್ಗೆ ಮಾತನಾಡೋಣ.

ಶ್ರೀ ಎಂ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೆ, ಈಗ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವಂಥ institute ಅದು ಸಿಟಿಯಲ್ಲಿದೆ. ಆದ್ದರಿಂದ industrial area ದಲ್ಲಿಯೇ ಯಾವುದಾದರೊಂದು ನಿಂತು ಹೋಗಿರುವ unit ನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ start ಮಾಡಿದರೆ ಹಳ್ಳಿಗಾಡಿನ ಮಕ್ಕಳಿಗೆ ಅನುಕೂಲವಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಸರಿಯಾಗಿದೆ. ನಾನು ಅದರ ಬಗ್ಗೆ ಮಾತನಾಡಿ ಕೈಗಾರಿಕೆ ಪ್ರದೇಶದಲ್ಲಿಯೆ ಸಿಕ್ಕರೆ ನಮಗೆ ಬಾಡಿಗೆ ಉಳಿಯುತ್ತದೆ. ಅಲ್ಲಿಗೆ ಬದಲಾಯಿಸಿ ಏನು ಕೆಲಸ ಬೇಕು ಅದನ್ನು ಮಾಡಿ ಕೊಡುತ್ತೇವೆ. ತಮ್ಮ ಅಪೇಕ್ಷೆ ಪ್ರಕಾರ 2010-11ರ ಯೋಜನೆಯಲ್ಲಿ ಸೇರಿಸಿ ನಮಗೆ ಒಳ್ಳೆಯ ಪ್ರದೇಶ ಕೊಟ್ಟಿದ್ದೀರಿ, ಇದಕ್ಕೆ 3 ಅಥವಾ 5 ಕೋಟಿ ರೂ.ಗಳಾಗುತ್ತದೆ, ಅದನ್ನು ಸೇರಿಸಿ ಕೊಡುವಂಥ ಕೆಲಸವನ್ನು ಮಾಡುತ್ತೇನೆ.

ಶ್ರೀ ವೈ.ಎನ್. ರುದ್ರೇಶಗೌಡ : ಬೇಲೂರಿನಲ್ಲಿ ITI College ಶುರು ಆಗಿ 5 ವರ್ಷವಾಗಿದೆ. ಲ್ಯಾಂಡ್ ಕೊಟ್ಟು ಎರಡು ವರ್ಷವಾಗಿದೆ. 5 ಎಕರೆ ಜಮೀನು ಕೊಟ್ಟರೆ ಹೊಸ ಕಟ್ಟಡದ ಕಾಮಗಾರಿ ಇನ್ನೂ ಶುರು ಆಗಿಲ್ಲ. ಅದಕ್ಕೆ ಗ್ರಾಂಟ್ ಕೊಟ್ಟಿಲ್ಲ. ಆದ್ದರಿಂದ ತಕ್ಷಣಕ್ಕೆ ತಾವು ಹೊಸ ಕಟ್ಟಡಕ್ಕೆ ಹಣವನ್ನು ನಿಗದಿ ಮಾಡಿ ಬೇಲೂರು ITI College ಗೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂಥದ್ದು 158 ಸರ್ಕಾರಿ ITI ಗಳು ನಮ್ಮ ರಾಜ್ಯದಲ್ಲಿವೆ. ಅದರಲ್ಲಿ 51 ಸಂಸ್ಥೆಗಳಿಗೆ ಸ್ವಂತ ಕಟ್ಟಡಗಳು ಇವೆ. 37 ಸಂಸ್ಥೆಗಳಿಗೆ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಸುಮಾರು 70 ಸಂಸ್ಥೆಗಳು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿವೆ. ಈ ವರ್ಷ ಮತ್ತೆ 30–35 institute ಗಳನ್ನು ಹೊಸದಾಗಿ ತೆಗೆದುಕೊಳ್ಳಬೇಕೆಂದು ಇದ್ದೇವೆ. ಅದರಲ್ಲಿ ಆದ್ಯತೆ ಮೇಲೆ ಯಾರು ಜಮೀನು ಕೊಟ್ಟಿದ್ದಾರೆ, ಎಲ್ಲಿ ಅವಶ್ಯಕತೆ ಇದೆ ಅಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿರುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಜಮೀನು ಕೊಟ್ಟಾಗಿದೆ. ಟೆಂಡರ್ ಕೂಡ ಕರೆದಾಗಿದೆ, ಗುತ್ತಿಗೆದಾರರು ಗೊತ್ತಾಗಿದ್ದಾರೆ. ನಿಮ್ಮ administration approval ಇಲ್ಲದೆ ಕಾಯುತ್ತ ಇದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಲಿಂಗೇಗೌಡರು ಈ ಪ್ರಶ್ನೆಯನ್ನು ಮೊದಲೇ ಪ್ರಸ್ತಾಪ ಮಾಡಿದ್ದಾರೆ. ಆದರೆ ಇಲ್ಲಿ ಆ ಪ್ರಶ್ನೆ ಎತ್ತಿಲ್ಲ. ಅವರು ನನ್ನ ಕಛೇರಿಯಲ್ಲಿ ಮಾತನಾಡಿದಾಗ ಅದಕ್ಕೆ ಏನು ಬೇಕು ಸೂಕ್ತ ಕ್ರಮ ನಾನು ಮಾಡುತ್ತೇನೆ.

ರಾಜ್ಯದ ನೆಮ್ಮದಿ ಕೇಂದ್ರಗಳ ಕುರಿತು

5 (36) : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಮಡಿಕೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ನೆಮ್ಮದಿ ಕೇಂದ್ರದ ಮೇಲ್ವಿಚಾರಣೆಯನ್ನು ಯಾರಿಗೆ ವಹಿಸಿಕೊಡಲಾಗಿದೆ;

ಆ) ನೆಮ್ಮದಿ ಕೇಂದ್ರದಿಂದ ಸಾರ್ವಜನಿಕರಿಗೆ ತುಂಬಾ ತೊಂದರೆ ಯಾಗುತ್ತಿದ್ದು, ಈ ಬಗ್ಗೆ ಕಂಪನಿಯವರು ವ್ಯವಹರಿಸದೆ ಇರುವುದರ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಳ್ಳಲಾಗಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :

ಅ) ನೆಮ್ಮದಿ ಯೋಜನೆಯ ದೈನಂದಿನ ಮೇಲ್ವಿಚಾರಣೆಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.

ಆ) ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ.

ಅನುಬಂಧ

(ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:36)

1. ನೆಮ್ಮದಿ – ಕರ್ನಾಟಕ ಟೆಲಿಸೆಂಟರ್ ಯೋಜನೆಯು, ಗ್ರಾಮೀಣ ಜನರಿಗೆ ಹೋಬಳಿ ಮಟ್ಟದಲ್ಲಿ, ಸರ್ಕಾರಿ ಸೇವೆಗಳನ್ನು ತಲುಪಿಸುವ ಯೋಜನೆಯಾಗಿದೆ. ಈ ಯೋಜನೆಯಡಿ ಒಟ್ಟು 799 ಟೆಲಿಸೆಂಟರ್‌ಗಳನ್ನು ಹೋಬಳಿ ಮಟ್ಟದಲ್ಲಿ ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗಿದೆ. ನಾಗರೀಕ ಸೇವೆಗಳಿಗಾಗಿ ಬರುವ ಕೋರಿಕೆಗಳನ್ನು ತಾಲ್ಲೂಕು ಮಟ್ಟದಲ್ಲಿ ಪ್ರಕ್ರಿಯೆಗೊಳಿಸಲು 203 ತಾಲ್ಲೂಕುಗಳು ಮತ್ತು ವಿಶೇಷ ತಾಲ್ಲೂಕುಗಳಲ್ಲಿ ಹಿಂಬದಿ ಕಛೇರಿಗಳು (Back Offices) ಕಾರ್ಯೋನ್ಮುಖವಾಗಿವೆ. ಎಲ್ಲಾ ಟೆಲಿಸೆಂಟರ್‌ಗಳಲ್ಲಿ ಸರ್ಕಾರ–ನಾಗರೀಕ ಸೇವೆಗಳಾದ ಭೂದಾಖಲೆ, ಮ್ಯುಟೇಷನ್, ಜನನ–ಮರಣ ಪ್ರಮಾಣ ಪತ್ರಗಳು ಇತ್ಯಾದಿಗಳನ್ನು ವಿತರಣೆ ಮಾಡಲಾಗುತ್ತಿದೆ.

2. ನೆಮ್ಮದಿ ಕೇಂದ್ರಗಳ ಸುಗಮ ಕಾರ್ಯ ನಿರ್ವಹಣೆಗೆ ಮುಖ್ಯವಾಗಿ ತೊಡಕಾಗಿರುವುದು ನಿರಂತರ ವಿದ್ಯುತ್ ಸರಬರಾಜು. ಕೆಲವು ಕೇಂದ್ರಗಳಲ್ಲಿ ನುರಿತ ಆಪರೇಟರ್‌ಗಳ ಕೊರತೆ, ಇಂಟರ್ ನೆಟ್ ಕನೆಕ್ಟಿವಿಟಿ, ಲೇಖನಾ ಸಾಮಗ್ರಿಗಳು, ಪ್ರಿಂಟರ್ ಕಾಟ್ರಿಡ್ಜ್ ಮುಂತಾದ ಮೂಲಭೂತ ಸೌಕರ್ಯಗಳ ಕೊರತೆಗಳು ಇವೆಯೆಂದು ಇಲಾಖೆಯ ಗಮನಕ್ಕೆ ಬಂದಿದ್ದು ಅವುಗಳನ್ನು ನಿವಾರಿಸಲು ಹಾಗೂ ನೆಮ್ಮದಿ ಕೇಂದ್ರಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸಲು ಅನುವಾಗಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:–

(1) ನಿರಂತರ ವಿದ್ಯುತ್ ಸರಬರಾಜಿಗಾಗಿ ತೆಗೆದುಕೊಂಡಿರುವ ಕ್ರಮಗಳು:

i) ಎಲ್ಲಾ ನೆಮ್ಮದಿ ಕೇಂದ್ರಗಳಿಗೂ ಯುಪಿಎಸ್‌ಗಳನ್ನು ಅಳವಡಿಸಲಾಗಿದೆ.

ii) ಅಧಿಕ ಕಾರ್ಯ ಒತ್ತಡವಿರುವ 201 ಟೆಲಿಸೆಂಟರ್‌ಗಳಿಗೆ ಜನರೇಟರ್‌ಗಳನ್ನು ಒದಗಿಸಲಾಗಿದೆ.

iii) 422 ಟೆಲಿಸೆಂಟರ್‌ಗಳಲ್ಲಿ ಹೊಸದಾದ ಅಧಿಕ ವಿದ್ಯುಚ್ಛಕ್ತಿ ನೀಡುವ ಸಾಮರ್ಥ್ಯವುಳ್ಳ ಬ್ಯಾಟರಿಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗಿದೆ.

iv) ನೆಮ್ಮದಿ ಕೇಂದ್ರಗಳಲ್ಲಿ ವಿದ್ಯುತ್ ಸುಧಾರಣೆಗಾಗಿ ಕ್ರಮ ಕೈಗೊಳ್ಳಲು ಪ್ರಾಯೋಗಿಕವಾಗಿ ರಾಜ್ಯದ ತೀರಾ ಹಿಂದುಳಿದ ಜಿಲ್ಲೆಗಳಲ್ಲಿರುವ 10 ನೆಮ್ಮದಿ ಕೇಂದ್ರಗಳಿಗೆ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗಿದೆ.

(2) ಜಿಲ್ಲಾಧಿಕಾರಿಗಳಿಗೆ ನೆಮ್ಮದಿ ಕೇಂದ್ರಗಳ ಮೇಲ್ವಿಚಾರಣೆಗಾಗಿ ಹೆಚ್ಚಿನ ಅಧಿಕಾರವನ್ನು ನೀಡಿರುವುದು:

i) ದಿನಾಂಕ: 05.12.2009ರ ಸರ್ಕಾರಿ ಆದೇಶ ಸಂ: ಡಿಪಿಎಆರ್ 148 ಇಜಿವಿ 2009ರನ್ವಯ ಜಿಲ್ಲಾಮಟ್ಟದ ಸಮನ್ವಯ ಸಮಿತಿಯನ್ನು ಪುನರ್ ರಚಿಸಲಾಗಿದೆ ಹಾಗೂ ಜಿಲ್ಲೆಯ ನೆಮ್ಮದಿ ಕೇಂದ್ರಗಳ ಸಂಪೂರ್ಣ ನಿರ್ವಹಣಾ ಜವಾಬ್ದಾರಿಯನ್ನು ಆಯಾಯ ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.

ii) ಆಯಾ ಜಿಲ್ಲೆಯ ನೆಮ್ಮದಿ ಕೇಂದ್ರಗಳ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಆಡಳಿತಾತ್ಮಕ ಮತ್ತು ಹಣಕಾಸಿನ ಅಧಿಕಾರವನ್ನು ಕೂಡಾ ನೀಡಲಾಗಿದೆ.

iii) ಯೋಜನೆಯ ಪಾಲುದಾರರು ತೊಡಗಿಸಿದ ಜನರನ್ನು ದುರ್ನಡತೆ, ಸಾರ್ವಜನಿಕರ ದೂರು, ಅಸಮರ್ಪಕ ಕಾರ್ಯನಿರ್ವಹಣೆ ಇತ್ಯಾದಿ ಕಾರಣಗಳಿಗಾಗಿ ಬದಲಾಯಿಸುವ ಸಂಪೂರ್ಣ ಅಧಿಕಾರವನ್ನು ಜಿಲ್ಲಾ ಸಮನ್ವಯ ಸಮತಿಗೆ ನೀಡಲಾಗಿದೆ.

iv) ನೆಮ್ಮದಿ ಕೇಂದ್ರಗಳಲ್ಲಿ ಕೆಲಸದ ಒತ್ತಡ ಇದ್ದಂತಹ ಸಂದರ್ಭಗಳಲ್ಲಿ, ಹೆಚ್ಚಿನ ಜನರನ್ನು ತೊಡಗಿಸಲು ಖಾಸಗಿ ಪಾಲುದಾರರಿಗೆ ಸೂಚಿಸಬಹುದಾಗಿದ್ದು, ಅದರಂತೆ ಪಾಲುದಾರರು ಕ್ರಮಕೈಗೊಳ್ಳದಿದ್ದಲ್ಲಿ, ಸ್ಥಳೀಯರನ್ನು ತಾತ್ಕಾಲಿಕವಾಗಿ ಆಪರೇಟರ್‌ಗಳಾಗಿ ತೊಡಗಿಸುವ ಅಧಿಕಾರವನ್ನು ಜಿಲ್ಲಾ ಸಮನ್ವಯ ಸಮಿತಿಗೆ ನೀಡಲಾಗಿದೆ.

v) ಜಿಲ್ಲೆಯ ನೆಮ್ಮದಿ ಕೇಂದ್ರಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಪಡೆಯುವ ಪೂರ್ಣ ಅಧಿಕಾರವನ್ನು ಜಿಲ್ಲಾ ಸಮನ್ವಯ ಸಮಿತಿಗೆ ನೀಡಲಾಗಿದೆ.

(3) ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ :

i) ನೆಮ್ಮದಿ ಕೇಂದ್ರಗಳಲ್ಲಿ ವಿದ್ಯುಚ್ಛಕ್ತಿ, ನೀರು, ಲೇಖನ ಸಾಮಗ್ರಿ ದಾಸ್ತಾನು, ಇಂಟರ್‌ನೆಟ್ ಕನೆಕ್ಟಿವಿಟಿ ಇನ್ನಿತರೆ ಯಾವುದೇ ಮೂಲಭೂತ ಸೌಕರ್ಯಗಳ ಕೊರತೆ ನೀಗಿಸುವ ಸಲುವಾಗಿ ಪ್ರತಿ ಜಿಲ್ಲಾಧಿಕಾರಿಗಳಿಗೆ ತಲಾ 2.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.-

ii) ಮಾಹೆಯಾನ ನೆಮ್ಮದಿ ಉಸ್ತುವಾರಿ ಕೋಶ ಸ್ವೀಕರಿಸುವ ಆರ್‌ಟಿಸಿ, ಆರ್‌ಡಿಎಸ್ ವಹಿವಾಟಿನ ಸಂಪೂರ್ಣ ಹಣವನ್ನು ಜಿಲ್ಲಾಧಿಕಾರಿಗಳಿಗೆ ಸಮನಾಗಿ ಹಂಚಲು ಆಸ್ಪದ ಕಲ್ಪಿಸಲಾಗಿದೆ.

4) ನೆಮ್ಮದಿ ಕೇಂದ್ರಗಳ ಅಪರೇಟರ್‌ಗಳ ಸಾಮರ್ಥ್ಯ ಪರೀಕ್ಷೆ :

i) ನೆಮ್ಮದಿ ಕೇಂದ್ರಗಳ ಆಪರೇಟರ್‌ಗಳಿಗೆ ಆಯಾಯ ಯೋಜನೆಯಲ್ಲಿ ಲಭ್ಯವಿರುವ ಸೇವೆಗಳ ಮಾಹಿತಿಯನ್ನು ತಿಳಿಯಲು ಆಗಿಂದಾಗ್ಗೆ ಆನ್‌ಲೈನ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ii) ಇದಲ್ಲದೆ ಆಪರೇಟರ್‌ಗಳಿಗಿರುವ ತಾಂತ್ರಿಕ ಮತ್ತು ಆಡಳಿತಾತ್ಮಕ ಸಾಮರ್ಥವನ್ನು ತಿಳಿಯಲು ಕಂದಾಯ ಇಲಾಖೆಯ ತಹಶೀಲ್ದಾರ್‌ಗಳ ಉಸ್ತುವಾರಿಯಲ್ಲಿ, ನೇರ ಪರೀಕ್ಷೆಯನ್ನು ನಡೆಸಲು ಕ್ರಮ ಕೈಗೊಳ್ಳಲಾಗಿದೆ.

(5) ನೆಮ್ಮದಿ ಕೇಂದ್ರಗಳ ಕಾರ್ಯನಿರ್ವಹಣೆಯ ಬಗ್ಗೆ ನಿರಂತರ ಪರಿಶೀಲನೆ :

i) ನೆಮ್ಮದಿ ಕೇಂದ್ರಗಳ ಉಸ್ತುವಾರಿಗೆಂದೇ ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಯನ್ನು ನೇಮಿಸುವಂತೆ ಜಿಲ್ಲಾಧಿಕಾರಿಗಳಿಗೆ ದಿನಾಂಕ: 24.10.2009 ರ ಸುತ್ತೋಲೆ ಸಂ:ಇಡಿಸಿಎಸ್/ಎನ್‌ಎಂಸಿ/02/ಆರ್‌ಇವಿ/2009ರ ಅನ್ವಯ ಸೂಚಿಸಲಾಗಿದೆ.

ii) ನೆಮ್ಮದಿ ಕೇಂದ್ರಗಳ ಕಾರ್ಯನಿರ್ವಹಣೆ ಕುರಿತು ಎಲ್ಲಾ ವಿಭಾಗಾಧಿಕಾರಿಗಳು/ ಜಿಲ್ಲಾಧಿಕಾರಿಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಇ-ಆಡಳಿತ) ಇವರ ನೇತೃತ್ವದಲ್ಲಿ ವಿಡಿಯೋ ಕಾನ್‌ಫೆರೆನ್ಸ್ ನಡೆಸಲಾಗುತ್ತಿದೆ.

0.17F-74

ಶ್ರೀ ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇಡೀ ರಾಜ್ಯದಲ್ಲಿ ನನಗೆ ತಿಳಿದ ಹಾಗೆ ಈ ನೆಮ್ಮದಿ ಕೇಂದ್ರದಿಂದ ನೆಮ್ಮದಿ ಕೆಡುವಂತಹ ಪರಿಸ್ಥಿತಿಯಾಗಿದೆ. ಅದರಿಂದಾಗಿ

ಜನರು ನಮ್ಮ ನೆಮ್ಮದಿಯನ್ನು ಸಹ ಕೆಡಿಸುತ್ತಿದ್ದಾರೆ. ಈ ನೆಮ್ಮದಿ ಕೇಂದ್ರವನ್ನು ಯಾರಿಗೆ ಕೊಟ್ಟಿದ್ದೀರಿ? ಇದನ್ನು ಯಾವ ರೀತಿಯಾಗಿ ಕಂಟ್ರಾಕ್ಟ್ ಕೊಟ್ಟಿದ್ದೀರಿ. ಇದನ್ನು ಯಾವ ರೀತಿಯಾಗಿ ಸರಿಪಡಿಸುತ್ತೀರಿ? ತಾವು ಕಂದಾಯ ಇಲಾಖೆಯಿಂದ ಅಥವಾ ಸರ್ಕಾರದ ವತಿಯಿಂದ ಇದನ್ನು ನಡೆಸುತ್ತೀರಾ ಎಂಬುದರ ಬಗ್ಗೆ ಉತ್ತರವನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಇದು 2006ರಲ್ಲಿಯೇ ಟೆಂಡರ್ ಮುಖೇನ ಇದನ್ನು ಬೇರೆ ಕಂಪನಿಗೆ ವಹಿಸಿಕೊಡಲಾಗಿದೆ. ತಮಗೆ ಗೊತ್ತಿರುವ ಹಾಗೆ ಒಟ್ಟು ರಾಜ್ಯದಲ್ಲಿ 799 training centre ಗಳು ಹೋಬಳಿ ಮಟ್ಟದಲ್ಲಿ ಸರ್ಕಾರಿ ಹಾಗೂ ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ಸ್ಥಾಪಿಸಲಾಗಿದೆ. ಅವರಿಂದ ಎಲ್ಲಾ ಸೇವೆಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. ನೆಮ್ಮದಿ ಕೇಂದ್ರಗಳಲ್ಲಿ ಈ ಮೊದಲು ಇರುವಂತಹ ಎಲ್ಲಾ ತೊಂದರೆಗಳನ್ನು ನಿವಾರಣೆ ಮಾಡಬೇಕಾದಂತಹ ಕೆಲಸವನ್ನು ಮಾಡ ಲಾಗಿದೆ. ಅಲ್ಲಿ ಬೇಕಾಗಿರುವಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸು ವಂತಹ ಕೆಲಸದಲ್ಲಿ ಈಗಾಗಲೇ ವ್ಯವಸ್ಥೆಯನ್ನು ಮಾಡಿರುವುದರಿಂದ ಇವತ್ತು ವಿಶೇಷವಾದಂತಹ ಸಮಸ್ಯೆ ಆಗುತ್ತಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳನ್ನು ಉಸ್ತುವಾರಿಗೆ ನೇಮಿಸಿರುವುದರಿಂದ ಈಗ ಸದ್ಯದ ಮಟ್ಟಿಗೆ ಅದೊಂದು ಪರಿವರ್ತನೆಯಾಗಿ ಬದಲಾವಣೆಯಾಗಿದೆ. ಹೀಗಿರುವುದರಿಂದ ಯಾವುದೇ ತೊಂದರೆ ಇರುವುದಿಲ್ಲ. ಇದನ್ನು ಮೊದಲೇ ಮಾಡಿರುವುದರಿಂದ, ಅವಧಿ ಇರುವುದರಿಂದ ಸದ್ಯದ ಮಟ್ಟಿಗೆ ಬದಲಾಯಿಸುವಂತಹ ಅವಶ್ಯಕತೆ ಇಲ್ಲವೆಂದು ಕಂಡು ಬರುತ್ತದೆ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ,.......

ಅಧ್ಯಕ್ಷರು : ಪ್ರಶ್ನೆ ಕೇಳಿರುವವರು ಇದ್ದಾರೆ ಅವರು ಮೊದಲು ಕೇಳಲಿ ನಂತರ ತಾವು ಕೇಳಿ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ ಇದು ಎಲ್ಲರ ಸಮಸ್ಯೆಯಾಗಿದೆ. ನಾನು ಅವರನ್ನು ಕೇಳಿಕೊಳ್ಳುತ್ತೇವೆ. ಮಾನ್ಯ ಸಚಿವರು ಹಾರಿಕೆ ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಇನ್ನು ಸರಿಮಾಡುವುದಕ್ಕಾಗಲಿಲ್ಲ ವೆಂದರೆ ಇದು ಬಹಳ ಸಮಸ್ಯೆಯಾಗುತ್ತದೆ. ಒಂದು ಹೋಬಳಿಯೊಳಗೆ ಹೋಬಳಿ ಕೇಂದ್ರವು ಇರುವುದಿಲ್ಲ. ಅವರು ಹೋಬಳಿಯ ಹೆಸರನ್ನು ಹೇಳಿದ್ದಾರೆ ಅಷ್ಟೆ. ಒಂದು ಹೋಬಳಿಯಿಂದ ಇನ್ನೊಂದು ಹೋಬಳಿಗೆ

ಕೆಎಸ್‌ಆರ್‌ಟಿಸಿ ಬಸ್ಸಾಗಲಿ, ಅಲ್ಲಿ ಯಾವುದು ಇಲ್ಲ. ಗ್ರಾಮಾಂತರ ಪ್ರದೇಶಲ್ಲಿರುವವರು ಕಾಲುನಡಿಗೆಯಲ್ಲಿ ಹೋಗಬೇಕಾಗಿದೆ. ದಯಮಾಡಿ ಅವರು ಕೊಟ್ಟಿರುವ ಉತ್ತರದಿಂದ ತೃಪ್ತಿಯಾಗುವುದಿಲ್ಲ. ಆ ನೆಮ್ಮದಿ ಕೇಂದ್ರವು ಇರುವುದೇ ಬೇಡ. ಅದು ತಾಲ್ಲೂಕು ಆಫೀಸಿನಲ್ಲಿರಲಿ, ಇಲ್ಲದಿದ್ದರೆ ನಮಗೆ ಅದು ಅನುಕೂಲವಾಗುವುದಿಲ್ಲ.

(ಗೊಂದಲ)

ಶ್ರೀ ವೈ.ಎಂ.ರುದ್ರೇಶ್‌ಗೌಡ : ಇದು ಸತ್ಯ, ರೈತರಿಗೆ ಇದರಿಂದ ತೊಂದರೆಯಾಗುತ್ತಿದೆ. ರೈತರುಗಳ ನೆಮ್ಮದಿ ಹೋಗಿದೆ. ಹಾಗಾಗಿ ನಾನು ಹೇಳುವುದು ಇಷ್ಟೆ, ನೆಮ್ಮದಿ ಕೇಂದ್ರವನ್ನು ಕ್ಲೋಸ್ ಮಾಡುವುದು ಉತ್ತಮ.

ಶ್ರೀ ಅಭಯಚಂದ್ರ ಜೈನ್ : ಈ ನೆಮ್ಮದಿ ಕೇಂದ್ರದಿಂದ ನೆಮ್ಮದಿ ಕೆಟ್ಟು ಹೋಗಿದೆ.

ಶ್ರೀ ವೈ.ಎಂ. ರುದ್ರೇಶ್‌ಗೌಡ : ಹಳ್ಳಿ ಗಾಡಿನ ಜನ, ಗ್ರಾಮೀಣ ಜನರ ನೆಮ್ಮದಿ ಹಾಳಾಗಿದೆ. ದಯವಿಟ್ಟು ಇದನ್ನು ರದ್ದುಪಡಿಸಬೇಕು.

(ಗೊಂದಲ)

ಶ್ರೀ ರಮಾನಾಥ ರೈ : ಇದು ಪಕ್ಷಾತೀತವಾದಂತಹ ಅಭಿಪ್ರಾಯ ವಾಗಿದೆ. ಅದನ್ನು ರದ್ದುಪಡಿಸಬೇಕು ಎಂಬುದು ಎಲ್ಲಾ ಸದಸ್ಯರ ಅಭಿಪ್ರಾಯ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಹೇಳಲಿ.

(ಗೊಂದಲ)

ಶ್ರೀ ವೈ.ಎಂ. ರುದ್ರೇಶ್‌ಗೌಡ : ಜನಸ್ಪಂದನಾ ಕಾರ್ಯಕ್ರಮದಲ್ಲಿ close ಮಾಡಿ ಎಂದು ರೈತರು ಅರ್ಜಿಯನ್ನು ಕೊಡುತ್ತಿದ್ದಾರೆ.

ಶ್ರೀ ಬಿ. ರಮಾನಾಥ ರೈ : ಇದು ಪಕ್ಷಾತೀತವಾದಂತಹ ಅಭಿಪ್ರಾಯವಾಗಿದೆ.

ಶ್ರೀ ಅಪ್ಪಚ್ಚುರಂಜನ್ : ಸರ್ಕಾರಕ್ಕೆ ಇದರಿಂದ ಕೆಟ್ಟ ಹೆಸರು ಬರುತ್ತದೆ. ಜನರು ಎಲ್ಲಾ ಶಾಸಕರ ನಮ್ಮ ನೆಮ್ಮದಿಯನ್ನು ಕೆಡಿಸುತ್ತಿದ್ದಾರೆ. ಅದನ್ನು ರದ್ದುಪಡಿಸಬೇಕು. ಅದು ಸರ್ಕಾರದ ವತಿಯಿಂದ ನಡೆಸು ವಂತಹದ್ದು ಆಗಬೇಕು.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಹೇಳಲಿ.

(ಗೊಂದಲ)

ಅಧ್ಯಕ್ಷರು : ಈ ಬಗ್ಗೆ ನಿನ್ನೆಯೂ ಪ್ರಸ್ತಾಪವಾಗಿದೆ.

(ಗೊಂದಲ)

ಶ್ರೀ ಎಂ.ಪಿ.ಕುಮಾರಸ್ವಾಮಿ: ಜನಸಂಪರ್ಕ ಸಭೆಯಲ್ಲಿ ...

ಅಧ್ಯಕ್ಷರು : ಅವರು ಉತ್ತರವನ್ನು ಹೇಳಲಿ.

ಶ್ರೀ ಸಿ.ಎಂ.ಉದಾಸಿ : ಆಗಬಹುದು. ಅದನ್ನೇ, half an our discussion ನಲ್ಲಿ ತೆಗೆದುಕೊಂಡು ಆಮೇಲೆ ತಾವು ಮಾತನಾಡಿ. ತಾವುಗಳು ನಾನು ಉತ್ತರವನ್ನು ಕೊಟ್ಟಿದನ್ನು ಕೇಳಿದ ಮೇಲೆ ತಮಗೆ ತೃಪ್ತಿಯಾಗದೆ ಇದ್ದರೆ ತಾವು ಮರುಪ್ರಶ್ನೆಯನ್ನು ಕೇಳಿ ಎಂದು ನಾನು ವಿನಂತಿಯನ್ನು ಮಾಡುವುದಕ್ಕೆ ಬಯಸುತ್ತೇನೆ. ನೆಮ್ಮದಿ ಕೇಂದ್ರವನ್ನು ಸರ್ಕಾರಿ-ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲು M/s. Sri Infotech Group ಅನ್ನು ಸ್ಪರ್ಧಾತ್ಮಕ ಟೆಂಡರ್‌ನ ಮೂಲಕ 2006ರಲ್ಲಿ ಆಯ್ಕೆ ಮಾಡಲಾಗಿದೆ. ಈ ಗುಂಪಿನ ಮುಖ್ಯ ಪಾಲುದಾರರಾಗಿ ಶ್ರೀಯಾ ಇನ್ಫೋಟೆಕ್ ಹಾಗೂ ಸಹಪಾಲು ದಾರರಾಗಿ Comat Technology Private Limited ಮತ್ತು Enlack Communication private limited ಇರುತ್ತವೆ. ನೆಮ್ಮದಿ ಕೇಂಧ್ರವು ಗ್ರಾಮೀಣ ಸೇವೆಗಳನ್ನು ಒದಗಿಸುವ ಒಂದು ಸಮಗ್ರ ಕೇಂದ್ರವಾಗಿರುವು ದರಿಂದ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ಮುಂತಾದ ಕೆಲಸವನ್ನು ಈ ಕೇಂದ್ರದಿಂದ ನಿರ್ವಹಿಸಲಾಗುತ್ತಿದೆ. ನೆಮ್ಮದಿಯ ಆಪರೇಟರ್ ಗಳ ಬಗ್ಗೆ ಇವತ್ತು ನೆಮ್ಮದಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುವಂತಹ ಆಪರೇಟರ್‌ಗಳು ಸ್ಥಳೀಯರಾಗಿರುತ್ತಾರೆ. ಹೀಗಾಗಿರುವುದರಿಂದ Comat ಸಂಸ್ಥೆ ವರದಿಯನ್ನು ಮಾಡಿದೆ. ಇವರಿಗೆ ಪ್ರತಿ ತಿಂಗಳು 27ನೇ ತಾರೀಖು ಸಂಬಳವನ್ನು ಕೊಡುವಂತಹ ವ್ಯವಸ್ಥೆಯು ಆಗುತ್ತಿದೆ. ನಿಯಮಾನುಸಾರ ESI, PF, ಮುಂತಾದ ಸೌಲಭ್ಯಗಳನ್ನು ಕೊಡುತ್ತಿರುವುದರಿಂದ ಎಲ್ಲಾ ಆಪರೇಟರುಗಳು ಮೂರು ದಿನಗಳ ಕಾಲ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಹೆಚ್ಚು ವ್ಯವಹಾರವಿರುವ ನೆಮ್ಮದಿ ಕೇಂದ್ರಗಳಲ್ಲಿ ಯೋಜನೆಯ ವ್ಯವಹಾರ ಪ್ರಜ್ಞೆ, ಹಣಕಾಸಿನ ನಿರ್ವಹಣೆ ಮತ್ತು ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸುವಂತಹ ರೀತಿಯಲ್ಲಿ ಅವರಿಗೆ ತರಬೇತಿಯನ್ನು ನೀಡಿದ್ದಾರೆ. ಅವರು ನೆಮ್ಮದಿ ಕೇಂದ್ರದಿಂದ ಪ್ರತಿ ದಿವಸ 6 ಸಲ ಹಾಜರಿಯನ್ನು ಹಾಕಬೇಕಾ ಗುತ್ತದೆ. ಹೀಗಾಗಿ ಅವರ ಲಭ್ಯತೆಯನ್ನು ತೊಂದರೆಗೆ ಒಳಗಾಗುವಂತಹ ಕಾರಣವು ಇಲ್ಲ. ನೆಮ್ಮದಿ ಕೇಂದ್ರದಿಂದ ಒದಗಿಸುವಂತಹ ಸೇವಾಶುಲ್ಕ ದರವನ್ನು ಸರ್ಕಾರವೇ ನಿಗಧಿಪಡಿಸಿದೆ. ಸೇವಾಶುಲ್ಕದಲ್ಲಿ ಪಾಲನ್ನು ಟೆಂಡರ್

ಮುಖೇನ' ನಿಗಧಿಪಡಿಸಲಾಗಿದೆ. ನೆಮ್ಮದಿ ಕೇಂದ್ರ ಒಂದು transaction based revenue sharing ರೂಪದಲ್ಲಿ ಮಾಡಿದ್ದೇವೆ. ಇದನ್ನು ಟೆಂಡರ್‌ನಲ್ಲಿ ಬಂದ ದರಗಳ ಪ್ರಕಾರವೇ ಖಾಸಗಿ ಪಾಲುದಾರರಿಗೆ ಹಣವನ್ನು ಪಾವತಿ ಮಾಡಿಸಲಾಗುತ್ತದೆ. ಈ ಎಲ್ಲಾ ವಿಚಾರ ಇರುವುದರಿಂದ ನೆಮ್ಮದಿ ಕೇಂದ್ರದಿಂದ ಜನರಿಗೆ ಬಹಳಷ್ಟು ಉಪಯೋಗವಾಗಿದೆ ಎನ್ನುವ ದಾಖಲೆಗಳು ನಮಗೆ ಲಭ್ಯವಾಗಿದೆ. ಕೆಲವು ಸಂದರ್ಭದಲ್ಲಿ.....

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ನಿಮ್ಮ ಹಾಗೆ ನಾನು ಕೂಡ ಸದಸ್ಯನಾಗಿದ್ದೇನೆ. ನಾನು ಮಂತ್ರಿಯಾಗಿ ಉತ್ತರವನ್ನು ಕೊಡುವುದು ಬೇರೆ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಖಂಡಿತವಾಗಿಯೂ ಅದು ಬೇಕಾಗಿಲ್ಲ.

ಅಧ್ಯಕ್ಷರು : Please ಕುಳಿತುಕೊಳ್ಳಿ.

ಶ್ರೀ ಸಿ.ಎಂ. ಉದಾಸಿ : ನಾನು ಮಂತ್ರಿಯಾಗಿ ಉತ್ತರವನ್ನು ಕೊಡುವುದು ಬೇರೆ.

ಅಧ್ಯಕ್ಷರು : ಅವರು ಉತ್ತರವನ್ನು ಕೊಟ್ಟು ಮುಗಿಸಲಿ.

ಶ್ರೀ ಸಿ.ಎಂ. ಉದಾಸಿ : ನಾನು ಒಬ್ಬ ವಿಧಾನಸಭಾ ಕ್ಷೇತ್ರದ ಸದಸ್ಯನಾಗಿದ್ದೇನೆ.

ಅಧ್ಯಕ್ಷರು : ಅವರು ಉತ್ತರವನ್ನು ಮುಗಿಸಲಿ.

ಶ್ರೀ ಸಿ.ಎಂ. ಉದಾಸಿ : ನಾನು ಉತ್ತರ ಕೊಟ್ಟ ಮೇಲೆ ತಾವು ಮಾತನಾಡಿ.

ಅಧ್ಯಕ್ಷರು : ಇದರ ಬಗ್ಗೆ ನಿನ್ನೆಯು ಕೂಡ ಸಾಕಷ್ಟು ಪ್ರಸ್ತಾಪವಾಗಿದೆ.

ಶ್ರೀ ಸಿ.ಎಂ. ಉದಾಸಿ : ನಾನು ಇಲ್ಲಿ ಹೇಳುತ್ತಿರಬೇಕಾದಾಗ ..

ಅಧ್ಯಕ್ಷರು : ಅವರು ಉತ್ತರ ಮುಗಿಯಲಿ, ತಾವು ಆಮೇಲೆ ಕೇಳಿ.

ಶ್ರೀ ಸಿ.ಎಂ. ಉದಾಸಿ : ನಾನು ವಿಧಾನಸಭಾ ಕ್ಷೇತ್ರದ ಸದಸ್ಯನಾಗಿ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿದ್ದೇನೆ. ನಿಮಗೆ ಬಂದಿರುವ ಅನುಭವಗಳು ಕೆಲವು ಏನಾಗಿದೆ. ಇವತ್ತು ಅವೆಲ್ಲವನ್ನು ತಿದ್ದುಪಡಿ ಮಾಡಿರುವಂತಹ ಕೆಲಸವನ್ನು ಸಮರ್ಥವಾಗಿ ಮಾಡಿರುವುದರಿಂದ ಅನೇಕ ವಿಚಾರಗಳನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದರ ಮೇಲೆ ತಾವು ಕೇಳಿ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು : ಮಾನ್ಯ ಕುಮಾರಸ್ವಾಮಿಯವರೆ ತಾವು ಕುಳಿತುಕೊಳ್ಳಿ, ಮಾನ್ಯ ಸಚಿವರು ಉತ್ತರವನ್ನು ಹೇಳುವಾಗ ನೀವು ಮಧ್ಯದಲ್ಲಿ ಮಾತನಾಡಬಾರದು.

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ನಾನು ಹೇಳಿದ ಮೇಲೆ ತಾವು ಕೇಳಿ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಗ್ರಾಮಾಂತರ ಪ್ರದೇಶದವರಿಗೆ ಅನುಕೂಲವಾಗಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರೆ, ಉತ್ತರವನ್ನು ಹೇಳಿ, ಅವರು ನಂತರ ಮಾತನಾಡಲಿ. ಮಧ್ಯದಲ್ಲಿ ಏನು ಮಾತನಾಡುತ್ತೀರಿ.

ಶ್ರೀ ಸಿ.ಎಂ. ಉದಾಸಿ : ನೀವು ಮಧ್ಯದಲ್ಲಿ ಮಾತನಾಡುವುದರಲ್ಲಿ ಏನರ್ಥವಿದೆ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಗ್ರಾಮಾಂತರ ಜನರಿಗೆ ಇದರಿಂದ ಅನುಕೂಲವಾಗುವುದಿಲ್ಲ ಸಾರ್ ನಾನು ಕುಳಿತುಕೊಳ್ಳುವುದಿಲ್ಲ.

ಅಧ್ಯಕ್ಷರು : ಅವರ ಕಷ್ಟವನ್ನು ಬೇರೆ ರೀತಿಯಲ್ಲಿ ಕೇಳೋಣ.

ಎಂ.ಪಿ.ಕುಮಾರಸ್ವಾಮಿ: ನಾನು ಜನಸಂಪರ್ಕ ಸಭೆಯಲ್ಲಿ ಕೇಳಿದ್ದೇನೆ.

ಅಧ್ಯಕ್ಷರು : ಅವರು ಉತ್ತರವನ್ನು ಹೇಳಲಿ.

ಎಂ.ಪಿ. ಕುಮಾರಸ್ವಾಮಿ : ಜನ ಸಮಪರ್ಕ ಸಭೆಯಲ್ಲಿ ಅದೆ ಆಗುತ್ತದೆ.

ಶ್ರೀ ಸಿ.ಎಂ. ಉದಾಸಿ : ಒಂದು ನಿಮಿಷ ತಾಳಿ. ಅವರುಗಳು ತಾಲ್ಲೂಕು ಕಛೇರಿಗೆ ಬರುವಂತಹ ಅವಶ್ಯಕತೆ ಇಲ್ಲ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಅವರ service ಸರಿಯಾಗಿರುವುದಿಲ್ಲ.

ಅಧ್ಯಕ್ಷರು : ಮಾನ್ಯ ಕುಮಾರಸ್ವಾಮಿಯವರೆ, ಕುಳಿತುಕೊಳ್ಳಿ.

ಶ್ರೀ ಸಿ.ಎಂ. ಉದಾಸಿ : ಎಲ್ಲಾ ವಿಧವಾದ ಪ್ರಮಾಣ ಪತ್ರಗಳನ್ನು, ಜಾತಿ ಪತ್ರಗಳನ್ನು ಹೋಬಳಿ ಮಟ್ಟದಲ್ಲಿ ಕೊಡುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. 43 ವಿವಿಧ ಸೇವೆಗಳನ್ನು ನೀಡಲಾಗುತ್ತಿದೆ. ನೆಮ್ಮದಿ ಕೇಂದ್ರವು ಸ್ಥಾಪನೆಯಾದ ನಂತರ ....

(ಗೊಂದಲ)

ಶ್ರೀ ಸಿ.ಎಂ.ಉದಾಸಿ : ನಾನು ಉತ್ತರವನ್ನು ಹೇಳುವುದಕ್ಕೆ ಒಂದು ನಿಮಿಷ ಬಿಡಿ.

ಅಧ್ಯಕ್ಷರು : ಮಾನ್ಯ ಮಂತ್ರಿಗಳ ಉತ್ತರವು ಮುಗಿಯಲಿ. ಆಮೇಲೆ ತಾವು ಮಾತನಾಡಿ. ಅವರು ಉತ್ತರವನ್ನು ಹೇಳಿದ ಮೇಲೆ ತಾವು ಕೇಳಿ.

ಶ್ರೀ ಸಿ.ಬಿ. ಸುರೇಶ್ ಬಾಬು : Comat ಸಂಸ್ಥೆಗೆ ಕೊಟ್ಟಿರುವುದು ತುಂಬಾ ತಪ್ಪು. ಜನರು ಸುಮ್ಮನೆ 200 ರಿಂದ 300 ರೂಪಾಯಿಗಳನ್ನು ಡೈಲಿ ಖರ್ಚುಮಾಡಿಕೊಂಡು ಅವರ ನೆಮ್ಮದಿಯನ್ನು ಹಾಳು ಮಾಡುತ್ತಿದ್ದಾರೆ. ನಿಮ್ಮ ನೆಮ್ಮದಿ ಕೇಂದ್ರದಲ್ಲಿ ಕರೆಂಟ್ ಸರಿಯಾಗಿ ಇರುವುದಿಲ್ಲ.....

ಅಧ್ಯಕ್ಷರು : ಅವರು ಉತ್ತರವನ್ನು ಹೇಳಲಿ.

ಶ್ರೀ ಸಿ.ಬಿ. ಸುರೇಶ್ ಬಾಬು: ನಾನು ಸದನದ ಪರವಾಗಿ ದಯಮಾಡಿ ಕೈಮುಗಿದು ಕೇಳಿಕೊಳ್ಳುತ್ತೇನೆ. ದಯಮಾಡಿ ಅದನ್ನು ಜಿಲ್ಲಾಡಳಿತಕ್ಕೆ ವಹಿಸಿಬಿಡಿ.

(ಗೊಂದಲ)

ಅಧ್ಯಕ್ಷರು : ಅವರು ಉತ್ತರವನ್ನು ಹೇಳುವುದಕ್ಕೂ ಅವಕಾಶವನ್ನು ಕೊಡದೆ ಇದ್ದರೆ ಹೇಗೆ?

ಶ್ರೀ ಎಸ್. ಸುರೇಶ್ ಕುಮಾರ್ : ಅವರಿಗೆ ಉತ್ತರ ಹೇಳುವುದಕ್ಕೆ ಅವಕಾಶ ಕೊಡಲಿಲ್ಲವೆಂದರೆ ಹೇಗೆ? ಅವರಿಗೆ ಏನು ಬೇಕು?

ಅಧ್ಯಕ್ಷರು : ಉತ್ತರವನ್ನು ಹೇಳಲಿ.

ಶ್ರೀ ಸಿ.ಎಂ. ಉದಾಸಿ : ನಾನು ಉತ್ತರವನ್ನು ಹೇಳಿದ ಮೇಲೆ ತಾವು ಕೇಳಿ. ಈಗ 43 ವಿವಿಧ ಸೇವೆಗಳನ್ನು ನೀಡಲಾಗುತ್ತಿದೆ. ನೆಮ್ಮದಿ ಕೇಂದ್ರವು ಸ್ಥಾಪನೆಯಾದ ನಂತರ ಈ ಕೆಳಕಂಡ ಸೇವೆಯನ್ನು ಒದಗಿಸಲಾಗಿದೆ. ವೃದ್ಧಾಪ್ಯ ವೇತನ ಅರ್ಜಿಗಳು, ಜಾತಿ/ಆದಾಯದ ಪ್ರಮಾಣಪತ್ರಗಳು, 2006ನೇ ಇಸವಿಯಲ್ಲಿ 24,185, 2007ರಲ್ಲಿ 12,47,440, 2008ನೇ ವರ್ಷದಲ್ಲಿ 20,88,912, 2009ನೇ ಇಸವಿಯಲ್ಲಿ 66,44,551 2010ನೇ ಜನವರಿ 18ನೇ ತಾರೀಖಿನವರೆಗೆ 2,47,145 ಮಾಹಿತಿಯನ್ನು ಕೊಡಬೇಕಾದಂತಹ ಪ್ರಮಾಣಪತ್ರವನ್ನು ಕೊಡುವಂತಹ ಕೆಲಸವು ಆಗಿದೆ. ನೆಮ್ಮದಿ ಕೇಂದ್ರದ ಪಹಣಿಯ ವಿಚಾರದಲ್ಲಿ 2006ರಲ್ಲಿ 5,46,000 ಜನರಿಗೆ ಕೊಟ್ಟಾಗಿದೆ. 2007ನೇ ವರ್ಷದಲ್ಲಿ 57,52,000 ಜನರಿಗೆ ಕೊಡಲಾಗಿದೆ. 2008ನೇ ವರ್ಷದಲ್ಲಿ 80,75,000 ಜನರಿಗೆ ಕೊಡಲಾಗಿದೆ. 2009ನೇ ವರ್ಷದಲ್ಲಿ 1,77,000 ಜನರಿಗೆ ಪಹಣಿಯಲ್ಲಿ ಕೊಡುವಂತಹ ಕೆಲಸವು ಸಹ ಆಗಿದೆ. ಇವತ್ತು 2010ನೇ ಜನವರಿಯಲ್ಲಿ 9,15,000 ಜನರಿಗೆ ಪಹಣಿ ಪತ್ರವನ್ನು ನೀಡುವಂತಹ ಕೆಲಸವು ನಡೆಯುತ್ತಿದೆ. ನಿನ್ನೆ ಇದರ ಬಗ್ಗೆ

ಚರ್ಚೆಯಾಗುವಂತಹ ಸಂದರ್ಭದಲ್ಲಿ ತಾವು ಈ ಬಗ್ಗೆ ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಿ ಎಂದು ಕೇಳಿದ್ದೀರಿ. ಒಂದು ಮಾತನ್ನು ನಿನ್ನೆ ಮಾತನಾಡುವಂತಹ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದಿರುವಂತಹ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಇದರಿಂದ ಕೋಟ್ಯಾಂತರ ರೂಪಾಯಿಗಳು ಪ್ರತಿ ದಿವಸ ಲೂಟಿ ಹೊಡೆಯುತ್ತಿದ್ದಾರೆನ್ನುವಂತಹ ಮಾತನ್ನು ಅವರುಗಳು ಆಡಿದರು. ಇಲ್ಲಿ ಬರುತ್ತಿರುವಂತಹ ಆದಾಯವನ್ನು ನೋಡಿದಾಗ ಇವತ್ತು ರಾಜ್ಯಸರ್ಕಾರದ ಪಾಲಿಗೆ 6 ಕೋಟಿ ರೂಪಾಯಿಗಳು, ಗುತ್ತಿಗೆದಾರರ ಪಾಲಿಗೆ 7 ಕೋಟಿ 55 ಲಕ್ಷ ರೂಪಾಯಿಗಳು ಮಾತ್ರ ಹಣ ಸಂದಾಯವಾಗಿರುವ ಬಗ್ಗೆ ದಾಖಲಾತಿಯಿಂದ ನಾನು ಹೇಳುವುದಕ್ಕೆ ಬಯಸುತ್ತೇನೆ. ಹೀಗೆಲ್ಲ ಇರಬೇಕಾದರೆ ....(ಗೊಂದಲ)

ಅಧ್ಯಕ್ಷರು : ಅವರು ಉತ್ತರವನ್ನು ಹೇಳಲಿ, ನೀವು ಅನಂತರ ಕೇಳಿ.

ಶ್ರೀ ಸಿ.ಎಂ.ಉದಾಸಿ: ನಾನು ದಾಖಲೆ ಸಮೇತ ಮಾತನಾಡುತ್ತಿದ್ದೇನೆ. ಇಲ್ಲಿ ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಹೊಸ ವ್ಯವಸ್ಥೆ ಏನು ಮಾಡಿದ್ದಾರೆಂದರೆ ಈಗ ಜಿಲ್ಲಾಧಿಕಾರಿಗಳಿಗೆ 2 ಲಕ್ಷ ರೂಪಾಯಿಗಳ ಹಣವನ್ನು ಅಲ್ಲಿ ಉಸ್ತುವಾರಿ ನೋಡಿಕೊಳ್ಳುವಾಗ ಬರಬಹುದಾದಂತಹ ತೊಂದರೆಗಳ ನಿವಾರಣೆಗಾಗಿ ಹಣವನ್ನು ಮುಂಗಡವಾಗಿ ಕೊಡುವಂತಹ ವ್ಯವಸ್ಥೆಯನ್ನು ಮಾಡಿ, ನೆಮ್ಮದಿ ಕೇಂದ್ರದ ಸುಗಮ ನಿರ್ವಹಣೆಗಾಗಿ ಮುಖ್ಯವಾಗಿ ತೊಡಕಾಗಿರುವಂತಹ ವಿದ್ಯುತ್ ಸರಬರಾಜು, ಕೆಲವು ಕೇಂದ್ರಗಳಲ್ಲಿ ನುರಿತ ಆಪರೇಟರ್‌ಗಳ ಕೊರತೆ ಇಂಟರ್‌ನೆಟ್ connectivity, ಲೇಖನಾ ಸಾಮಗ್ರಿಗಳು ಮತ್ತು ಪ್ರಿಂಟರ್ ಕಾರ್ಟ್‌ರಿಡ್ಜ್ ಮುಂತಾದ ಮೂಲಭೂತ ಸೌಕರ್ಯಗಳ ಕೊರತೆ ಇದೆಯೆಂದು ಇಲಾಖೆಯ ಗಮನಕ್ಕೆ ಬಂದಿದ್ದು, ಅವುಗಳನ್ನು ನಿವಾರಿಸಲು ಹಾಗೂ ನೆಮ್ಮದಿ ಕೇಂದ್ರಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸಲು ಅನುವಾಗಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ ಎಂದು ಇಲ್ಲೇ ಹೇಳುವುದಕ್ಕೆ ಬಯಸುತ್ತೇನೆ.

1) ಎಲ್ಲಾ ನೆಮ್ಮದಿ ಕೇಂದ್ರಗಳಿಗೂ ಯು.ಪಿ.ಎಸ್. ಗಳನ್ನು ಅಳವಡಿಸಲಾಗಿದೆ.

2) ಅಧಿಕ ಕಾರ್ಯ ಒತ್ತಡವಿರುವ 201 ಟೆಲಿಸೆಂಟರ್‌ಗಳಿಗೆ ಜನರೇಟರ್‌ಗಳನ್ನು ಒದಗಿಸಲಾಗಿದೆ.

3) 422 ಟೆಲಿಸೆಂಟರ್‌ಗಳಲ್ಲಿ ಹೊಸದಾದ ಅಧಿಕ ವಿದ್ಯುಚ್ಛಕ್ತಿ ನೀಡುವ ಸಾಮರ್ಥ್ಯವುಳ್ಳ ಬ್ಯಾಟರಿಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ.

4) ನೆಮ್ಮದಿ ಕೇಂದ್ರಗಳಲ್ಲಿ ವಿದ್ಯುತ್ ಸುಧಾರಣೆಗಾಗಿ ಕ್ರಮ ಕೈಗೊಳ್ಳಲು ಪ್ರಾಯೋಗಿಕವಾಗಿ ರಾಜ್ಯದ ತೀರಾ ಹಿಂದುಳಿದ ಜಿಲ್ಲೆಗಳಲ್ಲಿರುವ 10 ನೆಮ್ಮದಿ ಕೇಂದ್ರಗಳಿಗೆ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗಿದೆ.

ಈ ಎಲ್ಲಾ ಸುಧಾರಣೆಗಳನ್ನು ಮಾಡುವುದರ ಜೊತೆಗೆ ಇವತ್ತು ಜಿಲ್ಲಾಧಿಕಾರಿಗಳು ನೆಮ್ಮದಿ ಕೇಂದ್ರಗಳ ಮೇಲ್ವಿಚಾರಣೆಗಾಗಿ ಹೆಚ್ಚಿನ ಅಧಿಕಾರ ವನ್ನು ನೀಡಲಾಗಿದೆ. ಹೀಗಿರುವುದರಿಂದ ಇವತ್ತು ವ್ಯವಸ್ಥೆಯಲ್ಲಿ ಬದಲಾವಣೆ ಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ದಯವಿಟ್ಟು ಮಾನ್ಯ ಸದಸ್ಯರು ಎಲ್ಲಿ ಸಮಸ್ಯೆಯಾಗಿದೆ ಎಂಬುದನ್ನು ಇಲಾಖೆಯವರು ಗಮನಕ್ಕೆ ತಂದರೆ ಅದಕ್ಕೆ ಸೂಕ್ತ ಕ್ರಮವನ್ನು ಕೈಗೊಳ್ಳುವುದು. ಆ ಬಗ್ಗೆ ಕೂಡಲೇ ಕ್ರಮವನ್ನು ಕೈಗೊಳ್ಳುತ್ತೇನೆಂಬ ಮಾತುಗಳನ್ನು ಅವರು ಹೇಳಿದ್ದಾರೆ. ಇದರ ಬಗ್ಗೆ ತಮಗೆ ತೃಪ್ತಿಯಾಗದಿದ್ದರೆ ತಾವು ಕೈಗೊಳ್ಳುವಂತಹ ತೀರ್ಮಾನಕ್ಕೆ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ.

ಶ್ರೀ ಎಂ.ಪಿ. **ಅಪ್ಪಚ್ಚುರಂಜನ್** : ಮಾನ್ಯ ಅಧ್ಯಕ್ಷರೆ, ನೆಮ್ಮದಿ ಕೇಂದ್ರದಿಂದ ಜನರ ನೆಮ್ಮದಿ ಕೆಟ್ಟಿದೆ ಎಂದು ಇದು ನಮಗೆಲ್ಲರಿಗೂ ತಿಳಿದಿರುವಂತಹ ವಿಚಾರವಾಗಿದೆ. ಅದನ್ನು ಸರ್ಕಾರವೇ ಏತಕ್ಕಾಗಿ ತೆಗೆದು ಕೊಳ್ಳಬಾರದು. ಇದರಿಂದಾಗಿ ರೈತರು ಏನಾದರೂ ಬೆಳೆದಂತಹ ಬೆಳೆಯನ್ನು RTC ಗೆ Entry ಮಾಡುವ ಬಗ್ಗೆ application ಕೊಟ್ಟರೆ minimum 6 ತಿಂಗಳು ಕಾಲ ಬೇಕು. ಅಷ್ಟರವರೆಗೆ ಅದು ವ್ಯವಸಾಯದ ಬ್ಯಾಂಕಿನಲ್ಲಿರ ಬಹುದು ಬೇರೆ ಸಹಕಾರಿ ಬ್ಯಾಂಕ್‌ನಲ್ಲಿ ಸಾಲ ಸಿಗುವಂತಹ ವ್ಯವಸ್ಥೆಯಾಗು ವುದಿಲ್ಲ. ಅದನ್ನು ಸರ್ಕಾರವೇ ತೆಗೆದುಕೊಳ್ಳಬೇಕೆಂದು ನನ್ನ ಒತ್ತಾಯವಾಗಿದೆ. ದಯವಿಟ್ಟು ಅದನ್ನು ಸರ್ಕಾರವೇ ತೆಗೆದುಕೊಳ್ಳಲಿ. ಆ ನೆಮ್ಮದಿ ಕೇಂದ್ರ ಏನು ಯಾರಿಗೆ Tender ಕೊಟ್ಟಿದ್ದಾರೆ ಅದನ್ನು cancel ಮಾಡಬೇಕೆಂದು ತಮ್ಮ ಮುಖಾಂತರ ನಾನು ಒತ್ತಾಯವನ್ನು ಮಾಡುತ್ತೇನೆ.

0.17F-75

(ಗೊಂದಲ)

ಅಧ್ಯಕ್ಷರು : ನಾನು ಮಾನ್ಯ ಕುಮಾರಸ್ವಾಮಿಯವರನ್ನು ಕರೆದಿದ್ದೇನೆ ಅವರು ಮಾತನಾಡಲಿ, ನಂತರ ತಾವು ಮಾತನಾಡಿ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶದವರಿಗೆ ಇದರಿಂದ ತೊಂದರೆಯಾಗುತ್ತದೆ. ನಮ್ಮ ಜನಸಂಪರ್ಕ ಸಭೆಯಲ್ಲಿ ಪ್ರಮುಖ ಸಮಸ್ಯೆ ಎಂದರೆ ಈ ತರಹ ಲೆಕ್ಕಾಚಾರ ನಮಗೆ ಯಾವುದು ಬೇಕಾಗಿಲ್ಲ. ನೆಮ್ಮದಿ ಕೇಂದ್ರದಿಂದ Within 24 hours ನಮಗೆಲ್ಲರಿಗೂ service ಆಗಬೇಕು. ಆ Agency ಯಾರು ನಮಗೆ ಬೇಕಾಗಿಲ್ಲ. ನಮ್ಮ ಸರ್ಕಾರದಿಂದ ನಮಗೆ service ಆಗಬೇಕು. ದಯವಿಟ್ಟು ಜನರು ಎಲ್ಲಿ ಅದನ್ನು ಬಯಸುತ್ತಾರೆ. ಆ place ಗೆ ಅದನ್ನು ಇಟ್ಟರೆ ಒಳ್ಳೆಯದು. ಮಲೆನಾಡು ಗ್ರಾಮಾಂತರ ಪ್ರದೇಶದಲ್ಲಿ ಮೂಲೆಮೂಲೆಗೆ ಒಂದು ಬಸ್ ಸಂಪರ್ಕವಿರುವುದಿಲ್ಲ. ಅಲ್ಲಿಗೆ ಅವರುಗಳು ಹೇಗೆ ಬರುವುದು? ಎಲ್ಲರೂ ಬಿಪಿಎಲ್ ಕಾರ್ಡು ಇರುವವರ ಮನೆಯಲ್ಲಿ ಬೈಕ್ ಇದೆಯೇ? ದಯವಿಟ್ಟು ನೆಮ್ಮದಿ ಕೇಂದ್ರ ನಿಜವಾಗಿಯೂ ನೆಮ್ಮದಿ ಕೇಂದ್ರವಲ್ಲ. ಅದರಿಂದ ಸರಿಯಾಗಿ ಉಪಯೋಗವಾಗುತ್ತಿಲ್ಲ. ಸರ್ಕಾರ ಈ ಬಗ್ಗೆ ಸೂಕ್ತವಾದಂತಹ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಆಯಿತು.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇದರಲ್ಲಿ 2–3 ಪ್ರಮುಖವಾದ ಅಂಶಗಳು ಇವೆ. ಮೊದಲನೆಯದು ಇದು Revenue Department ಗೆ ಬರುತ್ತದೆ. ಆದರೆ ಇವರು ಏಕೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಕೊಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಏಕೆಂದರೆ It is purely Revenue Department ಗೆ ಬರುತ್ತದೆ. ಇದಕ್ಕೆ ಮಾನ್ಯ ರೆವಿನ್ಯೂ ಸಚಿವರು ಮೊದಲನೆಯದಾಗಿ ಉತ್ತರವನ್ನು ಕೊಡಬೇಕು. ಇನ್ನು ಎರಡನೆಯದಾಗಿ ಈಗ ಮಾನ್ಯ ಸಚಿವರು ಹೇಳಿದರು. ಒಟ್ಟು ಆದಾಯವೇ 6 ಕೋಟಿ ರೂಪಾಯಿಗಳು ಅವರಿಗೆ ಕೋಟಿ ರೂಪಾಯಿಗಳು ಎಂದು ಹೇಳಿದರು. 6 ಕೋಟಿ ರೂಪಾಯಿಗಳು ಪ್ರತಿ ದಿನವೋ, ಪ್ರತಿ ತಿಂಗಳೋ, ಪ್ರತಿ ವರ್ಷನೋ ಎಂದು ಹೇಳಬೇಕಲ್ಲಾ, ನೆಮ್ಮದಿ ಕೇಂದ್ರದ ಮೂಲಕ ಇಷ್ಟು ಸೇವೆಯನ್ನು ಕೊಡುತ್ತಿದ್ದಾರಲ್ಲಾ ಇವತ್ತು ನಮ್ಮ ಸೇಡಂ ತಾಲ್ಲೂಕಿನಲ್ಲಿ ಒಂದು ಅವ್ಯವಹಾರವೇ ನಡೆಯಿತು. ನೆಮ್ಮದಿ

ಕೇಂದ್ರದಿಂದ ಬೇಕಾಬಿಟ್ಟಿಯಾಗಿ cast certificate issue ಮಾಡಿಬಿಟ್ಟರು. There was a police case. ಜನರೆಲ್ಲರೂ ನೆರೆದು ಅಲ್ಲಿ police case ಆಗುವಂತಹ ಪರಿಸ್ಥಿತಿ ಬಂತು. ಅದಕ್ಕಾಗಿ ಈ ಕೆಲಸವನ್ನು ಸರ್ಕಾರವೇ ನಡೆಸುವುದು ಸೂಕ್ತ. ಏಕೆಂದರೆ ಇದರಲ್ಲಿ ಬಹಳಷ್ಟು ಬಡವರಿಗೆ ನೀವು caste certificate ನ್ನು ಹಾಗೂ Income Certificate ನ್ನು ಇದರ ಮುಖಾಂತರ ಕೊಡುತ್ತೀರಿ. ಇದರಲ್ಲಿ ಯಾರಾದರೂ ಅಧಿಕಾರಿಗಳು ಇದ್ದರೆ ಅವರು ಸರಿಯಗಿ ವರ್ತನೆಯನ್ನು ಮಾಡದೆ ಇದ್ದರೆ ಅವರಿಗೆ ಏನ್ರಿ ತಪ್ಪಾಗಿದೆ ಎಂದು ಹೇಳಬಹುದು. ನೀವು ಹೊರ ಮೂಲ ಸಂಸ್ಥೆಗಳಿಗೆ ಕೊಟ್ಟರೆ ನಾವು ಯಾರಿಗೆ ಕೇಳಬೇಕು? ಇದೊಂದು ಬಹಳ ಮಹತ್ವವಾಗಿರುವಂತಹ ಒಂದು ಸಂಸ್ಥೆಯಾಗಿದೆ. ಇದರ Service directly public contactನಲ್ಲಿ ಬರುವಂತಹ ಸಂಸ್ಥೆಯಾಗಿರುವುದರಿಂದ ಇದನ್ನು ಸರ್ಕಾರವೇ ನಡೆಸುವುದು ಬಹಳ ಸೂಕ್ತವಾಗಿರುತ್ತದೆ. ಇಲ್ಲವೆಂದರೆ ಗ್ರಾಮೀಣ ಪ್ರದೇಶದಲ್ಲಿ ನೀವು ಸಮನ್ವಯ ಸಮಿತಿಗೆ ಅರ್ಜಿಗಳು ಹೋಗಿ ಅವರು Deputy Commissioner ಹತ್ತಿರ ಹೋಗಿ ಅರ್ಜಿಯನ್ನು ಕೊಡುವುದಕ್ಕಾಗುತ್ತದೆಯೇ? ಮಾನ್ಯ ಅಧ್ಯಕ್ಷರೆ, This is not the way. ಇದರ ಬಗ್ಗೆ ಸರಿಯಾದಂತಹ ನಿರ್ಣಯವನ್ನು ತೆಗೆದುಕೊಂಡಿರುವುದಿಲ್ಲ.

ಅಧ್ಯಕ್ಷರು : ಇದರ ಬಗ್ಗೆ ನೀವು ಎಲ್ಲವನ್ನು ಮಾತನಾಡುವುದಕ್ಕಾಗುವುದಿಲ್ಲ. ನೀವು ಚರ್ಚೆ ಮಾಡುವುದಾದರೆ ಬೇರೆ ರೂಪದಲ್ಲಿ ತನ್ನಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅರ್ಧಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ತಾವು ಬೇರೆ ರೂಪದಲ್ಲಿ ತನ್ನಿ. ಆಗ ನೋಡೋಣ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಅರ್ಧ ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಬೇರೆ ರೂಪದಲ್ಲಿ ತಂದರೆ ಅರ್ಧಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದರು.

ಅಧ್ಯಕ್ಷರು : ಬೇರೆ ಸ್ವರೂಪದಲ್ಲಿ ತನ್ನಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ನೀವೇ ನಿನ್ನೆ ದಿವಸ ಸದನದಲ್ಲಿ ಹೇಳಿದ್ದೀರಿ. ತಾವು ಅರ್ಧಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೀರಿ.

ಅಧ್ಯಕ್ಷರು : ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡುತ್ತೇನೆ. ಅದರ ಬಗ್ಗೆ ಅರ್ಧಗಂಟೆಗಳ ಕಾಲ ಚರ್ಚೆ ಮಾಡೋಣ. ಆಯಿತು. ಡಾ: ಹೆಚ್.ಸಿ. ಮಹದೇವಪ್ಪನವರೆ ಪ್ರಶ್ನೆಯನ್ನು ಕೇಳಿ.

ಮೈಸೂರು ಮಿನರಲ್ಸ್ ಸಂಸ್ಥೆಯ ಮಾರಾಟ ನಿರ್ವಹಣೆ ಬಗ್ಗೆ

10 (37) ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿಧಾನ ಸಭೆಯ ಸಾರ್ವಜನಿಕ ಉದ್ದಿಮೆಗಳ ಸಮಿತಿಯು (COPU) ಮೈಸೂರು ಮಿನರಲ್ಸ್ ಸಂಸ್ಥೆಯ ಮಾರಾಟ ವಿಭಾಗವನ್ನು ಬಲಪಡಿಸಲು ಮಾರಾಟ ನಿರ್ವಹಣೆಯಲ್ಲಿ ಪದವಿ (MBA) ಯನ್ನು ಹೊಂದಿರುವ ಅಧಿಕಾರಿಗಳನ್ನು ಮಾತ್ರ ಮಾರಾಟದ ವಿಭಾಗಕ್ಕೆ ನೇಮಿಸಲು ಶಿಫಾರಸ್ಸು ಮಾಡಲಾಗಿರುವುದು ನಿಜವೇ.

ಆ) ಹಾಗಿದ್ದಲ್ಲಿ, ಇದನ್ನು ಎಂ.ಎಂ.ಎಲ್ ಸಂಸ್ಥೆಯು ಪಾಲಿಸಿದೆಯೇ ಇಲ್ಲದಿದ್ದಲ್ಲಿ ಕಾರಣವೇನು.

ಇ) ಕಬ್ಬಿಣದ ಅದಿರಿನ ಮಾರಾಟದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಯು ಮಾರಾಟ ನಿರ್ವಹಣೆಯಲ್ಲಿ ಪದವಿ (MBA) ಯನ್ನು ಹೊಂದಿದ್ದಾರೆಯೇ (ಅಧಿಕಾರಿಯ ಹೆಸರು ಮತ್ತು ವಿವರ ನೀಡುವುದು)?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಕರ್ನಾಟಕ ವಿಧಾನ ಸಭೆಯ ಸಾರ್ವಜನಿಕ ಉದ್ದಿಮೆಗಳ ಸಮಿತಿ (COPU) 12ನೇ ವಿಧಾನ ಸಭೆಯಲ್ಲಿ ಮಂಡಿಸಿದ ತನ್ನ 115ನೇ ವರದಿಯ ಅಧ್ಯಾಯ II ರ ಕಂಡಿಕೆ 2.1.10 ರಲ್ಲಿ ಈ ಕೆಳಕಂಡ ಶಿಫಾರಸ್ಸು ಗಳನ್ನು ಮಾಡಲಾಗಿದೆ.

"ಮಾರಾಟ ವಿಭಾಗವನ್ನು ಕೂಡಲೇ ಬಲಪಡಿಸುವ ಅಗತ್ಯವಿದೆ. ಮಾರಾಟ ನಿರ್ವಹಣಾ ಕಾರ್ಯದಲ್ಲಿ ಪರಿಣಿತಿ ಹೊಂದಿರುವ ತಜ್ಞರನ್ನು ಮಾರಾಟ ವಿಭಾಗದ ಮುಖ್ಯಸ್ಥರನ್ನಾಗಿ ಮಾಡಿ ನವೀನ ಮಾರಾಟ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಕಂಪನಿಯ ಪ್ರಮುಖ ವ್ಯವಹಾರಗಳು ಮಾರಾಟ ವಿಭಾಗ ಹಾಗೂ ಮಂಡಳಿಯ ಗಮನಕ್ಕೆ ಬರುವಂತೆ ನೋಡಿಕೊಳ್ಳಬೇಕು. ಉತ್ಪಾದನೆ ಹಾಗೂ ಮಾರಾಟ ವಿಭಾಗಗಳಲ್ಲಿ ಪರಸ್ಪರ ಹೊಂದಾಣಿಕೆಯನ್ನು ಬಲಪಡಿಸಬೇಕು. ರಫ್ತು ಕಾರ್ಯದತ್ತ ಹೆಚ್ಚು ಗಮನ ಹರಿಸಿ, ಗಣನೀಯ ರಫ್ತು ಸಾಧನೆ ಮಾಡಬೇಕು".

ಆದರೆ ಸಮಿತಿಯು MBA ಪದವೀಧರರನ್ನು ಮಾತ್ರ ಮಾರಾಟ ವಿಭಾಗಕ್ಕೆ ನೇಮಿಸಬೇಕೆಂಬ ಯಾವುದೇ ಗುರುತರವಾದ ಶಿಫಾರಸ್ಸು ಮಾಡಿರುವುದಿಲ್ಲ.

ಆ) ಮೈಸೂರು ಮಿನರಲ್ಸ್ ಸಂಸ್ಥೆಯ ಮಾರುಕಟ್ಟೆ ವಿಭಾಗದಡಿಯಲ್ಲಿ ಈ ಕೆಳಕಂಡ ಸುಧಾರಣಾ ಕಾರ್ಯಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

i) ಸಮಗ್ರ ಕಬ್ಬಿಣದ ಅದಿರು ಮಾರುಕಟ್ಟೆ ಹಾಗೂ ದರ ನಿಗಧಿ ನೀತಿಯನ್ನು ಸಿದ್ಧಪಡಿಸಲಾಗಿದೆ.

ii) ದೀರ್ಘಾವಧಿ ಒಪ್ಪಂದದಾರರನ್ನು ಹಾಗೂ ಕೈಗಾರಿಕೆ ಬಳಕೆದಾರರನ್ನು ಹೊರತುಪಡಿಸಿ ಇತರರಿಗೆ ಕಬ್ಬಿಣದ ಅದಿರನ್ನು ಮುಕ್ತ ಹಾಗೂ ಪಾರದರ್ಶಕ ಟೆಂಡರ್ ಮುಖಾಂತರ ಮಾರಾಟ ಮಾಡಲಾಗುತ್ತಿದೆ. ಇದರಿಂದ ನಿಗಮವು ತನ್ನ ಉತ್ಪನ್ನಗಳಿಗೆ ಹೆಚ್ಚಿನ ಮೌಲ್ಯವನ್ನು ಗಳಿಸಲು ಅನುಕೂಲವಾಗಿದೆ.

iii) ಟೆಂಡರ್ ಪ್ರಕ್ರಿಯೆ ವೈಜ್ಞಾನಿಕವಾಗಿ ಕಾರ್ಯಗತಗೊಳಿಸಲು ಹಾಗೂ ಉಸ್ತುವಾರಿ ವಹಿಸಲು, ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಲಾಗಿದೆ.

iv) ಕಾರ್ಯಕಾರಿ ಸಮಿತಿಯ ರಚನೆಯಿಂದಾಗಿ ಉತ್ಪಾದನೆ ಮತ್ತು ಮಾರುಕಟ್ಟೆ ಹಾಗೂ ಇತರೆ ವಿಭಾಗಗಳ ಸಮನ್ವಯವನ್ನು ಬಲಪಡಿಸಲಾಗಿದೆ.

v) ಇತರೆ ಖನಿಜಗಳು ಹಾಗೂ ಶಿಲಾ ದಿಮ್ಮಿಗಳ ಮರಾಟ ಮಾಡಲು ಸಹ ಇದೇ ರೀತಿ ಅನುಸರಿಸಿ ಟೆಂಡರ್ ಪ್ರಕ್ರಿಯೆ ಮುಖಾಂತರ ಮಾರಾಟ ಮಾಡಲಾಗುತ್ತಿದೆ.

vi) ರಫ್ತು : ಸಮಿತಿಯ ಶಿಫಾರಸ್ಸಿನಂತೆ ಮೈಸೂರು ಮಿನರಲ್ಸ್ ಸಂಸ್ಥೆಯು ಕಬ್ಬಿಣದ ಅದಿರು ರಫ್ತು ಕಾರ್ಯವನ್ನು ನೇರವಾಗಿ ನಡೆಸಲು ಪೂರ್ವಭಾವಿ ಸಿದ್ಧತೆಗಳನ್ನು ಕೈಗೊಂಡಿದ್ದು, ಏಪ್ರಿಲ್ ಅಂತ್ಯದೊಳಗೆ ಪ್ರಥಮ ಸರಕು ರವಾನೆ ಮಾಡುವ ನಿರೀಕ್ಷೆ ಇದೆ.

ಇ) ಮೈಸೂರು ಮಿನರಲ್ಸ್ ಸಂಸ್ಥೆಯ ಮಾರುಕಟ್ಟೆ ವಿಭಾಗದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವಿವರ:

1) ಶ್ರೀ ಹೆಚ್.ಎಲ್. ಶಿವಾನಂದ, ಜಂಟಿ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ನಿಯೋಜನೆ ಮೇಲೆ ಪ್ರಧಾನ ವ್ಯವಸ್ಥಾಪಕರು ಎಂಬ ಹುದ್ದೆಯಲ್ಲಿ ಮಾರಾಟ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಅನುಭವ : 28 ವರ್ಷ

ವಿದ್ಯಾರ್ಹತೆ : B.E. (Mechanical)

2) ಶ್ರೀ ಚಂದ್ರಶೇಖರ್, ಸಹಾಯಕ ಪ್ರಧಾನ ವ್ಯವಸ್ಥಾಪಕರು(ಇಕ್ಕು)

ಅನುಭವ : 31 ವರ್ಷ

ವಿದ್ಯಾರ್ಹತೆ : M.Sc. (Geology)

ಈ ಮೇಲ್ಕಂಡ ಅಧಿಕಾರಿಗಳು ವ್ಯವಸ್ಥಾಪಕ ನಿರ್ದೇಶಕರ ಅಧೀನ ಮತ್ತು ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಉತ್ತರ ಸತ್ಯಕ್ಕೆ ಬಹಳ ದೂರವಾಗಿರುವಂತಹದ್ದು ಇಲ್ಲಿ Public Undertaking Committee (COPU Committee) ಒಂದು ವರದಿಯನ್ನು 2007ನೇ ಇಸವಿಯಲ್ಲಿ ಕೊಟ್ಟಿದ್ದಾರೆ. Mysore Minerals Ltd., ಒಂದು ಸರ್ಕಾರಿ ಸಂಸ್ಥೆ ಇದರಲ್ಲಿ ನುರಿತ ಮತ್ತು ತಜ್ಞ ಆಡಳಿತಗಾರರು ಇಲ್ಲದೆಯೇ ಖಾಸಗಿ ಕಂಪನಿಯವರು ಲಾಭವನ್ನು

ಮಾಡಿ ಸರ್ಕಾರ ಸಂಬಳಕ್ಕೆ ಹಣ ಇಲ್ಲದೆಯೇ ಪರದಾಡುವಂತಹ ಪರಿಸ್ಥಿತಿಯನ್ನು ಮಾಡಿಕೊಂಡಿದ್ದಾರೆ. ಅದಕ್ಕೆ ತಾವು ನುರಿತಿರುವಂತಹ ಅಧಿಕಾರಿಗಳನ್ನು ಇಲ್ಲಿಗೆ ನೇಮಕ ಮಾಡಬೇಕೆಂದು ಹೇಳಿ 2007ನೇ ಇಸವಿಯಲ್ಲಿಯೇ ಕೊಟ್ಟಿದ್ದಾರೆ. ಇದರ ಬಗ್ಗೆ ವಿಧಾನಸಭೆಯಲ್ಲಿ ವರದಿಯನ್ನು ಮಂಡನೆ ಮಾಡಿದ್ದಾರೆ. ಈ ಎಲ್ಲಾ ವರದಿಗಳನ್ನು ನಮ್ಮ Law Minister ರವರು ನೋಡಲಿ ಎಂದು ಕಳುಹಿಸಿಕೊಟ್ಟಿದ್ದೆ, ಅದರ ಜೊತೆಗೆ ಇಲಾಖೆಯಲ್ಲಿ Cadre and Rules ಇದೆ. Cadre and Recruitment rules ದಾಖಲಾತಿಗಳು ಇಲ್ಲಿದೆ. ಸರ್ಕಾರದ ಸಂಸ್ಥೆಗೆ ನಷ್ಟವಾಗಿಲ್ಲವೆಂದು ಹೇಳುತ್ತಾರೆ. Mysore Sales International Limited ಸಂಸ್ಥೆಗೆ 2003-04 ಹಾಗೂ 2004-05 ನೇ ಇಸವಿಯಲ್ಲಿ ಇವರಿಗೆ ಪತ್ರವನ್ನು ಬರೆದಿದ್ದಾರೆ. MMTC Rate ಏನಿದೆ ಅಲ್ಲಿಯೆ ಆ ರೇಟ್‌ಗೆ ತೆಗೆದುಕೊಂಡು ಲಾಭ ಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಅದಕ್ಕಿಂತ ತುಂಬಾ ಕಡಿಮೆ ರೇಟ್‌ನಲ್ಲಿ ಕೊಟ್ಟು 168 ಕೋಟಿ ರೂಪಾಯಿಗಳನ್ನು ಲಾಸ್ ಮಾಡಿದ್ದೀರಿ, ಎಂದು Public Undertaking Committee ತನ್ನ ವರದಿಯನ್ನು ಕೊಟ್ಟಿದೆ. ಇವರು ಏನು ಆಗಿಲ್ಲವೆಂದು ಹೇಳುತ್ತಿದ್ದಾರೆ, ಇಲ್ಲಿ ಎಲ್ಲಾ ದಾಖಲಾತಿಗಳು ಇವೆ, ಈ ಎಲ್ಲಾ ಘಟನೆಗಳನ್ನು COD ಗೆ ಒಪ್ಪಿಸಿ, ಇಲ್ಲಿ ಎಲ್ಲಾ ದಾಖಲಾತಿಗಳು ಇವೆ. Cadre and Recuitment Rules, Public Undertaking Committee report ಇವರು ಹೇಗೆ ರೇಟ್‌ನ್ನು ಕಡಿಮೆ ಮಾಡಿದ್ದಾರೆ. ಸರ್ಕಾರವು ದರವನ್ನು ಹೇಗೆ ನಿಗದಿ ಮಾಡಿದೆ ಈ ದರಕ್ಕಿಂತ ಎಷ್ಟು ಕಡಿಮೆಗೆ ಕೊಟ್ಟಿದ್ದಾರೆ. 168 ಕೋಟಿ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಗಿದೆ ಎಂದು Public Undertaking Committee submitted its report in 2007. ಇದುವರೆಗೂ ತೆಗೆದುಕೊಂಡಿಲ್ಲ, ಅಧಿಕಾರಿಗಳು ಅನುಭವ ಇಲ್ಲದೆಯೇ ಯಾವ ಯಾವ ಅಧಿಕಾರಿಗಳು ಯಾವ ಯಾವ cadre ನಲ್ಲಿಡಬೇಕೆಂದು Cadre and Recuitment Rules ನಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಎಲ್ಲಾ ದಾಖಲಾತಿಗಳು ಇವೆ. ಈ ಉತ್ತರಕ್ಕೂ ಅವರು ಕೊಟ್ಟ ಉತ್ತರಕ್ಕೂ ಸರ್ಕಾರದಲ್ಲಿರತಕ್ಕಂತಹ ವರದಿ ಮತ್ತು ದಾಖಲೆಗಳಿಗೂ ಸಂಬಂಧವೇ ಇಲ್ಲ. ದಯಮಾಡಿ COD ಯವರು ಈ ಬಗ್ಗೆ enquiry ಮಾಡಲಿ. ದಯವಿಟ್ಟು ಇದನ್ನು COD ಗೆ refer ಮಾಡಿ: ಎಲ್ಲಾ ದಾಖಲಾತಿಗಳನ್ನು ನಿಮಗೆ ಕೊಡುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಸಿ.ಎಂ. ಉದಾಸಿ (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಸದಸ್ಯರು ಕೇಳಿರುವಂತಹ ಇವತ್ತಿನ ಪ್ರಶ್ನೆ ಯಾವುದು ಎನ್ನುವುದನ್ನು ಗಮನಿಸುವ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಮಾನ್ಯ ಮಹದೇವಪ್ಪನವರು ಕೇಳಿರುವಂತಹ ಪ್ರಶ್ನೆ (1) ಕ್ಕೆ ಮಾರಾಟ ವಿಭಾಗಕ್ಕೆ ನೇಮಿಸಲು ಶಿಫಾರಸ್ಸು ಮಾಡಲಾಗಿರುವುದು ನಿಜವೇ ಎಂದು ಅವರು ಕೇಳಿದ್ದಾರೆ. ಹಾಗಿಲ್ಲವೆಂದು ಉತ್ತರವನ್ನು ಕೊಟ್ಟಿದ್ದೇವೆ.

ಪ್ರಶ್ನೆ ಇರುವುದು ಏನೆಂದರೆ, ನಿಮ್ಮ ಕೆಳಕಂಡ ಶಿಫಾರಸ್ಸು ಮಾಡಿದ್ದರಲ್ಲಿ ಏನು ಮಾಡಿದ್ದೀರಿ ಎಂದರೆ, ನುರಿತ ಅಧಿಕಾರಿಗಳನ್ನು ನೇಮಿಸಬೇಕು ಎನ್ನುವುದನ್ನು ಬಿಟ್ಟರೆ ಮತ್ತೆ ಇನ್ನು ಏನೂ ಶಿಫಾರಸ್ಸು ಇಲ್ಲ ಎನ್ನುವುದು ಒಂದು. ಎರಡನೇ ಪ್ರಶ್ನೆ ನಿಮ್ಮದು ಏನಿದೆ ಎಂದರೆ, ಆಗಿದ್ದಲ್ಲಿ ಇದನ್ನು MML ಸಂಸ್ಥೆ ಪಾಲಿಸಿದೆಯೇ ಇಲ್ಲದಿದ್ದಲ್ಲಿ ಕಾರಣವೇನು ಎಂಬುವುದಾಗಿದೆ. ಮೊದಲನೇ ಪ್ರಶ್ನೆ ಇಲ್ಲಿ ಏನೆಂದರೆ, MBA ಅಭ್ಯರ್ಥಿಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಮಾತ್ರ, MBA ಅಭ್ಯರ್ಥಿಗಳನ್ನು ತೆಗೆದುಕೊಂಡಿದ್ದೀರೋ ಇಲ್ಲವೋ ಎಂಬುವ ಪ್ರಶ್ನೆಯನ್ನು ಹೊರತುಪಡಿಸಿ ಬೇರೆ ಏನೂ ಇಲ್ಲ. ಮೂರನೇ ಪ್ರಶ್ನೆ ಏನೆಂದರೆ, ಕಬ್ಬಿಣದ ಅದಿರಿನ ಮಾರಾಟದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವಂತಹ ಅಧಿಕಾರಿಯು ಮಾರಾಟ ನಿರ್ವಹಣೆಯಲ್ಲಿ ಪದವಿಯನ್ನು ಹೊಂದಿದ್ದಾರೆಯೇ ಎಂಬುದು. ಈ ಮೂರು ಪ್ರಶ್ನೆಗಳಲ್ಲಿ ನೀವು ಈಗ ಪ್ರಸ್ತಾಪ ಮಾಡುತ್ತಿರುವ ವಿಷಯ ಇದರಲ್ಲಿ ಅಡಕವಾಗಿಲ್ಲ ಎನ್ನುವ ಅನುಮಾನ ನನಗೆ ಕಾಡುತ್ತಿದೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆ ಹಾಗೂ ಸರ್ಕಾರ ಕೊಟ್ಟಿರುವ ಉತ್ತರ ಇವೆರಡನ್ನೂ ನೋಡಿ ನಾನು ನನ್ನಲ್ಲಿರತಕ್ಕಂತಹ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈಗ COPU ಕಮಿಟಿಗೆ ಸಂಬಂಧಪಟ್ಟಂತೆ "ಮಾರಾಟ ವಿಭಾಗವನ್ನು ಕೂಡಲೇ ಬಲಪಡಿಸುವ ಅಗತ್ಯವಿದೆ. ಮಾರಾಟ ನಿರ್ವಹಣಾ ಕಾರ್ಯದಲ್ಲಿ ಪರಿಣಿತಿ ಹೊಂದಿರುವ ತಜ್ಞರನ್ನು ಮಾರಾಟ ವಿಭಾಗದ ಮುಖ್ಯಸ್ಥರನ್ನಾಗಿ ಮಾಡಿ ನವೀನ ಮಾರಾಟ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ" ಎಂದು ಇದೆ. ಮಾರುಕಟ್ಟೆಯ ಒಳ–ಹೊರವುಗಳ

ಜ್ಞಾನ ಇಲ್ಲದೇ ಇರತಕ್ಕಂತಹವರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. This is not my reading.

ಅಧ್ಯಕ್ಷರು : ಈ ಪ್ರಶ್ನೆ ಇದರಲ್ಲಿ ಇಲ್ಲ ಎಂದು ಅವರು ಹೇಳುತ್ತಿದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಇಲ್ಲ ಏನೂ ಮಾಡಿಲ್ಲವೆಂದು ಅವರು ಹೇಳಿದರು. ಅದಕ್ಕೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ತಮ್ಮ ಪ್ರಶ್ನೆ ಏನಿದೆ ಅದಕ್ಕೆ ಸರಿಯಾದ ಉತ್ತರ ಕೊಟ್ಟಿದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಎಂ.ಬಿ.ಎ. ಮಾಡಿರುವವರಿಗೆ ಕೊಟ್ಟಿಲ್ಲ ಎಂದು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು : ಪ್ರಶ್ನೆಯನ್ನು ತಾವು ನೋಡಿ. ಪ್ರಶ್ನೆಗೆ ಸೀಮಿತವಾದಂತಹ ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಡಾ: ಹೆಚ್.ಸಿ.ಮಹದೇವಪ್ಪ : ನನ್ನ ಪ್ರಶ್ನೆ ಏನೆಂದರೆ, 'MBA ಯನ್ನು ಹೊಂದಿರುವ ಅಧಿಕಾರಿಗಳನ್ನು ಮಾತ್ರ ಮಾರಾಟದ ವಿಭಾಗಕ್ಕೆ ನೇಮಿಸಲು ಶಿಫಾರಸ್ಸು ಮಾಡಲಾಗಿರುವುದು ನಿಜವೇ' ಎಂದು ಕೇಳಿದ್ದೇನೆ. ಇಲ್ಲವೆಂದು ಹೇಳಿದ್ದಾರೆ. ಬೇಕಾದರೆ Public Undertaking Committee Report ಅನ್ನು ತೆಗೆದು ನೋಡಿ. ಇಲ್ಲೇ ಕೊಡುತ್ತೇನೆ.

ಅಧ್ಯಕ್ಷರು : ಆ ವಿಷಯವನ್ನು ಬೇರೆ ರೂಪದಲ್ಲಿ ತರಬೇಕು.

ಡಾ: ಹೆಚ್.ಸಿ.ಮಹದೇವಪ್ಪ : ಕರ್ನಾಟಕ ವಿಧಾನ ಸಭೆಯ ಸಾರ್ವಜನಿಕ ಉದ್ದಿಮೆಗಳ ಸಮಿತಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. "ಮಾರಾಟ ವಿಭಾಗವನ್ನು ಕೂಡಲೇ ಬಲಪಡಿಸುವ ಅಗತ್ಯವಿದೆ. ಮಾರಾಟ ನಿರ್ವಹಣಾ ಕಾರ್ಯದಲ್ಲಿ ಪರಿಣಿತಿ ಹೊಂದಿರುವ ತಜ್ಞರನ್ನು, ಮಾರಾಟ ವಿಭಾಗದ ಮುಖ್ಯಸ್ಥರನ್ನಾಗಿ ಮಾಡಿ ನವೀನ ಮಾರಾಟ ತಂತ್ರಜ್ಞಾನವನ್ನು ಅಳವಡಿಸಿ ಕೊಳ್ಳಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ." ಎಂದು ಇದೆ. ಮಾರಾಟ ವಿಭಾಗದಲ್ಲಿ ಪರಿಣಿತಿ ಹೊಂದಿರುವವರು ಎಂದರೆ ಏನು? M.Sc., (Geology) ಆಗಿರಬೇಕೆ ಅಥವಾ BE (Mechanical) ಆಗಿರಬೇಕೆ?

0.17F-76

ಅಧ್ಯಕ್ಷರು : MBA ಎಂದು specific ಆಗಿ ಏನೂ ಹೇಳಿಲ್ಲ. Please ಓದಿ. ಇದನ್ನು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಡಾ: ಹೆಚ್.ಸಿ.ಮಹದೇವಪ್ಪ : ಇದರಲ್ಲಿ ನನ್ನದು ಏನೂ ಇಲ್ಲ. Recruitment rules ನಲ್ಲಿ ಯಾರ್ಯಾರು ಇರಬೇಕು ಎಂದು ಅವರದೇ ಆದಂತಹದ್ದು ಇರುತ್ತದೆ. ಈ ತರಹ ಮಾಡಿ ಸರ್ಕಾರಕ್ಕೆ 168 ಕೋಟಿ ರೂಪಾಯಿಗಳ ಲಾಸ್, 1,900 ಇದ್ದಿದ್ದನ್ನು ತಿದ್ದಿ 1,200 ಮಾಡಿ 20 ವರ್ಷಕ್ಕೆ ಒಂದು ಕಂಪನಿಗೆ ಕೊಟ್ಟಿದ್ದಾರೆ. ಸರ್ಕಾರಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳ ನಷ್ಟವಾಗುತ್ತದೆ. ಇಲ್ಲಿ ನಾನು ಓದುವುದನ್ನು ಕೇಳಿ. Seniority list of rule A & B, Mysore Minerals Limited. ಅವರೇ ಇಲ್ಲಿ ಮಾಡಿರುವುದು. ಯಾವ ತರಹ ಇರಬೇಕು? ಇದನ್ನು ಅವರೇ ಕೊಟ್ಟಿದ್ದಾರೆ. This is Mysore Minerals Limited, Seniority list.. .. ನೋಡಿ ಇಲ್ಲ. MBA ಇರಬೇಕೆಂದು ಹೇಳಿದ್ದಾರೆ.

ಶ್ರೀ ಎಸ್.ಸುರೇಶ್‌ಕುಮಾರ್ : 'M.Sc.,(Geology) or' ಎಂದು ಇರಬೇಕು. ಎಂದು ಕಾಣಿಸುತ್ತದೆ. ಸರಿಯಾಗಿ ನೋಡಿ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ : 'M.Sc., (Geology), PGDMM ಎಂದು ಕೊಟ್ಟಿದ್ದಾರೆ. ಇಲ್ಲಿ Or ಎಂದು ಎಲ್ಲೂ ಕೊಟ್ಟಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್ : ಅರ್ಧ ಕಟ್ ಮಾಡಿ ನೀವು ಓದುತ್ತಿದ್ದೀರಿ.

ಡಾ: ಹೆಚ್.ಸಿ.ಮಹದೇವಪ್ಪ : ನಾನು ಅರ್ಧ ಕಟ್ ಮಾಡಿ ಓದುತ್ತಿಲ್ಲ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ನನ್ನ ಕಡೆ ಅದನ್ನು ಕೊಟಿ. ಅದರಲ್ಲಿರುವುದನ್ನು ಓದಿ ನಾನು ತೋರಿಸುತ್ತೇನೆ.

(ಗೊಂದಲ)

Dr. H.C. MAHADEVAPPA : That means you are not interested in correcting the things.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್ : You are not interested to give it to me.

ಡಾ. ಹೆಚ್.ಸಿ. ಮಹದೇವಪ್ಪ : Take everything, take Whatever I have got with me.

(ಗೊಂದಲ)

ಅಧ್ಯಕ್ಷರು : ಈಗ ಪ್ರಶ್ನೋತ್ತರ ಸಮಯವಾಗಿರುವುದರಿಂದ ಇದೆಲ್ಲಾ ಬೇಡ. ಬೇಗ ಇದನ್ನು ಮುಗಿಸೋಣ. ಮಾತನಾಡಿ.

(ಗೊಂದಲ)

Sri S. SURESH KUMAR : A Bachelor degree in Science with Chemistry or Geology as one of the Subject or a Degree in Mechanical Engineering or MBA degree of any recognized University. ಇದೇ ರಿಪೋರ್ಟ್‌ನಲ್ಲಿದೆ.

(ಗೊಂದಲ)

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಸುರೇಶ್‌ಕುಮಾರ್‌ರವರೆ, ನೀವು ಇದನ್ನು ಹೇಳಿದ್ದೀರಿ. Public Undertaking Committee ಮೀಟಿಂಗ್ ಮಾಡಿ 168 ಕೋಟಿ ಏಕೆ ಲಾಸ್ ಆಯಿತು? ಕೇಂದ್ರ ಸರ್ಕಾರ ದರ ನಿಗದಿಯನ್ನು ಏಕೆ ಕಡಿಮೆ ಮಾಡಿದರು? ವ್ಯಾಪಾರದ ಒಳ ಹೊರವುಗಳ ಪರಿಜ್ಞಾನ ಇಲ್ಲದೇ ಇರತಕ್ಕಂತಹ ಜನರನ್ನು ಅಲ್ಲಿ ಹಾಕಿರುವುದರಿದ ಸರ್ಕಾರಕ್ಕೆ 120 ಕೋಟಿ ರೂಪಾಯಿಗಳ ಲಾಸ್ ಆಗಿದೆ ಎಂದು 2007ನೇ ಇಸವಿಯಲ್ಲಿ ವರದಿಯನ್ನು ಕೊಟ್ಟಿದ್ದಾರೆ. ಈ ಮನೆಯಲ್ಲಿಯೇ ಮಂಡಿಸಿದ್ದಾರೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತಹ ಮಾತುಗಳಲ್ಲಿ ಹಾನಿಯಾಗಿರುವ ಬಗ್ಗೆ ಇದರಲ್ಲಿ ಪ್ರಶ್ನೆ ಬಂದಿಲ್ಲ. ಅವರು ಪ್ರಶ್ನೆ ಕೇಳಿರುವುದು ಏನೆಂದರೆ, MBA ಪದವಿ ಹೊಂದಿರುವವರಿಗೆ ಮಾತ್ರ ಮೇಲ್ದರ್ಜೆಗೆ ತೆಗೆದುಕೊಂಡು ಹೋಗಬೇಕು ಎನ್ನುವ ಪ್ರಸ್ತಾಪ ಎಲ್ಲಿಯೂ ಇಲ್ಲ. ಪ್ರಶ್ನೆ ಏನಿದೆ ಎಂದರೆ, ಇವತ್ತು ನೇರ ನೇಮಕಾತಿ ಆಗಿಲ್ಲ. ಇಲಾಖೆಗಳಲ್ಲಿ ನೇರ ನೇಮಕಾತಿ ಆಗದೇ ಇರುವುದರಿಂದ ಆಗಿನ ಮೊದಲು ಇರುವಂತಹ ನಿಯಮಗಳ ಪ್ರಕಾರ ಆ ರೀತಿಯ ಹುದ್ದೆಗಳಲ್ಲಿ ಇರಬೇಕಾದರೆ Mechanical Engineer ಗಳನ್ನು,

ಭೂ ವಿಜ್ಞಾನದಲ್ಲಿ ಪದವಿ ಆಗಿರುವವರನ್ನು ತೆಗೆದುಕೊಂಡಿದ್ದಾರೆ. ಇವತ್ತು ಮೇಲ್ದರ್ಜೆಗೇರಿಸುವ ದೃಷ್ಟಿಯಿಂದ ಜೊತೆಗೆ MBA ಇರಬೇಕು ಎಂದು ಸ್ಪಷ್ಟವಾಗಿ ಇಲ್ಲಿ MBA ಇದ್ದರೆ ಮಾತ್ರ ಎಂದು ಹೇಳಲಾಗಿದೆ.

ಡಾ:. ಹೆಚ್.ಸಿ.ಮಹದೇವಪ್ಪ : Public Undertaking Committee report ಓದಿ ಹೇಳಿ. ಏಕೆ ಲಾಸ್ ಆಯಿತು?

(ಗೊಂದಲ)

ಅಧ್ಯಕ್ಷರು : ಇದನ್ನು ಮುಕ್ತಾಯ ಮಾಡೋಣ. ಬೇರೆ ರೂಪದಲ್ಲಿ ಇದನ್ನು ತನ್ನಿ.

(ಗೊಂದಲ)

ಡಾ: ಹೆಚ್.ಸಿ.ಮಹದೇವಪ್ಪ : ಇವರ ಅಧ್ಯಕ್ಷತೆಯಿಂದ ಹಾಗೂ ನಿರ್ಲಕ್ಷತೆಯಿಂದ ಖಾಸಗಿಯವರು ಲಾಭ ಮಾಡಿ ಸರ್ಕಾರಕ್ಕೆ ಸಂಬಳ ಕೊಡುವುದಕ್ಕೆ ಹಣ ಇಲ್ಲದೇ ಇರುವಂತಹ ಪರಿಸ್ಥಿತಿ ಉಂಟಾಗಿದೆ. ಇದನ್ನು ಸರಿ ಮಾಡಿ ಎಂದು ಹೇಳಿದರೆ, ಈ ರೀತಿ ಹೇಳಿದರೆ ಏನು ಮಾಡುವುದು? ಮಾನ್ಯ ಸುರೇಶ್‌ಕುಮಾರ್‌ರವರು ಹಾಗೂ ಮಾನ್ಯ ಉದಾಸಿಯವರು ಅತ್ಯಂತ ಪ್ರೀತಿ-ಗೌರವ ಇರುವಂತಹವರು. Atleast record should be verified. Why the losses have taken place? Who is responsible? MMTC ನಲ್ಲಿ ಏನು ಹೇಳುತ್ತದೆ? MSIL ನಲ್ಲಿ ಕೇಂದ್ರ ಸರ್ಕಾರದ ದರಕ್ಕೆ ಮಾರಾಟ ಮಾಡುತ್ತದೆ ಎಂದರೂ ಸಹ ಏಕೆ ಕೊಡುವುದಿಲ್ಲ? ಇಷ್ಟೆಲ್ಲಾ ಹೇಳಿದರೂ ಸಹ ನೀವು ಮಾತನಾಡುತ್ತಿದ್ದೀರಿ. ನಾವು ಇದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ನಾನು ಬೇರೆಯವರ ರೀತಿಯಲ್ಲಿ ಗಲಾಟೆ ಮಾಡಿ ಹಾಗೆ ಮಾಡಿ, ಹೀಗೆ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. I have given all the necessary documents as to why the loss is being caused to the Government.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಹದೇವಪ್ಪನವರ ಕಳಕಳಿ ಬಗ್ಗೆ ನನಗೆ ಅತ್ಯಂತ ಹೆಮ್ಮೆ ಇದೆ. ಆದರೆ, ಈ ಬಗ್ಗೆ ಪ್ರಶ್ನೆಯನ್ನು ಇವರು ಇದರಲ್ಲಿ ಕೇಳಿದ್ದರೆ ಅದಕ್ಕೆ ಪೂರಕವಾದ ಎಲ್ಲಾ ಮಾಹಿತಿಗಳನ್ನು ಪಡೆದುಕೊಂಡು ಉತ್ತರವನ್ನು ಒದಗಿಸುವುದಕ್ಕೆ ಸಾಧ್ಯತೆ ಇತ್ತು. ಆದ್ದರಿಂದ, ಇವರ ಕಳಕಳಿಯನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕಾದಂತಹ ಕೆಲಸವನ್ನು ಮಾಡುತ್ತೇನೆ. ಮತ್ತೊಂದು ಸಂದರ್ಭದಲ್ಲಿ

ಅವರು ಪ್ರಶ್ನೆ ಮಾಡಿದಾಗ ಇದಕ್ಕೆಲ್ಲಾ ಉತ್ತರವನ್ನು ದೊರೆಯುವಂತೆ ಮಾಡುತ್ತೇವೆ.

ಅಧ್ಯಕ್ಷರು : ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಏನಾದರೂ ಇದ್ದರೆ ಹೇಳಿ.

ಡಾ: ಹೆಚ್.ಸಿ. ಮಹದೇವಪ್ಪ : ಅವರಿಗೆ ಲಾಸ್ ಆಗಿದೆ. Public Undertaking Committee clear ಆಗಿ ರಿಪೋರ್ಟ್ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಬೇಕು.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಸುರೇಶ್‌ಕುಮಾರ್‌ರವರೇ, ನೀವು ಏನು ಹೇಳುತ್ತೀರಿ? You have gone through the report of Public Undertaking Committee. I have given all the documents to you. Explain why you do not want to take action against this? What is this. . . .

(ಗೊಂದಲ)

ಅಧ್ಯಕ್ಷರು : ಇದನ್ನು ಮುಕ್ತಾಯ ಮಾಡಿ ನಾಳೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನೀವು direction ಕೊಟ್ಟಿದ್ದೀರಿ. ಕಮಿಟಿ ರಿಪೋರ್ಟ್ ಬಗ್ಗೆ action taken report ಕೊಡಬೇಕು ಎಂದು ನೀವು direction ಕೊಟ್ಟಿದ್ದಿರಿ. ಆದರೆ, ಇನ್ನೂ action taken report ಬಂದಿಲ್ಲ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ನೀವು ಏನು ಪ್ರಶ್ನೆಯನ್ನು ಕೇಳಿದ್ದಿರಿ ಆ ಪ್ರಶ್ನೆಗೆ ಉತ್ತರವನ್ನು ಕೊಡುವ ಪ್ರಯತ್ನವನ್ನು ಸರ್ಕಾರ ಮಾಡಿದೆ. ಆ ಉತ್ತರಕ್ಕೆ Supplementary question ಕೇಳುವ ಒಂದು ಸಂದರ್ಭದಲ್ಲಿ ಅನೇಕ ಮಾಹಿತಿಗಳನ್ನು ಗಮನಕ್ಕೆ ತಂದಿದ್ದೀರಿ. ಈಗ ಮಾನ್ಯ ಉದಾಸಿ ಯವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅದನ್ನೆಲ್ಲಾ ಪರಿಶೀಲಿಸಿ ಕ್ರಮ

ತೆಗೆದುಕೊಳ್ಳುತ್ತೇವೆ. ಆ ಎಲ್ಲಾ ದಾಖಲೆಗಳನ್ನು ಕೊಡಿ. ನಾವು ಅದನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಇಷ್ಟೆಲ್ಲಾ ಸೇರಿ direction ಕೊಟ್ಟಿದ್ದಕ್ಕೆ, ಇವತ್ತು public Sector Undertakimg Committee report ಮೇಲೆ action taken report ಕೊಡಬೇಕು ಎಂದು ಮೂರು ತಿಂಗಳ ಹಿಂದೆ ನೀವು ಸರ್ಕಾರಕ್ಕೆ Direction ಕೊಟ್ಟಿದ್ದೀರಿ. ಆದರೆ, ಇನ್ನೂ ರಿಪೋರ್ಟ್ ಕೊಟ್ಟಿಲ್ಲ. ನಾನು ಅದೇ ಕಮಿಟಿಯಲ್ಲಿದ್ದೆ. ಈ ಸದನದಲ್ಲಿ ಅದು ಚರ್ಚೆಯಾಯಿತು. ನೂರಾರು ಕೋಟಿ ಹಗರಣ ಆಗಿರುವುದರ ಬಗ್ಗೆ ಚರ್ಚೆ ಯಾಯಿತು. ಮಾನ್ಯ ಅಧ್ಯಕ್ಷರೆ, ಅದರ ಮೇಲೆ action taken report ಕೊಡುವುದಕ್ಕೆ ಸರ್ಕಾರಕ್ಕೆ ಹೇಳಿ. ಇನ್ನು ಮೂರು ತಿಂಗಳುಗಳಲ್ಲಿ action taken report ಕೊಡಬೇಕು ಎಂದು ಸರ್ಕಾರಕ್ಕೆ direction ಕೊಡಲಾಗಿತ್ತು. ಆದರೆ, ಇನ್ನೂ ಕೊಟ್ಟಿಲ್ಲ.

ಶ್ರೀ ಸಿ.ಎಂ. ಉದಾಸಿ : ಈಗ ತಮ್ಮ ಗಮನಕ್ಕೆ ತರುವುದು ಏನೆಂದರೆ, MML ನಲ್ಲಿ ಬೆಂಗಳೂರಿಗೆ ಸಂಬಂಧಪಟ್ಟಂತೆ, 2004-05ರಲ್ಲಿ 31 ಕೋಟಿ 46 ಲಕ್ಷ ರೂಪಾಯಿಗಳ ಲಾಭವಾಗಿದೆ, 2005-06ರಲ್ಲಿ 66 ಕೋಟಿ 39 ಲಕ್ಷ ರೂಪಾಯಿಗಳ ಲಾಭವಾಗಿದೆ, 2006-07ರಲ್ಲಿ 74 ಕೋಟಿ 27 ಲಕ್ಷ ರೂಪಾಯಿಗಳ ಲಾಭವಾಗಿದೆ, 2007-08ರಲ್ಲಿ 173 ಕೋಟಿ 99 ಲಕ್ಷ ರೂಪಾಯಿಗಳ ಲಾಭವಾಗಿದೆ, 2008-09ರಲ್ಲಿ 125 ಕೋಟಿ 31 ಲಕ್ಷ ರೂಪಾಯಿಗಳ ಲಾಭವಾಗಿದೆ ಹಾಗೂ 2009-10ರಲ್ಲಿ ತಾತ್ಕಾಲಿಕ ವರದಿ 89 ಕೋಟಿ ರೂಪಾಯಿಗಳ ಲಾಭವಾಗುತ್ತಿದೆ.

ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಎಷ್ಟು ಆಗಬೇಕಾಗಿತ್ತೋ ಅಷ್ಟು ಲಾಭವಾಗಿಲ್ಲ.

ಶ್ರೀ ಸಿ.ಎಂ.ಉದಾಸಿ : ಈಗ ಹೇಳುತ್ತಿರುವ ಮಾತು ಸತ್ಯ. 2004-05 ಕ್ಕಿಂತ ಹಿಂದಿನ ಮಾಹಿತಿ ಯಾವುದೋ ಇರಬಹುದು.

(ಗೊಂದಲ)

ಅಧ್ಯಕ್ಷರು : ಈಗ ದಾಖಲೆಗಳನ್ನು ಸಬ್‌ಮಿಟ್ ಮಾಡಿ. ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಈಗ ಮುಗಿಸೋಣ. ಈಗ ದಾಖಲೆಗಳನ್ನು ಕೊಡಿ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ

ವಿಷಯವನ್ನು ತಂದು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ. ಸರಿ ಈ ವಿಷಯವನ್ನು ಮುಗಿಸೋಣ. ಈಗ ಮಾನ್ಯ ನಾಡಗೌಡರು ಮಾತನಾಡಿ.

ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಆಗಿರುವ ಚಾಲಕ ಕಂ ನಿರ್ವಾಹಕ ಇವರ ಕಾರ್ಯನಿರ್ವಹಣೆ ಬಗ್ಗೆ

51 (738) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಚಾಲಕ/ಚಾಲಕ ಕಂ ನಿರ್ವಾಹಕ ಇವರುಗಳಿಗೆ ಇಲಾಖೆಯ ವಿವಿಧ ಘಟಕಗಳಿಗೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಂದ ವಿನಾಕಾರಣ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ನೌಕರರ ಸೇವೆಯನ್ನು ಪ್ರತಿಯೊಂದು ಘಟಕದಲ್ಲೂ ಯಾವ ಮಾನದಂಡದ ಮೇಲೆ ಇವರಿಗೆ ಕರ್ತವ್ಯವನ್ನು ನಿರ್ವಹಿಸಲು ಆದೇಶಿಸಲಾಗುತ್ತಿದೆ?

ಇ) ಗುತ್ತಿಗೆ ಆಧಾರದ ಮೇಲೆ ನೇಮಕಾತಿಗೊಂಡ ಚಾಲಕ/ಚಾಲಕ–ಕಂ–ನಿರ್ವಾಹಕ ಇವರುಗಳು ಪ್ರತಿದಿನ ಕಾರ್ಯನಿರ್ವಹಿಸುವ ಅವಕಾಶದಿಂದ ವಂಚಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ರೀತಿ ತಾರತಮ್ಯ ನೀತಿ ಅನುಸರಿಸುತ್ತಿರುವ ಘಟಕಗಳ ವ್ಯವಸ್ಥಾಪಕರುಗಳ ಮೇಲೆ ಸರ್ಕಾರವು ಏನು ಕ್ರಮ ಜರುಗಿಸಲು ಉದ್ದೇಶಿಸಿದೆ?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಆ) ಇ) ಮತ್ತು ಈ)

ಚಾಲಕ ಹಾಗೂ ಚಾಲಕ–ಕಂ–ನಿರ್ವಾಹಕರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುತ್ತಿಲ್ಲವಾದ್ದರಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ್) : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಯಲ್ಲಿ ಸ್ವಲ್ಪ ತಪ್ಪಾಗಿದೆ. ಅದು ಗುತ್ತಿಗೆ ಆಧಾರವಲ್ಲ, Actually, ಅದು Probationary

declare, regular appointment. ಅಲ್ಲಿ ಕೆಲಸ ಮಾಡುತ್ತಿರುವವರಿಗೆ ಪ್ರೊಬೇಷನರಿ ಇನ್ನೂ ಡಿಕ್ಲೇರ್ ಆಗಿಲ್ಲ. ಇವತ್ತಿನವರೆಗೂ ಅವರಿಗೆ ತಾವು ಕೇವಲ 2,000 ರೂ., 2,500 ರೂ.ನಂತೆ ವೇತನ ಕೊಡುತ್ತಿದ್ದೀರಿ. ಅವರುಗಳನ್ನು ದಿನಗೂಲಿ ಕಾಯ್ದೆ ಪ್ರಕಾರ ತೆಗೆದುಕೊಂಡರೂ it is a violation. ಉಲ್ಲಂಟನೆಯಾಗುತ್ತದೋ, ಇಲ್ಲವೋ, Minimum Wages Act ರೀತ್ಯಾ ಅವರಿಗೆ ದಿನವೊಂದಕ್ಕೆ 100 ರೂ. ಕೊಡಲೇಬೇಕು. ತಿಂಗಳಿಗೆ ಅವರುಗಳಿಗೆ ನೀವು 2,300 ರೂ., 2,500 ರೂ. ವೇತನ ಕೊಡುತ್ತಿದ್ದೀರಿ. ನಮ್ಮ ಭಾಗದಿಂದ ಬಂದವರು ನೀವು ಕೊಡುವ ಇಷ್ಟು ವೇತನದಿಂದ ಹೇಗೆ ಜೀವನ ಸಾಗಿಸಲು ಸಾಧ್ಯವಾಗುತ್ತದೆ? ಅವರಿಗೆ ಯಾವುದೇ ತರಹದ ರಿಯಾಯಿತಿಗಳಿಲ್ಲ. ಅದಕ್ಕೋಸ್ಕರ, ವೇತನದಲ್ಲಿರುವ ತಾರತಮ್ಯವನ್ನು ಸರಿಪಡಿಸಬೇಕೆನ್ನುವುದೇ ನನ್ನ ಮುಖ್ಯ ಉದ್ದೇಶವಾಗಿದ್ದು, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅವರ ವೇತನವನ್ನು ಹೆಚ್ಚಳ ಮಾಡಬೇಕು. ತಿಂಗಳಿಗೆ 4,000 ರೂ., 5,000 ರೂ. ವೇತನ ನೀಡಿದಲ್ಲಿ ಅವರು ಬದುಕುತ್ತಾರೆ. ಈ ದಿಸೆಯಲ್ಲಿ ತಾವು ಪ್ರಯತ್ನಿಸಬೇಕೆಂಬ ನನ್ನ ಅಭಿಪ್ರಾಯವನ್ನು ತಮಗೆ ತಿಳಿಯಬಯಸುತ್ತಿದ್ದೇನೆ.

ಶ್ರೀ ಆರ್.ಅಶೋಕ್ : ಸನ್ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವ ಪ್ರಶ್ನೆ ಇಲ್ಲಿಲ್ಲ. ಮಾನ್ಯ ಸದಸ್ಯರಾದ ನಾಡಗೌಡರು ಕೇಳಿರುವ ಪ್ರಶ್ನೆ ಬೇರೆಯೇ ಇದೆ. ಆ ಕುರಿತಂತೆ ನನ್ನ ಬಳಿ ಸರಿಯಾದ ಮಾಹಿತಿ ಇಲ್ಲ. ಅವರು ಪ್ರಸ್ತಾಪಿಸಿರುವಂತೆ ಸಾರಿಗೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರೇನಿದ್ದಾರೆ, ಅವರೆಲ್ಲರೂ ಖಾಯಂ ನೌಕರರಾಗಿದ್ದಾರೆ. ಅವರಿಗೆ ತರಬೇತಿ ಅವಧಿ (training period) ಇದ್ದರೂ ಕಡಿಮೆ ಸಂಬಳ ಕೊಡಲಾಗುತ್ತಿದೆಯೆಂದು ಹೇಳಿದ್ದಾರೆ. ಹಿಂದೆ ಆ ತರಹ ಇತ್ತು. ಆದರೆ, ನಾನು ಬಂದ ನಂತರ 1,000 ರೂ. ಹೆಚ್ಚಳ ಮಾಡಿದ್ದೇನೆ. ನಾನು ಮಂತ್ರಿಸ್ಥಾನ ವಹಿಸಿಕೊಂಡ 3 ತಿಂಗಳಿನಲ್ಲಿಯೇ ಅವರಿಗೆ ಕೊಡುತ್ತಿರುವ ವೇತನ ಸರಿಯಿಲ್ಲವೆಂದು ಒಂದೇ ಸಲ 1,000 ರೂ. Increment ಹೆಚ್ಚು ಮಾಡಿದ್ದೇನೆ, ಜೊತೆಗೆ, 500 ರೂ. ಭತ್ಯೆ ಕೊಡುತ್ತಿದ್ದೇವೆ. ಇದು ಬೆಂಗಳೂರು ಒಳಗೊಂಡಂತೆ ಬೇರೆ ಕಡೆಗಳಲ್ಲಿ ಕೆಲಸ ಮಾಡುತ್ತಿರುವವರಿಗೂ ಇಷ್ಟೇ ಭತ್ಯೆ ಕೊಡುತ್ತಿದ್ದೇವೆ. ಇದರಲ್ಲಿ ಕಮಿಷನ್ ಸಹ ಇದೆ. ಅವರು ಸಂಚರಿಸುವ ಬಸ್ ರೂಟ್‌ಗಳಿಂದ ಸಾರಿಗೆ ಇಲಾಖೆಗೆ ಏನು ಆದಾಯ ಬರುತ್ತದೋ, ಅದರಲ್ಲಿ

ಶೇಕಡ 3ರಷ್ಟು ಕಮಿಷನ್ ಕೊಡುತ್ತಿದ್ದೇವೆ. ಅವರ ನಿವ್ವಳ (net) ಸಂಬಳ ಏನಿದೆ, ಅಷ್ಟನ್ನು ಮಾತ್ರ ಹೇಳುತ್ತಿದ್ದಾರೆ. ಉಳಿದಂತೆ ನಾವು ಇನ್ನಿತರ ಸೌಲಭ್ಯಗಳನ್ನು ಕೊಡುತ್ತಿದ್ದು, ಅದ್ಯಾವುದನ್ನೂ ಹೇಳುತ್ತಿಲ್ಲ. ಅವರುಗಳಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳ ಕುರಿತಂತೆ ತಮಗೆ ಎಲ್ಲಾ ಮಾಹಿತಿಗಳನ್ನೂ ಕಳುಹಿಸಿಕೊಡುತ್ತೇನೆ. ಅದರ ಬಗ್ಗೆ ತಾವು ಮುಕ್ತವಾಗಿ ನನ್ನೊಂದಿಗೆ ಚರ್ಚಿಸಬಹುದು. ತಾವು ಹೇಳಿರುವಂತೆ, ನಿಜವಾಗಿಯೂ ನೀಡುತ್ತಿರುವ ವೇತನದಲ್ಲಿ ತಾರತಮ್ಯವಾಗಿದ್ದರೆ, ಮತ್ತು 100% minimum wages ಏನಿದೆ, ಅದಕ್ಕಿಂತಲೂ ಕಡಿಮೆ ಕೊಡುತ್ತಿದ್ದರೆ, ಅದು ಸರಿ ಇರುವುದಿಲ್ಲ, ತಪ್ಪು ಇದ್ದರೆ ಸರಿಪಡಿಸುವ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ : ತಾವು ಸಾರಿಗೆ ಮಂತ್ರಿಯಾದ ಬಳಿಕ ಪ್ರತಿ ಸಲ ಬಜೆಟ್ ಅಧಿವೇಶನ ಬಂದಾಗಲೂ ಜಿಲ್ಲಾವಾರು ಮೀಟಿಂಗ್ ಕರೆಯುತ್ತಿದ್ದಿರಿ. ಅದೇ ರೀತಿ ಈ ಸಲವೂ ಕರೆಯಬೇಕು. ಆಗ ಏನೇನು ಸಮಸ್ಯೆಗಳಿವೆಯೋ, ಅವೆಲ್ಲವನ್ನೂ ಚರ್ಚಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಆರ್.ಅಶೋಕ್ : ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಆ ತರಹದ ಸಭೆಯನ್ನು ನಾನು ಕರೆಯುತ್ತಿದ್ದೆ. ಸಾರಿಗೆ ಸಂಸ್ಥೆ ಬೆಳೆಯಬೇಕು. ಅದರಲ್ಲೇನಾದರೂ ತಪ್ಪುಗಳಿದ್ದರೆ, ಸರಿಪಡಿಸಬೇಕೆಂಬುದು ನನ್ನ ಉದ್ದೇಶವಾಗಿದೆ. ಸಂಸ್ಥೆ ಬೆಳವಣಿಗೆಗೆ ತಮ್ಮೆಲ್ಲರ ಸಹಕಾರ ಬೇಕಾಗುತ್ತದೆ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 11.3.2010ರಂದು 4ನೇ ಪಟ್ಟಿಯಲ್ಲಿರುವ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ 115 ಪ್ರಶ್ನೆಗಳ ಪೈಕಿ 94 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅನುಬಂಧ – 1

0.17F-77

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2010ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ ಮತ್ತು 2010ರ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು 31ನೇ ಮಾರ್ಚ್, 2009ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕ ಪರಿಶೋಧನಾ (ರಾಜಸ್ವ ಸ್ವೀಕೃತಿಗಳು) ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

3. ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿಕೆ :

ನಾಗಮಂಗಲ ಶಾಸಕರ ಮೇಲೆ ನಾಗಮಂಗಲ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಿರುವುದು.

. . . . .

ಶ್ರೀ ಕೆ.ಸುರೇಶ್‌ಗೌಡ (ನಾಗಮಂಗಲ) : ಮಾನ್ಯ ಸಭಾಧ್ಯಕ್ಷರೆ, ದಿನಾಂಕ: 26.1.2010ರ ಗಣರಾಜ್ಯೋತ್ಸವ ದಿನದಂದು ನಾಗಮಂಗಲ ಕ್ಷೇತ್ರದ ಶಾಸಕನಾದ ನನ್ನ ಮೇಲೆ ನಾಗಮಂಗಲ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಯೊಂದನ್ನು ದಾಖಲಿಸಿದ್ದಾರೆ. ದೂರು ಈ ರೀತಿ ಇದೆ:

"ಫಿರ್ಯಾದುದಾರರು:

ಸಾಕಪ್ಪ,
ವಲಯ ಅರಣ್ಯಾಧಿಕಾರಿ,
ನಾಗಮಂಗಲ ವಲಯ, ನಾಗಮಂಗಲ,

ಇವರಿಗೆ,
ಆರಕ್ಷಕ ಉಪ ನಿರೀಕ್ಷಕರು ಹಾಗೂ ಠಾಣಾಧಿಕಾರಿಗಳು,
ನಾಗಮಂಗಲ ಆರಕ್ಷಕ ಠಾಣೆ, ನಾಗಮಂಗಲ.

ಮಾನ್ಯರೆ,
ವಿಷಯ : ಅರಣ್ಯ ಮೊಕದ್ದಮೆ ಸಂಖ್ಯೆ: 34/2009–10ರ ಪ್ರಕರಣಕ್ಕೆ ಸಂಬಂಧಿಸಿದಂತೆ ಟ್ರ್ಯಾಕ್ಟರ್ ನಂಬರ್ KA 54 T 529 ಹಾಗೂ ಟ್ರೇಲರ್ ಸಂಖ್ಯೆ......ಇದನ್ನು ದುಂಡಾವರ್ತಿಯಿಂದ ಅಕ್ರಮವಾಗಿ ತೆಗೆದುಕೊಂಡು ಹೋಗಿರುವ ಬಗ್ಗೆ.

.....

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ವಲಯದ ಒಣಕೆರೆ ಹೋಬಳಿ, ಮುದ್ದನಹಳ್ಳಿ ಅರಣ್ಯ ನೆಡುತೋಪಿನಲ್ಲಿ ದಿನಾಂಕ: 25.1.2010 ರಂದು ಅಕ್ರಮವಾಗಿ ನೀಲಗಿರಿ ಕಡ್ಡಿಗಳನ್ನು ಟ್ರಾಕ್ಟರ್ ನಂ. ಕೆಎ 54 ಟಿ 529 ಹಾಗೂ ಟ್ರೇಲರ್ ನಂಬರ್ ಇಲ್ಲ, ಸಾಗಣೆ ಮಾಡುತ್ತಿದ್ದಾಗ ಸಿಬ್ಬಂದಿ ಪತ್ತೆ ಮಾಡಿ ಅರಣ್ಯ ಮೊಕದ್ದಮೆ ಸಂಖ್ಯೆ 34/2009–10ರಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 33, 62 ಮತ್ತು 71(ಎ) ಹಾಗೂ ಕರ್ನಾಟಕ ಅರಣ್ಯ ಕಾನೂನು 1969 ಸೆಕ್ಷನ್ 144 ಮತ್ತು 165ರ ಮೇರೆಗೆ ನೋಂದಾಯಿಸಿ ಕೊಂಡು ಟ್ರಾಕ್ಟರ್ ಮತ್ತು ನೀಲಗಿರಿ ಕಡ್ಡಿಗಳನ್ನು ನಾಗಮಂಗಲ ಕಚೇರಿ ಆವರಣಕ್ಕೆ ತಂದು ಸಂರಕ್ಷಿಸಿಡಲಾಗಿತ್ತು. ಮೊಕದ್ದಮೆಗೆ ಸಂಬಂಧಿಸಿದ ಪ್ರಥಮ ವರ್ತಮಾನ ವರದಿ ಮತ್ತು ಮಹಜರು ವರದಿಯನ್ನು ಗೌರವಾನ್ವಿತ ನಾಗಮಂಗಲದ ನ್ಯಾಯಾಲಯಕ್ಕೆ ಸಲ್ಲಿಸಿ ಪ್ರಕರಣ ದಾಖಲಿಸಿಕೊಂಡು ಕರ್ನಾಟಕ ಅರಣ್ಯ ಕಾಯ್ದೆ ಸೆಕ್ಷನ್ 79(ಎ) ಮೇರೆಗೆ ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ ವಿಭಾಗ, ಮಂಡ್ಯ, ಇವರಿಗೆ ವಾಹನವನ್ನು ಮತ್ತು ವಶಪಡಿಸಿಕೊಂಡಿರುವ ಸ್ವತ್ತನ್ನು ಹಾಜರುಪಡಿಸಿ ಕೋರ್ಟಿನ ವಶದಲ್ಲಿಯೇ ಇಟ್ಟುಕೊಳ್ಳಲು ಅನುಮತಿ ಪಡೆದು ನಮ್ಮ ಕಚೇರಿ ಆವರಣದಲ್ಲಿ ಸಂರಕ್ಷಿಸಿಡಲಾಗಿತ್ತು.

ಈ ಪ್ರಕರಣವು ಮಾನ್ಯ ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯಾಧಿಕಾರಿಯವರ ನ್ಯಾಯಾಲಯ, ಮಂಡ್ಯ ಅವರಲ್ಲಿ ಮೊಕದ್ದಮೆಯ ದಾಖಲಾತಿ ಹೊಂದಿರುತ್ತದೆ. ಹಾಗೂ ವಶಪಡಿಸಿಕೊಂಡಿರುವ ಸ್ವತ್ತು

ಇಲಾಖೆಯ ವಶದಲ್ಲಿಯೇ ಇರುತ್ತದೆ. ದಿನಾಂಕ: 26.1.2010ರ ಮಧ್ಯಾಹ್ನ ಸುಮಾರು 2.00ರಿಂದ 2.15ರ ಅವಧಿಯಲ್ಲಿ ನಾಗಮಂಗಲ ತಾಲ್ಲೂಕಿನ ಮಾನ್ಯ ಶಾಸಕರಾದ ಶ್ರೀ ಕೆ.ಸುರೇಶ್ ಗೌಡರು, ತಾಲ್ಲೂಕು ಪಂಚಾಯಿತಿ ಸದಸ್ಯರಾದ ಶ್ರೀ ಹನುಮಂತ, ಮಾನ್ಯ ಶಾಸಕರ ಆಪ್ತ ಸಹಾಯಕರಾದ ಗೋವಿಂದರಾಜುರವರ ನೇತೃತ್ವದಲ್ಲಿ ಸುಮಾರು 30–40ರ ಸಹವರ್ತಿಗಳ ಗುಂಪು ಕಚೇರಿ ಆವರಣಕ್ಕೆ ಏಕಾಏಕಿ ಪ್ರವೇಶಿಸಿ ಕರ್ತವ್ಯದ ಮೇಲಿದ್ದ ಸಿಬ್ಬಂದಿಯನ್ನು, ನನ್ನನ್ನು, ವನಪಾಲಕ ಶ್ರೀ ಸುಬ್ರಮಣ್ಯ ಹಾಗೂ ಕಚೇರಿಯ ಯಶವಂತ್, ಡಿ.ಎನ್.ಕೃಷ್ಣಮೂರ್ತಿಯವರನ್ನು ಅರಣ್ಯ ಮೊಕದ್ದಮೆ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿ, ಕೊಲೆ ಬೆದರಿಕೆ ಹಾಕಿ, ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿ ನಮ್ಮಗಳ ಎದುರಿನಲ್ಲಿಯೇ ಮಾನ್ಯ ಶಾಸಕರು ಹಾಗೂ ತಾಲ್ಲೂಕು ಪಂಚಾಯಿತಿ ಸದಸ್ಯರುಗಳ ಮಾರ್ಗದರ್ಶನದಲ್ಲಿ ದುಂಡಾವರ್ತಿಯಿಂದ ಮೊಕದ್ದಮೆಗೆ ಸಂಬಂಧಪಟ್ಟ ಟ್ರಾಕ್ಟರ್‌ನಲ್ಲಿದ್ದ ನೀಲಗಿರಿ ಕಡ್ಡಿಗಳನ್ನು ಸ್ಥಳದಲ್ಲಿಯೇ ಸುರಿಸಿ, ಟ್ರಾಕ್ಟರ್ ಅನ್ನು ಚಾಲೂ ಮಾಡಿಕೊಂಡು ಕಚೇರಿಯಿಂದ ಹೊರಗಡೆ ತೆಗೆದುಕೊಂಡು ಹೋಗಿರುತ್ತಾರೆ. ಇದೊಂದು ಕಳ್ಳತನದ ಪ್ರಕರಣವಾಗಿದೆ. ತಳ್ಳಾಟ ಮತ್ತು ನೂಕಾಟದ ಪ್ರಯತ್ನದಲ್ಲಿ ನಾವು ಎಷ್ಟೇ ಪ್ರಯತ್ನ ಪಟ್ಟು ತಡಹಿಡಿದರೂ ಟ್ರಾಕ್ಟರ್ ಕೊಂಡೊಯ್ಯುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ಈ ಕೃತ್ಯವನ್ನು ಗೌರವಾನ್ವಿತ ಶಾಸಕರು ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರ ಸಮಕ್ಷಮ ಅವರ ಮಾರ್ಗದರ್ಶನದಲ್ಲಿ ನಡೆದಿರುವುದು ಕಾನೂನು ಬಾಹಿರವಾಗಿರುತ್ತದೆ. ಅರಣ್ಯ ಮೊಕದ್ದಮೆಗೆ ಸಂಬಂಧಿಸಿದ ಟ್ರಾಕ್ಟರ್ ಕಚೇರಿ ಆವರಣದಲ್ಲಿ ಸಂರಕ್ಷಣೆಯಲ್ಲಿದ್ದು, ಟ್ರಾಕ್ಟರ್ ಅಕ್ರಮವಾಗಿ, ದುಂಡಾವರ್ತಿಯಿದ, ದಬ್ಬಾಳಿಕೆಯಿಂದ ಅಧಿಕಾರಿ ಮತ್ತು ಸಿಬ್ಬಂದಿಗೆ ಪ್ರಾಣ ಬೆದರಿಕೆ ಒಡ್ಡಿ ಕೊಲೆ ಬೆದರಿಕೆ ಹಾಕಿ ತೆಗೆದುಕೊಂಡು ಹೋಗಿರುವುದು ಅಕ್ರಮವಾಗಿರುತ್ತದೆ. ದಯಮಾಡಿ ತೆಗೆದುಕೊಂಡು ಹೋಗಿರುವ ಟ್ರಾಕ್ಟರ್ ಅನ್ನು ಜಪ್ತಿ ಮಾಡಿ ಇಲಾಖೆಯವರು ಒಪ್ಪಿಸಿಕೊಡಬೇಕೆಂದು ತಮ್ಮನ್ನು ಕೋರುತ್ತೇನೆ.

ಈ ಅರಣ್ಯ ಅಪರಾಧ ಪ್ರಕರಣವು ಮಾನ್ಯ ನ್ಯಾಯಾಲಯ, ನಾಗಮಂಗಲ ಹಾಗೂ ಅಧಿಕಾರಿಯುತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ, ಮಂಡ್ಯ ವಿಭಾಗ, ಇಲ್ಲಿ ನೋಂದಾಯಿಸಿರುತ್ತದೆ. ಟ್ರಾಕ್ಟರ್‌ನ ಅಂದಾಜು ಮೊತ್ತ 2,50,000 ರೂ. ಅಗಬಹುದು."

ಈ ರೀತಿ ಕಂಪ್ಲೆಂಟ್ ಕೊಟ್ಟಿದ್ದಾರೆ. ಇದನ್ನು ಸ್ಥಳೀಯ ನಾಗಮಂಗಲದ ಪೊಲೀಸ್ ಠಾಣೆಯವರು ಸುಮಾರು 17.45 ಅಂದರೆ 5.45 ನಿಮಿಷಕ್ಕೆ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಸೆಕ್ಷನ್ 143,149,448,504, 506,353,379 ಎಂದು ಮೊಕದ್ದಮೆ ದಾಖಲಾಗಿದೆ. ಈ ದಾಖಲೆ ಕೊಡುವ ಮುಂಚೆ ಈ ಅಧಿಕಾರಿ ಏನು ಮಾಡಿದ್ದಾರೆಂದರೆ, ಅವರ ಉನ್ನತಾಧಿಕಾರಿ DFO, Mandya, ಇವರಿಂದ ಪರ್ಮಿಶನ್ ತೆಗೆದುಕೊಂಡಿದ್ದಾರೆ. ಕಂಪ್ಲೆಂಟ್ ಕೊಡುವುದು ಅವರ ಮಾರ್ಗದರ್ಶನದಲ್ಲಿ ನಡೆದಿದೆ. ಈ ಅಧಿಕಾರಿ ಕಂಪ್ಲೆಂಟ್ ಕೊಡುವ ಮುನ್ನ ಏನು ಮಾಡುತ್ತಾರೆಂದರೆ, Press meet ಮಾಡುತ್ತಾರೆ. ಪ್ರೆಸ್‌ನವರನ್ನು ಕರೆದು, electronic media ಅವರೆಲ್ಲರನ್ನೂ ಕರೆದು ಶಾಸಕರು ಈ ರೀತಿ ಮಾಡಿದ್ದಾರೆಂದು ಮೊದಲು ಸ್ಟೇಟ್ ಮೆಂಟ್ ಕೊಡುತ್ತಾರೆ. ಆದರೆ, ಶಾಸಕನಾಗಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕಂಪ್ಲೆಂಟ್ ಕೊಟ್ಟಿದ್ದಾರೆ, ಸಂತೋಷ. ಇದಾದ ನಂತರ ಏನಾಯಿತೆಂದರೆ, ನಾನು ವಾಸ್ತವಾಂಶ ಹೇಳುತ್ತಿದ್ದೇನೆ. 26ನೇ ತಾರೀಖಿನಂದು ನಾನು ಸರ್ಕಾರಿ ಕಾರ್ಯಕ್ರಮವಾದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಹೋಗಿದ್ದೆ. ನಾನು ಸರ್ಕಾರಿ ಪ್ರವಾಸಿ ಬಂಗಲೆಯಲ್ಲಿ ತಂಗಿದ್ದೆ. ಸಂಜೆ 5.30 ಗಂಟೆಗೆ ಸುಮಾರು 15 ಜನರು ಹೆಂಗಸರು ಬಂದು ನನ್ನನ್ನು ಎಬ್ಬಿಸಿದರು. ಕಾರಣವೇನೆಂದರೆ, 25ನೇ ತಾರೀಖಿನಂದು ರಾತ್ರಿ 12.00 ಗಂಟೆಯಲ್ಲಿ ನಮ್ಮ ಟ್ರಾಕ್ಟರ್ ಹಿಡಿದುಕೊಂಡಿದ್ದಾರೆ, ಬಿಡಿಸಿಕೊಡಿ ಎಂದರು. ನಮ್ಮ ಕಡೆ ಟೊಮ್ಯಟೋ ಗಿಡಗಳಿಗೆ ಕಡ್ಡಿ ನೆಡುತ್ತಾರೆ. ಇದು ಅರಣ್ಯ ಇಲಾಖೆಯವರು ಮರಗಳನ್ನು ಹರಾಜು ಹಾಕಿ ಕಡಿದುಕೊಂಡು ಯಾರಿಗೋ ಕೊಟ್ಟಿರುತ್ತಾರೆ. ಸಣ್ಣ ಸಣ್ಣ ಕಡ್ಡಿಗಳನ್ನು ಅಲ್ಲಿಯೇ ಬಿಟ್ಟು ಹೋಗಿರುತ್ತಾರೆ. ಆ ಕಡ್ಡಿಗಳು ಅದರ ವ್ಯಾಲ್ಯು maximum ಎಂದರೆ 500 ರೂ. ಇರುತ್ತದೆ. ಅದು ತಪ್ಪು, ಸರಿ ಎಂದು ನಾನು ಹೇಳುವುದಿಲ್ಲ. ಅದಕ್ಕೋಸ್ಕರ ನಾನು ಅವತ್ತು ಬೆಳಿಗ್ಗೆ 7–8 ಗಂಟೆಗೆ ಆ ಅಧಿಕಾರಿಗಳನ್ನು ಪ್ರವಾಸಿ ಮಂದಿರಕ್ಕೆ ಕರೆಸಿ ನಾನು ಹೇಳಿದೆ. ಏನೋ ತಪ್ಪು ಮಾಡಿದಾರೆ, ಅವರಿಗೆ ಒಂದು ಕಾಪೌಂಡ್ ದಂಡ ಹಾಕಿ ಆ ಟ್ರ್ಯಾಕ್ಟರ್ ಬಿಡಿಸಿ ಕೊಡಿ ಎಂದು ಹೇಳಿದೆ. ಎಷ್ಟು ದಂಡ ಹಾಕುತ್ತೀರಿ ಎಂದು ಕೇಳಿದೆ, 5,000 ರೂ. ದಂಡ ಹಾಕುತ್ತೇವೆಂದರು. ಆಯಿತು ನಾನು 5,000 ರೂ. ಕಟ್ಟುತ್ತೇನೆ ನೀವು ಬಿಟ್ಟು ಕಳುಹಿಸಿ ಎಂದು ಹೇಳಿ ಅವರಿಗೆ ಕಾಫಿ ಕುಡಿಸಿ ಕಳುಹಿಸಿ ಕೊಟ್ಟೆ, ತದ ನಂತರ ನಾನು ಗಣರಾಜ್ಯೋತ್ಸವದ

ಸಭೆಯನ್ನು ಮುಗಿಸಿ ಒಂದು ಸರ್ಕಾರಿ ಕಾರ್ಯಕ್ರಮವನ್ನು ಮುಗಿಸಿ ಬರಬೇಕಾದರೆ, ರಸ್ತೆಯಲ್ಲಿ 150 ಜನ ನಿಂತಿದ್ದರು. ನಾನು ಕಾರಿನಲ್ಲಿಯೇ ಕುಳಿತಿದ್ದೆ, ಕಾರು ಬಿಟ್ಟು ಇಳಿದಿಲ್ಲ. ಅವರಿಗೆ ಕೇಳಿದಕ್ಕೆ ಇನ್ನೂ ಟ್ರ್ಯಾಕ್ಟರ್ ಬಿಟ್ಟಿಲ್ಲವೆಂದು ಹೇಳಿದರು. ನಾನು ದೂರವಾಣಿ ಮೂಲಕ ಮಾತನಾಡು ತ್ತೇನೆಂದು ಹೇಳಿ ಬಂದೆ. ಬಂದು ಸ್ವಲ್ಪ ಮಲಗಿದ ನಂತರ ಐದು ಗಂಟೆಗೆ ಟಿ.ವಿ. ಹಾಕಿದರೆ ಟಿ.ವಿ.ಯಲ್ಲಿ ಶಾಸಕರ ವಿರುದ್ಧ ಮೊಕದ್ದಮೆ ಎಂದು ಬರುತ್ತಿದೆ. ಮೊದಲನೆಯದಾಗಿ ನಾನು ಆ ಕಛೇರಿಯ ಕಾಂಪೌಂಡ್‌ಗೆ ಹೋಗಿಯೇ ಇಲ್ಲ. ಕಛೇರಿಗೆ ಹೋಗಿಲ್ಲ. ನನ್ನ ಆಪ್ತ ಸಹಾಯಕ ಒಬ್ಬ ಸರ್ಕಾರಿ ನೌಕರ ತಮಗೆ ಗೊತ್ತಿದೆ. ಆತ ಕಾರಿನಲ್ಲಿಯೇ ಕುಳಿತಿದ್ದಾನೆ. ಆ ತಾಲ್ಲೂಕು ಪಂಚಾಯಿತಿ ಸದಸ್ಯರು ನನ್ನ ಕಾರಿನಲ್ಲಿಯೇ ಇದ್ದಾರೆ, ನಾನು ಅವತ್ತು ಬೆಂಗಳೂರಿಗೆ ಬಂದಿದ್ದೇನೆ. ಎರಡು ಗಂಟೆಗೆ ಗಲಾಟೆ ಆಗಿದೆ ಎಂದು ಹೇಳುತ್ತಾರೆ. ನಾಲ್ಕು ಗಂಟೆಗೆ ಪ್ರೆಸ್ ಮೀಟ್ ಮಾಡುತ್ತಾರೆ. 5.45 ಗಂಟೆಗೆ ಅವರು ಕಂಪ್ಲೇಂಟ್ ಕೊಡುತ್ತಾರೆ. ತದ ನಂತರ ಏನು ಮಾಡುತ್ತಾರೆ, ಮೂರನೇ ದಿವಸ 27ನೇ ತಾರೀಖು ಒಬ್ಬ ನೌಕರರಿಂದ ನನ್ನ ಮೇಲೆ ಕಂಪ್ಲೇಂಟ್ ಕೊಡಿಸುತ್ತಾರೆ, 25ನೇ ತಾರೀಖು ನನಗೆ ಬೈದಿದ್ದರು ಎಂದು. 25ನೇ ತಾರೀಖು ರಾತ್ರಿ ಆಗಿರುವುದು ನನಗೆ ಸಂಬಂಧ ಇಲ್ಲದ್ದು ಅದು ಮಾಡಿಕೊಳ್ಳಲಿ. ಅದಾದ ಮೇಲೆ ನಾನು ಸನ್ಮಾನ್ಯ PCCF ರವರನ್ನು ಭೇಟಿ ಮಾಡುತ್ತೇನೆ. ಈ ತರಹ ನನಗೆ ಹಕ್ಕು ಚ್ಯುತಿ ಆಗಿದೆ ನನಗೆ ಕಾರ್ಯ-ನಿರ್ವಹಿಸುವುದಕ್ಕಾಗುತ್ತಿಲ್ಲ ತನಿಖೆ ಮಾಡಿ ಎಂದು ಹೇಳಿದ್ದೇನೆ. ಇದು ನನ್ನ ಒಬ್ಬನ ಪ್ರಶ್ನೆ ಅಲ್ಲ. ಇದಾದ ಮೇಲೆ ಇವತ್ತು ಬೆಳಿಗ್ಗೆ ನಾನು ತಮಗೆ ಭೇಟಿ ಮಾಡಿ ಹಕ್ಕು ಚ್ಯುತಿ ಮಾಡುತ್ತಿದ್ದೇನೆಂದು ಹೇಳಿದಂತಹ ಸಂದರ್ಭದಲ್ಲಿ ಬೆಳಿಗ್ಗೆ ಟಿ.ವಿ.ಯಲ್ಲಿ ಆ ಅರಣ್ಯಾಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದೇವೆಂದು ಇಲ್ಲಿನ PCCF ರವರು ಹೇಳಿಕೆ ಕೊಟ್ಟಿರುವುದು ಬರುತ್ತಿದೆ. ನನಗೆ ವಿಷಯ ಅದಲ್ಲ. ಸಸ್ಪೆಂಡ್ ಮಾಡುತ್ತೀರೋ ಮತ್ತೊಂದು ಮಾಡುತ್ತೀರೋ ಅದು ಬೇರೆ. ಒಬ್ಬ ಶಾಸಕ ಅಲ್ಲಿರತಕ್ಕಂತಹ ಅಧಿಕಾರಿಗಳು ತಪ್ಪು ಮಾಡಿದಾಗ ಜನರ ಮಧ್ಯೆ ಹಾಗೂ ಅಧಿಕಾರಿಗಳ ಮಧ್ಯೆ ಕೊಂಡಿಯಾಗಿರತಕ್ಕಂಥವನು. ನನ್ನ ಪರಮಾಧಿಕಾರ ಅದು. ನಾನು ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬಹುದೋ ನೀಡಬಾರದಾ? ಒಬ್ಬ ಶಾಸಕನಾಗಿ ನಾನು ಸೂಕ್ತ ಸಲಹೆ ಗಳು ಹಾಗೂ ಮಾರ್ಗದರ್ಶನಗಳನ್ನು ಕೊಡಬಹುದೋ ಕೊಡಬಾರದೋ?

ನಾಳೆ ಕುಡಿಯುವುದಕ್ಕೆ ನೀರಿಲ್ಲವೆಂದು ಯಾರೋ ಒಬ್ಬ ಅಧಿಕಾರಿಯನ್ನು ಕರೆದು ಗದರಿಸುತ್ತೇವೆ. ಅವರು ಕಂಪ್ಲೇಟ್ ಕೊಟ್ಟಿದ್ದನ್ನೂ ನಾವು ರಿಜಿಸ್ಟರ್ ಮಾಡುತ್ತಾ ಕುಳಿತರೆ ನಾವು ಕೆಲಸ ಮಾಡುವುದು ಹೇಗೆ? ನಿಮಗೆ ಒಂದು ಸಂದರ್ಭ ಹೇಳುತ್ತೇನೆ, ನಾನು ಒಬ್ಬ ಶಾಸಕ, ಒಬ್ಬ DFO ರವರು ಇದ್ದಾರೆ, ಅವರ ಗಮನಕ್ಕೆ ಅದು ಹೋಗಿದೆ, ಅವರ ಗಮನಕ್ಕೆ ಹೋದ ಮೇಲೆ ಒಬ್ಬ ಶಾಸಕನ ಕರ್ಟೆಸಿಗಾದರೂ ಒಂದು ದೂರವಾಣಿ ಮಾಡಿ ಏನೆಂದು ಕೇಳಬಾರದಾ? ಜಿಲ್ಲಾ ಮಂತ್ರಿಗಳು ಇದ್ದಾರೆ, ಜಿಲ್ಲಾ ಮಂತ್ರಿಗಳು ಕೇಳಬಾರದಾ? ಜಿಲ್ಲಾ ಮಂತ್ರಿಗಳು ಎಲ್ಲಾ ಅಧಿಕಾರಿಗಳನ್ನು ಕರೆದು ನೀವು ಮಾಡಿರುವುದು ತಪ್ಪು ಇದನ್ನು ಸರಿ ಮಾಡಿ ಎಂದು ಹೇಳಿದರೆ ಅವರ ಮಾತಿಗೆ ಬೆಲೆ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದೆ ಅವರು ಏನಿದು ಗಲಾಟೆ ಎಂದು ಕೇಳಿದರು, ಅವರು ತುಂಬಾ ಆತುರದಲ್ಲಿ ಇದ್ದರು ಅವರು ಏನೂ ಹೇಳುವುದಕ್ಕಾಗಲಿಲ್ಲ ಬಿಟ್ಟು ಬಿಡೋಣ. ತಮ್ಮ ಗಮನಕ್ಕೂ ತಂದಿದ್ದೇನೆ. ಸುಮಾರು ಎರಡು ತಿಂಗಳುಗಳಾಗಿವೆ. ನಾನು ಇವತ್ತು ಪ್ರೆಸ್‌ಮೀಟ್ ಮಾಡುವುದಕ್ಕೆ ಹೋದರೆ ನನಗೆ ಪ್ರೆಸ್‌ನವರು ಏನಾಯಿತು ಅದು ಎಂದು ಕೇಳುತ್ತಾರೆ. ನಾನೇನು ಹೇಳಲಿ ಅವರಿಗೆ. ಶಾಸಕನಾಗಿ ಇದ್ದು ನಾನು ಕಾರ್ಯ ನಿರ್ವಹಿಸಲೋ ಬೇಡವೋ? ನನಗೆ ಆಗುತ್ತಿರತಕ್ಕಂತಹ ಅವಮಾನಗಳು ಎಷ್ಟು? ಅಲ್ಲಿ ಯಾವ ರೀತಿ ಬಿಂಬಿಸಿದ್ದಾರೆಂದರೆ ನಾನು ಆ ಕಛೇರಿಗೆ ಹೋಗಿದ್ದೇನೆ, ಅಧಿಕಾರಿಗಳಿಗೆ ಕೊಲೆ ಬೆದರಿಕೆ ಹಾಕಿದ್ದೇನೆ, ಹೀಗೆ ಒಂದೊಂದು ನನ್ನ ಮೇಲೆ ಕಳ್ಳತನ ಆರೋಪ ಮಾಡುವುದಾದರೆ, ನಾನು ಶಾಸಕನಾಗಿ ಏಕೆ ಇರಬೇಕೆಂದು ನನ್ನ ಪ್ರಶ್ನೆ. ನೀವು ಸಸ್ಪೆಂಡ್ ಮಾಡಿರಬಹುದು, ನೀವು ಸಸ್ಪೆಂಡ್ ಮಾಡಿರುವ ಕಾಫಿ ನನ್ನ ಬಳಿ ಇದೆ. ನೀವು ಈ ಕಾರಣಕ್ಕಾಗಿ ಸಸ್ಪೆಂಡ್ ಮಾಡಿಲ್ಲ. ಈತನ ಮೇಲೆ ಇನ್ನು 9 ಮೊಕದ್ದಮೆಗಳು ಇವೆ. ಆ 9 ಮೊಕದ್ದಮೆಗಳ ಆಧಾರದ ಮೇಲೆ ಸಸ್ಪೆಂಡ್ ಮಾಡಿದ್ದಾರೆ. ತಾವು ದಯಮಾಡಿ ನನಗೆ ಅವಕಾಶ ಕೊಡಬೇಕು. ಇದಕ್ಕೆ ಸಂಬಂಧಪಟ್ಟ ಹಾಗೆ ಮುಖ್ಯವಾದ ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಬೇರೆಯವರಿಗೆ ಅವಕಾಶವಿಲ್ಲ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ನನಗೆ ಅವಕಾಶ ಕೊಡಬೇಕು. ನಾನು 2004-05ರಲ್ಲಿ ಶಾಸಕನಾಗಿದ್ದ ಅವಧಿಯಲ್ಲಿ ಆಸ್ಪತ್ರೆಯಲ್ಲಿ ಲಂಚ ತೆಗೆದುಕೊಂಡರು ಎಂದು ಜನರ ಒತ್ತಾಯದ ಮೇಲೆ

ವಿಚಾರಿಸುವುದಕ್ಕೆ ಹೋದರೆ ನನ್ನ ಮೇಲೆ ಅಟ್ರಾಸಿಟಿ ಕೇಸ್‌ಬುಕ್ ಮಾಡಿದ್ದರು. ನನಗೆ ಅವರು ಯಾವ ಜಾತಿ ಎಂದೇ ಗೊತ್ತಿಲ್ಲ. ನಾನು ಲಂಚ ವಿಚಾರಿಸುವುದಕ್ಕೆ ಹೋಗಿದ್ದಕ್ಕೆ ನನ್ನ ಮೇಲೆ ಅಟ್ರಾಸಿಟಿ ಕೇಸ್‌ಬುಕ್ ಆಗಿತ್ತು. ಇದು ಒಂದು. ಎರಡನೆಯದು ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಬಳಿ ಮಾತನಾಡಿದ್ದೆ, 21 ವರ್ಷಗಳಿಂದ ಇದ್ದವರಿಗೆ ವರ್ಗಾವಣೆ ಮಾಡಿ ಎಂದು ನಾನು ಸಾರಿಗೆ ಸಚಿವರಿಗೆ ಒಂದು ಪತ್ರ ಕೊಟ್ಟೆ. 21 ವರ್ಷಗಳಿಂದ ಒಂದೇ ಇಲಾಖೆಯಲ್ಲಿ ಒಂದೇ ಕಡೆ ಇದ್ದಾರೆ ಅವರಿಗೆ ವರ್ಗಾವಣೆ ಮಾಡಿ ಎಂದು ಪತ್ರ ಕೊಟ್ಟರೆ. .

ಅಧ್ಯಕ್ಷರು : ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಹಕ್ಕುಚ್ಯುತಿಯಲ್ಲಿ ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಅವರು ಪ್ರಸ್ತಾಪ ಮಾಡಲಿ.

: ಗೊಂದಲ :

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಎಲ್ಲಾ ಟೀಕೆಗಳನ್ನೂ ನಾವು ಸಾರ್ವಜನಿಕವಾಗಿ ಎದುರಿಸುತ್ತೇವೆ. ನಮ್ಮ ನೋವನ್ನು ನಾವು ಸದನದಲ್ಲಿಯೂ ಹೇಳಿಕೊಳ್ಳುವ ಹಾಗಿಲ್ಲವೆಂದರೆ, ನಾವು ಎಲ್ಲಿ ಹೇಳಿಕೊಳ್ಳಬೇಕು? ಎಲ್ಲಿ ಹೇಳಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? 21 ವರ್ಷಗಳಿಂದ ಒಂದೇ ಕಡೆ ಇದ್ದವರಿಗೆ ವರ್ಗಾವಣೆ ಮಾಡಿ ಎಂದು ಸಾರಿಗೆ ಸಚಿವರಿಗೆ ಪತ್ರ ಕೊಟ್ಟರೆ, ನ್ಯಾಯಾಲಯದವರು ಉದ್ಧಟತನದ ವರ್ತನೆ ಎಂದು ಹೇಳುತ್ತಾರೆ. ಅಂದರೆ 21 ವರ್ಷ ಒಂದೇ ಕಡೆ ಇದ್ದವರಿಗೆ ವರ್ಗಾವಣೆ ಮಾಡಿ ಎಂದು ಹೇಳುವಷ್ಟು ಅಧಿಕಾರವೂ ಶಾಸಕರಿಗೆ ಇಲ್ಲ. ನ್ಯಾಯಾಧೀಶರು ಸುಪ್ರೀಂ. ನಾನು ಅವರ ತೀರ್ಪನ್ನು ಪ್ರಶ್ನೆ ಮಾಡುತ್ತಿಲ್ಲ. ಆದರೆ ನನಗೆ ಹಕ್ಕು ಇದೆಯೋ ಇಲ್ಲವೋ? ಅವರಿಗೆ ವರ್ಗಾವಣೆ ಮಾಡಿ ಎಂದು ಪತ್ರ ಕೊಡುವ ಅಧಿಕಾರ ಇದೆಯೋ ಇಲ್ಲವೋ ಎಂದು ನಾನು ಕೇಳುತ್ತೇನೆ. ನಾವು ಶಿಫಾರಸ್ಸು ಮಾಡುವುದು ತಪ್ಪಾ? ಸಾರ್ವಜನಿಕರ ದೂರಿನ ಮೇಲೆ ಅವರಿಗೆ ವರ್ಗಾವಣೆ ಮಾಡಿ ಎಂದು ಸಾರಿಗೆ ಸಚಿವರಿಗೆ ಪತ್ರ ಕೊಟ್ಟರೆ ನ್ಯಾಯಾಲಯಕ್ಕೆ ಹೋಗಿ ಪ್ರಶ್ನೆ ಮಾಡುತ್ತಿದ್ದ ಹಾಗೆ ಇದು ಶಾಸಕರ ಉದ್ಧಟತನದ ವರ್ತನೆ ಎಂದು ಹೇಳುತ್ತಾರೆ. ನಮ್ಮ ಲಿಮಿಟೇಷನ್ ಏನೆಂದು ಹೇಳಬೇಕು. ಸಾರ್ವಜನಿಕರ ದೂರಿನ ಮೇಲೆ ನಾವು ಪತ್ರ ಬರೆಯಬಾರದು ಎಂದು ಇದ್ದರೆ ನಾಳೆ ಬೆಳಿಗ್ಗೆಯಿಂದ ಯಾವ ಪತ್ರವೂ ಕೊಡುವುದಿಲ್ಲ. ಹಾಗೆಯೇ ಸಾರ್ವಜನಿಕ ಅಹವಾಲು ಕೇಳಬಾರದು ಎಂದು ಇದ್ದರೆ ನೀವು ಜನರಿಗೂ ಹೇಳಿಬಿಡಿ, ಶಾಸಕರಿಗೆ ಯಾವ ದೂರುಗಳನ್ನೂ

ಕೊಡಬೇಡಿ, ಅದು ಶಾಸಕರ ಕೆಲಸ ಅಲ್ಲವೆಂದು ಹೇಳತಕ್ಕಂತಹ ಆದೇಶ ಕೊಡಿ. ಆಗ ನಾವು ನಮ್ಮ ವ್ಯಾಪ್ತಿ ಏನೆಂದು ಅರ್ಥ ಮಾಡಿಕೊಳ್ಳುತ್ತೇವೆ. ಅಷ್ಟಕ್ಕೆ ನಾವು ನಿಲ್ಲಿಸುತ್ತೇವೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್ ಕುಮಾರ್‌ರವರು ನಾವು ಸಸ್ಪೆಂಡ್ ಮಾಡಿದ್ದೇವೆಂದು ಹೇಳುವುದಕ್ಕೆ ತಯಾರಾಗಿದ್ದಾರೆ.

ಅಧ್ಯಕ್ಷರು : ಸರ್ಕಾರದಿಂದ ಉತ್ತರ ಕೇಳಿ ತೀರ್ಮಾನ ತೆಗೆದುಕೊಳ್ಳೋಣ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್ ಕುಮಾರ್‌ರವರು ನಾವು ಸಸ್ಪೆಂಡ್ ಮಾಡಿದ್ದೇವೆಂದು ಹೇಳುವುದಕ್ಕೆ ತಯಾರಾಗಿದ್ದಾರೆ.

ಅಧ್ಯಕ್ಷರು : ಸರ್ಕಾರದಿಂದ ಉತ್ತರ ಕೇಳಿ ತೀರ್ಮಾನ ತೆಗೆದು ಕೊಳ್ಳೋಣ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅವರು ಸಸ್ಪೆಂಡ್ ಮಾಡಿದ್ದಾರೆ ನಾನು ಒಪ್ಪುತ್ತೇನೆ, ಆದರೆ ಕಾರಣಗಳು ಏನು ಕೊಟ್ಟಿದ್ದಾರೆಂದು ಸ್ವಲ್ಪ ನೋಡಿ. ಈ ಸಸ್ಪೆಷನ್ ಆರ್ಡರ್‌ನಲ್ಲಿ ಅವರು ಈ ಕಾರಣ ಕೊಟ್ಟಿಲ್ಲ. ಮೊದಲನೆಯದು ಇವರು ಅಲ್ಲಿಗೆ ಹೋಗದೇ ಇದ್ದರೂ ಕೂಡ ಒಬ್ಬ ಶಾಸಕನ ಮೇಲೆ ಸುಳ್ಳು ಮೊಕದ್ದಮೆ ಕೊಡುವುದು ತಪ್ಪು. ಅದಕ್ಕೆ ಅವರನ್ನು ತಕ್ಷಣವೇ suspend ಮಾಡಬೇಕಾಗಿತ್ತು ಮಾಡಲಿಲ್ಲ. ಈಗ suspend ಮಾಡಿರುವುದು ಬೇರೆ ಕಾರಣಕ್ಕೆ. ಅದು ಸುಮ್ಮನೆ ಇದರಲ್ಲಿ ಉಲ್ಲೇಖ ಮಾಡಿದ್ದಾರೆ. ಪ್ರಸ್ತಾವನೆಯಲ್ಲಿ ಇವರ ಮೇಲೆ ಹೀಗೂ ಒಂದು ದೂರು ಇತ್ತು ಎಂದು ಉಲ್ಲೇಖ ಮಾಡಿದ್ದಾರೆ. ಶಾಸಕರ ಮೇಲೆಯೇ ಸುಳ್ಳು ಕೇಸು ದಾಖಲು ಮಾಡುವುದಾದರೆ ಈ ರಾಜ್ಯದ ಸಾಮಾನ್ಯ ಜನರ ಮೇಲೆ ಏನು ರಕ್ಷಣೆ ಇದೆ?

ಅಧ್ಯಕ್ಷರು : ತಾವು ಹೇಳಿದ್ದೀರಿ ಕುಳಿತುಕೊಳ್ಳಿ, ಪುಟ್ಟರಾಜುರವರು. ಎಲ್ಲವನ್ನೂ ಕೇಳುವುದಕ್ಕಾಗುವುದಿಲ್ಲ. ಪುಟ್ಟರಾಜುರವರು ತಾವು ಮಾತನಾಡಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : DFO ರವರು ಏನು ಹೇಳಿದ್ದಾರೆಂದು ನೀವು ಕೇಳಬೇಕು. ನಾನು ಏನಾದರೂ ತಪ್ಪು ಮಾತನಾಡಿದ್ದೇನಾ? You tell me why.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ನೀವು ರೆಫರ್ ಮಾಡಿದ್ದೀರಿ. ಹೇಳುವಷ್ಟು ಹೇಳಿದ್ದೀರಿ.ನಿಯಮ 191 ರಲ್ಲಿ ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಆದರೂ ಇದು ಶಾಸಕರ ಪ್ರಕರಣ ಹೇಳಿದ್ದಕ್ಕೆ ಅವಕಾಶ ಕೊಟ್ಟಿದ್ದೇನೆ. ವಿವರವಾಗಿ ಹೇಳುವುದಕ್ಕೆ ಇಲ್ಲಿ ಅವಕಾಶಗಳು ಇಲ್ಲ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಅಧ್ಯಕ್ಷರೆ ನಾವು ಚರ್ಚೆ ಮಾಡುತ್ತಿಲ್ಲ, ಅವರ ಲೋಪವನ್ನು ತೋರಿಸುತ್ತಿದ್ದೇವೆ. ಸರ್ಕಾರದ ತಪ್ಪು ಹೇಳಬಾರದಾ?

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ನೀವು ಕುಳಿತುಕೊಳ್ಳದೆ ಹೋದರೆ ದಾಖಲೆಗೆ ಹೋಗಬಾರದು ಎಂದು ಹೇಳುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಈ ರೀತಿ ನೀವು ಶಾಸಕರ ಮೇಲೆ ಒತ್ತಡ ತರುತ್ತೀರಿ, ನೀವು ನಮ್ಮ ರಕ್ಷಣೆಗೆ ಬರುವುದು ಬಿಟ್ಟು ಅವರಿಗೆ ರಕ್ಷಣೆ ಕೊಡುತ್ತೀರಿ.

ಅಧ್ಯಕ್ಷರು : ಶಾಸಕರಿಗೆ ರಕ್ಷಣೆ ಮಾಡಬೇಕೆಂದು ಇಡೀ ಪ್ರಕರಣ ವನ್ನು ಹೇಳುತ್ತಾ ಕೂತರೆ ಹೇಗೆ? ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಪುಟ್ಟರಾಜುರವರು ಮಾತನಾಡಿ.

ಶ್ರೀ ಸಿ.ಎಸ್. ಪುಟ್ಟರಾಜು (ಮೇಲುಕೋಟೆ) : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ 7 ವಿಧಾನ ಸಭಾ ಕ್ಷೇತ್ರಗಳಿವೆ. ಆ 7 ವಿಧಾನ ಸಭಾ ಕ್ಷೇತ್ರಗಳಲ್ಲಿ ಹಲವಾರು ಪಕ್ಷದ ಶಾಸಕರುಗಳಿದ್ದರೂ, ನಾವು ಯಾವತ್ತೂ ಬೇರೆ ರೀತಿಯಲ್ಲಿ ಹೋಗಿಲ್ಲ. ಆ ಜಿಲ್ಲೆಯ ಹಿತದೃಷ್ಟಿಯಿಂದ ಎಲ್ಲಾ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಇರಬಹುದು, ತಾಲ್ಲೂಕು ಮಟ್ಟದ ಅಧಿಕಾರಿಗಳು ಇರಬಹುದು, ಎಲ್ಲರೂ ಕುಳಿತು ಶಾಂತಿಯುತವಾಗಿ ಇಡೀ ಜಿಲ್ಲೆಯ ಸಮಗ್ರ ಅಭಿವೃದ್ಧಿ ವಿಚಾರದಲ್ಲಿ ಇಡೀ ಜಿಲ್ಲೆಯನ್ನು ತೆಗೆದುಕೊಂಡು ಹೋಗುತ್ತಿರುವ ವಿಚಾರವನ್ನು ನೀವು ಸೂಕ್ಷ್ಮವಾಗಿ ಗಮನಿಸಿದ್ದೀರಿ ಎಂದು ನಾನು ಭಾವಿಸಿದ್ದೇನೆ. ಮಾನ್ಯ ಸುರೇಶ್‌ಗೌಡರು ಆ Range Forest Officer ಅವರ ಮೇಲೆ ಕೇಸ್ ಹಾಕಿರುವ ವಿಚಾರದಲ್ಲಿ ಸಾರಾಂಶವನ್ನು ಈ ಸದನಕ್ಕೆ ತಿಳಿಸಿದ್ದಾರೆ. ಸದರಿ ಘಟನೆಯಾದ ಎರಡನೇ ದಿನಕ್ಕೆ ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೆ.ಡಿ.ಪಿ. ಮೀಟಿಂಗ್ ನಡೆಯುತ್ತಿತ್ತು. ಆ ಸಂದರ್ಭದಲ್ಲಿ, ಆ ಸಂಗತಿ ತಿಳಿದು ನಾನೇ ಮಾನ್ಯ ಸುರೇಶ್‌ಗೌಡರ ಮೇಲೆ ಆ ಮೀಟಿಂಗ್‌ನಲ್ಲಿ ರೇಗಾಡಿದ್ದೆ. ಒಂದು ಕಡೆ Forest ಅನ್ನು ಉಳಿಸಿ

ಎಂದು ಹೇಳುತ್ತೇವೆ, ಮತ್ತೊಂದು ಕಡೆ ಅರಣ್ಯ ಉಳಿಸದವರಿಗೆ ನಾವೇ Support ಕೊಟ್ಟರೆ ಹೇಗೆ? ಅದಾಗಬಾರದು ಎಂದು ಹೇಳಿದೆ. ಅದಾದ ಮೇಲೆ ಸತ್ಯಾಂಶ ಹೊರಹೊಮ್ಮಿದಂತಹ ಸಂದರ್ಭದಲ್ಲಿ, ಆ ಸಂಬಂಧ ಪಟ್ಟಂತಹ ನಾಗಮಂಗಲ ವಲಯಾಧಿಕಾರಿಯಾಗಿ ಕೆಲಸ ಮಾಡತಕ್ಕವರನ್ನು ನಾವು ಕರೆಸಿ ಮಾತನಾಡಿಸಿದಂತಹ ಸಂದರ್ಭದಲ್ಲಿ, ಮಾನ್ಯ ಸುರೇಶ್‌ಗೌಡ ರವರು ಏನು ಹೇಳಿದರೋ, ಅದರಂತೆ ಅವರು ಕಾರಿನಿಂದ ಸಹ ಕೆಳಗೆ ಇಳಿದಿಲ್ಲ, ಆದರೆ District Forest Officer ಒತ್ತಡದಿಂದ ಈ ರೀತಿ ನಾನು ನಡೆದುಕೊಳ್ಳಬೇಕಾಯಿತು ಎಂದು ನಮ್ಮೆಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳ ಸಮ್ಮುಖದಲ್ಲಿ ಹೇಳಿರತಕ್ಕಂಥ ವಿಚಾರವನ್ನು ಅವರು ಪ್ರಸ್ತಾಪ ಮಾಡಿದರು. ಈ ಎಲ್ಲಾ ವಿಚಾರಕ್ಕೆ root cause District Forest Officer ಎನ್ನುವುದನ್ನು ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಪಾಪ! ಯಾರೋ ಅದಕ್ಕೆ ಸಂಬಂಧಪಟ್ಟಂತಹ ಅಧಿಕಾರಿ, ಬಹಳ ಸೂಕ್ಷ್ಮತೆಯಿಂದ ಇದನ್ನು ಬಗೆಹರಿಸಬೇಕು ಎನ್ನತಕ್ಕಂಥ ಸಂದರ್ಭದಲ್ಲಿ, ಇಲ್ಲಿಂದ ಒತ್ತಡವನ್ನು ಹಾಕಿ, ಇವತ್ತು ಆ ಅಧಿಕಾರಿಯನ್ನು ತಪ್ಪಿತಸ್ಥನನ್ನಾಗಿ ಮಾಡಿ, ಆತ ಇವತ್ತು suspend ಆಗುವುದಕ್ಕೆ ಯಾರು ಹೊಣೆಯಾಗಿದ್ದಾರೋ, ನೀವು ಮೊದಲು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸದನದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇವತ್ತು ಈ ನೀಲಗಿರಿ ಸಸಿಗಳನ್ನು ಫಾರೆಸ್ಟ್ ಬೆಳೆಸುವಂತಹ ನಿಟ್ಟಿನಲ್ಲಿ ಆಯಾ ಗ್ರಾಮ ಪಂಚಾಯತಿಯ ಸಹಕಾರದಿಂದ ಎಲ್ಲೆಲ್ಲಿ ನಮ್ಮ ಸರ್ಕಾರಿ ಜಾಗ ಇರುತ್ತದೋ, ಅಲ್ಲಿ ಬೆಳೆಸಿ, ಸಂರಕ್ಷಣೆ ಮಾಡಿ, ಅದು ಬೆಳೆದಂತಹ ಸಂದರ್ಭದಲ್ಲಿ ಅದನ್ನು ಹರಾಜು ಮುಖಾಂತರ ಯಾರಿಗೋ ಬೇರೆಯವರಿಗೆ ಮಾರುವಂತಹ ಪದ್ಧತಿಯನ್ನು ಮಾಡಿಕೊಂಡು ಬಂದಿದ್ದೇವೆ. ಆದರೆ ಈ ಬಗ್ಗೆ ಏನೊಂದು circular issue ಮಾಡಿದ್ದಾರೆ, ಅದರಲ್ಲಿ ಸರ್ಕಾರದಿಂದ ಕಟ್ಟುನಿಟ್ಟಿನ ಆದೇಶವಿದೆ. ಇಂತಹ ಸ್ಥಳೀಯವಾಗಿ ಬೆಳೆದಂತಹ ಮರಗಳನ್ನು ಯಾರು ಕಡು ಬಡುವರು ಅಪೇಕ್ಷೆ ಪಡುತ್ತಾರೋ, ಸರ್ಕಾರ ನಿಗದಿಪಡಿಸಿದಂತಹ ರೇಟ್‌ಗೆ ಅವರಿಗೆ ಕೊಡಬೇಕೆಂಬ ಬಗ್ಗೆ ಸರ್ಕಾರದಿಂದ circular ವೊಂದನ್ನು ಕಳುಹಿಸಿಕೊಟ್ಟಿದ್ದಾರೆ. ಇವು ಯಾವುದನ್ನೂ ಲೆಕ್ಕ ಇಟ್ಟುಕೊಳ್ಳುವುದಿಲ್ಲ. ಇವರಿಗೆ ಯಾರು ಜಾಸ್ತಿ ಕಮಿಷನ್ ಕೊಡುತ್ತಾರೋ, ಅಂತಹವರನ್ನು ಮೊದಲೇ ಬುಕ್ ಮಾಡಿಕೊಂಡು, ಅವರಿಗೆ ಆ ಮರಗಳನ್ನು ಕೊಡತಕ್ಕದ್ದು ಆಗುತ್ತಿದೆ. ಸಂಬಂಧಪಟ್ಟಂತಹ ಆ ಭಾಗದ

ಗ್ರಾಮ ಪಂಚಾಯತ್‌ಗೆ ಆಗಿರಬಹುದು, ಆ ರೈತರಿಗೆ ಆಗಿರಬಹುದು, ಯಾರಿಗೂ ಸಂಬಂಧವಿಲ್ಲ ಎನ್ನುವಂತೆ ಇವತ್ತು Power of Attorney ತೆಗೆದುಕೊಂಡು ಬಿಟ್ಟಿರುವ ರೀತಿಯಲ್ಲಿ ಈ ಜಿಲ್ಲೆಯ ಅರಣ್ಯಾಧಿಕಾರಿಗಳು ನಡೆದುಕೊಳ್ಳುತ್ತಿರುವುದನ್ನು ನಾವು ಗಮನಿಸಿದ್ದೇವೆ. ದಯಮಾಡಿ ಈ ವಿಚಾರದಲ್ಲಿ ನಮಗೆ ನ್ಯಾಯ ಒದಗಿಸಿ. ನೀವೂ ಈ ಸದನದ ಸದಸ್ಯರಾಗಿದ್ದೀರಿ, ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದೀರಿ. ನಮಗೆ ಆಗಿರತಕ್ಕಂಥ ಅವಮಾನ ನಿಮಗೂ ಆದ ಹಾಗೆಯೇ. ಈ ವಿಚಾರದಲ್ಲಿ ಜಿಲ್ಲಾ ಅರಣ್ಯಾಧಿಕಾರಿ ಮೇಲೆಯೇ ನೀವು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಸುರೇಶ್‌ಗೌಡರು ಅಕ್ಷರಶಃ ನಡೆದಿರತಕ್ಕ ಸತ್ಯತೆಯನ್ನು ಈ ಸದನದ ಮುಂದಿಟ್ಟಿದ್ದಾರೆ. ಇದನ್ನು ಜಿಲ್ಲಾ ಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇವೆ. ಜಿಲ್ಲಾ ಮಂತ್ರಿಗಳು ಕರೆದು ಸೂಕ್ತವಾದಂತಹ ಕ್ರಮ ತೆಗೆದುಕೊಳ್ಳಿ ಎಂದು ನಿರ್ದೇಶನ ಕೊಟ್ಟಿದ್ದರೂ ಏನೂ ಪ್ರಯೋಜ ನವಾಗಿಲ್ಲ, ಆ ಕಾರಣದಿಂದ ಇವತ್ತು ಜಿಲ್ಲಾ ಅರಣ್ಯಾಧಿಕಾರಿ ಮೇಲೆಯೇ ಶಿಸ್ತಿನ ಕ್ರಮ ತೆಗೆದು ಕೊಳ್ಳಬೇಕೆಂದು, ನಾನು ಆ ಭಾಗದ ಶಾಸಕನಾಗಿ ಒತ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್ ಗೌಡರು ಸದಸ್ಯರು ಪ್ರಸ್ತಾಪಿಸಿರುವ ವಿಚಾರದ ಬಗ್ಗೆ ಹೇಳುವುದಾದರೆ, ಏನಾಯಿತು ಎಂಬ ಬಗ್ಗೆ ಅವರು ಸವಿಸ್ತಾರವಾಗಿ ಹೇಳಿದ್ದಾರೆ. ನಾನು ಆ ಬಗ್ಗೆ ಬೇರೇನೋ ಹೇಳಬೇಕಾಗಿಲ್ಲ. ಆದರೆ, ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿರತಕ್ಕಂಥದ್ದು ಏನೆಂದರೆ, ಅವರು ಪ್ರಸ್ತಾಪಿಸಿದಂತಹ ಸಂದರ್ಭ ದಲ್ಲಿ ಅವರಿಗೆ support ಆಗಿ ಬಹಳಷ್ಟು ಜನ ಶಾಸಕರು ಅವರದೇ ಕ್ಷೇತ್ರದಲ್ಲಿ ಈ ರೀತಿಯಾದಂತಹ ಘಟನೆಗಳಾಗಿವೆ ಎನ್ನತಕ್ಕಂಥ ವಿಚಾರವನ್ನು ಸದನದ ಗಮನಕ್ಕೆ ತಂದರು. ಅದು ತಮಗೆ ಅರ್ಥವಾಗಿದೆ ಎಂದು ನಾನು ಭಾವಿಸುತ್ತೇನೆ. ಶಾಸಕರು ಎಂದರೆ ಜನಪ್ರತಿನಿಧಿಗಳಾಗಿರತಕ್ಕವರು ತಮ್ಮ ಕರ್ತವ್ಯವನ್ನು ನಿರ್ವಹಿಸುವಂತಹ ಸಂದರ್ಭದಲ್ಲಿ ಅಧಿಕಾರಿಗಳ ಜೊತೆಗೆ ಹೋಗಬೇಕಾಗುತ್ತದೆ, ಮಾತನಾಡಬೇಕಾಗುತ್ತದೆ, ಎಷ್ಟೋ ವಿಷಯವನ್ನು ಚರ್ಚೆ ಮಾಡಬೇಕಾಗುತ್ತದೆ. ಅದನ್ನೇ ವಿರೋಧ ಎಂದು ತಿಳಿದುಕೊಂಡು, ಅವರ ಮೇಲೆ ಕೇಸ್ ಹಾಕುವ ಮಟ್ಟಕ್ಕೆ ಹೋದರೆ, ಜನಪ್ರತಿನಿಧಿಗಳಾಗಿ ಇರುವವರು ಹೇಗೆ ಕೆಲಸ ಮಾಡಬೇಕು? ಏಕೆಂದರೆ, ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡಬೇಕಾಗಿರತಕ್ಕವರು ತಾವು. ನಮ್ಮ ಹಕ್ಕುಗಳಿಗೆ ಚ್ಯುತಿ

ಬಂದಂತಹ ಸಂದರ್ಭದಲ್ಲಿ ಅದನ್ನು ನಿಮ್ಮ ಮುಂದೆಯೇ ಹೇಳಬೇಕೇ ವಿನಃ ಬೇರೆ ಯಾರ ಮುಂದೆಯೂ ಹೇಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಒಂದು ವಿಚಾರ ನನಗೆ ಕಂಡು ಬರತಕ್ಕಂಥದ್ದು ಏನೆಂದರೆ, ಒಬ್ಬ ಅಧಿಕಾರಿ, ಒಬ್ಬ ಶಾಸಕರು ಹೋಗಿಲ್ಲದಿದ್ದರೂ ಕೂಡ, ಅವರ ಜೊತೆಗೆ ಏನೋ ಮಾತುಕತೆ ಆಗಿರಬಹುದು, ಘರ್ಷಣೆ ಆಗಿರುವಂತಹ ಸಂದರ್ಭದಲ್ಲಿ, ಏಕಾಏಕಿ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಡುತ್ತಾನೆ ಎಂದರೆ, ಅದು ಸರಿಯಲ್ಲ. ಒಬ್ಬ RFO ಆಗಿರತಕ್ಕವನು ಏನಾದರೊಂದು ವಿಚಾರ ಬಂತು ಎಂದರೆ, ಅದನ್ನು ಸ್ವಾಭಾವಿಕವಾಗಿ ತನ್ನ ಮೇಲಧಿಕಾರಿಗಳಿಗೆ intimate ಮಾಡಬೇಕಾಗುತ್ತದೆ. ಅದನ್ನು naturally ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಏಕಾಏಕಿ ಪೊಲೀಸ್ ಸ್ಟೇಷನ್‌ಗೆ ಹೋಗಿ ಖುದ್ದಾಗಿ compliant ಕೊಡುತ್ತಾರೆಂದರೆ, ಅವನ ಉದ್ಧಟತನ ಏನು ಎಂಬುದು ಇಲ್ಲಿ ಗೊತ್ತಾಗುತ್ತದೆ. ಎರಡನೆಯದಾಗಿ, ಈಗಾಗಲೇ ಅವನ ಮೇಲೆ enquiry ಮಾಡಿ, ಅವನ ಕರ್ತವ್ಯ ಲೋಪವಾಗಿದೆ ಎಂಬ ಕಾರಣಕ್ಕೆ ಅವನನ್ನು ಅಮಾನತ್ತಿನಲ್ಲಿ ಇಡತಕ್ಕ ತೀರ್ಮಾನ ಕೂಡ ಆಗಿದೆ. ಈ ಘಟನೆ ನಡೆದು ಹೋಗಿದೆ. ಒಬ್ಬ ಶಾಸಕರ ವಿರುದ್ಧ ಪತ್ರಿಕೆಯಲ್ಲಿ ಮಾನ ಹರಾಜಾಗಿರುವಂತಹ ಸಂದರ್ಭದಲ್ಲಿ ಇನ್ನು ಮುಂದೆ ಯಾವ ರೀತಿಯಾಗಿ ಅವರು ಕೆಲಸವನ್ನು ನಿರ್ವಹಿಸುವುದು? ಎಂಬುದನ್ನು ನೀವು ಹೇಳಬೇಕು. ದಯಮಾಡಿ ಇದನ್ನು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಬೇಕೆಂದು ನಾನು ಆಗ್ರಹಿಸುತ್ತೇನೆ. ಅದರ ಜೊತೆಗೆ, ಆದಷ್ಟು ಬೇಗ, ಇಲ್ಲಿ ಮೇಲಧಿಕಾರಿ ಆಗಿರತಕ್ಕವರು RFO ಅಲ್ಲ, ಅದು DFO. ಇವತ್ತು ಅವರು ಇದನ್ನು ಹೇಳುತ್ತಿಲ್ಲ. ನಾನು ಕೇಳಿದಾಗ DFO ನೇ ಇದಕ್ಕೆಲ್ಲಾ ಕುಳಿತು ಮಾಡುತ್ತಿರುವುದು ಎಂದು ಹೇಳುತ್ತಿದ್ದರು. ಇಂತಹ ವಿಚಾರಗಳನ್ನು ಆ ಸಮಿತಿ ಮುಂದೆ ಕಳುಹಿಸಬೇಕು. ತಾವು ಸರ್ಕಾರದ ವರದಿ ಪಡೆಯೋಣ ಎಂದು ಹೇಳಿದಿರಿ.

ಅಧ್ಯಕ್ಷರು : ಸರ್ಕಾರದವರು ಈ ಬಗ್ಗೆ ಏನು ಹೇಳುತ್ತಾರೋ, ಕೇಳೋಣ ಎಂದೆ.

ಶ್ರೀ ಟಿ.ಬಿ ಜಯಚಂದ್ರ : ಸರ್ಕಾರದ ಅಭಿಪ್ರಾಯವನ್ನು ಕೇಳುವುದರ ಜೊತೆಗೆ, ದಯಮಾಡಿ ಈ ವಿಚಾರದಲ್ಲಿ ನೇರವಾಗಿ ನೀವು ಈ ವಿಷಯವನ್ನು Privilege Committee ಗೆ refer ಮಾಡಿ ನಮಗೆ ರಕ್ಷಣೆ ಕೊಡಬೇಕು. ಶಾಸಕರಾಗಿರುವವರು ಕೆಲಸ ಮಾಡುವಂತಹ ಸಂದರ್ಭದಲ್ಲಿ

ಅಧಿಕಾರಿಗಳ ವರ್ತನೆ ಹೇಗಿರಬೇಕು? ಎಂಬ ಬಗ್ಗೆ ಎಲ್ಲೋ ಒಂದು ಕಡೆಗೆ ಸಂದೇಶ ಹೋಗಬೇಕು. ಅಧಿಕಾರಿಗಳಿಗೆ ತೊಂದರೆಯಾದಂತಹ ಸಂದರ್ಭದಲ್ಲಿ ಸೆಕ್ಷನ್ 353 ಇದೆ. ಆ ಸೆಕ್ಷನ್ 353 ಕೋಟ್ ಮಾಡಿಬಿಟ್ಟರೆ ಅವನು ಅರೆಸ್ಟ್ ಆಗಲೇಬೇಕು, ಅದಕ್ಕೆ ಜಾಮೀನು ಇಲ್ಲ, ಅದು non-bailble offence ಆಗುತ್ತದೆ. ಇದೆಲ್ಲಾ ಪ್ರಶ್ನೆ ಇದೆ. ಒಬ್ಬ ಅಧಿಕಾರಿಗಳಿಗೆ ಅಷ್ಟೊಂದು ರಕ್ಷಣೆ ಇದ್ದಾಗ, ಒಬ್ಬ ಶಾಸಕನಿಗೆ ರಕ್ಷಣೆಯನ್ನು ಯಾರ ಮನೆಯಲ್ಲಿ ಕೇಳಬೇಕು? ರಕ್ಷಣೆ ಕೊಡಿ ಎಂದು ಅವರನ್ನು ಕೇಳುವುದಲ್ಲ, ನಾವು ನಿಮ್ಮ ಹತ್ತಿರವೇ ಬಂದು ಕೇಳಬೇಕು. ನಿಮಗೆ ನಿಮ್ಮದೇ ಆದಂತಹ ವಿಧಿ ವಿಧಾನಗಳಿವೆ. ಅದರ ಪ್ರಕಾರ ರಕ್ಷಣೆ ಕೊಡುವಂತಹ ವ್ಯವಸ್ಥೆ ಆಗಬೇಕು. ಎಲ್ಲೋ ಒಂದು ಕಡೆಗೆ ಶಾಸಕರು ಕೆಲಸ ಮಾಡುವಂತಹ ಸಂದರ್ಭದಲ್ಲಿ ಅಧಿಕಾರಿಗಳ ವರ್ತನೆ ಹೇಗಿರಬೇಕು ಎನ್ನುವುದಕ್ಕೆ ಒಂದು ಸಂದೇಶ ಹೋಗಬೇಕು ಎನ್ನತಕ್ಕಂಥದ್ದು ನನ್ನ ಅರಿಕೆ.

ಅಧ್ಯಕ್ಷರು : ಸರ್ಕಾರ ತನ್ನ ಅಭಿಪ್ರಾಯ ಹೇಳಿ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : Please, ಕುಳಿತುಕೊಳ್ಳಿ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಯಾರೋ ಒಬ್ಬರು ಶಾಸಕರ ಮೇಲೆ Complaint ಕೊಟ್ಟ ಕೂಡಲೇ, ಪೋಲೀಸ್ ಇಲಾಖೆಯವರು ಆ ಬಗ್ಗೆ ತನಿಖೆ ಮಾಡದೆ, ಕೇಸ್ ಹೇಗೆ ರಿಜಿಸ್ಟರ್ ಮಾಡಿದರು? ಯಾರೋ ಒಬ್ಬರು ಶಾಸಕರ ಮೇಲೆ compliant ಕೊಟ್ಟ ಕೂಡಲೇ, ಪೊಲೀಸ್ ಇಲಾಖೆಯವರು ಕೇಸ್ ಹಾಕುವುದಾದರೆ, ಇದು ಯಾವ ರೀತಿಯಾಗಿ ಆಗುತ್ತದೆ? ಅರಣ್ಯಾಧಿಕಾರಿ ಕೊಟ್ಟ ದೂರಿನ ಮೇಲೆ ತನಿಖೆ ಮಾಡಿದ ನಂತರವೇ ಕೇಸ್ ಹಾಕಬೇಕಾಗಿತ್ತು. ಪೊಲೀಸ್ ಇಲಾಖೆಯವರು ಯಾರು ಕೇಸ್ ಹಾಕಿದ್ದಾರೋ, ಅವರ ಮೇಲೂ ಕೂಡ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು & ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ನಾಗಮಂಗಲದ ಸನ್ಮಾನ್ಯ ಶಾಸಕರಾದ ಸುರೇಶ್ ಗೌಡರವರು ಈ ವರ್ಷದ ಗಣರಾಜ್ಯೋತ್ಸವದ ದಿನ ತಮಗೆ ಸಂಬಂಧಿಸಿದಂತೆ ನಡೆದ ಈ ಪ್ರಕರಣದ ಬಗ್ಗೆ ಸಾಕಷ್ಟು ವಿವರವಾಗಿ ಹೇಳಿದ್ದಾರೆ. ಅನೇಕ ಪತ್ರಿಕೆಗಳ ತುಣುಕನ್ನೂ ಕೂಡ ಇಲ್ಲಿ ಅವರು ಉಲ್ಲೇಖಿಸಿದ್ದಾರೆ. ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಬೇಕೆಂದು

ಮಾನ್ಯ ಜಯಚಂದ್ರರವರೂ ಸಹ ಪ್ರಸ್ತಾಪಿಸಿದ್ದಾರೆ. ಇವತ್ತೇನು ಮಾನ್ಯ ಸುರೇಶ್ ಗೌಡರಿಗೆ ಆಗಿದೆ ಅಥವಾ ಯಾವುದೇ ಸದಸ್ಯರಿಗೆ ಆಗಿದೆ, ಅದು ಯಾವುದನ್ನೂ ಕೂಡ ಈ ಸದನ ಸಹಿಸುವುದಿಲ್ಲ, ಸರ್ಕಾರ ಸಹಿಸುವುದಿಲ್ಲ. ಅದು ಬಹಳ ಮುಖ್ಯ. ಒಂದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇದು purely administrative matter. Administration time ನಲ್ಲಿ ಅದು ಆಗಿದೆ. ಇವರೂ ಕೂಡ ಇವತ್ತು ಅನೇಕ ವಿವರಗಳನ್ನು ಕೊಟ್ಟಿದ್ದಾರೆ. ಮಾನ್ಯ ಜಯಚಂದ್ರರವರಲ್ಲಿ ನನ್ನದೊಂದು ಮನವಿ ಇದೆ. ಏನೆಂದರೆ, natural justice ಎನ್ನುವಂತಾದ್ದೊಂದು ಇದೆ. ಮಾನ್ಯ ಸುರೇಶ್‌ಗೌಡರು ಅನೇಕ ಸಂಗತಿಗಳನ್ನು ಹೇಳಿದ್ದಾರೆ. That Officer cannot come and explain his version. ಇದನ್ನೂ ಕೂಡ ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಒಂದೇ ಒಂದು ಅಂಶ ನಾನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುವುದೇನೆಂದರೆ, ಇದರ ಸಂಪೂರ್ಣ ವಿವರ ತರಿಸಿಕೊಂಡು ತಾವು ಇದರ ಬಗ್ಗೆ ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಆದರೆ, ನನ್ನ ಒಂದು ಅನುಭವದ ಮೇರೆಗೆ, ನನಗೆ ಇರುವ ಜ್ಞಾನದ ಇತಿಮಿತಿಯಲ್ಲಿ, ಇದು ಹಕ್ಕುಚ್ಯುತಿ ಆಗುವುದಿಲ್ಲ. ಏಕೆಂದರೆ, ಹಕ್ಕುಚ್ಯುತಿ ವ್ಯಾಪ್ತಿ ಎಷ್ಟಿದೆ? ಎಂಬುದು ತಮಗೆ ಗೊತ್ತಿದೆ. ಅವರಿಗೆ ಅಲ್ಲಿ ಕೆಲಸ ಮಾಡುವುದಕ್ಕೆ ಅಡ್ಡಿಯಾಗಿದೆ, ಸುಮ್ಮನೆ ಅವರ ವಿರುದ್ಧ ಅಪಪ್ರಚಾರ ಆಗಿದೆ, ಸುಮ್ಮನೆ ಅವರ ಮೇಲೆ ಕೇಸ್ ಹಾಕಲಾಗಿದೆ, ಎಲ್ಲವನ್ನೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಹಕ್ಕುಚ್ಯುತಿ ಸಮಿತಿಗೆ ಹೋಗಲಿಕ್ಕೆ, ಆ ಒಂದು requisite ಇದಕ್ಕಿಲ್ಲ. So, ಅದಕ್ಕೋಸ್ಕರ ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ಸಂಪೂರ್ಣವಾದಂತಹ ವಿವರ ಪಡೆದುಕೊಂಡು, ಯಾವ ರೀತಿಯಾದಂತಹ ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳಲಿ.

(ಗೊಂದಲ)

ಅಧ್ಯಕ್ಷರು : ನಾನು ನನ್ನ ತೀರ್ಮಾನವನ್ನು ಪ್ರಕಟಿಸುತ್ತೇನೆ. ನನಗೆ ಹೇಳುವುದಕ್ಕಾದರೂ ಅವಕಾಶ ಕೊಡಿ.

(ಗೊಂದಲ)

ಶ್ರೀ ವೈ.ಎನ್, ರುದ್ರೇಶ್‌ಗೌಡ : ಇದು ಹಾರಿಕೆ ಉತ್ತರವಾಗಿದೆ. ಮಾನ್ಯ ಸಚಿವರು ಈ ರೀತಿ ಹೇಳುವಂತಿಲ್ಲ. How can he say like this?

(ಗೊಂದಲ)

ಅಧ್ಯಕ್ಷರು : ನೀವು ಕುಳಿತುಕೊಳ್ಳಿ, ನಾನು ಇನ್ನೂ ತೀರ್ಮಾನವನ್ನೇ ಪ್ರಕಟಿಸಿಲ್ಲ. ನೀವು ಈ ರೀತಿ ಎದ್ದು ನಿಂತು ಮಾತನಾಡಿದರೆ ಹೇಗೆ?, ಅಲ್ಲದೆ ಮಾನ್ಯ ಸಚಿವರು ಆ ರೀತಿ ಹೇಳುವಂತಿಲ್ಲವೆಂದು ನೀವು ಹೇಳುವಂತಿಲ್ಲ.

(1-10 PM)

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೆ, ಈ ವಿಚಾರವನ್ನು ತಮಗೆ ಬಿಡುತ್ತೇನೆ, ದಯಮಾಡಿ, ನಮ್ಮಗಳ ಮರ್ಯಾದೆ, ಹಕ್ಕುಚ್ಯುತಿಯಾದಂಥ ಸಂದರ್ಭದಲ್ಲಿ ರಕ್ಷಣೆ ಮಾಡುವುದು ತಮ್ಮ ಜವಾಬ್ದಾರಿ. ನಾನು ಒತ್ತಾಯ ಮಾಡುವುದೇನೆಂದರೆ, ಒಂದು ಸಂದೇಶ ಹೋಗಬೇಕಾಗುತ್ತದೆ, ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸುವುದು ಸೂಕ್ತವೆಂಬುದು ನನ್ನ ಅಭಿಪ್ರಾಯ, ತೀರ್ಮಾನ ತಮಗೆ ಬಿಡುತ್ತೇನೆ.

ಅಧ್ಯಕ್ಷರು : ನಿಯಮ 190ರ ಅಡಿಯಲ್ಲಿ ಮಾನ್ಯ ಸದಸ್ಯರಾದ ಸುರೇಶ್‌ಗೌಡರವರು 26ನೇ ತಾರೀಖು ಅವರ ಕ್ಷೇತ್ರದಲ್ಲಿ ಅರಣ್ಯ ಅಧಿಕಾರಿಗಳು ಯಾವುದೇ ಕಾರಣಗಳನ್ನು ಕೊಡದೆ ಅವರ ಮೇಲೆ ಮೊಕದ್ದಮೆಯನ್ನು ದಾಖಲು ಮಾಡಿದ್ದಲ್ಲದೆ ಪತ್ರಿಕಾ ಹೇಳಿಕೆಯನ್ನು ಕೂಡ ಕೊಟ್ಟು ಒಬ್ಬ ಶಾಸಕನಾಗಿ ತನ್ನ ಕ್ಷೇತ್ರದಲ್ಲಿ ಕರ್ತವ್ಯ ಮಾಡುವುದಕ್ಕೆ ತೊಂದರೆ ಯಾಗುತ್ತಿದೆ ಎಂಬ ವಿಚಾರವನ್ನು ಇಡೀ ಸದನದ ಗಮನಕ್ಕೆ ತರಲಾಗಿದೆ. ಇದರಲ್ಲಿ ಅನೇಕ ಸದಸ್ಯರು ಈ ಬಗ್ಗೆ ಮಾತನಾಡಿ ಸಹಮತವನ್ನು ವ್ಯಕ್ತಪಡಿಸಿದ್ದಾರೆ. ನಿಮಯದಲ್ಲಿ ಹಕ್ಕುಬಾಧ್ಯತೆಯ ಬಗ್ಗೆ ಬಾರದೇ ಹೋದರು, ವಿಶೇಷ ಪ್ರಕರಣವೆಂದು ಪರಿಗಣಿಸಿ, ಒಬ್ಬ ಶಾಸಕನಿಗೆ ಈ ರೀತಿ ತಮ್ಮ ಕರ್ತವ್ಯಕ್ಕೆ ಚ್ಯುತಿಯಾಗುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ ಇಡೀ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಲಾಗಿದೆ.

4. ವಿತ್ತೀಯ ಕಾರ್ಯಕಲಾಪಗಳು :

ವಿಷಯ "2010-11ನೇ ಸಾಲಿನ ಆಯುವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ :

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ (ದೇವರ ಹಿಪ್ಪರಗಿ) : ಮಾನ್ಯ ಅಧ್ಯಕ್ಷರೆ, 2010-11ನೇ ಸಾಲಿನ ಆಯವ್ಯಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಾರ್ಚ್ 5ನೇ ತಾರೀಖು ಈ ಸದನದಲ್ಲಿ ಮಂಡನೆ ಮಾಡಿದ್ದಾರೆ. ಅವರು ಹೇಳಿದ ಹಾಗೆ ಈ ರಾಜ್ಯದಲ್ಲಿ ಸುಮಾರು 40 ವರ್ಷಗಳ ಕಾಲ

ಅವಿರತವಾಗಿ ರಾಜಕೀಯ ಹೋರಾಟವನ್ನು ಮಾಡಿ ಕರ್ನಾಟಕ ರಾಜ್ಯದ ರೈತರ ಪರವಾಗಿ, ಅಭಿವೃದ್ಧಿಯ ಪರವಾಗಿ ಬಹುಶಃ 40 ವರ್ಷಗಳ ಕಾಲ ರಾಜ್ಯದಲ್ಲಿ ಸತತವಾಗಿ ಹೋರಾಟ ಮಾಡಿ ಮುಖ್ಯಮಂತ್ರಿಗಳಾಗಿರುವ ಸನ್ಮಾನ್ಯ ಯಡಿಯೂರಪ್ಪನವರನ್ನು ಹಳ ಪ್ರಮುಖ ನಾಯಕರೆಂದು ನಾವೆಲ್ಲರೂ ಕೂಡ ಒಪ್ಪಿಕೊಳ್ಳಬೇಕಾಗುತ್ತದೆ. ಅವರು ತಮ್ಮ ರಾಜಕೀಯ ಅನುಭವದ ಹಿನ್ನೆಲೆಯಲ್ಲಿ ಮತ್ತು ಹೋರಾಟದ ಹಿನ್ನೆಲೆಯಲ್ಲಿ ಇವತ್ತು 5ನೇ ಬಾರಿ ಕರ್ನಾಟಕದ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ನಾನು ಕೂಡ ಯುವಕನಾಗಿದ್ದಾಗ, ಅವರ ರಾಜಕೀಯ ಹೋರಾಟ, ಅವರು ಮಾಡಿರುವ ಜನಪರ ಕಾಳಜಿಯಿಂದ ಪ್ರಭಾವಿತನಾಗಿರುವ ಒಬ್ಬ ವ್ಯಕ್ತಿ ಎಂದು ನಾನು ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಅಧಿಕಾರ ಬಂದಾಗ ಯಾವ ವಾಸ್ತವಿಕ ಸ್ಥಿತಿಯ ಮೇಲೆ ಈ ರಾಜ್ಯವನ್ನು ಮುನ್ನಡೆಸಬೇಕೆನ್ನುವ ಯೋಜನೆಗಳು, ಆಲೋಚನೆಗಳನ್ನು ಅನುಷ್ಠಾನದ ರೂಪದಲ್ಲಿ ತರಬೇಕಾದರೆ, ಎಲ್ಲಿ ತಪ್ಪುಗಳಾಗುತ್ತಿವೆ, ಯಾವ ಕ್ಷೇತ್ರವನ್ನು ನಾವು ನಿರ್ಲಕ್ಷ ಮಾಡುತ್ತಿದ್ದೇವೆ, ಯಾವ ರೀತಿಯಾಗಿ ಬಜೆಟ್ ಮಂಡನೆ ಮಾಡಿರುವುದನ್ನು ಅನುಷ್ಠಾನ ಮಾಡುತ್ತಿದ್ದೇವೆನ್ನುವುದರ ಬಗ್ಗೆ ಆಲೋಚನೆ ಮಾಡಿದಾಗ ಬಹುಶಃ ಕಳೆದ ಎರಡು ವರ್ಷಗಳಿಂದ ನಾನು ಶಾಸಕನಾಗಿ ಬಂದ ಮೇಲೆ ಕಳೆದ ಎರಡು ವರ್ಷಗಳಿಂದ, 2008–09, 2009–10ರ ಬಜೆಟ್‌ಗಳ ಅನುಷ್ಠಾನದ ಒಂದು ಪಕ್ಷಿನೋಟವನ್ನು ತೆಗೆದಿಟ್ಟಾಗ ಸರ್ಕಾರ ಅನುಷ್ಠಾನದಲ್ಲಿ ಎಡವುತ್ತಿದೆ ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

(ಈ ಸಂದರ್ಭದಲ್ಲಿ ಅಧ್ಯಕ್ಷರ ಪೀಠದಲ್ಲಿ ಮಾನ್ಯ ಶ್ರೀ ಚಂದ್ರಕಾಂತ ಬೆಲ್ಲದ್ ಇದ್ದರು)

ಬಹುಶಃ ಒಂದು ನಾಡು, ಒಂದು ದೇಶವನ್ನು ಕಟ್ಟಬೇಕಾದರೆ, ಭವಿಷ್ಯ ಬೆಳೆಯಬೇಕಾದರೆ ಏನು ಮಾಡಬೇಕೆನ್ನುವುದು ಬಹಳ ಮೂಲಭೂತ ವಾದ ಪ್ರಶ್ನೆ. ಸಧೃಡವಾದಂಥ, ಆರೋಗ್ಯವಾದಂಥ ವ್ಯಕ್ತಿಯನ್ನು ನಾವು ಬೆಳೆಸತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಈ ನಾಡಿನಲ್ಲಿ ಹುಟ್ಟಿದಂಥ ಪ್ರತಿಯೊಬ್ಬ ಪ್ರಜೆ ಉತ್ತಮವಾದ ಶಿಕ್ಷಣವನ್ನು ಪಡೆಯಬೇಕಾಗುತ್ತದೆ. ಉತ್ತಮವಾದ ಶಿಕ್ಷಣವನ್ನು ಪಡೆದಂಥ ವ್ಯಕ್ತಿಗೆ ಸೂಕ್ತವಾದ ಉದ್ಯೋಗವನ್ನು ಒದಗಿಸಬೇಕಾಗುತ್ತದೆ, ಸೂಕ್ತವಾದ ಉದ್ಯೋಗವನ್ನು ಪಡೆದಂಥ ವ್ಯಕ್ತಿ ಆಯಾ ಕ್ಷೇತ್ರದಲ್ಲಿ ತನ್ನ ಸೇವೆಯನ್ನು ಮಾಡುತ್ತಾ ರಾಜ್ಯದ, ದೇಶದ ಮತ್ತು

0.17F-70

ಸಮಾಜವನ್ನು ಅಭಿವೃದ್ಧಿ ಕಡೆಗೆ ಕೊಂಡೊಯ್ಯಬೇಕಾಗುತ್ತದೆ. ಇದು ಒಂದು ರಾಜ್ಯದಲ್ಲಿ, ದೇಶದಲ್ಲಿ ಆಡಳಿತವನ್ನು ನಡೆಸುವ ಸರ್ಕಾರದ ಆದ್ಯ ಕರ್ತವ್ಯ ಎಂಬುದು ನಹಳ ಮುಖ್ಯವೆಂಬುದನ್ನು ನಾನು ಹೇಳುತ್ತೇನೆ. ಇಲ್ಲಿ ನಾನು ಚಾಣುಕ್ಯನ ಒಂದು ಮಾತನ್ನು ಕೂಡ ಹೇಳುತ್ತೇನೆ, ಸುಖಕ್ಕೆ ಮೂಲಂ ಧರ್ಮಂ, ಧರ್ಮಸ್ಯ ಮೂಲಂ ಧನಂ, ಧನಸ್ಯ ಮೂಲಂ ರಾಜ್ಯಂ ಎಂಬುದಾಗಿದೆ. ಅದೇ ರೀತಿಯಾಗಿ ಹಿಂದಿನ ಕಾಲದಲ್ಲಿ ಶುಭಾಷಿತದಲ್ಲಿ ದೇಶ ಅಭಿವೃದ್ಧಿಯಾಗಬೇಕಾಗಿದ್ದರೆ ಬಹಳ ಮುಖ್ಯವಾಗಿ ಏನು ಬೇಕೆಂಬುದನ್ನು, ಈನಾಡಿನ ಅಭಿವೃದ್ಧಿಯಾಗಬೇಕಾಗಿದ್ದರೆ, ಬಹಳ ಮುಖ್ಯವಾಗಿ ಬೇಕಾಗಿ ರುವುದು ಯಾವುದು ಎಂದು ಹೇಳುತ್ತಾರೆ. ಅತ್ಯಂತ ಪ್ರಮುಖವಾಗಿರುವ ಕ್ಷೇತ್ರ, ವಿದ್ಯಾ ದದಾತಿ ವಿನಯಂ, ವಿನಯದ್ಯಾತಿ ಪಾತ್ರತಾಂ, ಪಾತ್ರ ದ್ವಾದನ ಮಾಪ್ನೋತಿ ಧನಾ ಧರ್ಮ ತತಾಸುಖಂ ಎಂದು. ಅಂದರೆ ಇದರ ಅರ್ಥ ಮೊದಲು ವಿದ್ಯೆ, ವಿದ್ಯೆಯಿಂದ ಮನುಷ್ಯ ವಿನಯವನ್ನು ಪಡೆಯುತ್ತಾನೆ, ವಿನಯದಿಂದ ಅವನು ಧರ್ಮಿಷ್ಟನಾಗುತ್ತಾನೆ, ಅದರಿಂದ ಧನಧರ್ಮ ಸಂಪತ್ತನ್ನು ಪಡೆಯುತ್ತಾನೆ ಎಂಬುದು.

ಇವತ್ತು ನಾನು ಶಿಕ್ಷಣ ಕ್ಷೇತ್ರವನ್ನು ತೆಗೆದುಕೊಂಡು ಹೆಚ್ಚು ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ ನಾನು ಕಾಲೇಜಿನ ದಿವಸಗಳಿಂದಿಡಿದು ಇವತ್ತಿನವರೆಗೆ, ಪೀಠದಲ್ಲಿರುವ ಅಧ್ಯಕ್ಷರಾದ, ಬೆಲ್ಲದ್ ಸಾಹೇಬರು ಮೊಟ್ಟಮೊದಲು ಶಾಸಕರಾಗಿದ್ದಾಗ ನಾನು ಮುರುಗಮಠದಲ್ಲಿ ಓದುತ್ತಿದ್ದೆ. ಅಲ್ಲಿಂದ ಇಲ್ಲಿಯವರೆಗೆ ನಾನು ನೋಡಿಕೊಂಡು ಬರುತ್ತಿದ್ದೇನೆ, ಧಾರವಾಡದ ಅನೇಕ ವಿದ್ಯಾರ್ಥಿ ಚಳುವಳಿಗಳಲ್ಲು ಕೂಡ ನಾನು ಭಾಗವಹಿ ಸಿದ್ದೇನೆ. ಇವತ್ತು ಮೂಲಭೂತವಾಗಿರುವ ಪ್ರಶ್ನೆ ಶಿಕ್ಷಣ. ಈ ಶಿಕ್ಷಣವನ್ನು ಯಾವ ರೀತಿಯಾಗಿ ಮುಂದುವರೆಸುತ್ತಿದ್ದೇವೆನ್ನುವುದನ್ನು ನೋಡಿದಾಗ ನಾನು ಗ್ರಾಮೀಣ ಪ್ರದೇಶದಿಂದ ಬಂದವನಾಗಿರುವುದರಿಂದ ಇವತ್ತು ನನ್ನ ಕ್ಷೇತ್ರದಲ್ಲಿರುವ 114 ಹಳ್ಳಿಗಳ ಮತ್ತು 39 ತಾಂಡಗಳ ಪ್ರತಿಯೊಂದು ಪ್ರಾಥಮಿಕ ಶಾಲೆಯಿಂದ ಕಾಲೇಜಿನವರೆಗೆ ಇರುವ ಎಲ್ಲಾ ಸಂಸ್ಥೆಗಳಿಗೆ ಪ್ರತಿವರ್ಷ ಒಂದು ಸಾರಿ ಸ್ವತಃ ಭೇಟಿ ಕೊಡುತ್ತೇನೆ, ಯಾವ ರೀತಿಯಾಗಿ ಈ ಸಮಸ್ಯೆಗಳಿಗೆ ಪರಿಹಾರ ಕೊಡಬೇಕೆನ್ನುವುದನ್ನು ಚರ್ಚೆ ಮಾಡುತ್ತೇನೆ. ಬಹುಶಃ ಪ್ರತಿಭೆ ಎಂಬುದು ಬಡತನ ನೋಡಿ, ಶ್ರೀಮಂತಿಕೆ ನೋಡಿ ಬರುವುದಿಲ್ಲ. ಈ ದೇಶದ ರಾಷ್ಟ್ರಪತಿಗಳಾಗಿದ್ದಂಥ ಅಬ್ದುಲ್ ಕಲಾಂರವರು ಹೇಗೆ ಹುಟ್ಟಿಬಂದರೆನ್ನುವ ಚರಿತ್ರೆಯನ್ನು ಓದುತ್ತೇವೆ. ಅನೇಕ ಜನ

ವಿಜ್ಞಾನಿಗಳು, ಸ್ವತಃ ಪ್ರಧಾನ ಮಂತ್ರಿಗಳಾಗಿರುವ ಮನಮೋಹನ್ ಸಿಂಗ್ ರವರು, ಅವರು ಹೇಳುತ್ತಾರೆ, ನಾನು ಒಬ್ಬ ರೈತನ ಮಗನಾಗಿ, ಒಬ್ಬ ಅರ್ಥಶಾಸ್ತ್ರಜ್ಞನಾಗಿ ನಾನು ಈ ದೇಶದ ಪ್ರಧಾನಮಂತ್ರಿಯಾದೆ ಎಂದು ಹೇಳುವುದನ್ನು ಕೇಳಿ ನನಗೆ ಒಂದು ಸಾರಿ ರೋಮಾಂಚನವೆನಿಸುತ್ತದೆ. ಇವತ್ತು ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಇವತ್ತು 1–10ನೇ ತರಗತಿಯವರೆಗೆ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಲೇ ಬೇಕೆನ್ನುವುದನ್ನು ಅನುಷ್ಠಾನ ಮಾಡುವಲ್ಲಿ ಈ ಸರ್ಕಾರ ವಿಫಲವಾಗುತ್ತಿದೆ. ಇವತ್ತು ಅಲ್ಲಿರುವ ಶಿಕ್ಷಕರು ಎಷ್ಟರಮಟ್ಟಿಗೆ ಈ ಶಿಕ್ಷಣವನ್ನು ಉತ್ತಮವಾಗಿ ಕಲಿಸಬೇಕಾಗಿತ್ತೋ ಆ ಕೆಲಸವಾಗುತ್ತಿಲ್ಲ, ಆ ಅನುಷ್ಠಾನದಲ್ಲಿ ನಾವು ವಿಫಲರಾಗುತ್ತಿದ್ದೇವೆ. ಉದಾ: ಇವತ್ತು ನಮ್ಮ ಉತ್ತರ ಕರ್ನಾಟಕದ ಭಾಗ, ಅಂಕಿ ಅಂಶಗಳನ್ನು ತೆಗೆದು ನೋಡಿ, ಇವತ್ತು ನಾವು ಶಿಕ್ಷಣದ ಗುಣಮಟ್ಟದಲ್ಲಿ ಸಂಪೂರ್ಣವಾಗಿ ಹಿಂದುಳಿದಿದ್ದೇವೆ, ಏನು ಕಾರಣ, ಎಲ್ಲಿ ತಪ್ಪುತ್ತಿದ್ದೇವೆ? ಬಹುಶಃ ಶಿಕ್ಷಣ ಸಚಿವರು ಇಲ್ಲಿದಿದ್ದರೆ ಚೆನ್ನಾಗಿರುತ್ತಿತ್ತು ಎಂದೆನಿಸುತ್ತದೆ.

ಮಾನ್ಯ ಶಿಕ್ಷಣ ಸಚಿವರ ಬಗ್ಗೆ ನನಗೆ ಗೌರವ ಇದೆ. ಆದರೆ ಏನು ಅನುಷ್ಠಾನ ಆಗಬೇಕಾಗಿದೆ, ಅದರಲ್ಲಿ ಸಂಪೂರ್ಣವಾಗಿ ಸರ್ಕಾರ ತಪ್ಪಿದೆ. ಹೇಗೆಂದು ತಮಗೆ ಹೇಳುತ್ತೇನೆ. ಇವತ್ತು ಶಿಕ್ಷಕರಲ್ಲಿ 100 ಕ್ಕೆ 40% ಶಿಕ್ಷಕರು ಶಾಲೆಗಳಲ್ಲಿ absent ಇರುತ್ತಾರೆ. ಹಳ್ಳಿಗಾಡಿನ ಪ್ರದೇಶಗಳಲ್ಲಿ ಶಿಕ್ಷಕರ ಹಾಜರಾತಿಯನ್ನು ಪಡೆಯತಕ್ಕಂತಹ ಕೆಲಸಕ್ಕೆ ಸರ್ಕಾರ ಯಾವ ಯೋಜನೆಯನ್ನು ತಂದಿದ್ದೀರಿ, technical improvements technology ಯನ್ನು use ಮಾಡತಕ್ಕಂತಹ ಕೆಲಸ ಆಗಬೇಕು. ನಾನು ನನ್ನ ಕ್ಷೇತ್ರದಲ್ಲಿ ಮೊಟ್ಟಮೊದಲನೆಯದಾಗಿ ಅಲ್ಲಿರತಕ್ಕಂತಹ DDPI ರವರನ್ನು ಕರೆದು ಒಂದು ಮಾತು ಹೇಳಿದೆ. ಒಂದು software ಬಂದಿದೆ, ಅದನ್ನು ಕೇವಲ DDPI Office ಮತ್ತು BEO office ನಲ್ಲಿ ಸೆಟ್ ಮಾಡಿದರೆ ಸಾಕು. ಆ software develop ಮಾಡುವುದಕ್ಕೆ ಬಹಳ ಕಡಿಮೆ ಹಣ ಖರ್ಚಾಗುತ್ತದೆ. ಮಾನ್ಯ ಅಧ್ಯಕ್ಷರೆ ತಾವೇ ನೋಡಿ ಇವತ್ತು ಶಾಸಕರಿಗೆ ಎರಡು ಸಾರಿ ಸಹಿ ಮಾಡಬೇಕೆಂದು ಹೇಳುತ್ತೀರಿ. ಬೆಳಿಗ್ಗೆ ಒಂದು ಸಾರಿ ಸಹಿ ಮಾಡಬೇಕು ಮತ್ತೆ ಸಾಯಂಕಾಲ ಒಂದು ಸಾರಿ ಸಹಿ ಮಾಡಬೇಕೆಂದು ಹೇಳಿದಿರಿ. ಆದರೆ ಗ್ರಾಮೀಣ ಪ್ರದೇಶದ ಶಿಕ್ಷಕರು ಎಷ್ಟು ಗಂಟೆಗೆ ಹೋಗುತ್ತಾರೆ ಎಷ್ಟು ಗಂಟೆಗೆ ಬರುತ್ತಾರೆಂದು ಗೊತ್ತಿಲ್ಲ. ಇವತ್ತಿಗೂ ಹೇಳುತ್ತೇನೆ, 100 ಕ್ಕೆ 40% ಶಿಕ್ಷಕರು

ಶಾಲೆಗಳಲ್ಲಿ absent ಇರುತ್ತಾರೆ. ಹಾಗಾದರೆ ಗುಣಮಟ್ಟದ ಶಿಕ್ಷಣವನ್ನು ಹೇಗೆ ತರಲಿಕ್ಕೆ ಸಾಧ್ಯ? ಇದಕ್ಕೆ ಶಿಕ್ಷಣ ಇಲಾಖೆ ಹಾಗೂ ಶಿಕ್ಷಣ ಸಚಿವರಲ್ಲಿ ನಾನು ಮನವಿ ಮಾಡುತ್ತೇನೆ, ತಕ್ಷಣ software technology use ಮಾಡಿ ಪ್ರತಿಯೊಬ್ಬ ಶಿಕ್ಷಕರೂ ಕೂಡ ಬೆಳಿಗ್ಗೆ ಒಂದು ಸಾರಿ ಹಾಜರಾತಿ ಹಾಕಬೇಕು, ಮಧ್ಯಾಹ್ನ ಒಂದು ಸಾರಿ ಹಾಜರಾತಿ ಹಾಕಬೇಕು, ಸಾಯಂಕಾಲ ಒಂದು ಸಾರಿ ಹಾಜರಾತಿ ಹಾಕಬೇಕು. ನನ್ನ ಉದ್ದೇಶವೇನೆಂದರೆ, ಕನಿಷ್ಠ ಪಕ್ಷ ಶಿಕ್ಷಕರು ಶಾಲೆಗಳಲ್ಲಿ ಇರುವುದನ್ನು ಕಡ್ಡಾಯವಾಗಿ ಮಾಡುವುದಕ್ಕೆ ಸರ್ಕಾರ ಮೊದಲು ಕ್ರಮ ತೆಗೆದುಕೊಂಡರೆ ಬಹುಶಃ ಸ್ವಲ್ಪ ಮಟ್ಟಿನ ಸುಧಾರಣೆ ತರುವುದಕ್ಕೆ ಸಾಧ್ಯವಾಗುತ್ತದೆ. ಎರಡನೆಯದಾಗಿ, ನಾನು ರಿವ್ಯೂ ಮೀಟಿಂಗ್ ಸ್ವತಃ ಮಾಡಿ ನೋಡುತ್ತಿರುತ್ತೇನೆ. ವಿದ್ಯಾರ್ಥಿಗಳು parents ಮತ್ತು ಶಿಕ್ಷಕರನ್ನು ಕೂರಿಸಿಕೊಂಡು ಸ್ವತಃ ನಾನು ಅನೇಕ ಹಳ್ಳಿಗಳಲ್ಲಿ ರಿವ್ಯೂ ಮೀಟಿಂಗ್ ಮಾಡುತ್ತೇನೆ. ಹಳ್ಳಿಗಳನ್ನು ಉದ್ಧಾರ ಮಾಡಬೇಕಾದರೆ ಇರುವಂತಹ ವಾಸ್ತವಿಕ ಸ್ಥಿತಿಯನ್ನು ನಾನು ಹೇಳುತ್ತಿದ್ದೇನೆ. ನಮ್ಮ ಗ್ರಾಮಗಳು ಉದ್ಧರವಾಗಬೇಕಾದರೆ 10 ರಿಂದ 20 ವರ್ಷ ಯಾವುದೇ ಸರ್ಕಾರ ಬರಲಿ first priority goes to education ಎಂದು ಮಾಡಿದರೆ ಇಡೀ ಹಳ್ಳಿ ತಾನೇ ತಾನಾಗಿ ಅಭಿವೃದ್ಧಿ ಆಗುತ್ತದೆ. ತಾನೇ ತಾನಾಗಿ ಶಿಕ್ಷಣ ಬರುತ್ತದೆ. ಆತ ತನ್ನ ಜ್ಞಾನ ಶಕ್ತಿಯಿಂದ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ. ನಾನು ಇವತ್ತು ರಿವ್ಯೂ ಮೀಟಿಂಗ್ ಮಾಡುವಂತಹ ಸಂದರ್ಭದಲ್ಲಿ ನಾನು ನೋಡುತ್ತೇನೆ, performance, progress report ಇಲ್ಲವೇ ಇಲ್ಲ. ಅಲ್ಲಿ ಯಾವ BEO ಬಂದು ಚೆಕ್ ಮಾಡುವುದಿಲ್ಲ. ಯಾವ ಆಫೀಸರ್‌ಗೆ ಅಲ್ಲಿ ಹಾಕಿರುತ್ತಾರೆ ಒಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 9 ಹಳ್ಳಿಗಳಿಗೆ ಒಬ್ಬ ಅಧಿಕಾರಿಯನ್ನು ಹಾಕಿರುತ್ತಾರೆ ಅವರು ಬಂದು ಚೆಕ್ ಮಾಡುವುದಿಲ್ಲ. ಶಾಲೆಗಳ ಕಟ್ಟಡ ಕೇವಲ ಪ್ರಾರಂಭ ಮಾಡುತ್ತಾರೆ. ಏನು ಬಿಸಿ ಊಟದ ವ್ಯವಸ್ಥೆಯಲ್ಲಿ ಅವ್ಯವಹಾರಗಳಾಗಿವೆ. ಬಿಸಿ ಊಟದ ವ್ಯವಸ್ಥೆಯಲ್ಲಿ ಶಿಕ್ಷಕರು ಹೆಚ್ಚು ಕಾಲ ಕಳೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅದರ ಅರ್ಥ ಎಲ್ಲಾ ಶಿಕ್ಷಕರು ಸಂಪೂರ್ಣವಾಗಿ ತಪ್ಪು ಮಾಡುತ್ತಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ ಊರಲ್ಲಿರತಕ್ಕಂತಹ ರಾಜಕಾರಣ ಶಾಲೆಗಳಿಗೆ ಬರುವುದನ್ನು ತಡೆಯತಕ್ಕಂತಹ ಕೆಲಸ ಮಾಡಬೇಕು. ಎರಡನೆಯದು, ಆಯಾ ಭಾಗದಲ್ಲಿರತಕ್ಕಂತಹ ಶಿಕ್ಷಣ ತಜ್ಞರು ಯಾವ ಯಾವ ಗ್ರಾಮದಲ್ಲಿ ಯಾರು ಶಿಕ್ಷಣದ ಬಗ್ಗೆ ಹೆಚ್ಚು ಗಮನ

ಉಳ್ಳವರು ಇದ್ದಾರೆ. ಯಾವ ಯಾವ ಗ್ರಾಮಗಳಲ್ಲಿ ರೆಸಿಡೆನ್ಷಿಯಲ್ ಸಮಿತಿಗಳನ್ನು ಮಾಡಿದ್ದಾರೆ, ಆ ಸಮಿತಿಗಳನ್ನು ಮಾಡುವಂತಹ ಸಂದರ್ಭದಲ್ಲಿ ಯಾರನ್ನೋ ಅಲ್ಲಿ ಕೂಡಿಸುವಂತಹ ಕೆಲಸ ಆಗಬಾರದು. ಆ ಗ್ರಾಮದಲ್ಲಿ ಭೂಮಿ ದಾನ ಮಾಡಿರುವವರು ಇರುತ್ತಾರೆ, ಶಾಲೆಗಳನ್ನು ಕಟ್ಟುವುದಕ್ಕೆ ದಾನ ಮಾಡಿದವರು ಇರುತ್ತಾರೆ, ಶಿಕ್ಷಣ ತಜ್ಞರು ಇರುತ್ತಾರೆ, ಹೆಚ್ಚು ಓದಿದವರು ಇರುತ್ತಾರೆ, ಅಂತಹವರನ್ನು ತಂದು ಆ ಶಾಲೆಯ ಉಸ್ತುವಾರಿಯನ್ನು ವಹಿಸತಕ್ಕಂತಹ ಕೆಲಸ ಮಾಡಿದರೆ ಬಹುಶಃ ಮಕ್ಕಳ ಭವಿಷ್ಯವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥದ್ದು ಪ್ರಾಥಮಿಕ ಶಿಕ್ಷಣದ ಬಗ್ಗೆ ನಾನು ಸಲಹೆಗಳನ್ನು ಕೊಟ್ಟಿದ್ದೇನೆ. ಇನ್ನು ಎರಡನೆಯದಾಗಿ ಉನ್ನತ ಶಿಕ್ಷಣದ ಬಗ್ಗೆ ಹೇಳಬೇಕಾದರೆ, ಬಹುಶಃ ಅವತ್ತು ನನ್ನ ತಂದೆಗೆ 6,000 ಫೀಸ್ ಕೊಡುವಂತಹ ಸಾಮರ್ಥ್ಯ ಇದ್ದಿದ್ದರೆ ಇವತ್ತು ನಾನು ಎಂಜಿನಿಯರ್ ಅಗಿರುತ್ತಿದ್ದೆ. ನನ್ನದೇ ಉದಾಹರಣೆ ಹೇಳುತ್ತೇನೆ ನಿಮಗೆ. ಆರು ಸಾವಿರ ಫೀಸ್ ಕೊಡುವಂತಹ ಸಾಮರ್ಥ್ಯ ಅವತ್ತು ನಮ್ಮ ತಂದೆಗೆ ಇರಲಿಲ್ಲ. ಗ್ರಾಮೀಣ ಪ್ರದೇಶದ ಕಾಲೇಜುಗಳಿಗೆ ಹೋದರೆ 100ಕ್ಕೆ 80%, 90%, 95% ಮಾಡಿದ್ದಾರೆ ಆದರೆ ಅವನಿಗೆ 12,000 ರೂ. ಸಿಇಟಿ ಫೀಸ್ ಕಟ್ಟತಕ್ಕಂತಹ ಶಕ್ತಿ ಇಲ್ಲ. ಅವನಿಗೆ 20,000 ಫೀಸ್ ಕಟ್ಟತಕ್ಕಂತಹ ಶಕ್ತಿ ಇಲ್ಲ. ನಿಮ್ಮ ಇಂಜಿನಿಯರಿಂಗ್ ಕಾಲೇಜುಗಳು ನಗರಗಳಲ್ಲಿವೆ. ನಿಮ್ಮ ಮೆಡಿಕಲ್ ಕಾಲೇಜುಗಳು ನಗರಗಳಲ್ಲಿವೆ. ಇವತ್ತು ಬೆಳಿಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ನಮ್ಮ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಾದ ಮಾನ್ಯ ರಾಮಚಂದ್ರಗೌಡರು ಮಾತನಾಡುವಾಗ ಸನ್ಮಾನ್ಯ ರೇವಣ್ಣರವರಿಗೆ ಉತ್ತರ ಕೊಡುವಾಗ ಒಂದು ಮಾತು ಹೇಳಿದರು. ನಾವು ಕೇರಳ ಹಾಗೂ ತಮಿಳುನಾಡು ರಾಜ್ಯಗಳಿಗೆ ಹೋಗಿ ವೈದ್ಯರನ್ನು ಬೇಡಿ ತರಬೇಕಾಗಿದೆ. ಎನ್ನುವಂತಹ ಮಾತನ್ನು ಹೇಳಿದರು. ಆದರೆ ಇವತ್ತು ಹೇಳುತ್ತೇನೆ ಗ್ರಾಮೀಣ ಪ್ರದೇಶಗಳಲ್ಲಿ ಬಹಳಷ್ಟು ಪ್ರತಿಭೆಗಳು ಇದೆ. ಅವರನ್ನು ಮೇಲಕ್ಕೆತ್ತುವುದಕ್ಕೆ ಸರ್ಕಾರ ಏನಾದರೂ ಯೋಚನೆ ಮಾಡಬೇಕು. 100ಕ್ಕೆ 98% ಮಾಡಿದ್ದಾರೆ, ನಾನು ಉದಾಹರಣೆ ಸಮೇತವಾಗಿ ಕೊಡುತ್ತೇನೆ. ನನ್ನ ಬಳಿ ಬಂದಂತಹ ಸುಮಾರು 15–20 ಯುವಕರಿಗೆ ನನ್ನ ಕೈಲಾದ ಸಹಾಯ ಮಾಡಿದ್ದೇವೆ. ಅನೇಕ ಜನ ಶಾಸಕರೂ ಕೂಡ ಮಾಡುತ್ತಿದ್ದಾರೆ. ಆದರೆ ಇದು ಸಾಲದು. ಯಾರು 100ಕ್ಕೆ 80 ರಿಂದ 90% ಅಂಕಗಳನ್ನು ತೆಗೆದಿರತಕ್ಕಂತಹ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಗಳಲ್ಲಿದ್ದಾರೆ, ಯಾರು ಬಡವರ ಮಕ್ಕಳು

ಇದ್ದಾರೆ, ಯಾರ ರೈತರ ಮಕ್ಕಳು ಇದ್ದಾರೆ, ಅವರಿಗೆ ಸಂಪೂರ್ಣ ಸರ್ಕಾರವೇ ಭರಿಸಿ ಮೆಡಿಕಲ್ ಇರಬಹುದು, ಇಂಜಿನಿಯರಿಂಗ್ ಇರಬಹುದು, ಅವನು ಎಂ.ಡಿ. ಮಾಡಬಹುದು, ಮುಂದೆ ಎಂ.ಟೆಕ್ ಮಾಡಬಹುದು, he may go to foreign country, he may study further studies. ಅದಕ್ಕೆ ಸರ್ಕಾರ ಸಂಪೂರ್ಣವಾಗಿ ಒತ್ತು ಕೊಡತಕ್ಕಂತಹ ಕೆಲಸ ಆಗಬೇಕು. ಬಡವನ ಮಗನಿಗೆ ದುಡ್ಡು ಇಲ್ಲವೆಂದು ಅವನ ಶಿಕ್ಷಣ ನಿಲ್ಲಬಾರದು. ಬಹಳ ಜನ ವಿದ್ಯಾರ್ಥಿಗಳಿಗೆ ಈ ತೊಂದರೆ ಇದೆ. ಅದನ್ನು ಪರಿಹರಿಸುವುದಕ್ಕೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅನೇಕ ಜನ ಗ್ರಾಮೀಣ ಪ್ರದೇಶದ ಪ್ರತಿಭೆಗಳು ಹಣ ಇಲ್ಲವೆಂದು ಶಿಕ್ಷಣದಿಂದ ವಂಚಿತರಾಗಬಾರದು. ಯಾವ ರೀತಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಕಡ್ಡಾಯ ಶಿಕ್ಷಣ ಕೊಡಬೇಕೆಂದು ಇದೆ, ಅದೇ ರೀತಿಯಾಗಿ ಯಾರು ಅತೀ ಅರ್ಹತೆಯನ್ನು ಹೊಂದಿದ್ದಾನೆ, ಯಾರು ಇಂಜಿನಿಯರ್ ಆಗುವುದಕ್ಕೆ ಅರ್ಹನಿದ್ದಾನೆ, ಯಾರು ಮೆಡಿಕಲ್ ಓದುವುದಕ್ಕೆ ಅರ್ಹನಿದ್ದಾನೆ, ಯಾರು ಎಂ.ಬಿ.ಎ. ಮಾಡುವುದಕ್ಕೆ ಅರ್ಹನಿದ್ದಾನೆ, ಯಾರು B.E.d., ಮಾಡುವುದಕ್ಕೆ ಅರ್ಹನಿದ್ದಾನೆ, ಬಡವ ಎಂದು ಅವನ ಶಿಕ್ಷಣ ಕುಂಠಿತ ಆಗಬಾರದು. ಅಂತಹವರಿಗೆ ಸಂಪೂರ್ಣ ಸರ್ಕಾರವೇ ಭರಿಸಿ ಶಿಕ್ಷಣ ಕೊಡುವ ವ್ಯವಸ್ಥೆ ಈ ರಾಜ್ಯದಲ್ಲಿ ತರಬೇಕೆಂದು ಹೇಳಿ, ನಾನು ಒಬ್ಬ ಬಡ ರೈತನ ಮಗನಾಗಿ ನನಗಾಗಿರತಕ್ಕಂತಹ ನೋವನ್ನು ಕೂಡ ನೋಡಿ ನಾನು ಹೇಳುತ್ತಿದ್ದೇನೆ. ಮುರುಘಾ ಮಠದಲ್ಲಿ ಮಹಾಂತ ಸ್ವಾಮಿಗಳ ಊಟ ಹಾಕದೆ ಹೋಗಿದ್ದರೆ ಬಹುಶಃ ನಾನು ಎಂ.ಎಸ್.ಸಿ. ಓದುವುದಕ್ಕೆ ಆಗುತ್ತಿರಲಿಲ್ಲ. ಇದು ವಾಸ್ತವಿಕ ಸ್ಥಿತಿ. ಆ ಸ್ಥಿತಿಯನ್ನು ನಾನು ಇವತ್ತು ಒಬ್ಬ ಶಾಸಕನಾಗಿ ಬಂದ ಮೇಲೆ ಗ್ರಾಮೀಣ ಪ್ರದೇಶಗಳಲ್ಲಿ ವಿಧ್ಯಾರ್ಥಿಗಳಿಗೆ ಏನು ತೊಂದರೆ ಇದೆ, ಅದನ್ನು ನಾನು ತಮ್ಮ ಮುಂದೆ ಇಡತಕ್ಕಂತಹ ವ್ಯವಸ್ಥೆಯನ್ನು ಮಾಡಿದ್ದೇನೆ. ಉದಾಹರಣೆಗೆ ಇಂಜಿನಿಯರಿಂಗ್ ಹುಡುಗರು ಇಲ್ಲಿ ಬರುತ್ತಾರೆ, ಅಂಬೇಡ್ಕರ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅವನಿಗೆ ಸೆಲೆಕ್ಷನ್ ಆಗುತ್ತದೆ. ಅವನು ಎಲ್ಲಿರಬೇಕು? 12 ರಿಂದ 20 ಸಾವಿರ ರೂಪಾಯಿ ಕಟ್ಟಬೇಕು, ಸರಿ ಎಲ್ಲಿಂದಲೋ ತಂದು ಕಟ್ಟಿದ. ಅವನು ಎಲ್ಲಿರಬೇಕು, ಹಾಸ್ಟೆಲ್‌ನಲ್ಲಿ ಇರುವುದಕ್ಕೆ ಅವಕಾಶವಿಲ್ಲ. ಅಲ್ಲಿ ಕೆಲವೊಂದು ಲಿಮಿಟೆಡ್ ಸೀಟ್‌ಗಳಿವೆ. ಅವನು ಹೊರಗಡೆ ರೂಮ್ ಮಾಡಿಕೊಳ್ಳಬೇಕು.

3,000 ರೂಮಿನ ಬಾಡಿಗೆ ಕಟ್ಟಬೇಕು. ಕಾಲೇಜಿನಿಂದ ಹೋಗಿ ಅಡಿಗೆ ಮಾಡಿಕೊಳ್ಳಬೇಕು. ಅವನಿಗೆ ಒಂದು ತಿಂಗಳಿಗೆ ಎಷ್ಟು ಖರ್ಚು ಬರುತ್ತದೆ, ಬ್ಯಾಂಕಿನಲ್ಲಿ ಲೋನ್ ಸಿಗುತ್ತದೆ ಎಂದು ಕೆಲವರು ಹೇಳುತ್ತಾರೆ. ನಾನೇ ಸ್ವತಃ ಅನೇಕ ಬ್ಯಾಂಕುಗಳಿಗೆ ದೂರವಾಣಿ ಮಾಡಿದ್ದೇನೆ. ಸಾಲ ಕೊಡುವುದಿಲ್ಲ. ಅವನಿಗೆ ಆಸ್ತಿ ಇದ್ದರೆ ಅಂತಹವರಿಗೆ ಸಾಲ ಕೊಡುತ್ತಾರೆ. ಇಲ್ಲದಿದ್ದರೆ ಇಲ್ಲ. ನನ್ನ ಕ್ಷೇತ್ರದ ಪಕ್ಕದ ಒಂದು ಕ್ಷೇತ್ರ ನನ್ನ ಆತ್ಮೀಯ ಸ್ನೇಹಿತರು ಕಟಕದೋಂಡಿಬಾ ಶಾಸಕರು ಇಲ್ಲಿಯೇ ಇದ್ದಾರೆ. ಅವರ ಕ್ಷೇತ್ರದಲ್ಲಿ ಒಂದು ಊರಿನಲ್ಲಿ ಒಬ್ಬ ಹುಡುಗನಿಗೆ ಸಾಲ ಕೊಡಿ ಎಂದು ಆರು ತಿಂಗಳ ಕಾಲ ಬೇಡಿದೆ. ಕೊಡಲಿಲ್ಲ. ಕೊನೆಗೆ ಅವನು ಸುಮಾರು ಒಂದು ವಾರ ಕಾಲ ಬ್ಯಾಂಕಿನ ಮುಂದೆ ಸತ್ಯಾಗ್ರಹ ಕುಳಿತ. ಸತ್ಯಾಗ್ರಹ ಕುಳಿತ ಮೇಲೆ ಆ ಬ್ಯಾಂಕಿನವರು ಒಪ್ಪಿಕೊಂಡು ಆ ವಿದ್ಯಾರ್ಥಿಗೆ ಸಾಲ ಕೊಡುವುದಕ್ಕೆ ಮುಂದೆ ಬಂದರು. ಹೀಗೆ ಒಂದೆರಡು ಕೇಸುಗಳನ್ನು ನಾವು ಶಾಸಕರು ಬಗೆಹರಿಸ ಬಹುದು. ಆದರೆ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರತಕ್ಕಂತಹ ಬಡ ಮಕ್ಕಳು ಅವರು ಯಾವುದೇ ಜಾತಿ ಧರ್ಮದವರಾಗಲಿ, ಇಲ್ಲಿ ಏನು ತೊಂದರೆ ಬರುತ್ತದೆ ಎಂದರೆ, ನಾವು ಕೆಲವೊಂದು ಸವಲತ್ತುಗಳನ್ನು ಜಾತಿ ಆಧಾರದ ಮೇಲೆ ಕೊಡುತ್ತೇವೆ. ನಿಜ ಅದು ಕೊಡಬೇಕಾದುದು ಧರ್ಮ ಸಾಮಾಜಿಕ ನ್ಯಾಯವನ್ನು ಉಳಿಸಬೇಕು ಉಳಿಸೋಣ. ಅದರ ಜೊತೆಗೆ ಯಾವುದೇ ಜಾತಿ ಧರ್ಮದವರಾಗಿರಲಿ ಅವರು ಬಡವರಾಗಿದ್ದರೆ ಅವನಿಗೆ ಉನ್ನತ ಶಿಕ್ಷಣ ಕೂಡ ಉಚಿತವಾಗಿ ಕೊಡತಕ್ಕಂತಹ ಯೋಜನೆ ಈ ಸರ್ಕಾರ ತರಬೇಕೆಂಬ ಮಾತನ್ನು ನಾನು ಹೇಳುತ್ತಾ,

ಛೇರ್ಮನ್ : ಪಾಟೀಲರೇ ಸರ್ಕಾರಕ್ಕೆ ಒಳ್ಳೆಯ ಸಲಹೆ ಕೊಡುತ್ತಿದ್ದೀರಿ.

ಶ್ರೀ ಎ.ಎನ್. ಪಾಟೀಲ್ ನಡಹಳ್ಳಿ : ಧನ್ಯವಾದ ಅಧ್ಯಕ್ಷರೆ, ನನ್ನ ಅಭಿಪ್ರಾಯಕ್ಕೆ ಮತ್ತು ತಮ್ಮ ಅಭಿಪ್ರಾಯಕ್ಕೆ ಸಹಮತ ಇರುವುರಿಂದ ಬಹಳ ಸಂತೋಷ. ನಾನು ಹೆಮ್ಮೆ ಪಡುತ್ತೇನೆ. ಒಂದು ಕಡೆಗೆ ನಾವು ಮಠಗಳಿಗೆ ಅನುದಾನ ಕೊಡುವುದನ್ನು ಖಂಡಿತವಾಗಿ ವಿರೋಧಿಸುತ್ತೇನೆ. ಇವತ್ತು ಅನೇಕ ಮಠಗಳಲ್ಲಿ ಉಚಿತವಾಗಿ ಅನ್ನ ಪ್ರಸಾದ ಶಿಕ್ಷಣ ಇಲ್ಲದೆ ಹೋಗಿದ್ದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ಜನ ಇಷ್ಟೊಂದು ಮಟ್ಟಕ್ಕೆ ನಾವು ಶಿಕ್ಷಣವನ್ನು ಗಳಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅದರ ಜೊತೆಯಲ್ಲಿ ಸರ್ಕಾರದ ಆದ್ಯ ಕರ್ತವ್ಯಗಳನ್ನು ನಾನು ಹೇಳುತ್ತಿದ್ದೇನೆ. ಎಂ.ಡಿ. ಸೀಟ್ ಬಗ್ಗೆ ಒಂದು ಮಾತು

ಹೇಳುತ್ತೇನೆ. ನಾನು ಸಹಾಯ ಮಾಡಿದಂತಹ ಒಬ್ಬ ಹುಡುಗ ಎಂ.ಬಿ.ಬಿ.ಎಸ್. ಮುಗಿಸಿದ್ದಾನೆ. ಅವನಿಗೆ ಎಂ.ಡಿ. ಮಾಡಬೇಕೆಂದು ಆಸೆ ಇದೆ. ಒಬ್ಬ ಎಂ.ಡಿ. ಮಾಡಬೇಕೆಂದರೆ ಸುಮಾರು 75 ಲಕ್ಷ ರೂ. ಗಳಿಂದ ಒಂದು ಕೋಟಿ ರೂಪಾಯಿಗಳವರೆಗೆ ಖರ್ಚು ಬರುತ್ತದೆ. ಆದರೆ ಆತ ಬಡವ. ಅವನ ಕನಸು ಎಂ.ಡಿ. ಪಾಸ್ ಮಾಡಬೇಕೆಂದಾಗಿತ್ತು. ಅಧರೆ ಎಂ.ಡಿ. ಮಾಡಬೇಕಾದರೆ ಸುಮಾರು 75 ಲಕ್ಷದಿಂದ 1 ಕೋಟಿ ರೂ.ಗಳವರೆಗೆ ಖರ್ಚು ಬರುತ್ತದೆ. ಇವತ್ತು ಸನ್ಮಾನ್ಯ ಸಚಿವರಾದ ರಾಮಚಂದ್ರಗೌಡರು ಒಂದು ಮಾತನ್ನು ಹೇಳಿದ್ದಾರೆ, ಒಂದು ಕಾಲಕ್ಕೆ ಮುಂದೆ ಒಂದು ಪರಿಸ್ಥಿತಿ ಬರುತ್ತದೆ, ಆಗ ನಮ್ಮ ರಾಜ್ಯದಲ್ಲಿ ಇಂಜಿನಿಯರ್ ಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ, ಡಾಕ್ಟರ್‌ಗಳನ್ನು ಹುಡಕಿಕೊಂಡು ಹೋಗಬೇಕಾಗುತ್ತದೆ. ಇದರ ಪರಿಣಾಮ ಏನಾಗುತ್ತದೆ ಎಂದು ಆರೋಗ್ಯ ಇಲಾಖೆಯ ವಿಚಾರವನ್ನಿಟ್ಟುಕೊಂಡು ಹೇಳುತ್ತೇನೆ. ಇದಕ್ಕೆ ಪೂರಕವಾಗಿ ಆರೋಗ್ಯ ಇಲಾಖೆಯಲ್ಲಿ ಈ ಪರಿಸ್ಥಿತಿಯಗಿದೆ? 50 ಸಾವಿರ ರೂಪಾಯಿಗಳನ್ನು ತಕ್ಷಣ ಗೌರವಧನವಾಗಿ ಕೊಟ್ಟು ಒಂದೊಂದು ಕೇಸ್ ಅಟೆಂಡ್ ಮಾಡಿರುವುದಕ್ಕೂ 1,500 ರೂಪಾಯಿಗಳನ್ನು ಕೊಡುತ್ತಾರೆ. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಸ್ತ್ರೀರೋಗ ತಜ್ಞರು ಒಂದು ಡೆಲಿವರಿ ಕೇಸ್‌ನ್ನು ಅಟೆಂಡ್ ಮಾಡಿದರೆ 1,500 ರೂಪಾಯಿಗಳನ್ನು ಎಕ್ಸ್‌ಟ್ರಾ ಕೊಡುತ್ತಾರೆ. 50 ಸಾವಿರ ರೂಪಾಯಿ ಗೌರವಧನವನ್ನು ಕೊಡುವುದಲ್ಲದೆ ಎಕ್ಸ್‌ಟ್ರಾ 1,500 ರೂಪಾಯಿಗಳನ್ನು ಕೊಟ್ಟರೂ ಕೂಡ ಇವತ್ತು ಡಾಕ್ಟರಿಲ್ಲ. ಇದಕ್ಕೆ ಕಾರಣವೇನು? ಇವತ್ತು ನಮ್ಮ ರಾಜ್ಯದಲ್ಲಿ ಡಾಕ್ಟರ್ ಆಗುವಂಥ ಅವಕಾಶಗಳಿರುವ ಅಭ್ಯರ್ಥಿಗಳಿಗೆ ಹಣವೇ ಮೂಲ. ಅದಕ್ಕೊಂದು ಸುಭಾಷಿತದಲ್ಲಿ ಹೇಳುತ್ತಾರೆ, ಏನೆಂದರೆ 'ಯಸ್ಯಾಸ್ಯವಿತ್ತಂ ಸನಲತ್‌ಕುಲೇನ ಸಪಂಡಿತಸ್ಯ ಸುಖಮಾಂಗಿಲಗ್ನ ಸಹೇವವಕ್ತ ಸಚದರ್ಶನೀಯ: ಸರ್ವೇ ಗುಣ ಕಾಂಚನ ಮಾಶ್ರಯಂತಿ ಎಂದು ಹೇಳಿದ್ದಾರೆ. ಇವತ್ತು ಕಲಿಯುಗ. 'ಯಸ್ಯಾಸ್ಯವಿತ್ತಂ ಸನರತ್ ಕುಲೇನ ಸಂಪಡಿತಸ್ಯ ಸುಖಮಾಂಗಿಲಗ್ನ.' ಯಸ್ಯ ಎಂದರೆ ಯಾರಲ್ಲಿ ವಿತ್ತಂ ಎಂದರೆ ಹಣ ಆಸ್ತಿ ಇರುತ್ತದೆಯೋ, ಯಸ್ಯಾಸ್ಯವಿತ್ತಂ ಸನರತ್ ಕುಲೇನ ಎಂದರೆ ಅವನೇ ಎಲ್ಲ ಜಾತಿಗಳಿಗೂ ಉತ್ತಮ ಜಾತಿಯವನು. ಸಹೇವವಕ್ತ ಎಂದರೆ ಅವನು ಏನನ್ನು ಹೇಳುತ್ತಾನೋ, ಸಚದರ್ಶನೀಯ: ಎಂದರೆ ಅವನು ಹೇಳಿದ್ದೇ ವೇದವಾಕ್ಯ. ಸರ್ವೇಗುಣಕಾಂಚನಮಾಶ್ರಯಂತಿ ಎಂದರೆ ಎಲ್ಲ ಗುಣಗಳು ಅಂದರೆ

ಉತ್ತಮವಾದಂಥ ಎಲ್ಲ ಗುಣಗಳೂ ಕೂಡ ಹಣವನ್ನೇ ಅಶ್ರಯಿಸಿವೆ. ಅದಕ್ಕಾಗಿಯೇ 'ಯಸ್ಯಾಸ್ಯವಿತ್ತಂ ಸನಲತ್ ಕುಲೀನ ಸಂಪಡಿತಸ್ಯ ಸುಖಮಾಂಗಿಲಗ್ನ ಸಹೇವವಕ್ತ ಸಚದರ್ಶನೀಯ:' ಎಂದು ಹೇಳಿ ಹಿಂದೆ ಸುಭಾಷಿತದಲ್ಲಿ ಹೇಳಿದ್ದಾರೆ.

ಶ್ರೀ ನೆ.ಲ. ನರೇಂದ್ರಬಾಬು : ಪಾಟೀಲ್‌ರೆ, ತಾವು ಸರಿಯಾಗಿಯೆ ಹೇಳಿದಿರಿ. ದುಡ್ಡು ಇದ್ದವನೇ ದೊಡ್ಡಪ್ಪ. ಆದರೆ ಅದೃಷ್ಟ ಅವರಪ್ಪ.

ಶ್ರೀ ಎ.ಎಸ್. ಪಾಟೀಲ್ : ಆದರೆ ಒಂದು ಮಾತನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ವಿದ್ಯೆಯನ್ನು ಹಣದಿಂದ ಖರೀದಿ ಮಾಡುವುದಕ್ಕಾಗುವುದಿಲ್ಲ. ವಿದ್ಯೆ ಶ್ರೀಮಂತನ ಮನೆಗಷ್ಟೇ ಬರುವುದಿಲ್ಲ. ವಿದ್ಯೆ ಹೆಚ್ಚು ಎಲ್ಲಿ ಬರುತ್ತದೆಂದರೆ ಬಡವರಲ್ಲಿ ಬರುತ್ತದೆ. ಏಕೆ ಹೆಚ್ಚು ಅವರಲ್ಲಿ ಬರುತ್ತದೆಂದರೆ ಆ ಬಡತನದಲ್ಲಿ ಹುಟ್ಟಿರತಕ್ಕಂಥ ವಿದ್ಯಾರ್ಥಿಗೆ ಕಷ್ಟ ಏನು ಎಂದು ಗೊತ್ತಿರುತ್ತದೆ, ನೋವು ಏನು ಎಂದು ಗೊತ್ತಿರುತ್ತದೆ, ಉಪವಾಸ ಏನು ಎಂದು ಗೊತ್ತಿರುತ್ತದೆ. ಅದಕ್ಕಾಗಿಯೇ ಅವನಲ್ಲಿ ವಿದ್ಯೆ ಬರುತ್ತದೆ ಮತ್ತು ಅದರ ಫಲ ಅವನಿಗೆ ಬರುತ್ತದೆ. ಇದು ಶ್ರೀಮಂತರ ಮಕ್ಕಳಲ್ಲಿ ಬಹಳ ಕಡಿಮೆ. ಬೇಕಾದರೆ ಹಲವಾರು ಉದಾಹರಣೆಗಳನ್ನು ತಾವು ಇತಿಹಾಸದಲ್ಲಿ ತೆಗೆದು ನೋಡಬಹುದು. ಅದಕ್ಕಾಗಿಯೇ ನಾನು ಹೇಳುವುದೇನೆಂದರೆ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಉಚಿತವಾಗಿ ಇಂಜಿನಿಯರಿಂಗ್ ಓದುವುದಕ್ಕೆ ಮೆಡಿಕಲ್ ಮಾಡುವುದಕ್ಕೆ, ಎಂ.ಡಿ. ಮಾಡುವುದಕ್ಕಾಗಿ ಸರ್ಕಾರ ಒಂದು ಯೋಜನೆಯನ್ನು ತರಬೇಕು. ತಕ್ಷಣದಲ್ಲಿಯೇ ಈ ರೀತಿ ಮಾಡಿ ಅನುಷ್ಠಾನಕ್ಕೆ ತಂದರೆ ಕನಿಷ್ಠ ಇನ್ನು ಹತ್ತು ವರ್ಷದಲ್ಲಿ ಒಂದೊಂದು ಹಳ್ಳಿಯಿಂದ ನಾಲ್ಕು ನಾಲ್ಕು ಇಂಜಿನಿಯರ್‌ಗಳನ್ನು ತಯಾರು ಮಾಡಬಹುದು, ನಾಲ್ಕು ನಾಲ್ಕು ಹತ್ತತ್ತು ಡಾಕ್ಟರ್‌ಗಳನ್ನು ತಯಾರು ಮಾಡಬಹುದು, ನಾಲ್ಕು ನಾಲ್ಕು ಫಾರಿನ್ ದೇಶಗಳಲ್ಲಿ import, export ಎಂದು ನಾವು ಏನು ಹೇಳುತ್ತೇವೆ, ನಮ್ಮ ದಿಗ್ಗಜರು ಬ್ರಿಟಿಷ್ ಮತ್ತು ಇಂಗ್ಲೆಂಡ್ ಡಾಕ್ಟರ್‌ನ್ನು ನೋಡುತ್ತೇವೆ, ಇವತ್ತಿಗೂ import, export business, ಯಾವುದೇ business ಮಾಡಲಿ, ನಮ್ಮ ಬಾಸ್ ಯಾರು ಎಂದರೆ ಇಂಗ್ಲೆಂಡಿನವರು ಎಂದು ಹೇಳುತ್ತಾರೆ. ಅವರು ನಮ್ಮನ್ನು ಬಿಟ್ಟು ಹೋಗಿರಬಹುದು, ಅವರೇ ಇವತ್ತಿಗೂ ನಮ್ಮನ್ನು ಕಂಟ್ರೋಲ್ ಮಾಡುತ್ತಿದ್ದಾರೆ. ಅಮೆರಿಕದವರಿಗಿಂತಲೂ ಕೂಡ ವ್ಯವಹಾರದಲ್ಲಿ ಮತ್ತು

ಬುದ್ಧಿಯಲಿ ಇವತ್ತು ಕಂಟ್ರೋಲ್ ಮಾಡತಕ್ಕಂಥ ದೇಶ ಯಾವುದು ಎಂದರೆ, ನೀವು ಎಲ್ಲಿಗೇ ಹೋಗಿ ಈ ಬಗ್ಗೆ ಕೇಳಿದರೂ ಕೂಡ ಇಂಗ್ಲೆಂಡ್‌ನವರು ಎನ್ನುತ್ತಾರೆ. ಏಕೆಂದರೆ ಅವರು ಅಷ್ಟೊಂದು ಬುದ್ಧಿವಂತರು. ಅಂಥ ಬುದ್ಧಿಶಕ್ತಿ ನಮ್ಮ ದೇಶದವರಲ್ಲಿದೆ. ಅದನ್ನು ಉಳಿಸತಕ್ಕಂಥ ಕೆಲಸದಲ್ಲಿ ಸರ್ಕಾರ ಒಂದು ಯೋಜನೆಯನ್ನು ತರಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಕೈಗಾರಿಕೆ ಬಗ್ಗೆ ಹೇಳುವುದಾದರೆ, ನಮ್ಮ ಕೈಗಾರಿಕಾ ಸಚಿವರು ಇಲ್ಲಿದ್ದಾರೆ. ನಮ್ಮ ಕೈಗಾರಿಕಾ ಸಚಿವರ ಹೇಳಿಕೆಗಳನ್ನು ನಾನು ನೋಡುತ್ತಿರುತ್ತೇನೆ. ನನಗೆ ಅವರು ಆತ್ಮೀಯರು. ನಮಗೆ ಹೆಮ್ಮೆ ಇದೆ. ನಮ್ಮ ಭಾಗದವರೊಬ್ಬರು ಕೈಗಾರಿಕಾ ಸಚಿವರಾಗಿದ್ದಾರೆಯಾದ ಕಾರಣ ಅವರು ನಮ್ಮ ಭಾಗಕ್ಕೆ ಕೈಗಾರಿಕೆಗಳನ್ನು ತರುತ್ತಾರೆನ್ನುವ ಭಾವನೆ ಇದೆ. ಆದರೆ ಒಂದು ಮಾತನ್ನು ಹೇಳುತ್ತೇನೆ, Industry ಏನನ್ನು ಬಯಸುತ್ತದೆ? Firstly land, water, power, money & man power. ಹೌದಲ್ಲವೆ ಸಾರ್? ಇವತ್ತು ನಾವು ಲ್ಯಾಂಡ್ ತೆಗೆದುಕೊಳ್ಳುವುದಕ್ಕೆ ಹೊರಟಿದ್ದೇವೆ. ಲ್ಯಾಂಡ್ ತೆಗೆದುಕೊಳ್ಳು ವುದಕ್ಕೆ ಹೋದಾಗ ಏನು ಗಲಾಟೆಗಳು ನಡೆಯುತ್ತಿವೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಅದರಲ್ಲಿ ಎಷ್ಟು ಸತ್ಯವಿದೆ, ಎಷ್ಟು ಸುಳ್ಳಿದೆ ಎನ್ನುವುದನ್ನು ಬೇರೆ ರೀತಿಯಲ್ಲಿ ಚರ್ಚೆಗೆ ಬಂದಾಗ ಅದರ ಮೇಲೆ ಚರ್ಚೆ ಮಾಡೋಣ. ಆದರೆ ಇವತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾದ ಕರ್ತವ್ಯ ಯಾರದು ಎಂದರೆ ಸರ್ಕಾರದ್ದು. ಹೇಳಿಕೆಗಳನ್ನು ಕೊಡುವುದಷ್ಟೇ ಅಲ್ಲ. ನಾವು ಹೇಳುತ್ತೇವೆ, ಓ ಇಷ್ಟಿಷ್ಟು ಲಕ್ಷ ಭೂಮಿಯನ್ನು ಖರೀದಿ ಮಾಡಿದರೆ ಅದರ ಮೇಲೆ ಇಂಡಸ್ಟ್ರಿ ಇಷ್ಟು ಬರುತ್ತದೆಂದು. ನಾನೂ ಒಂದೆರಡ್ಮೂರು ಜಾಗ ತೆಗೆದುಕೊಂಡಿದ್ದೇನೆ. ನಾವೂ ಪ್ರಾಜೆಕ್ಟ್ ಕೊಡುತ್ತೇವೆ. ಆದರೆ ಪ್ರಾಜೆಕ್ಟ್ ಕೊಟ್ಟ ತಕ್ಷಣ ಅದರ ಪ್ರಾಜೆಕ್ಟ್ ಮೇಲೆ ಇಂತಿಷ್ಟು ಜನರಿಗೆ ಉದ್ಯೋಗ ಕೊಡುತ್ತೇನೆಂದು ಕ್ಲಾರಿಫಿಕೇಶನ್ ಕೊಟ್ಟಿರುತ್ತಾನೆ. ಆದರೆ ಬಂದು ಬಿಟ್ಟಿತೆ ಉದ್ಯೋಗ? ಇಲ್ಲ. ಇವತ್ತು ಎಲ್ಲ Industrilists ಬೆಂಗಳೂರಿಗೇ ಬರಲು ಇಷ್ಟಪಡುತ್ತಾರೆ. ಏಕೆ? ಏಕೆಂದರೆ ಇಡೀ ರಾಜ್ಯದಲ್ಲಿ ಕತ್ತಲು ಇರಬಹುದು, ಆದರೆ ಬೆಂಗಳೂರಿನಲ್ಲಿ 23 ತಾಸು ಕರೆಂಟ್‌ನ್ನು ಕೊಟ್ಟೇ ಕೊಡುತ್ತೀರಿ. Main is Power. ಇನ್ನು ಎರಡನೆಯದಾಗಿ ಭೂಮಿ. ಇಲ್ಲಿ ಭೂಮಿ ದುಬಾರಿ ಇರಬಹುದು. ನಮ್ಮ ಬಿಜಾಪುರದಲ್ಲಿ, ಬಾಗಲಕೋಟೆಯಲ್ಲಿ, ಹುಬ್ಬಳ್ಳಿಯಲ್ಲಿ, ಗುಲ್ಬರ್ಗಾದಲ್ಲಿ ಕಡಿಮೆ ಇರಬಹುದು, ಆದರೆ ಇಲ್ಲಿ ಇನ್ನೊಂದು ಏನೆಂದರೆ,

why Bangalore is so important for the Industrialists? Why not Hubli, Dharwad? ಧಾರವಾಡಕ್ಕೆ, ಗುಲ್ಬರ್ಗಾಕ್ಕೆ ಮತ್ತು ಹುಬ್ಬಳ್ಳಿಗೆ ಏಕೆ Industrialists ಹೋಗುವುದಿಲ್ಲ.? ಏಕೆ ಅವರು ಹೆಚ್ಚಾಗಿ ಬೆಂಗಳೂರಿಗೇ ಬರುತ್ತಾರೆ? ಅದಕ್ಕೆ ಪರಿಹಾರಗಳನ್ನು ಸರ್ಕಾರ ಯಾವ ರೀತಿಯಾಗಿ ಹುಡುಕಬೇಕು ಎನ್ನುವುದನ್ನು ನಾನು ಹೇಳಬಯ ಸುತ್ತೇನೆ. ಒಂದನೆ ಯದಾಗಿ, human resource, experts to work in the industry. ನೀವು ಯಾವುದೇ ಇಂಡಸ್ಟ್ರೀ ತೆಗೆದುಕೊಳ್ಳಿ, ಬೆಂಗಳೂರಿನಲ್ಲಿ ಇಂಡಸ್ಟ್ರಿಯನ್ನು ಹಾಕಿದರೆ experts, skilled workers ಸಿಗುತ್ತಾರೆ. ಆ skilled workers ತಯಾರು ಮಾಡುವುದಕ್ಕೆ ಸರ್ಕಾರ ವಿವಿಧ ಜಿಲ್ಲೆಗಳಲ್ಲಿ ಏನು ಕ್ರಮವನ್ನು ತೆಗೆದು ಕೊಳ್ಳುತ್ತದೆ ಎನ್ನುವುದರ ಮೇಲೆ ಆ Industrialists ಹುಬ್ಬಳ್ಳಿ-ಧಾರವಾಡಕ್ಕೆ ಹೋಗುತ್ತಾರೆ, ಬಾಗಲಕೋಟೆಗೆ ಹೋಗುತ್ತಾರೆ, ಗುಲ್ಬರ್ಗಾಕ್ಕೆ ಹೋಗುತ್ತಾರೆ. ನಾವು ಇಲ್ಲಿ. ಪುಸ್ತಕದಲ್ಲಿ ಹೇಳುತ್ತೇವೆ. ಏನೆಂದರೆ ಇಂತಿಷ್ಟು ಜನರಿಗೆ ನಾವು skilled training ಕೊಡುತ್ತೇವೆ, ಇಷ್ಟು ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆಂದು. ಆದರೆ ಅನುಷ್ಠಾನ ಮಾಡುವುದರಲ್ಲಿ ನಾವು ಎಷ್ಟು ಪ್ರಾಮಾಣಿಕರಿದ್ದೇವೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಆ ಅನುಷ್ಠಾನದಲ್ಲಿ ನಾವು ತಪ್ಪುತ್ತಿದ್ದೇವೆ ಎನ್ನುವುದನ್ನು ನಮ್ಮ ಕೈಗಾರಿಕಾ ಸಚಿವರು ಒಪ್ಪಿಕೊಳ್ಳುತ್ತಾರೆ ಮತ್ತು ಅದನ್ನು ಸರಿಪಡಿಸುತ್ತಾರೆ ಎನ್ನುವ ವಿಶ್ವಾಸ ನನಗಿದೆ. Skilled workers ವಿಷಯ ಇದು ಒಂದು. ಇನ್ನು ಎರಡನೆ ಯದಾಗಿ ತಮಗೆ ಆಗಲೇ ಹೇಳಿದೆ. Power, ಆ Power ಅನ್ನು ಎಲ್ಲಾ Industry ಗಳಿಗೆ ಸತತವಾಗಿ ಕೊಡತಕ್ಕಂಥ ಕೆಲಸವಾಗಬೇಕು. ಇನ್ನು ಮೂರನೆಯದಾಗಿ connectivity ಯಲ್ಲಿ Road Transport, Rail Transport & Airport connection & port connection, ಇವು ನಮ್ಮ ರಾಜ್ಯದಲ್ಲಿ ಎಷ್ಟರಮಟ್ಟಿಗೆ ಆಗಿದೆ? ದಯಮಾಡಿ ತಾವು ಇವತ್ತು ನೋಡಿ, ಒಂದೇ ಒಂದು Port ಇದೆಯೆ ಸ್ವಾಮಿ? ಹೇಳಿ ನೋಡೋಣ. ಒಂದು ಪೋರ್ಟ್ ಇದೆಯೆ ನಮ್ಮ ರಾಜ್ಯದಲ್ಲಿ? ಮಂಗಳೂರು ಪೋರ್ಟ್ ಇದೆ ಸ್ವಾಮಿ, disconnected, no trucks can enter. ಇವತ್ತು iron ores ಗಳಿಂದ ರಸ್ತೆ ಕೆಟ್ಟುಹೋಗಿದೆಯೆಂದು ಒಂದು ಕಡೆ ಆರೋಪ ಹೊರಿಸಬಹುದು. ಅದು ಬೇರೆ ವಿಚಾರ. ಅದರ ಮೇಲೆ ಚರ್ಚೆಗೆ ಬಂದಾಗ

how the mining industry is supporting the development of the nation ಎಂದು ನಾನು ಹೇಳುತ್ತೇನೆ. Value added products ಏನು ಬರುತ್ತವೆ, ನೀವು ಮಾಡಿದ Value added products ಇದ್ದವರಿಗೆ ನಾವು ಹಾಕುವುದಕ್ಕೆ ಕೊಡುತ್ತೇನೆಂದು ಹೇಳಿ. Steel Plants ನಮ್ಮ ರಾಜ್ಯದಲ್ಲಿ ಎಷ್ಟು ನಡೆಯುತ್ತಿದೆ ಸ್ವಾಮಿ? Do you have any idea? ಯಾವ ಯಾವ Steel Plant ನಲ್ಲಿ loss ಆಗುತ್ತಿದೆ, ಯಾವ ಯಾವುದರಲ್ಲಿ profit ಆಗುತ್ತಿದೆ ಎಂಬುದನ್ನು ತೆಗೆಸಿ ನೋಡಿ ನೋಡೋಣ. They are all under loss. ಏಕೆ? ನಾವು ಇವತ್ತು ಅದಕ್ಕೆ ಬೇಕಾಗಿರತಕ್ಕಂಥ Coal ಏನಿದೆ ಅದು ನಮಗೆ ಬೇಕಾಗುತ್ತದೆ, We have to import from the other countries. We may be rich in iron ore. ಅದನ್ನು ಮಾಡಬೇಕಾದರೆ ನಾವು ಏನು ಮಾಡಬೇಕು? We should give power at cheaper rate. Whether we are able to give? ಜನರಿಗೆ 24 ತಾಸು ವಿದ್ಯುತ್ ಕೊಡುವುದಕ್ಕಾಗಲಿ ಮತ್ತು ವಿದ್ಯಾರ್ಥಿಗಳು ಲೈಟ್ ಹಾಕಿಕೊಂಡು ಓದುವುದಕ್ಕೆ ಬೇಕಾದಷ್ಟು ವಿದ್ಯುತ್ ಕೊಡುವುದಕ್ಕೆ ಇವತ್ತಿಗೂ ಕೂಡ ನಾವು ಸ್ವಾಭಿಮಾನಿಗಳಾಗಿಲ್ಲ. ಅಂದಮೇಲೆ ಆ ಇಂಡಸ್ಟ್ರಿಗಳಿಗೆ ಯಾವ ರೀತಿಯಾಗಿ ಪವರ್ ಕೊಡುತ್ತೀರಿ? These are all the problems in infrastructure. ಇವತ್ತು ನಾನು ನಿಮಗೆ ಹೇಳುತ್ತೇನೆ. ಚೈನಾದಲ್ಲಿ ಹೋಗಿ ನೋಡಿ. ಬಹುಶಃ ನನಗಿಂತ ಜಾಸ್ತಿ ನೀವು ಓಡಾಡಿದ್ದೀರಿ. ನಾನು Google Earth ಎಂಬಲ್ಲಿ ಚೆಕ್ ಮಾಡಿದೆ. Roads ಯಾವ ರೀತಿಯಾಗಿ ಬೇರೆ ದೇಶಗಳಲ್ಲಿ develop ಮಾಡಿದ್ದಾರೆ, ಅಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತಾರೆ ಎಂಬುದನ್ನು ನೋಡಿದ್ದೇನೆ. ನಮಗೆ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬರಬೇಕಾದರೆ ಎಷ್ಟು ಡೀಸಲ್ ಖರ್ಚಾಗುತ್ತದೆ, How our roads are? ನೀವೇನು main national highways ಮುಖಾಂತರ Industrialists Corridor ಮಾಡುವುದಕ್ಕೆ ಹೋಗುತ್ತಿದ್ದೀರಿ ಅದು ಬಹಳ ಒಳ್ಳೆಯ ನಿರ್ಧಾರ, ನಾನು ಸ್ವಾಗತ ಮಾಡುತ್ತೇನೆ. You have to develop all national roads, rail connectivity. ಅದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಸನ್ಮಾನ್ಯ ನಮ್ಮ ಮುಖ್ಯಮಂತ್ರಿಗಳು ಇವತ್ತೇನು ನೂರಕ್ಕೆ ಐವತ್ತು ಪರ್ಸೆಂಟ್ ಕೇಂದ್ರ

ಸರ್ಕಾರದ ಜೊತೆಗೆ ಸಹಯೋಗವನ್ನು ಮಾಡಿ ಇವತ್ತೇನು rail connectivity ಮಾಡುವುದಕ್ಕೆ ಹೊರಟಿದ್ದಾರೋ ಅದು ನಿಜವಾಗಲೂ ಕೂಡ ಒಳ್ಳೆಯ ಕಾರ್ಯಕ್ರಮವಾಗಿದೆ. ಈ ರೀತಿಯ ಒಳ್ಳೆಯ ಕಾರ್ಯಕ್ರಮ ಮಾಡಲು ಇವರು ಏನು ಹೊರಟಿದ್ದಾರೋ ಅದನ್ನು ನಾನು ಸ್ವಾಗತ ಮಾಡುತ್ತೇನೆ.

(1-40 PM)

Mr. CHAIRMAN : ಒಳ್ಳೆಯ ಕಾರ್ಯ ಮಾಡುತ್ತಿದ್ದಾರೆ ಎಂದು ಹೇಳಿದ್ದಾಯಿತು. ನೀವು ಚರ್ಚೆಗೆ ತೆಗೆದುಕೊಂಡಿರುವಂತಹ ಎರಡು ವಿಷಯಗಳಾದ ಶಿಕ್ಷಣ ಮತ್ತು ಕೈಗಾರಿಗೆ ಬಗ್ಗೆ ಒಳ್ಳೆಯ ವಿಚಾರಗಳನ್ನು ತಿಳಿಸುತ್ತಿದ್ದೀರಿ. ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದೀರಿ. ತಾವು ಸ್ವಲ್ಪ ಬೇಗ ಮುಗಿಸಿ.

ಶ್ರೀ ಮುರುಗೇಶ್ ನಿರಾಣಿ : ಮಾನ್ಯ ಅಧ್ಯಕ್ಷರೇ, ಅವರು ಮಾತನಾಡಿದ ಮೇಲೆ ನನಗೆ ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಕೊಡಿ.

Mr. CHAIRMAN : ಆಯಿತು, ನಿಮ್ಮ ವಿಷಯಗಳು ಬಹಳ ಇವೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಇನ್ನು industries ಬಗ್ಗೆ ಬಹಳ detail ಆಗಿ ಹೋದರೆ, each and every industry ಅನ್ನು where to develop and how to develop ಎಂದು ಹೇಳಬೇಕಾಗುತ್ತದೆ. ಏಕೆಂದರೆ ನಾವು ಸುಮ್ಮನೆ ಇಲ್ಲಿ ಹೇಳುತ್ತೇವೆ. Food Processing Unit ನಮ್ಮ ಉತ್ತರ ಕರ್ನಾಟಕದಲ್ಲಿ ತಮಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೇ, ನೀವು ಬೆಂಗಳೂರು ಕಾಯಿಪಲ್ಲೇ ತೆಗೆದುಕೊಂಡು ತಿನ್ನಬೇಕು. ನಮ್ಮಲ್ಲಿ ಬೆಳೆದಿರತಕ್ಕಂಥ ಕಾಯಿಪಲ್ಲೆ ತೆಗೆದುಕೊಂಡು ತಿಂದು ನೋಡಿ. ನಮ್ಮಲ್ಲಿ ಬೆಳೆದಿರತಕ್ಕಂಥದ್ದು ತುಂಬಾ ರುಚಿಯಾಗಿರುತ್ತದೆ, ಆರೋಗ್ಯಕರ ವಾಗಿರುತ್ತದೆ. ಕಾರಣವೇನು? ಅಲ್ಲಿರತಕ್ಕಂಥ ವಾತಾವರಣ, ಅಲ್ಲಿರತಕ್ಕಂಥ ಹವಾಮಾನ, ಅಲ್ಲಿರತಕ್ಕಂಥ ಭೂಮಿಯ ಗುಣಧರ್ಮದಿಂದ ಚೆನ್ನಾಗಿರುತ್ತದೆ. ನಮ್ಮ ಬಿಜಾಪುರದ ಜಿಲ್ಲೆಯಲ್ಲಿ ಬೆಳೆಯುವ ದ್ರಾಕ್ಷಿ ತೆಗೆದುಕೊಂಡು ನೋಡಿ. ಇಲ್ಲಿರತಕ್ಕಂಥ ದ್ರಾಕ್ಷಿ ತಿಂದು ನೋಡಿ. ಎಷ್ಟು ವ್ಯತ್ಯಾಸ ಇದೆ, ಎಷ್ಟು ಬೆಲೆ ಇದೆ? ನೀವು believe ಮಾಡುವುದಕ್ಕಾಗುವುದಿಲ್ಲ, ಅಂತಹ ದೊಡ್ಡ ಬೆಲೆ

ಇದೆ. ಆದರೆ ಅದಕ್ಕೆ ಬೇಕಾದಂತಹ infrastructure, ಅದಕ್ಕೆ ಬೇಕಾಗಿರುವಂತಹ ಶಿಕ್ಷಣ ಆಗಬೇಕು. ಅಲ್ಲಿ development ಮಾಡುವುದಕ್ಕೆ ತಾವು ಹೇಳಿದಿರಿ. ಈಗ ನಾವು ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಗೋಡೌನ್ ಕಟ್ಟುವುದಕ್ಕೆ, cold storage ಮಾಡಿಸುವುದಕ್ಕೆ ಇಷ್ಟು subsidy ಕೊಡುತ್ತೇವೆಂದು ಹೇಳಿದಿರಿ. ಅದು subsidy ವಿಚಾರವಲ್ಲ. ಮೊದಲು ಸರ್ಕಾರ model ಆಗಿ ಮಾಡಿ ತೋರಿಸಬೇಕು. ಒಂದೊಂದು ತಾಲ್ಲೂಕಿನಲ್ಲಿ ಮತ್ತು ಜಿಲ್ಲೆಯಲ್ಲಿ ಸರ್ಕಾರದಿಂದ ಮಾಡಬೇಕು. ಅಲ್ಲಿರುವಂತಹ ಸಣ್ಣ ಸಣ್ಣ ರೈತರಿಗೆ ಕಾಯಿಪಲ್ಲೆಗಳನ್ನು ಮತ್ತು ಹಣ್ಣುಗಳನ್ನು store ಮಾಡುವುದಕ್ಕೆ cold storage ಬೇಕು. ಈ ರೀತಿ infrastructure development ಕೆಲಸಗಳನ್ನು ಸರ್ಕಾರ ವಹಿಸಿಕೊಳ್ಳದೇ ಹೋದರೆ ಬಹುಶಃ ನಮ್ಮ ರಾಜ್ಯದಲ್ಲಿರುವಂತಹ ರೈತ ಏನು ಬೆಳೆದಿದ್ದಾನೆ, ಉದಾಹರಣೆಗೆ ನಾನು ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಒಂದು ಮಾತು ಹೇಳಿದೆ. ಬಾಗೇಪಲ್ಲಿಯಲ್ಲಿ ಪಾಪ ರೈತ ಬೆಳೆದಿರುವಂತಹ tomato ವನ್ನು 25 ಪೈಸೆಗೆ ಯಾರು ತೆಗೆದುಕೊಳ್ಳಲಿಲ್ಲವೆಂದು ಹೇಳಿ ರಸ್ತೆಗೆ ಸುರಿಯುತ್ತಿರುವುದನ್ನು ನಾನು ಟಿ.ವಿ.ಯಲ್ಲಿ ಅವತ್ತು ನೋಡುತ್ತಿರುವಾಗ ನನಗೆ ಕಣ್ಣಲ್ಲಿ ನೀರು ಬಂತು. ಅದೆ ನಾವು ಹೋಟೆಲ್‌ಗೆ ಹೋದಾಗ ಮತ್ತು ವಿಮಾನದಲ್ಲಿ ಬರುವಾಗ ಕೊಡುತ್ತಾರಲ್ಲ tomato sauce packet ಇಷ್ಟೇ ಇರುತ್ತದೆ, ಅದಕ್ಕೆ ಬೆಲೆ ಎಷ್ಟು ಗೊತ್ತೇ? ಅದರ ಮುಖಬೆಲೆ ಒಂದು ರೂಪಾಯಿ. ನಾನು ರೈತ ಬೆಳೆದಿರುವಂತಹ ಬೆಳೆಯ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಂದು ಕೆ.ಜಿ. ಟೊಮಾಟೋ ಹಣ್ಣು 25 ಪೈಸೆಯಾಗಿ ಅದಕ್ಕೆ ಬೆಲೆಯಿಲ್ಲದೆ ರೈತ ಒಂದು ಕಡೆ ರಸ್ತೆ ಮೇಲೆ ಸುರಿಯುತ್ತಿದ್ದಾನೆ. ಇನ್ನೊಂದು ಕಡೆ ಅದೇ ಸಂದರ್ಭದಲ್ಲಿ TV ನೋಡುತ್ತಾ ಒಂದು ಚಮಚ tomato sauce packet ಒಂದು ರೂಪಾಯಿಗೆ ಖರೀದಿ ಮಾಡಿ ತಿನ್ನುತ್ತಿದ್ದೇವೆ. ಇದು ವ್ಯತ್ಯಾಸ. ಈ ವ್ಯಾತ್ಯಾಸ ಏನಿದೆ? ಆ ವ್ಯತ್ಯಾಸವೆಂದರೆ ಆ ರೈತನಿಗೆ ಬೇಕಾಗಿರುವಂತಹ infrastructure, ಆ ರೈತನಿಗೆ ಬೇಕಾಗಿರುವಂತಹ ಸವಲತ್ತುಗಳು, ಅವನಿಗೆ ಬೇಕಾಗಿರುವಂತಹ ಜ್ಞಾನ ಸಂಪತ್ತು ತುಂಬುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಆ ದಿಸೆಯಲ್ಲಿ

ಸರ್ಕಾರ ಎರಡು ವರ್ಷದಲ್ಲಿ ಏನು ಸಾಧನೆಯನ್ನು ಮಾಡಬೇಕಾಗಿತ್ತು, ಆ ಸಾಧನೆಯಾಗಿಲ್ಲವೆಂದು ನಾನು ನೋವಿನಿಂದ ಹೇಳಬೇಕಾಗುತ್ತದೆ.

Mr. CHAIRMAN : ಯಾವ್ಯಾವ ಪ್ರದೇಶದಲ್ಲಿ ರೈತರು ಏನೇನು ಬೆಳೆಗಳನ್ನು ಬಿತ್ತಿ ಬೆಳೆಯುತ್ತಾರೆ, ಅಲ್ಲೆ ಅವು ಸಂಸ್ಕರಣೆ ಮಾಡುವಂತಹ ಘಟಕಗಳು ಬೇಕೆನ್ನುವುದು ತಮ್ಮ ಸಲಹೆ ಒಳ್ಳೆಯದಿದೆ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಮಾತನಾಡಬೇಕೆಂದು ಹೇಳುತ್ತಿದ್ದಾರೆ, ತಾವು ಮುಗಿಸುತ್ತೀರಾ?

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಮಾನ್ಯ ಅಧ್ಯಕ್ಷರೇ, ನನಗೆ ಇನ್ನು ಹತ್ತು ನಿಮಿಷ ಮಾತನಾಡುವುದಕ್ಕೆ ಸಮಯವನ್ನು ಕೊಡಿ, ಎರಡು ಗಂಟೆಗೆ ಮುಗಿಸುತ್ತೇನೆ. ಇನ್ನು 2–3 ಇಲಾಖೆ ಬಗ್ಗೆ ಹೇಳಬೇಕಾಗಿದೆ. ನಾನು ನಾಲ್ಕು ಇಲಾಖೆ ಬಗ್ಗೆ ಮಾತನಾಡುವುದಕ್ಕೆ ತೆಗೆದುಕೊಂಡಿದ್ದೇನೆ. ಜಾಸ್ತಿ ತೆಗೆದುಕೊಂಡಿಲ್ಲ. ಇನ್ನು industries ಗೆ ಸಂಬಂಧಪಟ್ಟಂತೆ ಹೇಳುವುದಾದರೆ cement industries, steel industries ಬಗ್ಗೆ ಹೇಳುವುದಾದರೆ ಬಹುಶಃ ರಾಜ್ಯದಲ್ಲಿ ನಾನು ನಾಲ್ಕು ವರ್ಷ ಸತತವಾಗಿ by walk survey ಮಾಡಿದ್ದೇನೆ. Chikkanayakana Halli cist belt, Chitradurga cist belt, Bellary cist belt, Gadag cist belt, Belgaum and Western Ghat cist belt, ಬಹುಶಃ ಇವನ್ನೆಲ್ಲ ನೋಡಿದರೆ ನಮ್ಮ ರಾಜ್ಯದಲ್ಲಿ ಬಹಳಷ್ಟು ಸಂಪತ್ತುಗಳನ್ನು ಹೊಂದಿದ್ದೇವೆ. ಆದರೆ ಅದನ್ನು ಸರಿಯಾಗಿ ಬಳಸಿಕೊಳ್ಳುವಂತಹ ರೀತಿಯಲ್ಲಿ ನಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳ ಬೇಕಾಗಿದೆ. We have the highest gold deposit, copper deposit, iron ore deposit, Manganese deposit, and Bauxite deposit. ಈ ದೇಶಕ್ಕೆ ಯಾವ್ಯಾವ minerals ಬೇಕು, ಆ ಎಲ್ಲಾ minerals ದೇಶದಲ್ಲಿದೆ. ಆರೋಪ ಪ್ರತ್ಯಾರೋಪ, ಯಾರ್ಯಾರು ಏನೇನು ಲೂಟಿ ಮಾಡುತ್ತಾರೆ ಎನ್ನುವ ವಿಚಾರ ಸರ್ಕಾರದಲ್ಲಿರತಕ್ಕಂಥವರ ಜವಾಬ್ದಾರಿ ಮೇಲೆ ಹೋಗುತ್ತದೆ. ಆ ಮಾತು ಬೇರೆ. ಅದನ್ನು ನಾನೇನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ industry develop ಮಾಡುವುದಕ್ಕೆ ಸಂಪತ್ತು ಏನೇನು ಬೇಕು, we have all deposits. We have water, land and man resources. ನಾವು ಮಾಡಬೇಕಾಗಿರುವುದು ಒಂದೇ, We have to interconnect. ಎಲ್ಲವನ್ನೂ interconnect ಮಾಡುವಂತಹ ಕೆಲಸ ಮಾಡಬೇಕು.

ಮಂಗಳೂರು port ಗೆ ಇವತ್ತು road connectivity ಇದೆಯೇ ಹೇಳಿ ನೋಡೋಣ. ಮಾನ್ಯ ಮಂತ್ರಿಗಳೇ road ಏನಾಗಿದೆ? Rail connectivity ಇದೆಯಾ ಸ್ವಾಮಿ? ಇಲ್ಲ. Rail connectivity ಇದೆ, ಆದರೆ because of Ghat section ಅಲ್ಲಿ ಎಷ್ಟು rail ಓಡುತ್ತದೆ? ಅಲ್ಲಿಗೆ ನಾವು ಇನ್ನೂ higher technology use ಮಾಡುತ್ತಿಲ್ಲ. Because of Ghat section ಅಲ್ಲಿ ಒಂದು ದಿನಕ್ಕೆ ಐದು train ಗಿಂತ ಜಾಸ್ತಿ ಓಡಿಸುವ ಹಾಗಿಲ್ಲ. Suppose you want to export so many things, then how you are going to export? Airlines ನಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತದೆಯೇ? Port ಗೆ ಹೋಗಬೇಕು ತಾನೇ? Karwar port ಇವತ್ತಿಗೂ develop ಆಗಲಿಲ್ಲ. Interconnectivity ಇವತ್ತೇನೋ ಮಾಡುತ್ತಿದ್ದಾರೆ. ಹುಬ್ಬಳ್ಳಿಯಿಂದ ಅಂಕೋಲಾ ಮುಖಾಂತರ rail connectivity ಮಾಡಿದರೆ, that is the cheapest root. ಇವತ್ತು ತಮಗೆ ಇನ್ನೊಂದು ಹೇಳುತ್ತೇನೆ, ಹೊಸಪೇಟೆ ಯಿಂದ ನಾವು ಹರಿಹರ ಕೊಟ್ಟೂರು ಮುಖಾಂತರವಾಗಿ ದಾವಣಗೆರೆ connection ಕೊಟ್ಟು ಬಿಟ್ಟರೆ ಆಯಿತು, ಇನ್ನು railway ಕೆಲಸ ಸ್ವಲ್ಪವೇ ಉಳಿದಿದೆ. ಅದನ್ನು ಮಾಡುತ್ತಿಲ್ಲ. ಹತ್ತು ವರ್ಷದಿಂದ ನೆನೆಗುದಿಗೆ ಬಿದ್ದಿದೆ. ಅದರಿಂದ ಏನಾಗಿದೆ ಎಂದರೆ ಎಷ್ಟು transportation loss ಆಗುತ್ತಿದೆ. ಇದರಿಂದ indirect effect ಏನಾಗುತ್ತದೆ ಎಂದರೆ, We are agoing to loose diesel. ಅದಕ್ಕೆ subsidy ಕೊಡುತ್ತಿದ್ದೇವೆ. Diesel ಎಷ್ಟು ಖರ್ಚಾಗುತ್ತದೆ? ಒಂದರಿಂದ ಒಂದು depend ಆಗಿರುತ್ತದೆ. ಎಲ್ಲಿಯವರೆಗೆ ಎಂದರೆ National highways,-railways, ports, airports ಇವುಗಳಿಗೆ ಈ ರಾಜ್ಯದಲ್ಲಿ interconnectivity ಮೊದಲ ಆಗಬೇಕು. ಇದೇ infrastructure. ಇದನ್ನು ಮಾಡಿದರೆ ನಮಗೆ automatic ಆಗಿ economical growth ನಲ್ಲಿ indication ನೋಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ಒಂದು ವಿಚಾರ.

Mr. CHAIRMAN : ಸರ್ಕಾರ ಈ ಕಡೆಗೆ ತಾವೇ ಲಕ್ಷ್ಯ ಕೊಟ್ಟಿದೆ ಎಂದು ಹೇಳಿದಿರಲ್ಲ, ಅದಕ್ಕೆ ಅಭಿನಂದನೆ ಸಲ್ಲಿಸಿದ್ದೀರಿ.

ಶ್ರೀ ಮುರುಗೇಶ್ ನಿರಾಣಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಪಾಟೀಲರು ಕೈಗಾರಿಕೆ ಬಗ್ಗೆ ಬಹಳ ಒಳ್ಳೆಯ ರೀತಿಯಲ್ಲಿ ಬೆಳಕನ್ನು ಚೆಲ್ಲುತ್ತಿದ್ದಾರೆ. ಇವತ್ತು ಕರ್ನಾಟಕದಲ್ಲಿ ನಮ್ಮ ಹೊಸ ಸರ್ಕಾರ ಬಂದನಂತರ, ನಾನು ಈ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡ ನಂತರ, ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ನಮ್ಮ ಕರ್ನಾಟಕಕ್ಕೆ ಎಲ್ಲಾ ರಾಜ್ಯಗಳಿಗಿಂತಲೂ ಸಹ ಕೈಗಾರಿಕೆಗಳು ಹೆಚ್ಚು ಬರಬೇಕು, ನಿರುದ್ಯೋಗ ಯುವಕ ಯವತಿಯರಿಗೆ ಕೆಲಸ ಸಿಗಬೇಕೆಂದು ಆ ನಿಟ್ಟಿನಲ್ಲಿ ಮೊದಲಿಗೆ ನಾವು ಮಾಡಿರುವಂಥದ್ದು ಹೊಸ ಕೈಗಾರಿಕಾ ನೀತಿ 2009 ಮತ್ತು 2014 ಈ ರಾಜ್ಯಕ್ಕೆ ಅನ್ವಯವಾಗುವಂತೆ ಎಲ್ಲಾ ರಾಜ್ಯಗಳ ನೀತಿಯನ್ನು ತರಿಸಿ, ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಬೇರೆ ಬೇರೆ ರಾಜ್ಯದಲ್ಲಿ ಅಭ್ಯಾಸ ಮಾಡುವುದಕ್ಕೆ study tour ಗೆ ಕಳುಹಿಸಿಕೊಟ್ಟು ಅದನ್ನು ಜಾರಿಗೆ ತಂದಿರುವುದು ಇಡೀ ದೇಶದ ಬೇರೆ ಬೇರೆ ಕೈಗಾರಿಕೋದ್ಯಮಿಗಳಿಗೆ ಮಾದರಿಯಾಗಿರುವುದಲ್ಲದೆ ಸಾಕಷ್ಟು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ ಎನ್ನುವುದನ್ನು ಮಾನ್ಯ ಪಾಟೀಲರಿಗೆ ತಿಳಿಸುತ್ತಿದ್ದೇನೆ. ಇವತ್ತು ತಾವು ಬಹಳ ಮುಖ್ಯವಾಗಿ infrastructure ಬೇಕೆಂಧು ಏನು ಹೇಳುತ್ತಿದ್ದೀರಿ, ಕರ್ನಾಟಕದ ಇತಿಹಾಸದಲ್ಲಿ ಯಾವುದೇ ಒಬ್ಬ ಕೈಗಾರಿಕೋದ್ಯಮಿ ಇಲ್ಲಿ ಬಂಡವಾಳವನ್ನು ಹೂಡುವುದಕ್ಕೆ ಬಂದಾಗ ಅವನಿಗೆ ಮೂಲಭೂತ ಸೌಕರ್ಯಗಳಾದಂತಹ ಭೂಮಿ, ವಿದ್ಯುತ್, ನೀರು ಮತ್ತು ಇನ್ನಿತರ ಸೌಲಭ್ಯಗಳೆಲ್ಲವನ್ನೂ ಕೂಡ ನಾವು ತಕ್ಷಣ ಮಾಡಿಕೊಡಬೇಕು ಎನ್ನುವಂತಹ ನಿಟ್ಟಿನಲ್ಲಿ ಮಾಡಿದ್ದೇವೆ. ಯಾವುದೇ ನಿಟ್ಟಿನಿಂದ ನೋಡಿದರೂ ನಮ್ಮ ರಾಜ್ಯ ಮತ್ತು ದೇಶಕ್ಕೆ ಕೃಷಿ ಎಷ್ಟು ಮುಖ್ಯವೋ ಅಷ್ಟೇ ಕೈಗಾರಿಕೆ ಕೂಡ ಮುಖ್ಯವಾಗಿದೆ. ಒಬ್ಬ ಮನುಷ್ಯನಿಗೆ ಕೈಗಾರಿಕೆ ಮತ್ತು ಕೃಷಿ ಎರಡು ಕಣ್ಣುಗಳು ಇದ್ದ ಹಾಗೆ, ಯಾವುದನ್ನು ನಿರ್ಲಕ್ಷ್ಯ ಮಾಡುವುದಕ್ಕಾಗುವುದಿಲ್ಲ. ಇವತ್ತು ಆ ವಿಚಾರಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಗಳ ಸಲಹೆ ಮೇರೆಗೆ ಕರ್ನಾಟಕದಲ್ಲಿ ಬಂಡವಾಳವನ್ನು ಹೂಡಬೇಕೆಂದು ಬಂದಂತಹವರಿಗೆ ಇವೆಲ್ಲಾ ಸೌಲಭ್ಯಗಳನ್ನು ಕೊಡಬೇಕೆನ್ನುವ ನಿಟ್ಟಿನಲ್ಲಿ ಒಂದು ಲಕ್ಷ ಎಕರೆ ಜಮೀನನ್ನು ಎರಡು ಹಂತಗಳಲ್ಲಿ ಎಂದರೆ ಮೊದಲನೆ ಹಂತದಲ್ಲಿ 50,000 ಎಕರೆ ಮತ್ತು ಎರಡನೆ ಹಂತದಲ್ಲಿ 50,000 ಎಕರೆಯನ್ನು ಯಾವುದೇ ನೀರಾವರಿ ಜಮೀನನ್ನು ವಶಪಡಿಸಿಕೊಳ್ಳಲಾರದೇ ಬಂಜರು ಭೂಮಿಯನ್ನು, ಒಣ ಬೇಸಾಯ ನೆಲವನ್ನು,

0.17F-81

ಬಿತ್ತನೆಗೆ ಯೋಗ್ಯವಲ್ಲದಂತಹ ನೆಲವನ್ನು ರೈತರಿಗೆ ಅವರ ಜಮೀನಿಗೆ ಒಳ್ಳೆಯ ಪರಿಹಾರವನ್ನು ಕೊಟ್ಟು, ಆ ಜಮೀನನ್ನು ವಶಪಡಿಸಿಕೊಂಡಿರುವಂತಹ ರೈತರ. ಕುಟುಂಬದಲ್ಲಿ ಯಾರಾದರೂ ಶಿಕ್ಷಣವಂತರಿದ್ದರೆ, ಆ ಶಿಕ್ಷಣಕ್ಕನುಗುಣವಾಗಿ ಅವರಿಗೆ ಕೆಲಸ ಕೊಡಬೇಕೆನ್ನುವ condition ಗೆ ಒಳಪಟ್ಟು ಅಥವಾ ಅವರೇ ಕೈಗಾರಿಕೆಯನ್ನು ಮಾಡುತ್ತೇವೆಂದರೆ ಅವರಿಗೇ ಸಹ ಕೈಗಾರಿಕೆ ಮಾಡುವುದಕ್ಕೆ 20% developed land ಕೊಡುವುದಕ್ಕೆ ಅವಕಾಶವನ್ನು ನಾವು ಮಾಡಿ ಕೊಟ್ಟಿದ್ದೇವೆ. ಇದರ ಜೊತೆಗೆ ಉದಾಹರಣೆಗೆ ಹೇಳುವುದಾದರೆ 18 ತಿಂಗಳುಗಳ ಹಿಂದೆಯೇ Tata Nano ಎನ್ನುವಂಥ ಒಂದು ಅತ್ಯಂತ ಜಗತ್ತ್ ಪ್ರಸಿದ್ಧವಾಗಿರುವಂಥ Nano technology ಕರ್ನಾಟಕದಲ್ಲಿ ಪ್ರಾರಂಭ ಮಾಡುತ್ತೇವೆಂದು ಒಂದು ಸಾವಿರ ಎಕರೆ ಜಮೀನನ್ನು ಕೇಳಿದರು. ಅಂದು ನಿಶ್ಚಿತವಾಗಿ ಧಾರವಾಡ ಜಿಲ್ಲೆ, ಹುಬ್ಬಳ್ಳಿಯಲ್ಲಿ ಆ Tata Car ಬರುತ್ತಿತ್ತು. ಈಗಾಗಲೇ Tata Motors, Telecon and Tata Marcoal ಅಲ್ಲಿ ಇದೆ. ಅದಕ್ಕೋಸ್ಕರ ಅದು ಬರುತ್ತದೆಂದಾಗ immediate ಒಂದು ಸಾವಿರ ಎಕರೆ land ಕೊಡುವುದಕ್ಕೆ ನಮ್ಮ ಕಡೆ ಇರಲಿಲ್ಲ. ಅವರು ಹೇಳಿದಂಥ ಎಲ್ಲಾ conditions ಅನ್ನು ಒಪ್ಪಿಕೊಂಡ ಮೇಲೆ ಒಂದು ಸಾವಿರ ಎಕರೆ land ಕೊಡುವುದಕ್ಕೆ 30 ದಿವಸಗಗಳ ಸಮಯಾವಕಾಶವನ್ನು ಕೇಳಿದ್ದರೂ ಸಹಿತ, ಅವರಿಗೆ ನಾವು immediate ಆಗಿ land ಕೊಡಲು ಆಗದೇ ಇದ್ದುದ್ದರಿಂದ ಅವರು ಬೇರೆ ರಾಜ್ಯಕ್ಕೆ ಹೋಗುವಂಥ ಪರಿಸ್ಥಿತಿ ಬಂತು. ಅದನ್ನು ನಾವು ಗಮನದಲ್ಲಿಟ್ಟುಕೊಂಡು ಇವತ್ತು ಇಡೀ ರಾಜ್ಯದಾದ್ಯಂತ land bank create ಮಾಡುತ್ತಿದ್ದೇವೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತಿದ್ದೇನೆ. ಇದರ ಜೊತೆಗೆ ಮೊನ್ನೆ ಎರಡು ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರು ನಾವು ದೆಹಲಿಗೆ ಹೋಗಿದ್ದೆವು. ಅದೇ ರೀತಿ ಪ್ರತಿಷ್ಠಿತ two-wheeler company, Hero Honda 54% share ಇರುವಂಥದ್ದು, ಧಾರವಾಡ ಜಿಲ್ಲೆ; ಹುಬ್ಬಳ್ಳಿಯಲ್ಲಿ 500 ಎಕರೆ ಜಮೀನಿನಲ್ಲಿ 200 ಎಕರೆ main plant ಗೆ, 100 ಎಕರೆ housing residential township ಮಾಡಲಿಕ್ಕೆ, 200 ಎಕರೆ auxiliary unit ಮಾಡುವುದಕ್ಕೆ ನೀವು immediate ಕೊಡುವುದಾದರೆ ನಾವು ಕರ್ನಾಟಕಕ್ಕೆ ಬರುತ್ತೇವೆಂಬ ಮತನ್ನು ಹೇಳಿದರು. ನಮ್ಮ land bank ನಲ್ಲಿ 1,000 ಎಕರೆ ಜಮೀನು ready ಇದ್ದ

ಸಲುವಾಗಿ immediate ಆಗಿ land ಅನ್ನು ಅವರಿಗೆ ಕೊಡುವುದಕ್ಕೆ ಅವಕಾಶವಾಯಿತು. ಅವರು ಶೇಕಡ 100ಕ್ಕೆ 90 ರಷ್ಟು ಒಪ್ಪಿದ್ದಾರೆ. ಈ month end ಗೆ ಅವರಿಗೆ clearance ಕೊಡುತ್ತೇವೆ. ಇನ್ನು ಎರಡು ನಿಮಿಷಗಳಲ್ಲಿ ನಾನು ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ. ನಾನು ನಿಮಗೆ ಅನುಕೂಲವಾಗುವುದಕ್ಕೋಸ್ಕರ ಮಾತನಾಡು ತ್ತಿದ್ದೇನೆ. ನಿಮಗೆ ವಿರೋಧ ಮಾಡುತ್ತಿಲ್ಲ, ನೀವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ. ನಾವು ಏನು effective step ತೆಗೆದುಕೊಂಡಿದ್ದೇವೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ರೀತಿ ನಾವು land bank ಅನ್ನು create ಮಾಡಿಕೊಂಡಿರುವ ಹಿನ್ನಲೆಯಲ್ಲಿ ಇವತ್ತು Hero Honda Company ಬರುವಂತೆ ಆಯಿತು. ಇದರ ಜೊತೆಯಲ್ಲೇ ಇವತ್ತು rail ಬಗ್ಗೆ ಮಾನ್ಯ ಪಾಟೀಲ್‌ರವರು ಮಾತನಾಡಿದರು. ಸನ್ಮಾನ್ಯ ಮುಖ್ಯಮಂತ್ರಿಯವರು, ಇಡೀ ದೇಶದ ಯಾವುದೇ ರಾಜ್ಯಗಳಲ್ಲಿ 50% ರಾಜ್ಯದ ಹಣವನ್ನು ಕೊಟ್ಟಿರುವಂಥ ಉದಾಹರಣೆಗಳು ಇಲ್ಲ. ಇವತ್ತು ನಮ್ಮ ರಾಜ್ಯಕ್ಕೆ ಹೆಚ್ಚು rail ಗಳು ಬರಬೇಕು. ಇದರಿಂದ Transpotationಗೆ ಅನುಕೂಲವಾಗಬೇಕು, ಸಾಮಾನ್ಯ ಜನರು ಪ್ರವಾಸ ಮಾಡುವುದರ ಜೊತೆಗೆ ನಮ್ಮ ಕೈಗಾರಿಕೆಗೆ ಆಗಿರುವಂಥ finished goods ಕಳುಹಿಸುವಂಥದ್ದು, ಮತ್ತು raw materials ತರಿಸುವಂಥದಕ್ಕೆ ಇವತ್ತು ಅನುಕೂಲವಾಗಲೆಂದು 600 ಕೋಟಿ ರೂಪಾಯಿಗಳನ್ನು ಇಟ್ಟಿರುವಂಥ ಉದಾಹರಣೆ ಬೇರೆ ಯಾವುದೇ ರಾಜ್ಯಗಳು ಇಲ್ಲ. ಅದು ಮೊದಲನೆಯದು ಕರ್ನಾಟಕ ರಾಜ್ಯವಾಗಿದೆ. ಅದಕ್ಕೆ ತಾವು ಈ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕೆಂಬ ಮಾತನ್ನು ಹೇಳುತ್ತೇನೆ. ಇದರ ಜೊತೆಗೆ Port ಬಗ್ಗೆ ಮಾತನಾಡಿದರು. ಇವತ್ತು ಕಾರವಾರ ಮತ್ತು ತದಡಿಯಲ್ಲಿ ಒಳ್ಳೆಯ model port ಮಾಡಬೇಕೆನ್ನುವ ಸಲುವಾಗಿ expression of interest ಬೇರೆ ಬೇರೆ ರಾಷ್ಟ್ರಗಳಲ್ಲಿ ಒಳ್ಳೆಯ Port ಗಳನ್ನು ಕಟ್ಟಿರುವಂಥವರಿಗೆ turn key ಯಾಗಿ ಮಾಡುವ ಸಲುವಾಗಿ PPP model ಅಥವಾ joint venture ನಲ್ಲಿ ಮಾಡುವ ಸಲುವಾಗಿ expression of interest ಕರೆದಿದ್ದೇವೆ. ಈಗಾಗಲೇ ಇದಕ್ಕೆ 19 company ಗಳು ಅರ್ಜಿಗಳನ್ನು ಕೊಟ್ಟಿದ್ದಾರೆ, ನಿಶ್ಚಿತವಾಗಿ ಬರುವ ತಿಂಗಳಲ್ಲಿ ಒಂದು ಒಳ್ಳೆಯ ಕಂಪನಿಗೆ ಒಂದು PPP

model ನಲ್ಲಿ Port ಅನ್ನು development ಮಾಡುವಂಥದ್ದಕ್ಕೆ ನಾವು ಕೊಡುತ್ತಿದ್ದೇವೆ. ಇದರ ಜೊತೆಗೆ ಯಾವ್ಯಾವ ಜಿಲ್ಲೆಗಳಲ್ಲಿ ನಾವು raw materials ಸಿಗುತ್ತವೆ. ಮಾನ್ಯ ಪಾಟೀಲ್‌ರವರು ಹೇಳಿರುವಂಥದ್ದು ಬಹು ಮುಖ್ಯವಾದದ್ದು. ನೀವು ಬೆಂಗಳೂರಿಗೆ ಸೀಮಿತವಾಗಿ ಇರದೇ tier two city and tier three city ಅದರಂತೆ important ಇರುವಂಥ ಮೈಸೂರು ಇರಬಹುದು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ ಗುಲ್ಬರ್ಗಾ, ಇಲ್ಲೆಲ್ಲಾ ಕೈಗಾರಿಕೆಗಳು ಬರಬೇಕು. ಆ ನಿಟ್ಟಿನಲ್ಲಿ ನೀವು ಒಂದು ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿದಾಗ ನಾವು package ಗಳನ್ನು ಮಾಡಿದ್ದೇವೆ. ಅದು zone-wise 2ನೇ ಹಂತದ, 3ನೇ ಹಂತದ, ಈ ವಿಭಾಗಗಳಲ್ಲಿ ಕೈಗಾರಿಕೆಗಳು ಬಂದರೆ ಅದಕ್ಕೆ ಹೆಚ್ಚಿನ incentive ಅನ್ನು ಕೊಡುವಂಥದ್ದನ್ನು ಸಹ ಮಾಡಿದ್ದೇವೆ. ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದರೆ, ಮೊದಲನೇ 50 ಕೋಟಿ ರೂಪಾಯಿಗಳಿಗಿಂತಲೂ ಮಿಕ್ಕ ಹಣವನ್ನು investment ಮಾಡುವುದಕ್ಕೆ ಬಂದರೆ ಪ್ರತಿಯೊಂದು unit ಗೆ ಒಂದೊಂದು ಕೋಟಿ ರೂಪಾಯಿಗಳ ಸಹಾಯಧನವನ್ನು ಕೊಡುತ್ತಿದ್ದೇವೆ. ಇವತ್ತು ಬೇರೆ ಬೇರೆ ರಾಜ್ಯಗಳಲ್ಲಿ, ಬೇರೆ ಬೇರೆ ಜಿಲ್ಲೆಗಳಲ್ಲಿ ಕೈಗಾರಿಕೆಗಳು ಬರಬೇಕೆಂಬ ಸಲುವಾಗಿ 10 sector ಗಳನ್ನಾಗಿ ನಾವು ವಿಂಗಡನೆ ಮಾಡಿದ್ದೇವೆ. ನಮ್ಮಲ್ಲಿ ಹೇರಳವಾಗಿ ಖನಿಜ ಸಂಪತ್ತು ಸಿಕ್ಕುತ್ತಿರುವುದರಿಂದ ಬಳ್ಳಾರಿ, ಕೊಪ್ಪಳ, ಬಾಗಲಕೋಟೆ ಹಾಗೂ ತುಮಕೂರು ಇವುಗಳನ್ನು steel zone ಆಗಿ, limestone ಸಿಗುವಂಥ ಜಿಲ್ಲೆಗಳು ಗುಲ್ಬರ್ಗಾ ಬಾಗಲಕೋಟೆ, ಬೆಳಗಾಂ ಹಾಗೂ ಚಿತ್ರದುರ್ಗ ಈ ರೀತಿ.....

ಶ್ರೀ ಎ.ಬಿ. ಪಾಟೀಲ್ (ನಡಹಳ್ಳಿ) : ಮಾನ್ಯ ಚೇರ್ಮನ್ ರವರೆ..

ಶ್ರೀ ಮುರುಗೇಶ್ ನಿರಾಣಿ : ಒಂದು ನಿಮಿಷ ನಾನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಚೇರ್ಮರ್ ರವರೆ, ಇದು ಏನು ಕತೆ.. ..

ಛೇರ್ಮನ್ : ಮಾನ್ಯ ಮಂತ್ರಿಯವರೆ, ತಾವು ಮುಗಿಸಿ.

ಶ್ರೀ ಮುರುಗೇಶ್ ನಿರಾಣಿ : ಮಾನ್ಯ ಚೇರ್ಮನ್‌ರೆ, ಕಳೆದ 10 ವರ್ಷಗಳಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾಗತಿಕ ಹೂಡಿಕೆದಾರರ

ಸಮಾವೇಶ ನಡೆದಿರಲಿಲ್ಲ. ಇದನ್ನು ಜೂನ್ 3 ಮತ್ತು 4ನೇ ತಾರೀಖಿನಂದು ನಮ್ಮ ಕರ್ನಾಟಕದಲ್ಲಿ....

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಛೇರ್ಮನ್‌ರವರೆ, ಈಗ ಏನು.. .

ಶ್ರೀ ಮುರುಗೇಶ್ ನಿರಾಣಿ : ತಾವು ಸಲಹೆ ಕೊಡಿ.. ..

ಶ್ರೀ ಟಿ.ಬಿ. ಜಯಚಂದ್ರ : ನೀವು ದೊಡ್ಡ ಯೋಜನೆಗಳನ್ನೇ announce ಮಾಡುತ್ತಿದ್ದೀರಿ.

ಶ್ರೀ ಮುರುಗೇಶ್ ನಿರಾಣಿ : ಮಾನ್ಯ ಛೇರ್ಮನ್‌ರವರೆ, ನಾವು ಏನು ಮಾಡುತ್ತಿದ್ದೇವೆಂದು ಹೇಳುತ್ತಿದ್ದೇವೆ. ಅವರು ಸಲಹೆ ಏನಾದರೂ ಕೊಡಲಿ, ನಾವು ತೆಗೆದುಕೊಳ್ಳತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಅವರು ಏನಾದರೂ ಮಾತನಾಡುತ್ತಿದ್ದಾಗ ಅದನ್ನು correct ಮಾಡುವುದಕ್ಕೆ interfere ಆಗುವುದನ್ನು ಬಿಟ್ಟರೆ. . .

ಛೇರ್ಮನ್ : ಆಯಿತು, ಮಾನ್ಯ ಮಂತ್ರಿಯವರೆ, ತಾವು ಮುಗಿಸಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಮಾನ್ಯ ಛೇರ್ಮನ್‌ರವರೆ, ನಾವು ಮಾನ್ಯ ಸಚಿವರು ಹೇಳುವ ಕೈಗಾರಿಕೆ ನೀತಿಯ ಬಗ್ಗೆ ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇನೆ.

(ಗೊಂದಲ)

ಛೇರ್ಮನ್ : ಆಯಿತು, ಪಾಟೀಲ್‌ರವರೆ ಹೇಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸಚಿವರ ಕನಸು ಬಹಳ ದೊಡ್ಡದಾಗಿದೆ. ನಮ್ಮ ಕಡೆ ಹಿಂದೆ ಷೇಖ್ ಮಹಮ್ಮದ್‌ನ ಕತೆಯನ್ನು ಹೇಳುತ್ತಿದ್ದರು. ಒಬ್ಬ ಬಡವ ಇದ್ದನಂತೆ ಅವನು ಕನಸು ಕಂಡನಂತೆ, ಅದು ಏನೆಂದರೆ ಒಂದು ಎಮ್ಮೆಯನ್ನು ತೆಗೆದುಕೊಂಡು.. .. .

ಶ್ರೀ ಮುರುಗೇಶ್ ನಿರಾಣಿ : ಆ ಕತೆ ನನಗೂ ಗೊತ್ತಿದೆ. ನೀವು ಕಳೆದ 60 ವರ್ಷಗಳಿಂದಲೂ ಮಾಡಿದ್ದು ಅದನ್ನೇ, ನಾವು ಕಳೆದ 20 ತಿಂಗಳುಗಳಿಂದ ಮಾಡಿರುವ ಕೆಲಸವನ್ನು ನೀವು ನೋಡಿ, ಅಭಿನಂದನೆ ಸಲ್ಲಿಸಬೇಕು.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಸನ್ಮಾನ್ಯ ಸಚಿವರು ಕನಸು ಕಾಣುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಅವರನ್ನು ನಾನು ಅಭಿನಂದಿಸುತ್ತೇನೆ, ನಾನು ವಿರೋಧ ಮಾಡುತ್ತಿಲ್ಲ. ಆದರೆ ನಾನು ಏನು

ಹೇಳುತ್ತಿರುವುದೇನೆಂದರೆ, most important priority ಕೆಲಸ ಏನು ಆಗಬೇಕು. ಅದು for example, ವಾಡಿ, ಬಾಗಲಕೋಟೆ ರಸ್ತೆ ಹೇಗೆ ಇದೆ? ನೀವು industry ಗಳನ್ನು ಕೊಟ್ಟು ಬಿಟ್ಟರೆ, ರಸ್ತೆಯನ್ನು ಯಾರು develop ಮಾಡಬೇಕು? ರಸ್ತೆಯನ್ನು industrialists develop ಮಾಡಬೇಕಾ? ಸರ್ಕಾರ ರಸ್ತೆಯನ್ನು develop ಮಾಡಬೇಕಾಗುತ್ತದೆ. ನಾವು ಉದಾಹರಣೆಗೆ ನಿನ್ನೆ ಹೇಳಿದ್ದೇವೆ ಸೆಂಡೂರಿನಲ್ಲಿ ಯಾವ ಪರಿಸ್ಥಿತಿ ಇದೆ ಎಂದು. ನಾವು ಏನು ಹೇಳುವುದೆಂದರೆ infrastructure development ಮಾಡುವುದರ ಕಡೆಗೆ ನೀವು ಎಲ್ಲೆಲ್ಲಿ industrial zones ಗಳನ್ನು ಮಾಡುತ್ತಿದ್ದೀರಿ. ನೀವು ಅಲ್ಲಿ infrastructure develop ಮಾಡುವುದಕ್ಕೆ first priority ಕೊಡಬೇಕು. ನಾನು ಅದನ್ನೇ ಹೇಳಿದ್ದು, ಉತ್ತಮವಾದ ರಸ್ತೆಯನ್ನು ಕೊಡಿ, rail connectivity ಕೊಡಿ, road connectivity ಕೊಡಿ, Airport connectivity ಕೊಡಿ, port connectivity ಕೊಡಿ, 24 hours power ಕೊಡಿ, land availability ಕೊಡಿ, ಇವುಗಳನ್ನು ಯಾರು ಮಾಡಬೇಕು? ಇದನ್ನು ಸರ್ಕಾರ ಮಾಡಬೇಕು, ನಾವು ನೀವು ಮಾಡಬೇಕು. ಅದನ್ನು industrialists ಮಾಡುವುದಿಲ್ಲ.

ಛೇರ್ಮನ್ : ಮಾನ್ಯ ಪಾಟೀಲ್‌ರೆ, ನೀವು infrastructure ಬಗ್ಗೆ ಮೊದಲಿನಿಂದಲೂ ಹೀಗೆ ಸಲಹೆಗಳನ್ನು ಕೊಡುತ್ತಿದ್ದೀರಿ. ತಾವು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದೀರಿ. ತಾವು ತಮ್ಮ ಭಾಷಣವನ್ನು ಬೇಗ ಮುಗಿಸಿ, ಈಗ ಊಟಕ್ಕೆ ಬಿಡೋಣ.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ) : ಮಾನ್ಯ ಛೇರ್ಮನ್‌ರೆ, ಆಯಿತು. ನನಗೆ ಕೊಟ್ಟಿರುವ ಕಾಲಾವಧಿಯಲ್ಲಿ ಅವರು ಐದು ನಿಮಿಷಗಳನ್ನು ತೆಗೆದುಕೊಂಡಿದ್ದಾರೆ. ನನಗೆ ಇನ್ನು 10 ನಿಮಿಷಗಳನ್ನು ಕೊಟ್ಟರೆ ಸಾಕು, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಮುರುಗೇಶ್ ನಿರಾಣಿ : ನೀವು ಎರಡು ಮೂರು ನಿಮಿಷಗಳಲ್ಲಿ ಹೇಳುವ ಪ್ರಯತ್ನವನ್ನು ಮಾಡಿ. ತಾವು ಇವತ್ತು power ಬಗ್ಗೆ ಹೇಳಿದ್ದೀರಿ. ಬಿಜಾಪುರ ಜಿಲ್ಲೆಯಲ್ಲಿ ನಾಲ್ಕು ಸಾವಿರ ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡುವಂಥ ಒಳ್ಳೆಯ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಒಂದು ನಿಮಿಷ, ಈಗ ನಾನು ಅದೇ ವಿಷಯಕ್ಕೆ ಬರುತ್ತೇನೆ. Next I am coming to power only. ಸನ್ಮಾನ್ಯ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಇಲ್ಲ power ಬಗ್ಗೆ ದೊಡ್ಡ ಚರ್ಚೆಯೇ ಆಗಿದೆ. ಅವರು ಅವರ ಉತ್ತರವನ್ನು ಕೊಟ್ಟು ಸಮರ್ಥನೆಯನ್ನು ಮಾಡುತ್ತಾರೆ. ನಾವು ಅದನ್ನು ಹೇಳುತ್ತೇವೆ. ನಾವು ವಿರೋಧಪಕ್ಷದಲ್ಲಿದ್ದುಕೊಂಡು ವಾಸ್ತವಿಕ ಸ್ಥಿತಿಯನ್ನು ಸರ್ಕಾರಕ್ಕೆ ಹೇಳುವಂಥದ್ದು ನಮ್ಮ ಧರ್ಮ, ಅದನ್ನು ನಾವು ಮಾಡುತ್ತೇವೆ. ಆದರೆ ನಾವು ನೀವು ಕುಳಿತು ಏನು ಚಿಂತನೆಯನ್ನು ಮಾಡಬೇಕಾಗಿದೆಯೆಂಬುದನ್ನು ಇವತ್ತು ಯೋಚನೆ ಮಾಡಬೇಕಾಗಿದೆ. Suppose ಈಗ 2020ಗೆ What is the power required? ನೀವು ಹೇಳಿಕೆ ಕೊಡುವುದು ಬೇಡ. ಪತ್ರಿಕೆಗಳಲ್ಲಿ ಬರುವುದಕ್ಕೋ, ಅಥವಾ ನಾವು ನಿಮ್ಮನ್ನು ಆರೋಪ ಮಾಡುವುದಕ್ಕೋ, ಅಥವಾ ನೀವು ನಮ್ಮನ್ನು ಆರೋಪ ಮಾಡುವುದಕ್ಕೆ ಹೇಳಿಕೆ ಬೇಡ. Let us sit together to plan for another 20 years. ಒಂದು torget 10 ವರ್ಷಗಳಲ್ಲಿ ಯಾವುದೇ ಮುಂದಿನ 20 ವರ್ಷಗಳಲ್ಲಿ ಯಾವುದೇ ಸರ್ಕಾರ ಬರಲಿ, ಇಡೀ ಕರ್ನಾಟಕ ರಾಜ್ಯವನ್ನು power ನಲ್ಲಿ ಸ್ವಾಭಿಮಾನ ರಾಜ್ಯವನ್ನಾಗಿ ಮಾಡುತ್ತೇವೆಂದು ಹೇಳಿ, Let us we start. ಆದರೆ ಅದು ಆಗುತ್ತಿಲ್ಲ. ನೋವಾಗುತ್ತದೆ. ತಾವು power ಗೆ ಏನು ದುಡ್ಡು ಕೊಟ್ಟದ್ದೀರಿ, ಅದನ್ನೆಲ್ಲಾ ಎಲ್ಲಿಗೆ ಖರ್ಚು ಮಾಡಿದ್ದೀರಿ? Power subsidy ಗೆ, free power ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ದಯಮಾಡಿ ನಮ್ಮ ರೈತರಿಗೆ ಇವತ್ತು ಯಾರಿಗೂ ನೀವು free power ಕೊಡಬೇಡಿ. ನಮ್ಮ ರೈತರಿಗೆ ಎಲ್ಲವನ್ನು free ಯಾಗಿ ಕೊಟ್ಟು, ನಾವು ಅವರನ್ನು ಏನು ಮಾಡುತ್ತಿದ್ದೇವೆಂದರೆ, ನಾವು ಸರ್ಕಾರದಲ್ಲಿದ್ದುಕೊಂಡು free ಯಾಗಿ ಕೊಡುವುದು ಬೇಡ. ನೀವು ಓಟು ಕೇಳುವುದಕ್ಕೆ ಹೋಗುತ್ತೀರಿ, ನಾವು ಓಟು ಕೇಳುವುದಕ್ಕೆ ಹೋಗುತ್ತೇವೆ. ಯಾರು ಉತ್ತಮವಾಗಿ ಅನುಷ್ಠಾನ ಮಾಡುತ್ತೇವೋ ಅವರಿಗೆ ಜನರು ಒಂದು ಓಟು ಹಾಕುತ್ತಾರೆ. ಅವರು ಒಂದು ಸಾರಿ ನಿಮಗೂ ಜೈ ಎಂದಿರುತ್ತಾರೆ, ಈ ಕಡೆ ಒಂದು ಸಾರಿ ನಮಗೂ ಜೈ ಎಂದಿರುತ್ತಾರೆ. ಆ ಮಾತು ಬೇರೆ. ಆದರೆ infrastructure development, power industry ಯನ್ನು

ತರಬೇಕಾಗಿದ್ದರೆ, ನೂರಕ್ಕೆ ನೂರು ಪರ್ಸೆಂಟ್ power ಕೊಡುವುದಕ್ಕೆ ಆಗುತ್ತಿಲ್ಲ. ಅಂಥದ್ದರಲ್ಲಿ ಇವತ್ತು ನೀವು free Power ಕೊಡುತ್ತೇವೆಂದು ಹೇಳಿ, ನೀವು ಬಜೆಟ್‌ನಲ್ಲಿ ಬರುವಂಥ ಹಣವನ್ನೆಲ್ಲಾ ನೀವು ಸಬ್ಸಿಡಿಗೆ ಖರ್ಚು ಮಾಡಿದರೆ, investment ಗೆ ಏನು ಖರ್ಚು ಮಾಡುತ್ತೀರಿ? ಇವತ್ತು ನೀವು KPTCL ನಲ್ಲಿ 500 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳುತ್ತೀರಿ. ಅದನ್ನು ಖಾಸಗಿ ಸಹಭಾಗಿತ್ವದಲ್ಲಿ ಹಣವನ್ನು ಹೂಡಿಕೆ ಮಾಡಿ, ಅಥವಾ ಬ್ಯಾಂಕ್‌ನಿಂದ ಹಣವನ್ನು ತಂದು develop ಮಾಡುತ್ತೇವೆಂದು ಹೇಳುವಂಥದ್ದು ಬೇಡ. ನೀವು 500 ಕೋಟಿ ರೂಪಾಯಿಗಳ ಬಗ್ಗೆ ಹೇಳುತ್ತೀರಿ, ಇಷ್ಟು ಹಣ ಸಾಕಾಗುತ್ತದೆಯೇ? ಇದಕ್ಕೆ ಎಷ್ಟು ಹಣ ಬೇಕಾಗುತ್ತದೆ? ನನ್ನ ಅಂದಾಜಿನ ಪ್ರಕಾರ minimum ಎಂದರೂ ಕೂಡ 25,000 ಕೋಟಿ ರೂಪಾಯಿಗಳಿಂದ 30,000 ಕೋಟಿ ರೂಪಾಯಿಗಳ ವರೆಗೂ ಬೇಕಾಗುತ್ತದೆ.

2020ಕ್ಕೆ ಇಡೀ ಕರ್ನಾಟಕದಲ್ಲಿರತಕ್ಕಂಥ ಪ್ರತಿಯೊಬ್ಬ ಪ್ರಜೆಗೂ 24 ಗಂಟೆಗಳ ಕಾಲ ಕರೆಂಟನ್ನು ಕೊಡುತ್ತೇನೆ ಎಂದು ಯಾರಾದರೂ ಘೋಷಣೆ ಮಾಡಬೇಕಾಗಿದ್ದರೆ, more than 25-30 crores we have to invest. We should have a five years plan, three years plan. Let us start investing on that. Let us be honest. Yes, within one year we have to finish thisi much of job ಎಂದು ಗುರಿ ಇಟ್ಟುಕೊಳ್ಳೋಣ. ನರೇಂದ್ರ ಮೋದಿಯವರನ್ನು ನಾನು ಒಂದು ವಿಷಯದಲ್ಲಿ appreciate ಮಾಡುತ್ತೇನೆ. ಅಲ್ಲಿ ಕೊಡುತ್ತಿರುವ 'ನಿರಂತರ ಜ್ಯೋತಿ' ಬಗ್ಗೆ ನಾನು ಎಲ್ಲ ಮಾಹಿತಿಯನ್ನು ತರಿಸಿಕೊಂಡಿದ್ದೇನೆ. I have studied the total project. ನೀವು ನಂಬಲು ಸಾಧ್ಯವಿಲ್ಲ, ಕೇವಲ 36 ತಿಂಗಳಲ್ಲಿ ಇಡೀ ಗುಜರಾತ್‌ನಲ್ಲಿ 24 ಗಂಟೆಗಳ ಕಾಲ ವಿದ್ಯುತ್ ಕೊಟ್ಟಿದ್ದಾರೆ. ಅವರು ಕರೆಂಟ್ ಅನ್ನು ಯಾವ ರೀತಿ ಕೊಡುತ್ತಿದ್ದಾರೆ? ಯಾವ ರೀತಿ ಎಂದರೆ ಅವರು separate grid ಗಳನ್ನು ಮಾಡಿದ್ದರೆ. ಅಂದರೆ, ಕೈಗಾರಿಕೆಗೇ separate ಹೋಗಬೇಕು, farmers ಗೇ ಹೋಗಬೇಕು, lighting ಗೇ separate ಹೋಗಬೇಕು. ಆ ರೀತಿ ಮಾಡಿದ್ದಾರೆ. This is what we need. ಇದನ್ನು ನಾವು ಮಾಡಬೇಕಾಗಿದೆ. ಇದಕ್ಕೆ ನಾವು ವ್ಯಾಖ್ಯಾನ ಮಾಡುವುದು ಬೇಡ. ಇದನ್ನು

ನಾವು ಕುಳಿತುಕೊಂಡು ಯೋಚನೆ ಮಾಡಬೇಕು. How are should implement? Where is the lacuna? Where we are doing mistake? ಇದನ್ನು ನಾವು ಕುಳಿತುಕೊಂಡು paln ಮಾಡಿದ್ದೇ ಆದರೆ, ಖಂಡಿತವಾಗಿ ನಾನು ಹೇಳುತ್ತೇನೆ, within 10 years ನಾವು ಸ್ವಾಭಿಮಾನಿಗಳಾಗಿ ಬದುಕುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ, ಇದೇ ಕೆಸರೆರಚುವ ಕೆಲಸ ಆಗುತ್ತದೆ. ಇದು ಬೇಡ ಎಂದು ನಾನು ನಿಮಗೆ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದೇನೆ. Let us start from today itself. ಮಾನ್ಯ ಮುಖ್ಯಮಂತ್ರಿಗಳು ಮತ್ತು ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ನಾನು ಕೊಟ್ಟಿರುವಂಥ ಉತ್ತಮವಾದ ಸಲಹೆಗಳನ್ನು ದಯಮಾಡಿ ತೆಗೆದುಕೊಳ್ಳಿ, ಒಂದು ವೇಳೆ ನೀವು ಪವರ್‌ನಲ್ಲಿ self suffecient ಆಗದೇ ಹೋದರೆ ನೀವು ಕೈಗಾರಿಕೆಗಳನ್ನು ತರುವುದಕ್ಕೆ ಸಾಧ್ಯವಿಲ್ಲ. ನೀವು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ, ನಿಮ್ಮ economical growth ಆಗುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ತಾವು ದಯಮಾಡಿ ಇದನ್ನು ಮಾಡತಕ್ಕಂಥ ಕೆಲಸವನ್ನು ಮಾಡಬೇಕು.

ಛೇರ್ಮನ್ : ಒಳ್ಳೆಯ ವಿಷಯವನ್ನು ಮೆಚ್ಚಿಕೊಂಡು appreciation ಮಾಡಿದ್ದೀರಿ ಮತ್ತು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ. ಈಗ ದಯವಿಟ್ಟು ಸಾಕು ಮುಗಿಸಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಊಟ ಮಾಡಿ ಬಂದ ಮೇಲೆ ದಯವಿಟ್ಟು 10 ನಿಮಿಷ ಕೊಡಿ. ಮೊದಲ ಬಾರಿಗೆ ನನಗೆ ಇಷ್ಟು ಸಮಯ ಸಿಕ್ಕಿದೆ, ತಾವು ಅವಕಾಶ ಕೊಟ್ಟಿದ್ದೀರಿ. ನಾನು ಇನ್ನೂ ಕೆಲವೊಂದು ವಿಚಾರಗಳನ್ನು ಹೇಳಬೇಕಾಗಿದೆ. ನನಗೆ ರಾಜಕಾರಣ ಮಾತನಾಡಬೇಕು ಎಂದಿಲ್ಲ. I want that. What is the reality? ಅದನ್ನು ಸರ್ಕಾರದ ಗಮನಕ್ಕೆ ತರತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಊಟ ಮಾಡಿ ಬಂದ ಮೇಲೆ ತಾವು ನನಗೆ 10 ನಿಮಿಷ ಕೊಟ್ಟರೆ ಸಾಕು.

ಛೇರ್ಮನ್ : ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ. ಎಲ್ಲರೂ ಕೈ ಜೋಡಿಸಿ ಕೆಲಸ ಮಾಡಿದರೆ ರಾಜ್ಯದ ಅಭಿವೃದ್ಧಿಯಾಗುತ್ತದೆ. ಈಗ ದಯವಿಟ್ಟು ಮುಗಿಸಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಕೊನೆಯದಾಗಿ, ನಮ್ಮ ಉತ್ತರ ಕರ್ನಾಟಕದಲ್ಲಿ ಆದಂಥ ಮಳೆಗೆ ಸಂಬಂಧಪಟ್ಟಂತೆ ಹೇಳುತ್ತೇನೆ. ಸನ್ಮಾನ್ಯ ಸಚಿವರಾದ ಮುರುಗೇಶ್ ನಿರಾಣಿಯವರು ಬಾಗಲಕೋಟೆಯವರು. ನಮ್ಮ

0.17F-82

ಜಿಲ್ಲೆಯ ಉಸ್ತುವಾರಿ ಸಚಿವರೂ ಈಗ ಇಲ್ಲೇ ಇದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ, ಇಂಥ ಒಂದು ನೆರೆ ಪರಿಸ್ಥಿತಿ ಬಂದಾಗ ಯಾವ ರೀತಿಯಾಗಿ ಸಮರೋಪಾದಿಯಲ್ಲಿ ಕೆಲಸಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಇವತ್ತಿಗೂ ನಮ್ಮಲ್ಲಿ there is no instructions. ಅಥವಾ ಅದಕ್ಕೊಂದು ಏನು ಪ್ಲಾನ್ ಇರಬೇಕು, ಯಾವ ರೀತಿ ಮಾಡಬೇಕು ಎನ್ನುವುದು ಇಲ್ಲ. ಮಳೆ ಬಂದು ಆದ ಮೇಲೆ ನಮ್ಮಲ್ಲಿ ಒಂದು ಸಭೆ ನಡೆಯಿತು. ಅದರಲ್ಲಿ ಕೆಲವು I.A.S. officers ಸಹ ಇದ್ದರು. ಈಗ ಮಳೆ ಬಂದಿದೆ, ತಕ್ಷಣ ಭೂಕಂಪ ಆದರೆ ಏನು ಮಾಡುತ್ತೀರಿ? ಎಂದು ನಾನು ಅಧಿಕಾರಿಗಳಿಗೆ ಪ್ರಶ್ನೆ ಕೇಳಿದೆ. ಅದಕ್ಕೆ ಯಾರ ಹತ್ತಿರವೂ ಉತ್ತರವಿಲ್ಲ. ಅಂದರೆ, ನಾವು ಆಡಳಿತ ಯಂತ್ರವನ್ನು ಆಗುವಂಥ ಪ್ರಕೃತಿ ವಿಕೋಪಗಳನ್ನು ಯಾವ ರೀತಿಯಾಗಿ control ಮಾಡಬೇಕು ಎನ್ನುವುದಕ್ಕೆ ನಮ್ಮಲ್ಲಿ ಒಂದು ಯೋಜನೆ ಮಾಡಿ ಅವರನ್ನು ಸಿದ್ಧವಿರಿಸಬೇಕಾಗುತ್ತದೆ. ಆ ರೀತಿಯಾದಾಗ, ತಕ್ಷಣ ಯಾವ ರೀತಿ implement ಮಾಡಬೇಕು ಎನ್ನುವುದನ್ನು ತಿಳಿಸಿರಬೇಕು. ಒಂದೇ ಒಂದು ಉದಾಹರಣೆ ಹೇಳಿ ನಾನು ಮುಗಿಸುತ್ತೇನೆ. ನನ್ನ ಬಸವನಬಾಗೇವಾಡಿ ಮತಕ್ಷೇತ್ರದಲ್ಲಿ ನಾನು ಓಡಾಡುತ್ತಿದ್ದೆ. ಆ ಸಂದರ್ಭದಲ್ಲಿ ಮಳೆಯಿಂದ ಸತ್ತಂತವರಿಗೆ post-mortem ಮಾಡಬೇಕು. ರಾತ್ರಿ ಸತ್ತು ಹೋಗಿರುವಂಥ ವರನ್ನು post-mortem ಮಾಡುವುದಕ್ಕೆ ಮರುದಿನ ಮಧ್ಯಾಹ್ನ 3–4 ಗಂಟೆ ಯಾದರೂ ಡಾಕ್ಟರ್‌ಗಳಿಲ್ಲ. post-mortem ಮಾಡದೇ ಹೋದರೆ ಅವನಿಗೆ ಪರಿಹಾರ ಕೊಡಲು ಆಗುವುದಿಲ್ಲ. ಅಲ್ಲಿಯವರೆಗೆ ಎಲ್ಲರೂ ಕಾಯಬೇಕು. ಆಗ ನಾನು, ಬಸವನಬಾಗೇವಾಡಿಯಲ್ಲಿ ಎಷ್ಟು ಜನ ಡಾಕ್ಟರ್ ಗಳಿದ್ದಾರೆ ಎಂದು ಕೇಳಿದೆ. 25 ಜನ ಡಾಕ್ಟರ್‌ಗಳಿದ್ದಾರೆ ಎಂದು ಹೇಳಿದರು. ಪ್ರಕೃತಿ ವಿಕೋಪವಾದಾಗ, is it not the duty of the Deputy Director or D.H.O. or in-charge minister to collect all the information about the availability of doctors. ಕೂಡಲೇ ಅವರ ಸೇವೆಯನ್ನು ತೆಗೆದುಕೊಂಡು ಸಹಾಯ ಮಾಡುವುದು ಆಗಬೇಕಲ್ಲವೇ? ನಾನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಮೇಲೆ ಆರೋಪ ಮಾಡುತ್ತಿಲ್ಲ. ನಾವು ಎಲ್ಲಿ ತಪ್ಪುತ್ತೇವೆ ಎನ್ನುವುದನ್ನು ಹೇಳುತ್ತಿದ್ದೇನೆ. ಅನಿರೀಕ್ಷಿತವಾಗಿ ಪ್ರವಾಹ ಬಂತು, ಸಂತ್ರಸ್ಥರಿಗೆ ಊಟ ಕೊಡಬೇಕು, ಮಳೆ ನಿಲ್ಲುವವರೆಗೆ ಅವರಿಗೆ ಕೂಡಲೇ shelter ಕೊಡಬೇಕು. ಅದನ್ನು ಕೊಡುವುದರಲ್ಲಿ ಈ ಸರ್ಕಾರ

ಸಂಪೂರ್ಣವಾಗಿ ವಿಫಲವಾಯಿತು. ನಾನು ಅ ಸಂದರ್ಭದಲ್ಲಿ 48 ಹಳ್ಳಿಗಳಿಗೆ ಸತತವಾಗಿ ಓಡಾಡಿದ್ದೇನೆ. ಪ್ರತಿಯೊಂದು ಮನೆಗೂ ಹೋಗಿದ್ದೇನೆ. ಶಾಲೆಯ ಕೀಲಿ ತೆಗೆಯಲು ಕೂಡ ಆದೇಶ ಕೊಡಲು ಇವರು ತಯಾರಿಲ್ಲ. ಅದನ್ನು ನಾನು ಮುಖ್ಯಮಂತ್ರಿಗಳು ಬಂದಾಗ ಕೂಡ ಹೇಳಿದೆ. ಇವತ್ತೂ ಹೇಳುತ್ತೇನೆ, ನನ್ನ ಕ್ಷೇತ್ರದಲ್ಲಿ ಇವತ್ತಿಗೂ ಕೂಡ shed ನಲ್ಲಿರುವವರು shed ನಲ್ಲಿಯೇ ಇದ್ದಾರೆ. ಕಂದಾಯ ಸಚಿವರು ಉತ್ತರ ಕೊಡುವಾಗ ಹೇಳಿದ್ದಾರೆ, ಕಡಕೋಳ, ಯಾಳವಾರ, ಸಾತಿಹಾಳ ಈ ಎಲ್ಲ ಗ್ರಾಮಗಳಲ್ಲಿ ಜನ ಇವತ್ತಿಗೂ shed ನಲ್ಲಿದ್ದಾರೆ, ಅವರಿಗೆ ಪುನರ್ವಸತಿ ಕಲ್ಪಿಸಬೇಕು ಎಂದು ಉತ್ತರ ಕೊಟ್ಟಿದ್ದಾರೆ. ಇನ್ನೊಂದು ಕಡೆ ಸರ್ಕಾರಕ್ಕೆ ಒಂದು ಪತ್ರ ಬರುತ್ತದೆ, ಏನೆಂದರೆ, ಅತಿವೃಷ್ಟಿಯಿಂದ ಮನೆಗಳನ್ನು ಕಳೆದುಕೊಂಡಿರತಕ್ಕಂಥವರಿಗೆ ಮನೆಗಳನ್ನು ಕೊಡುವುದಕ್ಕೆ ತೀವ್ರವಾಗಿ 250 ಮನೆಗಳನ್ನು ಮಂಜೂರಾತಿ ಮಾಡಬೇಕು ಎಂದು ಅಲ್ಲಿಂದ ಒಂದು ಪ್ರಸ್ತಾವ ಬರುತ್ತದೆ. ಆ ಪ್ರಸ್ತಾವವನ್ನು ತಕ್ಷಣ ಇಲ್ಲಿಂದ ಮಂಜೂರಾತಿ ಮಾಡಿ ಕಳುಹಿಸುತ್ತಾರೆ. ಅಧ್ಯಕ್ಷರೆ, ನೀವು ನಂಬುತ್ತೀರೋ, ಬಿಡುತ್ತೀರೋ ಗೊತ್ತಿಲ್ಲ, ಯಾಳವಾರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 115 ಮನೆಗಳನ್ನು ಮಂಜೂರಾತಿ ಮಾಡಿದ್ದಾರೆ. ಸಿಂಧಗೇರಿಯಲ್ಲಿ 60 ಕುಟುಂಬಗಳು ಮನೆ ಇಲದೇ shed ನಲ್ಲಿದ್ದಾರೆ. ಸಿಂಧಗೇರಿ, ಯಾಳವಾರ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲೇ ಬರುತ್ತದೆ. ಇಲ್ಲಿ shed ನಲ್ಲಿರುವ ಒಬ್ಬನೇ ಒಬ್ಬ ವ್ಯಕ್ತಿಯ ಹೆಸರು ಅದರಲ್ಲಿ ಇಲ್ಲ. ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ, ಇದೆ ಎಂದು ಅವರು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಅದೇ ರೀತಿ ಕಡಕೋಳದಲ್ಲಿ 30 ಕುಟುಂಬಗಳಿವೆ. ಅದರಲ್ಲಿ 10 ಕುಟುಂಬಗಳು ಅತ್ಯಂತ ಕನಿಷ್ಟವಾಗಿರತಕ್ಕಂಥ ಕುಟುಂಬಗಳು. ಇವತ್ತೂ ಅವರು ಶಾಲೆಯಲ್ಲಿ, ದೇವಸ್ಥಾನದಲ್ಲಿದ್ದಾರೆ. ಅವರ ಹೆಸರು ಕೂಡ ಅದರಲ್ಲಿ ಇಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, 3 ಲಕ್ಷ ಮನೆಗಳನ್ನು ಕಟ್ಟುತ್ತೇವೆ, 5 ಲಕ್ಷ ಮನೆಗಳನ್ನು ಕಟ್ಟುತ್ತೇವೆ ಎಂದು ತಾವು ಇಲ್ಲಿ ಹೇಳಿಕೆ ಕೊಡುತ್ತೀರಿ? ಯಾರಿಗೆ ಕಟ್ಟಿಕೊಡುತ್ತೀರಿ ಸ್ವಾಮಿ? ಯಾರದೋ ಹೆಸರು, ಯಾರಿಗೋ ಹೋಗುತ್ತದೆ. Shed ನಲ್ಲಿರುವವನು Shedನಲ್ಲಿಯೇ ಇರುತ್ತಾನೆ. ಇದು ಅಲ್ಲಿರತಕ್ಕಂಥ ತಹಶೀಲ್ದಾರ್‌ರಿಗೆ ಗೊತ್ತಿಲ್ಲವೇ? ಜಿಲ್ಲಾಧಿಕಾರಿಗಳಿಗೆ ಗೊತ್ತಿಲ್ಲವೇ? ಸರ್ಕಾರದಿಂದ ಉತ್ತರ ಬರುತ್ತದೆ, ಇಷ್ಟು ಕುಟುಂಬಗಳು shed ನಲ್ಲಿವೆ ಎಂದು ಉತ್ತರದಲ್ಲಿ ಹೇಳುತ್ತಾರೆ. ಅದೇ ಗ್ರಾಮಕ್ಕೆ ಮನೆಗಳನ್ನೂ

ಕೊಡುತ್ತಾರೆ. ಆದರೆ ಅವರಿಗೆ ಮನೆಗಳು ಸಿಗುವುದಿಲ್ಲ.. ಅಲ್ಲಿ ಲೂಟಿ ಹೊಡೆಯುತ್ತಿರತಕ್ಕಂಥವರು ಯಾರು? ಅಲ್ಲಿ ಯಾರು ಪ್ರಭಾವಿಗಳಿರುತ್ತಾರೆ, ಅವರು ಯಾರೇ ಇರಬಹುದು, ಯಾವ ಪಕ್ಷದವರೇ ಇರಬಹುದು. ಅದಕ್ಕೆ ಅವಕಾಶ ಕೊಡಬಾರದು. ಯಾರು ನಿಜವಾಗಲೂ ಕಷ್ಟದಲ್ಲಿದ್ದಾರೆ, ಯಾರು ಮನೆಗಳನ್ನು ಕಳೆದುಕೊಂಡಿದ್ದಾರೆ, ಅವರಿಗೆ ಮನೆಗಳನ್ನು ಕೊಡತಕ್ಕಂಥ ಕೆಲಸ ಸರ್ಕಾರದಿಂದ ಆಗಬೇಕು ಎಂದು ಹೇಳುತ್ತೇನೆ. ಇದರಲ್ಲಿ ವಿಫಲತೆಯಾಗಿದ್ದು, ಅದನ್ನು ದಾಖಲಾತಿ ಸಮೇತ ಕೊಡಲು ನಾನು ಸಿದ್ಧನಿದ್ದೇನೆ. ಮತ್ತೆ ಆ ಬಗ್ಗೆ ಆರೋಪ ಮಾಡುವುದು ಬೇಡ. ನೀವು ಮಾಡಿದಿರಿ, ನೀವು ಲೂಟಿ ಮಾಡಿಸಿದಿರಿ ಎನುವುದು ಬೇಡ.

ಛೇರ್ಮನ್ : ಒಳ್ಳೆಯ ಸಲಹೆ ಕೊಡುತ್ತಿದ್ದೀರಿ. ಯಾರಿಗೆ ಮನೆ ಇಲ್ಲ, ಬಡವರು ಯಾರಿದ್ದಾರೆ ಅವರಿಗೆ ಕೊಡಿ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಅನುಷ್ಠಾನ ಮಾಡುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗುತ್ತಿದೆ ಎನ್ನುವುದನ್ನು ತಮ್ಮ ಮುಖಾಂತರ ತಿಳಿಸುತ್ತೇನೆ. ನಾನು ಮೊದಲ ಬಾರಿಗೆ ಶಾಸಕನಾದರೂ ಕೂಡ ನನಗೆ ಮಾತನಾಡಲು ತಾವು ಅವಕಾಶ ಮಾಡಿ ಕೊಟ್ಟಿದ್ದೀರಿ. ಇನ್ನೂ ಅನೇಕ ವಿಚಾರಗಳನ್ನು ನಾನು ಹೇಳಬೇಕಾಗಿದೆ. ಅದರೆ ವೇಳೆ ಇಲ್ಲದೇ ಇರುವುದರಿಂದ ತಮಗೆ ವಂದಿಸಿ, ಈ ಸರ್ಕಾರ ಏನು ಬಜೆಟ್ ಅನ್ನು ಮಂಡನೆ ಮಾಡಿದೆ ಇದು ಕೇವಲ ಮಾತಿನ ಅಥವಾ ಶಬ್ದಗಳ ಕಂತೆ ಆಗಬಾರದು, ಈ ವಿಧಾನಸಭಾ ಅಧಿವೇಶನದಲ್ಲಿ ಚರ್ಚೆ ಮಾಡಿರುವುದು ಕೇವಲ ಮಾತಿನ ಸಂತೆಯಾಗಿ ಹೋಗಬಾರದು. ನಾವು ಕೊಡತಕ್ಕಂಥ ಉತ್ತಮವಾದ ಸಲಹೆಗಳನ್ನು ತೆಗೆದುಕೊಂಡು ಬಜೆಟ್ ಅನ್ನು implement ಮಾಡಬೇಕು. ಏಕೆಂದರೆ, ಕಳೆದ ಸಾಲಿನಲ್ಲಿ ಅಂದರೆ 2009–10ರಲ್ಲಿ planning ನೀವು ಕೇವಲ 40% ಹಣವನ್ನು ಖರ್ಚು ಮಾಡಿದ್ದೀರಿ, 40% implement ಮಾಡುವುದರಲ್ಲಿ ಮಾತ್ರ ನೀವು ಯಶಸ್ವಿಯಾಗಿದ್ದೀರಿ. ಅದೇ ರೀತಿ 2008–09ರಲ್ಲೂ ಸಹ implement ಮಾಡುವುದರಲ್ಲಿ ನೀವು ಸಂಪೂರ್ಣ ವಿಫಲರಾಗಿದ್ದೀರಿ. ಅದಕ್ಕೆ ನಾನು ಕೊನೆಯದಾಗಿ, ಈ ಸಕಾರಕ್ಕೆ ಹೇಳುತ್ತೇನೆ, 2010–11ರ ಬಜೆಟ್ ಏನಿದೆ, ಇದನ್ನೂ ಕೂಡ ನೀವು ಅನುಷ್ಠಾನ ಮಾಡುತ್ತೀರಿ ಎನ್ನುವ ವಿಶ್ವಾಸ ನನಗಿಲ್ಲ ಎನ್ನುವ ಮಾತನ್ನು ಹೇಳಿ, ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿರತಕ್ಕಂಥ 2010–11ನೇ

ಸಾಲಿನ ಆಯವ್ಯಯವನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್ : ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2.10 ಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

* * * * * *

(ಸದನವು ಪುನಃ ಮಧ್ಯಾಹ್ನ 3–15 ಗಂಟೆಗೆ ಸಮಾವೇಶಗೊಂಡಿತು)
(ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

5. ವಿತ್ತೀಯ ಕಾರ್ಯಕಲಾಪಗಳು :

2009–10ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಮತ್ತು ಅಂತಿಮ ಕಂತು) ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ಈ ಕೆಳಗಿನ ಪ್ರಸ್ತಾವಗಳನ್ನು ಮಂಡಿಸುತ್ತಿದ್ದೇನೆ.

1. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಕೃಷಿ ಮತ್ತು ತೋಟಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **22852.56** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

2. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಪಶುಸಂಗೋಪನೆ ಮತ್ತು ಮೀನುಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **9429.21** ಲಕ್ಷ ರೂ.ಗಳಿಗೆ

ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

3. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಆರ್ಥಿಕ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **210475.00** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **6045.00** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

4. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಸಿ.ಆ.ಸು.ಇ.'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **4322.14** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

5. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಒಳಾಡಳಿತ ಮತ್ತು ಸಾರಿಗೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **468.23** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **1354.50** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

6. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **29339.17** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **33475.88** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

7. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **3685.25** ಲಕ್ಷ ರೂ.ಗಳಿಗೆ

ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

8. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಸರಕಾರ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **5176.69** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **2018.00** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

9. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಸಮಾಜ ಕಲ್ಯಾಣ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **5904.01** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **500.00** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

10. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **1352.89** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **108.25** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

11. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **1009.42** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **1200.00** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

12. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಆಹಾರ ಮತ್ತು ನಾಗರೀಕ ಸರಬರಾಜು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **30027.60** ಲಕ್ಷ ರೂ.

ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

13. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಕಂದಾಯ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **302928.31** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **1800.00** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

14. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಮಾಹಿತಿ ತಂತ್ರಜ್ಞಾನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **300.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

15. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ವಸತಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ **658.68** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

16. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಶಿಕ್ಷಣ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **7705.08** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

17. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ವಾಣಿಜ್ಯ ಮತ್ತು ಕೈಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **2834.85** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **7597.20** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

18. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ನಗರಾಭಿವೃದ್ಧಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **5481.01** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **30000.00** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

19. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಲೋಕೋಪಯೋಗಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **371.51** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **68753.30** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

20. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಜಲಸಂಪನ್ಮೂಲ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **139.17** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **40306.70** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

21. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **5573.28** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **2600.00** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

22. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಕಾರ್ಮಿಕ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **422.51** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

0.17F-83

23. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಇಂಧನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **20.00** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **100000.00** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

24. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಕನ್ನಡ ಮತ್ತು ಸಂಸ್ಕೃತಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **4724.00** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

25. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **12484.24** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **12600.00** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

26. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಕಾನೂನು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **2056.89** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

27. 2010ನೇ ಮಾರ್ಚ್ 31ರ ಅಂತ್ಯದೊಳಗಾಗಿ **'ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **1835.16** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : (ಮಂಡಿಸಲಾಯಿತು)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು 2ನೇ ಮತ್ತು ಅಂತಿಮ ಕಂತು ಎಂದು ಹೇಳಿ ಪೂರಕ ಅಂದಾಜುಗಳನ್ನು ಮಂಡಿಸಿದ್ದಾರೆ. ಪೂರಕ ಅಂದಾಜುಗಳನ್ನು ಮಂಡಿಸಲಿಕ್ಕೆ ಸಂವಿಧಾನದಲ್ಲಿ ಅವಕಾಶವಿದೆ. Article 205(1) (a) Provides for Presentation of the Supplementary estimates in the current financial year. 2009–10ಕ್ಕೆ ಸಂಬಂಧಿಸಿದಂತೆ ಜುಲೈನಲ್ಲಿ ಪೂರಕ ಅಂದಾಜುಗಳನ್ನು ಮಂಡಿಸಿದ್ದರು. ಈಗ 2ನೇ ಕಂತನ್ನು ಮಂಡಿಸಿದ್ದಾರೆ. ಈ ಪೂರಕ ಅಂದಾಜುಗಳನ್ನು ನೋಡಿದರೆ ಇದು 10 ಸಾವಿರ ಕೋಟಿ ರೂ.ಗಳಿಗಿಂತಲೂ ಹೆಚ್ಚು ಇರುವ ಪೂರಕ ಅಂದಾಜಿದೆ. ಇದರಲ್ಲಿ, Revenue Account ನಲ್ಲಿ 6790 ಕೋಟಿ ರೂ. Capital account ನಲ್ಲಿ 3,090 ಕೋಟಿ. ಒಟ್ಟು 9,799 ಕೋಟಿ 35 ಲಕ್ಷ. ಹೀಗೆ ಸುಮಾರು ಹತ್ತು ಸಾವಿರ ಕೋಟಿಗಿಂತಲೂ ಹೆಚ್ಚು ಮಾಡಿ ಕೊಟ್ಟಿದ್ದಾರೆ. ಅವರು ಏನು ಹೇಳುತ್ತಾರೆಂದರೆ, ಇದರಲ್ಲಿ ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಅನುದಾನ, ರಾಜ್ಯ ಸರ್ಕಾರ ಅದಕ್ಕೆ ಹೊಂದಿಕೆ ಮಾಡಿಕೊಳ್ಳತಕ್ಕಂಥದ್ದು, ಜೊತೆಗೆ Hard recoveries ಎಂದು 2,100 ಕೋಟಿ ರೂಪಾಯಿ. ಇದಕ್ಕೂ ಕೂಡ ಈ ಸದನದ ಒಪ್ಪಿಗೆ ತೆಗೆದುಕೊಳ್ಳ ಬೇಕಾಗುತ್ತದೆಂದು ಹೇಳಿದ್ದಾರೆ. 777 ಕೋಟಿ ಲೆಕ್ಕ ಹೊಂದಾಣಿಕೆ ಆಗುತ್ತದೆ, ಇಷ್ಟೆಲ್ಲಾ ಹೋದರೂ ಕೂಡ, 1,832 ಕೋಟಿ ಕೇಂದ್ರ ಸರ್ಕಾರದ್ದು ಎಲ್ಲಾ ಲೆಕ್ಕ ಸಂದಾಯ ಮಾಡಿ, ಇವೆಲ್ಲಾ ಕಳೆದರೂ the cash out go ಎಷ್ಟು ಹೋಗುತ್ತದೆಂದರೆ, 5131 ಕೋಟಿ ಎಂದು ಹೇಳುತ್ತಾರೆ. ನಾನು ಇದನ್ನೆಲ್ಲಾ ನೋಡಿದೆ. Supplementary estimates ಮಂಡಿಸುವುದಕ್ಕೆ ಸಂವಿಧಾನದಲ್ಲಿ ಅವಕಾಶ ಮಾಡಿದ್ದಾರೆ, ಎಷ್ಟು ಹಣವನ್ನಾದರೂ ಮಂಡಿಸಬಹುದು, ಎಂದು ಸಂವಿಧಾನದಲ್ಲಿ ಹೇಳಿಲ್ಲ. Article 205 ನಲ್ಲಿ ಏನು ಹೇಳುತ್ತಾರೆಂದರೆ, ಆಕಸ್ಮಿಕವಾಗಿ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಿಕೊಳ್ಳುವುದಕ್ಕಾ ಗಿಲ್ಲದಿದ್ದರೆ, ಆಕಸ್ಮಿಕವಾಗಿ ಬಿಟ್ಟು ಹೋಗಿದ್ದರೆ, ಏನಾದರೂ ಹೊಸ ಕಾರ್ಯಕ್ರಮಗಳು ಆ ಆರ್ಥಿಕ ವರ್ಷದಲ್ಲಿ ಬಂದಿದ್ದರೆ unforeseen expenditure ಎಂದು ಹೇಳುತ್ತಾರೆ. ಈ unforeseen expenditure ಗಳು ಇದ್ದಾಗ Supplementary estimates ತಂದು ವಿಧಾನ ಸಭೆ ಮತ್ತು ವಿಧಾನ

ಪರಿಷತ್ತಿನ ಒಪ್ಪಿಗೆ ಪಡೆದುಕೊಳ್ಳಬೇಕಂಥದ್ದು ಸಂವಿಧಾನದಲ್ಲಿ ಮಾಡಿರತಕ್ಕಂಥ ಅವಕಾಶ. ಇಲ್ಲಿ ಏನಾಗಿದೆ, 5131 ಕೋಟಿಯಲ್ಲಿ, ಮಾನ್ಯ ಯಡಿಯೂರಪ್ಪ ನವರು ಬೇರೆ ಬೇರೆ ಇಲಾಖೆಯಲ್ಲಿ ಸುಮಾರು 29 demands ಮಂಡಿಸಿದ್ದಾರೆ. ನಮಗೆ unforeseen expenditure ಎಷ್ಟು ಬಂತು ಎಂದು ಹೇಳಿದ್ದಾರೆ. 2009–10ಕ್ಕೆ ಇವರು ಸುಮಾರು 60 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು budget ನಲ್ಲಿ ಹೇಳಿಕೊಂಡಿದ್ದಾರೆ. ಇದು total expenditure ಮಾಡುತ್ತೇವೆಂದು ಹೇಳಿರುವುದು. ಆದರೆ, tax receipts ನಲ್ಲಿ ಇವರಿಗೆ Revenue and Capital receipts ಎಲ್ಲಾ ಸೇರಿ, Revenue recipts ನಲ್ಲಿ 2009–10 ಕ್ಕೆ ಇವರೇ ಒಪ್ಪಿಕೊಂಡ ಪ್ರಕಾರ ಸುಮಾರು 3,500 ಕೋಟಿ ರೂಪಾಯಿಗಳನ್ನು 2009–10ರಲ್ಲಿ ತೆರಿಗೆ ವಸೂಲಿ ಮಾಡುವುದಕ್ಕಾಗಿಲ್ಲವೆಂದು ಒಪ್ಪಿಕೊಂಡಿದ್ದಾರೆ. ನಿನ್ನೆ ಮಾನ್ಯ ಯಡಿಯೂರಪ್ಪನವರು budget general discussion ಬಿಟ್ಟು ದೆಹಲಿಗೆ Planning Commission ಮುಂದೆ ಹೋಗಿದ್ದರು. ಮುಂದಿನ ವರ್ಷ 2010–11ಕ್ಕೆ 31 ಸಾವಿರ ಕೋಟಿ Plan size ಅವರು ಈಗಾಗಲೇ budget ನಲ್ಲಿ ಘೋಷಿಸಿದ್ದರು. ಇದರ ಮೇಲೆ ಅವರು 50–60 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ Planning Commission ರವರು ಹೆಚ್ಚು ಮಾಡಿ ಕೊಟ್ಟಿದ್ದರಿಂದ 31,051 ಸಾವಿರ ಕೋಟಿ. ಕಳೆದ 3–4 ವರ್ಷಗಳಲ್ಲಿ ಮಾನ್ಯ ಯಡಿಯೂರಪ್ಪನವರು ಪ್ರತಿ ವರ್ಷ ದೊಡ್ಡ ಗಾತ್ರದ Plan size ಮಾಡುತ್ತಾರೆ. ಈ ವರ್ಷ 29,500 ಕೋಟಿ Plan size. ಈ ವರ್ಷ ಮಾರ್ಚಿವರೆಗೆ Plan size ನಲ್ಲಿ Plan expenditure ನಲ್ಲಿ They may reach 22,000 corers. Not more than that. ಅಲ್ಲಿ ಸುಮಾರು ¼ of the plan amount, they are not in a position to spend because, they were not able to mobilize the resources. ಸಂಪನ್ಮೂಲ fund ಮಾಡುವುದಕ್ಕೆ ದುಡ್ಡು ಕೊಡಲಿಕ್ಕೆ ನನಗೆ ತಿಳಿದ ಪ್ರಕಾರ ಮತ್ತು ಅವರು ಹೇಳಿದ ಪ್ರಕಾರ ಸುಮಾರು 7,500 ಕೋಟಿ ರೂಪಾಯಿ. Because ಅವರೇ ಹೇಳಿರುವುದು ಕೂಡ estimated expenditure. By the end of March ಇಷ್ಟು ಖರ್ಚು ಮಾಡಬಹುದು ಎಂದು ಹೇಳುತ್ತಾರೆ. Accounts

ಸಿಕ್ಕಿರುವುದಿಲ್ಲ, ಅದು accounts ಗೆ ಬಂದಿರುವುದಲ್ಲ. Account ಗೆ ಬಂದ ಮೇಲೆ ಎಷ್ಟು ಖರ್ಚಾಗಿದೆ ಎಂದು correct ಆಗಿ ಗೊತ್ತಾಗುತ್ತದೆ. Accounts ಇಲ್ಲದೇ ಇರುವುದರಿಂದ accounts ಆಗಿಲ್ಲದೇ ಇರುವುದರಿಂದ ಇದು estimated. ಈ ವರ್ಷದಲ್ಲಿ ಒಂದು budget estimate ಎಂದು ಮಾಡಿದ್ದಾರೆ. ಇನ್ನೊಂದು revised estimate ಎಂದು ಮಾಡಿದ್ದಾರೆ. Budget estimate ಗೂ revised estimate ಗೂ ಬಹಳ ವ್ಯತ್ಯಾಸವಿದೆ. Revised estimate ನಲ್ಲಿ ಕಡಿಮೆ ಮಾಡಿಕೊಂಡಿದ್ದಾರೆ, receipts ಕಡಿಮೆಯಾಗಿದೆ, expenditure ಕಡಿಮೆಯಾಗಿದೆ. ಸಾಲ ಕೂಡ ಹೆಚ್ಚು ತೆಗೆದುಕೊಳ್ಳಲಿಕ್ಕೆ ಹೋಗಿದ್ದಾರೆ. ಮುಂದಿನ ವರ್ಷ ಕೂಡ ಸಾಲ ಹೆಚ್ಚು ತೆಗೆದುಕೊಳ್ಳಲಿಕ್ಕೆ ಹೋಗುತ್ತಾರೆ. ಇಲ್ಲಿ ಇವರು 5,131 ಕೋಟಿ ಎಂದು ಏನು ಹೇಳಿದ್ದಾರೆ. ಮೊದಲೇ ಈ ವರ್ಷಕ್ಕೆ 3,500 ಕೋಟಿ ತೆರಿಗೆ ವಸೂಲಿ ಮಾಡುವುದಕ್ಕೆ ಆಗಿಲ್ಲವೆಂದು ಒಪ್ಪಿಕೊಂಡಿದ್ದಾರೆ. 5,131 ಕೋಟಿ ಖರ್ಚು ಮಾಡುತ್ತೇವೆಂದು ಹೇಳಿದ್ದರಲ್ಲಾ, Supplementary estimates ನಲ್ಲಿ ಖರ್ಚು ಮಾಡಿಕೊಳ್ಳಲಿಕ್ಕೆ ತಮಗೆ ಒಪ್ಪಿಗೆ ಕೊಡಿ ಎಂದು ತಂದಿದ್ದರಲ್ಲಾ ಇದು ಹೇಗೆ? How to meet this expenditure? That is to be explained by the Hon'ble Chief Minister. ಈ House ಗೆ ಹೇಳಬೇಕು. 5,131 ಕೋಟಿ ಹೇಗೆ ಮಾಡುತ್ತೀರಿ? 3,500 ಕೋಟಿ ಹೇಗೆ ಮಾಡುತ್ತೀರಿ? ಅಥವಾ ಬೇರೆ ಕಡೆ ಬೇರೆ Programme ಗಳಿಗೆ ಖರ್ಚು ಮಾಡುತ್ತೀರಾ? ಈಗಾಗಲೇ ನೀರಾವರಿ ಇಲಾಖೆಗೆ, PWD ಇಲಾಖೆಗೆ, Housing, ಎಲ್ಲಾ cut ಮಾಡಿದ್ದಾರೆ. 30%, 40%, 25%, ಹೀಗೆ ಎಲ್ಲಾ cut ಮಾಡಿದ್ದಾರೆ. ಇವರೆಲ್ಲೂ ಕೂಡ non-plan expenditure, non-developmental expenditure cut ಆಗುವುದಿಲ್ಲ. ಅದನ್ನು cut ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದಿಲ್ಲ. ಏಕೆಂದರೆ, ಇದರಲ್ಲಿ non-plan expenditure ನ cut ಮಾಡಿದ್ದೇವೆ, non developmental expenditure ಎಲ್ಲಾ ಖರ್ಚು ಮಾಡಿದ್ದೇವೆ. ದುಂದು ವೆಚ್ಚ ಎಲ್ಲಾ ಕಡಿಮೆ ಮಾಡಿದ್ದೇವೆ. ಅಲ್ಲಿ ಇಷ್ಟು ದುಡ್ಡು ಉಳಿಸಿದ್ದೇವೆ. ಅಥವಾ revenue surplus ಜಾಸ್ತಿ ಮಾಡಿದ್ದೇವೆ. ಅದೂ ಇಲ್ಲ. Revenue surplus is also declining every year. ನಾನು ಈಗಾಗಲೇ general

discussion ನಲ್ಲಿ ಮಾತನಾಡುವಾಗ ಹೇಳಿದ್ದೆ. 2006-07 ರಲ್ಲಿ 4,152 ಕೋಟಿ revenue surplus ಇದ್ದದ್ದು 2009-10 ಕ್ಕೆ 538 ಕೋಟಿಗೆ ಬಂದಿದೆ. There is no sufficient money. ಮತ್ತೆ revenue surplus and creations of the assests for the developments. It is because of fiscal indiscipline by the Government. No proper fiscal management, ನಾನು ಮೊದಲೇ ಹೇಳಿದ ಹಾಗೆ, ಎಲ್ಲಾ ತೆರಿಗೆ ಏಕೆ ಕಡಿಮೆಯಾಯಿತು ಎನ್ನುವುದಕ್ಕೆ ಒಂದೇ ಒಂದು ಮಂತ್ರ, recession ಆಗಿದೆ, ಎಲ್ಲಾ economic slow down ಆಗಿದೆ ಹೀಗಾಗಿ ಎನು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ 2,300 ಕೋಟಿ 2007-08ರಲ್ಲಿ ಸಾಲ ತೆಗೆದುಕೊಂಡಿದ್ದು. 2008-09 ಮತ್ತು 2009-10 ರಲ್ಲಿ ಅದು 9,000 ಕೋಟಿ 8,900 ಕೋಟಿ ಹೀಗೆ ಜಾಸ್ತಿಯಾಗಿದೆ. 2300 ಕೋಟಿಯಿಂದ ಒಂದೇ ಸಾರಿ 6000 ಕೋಟಿ ಸಾಲ ಜಾಸ್ತಿಯಾಗಿದೆ. ಪ್ರತಿವರ್ಷ ಇಷ್ಟಿಷ್ಟು ಸಾಲ ಜಾಸ್ತಿಯಾಗುತ್ತಾ ಹೋಗುತ್ತಿದೆ. ಮುಂದಿನ ವರ್ಷ ಕೂಡ ಇಷ್ಟೆ ಆಗುತ್ತದೆ. That is why, ನೀವು ಬಜೆಟ್ ಪುಸ್ತಕದಲ್ಲಿ ಹೇಳಿರುವ ಪ್ರಕಾರ ಅಸಲು ಬಡ್ಡಿ ಸೇರಿ 10,128 ಕೋಟಿ ರೂಪಾಯಿ ಕಟ್ಟಬೇಕಾಗಿದೆ ಎಂದು ಹೇಳಿದ್ದೀರಿ, out of your total budget expenditure of 70,000 crores ನಲ್ಲಿ, budget estimatesನಲ್ಲಿ ಅಸಲು ಮತ್ತು ಬಡ್ಡಿಗೋಸ್ಕರ 10,128 ಕೋಟಿ ಕೊಡಬೇಕಾದಂಥ ಪರಿಸ್ಥಿತಿ ಇದೆ. Such being the case ನೀವು 5130 ಕೋಟಿ ರೂಪಾಯಿ ತೆಗೆದುಕೊಂಡು ಬಂದಿದ್ದೀರಿ. ಇದನ್ನು ಯಾವ್ಯಾವುದಕ್ಕೆ ಖರ್ಚು ಮಾಡುತ್ತಿದ್ದೀರಿ? ಆರ್.ಡಿ.ಪಿ.ಆರ್., ಪಶುಸಂಗೋಪನೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ, ಈ ಎಲ್ಲಾ ಇಲಾಖೆಗಳ ಬೇಡಿಕೆಗಳನ್ನು ನಾನು ನೋಡಿದ್ದೇನೆ. ವೇತನಕ್ಕೋಸ್ಕರ ಬಜೆಟ್‌ನಲ್ಲಿಟ್ಟಿರುವ ಅನುದಾನ ಕಡಿಮೆ ಆಗಿದೆ. ಆದ್ದರಿಂದ, ಈಗ ಅನುದಾನ ಬೇಕೆಂದು ಈ ಅಭಿಯಾಚನೆ ಮೂಲಕ ತಂದಿದ್ದೇವೆ, ಇದಕ್ಕೆ ಒಪ್ಪಿಗೆ ಕೊಡಿ ಎಂದು ಹೇಳಿದ್ದೀರಿ. ಇವತ್ತಿನದಿವಸ ಎಲ್ಲಾ ಇಲಾಖೆಗಳಲ್ಲಿಯೂ ಕೂಡ ಸಂಬಳ-ಸಾರಿಗೆ, ದೂರವಾಣಿ ಖರ್ಚುಗಳ ಬಗ್ಗೆ ಇದೆ. ಕಂದಾಯ ಇಲಾಖೆಯ ಮಾಹಿತಿಯನ್ನು ತೆಗೆದುಕೊಂಡು ನೋಡಿದರೆ, ಇಲ್ಲಿ ಬಹಳ ಹೆಚ್ಚಾಗಿ ಬೆಂಗಳೂರು ಡಿ.ಸಿ. ಮತ್ತು ಮೈಸೂರು ಡಿ.ಸಿ. ಹಾಗೂ ಬೆಂಗಳೂರು ಎ.ಸಿ. ಮತ್ತು ಮೈಸೂರಿನ ಎ.ಸಿ. ಹಾಗೂ ಮೈಸೂರು ತಹಶೀಲ್ದಾರ್‌ಗಳದೇ ಇದೆ.

ಇದು ಯಾವ ಹಣವೆಂದು ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಹೇಳಬೇಕು. ಏತಕ್ಕೋಸ್ಕರ ಇವರಿಗೆಲ್ಲ ಇಷ್ಟು ಖರ್ಚು ಮಾಡಿದ್ದೀರಿ? ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಸಂಬಳಕ್ಕೆ ಮತ್ತು ಟೆಲಿಫೋನ್ ಚಾರ್ಜಸ್‌ಗೆ ಮತ್ತೆ ಇತರೇ ಕಾರ್ಯಕ್ಕಾಗಿ ಹಣವನ್ನು ಕೊಟ್ಟಿದ್ದೀರಿ. ಅಂದರೆ, ಸಂಬಂಧಪಟ್ಟ ಅಧಿಕಾರಿಗೆ ಎಷ್ಟು ಖರ್ಚಾಗುತ್ತದೆ ಮತ್ತು ಅವರಿಗೆ ಎಷ್ಟು ಸಂಬಳ ಕೊಡಬೇಕಾಗುತ್ತದೆಂಬುದರ ಬಗ್ಗೆ ಲೆಕ್ಕ ಕೊಡುವುದಿಲ್ಲವೆ? ಇದು unforeseen ವೆಚ್ಚವೆ? Inadequate ಏಕೆ ಆಗುತ್ತದೆ? ನಮ್ಮಲ್ಲಿ ಸರ್ಕಾರಿ ನೌಕರರು ಎಷ್ಟು ಜನರಿದ್ದಾರೆ ಮತ್ತು ಇವರಿಗೆ ಸಂಬಳ ಕೊಡುವುದಕ್ಕೆ ಎಷ್ಟು ಖರ್ಚಾಗುತ್ತದೆಂದು ಗೊತ್ತಿದ್ದರೂ ಕೂಡ ಮಾಡಿದ್ದೀರಿ. ಒಂದು ವೇಳೆ ಹೊಸದಾಗಿ ಆಯ್ಕೆ ಮಾಡಿಕೊಂಡವರಿಗೆ ಹೊಸದಾಗಿ ಸಂಬಳ ಕೊಡುವಂಥ ಪರಿಸ್ಥಿತಿ ಬಂದಾಗ ಏನಾಗುತ್ತದೆಂದು I can understand. ಇವರಿಗೆ ವರ್ಷಕ್ಕೆ ಎಷ್ಟು ಸಂಬಳ ಕೊಡಬೇಕಾಗುತ್ತದೆ ಮತ್ತು pension ಎಷ್ಟು ಕೊಡಬೇಕಾ ಗುತ್ತದೆಂದು ಹಾಗೂ ಇವರಿಗೆ ಟಿಎ:ಡಿಎ ಎಷ್ಟು ಆಗುತ್ತದೆಂಬ ಲೆಕ್ಕ ನಿಮಗೆ ಗೊತ್ತಿರಬೇಕಲ್ಲವೆ? ಇಲಾಖಾ ಮುಖ್ಯಸ್ಥರು ಮತ್ತು ಆರ್ಥಿಕ ಇಲಾಖೆಯ ಮುಖ್ಯಸ್ಥರು ಬಜೆಟ್ ತಯಾರು ಮಾಡವಾಗ ಸರಿಯಾಗಿ ಲೆಕ್ಕ ಕೊಡದೆ ಇದ್ದರೆ that shows they are very inefficient. ಇದನ್ನೆಲ್ಲಾ Supplementary astimate ನಲ್ಲಿ ತರಬಾರದು. ಒಂದು ವೇಳೆ ಆಕಸ್ಮಾತ್ ಆಗಿ ಬಿಟ್ಟು ಹೋದರೆ ಪರವಾಗಿಲ್ಲ. ಆದರೆ, ಆ ರೀತಿ ಕೂಡ ಇದರಲ್ಲಿ ಆಗಿಲ್ಲ. It is unforeseen expenditure ಕೂಡ ಆಗಿಲ್ಲ, ಮತ್ತೆ new service ಕೂಡ ಆಗಿಲ್ಲ. ಹಾಗಾದರೆ, ಇದನ್ನು ಏತಕ್ಕೋಸ್ಕರ ಮಾಡಿದ್ದೀರಿ? ಈ ಎಲ್ಲಾ ಇಲಾಖೆಗಳ ಮೇಲೆ ಪದೇ ಪದೇ ಈ ರೀತಿ ತರುತ್ತಿದ್ದೀರಿ. ಈ ರೀತಿಯಾದರೆ ಬಜೆಟ್‌ನ್ನು ಏಕೆ ಮಂಡನೆ ಮಾಡುತ್ತೀರಿ? ಇವೆಲ್ಲ Supplementary estimate ಎಂದು ನಾವು ಇಲ್ಲಿ ಪಾಸ್ ಮಾಡಬೇಕೆ? For the inefficiency of the department, for the inefficiency of the Finance Department, for the inefficiency of the Administration Department? ನಾನು ಇವೆಲ್ಲವನ್ನು ನೋಡಿದ್ದೇನೆ. ಮೈಸೂರಿನ ಜಿಲ್ಲಾ ಪಂಚಾಯತ್ ಬಗ್ಗೆ ನೋಡಿದಾಗ ಅಲ್ಲಿ ನೌಕರರಿಗೆ ಸಂಬಳ ಕೊಡುವುದಕ್ಕೆ ಸಾಕಾಗಿಲ್ಲ ಅದಕ್ಕೋಸ್ಕರ ಹಣ ಬೇಕೆಂದು ಕೇಳಿದ್ದೀರಿ ಮತ್ತು ನಿಮ್ಮ ಶಿಕಾರಿಪುರದಲ್ಲಿ ಪಂಚಾಯತಿ ಕಟ್ಟಡ ಕಟ್ಟುವುದಕ್ಕೆ ಸಮುದಾಯ ಭವನ

ಕಟ್ಟುವುದಕ್ಕೆ ದುಡ್ಡು ಸಾಕಾಗಿಲ್ಲ ಅದಕ್ಕೋಸ್ಕರ ಬೇಕೆಂದು ಕೇಳಿದ್ದೀರಿ. ಇವೆಲ್ಲವನ್ನು ಮಾಡಿ ಬೇಡವೆಂದು ನಾವೇನು ಹೇಳುವುದಿಲ್ಲ. ಆದರೆ, ಇದೇ ರೀತಿಯಾಗಿ ಬೇರೆ ತಾಲ್ಲೂಕುಗಳಿಗೂ ಸಹ ಕೊಟ್ಟಿದ್ದೀರಾ? ಮೈಸೂರು ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧ ಹಾಗೆಯೇ ನಿಂತು ಹೋಗಿದೆ. ಇದಕ್ಕೆ ಹಣವನ್ನೇ ಕೊಡುತ್ತಿಲ್ಲ. ಆದರೆ, ಮಿನಿ ವಿಧಾನ ಸೌಧಕ್ಕೆ 10 ಕೋಟಿ ರೂಪಾಯಿ ಸಾಕಾಗಿಲ್ಲ. ಆದ್ದರಿಂದ, ಇದಕ್ಕಾಗಿ ಹಣ ಕೊಡಬೇಕೆಂದು ಇಲ್ಲಿ ಹೇಳುತ್ತೀರಿ. ಈ 10 ಕೋಟಿ ರೂಪಾಯಿ ಯಾರಿಗೆ ಕೊಡುತ್ತೀರಿ? ನಿಮಗೆ ಯಾರು ಬೇಕೋ ಅವರಿಗೆ ಕೊಡುವುದಕ್ಕಾಗಿ ನಾವು ಇಲ್ಲಿ ಅಪ್ರೂವಲ್ ಮಾಡಿಕೊಡುವುದು? ನಿಮ್ಮ ಪಾರ್ಟಿಯವರಿಗೆ ಕೊಡುವುದಕ್ಕೆ ನಾವು ಇಲ್ಲಿ ಅಪ್ರೂವಲ್ ಮಾಡಿಕೊಡುವುದು? ಇಲ್ಲಿರುವ 225 ಶಾಸಕರು ಸೇರಿ ಇದನ್ನು ಅಪ್ರೂವಲ್ ಮಾಡಿಕೊಡುತ್ತೇವೆ. ನಿಮಗೆ ಇಷ್ಟ ಬಂದ ಹಾಗೆ ಕೊಡುವುದಕ್ಕೋಸ್ಕರ ನಾವು ಅಪ್ರೂವಲ್ ಮಾಡಿಕೊಡುವುದಿಲ್ಲ. ಇದು ಯಾರ ಮನೆ ದುಡ್ಡಿದು? ಇದು ಜನರು ನೀಡಿದ ತೆರಿಗೆ ಹಣ. ಪ್ರವಾಸೋದ್ಯಮದಲ್ಲಿ 23 ಕೋಟಿ ಕೇಳಿದ್ದಾರೆ. ಕೃಷ್ಣದೇವರಾಯರ 500ನೇ ಪಟ್ಟಾಭಿಷೇಕ ಮಾಡುವುದಕ್ಕೆ 29 ಕೋಟಿ ಖರ್ಚು ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದೀರಿ. Supplementary estimate ನಲ್ಲಿ 23 ಕೋಟಿ ಕೇಳಿದ್ದೀರಿ. ಇವತ್ತಿನ ದಿವಸ ಕುಡಿಯುವುದಕ್ಕೆ ನೀರಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ವರನ್ನು ಕೇಳಿದರೆ ಹಣ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಬೇಸಿಗೆಯಲ್ಲಿ ಕುಡಿಯುವ ನೀರಿಗೋಸ್ಕರ ಪ್ರತಿಯೊಂದು ಜಿಲ್ಲೆಯಲ್ಲಿ ಸುಮಾರು 3 ರಿಂದ 4 ಕೋಟಿ ರೂಪಾಯಿ ಬೇಡಿಕೆ ಇದೆ. ನಮ್ಮ ಜಿಲ್ಲೆಯ ಜಿಲ್ಲಾ ಪಂಚಾಯತ್ ನ ಸಿ.ಇ.ಓ ರವರನ್ನು ಕೇಳಿದ್ದಕ್ಕೆ ಕನಿಷ್ಟ 3 ಕೋಟಿ ರೂಪಾಯಿಯಾದರು ಬೇಕಾಗುತ್ತದೆಂದು ಹೇಳಿದರು. ಕೃಷ್ಣ ದೇವರಾಯರ 500ನೇ ಪಟ್ಟಾಭಿಷೇಕ ಮಾಡಬೇಡಿ ಎಂದು ನಾನು ಹೇಳಲಿಲ್ಲ. ಒಂದು ಕಡೆ austerity measure ಎಂದು ಹೇಳುತ್ತೀರಿ. ದುಂದು ವೆಚ್ಚಕ್ಕೆ ಕಡಿವಾಣ ಹಾಕಿದ್ದೇವೆಂದು ಹೇಳಿ ಇನ್ನೊಂದು ಕಡೆ ಸುಮಾರು 75 ರಿಂದ 80 ಕೋಟಿ ರೂಪಾಯಿ ಖರ್ಚು ಮಾಡಿ ಕೃಷ್ಣ ದೇವರಾಯರ 500ನೇ ಪಟ್ಟಾಭಿಷೇಕ ಮಾಡುತ್ತೀರಿ. Is it an austerity measure? ನೀವು ಖರ್ಚು ಮಾಡಿದ್ದಕ್ಕೆಲ್ಲಾ ನಾವು ಒಪ್ಪಿಗೆ ಕೊಡಬೇಕೆ? Supplementary estimate ನಲ್ಲಿ ಇದಕ್ಕೆಲ್ಲಾ ನಾವೆಲ್ಲರು ಒಪ್ಪಿಗೆ ಕೊಡಬೇಕೆ? ಇವತ್ತಿನ ದಿವಸ ಅನೇಕ ವರ್ಷಗಳಿಂದ grant in aid ಗೆ

ಅಡ್ಮಿಟ್ ಆಗಿರುವ ಅನೇಕ ಕಾಲೇಜುಗಳಿವೆ. ಮೈಸೂರಿನಲ್ಲಿ ಬನಮಯ್ಯ ಕಾಲೇಜ್‌ನವರು ನನ್ನ ಹತ್ತಿರ ಬಂದು ನಮಗೆ 8–10 ತಿಂಗಳಿಂದ ಸಂಬಳ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಸಂಬಳ ಕೊಡುವುದಕ್ಕೆ ನಿಮ್ಮ ಹತ್ತಿರ ದುಡ್ಡಿಲ್ಲ. ಸಂಧ್ಯಾ ಸುರಕ್ಷ ಯೋಜನೆಯಲ್ಲಿ ಮತ್ತು ಅಂಗವಿಕಲರಿಗೆ ಹಾಗೂ ವಿಧವಾ ವೇತನ ಕೊಡತಕ್ಕಂಥದ್ದು ಕೂಡ 2–3 ತಿಂಗಳಿಂದ ನಿಂತು ಹೋಗಿದೆ. ಇಲ್ಲಿಗೆ ದುಡ್ಡು ಕೊಡುವುದಕ್ಕೆ ನಿಮಗೆ ಆಗಿಲ್ಲ. ಆದರೆ, ಇದಕ್ಕೆಲ್ಲಾ ಎಲ್ಲಿಂದ ದುಡ್ಡು ಬರುತ್ತದೆ? ಇದು ಪ್ರಯಾರಿಟಿಯೇ? ಬಡವರಿಗೆ ಕೊಡತಕ್ಕಂಥ ಹಣಕ್ಕಿಂಥ ಇದು ಬಹಳ ಮುಖ್ಯವಾಗಿತ್ತೆ? ಟೀಚರ್‌ಗಳಿಗೆ ಸಂಬಳ ಕೊಡುವುದಕ್ಕಿಂಥ ಇದು ಬಹಳ ಮುಖ್ಯವಾಗಿತ್ತೆ? ಜನವರಿ ತಿಂಗಳ ಅಂತ್ಯದವರೆಗೆ 3054 ಮತ್ತು 5054 ನಲ್ಲಿ ಬಾಕಿ 1096 ಕೋಟಿ ಕೊಡಬೇಕಾಗಿದೆ ಎಂದು ಮಾನ್ಯ ಉದಾಸಿಯವರು ಮೊನ್ನೆದಿವಸ ಉತ್ತರ ಕೊಟ್ಟಿದ್ದಾರೆ. ಇದು ಪ್ರಯಾರಿಟಿ ಅಲ್ಲವೇ? ಗುತ್ತಿಗೆದಾರು ಎಲ್ಲಾ ಜಿಲ್ಲೆಗಳಲ್ಲಿ ಚಳವಳಿ ಮಾಡುತ್ತಿದ್ದಾರೆ. ಇದಕ್ಕಾಗಿ ದುಡ್ಡು ಕೊಟ್ಟಿಲ್ಲ. 5131 ಕೋಟಿ ರೂಪಾಯಿಯನ್ನು ಹೇಗೆ mobilize ಮಾಡಲಾಗುತ್ತದೆಂಬುದನ್ನು ತಾವು ಈ ಸದನಕ್ಕೆ ಹೇಳಬೇಕು. ಯಾವ ರೀತಿಯಾಗಿ ಖರ್ಚು ಮಾಡುತ್ತೀರಿ ಎಂದು ಮತ್ತು ದುಡ್ಡು ಹೇಗೆ ಬರುತ್ತದೆಂದು ಹೇಳಬೇಕು. ಮತ್ತೆ ಸಾಲ ತೆಗೆದುಕೊಳ್ಳುವುದಕ್ಕೆ ಹೋಗುತ್ತೀರಾ ಅಥವಾ ಇರುವ ಪ್ಲಾನ್‌ಕಟ್ ಮಾಡುತ್ತೀರಾ ಅಥವಾ additional resources ಅನ್ನು mobilize ಮಾಡುತ್ತೀರಾ? ಹೇಗೆ ಮಾಡುತ್ತೀರಿ ಎಂಬುದನ್ನು ಇಲ್ಲಿ ಹೇಳಬೇಕು. Receipt ಗೆ 3500 ಕೋಟಿ ರೂಪಾಯಿ ಕಡಿಮೆ ಇರುವಾಗ How are you going to meet this expenditure? What are the sources? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು? Other wise ನಾವು ಸುಮ್ಮನೆ ಕಣ್ಣು ಮುಚ್ಚಿಕೊಂಡು ಒಪ್ಪಿಗೆ ಕೊಡುವುದಕ್ಕೆ ಆಗುವುದಿಲ್ಲ.

ಈ ತರಹ ಬೇಕಾದಷ್ಟು ಇವೆ. ಕಂದಾಯ ಇಲಾಖೆಯ ಡಿಮಾಂಡ್–14 ಇರಬಹುದೆಂದು ಕಾಣಿಸುತ್ತದೆ. Back Ward Classes students, Schedule Cast students ಗಳಿಗೆ scholarship ನ್ನು 2–3 ವರ್ಷದಿಂದ ಕೊಟ್ಟಿಲ್ಲ. 23 ಕೋಟಿ ರೂಪಾಯಿಗಳು ಕೃಷ್ಣದೇವರಾಯ ಉತ್ಸವಕ್ಕೆ ಕೊಡುವುದಕ್ಕಿಂತ ಮೊದಲು ಅದಕ್ಕೆ ಕೊಡಬಹುದಾಗಿತ್ತು. ನಿಮ್ಮ ಹತ್ತಿರ ದುಡ್ಡು ಇತ್ತು ಅದನ್ನೇ ಕೊಡಬೇಕಾಗಿತ್ತು. ಬೇರೆ ಬೇರೆ ದುಂದುವೆಚ್ಚ

0.17F-84

ಮಾಡುವುದರ ಬದಲು ಮೊದಲು ಕೊಡಬಹುದಾಗಿತ್ತು. ಎಲ್ಲಾ ಕಾಲದಿಂದ ನಡೆದುಕೊಂಡು ಬಂದಿರಬಹುದು. 5131. ಕೋಟಿ ರೂ.ಗಳ ಸಪ್ಲಿಮೆಂಟರಿ ಬಜೆಟ್ ಎಸ್ಟಿಮೇಟ್ ಅನ್ನು ಈಗ ಇಲ್ಲಿ ನೀವು ತೆಗೆದುಕೊಂಡು ಬಂದಿದ್ದೀರಿ, ನಿಮಗೆ ಗೊತ್ತಿತ್ತಲ್ಲಾ ಇದನ್ನು ನೀವು ಬಜೆಟ್‌ನಲ್ಲಿ ಸೇರಿಸಿಕೊಳ್ಳಬಹುದಾಗಿತ್ತು. ಬಜೆಟ್‌ನಲ್ಲಿ ಏಕೆ ಸೇರಿಸಿಕೊಳ್ಳಲಿಲ್ಲ. ಬಜೆಟ್ ಮಾಡುವಾಗ ಇವುಗಳನ್ನು ಸೇರಿಸಿಕೊಳ್ಳಬಹುದಾಗಿತ್ತು. ಇವೆಲ್ಲಾ unforeseen ಖರ್ಚುಗಳಾ? ಅನಿರೀಕ್ಷಿತ ಖರ್ಚುಗಳು ಅಂತೂ ಅಲ್ಲ. ಇವೆಲ್ಲಾ ನಿರೀಕ್ಷಿತ ಖರ್ಚುಗಳು. BPL ಕಾರ್ಡ್‌ಗಳಿಗೆ ಇಲ್ಲಿ 300 ಕೋಟಿ ರೂ.ಗಳನ್ನು ಕೇಳಿದ್ದೀರಿ. ಇದಕ್ಕೆ ಎಷ್ಟು ದುಡ್ಡು ಕೊಡಬೇಕಾಗುತ್ತದೆ, ಎಷ್ಟು ಸಬ್ಸಿಡಿ ಕೇಳಬೇಕಾಗುತ್ತದೆಂದು ಸಾಲದ ಸಬ್ಸಿಡಿ, ಬಡ್ಡಿ ಸಬ್ಸಿಡಿ 29 ಕೋಟಿ ರೂ.ಗಳನ್ನು ಇಟ್ಟುಕೊಂಡಿದ್ದೀರಿ I can understand. ಆಯಿತು ಹೆಚ್ಚಾಯಿತು, ಸಾಲವನ್ನು ತೆಗೆದುಕೊಂಡು, ಬಡ್ಡಿ ಸಬ್ಸಿಡಿ ಜಾಸ್ತಿಯಾಯಿತು ಎಂದು BPL ಕಾರ್ಡ್‌ಗಳು ಎಷ್ಟು ಇವೆ? ಎಷ್ಟು ದುಡ್ಡು ಕೊಡಬೇಕು, ಎಷ್ಟು ಸಬ್ಸಿಡಿ ಬರುತ್ತದೆಂದು ಮೊದಲೇ ಗೊತ್ತಿತ್ತು. Why it is not included in the Budget? ಕಂದಾಯ ಇಲಾಖೆಯಲ್ಲಿ ಆಯವ್ಯಯದಲ್ಲಿ ಅನುದಾನ ಕಡಿಮೆ ಇರುವುದರಿಂದ 1600 ಲಕ್ಷ ರೂ.ಗಳಿಗೂ ಹೆಚ್ಚು ಅನುದಾನವನ್ನು ದೂರವಾಣಿ ವೆಚ್ಚಕ್ಕಾಗಿ ಜಿಲ್ಲಾಧಿಕಾರಿಗಳು, ಬೆಂಗಳೂರು. 10.23 ಲಕ್ಷ ರೂ.ಗಳು ಜಿಲ್ಲಾಧಿಕಾರಿಗಳು ಮೈಸೂರು ಏನು ಇವರಿಗೆ ಕೊಟ್ಟಿರಲಿಲ್ಲವೆ? ಇದು additional ಅಲ್ಲವೇ? Additional ಆಗಿದ್ದರೆ ಇಷ್ಟೊಂದು ದುಡ್ಡು ಏಕಾಗುತ್ತದೆ. ಆಯವ್ಯಯದಲ್ಲಿ ಅನುದಾನ ಕಡಿಮೆ ಇರುವುದರಿಂದ 23.32 ಲಕ್ಷ ರೂ.ಗಳ ಅನುದಾನವನ್ನು ಹೆಚ್ಚುವರಿಯಾಗಿ ಇತರೇ ವೆಚ್ಚಕ್ಕಾಗಿ ಜಿಲ್ಲಾಧಿಕಾರಿಗಳು ಬೆಂಗಳೂರು, ಇತರೇ ವೆಚ್ಚವೆಂದರೆ ಯಾವುದು ಅದು. Wasteful expenditure cut down ಮಾಡುವ ರೀತಿ ಇದೆನಾ? ಮತ್ತೇ ಅದೇ 12.27 ಜಿಲ್ಲಾಧಿಕಾರಿಗಳು ಮೈಸೂರು 11.27 ಲಕ್ಷ ರೂ.ಗಳ ಅನುದಾನ ಅಭಿಯಾಚನೆಯಲ್ಲಿ ಇಡಲಾಗಿದೆ. ಮತ್ತೆ AC ಗಳಿಗೂ ಕೊಟ್ಟಿದ್ದೀರಿ. ಆಯವ್ಯಯದಲ್ಲಿ ಅನುದಾನ ಕಡಿಮೆ ಇರುವುದರಿಂದ 6.39 ಲಕ್ಷ ರೂ.ಗಳನ್ನು ಕಟ್ಟಡ ವೆಚ್ಚಕ್ಕಾಗಿ ಉಪ ವಿಭಾಗಾದಿಕಾರಿಗಳು ಬೆಂಗಳೂರು ಮತ್ತು ಮೈಸೂರು ಇವರಿಗೆ ಹೆಚ್ಚು ಅನುದಾನವನ್ನು ಕೊಡಲಾಗಿದೆ. ಆಯವ್ಯಯದಲ್ಲಿ ಅನುದಾನ ಕಡಿಮೆ ಇರುವುದರಿಂದ ದೂರವಾಣಿ ವೆಚ್ಚಕ್ಕಾಗಿ ಉಪ ವಿಭಾಗಾಧಿಕಾರಿಗಳು

ಬೆಂಗಳೂರು, 3.45 ಲಕ್ಷ ರೂ.ಗಳನ್ನು ಉಪ ವಿಬಾಗಾಧಿಕಾರಿಗಳು ಮೈಸೂರು ಇವರಿಗೂ ಕೊಟ್ಟಿದ್ದೀರಿ. ಇತರೇ ವೆಚ್ಚವೆಂದು ಕೊಟ್ಟಿರುತ್ತೀರಿ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಬಜೆಟ್ ತಯಾರು ಮಾಡುವಾಗ ನಮ್ಮ ಕಾಲದಲ್ಲಿಯೂ ಕೂಡ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಆಗಿರುತ್ತದೆ. ಎಲ್ಲಾ ಕಾಲದಲ್ಲಿ ಆಗಿರುವುದರಿಂದ ಅದಕ್ಕೋಸ್ಕರ ಸಂವಿಧಾನದಲ್ಲಿ Supplementary estimate ತರುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು. ಆದರೆ unforeseen expenditure ಒಂದು ಕಾರ್ಯಕ್ರಮಕ್ಕೆ ಇಟ್ಟುಕೊಂಡಿ ರತಕ್ಕಂಥ ಹಣ ಸಾಲದೇ ಹೋದರೆ ಹೆಚ್ಚಿಗೆ ಕೊಡುವುದು ಬಂದಾಗ ಕೊಡುವುದು ಅಥವಾ ಹೊಸ ಕಾರ್ಯಕ್ರಮ ಯಾವುದಾದರೂ ಪ್ರಾರಂಭ ಮಾಡಬೇಕಾದ ಪರಿಸ್ಥಿತಿ ಬಂದರೆ ಅದಕ್ಕೆ ಕೊಡಬೇಕಾಗುತ್ತದೆ I can understand. ಇವೆಲ್ಲಾ on-goings programmes ಗೂ ಕೂಡ ಕೆಲವು ಕಡೆ ಕಟ್ ಮಾಡುವುದು, ಇನ್ನು ಕೆಲವು ಕಡೆ ಹೊಸದಾಗಿ ಕೊಡುತ್ತೇವೆಂದು ಹೇಳುವುದು. ಅವರ TA, DA, Salary, pension ದೂರವಾಣಿ ಖರ್ಚು ಇತರೇ ಖರ್ಚುಗಳು ಇವೆಲ್ಲಾ unforeseen definition ಕೆಳಗಡೆ ಬರುವುದಿಲ್ಲ. ಏಕೆ ನೀವು ಎರಡು ಮೂರು ತಿಂಗಳಿಂದ ನಿಲ್ಲಿಸಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳು ಇವುಗಳನ್ನು ಚೆಕ್ ಮಾಡಬೇಕು. ನಾನು ಟ್ರೆಜರಿಗಳಲ್ಲಿ ವಿಚಾರ ಮಾಡಿದೆ. Old age pension, ಸಂಧ್ಯಾ ಸುರಕ್ಷಾ, ವಿಧವಾ ವೇತನ, ಅಂಗವಿಕಲರ ವೇತನ, ಇವೆಲ್ಲಾ ನಿಂತು ಹೋಗಿರುತ್ತವೆ. ನಾನು ಇದನ್ನು ಬೇಕು ಅಂಥ ಹೇಳುತ್ತಿಲ್ಲ. ನಾನು ಮಾಡಿಯೇ ಹೇಳುತ್ತಿದ್ದೇನೆ. ಅವರಿಗೆ ಒಂದು ತಿಂಗಳು ನಿಲ್ಲಿಸಿಬಿಟ್ಟರೆ ಎಷ್ಟು ತೊಂದರೆ ಆಗುತ್ತದೆ Grant-in-aid institution ಗಳಲ್ಲಿ ಕೆಲಸ ಮಾಡುವವರಿಗೆ 8–10 ತಿಂಗಳುಗಳಿಂದ ಸಂಬಳ ಕೊಡದಿದ್ದರೆ ಅವರ ಗತಿ ಏನಾಗಬೇಕು. ಪಾಲಿಟೆಕ್ನಿಕ್‌ಗಳಲ್ಲಿ ಕೆಲಸ ಮಾಡುವವರು representation ತೆಗೆದುಕೊಂಡು ಮೊನ್ನೇ ಕೆಲವು ಜನ ಶಿಕ್ಷಕರು ಮೈಸೂರಿನಿಂದ ಬಂದಿದ್ದರು. ಬಸುಮಯ್ಯ ಕಾಲೇಜಿನವರು ಮೊನ್ನೇ ಬಂದಿದ್ದರು. ಅವರಿಗೆ ಸಂಬಳ ಕೊಟ್ಟಿದ್ದೀರಾ ಎನ್ನುವುದನ್ನು ಈಗ ಸ್ವಲ್ಪ ಹೇಳಿ ಬಿಡಿ ನೋಡೋಣ.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು): ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ಯಾವಾಗ ಕೊಟ್ಟಿದ್ದೀರಿ.

ಶ್ರೀ ಅರವಿಂದ ಲಿಂಬಾವಳಿ : ಮೂರು ದಿವಸದ ಹಿಂದೆ ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ನನಗೆ ಅವರು ಹಿಂದೆ ಭೇಟಿಯಾಗಿದ್ದರು. ನಾನು ಚೆಕ್ ಮಾಡಿ ಅವರಿಗೆ ಕೇಳುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ : ಎಲ್ಲಾ ಪಾಲಿಟೆಕ್ನಿಕ್‌ಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಬಿಡುಗಡೆ ಮಾಡಿರುತ್ತಾರೆ.

ಶ್ರೀ ಸಿದ್ದರಾಮಯ್ಯ : 8 ತಿಂಗಳುಗಳಿಂದ ಕೊಟ್ಟಿಲ್ಲವೆಂದು ಹೇಳಿರುವುದು ಸರಿಯೆ?

ಶ್ರೀ ಅರವಿಂದ ಲಿಂಬಾವಳಿ : 8 ತಿಂಗಳು ಅಲ್ಲ, 6 ತಿಂಗಳುಗಳಿಂದ ಕೊಟ್ಟಿರಲಿಲ್ಲ.

ಶ್ರೀ ಸಿದ್ದರಾಮಯ್ಯ : 6 ತಿಂಗಳಾ? ಅವರು 8 ತಿಂಗಳು ಎಂದು ಹೇಳಿದರು. ನಿಮ್ಮ ಮಾತನ್ನೇ ನಾನು ಒಪ್ಪಿಕೊಳ್ಳುತ್ತೇನೆ. ಅವರ ಮಾತನ್ನು ನಾನು ಒಪ್ಪುವುದಿಲ್ಲ ಆಯಿತಾ?

ಶ್ರೀ ಅರವಿಂದ ಲಿಂಬಾವಳಿ : ನಾನು ಅ ಇಲಾಖೆಯ ಮಂತ್ರಿಯಾಗಿದ್ದೇನೆ.

ಶ್ರೀ ಖಮರುಲ್ ಇಸ್ಲಾಂ : 29 ಪಾಲಿಟೆಕ್ನಿಕ್ ಗೆ 50% arrears ಇನ್ನು ಕೊಟ್ಟಿಲ್ಲ.

ಶ್ರೀ ಅರವಿಂದ ಲಿಂಬಾವಳಿ : ನಾವು ಏನು ಒಳ್ಳೆಯ ಕೆಲಸ ಮಾಡಿದರು ನೀವು ಅಪ್ರಿಸಿಯೇಟ್ ಮಾಡುವುದಿಲ್ಲವಲ್ಲಾ?

ಶ್ರೀ ಖಮರುಲ್ ಇಸ್ಲಾಂ : ಆಶ್ವಾಸನೆಯನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಸಚಿವರೆ ನಾವು ನಿಮ್ಮನ್ನು ಟೀಕೆ ಮಾಡಿಲ್ಲ. ನೀವು ಏನು ಮಾಡುತ್ತಿದ್ದೀರೆಂದರೆ, ಅವರು ಕೊಟ್ಟಿಲ್ಲ, ನೀವು ಕೊಟ್ಟಿಲ್ಲ ಅಷ್ಟೆ. ನೀವು 6 ತಿಂಗಳದ್ದು ಕೊಟ್ಟು ಇನ್ನು 6 ತಿಂಗಳದ್ದು ಏಕೆ ಉಳಿಸಿಕೊಂಡಿದ್ದೀರಿ.

ಶ್ರೀ ಅರವಿಂದ ಲಿಂಬಾವಳಿ : ಕೆಲವೊಂದು ಲೋಪದೋಷಗಳು ಇದ್ದವು ಅವುಗಳನ್ನು ಸರಿಪಡಿಸಿ ಪ್ರತಿ ತಿಂಗಳು ECS system ನಲ್ಲಿ salary ಹೋಗುವಂಥ ಪದ್ಧತಿ ಇದೆ. ಅದನ್ನು ಜಾರಿಗೆ ತಂದಿದ್ದೇವೆ.

ಶ್ರೀ ಸಿದ್ದರಾಮಯ್ಯ : ನೀವು ಮಂತ್ರಿಯಾಗಿರುವುದು ಎರಡನೇ ವರ್ಷ. ನೀವು ಏನು ಹೊಸದಾಗಿ ಮಂತ್ರಿಯಾಗಿಲ್ಲ.

ಶ್ರೀ ಅರವಿಂದ ಲಿಂಬಾವಳಿ : ಮಾಡಿರುತ್ತೇವೆ, ಈಗ ಜಾರಿಗೆ ಬಂದಿರುತ್ತದೆ.

ಶ್ರೀ ಸಿದ್ದರಾಮಯ್ಯ : ಜಾರಿಗೆ ಬಂದಿದ್ದರೆ ಬಹಳ ಸಂತೋಷ. ಪಾಪ 6 ತಿಂಗಳು ಅವರಿಗೆ ಎಷ್ಟು ತೊಂದರೆಯನ್ನು ಕೊಟ್ಟಿದ್ದೀರಿ.

ಶ್ರೀ ಖಮರುಲ್ ಇಸ್ಲಾಂ : ಸರ್ ಇನ್ನೊಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ.

ಶ್ರೀ ಅರವಿಂದ ಲಿಂಬಾವಳಿ : 6 ತಿಂಗಳದ್ದು ಕೊಡಿಸಿದ್ದೇವೆ ಸರ್.

ಶ್ರೀ ಸಿದ್ದರಾಮಯ್ಯ : ನಾವು 12 ತಿಂಗಳದ್ದು ಹೇಳಿದರೆ ನೀವು 6 ತಿಂಗಳಿಗೆ ಬಂದಿದ್ದೀರಾ?

ಶ್ರೀ ಅರವಿಂದ ಲಿಂಬಾವಳಿ : ತಿಮ್ಮನ ಕತೆ ಗೊತ್ತಲ್ಲವಾ ಸರ್. ತಿಮ್ಮ ಹೇಳಿದನಂತೆ.

ಶ್ರೀ ಸಿದ್ದರಾಮಯ್ಯ : ಆಯಿತು ಕುಳಿತುಕೊಳ್ಳಿ, ಕಳೆದ ವಾರ ನಾನು ಮೈಸೂರಿನಲ್ಲಿ ಇದ್ದಾಗ ಆ ಬನುಮಯ್ಯ ಕಾಲೇಜಿನ ಟೀಚರ್ಸ್ ನನ್ನ ಹತ್ತಿರ ಬಂದಿದ್ದರು, They only told me, 8 ತಿಂಗಳಿನಿಂದ ನಮಗೆ ಸಂಬಳ ಸಿಕ್ಕಿಲ್ಲವೆಂದು ಅವರೇ ನನಗೊಂದು representation ಕೊಟ್ಟಿದ್ದಾರೆ. ನಾನು ನಿಮಗೆ ಅದರ ಮೇಲೆ ಬರೆದು ಕಳುಹಿಸಿರಬೇಕು. ಅದು ಬಂದಿದೆಯಾ? ಹೋಗಲಿ ಈಗ ಕೊಟ್ಟು ಬಿಟ್ಟಿದ್ದೀರಾ?

ಶ್ರೀ ಅರವಿಂದ ಲಿಂಬಾವಳಿ : 6 ತಿಂಗಳ ಸಂಬಳ ಹೋಗಿದೆ.

ಶ್ರೀ ಸಿದ್ದರಾಮಯ್ಯ : ಸಪ್ಲಿಮೆಂಟರಿ ಎಸ್ಟಿಮೇಟ್ ಈಗ ಪಾಸ್ ಮಾಡುತ್ತಿದ್ದೀರಿ ಆಗಲೇ ಕೊಟ್ಟು ಬಿಟ್ಟಿದ್ದೀರಾ?

ಶ್ರೀ ಅರವಿಂದ ಲಿಂಬಾವಳಿ : ಇಲ್ಲಾ ಮೂರು ತಿಂಗಳಿಗೆ.

ಶ್ರೀ ಸಿದ್ದರಾಮಯ್ಯ : ನಾವು ಈಗ ಪಾಸು ಮಾಡುತ್ತಿರುವುದು ಕೊಟ್ಟಿದ್ದೀರಾ? ಮಧ್ಯದಲ್ಲಿಯೇ release ಮಾಡಿ ಕೊಟ್ಟಿದ್ದಾರಾ ನಿಮಗೆ?

ಶ್ರೀ ಅರವಿಂದ ಲಿಂಬಾವಳಿ : ನೀವು ನನಗೆ ಕೇಳಿರುವ ಪ್ರಶ್ನೆ ಬಾಕಿ ಇರುವ 6 ತಿಂಗಳ ಸಂಬಳ...

ಶ್ರೀ ಸಿದ್ದರಾಮಯ್ಯ : ನನಗೆ ಗೊತ್ತಿಲ್ಲ. Toady supplementary Estimate is presented. I do not know whether it is included here or not. If it is not included, has it been released already? Is it covered under this estimate.

ಶ್ರೀ ಅರವಿಂದ ಲಿಂಬಾವಳಿ : I do not know whether it is included or not.

ಶ್ರೀ ಸಿದ್ದರಾಮಯ್ಯ : ಆಯಿತು ನೀವು ಚೆಕ್ ಮಾಡಿ ಹೇಳಿ.

ಶ್ರೀ ಅರವಿಂದ ಲಿಂಬಾವಳಿ : ನಾನು ಓದಿ ತಮಗೆ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ತಾವು ಇನ್ನು ಓದಿಲ್ಲವೇ? ನಿಮ್ಮ Education Department ನ ಬಗ್ಗೆ ತಾವು ಓದಿಕೊಳ್ಳಿ.

ಶ್ರೀ ಅರವಿಂದ ಲಿಂಬಾವಳಿ : ಶಿಕ್ಷಣ ಸಚಿವನಾಗಿ ನಾನೇ ಓದದೇ ಹೋದರೆ, ಇನ್ಯಾರು ಓದುವುದಕ್ಕೆ ಸಾಧ್ಯ.

ಶ್ರೀ ಸಿದ್ದರಾಮಯ್ಯ : ತಾವು ಇನ್ನು ಓದಿಲ್ಲವೆಂದು ಹೇಳಿರುವುದು ಸರಿಯಲ್ಲವೇ?

ಶ್ರೀ ಅರವಿಂದ ಲಿಂಬಾವಳಿ : ಆದರೆ ನೀವು ಇದನ್ನು ಮೆಚ್ಚುತ್ತಿಲ್ಲವಲ್ಲಾ? ನಾವು ಮಾಡಿದ ಕೆಲಸಕ್ಕೆ ತಾವು ಮೆಚ್ಚಿಕೊಂಡಿಲ್ಲ ಮಾಡಿದ ಕೆಲಸಕ್ಕೆ ನನಗೆ ಅಭಿನಂದನೆಯನ್ನು ಸಲ್ಲಿಸಲಿಲ್ಲವೆಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ಆಯಿತು ಮೆಚ್ಚಿಕೊಂಡೆ ತಾವು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಮಗೆ ನೀವು ಮಾಡಿರುವ ಕೆಲಸ ಮತ್ತು ಮಾಡಬೇಕಾಗಿರುವ ಕೆಲಸ. ನೀವು 6 ತಿಂಗಳ ಕಾಲ ಇಟ್ಟುಕೊಳ್ಳದೆ ಇದ್ದಿದ್ದರೆ ಅವರಿಗೆ ನೀವು ಪ್ರತಿ ತಿಂಗಳು ಕೊಟ್ಟುಕೊಂಡು ಬಂದಿದ್ದರೆ ನಿಮಗೆ ನಾವು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇವು. ಆದರೆ ನೀವು 6 ತಿಂಗಳಿಂದ ಅವರಿಗೆ ಕೊಟ್ಟಿಲ್ಲವಲ್ಲಾ ಅದಕ್ಕೆ ನೀವು ಅಭಿನಂದನೆಗೆ ಅರ್ಹರಲ್ಲಾ?

ಶ್ರೀ ಅರವಿಂದ ಲಿಂಬಾವಳಿ : ನಾವು 6 ತಿಂಗಳದು ಕೊಟ್ಟು...

ಶ್ರೀ ಸಿದ್ದರಾಮಯ್ಯ : Since it is a delay payment, I do not want to appreciative your action. Despite the fract I thank you. ಕೂತುಕೊಳ್ಳಿ.

ಶ್ರೀ ಅರವಿಂದ ಲಿಂಬಾವಳಿ : ಆದರೆ, ನಮಗೆ ಶಿಕ್ಷಕರು ಅಭಿನಂದಿಸುತ್ತಿದ್ದಾರೆ. Management ನವರು ನಮಗೆ ಅಭಿನಂದಿಸುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ನೀವು ಅವರ ಹೊಟ್ಟೆಗೆ ತೊಂದರೆ ಕೊಡಲಿಲ್ಲವೆಂದು, ಅವರು ಹೋಗಲಿ ಸಿಕ್ಕಿತಲ್ಲಾ. ಮಿನಿಸ್ಟರಿಗೆ ಒಂದು ನಮಸ್ಕಾರ ಹೊಡೆಯೋಣವೆಂದು ಹೊಡೆದಿದ್ದಾರೆ.

ಶ್ರೀ ಖಮರುಲ್ಲಾ ಇಸ್ಲಾಂ : ನಾನು ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ : ಕೊಟ್ಟಿದ್ದೇವೆಂದು ಹೇಳಿದರೂ ಕೂಡ ಈ ರೀತಿಯಾಗಿ ಹೇಳುತ್ತಿರಲ್ಲಾ!

ಶ್ರೀ ಸಿದ್ದರಾಮಯ್ಯ : ಅವರ ಪರವಾಗಿ ನಾನು ನಿಮಗೆ thanks ಹೇಳಿದ್ದೇನೆ.

ಶ್ರೀ ಖಮರುಲ್ಲಾ ಇಸ್ಲಾಂ : ಮಾನ್ಯ ಸಚಿವರೆ, ನಾನು ನಿಮಗೆ ಅಭಿನಂದನೆಯನ್ನು ಕೊಡುತ್ತಿದ್ದೇನೆ. ನೀವು 100% ಮಾಡಿ, ಇದು ನಮ್ಮ ಡಿಮ್ಯಾಂಡ್. Technical Education ಗೆ ಸ್ಯಾಲರಿಯನ್ನು 100% ಮಾಡಿ, ತಾವು ಏನು ಒಪ್ಪಿಕೊಂಡಿದ್ದೀರಿ, ನೀವು ಕೆಲಸವನ್ನು ಮಾಡಿ ಯಾರು objection ಮಾಡುವುದಿಲ್ಲ. ಇದನ್ನು ಯಾರು ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಕಾಗೇರಿಯವರೆ, ಹೈಸ್ಕೂಲ್ ಮತ್ತು ಜ್ಯೂನಿಯರ್ ಕಾಲೇಜುಗಳು ಯಾವುದಕ್ಕೂ ಕೊಟ್ಟಿಲ್ಲ. ತಾವು ಮಾತನಾಡದೆ ಕುಳಿತಿದೀರಿ, ನಿಮಗೆ ನಾನು ಕೇಳುತ್ತಿರುವುದು. ತಾವು ನಿಮ್ಮ ಚೇರಿನಲ್ಲಿ ಬಂದು ಕುಳಿತುಕೊಳ್ಳಿ, ಎಲ್ಲಾ ಮಿನಿಸ್ಟರ್‌ಗಳು ಅವರ ಚೇರ್‌ಗಳನ್ನು ಬಿಟ್ಟು ಬೇರೆಯವರ ಚೇರ್‌ನಲ್ಲಿ ಕುಳಿತುಕೊಂಡಿರುತ್ತಾರೆ ಏಕೆ? ಅಲ್ಲಿ ಏನು ಕೆಲಸವಿಲ್ಲ ಅಂತಾ ಹೇಗೆ ನಿಮ್ಮದು.? ನಿಮ್ಮ ಇಲಾಖೆಗೆ ಕೊಟ್ಟಿದ್ದರಾ? ಕೊಟ್ಟಿಲ್ಲವೆಂದು ಗೊತ್ತಾಗುತ್ತದೆ. If he si Very silent, it indicates that ಕೊಟ್ಟಿಲ್ಲವೆಂದು ಗೊತ್ತಾಗುತ್ತದೆ, Silence Indicates ಪಾಪ ಬಿಡಿ ಅವರಿಗೆ ಹೇಳುವುದಕ್ಕೆ ಮುಜುಗರವಾಗುತ್ತದೆ. ನಾವು ಅದಕ್ಕೆ ಅಂಟಿಕೊಳ್ಳುವುದಿಲ್ಲ, ಅವರು ಕೊಟ್ಟಿಲ್ಲ, ನೀವು ಕೊಟ್ಟಿಲ್ಲ ಆದರೆ ನೀವು ಏನು ಮಾಡುತ್ತೀರಿ? ಪರಿಸ್ಥಿತಿ ಹೇಗೆ ಇದೆ ನೋಡಿ. ಇಲ್ಲಿ ನೋಡಿದರೆ ಕಳೆದ ವರ್ಷಕ್ಕಿಂತ ಈ ವರ್ಷ ಜಾಸ್ತಿ ತೆರಿಗೆ ಬಂದಿದೆ ಅಂತ ಪದೇ ಪದೇ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ತೆರಿಗೆ ಹಣ ಜಾಸ್ತಿ ಬಂದಿದೆ ಅಂದ ಮೇಲೆ ಎಲ್ಲಿ ಕೊಟ್ಟಿಲ್ಲವಲ್ಲಾ? Where it has gone? ಮಾನ್ಯ ಅಧ್ಯಕ್ಷರೆ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಬೇಕಾದಷ್ಟು ಇದೆ. ಅವೆಲ್ಲವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾನು ಬಜೆಟ್ ಮೇಲೆ ಎಲ್ಲಾ ಹೇಳಿರುವುದರಿಂದ ಇದು ಒಂದು ರೀತಿ ಯಾವುದೇ ಬಜೆಟ್‌ನ್ನು ಮಂಡಿಸುವಾಗ, ಬಜೆಟ್‌ನ್ನು prepare ಮಾಡುವಾಗ Head of the

departments. Administrative Heads i.e. Finance Department, ಸರಿಯಾಗಿ ಕುಳಿತುಕೊಂಡು ಸಂಬಳ, ಪೆನ್‌ಷನ್ ಟಿ.ಎ. ಡಿ.ಎ. ಹೀಗೆ ಯಾವುದಕ್ಕೆ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ಮೊದಲು ಅಲ್ಲಿ ಮಾಡಬೇಕು. ಆಮೇಲೆ ಇದ್ದಕಿದ್ದ ಹಾಗೆ ಯಡಿಯೂರಪ್ಪನವರು ಕೆಲವು ಹೊಸ programmeಗಳನ್ನು ಬಜೆಟ್ ಆದ ಮೇಲೆ announce ಮಾಡಿ ಬಿಡುತ್ತಾರೆ. ಅವೆಲ್ಲಕ್ಕೂ ಹಣ ಇರುವುದಿಲ್ಲ. ಅದನ್ನು ಎಲ್ಲಿಯೂ ಹೇಳಿರು ವುದಿಲ್ಲ. Annual Financial Statement ನಲ್ಲಿಯೂ ಬಂದಿರುವುದಿಲ್ಲ. ಆಮೇಲೆ ಎಷ್ಟೋ ದಿನದ ಮೇಲೆ Supplementary estimate ನಲ್ಲಿ ತರುತ್ತಾರೆ. ಇನ್ಯಾವುದನ್ನು ಕಿತ್ತು ಹಾಕುತ್ತಾರೆ, ಅದಕ್ಕೆ ನಾನು ಹೇಳಿರುವುದು. The sanctity of budget ಹೋಗುತ್ತಿದೆ. That is why I said. Not to make allegation. ಇದು ಬಹಳ bad precedent ಆಗಿ ಬಿಡುತ್ತದೆ. ಈ ತರಹದ್ದು ನೋಡಿದರೆ ಬೇಕಾದಷ್ಟು ಇದೆ. ಪಿ.ಡಬ್ಲ್ಯೂಡಿ ಬಗ್ಗೆ ಹೇಳುವುದಾದರೆ, ಮಾನ್ಯ ಉದಾಸಿಯವರು ಹೊರಟು ಹೋದರಾ? ಪಿಡಬ್ಲ್ಯೂಡಿಯಲ್ಲಿ 1096 ಕೋಟಿ ರೂಪಾಯಿಗಳ ಬಾಕಿ ಬಿಲ್ ಜನವರಿ ಯೊಳಗಡೆ ಇದೆ. ಇಲ್ಲಿ ನೀವು 600 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೀರಿ. ನೀವು ಎಲ್ಲಿ ಕೊಟ್ಟಿದ್ದೀರಿ? ಪಿಡಬ್ಲ್ಯೂಡಿ ಇಲಾಖೆಯಲ್ಲಿ 600 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ಅಲ್ಲಿ ನೀವು ರಸ್ತೆಗಳಿಗಾಗಿ ಎಂದು ಈ ಹಣವನ್ನು ಇಟ್ಟುಕೊಂಡಿದ್ದೀರಿ. ನೀವು ಒಂದು ರೂಪಾಯಿ ಆದರೂ ರಸ್ತೆಯ ಕೆಲಸವನ್ನು ಮಾಡಿದ್ದೀರಾ? ಪೆಂಡಿಂಗ್ ಬಿಲ್ಸ್ 1096 ಕೋಟಿ ರೂಪಾಯಿಗಳು ಇದೆ. 3054, 5054 ಇಲ್ಲಿ 600 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ಇದು ಏತಕ್ಕೆ ಆಗುತ್ತದೆ. Entire pending bills ನ್ನು ತೀರಿಸುವುದಕ್ಕಾಗುವುದಿಲ್ಲ. ಕನಿಷ್ಟ ಪಕ್ಷ ಮಾರ್ಚಿಯ ವರೆಗೆ ಪೆಂಡಿಂಗ್ ಬಿಲ್ಸ್‌ನಲ್ಲಿ 80% ಚುಕ್ತ ಆಗಬೇಕಲ್ಲಾ? ಆದಕ್ಕೆ ಅವರು 2–2 ವರ್ಷದಿಂದ 3054 ಹಾಗೂ 5054 ನಲ್ಲಿ ಬಂದಿಲ್ಲವೆಂದು ಚಳುವಳಿಯನ್ನು ಮಾಡುತ್ತಿದ್ದಾರೆ. ಅವುಗಳನ್ನು ಕೊಡದೆ ನೀವು ಹೊಸದಾಗಿ ದುಡ್ಡನ್ನು ತೆಗೆದುಕೊಂಡು ಬಂದು ಖರ್ಚು ಮಾಡುತ್ತೇವೆಂದರೆ ಹೇಗೆ? ಮಾನ್ಯ ಯಡಿಯೂರಪ್ಪನವರು ಎಂಎಲ್‌ಎಗಳಿಗೆ ನೀವು ಒಂದು ಕೋಟಿ ರೂಪಾಯಿ ಯನ್ನು ಕೊಟ್ಟುಬಿಡಿ, ಆಮೇಲೆ ಇನ್ನೊಂದು 50 ಲಕ್ಷ ರೂಪಾಯಿಯನ್ನು ಕೂಡ ಮಾಡಿ ಅಂತ ಕಳೆದ ವರ್ಷ ಹೇಳಿದ್ದಾರೆ. ಎರಡು ವರ್ಷದಿಂದ ಬರೀ

ಒಂದೂವರೆ ಕೋಟಿ ರೂಪಾಯಿಗಳು ಬಿಡುಗಡೆಯಾಯಿತೇ ಹೊರತು ನೀವು ಎರಡೂವರೆ ಕೋಟಿಗೆ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಅದು ಎರಡು ಕೋಟಿನಾ? ಮಾನ್ಯ ಜಗದೀಶ್ ಶೆಟ್ಟರ್‌ರವರೆ ತಾವು ಸ್ಪೀಕರ್ ಆಗಿ ಮೇಲುಗಡೆ ಕುಳಿತಿದ್ದಾಗ 50 ಲಕ್ಷ ರೂಪಾಯಿ ಅವರು ಹೇಳಿದ್ದರು. ಅದು ಇರುವುದು ನಿಜ.

ಶ್ರೀ ಗೋವಿಂದ ಕಾರಜೋಳ : ನಾನು ಒಂದು ಸಾರಿ ನಿಮಗೆ ಹೇಳಿಬಿಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನಿಮಗೆ ದುಡ್ಡುಕೊಟ್ಟಿಲ್ಲಾ ತಾವು ಕುಳಿತುಕೊಳ್ಳಿ. ನಿಮ್ಮ ಹತ್ತಿರ ಹೊಸ ಕೆಲಸ ಯಾವುದು ಮಾಡುವುದಕ್ಕೂ ದುಡ್ಡು ಇಲ್ಲ. ನೀವು ದುಡ್ಡನ್ನು ಕೇಳಿದರೆ ಇಲ್ಲವೆಂದು ಹೇಳಿಬಿಡುತ್ತೀರಿ. ನಾನು ನಿಮ್ಮನ್ನು ಮಾತನಾಡಿಸಬಾರದು ಎಂದು ಇದ್ದೆ. ನೀನು ನಮ್ಮ ಮನುಷ್ಯ ಏಕಪ್ಪಾ ಮಾತನಾಡಿ ಮುಜುಗರ ಮಾಡುವುದು ಬೇಡವೆಂದು ಇದ್ದೆ. ನಾನು context ಹೇಳುತ್ತೇನೆ ನೋಡಿ. ಎಂಎಲ್‌ಎ ಗಳೆಲ್ಲ ಏನು ಮಾಡಿದರು ಎಂದರೆ, ಒಂದು ಕೋಟಿ ರೂಪಾಯಿಯಿಂದ ಎರಡು ಕೋಟಿ ರೂಪಾಯಿಗಳು ಮಾಡಿ ಎಂದು ಅವರು ಮುಖ್ಯಮಂತ್ರಿಯವರನ್ನು ಒತ್ತಾಯ ಮಾಡಿದರು. ಆಗ ಅವರು ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇನೆ, ಇನ್ನು 50 ಲಕ್ಷ ರೂಪಾಯಿಗಳಿಗೆ ನೀವು programme ನ್ನು ಜಿಲ್ಲಾಧಿಕಾರಿಗಳಿಗೆ ಕೊಡಿ ಎಂದು ಹೇಳಿದರು. 2 ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆಯೇ?

ಶ್ರೀ ಗೋವಿಂದ ಕಾರಜೋಳ : ಒಂದು ಕೋಟಿ ರೂಪಾಯಿಯನ್ನು ಆ ವರ್ಷಕ್ಕೆ ಮಿಕ್ಕಿದ್ದನ್ನು ಅಡ್ವಾನ್ಸ್ ಆಗಿ 50 ಲಕ್ಷ ಬಿಡುಗಡೆ ಮಾಡುತ್ತೇವೆಂದು ಹೇಳಿದರು.

ಶ್ರೀ ಸಿದ್ದರಾಮಯ್ಯ : ಈಗ ಎರಡು ವರ್ಷದಲ್ಲಿ 2 ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆಯೇ? ಅದನ್ನು ಕೊಟ್ಟಿದ್ದಾರೋ ಇಲ್ಲವೋ ಹೇಳಿಬಿಡಿ.

ಒಬ್ಬ ಮಾನ್ಯ ಸದಸ್ಯರು : ಇಲ್ಲವೆಂದು ಹೇಳಿ ಸಾರ್.

ಶ್ರೀ ಗೋವಿಂದ ಕಾರಜೋಳ : ಈಗಾಗಲೇ ಒಂದೂವರೆ ಕೋಟಿ ರೂಪಾಯಿಗಳು ಬಿಡುಗಡೆ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಬಚ್ಚೇಗೌಡರೆ, ಒಂದೂರವರೆ ಕೋಟಿ ಅಲ್ಲವೆ? ಅವರು correct ಆಗಿ ಹೇಳುತ್ತಾರೆ. ಇನ್ನು 50 ಲಕ್ಷ ರೂಪಾಯಿ

0.17F-85

ಯನ್ನು ಕೊಡಬೇಕೋ ಬೇಡವೋ? ಈ ಮಾರ್ಚಿಯ ಒಳಗಡೆ ಬಿಡುಗಡೆ ಮಾಡಬೇಕಲ್ಲವೇ? ಅದನ್ನೇ ಕೊಡಿ ಎಂದು ನಾನು ಹೇಳುತ್ತಿರುವುದು.

ಶ್ರೀ ಗೋವಿಂದ ಕಾರಜೋಳ : 50 ಲಕ್ಷ ರೂಪಾಯಿಯನ್ನು ಕಳೆದ ವಾರ ಬಿಡುಗಡೆ ಮಾಡಿದ್ದೇವೆ. ಅದು ಬಹುಶಃ ತಮ್ಮ ಗಮನಕ್ಕೆ ಬಂದಿಲ್ಲವೆಂದು ಕಾಣಿಸುತ್ತದೆ.

ಶ್ರೀ ಸಿದ್ದರಾಮಯ್ಯ : ಅದು ಆಯಿತು. ಅದನ್ನು ಸೇರಿಸಿಕೊಂಡೆ ಒಂದೂವರೆ ಕೋಟಿ ರೂಪಾಯಿಗಳು. ಅಲ್ಲವೆ? ಬಚ್ಚೇಗೌಡರೆ.

ಶ್ರೀ ಜಗದೀಶ್ ಶೆಟ್ಟರ್ : ಈಗ 50 ಲಕ್ಷ ರೂಪಾಯಿಗಳು ರಿಲೀಸ್ ಆಗಿದೆ.

ಶ್ರೀ ಸಿದ್ದರಾಮಯ್ಯ : ಮೊನ್ನೆ ಏನೋ ಒಂದು ಕಂಡಿಷನ್ ಹಾಕಿದ್ದಾರೆ? ಅದನ್ನು ತೆಗೆದುಹಾಕಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್ : ಅದು D.C. ಯವರ P.D.Account ಗೆ ಜಮಾ ಆಗಿದೆ. ನಮಗೆ ವರ್ಕ್ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಅದು ಸರಿ.

(ಗೊಂದಲ)

ಶ್ರೀ ಗೋವಿಂದ ಕಾರಜೋಳ : 31ನೇ ತಾರೀಖಿನೊಳಗಡೆ ಖರ್ಚು ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ಯಾರಿಗೆ ಹೇಳಿದ್ದೀರೆಂದು ತಾವು ಹೇಳಿ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ಈ ಬಗ್ಗೆ ಸ್ವಲ್ಪ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಅವರು ಈ ಬಗ್ಗೆ ಹೇಳಬೇಕಾಗುತ್ತದೆ. ನೀವು ಅಲ್ಲಿ ಕುಳಿತು ಒಂದು ಆದೇಶವನ್ನು ಮಾಡಬೇಕಾಗುತ್ತದೆ. Has it been withdrawn? ಪಾಪ ಡಿ.ಸಿ.ಯವರಿಗೆ ಏನು ಗೊತ್ತಾಗುತ್ತದೆ? You please withdraw the circular ಅದು ಚಾನ್ಸ್ ಅಲ್ಲವೆ ಜಗದೀಶ್ ಶೆಟ್ಟರವರೆ,

ಶ್ರೀ ಜಗದೀಶ್ ಶೆಟ್ಟರ್ : ನಾನು ನಿನ್ನೆ ದಿನ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅದು ಸರಿ, ಅದನ್ನು ತಾವು withdraw ಮಾಡಬೇಕಲ್ಲಾ?

ಶ್ರೀ ಜಗದೀಶ್ ಶೆಟ್ಟರ್ : ಮಾಡಿಸೋಣ.

ಶ್ರೀ ಸಿದ್ದರಾಮಯ್ಯ : ನಾಳೆ withdraw ಮಾಡುತ್ತೇವೆಂದು ಹೇಳಿ. ಆ circular ನ್ನು ನಾಳೆ withdraw ಮಾಡುತ್ತೇವೆ.

ಅಧ್ಯಕ್ಷರು : ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ನೀವು withdraw ಮಾಡಿ ಎಂದು ಹೇಳಿಬಿಡಿ.

ಅಧ್ಯಕ್ಷರು : withdraw ಮಾಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಆ ರೀತಿಯಾಗಿ ಹೇಳಬೇಡಿ. ಮಾಡಿ ಎಂದು ತಾವು ಹೇಳಿ.

ಅಧ್ಯಕ್ಷರು : ಮಾಡಿ. ನಿನ್ನೆ ದಿನ PD Account ಗೆ ಹಾಕಿ ಎಂದು ಹೇಳಿದ್ದೇನೆ.

ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಇನ್ನೊಂದು ಮರು ಆದೇಶವನ್ನು ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳು ಮರೆತು ಬಿಡುತ್ತಾರೆ. ನೀವು ಹೇಳಿದರೆ ಅವರಿಗೆ ಭಯ ಇರುತ್ತದೆ. ನಾವು ಹೇಳಿದರೆ ಅವರಿಗೆ ಭಯ ಇರುವುದಿಲ್ಲ. Speaker ಹೇಳಿದರೆ ಅವರಿಗೆ ಸ್ವಲ್ಪ ಭಯ ಇರುತ್ತದೆ.

ಶ್ರೀ ಗೋವಿಂದ ಕಾರಜೋಳ : ಮಾನ್ಯ ವಿರೋಧ ಪಕ್ಷದ ನಾಯಕರೆ, ಸ್ವಲ್ಪ yield ಆಗಬೇಕು. ಈಗ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. last week ನಲ್ಲಿ ಬಿಡುಗಡೆ ಮಾಡಿದಂತಹ 50 ಲಕ್ಷ ರೂಪಾಯಿಗಳು ಡಿಸಿ ಬಿಲ್ಲಿನ ಮೇಲೆ ಡ್ರಾ ಮಾಡಬೇಕೆಂದು ಡಿ.ಸಿ.ಯವರಿಗೆ instructions ಕೊಟ್ಟಿದ್ದೇವೆ. ಈಗ ಡಿ.ಸಿ.ಬಿಲ್ಲಿನಲ್ಲಿ last momentನಲ್ಲಿ ಮಾಡಿ ಬಿಡುಗಡೆ ಮಾಡಿದರೆ ಡ್ರಾ ಮಾಡಿದರೆ ಖರ್ಚು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರು ಆಗಿರುವುದ ರಿಂದ ಅವರಿಗೆ ಫೈಲ್‌ನ್ನು ಕಳುಹಿಸಿಕೊಟ್ಟಿದ್ದೇವೆ. ಅದನ್ನು PD account open ಮಾಡಿ ಮಾಡಬಹುದು ಎಂದು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ನಿನ್ನೆ ದಿನ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ನಿಮ್ಮ ಮಾತಿನ ಮೇಲೆ ನಮಗೆ ಪೂರ್ಣವಾದ ನಂಬಿಕೆ ಹಾಗೂ ವಿಶ್ವಾಸ ಇದೆ. ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದರೆ ಅದು ರೇಕಾರ್ಡ್‌ನಲ್ಲಿರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಈ ವರ್ಷ ಏನು ಖರ್ಚಾಗದೆ ಉಳಿದಿರುತ್ತದೆ ಅದನ್ನು ಮುಂದಿನ ವರ್ಷ ಖರ್ಚು ಮಾಡುವುದಕ್ಕೂ ಅನುಕೂಲ ಮಾಡಿಕೊಡುವ ಬಗ್ಗೆ ಅವರು Instructions ನ್ನು ಕೊಡುತ್ತಾರೆ.

ಶ್ರೀ ಬಿ.ಸಿ. ಪಾಟೀಲ್ : ಎರಡು ವರ್ಷಗಳಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿಲ್ಲ, ಮೊದಲು 1.50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎರಡನೇ ವರ್ಷಕ್ಕೂ 1.50 ಕೋಟಿ ರೂಪಾಯಿಗಳನ್ನು ಕೊಟ್ಟರೆ ಒಟ್ಟು ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಂತಾಗುತ್ತದೆ ಎಂದು ನಾವು ಅಂದುಕೊಂಡಿದ್ದೆವು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ಮೊದಲನೇ ವರ್ಷ 50.00 ಲಕ್ಷ ರೂಪಾಯಿಗಳನ್ನು ಕೊಟ್ಟರು. ಆಮೇಲೆ 1.50 ಕೋಟಿ ರೂಪಾಯಿಗಳೆಂದು ಹೇಳಿದ್ದರಲ್ಲಾ, ಅದರಲ್ಲಿ 1.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು, ಈಗ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಆಗಿದೆ. ಒಟ್ಟು ಎರಡು ವರ್ಷಕ್ಕೆ ಎರಡು ಕೋಟಿ ರೂಪಾಯಿಗಳ ಬಿಡುಗಡೆ ಆಗಿದೆ.

ಶ್ರೀ ಬಿ.ಸಿ.ಪಾಟೀಲ್ : ಕೋಟಿ ರೂಪಾಯಿಗಳ ಲೆಕ್ಕ ಮಂತ್ರಿಗಳಿಗೆ ಗೊತ್ತಾಗುವುದಿಲ್ಲ ಬಿಡಿ, ಶಾಸಕರುಗಳಿಗೆ ಕೋಟಿ ರೂಪಾಯಿಗಳ ಕಷ್ಟ ಗೊತ್ತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಶ್ರೀ ಯಡಿಯೂರಪ್ಪನವರು ಮಾನ್ಯ ಮುಖ್ಯಮಂತ್ರಿಗಳು ಆದ ಮೇಲೆ 50.00 ಲಕ್ಷ ರೂಪಾಯಿಗಳು 1.00 ಕೋಟಿ ರೂಪಾಯಿಗಳಷ್ಟು MLA Fund ನೋಡುತ್ತಿದ್ದೀರಿ. ಹಿಂದೆ ಮುಖ್ಯಮಂತ್ರಿಗಳು 20–25 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ದಾಟಲೇ ಇಲ್ಲ. ಈಗಲಾದರೂ ಒಂದು ಕೋಟಿ ರೂಪಾಯಿಗಳು ಸಿಗುತ್ತಿದೆ. ನಾನು ಸಹ 1994 ರಿಂದ ಇಲ್ಲಿದ್ದೇನೆ. 25.00 ಲಕ್ಷ ರೂಪಾಯಿಗಳನ್ನು ಕೊಡಲಿಕ್ಕೆ ಮುಖ್ಯಮಂತ್ರಿಗಳು ಬಹಳ hesitate ಮಾಡುತ್ತಿದ್ದರು. ಇವತ್ತು ಒಂದು ಕೋಟಿ ರೂಪಾಯಿಗಳಷ್ಟು MLA Fund ದೊರೆಯುತ್ತಿದೆ. ಈಗ 2.00 ಕೋಟಿ ರೂಪಾಯಿಗಳ ಹಣ ಸಿಗುತ್ತಿರುವುದಕ್ಕೆ appreciate ಮಾಡಿ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್ : ನೀವು ಸಚಿವರಾಗಿ ಯೋಚನೆ ಮಾಡಿ. ಹಣ ಬೇಡವೇ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಬಿ.ಸಿ.ಪಾಟೀಲರು ಹೇಳುತ್ತಿರುವಂಥದ್ದು ಸರಿ ಕಾಣುತ್ತಿಲ್ಲ. ಆ ವರ್ಷಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದ ಮುಂದಿನ ವರ್ಷದ 50 ಲಕ್ಷ ರೂಪಾಯಿಗಳನ್ನು advance ಆಗಿ Action plan ಮಾಡಿ 1.50 ಕೋಟಿ ರೂಪಾಯಿಗಳಿಗೆ ಮಾಡಿ ಈ ವರ್ಷ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ. 50.00 ಲಕ್ಷ ರೂಪಾಯಿಗಳನ್ನು spill over works ಗಾಗಿ ಮುಂದಿನ ವರ್ಷ ತೆಗೆದುಕೊಳ್ಳಬಹುದು. ಅಂದರೆ ಹೆಚ್ಚಿನ ಪ್ರಮಾಣದಲ್ಲಿ ಸಣ್ಣ ಸಣ್ಣ ಕೆಲಸಗಳನ್ನು ತೆಗೆದುಕೊಳ್ಳುವುದರ ಬದಲಾಗಿ 50.00 ಲಕ್ಷ ರೂಪಾಯಿಗಳ Action plan ಮಾಡುವುದರಿಂದ ದೊಡ್ಡ ದೊಡ್ಡ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆನ್ನುವ ಉದ್ದೇಶದಿಂದ ಹಾಗೆ ಹೇಳಿರುವುದು.

ಶ್ರೀ ನಾಡಗೌಡ ವೆಂಕಟರಾವ್ : D.C. ಗಳಿಗೆ ಡೈರೆಕ್ಷನ್ಸ್ ಕೊಡಿ. ಇಲ್ಲವಾದರೆ ನಾವು Action plan ಮಾಡಿ work ಕೊಟ್ಟರೆ ಅಷ್ಟಕ್ಕೆ ದುಡ್ಡಿಲ್ಲ. ದುಡ್ಡು ಎಷ್ಟಿದೆ ಅಷ್ಟಕ್ಕೆ ಕೊಡಿ ಎಂದು ಹೇಳುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸದನಕ್ಕೆ ಸುಳ್ಳು ಹೇಳುತ್ತಿದ್ದಾರೆ, ದಾಖಲೆ ತೆಗೆಸಿ ನೋಡಿ. Last time ಮುಖ್ಯಮಂತ್ರಿಗಳು 1.50 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಖರ್ಚು ಮಾಡಿ, ಕೆಲವರು ಖರ್ಚು ಮಾಡುವುದಿಲ್ಲ. ಆದ್ದರಿಂದ ಈಗ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಬೇಕಾದರೆ ಬಾಕಿ 50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಬಜೆಟ್ ಭಾಷಣದಲ್ಲಿ ಅವರೇ ಹೇಳಿದ್ದಾರೆ, ಕಡತ ತೆಗೆಸಿ ನೋಡಿ. ನಾಳೆ ಬೆಳಿಗ್ಗೆ ತಂದು ನಿಮಗೆ ಓದಿ ಹೇಳುತ್ತೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಸದನಕ್ಕೆ ಸುಳ್ಳು ಹೇಳುತ್ತಿಲ್ಲ, ರೆಕಾರ್ಡ್ ತೆಗೆಸಿ ನೋಡಿ. ತರಿಸಿ ಓದಿ ಬಿಡಿ. ಮುಖ್ಯಮಂತ್ರಿಗಳು

ಹೇಳಿದ್ದು ಅಷ್ಟೇ, ಆ ಹಣಕಾಸಿನ ವರ್ಷದಲ್ಲಿ 1.00 ಕೋಟಿ ರೂಪಾಯಗಳು, ಮುಂದಿನ ಹಣಕಾಸಿನ ವರ್ಷದಲ್ಲಿ ಅಡ್ವಾನ್ಸ್ ಆಗಿ 50.00 ಲಕ್ಷ ರೂಪಾಯಿಗಳನ್ನು ಸೇರಿಸುತ್ತೇವೆಂದು ಹೇಳಿದ್ದಾರೆ. ಇಷ್ಟೇ ಹೇಳಿರುವುದು, ನಡೆವಳಿಯನ್ನು ತೆಗೆದು ಓದಿಬಿಡಿ.

(ಗೊಂದಲ)

ಅಧ್ಯಕ್ಷರು : ತಾವು ಹೇಳಿದ್ದು ಸರಿಯಿದೆ.

ಶ್ರೀ ಬಿ.ಸಿ.ಪಾಟೀಲ್ : ಈ ವರ್ಷ ಒಂದೊಂದು ಕೋಟಿ ರೂಪಾಯಿ ಇದೆ, ಮುಂದಿನ ವರ್ಷಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಡುವಂತೆ announce ಮಾಡಿಸಿ. Influence ಮಾಡಿಸಿ, ಈಗ ಒಂದು ಕೋಟಿ ರೂಪಾಯಿಗಳಿಗಿಂತ ಬೆಲೆ ಜಾಸ್ತಿಯಾಗಿದೆ.

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) : ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಕೇಳಿದ ಮಾಹಿತಿ ಈ ಪುಸ್ತಕದ 116ನೇ ಪುಟದಲ್ಲಿದೆ, ಅದರಲ್ಲಿ 22.00 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅದು Primary Education of Higher Education ಗೆ ಇದೆಯೇ ನೋಡಿ? Polytechnics ಗೆ ಹಣ ಕೊಟ್ಟು ಬಿಟ್ಟಿದ್ದೀರಾ, ಸರಿ. Contingency fund ನಿಂದ ಕೊಟ್ಟುಬಿಟ್ಟಿದ್ದೀರಾ?

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ವಿರೋಧ ಪಕ್ಷದ ನಾಯಕರೇ, ಹಣ ಕೊಟ್ಟಿದ್ದೇವೆ, ತಮಗೆ confuse ಇಲ್ಲ. ಆದರೆ confuse ಮಾಡುತ್ತಿದ್ದೀರಿ.. ಏಕೆಂದರೆ ನಮ್ಮ ಸರ್ಕಾರದಲ್ಲಿ ಶಿಕ್ಷಣಕ್ಕೆ ದೊರೆತಷ್ಟು ಆದ್ಯತೆ ನಿಮ್ಮ ಸರ್ಕಾರದಲ್ಲಿ ಸಿಗಲಿಲ್ಲ ಸಾರ್.

ಶ್ರೀ ಸಿದ್ದರಾಮಯ್ಯ : ನೋಡಿ ಹೀಗೆಲ್ಲಾ ಹೇಳಲಿಕ್ಕೆ ಹೋಗಬೇಡಿ, ಆಯಿತು ಈಗ ಹೇಳಿ ನೋಡೋಣ. ನಿಮ್ಮ ಪ್ರೈಮರಿ ಶಿಕ್ಷಣದ ಸಚಿವರು ಇಲ್ಲಿದ್ದರೆ, ಸರ್ವ ಶಿಕ್ಷಣ ಅಭಿಯಾನ ಬಿಟ್ಟು ಕಟ್ಟಡವನ್ನು ಕಟ್ಟಲಿಕ್ಕೆ ನಿಮ್ಮದು ಎಂದು ಒಂದು ರೂಪಾಯಿ ನಿಮ್ಮಲ್ಲಿದೆಯೇ?

ಶ್ರೀ ಅರವಿಂದ ಲಿಂಬಾವಳಿ : ಸರ್, ವಿಷಯಾಂತರ ಏಕೆ ಮಾಡುತ್ತಿದ್ದೀರಿ? ನೀವು ಹೇಳುತ್ತಿರುವುದು ಬೇರೆ issue.

Sri Siddaramaiah : What are you talking? Why are you talking? Don't defend yourself. ಸರ್ವ ಶಿಕ್ಷಣ ಅಭಿಯಾನದ

ದುಡ್ಡು ಬಿಟ್ಟರೆ, ನಬಾರ್ಡ್‌ನ ಹಣ ಬಿಟ್ಟರೆ ಒಂದೇ ಒಂದು ಕೊಠಡಿ ಕಟ್ಟಿಸಲಿಕ್ಕೆ ನಿಮ್ಮ ಹತ್ತಿರ ದುಡ್ಡು ಇದೆಯೇ ಹೇಳಿ ನೋಡೋಣ? ಒಂದು ಕಾಲೇಜು ಕಟ್ಟಡ ಕಟ್ಟಿಸಲಿಕ್ಕೆ ದುಡ್ಡು ಇದೆಯೆ ಎಂದು ಹೇಳಿ ನೋಡೋಣ? ಈ ಸಾರಿ ಕೇಂದ್ರ ಸರ್ಕಾರದಿಂದ ಸೆಕೆಂಡರಿ ಶಾಲೆಗಳಿಗೂ ಹಣ ದೊರೆಯುತ್ತಿದೆ. ಸುಮ್ಮನೆ ಇವೆಲ್ಲಾ ಮಾತನಾಡಲಿಕ್ಕೆ ಹೋಗಬೇಡಿ, ನಮಗೂ ಗೊತ್ತಿದೆ. ಆಯಿತು, ನೀವು ಮಾಹಿತಿ ಕೊಟ್ಟಿದ್ದಕ್ಕೆ ನಿಮಗೆ thanks, ತಾವು ಕುಳಿತುಕೊಳ್ಳಿ. I thank you very much. ಬಹಳ ಸಂತೋಷ. ನನಗೆ ಬಂದಿರುವಂಥ ಮಾಹಿತಿಯನ್ನು ಇಲ್ಲಿ ಹೇಳಿದ್ದೇನೆ. ಪಾಲಿಟೆಕ್ನಿಕ್‌ಗಳಲ್ಲಿ ಸಂಬಳ ಕೊಟ್ಟಿಲ್ಲವೆಂದು ಬನುಮಯ್ಯ ಕಾಲೇಜು ಶಿಕ್ಷಕರು ನನ್ನ ಹತ್ತಿರ ಬಂದು represent ಮಾಡಿದ್ದರು. It is also a fact. If it is clear, it is OK. ಅದನ್ನು ನೀವು ಮೂರು ದಿವಸಗಳಲ್ಲಿ clear ಮಾಡಿದ್ದರೆ it is OK. ನಿಮಗೆ thanks ಹೇಳೋಣ. But not to the Chief Minister.

ಶ್ರೀ ಅರವಿಂದ ಲಿಂಬಾವಳಿ : ತಾವು Not to the Chief Minister ಎಂದು ಹೇಳಿದಿರಿ. He is a Finance Minister also.

ಶ್ರೀ ಸಿದ್ದರಾಮಯ್ಯ : ಆಯಿತು. ಆರು ತಿಂಗಳುಗಳಿಂದ ಅವರಿಗೆ ತೊಂದರೆ ಕೊಟ್ಟಿದ್ದೀರಲ್ಲಾ, ಅದಕ್ಕೇನು ಹೇಳಬೇಕು ಹೇಳಿ ನೋಡೋಣ. ಈಗ ಹಣ ಕೊಟ್ಟಿದ್ದಕ್ಕೆ ನಿಮಗೆ Thanks, ಆರು ತಿಂಗಳುಗಳಿಂದ ಅವರಿಗೆ ಹಿಂಸೆ ಕೊಟ್ಟಿದ್ದೀರಲ್ಲಾ, ಅದಕ್ಕೇನು ಹೇಳಬೇಕು ಹೇಳಿ ನೋಡೋಣ.

ಶ್ರೀ ಅರವಿಂದ ಲಿಂಬಾವಳಿ : ಈಗ ಶಾಲೆಗೆ ಒಬ್ಬ inspector ಬಂದಿದ್ದರಂತೆ ಅವರು ಒಂದು ಪ್ರಶ್ನೆ ಕೇಳಿದರಂತೆ 8X8 ಎಷ್ಟು? ಎಂದು ಕೇಳಿದನಂತೆ, ಆಗ ತಿಮ್ಮ ಎದ್ದು ನಿಂತು 108 ಸರ್ ಎಂದನಂತೆ. ಆಗ ಇನ್ಸ್‌ಪೆಕ್ಟರ್ ಇವನ ಕಡೆ ನೋಡಿ, ಏನಪ್ಪಾ ನಿಮ್ಮ ಮಾಸ್ಟರ್ ಸರಿಯಾಗಿ ಕಲಿಸಿಲ್ಲವೇ ವಿದ್ಯಾರ್ಥಿಗಳಿಗೆ ಎಂದು ಕೇಳಿದರಂತೆ. ಅದಕ್ಕೆ ಆ ಮಾಸ್ಟರ್ ಅಯ್ಯೋ ಕಾಂಗ್ರೆಸ್‌ನವರು ಇದ್ದಾಗ ಲಕ್ಷ ಗಟ್ಟಲೆ ಹೇಳುತ್ತಿದ್ದರು ಸರ್, ಈಗ ಬಿಜೆಪಿ ಸರ್ಕಾರ ಬಂದಿರುವುದರಿಂದ 108 ಹೇಳುತ್ತಿದ್ದಾರೆ, ಈಗ 64 ಹೇಳುತ್ತಾರೆ ಇರಿ ಸರ್ ಎಂದು ಹೇಳಿದನಂತೆ.

ಶ್ರೀ ಸಿದ್ದರಾಮಯ್ಯ : ಅವೆಲ್ಲಾ ನೀವು ಹುಟ್ಟಿಸಿಕೊಂಡು ಹೇಳುವುದು, ಕೇಳಿ, ಅವರು ಸರಿಯಾಗಿ ಹೇಳುತ್ತಿದ್ದರು, ನೀವು ಬಂದ ಮೇಲೆ ಈ ರೀತಿ

108 ಕ್ಕೆ ಹೋಗಿರಬಹುದು. ಅವರು ಕರೆಕ್ಟ್ ಆಗಿ ಲೆಕ್ಕ ಹೇಳುತ್ತಿದ್ದರು, 50+50= ಎಷ್ಟು ಎಂದರೆ 100 ಎಂದು ಸರಿಯಾಗಿ ಲೆಕ್ಕ ಹೇಳುತ್ತಿದ್ದರು. ಈಗ 50+50=108 ಸರ್, ಕಾಂಗ್ರೆಸ್‌ನವರು ಇದ್ದಾಗ ನೂರು ಎಂದು ಹೇಳುತ್ತಿದ್ದೆವು. ಈಗ ಬಿಜೆಪಿಯವರು ಬಂದ ಮೇಲೆ 108 ಎಂದು ಹೇಳುವುದಕ್ಕೆ ಪ್ರಾರಂಭಿಸಿದ್ದೇವೆಂದು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಚರ್ಚೆ ಮುಂದುವರೆಸಿ,

ಶ್ರೀ ಸಿದ್ದರಾಮಯ್ಯ : ನೀವು ಅವರಿಗೆ ಹೇಳುವುದಿಲ್ಲ, ಅವರು interfere ಆದುದು, ಅವರಿಗೆ ಹೇಳದೆ ನನಗೆ ಹೇಳುತ್ತೀರಿ, ನನಗೆ ಹೇಳಬೇಡಿ, ನಾನು ಅವರ ಕಡೆ ನೋಡುವುದಿಲ್ಲ. ಏನಾಯಿತೆಂದರೆ ಜನಗಳು ಪಾಪ ಬಹಳ ಕಷ್ಟದಲ್ಲಿದ್ದಾರೆ. ಈಗ Minor irrigation ಗೆ ಕಾರಜೋಳ್ ರವರೇ ಪ್ಲಾನ್‌ನಲ್ಲಿ ಎಷ್ಟು ಪರ್ಸೆಂಟ್ ಖರ್ಚು ಮಾಡಿದ್ದಾರೆ ಹೇಳಿ ನೋಡೋಣ. 30%

ಶ್ರೀ ಗೋವಿಂದ ಎಂ.ಕಾರಜೋಳ : ಉತ್ತರ ಹೇಳುವಾಗ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ನಂಜುಂಡಪ್ಪ ವರದಿಗೆ ಎಷ್ಟು ದುಡ್ಡು ಕೊಟ್ಟಿದ್ದಾರೆ, ಅದನ್ನು ಯಾರು ನೋಡಿಕೊಳ್ಳುವವರು? ನೀವೇನೆ. ಜನವರಿ ಯವರೆಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಹೇಳಿ ನೋಡೋಣ?

ಶ್ರೀ ಗೋವಿಂದ ಎಂ. ಕಾರಜೋಳ : 1396 ಕೋಟಿ ರೂಪಾಯಿಗಳು ಬಿಡುಗಡೆ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಬಜೆಟ್‌ನಲ್ಲಿ 2,578 ಕೋಟಿ ರೂಪಾಯಿಗಳು ಇದೆಯಲ್ಲವೇ?

ಶ್ರೀ ಗೋವಿಂದ ಎಂ.ಕಾರಜೋಳ : 2,578 ಕೋಟಿ ರೂಪಾಯಿಗಳಲ್ಲಿ 1396 ಕೋಟಿ ರೂಪಾಯಿಗಳು ಬಿಡುಗಡೆ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಜನವರಿ ಅಂತ್ಯಕ್ಕೆ ಇನ್ನು 50% reduce ಮಾಡಿದ್ದೀರಿ?

ಶ್ರೀ ಗೋವಿಂಧ ಎಂ. ಕಾರಜೋಳ : ಇನ್ನೂ ಸಮಯವಿದೆ.

ಶ್ರೀ ಸಿದ್ದರಾಮಯ್ಯ : ಇನ್ನು ಒಂದೇ ತಿಂಗಳು ಉಳಿದಿರುವುದು.

ಶ್ರೀ ಗೋವಿಂದ ಎಂ.ಕಾರಜೋಳ : ಕೆಲಸ ಆಗಿರುವುದಕ್ಕೆ ಪೇಮೆಂಟ್ ಮಾಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಹೇಳಿ, ಬಚ್ಚೇಗೌಡರೇ, ಜನವರಿ ಅಂತ್ಯಕ್ಕೆ ಕೇವಲ 1200 ಚಿಲ್ಲರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು. ಇನ್ನು 2578 ಕೋಟಿ ರೂಪಾಯಿಗಳಿವೆ. ನಿಮ್ಮ ಉತ್ತರ ಇಲ್ಲೇ ಇದೆ, ನೀವೇ ಕೌನ್ಸಿಲ್‌ನಲ್ಲಿ ಕೊಟ್ಟಿರುವ ಉತ್ತರ ಇದು.

ಶ್ರೀ ಗೋವಿಂದ ಎಂ. ಕಾರಜೋಳ : 1396 ಕೋಟಿ ರೂಪಾಯಿಗಳು ಬಿಡುಗಡೆ ಮಾಡಿದ್ದೇವೆ ಅದಕ್ಕೆ ನಾನು round figure ಮಾಡಿ 1400 ಕೋಟಿ ರೂಪಾಯಿಗಳೆಂದು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅಷ್ಟಾದರೂ ಕೂಡ ಬಿಡುಗಡೆಯಾಗಿರುವುದು 51-52% ಆಗುತ್ತದೆ ಅಷ್ಟೆ. ಅದರಲ್ಲಿ ಖರ್ಚು ಎಷ್ಟು? ಬಿಡುಗಡೆ ಎಷ್ಟು ಹೇಳಿ ನೋಡೋಣ?

ಶ್ರೀ ಗೋವಿಂದ ಎಂ.ಕಾರಜೋಳ : 1400 ಕೋಟಿ ರೂಪಾಯಿಗಳು ಬಿಡುಗಡೆ ಮಾಡಿದ್ದೇವೆ. 1248 ಕೋಟಿ ರೂಪಾಯಿಗಳು ಕಳೆದ ತಿಂಗಳಿನ ಅಂತ್ಯದವರೆಗೆ ಖರ್ಚಾಗಿದೆ. ಈ ತಿಂಗಳ ಖರ್ಚು ಬರಬೇಕು.

ಶ್ರೀ ಸಿದ್ದರಾಮಯ್ಯ : ತಾವು ದಯಮಾಡಿ ಕುಳಿತುಕೊಳ್ಳಿ. 2009-10 ನೇ ಸಾಲಿನಲ್ಲಿ ಜನವರಿ 2010 ರ ಅಂತ್ಯದವರೆಗೆ ಈ ಕೆಳಕಂಡಂತೆ ಇಲಾಖೆ ಗಳು ಖರ್ಚು ಮಾಡಿದ ವಿವರಗಳು ಹೀಗಿವೆ? ಮೊನ್ನೆ ಅಮರೇಗೌಡರ calling attention ಪ್ರಶ್ನೆಗೆ ನೀವು ಕೊಟ್ಟಿರುವ ಉತ್ತರ ಇದು. ಇದರಲ್ಲಿ 2,578 ಕೋಟಿ ರೂಪಾಯಿಗಳಲ್ಲಿ ಸಾವಿರದ ಇನ್ನೂರು ಕೋಟಿ ಮುವತ್ತೆರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದೀರಿ. ಇದು ನಿಮ್ಮ ಉತ್ತರವಲ್ಲವೇ, ತೋರಿಸಿ ಅವರಿಗೆ. ಇದನ್ನು ಓದಿಕೊಂಡು ಹೇಳಿಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ : ಅದು ಹಳೆಯದು ಸರ್, ನಾನು ಹಾಗೆ ಹೇಳುತ್ತೇನೆ, ಬಜೆಟ್ Provision ನಲ್ಲಿರುವಂಥದ್ದು Special development plan ಗೆ 2009-10ರಲ್ಲಿ 2578 ಕೋಟಿ ರೂಪಾಯಿಗಳು, ಈಗಾಗಲೇ 1396 ಕೋಟಿ ರೂಪಾಯಿಗಳು ಬಿಡುಗಡೆ ಮಾಡಿದ್ದೇವೆ. ಜನವರಿ figure ಬೇಡ, ಇದು ಮಾರ್ಚ್‌ನಲ್ಲಿ ಬಂದಿರುವುದು. ಫೆಬ್ರವರಿ ಅಂತ್ಯದವರೆಗೆ ನಾವು ಬಿಡುಗಡೆ ಮಾಡಿರುವುದು 1396 ಕೋಟಿ ರೂಪಾಯಿಗಳು ಎಂದು ಹೇಳುತ್ತಿದ್ದೇನೆ.

ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಜನವರಿ ಅಂತ್ಯಕ್ಕೆ 1,203 ಕೋಟಿ ಬಿಡುಗಡೆ ಮಾಡಿದ್ದೇವೆ ಎಂದು ನೀವು ಉತ್ತರ ಕೊಟ್ಟಿದ್ದೀರಿ. According to your statement ಇನ್ನು ಎರಡು ತಿಂಗಳುಗಳಲ್ಲಿ ಅಂದರೆ, ಫೆಬ್ರವರಿ, ಮಾರ್ಚ್‌ನಲ್ಲಿ 1,275 ಕೋಟಿ ರೂಪಾಯಿಗಳು ಖರ್ಚು ಮಾಡಬೇಕು. ಇನ್ನು ಎರಡು ತಿಂಗಳುಗಳಲ್ಲಿ 1,275 ಕೋಟಿ ರೂಪಾಯಿಗಳಲ್ಲಿ ಎಷ್ಟು ಖರ್ಚು ಮಾಡುವುದಕ್ಕೆ ಆಗುತ್ತದೆ, ಎಷ್ಟು ಬಿಡುಗಡೆ ಮಾಡುವುದಕ್ಕೆ ಆಗುತ್ತದೆ? ಒಂದು ಅಂದಾಜು ಕಳೆದ ಸಾಲಿನ ಅನುಭವದ ಮೇಲೆ ಹೇಳಿ. (ಗೊಂದಲ) ನಾನು ಹೇಳುವುದನ್ನು ಹೇಳುತ್ತೇನೆ. ಉತ್ತರ ಕೊಡುವಾಗ ಒಂದೇ ಸಲ ಹೇಳಿಬಿಡಿ. ನಾನು ಇವರ Statement ಮೇಲೆ ಹೇಳುತ್ತಿದ್ದೇನೆ. 2,578 ಕೋಟಿ ರೂಪಾಯಿಗಳು ನೀವು ಹೇಳಿರುವುದು ಕರೆಕ್ಟ್. ಆದರೆ, 1,203 ಕೋಟಿ ರೂಪಾಯಿಗಳು ಜನವರಿ ಅಂತ್ಯದವರೆಗೆ. ಇನ್ನು 1,375 ಕೋಟಿ ರೂಪಾಯಿಗಳು ಇನ್ನೂ ಎರಡು ತಿಂಗಳಿನಲ್ಲಿ ಖರ್ಚು ಮಾಡಬೇಕು. ಅದು ಆಗುತ್ತದೆಯೇ? It is impossible. ನಿಮಗೆ ಬಿಡುಗಡೆ ಮಾಡುವುದಕ್ಕೆ ಅಷ್ಟು ಹಣವೂ ಕೂಡ ಇಲ್ಲ, ಖರ್ಚು ಮಾಡುವುದಕ್ಕೂ ಆಗುವುದಿಲ್ಲ. ಅದನ್ನು ಒಪ್ಪಿಕೊಳ್ಳಬೇಕು. ಈಗ ಇಲ್ಲಿಂದ ಪ್ರಿಂಟ್ ಮಾಡುವುದಕ್ಕೆ ಆಗುತ್ತದೆಯೇ? ಅಲ್ಲಾವುದ್ದೀನ್ ದೀಪ ಹಿಡಿದುಕೊಂಡು ಬಂದಿದ್ದೀರಾ? ನಿಮಗೆ ಹಣ ಎಲ್ಲಿದೆ? ದುಡ್ಡೂ ಸಹ ಇಲ್ಲ. ಅಲ್ಲಾವುದ್ದೀನ್ ದೀಪವನ್ನು ತರುವುದಕ್ಕೆ ಆಗುವುದಿಲ್ಲ. ತೆರಿಗೆ ವಸೂಲು ಮಾಡಲೇಬೇಕು. ಆದುದರಿಂದ ಪರಿಸ್ಥಿತಿ ಈ ರೀತಿ ಇದೆ. ಈ ರೀತಿ ವಾಸ್ತವಿಕತೆಯನ್ನು ಬಿಟ್ಟು, unscientific ಆಗಿ ಬಜೆಟ್ ಅನ್ನು ತಯಾರು ಮಾಡುವುದು, ಆಮೇಲೆ ಬಜೆಟ್‌ನಲ್ಲಿ ಇಟ್ಟಿರತಕ್ಕಂತಹ ಅನುದಾನವನ್ನು ಬಿಡುಗಡೆ ಮಾಡದೇ ಇರತಕ್ಕಂತಹದ್ದು, ಖರ್ಚು ಮಾಡದೇ ಇರತಕ್ಕಂತಹದ್ದು, ಸಂಪನ್ಮೂಲ ಕ್ರೋಢೀಕರಣ ಮಾಡದೇ ಇರತಕ್ಕಂತಹದ್ದು, ಆಮೇಲೆ ಯಾವುದಕ್ಕೆ ಹಣವನ್ನು ಕೊಡಬೇಕೋ ಅದಕ್ಕೆ ಬಿಡುಗಡೆ ಮಾಡದೇ ಯಾವುದೋ ಅನುತ್ಪಾದಕವಾದಂತಹ, ಅನಗತ್ಯವಾ ದಂತಹ ಕಾರ್ಯಕ್ರಮಗಳಿಗೆ ಹಣ ಖರ್ಚು ಮಾಡುತ್ತಾರೆ. ಮಠ-ಮಾನ್ಯ ಗಳಿಗೆ, ದೇವಸ್ಥಾನಗಳಿಗೆ ಕೊಡುವುದನ್ನು ಲೆಕ್ಕ ಯಾರು ಮಾಡುವವರು? ಆ Accounts audit ಮಾಡುವವರು ಯಾರು? Accounts ಕೊಡುವವರು ಯಾರು? ಅದಕ್ಕೆ ಏನಾದರೂ ಲೆಕ್ಕವಿದೆಯೇ? ಹೋದವರ್ಷ 83 ಕೋಟಿ ರೂಪಾಯಿಗಳು, ಈ ವರ್ಷ 63 ಕೋಟಿ ರೂಪಾಯಿಗಳು ಅಥವಾ ಎಷ್ಟೋ

ಗೊತ್ತಿಲ್ಲ. ಈ ವರ್ಷವೂ ಸಹ ದೇವಸ್ಥಾನಗಳಿಗೆ ಕೊಡುವುದನ್ನು ಮುಂದುವರೆಸಿದ್ದೀರಿ. ಅದೇ ರೀತಿ ಬೇರೆ ದೇವಸ್ಥಾನಗಳಿಗೂ ಕೊಡಬೇಕು. ಮುಜರಾಯಿ ಇಲಾಖೆ ಇರುವುದು ಏತಕ್ಕಾಗಿ? ಅಲ್ಲಿ ಮೂರು ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ನಿಮಗೆ ಲೆಕ್ಕ ಸಿಗುತ್ತದೆ. ಅದರಲ್ಲಿ ಖರ್ಚು ಮಾಡಿ. ಆ ಜಾತಿಗೆ, ಈ ಜಾತಿಗೆ, ಆ ದೇವಸ್ಥಾನದವರಿಗೆ, ಈ ದೇವಸ್ಥಾನದವರಿಗೆ ಕೊಡುವುದು. ಅನ್ಯಾಯವಾಗುತ್ತಿದೆ. ಆರಾಧನಾ ಕಾರ್ಯಕ್ರಮಕ್ಕೆ ಇವತ್ತು ದುಡ್ಡಿಲ್ಲ. ಆದರೆ, ಇವುಗಳಿಗೆಲ್ಲಾ ಕೊಡುತ್ತೀರಿ. ಸಾಮಾಜಿಕ ಅನ್ಯಾಯವಾಗುತ್ತಿದೆ, ಸಾಮಾಜಿಕ ನ್ಯಾಯ ಸಿಗುತ್ತಿಲ್ಲ. ಬಲಾಢ್ಯರಿಗೆ ಸಿಗುತ್ತದೆ. ಈಗ ಎಲ್ಲಾ ಜಾತಿಗಳ ಮಠಗಳೂ ಸಹ ಇವೆ. ಅವುಗಳಿಗೆ ಅನುದಾನವೇನೂ ಸಿಗುವುದಿಲ್ಲ. ಚರ್ಚ್‌ಗಳಿಗೆ ಹಾಗೂ ಮಸೀದಿಗಳಿಗೆ ಕೊಡುವುದಿಲ್ಲ. why this discrimination? IS it not accountable. ಇಲ್ಲಿಗೆ ಅಕೌಂಟ್ಸ್ ಕೊಡಬೇಕು. ಯಾರು ಅಕೌಂಟ್ ಅನ್ನು ಕೊಡುವವರು? ಆಡಿಟ್ ಮಾಡುವವರು ಯಾರು? ಹೋದ ವರ್ಷ 83 ಕೋಟಿ ರೂಪಾಯಿಗಳು ಹೇಗೆ ಖರ್ಚು ಆಯಿತು ಎನ್ನುವ ಲೆಕ್ಕ ಕೊಡಬೇಕಲ್ಲವೇ? ಅದನ್ನು ಕೇಳುವುದು ಇಲ್ಲ, ನೀವು ಕೊಡುವುದೂ ಇಲ್ಲ. ಈ ತರಹದ್ದನ್ನು ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ನಾನು ಹೇಳಿದ್ದೇನೆ. ಬಜೆಟ್ ಪಾವಿತ್ರ್ಯತೆಯನ್ನು ಹಾಳು ಮಾಡುತ್ತಿದ್ದೀರಿ. ಪ್ರತಿಯೊಂದು ಪೈಸೆಗೂ ಇಲ್ಲಿ ಲೆಕ್ಕ ಇರಬೇಕು. ಈ ಲೆಕ್ಕವೆಲ್ಲಾ ಇದ್ದರೆ, Supplementary estimate ಗೆ Provision ಬೇಕಾಗಿರಲಿಲ್ಲ. ಬಜೆಟ್ ಮಂಡಿಸಿದ ಮೇಲೆ ಹಾಗೆಯೇ ಖರ್ಚು ಮಾಡಿಕೊಂಡು ಹೋಗಬಹುದಾಗಿತ್ತು ಎನ್ನುವ ಹಾಗಿದ್ದರೆ, ಏಕೆ Supplementary estimate ಅನ್ನು ಇಲ್ಲಿ Present ಮಾಡಬೇಕು? Because this House has to look into the Supplementary estimates, ಅದು ಸಂವಿಧಾನ ಬದ್ಧವಾಗಿ ಖರ್ಚು ಮಾಡಿದ್ದಾರೋ ಅಥವಾ ಇಲ್ಲವೋ? ಜನಪರವಾಗಿ ಖರ್ಚು ಆಗಿದೆಯೋ ಅಥವಾ ಇಲ್ಲವೋ, ಬಡವರ ಪರವಾಗಿ ಖರ್ಚು ಆಗಿದೆಯೋ ಇಲ್ಲವೋ, ಅದರಿಂದ ಜನರಿಗೆ ಎಷ್ಟು ಅನುಕೂಲವಾಗಿದೆ, ಅನಾನುಕೂಲಗಳಿಗೆ ಎಷ್ಟು ಖರ್ಚು ಮಾಡಿದ್ದಾರೇ ಅಥವಾ ಅನುಕೂಲಗಳಿಗೆ ಎಷ್ಟು ಖರ್ಚು ಮಾಡಿದ್ದಾರೋ, ಇವೆಲ್ಲಾ ಇಲ್ಲಿ ಲೆಕ್ಕ ಆಗಬೇಕು. Gift ಕೊಟ್ಟ ರೀತಿಯಲ್ಲಿ ಕೊಟ್ಟುಬಿಡುವುದಕ್ಕೆ ಆಗುತ್ತದೆಯೇ? Nobody can do that? ಮಾನ್ಯ ಮುಖ್ಯಮಂತ್ರಿಗಳೇ ಇರಲಿ ಅಥವಾ

ಯಾರೇ ಇರಲಿ Every body is answerable, everybody is accountable to every pai of the tax collected, tax received. CM Relief fund ಅದೆಲ್ಲಾ ಲೆಕ್ಕಕ್ಕೆ ಬರುವುದಿಲ್ಲ ಅಲ್ಲವೇ? ಅಲ್ಲಿಂದ ಬೇಕಾದರೆ ಕೊಟ್ಟುಕೊಳ್ಳಲಿ. ಏಕೆಂದರೆ, ಅದನ್ನು ಇಲ್ಲಿ ಯಾರೂ ಕೇಳುವ ಹಾಗಿಲ್ಲ. ಲೆಕ್ಕ ಕೊಡುವ ಹಾಗೆಯೂ ಇಲ್ಲ. ಆದರೆ, ಇಲ್ಲಿ ತೆರಿಗೆಯಿಂದ ವಸೂಲು ಮಾಡಿದ ಹಣಕ್ಕೆ every pai is accountable. It is not there. ಈ ಪದ್ಧತಿ ಇನ್ನು ಮುಂದೆ ನಿಲ್ಲಬೇಕು. We are not going to approve that. ಇದಕ್ಕೆಲ್ಲಾ ನಾವು ಒಪ್ಪಿಗೆ ಕೊಡುವುದಕ್ಕೆ ತಯಾರಿಲ್ಲ. unless it is accounted. ಆದ್ದರಿಂದ, ಇಡೀ ಬಜೆಟ್‌ನ fundamental basics, ಆ principles ಇವೆಯೆಲ್ಲಾ ಅವೆಲ್ಲವನ್ನು violate ಮಾಡಿದ್ದಾರೆ. ಯಾವ್ಯಾವ ಇಲಾಖೆಯವರು ಸರಿಯಾಗಿ ಇಂತಿಷ್ಟು ಸಂಬಳವಾಗುತ್ತದೆ, ಟಿ.ಎ., ಡಿ.ಎ., ಆಗುತ್ತದೆ ಎಂದು ಲೆಕ್ಕ ಕೊಡದೇ ಹೋದರೆ; Head of the Department ನವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಿ. ಬಜೆಟ್ ಮಂಡಿಸುವಾಗ ಎಲ್ಲರ ಜೊತೆ ಚರ್ಚೆ ಮಾಡುತ್ತೀರಲ್ಲಾ ಆಗ you take action against them. ಅವರಿಗೆ ಛೀಮಾರಿ ಹಾಕಿ. ಈ ರೀತಿಯೆಲ್ಲಾ Supplementary estimate ನಲ್ಲಿ ಬರಬಾರದು ಎಂದು ಛೀಮಾರಿ ಹಾಕಿ. ಇದನ್ನು ನಾನು oppose ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯಮಂತ್ರಿಗಳು ಕೌನ್ಸಿಲ್‌ಗೆ ಹೋಗಿದ್ದಾರೆ. ಬರುತ್ತಾರೆ. ಅವರು ಬಂದು ಉತ್ತರ ಕೊಡುತ್ತಾರೆ. urgent ಆಗಿ ಯಾವುದೋ ಒಂದು ಉತ್ತರ ಬಂದಿತ್ತು. ಅದಕ್ಕೆ ಅಲ್ಲಿಗೆ ಹೋಗಿದ್ದಾರೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ, ನಾನು ಇನ್ನೂ ಮಾತನಾಡುತ್ತಿದ್ದೆ.

ಶ್ರೀ ಜಗದಿಶ್ ಶೆಟ್ಟರ್ : ಇನ್ನು 10 ನಿಮಿಷದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ಸಿದ್ದರಾಮಯ್ಯ : ಬೇರೆಯವರು ಮಾತನಾಡಲಿ. ಅವಕಾಶ ಕೊಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಪೂರಕ ಅಂದಾಜಿನ ಬಗ್ಗೆ ಈ ಸಂದರ್ಭದಲ್ಲಿ ಹೇಳಬೇಕು ಎಂದರೆ, ಕರ್ನಾಟಕ ರಾಜ್ಯ ಸರ್ಕಾರಕ್ಕೆ ಹಣಕಾಸಿನ ಹಿಡಿತ ಸಂಪೂರ್ಣವಾಗಿ ಕೈತಪ್ಪಿ

ಹೋಗಿದೆ ಎನ್ನುವುದು ಅರ್ಥವಾಗುತ್ತದೆ. ಕಾರಣವೇನೆಂದರೆ, 60 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡಿಸಲಾಗಿದೆ. ಆದರೆ, ಸುಮಾರು 10 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಪೂರಕವಾಗಿ adjustment ಮಾಡಿಕೊಳ್ಳುತ್ತೇವೆ ಎಂದು ಹೇಳಿದರೆ ಹೇಗೆ? ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಈ ಆಯವ್ಯಯಕ್ಕೆ ಒಂದು ಘನತೆ-ಗೌರವ ಇದೆಯೇ ಎನ್ನುವುದನ್ನು ಇಲ್ಲಿ ನಾವು ಯೋಚನೆ ಮಾಡಬೇಕಾಗುತ್ತದೆ. ಬಹುಶಃ 205 (1(ಎ))ನಲ್ಲಿ ಸಂವಿಧಾನದಲ್ಲಿ ಏನು ಒಂದು ಅನುಕೂಲ ಮಾಡಿಕೊಟ್ಟಿದ್ದಾರೆ, ಅದರ ದುರುಪಯೋಗವಾಗಿದೆಯೇ ಎನ್ನುವ ಭಾವನೆ ನಮ್ಮ ಮನಸ್ಸಿಗೆ ಬರುತ್ತಿದೆ. ಇಂತಹ ಒಂದು ದೊಡ್ಡ ಹಣಕಾಸಿನ ವ್ಯವಹಾರವನ್ನು ಒಂದು ಬುಕ್ ಕೊಟ್ಟು, Statement ಮಾಡಿ, ಕೇವಲ ಚರ್ಚೆಯಾದ ತಕ್ಷಣ ಇದಕ್ಕೆ ಅನುಮೋದನೆ ಕೊಡುವಂತಹದ್ದು ಬಹಳ ತಪ್ಪಾಗುತ್ತದೆ. ಏನೇ ಹೇಳಲಿ, ಒಂದು ರಾಜ್ಯದ ಆಯವ್ಯಯವನ್ನು ಯಾವಾಗ ಸಮಗ್ರವಾಗಿ ವರ್ಷದ ಮೊದಲು ಅದಕ್ಕೆ ಅನುಮೋದನೆ ಕೊಟ್ಟಿರುತ್ತೇವೆ, ಅನುಮೋದನೆ ಕೊಟ್ಟಂತಹ ಸಂದರ್ಭದಲ್ಲಿ ಪುನಃ ಎರಡು ಸಾರಿ ಬಜೆಟ್ ಅನ್ನು ಮತ್ತೆ ಪೂರಕವಾಗಿ ಅಂದಾಜುಗಳಿಗೆ ಅನುಮತಿ ಪಡೆಯುತ್ತಾರೆ. ಅನುಮತಿ ಪಡೆಯತಕ್ಕಂತಹ ರೀತಿಯಲ್ಲಿ ನಾವು ಈ ಹಿಂದೆ ಓದಿದ್ದೆವು. ಯಾವುದಾದರೂ ಹೊಸ ಪ್ರಯೋಗಗಳು ಸರ್ಕಾರದ ಮೇಲೆ ಬಂದಾಗ, ಹೊಸ ಸರ್ಕಾರ, ಹೊಸ ಪ್ಲಾನ್‌ಗಳನ್ನು, ಹೊಸ ಯೋಜನೆಗಳನ್ನು ಕ್ರೋಢೀಕರಿಸಿದಾಗ, ಯೋಜನೆಗಳನ್ನು ತೆಗೆದುಕೊಂಡಾಗ, ಈ ತರಹದ ಪರಿವರ್ತನೆಗಳು ಆಗುತ್ತದೆ ಎನ್ನುವುದನ್ನು ನಾವು ತಿಳಿದು ಕೊಂಡಿದ್ದೆವು. ಆದರೆ, ಇವತ್ತು ಸರ್ಕಾರದ ಆಡಳಿತ ಯಂತ್ರದಲ್ಲಿ ಕೆಲಸ ಮಾಡತಕ್ಕಂತ ಹವರು ಬಜೆಟ್ ಅನ್ನು ನಿರೂಪಣೆ ಮಾಡತಕ್ಕಂತಹ ಕಾಲದಲ್ಲಿ ಸಂಬಳ, ವಗೈರೆಗಳಿಗೆ ಆ ಇಲಾಖೆಯಲ್ಲಿ ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದನ್ನು ಬಜೆಟ್‌ನಲ್ಲಿ ವಿನಿಯೋಗ ಮಾಡತಕ್ಕಂತಹ ರೀತಿಯಲ್ಲಿ ತಪ್ಪಿದ್ದಾರೆ. ಅದನ್ನು ಪೂರಕ ಬಜೆಟ್‌ನಲ್ಲಿ ತಂದಿದ್ದಾರೆ ಎನ್ನುವುದಾದರೆ, ಅಧಿಕಾರಿಗಳು ಯಾವ ಉದ್ದೇಶಕ್ಕೋಸ್ಕರ ಇಂತಹ ಒಂದು ಕೆಲಸವನ್ನು ಮಾಡುತ್ತಾರೆ?

(4-15 PM)

ಹಣಕಾಸು ಇಲಾಖೆಯವರು ಏನು ಮಾಡುತ್ತಿರುತ್ತಾರೆ? ಇವತ್ತು ಪಾರದರ್ಶಕತೆಯಲ್ಲಿ ಬಹಳ ಮುಂದೆ ಹೋಗಿದ್ದೇವೆ, ವೆಬ್‌ಸೈಟ್‌ಗಳಿವೆ. ಪ್ರತಿ ತಿಂಗಳೂ ಆ ಇಲಾಖಾವಾರು ಖರ್ಚನ್ನು ವೆಬ್‌ಸೈಟ್‌ನಲ್ಲಿ ಬೇಕಾದರೂ ಹಾಕಿ

ಪ್ರಕಟಿಸಬಹುದು. ಆ ತರಹದ ವ್ಯವಸ್ಥೆಗಳಿವೆ. ಇಂತಹ ಕಾಲದಲ್ಲಿ ಇವತ್ತು ಖರ್ಚು ಮಾಡಿದ ವೆಚ್ಚದ ಬಗ್ಗೆ ನಾವು ತಿಳಿದುಕೊಳ್ಳುವ ಸಾಧ್ಯತೆ ಇಲ್ಲ. ಎ.ಜಿ.ಯವರು ಆಡಿಟ್ ಮಾಡಿದ ನಂತರವೇ ನಾವು ಏನಾದರೊಂದು ಕಾಪಿ ಪಡೆಯಬಹುದು. ಇವತ್ತಿನವರೆಗೂ, ಡಿಸೆಂಬರ್ ತಿಂಗಳವರೆಗೂ ಅಕೌಂಟ್ಸ್ ಸಿಕ್ಕಿಲ್ಲ. ಎರಡು ತಿಂಗಳಿನಲ್ಲಿ ಪೂರಕವಾಗಿಟ್ಟಿರುವ ಹಣವನ್ನು ಯಾವ ರೀತಿ ಖರ್ಚು ಮಾಡುತ್ತಾರೆ? ಯಾವ ರೀತಿ ಕ್ಯಾಬಿನೆಟ್ ಡಿಸಿಷನ್ ತೆಗೆದು ಕೊಳ್ಳುತ್ತಾರೆ? ಸಚಿವ ಸಂಪುಟದಲ್ಲಿ ಯಾವ ರೀತಿ ತೀರ್ಮಾನ ಕೈಗೊಂಡು ಹಣ ಖರ್ಚು ಮಾಡುತ್ತಾರೆ? ಇದರ ಬಗ್ಗೆ ಹೇಳಬೇಕೆಂದರೆ, ಇದೊಂದು ರೀತಿ ಮುಖ್ಯಮಂತ್ರಿಗಳ discretionary power ನಲ್ಲಿ ಅವರ ವೈಯಕ್ತಿಕ ಹಣ ಕೊಡುವ ರೀತಿಯಲ್ಲಿ ಖರ್ಚು ಮಾಡಿದ್ದಾರೆ! ಇದರಿಂದಾಗಿ ಪ್ರಾದೇಶಿಕ ಅಸಮತೋಲನ ಉಂಟಾಗಲು ಕಾರಣವಾಗುತ್ತದೆ. ಏಕೆಂದರೆ, ಯಾವಾಗ ಬೇಕಾದರೂ ಬದಲಾವಣೆ ಮಾಡಬಹುದು. ಯೋಜನೆ, ಬಂಡವಾಳ ಮತ್ತು ಯೋಜನೇತರ, ಈ ಮೂರನ್ನೂ ಬದಲಾವಣೆ ಮಾಡಿದ್ದಾರೆ. ಈ ಮೂರನ್ನು ಬದಲಾವಣೆ ಮಾಡುವ ಕಾಲದಲ್ಲಿ ಯಾವುದು ಅವರಿಗೆ ಅವಶ್ಯಕತೆ ಇರುತ್ತದೋ. ಅದಕ್ಕೆ ಖರ್ಚು ಮಾಡುತ್ತಾರೆ ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂತೆ, ಕಂದಾಯ ಇಲಾಖೆಗೆ ವರ್ಗಾವಣೆ ಮಾಡುವ ಮೂಲಕ ಶಿಕಾರಿಪುರದಲ್ಲಿ ಮಿನಿ ವಿಧಾನಸೌಧವೊಂದನ್ನು ಕಟ್ಟಿಸುತ್ತಿದ್ದಾರೆ. ಯಾರಿಗೆ ಬೇಕೋ ಅವರಿಗೆ ವರ್ಗಾವಣೆ ಮಾಡುವುದಕ್ಕೆ ಇದು ಪೂರಕವಾದ ಅಂದಾಜುಗಳೆಂದು, ಈ ಪುಸ್ತಕ ನೋಡಿದರೆ ಗೊತ್ತಾಗುತ್ತದೆ. ಬಹುಶಃ, ಇದನ್ನು ಓದುವುದಕ್ಕೆ 3–4 ದಿವಸಗಳಾದರೂ ಬೇಕಾಗುತ್ತದೆ. ಇದನ್ನು ಇಲ್ಲಿ ತಂದಿಟ್ಟು ಸದನದ ಅನುಮೋದನೆ ಕೊಡಿ ಎನ್ನುತ್ತಾರೆ. ಸದನ ಅನುಮೋದನೆ ಕೊಡದಿದ್ದರೆ, ಮತ್ತು ಇದರ ಬಗ್ಗೆ ಹಣಕಾಸು ಇಲಾಖೆಯವರಿಗೂ ಗೊತ್ತಿದೆ. ಈ ಸದನದಲ್ಲಿ ಅನುಮೋದನೆ ಸಿಗದೇ ಹೋದರೆ ಖರ್ಚು ಮಾಡಬಾರದೆಂದು ಇಲಾಖೆಯವರಿಗೆ ಹೇಳಿರುತ್ತಾರೆ. ಇವತ್ತು ಅನುಮೋದನೆ ಸಿಗುತ್ತದೆ, ನಾಳೆ ಅದನ್ನು ಖರ್ಚಿಗೆ ಹಾಕಿಕೊಳ್ಳಿ ಎಂದಿರುತ್ತಾರೆ. ಅಲ್ಲಿ ಅವರೆಲ್ಲರೂ ಕಾಯ್ದುಕೊಂಡು ಕುಳಿತಿದ್ದಾರೆ, ಅದಕ್ಕೋಸ್ಕರ, ಈ ರೀತಿಯ ಅನುಮೋದನೆ.

ಈಗ ಯಾವುದೋ ಒಂದು ಕಡೆ ಹಣ ತೊಡಗಿಸಿರುತ್ತೀರಿ. ಈಗ ಪೂರಕವಾಗಿರುವುದನ್ನು ತೆಗೆದು ಅತ್ತ ಕಡೆ ಕೊಟ್ಟಿದ್ದೀರಿ. ಒಂದು ಪ್ಲಾನ್‌ನಿಂದ ಕಿತ್ತು ಇನ್ನೊಂದು ಇಲಾಖೆಗೆ, ಮತ್ತೊಂದು ಕಡೆಗೆ ಪರಿವರ್ತಿಸಿದ್ದೀರಿ. ಇಷ್ಟು

ಹಣವನ್ನು 15 ದಿವಸಗಳಲ್ಲಿ ಖರ್ಚು ಮಾಡಲು ಸಾಧ್ಯವೇ? ಎಷ್ಟು ಪ್ರಮಾಣದಲ್ಲಿ ಖರ್ಚು ಮಾಡಬಹುದು? ಇದರಿಂದ ಏನು ಗೊತ್ತಾಗುತ್ತದೆ? ಇದರಿಂದ ಯಾವ ರೀತಿಯ ವ್ಯತ್ಯಾಸಗಳಾಗುತ್ತವೆ? ಇದರಿಂದ ಆರ್ಥಿಕ ಸ್ಥಿರತೆ ಉಂಟಾಗಲು ಸಾಧ್ಯವಿದೆಯೇ? ಇವೆಲ್ಲವನ್ನೂ ನಾವು ಯೋಚಿಸಿದರೆ ನಿಜವಾಗಿಯೂ ಇವತ್ತು ಇಂತಹ ಪೂರಕ ಅಂದಾಜು ಬೇಕೆ? ಹಿಂದೆ ಹೇಗೆ ಮಾಡಿದ್ದಾರೋ ನೋಡಿಲ್ಲ. ಕೆಲವೇ ಗಂಟೆಗಳಲ್ಲಿ ಅದರ ಬಗ್ಗೆ ಸ್ವಲ್ಪ ಯೋಚಿಸಿದಾಗ ಅರ್ಥವಾಗುತ್ತದೆ. ಈ ಪೂರಕ ಬಜೆಟ್‌ನಿಂದ ನಿಜವಾಗಿಯೂ ಸಾಮಾಜಿಕ ನ್ಯಾಯ ಸಿಗುತ್ತಿದೆಯೇ? ಈ ಆಯವ್ಯಯವನ್ನು ಬಹಳ ಪವಿತ್ರವಾಗಿ ಮಂಡಿಸುತ್ತಾರೆ. ಆದರೆ, ಅದು ತನ್ನ ರೂಪ ಕಳೆದುಕೊಳ್ಳುವುದರಲ್ಲಿ ಯಾವುದೇ ತರಹದ ವ್ಯತ್ಯಾಸವಿಲ್ಲ. ಆದುದರಿಂದ, ದಯಮಾಡಿ ಇವತ್ತು ವಿರೋಧ ಪಕ್ಷದ ನಾಯಕರು ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ಇಲಾಖೆಯವರಿಗೆ ಹೇಳಬೇಕೆಂದರೆ, ಯಾವ್ಯಾವ ಇಲಾಖೆಗಳಿಗೆ ಏನೇನು ಮಾಡಿದ್ದಾರೆ, ಯಾವ್ಯಾವ ಇಲಾಖೆಯಿಂದ ತೆಗೆದು ಯಾವ್ಯಾವ ಇಲಾಖೆಗಳಿಗೆ ವರ್ಗಾಯಿಸಿದ್ದಾರೆ ಎಂಬುದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಆದರೂ ಕೊಡಬೇಕು. ಕೇವಲ ಹೇಳಿದರೆ ಸಾಲದು. ಯಾವ ಇಲಾಖೆಯಿಂದ ತೆಗೆಯುತ್ತೀರಿ, ಯಾವ ಇಲಾಖೆಗೆ ಮಾರ್ಪಾಟು ಮಾಡಿದ್ದೀರಿ? ಇವತ್ತು ಅದರ ಅವಶ್ಯಕತೆ ಇತ್ತೇ? ನೀವು ತೆಗೆಯಬೇಕಾದರೆ ಯಾವ ಉದ್ದೇಶ ಕ್ಕೋಸ್ಕರ ಪ್ಲಾನ್‌ನಿಂದ ತೆಗೆದಿರಿ?

ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಘೋಷಿಸಿದಿರಿ. ಇವತ್ತು ಶೇಕಡ 50 ರಿಂದ 60 ರಷ್ಟು ಹಣ ಎಲ್ಲಾ ಕಡೆಗಳಲ್ಲೂ ಖರ್ಚಾಗಿಲ್ಲ. ಸಮಾಜ ಕಲ್ಯಾಣ ಇಲಾಖೆ ಮೂಲಕ ಗೊಲ್ಲರಹಟ್ಟಿಗಳನ್ನು ಅಭಿವೃದ್ಧಿ ಮಾಡುತ್ತೇವೆ, ಬಂಜಾರ ತಾಂಡಾಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ನಿಗಮಗಳನ್ನು ರಚಿಸಿದಿರಿ, ಎಲ್ಲವನ್ನೂ ಮಾಡಿದಿರಿ. ಅದಕ್ಕಾಗಿ 80 ಕೋಟಿ ರೂ. ಇಟ್ಟು 10 ಕೋಟಿ ಮಾತ್ರ ಖರ್ಚು ಮಾಡಿದ್ದೀರಿ. ಹೋಗಲಿ, ಸಾಮಾಜಿಕ ನ್ಯಾಯ ಕೊಡಿಸುವ ಇಲಾಖೆ ಸಮಾಜ ಕಲ್ಯಾಣವಾಗಿದ್ದು, **individual benefit** ಸಿಗುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ರೀತಿಯಲ್ಲಿ ಮಾರ್ಪಾಟು ಮಾಡಿದ್ದರೆ ಬಹುಶಃ ಸಾಮಾಜಿಕ ನ್ಯಾಯವಾದರೂ ದೊರಕುತ್ತಿತ್ತು ಎಂಬ ಮಾತನ್ನು ಹೇಳಬಹುದಾಗಿತ್ತು. ಶ್ರೀ ಕೃಷ್ಣದೇವರಾಯನ 500ನೇ ಪಟ್ಟಾಭಿಷೇಕ ಮಹೋತ್ಸವಕ್ಕೆ 27 ಕೋಟಿ ರೂ. ಖರ್ಚು ಮಾಡಿದ್ದೀರಿ. ಇದು ಯೋಜನೆಯಲ್ಲಿ ಇರಲಿಲ್ಲ. ಆದರೆ,

ಯೋಜನೆಯಲ್ಲಿ ನಿಮ್ಮ ಸರ್ಕಾರ ತೆಗೆದುಕೊಂಡಿರುವ ನಿರ್ಧಾರದಿಂದ ಬಂದಿರುವ ವೆಚ್ಚ ಇದಾಗಿದೆ.

ಶ್ರೀ ಸಿದ್ದು ಸವದಿ : ಗೌಡರೆ, ಪೂರಕ ಬಜೆಟ್ ಈಗಿನದಲ್ಲ, ಇದೆಲ್ಲವೂ ಹಿಂದಿನಿಂದಲೂ ನಡೆದುಕೊಂಡು ಬಂದಿರುವುದಾಗಿದೆ. ತಾವು ಮಾತನಾಡಬೇಕೆಂದು ಇದೆಲ್ಲವನ್ನೂ ಹೇಳುತ್ತಿದ್ದೀರಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇಷ್ಟು ದೊಡ್ಡ ಪುಸ್ತಕ ಕೊಟ್ಟಿದ್ದಾರೆ. ಇದರ ಬಗ್ಗೆ ನಾವು ಹೊಸದೇನನ್ನೂ ಹೇಳುತ್ತಿಲ್ಲ. ಸಂವಿಧಾನಬದ್ಧವಾದ ಕಾನೂನು ಎಂದು ನಾನು ಹೇಳುತ್ತಿದ್ದೇನೆ. 205 (ಎ) (1) ರಲ್ಲಿ ಸಂವಿಧಾನ ಬದ್ಧವಾದ ಅವಕಾಶ ಕೊಟ್ಟಿದ್ದಾರೆಂದು ನಾನು ಹೇಳುತ್ತಿದ್ದೇನೆ. ಆದರೆ, ಇವತ್ತು ಸಂವಿಧಾನಬದ್ಧವಾಗಿ ಕೊಟ್ಟಿರುವ ಕಾನೂನಿನ ಚೌಕಟ್ಟಿನಲ್ಲಿ ಆರ್ಥಿಕ ವ್ಯವಸ್ಥೆ ಸರಿಯಾದ ರೀತಿಯಲ್ಲಿ ನಡೆದಿಲ್ಲ. ಹಣಕಾಸಿನ ವ್ಯವಸ್ಥೆ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಮನಸ್ಸಿಗೆ ಬಂದಂತೆ, ಅವರಿಗೆ ಇಚ್ಛೆ ಬಂದಂತೆ ಇವತ್ತು ಈ ರೀತಿ 10,000–10,000 ಕೋಟಿ ರೂ.ಗಳನ್ನು ಪೂರಕ ಅಂದಾಜುಗಳಲ್ಲಿ ಸೇರಿಸಿ ಅನುಮೋದನೆ ಪಡೆಯುವುದಾದರೆ ಬಜೆಟ್ ಆದರೂ ಏಕೆ ಮಂಡಿಸಬೇಕು? ಬಜೆಟ್ ಮಂಡನೆಯಾದ ನಂತರ ಅದಕ್ಕೆ ತಕ್ಕಂತೆ ನಾವು ನಡೆದುಕೊಳ್ಳಬೇಕಾಗುತ್ತದೆ. ಅದನ್ನು ಪುನಃ ಬೇಡಿಕೆಗಳಿಗೆ ಅನುಸಾರವಾಗಿ, ಇವತ್ತು ಬೇಕಾಬಿಟ್ಟಿಯಾಗಿ ಅನುಮೋದನೆ ಪಡೆದುಕೊಳ್ಳುವುದಾದರೆ, ಪ್ರಾದೇಶಿಕ ಸಮತೋಲನ ಕಾಪಾಡಿಕೊಳ್ಳುವುದು ಸಾಧ್ಯವಿದೆಯೇ? ಇಂತಹ ಅನೇಕ ನ್ಯೂನತೆಗಳನ್ನು ನಾವು ಇದರಲ್ಲಿ ಓದಿದ್ದೇವೆ. ಆದರೆ, ಇವತ್ತು ಪೂರಕ ಅಂದಾಜುಗಳಿಗೆ ಅನುಮೋದನೆ ಕೊಡಲೇಬೇಕೆನ್ನುವುದು ಎಲ್ಲರಿಗೂ ಗೊತ್ತಿದೆ. ಏಕೆಂದರೆ, ಅನುಮೋದನೆ ನೀಡದಿದ್ದರೆ, ಅಲ್ಲಿ ಹಣ ಖರ್ಚು ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ, ಅನುಮೋದನೆ ಕೊಡುತ್ತೇವೆ. ಆದರೆ, ಚರ್ಚೆಯಾಗದೆ ಇದಕ್ಕೆ ಅನುಮೋದನೆ ತೆಗೆದುಕೊಂಡು ಹೋಗುವುದಲ್ಲ, ಅದರ ಪಾವಿತ್ರ್ಯತೆಯನ್ನು ಕಳೆದುಕೊಳ್ಳುವುದಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಇನ್ನು ನಾನು ಓದಿದ್ದು ಸ್ವಲ್ಪವಾದರೂ ತಿಳಿದುಕೊಂಡಿದ್ದು ಏನೆಂದರೆ, Contingency amount ಖರ್ಚು ಮಾಡಬೇಕಾದರೆ ಈ ದೇಶದಲ್ಲಿ ಯಾವುದಾದರೂ ಗಂಡಾಂತರ ಬಂದೊದಗಿದಾಗ, ಭಾರಿ ವಿಪತ್ತು ಸಂಭವಿಸಿದ ಸಂದರ್ಭಗಳಲ್ಲಿ ಈ contingency amount ಉಪಯೋಗಿಸಿ

ಕೊಳ್ಳುತ್ತಾರೆಂದು ನಾವು ಕೇಳಿದ್ದೆವು, ನೋಡಿದ್ದೆವು, ಓದಿದ್ದೆವು. ಆದರೆ, 80 ಕೋಟಿ ರೂ.ಗಳಲ್ಲಿ 39 ಕೋಟಿ ರೂ. ಹಣವನ್ನು ಖರ್ಚು ಮಾಡಿದ್ದಾರೆ. ಇದು ಏತಕ್ಕೆ ಎಂಬುದು ಈ ಸದನದ ಸದಸ್ಯರಿಗೆ ಗೊತ್ತಾಗಬೇಕಲ್ಲ. ಏತಕ್ಕೋಸ್ಕರ ಖರ್ಚು ಮಾಡಿದ್ದಾರೆಂಬ ಬಗ್ಗೆ ಸದನದ ಸದಸ್ಯರಿಗೆ ಒಂದು ಪಟ್ಟಿಯನ್ನಾದರೂ ಕೊಡುವ ಮೂಲಕ ಇಷ್ಟು ಹಣ ಖರ್ಚು ಮಾಡಿದ್ದೇವೆಂದರೆ, ನಾವಾದರೂ ಯಾವ್ಯಾವುದಕ್ಕೆ ಖರ್ಚು ಮಾಡಿದ್ದಾರೆ, ಅಂತಹ ಬಹಳ ಪವಿತ್ರ ಕೆಲಸವಾದರೂ ಯಾವುದಿತ್ತು? ಅಂತಹ ಯೋಜನೆ ಯಾವುದು ಬಂದಿತ್ತು ಎನ್ನುವುದರ ಬಗ್ಗೆ ಸದನದ ಸದಸ್ಯರಾಗಿ ಯಾರಾದರೂ ನಾಳೆ ನಮ್ಮನ್ನು ಕೇಳಿದರೆ ಆ ಕುರಿತು ನಾವು ಹೇಳಬೇಕಲ್ಲ. ಅದಕ್ಕೋಸ್ಕರವಾದರೂ ನಮಗೆ ಮಾಹಿತಿ ಬೇಡವೇ? ಮಾಹಿತಿಯನ್ನು ಕೇಳಬಾರದೇ? ಮುಂದಿನ ದಿನಗಳಲ್ಲಿ ನಿಜವಾಗಿಯೂ ಬಜೆಟ್ ಮಂಡಿಸುವಾಗ ಅದರ ಪಾವಿತ್ರ್ಯತೆ ಉಳಿಯಬೇಕಾದರೆ ಮತ್ತು ಆರ್ಥಿಕ ವ್ಯವಸ್ಥೆಯೊಳಗೆ ಯಾವುದೇ ಒಂದು ವ್ಯತ್ಯಾಸ ಕಾಣದಿರಬೇಕಾದರೆ ಇಂತಹ ಪೂರಕ ಬಜೆಟ್‌ನಲ್ಲಿ ನಿಜವಾಗಿಯೂ ಇಷ್ಟೊಂದು ಪ್ರಮಾಣದಲ್ಲಿ ಹಣ ಬದಲಾವಣೆ ಮಾಡುವುದು ತಪ್ಪು. ಆರ್ಥಿಕ ವ್ಯವಸ್ಥೆಯಲ್ಲಿ ಇದು ನಿಜವಾಗಿಯೂ ಸರಿಯಿಲ್ಲವೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ನಾನು ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಜೆಟ್ ಮೇಲೆ ತಾವು ಸವಿಸ್ತಾರವಾಗಿ ಮಾತನಾಡಿ.

ಅಧ್ಯಕ್ಷರು : ತಾವು ಬಜೆಟ್ ಮೇಲೆ ಅನಂತರ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಜೆಟ್ ಬಗ್ಗೆ ನೀವು ಬೆಳಕು ಚೆಲ್ಲಿ.

ಅಧ್ಯಕ್ಷರು : ತಮ್ಮ ಹೆಸರು ಇದೆ. ತಾವು ಬಜೆಟ್ ಮೇಲೆ ಮಾತನಾಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನಾನು 2–3 ವಿಷಯಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ, ಹೆಚ್ಚು ವಿಷಯಗಳನ್ನು ಪ್ರಸ್ತಾಪಿಸುವುದಿಲ್ಲ. ಏಕೆಂದರೆ, ಈಗಾಗಲೇ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂತೆ plan outlay ಇರುವುದು 29,500 ಕೋಟಿ,

0 17E-87

ಆದರೆ, ಪೂರಕ ಅಂದಾಜು ಇರುವುದು 10,000 ಕೋಟಿ. ಇದರಲ್ಲಿ cash out flow ಇರುವುದು 5,000 ರೂ. Is it a prudent fiscal management? ನೀವೇ ಹೇಳಬೇಕು. ಏಕೆಂದರೆ, ನಾನು ಕೂಡ 2004 ರಿಂದ ಈ ಸದನಕ್ಕೆ ಎರಡು ಸಲ ಆಯ್ಕೆಯಾಗಿ ಬಂದಿದ್ದೇನೆ. 5,000 ಕೋಟಿ ರೂ. ಎಂದರೆ, 5,000 ಕೋಟಿ implication ಇರುವ ಒಂದು ಪೂರಕ ಬಜೆಟ್ ಅನ್ನು ನಾನೆಂದೂ ನೋಡಿಲ್ಲ. This is the first time I am seeing this. Such a huge amount is being added in the supplementary budget. ವಿರೋಧ ಪಕ್ಷ ನಾಯಕರು ಹೇಳಿದಂತೆ, ಮಾನ್ಯ ಮುಖ್ಯಮಂತ್ರಿಗಳು ನಮಗೆ ಇಷ್ಟೇ ತಿಳಿಸಬೇಕು. 29,500 ಕೋಟಿ ರೂ.ಗಳ plan outlay ನಲ್ಲಿ, ಖರ್ಚಾಗಿರುವುದು ಕೇವಲ 20,000 ಕೋಟಿ ರೂ. ಇಷ್ಟು ಹಣ ಖರ್ಚಾಗಲು ಅವಕಾಶವೇ ಇಲ್ಲ. 9,000 ಕೋಟಿ ರೂ.ಗಳನ್ನು ಕಡಿತಗೊಳಿಸಿ ಈಗ 5,000 ಕೋಟಿ ರೂ.ಗಳನ್ನು ಖರ್ಚು ಮಾಡಿದರೆ ಇದರಿಂದ ರಾಜ್ಯದ ಜನರಿಗೆ ಏನೆಂದು ಉತ್ತರಿಸಬೇಕಾಗುತ್ತದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಈ ಅಂಶವನ್ನು ಮೊದಲು ಸ್ಪಷ್ಟಪಡಿಸಬೇಕು.

ಎರಡನೆಯದಾಗಿ, ಯಾವುದೇ ರಾಜ್ಯದ ಬಜೆಟ್ ಸಿದ್ಧಪಡಿಸುವಾಗ salary ಎಲ್ಲವೂ non-plan ನಲ್ಲಿ include ಆಗಿರುತ್ತದೆ. ಆದರೆ, salary ಅನ್ನು ಪೂರಕ ಅಂದಾಜಿನಲ್ಲಿಟ್ಟು ಅನುಮೋದನೆ ಕೇಳುತ್ತಿದ್ದಾರೆ. ಅಲ್ಲದೆ, ಕೆಲವು ಇಲಾಖೆಗಳಲ್ಲಿ especially, ಲೋಕೋಪಯೋಗಿ ಸಚಿವರು ಇಲ್ಲಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, additional works ಗೆ 324 ಕೋಟಿ ರೂ.ಗಳಿಗೆ ಅನುಮೋದನೆ ಕೇಳಿದ್ದಾರೆ. Additional works ಎಂದರೆ ಯಾವಾಗ ತೆಗೆದುಕೊಳ್ಳುತ್ತೀರಿ? At the end of the year ಅಥವಾ bill payment ಗೆ ಎಂದರೆ ನಾನು ಒಪ್ಪುತ್ತಿದ್ದೆ. ಆದರೆ, additional works ಗೆ ಎಂದರೆ ಹೊಸದಾಗಿ ಏನು ಕೆಲಸ ಮಾಡುತ್ತೀರಿ? ಹೊಸ action plan ಮಾಡುತ್ತೀರಾ? ಅಥವಾ ಏನಾದರೂ infrastructure development ಮಾಡುವ ಎಮರ್ಜೆನ್ಸಿ ರಾಜ್ಯದಲ್ಲೇನಾದರೂ ಬಂದಿದೆಯೇ? ನಾನು Planning Department ಸಹ ನೋಡಿದೆ. Planning Department ನಲ್ಲೂ Rs.100 crore to take up new works. What are you going to do? ಅಂದರೆ, ಏನಾಗಿದೆಯೆಂದರೆ, ಪ್ಲಾನ್ ರೀತ್ಯಾ ಕೆಲಸ ಮಾಡಿದ್ದರೆ, ಇವತ್ತು

ಇಡೀ ರಾಜ್ಯಕ್ಕೆ ಹಣ ಹಂಚಿ ಹೋಗಿ ಎಲ್ಲರಿಗೂ ನ್ಯಾಯ ಸಿಗುತ್ತಿತ್ತು ಎಂಬುದು ಗೊತ್ತಿರುತ್ತಿತ್ತು. ಆದರೆ, ಈ ರೀತಿ *adhoc* ಆಗಿ ಹಣ ಖರ್ಚು ಮಾಡುವುದು, ಅನಂತರ, volume of the money is too huge. 1,000, 1,200 ಕೋಟಿ ರೂ.ಗಳಷ್ಟಿರುವುದನ್ನು ನೋಡಿದ್ದೇವೆ. ಆದರೆ 10,000 ಕೋಟಿ ರೂ.ಗಳನ್ನು ತಂದು, ಇದರಲ್ಲಿ 5,000 ಕೋಟಿ cash. It is not acceptable to us. ನೀವು ಇದರ ಬಗ್ಗೆ ಸಮರ್ಪಕವಾಗಿ ಉತ್ತರ ಕೊಡಬೇಕು. You convince us. Why it is required? It is the responsibility of the Finance Minister and the Chief Minister to convince the opposition. ಏಕೆ ಇಷ್ಟು ಮೊತ್ತದ ಹಣಕ್ಕೆ ಇವರಿಗೆ ಮಂಜೂರಾತಿ ಕೊಡಬೇಕು? ಇದರ ಬಗ್ಗೆ ಸ್ಪಷ್ಟಪಡಿಸದಿದ್ದರೆ, ಅಲ್ಲಿಯ ವರೆಗೂ ನಾವು ಇದನ್ನು ವಿರೋಧಿಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಈ ಪೂರಕ ಅಂದಾಜಿನ ಎರಡನೇ ಹಾಗೂ ಅಂತಿಮ ಕಂತಿನ ವಿಚಾರದಲ್ಲಿ ಸವಿಸ್ತಾರವಾಗಿ ನಮ್ಮ ಹಿರಿಯ ಸದಸ್ಯರುಗಳು ಚರ್ಚೆಯಲ್ಲಿ ಪಾಲುಗೊಂಡು ಸಲಹೆಗಳನ್ನು ಕೊಟ್ಟಿರುತ್ತಾರೆ. 2009-10ನೇ ಸಾಲಿನ ಈ ಪೂರಕ ಅಂದಾಜುಗಳು ಅಂತಿಮ ಕಂತಿನಲ್ಲಿ ಹೊರಹೋಗುವ ಹಣದ ಮೊತ್ತ, ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಹೇಳಿದಂತೆ 5,131 ಕೋಟಿ. ಅದರಲ್ಲಿ 1835 ಕೋಟಿ ವೆಚ್ಚಕ್ಕೆ ಕೇಂದ್ರ ಸರ್ಕಾರದ ಅನುದಾನವನ್ನು ನಿರೀಕ್ಷಿಸಲಾಗಿದೆ. 165 ಕೋಟಿ ರೂಪಾಯಿ ವೆಚ್ಚಗಳನ್ನು ಇತರೇ ಸ್ವೀಕೃತಿಗಳಿಂದ ಸರಿದೂಗಿಸುತ್ತೇವೆ. ಹೊಂದಾಣಿಕೆಯ ಮೂಲಕ 2879 ಕೋಟಿಗಳನ್ನು ಭರಿಸಲಾಗುತ್ತದೆ. ಪೂರಕ ಅಂದಾಜು ಎರಡರ ಒಟ್ಟು ಗಾತ್ರ, 10,009 ಕೋಟಿಯಾಗುತ್ತದೆ. ಜುಲೈ 2009ರಲ್ಲಿ ಈ ಸದನದ ಮುಂದೆ ಮಂಡಿಸಲಾದ 2009-10ನೇ ಸಾಲಿನ ಪೂರಕ ಅಂದಾಜಿನಲ್ಲಿ ಹೊರಹೋಗುವ ಹಣದ ಒಟ್ಟು ಮೊತ್ತ 1,634.70 ಕೋಟಿ ಯಾಗಿತ್ತು. ಈ ಪೂರಕ ಅಂದಾಜಿನಲ್ಲಿ ಒಳಗೊಂಡಿರುವ ಪ್ರಮುಖ ವೆಚ್ಚಗಳ ವಿವರಗಳನ್ನು ದಯಮಾಡಿ ಗೌರವಾನ್ವಿತ ಸದಸ್ಯರುಗಳು ಗಮನಿಸಬೇಕು. ಪ್ರಕೃತಿ ವಿಕೋಪದ ಪರಿಹಾರಕ್ಕಾಗಿ 2500 ಕೋಟಿ ರೂಪಾಯಿಗಳನ್ನು ಆದ್ಯಾದೇಶಗಳ ಮೂಲಕ ಒದಗಿಸಿರುವುದಕ್ಕೆ ಸೇರಿಸಲಾಗಿದೆ. ವಿದ್ಯುತ್ ಉಪಯುಕ್ತತೆಯಲ್ಲಿ ಹೂಡಿಕೆ ಮಾಡುವುದಕ್ಕೆ 500 ಕೋಟಿ ರೂಪಾಯಿಗಳ

ಈಕ್ವಿಟಿ ಸಹಾಯ ನೀಡುವುದರ ಜೊತೆಗೆ 500 ಕೋಟಿ ರೂಪಾಯಿಗಳ ಸಾಲವನ್ನು ಈಕ್ವಿಟಿಯಾಗಿ ಪರಿವರ್ತಿಸುವುದನ್ನು ಸೇರಿಸಲಾಗಿದೆ. ಕೆಆರ್ ಡಿಸಿಎಲ್ ಮೂಲಕ ನಿರ್ಮಿಸಲಾಗುತ್ತಿರುವ ರಸ್ತೆ ಮತ್ತು ಸೇತುವೆಗಳಿಗಾಗಿ 200 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇತರೇ ರಸ್ತೆಗಳ ನಿರ್ಮಾಣಕ್ಕೆ 332 ಕೋಟಿ ಒದಗಿಸಿದೆ. ಶಾಸಕರ ಸ್ಥಳೀಯ ಪ್ರದೇಶದ ಅಭಿವೃದ್ಧಿ ನಿಧಿಗೆ 210 ಕೋಟಿಯನ್ನು ಒದಗಿಸಿದ್ದೇವೆ. 175 ಕೋಟಿಯನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅಡಿ ಸೇರಿಸಿದ್ದೇವೆ. 295 ಕೋಟಿ ರೂಪಾಯಿಗಳನ್ನು ಗ್ರಾಮೀಣ ನೀರು ಸರಬರಾಜು ಯೋಜನೆಗೆ ಒದಗಿಸಿದ್ದೇವೆ. 110 ಕೋಟಿಯನ್ನು ಉದ್ಯೋಗ ಭರವಸೆ ಯೋಜನೆಗೆ ಒದಗಿಸಿದ್ದೇವೆ. ಆಹಾರ ಧಾನ್ಯಗಳ ಸಹಾಯಧನಕ್ಕಾಗಿ 300 ಕೋಟಿ ಒದಗಿಸಿದ್ದೇವೆ. ಸಂಧ್ಯಾ ಸುರಕ್ಷಾ ಯೋಜನೆಗೆ 165 ಕೋಟಿ ಒದಗಿಸಿದ್ದೇವೆ. ಬಿಎಂಆರ್ ಸಿಎಲ್‌ಗೆ ಈಕ್ವಿಟಿ ಸಹಾಯ ಒದಗಿಸಲು 300 ಕೋಟಿ ಒದಗಿಸಲಾಗಿದೆ. ಕೃಷ್ಣಭಾಗ್ಯ ಜಲನಿಗಮಕ್ಕೆ 100 ಕೋಟಿ ಒದಗಿಸಲಾಗಿದೆ. ಈ ಪೂರಕ ಅಂದಾಜಿನಲ್ಲಿ ತೋರಿಸಲಾಗಿರುವ ನಿವ್ವಳ ವೆಚ್ಚನ್ನು ಆಯವ್ಯಯದಲ್ಲಿ ಒಟ್ಟಾರೆ ಉಳಿತಾಯದಿಂದ ಭರಿಸುತ್ತೇವೆ. ಈ ಎಲ್ಲಾ ಅಗತ್ಯಗಳಿಗೆ ಹಣವನ್ನು ಒದಗಿಸಿದರೂ ಸಹ ಒಟ್ಟಾರೆ ರಾಜ್ಯಸ್ವ ಹೆಚ್ಚಳ ಹಾಗೂ ವಿತ್ತೀಯ ಕೊರತೆ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಮಿತಿಯಲ್ಲೇ ಇರುವಂತೆ ನೋಡಿಕೊಳ್ಳಲಾಗಿದೆ. ಮಾನ್ಯ ಸಿದ್ದರಾಮಯ್ಯನವರು ಪ್ರಸ್ತಾಪ ಮಾಡಿದಂತೆ 2009–10ನೇ ಸಾಲಿನಲ್ಲಿ ಯೋಜನೆಯ ಗಾತ್ರ 29,500 ಕೋಟಿ. ಅಂದರೆ ಸಂಚಿತ ನಿಧಿಯಿಂದ 22,489 ಕೋಟಿ, ನಿಗಮಗಳ ಸ್ವಂತ ಸಂಪನ್ಮೂಲ, ಸಾಲ ಇವುಗಳಿಂದ 7,000 ಕೋಟಿ. ವಾಸ್ತವಿಕವಾಗಿ ಆಗಿರುವಂಥ ವೆಚ್ಚ, ಪರಿಷ್ಕೃತ ಅಂದಾಜಿನಂತೆ ಸಂಚಿತ ನಿಧಿಯಿಂದ 21,336 ಕೋಟಿ, ನಿಗಮಗಳ ಸ್ವಂತ ಸಂಪನ್ಮೂಲ ಸಾಲಗಳಿಂದ 4,631 ಕೋಟಿ. ಒಟ್ಟು ಪರಿಷ್ಕೃತ ಅಂದಾಜಿನಂತೆ ಯೋಜನಾ ವೆಚ್ಚ 25,967 ಕೋಟಿ. ಕಳೆದ ವರ್ಷ ಯೋಜನಾ ವೆಚ್ಚ 22,577 ಕೋಟಿಯಾಗಿತ್ತು. ಅಂದರೆ ವ್ಯತ್ಯಾಸ ಸುಮಾರು 3,380 ಕೋಟಿ. 15% ನಷ್ಟು ಹೆಚ್ಚಳವಾಗಿದೆ.

ಶ್ರೀ ಸಿದ್ದರಾಮಯ್ಯ : ಅದು ಹೆಚ್ಚಳ ಅಲ್ಲ. ಕಡಿಮೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಹೋದ ವರ್ಷದ್ದು.

ಶ್ರೀ ಸಿದ್ದರಾಮಯ್ಯ : ಹೋದ ವರ್ಷದ್ದನ್ನು ಬಿಡಿ. ಹೋದ ವರ್ಷದ್ದನ್ನು ಏಕೆ ಕಂಪೇರ್ ಮಾಡುತ್ತೀರಿ. ಈ ವರ್ಷದ ಬಜೆಟ್‌ನ

ಪ್ಲಾನ್‌ಸೈಜ್ ಎಷ್ಟು ಇದೆ ಅದನ್ನು ಮಾತ್ರ ಹೇಳಬೇಕು. ಹೋದ ವರ್ಷಕ್ಕೆ ಎಂದರೆ ಹೇಗೆ? No. It is not correct.

ಶ್ರೀ ಬಿ.ಎಸ್. ಯಡಿಯೂರಪ್ಪ : ಶಾಸಕರ ಅನುದಾನದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಪ್ರತಿವರ್ಷ ಶಾಸಕರ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗಾಗಿ ವರ್ಷಕ್ಕೆ ಒಂದು ಕೋಟಿಯನ್ನೇನು ನೀಡುತ್ತಿದ್ದೇವೆ ಅದಕ್ಕೆ ನಾವು ಬದ್ಧರಾಗಿದ್ದೇವೆ. 2008-09ರಲ್ಲಿ ಅನುಮೋದಿಸಿದ ಜುಲೈ ಅಂತ್ಯದಲ್ಲಿ ಆದ ಪ್ರತಿ ಕ್ಷೇತ್ರಕ್ಕೆ 50 ಲಕ್ಷವನ್ನೇನು ಬಿಡುಗಡೆ ಮಾಡಲಾಗಿತ್ತು, ಈ ವರ್ಷ ಪ್ರತಿ ಕ್ಷೇತ್ರಕ್ಕೆ ಒಂದೂವರೆ ಕೋಟಿ ಬಿಡುಗಡೆ ಮಾಡಿದೆ. ಈ ವರ್ಷದ ಕೊನೆಯಲ್ಲಿ ವೆಚ್ಚವಾಗದೇ ಯಾವುದೇ ಕ್ಷೇತ್ರದಲ್ಲಿ ಉಳಿದ ಹಣವನ್ನು ಮುಂದಿನ ವರ್ಷ ಪೂರ್ಣ ಒದಗಿಸುತ್ತೇವೆ. ಯಾವುದೇ ಕಾರಣಕ್ಕೆ ಯಾರಿಗೂ ಕೊರತೆ ಆಗದ ರೀತಿಯಲ್ಲಿ ನೋಡಿಕೊಳ್ಳುವ ಜವಾಬ್ದಾರಿ ನನ್ನದು. ಇದರ ಬಗ್ಗೆ ಯಾವುದೇ ಅನುಮಾನ ಬೇಡ.

ಶ್ರೀ ಟಿ.ಬಿ. ಜಯಚಂದ್ರ : ಅದನ್ನು ಪಿ.ಡಿ. ಅಕೌಂಟ್‌ನಲ್ಲಿ ಹಾಕಿ. ಈಗ 50 ಲಕ್ಷ ಏನು ಬಿಡುಗಡೆ ಮಾಡಿದ್ದಾರೆ ಡಿ.ಸಿ. ಬಿಲ್ಲಿನಲ್ಲಿ ಖರ್ಚು ಮಾಡಿಯೆಂದು ಹೇಳಿದ್ದಾರೆ. ಈಗ ನಾವು ತಮ್ಮ ಹತ್ತಿರ ಪ್ರಪೊಸಲ್ ತೆಗೆದು ಕೊಂಡು ಅಂದಾಜನ್ನು ಮಾಡಿ inspection ಮಾಡಿ ಮಾಡಿ ಮುಗಿಸುವು ದಕ್ಕಾಗುವುದಿಲ್ಲ. ಆದ್ದರಿಂದ ಪಿ.ಡಿ. ಅಕೌಂಟ್‌ನಲ್ಲಿದ್ದರೆ ಆ ಹಣ ಲ್ಯಾಪ್ಸ್ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಮನೆಗೆ ನಾನು ಭರವಸೆಯನ್ನು ಕೊಡುತ್ತೇನೆ. ಪ್ರತಿ ವರ್ಷ ಒಂದು ಕೋಟಿ ಏನು ಶಾಸಕರ ನಿಧಿಯಲ್ಲಿ ವೆಚ್ಚ ಮಾಡಬೇಕೋ ಅದಕ್ಕೆ ನಾವು ಬದ್ಧರಾಗಿದ್ದೇವೆ. ಈ ಹಣದಲ್ಲಿ ನಿಮಗೆ ಎಷ್ಟು ಸಾಧ್ಯವೋ ಅಷ್ಟನ್ನು ಖರ್ಚು ಮಾಡಿ, ಯಾವುದೇ ಕಾರಣಕ್ಕೂ ಒಂದು ರೂಪಾಯಿ ಲ್ಯಾಪ್ಸ್ ಆಗದ ರೀತಿ ಮುಂದಿನ ವರ್ಷ ಈ ಹಣವನ್ನು ಕೂಡಿಸಿಕೊಂಡು ಆ ಒಂದು ಕೋಟಿ ಬ್ಯಾಲೆನ್ಸ್‌ನ್ನು ಸೇರಿ ಮಾರ್ಚ್ ಕೊನೆಯೊಳಗೆ ಖರ್ಚು ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ.

ಪ್ರಕಟಣೆ :

Mr. Speaker : I am happy to announce that Mongolian Parliamentary delegation headed by Mr.D.Odbayar is witnessing the proceesings of this august House. On behalf of

the members of this House I welcome the Chairman and other members of the delegation.

ಶ್ರೀ ಟಿ.ಬಿ. ಜಯಚಂದ್ರ : ಪಿ.ಡಿ. ಅಕೌಂಟ್‌ನಲ್ಲಿ ಇಟ್ಟರೆ ಖರ್ಚು ಮಾಡಲು ಅನುಕೂಲವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಡಿ.ಸಿ. ಬಿಲ್ಲಿನಲ್ಲಿ ವೆಚ್ಚ ಆಗದೆಯೇ ಉಳಿದ ಹಣವನ್ನು ಮುಂದಿನ ವರ್ಷ ತೊಡಗಿಸುತ್ತೇನೆಂದು ಏಕೆ ಹೇಳುತ್ತಿದ್ದೇನೆಂದರೆ, ಪಿ.ಡಿ. ಅಕೌಂಟ್‌ನಲ್ಲಿ ಇಟ್ಟರೆ ಸ್ವಲ್ಪ ಅಕೌಂಟ್ಸ್ Problem ಆಗುತ್ತದೆ. ಅದು ಆಗಬಾರದು ಎನ್ನುವ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇನೆ. ನಾನು ಈ ಮನೆಯಲ್ಲಿ ಭರವಸ ಕೊಡುತ್ತಿದ್ದೇನೆ. ನನ್ನ ಶಾಸಕ ಮಿತ್ರರು ಆ ಹಣವನ್ನು ಪೂರ್ತಿ ಖರ್ಚು ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಆ ಹಣದಲ್ಲಿ ಒಂದು ಪೈಸೆ ಲ್ಯಾಪ್ಸ್ ಆಗುವುದಿಲ್ಲ. ಪೂರಕ ಅಂದಾಜಿನಲ್ಲಿ ಲೋಕೋಪಯೋಗಿ ಇಲಾಖೆಗೆ 687 ಕೋಟಿ ನೀಡಿದೆ. ಇದಲ್ಲದೇ ವರ್ಷದ ಆಯವ್ಯಯದಲ್ಲಿ ಸುಮಾರು 2695 ಕೋಟಿ ರೂಪಾಯಿಗಳನ್ನು ರಸ್ತೆಗಳಿಗಾಗಿ ನೀಡಿದೆ. ಇದರಿಂದ ಬಹುತೇಕ ಆಯವ್ಯಯದ ಎಲ್ಲಾ ಕಾಮಗಾರಿಗೆ ಅಗತ್ಯವಾದ ಹಣವನ್ನು ನೀಡಲು ಸಾಧ್ಯವಾಗಿದೆ ಎನ್ನುವ ಮಾತನ್ನು ನಾನು ಹೇಳಲು ಇಚ್ಛೆ ಪಡುತ್ತೇನೆ. ನೀರಾವರಿ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆಗೆ ಆಯವ್ಯಯದಲ್ಲಿ ಬಂಡವಾಳ ವೆಚ್ಚಕ್ಕೆ ಯಾವುದೇ ಕಡಿತ ಮಾಡಿಲ್ಲ. ಇದೇ ರೀತಿ ಇತರೇ ಇಲಾಖೆಗಳಿಗಾಗಿ ಸಾಮಾನ್ಯವಾಗಿ ಬಂಡವಾಳ ವೆಚ್ಚಕ್ಕೆ ಯಾವುದೇ ಕಡಿತ ಮಾಡಿಲ್ಲ. ಯಾವುದೇ ಕಾರಣದಿಂದ ಕಾಮಗಾರಿಗಳಲ್ಲಿ ಪ್ರಗತಿ ಇಲ್ಲದಿರುವ ಸಂದರ್ಭದಲ್ಲಿ ಅದರ ಅನುದಾನವನ್ನು ಕಡಿಮೆ ಮಾಡಿ ಇತರೇ ಬಂಡವಾಳ ವೆಚ್ಚದ ಬಾಬುಗಳಿಗೆ ಉಪಯೋಗ ಮಾಡುತ್ತೇವೆ.

ಇಲ್ಲಿ ಒಂದು ಅಂಶ ಏನೆಂದರೆ, 5,000 ಕೋಟಿ ರೂ.ಗಳ ಪೂರಕ ಅಂದಾಜಿನಲ್ಲಿ 2,500 ಕೋಟಿ ರೂ.ಗಳು ಮಾನ್ಯ ರಾಜ್ಯಪಾಲರ ಆಧ್ಯಾದೇಶದ ಮೂಲಕ ನೆರೆ ಪರಿಹಾರಕ್ಕಾಗಿ ಕೊಡಲಾಗಿರುವ ಮೊತ್ತವೂ ಸೇರಿದೆ. ಆದ್ದರಿಂದ 5,000 ಕೋಟಿ ರೂ.ಗಳನ್ನು ಮೀರಿ ಪೂರಕ ಅಂದಾಜನ್ನು ನಾವು ಮಂಡಿಸಬೇಕಾಯಿತು. 2004-05ರಿಂದ 2009-10ರವರೆಗೆ ನಾವು ನೋಡಿಕೊಂಡು ಬಂದರೆ, 2004-05ರಲ್ಲಿ 3387 ಕೋಟಿ ರೂ.ಗಳು ಅಂದರೆ 9.9%, 2005-06ರಲ್ಲಿ 4264.78 ಅಂದರೆ 11.48%, 2006-07ರಲ್ಲಿ 7393.07 ಅಂದರೆ 16.39%, 2007-08 ರಲ್ಲಿ 5266.05

ಅಂದರೆ 10.09%, 2008–09ರಲ್ಲಿ 6241.63 ಅಂದರೆ 10.01%, ಈಗ 11978.34 ಅಂದರೆ 18.59% ಆಗುತ್ತದೆ. ಅದರಲ್ಲಿ Calamity amount ಅನ್ನು ನೀವು ತೆಗೆದರೆ ಅದು 14% ಆಗುತ್ತದೆ. ಅದಲ್ಲದೆ ಮಾನ್ಯ ಸಿದ್ರಾಮಣ್ಣನವರೆ, ನಾವು ಹಣಕಾಸಿನ ಇಲಾಖೆಯ ನಿರ್ವಹಣೆ ಬಗ್ಗೆ ಎಲ್ಲವೂ ಸರಿ ಇದೆ ಎಂದು ಹೇಳುವುದಕ್ಕಿಂತ ಬೇರೆ ರಾಜ್ಯಗಳಿಗೆ ಹೋಲಿಕೆಯನ್ನು ಮಾಡಿದರೆ, ನಮ್ಮ ಸರ್ಕಾರದ ಆರ್ಥಿಕ ನಿರ್ವಹಣೆ 13ನೇ ಹಣಕಾಸು ಆಯೋಗದ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ Governor ರವರ ಮೆಚ್ಚುಗೆಗೆ ಪಾತ್ರವಾಗಿದೆ. ಮೊನ್ನೆ ತಾನೇ ನಾನು ಅಲ್ಲಿಗೆ ಹೋದಾಗ ಮಾನ್ಯ ಸಿದ್ರಾಮಣ್ಣನವರನ್ನು ನೆನಪು ಮಾಡಿಕೊಂಡೆ. Planning Commission ಮುಂದೆ ಚರ್ಚೆ ಮಾಡುತ್ತಿರುವಂತಹ ಕಾಲದಲ್ಲಿ, ನಾವೇನು ವಿಶೇಷ ಪ್ರಯತ್ನಗಳನ್ನು ಬೇರೆ ಬೇರೆ ಇಲಾಖೆಗಳಲ್ಲಿ ಮಾಡಿ ಒಂದಷ್ಟು ಪ್ರಗತಿ ಸಾಧಿಸಿದ್ದೇವೆ, ಅದಕ್ಕೆ ಅವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅಲ್ಲದೆ ಅನೇಕ ಮಾಹಿತಿಗಳನ್ನು ತಿಳಿದುಕೊಳ್ಳುವಂತಹ ಪ್ರಯತ್ನಗಳನ್ನು ಮಾಡಿದರು. ಎರಡನೆಯದಾಗಿ, ತೆರಿಗೆ ಸಂಗ್ರಹದಲ್ಲಿ ಸಹ ಇಡೀ ದೇಶದಲ್ಲೇ ಸ್ವಲ್ಪ ಹೆಚ್ಚು ಕಡಿಮೆ ನಾವು ಮೊದಲನೇ ಸ್ಥಾನದಲ್ಲಿದ್ದೇವೆ. ಆದ್ದರಿಂದ ಇವತ್ತು 2010–11ನೇ ಸಾಲಿಗೆ ನಾವೇನು ವಾರ್ಷಿಕ ಯೋಜನೆಯ ಒಟ್ಟು ವೆಚ್ಚ ಏನಿದೆ ಎಂದರೆ, 5776 ಕೋಟಿ ರೂ. ಒಳಗೊಂಡಂತೆ Plan expenditure 31050 ಕೋಟಿ ರೂ.ಗಳೆಂದು ಆಗಬಹುದು ಎಂದು ಅಂದಾಜು ಮಾಡಿದ್ದೇವೆ. ಈ ಬಗ್ಗೆ ನಾವು ವಿಶೇಷವಾದಂತಹ ಗಮನವನ್ನು ಕೊಡುತ್ತೇವೆ. ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸುವಂತಹ ಕಡೆಗೆ ಗಮನ ಕೊಡುತ್ತೇನೆ. ತಾವು ಹೇಳಿದಂತೆ ಮಾನ್ಯ ಸಿದ್ರಾಮಣ್ಣ ಪ್ರಾರಂಭದ 4–5 ತಿಂಗಳು ಇಡೀ ವಿಶ್ವದಲ್ಲಿನ ಆರ್ಥಿಕ ಹಿನ್ನಡೆಯ ಪರಿಣಾಮ ನಮಗೂ ಹೊಡೆತ ಬಿದ್ದಿದೆ. ಇದರ ಪರಿಣಾಮವಾಗಿ ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾಯಿತು. ನನಗನಿಸುತ್ತದೆ, ಈಗ ಸುಧಾರಣೆಯಾಗಿದೆ. 2010–11ಕ್ಕೆ ನಾವೇನು ಈ ಆಯವ್ಯಯದಲ್ಲಿ ಹೇಳಿದ್ದೇವೆ, ಯಾವುದಕ್ಕೂ ಕೊರತೆಯಾಗದ ರೀತಿಯಲ್ಲಿ ಸೋರಿಕೆಯನ್ನು ತಡೆದು, ಖಜಾನೆ ತುಂಬಿ, ನಾವೇನು ಭರವಸೆಗಳನ್ನು ಕೊಟ್ಟಿದ್ದೇವೋ, ಅದನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರುವಂತಹ ನಿಮ್ಮೆಲ್ಲರ ಸಹಕಾರದಿಂದ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು

ಹೇಳಿ, ಇದಕ್ಕೆ ಅನುಮತಿಯನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು Plan expenditure ಬಗ್ಗೆ ಮಾತನಾಡಿದ್ದಾರೆ. 2008-09ರಲ್ಲಿ 22000 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ಈ ವರ್ಷ ಸುಮಾರು 25000 ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆ. About 4000 Crores ಖೋತಾ ಆಗುತ್ತದೆ, Shortfall ಆಗುತ್ತದೆ ಎಂದೆಲ್ಲಾ ಹೇಳಿದ್ದಾರೆ. ಇವರು ಡಿಸೆಂಬರ್‌ನಲ್ಲಿ ಲೆಕ್ಕ ಕೊಟ್ಟಿರುವುದು, 12,413 ಕೋಟಿ ರೂ.ಗಳು ಖರ್ಚಾಗಿದೆ ಎಂದು ಅವರೇ ಹೇಳಿದ್ದಾರೆ. ಪತ್ರಿಕೆಗಳಲ್ಲೆಲ್ಲಾ ಅದು ಬಹಳ ದೊಡ್ಡದಾಗಿ ಪ್ರಕಟವಾಯಿತು. Out of 25,500 Crores the amount spent towards plan expenditure is only 12,413 crores till the end of 31st December. It is the figure furnished by Hon'ble Chief Minister. ಹಾಗೆ ಲೆಕ್ಕ ಹಾಕಿದರೆ, ಇನ್ನೂ ಸುಮಾರು 17000 ಕೋಟಿ ರೂ.ಗಳನ್ನು ಇನ್ನು ಮೂರು ತಿಂಗಳಿನಲ್ಲಿ ಖರ್ಚು ಮಾಡಬೇಕು. More than 17088 ಕೋಟಿ ರೂ.ಗಳನ್ನು ನೀವು ಖರ್ಚು ಮಾಡಬೇಕಾಗಿದೆ. ನನ್ನ ಪ್ರಕಾರ, They may spend January, February & March ನಲ್ಲಿ about 6000-7000 crores. ಬಹಳ ಹೆಚ್ಚೆಂದರೆ 10000 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಾರೆಂದು ಇಟ್ಟುಕೊಳ್ಳೋಣ. Assuming for the argue sake, ಮೂರು ತಿಂಗಳಿನಲ್ಲಿ 10000 ಕೋಟಿ, 9 ತಿಂಗಳಿನಲ್ಲಿ 12,000 ಕೋಟಿ ಎಂದು ಇಟ್ಟುಕೊಳ್ಳೋಣ. They will not cross more than 22,000 crores. That is my information and calculation. Experience ಕೂಡ. That is No.1. No.2, ಇವರು ತೆರಿಗೆ, ಅವರೇ ಹೇಳಿರುವ ಪ್ರಕಾರವಾಗಿ States own taxes, ನಮ್ಮ ರಾಜ್ಯದ್ದು 32 ಸಾವಿರ ಚಿಲ್ಲರೆ ಕೋಟಿ ರೂ.ಗಳ ತೆರಿಗೆ ವಸೂಲು ಮಾಡುತ್ತೇವೆಂದು ಹೇಳಿದ್ದೀರಿ. But, Revised Estimate ನಲ್ಲಿ 29 ಸಾವಿರ ಕೋಟಿ ರೂ.ಗಳು ಆಗಬಹುದೆಂದು ಹೇಳಿಕೊಂಡಿದ್ದೀರ. ಅದೇ 3338 ಕೋಟಿ ರೂ.ಗಳ Budget Estimate and Revised Estimate States own taxes ನಲ್ಲಿ. So, ಅಲ್ಲೇ ನಿಮಗೆ 3338 ಕೋಟಿ ರೂ.ಗಳು ಕಡಿಮೆ ಆಗಿ ಹೋಯಿತು. ಅದು Estimate ನಲ್ಲಿ

ಇನ್ನೂ ಜಾಸ್ತಿ ಕಡಿಮೆ ಆಗಬಹುದು, ಹೇಳಲಿಕ್ಕೆ ಬರುವುದಿಲ್ಲ. So, ಆದ್ದರಿಂದ ನೀವು ಇದನ್ನು 5131 ಕೋಟಿ ರೂ.ಗಳು ನಮಗೆ additional ಆಗಿ savings ನಲ್ಲಿ ಬರುತ್ತದೆ ಎಂದರೆ ಹೇಗೆ? ಅದು ಹೇಗೆ ಬರುತ್ತದೆ? How do you get savings? Savings ಎಲ್ಲಿಂದ ಬರುತ್ತದೆ? ತೆರಿಗೆಯನ್ನೇ ವಸೂಲು ಮಾಡಲಿಕ್ಕಾಗುವುದಿಲ್ಲವೆಂದು' ನೀವೇ Revised Estimate ಗಳೆಲ್ಲಾ ಮಾಡಿಕೊಂಡು ಬಿಟ್ಟಿದ್ದೀರಿ. ದುಡ್ಡನ್ನು ಖರ್ಚು ಮಾಡಲಿಕ್ಕೆ ನಿಮಗೆ ಎಲ್ಲಿಂದ Savings ಬರುತ್ತದೆ? ಇಲ್ಲ, ದುಡ್ಡಿಲ್ಲ. ಆದ್ದರಿಂದ Plan, ಬೇರೆ ಬೇರೆ Expenditure ಗಳೆಲ್ಲಾ ಅವು reality ಗೆ ದೂರ ಇರತಕ್ಕಂಥವು ಎಂದು ನನ್ನ ಆರೋಪ. That is No.1. No.2 is, ನೀವು ಬೇರೆ ರಾಜ್ಯಗಳಿಗಿಂತ ತೆರಿಗೆ ವಸೂಲಿಯಲ್ಲಿ ನಾವು No.1 ಇದ್ದೇವೆಂದು ಹೇಳುತ್ತೀರಿ. Please furnish, ಗುಜರಾತ್‌ನಲ್ಲಿ what is the budget estimate? What is the real actual collection or realization? ಬೇರೆ ರಾಜ್ಯಗಳಲ್ಲಿ ಎಷ್ಟಿದೆ? ನಾವು ನಂ.1 ಆಗಬೇಕಾದರೆ ನಾವು ಲೆಕ್ಕ ಇಡಬೇಕಲ್ಲವೇ? ಸುಮ್ಮನೆ Reserve Bank ನವರು ಹೇಳಿದ್ದಾರೆಂದು ಎಂದರೆ ಹೇಗೆ? ಆದರೆ Reserve Bank ನವರು ನಿಮ್ಮ ಪ್ರಕಾರವೇ, ನಿಮ್ಮ Medium Fiscal Plan ನಲ್ಲಿ ಏನು ಹೇಳಿದ್ದಾರೆಂದರೆ, non-tax revenue ನಲ್ಲಿ All India Average 1.3 ಇದ್ದರೆ, ಕರ್ನಾಟಕದ್ದು 0.8 ಇದೆ ಎಂದು ಎನ್ನುವುದನ್ನೂ ಸಹ ಹೇಳಿದ್ದಾರೆ. ಅದನ್ನೂ ಸಹ ಹೇಳಿ. All India level ನಲ್ಲಿ non tax revenue 1.3% ಇದ್ದರೆ, ನೀವೇ ಹೇಳಿರುವುದು ಇದು. Medium Term Fiscal Plan ನಲ್ಲಿ ಹೇಳಿರುವುದು. ಕರ್ನಾಟಕದ್ದು 0.8 ಇದೆ ಎಂದು ಹೇಳುತ್ತೀರಿ. ಮತ್ತೆ ನೀವು ಬೇರೆ ರಾಜ್ಯಗಳಿಗಿಂತ ನಾವು ಚೆನ್ನಾಗಿದ್ದೇವೆಂದು ಬೆನ್ನು ತಟ್ಟಿಕೊಳ್ಳುವುದು ಹೇಗೆ? That is the figure mentioned in your Medium Term Fiscal Plan. Non-tax expenditure ನಲ್ಲಿ ನಾವು ಹಿಂದೆ ಬಿದ್ದಿದ್ದೇವೆ, I mean non-tax revenue Collectionನಲ್ಲಿ ನಾವು ಹಿಂದೆ ಬಿದ್ದಿದ್ದೇವೆ, But, I don't know the correct figure. ಬೇರೆ ರಾಜ್ಯಗಳದ್ದು Budget Estimates ಎಷ್ಟು? Revised Estimates ಎಷ್ಟು? I don't know what is the correct actual realization? But, ಅದು ಹತ್ತಿರ ಇದೆಯೋ,

0.17F-88

ಇಲ್ಲವೋ, ಗೊತ್ತಿಲ್ಲ. ನಿಮ್ಮ ಹತ್ತಿತ ಇದ್ದರೆ, ಅದನ್ನು ಸದನದ ಮುಂದಿಡಿ. ಅದು ಎಲ್ಲರಿಗೂ ಗೊತ್ತಾಗಲಿ. ನೀವು ನಂ.1 ಇದ್ದರೆ, ನಾವು ನಿಮಗೆ ಬೆನ್ನು ತಟ್ಟೋಣ. ಆದ್ದರಿಂದ, ಮತ್ತೆ ನಿಮಗೆ, ನಾನು ಎಲ್ಲವನ್ನೂ ಮಾತನಾಡಿದ್ದೇನೆ, ನೀವು ಇರಲಿಲ್ಲ. ನೀವು general discussion ಗೆ ಉತ್ತರ ಕೊಡುವಾಗ ಎಲ್ಲವನ್ನೂ detail ಆಗಿ ಹೇಳಿ. But, ಆದರೆ ಇದರಲ್ಲಿ ನಿಮಗೆ mobilize ಕೂಡ ಮಾಡುವುದಕ್ಕಾಗುವುದಿಲ್ಲ, either you have to go for the borrowings or you have to cut from others. ಬೇರೆ ಖರ್ಚುಗಳನ್ನು ಕಡಿಮೆ ಮಾಡಬೇಕು. ಈಗ ನೀರಾವರಿಯಲ್ಲಿ ಕೃಷ್ಣಾ ಭಾಗ್ಯಜಲ ನಿಗಮ ಮತ್ತು ಕರ್ನಾಟಕ ನೀರಾವರಿ ನಿಗಮದಲ್ಲಿ ಏನು ಮಾಡಿದ್ದೀರಿ ಎಂದರೆ, ಬೇರೆ ಕಡೆ ಸ್ಕೀಮ್‌ಗಳಿಗೆ ಕಟ್ ಮಾಡಿ, ಮಿಕ್ಕ ಯಾವುದೋ ಸ್ಕೀಮ್‌ಗಳಿಗೆ ಕೊಟ್ಟಿದ್ದೇ ವೆಂದು ಹೇಳಿದ್ದೀರಿ. Additional ಆಗಿ ಏನೂ ನೀವು ಕೊಟ್ಟಿಲ್ಲ. ಪೂರಕ ಅಂದಾಜುಗಳ ಪುಸ್ತಕದ ಪುಟ 151ರಲ್ಲಿ ಜಲ ಸಂಪನ್ಮೂಲ ಅಭಿಯಾಚನೆ ಅಡಿಯಲ್ಲಿ ನೀವು ಅದನ್ನು ಹೇಳಿದ್ದೀರಿ.

"ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಮುಂದುವರೆದ ಕಾಮಗಾರಿಗಳಿಗೆ ಆಯವ್ಯಯದಲ್ಲಿ ಒದಗಿಸಿದ ಅನುದಾನ ಸಾಕಾಗದೇ ಇರುವುದರಿಂದ, ರೂ.10000.00 ಲಕ್ಷಗಳನ್ನು ಈ ಅಭಿಯಾಚನೆಯಲ್ಲಿ ಹೆಚ್ಚುವರಿಯಾಗಿ ಸೇರಿಸಲಾಗಿದೆ. ಈ ಮೊತ್ತವನ್ನು ಇತರೆ ಯೋಜನೆಗಳಿಗೆ ಒದಗಿಸಿದ ಅನುದಾನದಡಿ ಕಡಿತ ಮಾಡಲಾಗುವುದು..."

ಹಾಗೆಯೆ ಕೃಷ್ಣಾ ಭಾಗ್ಯ ಜಲನಿಗಮ ಹಾಗೆಯೆ ಕರ್ನಾಟಕ ನೀರಾವರಿ ನಿಗಮಕ್ಕೆ. It is not additional grants. ಬೇರೆ ಕಡೆ ಕಡಿತ ಮಾಡಿ ಇಲ್ಲಿ ಕೊಟ್ಟಿದ್ದಾರೆ, ಅದೇನು ಇಲ್ಲಿರುವುದೆ. Re-appropriate ಮಾಡಿ ಕೊಂಡಿದ್ದೇವೆಂದು ಹೇಳಿಲ್ಲ. ಇದು re-apropriate. ಬೇರೆ ಕಡೆಯದನ್ನು ತೆಗದುಕೊಂಡು ಇಲ್ಲಿ ಖರ್ಚು ಮಾಡಿದ್ದೀರಿ. ಇದು re-appropriation.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರತಿ ಪಕ್ಷದ ನಾಯಕರಿಗೆ ನಾನು ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ, ಹಣಕಾಸು ನಿರ್ವಹಣೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ, ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ, Plan expenditure ನಲ್ಲಿ ಏನಾಗಿದೆ ಎಂಬ ಅಂಕಿಅಂಶವನ್ನು ಕೊಟ್ಟಿದ್ದೇನೆ. ಮತ್ತೆ ನಾನು ಬಜೆಟ್‌ಗೆ reply ಮಾಡುವ ಕಾಲದಲ್ಲಿ ಸವಿಸ್ತಾರವಾಗಿ ಯಾವ್ಯಾವ

ರಾಜ್ಯಗಳ ಸ್ಥಿತಿ ಹೇಗಿದೆ, ನಮ್ಮ ರಾಜ್ಯದ ಸ್ಥಿತಿಗತಿ ಹೇಗಿದೆ ಎನ್ನುವ ವಿವರವಾದ ಮಾಹಿತಿಯನ್ನು ನಿಮಗೆ ಒದಗಿಸುವವನಿದ್ದೇನೆ. ತಾವು ಹೇಳಿದಂತೆ, ಮಾರ್ಚ್ ತಿಂಗಳ ಕೊನೆಯ ಹೊತ್ತಿಗೆ ಸುಮಾರು 21,350 ಕೋಟಿ ಖಜಾನೆಯಿಂದ ಮತ್ತು ಸುಮಾರು 4,600 ಕೋಟಿ ನಿಗಮ ಪ್ರಾಧಿಕಾರಗಳಿಂದ ಯೋಜನಾ ವೆಚ್ಚವಾಗುತ್ತದೆನುವ ನೂರಕ್ಕೆ ನೂರರಷ್ಟು ವಿಶ್ವಾಸವಿದೆ. ಡಿಸೆಂಬರ್ ಕೊನೆಗೆ 12,000 ಯೋಜನಾ ವೆಚ್ಚದ ಮಾಹಿತಿಯಲ್ಲಿ ನಿಗಮಕ್ಕೆ ಮಾಡಿದ ವೆಚ್ಚ ಸೇರಿರಲಿಲ್ಲ.

Sri Siddaramaiah : That is said by you only. Deccan Herald ದಿನಪತ್ರಿಕೆಯಲ್ಲಿ ದೊಡ್ಡದಾಗಿ ಬಂದಿದೆ, ತರಿಸಿ ನೋಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಅದು ಸೇರಿರಲಿಲ್ಲ ಜನವರಿಯಿಂದ ಮಾರ್ಚ್‌ವರೆಗೆ ಕಳೆದ ಮೂರು ತಿಂಗಳಿನಿಂದ ಸುಮಾರು ಒಂಬತ್ತೂವರೆ ಕೋಟಿ ಖಜಾನೆಯಿಂದ ವೆಚ್ಚವಾಗುವುದಿದೆ. ಅಂದರೆ ಹಿಂದಿನ ವರ್ಷಗಳಲ್ಲಿ ಇದೇ ರೀತಿ ವೆಚ್ಚವಾಗುತ್ತಿತ್ತು, ಈ ವರ್ಷ ಕೂಡ ಅದೇ ರೀತಿಯಾಗಿದೆ ಎನ್ನುವುದನ್ನು ನಾನು ನಿಮ್ಮ ಗಮನಕ್ಕೆ ತರುವುದಕ್ಕೆ ಇಚ್ಚೆಪಡುತ್ತೇನೆ. ಎರಡನೆಯದು, ಬಹಳ ದೊಡ್ಡ ಪ್ರಮಾಣದಲ್ಲಿ ನಾವು ಸಾಲ ಮಾಡಿಬಿಟ್ಟಿದ್ದೇವೆಂದು ಇಲ್ಲಿ ಪದೇ ಪದೇ ಒಂದು ವಿಷಯ ಚರ್ಚೆಯಾಗುತ್ತಿದೆ. ಈ ಬಗ್ಗೆ ನಾನು ಅಂಕಿಅಂಶವನ್ನು ಕೊಟ್ಟಾಗ ಈ ರಾಜ್ಯದ ಜನತೆಗೆ ಸ್ಪಷ್ಟ ಚಿತ್ರಣ ಗೊತ್ತಾಗುತ್ತದೆಂದು ನಾನು ಇಚ್ಚೆ ಪಡುತ್ತೇನೆ. 2009-10ರಲ್ಲಿ ಇತರೇ ರಾಜ್ಯಗಳ ಸಾಲದ ಮೊತ್ತ ಮತ್ತು ಜಿಎಸ್‌ಬಿಪಿ ಎನಿತ್ತೆಂಬ ಒಂದು ಮಾಹಿತಿಯನ್ನು ಕೊಟ್ಟಾಗ, ನಮ್ಮ ರಾಜ್ಯದ ಹಣಕಾಸಿನ ಸ್ಥಿತಿ ಬೇರೆ ರಾಜ್ಯಗಳಿಗಿಂತ ಉತ್ತಮವಾಗಿದೆ ಎಂದು ಮೇಲ್ನೋಟಕ್ಕೆ ನಮಗೆ ಗೊತ್ತಾಗುತ್ತದೆ. ಉದಾಹರಣೆಗೆ ಆಂಧ್ರಪ್ರದೇಶವನ್ನು ತೆಗೆದುಕೊಂಡರೆ ಒಂದು ಕೋಟಿ ಇಪ್ಪತ್ತೇಳು ಲಕ್ಷದ ಐನೂರು ಎಂಬತ್ತೊಂದು ರೂಪಾಯಿ ಸಾಲವಿದ್ದರೆ 31.3% ಜಿಎಸ್‌ಬಿಪಿ, ಅದೇ ರೀತಿ ಗುಜರಾತ್ ತೆಗೆದುಕೊಂಡರೆ ಒಂದು ಕೋಟಿ ಇಪ್ಪತ್ತೈದು ಲಕ್ಷ ಏಳನೂರು ಐನೂರು ಐವತ್ತೊಂಬತ್ತು ಕೋಟಿ ರೂಪಾಯಿ 29.7% ಜಿಎಸ್ ಬಿಪಿ, ತಮಿಳುನಾಡು ತೆಗೆದುಕೊಂಡರೆ, ತ್ತೊಂಬತ್ತೈದು ಸಾವಿರದ ಇನ್ನೂರ ಮೂವತ್ತೆರಡು ಕೋಟಿ ರೂಪಾಯಿ. 24.1%, ಮಹಾರಾಷ್ಟ್ರದ್ದು ಎರಡು ಕೋಟಿ ಏಳು ಸಾವಿರದ ಎಂಟನೂರ ಹತ್ತು ಕೋಟಿ ರೂಪಾಯಿ 26%, ಕೇರಳದ್ದು ಎಪ್ಪತ್ತು ಸಾವಿರದ ಏಳುನೂರ ಅರವತ್ತೊಂದು ಕೋಟಿ

ರೂಪಾಯಿ. 35%, ರಾಜಸ್ಥಾನದ್ದು ಎಂಬತ್ತು ಸಾವಿರದ ಒಂಬೈನೂರ ಎಪ್ಪತ್ತೇರಡು ಕೋಟಿ ರೂಪಾಯಿ 43.1%, ಪಶ್ಚಿಮ ಬಂಗಾಳದ್ದು ಒಂದು ಕೋಟಿ ಅರವತ್ತೆಂಟು ಲಕ್ಷ ಆರನೂರ ಎಂಬತ್ತು ನಾಲ್ಕು ಕೋಟಿ ರೂಪಾಯಿ 42.9%, ಕರ್ನಾಟಕದ್ದು ಮಾರ್ಚ್ 2010ಕ್ಕೆ ಎಂಬತ್ತೇರಡು ಸಾವಿರದ ಐನೂರ ಹದಿಮೂರು ಕೋಟಿ ರೂಪಾಯಿ ಯಾಗುತ್ತದೆ 26%.

ಈ ಮನೆಯ ಪ್ರತಿಪಕ್ಷದ ನಾಯಕರಿಗೆ, ಮತ್ತು ಎಲ್ಲಾ ಮಾನ್ಯ ಸದಸ್ಯರಿಗೆ ನಾನು ಏನು ಹೇಳುತ್ತೇನೆಂದರೆ, ಬೇರೆ ರಾಜ್ಯಗಳು ಪಡೆದಂತ ಸಾಲದ ಜಿಎಸ್ ಬಿಪಿ ಯನ್ನು compare ಮಾಡಿದಾಗ ನಾವು ಬೇರೆ ರಾಜ್ಯಗಳಿಗಿಂತ ಉತ್ತಮವಾಗಿದ್ದೇವೆಂದು ಹೇಳುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆಯೇ ಹೊರತು ಬೇರೆ ಯಾವುದೇ ಕಾರಣಕ್ಕೋಸ್ಕರವಲ್ಲ compare ಮಾಡುವುದಕ್ಕೆ ಬಹಳವಿದೆ, ಸುಧಾರಣೆ ತರುವುದಕ್ಕೆ ತುಂಬಾ ಅವಕಾಶಗಳಿವೆ. ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಎಲ್ಲಾ ಸದಸ್ಯರಿಗೆ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ, ಈ ವರ್ಷ, ಪ್ರಾರಂಭದಿಂದಲೇ ಸ್ವಲ್ಪ ವಿಶೇಷವಾದ ಗಮನವನ್ನು ಕೊಟ್ಟರೆ, ಕೊನೆಯ ಹಣಕಾಸಿನ ವರ್ಷದ ನಾಲ್ಕು ತಿಂಗಳಲ್ಲಿ ಹಣಕಾಸಿನ ಸಂಗ್ರಹಣೆಯಲ್ಲಿ ಏನು ಪ್ರಗತಿಯಾಯಿತು, ಅದೇ ರೀತಿ ಏಪ್ರಿಲ್ ತಿಂಗಳ ಪ್ರಾರಂಭದಿಂದ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ನಿಶ್ಚಿತವಾಗಿ 2010-11ರ ಆಯವ್ಯಯದ ಸ್ಥಿತಿಗತಿಗಳು, ಖರ್ಚುವೆಚ್ಚ, ಅಭಿವೃದ್ಧಿ ಕೆಲಸಗಳು ಇನ್ನು ಉತ್ತಮವಾಗುತ್ತದೆನ್ನುವ ವಿಶ್ವಾಸ ನನಗಿದೆ. ಆ ನಿಟ್ಟಿನಲ್ಲಿ ನಿಮ್ಮ ಸಹಕಾರವಿದ್ದರೆ, ಪ್ರಾಮಾಣಿಕವಾಗಿ ಎಲ್ಲರೂ ಒಟ್ಟಾಗಿ ಸೇರಿ ಪ್ರಯತ್ನ ಮಾಡೋಣ, ರಾಜ್ಯದ ಅಭಿವೃದ್ಧಿಗೆ ತಾವು ಸಹಕರಿಸಬೇಕೆಂದು ಹೇಳಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡುವುದನ್ನು ಮಾಡೋಣ. What is the per-capita development expenditure in Karnataka? What is our position in all India? 7ನೇ ಸ್ಥಾನದಿಂದ ಮೇಲಕ್ಕೆ ಹೋಗೇ ಇಲ್ಲ ಚೆನ್ನಾಗಿದ್ದೇವೆಂದು ಹೇಗೆ ಹೇಳುತ್ತೀರಿ? ನಮ್ಮದು 7ನೆಯದು, ಅವರು ನಮಗಿಂತ ಕೆಳಗೆ ಹೋದ ಮೇಲೆ ನಾವು ಮೇಲಕ್ಕೆ ಬರಬೇಕಲ್ಲಾ? ಆದರೆ, 7ನೇ ಸ್ಥಾನದಲ್ಲೇ stick ಆಗಿಬಿಟ್ಟಿದ್ದೀರಿ. ಚೆನ್ನಾಗಿ ಅಭಿವೃದ್ಧಿಯಾದ ಮೇಲೆ, ಬೇರೆ ರಾಜ್ಯಗಳಿಗಿಂತ ಚೆನ್ನಾಗಿ ತೆರಿಗೆ ವಸೂಲಾಗಿ

ನಿಮ್ಮದು Plan compliance ಎಲ್ಲರಿಗಿಂತ ಚೆನ್ನಾಗಿ ಆಗಿ per-capita developmental expenditure ಅವರಿಗಿಂತ ಹೆಚ್ಚು ಮಾಡಿದ ಮೇಲೆ, our place will go up. You should have been Stick. ಹಾಗಾದರೆ ಅದನ್ನು ನಾವು ಹೇಗೆ ಒಪ್ಪಿಕೊಳ್ಳುವುದಕ್ಕಾಗುತ್ತದೆ. I cannot believe all those things.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮನ್ನು ಒಪ್ಪಿಸುವುದು ಅಷ್ಟು ಸುಲಭವಿಲ್ಲವೆಂಬುದು ಗೊತ್ತಿದೆ, ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುವ ಸಮಯದಲ್ಲಿ ನಾನು ವಿವರವಾದ ಮಾಹಿತಿಯನ್ನು ಕೊಡುತ್ತೇನೆ.

ಅಧ್ಯಕ್ಷರು : ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ, ಪ್ರಸ್ತಾವ ಏನೆಂದರೆ,

31.3.2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 1-5 ಮತ್ತು 7-27ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ [ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ] ಎರಡನೇ ಮತ್ತು ಅಂತಿಮ ಕಂತಿನ ಪೂರಕ ಅಂದಾಜುಗಳ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

6. ಶಾಸನ ರಚನೆ :

(ಅ) ವಿಧೇಯಕ ಮಂಡನೆ ಹಾಗೂ ಪ್ರಸ್ತಾವ :

ಕರ್ನಾಟಕ ಧನವಿನಿಯೋಗ ವಿಧೇಯಕ, 2010
ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

2010ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಧನವಿನಿಯೋಗ ವಿಧೇಯಕ, 2010
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

2010ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು
ಖಂಡ 2 ರಿಂದ 4ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ"ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾಪದ ಅಂಗೀಕಾರ

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ **"2010ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು"** ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ **"2010ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು"** ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಈಗ ಶಾಸನ ರಚನೆ.

ಶ್ರೀ ಸಿದ್ಧರಾಮಯ್ಯ : ಈಗ ಅದು ಬೇಡ.

ಅಧ್ಯಕ್ಷರು : ಹಾಗಾದರೆ ಬಿಲ್ಲುಗಳನ್ನು ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ಯಾವುದೇ ಬಿಲ್ಲು ಇವತ್ತು ಬೇಡ. ಏಕೆಂದರೆ ಅವೆಲ್ಲಾ ಚರ್ಚೆಯಾಗಬೇಕು. ನಾವು ಅದನ್ನು ಓದಿಕೊಂಡು ಬಂದಿಲ್ಲ. ಆದ್ದರಿಂದ ದಯವಿಟ್ಟು ನಾಳೆ ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀ ಆರ್. ಅಶೋಕ್ : ಅಕ್ರಮ ಸಕ್ರಮ ಇದೆ. ಅದು ಸಣ್ಣ ತಿದ್ದುಪಡಿ. ಅದನ್ನು ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಈಗ ಅಕ್ರಮ ಸಕ್ರಮ ಮಾಡುತ್ತೀರೋ? ಅದನ್ನೇನು ಚುನಾವಣೆಗೆ ತೆಗೆದುಕೊಂಡು ಹೋಗುತ್ತೀರೋ?

ಅಧ್ಯಕ್ಷರು : ಅದು ಇಡೀ ರಾಜ್ಯಕ್ಕೆ ಸಂಬಂಧಿಸಿದ್ದು.

ಶ್ರೀ ಸಿದ್ದರಾಮಯ್ಯ : ಇವತ್ತು ಬೇಡ. ನಾಳೆ ಚರ್ಚೆಮಾಡೋಣ.

ಅಧ್ಯಕ್ಷರು : ನಿನ್ನೆ ದಿವಸ ಇದನ್ನು ನಾಳೆ ಮಂಡಿಸಿಯೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಪರವಾಗಿಲ್ಲಾ. ನಾಳೆ ತೆಗೆದುಕೊಳ್ಳೋಣ? ಇವತ್ತು ಬೇರೆ ಅಜೆಂಡಾ ಇದೆ. ಗಮನ ಸೆಳೆಯುವ ಸೂಚನೆಗಳಿವೆ. General discussion ಇದೆ. ಅದನ್ನು ಮಾಡೋಣ. ಬೇಕಾದರೆ ಸಹಕಾರ ಇಲಾಖೆಯದ್ದನ್ನು ಮಾಡೋಣ. ಜಯಚಂದ್ರರವರು ತಯಾರಿದ್ದಾರೆ. ಅದನ್ನು ಮಾಡಿ.

ಶ್ರೀ ಆರ್. ಅಶೋಕ್ : ಅಕ್ರಮ ಸಕ್ರಮದಲ್ಲಿ ಏನೂ ಇಲ್ಲ.

ಶ್ರೀ ಸಿದ್ದರಾಮಯ್ಯ : ಏನೂ ಇಲ್ಲ ಎಂದರೆ ನಾವು ಒಪ್ಪಿಕೊಳ್ಳಬೇಕಲ್ಲಾ? ಏನೂ ಇಲ್ಲ ಎಂದು ಹಾಗೆಯೇ ಪಾಸ ಆಗಿಬಿಟ್ಟರೆ ಆಗುತ್ತದೆಯೇ?

ಅಧ್ಯಕ್ಷರು : ಈ ಬಿಲ್ಲನ್ನು ನಿನ್ನೆ ದಿವಸ ಇವತ್ತು ತೆಗೆದು ಕೊಳ್ಳಬೇಕೆಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇವತ್ತು ಚರ್ಚೆಗೆ ತೆಗೆದುಕೊಳ್ಳೋಣ.

Sri Siddaramaiah : There is no urgency. ನಾಳೆ ತೆಗೆದು ಕೊಳ್ಳೋಣ ಬಿಡಿ. ಈಗ co-operation ದ್ದು ತೆಗೆದುಕೊಳ್ಳೋಣ.

ಶ್ರೀ ಆರ್. ಅಶೋಕ್ : ನಿನ್ನೆ ದಿವಸ ನಾಳೆ ಎಂದು ಹೇಳಿದ್ದರು. ಇವತ್ತು ಕೇಳಿದರೆ ನಾಳೆ ಎಂದು ಹೇಳುತ್ತಿದ್ದಾರೆ. ಪ್ರತಿ ದಿವಸ ನಾಳೆ ಎಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ನಾಳೆ ದಿವಸ ನೀವು ಬೇಡ ಎಂದೂ ನಾವು ಚರ್ಚೆಗೆ ತಯಾರಾಗಿದ್ದೇವೆ. ಅದನ್ನು ತೆಗೆದುಕೊಳ್ಳೋಣ.

ಶ್ರೀ ಆರ್. ಅಶೋಕ್ : ಬೆಂಗಳೂರಿನ ಬಗ್ಗೆ ಏಕೆ ಈ ರೀತಿ? ಕೋಪವೇ?

ಶ್ರೀ ಸಿದ್ದರಾಮಯ್ಯ : ಬೆಂಗಳೂರಿನ ಬಗ್ಗೆ ಚುನಾವಣೆ ಇರುವುದರಿಂದ ಬೇಡ ಎಂದು. ಬೆಂಗಳೂರಿನ ಬಗ್ಗೆ ನಮಗೆ ಬಹಳ ಪ್ರೀತಿ. ನಾವು ಇಲ್ಲೇ ವಾಸ ಮಾಡುತ್ತಿದ್ದೇವಲ್ಲಾ?

ಶ್ರೀ ಡಿ.ಕೆ. ಶಿವಕುಮಾರ್ : ಬೆಂಗಳೂರನ್ನು ಏನಾದರು ಮಾಡಿ ನಾವು ತೆಗೆದುಕೊಳ್ಳಬೇಕೆಂದು ಆಸೆ. ನಿಮ್ಮ ಕೈಯಲ್ಲಿ ಬೆಂಗಳೂರನ್ನು ಆಳಲು ಆಗುವುದಿಲ್ಲ. ನಿಮ್ಮ ಬಗ್ಗೆ ಜನರಲ್ಲಿ ನಂಬಿಕೆ ಇಲ್ಲ. ಆದ್ದರಿಂದ ಬೆಂಗಳೂರನ್ನು ನೀವು ಬಿಟ್ಟು ಬಿಡಿ. ನಾವು ತೆಗೆದುಕೊಳ್ಳುತ್ತೇವೆ. ಈಗ ಕೋ-ಆಪರೇಷನ್ ಬಿಲ್ ತೆಗೆದುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೆಂಗಳೂರನ್ನು ನಮ್ಮ ಕಾಂಗ್ರೆಸ್ ಸ್ನೇಹಿತರು ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಆದರೆ, ಕಳೆದ ಎರಡು ವರ್ಷದಲ್ಲಿ ಆಗಿರುವ ಸುಧಾರಣೆಯನ್ನು ನೋಡಿ ಬೆಂಗಳೂರಿನ ಮನೆ ಮನೆಯಲ್ಲಿ ಮಾತನಾಡುತ್ತಿದ್ದಾರೆ, ಎಷ್ಟು ಬೇಗ ಚುನಾವಣೆ ಬರುತ್ತದೆಯೋ ಎಷ್ಟು ಬೇಗೆ ಬಿ.ಜೆ.ಪಿ. ಯವರನ್ನು ನಿಯೋಜನೆ ಮಾಡಬೇಕೋ ಎಂದು ಖಾತುರದಿಂದ ಕಾಯುತ್ತಿದ್ದರೆ. ನೀವೇಕೆ ಈ ರೀತಿ ಹಗಲುಗನಸನ್ನು ಕಾಣುತ್ತೀರಿ? ಆ ರೀತಿ ಕನಸ್ಸನ್ನು ಕಾಣಲು ಸಾಧ್ಯತೆಯೇ ಇಲ್ಲ. ಬಿ.ಜೆ.ಪಿ. ಮೇಯರ್, ಡೆಪ್ಯೂಟಿ ಮೇಯರ್ ಇರುತ್ತಾರೆ, ಶಿವಕುಮಾರ್‌ರವರಿಗೆ ಸಾಧ್ಯವೇ ಇಲ್ಲ. ಜನರು ತೀರ್ಮಾನ ಮಾಡಿಯಾಗಿದೆ. ನೀವೇಕೆ ಅದರ ಬಗ್ಗೆ ಚಿಂತನೆ ಮಾಡುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್ : ಮತದಾರರಿಗೆ ನಿಮ್ಮ ಮೇಲೆ ನಂಬಿಕೆ ಇಲ್ಲ.

ಶ್ರೀ ಸಿದ್ದರಾಮಯ್ಯ : ಕೋರ್ಟ್‌ಗೆ ಹೋಗಿ ಹೋಗಿ ಛೀಮಾರಿ ಹಾಕಿಸಿಕೊಂಡು ಬಂದಿದ್ದೀರಿ. ಇನ್ನೂ ಮೂರು ತಿಂಗಳು ಚುನವಣೆ ಮುಂದಕ್ಕೆ ಹಾಕಲು ಕಾಯುತ್ತಿದ್ದೀರಿ.

ಅಧ್ಯಕ್ಷರು : ನಾಳೆ ಪ್ರಶ್ನೋತ್ತರ ಆದ ತಕ್ಷಣ ಎಲ್ಲಾ ಬಿಲ್ಲುಗಳನ್ನು ತೆಗೆದುಕೊಳ್ಳೋಣ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

0.17F-80

ಶ್ರೀ ಡಿ.ಕೆ. ಶಿವಕುಮಾರ್ : ಈಗ ಕೋ-ಆಪರೇಷದ್ದನ್ನು ತೆಗೆದುಕೊಳ್ಳಿ, ಅವರು ತಯಾರಾಗಿದ್ದಾರೆ.

ಅಧ್ಯಕ್ಷರು : ಅವರು ಎಲ್ಲದಕ್ಕೂ ತಯಾರಾಗಿದ್ದಾರೆ. ಆದರೆ, ನಾಳೆ ಪ್ರಶ್ನೋತ್ತರ ಆದ ಕೂಡಲೇ ಎಲ್ಲಾ ಬಿಲ್ಲುಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಈಗ ಕೋ-ಆಪರೇಷನ್ ಬಿಲ್ಲನ್ನು ತೆಗೆದುಕೊಳ್ಳಿ,

ಅಧ್ಯಕ್ಷರು : ಆಗಲಿ. ಉಳಿದ್ದದ್ದನ್ನು ನಾಳೆ ಮೊದಲು ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆಯ ಮಹತ್ವವನ್ನು ಅರ್ಥ ಮಾಡಿಕೊಂಡು ಪರಮಶಿವಯ್ಯನವರ ವರದಿ ಆಧಾರದ ಮೇಲೆ ನಮ್ಮ ಬಯಲು ಸೀಮೆ ಪ್ರದೇಶಕ್ಕೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಕೊಟ್ಟಿದ್ದೀರಿ. ಅದು ಮೊನ್ನೆ ಬಂತು, ಹೋಯಿತು. ಇವತ್ತು ಬಂದಿದೆ, ಆದರೆ ರೀಚ್ ಆಗುತ್ತಿಲ್ಲ. ನಮಗೆ ಅದರ ಬಗ್ಗೆ ಚರ್ಚೆಗೆ ಸಮಯ ಕೊಡಬೇಕು.

ಅಧ್ಯಕ್ಷರು : ಕೊನೆಯಲ್ಲಿ ತೆಗೆದುಕೊಳ್ಳೋಣ.

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(1) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2010

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಲಕ್ಷ್ಮಣ ಸವದಿ (ಸಹಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, **"2010ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು"** ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಲಕ್ಷ್ಮಣ. ಸವದಿ (ಸಹಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ 2004ರಲ್ಲಿ ರಾಷ್ಟ್ರದಲ್ಲಿ ಏಕರೂಪ ಕಾನೂನು ವ್ಯವಸ್ಥೆ ಇರಬೇಕು, ಕೃಷಿ ಮತ್ತು ಸಂಬಂಧಪಟ್ಟ ಪತ್ತಿನ ಸಹಕಾರಿ ಸಂಘಗಳು ಸಬಲಗೊಳ್ಳಬೇಕು, ಅಲ್ಲಿರುವ ನ್ಯೂನತೆಗಳನ್ನು ಸರಿಪಡಿಸಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ಅದರ ಜೊತೆಗೆ ಸರ್ಕಾರದ ಹಸ್ತಕ್ಷೇಪ ಸಹಕಾರಿ ಸಂಘಗಳಲ್ಲಿ ಇರಬಾರದು

ಎಂಬ ಹಿನ್ನೆಲೆಯನ್ನು ಇಟ್ಟುಕೊಂಡು ದೇಶ ಮಟ್ಟದಲ್ಲಿ 2004ರಲ್ಲಿ ವೈದ್ಯನಾಥನ್ ಸಮಿತಿಯನ್ನು ರಚನೆ ಮಾಡಿ, ಅವರು ಇಡೀ ದೇಶದೆಲ್ಲೆಡೆ ಸಂಚಾರ ಮಾಡಿ ಅಲ್ಲಿರುವ ಲೋಪದೋಷಗಳನ್ನು ಮತ್ತು ಸಹಕಾರಿ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು ಎಂಬ ಕಲ್ಪನೆಯನ್ನು ಇಟ್ಟುಕೊಂಡು ಒಂದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟರು.

(ಈ ಹಂತದಲ್ಲಿ ಅಧ್ಯಕ್ಷರ ಪೀಠವನ್ನು ಶ್ರೀ ಎನ್. ಯೋಗೀಶ್‌ಭಟ್‌ರವರು ಅಲಂಕರಿಸಿದರು)

2005ನೇ ಇಸವಿಯಲ್ಲಿ ಆ ವರದಿಯನ್ನು ಒಪ್ಪಿಕೊಂಡು ಇಡೀ ದೇಶದಲ್ಲಿರುವ ಎಲ್ಲಾ ರಾಜ್ಯಗಳು ಇದನ್ನು ಜಾರಿಗೆ ತರಬೇಕು. ಇದನ್ನು ಜಾರಿಗೆ ತರುವುದರಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಟ್ಟಿಗೆ ಕೂಡಿ ಅಲ್ಲಿರುವ ಕೃಷಿ ಪತ್ತಿನ ಸಹಕಾರಿ ಸಂಘಗಳು ಇರಬಹುದು, ಜಿಲ್ಲಾ ಮಧ್ಯವರ್ತಿ ಬ್ಯಾಂಕ್‌ಗಳು ಇರಬಹುದು, ಅಪೆಕ್ಸ್ ಬ್ಯಾಂಕ್ ಇರಬಹುದು, ಏಕಕಾಲಕ್ಕೆ ಹಾನಿಯನ್ನು ಭರ್ತಿ ಮಾಡಿ ಆ ಸಂಸ್ಥೆಗಳನ್ನು ಸದೃಢಗೊಳಿಸಿ ಕೃಷಿಕರಿಗೆ ಮತ್ತು ರೈತರಿಗೆ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ ಎಂಬ ಆಲೋಚನೆಯನ್ನು ಇಟ್ಟುಕೊಂಡು ಇವತ್ತು ಆ ವರದಿಯನ್ನು ಒಪ್ಪಿಕೊಳ್ಳತಕ್ಕದ್ದು ಇದೆ. ಈಗಾಗಲೇ ನಾವು ಎರಡು ವರ್ಷದ ಹಿಂದೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಒಟ್ಟಿಗೆ ಕುಳಿತು ಚರ್ಚೆಯಾಗಿ ಇದಕ್ಕೆ ಎಂ.ಓ.ಯು. ಗೆ ಸಹ ಸಹಿಯಾಗಿದೆ. ಈಗಾಗಲೇ ಇದರ ಬಗ್ಗೆ ಒಂದು ಆರ್ಡಿನೆನ್ಸ್‌ನ್ನು ಮಾಡಿ ಜಾರಿಗೆ ತಂದಿದ್ದೆವು. ಆದರೆ, ಮೊನ್ನೆ ನಡೆದಂಥ ಅಧಿವೇಶನದಲ್ಲಿ ಈ ವಿಧೇಯಕವನ್ನು ಮಂಡನೆ ಮಾಡಲು ಮತ್ತು ಪಾಸ್ ಮಾಡಲು ಆಗದೇ ಇರುವ ಸಂದರ್ಭದಲ್ಲಿ ಆರ್ಡಿನೆನ್ಸ್ ಕೂಟ ಲ್ಯಾಪ್ಸ್ ಆಗಿರತಕ್ಕದ್ದು ಆದ್ದರಿಂದ ದಯಮಾಡಿ ಎಲ್ಲಾ ವಿರೋಧ ಪಕ್ಷದ ನಾಯಕರು, ಎಲ್ಲಾ ಸಹಕಾರಿಗಳು ಒಟ್ಟಿಗೆ ಕೂಡಿಕೊಂಡು ಈ ವಿಧೇಯಕವನ್ನು ಮಂಜೂರಾತಿ ಮಾಡಿಕೊಡಬೇಕೆಂದು ತಮ್ಮ ಮೂಲಕ ಎಲ್ಲರನ್ನು ವಿನಂತಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಈಗಾಗಲೇ ವಿಧಾನ ಪರಿಷತ್ತಿನಿಂದ ಯಾವುದೇ ರೀತಿ ತಿದ್ದುಪಡಿ ಇಲ್ಲದೆಯೇ ಪಾಸ್ ಆಗಿ ಬಂದಿದೆ. ಈಗಾಗಲೇ ಇದು ತಡವಾಗಿದೆ. ಇದನ್ನು ಪಾಸ್

ಮಾಡಿಕೊಡುವುದರಿಂದ ನಬಾರ್ಡ್‌ನಿಂದ ನೀವು ಹೆಚ್ಚು ಅನುದಾನವನ್ನು ಪಡೆಯಲು ಸಾಧ್ಯವಾಗುತ್ತದೆ. ಆ ಕಾರಣದಿಂದ ಇದು ತಡವಾಗುವುದು ಬೇಡ. ಇದು ಯಾವ ರೀತಿಯಲ್ಲಿ ಆಗಬೇಕೆಂದು ಈಗಾಗಲೇ ಪೂರ್ವಬಾವಿ ಯಾಗಿ ಚಿಂತನೆಯಾಗಿರುವ ಹಿನ್ನೆಲೆಯಲ್ಲಿ ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ಆದರೆ, Section 128(a).

ಇದರಲ್ಲಿ ಸ್ವಲ್ಪ ಬದಲಾವಣೆಯನ್ನು ತರಬೇಕೆನ್ನತಕ್ಕಂಥ ಒಂದು ಮನವಿಯನ್ನು ಮಾಡಿಕೊಂಡಿದ್ದೇವೆ. ಈಗ ನೀವು ಪೇಜ್ 23 ರಲ್ಲಿ ನೋಡಬಹುದು, ಅದರಲ್ಲಿ ಏನು ಹೇಳಿದೆಯೆಂದರೆ, "Insertion of Section 128A : After Section 128 of the Principal Act, the following shall be inserted and the same shall be omitted with effect from the first of July 2010" ಎಂದು ಇದೆ. ಇದನ್ನು ದಯಮಾಡಿ ನೋಡಿ. ಇವೆಲ್ಲವೂ ಕೂಡ seond stage ನಲ್ಲಿ ಬರತಕ್ಕಂಥವುಗಳ. ಏಕೆಂದರೆ ಕೇಡರ್ ಮ್ಯಾನೇಜ್‌ಮೆಂಟ್ ಅಥಾರಿಟಿ ಬರತಕ್ಕಂಥದ್ದು ಎರಡನೆಯ ಹಂತದಲ್ಲಿ. ಹೀಗಾಗಿ ಇದು ಪಾಸ್ ಆಗಿ ಬರಬೇಕಾದರೆ ಅವರಿಗೆ ಜುಲೈ ಕೊನೆಯೊಳಗೆ ಕಷ್ಟವಾಗುತ್ತದೆ. ಆದಕಾರಣ ನೀವು ಡಿಸೆಂಬರ್ 10. ಎಂದು ಒಂದು ಅಮೆಂಡ್‌ಮೆಂಟ್ ಮಾಡಿದರೆ ಬಹುಶಃ ಅದು ಅವರಿಗೂ ಕೂಡ ಸಹಾಯ ಮಾಡಿದಂತಾಗುತ್ತದೆ. ಅದನ್ನು ಬಿಟ್ಟರೆ ಬೇರೆ ವಿಚಾರಗಳನ್ನು ನಾವು ಒಪ್ಪುವುದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಛೇರ್ಮನ್‌ರವರೆ, ಇದು ಬಹಳ ಪ್ರೋಗ್ರೆಸ್ಸಿವ್ ಬಿಲ್. ನಾನು ಹಿಂದೆ ಒಬ್ಬ ಸಹಕಾರಿ ಮಂತ್ರಿಯಾಗಿ ಎರಡೂವರೆ ವರ್ಷಗಳ ಕಾಲ ಸಹಕಾರ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದರಿಂದ ಇಂದು ಈ ಬಿಲ್ ಅನ್ನು ತಂದಂಥ ಇಂದಿನ ಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸಬಯಸುತ್ತೇನೆ. ಆದರೆ ಇದನ್ನು ಯಾಥಾವತ್ತಾಗಿ ಕಾರ್ಯರೂಪಕ್ಕೆ ತರಬೇಕು. ಆ ರೀತಿ ಕಾರ್ಯರೂಪಕ್ಕೆ ತಂದಾಗ ಮಾತ್ರ ಈ ಸಹಕಾರ ಸಂಸ್ಥೆಗಳು ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾಡುವ ಹಿನ್ನೆಲೆಯಲ್ಲಿ ನ್ಯಾಶನಲ್ ಲೆವೆಲ್‌ನಲ್ಲಿಯೂ ಕೂಡ ಒಂದು ಕಮಿಟಿ ಇತ್ತು. ಹಿಂದೆ ನಿತೀಶ್ ಕುಮಾರ್‌ರವರು ಕೃಷಿ ಸಚಿವರಾಗಿದ್ದಂಥ ಸಂದರ್ಭದಲ್ಲಿ ನ್ಯಾಶನಲ್ ಲೆವೆಲ್‌ನಲ್ಲಿಯೂ ಹೈದ್ರಾಬಾದ್‌ನವರೊಬ್ಬರು ಸ್ಟೇಟ್ ಮಿನಿಸ್ಟರ್

ಇದ್ದರು. ನಮ್ಮ ಕರ್ನಾಟಕದವರು ಕೂಡ ಆ ಕಮಿಟಿಯಲ್ಲಿ ಸೇರಿ ಕೊಂಡಿದ್ದರು. ನಾನು ಕೂಡ ಅನೇಕ ರಾಜ್ಯಗಳಿಗೆ ಈ ವಿಚಾರದಲ್ಲಿ ಪ್ರವಾಸ ಮಾಡಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮತ್ತು ಅನೇಕ ರಾಜ್ಯಗಳಲ್ಲಿ ಮೀಟಿಂಗ್‌ಗಳನ್ನು ಮಾಡಿದ್ದೇವೆ. ಬೆಂಗಳೂರಿನಲ್ಲಿಯೂ ಕೂಡ ಒಂದು ಮೀಟಿಂಗ್‌ನ್ನು ಮಾಡಿ ಇವೆಲ್ಲಾ ಸಲಹೆಗಳನ್ನು ಅಂದು ನಡೆದಿರುವ ಸಭೆಯಲ್ಲಿ ಕೊಟ್ಟಿದ್ದೇವೆ. ಅದಾದ ಮೇಲೆ ನಾಣಯ್ಯನವರು, ವಿಶ್ವನಾಥ್ ಸೇರಿ ಒಂದು ಕಮಿಟಿ ಕೂಡ ಸಜೆಸ್ಟ್ ಮಾಡಿ ಅವರು ಕೂಡ ಅನೇಕ ರೆಕಮೆಂಡೇಶನ್‌ಗಳನ್ನು ಬಹುಶಃ ಮಾಡಿದ್ದರೆಂದು ನಾನು ಗಮನಿಸಿದ್ದೇನೆ. ಒಂದು ವಿಚಾರವನ್ನು ಈಗ ಇಲ್ಲಿ ಹೇಳಬಯಸುತ್ತೇನೆ. ಏಕೆಂದರೆ ಈಗ ಇಲ್ಲಿ ಮಂತ್ರಿಗಳು ಇದ್ದಾರೆ ಮತ್ತು ಮುಖ್ಯಮಂತ್ರಿಗಳು ಕೂಡ ಇದ್ದಾರೆ. ರಾಜಕಾರಣವನ್ನು ಈ ಸಂದರ್ಭದಲ್ಲಿ ನಾವು ಎಲ್ಲಿಯವರೆವಿಗೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೋ ಆಗ ಈ ಸಂಸ್ಥೆಗಳು ಹೋಗುತ್ತವೆ. ಈಗ ಇಲ್ಲಿಯೇ ಈ ಹಿಂದೆಯೇ ಈ ಬಿಲ್ ಒಂದು ಹಂತದಲ್ಲಿ ಪಾಸ್ ಆಗಿಹೋಗಿತ್ತು. Governor ಆರು ತಿಂಗಳು ಇದಕ್ಕೆ ascent ಕೂಡ ಕೊಟ್ಟಿದ್ದರು, lapse ಆಯಿತು ಎಂದು ಹೇಳಿ ಈಗ ಇದು ಇಲ್ಲಿಗೆ ಬಂದಿದೆ. Section 98 N : Disqualification of members of the committee of Co-operative Credit Structure ಎಂದು ಇದೆ. ಏನೆಂದರೆ, ಯಾವುದೇ ಒಬ್ಬ ವ್ಯಕ್ತಿ ಯಾವುದಾದರೂ ಒಂದು ವಿಚಾರದಲ್ಲಿ ಕ್ರಿಮಿನಲ್ ಪ್ರೊಸಿಡಿಂಗ್ಸ್ ನಲ್ಲಿದ್ದರೆ ಅಥವಾ ಅವಮ ಮೇಲೆನಾದರೂ ಆರೋಪಗಳಿದ್ದರೆ ಅದರ ಮೇಲೆ ಡಿಪಾರ್ಟ್‌ಮೆಂಟ್‌ನವರು ಕೇಸ್ ಫೈಲ್ ಮಾಡಿದರೆ he ceases to be a member of the Society ಎಂದು ಇದೆ. ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೇ ನಾನೇ ಮಾಡಿಕೊಂಡಂಥ ಒಂದು ದೊಡ್ಡ ಅಪರಾಧ. ಅದು ನನ್ನದೇ ಒಂದು ಕೂಸು. ನಾವೇ ತಪ್ಪು ಮಾಡಿಕೊಂಡು ಬೇಕಾದಷ್ಟು ಸಹಕಾರವನ್ನು ಕೊಟ್ಟುಬಿಟ್ಟೆವು. ಆ ಸಂಸ್ಥೆ ಹಾಳಾಗುತ್ತಿದೆ. ಸಿ.ಬಿ.ಐ. ಕೇಸ್ ಕಳೆದ 15 ವರ್ಷದಿಂದ ನಡೆಯುತ್ತಿದೆ, ಇವತ್ತಿನವರೆವಿಗೂ ಪ್ರೆಸಿಡೆಂಟ್ ನಿಂದ ಇಳಿಸುವುದಕ್ಕೆ ಆಗಲಿಲ್ಲ. ಯಾವ ಸರ್ಕಾರ ಬಂದರೂ ಕೂಡ, ಒಂದು ವೇಳೆ ಕಾಂಗ್ರೆಸ್ ಬಂದರೆ ಕಾಂಗ್ರೆಸ್ ಪರ, ದಳ ಬಂದರೆ ದಳದ ಪರ, ಬಿ.ಜೆ.ಪಿ. ಬಂದರೆ ಬಿ.ಜೆ.ಪಿ. ಪರ ಹೋಗಿ ರಕ್ಷಣೆ ಮಾಡಿಕೊಂಡು ಕೆಲವು ವ್ಯಕ್ತಿಗಳು ಇವತ್ತಿನವರೆವಿಗೂ ಈ ರೀತಿ ಮಾಡಿಕೊಂಡು ಬಂದಿದ್ದಾರೆ. ಇವತ್ತು

ಸಿ.ಬಿ.ಐ.ನಲ್ಲಿ ಕೇಸ್ ಇದೆ. ಈ Act ಪ್ರಕಾರ, ಇವರೇನು ಮಂಡನೆ ಮಾಡಿದ್ದಾರೆ ಅದರ ಪ್ರಕಾರ, ಇದು ಪಾಸ್ ಆಯಿತೆಂದರೆ, ಇದಕ್ಕೆ Governor sign ಹಾಕಿದರೆಂದರೆ ಒಂದು ದಿನ ಕೂಡ ಅಧ್ಯಕ್ಷರಾಗಿ ಮುಂದುವರೆಯುವುದಕ್ಕೆ ಅವಕಾಶವಿಲ್ಲ. ಇದನ್ನು ಬಹುಶಃ ಮಂತ್ರಿಗಳು ಇದರಲ್ಲಿರುವ ಕಾನೂನನ್ನು ಚಾಚೂತಪ್ಪದೇ, ಈ ಎಲ್ಲ ಅಧಿಕಾರಿಗಳು ಕೂಡ ಇದನ್ನು ರಕ್ಷಣೆ ಮಾಡಿಕೊಂಡು, ಪಾಪ ಅಧಿಕಾರಿಗಳಿಗೆಲ್ಲವೂ ಇದು ಗೊತ್ತಿದೆ. ನಾವು ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು. ಆದರೂ ಕೂಡ ನಮ್ಮಂಥವರ ಒತ್ತಡದಿಂದ ಪಾಪ ಅವರು ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ಮಂತ್ರಿಗಳಿಗೆ ಈ ಬಗ್ಗೆ ಭರವಸೆಯನ್ನು ಏನು ಕೊಡುತ್ತೀರೆಂದು ಕೇಳುತ್ತಿದ್ದೇನೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಬ್ಯಾಂಕ್ ಏನಿದೆ, ಈಗಾಗಲೇ ನಿಮ್ಮ ಡಿಪಾರ್ಟ್‌ಮೆಂಟ್‌ನವರು ಕ್ರಿಮಿನಲ್ ಪ್ರೊಸಿಡಿಂಗ್ಸ್ ಫೈಲ್ ಮಾಡಿದ್ದರು ಆ ಪ್ರಕಾರ ತಾವು ಇದರ ಬಗ್ಗೆ ಇಂಪ್ಲಿಮೆಂಟ್‌ನ್ನು ವೈದ್ಯನಾಥನ್ ಕಮಿಟಿ ಪ್ರಕಾರ ತಾವು ಚಾಚೂ ತಪ್ಪದೇ, ಪಾಲಿಸಬೇಕು. ಏಕೆಂದರೆ ತಮಗೆ ಗೊತ್ತಿರುವಂತೆ ಮುಖ್ಯಮಂತ್ರಿಗಳು ಆದೇಶ ಮಾಡಿದ್ದರು, ತಾವು ಕೂಡ ಆದೇಶವನ್ನು ಮಾಡಿದ್ದೀರಿ, ಆಫೀಸರ್ಸ್ ಕೂಡ ಆದೇಶವನ್ನು ಮಾಡಿದ್ದರು, ರಿಜಿಸ್ಟ್ರಾರ್‌ರವರು ಕೂಡ ಪ್ರೊಸಿಡಿಂಗ್ಸ್ ಪೈಲ್ ಮಾಡಿದ್ದರು. ಆ ಪ್ರಕಾರ ತಾವು ಮೆಂಬರ್ ಶಿಪ್‌ನ್ನು ಸೀಸ್ ಮಾಡುವಂಥ ಕೆಲಸವನ್ನು ಯಾರ ಯಾರ ಮೇಲೆ ತಾವು ಕ್ರಿಮಿನಲ್ ಛಾರ್ಜ್‌ಸ್ ಫೈಲ್ ಮಾಡಿದ್ದೀರಿ, ಈ Actಗೆ ತಾವು ಗೌರವ ಕೊಡುವುದಾದರೆ ಕೂಡಲೇ ಅದನ್ನು ಜಾರಿ ಮಾಡಬೇಕೆಂದು ಒತ್ತಾಯ ಮಾಡಿ ಈ ಬಿಲ್‌ಗೆ ನನ್ನ ಬೆಂಬಲನ್ನು ಕೊಡುತ್ತೇನೆ. ಬಹುಶಃ ಇನ್ನು ಮಿಕ್ಕ ವಿಚಾರಗಳ ಬಗ್ಗೆ ಈಗಾಗಲೇ ಹೇಳಿದ್ದಾರೆ. ಇನ್ನೊಂದು ಮುಖ್ಯವಾಗಿ ಹೇಳುವುದೇನೆಂದರೆ Assisted Society ಎನ್ನುವ ವಿಚಾರಕ್ಕೆ ಕೆಲವು ಸಂದರ್ಭದಲ್ಲಿ ಕೆಲವು Financial Institutionsಗಳ control ಅನ್ನು ಕೂಡ ಸರ್ಕಾರ ಇಟ್ಟುಕೊಳ್ಳಬೇಕಾಗುತ್ತದೆ ಜಾಸ್ತಿ ನೀವು ಇವುಗಳಿಗೆ ಫ್ರೀ ಬಿಟ್ಟರೆ ನಾಳೆ ದಿವಸ ಹೇಳುವವರು ಕೇಳುವವರು ಇವಕ್ಕೆ ಇರುವುದಿಲ್ಲದಂತಾ ಗುತ್ತದೆ. ಸರ್ಕಾರ ಅಪೆಕ್ಸ್ ಬ್ಯಾಂಕ್‌ಗೆ ಮತ್ತು ಬೇರೆ ಬೇರೆ ಬ್ಯಾಂಕ್‌ಗಳಿಗೆ ಕೋಟ್ಯಾಂತರ ರೂ.ಗಳವರೆಗೆ ಗ್ಯಾರಂಟಿಯನ್ನು ಕೊಟ್ಟಿರುತ್ತದೆ. ಹೀಗಿರುವಾಗ ಅವರಿಗೆ ಯಾರು ಇಷ್ಟ ಬರುತ್ತಾರೋ ಅಂಥವರನ್ನು ಎಂ.ಡಿ.ಯನ್ನಾಗಿ ಮಾಡಿಕೊಂಡು ನಾಳೆ ಸರ್ಕಾರ ಮಾಡಿದ್ದ ಎಂ.ಡಿ.ಯನ್ನು ಬೇಡವೆಂದು

ಹೇಳಿ, ನಮಗೆ ಬೇಕಾದವರನ್ನು ಸೆಕ್ರೆಟರಿ ಮಾಡಿಕೊಳ್ಳುತ್ತೇವೆ ಎಂದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಸರ್ಕಾರಕ್ಕೆ ಈ ಬ್ಯಾಂಕ್‌ಗಳ ಕೆಲವು ವಿಚಾರಗಳಲ್ಲಿ ಕಂಟ್ರೋಲ್ ಇರಬೇಕು. ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರ ಕೆಲವು ಕಂಟ್ರೋಲ್‌ಗಳನ್ನು ಇಟ್ಟುಕೊಳ್ಳಲೇಬೇಕಾಗುತ್ತದೆ. ಆದುದರಿಂದ ಇವುಗಳಿಗೆ ಸಂಪೂರ್ಣವಾಗಿ free hand ಅನ್ನು ನೀವು ಕೊಡುವುದಕ್ಕೆ ಹೋಗಬೇಡಿ ಎನ್ನುವ ಮಾತನ್ನೂ ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಛೇರ್ಮನ್‌ರವರೆ, ಇವತ್ತು ವೈದ್ಯನಾಥ್‌ನ್ ಕಮಿಟಿ ವರದಿ ಆಧಾರದ ಮೇಲೆ ಸಹಕಾರ ಸಚಿವರ ಬಿಲ್ ಅನ್ನು ಮಂಡನೆ ಮಾಡಿದ್ದಾರೆ. ಏಕೆಂದರೆ ಸಹಕಾರ ಕ್ಷೇತ್ರದಲ್ಲಿ ಹಸ್ತಕ್ಷೇಪ ಇರಬಾರದು ಎಂಬ ಬಗ್ಗೆ ನನ್ನ ಕೆಲವು ಸಜೆಶನ್‌ಗಳಿವೆ. ಏಕೆಂದರೆ ಸಹಕಾರಿ ಕ್ಷೇತ್ರ ರಾಜಕೀಯ ಗೊಂದಲದಿಂದ ಕುಗ್ಗಿಹೋಗುತ್ತಿದೆ ಎಂದರೆ ತಪ್ಪಾಗಲಾರದು. ನಮ್ಮ ಸಹಕಾರಿ ಮಂತ್ರಿಗಳು ಈಗ ಇಲ್ಲಿಯೇ ಇದ್ದಾರೆ. ಯಾವುದೇ ಸೊಸೈಟಿಯಲ್ಲಿ ಷೇರಾಗಲಿ, ಬಂಡವಾಳವಾಗಲಿ ಇಲ್ಲದೇ ಹೋದರೆ ನಾಮಿನೇಶನ್ ಹಾಕುವುದಿಲ್ಲವೆಂದು ಸಹಕಾರ ಸಚಿವರಾದ ತಾವೇ ಹೇಳಿದ್ದೀರಿ. ಕೆಲವು ಕಡೆ ಹಾಕಿರುವಂಥ ಉದಾಹರಣೆಗಳು ಇವೆ. ನೀವು ಬೇಕಾದರೆ ಈ ಬಗ್ಗೆ ದಾಖಲೆ ತೆಗೆದು ನೋಡಿ. ಏಕೆಂದರೆ ಹಸ್ತಕ್ಷೇಪ ಯಾವ ರೀತಿಯಲ್ಲಿ ಆಗುತ್ತಿದೆ ಎಂದು ನಿಮಗೆ ಗೊತ್ತಾಗುತ್ತದೆ. ಈಗ ಶಿವಕುಮಾರ್‌ರವರು ಒಂದು ಮಾತನ್ನು ಹೇಳಿದರು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಬ್ಯಾಂಕ್ ಎಂದು. ನಾವಂತೂ ಯಾವತ್ತೂ ಕೂಡ ಬೆಂಗಳೂರು ಗ್ರಾಮಾಂತರ ಜಿಲ್ಲಾ ಬ್ಯಾಂಕ್‌ಗೆ ರಕ್ಷಣೆ ಕೊಡಿ ಎಂದು ನಿಮ್ಮ ಹತ್ತಿರ ಯಾವತ್ತೂ ಹೇಳಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ನಾನು ಹೇಳಿದ್ದು ನನ್ನ ಕೂಸು ಎಂದು.

ಶ್ರೀ ಹೆಚ್.ಡಿ.ರೇವಣ್ಣ : ಈಗ ನೀವೇ ಹೇಳಿದಿರಲ್ಲ. ಆ ಪಾರ್ಟಿ ಈ ಪಾರ್ಟಿ ಎಂದು ಎಲ್ಲಾ ಪಾರ್ಟಿಯವರು ರಕ್ಷಣೆ . . .

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ನೀವಿಬ್ಬರು ಮಾತನಾಡುತ್ತಿದ್ದರೆ ಚೆಂದ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಾಯ್ದುರವರೆ ತಾವು ಸ್ವಲ್ಪ ತಾಳ್ಮೆಯಿಂದ ಕುಳಿತುಕೊಳ್ಳಿ. ವಿಷಯವನ್ನು ತಿಳಿದುಕೊಂಡು ಮಾತನಾಡಬೇಕು. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಹೇಳಿದ್ದು ನಾನೇನು ನಿಜ ಎಂದು ಹೇಳುವುದಿಲ್ಲ. ಏಕೆಂದರೆ ಅದರಲ್ಲಿ ಈಗ ಇರುವವರು, ಅವರು ಬಿ.ಜೆ.ಪಿ. ಪಕ್ಷದ ಮುಖಂಡರೂ ಆಗಿದ್ದಾರೆ. ನಾವೇನು ಬೇಡವೆಂದು ಹೇಳುತ್ತಿಲ್ಲ. ರಕ್ಷಣೆಯನ್ನು ಹೇಗೆ ಕೊಡಲಾಗುತ್ತಿದೆ ಎಂದ ಲೆಕ್ಕ ಹಾಕಬೇಕಾಗುತ್ತದೆ. ಏಕೆಂದರೆ ಪಕ್ಷ ಬದಲಾವಣೆ ಆಗುತ್ತಿದ್ದಂತೆ ಅವರು ಬದಲಾಗುತ್ತಿರುತ್ತಾರೆ. ಈಗ ಕಾಂಗ್ರೆಸ್ ಇದ್ದರೆ ಅವರಿಗೆ ಬಳುವಳಿ ಕೊಡುವುದಕ್ಕೆ ಹೋಗುವಂಥದ್ದು. ಹೀಗಾಗಿ ನಾವೇನು ಬಳುವಳಿ ಕೊಡುವುದಕ್ಕೆ ಹೋಗಿಲ್ಲ ಸ್ವಾಮಿ. ನಾವು ಯಾರಿಗೂ ಬಳುವಳಿಯನ್ನು ಕೊಡುವುದಕ್ಕೆ ಹೋಗಿಲ್ಲ. ಆ ರೀತಿಯ ಕೆಟ್ಟ ಕೆಲಸವನ್ನು ಮಾಡುವುದಕ್ಕೆ ಹೋಗಿಲ್ಲ. ಈಗ ಸಹಕಾರ ಇಲಾಖೆಯಲ್ಲಿ ಸಿ.ಓ.ಡಿ. ಪ್ರಕರಣ ಎಷ್ಟಿದೆ ಎಂದು ಹೇಳಿ. ಎಷ್ಟು ಪ್ರಕರಣಗಳನ್ನು ಸಿ.ಓ.ಡಿ.ಗೆ ವಹಿಸಿ ಅಲ್ಲಿ ಏನೇನಾಗಿದೆ ಅದು ನಿಮಗೆ ಗೊತ್ತೆ? ಯಾವ ಪ್ರಕರಣಗಳು ಈಚೆಗೆ ಬಂದಿವೆ ಹೇಳಿ. ಏಕೆಂದರೆ ಕೆಲವನ್ನು ರಾಜಕೀಯ ದುರುದ್ದೇಶದಿಂದ ಇವರು ಕೆಲವು ಕಾಯಿದೆ ಮಾಡಿ ಸಹಕಾರ ಸಂಸ್ಥೆಗಳು ಸರ್ಕಾರದ ಹಿಡಿತದಲ್ಲಿರಬೇಕೆಂದು ಹೇಳುತ್ತಾರೆ. ಸಹಕಾರ ಹಿಡಿತದಲ್ಲಿ ಏಕೆ ಇರಬೇಕಾಗುತ್ತದೆ? ಏನಾದರೂ ತಪ್ಪು ಮಾಡಿದ್ದರೆ ಕ್ರಿಮಿನಲ್ ಕೇಸ್ ಹಾಕಿ. ಎಲ್ಲವನ್ನು ಸರ್ಕಾರದ ಹಿಡಿತದಲ್ಲಿಟ್ಟುಕೊಳ್ಳಬೇಕು ಎಂದೇನೂ ಇಲ್ಲ. ಏಕೆಂದರೆ ರಾಜಕೀಯ ಪಕ್ಷಗಳು ಬಂದಾಗ ಆ ಪಕ್ಷಗಳು ಅವರಿಗೆ ಅನುಕೂಲವಾಗುವ ಹಾಗೆ ಸಹಕಾರಿ ಕ್ಷೇತ್ರವನ್ನು ಬಳಸಿಕೊಳ್ಳುತ್ತಾರೆಂದರೆ ತಪ್ಪಾಗಲಾರದು. ಇವತ್ತು ಉದಾಹರಣೆಗೆ ಹೇಳುವುದಾದರೆ ಕೆಲವು ಸಹಕಾರಿ ಫೀಲ್ಡ್‌ನಲ್ಲಿ, ನೋಡಿ ಈಗ ನಮ್ಮ ಉದಾಸಿಯವರು ಇಲ್ಲಿಯೇ ಇದ್ದಾರೆ, ಸಕ್ಕರೆ ಕಾರ್ಖಾನೆ ವಿಚಾರ ಅವರಿಗೂ ತಿಳಿದಿದೆ. ಸಕ್ಕರೆ ಕಾರ್ಖಾನೆಗಳಲ್ಲಿ ಏನೇನು ನಡೆಯುತ್ತಿದೆ ಎಂದು ನೀವು ಹೇಳಿ. ಯಾರ್‍ಯಾರು ಲೋನ್ ತೆಗೆದುಕೊಂಡು ಏನೇನು ಮಾಡಿದ್ದಾರೆ ಎಂದು ನೀವು ದಯಮಾಡಿ ಹೇಳಿ. ಸಹಕಾರಿ ಸಚಿವರೆ ಇವತ್ತು ರಾಜ್ಯದ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರಾಗಿದ್ದಾರೆ. ಇವತ್ತು ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರು ತಾವಿದ್ದೀರಿ. ಸಹಕಾರಿ ಕ್ಷೇತ್ರದಲ್ಲಿ ಅಪೆಕ್ಸ್ ಬ್ಯಾಂಕ್‌ನಲ್ಲಿ ಏನೇನು ನಡೆದಿದೆ ಹೇಳಿ. ಅದಕ್ಕೆ ರಕ್ಷಣೆ. . .

ಶ್ರೀ ಲಕ್ಷ್ಮಣ ಸವದಿ (ಸಹಕಾರಿ ಸಚಿವರು) : ಸಹಕಾರಿ ಕ್ಷೇತ್ರದಲ್ಲಿ ನಡೆದಿರುವ ಹಗರಣಗಳ ಬಗ್ಗೆ, ಆಗತಕ್ಕಂಥ ದುರುಪಯೋಗಗಳ ಬಗ್ಗೆ ಬೇಕಾದರೆ ಪ್ರತ್ಯೇಕವಾಗಿಯೇ ಚರ್ಚೆಯನ್ನು ಇಟ್ಟುಕೊಳ್ಳೋಣ. ಆದರೆ ಈಗ ನೀವು ಬಿಲ್‌ಗೆ ಸಂಬಂಧಪಟ್ಟಂತೆ ಪೂರಕವಾಗಿರತಕ್ಕಂಥ ವಿಚಾರಗಳನ್ನು ಹೇಳಿದರೆ ಸೂಕ್ತವೆಂದು ನಿಮ್ಮಲ್ಲಿ ನನ್ನ ವಿನಂತಿ.

ಶ್ರೀ ಹೆಚ್.ಡಿ.ರೇವಣ್ಣ : ಈ ಬಿಲ್ ಮೇಲೆ ಹೇಳುವಾಗಲೇ ಇದರ ಉದ್ದೇಶವೇನಿದೆ ಎಂಬ ಬಗ್ಗೆ ಹೇಳಬೇಕಾಗುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ಸಹಕಾರಿ ಸಚಿವರೆ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷ ರಾಗಿದ್ದಾರೆ.

ಅವರೇ Apex Bank ಉಪಾಧ್ಯಕ್ಷರು, ಅವರ ಬ್ಯಾಂಕಿನಲ್ಲಿಯೇ ಏನು ಹಗರಣ ನಡೆದಿದೆ ಎನ್ನುವುದನ್ನು ಹೇಳಲಿ ನೋಡೋಣ. ಅದರ ಬಗ್ಗೆ ತನಿಖೆ ನಡೆಸುವುದಕ್ಕೆ ಇದುವರೆಗೆ ಅವಕಾಶ ಆಗಿದೆಯೇ? ಕಳೆದ ವಿಧಾನಸಭೆಯಲ್ಲಿ ನಾನು ಹೇಳಿದ್ದೆನು. ಉದಾಹರಣೆಗೆ ಹೇಳುವುದಾದರೆ NABARD ನಲ್ಲಿ 25 ಲಕ್ಷ ರೂಪಾಯಿ ಕೊಡಬೇಕು, ಅದಕ್ಕಿಂತ ಜಾಸ್ತಿ ಕೊಡುವ ಹಾಗೆ ಇಲ್ಲವೆಂದು ಒಂದು norms ಇದೆ. ಆ norms ಬಿಟ್ಟು ಅವರೇ ಕೊಟ್ಟು ಅದಕ್ಕೆ ಅವರೇ exemption ಕೊಡುತ್ತಾರೆ. 25 ಕೋಟಿ ರೂಪಾಯಿ ತಮಿಳುನಾಡಿನವರಿಗೆ ಕೊಟ್ಟರಲ್ಲ ಸಾರ್. ಅದು ಏನಾಯಿತು? ಇವತ್ತಿನವರೆಗೂ Section 64 enquiry ಮಾಡಿದ್ದೀರಾ? ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಾ? ಯಾವುದೇ ಅರ್ಜಿ ಇಲ್ಲ, ಏನೂ ಇರುವುದಿಲ್ಲ ಕ್ರಮ ತೆಗೆದುಕೊಳ್ಳುತ್ತೀರಿ. ಕಣ್ಣಿಗೆ ಕಾಣುವಂತಹ ವಿಚಾರದಲ್ಲಿ ನೀವು ಏನೂ ಮಾಡುವುದಿಲ್ಲವೆಂದರೆ ಏನರ್ಥ? ಉದಾಹರಣೆಗೆ ಹೇಳುವುದಾದರೆ Apex Bank ನಿಂದ ಯಾರ್ಯಾರಿಗೆ ಎಷ್ಟೆಷ್ಟು loan ಕೊಟ್ಟಿದ್ದೀರಿ. ನೂರಾರು ಕೋಟಿ ರೂಪಾಯಿ loan ಕೊಟ್ಟು ಹಣ ದುರುಪಯೋಗ ಆಗಿರುವಂತಾದ್ದಕ್ಕೆ ಇವತ್ತು ಯಾವುದೇ ರೀತಿಯಲ್ಲಿ Section 64 enquiry ಮಾಡುವುದಕ್ಕೆ ಅವಕಾಶ ಮಾಡಿಲ್ಲ. ಕಳೆದ ಬಾರಿ ಮಾನ್ಯ ಶರದ್ ಪವಾರ್‌ರವರು ಬಿಲ್ ಬಗ್ಗೆ ಹೇಳಿದರು, ಆದರೆ ಕೆಲವರು ಈ ಬಿಲ್‌ಗೆ ವಿರೋಧ ಮಾಡುತ್ತಿದ್ದರು. ಮಾನ್ಯ ಶರದ್ ಪವಾರ್ ಇದನ್ನು ಮಾಡಿದರೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ, ಒಪ್ಪಿಕೊಳ್ಳುತ್ತೇವೆ, ಇದನ್ನು ಮಾಡಲಿ ಸಂತೋಷ. ಆದರೆ ಸಹಕಾರಿ ರಂಗ ಎಲ್ಲಿಯವರೆಗೆ ಸರ್ಕಾರದ ಹಿಡಿತದಿಂದ ತಪ್ಪುವುದಿಲ್ಲವೋ

ಅಲ್ಲಿಯವರೆಗೆ ಇದು ಉದ್ಧಾರವಾಗುವುದಿಲ್ಲ. ಅದನ್ನು ಸಹಕಾರಿ ಮಂತ್ರಿಗಳ ಕಾಲದಲ್ಲಿ ಯಾದರೂ ಮಾಡಲಿ. ಸಹಕಾರಿಗೆ ಸಂಬಂಧಪಟ್ಟಂತೆ ಎರಡನೆಯ ಬಿಲ್ ಬರುತ್ತಿದೆ, ಎರಡನೆಯ ಬಿಲ್‌ನಲ್ಲಿ ಏನಿದೆ ಎನ್ನುವುದನ್ನು ಸ್ವಲ್ಪ ಹೇಳಲಿ. ಮೊದಲನೆಯ ಬಿಲ್ ಬಗ್ಗೆ ಮಾನ್ಯ ಶಿವಕುಮಾರ್‌ರವರು ಹೇಳಿದರು, ಬಹಳ ಸಂತೋಷ. ಯಾರು ತಪ್ಪು ಮಾಡಿದರೂ ಕ್ರಮ ತೆಗೆದುಕೊಳ್ಳಲಿ. ಬೆಂಗಳೂರು ಡಿಸಿಸಿ ಬ್ಯಾಂಕ್ ಇರಲಿ, ಯಾವುದೇ ಇರಲಿ, ದಾಕ್ಷಿಣ್ಯ ಇಲ್ಲದೆ ಕ್ರಮ ತೆಗೆದುಕೊಳ್ಳಿ, ನಾವು ಅದರ ವಿಚಾರದಲ್ಲಿ support ಮಾಡುವುದಕ್ಕೆ ಹೋಗುವುದಿಲ್ಲ. ಇನ್ನೊಂದು ಎರಡನೆಯ ಬಿಲ್ ಮಾರಕವಾದಂತಹ ಬಿಲ್ ತರುತ್ತಿದ್ದೀರ. ಅದರ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಏಕೆಂದರೆ ಆ ಬಿಲ್ ಬಗ್ಗೆ ದೀರ್ಘವಾಗಿ ಚರ್ಚೆಯಾದ ಮೇಲೆ ತೆಗೆದು ಕೊಂಡು ಬನ್ನಿ. ಇದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಹಸ್ತಕ್ಷೇಪ ಇರಬಾರದೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಸಹಕಾರಿ ಕ್ಷೇತ್ರ ಇವತ್ತು ರಾಜಕೀಯ ಹಸ್ತಕ್ಷೇಪದಿಂದ ಅಧೋಗತಿಗೆ ಹೋಗುತ್ತಿದೆ. ಇವತ್ತು ಉದಾಹರಣೆಗೆ ಹೇಳುವುದಾದರೆ ಒಬ್ಬ ಅಧಿಕಾರಿ ಮೇಲೆ ಚಾರ್ಜ್ ಮಾಡಿ ಲೋಕಾಯುಕ್ತ enquiry ಮಾಡ ಬೇಕೆಂದು ಮಾಡುತ್ತಾರೆ. ಅವನಿಗೆ ಎರಡೇ ದಿನದಲ್ಲಿ retirement ಕೊಡುತ್ತಾರೆ. ಏಕೆಂದರೆ ಸಹಕಾರಿ ರಂಗದಲ್ಲಿ ನಾಳೆ ಬೆಳಿಗ್ಗೆ ಲೋಕಾಯುಕ್ತದಿಂದ ರೈಡ್ ಆಗುತ್ತದೆಂದು ಎರಡೇ ದಿನದಲ್ಲಿ, ಸಾಯಂಕಾಲ ರಾಜೀನಾಮೆ ಬರೆದು ಕೊಟ್ಟು, ಬೆಳಿಗ್ಗೆ ಎದ್ದು Co-operative Minister ಹತ್ತಿರ ಕೈಯಲ್ಲಿ ತೆಗೆದುಕೊಂಡು ಹೋಗಿ File approve ಮಾಡಿಸಿಕೊಂಡು ಬಂದಿರುವಂತಹ ಉದಾಹರಣೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ, ಆದರೆ ನಮ್ಮ ಪಕ್ಷದ ಅಭ್ಯರ್ಥಿಯಾಗಿ ನಿಂತಂತಹ ಒಬ್ಬರಿಗೆ ಮೂರು ತಿಂಗಳಾದರೂ retirement ಕೊಡಲಿಲ್ಲ. ಅದರ ಬಗ್ಗೆ ಹೇಳಬೇಕೆಂದರೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಒಂದು ದಿನ separate ಚರ್ಚೆ ಮಾಡಿ ಎಂದು ಹೇಳಿದ್ದೀರಲ್ಲ, ಒಂದು ಸಮಯವನ್ನು ಚರ್ಚೆ ನಿಗದಿ ಪಡಿಸಿ, ಅದರ ಬಗ್ಗೆ ಎಳೆಎಳೆಯಾಗಿ ಬಿಡಿಸಿ ಹೇಳುವಂತಹ ಕಾಲ ಬರುತ್ತದೆ, ಆಮೇಲೆ ಹೇಳುತ್ತೇನೆ. ಇದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೇ, ಬಹಳ ದಿನಗಳಿಂದ ನಿರೀಕ್ಷೆಯಲ್ಲಿದ್ದಂತಹ ಈ ತಿದ್ದುಪಡಿ ವೈದ್ಯನಾಥನ್ ಕಮಿಟಿ ರಿಪೋರ್ಟ್ ಮೇಲೆ ಮಾಡುತ್ತಿರುವಂಥಾದ್ದು, ಒಬ್ಬ ಸಹಕಾರಿಯಾಗಿ ನಾನೂ ಕೂಡ ಸ್ವಾಗತ ಮಾಡುತ್ತೇನೆ. ಏಕೆಂದರೆ ಹಿಂದೆ ವೈದ್ಯನಾಥನ್ ಕಮಿಟಿ ರಿಪೋರ್ಟ್ ಬಂದಮೇಲೆ ರಾಜ್ಯ ಸರ್ಕಾರ ಬಿ.ಎಸ್. ವಿಶ್ವನಾಥನ್, ಮಾನ್ಯ ನಾಣಯ್ಯನವರು, ಮಾನ್ಯ ಶಿವಾನಂದ್ ಪಾಟೀಲ್‌ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಿ ರಾಜ್ಯದ ಎಲ್ಲಾ ಹಿರಿಯ ಸಹಕಾರಿಗಳನ್ನು ಕರೆದು ಹತ್ತಾರು ಬಾರಿ ಚರ್ಚೆಯಾಗಿ ಇವತ್ತು ವೈದ್ಯನಾಥನ್ ಸಮಿತಿಯನ್ನು ಒಪ್ಪಿಕೊಳ್ಳುವುದಕ್ಕೆ ಎಲ್ಲರೂ ಕೂಡ ಶಿಫಾರಸ್ಸು ಮಾಡಿರುವ ಹಾಗೆ ಇವತ್ತು ಕಾನೂನು ಬಂದಿದೆ. ಇದರಿಂದ ಕೇಂದ್ರ ಸರ್ಕಾರದ ಬಹಳಷ್ಟು ಹಣ ಸಹಕಾರಿ ಸಂಸ್ಥೆಗಳಿಗೆ ಹರಿದು ಬರುತ್ತದೆ. ಅವರು ಹಾಕಿರುವ ನಿಬಂಧನೆ ಗಳನ್ನು ಒಪ್ಪಿಕೊಂಡ ಮೇಲೆ, ಅದು ಅತ್ಯುತ್ತಮವಾದಂತಹ ಕಾನೂನು, ಅದರಲ್ಲಿ ಎರಡು ಮಾತಿಲ್ಲ ಎನ್ನುವುದನ್ನು ಕೂಡ ನಾವು ಒಪ್ಪುತ್ತೇವೆ. ಈಗಾಗಲೇ ಒಂದು ಸಣ್ಣ ಬದಲಾವಣೆ ವಿಶೇಷವಾಗಿ ಪಿಕಾರ್ಡ್ ಬ್ಯಾಂಕ್ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಸೂಚನೆ ಮಾಡಿದರು. ಸೆಕ್ಷನ್ 121ರಲ್ಲಿ ಅವರಿಗೆ ಏನು ತೊಂದರೆಯಾಗುತ್ತದೆ ಎಂದರೆ cadre management ಮಾಡುವುದರಲ್ಲಿ ತಾವು ಸ್ವಲ್ಪ ಸಮಯ ಕೊಡದೇ ಹೋದರೆ 1,135 ಜನ ಆ ಬ್ಯಾಂಕಿನ ಸಿಬ್ಬಂದಿಗಳು ಏನಿದ್ದಾರೆ, ಅದರಲ್ಲಿ 70 ಜನ ನ್ಯಾಯಾಲಯದ ಮುಂದೆ ಇದ್ದಾರೆ, ಇನ್ನು ಸುಮಾರು 177 ಜನರ ಮೇಲೆ ಪ್ರಕರಣಗಳು ಇವೆ, ಅವರು ಕೇಸುಗಳನ್ನು ಎದುರಿಸುತ್ತಿದ್ದಾರೆ. ಅವು ಇತ್ಯರ್ಥವಾಗುವುದಕ್ಕೆ ಸಮಯಾವಕಾಶ ಬೇಕಾಗುತ್ತದೆ. ಅದರಲ್ಲಿ ತಾವು ಒಂದು ವರ್ಷಕ್ಕೆ ಮಾತ್ರ ತಿದ್ದುಪಡಿಯನ್ನು ಮಾಡಿಕೊಳ್ಳಬೇಕೆಂದಿದ್ದರೆ, ತಾವು ಕೇವಲ ಮೂರು ತಿಂಗಳು ಅವಕಾಶ ಕೊಟ್ಟಿದ್ದೀರಿ. ಆ ಸಮಯ ಸಾಲುವುದಿಲ್ಲ. ಅದನ್ನು ತಾವು ಡಿಸೆಂಬರ್‌ವರೆಗೆ ತಿದ್ದುಪಡಿ ಮಾಡಿಕೊಳ್ಳುವುದು ಸೂಕ್ತವೆಂದು ತಾವು ಮಾನ್ಯ ಹಿರಿಯ ಸಹಕಾರಿಗಳಾಗಿ ಹೇಳಿದ್ದೀರಿ. ಸಹಕಾರಿ ಕ್ಷೇತ್ರದಲ್ಲಿ ಸರ್ಕಾರಿ ಹಸ್ತಕ್ಷೇಪ ಕಡಿಮೆಯಾಗಬೇಕೆನ್ನುವ ಉದ್ದೇಶದಿಂದಲೇ ಇದನ್ನು ಮಾಡಿರುವುದು. ಆದರೆ ಇದರಲ್ಲಿ Section 14 (ಎ) ಅಮೆಂಡ್‌ಮೆಂಟ್ ಅನ್ನು ತಾವು ತರುತ್ತಿದ್ದೀರಿ. ಇದು ಹಿಂದೆ ಇತ್ತು. ಮಾನ್ಯ ಎಸ್.ಎಸ್. ಪಾಟೀಲ್‌ರವರು ಸಚಿವರಾಗಿದ್ದಾಗ ಇದನ್ನು ತಿದ್ದುಪಡಿ

ಮಾಡಿದರು. ಮತ್ತೆ ಕೇಂದ್ರೀಕೃತವಾಗಿ ನೀವು ಅಧಿಕಾರವನ್ನು Registrar ಗೆ ಕೊಡುತ್ತಿದ್ದೀರೇನೋ ಎಂದು ಅನಿಸುತ್ತಿದೆ. ಅದರ ಬಗ್ಗೆ ತಾವು re-think ಮಾಡುವುದು ಒಳ್ಳೆಯದೇನೋ. ಏಕೆಂದರೆ General Body Meeting Resolution ಇಲ್ಲದೇ ನೀವು ಯಾವುದಾದರೂ ಒಂದು ಸಂಸ್ಥೆಯನ್ನು ಕೊಡಿಸಬಹುದು ಅಥವಾ ತೆಗೆಯಬಹುದು ಎಂದು Power ಅನ್ನು ಕೊಡುವುದಕ್ಕೆ ಹೋಗುತ್ತಿದ್ದೀರಿ. ಅದರಿಂದ ಮತ್ತೇ ಅದು misuse ಆಗುತ್ತದೇನೋ, ದುರುಪಯೋಗ ಮಾಡಿಕೊಳ್ಳುತ್ತಾರೇನೋ ಎಂದು ಅನಿಸುತ್ತದೆ. ಏಕೆಂದರೆ ಸಹಕಾರಿ ಸಂಸ್ಥೆಗಳ ವಿಚಾರದಲ್ಲಿ ಏನಾಗುತ್ತದೆ ಎಂದರೆ ವೈಯುಕ್ತಿಕ ದ್ವೇಷಗಳಿಗಾಗಿ ಆ ಸಂಸ್ಥೆಗಳನ್ನು ಹಾಳು ಮಾಡುವುದನ್ನು ನಾವು ನೋಡುತ್ತಿದ್ದೇವೆ. ನಾಡಗೌಡ ಅಧ್ಯಕ್ಷನಾಗಿದ್ದಾನೆ, ಅವನು ಸರಿಯಿಲ್ಲ ಎಂದು ಹೇಳಲಿ. ಆದರೆ ಆ ಸಂಸ್ಥೆಯೇ ಸರಿಯಿಲ್ಲವೆನ್ನುವ ಮಟ್ಟಕ್ಕೆ ಹೋಗುತ್ತಾರೆ, ಅದು ಆಗಬಾರದು. ಆ ಸಂಸ್ಥೆ ಬೆಳೆಯಬೇಕು ಎನ್ನುವ ದೃಷ್ಟಿಯಿಂದ ಈ ತರಹದ powers ಅನ್ನು ನೀವು ಮತ್ತೆ delegate ಮಾಡುವುದರಿಂದ, ನಾವೇ ಅಲ್ಲಿ ಕುಳಿತವರು, ಇಲ್ಲಿ ಕುಳಿತವರು ಎಂದು ಹೇಳುವುದಲ್ಲ, ಯಾರೇ ಬಂದಾಗಲೂ ಅದನ್ನು misuse ಮಾಡಿಕೊಳ್ಳುವುದಕ್ಕೆ ಅವಕಾಶಗಳಾಗುತ್ತವೆ. ತಾವು ಹಿರಿಯ ಸಹಕಾರಿಗಳಿದ್ದೀರಿ. ಅದನ್ನು ಮರುಪರಿಶೀಲನೆ ಮಾಡುವುದು ಸರಿಯೇನೋ ಎಂದು ಹೇಳುತ್ತಾ, ಒಟ್ಟಾರೆ ಈ ತಿದ್ದುಪಡಿ ಕಾನೂನು ಅವಶ್ಯಕತೆ ಇದೆ, ಇದನ್ನು ನಾನು ಸ್ವಾಗತ ಮಾಡಿ ತಿದ್ದುಪಡಿ ಮಾಡಬಹುದು ಎನ್ನುವುದನ್ನು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಸಹಕಾರಿ ಸಚಿವರು ಸ್ವಲ್ಪ explain ಮಾಡಿದರೆ ಒಳ್ಳೆಯದೇನೋ ಎಂದು ಮನವಿಯನ್ನು ಮಾಡುತ್ತೇನೆ. ನೀವು ಅಧಿಕಾರ ಕೊಡುವುದು ಅಷ್ಟು ಸೂಕ್ತವಲ್ಲ. ಏಕೆಂದರೆ ಹಿಂದೆ experience ಆಗಿದೆ. Experience ಆದಮೇಲೆ ಮಾನ್ಯ ಎಸ್.ಎಸ್. ಪಾಟೀಲ್‌ರ ಕಾಲದಲ್ಲಿ ಅದಕ್ಕೆ ತಿದ್ದುಪಡಿಯಾಗಿದೆ. ಮತ್ತೇ ಈಗ ಅದನ್ನು ವಾಪಸ್ಸು ತಿದ್ದುಪಡಿ ಮಾಡುತ್ತಿದ್ದೀರಿ. ಇದರ ಬಗ್ಗೆ explain ಮಾಡಬೇಕೆನ್ನುವ ಮನವಿಯನ್ನು ಮಾಡಿ ಈ ಬಿಲ್ ಅನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೇ, ಅನೇಕ ನಮ್ಮ ವಿರೋಧ ಪಕ್ಷದ ನಾಯಕರು ಮೊದಲು ಮಾಡಿಕೊಂಡು ಹಿರಿಯ ಸಹಕಾರಿಗಳು ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಮತ್ತು

ತಮ್ಮ ಭಾವನೆಗಳನ್ನು ಕೂಡ ಹಂಚಿಕೊಂಡಿದ್ದಾರೆ. ಅದರಲ್ಲಿ ಪ್ರಮುಖವಾಗಿರುವಂತಾದ್ದು ಮಾನ್ಯ ಟಿ.ಬಿ. ಜಯಚಂದ್ರ ರವರು ಒಂದು ಪ್ರಶ್ನೆಯನ್ನು ಎತ್ತಿದರು. Common Cadre Authority ಅನ್ನು ಮೂರು ತಿಂಗಳಿಗೆ ಬದಲಾಗಿ ಆರು ತಿಂಗಳವರೆಗೆ ಮುಂದುವರೆಸಿದರೆ ಸೂಕ್ತವಾಗಬಹುದೇನೋ ಎಂದು ಅವರು ಸಲಹೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು NABARD ಜೊತೆ ಸಮಾಲೋಚನೆ ಮಾಡುತ್ತೇನೆ. NABARD ನ ಅಧಿಕಾರಿಗಳು ಮತ್ತು ಅಲ್ಲಿರುವಂತಹ ಅಧ್ಯಕ್ಷರಿಗೆ ಮನವರಿಕೆ ಮಾಡುತ್ತೇನೆ. ಅವರು ಒಪ್ಪಿಗೆ ಕೊಟ್ಟಿದ್ದಾದರೆ ನಾನು ಮೂರು ತಿಂಗಳ ಬದಲಿಗೆ ಆರು ತಿಂಗಳವರೆಗೆ ಅದನ್ನು ಮುಂದುವರೆಸುವುದಕ್ಕೆ ಖಂಡಿತವಾಗಿ ಸಿದ್ಧನಿದ್ದೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಸ್ವಾಗತ ಮಾಡುವುದರ ಜೊತೆಗೆ ಅವರು ಒಂದು ಒಳ್ಳೆಯ ಸಲಹೆಯನ್ನು ಕೂಡ ಕೊಟ್ಟಿದ್ದಾರೆ. ಇನ್ನುಳಿದಿರತಕ್ಕಂಥ ಸಂಘಸಂಸ್ಥೆಗಳು ಸರ್ಕಾರದ ಹಿಡಿತದಲ್ಲಿರಬೇಕು, ಆಡಳಿತ ಮಂಡಳಿ ದಾರಿ ತಪ್ಪಿದಾಗ ಅವರನ್ನು ತಿದ್ದುವಂತಹ ಒಂದು ಕಾನೂನು ತಮ್ಮ ಕಡೆ ಇರಬೇಕು ಎನ್ನುವಂಥದ್ದನ್ನು ಹೇಳಿದ್ದಾರೆ. ಅಮೆಂಡ್‌ಮೆಂಟ್‌ಗೆ ತಂದಂತಹ ಈ ಬಿಲ್ ನಲ್ಲಿ ಅದು ಇಲ್ಲ, ಯಥಾಸ್ಥಿತಿ ಮೊದಲು ಏನಿತ್ತೋ ಅದೇ ರೀತಿ ಮುಂದುವರೆಯುತ್ತದೆ, ಅದರ ಬಗ್ಗೆ ಆತಂಕ ಪಡುವ ಅವಶ್ಯಕತೆ ಇಲ್ಲ. ಏಕೆಂದರೆ ತಾವು Assurance Society ಬಗ್ಗೆ ಹೇಳಿದಿರಿ. ಇಲ್ಲಿ ತಂದಿರುವಂತಹ ಅಮೆಂಡ್‌ಮೆಂಟ್‌ನಲ್ಲಿ ಇಲ್ಲ, ಮೊದಲು ಹೇಗಿದೆಯೋ ಅದೇ ರೀತಿ ಇದೆ. ಸಹಕಾರ ಸಚಿವರು ಇದ್ದಂತಹ ಸಂದರ್ಭದಲ್ಲಿ ಏನೊಂದು ವ್ಯವಸ್ಥೆ ಇತ್ತು, ಇವತ್ತಿನವರೆಗೂ ಅದೇ ವ್ಯವಸ್ಥೆ ಮುಂದುವರೆದಿದೆ, ಮುಂದೂ ಕೂಡ ಮುಂದುವರೆಯುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರ ಜೊತೆಗೆ ಮಾನ್ಯ ರೇವಣ್ಣನವರು ಈಗ ತಂದಿರುವಂತಹ ವಿಧೇಯಕದ ಬಗ್ಗೆ ಸಲಹೆ ಸೂಚನೆ ಕೊಡುತ್ತಾರೆನ್ನುವ ನಿರೀಕ್ಷೆಯಲ್ಲಿ ಇದ್ದೆ, ಆದರೆ ಅವರು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗಲಿಲ್ಲ. ಆದರೆ ಅವರು ಹೇಳಿರತಕ್ಕಂಥದ್ದು ಏನೆಂದರೆ....

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಶರದ್ ಪವಾರ್ ರವರು Agriculture Minister ಇದ್ದಾಗ 2005ರಲ್ಲಿ ರಾಜ್ಯಕ್ಕೆ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ತರಬೇಕೆಂದು ಇದ್ದರು. ಆದರೆ ಸಹಕಾರಿ ರಂಗದಲ್ಲಿ ಯಾವ ರೀತಿ ಆಗುತ್ತದೆ ಎನ್ನುವುದಕ್ಕೆ ಕೆಲವು interference ಆಯಿತು. ಉದಾಹರಣೆಗೆ ಚಿಕ್ಕಮಗಳೂರು ಬ್ಯಾಂಕ್ ಮುಳುಗಿಹೋಗಿತ್ತು.

ಮುಳುಗಡೆಯಾದ bank ಗೆ ನೀವು ಯಾವ ರೀತಿ interference ಆಗಿ ಆ Bank ಗೆ ಎಷ್ಟು ಕಿರುಕುಳ ಕೊಟ್ಟಿದ್ದೀರಿ. ಒಂದು ಮುಳುಗಡೆ ಅದ ಬ್ಯಾಂಕ್ 18ಕೋಟಿ ಲಾಭ ಮಾಡಿದ್ದೆ ತಪ್ಪಾ? ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ನಾನು ಬೇರೆ ಯಾವ ದೃಷ್ಟಿಯಿಂದಲೂ ಹೇಳಿಲ್ಲ. ನಾನು ಹೇಳುವಂಥದ್ದು ರಾಜಕೀಯವಾಗಿ ಕೆಲವನ್ನು ಇಕ್ಕಟ್ಟಿಗೆ ಸಿಕ್ಕಿ ಹಾಕುವುದು ಬೇಡ. ನಾನು ಏನು ವಿರೋಧ ಮಾಡಲ್ಲ, ಮಾಡಿ. ಅಂಥದಕ್ಕೆ ಅವಕಾಶವನ್ನು ಕೊಡಬೇಡಿ, ನೀವು ಪ್ರಾಮಾಣಿಕರಾಗಿದ್ದೀರಿ, ನೀವು ಒಳ್ಳೆಯವರು. ನೀವು ಕೆಟ್ಟವರು ಅಂಥ ಅಲ್ಲ. ನಾನು ಸರಿಯಾಗಿ ಹೇಳಿದ್ದೇನೆ, ಈಗ ಕೆಲವು ಜಿಲ್ಲಾ ಬ್ಯಾಂಕ್‌ಗಳಿಗೆ ಬರುವಂಥದ್ದು ಇವೆ. ಆದುದರಿಂದ ನಾನು ಹೇಳುತ್ತಿದ್ದೇನೆ, ನನಗೆ ಏನು ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : Section 98 dis-qualification ಬಗ್ಗೆ ಹೇಳಿ ಎಂದೆ.

ಶ್ರೀ ಲಕ್ಷ್ಮಣ ಸ. ಸವದಿ : ತಾವು ಏನು Section 98 dis-qualification ಬಗ್ಗೆ ಕೇಳುತ್ತಿದ್ದೀರಿ. ಈಗಾಗಲೇ ಕಾನೂನು ರಚನೆ ಮಾಡುತ್ತಿದ್ದೇವೆ. ಆ ಕಾನೂನು ಚೌಕಟ್ಟಿನಲ್ಲಿ ಯಾವುದೇ ವ್ಯಕ್ತಿಗಳು ಇರಲಿ, ಯಾರೇ ದೊಡ್ಡವರು ಇದ್ದರೂ ಕೂಡ ನಾವು ಕಾನೂನು ಪ್ರಕಾರವೇ ಕ್ರಮ ತೆಗೆದುಕೊಳುತ್ತೇವೆ. ಅದರ ಬಗ್ಗೆ ಯಾವುದೇ ರೀತಿಯ ಸಂದೇಹ ತಮಗೆ ಬೇಡ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಚೇರ್ಮನ್ ರವರೆ,.. ..

ಶ್ರೀ ಲಕ್ಷ್ಮಣ ಸ. ಸವದಿ : ತಾವು ಕುಳಿತುಕೊಳ್ಳಿ, ನಾನು ಮಾತನಾಡಿದ ಮೇಲೆ ನೀವು clarification ಹೇಳುವಿರಂತೆ, ನಾನು ಹೇಳುತ್ತೇನೆ. ನೀವು ಮಾತನಾಡುವಾಗ ಎರಡು ಗಂಟೆಗಳು ಚರ್ಚೆ ಮಡಿ, ಅದಕ್ಕೆ ನನ್ನದು ಏನು ತಕರಾರು ಇಲ್ಲ. ನೀವು ಏನು ಪ್ರಶ್ನೆ ಕೇಳಿದರೂ ಅದಕ್ಕೆ ನಾನು ಸಿದ್ಧನಿದ್ದೇನೆ.

ಆದರ ಬಗ್ಗೆ ಪ್ರಶ್ನೆ ಇಲ್ಲ. ತಾವು ಕುಳಿತುಕೊಳ್ಳಿ, ನಾನು ಉತ್ತರ ಪೂರ್ತಿ ನೀಡಿದ ಮೇಲೆ, ನೀವು Clarification ಕೇಳಿ. ನನಗೆ ಗೊತ್ತಿದೆ, ನಾನು 20 ವರ್ಷಗಳಿಂದ ಈ Chair ನಲ್ಲಿ ಕೆಲಸ ಮಾಡುತ್ತಿದ್ದೇನೆ. ಪ್ರತಿಯೊಬ್ಬರ ಮನೆಯ ದೋಸೆಯು ತೂತು ಇದೆ. ಅದನ್ನು ತೆಗೆಯುತ್ತಾ ಹೋದರೆ ಎಲ್ಲರದು ಹೊರಗೆ ಬರುತ್ತದೆ. ಅದರ ಬಗ್ಗೆ ತಾವು special ಆಗಿ notice ಕಳುಹಿಸಿ, ಒಂದು ದಿವಸ ಬೇಕಾದರೆ ಕುಳಿತು ಚರ್ಚೆ ಮಾಡೋಣ. ಅದು ಯಾವುದೇ Apex Bank ಇರಲಿ, DCC Bank ಇರಲಿ, ಯಾವುದೇ ಇರಲಿ, ಯಾವುದು ಬೇಕಾದರೂ ಕುಳಿತು ಚರ್ಚೆ ಮಾಡೋಣ. ಅದರ ಬಗ್ಗೆ ಏನು ತಕರಾರು ಬೇಡ, ನೀವು ಪ್ರತ್ಯೇಕವಾದ ಒಂದು ನೋಟೀಸ್ ಕಳುಹಿಸಿಕೊಡಿ, ಅದರ ಬಗ್ಗೆ ಚರ್ಚೆ ಮಾಡೋಣ. ಅದರ ಬಗ್ಗೆ ನಮ್ಮವಾದ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಚೇರ್ಮನ್‌ರೆ, ಒಂದು ಕೆಲಸ ಮಾಡಿ, ಒಂದು ದಿವಸ one hour ಚರ್ಚೆ ಕೊಡಿ. ಒಂದು ದಿವಸ ಕಾಲಾವಧಿಯನ್ನು ನಿಗದಿ ಪಡಿಸಿ, ದಾಖಲೆ ಸಮೇತ ಬೇಕಾದರೆ ಹೇಳುತ್ತೇನೆ. ತಾವು ಒಂದು ದಿವಸ ನಿಗದಿ ಮಾಡಿ, ಮಾನ್ಯ ಸಹಕಾರ ಮಂತ್ರಿಯವರಿಗೆ ಹೇಳುತ್ತೇನೆ.

ಶ್ರೀ ಲಕ್ಷ್ಮಣ ಸ.ಸವದಿ : ಇದಕ್ಕೆ ಪೂರಕವಾಗಿ ನೀವು ಏನು ಸಲಹೆ ಕೊಡುತ್ತೀರೊ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಸಲಹೆ ಕೊಡುವಾಗ ಹೇಳುತ್ತೇನೆ.

ಶ್ರೀ ಲಕ್ಷ್ಮಣ ಸ.ಸವದಿ : ಅದರ ಬಗ್ಗೆ ಪ್ರತ್ಯೇಕವಾದ ಒಂದು ಸೂಚನೆಯನ್ನು ಕಳುಹಿಸಿ ಕೊಡಿ, ಚರ್ಚೆ ಮಾಡೋಣ. ಬಿಲ್‌ನಲ್ಲಿರುವಂಥ ಅನೇಕ ವಿಚಾರಗಳನ್ನು ಸನ್ಮಾನ್ಯ ನಾಡಗೌಡರು ವ್ಯಕ್ತಪಡಿಸಿದರು. ಆ ಬಿಲ್ ನಲ್ಲಿ ವಿಶೇಷವಾಗಿ ಏನೂ ವ್ಯತ್ಯಾಸ ಇಲ್ಲ. Section 14 (ಎ) ನಲ್ಲಿ ತಂದಿರುವಂಥ ಬಿಲ್‌ನಲ್ಲಿ ಯಾವುದೇ ಹೊಸ ಬದಲಾವಣೆ ಅಥವಾ ಯಾರಿಗಾದರೂ ತಲೆ ಭಾರ ಮಾಡುವಂಥದ್ದು ಅಥವಾ ತಲೆ ಕಿತ್ತು ಕೊಳ್ಳುವಂಥ ಕೆಲಸವನ್ನು ನಾವು ಮಾಡುತ್ತಿಲ್ಲ. ಹಿಂದೆ ಮಾನ್ಯ ಜೆ.ಹೆಚ್.ಪಟೇಲ್‌ರವರ ಕಾಲದಲ್ಲಿ ಅನೇಕ ಜಿಲ್ಲಾ ವಿಂಗಡನೆಗಳನ್ನು ಮಾಡಿದರು. ಈ ಜಿಲ್ಲಾ ವಿಗಡನೆಯಾದಂಥ ಸಂದರ್ಭದಲ್ಲಿ ಆ ಜಿಲ್ಲೆಗಳಿಗೆ DCC Bank ಗಳನ್ನು ರೂಪಿಸುವುದಕ್ಕೆ ಆಗಲಿಲ್ಲ. ಅನೇಕ ಸಂದರ್ಭಗಳನ್ನು ಕೆಲವೊಂದು ಜಿಲ್ಲೆಯವರು ಒಪ್ಪಿಗೆಯನ್ನು ಕೊಟ್ಟಮೇಲೆ ಇವತ್ತು ಬಿಜಾಪುರ, ಧಾರವಾಡ ಮತ್ತು ಬಾಗಲಕೋಟೆ ಇರಬಹುದು. ಇಲ್ಲಿ General Body

ಮಾಡಿದರು. ನಿಮ್ಮ ಜಿಲ್ಲೆಗೆ ನೀವು ತೆಗೆದುಕೊಳ್ಳಿ ಎಂದು ಕೊಟ್ಟರು, ಅಲ್ಲಿ ಆಯಿತು. ಶಿವಮೊಗ್ಗ ಮತ್ತು ದಾವಣಗೆರೆ bifurcation ಆಯಿತು, ಅವರು resolution ಮಾಡಿದರು, ದಾವಣಗೆರೆಯವರನ್ನು ತೆಗೆದುಕೊಳ್ಳಿಯೆಂದು ಹೇಳಿದರು, ಅದು ಆಯಿತು ಇದು ಡಿ.ಕೆ.ಶಿವಕುಮಾರ್‌ರವರ ಕಾಲದಲ್ಲಿ ಆಯಿತು. ಇವತ್ತಿನ ದಿವಸ ಅಲ್ಲಿಯೂ ಆಯಿತು, ಇಲ್ಲಿಯೂ ಆಯಿತು. ಅನೇಕ ಜಿಲ್ಲೆಗಳು ಏನು ವಿಂಗಡನೆ ಆಗಿವೆ. ಇವತ್ತು ಮೈಸೂರು ಮತ್ತು ಚಾಮರಾಜನಗರ ಇದೆ. ಕೊಪ್ಪಳ ಮತ್ತು ರಾಯಚೂರು ಇದೆ. ಮಾನ್ಯ ನಾಡಗೌಡರು ಹೇಳಿದರು, ನಾಳೆ ದಿವಸ ಒಂದು ವೇಳೆ ರಾಯಚೂರಿನಲ್ಲಿ ರುವಂಥ ಜಿಲ್ಲಾ ಮಧ್ಯವರ್ತಿ ಬ್ಯಾಂಕ್‌ನವರು ಸರ್ವ ಸಾಧಾರಣ ಬ್ಯಾಂಕ್‌ನಲ್ಲಿ ಒಪ್ಪಿಗೆ ಕೊಡದೇ ನೀವು ಏನು ಮಾಡುತ್ತೀರಾ? ಅಲ್ಲಿ ನೀವು ಒಳ್ಳೆಯವರು ಇದ್ದೀರಿ, ಕೊಟ್ಟಿದ್ದೀರಿ. ಕೆಲವೊಂದರಲ್ಲಿ ಕೊಟ್ಟಿಲ್ಲ, ಏನು ಮಾಡುತ್ತೀರಾ? ಒಂದು ವೇಳೆ ನೀವು Geberal Body Meeting ನಲ್ಲಿ approval ಕೊಡದೇ ಇದ್ದರೆ, ವಿಂಗಡನೆ ಅಗಿರುವ ಜಿಲ್ಲೆಯವರಿಗೆ ಅನ್ಯಾಯವಾಗುತ್ತದೆ. ನಾವು ತಾಲ್ಲೂಕು ವಿಂಗಡನೆಯನ್ನು ಮಾಡುತ್ತೇವೆ, ಹೊಸ ತಾಲ್ಲೂಕುಗಳ ರಚನೆಯಾಗುತ್ತದೆ, ಹೊಸ ತಾಲ್ಲೂಕುಗಳ ರಚನೆಯಾಗಿರತಕ್ಕಂಥ ಸಂದರ್ಭ ದಲ್ಲಿ, ತಾಲ್ಲೂಕು ಮಟ್ಟದ ಸಂಘಗಳನ್ನು ವಿಂಗಡನೆ ಮಾಡಿ ಕೊಡಬೇಕಾ ಗುತ್ತದೆ. ಆ ಒಂದು ಹಿನ್ನಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಈ ಒಂದು ಕಾನೂನನ್ನು ತರಲಾಗುತ್ತಿದೆಯೇ ಹೊರತಾಗಿ ಬೇರೆ ಉದ್ದೇಶ ಏನೂ ಇಲ್ಲ. ಇಲ್ಲಿ bifurcation ಮಾಡುವುದಕ್ಕೆ ಮತ್ತು ಪುನಃ ಕೂಡಿಸುವುದಕ್ಕೆ ಎಲ್ಲಿ ಹಾನಿಯನ್ನು ಅನುಭವಿಸುವಂಥ ಸೂಚನೆಗಳು ಇರುತ್ತವೆ. ಅವುಗಳನ್ನು ಕೂಡಿಸುವುದಕ್ಕೆ ಮತ್ತು ಜಿಲ್ಲೆಗಳು ಮತ್ತು ತಾಲ್ಲೂಕುಗಳು ವಿಂಗಡನೆಯಾ ಗುವಂಥ ಸಂದರ್ಭದಲ್ಲಿ ಇದನ್ನು ಪ್ರತ್ಯೇಕಗೊಳಿಸುವುದಕ್ಕೆ ಸರ್ಕಾರ ಒಂದು legislative power ಅನ್ನು ಕೊಡುತ್ತಿದೆಯೇ ಹೊರತಾಗಿ ಬೇರೇನೂ ಉದ್ದೇಶವಿಲ್ಲ. ಇದರಿಂದ ಸಾರ್ವಜನಿಕರಿಗೆ ಒಳ್ಳೆಯದಾಗಬೇಕೆಂಬ ಹಿತದೃಷ್ಟಿ ಯಿಂದ ತಂದಿರುವಂಥ ಈ ಬಿಲ್ ಅನ್ನು ತಾವೆಲ್ಲರೂ ಒಪ್ಪಬೇಕೆಂದು ಮಾನ್ಯ ಚೇರ್ಮನ್‌ರವರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಚೇರ್ಮನ್‌ರವರೆ, ಮಾನ್ಯ ವೈದ್ಯನಾಥನ್ ಸಮಿತಿಯ ವರದಿ ಪ್ರಕಾರ 30% ಗಿಂತ recovery ಕಡಿಮೆ ಇದ್ದರೆ, ಮೂರು ವರ್ಷಗಳು ಸತತವಾಗಿ ನಷ್ಟವನ್ನು ಅನುಭವಿಸಿದ್ದರೆ,

ಅದನ್ನು amalgamation ಮಾಡುವುದಕ್ಕೆ ಅವಕಾಶವಿದೆ ಈಗ ಏನು ಮಾಡಬಹುದೆಂದರೆ, ತಾವು ದುರುಪಯೋಗ ಮಾಡುವುದಿಲ್ಲ, ಮಾಡುವುದಕ್ಕೂ ಸಾಧ್ಯವಿರುವುದಿಲ್ಲವೆಂದು ಅನಿಸುತ್ತದೆ. ಆದರೆ ಈ act introduction ಆದಮೇಲೆ ನೀವು ನಿಮ್ಮ ಅನುಕೂಲಕ್ಕೋಸ್ಕರ ಚೆನ್ನಾಗಿರುವಂಥ society ಯನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ merge ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದು ಆಗಬಾರದೆಂಬ ಕಾರಣಕ್ಕೋಸ್ಕರ ತಾವು ಅದನ್ನು ಗಮನದಲ್ಲಿಟ್ಟುಕೊಂಡರೆ ಬಹುಶಃ ಆಗಲಿಕ್ಕೆ ಸಾಧ್ಯವಿಲ್ಲ. ಇದೇ ಹಿಂದೆ ಇದ್ದಂಥದ್ದನ್ನು ಮಾನ್ಯ ಎಸ್. ಎಸ್. ಪಾಟೀಲ್ ರವರ ಕಾಲದಲ್ಲಿ ಏಕೆ ತೆಗೆದುಹಾಕಿದರು? ಏಕೆಂದರೆ, ರಾಜಕೀಯ ಹಸ್ತಕ್ಷೇಪ ಮಾಡುವುದಕ್ಕೆ ಸಾಧ್ಯವಾಗುತ್ತದೆ, pressure ಬರುತ್ತದೆಂಬ ಕಾರಣಕ್ಕೆ ತೆಗೆದರು. ಹಾಗಾಗಿ ಮತ್ತೆ ಇದು ಬರುವುದಿಲ್ಲವೆಂಬ ಪ್ರಶ್ನೆ ಇಲ್ಲ, ಅದು ಬಂದೇ ಬರುತ್ತದೆ. ಮಾನ್ಯ ವೈದ್ಯನಾಥನ್ ಸಮಿತಿ ಆಚರಣೆಗೆ ಬಂದ ಮೇಲೆ ಸರ್ಕಾರ ಹಿಡಿತ ಕಡಿಮೆಯಾಗುವುದರಿಂದ ಬಹುಶಃ ತೊಂದರೆಯಾಗುವುದಲ್ಲವೆಂಬ ನಂಬಿಕೆ ಅಷ್ಟೆ. ಆದರೆ ಸರ್ಕಾರ ಯಾವುದೇ ರೀತಿಯಲ್ಲೂ ಹಸ್ತಕ್ಷೇಪ ಮಾಡದಿದ್ದರೆ, ಅದರಿಂದ ಸಮಿತಿಗೂ ಗೌರವ ಬರುತ್ತದೆ ಮತ್ತೇ ಇವತ್ತು ಸದನದಲ್ಲಿ amendment ಮಾಡಿಕೊಟ್ಟಿದ್ದಕ್ಕೂ ಬೆಲೆ ಬರುತ್ತದೆ.

ಶ್ರೀ ಲಕ್ಷ್ಮಣ ಸ. ಸವದಿ : ಮಾನ್ಯ ಚೇರ್ಮನ್ ರವರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈಗ ತಂದಿರುವಂಥ ಬಿಲ್ ಅನ್ನು ಅತ್ಯಂತ ಸಂತೋಷದಿಂದ ಅವರು ಒಪ್ಪಿಗೆಯನ್ನು ಕೊಟ್ಟಿರುವಂಥ ಸಂದರ್ಭದಲ್ಲಿ, ತಮ್ಮ ಮೂಲಕ ನಾನು ಒಬ್ಬ ಸರಕಾರ ಸಚಿವನಾಗಿ ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಹೇಳುತ್ತೇನೆ. ಆ ಒಂದು ಹಿನ್ನೆಲೆಯಲ್ಲಿ ಇನ್ನು ಎರಡನೇ ಬಿಲ್‌ಗೂ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಚೇರ್ಮನ್‌ರವರೆ, ನಬಾರ್ಡ್‌ಗೆ ಸಂಬಂಧಪಟ್ಟ ಹಾಗೆ ಅದು convince ಆಗದೇ ಇದ್ದರೆ ಬಹಳ ಕಷ್ಟವಾಗುತ್ತದೆ, ಏಕೆಂದರೆ ಇಷ್ಟೆಲ್ಲಾ ಅಧಿಕಾರಿಗಳ enquiry ಮೂರು ತಿಂಗಳಲ್ಲಿ ಮಾಡುವುದಕ್ಕೆ ಕಷ್ಟವಾಗುತ್ತದೆ. ನೀವು ಅದನ್ನು ಯಾವ ರೀತಿಯಲ್ಲಿ convince ಮಾಡುತ್ತೀರೊ, ಮಾಡಿ. ತಾವು ಮಾಡಿಕೊಳ್ಳದೇ ಹೋದರೆ ಮತ್ತೆ

0.17F-91

ತೊಂದರೆಯಾಗುತ್ತದೆ, ಇಷ್ಟು ಜನರಿಗೆ enquiry ಇದೆ. ತಾವು ಅವರಿಗೆ ಮನವರಿಕೆ ಮಾಡಿ, ಅದನ್ನು ಮುಂದುವರೆಸುವುದಕ್ಕೆ ಪ್ರಯತ್ನ ಮಾಡಿ.

ಛೇರ್ಮನ್ : ಪ್ರಸ್ತಾವ ಏನೆಂದರೆ;

"2010ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 37ರವರೆಗೆ

ಚೇರ್ಮನ್ : "ಖಂಡ 2 ರಿಂದ 37ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 37 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಚೇರ್ಮನ್ : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು) : ಮಾನ್ಯ ಚೇರ್ಮನ್‌ರೆ,

2010ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಚೇರ್ಮನ್ : ಪ್ರಸ್ತಾವ ಏನೆಂದರೆ;

"2010ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

****

ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕ 2010
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು) : ಮಾನ್ಯ ಚೇರ್ಮನ್‌ರೆ,

2010ರ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಚೇರ್ಮನ್ (ಎನ್. ಯೋಗೀಶ್ ಭಟ್) : ಪ್ರಸ್ತಾವ ಏನೆಂದರೆ;

"2010ರ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ 2

ಚೇರ್ಮನ್ : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಚೇರ್ಮನ್ : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಲಕ್ಷ್ಮಣ ಸ.ಸವದಿ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಚೇರ್ಮನ್ : ಪ್ರಸ್ತಾವ ಏನೆಂದರೆ;

"2010ರ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

* * * * * *

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ವಿಶ್ವವಿದ್ಯಾಲಯದ ಒಂದು ಬಿಲ್ ಇದೆ. ಅದು ಮೂರು ದಿವಸಗಳಿಂದ ಅಜೆಂಡಾದಲ್ಲಿ ಬರುತ್ತಿದೆ,

ಮೂರು ದಿವಸಗಳಿಂದ ಅದು ಮುಂದೆ ಹೋಗುತ್ತಿದೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಸಿದ್ದರಾಮಯ್ಯ : ಆ ಬಿಲ್ ಅನ್ನು ನಾಳೆ 3 ಗಂಟೆಗೆ ತೆಗೆದುಕೊಳ್ಳಿ.

ಚೇರ್ಮನ್ : ಅದಕ್ಕೆ ನಾಳೆ ಅವಕಾಶ ಕೊಡೋಣ.

7. ಗಮನ ಸೆಳೆಯುವ ಸೂಚನೆಗಳು :

(ಅ) ವಿಷಯ : ಬೆಂಗಳೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ತಲೆದೋರಿರುವ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ :

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಅಧ್ಯಕ್ಷರೆ, ನಿಯಮ, 73ರ ಅಡಿಯಲ್ಲಿ, ಬೆಂಗಳೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ತಲೆದೋರಿರುವ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರ ಗಮನವನ್ನು ಸೆಳೆಯಲು ಬಯಸುತ್ತಿದ್ದೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಗಳುರು ಜಲ ಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೆ,

ಬೆಂಗಳೂರು ನಗರದಲ್ಲಿ ಪ್ರಸ್ತುತ ಸುಮಾರು 7.5 ದಶ ಲಕ್ಷ ಜನಸಂಖ್ಯೆ ಇದ್ದು, ನಗರಕ್ಕೆ ಈಗ ದಿನಂಪ್ರತಿ ಸರಾಸರಿ 900 ದಶ ಲಕ್ಷ ಲೀಟರ್ ನೀರು ಸರಬರಾಜು ಮಾಡಲಾಗುತ್ತಿರುತ್ತದೆ. ದಿನಂಪ್ರತಿ 1125 ದಶ ಲಕ್ಷ ಲೀಟರ್ ನೀರಿನ ಬೇಡಿಕೆ ಇದ್ದು, ದಿನಂಪ್ರತಿ 225 ದಶ ಲಕ್ಷ ಲೀಟರ್ ನೀರಿನ ಕೊರತೆ ಇರುತ್ತದೆ. ಪ್ರಸ್ತುತ ಬೇಸಿಗೆ ಸಮಯ ಪ್ರಾರಂಭವಾಗಿರುವುದರಿಂದ ನೀರಿನ ಬೇಡಿಕೆ ಹೆಚ್ಚಾಗಿರುತ್ತದೆ, ಇದಕ್ಕೆ ಪುಷ್ಟಿಯಾಗಿ ಅಂತರ್ ಜಲಮಟ್ಟ ಕುಸಿದಿರುವುದರಿಂದ ಕೊಳವೆ ಬಾವಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿರುತ್ತದೆ. ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಒಂದು ಪ್ರಮುಖ ಜಲಾಶಯವಾದ

ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಕಳೆದ ಸಾಲಿಗಿಂತ ಹದಿಮೂರು ಅಡಿ ನೀರು ಶೇಕರಣಾ ಮಟ್ಟ ಕಡಿಮೆ ಇರುತ್ತದೆ.

ದಿನಾಂಕ: 1.4.2008 ರಿಂದ ಬೆಂಗಳೂರು ಜಲಮಂಡಳಿಯ ಕಾರ್ಯ ವ್ಯಾಪ್ತಿಯ 240 ಚ.ಕಿಲೋಮೀಟರ್ ರಿಂದ 625 ಚ.ಕಿಲೋ ಮೀಟರ್ ವಿಸ್ತೀರ್ಣದ ವರೆಗೆ ವ್ಯಾಪಿಸಿರುತ್ತದೆ. ನಬಗರ ಬೆಳವಣಿಗೆಯಿಂದ ಪ್ರತಿ ವರ್ಷ ಸುಮಾರು 40,000 ರಿಂದ 45,000 ಹೊಸ ಸಂಪರ್ಕಗಳು ಮಂಜೂರಾತಿಯಾಗುತ್ತಿರುತ್ತವೆ. ಪ್ರಸ್ತುತದಲ್ಲಿ ತಲೆದೋರಿರುವ ನೀರಿನ ಬವಣೆಗೆ ವಿದ್ಯುಚ್ಛಕ್ತಿ ಅಭಾವವು ಒಂದಾಗಿರುತ್ತದೆ. ಈ ಎಲ್ಲಾ ಬೆಳವಣಿಗೆಗಳ ನಡುವೆಯೂ ನಗರಕ್ಕೆ ತಲುಪುತ್ತಿರುವ ನೀರಿನ ಪ್ರಮಾಣ ಮಾತ್ರ ಮೇಲೆ ತಿಳಿಸಿರುವ ಪ್ರಮಾಣಕ್ಕಿಂತ (900 ದಶ ಲಕ್ಷ ಲೀಟರ್ ದಿನಂಪ್ರತಿ) ಹೆಚ್ಚಾಗಿರುವುದಿಲ್ಲ.

ನಗರದ ನಾಗರೀಕರಿಗೆ ನೀರಿನ ಬವಣೆ ನೀಗಿಸಲು ತ್ವರಿತ ಪರಿಹಾರವಾಗಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

1) ಒಟ್ಟು ನಗರದಲ್ಲಿ ಹಾಲಿ ಚಾಲ್ತಿಯಲ್ಲಿದ್ದ 5,594 ಕೊಳವೆ ಬಾವಿಗಳ ಜೊತೆಗೆ ಹೊಸದಾಗಿ 1679 ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿರುತ್ತದೆ. ಇದಕ್ಕೆ ಪೂರಕವಾಗಿ ಇನ್ನೂ 500 ಹೊಸ ಕೊಳವೆ ಬಾವಿಗಳನ್ನು ಕೊರೆದು ನೀರು ಪೂರೈಕೆ ಮಾಡುವ ಕೆಲಸ ಪ್ರಗತಿಯಲ್ಲಿದೆ.

2) ಹೊಸದಾಗಿ ಸೇರ್ಪಡೆಯಾಗಿರುವ ಹಿಂದಿನ ನಗರಸಭಾ ಪ್ರದೇಶಗಳಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕೊಳವೆ ಬಾವಿಗಳನ್ನು ತ್ವರಿತವಾಗಿ ದುರಸ್ಥಿಗೊಳಿಸಲು ವಾರ್ಷಿಕ ನಿರ್ವಹಣೆ ಗುತ್ತಿಗೆ ಕೆಲಸವನ್ನು ಗುತ್ತಿಗೆದಾರರಿಗೆ ವಹಿಸಿರುತ್ತದೆ. ದುರಸ್ಥಿಯಲ್ಲಿರುವ ಕೊಳವೆ ಬಾವಿಗಳನ್ನು ತುರ್ತಾಗಿ ದುರಸ್ಥಿಗೊಳಿಸಿ ಸೇವೆಗೆ ಪುನರ್ ನಿಯೋಜಿಸಲಾಗುತ್ತಿರುತ್ತದೆ. ದಿನಾಂಕ: 19.6.2008 ರಿಂದ 9.3.2010ರ ಅಂತ್ಯಕ್ಕೆ 5033 ಕೊಳವೆ ಬಾವಿಗಳನ್ನು ದುರಸ್ಥಿಗೊಳಿಸಿರುತ್ತದೆ.

3) ನೀರಿನ ಬೇಡಿಕೆ ಗಮನಿಸಿ. ಹೊಸ ಕೊಳವೆ ಬಾವಿಗಳನ್ನು ಕೊರೆಯುವ ಕಾರ್ಯ ಪ್ರಗತಿಯಲ್ಲಿವೆ.

4) ಕಾವೇರಿ ಮೂಲದಿಂದ ಪಂಪ್ ಮಾಡುವ ಮುಖ್ಯ ಸ್ಥಾವರಗಳಲ್ಲಿ ಮತ್ತು ನಗರದ ಪಂಪಿಂಗ್ ಸ್ಥಾವರಗಳಲ್ಲಿ ವಿದ್ಯುತ್ ವ್ಯತ್ಯಯ

ಆಗದೆ ನಿರಂತರ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಮತ್ತು ಬೆಸ್ಕಾಂ ಜೊತೆ ವ್ಯವಹರಿಸಲಾಗಿದೆ.

5) ನಗರದಲ್ಲಿ ಮುಖ್ಯ ನೀರು ಸರಬರಾಜು ಸ್ಥಾವರಗಳಾದ ಸಿ.ಜೆ.ಎಫ್ ಮ್ಲಲೇಶ್ವರಂ, ಎಲ್.ಎಲ್.ಆರ್. ರೇಸ್ ಕೋರ್ಸ್ ರಸ್ತೆ, ಹೆಗ್ಗನಹಳ್ಳಿ, ಹೊಸಹಳ್ಳಿ ಮತ್ತು ಹೆಚ್.ಜಿ.ಆರ್. ಹೈಗ್ರೌಂಡ್ಸ್ ಸ್ಥಳಗಳಲ್ಲಿ ನೀರು ಸರಬರಾಜು ಅಡಚಣೆ ಇಲ್ಲದೆ ಕಾರ್ಯನಿರ್ವಹಿಸಲು ವಿದ್ಯುತ್ ಜನರೇಟರ್‌ಗಳನ್ನು ಅಳವಡಿಸಲಾಗಿದೆ.

6) ನಗರದಲ್ಲಿ 7,477 ಸಾರ್ವಜನಿಕ ಕೊಳಾಯಿಗಳಿದ್ದು ಇವುಗಳಿಂದಲೂ ಸಹ ನಾಗರೀಕರಿಗೆ ನೀರು ಸರಬರಾಜಾಗುತ್ತಿರುತ್ತದೆ.

7) ತುರ್ತು ನೀರಿನ ಸಮಸ್ಯೆಯನ್ನು ನೀಗಿಸಲು ನಗರದಲ್ಲಿ 45 ಲಾರಿ ನೀರಿನ ಟ್ಯಾಂಕರ್‌ಗಳ ಮುಖಾಂತರ ಶುಲ್ಕ ರಹಿತವಾಗಿ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.

8) ಮಲಿನ ನೀರನ್ನು ತೃತೀಯ ದರ್ಜೆಗೆ ಸಂಸ್ಕರಿಸಿ ತೋಟಗಾರಿಕೆ, ನೆಲ ಶುಚಿಗೊಳಿಸಲು ಇತರೆ ಕೆಲಸಗಳಿಗೆ ಉಪಯೋಗಿಸಲು ಜಲಮಂಡಳಿಯ ಸಂಸ್ಕರಣಾ ಘಟಕಗಳಿಂದ ಸರಬರಾಜು ಮಾಡಲಾಗುತ್ತಿರುತ್ತದೆ.

ಕೊರತೆಯಿರುವ ನೀರು ಪೂರೈಕೆ ದೀರ್ಘಕಾಲಿನ ಯೋಜನೆಗಳಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1) ನಗರಕ್ಕೆ ದಿನಂಪ್ರತಿ ಹೆಚ್ಚುವರಿಯಾಗಿ 500 ದಶ ಲಕ್ಷ ಲೀಟರ್ ಕಾವೇರಿ ನೀರನ್ನು ತರಲು ಕಾವೇರಿ 4ನೇ ಹಂತ, 2ನೇ ಘಟ್ಟ ಯೋಜನೆ ರೂಪಿಸಿದ್ದು, ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು 2011–12 ರಲ್ಲಿ ಪೂರ್ಣಗೊಳ್ಳಲಿದೆ.

2) 30'X40' ಮತ್ತು ಮೇಲ್ಪಟ್ಟು ಅಳತೆಯುಳ್ಳ ನಿವೇಶನಗಳಲ್ಲಿ ನಿರ್ಮಿಸುವ ಹೊಸ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ಪದ್ಧತಿ ಅಳವಡಿಸುವುದು ಕಡ್ಡಾಯ ಮಾಡಲಾಗಿದೆ. ಇದೇ ರೀತಿ 40'X60' ಮತ್ತು ಮೇಲ್ಪಟ್ಟು ನಿವೇಶನಗಳಲ್ಲಿ ಹಾಲಿ ಇರುವ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ಪದ್ಧತಿ ಅಳವಡಿಸುವುದು ಕಡ್ಡಾಯ ಮಾಡಲಾಗಿದೆ.

3) ವಾಣಿಜ್ಯ ಸಂಕೀರ್ಣ, ಬಹುಮಹಡಿ ಗೃಹ ಸಮುಚ್ಚಯ, ಬೃಹತ್ ಕಟ್ಟಡಗಳಿಗೆ ಹೊಸ ನೀರಿನ ಸಂಪರ್ಕ ಮಂಜೂರು ಮಾಡುವ ಸಮಯದಲ್ಲಿ ಒಳಚರಂಡಿ ನೀರು ಸಂಸ್ಕರಣಾ ಘಟಕ ಸ್ಥಾಪಿಸಿರುವುದನ್ನು ಕಡ್ಡಾಯ ಮಾಡಲಾಗಿದೆ. ಇದರಿಂದ ಶುದ್ಧನೀರಿನ ಬೇಡಿಕೆ ಮೇಲೆ ಒತ್ತಡ ಕಡಿಮೆಯಾಗುತ್ತದೆ.
4) ನಗರದ ಹೊರ ವಲಯದಲ್ಲಿರುವ ಕೆರೆಗಳನ್ನು ಪುನಶ್ಚೇನಗೊಳಿಸಿ, ಮಳೆ ನೀರು ಶೇಖರಿಸಿ ಉಪಯೋಗಿಸಿಕೊಳ್ಳಲಾಗುವುದು.
5) ಸೋರಿಕೆಯಿಂದ ಪೋಲಾಗುತ್ತಿರುವ ನೀರನ್ನು ನಿಯಂತ್ರಿಸಲು ಹಳೆಯದಾದ ಮತ್ತು ತುಕ್ಕು ಹಿಡಿದಿರುವ ಕೊಳವೆಗಳನ್ನು ಬದಲಾಯಿಸಿ ಹೊಸ ಕೊಳವೆಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಈಗಾಗಲೇ ನಾವು ಹೇಳಿದ ಹಾಗೆ ಬೆಂಗಳೂರು ನಗರದ ಎಲ್ಲಾ ಮಾನ್ಯ ಶಾಸಕರ ಸಭೆಯನ್ನು ಕರೆದು ನೀರಿನ ಅಭಾವದ ಬಗ್ಗೆ ನಾವು ಚರ್ಚೆ ಮಾಡಿ, ಅವರೇ ಸ್ವಂತವಾಗಿ ಬೋರ್‌ವೆಲ್ ಹಾಕಿಸಿದರೂ ಕೂಡ ನಾವು ಆ ಬಿಲ್ ಅನ್ನು ಪಾವತಿ ಮಾಡುತ್ತೇವೆ ಎಂದು ಎಲ್ಲ ಶಾಸಕರಿಗೆ ಹೇಳಿದ್ದೇವೆ. ಈಗಾಗಲೇ ನಾವು ಕಳೆದ ಡಿಸೆಂಬರ್ ತಿಂಗಳಿನಲ್ಲೇ worl Order ಕೊಟ್ಟಿದ್ದೇವೆ. ಈಗ ಅದಕ್ಕೆ ಅಡಚಣೆ ಏನಿಲ್ಲ, ಚುನಾವಣಾ ನೀತಿ ಸಂಹಿತೆ ಅದಕ್ಕೆ ಅಡ್ಡ ಬರುವುದಿಲ್ಲ. ಹೊರವಲಯದ ಭಾಗಗಳಲ್ಲಿ, ಎಲ್ಲಿ ನೀರಿನ ಬವಣೆ ಹೆಚ್ಚಿದೆ ಅಲ್ಲಿಗೆ ನಾವು 100-200 ಟ್ಯಾಂಕರುಗಳನ್ನು ಗುತ್ತಿಗೆ ಮೇಲೆ ತೆಗೆದುಕೊಂಡು 2-3 ತಿಂಗಳ ಕಾಲ ಅಲ್ಲಿಗೆ ನೀರನ್ನು ಪೂರೈಸಲು ಕ್ರಮವನ್ನು ತೆಗೆದುಕೊಂಡಿದ್ದೇವೆ.

ಅದೇ ರೀತಿಯಲ್ಲಿ corner area ದಲ್ಲೂ ಕೂಡ ಮಾನ್ಯ ದಿನೇಶ್ ಗುಂಡೂರಾವ್‌ರವರು, ರಾಮಲಿಂಗಾರೆಡ್ಡಿ, ನರೇಂದ್ರ ಬಾಬು ಮತ್ತು ಇತರ ಸದಸ್ಯರೆಲ್ಲರೂ ಕೂಡ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅದು ನನಗೂ ಕೂಡ ಗೊತ್ತಿದೆ. ನಮಗೆ ನೀರಿನ ಪೂರೈಕೆ ಮತ್ತು ಬೇಡಿಕೆಯ ಅಂತರ ಬಹಳ ಜಾಸ್ತಿ ಇದೆ. ಬೇಡಿಕೆಗೆ ತಕ್ಕಂತೆ ಪೂರೈಸುವುದಕ್ಕೆ ನೀರಿಲ್ಲ. ಇದು ನಮ್ಮ ಅಸಮರ್ಥತೆ ಅಲ್ಲ. ನಮ್ಮ ಹತ್ತಿರ ಎಲ್ಲವೂ ಇದೆ. ಅಲ್ಲಿಂದ pump ಮಾಡುವುದಕ್ಕೆ ಎಷ್ಟು capacity ಇದೆಯೋ ಅಷ್ಟನ್ನೂ ಈಗ 24 ಗಂಟೆಯೂ

pump ಮಾಡುತ್ತಿದ್ದೇವೆ. ಅದಕ್ಕಿಂತಲೂ ಹೆಚ್ಚು ನೀರು pump ಮಾಡಲಿಕ್ಕೆ ನಮ್ಮಿಂದ ಸಾಧ್ಯವಿಲ್ಲ. ಏನಿದೆಯೋ ಅಷ್ಟು ಮಾಡುತ್ತಿದ್ದೇವೆ. ಈಗ ತಿಪ್ಪಗೊಂಡನಹಳ್ಳಿಯಲ್ಲಿ ಏನು ನೀರು ಬರುತ್ತಿದೆಯೋ ಅಷ್ಟನ್ನೂ ಯಥಾವತ್ತಾಗಿ pump ಮಾಡುತ್ತಿದ್ದೇವೆ. 2002ನೇ ಇಸವಿಯಲ್ಲಿ ನಮಗೆ 900 MLD ನೀರು ಬರುತ್ತಿತ್ತು. ಆವತ್ತು 2 ಲಕ್ಷ connections ಇತ್ತು. ಈಗ ನಾವು 2010ನೇ ಇಸವಿಯಲ್ಲಿದ್ದು 5 ಲಕ್ಷದ 80 ಸಾವಿರ connections ಗಳಿವೆ. ಆದರೆ, ನೀರು ಮೊದಲು ಎಷ್ಟು ಇತ್ತೋ ಅಷ್ಟೇ ಪ್ರಮಾಣದಲ್ಲಿ ಬರುತ್ತಿದೆ. ನಗರದ ಎಲ್ಲಾ ಬಾಗದಲ್ಲಿ ಕೂಡ ನಾವು ನೀರನ್ನು ಸರಿಯಾಗಿ ಸಂವೃದ್ಧವಾಗಿ ಕೊಡದಿರುವುದಕ್ಕೆ ಇದೂ ಸಹ ಒಂದು ಕಾರಣವಾಗಿದೆ. ಹಾಗಾಗಿ ತಾವು ಏನು ಹೇಳಿದ್ದೀರಿ, ತಮ್ಮ ಬೇಡಿಕೆ ಏನಿದೆ, ಅದು ಸರಿ ಇದೆ. ತಾವೇನು ಕೇಳಿದ್ದೀರಿ, ಗಮನ ಸೆಳೆದಿದ್ದೀರಿ, ಖಂಡಿತವಾಗಿಯೂ ಸರ್ಕಾರ ಇದಕ್ಕೆ ಪೂರಕವಾಗಿ ಸ್ಪಂದಿಸುತ್ತದೆ. ತಾವು ಏನೇ ಬೇಡಿಕೆ ಇಟ್ಟರೂ ಸಾಧ್ಯವಾದು ದೆಲ್ಲವನ್ನೂ ಬಗೆಹರಿಸಲಿಕ್ಕೆ ನಾವು ಸಿದ್ಧರಿದ್ದೇವೆ.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಮಂತ್ರಿಯವರು ಬಹಳ ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಬೆಂಗಳೂರು ನಗರದಲ್ಲಿ ಆಗುತ್ತಿರುವ ನೀರಿನ ಸಮಸ್ಯೆ ನಿಜವಾಗಿಯೂ ಕೂಡ ಬಹಳ ತೀವ್ರತೆ ಮುಟ್ಟಿದೆ. ಅನೇಕ ಭಾಗಗಳಲ್ಲಿ 15 ದಿವಸಕ್ಕೆ ಒಂದು ಸಲ, 10 ದಿವಸಕ್ಕೊಂದು ಸಲ ನೀರು ಕೊಡತಕ್ಕಂಥ ಪರಿಸ್ಥಿತಿಗೆ ಬಂದಿದೆ. ಅನೇಕ ಪ್ರದೇಶಗಳಿಗೆ ಶಾಸಕರು ಹೋಗುವ ಪರಿಸ್ಥಿತಿ ಇಲ್ಲ. ಮಾನ್ಯ ಮಂತ್ರಿಯವರು ಹೇಳಿದ ಹಾಗೆ ಇದು ನೀರಿನ ಲಭ್ಯತೆ ಮತ್ತು ನೀರಿನ ಬೇಡಿಕೆ ಇವೆರಡರಲ್ಲೂ ವ್ಯತ್ಯಾಸವಾಗಿದೆ. ಈಗ ಅವರ ಉತ್ತರದಲ್ಲಿ ಕಾವೇರಿ 4ನೇ ಹಂತ 2ನೇ ಘಟಕದ ಯೋಜನೆಯನ್ನು ರೂಪಿಸಿದ್ದೇವೆ, ಇನ್ನು ಎರಡು ವರ್ಷಗಳಲ್ಲಿ ಮುಕ್ತಾಯವಾಗುತ್ತದೆಂದು ಹೇಳಿದ್ದಾರೆ. ಮೊನ್ನೆತಾನೆ ಅದಕ್ಕೆ ಅವರು foundation stone ಕಾರ್ಯಕ್ರಮವನ್ನು ಸಹ ಮಾಡಿದರು. ಆದರೆ, ಈ ಯೋಜನೆ 4 ವರ್ಷಗಳ ಹಿಂದೆಯೇ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಧರ್ಮಸಿಂಗ್ ರವರು ಮಾಡಿದ್ದರು. ಬಹುಶಃ 4 ವರ್ಷಗಳಲ್ಲಿ ಈ ಯೋಜನೆ ಏಕೆ ಪ್ರಾರಂಭವಾಗಿಲ್ಲ? ಗೊತ್ತಿಲ್ಲ. ಬಹುಶಃ ಈ ಯೋಜನೆ ಈಗಾಗಲೇ ಮುಗಿಯಬೇಕಾಗಿತ್ತು. ಈ ಯೋಜನೆ ಮುಗಿದಿದ್ದರೆ ಇವತ್ತು ಬೆಂಗಳೂರಿಗೆ ಈ ಸಮಸ್ಯೆ ಬರುತ್ತಿರಲಿಲ್ಲ. ಯಾವ ಕಾರಣಕ್ಕೋಸ್ಕರ

0.17F-92

ಅಧಿಕಾರಿಗಳು ಅದರ tender ಗಳನ್ನು finalize ಮಾಡಿ ಅದನ್ನು ಪ್ರಾರಂಭ ಮಾಡಲಿಕ್ಕಾಗಲಿಲ್ಲವೋ ಗೊತ್ತಿಲ್ಲ. ಅದೂ ಕೂಡ ಒಂದು ರೀತಿಯಲ್ಲಿ ನಮ್ಮ ಬೆಂಗಳೂರಿಗೆ ಸಮಸ್ಯೆಯಾಗಿದೆ. ಈ ಕಾವೇರಿ ಕುಡಿಯುವ ನೀರಿನ 4ನೇ ಹಂತ 2ನೇ ಘಟಕ ಮುಕ್ತಾಯವಾದ ಮೇಲೂ ಕೂಡ ಬಹುಶಃ ಆವತ್ತಿನ ಬೆಂಗಳೂರಿನ ಬೆಳವಣಿಗೆಗೆ ಅದೂ ಕೂಡ ಸಾಕಾಗುವುದಿಲ್ಲ. ಆದ್ದರಿಂದ, ಆ ಒಂದು ಕಾರ್ಯಕ್ರಮವನ್ನು ಈಗ ಏನು ಪ್ರಾರಂಭ ಮಾಡಿದ್ದಾರೆ ಅದನ್ನು 2012ನೇ ಇಸವಿಯಲ್ಲಿ ಮುಗಿಸತಕ್ಕಂಥ ಕೆಲಸವನ್ನು ಮಾನ್ಯ ಸಚಿವರು ಮಾಡಲೇಬೇಕಾಗುತ್ತದೆ. ಏಕೆಂದರೆ, ಆ ಯೋಜನೆ ಪೂರ್ಣವಾಗದಿದ್ದರೆ ಮುಂದಿನ ದಿವಸಗಳಲ್ಲಿ ಸಮಸ್ಯೆಗಳು ಇನ್ನೂ ತೀವ್ರತೆಗೆ ಹೋಗುತ್ತದೆ. ಇನ್ನು ಎಲ್ಲಾ ಕಡೆ borewell ಗಳನ್ನು ಹಾಕುವುದಕ್ಕೆ ಆದೇಶ ಮಾಡಿದ್ದೇವೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಬಹಳ ದಿವಸಗಳ ನಂತರ ಬೆಂಗಳೂರಿನ ಎಲ್ಲಾ ಶಾಸಕರನ್ನು ಕರೆಸಿ ಒಂದು ಮೀಟಿಂಗ್ ಮಾಡಿದ್ದರು. ಆದರೆ, ಇಲ್ಲಿ ಇರತಕ್ಕಂಥ bore well engineer ಗಳು 'ಸರ್, ಹಾಕುವುದಕ್ಕೆ ಆಗುವುದಿಲ್ಲ, ನಮ್ಮ contractor ಗಳು ಯಾರೂ ಕೆಲಸ ಮಾಡುತ್ತಿಲ್ಲ, borewell ಹಾಕುವುದಕ್ಕೆ ಅವರು ಮುಂದೆ ಬರುತ್ತಿಲ್ಲ, ಚುನಾವಣೆ ಆಮೇಲೆ ನೋಡಿಕೊಳ್ಳೋಣ' ಎಂದು ಹೇಳುತ್ತಿದ್ದಾರೆ. ಇದೂ ಕೂಡ ಒಂದು ಸಮಸ್ಯೆ ಯಾಗಿದೆ. ಈಗೇನೋ ಚುನಾವಣೆ ಬಂದಿರುವುದರಿಂದ ವಿದ್ಯುಚ್ಛಕ್ತಿಯನ್ನು ಖರೀದಿ ಮಾಡಿ ಸರ್ಕಾರ ಕೊಡುತ್ತಿದೆ. ಮಹಾನಗರ ಪಾಲಿಕೆ ಚುನಾವಣೆ ಬಂದಿರುವುದು ಬೆಂಗಳೂರಿನ ನಾಗರೀಕರಿಗೆ ಒಳ್ಳೆಯದಾಯಿತು. ಇಲ್ಲದಿದ್ದಿದ್ದರೆ ಬಹುಶಃ ಇವತ್ತಿನ ಸಮಸ್ಯೆ ಯಾವ ಮಟ್ಟಕ್ಕೆ ಹೋಗುತ್ತಿತ್ತೋ ಗೊತ್ತಿಲ್ಲ. ಆದರೆ, ಮಾನ್ಯ ಸಚಿವರು ಇನ್ನೊಂದು ವಿಷಯವನ್ನು ಯೋಚನೆ ಮಾಡಬೇಕಾಗುತ್ತದೆ. ಈ ಬೆಂಗಳೂರು ಜಲಮಂಡಳಿಗಾಗಿಯೇ ತಾವು ನಿರಂತರ ವಿದ್ಯುಚ್ಛಕ್ತಿ ಕೊಡುವುದಕ್ಕೆ ತಮ್ಮದೇ ಆದಂಥ ಒಂದು ಪ್ರತ್ಯೇಕ ವಾದಂಥ ಒಂಚು captive power plant ಅನ್ನು ಮಾಡತಕ್ಕಂಥದ್ದಕ್ಕೆ ಒಂದು ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ, ಚುನಾವಣೆ ದೃಷ್ಟಿಯಿಂದ ಏನೋ ಒಂದು ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ, ಚುನಾವಣೆ ದೃಷ್ಟಿಯಿಂದ ಏನೋ ಒಂದು ವ್ಯವಸ್ಥೆ ಮಾಡಿ ಇವತ್ತು ನೀವು power ಅನ್ನು ಕೊಡುತ್ತಿದ್ದೀರಿ. ಆದರೆ, ಮುಂದಿನ ವರ್ಷ ಈ ರೀತಿ ಆಗುತ್ತದೆಂದು ನಂಬಿಕೆ ಇಲ್ಲ. ಆದ್ದರಿಂದ, ನೀವು ಮುಂದಾಲೋಚನೆ ಇಟ್ಟುಕೊಂಡು ಬೆಂಗಳೂರಿನ

ಜಲಮಂಡಳಿಗೆ ಪ್ರತ್ಯೇಕವಾಗಿರತಕ್ಕಂಥ ಒಂದು power plant ಹಾಕಿಕೊಳ್ಳ ಬೇಕು. ಏಕೆಂದರೆ, ನಮಗೆ ನೀರು ಪೂರ್ತಿಯಾಗಿ pump ಆಗಿ ಬರಬೇಕು, ಬರುತ್ತದೆ. 100 ಕಿಲೋ ಮೀಟರ್ ಗಿಂತ ಹೆಚ್ಚು ದೂರದಿಂದ ನಾವು ನೀರನ್ನು 3–4 Stage ಗಳಲ್ಲಿ pump ಮಾಡಿ ತರುತ್ತಿದ್ದೇವೆ. ಹಾಗಾಗಿ ನಮಗೆ ಬೇಕಾದಷ್ಟು ವಿದ್ಯುಚ್ಛಕ್ತಿ ಬೇಕಾಗುತ್ತದೆ. ಅದಕ್ಕೆ ನಾವು ಸರ್ಕಾರದ grid ಗೆ depend ಆದರೆ ಬಹಳ ಕಷ್ಟ ಎದುರಿಸಬೇಕಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಸಹ ಮಾನ್ಯ ಸಚಿವರು ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಹಾಗೆಯೇ ಕೊಳವೆ ಬಾವಿಗಳನ್ನು ಮಾಡಬೇಕೆಂದು ನಾವೇನು ಹೇಳುತ್ತಿದ್ದೇವೆ, ಅದನ್ನು ಕೂಡಲೇ ಮಾಡುವುದಕ್ಕೆ ಮಂಡಳಿಯ engineersಗೆ ಹೇಳಬೇಕು. ಏಕೆಂದರೆ, Private contractors ಅಷ್ಟು ಸುಲಭವಾಗಿ ಮಾಡುವುದಕ್ಕೆ ಮುಂದೆ ಬರುವುದಿಲ್ಲ. 'ನೀರು ಸಿಕ್ಕಿದರೆ ಮಾತ್ರ ಹಣ ಕೊಡುತ್ತೇವೆಂದು' ನೀವು ಹೇಳುತ್ತಿದ್ದೀರಿ. ಅದಕ್ಕೋಸ್ಕರ ಅನೇಕ ಶಾಸಗಿ contractor ಗಳು borewell ಕೊರೆಯುವುದಕ್ಕೆ ಬರುವುದಿಲ್ಲ. ಯಾರು ನಿಮ್ಮ BWSSB contractors ಇರುತ್ತಾರೆ ಅವರೇ ಮಾಡಬೇಕು. ಆದ್ದರಿಂದ, ನೀವು borewell ಕೊರೆಯದಿದ್ದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ನಿಮ್ಮ contractors ಗೆ ಹೇಳಬೇಕು. 'ಸರ್, ನೀತಿ ಸಂಹಿತಿ ಬಂದಿದೆ, election ಆದ ಮೇಲೆ ಮಾಡುತ್ತೇವೆಂದು' ಇವತ್ತೂ ಕೂಡ ನಿಮ್ಮ contractors ಹೇಳುತ್ತಾರೆ. ದಯವಿಟ್ಟು ಅದರ ಬಗ್ಗೆ Election Commissionನಿಂದ ಸ್ಪಷ್ಟೀಕರಣ ತೆಗೆದುಕೊಂಡು ಒಂದು ಪ್ರತಿಯನ್ನಾದರೂ ಆ engineers ಗೆ ಕೊಡಬೇಕಾಗುತ್ತದೆ. ಅದರ ಬಗ್ಗೆಯೂ ಕೂಡ ತಾವು ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ tanker ಗಳ ಮೂಲಕ ನೀರು ಕೊಡುವ ವ್ಯವಸ್ಥೆಯನ್ನು ಹೆಚ್ಚು ಮಾಡಬೇಕಾಗುತ್ತದೆ. ಎಲ್ಲಾ ಕಡೆ ಸಮಸ್ಯೆಗಳು ಜಾಸ್ತಿಯಾಗುತ್ತಿದೆ. ಈಗ ಅನೇಕ ಶಾಸಕರು ಸದನಕ್ಕೆ ಬಂದಿಲ್ಲ. ಏಕೆಂಧರೆ, Corporation election ವಿಚಾರವಾಗಿ ಬೇರೆ ಒಂದು ಮೀಟಿಂಗ್ ಇದೆ, ಅದಕ್ಕೋಸ್ಕರ ಯಾರೂ ಕೂಡ ಸದನಕ್ಕೆ ಬರಲಿಕ್ಕಾಗಲಿಲ್ಲ. ಆದರೆ, ಇವತ್ತು captive power plant ಮಾಡುವುದಕ್ಕೆ ಮತ್ತು ಎರಡನೇ ಹಂತ 4ನೇ ಘಟಕವನ್ನು ಆದಷ್ಟು ಬೇಗ ಮುಕ್ತಾಯ ಮಾಡುವಂಥದ್ದರಲ್ಲಿ

ಗಮನಹರಿಸಬೇಕು. ಹಾಗೆಯೇ ಹಳೆಯ ಪ್ರದೇಶಗಳಾದ ಚಿಕ್ಕಪೇಟೆ, ಬಿನ್ನಿಪೇಟೆ, Market area, ಶಿವಾಜಿನಗರ ಇಂಥ ಅನೇಕ ಪ್ರದೇಶಗಳಲ್ಲಿ ಬಹಳ ಹಳೆಯ ನೀರಿನ pipe line ಗಳಿವೆ. ಅದನ್ನು ಬದಲಾವಣೆ ಮಾಡುವುದಕ್ಕೆ ಈಗ ಕೇಂದ್ರ ಸರ್ಕಾರ ಸಹ JNNURM ಯೋಜನೆಯಲ್ಲಿ ಬೇಕಾದಷ್ಟು ಹಣ ಕೊಡುತ್ತಿದೆ; ತಾವು ಒಂದು scheme ಮಾಡಿ ಅದರಲ್ಲಿ ಸ್ವಲ್ಪಹಣವನ್ನು ಇದಕ್ಕೆ ಉಪಯೋಗಿಸಿಕೊಂಡು ಎಲ್ಲಾ ಕಡೆ ಇಂಥ ಹಳೆಯ pipe ಗಳನ್ನು ಬದಲಾವಣೆ ಮಾಡುವುದಕ್ಕೆ ಕ್ರಮ ತೆಗೆದಕೊಳ್ಳಬೇಕು. ಒಂದು ದೊಡ್ಡ ಪ್ರಾಜೆಕ್ಟ್ ಅನ್ನು ಮಾಡಿ ಅದಕ್ಕೆ 200 ಕೋಟಿ ರೂಪಾಯಿ ಯಷ್ಟಾದರೂ ಬೇಕಾಗಬಹುದು, 300 ಕೋಟಿ ರೂಪಾಯಿಗಳಷ್ಟಾದರೂ ಬೇಕಾಗಬಹುದು, ಎಲ್ಲಾ ಕಡೆ pipe ಗಳು ತುಕ್ಕು ಹಿಡಿದಿವೆ, BWSSB line ಗಳಲ್ಲಿ leakages ಬಹಳಷ್ಟು ಆಗುತ್ತಿದೆ, 20%, 30% leakages ಆಗುವಂಥದ್ದು ಇದೆ. ಅದನ್ನು ಎಷ್ಟು control ಮಾಡುತ್ತೇವೆಯೋ ಅಷ್ಟು ನಮಗೆ ನೀರಿನ ಲಭ್ಯತೆ ಹೆಚ್ಚು ಆದಹಾಗೆ ಅಗುತ್ತದೆ. ಅದಕ್ಕೆ ನೀವು ಆ ಒಂದು ಯೋಜನೆಯನ್ನು ಜಾರಿ ಮಾಡಬೇಕು. ಅದರಲ್ಲೂ ನಮ್ಮ ಕ್ಷೇತ್ರದ ಚಿಕ್ಕಪೇಟೆಯಂಥ ಹಳೆಯ ಪ್ರದೇಶದಲ್ಲಿ ಒಂದು ಸಮಗ್ರ ಯೋಜನೆಯನ್ನು ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಕೊನೆಯದಾಗಿ, ತಮ್ಮ ಉತ್ತರದಲ್ಲಿ ಮನೆಗಳಿಗೆ ನೀರು ಕೊಯ್ಲು ಅನ್ನು ಅನುಷ್ಠಾನ ಮಾಡುವುದಕ್ಕೆ ತಾವೊಂದು ಕಾರ್ಯಕ್ರಮ ಹಾಕಿಕೊಂಡಿದ್ದನ್ನು ಹೇಳಿದ್ದೀರಿ. ಈ ಬಗ್ಗೆ ಕಾನೂನು ಅನ್ನು ಸಹ ಕಳೆದ ಸಲ ಮಾಡಿದ್ದೀರಿ. ಆದರೆ, ಅದು ಜಾರಿಯಾಗುತ್ತಿಲ್ಲ. ಏಕೆಂದರೆ, BWSSB ಅಧಿಕಾರಿಗಳಿಗೆ ಒಂದು ಮನೆ ಹತ್ತಿರ ಹೋಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ಹೆಚ್ಚು ಸಮಯ ಕೂಡ ಇಲ್ಲ, ಮತ್ತು ಅನುಷ್ಠಾನ ಮಾಡುವುದಕ್ಕೆ ಅವರಲ್ಲಿ ಶಕ್ತಿಯೂ ಇಲ್ಲ. ಆದ್ದರಿಂದ, ಇದನ್ನು ನಾವು ನಿಜವಾಗಿಯೂ ಮಾಡಬೇಕಾದರೆ Karnataka Municipality Act ಗೆ ಬದಲಾವಣೆ ತಂದು ಯಾವುದೇ ಒಂದು plan sanction ಆಗಲಿ, Corporationನ ಯಾವು[illegible]ಂದು approval ಬೇಕಾಗಿದ್ದರೆ ಮಳೆ ಕೊಯ್ಲು ಪ್ಲಾನ್ ಇದ್ದರೆ [illegible]ತ್ರ ಆಗುತ್ತದೆ ಎಂದು ಮಾಡಿದರೆ ಯಶಸ್ವಿಯಾಗುತ್ತದೆಯೇ ಹೊರತು ಜಲಮಂಡಳಿ ಅಧಿಕಾರಿಗಳಿಗೆ

ಸಮಯವೇ ಇರುವುದಿಲ್ಲ. ಏಕೆಂದರೆ, ಅವರ ಮೇಲೆ ಅಷ್ಟೊಂದು ಒತ್ತಡವಿರುತ್ತದೆ. Engineers ಇರಬಹುದು, Water Inspectors ಇರಬಹುದು, Assistant Engineers ಇರಬಹುದು, ನೀರಿನ ಪೂರೈಕೆ ಮಾಡುವುದಕ್ಕೇ ಅವರಿಗೆ ಸಮಯವಿರುವುದಿಲ್ಲ. ಅವರು ಮನೆ ಮನೆಗೆ ಹೋಗಿ check ಮಾಡಿಕೊಂಡು ಬರುವುದಕ್ಕೆ ಹೇಳಿದರೆ ಅವರು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅದಕ್ಕೋಸ್ಕರ ಇದನ್ನು ನಿಮ್ಮ ಕೈಯಿಂದ ಮಾಡುವುದಕ್ಕೆ ಸಾಧ್ಯವಿಲ್ಲದಿರುವುದರಿಂದ ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ವಹಿಸಿ ಅವರ ಮುಖಾಂತರ, ಅವರ engineers ಮುಖಾಂತರ ಇದನ್ನು ಅನುಷ್ಠಾನ ಮಾಡುವುದಕ್ಕೆ ನೀವು ಒಂದು ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಹೇಳುತ್ತಾ, ಬೆಂಗಳೂರಿನಲ್ಲಿ ಆಗುತ್ತಿರುವ ನೀರಿನ ಸಮಸ್ಯೆ ನಿಜವಾಗಿಯೂ ಕೂಡ ಅಪಾಯಕಾರಿಯಾಗಿದೆ. ನಿಮ್ಮ ಪಕ್ಷದ ಶಾಸಕರೂ ಕೂಡ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾತನಾಡಬಹುದು. ಬಹಳ ಸಮಸ್ಯೆಯಾಗಿದೆ. ಇಷ್ಟು ಸಮಸ್ಯೆಯನ್ನು ನಾವು ಹಿಂದೆ ನೋಡಿರಲಿಲ್ಲ. ಮಾನ್ಯಮಂತ್ರಿಗಳೆ, ತಮ್ಮ ಅಧ್ಯಕ್ಷತೆಯಲ್ಲಿ ಜಲಮಂಡಳಿ ಏನಿದೆ, ಆ ಅಧಿಕಾರಿಗಳಿಗೆ ಮತ್ತು ಅದರ Chairman ರವರಿಗೂ ಕೂಡ ಬೇಗ ಬೇಗ tender ಗಳನ್ನು finalize ಮಾಡಿ, ಕೆಲಸಗಳೆಲ್ಲ ಅಂತಿಮ ಘಟ್ಟಕ್ಕೆ ಮುಟ್ಟಿತಕ್ಕಂಥದ್ದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಂತ್ರಿಯವರು ಈ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಅವರು ಮಾಡಿದಂಥ ಅನೇಕ progressive ವಿಚಾರವನ್ನು ತಿಳಿಸಿದ್ದಾರೆ. ಒದು ವಿಚಾರವನ್ನು ಸರ್ಕಾರಕ್ಕೆ, ತಮಗೆ ತಿಳಿಸಲಿಕ್ಕೆ ಬಯಸುತ್ತೇನೆ. ಈ ಪ್ರಪಂಚದಲ್ಲಿ ಮುಂದಕ್ಕೆ ಏನಾದರೂ war ಆದರೆ ಅದು ನೀರಿಗೆ ಮತ್ತು power ಗೆ ಆಗುತ್ತದೆ. ಇದರ ಬಗ್ಗೆ ಮುಂಜಾಗ್ರತೆಯಾಗಿ ನಾವು ವ್ಯವಸ್ಥೆ ಮಾಡಬೇಕು. ಬೆಂಗಳೂರು ನಗರಕ್ಕೆ ನೀರು ತರುವುದು, ಪ್ರತಿವರ್ಷ pipe diameter ಎಷ್ಟು increase ಆಗುತ್ತಿದೆ, ಎಷ್ಟು ನೀರು ತರುತ್ತಿದ್ದೇವೆಂದರೆ, ಇಲ್ಲಿ ಸೋರಿಕೆಯಾಗುತ್ತಿದೆಯಲ್ಲ, ಈ ಸೋರಿಕೆಯನ್ನು ನಿಯಂತ್ರಣ ಮಾಡಲಿಕ್ಕೆ ಯಾವ ಸರ್ಕಾರ ಕೂಡ ಕ್ರಮ ಕೈಗೊಳ್ಳಲಿಲ್ಲ. ಹಿಂದೆ ನಮ್ಮ ಕಾಲದಲ್ಲಿ ಈ pipe ಗಳನ್ನೆಲ್ಲ change ಮಾಡಿ

ಹೊಸದಾಗಿ pipe ಗಳನ್ನು ಹಾಕಬೇಕೆಂದು ಪ್ರಯತ್ನ ಪಟ್ಟೆವು. ಅದನ್ನು Privatization ಮಾಡಬೇಕೆಂದು ಬಂತು. ಅದಕ್ಕೆ ವಿರೋಧಪಕ್ಷಗಳಿಂದೆಲ್ಲ ಬೇಕಾದಷ್ಟು ಟೀಕೆಟಿಪ್ಪಣಿಗಳು ಬಂತು. So, ಆ ಕಾಲಕ್ಕೆ ಅದು ಸ್ವಲ್ಪ ನಿಂತು ಹೋಯಿತು. ಆದರೆ, ಇವತ್ತು ನೀವು ಇದನ್ನು ಬಹಳ ದೊಡ್ಡ ರೀತಿಯಲ್ಲಿ ಆಲೋಚನೆ ಮಾಡಿ ಮಾಡಬೇಕು. ಮೊನ್ನೆ ನಮ್ಮ Minister ರವರು 18 ಸಾವಿರ ಎಕರೆಯೋ, 12 ಸಾವಿರ ಎಕರೆಯೋ ಅಲ್ಲಿ ಎಲ್ಲೋ ಮಾಡಿದ್ದೇವೆಂದು ಒಂದು scheme ಅನ್ನು announce ಮಾಡಿದ್ದಾರೆ. ಅದು humanly impossible. ಏಕೆಂದರೆ ಆ Planning Authority ಗೆ ನಾನು Signature ಮಾಡುವ ಸಂದರ್ಭದಲ್ಲಿ bio plant Planning Authority ಗೆ ಸ್ವಲ್ಪ ನನ್ನ ಸ್ನೇಹಿತರದು ಯಾರದೋ 500 ಎಕರೆಯನ್ನು yellow zone ಸೇರಿಸಬೇಕೆಂದು ಪ್ರಯತ್ನ ಪಟ್ಟೆ. ಸಾಧ್ಯವೇ ಇಲ್ಲ ಸ್ವಾಮಿ ಎಂದು ನಮ್ಮ officers ಯಾರೂ ಕೂಡ ಒಪ್ಪಲಿಲ್ಲ. Bio Plant Planning Authority ಯನ್ನು ನಾವು ಎತ್ತಿಕೊಂಡು ಹೋಗಿ ದೊಡ್ಡಬಳ್ಳಾಪುರಕ್ಕೆ, ವಿಜಯಪುರಕ್ಕೆ exchange ಮಾಡಿದೆವು. ಇಲ್ಲಿ ಎಲ್ಲವೂ green belt ಆಗಿಯೇ ಉಳಿದುಕೊಳ್ಳಬೇಕು, ನೀರನ್ನು ಒದಗಿಸಿಕೊಡಲಿಕ್ಕೆ ಸಾಧ್ಯವೇ ಇಲ್ಲ. Airport ಬಿಟ್ಟರೆ ಇನ್ನು ನೀರನ್ನು ಕೊಡುವುದಕ್ಕೆ ಸಾಧ್ಯವೇ ಇಲ್ಲ ಎಂದು ಆವತ್ತಿನ ಕಾಲದಲ್ಲಿದ್ದಂಥ town planners, ಆವತ್ತಿನ ಕಾಲದಲ್ಲಿದ್ದಂಥ urban development ನಲ್ಲಿದ್ದಂಥ ಅಧಿಕಾರಿಗಳು ಹೇಳಿದರು. 10 ಎಕರೆಯನ್ನು ಸಹ yellow zone ಗೆ ತರಲಿಕ್ಕೆ ನನ್ನ ಕೈಯಿಂದ ಸಾಧ್ಯವಾಗಲಿಲ್ಲ. ಅದಾದ ಮೇಲೆ ಸ್ವಲ್ಪ ಸ್ವಲ್ಪ ಬೇರೆ ಎಲ್ಲೆಲ್ಲೋ ಮಾಡಿದ್ದಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ಬೆಂಗಳೂರಿಗೆ ನೀರಿನ ಸಮಸ್ಯೆ ಅಷ್ಟು ದೊಡ್ಡ ಪ್ರಮಾಣದಲ್ಲಿ ಮುಂದಿನ ದಿನಗಳಲ್ಲಿ ಬರುತ್ತದೆ.

ಆಮೇಲೆ, ಕನಕಪುರ, ರಾಮನಗರ, ಚನ್ನಪಟ್ಟಣ, ಮಾಗಡಿ, ಹೊಸಕೋಟೆ ಸುತ್ತಮುತ್ತಲು ಕೂಡ ಪ್ರತಿವರ್ಷವೂ 10–10 ಸಾವಿರ families ಬೆಂಗಳೂರಿಗೆ ಬರುತ್ತವೆ. ನಾನು ಕೇವಲ ಬೆಂಗಳೂರು ಗ್ರಾಮಾಂತರ ಪ್ರದೇಶದಿಂದ ಬರುವಂಥವರ ಬಗ್ಗೆ ಹೇಳುತ್ತಿದ್ದೇನೆ. - Last time voters list ನಲ್ಲಿಯೇ 40,000 votes ನನ್ನ ತಾಲ್ಲೂಕಿನಲ್ಲಿಯೇ ಕಡಿಮೆಯಾಯಿತು. ರಾಮನಗರದಲ್ಲಿ ಮೂವತ್ತರಿಂದ ಮೂವತ್ತೈದು ಸಾವಿರ

votes ಕಡಿಮೆಯಾಯಿತು. ಹೊಸಕೋಟೆಯಲ್ಲಿ 50 ಸಾವಿರ votes ಕಡಿಮೆಯಾಯಿತು. K.G.F. ನಲ್ಲಂತೂ ಹೇಳಲಿಕ್ಕೇ ಸಾಧ್ಯವಿಲ್ಲ. ಆ ರೀತಿ ಜನ ಬೆಂಗಳೂರಿಗೆ ಬರುತ್ತಿದ್ದಾರೆ. ಈ ರೀತಿ ಬಂದು ಸೇರುವವರಿಗೆಲ್ಲ ನೀರು ಕೊಡಲೇಬೇಕು. Corporation ಗೆ ಹೆಚ್ಚಿಗೆ ಹಣ ಬರುತ್ತದೆ. Central Government ನಿಂದ ಹಣ ಬರುತ್ತಿದೆ. ಬೇಕಾದಷ್ಟು infrastructure ಅನ್ನು ನಾವು create ಮಾಡುತ್ತಿದ್ದೇವೆ. ಆದ್ದರಿಂದ, ನೀವು ದುರುಪಯೋಗವಾಗುತ್ತಿರುವುದನ್ನು ಮತ್ತು unauthorized connections ಅನ್ನು ತಡೆಯಬೇಕು. ಕುಡಿಯುವ ನೀರಿಗೆ ಇವತ್ತು ಎಷ್ಟು ಬೆಲೆ ಇದೆ ಎಂದರೆ, 12, 14 ರೂಪಾಯಿಗಳನ್ನು ಕೊಟ್ಟು ಕುಡಿಯುವ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ. 10–12 ರೂಪಾಯಿಗಳಿಗೆ ಒಂದು ಲೀಟರ್ ಹಾಲು ಸಿಗುತ್ತದೆ, ಆದರೆ 14–15 ರೂಪಾಯಿಗಳಿಗೆ ಒಂದು ಲೀಟರ್ ನೀರು ಸಿಗುತ್ತದೆ. ಇಂಥ ಸಂದರ್ಭದಲ್ಲಿ ಇಂಥ ನೀರನ್ನು ಯಾವ ರೀತಿ ಬಳಕೆ ಮಾಡಿಕೊಳ್ಳಬೇಕೆಂದು ಜನರಿಗೆ ಜಾಗೃತಿ ಮೂಡಿಸದಿದ್ದರೆ ಬಹಳ ಕಷ್ಟವಾಗುತ್ತದೆ. ಪ್ರತಿಯೊಬ್ಬರೂ ಕೂಡ ಸ್ನಾನ ಮಾಡುವುದಿರಲಿ, ಬೆಂಗಳೂರಿನಲ್ಲಿರುವಂಥ ದನಕರುಗಳಿರಬಹುದು, ಅದಕ್ಕೆ ನಾವು ಬೇಡವೆಂದು ಹೇಳುವುದಿಲ್ಲ, ಅವರೆಲ್ಲಾ ರೈತರು ಪಾಪ ಮೊದಲಿನಿಂದಲೂ ಮಾಡಿಕೊಂಡು ಹೋಗುತ್ತಿದ್ದಾರೆ, ಈ ಸಂದರ್ಭದಲ್ಲಿ ಎಲ್ಲರೂ ಇದೇ ನೀರನ್ನು ದನಕರುಗಳನ್ನು ತೊಳೆಯಲಿಕ್ಕೆ, garden ಗೆ ನೀರು ಹಾಕುವುದಕ್ಕೆ ಮುಂತಾದವುಗಳಿಗ್ಗೆ ಬಳಸುತ್ತಿದ್ದಾರೆ. ಆದ್ದರಿಂದ, waste water ಅನ್ನು ವಾಪಸ್ ತೆಗೆದುಕೊಂಡು treatment ಮಾಡಲಿಕ್ಕೆ ನೀವು ಹೊಸ scheme ಜಾರಿಗೆ ತಂದು incentive ಕೊಟ್ಟು ಮಾಡಿಸಬೇಕು. ದಿನೇಶ್ ಗುಂಡೂರಾವ್‌ರವರು ಹೇಳಿದ ಹಾಗೆ, ಮಳೆ ನೀರಿನ ಕೊಯ್ಲು ಬಗ್ಗೆ ಗಮನಹರಿಸಬೇಕು. ಕಳೆದ ಸಾರಿ ಮಳೆ ನೀರನ್ನು ಕೊಯ್ಲು ಮಾಡುವ ಪದ್ಧತಿಯನ್ನು ಕಡ್ಡಾಯ ಮಾಡಲಾಗಿತ್ತು. ಆದರೆ, ಬೆಂಗಳೂರಿನಲ್ಲಿ ಒಬ್ಬರೂ ಸಹ ಅದನ್ನು ಮಾಡಿದ್ದನ್ನು ನಾನು ನೋಡಲಿಲ್ಲ. ಶೋಭಾರವರು ಅಲ್ಲೆಲ್ಲೋ life style ಎನ್ನುವ ಒಂದು project ದೇವನಹಳ್ಳಿಯ ಹತ್ತಿರ ಮಾಡಿರುವುದನ್ನು ನೋಡಿದ್ದೇನೆ. ಅವರೊಬ್ಬರು ಮಾತ್ರ BWSSB ಯವರು ನೀರು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ ಮೇಲೆ, 5–6 ಕೋಟಿ ರೂಪಾಯಿಗಳನ್ನು invest ಮಾಡಿ ಮಳೆ ನೀರನ್ನು ಉಪಯೋಗಿಸಿಕೊಂಡು

ಮಾಡಿದ್ದನ್ನು ನಾನು ನೋಡಿದ್ದೇನೆ. ಅದು ಬಿಟ್ಟರೆ ಬೇರೆ ಯಾರೂ ಮಾಡಿಲ್ಲ. ಇದಕ್ಕೆ ನೀವು ಹೆಚ್ಚು incentive ಕೊಡಬೇಕು. ಅವರಿಗೇನಾದರೂ ಯಾವುದಾದರೊಂದು ರೀತಿಯಲ್ಲಿ ಸಹಾಯ ಮಾಡುತ್ತೇವೆಂದು ಹೇಳಿ ಅವರಿಗೆ benefit offer ಮಾಡಿದಾಗ ಮಾತ್ರ ಜನರು ಮುಂದೆ ಬರುತ್ತಾರೆ. ನೀವು ಒಂದು ಕಡೆ water ಅನ್ನು recycle ಮಾಡಿ, treatment ಮಾಡಿ, ಆ ನೀರನ್ನು ಗಿಡಗಳಿಗೆ ಉಪಯೋಗಿಸಿಕೊಳ್ಳಲಿಕ್ಕೆ ನಾವು ಸಹಾಯ ಮಾಡುತ್ತೇವೆಂದು announce ಮಾಡಬೇಕು. ಆಗ ನೀವು ಹಂತ ಹಂತವಾಗಿ ನೀರನ್ನು ಬಳಕೆ ಮಾಡಿದರೆ magnet cities ಗೆ ಹೆಚ್ಚು ಒತ್ತನ್ನು ಕೊಟ್ಟು ಜನರು ಅಲ್ಲಿಯೇ ಉಳಿದುಕೊಳ್ಳುವ ರೀತಿ ಮಾಡಿ ಏನಾದರೂ ಮಾಡಿ ಜನರು ಬೆಂಗಳೂರಿಗೆ ಬರುವುದನ್ನು ಕಡಿಮೆ ಮಾಡಿದರೆ ಸ್ವಲ್ಪ ಸಮಸ್ಯೆ ಕಡಿಮೆಯಾಗಬಹುದು. ಏಕೆಂದರೆ, ಬೆಂಗಳೂರು ಸುತ್ತಮುತ್ತ ಕುಡಿಯುವುದಕ್ಕೆ ಕಾವೇರಿ ನೀರು ಬಿಟ್ಟರೆ ಬೇರೆ ನೀರು ಸಿಗುವುದಿಲ್ಲ. ಹಾಸನ ಕಡೆಯಿಂದ ನೀರನ್ನು ತರುವುದಕ್ಕಾಗುವುದಿಲ್ಲ. ಅಲ್ಲಿಂದು ನೀರು ತರುವುದಕ್ಕೆ ಹೋದರೆ ದೊಡ್ಡ ಯುದ್ಧ ನಡೆಯುತ್ತದೆ. ಮಂಗಳೂರು ಕಡೆಯಿಂದ ನೀರನ್ನು ತರುವುದಕ್ಕೆ ಹೋದರೆ ಅದು ತುಂಬಾ costly ಆಗುತ್ತದೆ. ನಾವು ಎಷ್ಟೇ ಮಾತನಾಡಿದರೂ ನಾವೆಲ್ಲ ultimately ಬೆಂಗಳೂರಿನ ಮೇಲೆಯೇ depend ಆಗಿದ್ದೇವೆ. ಈ ರಾಜ್ಯಕ್ಕೆ ಬೆಂಗಳೂರು ಹೃದಯವಿದ್ದ ಹಾಗೆ, ನಾವು ಬಿಡುವುದಕ್ಕಾಗುವುದಿಲ್ಲ. ಇಲ್ಲಿಗೆ ಬಂದವರು ಯಾರೂ ವಾಪಸ್ಸು ಊರಿಗೆ ಹೋಗುವುದಿಲ್ಲ. ಗುಲಬರ್ಗಾದಿಂದ ರಾಯಚೂರಿನಿಂದ ಬಂದರೂ ವಾಪಸ್ ಹೋಗುವುದಿಲ್ಲ. ಕನಕಪುರದವನಾದ ನಾನೂ ವಾಪಸ್ ಹೋಗುತ್ತಿಲ್ಲ, ಇಲ್ಲಿಯೇ ಮನೆ ಮಾಡಿಕೊಂಡು ಸಂಸಾರ ನಡೆಸಿಕೊಂಡಿರಬೇಕು. ಹೋಗಿರುವಂಥ ಸಂದರ್ಭದಲ್ಲಿ ಕುಡಿಯುವ ನೀರನ್ನು ಕಾಪಾಡಲೇಬೇಕಾಗುತ್ತದೆ. ಆದ್ದರಿಂದ, ಮಂತ್ರಿಯವರು ದಿಟ್ಟವಾದ ಕ್ರಮ ತೆಗೆದುಕೊಳ್ಳಬೇಕು. ಬೆಂಗಳೂರಿನಲ್ಲಿ ಕುಡಿಯುವ ನೀರಿನದು ದೊಡ್ಡ ಸಮಸ್ಯೆಯಾಗಿದೆ. ಇದನ್ನು ಉಳಿಸಿಕೊಳ್ಳಬೇಕು. Central Government ನಿಂದ power ಗೋಸ್ಕರ Jawaharlal Nehru Mission ಬಗ್ಗೆ ನಾನೊಂದು note ನೋಡುತ್ತಿದ್ದೆ. Solar energy ಯನ್ನು ಯಾರ್ಯಾರು generate ಮಾಡಿಕೊಡುತ್ತಾರೆ ಅವರಿಗೆ per unit ಗೆ 18.5 ರೂ. ಕೊಡುತ್ತೇವೆಂದು announce ಮಾಡಿದ್ದಾರೆ. ಹೀಗೆ

ಕೆಲವು ಸಂದರ್ಭದಲ್ಲಿ ಮಾಡಿದ್ದರೆ. Solar energy ಯನ್ನೂ ನಮ್ಮಲ್ಲಿಯೂ ಸಹ ಬಹಳಷ್ಟು ಜನರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರಿಂದ ಸಹಾಯವಾಗುತ್ತದೆ. ಆದ್ದರಿಂದ, ಈ ರೀತಿ ಹೆಚ್ಚಿಗೆ incentive ಕೊಡುವುದಕ್ಕೆ ಮುಂದಾದಾಗ ಮಾತ್ರ, ಇದನ್ನು ಕಾರ್ಯರೂಪಕ್ಕೆ ತಂದಾಗ ಮಾತ್ರ ಈ ಬೆಂಗಳೂರು ಉಳಿಯುತ್ತದೆ. ನಾನು ಯಾವುದೋ ಸಂದರ್ಭದಲ್ಲಿ 7-8 ವರ್ಷಗಳ ಹಿಂದೆ Paris ಗೆ ಹೋಗಿದ್ದೆ. ಅಲ್ಲಿಯ Water Baord Chairman ಅನ್ನು ಜೈಲಿಗೆ ಹಾಕಿದ್ದರು. ಏತಕ್ಕೆಂದು ಕೇಳಿದರೆ, ಏನು agreement ಮಾಡಿಕೊಂಡಿದ್ದರೋ ಆ ಪ್ರಕಾರ ಎರಡು ದಿನ ನೀರನ್ನು ಮೇಲಕ್ಕೆತ್ತುವುದಕ್ಕೆ ನೀರಿನ Pressure ಎಷ್ಟು ಬರಬೇಕಾಗಿತ್ತೋ ಅಷ್ಟು ಬರಲಿಲ್ಲವೆಂದು ಅಲ್ಲಿಯ ಜನರು ಕೇಸ್ ಹಾಕಿದ್ದರು. ಆ ಪ್ರಕರಣದಲ್ಲಿ ಅದರ Chairman ಅನ್ನು ಜೈಲಿಗೆ ಹಾಕಿದ್ದರು. ಆ ರೀತಿ ಭಯ ನಮ್ಮಲ್ಲಿ ನಿಮ್ಮಲ್ಲಿ ಉಂಟಾಗದಿದ್ದರೆ, ನಿಮ್ಮ Chairman ಅನ್ನು ಒಳಕ್ಕೆ ಹಾಕುವುದಕ್ಕೆ ನೀವು ಚಿಂತನೆ ಮಾಡಲಿಕ್ಕಾಗಲಿಲ್ಲವೆಂದರೆ ಅಧಿಕಾರಿಗಳು ಕೆಲಸವನ್ನೇ ಮಾಡುವುದಿಲ್ಲ. ನೀವು ಮಾಡುವುದಿಲ್ಲ, ಕೆಳಗಿರುವವರನ್ನಂತೂ ಕೇಳುವ ಹಾಗೆಯೇ ಇಲ್ಲ. ಸಮರ್ಪಕವಾಗಿ ನೀರನ್ನು ಬಳಕೆ ಮಾಡಲಿಕ್ಕೆ ನೀರು ಪವಿತ್ರವಾದುದು ಅದನ್ನು ಉಳಿಸಿಕೊಳ್ಳಲಿಕ್ಕೆ ಏನಾದರೊಂದು Permanent solution ಈ ರಾಜ್ಯದಿಂದ ತಾವು ಪ್ರಾರಂಭ ಮಾಡಬೇಕು.

ಶ್ರೀಮತಿ ಶೋಭಾ ಕರಂದ್ಲಾಜೆ (ಯಶವಂತಪುರ) : ಮಾನ್ಯ ಅಧ್ಯಕ್ಷರೆ, ಮೊನ್ನೆ ಮಂತ್ರಿಯವರು ಬೆಂಗಳೂರಿನ ಎಲ್ಲಾ ಶಾಸಕರ ಸಭೆಯನ್ನು ಕರೆದಿದ್ದರು. ಅದಕ್ಕಾಗಿ ಅವರಿಗೆ ಧನ್ಯವಾದಗಳು. ಬೆಂಗಳೂರು ನಗರದ ಕುಡಿಯುವ ನೀರಿನ ಬಗ್ಗೆ ದಿನೇಶ್ ಗುಂಡೂರಾವ್‌ರವರು ಮಾತನಾಡಿದರು. ನಾವೆಲ್ಲ ಬೆಂಗಳೂರು ನಗರದಿಂದ ಹೊರಗಡೆ ಇರುವಂಥ ಬೋರ್‌ವೆಲ್‌ಗಳ ಮೇಲೆ depend ಆಗಿರುವ ಸದಸ್ಯರು ಬಹಳ ಜನ ಇಲ್ಲಿದ್ದೇವೆ. ನಮ್ಮ ಸಮಸ್ಯೆ ಹೇಳಲಿಕ್ಕೆ ಆಗದಿರುವಷ್ಟು ದೊಡ್ಡ ಸಮಸ್ಯೆ ಇದೆ. ಏಕೆಂದರೆ, ಬೆಂಗಳೂರಿನ ಸುತ್ತಮುತ್ತ ಇರುವ ಬೋರ್‌ವೆಲ್‌ಗಳಲ್ಲಿ ನೀರು ಸಿಗುತ್ತಿಲ್ಲ. ಜೊತೆಗೆ, ಬಹಳಷ್ಟು ಬೋರ್‌ವೆಲ್‌ಗಳು dry up ಆಗಿವೆ. ಬೆಂಗಳೂರು ಸುತ್ತಮುತ್ತ ಇರುವ ಎಲ್ಲಾ ಕೆರೆಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಂಡಿದ್ದೇವೆ. ಅಂದರೆ ಕೆರೆಗಳ drain up ಮಾಡಿದ್ದೇವೆ ಮತ್ತು ಅಲ್ಲಿ ಅಭಿವೃದ್ಧಿ ಕೆಲಸ ನಡೆಯುತ್ತಿದೆ,

0.17F-93

ಹೂಳೆತ್ತುವ ಕೆಲಸ ನಡೆಯುತ್ತಿದೆ. ಈ ಕಾರಣಕ್ಕಾಗಿ, ಅಲ್ಲಿ ಸುತ್ತಮುತ್ತಲಿರುವ ಎಲ್ಲಾ ಬೋರ್‌ವೆಲ್‌ಗಳು dry up ಆಗಿವೆ. ಬೆಂಗಳೂರು ಸುತ್ತಮುತ್ತಲಿನಲ್ಲಿ ನನ್ನ ಕ್ಷೇತ್ರವೂ ಸೇರಿದಂತೆ ಯಲಹಂಕ, ಮಹದೇವಪುರ ಇರಬಹುದು, ಹಲವಾರು ಕ್ಷೇತ್ರಗಳಲ್ಲಿ ಬೋರ್‌ವೆಲ್‌ಗಳ ಅಗತ್ಯ ತುಂಬಾ ಇದೆ. ಜೊತೆಗೆ, ಇರುವಂಥ ಬೋರ್‌ವೆಲ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಅಳವಡಿಸಬೇಕು. ಈ ಬಗ್ಗೆ ನಾವು ಮೊನ್ನೆ ಮಾನ್ಯ ಮಂತ್ರಿಯವರಲ್ಲಿ request ಮಾಡಿದ್ದೇವೆ. ವಿದ್ಯುಚ್ಛಕ್ತಿ connection ಅನ್ನು ಬೋರ್‌ವೆಲ್‌ಗಳಿಗೆ ಕೊಡುತ್ತಿಲ್ಲ. ಮಾನ್ಯ ಮಂತ್ರಿಯವರು ಇವತ್ತು ಅಧಿಕಾರಿಗಳಿಗೆ ಹೇಳಿ ಎಲ್ಲಿ ಬೋರ್‌ವೆಲ್ ಕೊರೆದು 2-3 ತಿಂಗಳಾಗಿದ್ದರೂ ಕೂಡ ವಿದ್ಯುಚ್ಛಕ್ತಿ connection ಕೊಡುವುದಕ್ಕೆ ಹಿಂದೆ ಮುಂದೆ ಏಕೆ ನೋಡುತ್ತಾರೆ? ವಿದ್ಯುಚ್ಛಕ್ತಿ ಸಂಪರ್ಕ ಕೊಡದ ಮೇಲೆ ಬೋರ್‌ವೆಲ್ ಏಕೆ ಕೊರೆಸುತ್ತಾರೋ ನನಗರ್ಥವಾಗುತ್ತಿಲ್ಲ. ಬೋರ್‌ವೆಲ್ ಕೊರೆದ ಮೇಲೆ ಅದಕ್ಕೆ ಪಂಪ್ ಅಳವಡಿಸಬೇಕೆಂದು ನಮ್ಮ ಅಧಿಕಾರಿಗಳಿಗೆ ಏಕೆ ಗೊತ್ತಾಗುವುದಿಲ್ಲ. ಯಾರು contract ದಾರರು? ಅವರಿಗೆ ಒಂದು unit ಕೆಲಸ ಕೊಟ್ಟಿದ್ದೀರಾ ಅಥವಾ ಅರ್ಧಂಬರ್ಧ ಕೆಲಸ ಕೊಟ್ಟಿದ್ದೀರಾ, ನನಗೊಂದೂ ಅರ್ಥವಾಗುತ್ತಿಲ್ಲ. ಅವರು ಬೋರ್‌ವೆಲ್ ಕೊರೆದು ಅವರಷ್ಟಕ್ಕೆ ಹೊರಟು ಹೋಗುತ್ತಾರೆ. ಆಮೇಲೆ, ಪಂಪ್ ಅಳವಡಿಸಲು ಒಂದೆರಡು ತಿಂಗಳು ಬೇಕು. ಬೋರ್‌ವೆಲ್ ಹಾಕಿದ್ದಾರೆ ನೀರು ಬರುತ್ತದೆಂದು ಜನರು ಕಾಯುತ್ತಿರುತ್ತಾರೆ. ಇವರು ಪಂಪ್ ಅಳವಡಿಸುವ ವೇಳೆಗೆ ಅದು dry up ಆಗಿರುತ್ತದೆ. ಈ ರೀತಿ ಅನಾವಶ್ಯಕವಾಗಿ ಹಣ waste ಆಗುತ್ತಿರುವುದು ಇಲ್ಲಿ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ಈ ಕೆರೆಗಳನ್ನು ಅಭಿವೃದ್ಧಿ ಮಾಡಲಿಕ್ಕೇನು ತೆಗೆದುಕೊಂಡಿದ್ದೀರಿ; ತಕ್ಷಣ ಅದು ಆಗುವ ಹಾಗೆ ಮಾಡಬೇಕು. ಏಕೆಂದರೆ, ಈ ವರ್ಷ ಮಳೆ ಬಂದಾಗ ನೀರು ತುಂಬಿಕೊಂಡರೆ at least ಬರುವ ವರ್ಷಕ್ಕಾದರೂ ನಮಗೆ ಅನುಕೂಲವಾಗುತ್ತದೆ. ಇವತ್ತು ಕೆರೆಯ ಕೆಲಸವೇ ನಿಧಾನವಾಗುತ್ತಿದೆ. BDA and BBMP ಯವರೇನು ಕೆರೆಯ ಅಭಿವೃದ್ಧಿ ಕೆಲಸವನ್ನು ಒಪ್ಪಿಕೊಂಡಿದ್ದಾರೆ ಆ ಕೆಲಸವನ್ನು ಈ ಬೇಸಿಗೆ ಕಾಲದಲ್ಲಿ ಮಾಡಿ ಮುಗಿಸಬೇಕು. ಮಳೆಗಾಲ ಬಂದ ಸಂದರ್ಭದಲ್ಲಿ ಕೆರೆಗೆ ನೀರು ತುಂಬುತ್ತದೆ, ಬರುವ ವರ್ಷಕ್ಕಾದರೂ ನೀರು ಆಗುತ್ತದೆ. ಆದ್ದರಿಂದ, immediate ಆ

ಕೆಲಸವಾಗಬೇಕು. ಹಾಗೆಯೇ, ನಮಗೆ ಹೊಸ ಬೋರ್‌ವೆಲ್‌ಬೇಕೆಂದು ಬೆಂಗಳೂರು ಸುತ್ತಮುತ್ತಲಿನ ಕ್ಷೇತ್ರಗಳ ಶಾಸಕರು ಒಂದು ಪಟ್ಟಿಯನ್ನು ಕೊಟ್ಟಿದ್ದೇವೆ. ಹಾಗೆಯೇ, ಹಳೆಯ ಬೋರ್‌ವೆಲ್‌ಗಳನ್ನು deepening ಮಾಡಬೇಕು, ಕೆಲವು ಬೋರ್‌ವೆಲ್‌ಗಳನ್ನು hydro fracturing ಮಾಡಬೇಕು. ಈ ಮೂರೂ ಕೆಲಸಗಳನ್ನು ದಯಮಾಡಿ ಮಾಡಬೇಕೆಂದು ವಿನಂತಿಸುತ್ತೇನೆ. ಹಾಗೆಯೇ, ಅಧಿಕಾರಿಗಳ ಸಂಖ್ಯೆ ಕಡಿಮೆ ಇದೆ. ಕೆಳಮಟ್ಟದ ಅಧಿಕಾರಿಗಳ ಸಂಖ್ಯೆ ಕಡಿಮೆ ಇದೆ ಎಂದು ಹೇಳಿದ್ದಾರೆ. ನೀರು ಕೊಡುವುದಕ್ಕಾಗುವು ದಿಲ್ಲವೆಂದು ಅಧಿಕಾರಿಗಳು ಫೋನ್ ಮಾಡಿದರೂ ಸಿಗುವುದಿಲ್ಲ, ನೇರವಾಗಿ ಭೇಟಿ ಮಾಡಿದರೂ ಸಿಗುವುದಿಲ್ಲ. ಈ ಪರಿಸ್ಥಿತಿ ಇದೆ. ಅದಕ್ಕಾಗಿ Appointment ಮಾಡುವುದಕ್ಕೆ time ತೆಗೆದುಕೊಂಡರೆ ನೀವು outsource ವ್ಯವಸ್ಥೆಯನ್ನಾದರೂ ಮಾಡಿ. ಯಾರಾದರೊಬ್ಬರು ಸ್ಥಳದಲ್ಲಿದ್ದರೆ ನಮಗೆ ಹೇಳುವುದಕ್ಕಾದರೂ ಒಬ್ಬ ವ್ಯಕ್ತಿ ಇದ್ದಾನೆಂದು ನಮಗಾದರೂ ಅನಿಸುತ್ತದೆ. ಇಲ್ಲವೆಂದರೆ, ಯಾರೂ ಫೋನ್ ತೆಗೆದುಕೊಳ್ಳುವುದಿಲ್ಲ. ಅಧಿಕಾರಿಗಳ ಕಷ್ಟ ನಮಗರ್ಥವಾಗುತ್ತದೆ. ಅವರಿಂದ ನೀರು ಕೊಡುವುದಕ್ಕಾಗುವುದಿಲ್ಲ. ಅದಕ್ಕೆ ಅವರು ಯಾರ ಕೈಗೂ ಸಿಗುವುದಿಲ್ಲ. ಇಂಥ ಪರಿಸ್ಥಿತಿ ಇದೆ. ಇನ್ನು, ಕುಡಿಯುವ ನೀರಿನ ಸಲುವಾಗಿ long term ಯೋಜನೆ ಮಾಡಬೇಕೆಂದು ಬಹಳಷ್ಟು ಸದಸ್ಯರು ಹೇಳಿದರು. ವೃಷಭಾವತಿ ನದಿಯನ್ನು ಈಗಾಗಲೇ ಕೆಡಿಸಿಯಾಗಿದೆ ಅಲ್ಲಿ ಕೇವಲ ಕಲುಷಿತ ನೀರು ಹರಿದುಹೋಗುತ್ತಿದೆ. ಅರ್ಕಾವತಿ ನದಿ ನೀರು ಇವತ್ತು ನಮಗೆ ಜೀವದಾನವಾಗಬಹುದು. ಅರ್ಕಾವತಿ ನದಿಯ ಪುನಶ್ಚೇತನವಾಗಬೇಕು. ಅದು ಬೆಂಗಳೂರಿಗೆ ಜೀವದಾನ ಕೊಡುತ್ತದೆ. ಹಾಗೆಯೇ, recycling ಮಾಡುವ ಬಗ್ಗೆ serious ಆಗಿ ಯೋಚನೆ ಮಾಡಬೇಕು. ನಮ್ಮ ಭಾಗಗಳಲ್ಲಿ ಬೋರ್‌ವೆಲ್‌ನಲ್ಲಿ ನೀರಿಲ್ಲದಿದ್ದರೆ ನೀರನ್ನು ಎಲ್ಲಿಂದ ಕೊಡುವುದಕ್ಕಾಗುತ್ತದೆ? ನೀರಿನ ಸಮಸ್ಯೆಯಿಂದಾಗಿ ಈಗ ಬಿಬಿಎಂಪಿ ಚುನಾವಣೆ ಬರುತ್ತಿರುವುದರಿಂದ ನಾವು ಕ್ಷೇತ್ರಗಳಿಗೆ ಹೋಗುವುದೇ ಕಷ್ಟವಾಗುತ್ತಿದೆ. ಅದಕ್ಕಾಗಿ ದಯವಿಟ್ಟು ಹೊಸ ಬೋರ್‌ವೆಲ್ ಕೊರೆಸಬೇಕು. ನಿಮಗೆ ಬೇಕಾದರೆ ಬೋರ್‌ವೆಲ್ ಕೊರೆಸಿಕೊಳ್ಳಿ ಎಂದು ಮಂತ್ರಿಯವರು ಮೀಟಿಂಗ್‌ನಲ್ಲಿ ಹೇಳಿದರು. ಆದರೆ, ಇವತ್ತು ಬೋರ್‌ವೆಲ್ ಕೊರೆಯುವುದಕ್ಕೆ ಯಾರೂ ಮುಂದೆ ಬರುತ್ತಿಲ್ಲ. ಅವರಿಗೇನು bad experience ಆಗಿದೆಯೋ ಅಥವಾ ಅವರಿಗೆ ಇಷ್ಟವಿಲ್ಲವೋ ನಮಗೆ

ಗೊತ್ತಿಲ್ಲ. ಒಟ್ಟಿನಲ್ಲಿ ಬೋರ್‌ವೆಲ್ ಕೊರೆಯುವುದಕ್ಕೆ ಮುಂದೆ ಬರುತ್ತಿಲ್ಲ. ಆದ್ದರಿಂದ, ನೀವೇ ಜವಾಬ್ದಾರಿ ತೆಗೆದುಕೊಂಡು ನಮಗೆ ಬೇಕಾದ ಕಡೆಗೆ ಬೋರ್‌ವೆಲ್ ಅನ್ನು ಕೊರೆಸಿ, deepening ಮಾಡುವವರನ್ನು ಕಳಿಸಿ, hydro fracturing ಮಾಡುವವರನ್ನು ಕಳಿಸಿ, tanker ನಲ್ಲಿ ನೀರು ಪೂರೈಕೆ ಮಾಡುವುದಕ್ಕೆ ತಕ್ಷಣ ಆಜ್ಞೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಂತ್ರಿಯವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್.ಎ.ಹ್ಯಾರೀಸ್ (ಶಾಂತಿನಗರ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲರೂ ಮಾತನಾಡಿದ್ದಾರೆ, ವಿಶೇಷವಾಗಿ ಹೇಳುವುದು ಏನೂ ಇಲ್ಲ. ಕರ್ನಾಟಕದ ಬಗ್ಗೆ ಹೇಳುವುದಾದರೆ, ಹಿಂದೆ ನೀರು ಕೇಳುವುದಕ್ಕೆ ಹೋದರೆ ನಾವು ಮಜ್ಜಿಗೆ ಕೊಡುತ್ತಿದ್ದೇವಂತೆ, ಆ ರೀತಿಯಾಗಿ ಧಾರಳ ವಾಗಿತ್ತು ನಮ್ಮ ಸಂಸ್ಕೃತಿ. ಇವತ್ತು ನೀರು ಕೇಳಿದರೆ ಮಜ್ಜಿಗೆ ಕೊಡುತ್ತಾರೆ, ಏಕೆಂದರೆ, ನೀರು ಇಲ್ಲದೇ ಇರುವುದರಿಂದ ಮಜ್ಜಿಗೆ ಕೊಡುವಂಥ ಪರಿಸ್ಥಿತಿ ಇದೆ. ಖಂಡಿತವಾಗಿ ಎಲ್ಲಾ ಭಾಗದಲ್ಲೂ ಕುಡಿಯುವ ನೀರಿನ ಸಮಸ್ಯೆ ಇದೆ, ಇಲ್ಲ ಎನ್ನುವ ಪ್ರಶ್ನೆಯೇ ಇಲ್ಲ, ಎಲ್ಲಾ ಕಡೆ ಸಮಸ್ಯೆ ಇದೆ, but at lest ಅದನ್ನು ನಾವು ಯಾವ ರೀತಿ manage ಮಾಡಬೇಕೆನ್ನುವುದರ ಬಗ್ಗೆ ಇತ್ತೀಚೆಗೆ ಹತ್ತು ದಿವಸಗಳ ಹಿಂದೆ ನಮ್ಮ ಸಚಿವರು ಸಭೆ ಕರೆದು ನಮ್ಮ ಜೊತೆಯಲ್ಲಿ ಚರ್ಚಿಸಿದರು. ನಮ್ಮ ಶಾಸಕ ಮಿತ್ರರು ಹೇಳಿದ ಹಾಗೆ, ಬೋರ್‌ವೆಲ್ ಮಾಡಿ ಎಂದು ಹೇಳಿದ್ದಾರೆ, ಆದರೆ ಬೋರ್‌ವೆಲ್ ಮಾಡಿ ಎಂದಾಕ್ಷಣಕ್ಕೆ ಬೋರ್‌ವೆಲ್ ಆಗುತ್ತಿಲ್ಲ. ಆಗಿರುವ ಬೋರ್‌ವೆಲ್‌ಗಳಿಂದ ನೀರು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಇನ್ನು ಮುಂದೆ ಬೋರ್‌ವೆಲ್‌ಗಳನ್ನು ಮಾಡುವುದಕ್ಕೆ ಕೂಡ ಕಷ್ಟವಿದೆ. ದಯವಿಟ್ಟು ಸಚಿವರು ಈ ಬಗ್ಗೆ ಯಾವ ರೀತಿ ಯೋಜನೆ ಮಾಡಬೇಕೆಂದು ಆಲೋಚಿಸಬೇಕಾಗುತ್ತದೆ. ಏಕೆಂದರೆ, ರಾಜ್ಯದಲ್ಲಿ Power shortage ಇದೆ. ಮೊನ್ನೆ ಮುಖ್ಯಮಂತ್ರಿಗಳು ಬೆಂಗಳೂರು ಸಿಟಿಗೆ 23 ಗಂಟೆ ಕರೆಂಟ್ ಕೊಡುತ್ತೇವೆಂದು ಹೇಳಿದ್ದಾರೆ. ಆದರೂ ಕೆಲವು ಕಡೆ ಪವರ್ ಕಟ್ ಆಗುತ್ತಿದೆ. ನಾನು ಪ್ರತ್ಯೇಕವಾಗಿ ಕೇಳುವುದು ಏನೆಂದರೆ, ಎಲ್ಲೆಲ್ಲಿ ಕುಡಿಯುವ ನೀರಿನ ಪಂಪಿಂಗ್ ಇದೆ ಅಲ್ಲಿಗೆ ಒಂದು ಸೆಕೆಂಡ್ ಕೂಡ ಪವರ್ ಕಟ್ ಮಾಡದೇ ಕೊಟ್ಟರೆ ಮಾತ್ರ ಇರುವ ನೀರು at lest ಎಲ್ಲಾ ಕಡೆಗೂ ಮುಟ್ಟಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ಇರುವ ನೀರು ಕೂಡ ಎಲ್ಲಾ ಕಡೆಗೂ ಹೋಗಲಿಕ್ಕೆ ಸಾಧ್ಯವಾಗುತ್ತಿಲ್ಲ. ಮಂತ್ರಿಯವರು, ನಮಗೆ ಈಗ

ಇಂತಿಷ್ಟು ಕ್ಯೂಸೆಕ್ ನೀರು ಕಡಿಮೆ ಬರುತ್ತದೆಂದು ಉತ್ತರದಲ್ಲಿ ಹೇಳಿದ್ದಾರೆ. ನಿಜ. ಈಗ ನಾವು 4th Stage ನಲ್ಲಿದ್ದೇವೆ. ಇದು full ಆದರೂ ನಮಗೆ shortage ಆಗುತ್ತದೆ. ಆದ್ದರಿಂದ immediate ಆಗಿ 5th stage ಗೆ ನಾವು plan up ಮಾಡಬೇಕಾಗುತ್ತದೆ. ನನ್ನ ವ [illegible]ವಿ ಏನೆಂದರೆ ಹಳೆಯ ಬೆಂಗಳೂರು ಸಿಟಿಯಲ್ಲಿ ತುಂಬಾ ಹಿಂಪ [illegible]ಸ್‌ಗಳನ್ನು change ಮಾಡಿರುವುದು. ಈ ಬಗ್ಗೆ ದಿನೇಶ್ ಗುಂಡ[illegible]ವ್‌ರವರು ಹೇಳಿದರು. budget ನಲ್ಲಿ ಬರೀ 100 ಕೋಟಿ ರೂಪಾಯಿ provision ಮಾಡಿದಿರಿ. ದಯವಿಟ್ಟು ಇದನ್ನು ಜಾಸ್ತಿ ಮಾಡಿ, ಕೆಲಸ ಮಾಡಬೇಕಾದರೆ ದುಡ್ಡು ಬೇಕಾಗುತ್ತದೆ, ದುಡ್ಡು ಇಲ್ಲದಿದ್ದರೆ ಕೆಲಸವಾಗುವುದಿಲ್ಲ. ನೀವು provision ನಲ್ಲಿಟ್ಟಿರುವ ದುಡ್ಡು ಸಾಕಾಗುವುದಿಲ್ಲ. ಸ್ವಲ್ಪ ಜಾಸ್ತಿ ಹಣ ಕೊಟ್ಟರೆ ನಮಗೆ ಕೆಲಸ ಮಾಡಲಿಕ್ಕೆ ಆಗುತ್ತದೆ. ಅದೇ ರೀತಿ ಕೆಲಸ ಮಾಡಲಿಕ್ಕೆ BWSSB ಯಲ್ಲಿ engineers ಕೂಡ ಇಲ್ಲ. ಈ ಬಗ್ಗೆ ಕೂಡ ಮಂತ್ರಿಯವರು ಎಲ್ಲಾ ರೆಡಿಯಾಗಿದೆ ಕೊಡುತ್ತೇವೆಂದು ಹೇಳಿದ್ದಾರೆ. ಇದನ್ನು ಕೂಡ ಆದಷ್ಟು ಬೇಗನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಧನ್ಯವಾದಗಳು.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲ ಮಂಡಳಿಯ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನೇಶ್ ಗುಂಡುರಾವ್‌ರವರು, ಶಿವಕುಮಾರ್‌ರವರು, ಶೋಭಾ ಕರಂದ್ಲಾಜೆಯವರು, ಹ್ಯಾರಿಸ್‌ರವರು, ಬೆಂಗಳೂರಿನ ನೀರಿನ ಸಮಸ್ಯೆ ಬಗ್ಗೆ ಸುದೀರ್ಘವಾಗಿ ಮಾತನಾಡಿ ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ದಿನೇಶ್ ಗುಂಡುರಾವ್‌ರವರು, captive powers plants ಆಗಬೇಕಾಗಿದೆ, ಸಮಯಕ್ಕೆ ಸರಿಯಾಗಿ ಬೋರ್‌ವೆಲ್‌ಗಳು ಹಾಕುತ್ತಿಲ್ಲ, ಹೊರಗಡೆಯವರು ಯಾರೂ ಬರುತ್ತಿಲ್ಲ, ಟ್ಯಾಂಕರ್ಸ್ ಮೂಲಕ ನೀರು ಕೊಡಬೇಕು, long term planning ಮಾಡಬೇಕು, old area ಗಳಲ್ಲಿ ಪೈಪುಗಳನ್ನು change ಮಾಡಬೇಕು, ನಾಲ್ಕನೇ ಹಂತ ಏಕೆ ಲೇಟಾಯಿತು, ಮಳೆ ಕೊಯ್ಲು ಪದ್ಧತಿಯನ್ನು ಎಷ್ಟು ಕಡೆ ಅಳವಡಿಸಿದಿರಿ ಎಂದು ಆರು ಪ್ರಶ್ನೆಗಳನ್ನು ಎತ್ತಿದ್ದಾರೆ. ಈ captive powers plants ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕಾವೇರಿ ನಾಲ್ಕನೆ ಹಂತ ಎರಡನೇ ಫೇಸ್ ಕಾಮಗಾರಿಗೆ ಮೊನ್ನೆ ಶಿಲನ್ಯಾಸ ಮಾಡಿದರು. ಆ ದಿವಸ BWSSB ಗೆ

ಒಂದು ಪ್ರತ್ಯೇಕವಾಗಿ captive powers plants ಹಾಕಿಕೊಳ್ಳಿ ಅದಕ್ಕೆ ಬೇಕಾಗಿರುವ ಹಣ ಮಂಜೂರು ಮಾಡುತ್ತೇನೆಂದು ಹೇಳಿದ್ದಾರೆ. ಈಗಾಗಲೇ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇವೆ. ಅದು ಯಾವ ಭಾಗದಲ್ಲಿ ಸೂಕ್ತವಾಗುತ್ತದೆ, ಹೇಗೆ ಮಾಡಬೇಕು, ಈ ಬಗ್ಗೆ ವಿದ್ಯುತ್ ಇಲಾಖೆಯ ಅಧಿಕಾರಿಗಳ ಜೊತೆಗೆ ಮತ್ತು ತಜ್ಞರ ಜೊತೆಗೆ ಚರ್ಚಿಸಿ ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ ಎಂದು ಮಾನ್ಯ ಮುಖ್ಯಮಂತ್ರಿಗಳು ಆದೇಶಿಸಿದ್ದಾರೆ. ಅದನ್ನು ನಾವು ಮಾಡುತ್ತಿದ್ದೇವೆ. ಬೋರ್‌ವೆಲ್ ಸಮಸ್ಯೆ ಏನೆಂದರೆ, no water no money ಎಂದು ಏತಕ್ಕಾಗಿ ಮಾಡಿದ್ದು ಎಂದರೆ, ಅದಕ್ಕಾಗಿ ಬೋರ್‌ವೆಲ್ ನವರು ಬರುತ್ತಿಲ್ಲ. ನೀರು ಇಲ್ಲದೆ ಸುಮ್ಮನೆ ಬೋರ್‌ವೆಲ್ ಕೊರೆದಿದ್ದೇವೆಂದು ದುಡ್ಡು ತೆಗೆದುಕೊಂಡು ಹೋದರೆ ನಾಳೆ ನಾವು ಜವಾಬ್ದಾರರಾಗುತ್ತೇವೆಂದು ನೀರು ಇಲ್ಲದ ಕಡೆ ನಾವು ದುಡ್ಡು ಕೊಡುವುದಿಲ್ಲವೆಂದು ಹೇಳಿದೆವು. ಅದಕ್ಕೆ ಮೊದಲನೇ ಹಂತದಲ್ಲಿ ಕರೆದಾಗ 8 ಜನ ಭಾವಹಿಸಿದರು, ಎರಡನೇ ಸಾರಿ ಕರೆದಾಗ 12 ಜನ ಭಾಗವಹಿಸಿದರು. 3ನೇ ಸಾರಿ ಕರೆದಾಗ 8 ಜನ ಮಾತ್ರ ಭಾಗವಹಿಸಿದರು. ಜಾಸ್ತಿ ಆಸಕ್ತಿ ವಹಿಸಿಕೊಂಡು ಇದರಲ್ಲಿ ಯಾರೂ ಕೂಡ ಮುಂದೆ ಬರುತ್ತಿರಲಿಲ್ಲ. ಹೀಗಾಗಿ ಇರುವವರನ್ನೇ ಇಟ್ಟುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. Private bore-well ನವರಿಗೆ ಈಗಾಗಲೇ ನಾವು ಆರು ತಿಂಗಳ ಹಿಂದೆಯೇ work order ಕೊಟ್ಟಿದ್ದೆವು. ನೀತಿ ಸಂಹಿತೆ ಅಡ್ಡ ಬರುವುದಿಲ್ಲ. ನಾನು ಮೊನ್ನೆ ಶಾಸಕರುಗಳ ಸಭೆ ನಡೆದಾಗ ನಾನು ಹೇಳಿದೆ, ದಯವಿಟ್ಟು ತಾವು ನಮ್ಮ ಇಂಜಿನಿಯರ್ ಗಮನಕ್ಕೆ ತಂದು ಬೋರ್‌ವೆಲ್‌ಗಳನ್ನು ಹಾಕಿಸಿಕೊಳ್ಳಿ, ಆ ದುಡ್ಡನ್ನು ನಾವು ನೇರವಾಗಿ ಕಂಟ್ರಾಕ್ಟ್‌ರವರಿಗೆ ಕೊಡುತ್ತೇವೆಂದು ಹೇಳಿದ್ದೇವು. ಅದರ ಬಗ್ಗೆ ಅವರು ಅವರ ಕೈಯಲ್ಲಿ ಕಷ್ಟ ಇದೆ ಎನ್ನುವ ಮಾತು ಹೇಳಿದ್ದಾರೆ. ದಿನ ನಿತ್ಯ ಸಂಪರ್ಕಿಸಿ ಇಂಜಿನಿಯರ್ ಜೊತೆಗೆ ಮಾತನಾಡಿ ಇದನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕು, ಅಥವಾ ಬೋರ್‌ವೆಲ್ಸ್‌ನ್ನು ನಾವು ಬಾಡಿಗೆಗೆ ತೆಗೆದುಕೊಂಡು BWSSB ಮೂಲಕ ಹಾಕಬೇಕೇ ಎಂದು ನಾಳೆ ಬೆಳಿಗ್ಗೆಯೆ ತುರ್ತಾಗಿ ಅಧಿಕಾರಿಗಳ ಜೊತೆಗೆ ಸಮಾಲೋಚಿಸಿ ತೀರ್ಮಾನ ತೆಗೆದು ಕೊಳ್ಳುತ್ತೇವೆ. long term plan ಬಗ್ಗೆ ತಾವು ಹೇಳಿದಿರಿ. ಈಗ 1125 MLD ನೀರು ಬರುತ್ತದೆ, ಅದರ ಜೊತೆಗೆ 2030 ನೇ ಇಸ್ವಿಗೆ ಅಥವಾ 2040 ನೇ ಇಸ್ವಿಗೆ ನಮಗೆ 2000 MLD ನೀರು ಬೇಕೆಂದು ನಾವು ಅಂದಾಜು

ಮಾಡಿದ್ದೇವೆ. ಅದಕ್ಕೆ ತಕ್ಕಂತೆ ಮಳೆ ನೀರು ಕೊಯ್ಲು ಪದ್ಧತಿಯನ್ನು ದೊಡ್ಡ ದೊಡ್ಡ ಕೆರೆಗಳು ಅಥವಾ ಬೇರೆ ಜಮೀನಿನಲ್ಲಿ underground ಬಹಳ deep ಆಗಿ ಮಾಡಿ ಮಳೆಗಾಲದಲ್ಲಿ drainage ನಲ್ಲಿ ಶೇಖರಣೆಯಾಗುವ ನೀರನ್ನು ತೆಗೆದುಕೊಂಡು ಹೋಗಿ ಅಲ್ಲಿ ಶುದ್ಧೀಕರಣ ಮಾಡಿ ಪುನಃ ಮರು ಬಳಕೆ ಮಾಡುವುದಕ್ಕೆ ಯಾವ ರೀತಿ ಸಾಧ್ಯ ಸಾಧ್ಯತೆಗಳ ಬಗ್ಗೆ ಈಗಾಗಲೇ Consultant ಗೆ ಒಪ್ಪಿಸಿದ್ದೇವೆ. ಅವರು ತ್ಯಾಜ್ಯ ನೀರು ಬಲಭಾಗದಲ್ಲಿ ಮತ್ತು ಎಡಭಾಗದಲ್ಲಿ ದೊಡ್ಡ ಮೋರಿಗಳಲ್ಲಿ ಹೋಗುವಾಗ ಮಳೆ ನೀರನ್ನು ತೆಗೆದುಕೊಂಡು ಹೋಗಿ ಯಾವುದಾದರೊಂದು ಸ್ಥಳದಲ್ಲಿ ಪಂಪ್ ಮಾಡಿ ಶೇಖರಣೆ ಮಾಡಿ ಶುದ್ಧೀಕರಣ ಮಾಡಿ ಕೊಡಬೇಕೆಂದು ನಾವು ಯೋಚಿಸಿದ್ದೇವೆ. ಮಾನ್ಯ ಶಿವಕುಮಾರ್‌ರವರು ಮಂಗಳೂರು ಕಡೆಯಿಂದ ನೀರು ತರುವುದಕ್ಕೆ ಬಹಳ ದುಡ್ಡು ಖರ್ಚಾಗಬಹುದು ಎಂದು ಹೇಳಿದರು. ಆ ಭಾಗದ ಶಾಸಕರು ಒಪ್ಪುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಸರ್ಕಾರ ಅದಕ್ಕೆ ಸಿದ್ಧವಿದೆ, ಜಲಸಂಪನ್ಮೂಲ ಸಚಿವರ ಜೊತೆಗೆ ಈಗಾಗಲೇ ಮಾತನಾಡಿದ್ದೆವು. ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಅನೇಕಲ್, ದೇವನಹಳ್ಳಿ, ಈ ಭಾಗದಲ್ಲಿನ ಸಮಸ್ಯೆ ಗಮನಿಸಿ ಅದಕ್ಕೆ ಮತ್ತು ಬೆಂಗಳೂರಿಗೆ ನೀರನ್ನು ಯಾವ ರೀತಿ ತಂದರೆ ಈ ಬವಣೆಯನ್ನು ತೀರಿಸಬಹುದು ಎನ್ನುವ ಬಗ್ಗೆ long term paln ನ್ನು ನಾವು ಯೋಚಿಸಿದ್ದೇವೆ. ಅದಕ್ಕಾಗಿ ಈ ವರ್ಷದ ಬಜೆಟ್‌ನಲ್ಲಿ ಹಣ ಇಟ್ಟಿದ್ದೇವೆ. ಕೂಡಲೇ ನಾವು ತಜ್ಞರನ್ನು ನೇಮಿಸಿ ಯಾವ ರೀತಿ ಅಲ್ಲಿಂದ ನೀರು ತರಬಹುದು ಎನ್ನುವ ಬಗ್ಗೆ ಮೂರು ತಿಂಗಳಲ್ಲಿ ವೈಜ್ಞಾನಿಕವಾಗಿ ಒಂದು blue print ನ್ನು ತಯಾರಿಸಿ ಎಂದು ಹೇಳಿದೆವು. ನಾವು ಆ ಕಡೆ ಗಮನ ಕೊಟ್ಟಿದ್ದೇವೆ. ಮಳೆ ನೀರು ಕೊಯ್ಲು ಪದ್ಧತಿಯನ್ನು ಜಾರಿಗೊಳಿಸಿದ ಮೇಲೆ ಸುಮಾರು 4000 ಮನೆಗಳಿಗೆ ಅಳವಡಿಸಿದ್ದೇವೆ. ಇಲ್ಲವೆಂದಲ್ಲ. ಆದರೆ, ತಾವು ಏನೆಂದುಕೊಂಡಿದ್ದೀರಿ ಆ ಪ್ರಮಾಣದಲ್ಲಿ ಆಗುತ್ತಿಲ್ಲ. ಇದಕ್ಕೆ ಅತಿ ಹೆಚ್ಚು ಒತ್ತು ಕೊಡಬೇಕಾಗಿದೆ ಖಂಡಿತವಾಗಿ ಒತ್ತು ಕೊಡುತ್ತೇವೆ. ಕಾವೇರಿ 4th stage ನಾವು ಲೇಟ್ ಮಾಡಿದ್ದಲ್ಲ. ಇದು JI Bank ನಿಂದ ಹಣ ಸಾಲ ಪಡೆದಿರುವುದು. ಅವರು ಟೆಂಡರ್ ಕರೆಯುವುದಕ್ಕೆ 60 ದಿವಸ, technical approval ಮಾಡುವುದಕ್ಕೆ 60 ದಿವಸ, financial bid open ಮಾಡುವುದಕ್ಕೆ

60 ದಿವಸ, ಕಾಮಗಾರಿ ಅನುಮೋದಿಸುವುದಕ್ಕೆ 60 ದಿವಸ, evulation ಗೆ 60 ದಿವಸ, ಹೀಗೆ Japan International Bank ಸಾಲ ಪಡೆದಿರುವುದು. ಅವರು ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಅವರು ಹೇಳಿದಂತೆ ನಾವು ನಡೆಯಬೇಕೇ ವಿನಾಃ ನಮ್ಮದು ಅಲ್ಲಿ ಏನೂ ನಡೆಯುವುದಿಲ್ಲ. ಹೀಗಾಗಿ ನಾವು ಅಧಿಕಾರಕ್ಕೆ ಬಂದ ಮಾರನೇ ದಿವಸದಿಂದ ಇದರ ಬಗ್ಗೆ ವಿಶೇಷ ಪ್ರಯತ್ನ ಮಾಡಿದ್ದಕ್ಕಾಗಿಯೇ ಇವತ್ತು ಕಾವೇರಿ ನಾಲ್ಕನೇ ಹಂತದ ಕಾಮಗಾರಿ ಚಾಲನೆಯಲ್ಲಿದೆ. ಡಿಸೆಂಬರ್ 2012 ರ ವೇಳೆಗೆ ಬೆಂಗಳೂರು ನಗರಕ್ಕೆ ಸಮರ್ಪಕವಾಗಿ 212 MLD ನೀರು ಬರುತ್ತದೆ, ಅದನ್ನು ಕೊಡುತ್ತೇವೆ. Old area ಗಳ ಬಗ್ಗೆ ತಾವು ಹೇಳಿದಿರಿ. ಅದರಲ್ಲಿ ಈಗಾಗಲೇ ಕಳೆದ ವರ್ಷ ನಾವು ಸುಮಾರು 198 ಕಿ.ಮಿ. Pipes replace ಮಾಡಿದ್ದೇವೆ. ಈ ವರ್ಷ 300 ಕಿ.ಮಿ. pipe replace ಮಾಡುವವರು ಇದ್ದೇವೆ. ಇದಲ್ಲದೆ ನೀರು ಸೋರಿಕೆ ಮತ್ತು ಅದನ್ನು ತಡೆಯುವುದಕ್ಕೆ 300 ಕೋಟಿ ರೂಪಾಯಿ ಟೆಂಡರ್ ನ್ನು ಈಗಾಗಲೇ ಕರೆದಿದ್ದೇವೆ. ಓಲ್ಡ್ ಏರಿಯಾದಲ್ಲಿರುವ ಪೈಪ್‌ಗಳನ್ನು ರಿಪ್ಲೇಸ್ ಮಾಡುವುದಕ್ಕೆ ಈಗಾಗಲೇ ಟೆಂಡರ್‌ನ್ನು ಆಹ್ವಾನಿಸುತ್ತಿದ್ದೇವೆ. ಆ ಕಾಮಗಾರಿಯನ್ನು ನಾವು ತೆಗೆದು ಕೊಳ್ಳುತ್ತೇವೆ. ದುಡ್ಡು ಇಲ್ಲ ಎನ್ನುವ ಪ್ರಶ್ನೆ ಇಲ್ಲ. ಟ್ಯಾಂಕರ್ಸ್ ಮೂಲಕ ನೀರು ಕೊಡುವುದಕ್ಕೆ ಹೇಳಿದಿರಿ. ತಾವು ಎಷ್ಟು ಟ್ಯಾಂಕರ್ಸ್ ಬೇಕಾಗುತ್ತದೆ, ಯಾವ್ಯಾವ ಏರಿಯಾದಲ್ಲಿ ಬೇಕಾಗುತ್ತದೆ ಎಂದು ಹೇಳಿದರೆ ಆ ಭಾಗಕ್ಕೆ ನಾವು ನೀರನ್ನು ಒದಗಿಸುವುದಕ್ಕೆ ಸಿದ್ಧರಿದ್ದೇವೆ. ಮಾನ್ಯ ಡಿ.ಕೆ.ಶಿವಕುಮಾರ್‌ರವರು future plan ಬಗ್ಗೆ ಹೇಳುತ್ತಾ war for water and power. Yes, you are absolutely right. ಆ ಕಾಲ ಬಂದಿದೆ. ಕಾವೇರಿ ತೀರ್ಪಿನಂತೆ ಬೆಂಗಳೂರು ನಗರಕ್ಕೆ ಎಷ್ಟು ನೀರು ಬರುತ್ತದೆ ಎಂಬುದು ತಮಗೆ ಗೊತ್ತಿದೆ. ಅದಕ್ಕಿಂತ ಹೆಚ್ಚಿಗೆ 5ನೇ ಸ್ಟೇಜ್ ತರುವುದಕ್ಕೆ ನಮ್ಮ ಭಾಗಕ್ಕೆ ನೀರು ಬಂದಿಲ್ಲ.

ನಮಗೆ 18 ಟಿ.ಎಂ.ಸಿ. ನೀರನ್ನು ಮಾತ್ರ ಕೊಡುತ್ತಿದ್ದಾರೆ. ಈ ನೀರನ್ನು ಮಾತ್ರ ನಾವು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈಗ 500 ಎಂ.ಎಲ್.ಡಿ. ನೀರನ್ನು ಬಳಸಿಕೊಂಡರೆ ನಮ್ಮ ಖೋಟಾ ಮುಗಿದು ಹೋಗುತ್ತದೆ. ಇದಾದ ಮೇಲೆ ಅಲ್ಲಿಂದ ಬೇರೆ ಪೈಪ್‌ಲೈನ್ ಹಾಕುವಂತಿಲ್ಲ. ಇದರ ಬಗ್ಗೆ ನಾವೆಲ್ಲಾ ಯೋಚನೆ ಮಾಡಬೇಕಾಗಿದೆ. ಇದಕ್ಕೆ ಸಂಬಂಧ ಪಟ್ಟಂತೆ ಸರ್ವಪಕ್ಷಗಳ ಸಭೆಯನ್ನು ಕರೆದು ಹಾಗೆಯೇ ಎಲ್ಲಾ ಶಾಸಕರನ್ನು

ಕರೆದು ಇದರ ಬಗ್ಗೆ ಸುಧೀರ್ಘವಾಗಿ ಚರ್ಚೆ ಮಾಡಿ ಯಾವ ಭಾಗದಿಂದ ಯಾವ ರೀತಿಯಾಗಿ ನೀರನ್ನು ತಂದು ನೀರಿನ ಭವಣೆಯನ್ನು ತೀರಿಸಬೇಕೆಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳೋಣ. Not only Bangalore, it is all-round surrounding areas, including Kolar and Tumkur. ಈಗ ತುಮಕೂರಿನಲ್ಲಿ ಭಾಗಶಃ ಸಮಾಧಾನವಾಗಿದೆ. ಆದರೆ, ಭಾಗಶಃ ಅಲ್ಲಿಯೂ ಕೂಡ ಸಮಸ್ಯೆ ಇದೆ. ಇದರಲ್ಲಿ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಕೂಡ ಸೇರಿಕೊಂಡು ಹೇಳುತ್ತಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್ : ಕನಕಪುರ ಮತ್ತು ಮಳವಳ್ಳಿ ಕಡೆಯವರಿಗೆ ಇವತ್ತಿನ ದಿವಸ ಏನಾಗಿದೆ ಎಂದರೆ, ಬೆಂಗಳೂರಿಗೆ ಪೈಪ್‌ಲೈನ್ ಅಲ್ಲಿಂದಲೇ ಬರುತ್ತಿರುವುದರಿಂದ ಇಲ್ಲಿರತಕ್ಕಂಥ ರೈತರ ಜಮೀನು ಹೋಗುತ್ತಿದೆ. ಇವತ್ತಿನ ದಿವಸ ನಮಗೆ ನೀರು ಇಲ್ಲ, ಬೆಂಗಳೂರಿನವರಿಗೆ ಏಕೆ ನೀರು ಎಂದು ನಮ್ಮ ಮೇಲೆ ರೈತರು ಗಲಾಟೆ ಮಾಡುತ್ತಿದ್ದಾರೆ ಮತ್ತೆ ಇದರ ಬಗ್ಗೆ ವಿಪರೀತ ಪ್ರೆಸರ್ ಕೂಡ ಇದೆ. ಕನೆಕ್ಟೆಡ್ ವಿಲೇಜ್‌ಗಳಿಗೆ ಕೊಡಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದೀರಿ. ಆದ್ದರಿಂದ, ಇದರ ಬಗ್ಗೆ ಕೂಡ ಸ್ವಲ್ಪ ಬೆಳಕು ಚೆಲ್ಲಿದ್ದರೆ ಒಳ್ಳೆಯದು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಇದರ ಬಗ್ಗೆ ತೀರ್ಮಾನವಾದ ನಂತರ ನಾನು ತಮಗೆ ಹೇಳುತ್ತೇನೆ. ಮತ್ತೆ ತಾವೆಲ್ಲರೂ Water treatment plant ಬಗ್ಗೆ ಗಮನಸೆಳೆದಿದ್ದೀರಿ. ಈಗಾಗಲೇ 1000 MLD ಯಷ್ಟು treatment of water ಆಗಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. 10 ಕಡೆ recycled water treatment plantಗೆ ಟೆಂಡರ್‌ಗಳನ್ನು ಕರೆಯುವುದಕ್ಕೆ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೇವೆ. ಬೆಂಗಳೂರಿನಲ್ಲಿ Dual pipe System ಅನ್ನು ಅಳವಡಿಸಕೊಳ್ಳಬೇಕಾಗಿದೆ. Dual Pipe System ಎಂದರೆ ಬೆಂಗಳೂರಿನಲ್ಲಿ ಗೃಹಯೇತರ ಬಳಕೆಗೆ ಮತ್ತು ಕುಡಿಯುವುದಕ್ಕೆ ಯೋಗ್ಯವಾದಂಥ ನೀರಿಗಾಗಿ ಎರಡು ರೀತಿಯ ಕೊಳವೆಗಳನ್ನು ಅಳವಡಿಸಿ ಕೊಳ್ಳುವುದು ಮುಂಬರುವ ದಿವಸಗಳಲ್ಲಿ ಕಡ್ಡಾಯವಾಗುತ್ತದೆ. ಇದರ ಬಗ್ಗೆ ಕೂಡ ಯೋಚನೆ ಮಾಡಿದ್ದೇವೆ. ಸದ್ಯದಲ್ಲಿಯೇ ಈ ಕಾಮಗಾರಿಗೆ ಚಾಲನೆಯನ್ನು ನಾವು ಕೊಡುತ್ತೇವೆ. ಬೆಂಗಳೂರಿನ ಹೊರವಲಯದಲ್ಲಿ ನೀರಿನ ಸಮಸ್ಯೆ ಇದೆ ಎಂದು ಶೋಭಾರವರು ಹೇಳಿದ್ದಾರೆ. ಇವತ್ತಿನ ದಿವಸ ಹೊರವಲಯದಲ್ಲಿ ನೀರಿನ ಸಮಸ್ಯೆ ಇರುವುದು ನಿಜ. ಮತ್ತೇ ಅವರ ಮತ

0.17F-94

ಕ್ಷೇತ್ರದಲ್ಲಿ ನೀರಿನ ಸಮಸ್ಯೆ ಆಗಿರುವುದು ಕೂಡ ನಿಜ. ಮೊನ್ನೆ ದಿವಸ ಮುಖ್ಯ ಇಂಜಿನಿಯರ್‌ರವರನ್ನು ಅಲ್ಲಿಗೆ ಕಳುಹಿಸಿ ಅಲ್ಲಿರತಕ್ಕಂಥ ಸಮಸ್ಯೆಯನ್ನು ಕೂಡಲೇ ಬಗೆಹರಿಸಿ ಎಂದು ಹೇಳಿದ್ದೇವೆ. ಅವರು ಹೇಳಿರುವಂತೆ ಹೊರಗಡೆ ಪ್ರದೇಶದಲ್ಲಿ ನೀರಿನ ಬೇಡಿಕೆ ಅತ್ಯಂತ ಜಾಸ್ತಿ ಇದೆ. ಆದ್ದರಿಂದ, ನಮ್ಮ ಅಧಿಕಾರಿಗಳಿಗೆ ಏನು ಹೇಳಿದ್ದೇವೆಂದರೆ, 200 ರಿಂದ 300 ನೀರಿನ ಟ್ಯಾಂಕರ್‌ಗಳನ್ನು ಬಾಡಿಗೆಗೆ ತೆಗೆದುಕೊಂಡು 3 ತಿಂಗಳ ಕಾಲ ಸಮರ್ಪಕವಾಗಿ ಅಲ್ಲಿ ನೀರನ್ನು ಕೊಡಬೇಕೆಂದು ಹೇಳಿದ್ದೇವೆ. ಇದು ಈಗಾಗಲೇ ಚಾಲನೆಯಲ್ಲಿ ಬಂದಿದೆ. ಮತ್ತೆ ಎಲ್ಲೆಲ್ಲಿ ಮನ್ಯ ಶಾಸಕರು ಹೇಳುತ್ತಿದ್ದಾರೆಯೋ ಅಂಥ ಭಾಗಗಳಿಗೆ ನೀರನ್ನು ಕಳುಹಿಸುವಂಥ ಕೆಲಸ ಈಗಾಗಲೇ ಆಗುತ್ತಿದೆ. ಮತ್ತೆ ಬೋರ್‌ವೆಲ್ ಬಗ್ಗೆ ಅಸಮಧಾನವನ್ನು ವ್ಯಕ್ತಪಡಿಸಿದ್ದೀರಿ. ಇದಕ್ಕೆ ಸಂಬಂಧಪಟ್ಟಂಥ ವರದಿಯನ್ನು ತಮಗೆ ಕೊಡುವುದಕ್ಕೆ ಹೇಳುತ್ತೇನೆ. ನಾಳೆ ಬೆಳಿಗ್ಗೆ ಅಥವಾ ಸಂಜೆಯೊಳಗೆ ಯಾವ್ಯಾವ ಭಾಗದಲ್ಲಿ ಎಷ್ಟೆಷ್ಟು ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ ಎಂದು ಮತ್ತು ಎಷ್ಟಕ್ಕೆ ಕನೆಕ್ಷನ್ ಕೊಟ್ಟಿದ್ದಾರೆಂದು ಮತ್ತು ಇನ್ನು ಎಷ್ಟಕ್ಕೆ ಕನೆಕ್ಷನ್ ಕೊಟ್ಟಿಲ್ಲವೆಂದು ಹಾಗು ಏತಕ್ಕೋಸ್ಕರ ಕೊಟ್ಟಿಲ್ಲವೆಂಬ ಅಂಶಗಳಿಗೆ ನಾನು ಉತ್ತರ ಕೊಡುತ್ತೇನೆ. ಅರ್ಕಾವತಿ ಬಗ್ಗೆ ಹೇಳಿದ್ದೀರಿ. ಈ ದಿಶೆಯಲ್ಲಿ ನಾವು ಖಂಡಿತವಾಗಿಯೂ ಇದ್ದೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಕೂಡಲೇ ಒಂದು ಸಭೆಯನ್ನು ಕರೆದು ಕೆರೆಗಳ ಕೆಲಸವನ್ನು ಪೂರ್ಣಗೊಳಿಸುವುದರಲ್ಲಿ ನಾವು ವಿಶೇಷವಾದಂಥ ಗಮನವನ್ನು ಕೊಡುತ್ತೇವೆ. ನೌಕರರನ್ನು ನೇಮಕಾತಿ ಮಾಡಿಕೊಂಡಿದ್ದು ಅವರುಗಳ ಏಪ್ರಿಲ್ ತಿಂಗಳಿಂದ ಕೆಲಸಕ್ಕೆ ಬರುತ್ತಾರೆ. ಮತ್ತೆ ಗುತ್ತಿಗೆ ಆಧಾರದ ಮೇಲೂ ಕೂಡ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ. ಅರ್ಕಾವತಿ ಪುನಃಶ್ಚೇತನದ ಬಗ್ಗೆ ಈಗಾಗಲೇ ಜಲಸಂಪನ್ಮೂಲ ಇಲಾಖೆಯಿಂದ ಕೆಲಸ ಪ್ರಾರಂಭ ಮಾಡಿದ್ದಾರೆ. ಮಾನ್ಯ ಹ್ಯಾರೀಸ್‌ರವರು ಕಾವೇರಿ 5ನೇ ಹಂತದ ಬಗ್ಗೆ ಹೇಳಿದ್ದಾರೆ. 5th Stage ಮಾಡುವುದಕ್ಕೆ no share of water. We Can't do 5th stage.

ಶ್ರೀ ದಿನೇಶ್ ಗುಂಡುರಾವ್ : ಪ್ರಯತ್ನ ಮಾಡುವುದಕ್ಕೆ ಏನು ಸಮಸ್ಯೆ ಇಲ್ಲ. ಬೆಂಗಳೂರು ನಗರಕ್ಕೆ ಇನ್ನ ಸ್ವಲ್ಪ ನೀರು ಬೇಕಾಗುತ್ತದೆಂದು Tribunal ಮುಂದೆ ಹೋಗಿ ಕೇಳಿಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ವೃಷಭಾವತಿ ವ್ಯಾಲಿಯಲ್ಲಿ 300 ಎಂಎಲ್‌ಡಿ ಮತ್ತು ಹೆಬ್ಬಾಳದಲ್ಲಿ 250 ಎಂಎಲ್‌ಡಿ recycled water treatment plant ಮಾಡುತ್ತಿದ್ದೇವೆ.

ಶ್ರೀ ಎನ್.ಎ.ಹ್ಯಾರೀಸ್ : ಪರಮಶಿವಯ್ಯನವರ ವರದಿ ತರಿಸಿಕೊಳ್ಳಿ. ಬೆಂಗಳೂರಿಗೆ ನೀರು ಕೊಡುವುದಕ್ಕೆ ಅದರಲ್ಲಿ ಇದೆ.

ಶ್ರೀ ಡಿ.ಕೆ.ಶಿವಕುಮಾರ್ : ಈ ನೀರನ್ನು ಗಿಡಗಳಿಗೆ ಮತ್ತು ಮತ್ತೊಂದಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಏನಾದರೊಂದು ಪ್ಲಾನ್ ಮಾಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಇದರ ಬಗ್ಗೆ ಹೇಳಿದೆ. ತಾವು ಆ ಕಡೆ ತಿರುಗಿಕೊಂಡು ಮಾತನಾಡುತ್ತಿದ್ದೀರಿ.

ಶ್ರೀ ಆರ್.ದಿನೇಶ್ ಗುಂಡುರಾವ್ : ಕೈಗಾರಿಕಾ ಕ್ಷೇತ್ರದಲ್ಲಿರುವಂಥದ್ದನ್ನು ಸಹ ಉಪಯೋಗ ಮಾಡಿಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಈಗ Non-drinking purpose ಗೆ ನೀರನ್ನು ರೀಸೈಕಲಿಂಗ್ ಮಾಡಿದ ನೀರನ್ನು ಬಳಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಅದರ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. Dual pipe ಹಾಕಿ ಒಂದು ಪೈಪ್‌ನ ನೀರನ್ನು ಗೃಹಯೇತರ ಬಳಕೆಗೆ ಮತ್ತೊಂದು ಪೈಪ್‌ನ್ನು ನೀರನ್ನು ಕುಡಿಯುವುದಕ್ಕೋಸ್ಕರ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಇದ್ದೇವೆ.

ಶ್ರೀ ಸಿದ್ದರಾಮಯ್ಯ : Is it gonging on?

Sri Katta Subramanya Naidu : No, one minute please, let me explain properly.

ಶ್ರೀ ಆರ್. ದಿನೇಶ್ ಗುಂಡುರಾವ್ : ಇದನ್ನು ಎಲ್ಲಿಯೂ ಕೂಡ ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಇದನ್ನು ಮಾಡುತ್ತಿದ್ದೀರಾ? ಇದಕ್ಕೆ incentive ಕೊಡುತ್ತೇವೆಂದು ಹೇಳಬೇಕು. ಮತ್ತೆ ಮಳೆ ನೀರಿನ harvest ಮಾಡಿಕೊಂಡರೆ incentives ಕೊಡುತ್ತೇವೆಂದು ಹೇಳಬೇಕು. ಈಗ ಎಷ್ಟು ಮನೆಗಳಲ್ಲಿ ಮಳೆ ನೀರಿನ harvest ಮಾಡುತ್ತಿದ್ದಾರೆ? ಇದರಿಂದ ಎಷ್ಟು ನೀರನ್ನು ಶೇಖರಣೆ ಮಾಡಿದ್ದಾರೆ? What is the total amount of water stored? ಇದರಿಂದ ಕುಡಿಯುವ ನೀರಿನ ಮೇಲೆ ಭಾರ ಎಷ್ಟು ಕಡಿಮೆಯಾಗಿದೆ ಎಂದು ಹೇಳಬೇಕು.

Sri Katta Subramanya Naidu : I am ready to answer for that.

Sri. Siddaramaiah : I am seriously asking.

Sri. Katta Subramanya Naidu : I am seriously answering.

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆ.

ಶ್ರೀ ಸಿದ್ದರಾಮಯ್ಯ : ಗಮನಸೆಳೆಯುವ ಸೂಚನೆ ಇರಲಿ, ಏನೇ ಇರಲಿ. The Problem is very serious. ಬೆಂಗಳೂರಿನಲ್ಲಿರುವ ಶಾಸಕರುಗಳಿಗೆ ಇದರ ಅರಿವು ಇದೆ. ಮಾನ್ಯ ಸಚಿವರು ಚೆನ್ನಾಗಿ ಉತ್ತರವನ್ನು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಯವರಲ್ಲಿ ನಾನು ಕೇಳುವುದೇನೆಂದರೆ, 2–3 ಯೋಜನೆಗಳನ್ನು ನೀವು ಮಾಡಲೇ ಬೇಕು. ಮೊದಲನೆಯದು ಏನೆಂದರೆ, Rain water harvest ಅನ್ನು ಕಡ್ಡಾಯವಾಗಿ ಮಾಡಲೇಬೇಕಾಗುತ್ತದೆ. ಎರಡನೆಯದು ಏನೆಂದರೆ, Recycling of water ಇದನ್ನು ಕೂಡ ಕಡ್ಡಾಯವಾಗಿ ಮಾಡಲೇಬೇಕಾಗುತ್ತದೆ. ಇವೆರಡನ್ನು ನೀವು ಮಾಡದೆ ಇದ್ದರೆ ಕಷ್ಟವಾಗುತ್ತದೆ. ಬೆಂಗಳೂರಿಗೆ 4th and 5th Stage ನಲ್ಲಿ ನೀರು ಬರುತ್ತದೆ ಎಂದು ಹೇಳಿದ್ದೀರಿ. ಬೆಂಗಳೂರು ನಗರಕ್ಕೆ ಎಷ್ಟು ನೀರು ಕೊಡಬೇಕೆಂದು ಕಾವೇರಿ ಟ್ರಿಬ್ಯುನಲ್‌ನಲ್ಲಿ ಈಗಾಗಲೇ ತೀರ್ಮಾನವಾಗಿದೆ. ಇದನ್ನು ಬಿಟ್ಟರೆ ನಿಮಗೆ ಎಲ್ಲಿಂದ ನೀರು ಬರುತ್ತದೆ? Preservation of water, proper management of the drinking water, ಮತ್ತೆ ನೀರು ವೇಸ್ಟ್ ಆಗದ ಹಾಗೆ ಸರಿಯಾದ ರೀತಿಯಲ್ಲಿ ಪುನರ್ ಬಳಕೆ ಮಾಡಿಕೊಳ್ಳುವಂಥ ಕೆಲಸ ಆಗಬೇಕು. ಇಷ್ಟೆಲ್ಲಕ್ಕೂ ಕೂಡ ನೀವು ಸರಿಯಾದ ರೀತಿಯಲ್ಲಿ ಪ್ಲಾನ್ ಮಾಡಿಕೊಂಡು ಅದಕ್ಕೆ ಕಾರ್ಯಕ್ರಮ ಹಾಕಿಕೊಳ್ಳದೆ ಹೋದರೆ, ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗೋಸ್ಕರ ಬಹಳ ಕಷ್ಟವಾಗುತ್ತದೆ. ಎಲ್ಲಿಂದಲೂ ನೀರು ತರುವುದಕ್ಕೆ ಆಗುವುದಿಲ್ಲ. ಆಮೇಲೆ ಎಲ್ಲೆಲ್ಲಿ water tanks ಇವೆ ಅವೆಲ್ಲವನ್ನೂ ಕೂಡ Preserve ಮಾಡಿಕೊಳ್ಳಬೇಕು. ಇವೆಲ್ಲವನ್ನು ಮಾಡಿಕೊಳ್ಳದೇ ಹೋದರೆ the people of the Bangalore City ಅವರು ಬಹಳ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಆ ಕಾರಣದಿಂದಲೇ ಮಾನ್ಯ ಡಿ.ಕೆ.ಶಿವಕುಮಾರ್‌ರವರು ಈ ವಿಷಯವನ್ನು ಹೇಳಿರುವುದು. ಅವರ ಕಾಲೇಜು Premises ನಲ್ಲಿ ನಿಮ್ಮ Bangalore water Supply Board

ನಿಂದ ಒಂದು ತೊಟ್ಟು ನೀರನ್ನು ತೆಗೆದುಕೊಳ್ಳದೇ manage ಮಾಡುತ್ತಿದ್ದಾರೆಂದು ಅವರು ಹೇಳುತ್ತಿದ್ದರು. ಆ ರೀತಿ ಸ್ವತಃ ನೀರನ್ನು ಬಳಸಿಕೊಳ್ಳುವಂಥವರಿಗೆ incentives ಕೊಡತಕ್ಕ ವ್ಯವಸ್ಥೆ ಮಾಡಬೇಕು. ಆ ಕಾರ್ಯಕ್ರಮವನ್ನು ವ್ಯಾಪಕವಾಗಿ ಮಾಡಿಕೊಂಡು ಇದರ ಬಗ್ಗೆ ಜನರ ಜಾಗೃತಿ ಮಾಡಿ ನೀರನ್ನು ಸರಿಯಾದ ರೀತಿಯಲ್ಲಿ ಬಳಸತಕ್ಕಂಥದ್ದು, ಉಳಿತಾಯ ಮಾಡತಕ್ಕಂಥದ್ದರ ಬಗ್ಗೆ ಮತ್ತು ಮಾಡಿ, ಬೇರೆ ಬೇರೆ ರೀತಿಯಲ್ಲಿ ಹೇಗೆ ನೀರನ್ನು ಸಂಪಾದನೆ ಮಾಡಿಕೊಳ್ಳಬೇಕೆಂಬುದರ ಬಗ್ಗೆ ಕೂಡ ಹೆಚ್ಚು ಗಮನ ಕೊಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೆಚ್ಚು ಕಷ್ಟಕ್ಕೆ ಸಿಕ್ಕಿಕೊಳ್ಳುತ್ತೇವೆ. ಈಗಾಗಲೇ ಟ್ಯಾಂಕರ್‌ಗಳಲ್ಲಿ ನೀರನ್ನು ಒದಗಿಸಿಕೊಡಲಾಗುತ್ತಿದೆ ಎಂದು ತಾವು ಹೇಳಿದ್ದೀರಿ. ಬೋರ್‌ವೆಲ್‌ನಲ್ಲಿ ನೀರು ಬರುತ್ತದೆ ಆದರೆ, ಇದು permanent source ಏನು ಅಲ್ಲವೇ ಅಲ್ಲ. ಮಳೆ ಇದ್ದರೆ ನೀರು underground water ಹತ್ತಿರವಿದ್ದರೆ ನೀರು ಸಿಗುತ್ತದೆ. Underground water ಹೊರಟು ಹೋದರೆ ಬೋರ್‌ವೆಲ್‌ನಲ್ಲಿಯೂ ಕೂಡ ನೀರು ಹೋಗುತ್ತದೆ. ಆದ್ದರಿಂದ, ಬೋರ್‌ವೆಲ್‌ನಿಂದ ಏನು ಪ್ರಯೋಜನ ಆಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಹೆಚ್ಚು ಗಮನ ಕೊಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, Treatment plants, Sewage Treatment Plants ಹಾಕುವುದಕ್ಕೆ ಈಗಾಗಲೇ ಪ್ಲಾನ್ ಮಾಡಿದ್ದೇವೆ. ಹಿಂದೆ ಹಾಕಿರುವಂಥದ್ದು ಸ್ವಲ್ಪ ಡ್ಯಾಮೇಜ್ ಆಗಿವೆ. ಇವುಗಳನ್ನು ಸರಿ ಮಾಡಬೇಕಾಗಿದೆ.

ಶ್ರೀ ಸಿದ್ದರಾಮಯ್ಯ : ಕೆಲವು ಕಡೆ ಹೊಸದಾಗಿ ಲೈನ್ ಹಾಕಬೇಕಾಗಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಹೊಸ ಲೈನ್‌ಗೂ ಕೂಡ ಪ್ಲಾನ್ ಮಾಡಿದ್ದೇವೆ. Zero Sewage, Pipelines ಮಾಡಬೇಕೆಂದು ನಾವು ಈಗಾಗಲೇ ಪ್ಲಾನ್ ಮಾಡಿದ್ದೇವೆ. Replacement of old area ದಲ್ಲಿ ನೀರು ಸೋರಿಕೆಯನ್ನು ತಡೆಗಟ್ಟುವುದಕ್ಕೆ ಈ ವರ್ಷ ನಾವು 400 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ. This is the planning. ಎರಡನೆಯದಾಗಿ 1000 ಎಮ್‌ಎಲ್‌ಡಿ ಅಂದರೆ ಸುಮಾರು 16 TMC of water ಅನ್ನು recycling ಮಾಡುವುದಕ್ಕೆ ಈಗಾಗಲೇ ಟೆಂಡರ್‌ಗಳನ್ನು

ತಯಾರು ಮಾಡಿದ್ದು, ಈಗ ಟೆಂಡರ್ ಕರೆಯಬೇಕಾಗಿದೆ. ಮತ್ತೆ ಜಪಾನ್ ಇಂಟರ್ ನ್ಯಾಷನಲ್ ಬ್ಯಾಂಕ್‌ನಿಂದ ಸ್ವಲ್ಪ ಫಂಡ್ ಇದೆ ನಾವು ಸ್ವಲ್ಪ ಹಾಕುತ್ತೇವೆ.

ಶ್ರೀ ಸಿದ್ದರಾಮಯ್ಯ : 2010ಕ್ಕೆ, 2020ಕ್ಕೆ ಮತ್ತು 2030 ಕ್ಕೆ ಎಷ್ಟು requirement ಇದೆ ಅದನ್ನು ಹೇಳಿ?

Sri Katta Subramanya Naidu : The requirement for 2040 will be 2000 MLD. Today's requirement is 1125 MLD of water. Today we are supplying 900 MLD of water.

Sri Siddaramaiah : How much you are getting?

Sri Katta Subramanya Naidu : We are getting 850 MLD from Thorekadanahalli, 50 MLD from T.K.Halli.

Sri Siddaramaiah : What is the shortage?

Sri Katta Subramanya Naidu : Shortage is 225 MLD.

Sri Siddaramaiah : How are you meeting this?

Sri Katta Subramanya Naidu : We are not able to meet this, through bore wells and tankers only we are doing.

ಅಧ್ಯಕ್ಷರು : ಇದು ಗಮನಸೆಳೆಯುವ ಸೂಚನೆ.

Sri Siddaramaiah : It is not possible to meet through bore wells.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : Yes, I agree with you.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಿದ್ದರಾಮಯ್ಯರವರೆ, ನೀವು ಮೊದಲು Cross examination ಹೇಗೆ ಮಾಡುತ್ತಿದ್ದೀರೆಂಬುದು ಈಗ ಗೊತ್ತಾಯಿತು? ಅಂದರೆ, ಈಗ leading question ಹಾಕಿ cross examination ಮಾಡುತ್ತಿದ್ದೀರಿ.

(ಗೊಂದಲ)

Sri Siddaramaiah : Because it was not the cross examination. Leading questions are not allowed as per Evidence Act.

Sri Katta Subramanya Naidu : No, No, I got the point, When I was answering, you are n the discussion. ನಾನು ಉತ್ತರವನ್ನು ಕೊಡುವಾಗ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು

ನೀವು ಮೂರು ಜನ ಮಾತನಾಡುತ್ತಿದ್ದೀರಿ. ನಾನು ಈ ವಿಷಯವನ್ನು ಹೇಳುವಾಗ ತಾವು ಮೂರು ಜನ ದೀರ್ಘ ಚರ್ಚೆಯಲ್ಲಿದ್ದೀರಿ. ಅದಕ್ಕೋಸ್ಕರ ನಾನು ಮತ್ತೆ ರಿಪೀಟ್ ಮಾಡಿದ್ದೇನೆ ಸರ್ ಈಗ ನಾವು ಹೇಳಿದ್ದು ಸರಿ ಇದೆ. ಇಲ್ಲಿ ಮಾನ್ಯ ಸದಸ್ಯರುಗಳು ಏನು ಹೇಳಿದ್ದಾರೆ. ಎಲ್ಲವೂ ಸರಿ ಇದೆ ಆ ದಿಕ್ಕಿನಲ್ಲಿ ಸರ್ಕಾರವು ಪ್ರಯತ್ನವನ್ನು ಮಾಡುತ್ತಿದೆ. ಖಂಡಿತವಾಗಿ 2–3 ತಿಂಗಳ ಅವಧಿಯಲ್ಲಿ ಪೂರ್ತಿ ಬೆಂಗಳೂರಿನ ಕೆಲಸ ಕಾರ್ಯಗಳ ಬಗ್ಗೆ ಬೇಕಾದರೆ ಈ ಹೌಸ್‌ನಲ್ಲಿ ನೀಲಿ ನಕ್ಷೆಯನ್ನು ಮಾಡಿ Presentation ಮಾಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : You please come out with a White Paper in the next session.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ಮುಂದಿನ ಸೆಷನ್‌ನಲ್ಲಿ ಆಗುವುದಿಲ್ಲ. ಇದಕ್ಕೆ minimum 3 to 4 months ಬೇಕಾಗುತ್ತದೆ. ಏಕೆಂದರೆ ಎಲ್ಲವನ್ನು planning ಮಾಡಬೇಕಲ್ಲ. Proper planning is required. Definitely I place it. I am assuring you.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಇನ್ನು ಮಾಡಿಲ್ಲವೆಂದಾಯಿತಲ್ಲಾ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ನಾನು ತಮಾಷೆ ಮಾಡುತ್ತಿಲ್ಲ. It is under processing. We want to do the job.

ಶ್ರೀ ಸಿದ್ದರಾಮಯ್ಯ : ನಾನು ಹೇಳುವುದೇನೆಂದರೆ, ನೀವು ಮಾಡಿ, ಮುಂದಿನ ಜೂನ್‌ಗೆ ನಮ್ಮ ಅಸೆಂಬ್ಲಿಯನ್ನು ಕರೆಯುತ್ತೇವಲ್ಲಾ...

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಆ ಟೈಮ್‌ಗೆ ಆಗುವುದಿಲ್ಲ. KTTP Act ನಲ್ಲಿ ಎಲ್ಲವನ್ನು ಮಾಡುವುದಕ್ಕೆ ನಮಗೆ ಬರುವುದಿಲ್ಲ.

ಶ್ರೀ ದಿನೇಶ್ ಗುಂಡುರಾವ್ : ನೀವು ಒಂದು plan of action ಕೊಡಿಸಾರ್. ಎಲ್ಲವನ್ನು ಮಾಡಬೇಕೆಂದು ನಾವು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : Plan of Action ಅನ್ನು writing ನಲ್ಲಿ ಬೇಕಾದರೆ ನಾನು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಇದಕ್ಕೆ ಸ್ಪಷ್ಟವಾದಂಥ ಪಾಲಿಸಿ ಮಾಡಿ you come out with white paper. Let it be placed on the floor of the house.

ಶ್ರೀ ದಿನೇಶ್ ಗುಂಡೂರಾವ್ : ಹಾಗಾದರೆ ನೀವು ಅದನ್ನು ತೆಗೆದುಕೊಂಡು ಬನ್ನಿ. ನಾವು ನಿಮಗೆ ಸಹಾಯವನ್ನು ಮಾಡುತ್ತೇನೆ.'

ಅಧ್ಯಕ್ಷರು : ಶ್ರೀ ದಿನಕರ್ ಶೆಟ್ಟಿಯವರೆ ತಾವು ಗಮನವನ್ನು ಸೆಳೆಯಿರಿ.

Sri Katta Subramanya Naidu : I appreciate your reference. You are good MLA. Our Opposition Leader is a good visionary. No problem.

ಶ್ರೀ ಸಿದ್ದರಾಮಯ್ಯ : ನೀವು ಕುಳಿತುಕೊಂಡು ಮಾತನಾಡುತ್ತಿದ್ದೀರಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : No Sir, you are good visionary ಎಂದು ಹೇಳಿದೆ.

ಅಧ್ಯಕ್ಷರು : ನಾನು ದಿನಕರಶೆಟ್ಟಿಯವರ ಹೆಸರನ್ನು ಕರೆದಿದ್ದೇನೆ.

Sri Siddaramaiah : O.K. Thank you for your complement. ಬೆಂಗಳೂರು ನಗರದ ಜನರು ಇನ್ನು 10 ರಿಂದ 20 ವರ್ಷದಲ್ಲಿ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತಾರೆ. ಈಗಾಗಲೇ you are facing the problems. ಮತ್ತೆ ಅದು aggravate ಆಗಬಾರದು. ಅದು aggravate ಆಗುತ್ತಿದೆ. ಅದನ್ನು ತಪ್ಪಿಸುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ you must come out with an action plan and White paper on the floor of the house.

ಅಧ್ಯಕ್ಷರು : ಈಗ ಗಮನಸೆಳೆಯುವ ಸೂಚನೆ, ದಿನಕರ ಶೆಟ್ಟಿಯವರ ಹೆಸರನ್ನು ಕರೆದಿದ್ದೇನೆ.

ಆ) ಗೋವಾ ಮಹಾರಾಷ್ಟ್ರ ರಾಜ್ಯಗಳಲ್ಲಿ ಇತ್ತೀಚೆಗೆ ಬೀಸಿದ ಪಿಯಾನ್ ಚಂಡಮಾರುತದಲ್ಲಿ ಕುಮುಟಾ ಹಾಗೂ ಭಟ್ಕಳ ತಾಲ್ಲೂಕಿನಲ್ಲಿ ಸಾವಿಗೆ ಈಡಾದ ಹಲವಾರು ಮೀನುಗಾರರ ಕುಟುಂಬದವರಿಗೆ ಪರಿಹಾರ ವಿತರಣೆಯಾಗದಿರುವ ಬಗ್ಗೆ–

ಶ್ರೀ ದಿನಕರ ಕೆ. ಶೆಟ್ಟಿ : ಗೋವಾ ಮಹಾರಾಷ್ಟ್ರ ರಾಜ್ಯಗಳಲ್ಲಿ ಇತ್ತೀಚೆಗೆ ಬೀಸಿದ ಪಿಯಾನ್ ಚಂಡಮಾರುತದಲ್ಲಿ ಕುಮುಟಾ ಹಾಗೂ ಭಟ್ಕಳ ತಾಲ್ಲೂಕಿನಲ್ಲಿ ಸಾವಿಗೆ ಈಡಾದ ಹಲವಾರು ಮೀನುಗಾರರ ಕುಟುಂಬದವರಿಗೆ ಪರಿಹಾರ ವಿತರಣೆಯಾಗದಿರುವ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತೇನೆ.

ಮಹಾರಾಷ್ಟ್ರ ಕಡಲ ತೀರದಲ್ಲಿ ಕಾಣಿಸಿಕೊಂಡ ಫಿಯಾನ ಚಂಡಮಾರುತದಲ್ಲಿ ಕುಮಟಾ ತಾಲ್ಲೂಕಿನ 9 ಮತ್ತು ಅಂಕೋಲಾ ತಾಲ್ಲೂಕಿನ ಒಬ್ಬ ಮೀನುಗಾರರು ಕಾಣೆಯಾಗಿದ್ದು, ಎರಡು ಮೃತ ದೇಹಗಳು ಸಿಕ್ಕಿದ್ದು, ಈಶ್ವರ ಪಾಂಡು ಅಂಬಿಗ ಮತ್ತು ರತ್ನಾಕರ ಏಗಪ್ಪ ತಾಂಡೇಲ ಇವರ ವಾರಸುದಾರರಿಗೆ ಮಹಾರಾಷ್ಟ್ರ ಸರ್ಕಾರದವರು ನೀಡಿದ ತಲಾ ರೂ. 1.00 ಲಕ್ಷ ಪರಿಹಾರವನ್ನು ನೀಡಲಾಗಿದೆ. ಕಾಣೆಯಾದ ಉಳಿದ ಮೀನುಗಾರರ ವಾರಸುದಾರರಿಗೆ ಪರಿಹಾರ ನೀಡಲು ಮುಖ್ಯ ಕಾರ್ಯದರ್ಶಿ, ಮಹಾರಾಷ್ಟ್ರ ಸರ್ಕಾರ, ಮುಂಬೈ, ಇವರಿಗೆ ದಿನಾಂಕ: 14.12.2009 ರಂದು ಪತ್ರ ಬರೆಯಲಾಗಿದೆ.

ಗೋವಾ ಕಡಲ ತೀರದಲ್ಲಿ ಕಾಣೆಯಾಗಿರುವ ಹೊನ್ನಾವರ ತಾಲ್ಲೂಕಿನ 19 ಮೀನುಗಾರರು ಹಾಗೂ ಅಂಕೋಲಾ ತಾಲ್ಲೂಕಿನ ಒಬ್ಬ ಮೀನುಗಾರರ ವಾರಸುದಾರರಿಗೆ ಪರಿಹಾರ ಧನ ಬಟವಡೆ ಮಾಡಲು ಮುಖ್ಯ ಕಾರ್ಯದರ್ಶಿ, ಗೋವಾ ಸರ್ಕಾರ, ಪಣಜಿ, ಇವರಿಗೆ ದಿನಾಂಕ: 14.12.2009 ರಂದು ಪತ್ರ ಬರೆಯಲಾಗಿದೆ.

ಶ್ರೀ ಆನಂದ ಅಸ್ನೋಟಿಕರ್ (ಮೀನುಗಾರಿಕಾ ಸಚಿವರು) (ಸಹಕಾರ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ದಿನಾಂಕ: 11.12.2009ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಆಗಿರುವಂತಹ ಅನಾಹುತದಿಂದ ಅರಬ್ಬಿ ಸಮುದ್ರ ಬೀಸಿದ ಪಿಯಾನ್ ಚಂಡಮಾರುತದಲ್ಲಿ ಗೋವಾ ರಾಜ್ಯದಲ್ಲಿ ಮೀನುಗಾರರು ಮಹಾರಾಷ್ಟ್ರ ರಾಜ್ಯದಲ್ಲಿ ಮೃತಪಟ್ಟಿರುವಂತಹ ಮೀನುಗಾರರ ವರದಿ ನಮ್ಮ ಇಲಾಖೆಯ ಬರೆದಿರುವಂತಹ ವರದಿ ತಮ್ಮ ಮುಂದೆ ಹೇಳುವುದಕ್ಕೆ ಬಯಸುತ್ತೇನೆ. ಕುಮುಟಾ ತಾಲ್ಲೂಕಿನಲ್ಲಿ ಸುಮಾರು 9 ಮೀನುಗಾರರ ಕಾಣೆಯಾಗಿದ್ದಾರೆಂದು ತಿಳಿದು ಬಂದಿದೆ. ಅದರಲ್ಲಿ 7 ಜನರು ಮೃತಪಟ್ಟಿದ್ದಾರೆ. ಆ ಮೃತದೇಹಗಳು ಪತ್ತೆಯಾಗಿದೆ. ಅದರಲ್ಲಿ ಇಬ್ಬರ ಮೃತದೇಹಗಳು ಪತ್ತೆಯಾಗಿರುವುದಿಲ್ಲ. ಈ ಎಲ್ಲಾ 9 ಜನ ವಾರಸುದಾರರಿಗೆ ಗೋವಾ ಸರ್ಕಾರವು ತಲಾ 50ಸಾವಿರ ರೂ.ಗಳಂತೆ ಪರಿಹಾರವನ್ನು ದೊರಕಿಸಿಕೊಟ್ಟಿದೆ. ಕರ್ನಾಟಕ ಸರ್ಕಾರವು ಒಬ್ಬ ಫಲಾನುಭವಿಯ ಸರಿಯಾದ ವರದಿಯನ್ನು ನೀಡದಿರುವಂತಹ ಸಂದರ್ಭದಲ್ಲಿಯೂ ಅವರಿಗೆ ತಲಾ 1 ಲಕ್ಷ ರೂಪಾಯಿಗಳ ಪರಿಹಾರದ ಹಣವನ್ನು ನೀಡಿದೆ. ಇದರ ಜೊತೆಗೆ ಹೊನ್ನಾವರ ತಾಲ್ಲೂಕಿನಲ್ಲಿ ಸುಮಾರು 19 ಜನ ಮೀನುಗಾರರು ಗೋವಾ ರಾಜ್ಯದಲ್ಲಿ ಮೀನುಗಾರಿಕೆಗೆ ಹೋದಾಗ ನಾಪತ್ತೆಯಾಗಿದ್ದಾರೆ.

0.17F-95

ಅವರಲ್ಲಿ ಇಬ್ಬರ ಮೃತದೇಹವು ಸಿಕ್ಕಿದೆ. ಮಿಕ್ಕಿದವರು ಇನ್ನು ನಾಪತ್ತೆಯಾಗಿದ್ದಾರೆ. ಆ ಕುಟುಂಬದವರಿಗೆ ಗೋವಾ ರಾಜ್ಯದವರು 50 ಸಾವಿರ ರೂಪಾಯಿಗಳ ಪರಿಹಾರವನ್ನು ನೀಡಿದೆ. ಭಟ್ಕಳ್ ತಾಲ್ಲೂಕಿನಲ್ಲಿ ಮೀನುಗಾರರು ನಾಪತ್ತೆಯಾಗಿರುವ ಬಗ್ಗೆ ವರದಿಯು ಇದುವರೆಗೂ ಆಗಿರುವುದಿಲ್ಲ. ನಮ್ಮ ಇಲಾಖೆಯಿಂದ ಮಹರಾಷ್ಟ್ರ ಮತ್ತು ಗೋವಾ ರಾಜ್ಯದಿಂದ ಒಂದು ವರದಿಯನ್ನು ನಾವು ಒಂದು ಸಮೀಕ್ಷೆಗಾಗಿ ತರಿಸುತ್ತಿದ್ದೇವೆ. ಶೀಘ್ರವೆ ನಮ್ಮ ಇಲಾಖೆಯಲ್ಲಿರುವಂತಹ ಸಂಕಷ್ಟ ಪರಿಹಾರ ಯೋಜನೆಯಲ್ಲಿ ತಲಾ 50 ಸಾವಿರ ರೂಪಾಯಿಗಳನ್ನು ಪ್ರತಿಯೊಬ್ಬ ಮೀನುಗಾರರಿಗೆ ನೀಡುವ ಬಗ್ಗೆ ಕಾರ್ಯಕ್ರಮವನ್ನು ಈಗಾಗಲೇ ಹಾಕಿಕೊಂಡಿದ್ದೇವೆ.

ಶ್ರೀ ದಿನಕರ ಕೆ. ಶೆಟ್ಟಿ : ಕರಾವಳಿ ಪ್ರದೇಶದಿಂದ ಪ್ರತಿ ವರ್ಷ ತಮ್ಮ ಕುಟುಂಬದ ನಿರ್ವಹಣೆಗಾಗಿ ಸಮೀಪದ ರಾಜ್ಯವಾದಂತಹ ಗೋವಾ ಮತ್ತು ಮಹಾರಾಷ್ಟ್ರ ಮತ್ತು ನೆರೆ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಗೆ ಈ ಮೀನುಗಾರರು ವಲಸೆ ಹೋಗುವಂತಹದ್ದು, ಅಲ್ಲಿಗೆ ಹೋದಂತಹ ಸುಮಾರು 28 ಜನರು ಸತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಏನಾದರೂ Clarification ಇದ್ದರೆ ಅದನ್ನು ಕೇಳಿ.

ಶ್ರೀ ದಿನಕರ ಕೆ.ಶೆಟ್ಟಿ : ಸುಮಾರು 28 ಜನರು ಸತ್ತಿದ್ದಾರೆ. ಆ 28 ಜನ ಕುಟುಂಬದವರ ನಿರ್ವಹಣೆ ಹೇಗಾಗಬೇಕು? ಅವರ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ. ಆ 28 ಜನರ ಕುಟುಂಬವು ನಿರ್ಗತಿಕ ಕುಟುಂಬವಾಗಿದೆ. ಅವರಿಗೆ ನಮ್ಮ ಕರ್ನಾಟಕ ಸರ್ಕಾರವು ಏನು ಪರಿಹಾರವನ್ನು ನೀಡದೆ ಇದ್ದರೆ ಹೇಗೆ? ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ನಾವು ಹೇಳಬೇಕಾಗಿದೆ. ನಮ್ಮ ಜಿಲ್ಲೆಯು ಬಹಳ ಅಲಕ್ಷ್ಯ ಜಿಲ್ಲೆಯಾಗಿದೆ. ಇವತ್ತು ಬಜೆಟ್‌ನಲ್ಲಿ ಕೂಡ ನಮ್ಮ ಜಿಲ್ಲೆಗೆ ಯಾವುದೇ ಅವಕಾಶವಿಲ್ಲ. ಅದರಲ್ಲಿಯೂ ಸಹ 28 ಜನರು ಸತ್ತಿದ್ದಾರೆ. ಇವರ ಬಗ್ಗೆ ಸರ್ಕಾರದವರು ....

ಅಧ್ಯಕ್ಷರು : ಹೀಗಾದರೆ ಇದು ಈಗ ಮುಗಿಯುವುದಿಲ್ಲ. ಮಾನ್ಯ ಸಚಿವರೆ ತಾವು ಉತ್ತರವನ್ನು ಹೇಳಿ.

ಶ್ರೀ ದಿನಕರ ಕೆ. ಶೆಟ್ಟಿ : ಒಟ್ಟು 28 ಜನರು ಸತ್ತಿದ್ದಾರೆ. ಇವತ್ತು ಅವರ ಕುಟುಂಬಗಳಿಗೆ 50 ಸಾವಿರ ರೂಪಾಯಿಗಳನ್ನು ಗೋವಾ ಸರ್ಕಾರವು

ಇವತ್ತಿನವರೆಗೆ ಕೊಟ್ಟಿರುವುದಿಲ್ಲ. ನಮ್ಮ ಸರ್ಕಾರವು 1 ರೂಪಾಯಿಯನ್ನು ಸಹ ಕೊಟ್ಟಿಲ್ಲ.

ಅಧ್ಯಕ್ಷರು : ಅವರು ಉತ್ತರವನ್ನು ಹೇಳಲಿ. ತಾವು ಕೇಳಿರುವುದನ್ನೆ ಮತ್ತೆ ಕೇಳಿದರೆ ಹೇಗೆ? ನೀವು ಮತ್ತೆ ಮತ್ತೆ ಅದನ್ನೇ ಕೇಳುತ್ತಿದ್ದೀರಿ.

ಶ್ರೀ ದಿನಕರ ಕೆ. ಶೆಟ್ಟಿ : ಈ ವರದಿಯು ತಪ್ಪಿದೆ. ಮೃತ ಪಟ್ಟಿರುವ 28 ಕುಟುಂಬದವರ ಬಗ್ಗೆ ನಾವು ಏನು ಮಾಡಬೇಕು ಹೇಳಿ. ಅವರಿಗೆ ಇದುವರೆಗೂ ಏನು ಪರಿಹಾರವು ಸಿಕ್ಕಿರುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಎಲ್ಲರೂ ನಿಂತುಕೊಂಡು ಕೇಳಿದರೆ ಅದು ಆಗುವುದಿಲ್ಲ. ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಕರಡಿ ಸಂಗಣ್ಣ : ಕೊಪ್ಪಳ ಜಿಲ್ಲೆ ಹಾಗೂ ತಾಲ್ಲೂಕಿನಲ್ಲಿ.....

ಅಧ್ಯಕ್ಷರು : ಕೊಪ್ಪಳ ತಾಲ್ಲೂಕಿಗೂ ಇದಕ್ಕೂ ಸಂಬಂಧವಿಲ್ಲ. ತಾವು ಬೇರೆ ರೂಪದಲ್ಲಿ ತನ್ನಿ.

ಶ್ರೀ ಕರಡಿ ಸಂಗಣ್ಣ : ಅಲ್ಲ ಬೇರೆ ತನ್ನಿ ಅಂದರೆ, ನಾನು ಮಂತ್ರಿಯವರ ಹತ್ತಿರ......

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಯಲ್ಲಿ ಈ ರೀತಿಯಾಗಿ ಮಾಡಿದರೆ ಕಷ್ಟವಾಗುತ್ತದೆ. ತಾವು ಹಿರಿಯ ಸದಸ್ಯರಾಗಿದ್ದೀರಿ.

ಶ್ರೀ ದಿನಕರ ಕೆ. ಶೆಟ್ಟಿ : ಆ ಮೀನುಗಾರರ ಕುಟುಂಬಕ್ಕೆ ಪರಿಹಾರವೆ ಸಿಕ್ಕಿರುವುದಿಲ್ಲ.

ಅಧ್ಯಕ್ಷರು : ಶ್ರೀ ದಿನಕರ ಕೆ. ಶೆಟ್ಟಿಯವರೊಬ್ಬರೆ ಸಹಿಯನ್ನು ಮಾಡಿರುವುದು ಬೇರೆಯವರಿಗೆ ಅವಕಾಶವಿಲ್ಲ.

ಶ್ರೀ ಕರಡಿ ಸಂಗಣ್ಣ : ಸಹಿಯನ್ನು ಮಾಡಿರುವವರಿಗೆ ಮಾತ್ರ ಎಂದು ಹೇಳುತ್ತಿದೀರಿ. ಎಲ್ಲರಿಗೂ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಅದರಲ್ಲಿ ಎಲ್ಲರೂ ಕೇಳುವುದಕ್ಕಾಗುವುದಿಲ್ಲ.

ಶ್ರೀ ಕರಡಿ ಸಂಗಣ್ಣ : ಈಗ ಬೆಂಗಳೂರಿನ ಎಲ್ಲಾ ಶಾಸಕರು ಮಾತನಾಡಿದರು.

ಅಧ್ಯಕ್ಷರು : ಏಕೆ? ಅವರೆಲ್ಲರೂ ಕೂಡ ಸಹಿಯನ್ನು ಮಾಡಿದ್ದಾರೆ. Please ಕುಳಿತುಕೊಳ್ಳಿ.

ಶ್ರೀ ಕರಡಿ ಸಂಗಣ್ಣ : ನಾವು ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು : ಕುಳಿತುಕೊಳ್ಳದಿದ್ದರೆ, ನಾನು ಇದನ್ನು close ಮಾಡುತ್ತೇನೆ.

ಶ್ರೀ ದಿನಕರ ಕೆ. ಶೆಟ್ಟಿ : ಯಾವುದರಲ್ಲೂ ನಮ್ಮ ಜಿಲ್ಲೆಗೆ ಏನು ಲಾಭವಾಗುತ್ತಿಲ್ಲ.

ಅಧ್ಯಕ್ಷರು : ಬಜೆಟ್ ಮೇಲೆ ಮಾತನಾಡುವಾಗ ಮಾತನಾಡಿ.

ಶ್ರೀ ದಿನಕರ ಕೆ. ಶೆಟ್ಟಿ : 28 ಜನರು ಸತ್ತಿದ್ದಾರೆ. 28 ಜನ ಕುಟುಂಬದವರ ಬಗ್ಗೆ ನಾವು ಯೋಚನೆಯನ್ನು ಮಾಡಬೇಕು. ನಮ್ಮ ಕರ್ನಾಟಕ ಸರ್ಕಾರದ ವತಿಯಿಂದ ಏನಾದರೂ ಪರಿಹಾರವನ್ನು ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಆನಂದ ಅಸ್ನೋಟಿಕರ್ : ಸಂಧ್ಯಾ ಸುರಕ್ಷಾ ಯೋಜನೆ ಯಡಿಯಲ್ಲಿ ಪ್ರತಿಯೊಂದು ಫಲಾನುಭವಿಗಳಿಗೆ 50 ಸಾವಿರ ರೂಪಾಯಿಗಳ ಧನಸಹಾಯವನ್ನು ನಾವು ಶೀಘ್ರವೆ ಮಹಾರಾಷ್ಟ್ರ ಮತ್ತು ಗೋವಾ ಸರ್ಕಾರದಿಂದ ವರದಿಯ ಬಂದ ಮೇಲೆ ಶೀಘ್ರವೇ ಅವರಿಗೆ ಪರಿಹಾರವನ್ನು ನೀಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಅಧ್ಯಕ್ಷರು : ಆಯಿತು. ಮಾನ್ಯ ರಮಾನಾಥ್‌ರೈರವರ ಹೆಸರನ್ನು ಕರೆದಿದ್ದೇನೆ.

ಇ) ಪಶ್ಚಿಮವಾಹಿನಿ ಯೋಜನೆ ಅನುಷ್ಠಾನ ಆಗದಿರುವ ಬಗ್ಗೆ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಪಶ್ಚಿಮವಾಹಿನಿ ಯೋಜನೆ ಅನುಷ್ಠಾನ ಆಗದಿರುವ ಬಗ್ಗೆ ಸಣ್ಣ ನೀರಾವರಿ, ಯೋಜನೆ, ಮತ್ತು ಸಾಂಖ್ಯಿಕ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ : (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) : ಮಾನ್ಯ ಅಧ್ಯಕ್ಷರೆ,

ಮಾನ್ಯ ಅಧ್ಯಕ್ಷರೆ :

ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿದು ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ನೀರನ್ನು ಕೃಷಿ ಹಾಗೂ ಕುಡಿಯುವ ನೀರಿಗಾಗಿ ಬಳಸಿಕೊಳ್ಳುವ ಸಲುವಾಗಿ ಸಣ್ಣ ನೀರಾವರಿ ಇಲಾಖೆಯಿಂದ ಈ ನದಿಗಳಿಗೆ ಕಿಂಡಿ ಅಣೆಕಟ್ಟುಗಳನ್ನು

ನಿರ್ಮಿಸಲು ಉದ್ದೇಶಿಸಿ ರೂ.295.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಒಟ್ಟು 1469 ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸುವ ಒಂದು ಸಮಗ್ರ ಯೋಜನೆಯನ್ನು 2002ನೇ ಗೊಳಿಸುವುದರಿಂದ ವ್ಯರ್ಥವಾಗಿ ಸಮುದ್ರವನ್ನು ಸೇರುವ ನೀರನ್ನು ಭಾಗಶಃ ನೀರಾವರಿಯಾಗಿ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ಸದರಿ ಯೋಜನೆಯಿಂದ ಸುಮಾರು 39,041.67 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಬಹುದಾಗಿರುತ್ತದೆ ಹಾಗೂ ಕರಾವಳಿ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ನದಿಯ ನೀರಿನ ಮಟ್ಟ ಕುಸಿಯುವುದರಿಂದ ಉಪ್ಪು ನೀರು ಸಿಹಿ ನೀರಿನೊಂದಿಗೆ ಬೆರೆತು ಕುಡಿಯುವ ನೀರಿಗೆ ಉಂಟಾಗುವ ಸಮಸ್ಯೆಯನ್ನು ನಿವಾರಿಸಬಹುದಾಗಿದೆ. ಅಲ್ಲದೆ, ಪಶ್ಚಿಮಾಭಿಮುಖವಾಗಿ ಹರಿದು ಸಮುದ್ರ ಸೇರುವ ನದಿಗಳು ಹಾಗೂ ಉಪನದಿಗಳಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸುವುದರಿಂದ ಆ ಭಾಗದಲ್ಲಿಯ ಕೊಳವೆ ಬಾವಿ, ತೆರೆದ ಬಾವಿಗಳಲ್ಲಿ ನೀರಿನ ಅಂತರ್ಜಲ ಮಟ್ಟ ಹೆಚ್ಚಿ ಜನರ ನೀರಿನ ಸಮಸ್ಯೆ ನಿವಾರಿಸಲು ಸಹಕಾರಿಯಾಗುತ್ತದೆ. ರೂ.295.00 ಕೋಟಿಗಳ ಈ ಸಮಗ್ರ ಯೋಜನೆಯನ್ನು 2002ನೇ ಸಾಲಿನಲ್ಲಿ ಕೇಂದ್ರ ಸರ್ಕಾರಕ್ಕೆ ಅನುದಾನಕ್ಕಾಗಿ ಸಲ್ಲಿಸಲಾಗಿತ್ತು. ಆದರೆ, ಈ ಯೋಜನೆಗೆ ಅನುದಾನ ಕಲ್ಪಿಸಲು ಮಾರ್ಗಸೂಚಿಯಲ್ಲಿ ಅವಕಾಶವಿಲ್ಲದಿರುವುದರಿಂದ ರಾಜ್ಯ ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳುವಂತೆ ಸೂಚಿಸಿ ಸಮಗ್ರ ಯೋಜನೆಯನ್ನು ಕೇಂದ್ರ ಸರ್ಕಾರವು ಹಿಂತಿರುಗಿಸಿತ್ತು.

ಇದರಿಂದಾಗಿ, ಈ ಯೋಜನೆಯಡಿ ಸೇರಿದ್ದ ಕಿಂಡಿ ಅಣೆಕಟ್ಟುಗಳನ್ನು ಲೆಕ್ಕಶೀರ್ಷಿಕೆ 4702 ಮತ್ತು ನಬಾರ್ಡ್ ಸಹಾಯಧನದಡಿ ಕೈಗೊಳ್ಳಲಾಗುತ್ತಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ರೂ. 2957.20 ಲಕ್ಷ ಅಂದಾಜು ಮೊತ್ತದ 45 ಕಿಂಡಿ ಅಣೆಕಟ್ಟು ಕಾಮಗಾರಿಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಇವುಗಳ ಅಚ್ಚುಕಟ್ಟು 4140.37 ಹೆಕ್ಟೇರು. ಇದಲ್ಲದೆ, ರೂ.538.85 ಲಕ್ಷ ಅಂದಾಜು ಮೊತ್ತದ 07 ಕಿಂಡಿ ಅಣೆಕಟ್ಟುಗಳ ನಿರ್ಮಾಣವನ್ನು ಕೈಗೊಳ್ಳಲಾಗುತ್ತಿದೆ. ಈ 07 ಕಾಮಗಾರಿಗಳ ಅಚ್ಚುಕಟ್ಟು 460.70 ಹೆಕ್ಟೇರು.

ಸಮಗ್ರ ಯೋಜನೆಯಲ್ಲಿ ಸೇರಿರುವ ಉಳಿದ ಕಾಮಗಾರಿಗಳನ್ನು ಪ್ರತಿ ವರ್ಷ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಕೈಗೊಂಡು ಪೂರ್ಣಗೊಳಿಸಲಾಗುವುದು.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯ ಪಶ್ಚಿಮಘಟ್ಟದ ಮೇಲೆ ಧಾರಾಕಾರವಾಗಿ ಬೀಳುವಂತಹ ನೀರು ಅದು ಹರಿದು ಸಮುದ್ರವನ್ನು ಸೇರುತ್ತದೆ. ನಮ್ಮಲ್ಲಿ ಕೆಲವು ನದಿ ಮೂಲಗಳು ಸೃಷ್ಟಿಯಾಗಿ ಸರಾಗವಾಗಿ ಹರಿಯುವಂತಹ ಒಂದು ಪ್ರದೇಶವಾಗಿದೆ. ಅದು ಉಡುಪಿ ಜಿಲ್ಲೆ ಇರಬಹುದು, ದಕ್ಷಿಣ ಕನ್ನಡ ಜಿಲ್ಲೆ ಇರಬಹುದು. ಇಲ್ಲಿ ಒಂದು ನೀರಾವರಿ ಯೋಜನೆ ಎಂದು ಇಲ್ಲ. ನೀವು ಬಹಳ ಬುದ್ಧಿವಂತರ ಜಿಲ್ಲೆ ಎಂದು ಹೇಳುತ್ತೀರಿ. ಆದರೆ ಒಂದು ಪೈಸೆಯಷ್ಟು ನಮ್ಮ ಜಿಲ್ಲೆಗೆ ನೀರಾವರಿ ಯೋಜನೆಯಾಗಿಲ್ಲ. ದೊಡ್ಡ ನೀರಾವರಿ ಯೋಜನೆಯು ಕೂಡ ಇರುವುದಿಲ್ಲ. ಬಹುಶಃ ಈ ಒಂದು ನದಿ ನೀರನ್ನು ಸಮರ್ಪಕವಾಗಿ ಬಳಸತಕ್ಕಂತಹ ವ್ಯವಸ್ಥೆ ಮಾಡಬೇಕಾದ ಅಗತ್ಯವಿದೆ. ಪ್ರಕೃತಿದತ್ತವಾಗಿ ಪಶ್ಚಿಮಾಭಿಮುಖವಾಗಿ ಹರಿಯತಕ್ಕಂತಹ ನೀರನ್ನು ನಾವು ಅಲ್ಲಲ್ಲಿ ಕಟ್ಟೆ ಮತ್ತು ಡ್ಯಾಂಗಳನ್ನು ಮಾಡಿ ಅಂತರ ಜಲವನ್ನು ಹೆಚ್ಚಿಸಬಹುದು, ಮತ್ತು ಕೃಷಿಗೂ ಅದನ್ನು ಉಪಯೋಗ ಮಾಡಬಹುದು. ಬಹುಶಃ ನಮ್ಮ ಜಿಲ್ಲೆಯಲ್ಲಿ ಭೌಗೋಳಿಕವಗಿ ನಾವು ಅದನ್ನು ತಿಳಿದುಕೊಳ್ಳಬೇಕು. ನಮ್ಮ ಮಣ್ಣಿನ ಒಂದು ಗುಣವೇನೆಂದರೆ, ಅಲ್ಲಿ ನೀರು ಒಳಪದರದಲ್ಲಿ ಹರಿಯುವಂತಹದ್ದು ಇದೆ. ಏನೆಂದರೆ ಅಲ್ಲಿ vented dam ಗಳನ್ನು ಮಾಡುವಂತಹ ಅಗತ್ಯವಿದೆ. ನೇತ್ರಾವತಿ ನದಿ ಇರಬಹುದು ಇನ್ನು ಅನೇಕ ಅಲ್ಲಿ ಹರಿಯತಕ್ಕಂತಹ ನದಿಗಳು ಇರಬಹುದು. ಬಹುಶಃ ಆ ನದಿಗಳಿಂದ vented dam ಗಳನ್ನು ಮಾಡಿ ನಮಗೆ ನೀರು ಕೊಡಿಸುವಂತಹ ಒಂದು ವ್ಯವಸ್ಥೆಯಾಗಬೇಕು. ರೈತರು ಕೃಷಿಗೆ ನೀರನ್ನು ಉಪಯೋಗಿಸ ಬಹುದು. ಆದರೆ ಇವತ್ತು ಅದಕ್ಕೆ ಪೂರಕವಾಗಿ ಮಾತನಾಡಿ ಉತ್ತರವನ್ನು ನೀಡಿದ್ದಾರೆ. ನಾವು ಹಂತಹಂತವಾಗಿ ಸಣ್ಣ ನೀರಾವರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡುತ್ತೇವೆಂದು ಹೇಳಿದ್ದಾರೆ. ಇದು ನಮಗೆ ಬೇಕಾಗಿಲ್ಲ. ರಾಜ್ಯ ಸರ್ಕಾರದವರು ಬೇರೆ ಜಿಲ್ಲೆಗಳಲ್ಲಿ ಅನೇಕ ಭಾರಿ ನೀರಾವರಿ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದ್ದೀರಿ. ನಮ್ಮಲ್ಲಿ ಒಂದೇ ಒಂದು ನೀರಾವರಿ ಯೋಜನೆ ಇಲ್ಲ. ನಮ್ಮ ಉಡುಪಿ ಜಿಲ್ಲೆಯು ಕೂಡ ಒಳ್ಳೆಯ ಭತ್ತವನ್ನು ಬೆಳೆಯುವಂತಹ ಪ್ರದೇಶವಾಗಿತ್ತು. ಈಗ ಒಂದು ಹೆಕ್ಟೇರ್‌ನಲ್ಲಿ ಭತ್ತವನ್ನು ಬೆಳೆಯುವಂತಹ ಜಮೀನು ಇಲ್ಲ. ಏಕೆಂದರೆ ಅಲ್ಲಿಗೆ ನೀರಿನ ವ್ಯವಸ್ಥೆ ಇಲ್ಲ. ನದಿ ನೀರು ಹರಿದು ಸಮುದ್ರಕ್ಕೆ ಹೋಗುತ್ತದೆ. ನಮ್ಮ ನೇತ್ರಾವತಿ ನದಿಯಿಂದ ನೀರನ್ನು ತಿರುಗಿಸಿ ಬೇರೆ ಕಡೆಗೆ ತೆಗೆದುಕೊಂಡು

ಹೋಗಿ ಎಂದು ಹೇಳುವಂತಹ ಡಾ: ಪರಮಶಿವಯ್ಯನವರ ರಿಪೋರ್ಟ್‌ನ್ನು ಆಧಾರವಾಗಿಟ್ಟುಕೊಂಡು ನಮ್ಮಲ್ಲಿ ಎಲ್ಲರೂ ಮಾತನಾಡುತ್ತಾರೆ.

ಡಾ: ಎಂ.ಸಿ.ಸುಧಾಕರ್ : ಆ ರೀತಿಯಾಗಿ ಅದನ್ನು ತಿರುಗಿಸುವುದಕ್ಕಾಗುವುದಿಲ್ಲ ಹೆಚ್ಚುವರಿ ನೀರು ಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಬಿ.ರಮಾನಾಥ್ ರೈ : ಪಶ್ಚಿಮಘಟದಲ್ಲಿ ಬೀಳತಕ್ಕಂತಹ ನೀರನ್ನು ಏಕೆ ಮಂಗಳೂರಿನ ತನಕ ಕೃಷಿಗೆ ಉಪಯೋಗ ಮಾಡುವುದಕ್ಕೆ ಒಂದು ಯೋಜನೆಯನ್ನು ಮಾಡಬಾರದು. ಬಹಳ ಸೀರಿಯಸ್ಸಾಗಿ ಹೇಳುತ್ತಿದ್ದೇನೆ. ಇವತ್ತು ನೇತ್ರಾವತಿ ನದಿ ಬಹಳ ಪ್ರಮುಖವಾದಂತಹ ನದಿಯಾಗಿದೆ. ಅಲ್ಲಲ್ಲಿ ಹೆಚ್ಚುವರಿಯಾದಂತಹ ನದಿ ನೀರು ಪ್ರಕೃತಿದತ್ತವಾದಂತಹ ಒಂದು ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಅದನ್ನು ತಿರುವು ಮಾಡತಕ್ಕಂತಹ ಪ್ರಯತ್ನವನ್ನು ಮಾಡಿದ್ದಾರೆ. ಅದು ಖಂಡಿತವಾಗಿ ಮಾರಕವಾಗುತ್ತದೆ. ನಮ್ಮಲ್ಲಿ ನೇತ್ರಾವತಿ ನದಿ ತಿರುವಿಗೆ ಬಹಳಷ್ಟು ವಿರೋಧವಿದೆ. ನಮ್ಮಲ್ಲಿ ಸ್ವಾಮೀಜಿಯವರು ಇರಬಹುದು, ಹೋರಾಟಗಾರರು ಇರಬಹುದು ಅವರೆಲ್ಲಾ ಬಹಿರಂಗವಾಗಿ ವಿರೋಧಿಸತಕ್ಕಂಥ ಹೇಳಿಕೆಯನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು : ವಿಷಯಾಂತರವಾಗುವುದು ಬೇಡ.

ಶ್ರೀ ಬಿ. ರಮಾನಾಥ್ ರೈ : ಆದರೆ ಅದು ನಮಗೆ ಬೇಕಾಗಿಲ್ಲ. ನಮಗೆ ಬೇಕಾಗಿರತಕ್ಕಂಥದ್ದು ಹರಿಯತಕ್ಕಂಥ ನದಿಯ ನೀರನ್ನು ಅಲ್ಲಲ್ಲಿ vented dam ಗಳನ್ನು ಮಾಡುವುದರ ಮೂಲಕ 10–20 ಕಡೆ ಮಾಡಿದರೆ ಅನುಕೂಲವಾಗುತ್ತದೆ. ನಮಗೆ ಕಾಲುವೆಗಳು ಬೇಕಾಗಿಲ್ಲ ಸ್ವಾಭಾವಿಕವಾಗಿ ಅಂತರ್ಜಲ ವೃದ್ಧಿಯಾಗುತ್ತದೆ. ನಮ್ಮಲ್ಲಿ ಅನಾವೃಷ್ಟಿ ಇದೆ. ತಮಗೆ ಗೊತ್ತಿದೆ, ನಮ್ಮಲ್ಲಿ ಅತಿವೃಷ್ಟಿಯೂ ಇದೆ. ಮಳೆ ಬಿದ್ದಾಗ ಬಹಳಷ್ಟು ಮಳೆ ಬೀಳುತ್ತದೆ. ಆದರೆ ಒಂದು ತಿಂಗಳು ಕಳೆದ ನಂತರ ಒಂದೂ ಹನಿ ನೀರು ನಮ್ಮ ಭೂಮಿಯಲ್ಲಿ ಸಿಗುವುದಕ್ಕೆ ಕಾಣುವುದಿಲ್ಲ. ಇವತ್ತು ಅತಿವೃಷ್ಟಿ ಮತ್ತು ಅನಾವೃಷ್ಟಿ ಎರಡೂ ಇರತಕ್ಕಂಥ ಜಿಲ್ಲೆಯಾಗಿದೆ. ಭೌಗೋಳಿಕವಾಗಿ ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ತಿಳಿದುಕೊಳ್ಳುವಂಥ ಒಂದು ಸಂದರ್ಭ ಇದೆ ಹೊರತು ಬೇರೆಯವರಿಗೆ ಅದರ ಪರಿಚಯವಿಲ್ಲ. ಮಳೆ ಬಿದ್ದಾಗ ಜೋರಾಗಿ ಮಳೆ ಬೀಳುತ್ತದೆ ಆಗ ಯಾವ ಬೆಳೆ ಬೆಳೆಯುವುದಿಲ್ಲ. ಅನಾವೃಷಿಯಾದರೆ ನಮಗೆ ಕುಡಿಯುವ ನೀರಿಗೂ ತೊಂದರೆ ಬರತಕ್ಕಂಥ ಒಂದು ಸಂದರ್ಭ ಇದೆ. ಈ ಯೋಜನೆಗಳನ್ನು ಅನುಷ್ಠಾನ ಮಾಡಿದರೆ ನಮಗೆ ಅತಿವೃಷ್ಟಿ

ಕಡಿಮೆ ಆಗುತ್ತದೆ. ಅನಾವೃಷ್ಟಿಗೂ ಕೂಡ ಬೇಕಾದಂಥ ಒಂದು ವ್ಯವಸ್ಥೆ ಯಾಗುತ್ತದೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರಲ್ಲಿ ಕಳಕಳಿಯಿಂದ ವಿನಂತಿಯನ್ನು ಮಾಡಿಕೊಳ್ಳುವಂಥದ್ದು ಈ ಯೋಜನೆಯನ್ನು 2002ರಲ್ಲಿ ಪ್ರಾರಂಭ ಮಾಡಿದರೂ ಕೂಡ ಅದಕ್ಕೆ ಯಾವ ಕಾರ್ಯರೂಪವನ್ನು ಮಾಡತಕ್ಕಂತದ್ದು ಆಗಲಿಲ್ಲ. ರಾಜ್ಯ ಸರ್ಕಾರ ಬೇರೆ ಬೇರೆ ಜಿಲ್ಲೆಗಳಲ್ಲಿ ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡುತ್ತದೆ, ಇಲ್ಲಿಯೆ ನಮ್ಮ ಭಾರಿ ನೀರಾವರಿ ಸಚಿವರು ಇದ್ದಾರೆ. ಅನೇಕ ಜಿಲ್ಲೆಗಳಲ್ಲಿ ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದಾರೆ. ನಮಗೆ ಸಾವಿರಾರು ಕೋಟಿ ರೂ.ಗಳು ಬೇಕಾಗಿಲ್ಲ. ಇವತ್ತು ಉತ್ತರ ಕರ್ನಾಟಕದಲ್ಲಿ ಹಿಂದುಳಿದ ಪ್ರದೇಶಗಳಿಗೆ ಸಾವಿರಾರು ಕೋಟಿ ರೂ.ಗಳ ಯೋಜನೆ ಮಾಡುತ್ತಿದ್ದೀರಿ.

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆ ಇದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಬೆಂಗಳೂರಿಗೆ ನೀರು ಕೊಡುವುದಾದರೆ ಎಲ್ಲಾ ದುಡ್ಡು ಕೊಟ್ಟು ತಾವು ಹೇಳಿದ್ದನ್ನು ಮಾಡಿ ಕೊಡುತ್ತೇವೆ.

ಶ್ರೀ ಡಿ.ಎನ್ ಜೀವರಾಜ್ : ರಮಾನಾಥ್ ರೈ ರವರು ಹಿರಿಯ ಸದಸ್ಯರು ಅವರು ಹೇಳುವುದು ಎಲ್ಲವೂ ಸರಿ ಇದೆ ಮತ್ತು ಒಳ್ಳೆಯದನ್ನೇ ಹೇಳುತ್ತಿದ್ದಾರೆ. ಆದರೆ ನಮ್ಮ ಪ್ರಶ್ನೆ ಏನೆಂದರೆ, ಇನ್ನು 10 ಗಮನ ಸೆಳೆಯುವ ಸೂಚನೆ ಇವೆ. ಅವು ಮುಗಿಯುವುದಕ್ಕೆ ಇನ್ನು ಎಷ್ಟು ಸಮಯವಾಗುತ್ತದೆ? ದಯಮಾಡಿ ತಾವು ಸ್ವಲ್ಪ ಸಮಯಾವಕಾಶವನ್ನು ಕಡಿಮೆ ತೆಗೆದುಕೊಂಡು ಬೇಗ ಮುಗಿಸಿದರೆ ಒಳ್ಳೆಯದು. ತಾವು ಮಾತನಾಡುತ್ತಿರುವುದು ತಪ್ಪಲ್ಲಾ ಸರಿಯಾಗಿ ಮಾತನಾಡುತ್ತಿದ್ದೀರಿ. ಮಾನ್ಯ ಅಧ್ಯಕ್ಷರೆ ನಿಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ, ಇನ್ನು 10 ಗಮನ ಸೆಳೆಯುವ ಸೂಚನೆಗಳು ಇವೆ. ಅವರು ಸಮಯವನ್ನು ಬೇಗ ಮಾಡಿಕೊಳ್ಳಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ. ರಮಾನಾಥ್ ರೈ : ನಾನು ಮಾತನಾಡಬೇಕೆಂದು ಮಾತನಾಡತಕ್ಕಂಥವನು ಅಲ್ಲ. ನಾನು ಬಹಳ ಸಲ ಮಾತನಾಡುವುದಿಲ್ಲ.

ಅಧ್ಯಕ್ಷರು : ಬಜೆಟ್ ಮೇಲೆ ಚರ್ಚೆ ಮಾಡಿ ಯಾರು ಬೇಡವೆನ್ನುತ್ತಾರೆ.

ಶ್ರೀ ಬಿ. ರಮಾನಾಥ್ ರೈ : ನಮ್ಮ ಬಹು ಮುಖ್ಯವಾದ ಒಂದು ಯೋಜನೆ ಇದು. ಬಹುಶಃ ಇದರಿಂದ ನಮ್ಮ ಮೂರು ಜಿಲ್ಲೆಗಳಿಗೆ ಬಹಳ ಪ್ರಯೋಜನೆ ಆಗತಕ್ಕಂಥ ಒಂದು ಯೋಜನೆ. ಬೇರೆ ಜಿಲ್ಲೆಗಳಿಗೆ ಸಾವಿರಾರು

ಕೋಟಿ ರೂ.ಗಳನ್ನು ಖರ್ಚು ಮಾಡುತ್ತಾರೆ. ಉಡುಪಿ, ಮಂಗಳೂರು ಕೊಡಗು ಜಿಲ್ಲೆಗಳಿಗೆ ಏನಿದೆ? ಒಂದು ನೀರಾವರಿ ಯೋಜನೆ ಇಲ್ಲ. ಇವತ್ತು ಉತ್ತರ ಕರ್ನಾಟಕ ಎಂದು ಹೇಳುತ್ತಾರೆ, ಅಲ್ಲಿ ಬೇಕಾದಷ್ಟು ಯೋಜನೆಗಳು ಇವೆ. ನಮ್ಮಲ್ಲಿ ಇವತ್ತು ಯಾವ ರೀತಿಯಾದ ಯೋಜನೆಗಳು ಇಲ್ಲ.

(ಗೊಂದಲ)

ಶ್ರೀ ಸಿದ್ದು ಸವದಿ : ನೀವು ನಮಗೆ ಮಾಡಿ ಎಂದು ಹೇಳಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಿಮ್ಮಲ್ಲಿ ಯೋಜನೆಯನ್ನು ಮಾಡುತ್ತೇವೆ, ಉಳಿದ ನೀರನ್ನು ನಮಗೆ ಕೊಡಿ.

ಶ್ರೀ ಬಿ. ರಮಾನಾಥ್ ರೈ : ನೀವು ಮೊದಲು ನಮ್ಮಲ್ಲಿ ಮಾಡಿ. ನಂತರ ಉಳಿದದ್ದು ಮಾತನಾಡಿ.

(ಗೊಂದಲ)

ಅಧ್ಯಕ್ಷರು : ಸಿದ್ದು ಸವದಿಯವರೆ ಕುಳಿತುಕೊಳ್ಳಿ, ಇದು ಗಮನ ಸೆಳೆಯುವ ಸೂಚನೆ.

ಶ್ರೀ ಬಿ.ರಮಾನಾಥ್ ರೈ : ನೀವು ನೇತ್ರಾವತಿ ನದಿ ತಿರುವು ಯೋಜನೆ ಮಾಡಬೇಕಾದರೆ, ನಮ್ಮ ಕರಾವಳಿ ಜಿಲ್ಲೆಗೆ ಬೇಕಾದ ಯೋಜನೆಯನ್ನು ಮಾಡಿದ ನಂತರ ಈ ಮಾತನ್ನು ಹೇಳಬೇಕು. ನಮ್ಮ ಜಿಲ್ಲೆಗೆ ಕುಡಿಯುವ ನೀರು ಮತ್ತು ಕೃಷಿಗೆ ನೀರಿನ ಉಪಯೋಗ ಮಾಡಬೇಕು. ನದಿ ತಿರುವಿಗೆ ನಮ್ಮ ವಿರೋಧ ಖಂಡಿತವಿದೆ. ಕೃಷಿಗೆ ಬೇಕಾದ ನೀರಿನ ವ್ಯವಸ್ಥೆಯನ್ನು ನಮ್ಮ ರೈತರಿಗೆ ಈ ಯೋಜನೆ ಮೂಲಕ ಮಾಡಬೇಕಾದ ಅವಶ್ಯಕತೆ ಇದೆ. ಹಂತ ಹಂತವಾಗಿ ಮಾಡುತ್ತೇನೆಂದು ನೀವು ಹೇಳುತ್ತಿದ್ದೀರಿ ಅದು ನಮಗೆ ಬೇಕಾಗಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಕರಾವಳಿ ಜಿಲ್ಲೆಯವರು ಯಾರ್‍ಯಾರು ಮಾತನಾಡುತ್ತೇವೆಂದು ಹೇಳುತ್ತಾರೆ, ಅವರೆಲ್ಲರೂ ಮಾತನಾಡಿದ ನಂತರವೇ ನಾನು ಉತ್ತರ ಹೇಳುತ್ತೇನೆ.

ಅಧ್ಯಕ್ಷರು : ಇಲ್ಲ, ನಿಮಗೆ ಅವಕಾಶ ಕೊಡುವುದಿಲ್ಲ. ನಾನು ಯೋಗೀಶ್‌ಭಟ್ ರವರನ್ನು ಕರೆದಿದ್ದೇನೆ.. ನಿಯಮ ಬಿಟ್ಟು ನೀವು ಹೇಳಿದಂತೆ ಮಾಡಲಿಕ್ಕಾಗುವುದಿಲ್ಲ. ಇದು ಗಮನ ಸೆಳೆಯುವ ಸೂಚನೆ close ಮಾಡಬೇಕಾಗುತ್ತದೆ. ರಮಾನಾಥ್ ರೈ ಒಬ್ಬರೇ ಸಹಿ ಮಾಡಿರುವುದು.

ಶ್ರೀ ಎನ್.ಯೋಗೀಶ್ ಭಟ್ : ಶ್ರೀ ರಮಾನಾಥ ರೈರವರು ಯಾವ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ, ಇದು ಕೇವಲ ಒಬ್ಬ ಶಾಸಕರದ್ದಲ್ಲ, ಇಡೀ ಕರಾವಳಿ ಜಿಲ್ಲೆಗಳ ಎಲಾ ಶಾಸಕರ ಒಕ್ಕೊರಲಿನ ಒಂದು ಅಭಿಪ್ರಾಯ. ಒಂದೇ ಒಂದು ಅಂಶ ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಆಗಿನಿಂದ ಕುಡಿಯುವ ನೀರಿನ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಕೃಷ್ಣೆಯಲ್ಲಿ ಸುಮಾರು 800 TMC ಅಷ್ಟು ನೀರು ಕರ್ನಾಟಕ ರಾಜ್ಯದಲ್ಲಿ ಹರಿದು ಹೋಗುತ್ತಿದೆ. ಕಾವೇರಿಯಲ್ಲಿ 1200 TMC ಯಷ್ಟು ನೀರು ಹರಿದುಹೋಗುತ್ತಿದೆ. ಕರಾವಳಿ ಪ್ರದೇಶಗಳಲ್ಲಿ ಮೂರು ಜಿಲ್ಲೆಗಳಲ್ಲಿ 13 ನದಿಗಳಲ್ಲಿ 2000 TMC ನೀರು ಹರಿದು ಹೋಗಿ ಸಮುದ್ರ ಸೇರುತ್ತದೆ. ನಾವು ಇದರ ಬಗ್ಗೆ ವ್ಯವಸ್ಥಿತವಾಗಿ ಪ್ರಯತ್ನ ಮಾಡದಿದ್ದರೆ ಕಷ್ಟವಾಗುತ್ತದೆ.

ಅಧ್ಯಕ್ಷರು : ನೀವು ಬಜೆಟ್‌ನಲ್ಲಿ ಮಾತನಾಡುವಾಗ ವಿವರವಾಗಿ ಹೇಳಿ.

ಶ್ರೀ ಎನ್. ಯೋಗೀಶ್‌ಭಟ್ : ನಾನು ಇಷ್ಟೇ ಹೇಳುವುದು; ನಮ್ಮ ಮಾನ್ಯ ಮಂತ್ರಿಗಳು ಇಲ್ಲಿ ಸಾವಿರ ಸಾವಿರ ಕೋಟಿ ರೂಪಾಯಿಗಳ ಬಗ್ಗೆ ಯೋಚನೆ ಮಾಡುತ್ತಿದ್ದಾರೆ. ಕರಾವಳಿ ಜಿಲ್ಲೆಗೆ ಶಕ್ತಿ ಕೊಡಿ. ನಮ್ಮ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿ. ನಿಮ್ಮ ಸಮಸ್ಯೆಗೆ ನಾವು ಸ್ಪಂದಿಸುತ್ತೇವೆ.

ಅಧ್ಯಕ್ಷರು : ಉತ್ತರ ಹೇಳಿ, ಇಲ್ಲ, ಬಜೆಟ್‌ನಲ್ಲಿ ಮಾತನಾಡಿ. ಸಚಿವರು ಉತ್ತರ ಹೇಳಿ. ಇಲ್ಲ, ನೀವು ಪ್ರತಿಯೊಂದಕ್ಕೂ ಎದ್ದು ನಿಲ್ಲುತ್ತೀರಿ, ಪ್ಲೀಸ್ ಕುಳಿತುಕೊಳ್ಳಿ.

ಶ್ರೀ ಯು.ಟಿ.ಖಾದರ್ : ಅಧ್ಯಕ್ಷರೇ, ಬೃಹತ್ ನೀರಾವರಿ ಯೋಜನೆ ಇಲ್ಲದೆ ದಕ್ಷಿಣ ಕನ್ನಡ ಜಿಲ್ಲೆಗೆ ಸಣ್ಣ ನೀರಾವರಿ ಯೋಜನೆ ಮಾತ್ರ ಇದೆ.

ಅಧ್ಯಕ್ಷರು : ಇಲ್ಲ, ನಾನು ಹೇಳುತ್ತೇನೆ, ಇದ್ಯಾವುದು ದಾಖಲೆಗೆ ಹೋಗುವುದಿಲ್ಲ, ನೀವು ಮಾತನಾಡಿ. ದಾಖಲೆಗೆ ಹೋಗುವುದಿಲ್ಲ. ನೀವು ಬಜೆಟ್‌ನಲ್ಲಿ ಮಾತನಾಡಿ, ಯಾರು ಬೇಡವೆಂದಿದ್ದು. ಇಡೀ ಜಿಲ್ಲೆಯ ಎಲ್ಲಾ ಸಮಸ್ಯೆಗಳನ್ನು ಹೇಳಿ. ನಿನ್ನೆ, ಮೊನ್ನೆ ಮಾತನಾಡಿದ್ದೀರಿ.

ಶ್ರೀ ಗೋವಿಂದ ಎಂ. ಕಾರಜೋಳ : ಮಾಜಿ ಸಚಿವರು ಈ ಮನೆಯ ಸದಸ್ಯರಾದ ಮಾನ್ಯ ಶ್ರೀ ರಮಾನಾಥರೈ ರವರು ತಮಗೆ ಇರತಕ್ಕಂಥ ತೊಂದರೆಯನ್ನು ಸಾಕಷ್ಟು ವಿವರವಾಗಿ ಹೇಳಿದ್ದಾರೆ. 2002 ರಲ್ಲಿಯೇ ಈ ಯೋಜನೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿದಾಗ ವಾಪಸ್ಸು ಬಂದ ಸಂದರ್ಭದಲ್ಲಿ

ರಾಜ್ಯದಲ್ಲಿ ಬಹುಶಃ ತಾವು ಮಂತ್ರಿಯಾಗಿದ್ದಿರಿ ಎಂದು ಕಾಣಿಸುತ್ತದೆ. ಈ ಯೋಜನೆಯನ್ನು ಕೈಗೆತ್ತಿಕೊಳ್ಳಬಹುದಾಗಿತ್ತು ಆದರೆ ಹಣಕಾಸಿನ ಇತಿಮಿತಿಯೊಳಗೆ ಕೈಗೆತ್ತಿಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ. ಆದರೆ ನಾವು ಈಗಾಗಲೇ ಸುಮಾರು 35.00 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಿಂಡಿ ಅಣೆಕಟ್ಟುಗಳನ್ನು ಪ್ರಾರಂಭ ಮಾಡಿದ್ದೇವೆ. ಸುಮಾರು 52 ಕಿಂಡಿ ಅಣೆಕಟ್ಟುಗಳನ್ನು 45 ಕಿಂಡಿ ಅಣೆಕಟ್ಟುಗಳು ಪೂರ್ಣವಾಗಿ ಮುಗಿದಿದೆ. ಕಳೆದ ವರ್ಷಕ್ಕಿಂತಲೂ ಈ ವರ್ಷ ಸ್ವಲ್ಪ ಹೆಚ್ಚು ಅನುದಾನ ಕೊಟ್ಟು ಮಾಡಲಿಕ್ಕೆ ನಾನು ಪ್ರಯತ್ನವನ್ನು ಮಾಡುತ್ತೇನೆ.

ಅಧ್ಯಕ್ಷರು : ಸ್ವಲ್ಪ brief ಆಗಿ ಹೇಳಿ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಸಭಾಧ್ಯಕ್ಷರೇ, ರಮಾನಾಥ ರೈರವರು ಉತ್ತರ ಕರ್ನಾಟಕದಲ್ಲಿ ಸಾವಿರ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಯೋಜನೆಗಳನ್ನು ಮಾಡುತ್ತೀರಿ, ನಮಗೆ ನೂರು ಕೋಟಿ ರೂಪಾಯಿಗಳನ್ನು ಕೊಡಲಿಲ್ಲವೆಂದು ಕೇಳಿದರು. ಬಹುಶಃ ಉತ್ತರ ಕರ್ನಾಟಕಕ್ಕೆ ರಮಾನಾಥ ರೈರವರು ಮಂತ್ರಿಯಾಗಿ ಅಥವಾ ಶಾಸಕರಾಗಿ ಬಂದಂತೆ ಕಾಣಿಸುವುದಿಲ್ಲ. ನಮಗೆ ಕುಡಿಯಲಿಕ್ಕೆ ನೀರಿಲ್ಲ ಸ್ವಾಮಿ. Transport ಮಾಡುತ್ತೇವೆ. ಬಿಜಾಪುರ ಜಿಲ್ಲೆಯಲ್ಲಿ ಸುಮಾರು 250 ಹಳ್ಳಿಗಳಿಗೆ ಪ್ರತಿ ವರ್ಷ transport ಮಾಡುತ್ತೇವೆ. ದಯವಿಟ್ಟು ತಾವು ಕೂರಬೇಕು. ಅವರು ಪ್ರಸ್ತಾಪ ಮಾಡಿದ್ದಾರೆ. ನೋಡಿ ಅಧ್ಯಕ್ಷರೇ, ನಾನು yield ಆಗುವುದಿಲ್ಲ. ಅವರು ಪ್ರಸ್ತಾಪ ಮಾಡಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ, No ಅದಾಗುವುದಿಲ್ಲ.

(ಗೊಂದಲ)

ಶ್ರೀ ಕೆ. ಅಭಯಚಂದ್ರ : ನೀವು ಮಂತ್ರಿಗಳಾಗಿ ಹಾಗೆ ಮಾತನಾಡಬಾರದು.

ಶ್ರೀ ಯು.ಟಿ.ಖಾದರ್ : ಅಧ್ಯಕ್ಷರೇ, ನಮ್ಮದು ಕುಡಿಯುವ ನೀರಿನ ಸಮಸ್ಯೆ ಇದೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಸಭಾಧ್ಯಕ್ಷರೇ, ಉತ್ತರ ಕರ್ನಾಟಕದ ವಿಷಯ ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

ಶ್ರೀ ಅಭಯಚಂದ್ರ : ನಮ್ಮ ಸಮಸ್ಯೆಗೆ ತಾವು ಯಾವ ರೀತಿ ಸ್ಪಂದಿಸುತ್ತೇವೆಂದು ಹೇಳಿ. ಎಲ್ಲಾ ಉತ್ತರ ಕರ್ನಾಟಕದ ಸಮಸ್ಯೆ ಹೇಳಿದರೆ ನಮ್ಮ ಸಮಸ್ಯೆ ಬಗ್ಗೆ ಯಾರಿಗೆ ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಪ್ಲೀಸ್, ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ.ಕಾರಜೋಳ : ನಾನು ಈಗ ಅದೇ ಉತ್ತರ ಹೇಳಬೇಕಾಗುತ್ತದೆ. ನೀವು ಏಕೆ ಸಾವಿರ ಕೋಟಿ ರೂಪಾಯಿಗಳ ಪ್ರಸ್ತಾಪ ಮಾಡಿದಿರಿ? ಏಕೆ ಉತ್ತರ ಕರ್ನಾಟಕದ ಬಗ್ಗೆ ಪ್ರಸ್ತಾಪ ಮಾಡಿದಿರಿ? ಉತ್ತರ ಕರ್ನಾಟಕದ ಬಗ್ಗೆ ನಿಮಗೆ ಗೊತ್ತಿಲ್ಲ.

(ಗೊಂದಲ)

ಮಾನ್ಯ ಸದಸ್ಯರು : ನೀವು ಅಧಿಕಾರದಲ್ಲಿದ್ದೀರಿ, ನೀವು ದಕ್ಷಿಣ ಕನ್ನಡ ಭಾಗದ ಜನರ ಬಗ್ಗೆ ಕರುಣಾಮಯಿಗಳಾಗಿ.

(ಗೊಂದಲ)

ಶ್ರೀ ಯು.ಟಿ.ಖಾದರ್ : ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ಯಾವುದೇ ದೊಡ್ಡ ಯೋಜನೆಯನ್ನು ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆ, ಪ್ಲೀಸ್. ನೀವು brief ಆಗಿ ಮುಗಿಸಿಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ : ನಮ್ಮ ಉತ್ತರ ಕರ್ನಾಟಕದ ಜನ ಮಂಗಳೂರಿಗೆ ಗುಳೆ ಹೋಗುತ್ತಾರೆ. ನಿಮಗೆ ಆ ಪರಿಸ್ಥಿತಿ ಬಗ್ಗೆ ಗೊತ್ತಿಲ್ಲ. ಅವರ ಬಗ್ಗೆ ನೀವು ಮಾತನಾಡುತ್ತಿದ್ದೀರಿ. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಕ್ಕೆ clarification ಕೇಳಬೇಕಾಗುತ್ತದೆ. ಇವತ್ತು ಉತ್ತರ ಕರ್ನಾಟಕದ ಬಗ್ಗೆ ಹೇಳಿದ್ದಾರೆ, ಇವತ್ತು ನಾಡಿನ ಜನರಿಗೆಲ್ಲಾ ಗೊತ್ತಾಗಬೇಕು. ಯಾವ ಧೋರಣೆಯ ಇವರಲ್ಲಿದೆ. ನಿಮಗೆ ನಮ್ಮ ಬಗ್ಗೆ ಮಲತಾಯಿ ಧೋರಣೆ ಇದ್ದುದರಿಂದಲೇ 63 ವರ್ಷ ಉತ್ತರ ಕರ್ನಾಟಕದ ಜನ ಗುಳೆ ಹೋಗುತ್ತಿದ್ದಾರೆ. ಇವರಿಗೆ ಗಡಿನಾಡಿನಿಂದ ಬಂದಂಥ ಜನರ ಬಗ್ಗೆ ಕಳಕಳಿ ಇಲ್ಲ.

(ಗೊಂದಲ)

ಶ್ರೀ ರಮಾನಾಥ ರೈ : ಆ ರೀತಿ ಸಚಿವರು ಮಾತನಾಡುವುದು ಸರಿಯಲ್ಲ, ಇದು ಒಬ್ಬ ಸಚಿವರು ಹೇಳುವಂಥ ಮಾತಲ್ಲ. ಆ ರೀತಿ ಮಾತನಾಡಬಾರದು.

ಅಧ್ಯಕ್ಷರು : ಪ್ಲೀಸ್, ನೀವು ನಿಮ್ಮ ಸ್ಥಳಕ್ಕೆ ಹೋಗಿ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ರಮಾನಾಥ ರೈ, ಗೋಪಾಲ ಭಂಡಾರಿ, ಯು.ಟಿ.ಖಾದರ್, ಅಭಯಚಂದ್ರ ಹಾಗೂ ಡಾ: ಎಂ.ಸಿ. ಸುಧಾಕರ್ ರವರು ಸದನದ ಬಾವಿಗಿಳಿದು ಮಾತನಾಡುತ್ತಿದ್ದರು)

ಶ್ರೀ ಗೋವಿಂದ ಎಂ.ಕಾರಜೋಳ : ಏಕೆ ಈ ಮಾತನ್ನು ಹೇಳಬೇಕಾಗಿತ್ತು ಮಾನ್ಯ ಸಭಾಧ್ಯಕ್ಷರೇ, ಇವರು ಉತ್ತರ ಕರ್ನಾಟಕದ ಬಗ್ಗೆ ಏಕೆ ಪ್ರಸ್ತಾಪ ಮಾಡಬೇಕಾಗಿತ್ತು? ಉತ್ತರ ಕರ್ನಾಟಕಕ್ಕೆ ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಉತ್ತರ ಕರ್ನಾಟಕದ ಜನ ಸಾಯುತ್ತಿದ್ದಾರೆ ಎಂಬ ಬಗ್ಗೆ ನಿಮಗೆ ಗೊತ್ತಿರಬೇಕು. ನೀವು ಇದನ್ನು ಬಿಟ್ಟುಬಿಡಿ. ನೀವು ಉತ್ತರ ಕರ್ನಾಟಕದ ಬಗ್ಗೆ ಏಕೆ ಪ್ರಸ್ತಾಪ ಮಾಡಿದಿರಿ? ಉತ್ತರ ಕರ್ನಾಟಕದವರು ನಾವು ಇಲ್ಲಿ ಗೋಟಿ ಆಡಲಿಕ್ಕೆ ಬಂದಿಲ್ಲ. ಇದೆಲ್ಲವನ್ನು ಬಿಟ್ಟುಬಿಡಿ. ನೀವು ಉತ್ತರ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ತೋರಿಸಿದ್ದೀರಿ. ನಿಮ್ಮ ಭಾಷೆ ಸರಿಯಿಲ್ಲ. ಉತ್ತರ ಕರ್ನಾಟಕದ ಬಗ್ಗೆ ನೀವೇಕೆ ಪ್ರಸ್ತಾಪ ಮಾಡಿದಿರಿ?

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಸ್ವಾತಂತ್ರ್ಯ ಬಂದ ನಂತರ 1956 ರಿಂದ ಇಲ್ಲೇನು ನಡೆದಿದೆ, ಇದುವರೆಗೆ ಏನೇನು ಆಗಿದೆ ಎಂಬ ಬಗ್ಗೆ ಇವತ್ತು ಚರ್ಚೆಯಾಗಿ ಬಿಡಲಿ.

(ಗೊಂದಲ)

ಅಧ್ಯಕ್ಷರು : ಉತ್ತರ ಕೊಡುವಾಗ ಮಾನ್ಯ ಸಚಿವರು ಸ್ವಲ್ಪ ಸೀಮಿತವಾಗಿ ಉತ್ತರ ಕೊಡಿ..

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ನೀವು ತಾರತಮ್ಯ ಮಾಡುತ್ತಿದ್ದೀರಿ, ಇದು ಸರಿಯಾದುದಲ್ಲ. ಆಗಲಿ, ಏನಾಗುತ್ತದೋ ಆಗಲಿ, ನಾವು ನೋಡಲಿಕ್ಕೆ ತಯಾರಿದ್ದೇವೆ, ಏನಾಗುತ್ತದೋ ಆಗಲಿ.

(ಗೊಂದಲ)

ಅಧ್ಯಕ್ಷರು : ಉತ್ತರ ಸ್ವಲ್ಪ ಸೀಮಿತವಾಗಿರಲಿ, ಪ್ಲೀಸ್, ಈ ರೀತಿ ಸವಾಲು, ಪ್ರತಿ ಸವಾಲು ಹಾಕಿದರೆ ಹೇಗೆ?

ಶ್ರೀ ಗೋವಿಂದ ಎಂ.ಕಾರಜೋಳ : ನೀವು ಉತ್ತರ ಕರ್ನಾಟಕಕ್ಕೆ ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಏಕೆ ಹೇಳಿದಿರಿ, ನಾವು ಉತ್ತರ ಕರ್ನಾಟಕದವರು 63 ವರ್ಷ ನಿಮ್ಮ ಗುಲಾಮರಾಗಿ ಕೆಲಸ ಮಾಡಿದ್ದೇವೆ. ನಿಮ್ಮದಷ್ಟೇ ಕೇಳಿ, ಉತ್ತರ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಪ್ಲೀಸ್, ನೀವು ಬಾವಿಯಲ್ಲಿ ನಿಂತು ಮಾತನಾಡಬೇಡಿ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಅಧ್ಯಕ್ಷರೆ, ಯಾವ ಕಾರಣಕ್ಕೂ ಆಗುವುದಿಲ್ಲ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್ : ಅಧ್ಯಕ್ಷರೇ, ಇದನ್ನು ನಾಳೆಗೆ ಮುಂದುವರೆಸೋಣ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೇ, ನೀರಿನ ಹಾಹಾಕಾರ ಇಡೀ ರಾಜ್ಯದಲ್ಲಿದೆ. 25 ವರ್ಷಗಳಿಂದ ಇಷ್ಟೊಂದು ಬವಣೆ ಇರಲಿಲ್ಲ. ನಮ್ಮೂರಿನಲ್ಲಿ ಹೇಮಾವತಿ ಕಾಲುವೆ ಮಾಡಿ ಎಂದರೆ ಬೇಡ ಎಂದಿರಿ. ಇವತ್ತು ನೀರು ಹರಿಸಿದರೆ ಸಾಕು ಎನ್ನುತ್ತಾರೆ. ನೀವು ನಿಮ್ಮ ಸರ್ಕಾರದಲ್ಲಿರುವ ಈ Cheap popularity ಕಾರ್ಯಕ್ರಮಗಳನ್ನೆಲ್ಲಾ ನಿಲ್ಲಿಸಿ ಈ ರಾಜ್ಯದ ಜನತೆಗೆ, ಉತ್ತರ ಕರ್ನಾಟಕ ಇರಲಿ, ಹಳೆ ಮೈಸೂರು ಆಗಿರಲಿ, ಹೊಸ ಮೈಸೂರು ಆಗಿರಲಿ, ಮಂಗಳೂರು ಭಾಗವಾಗಿರಲಿ, ನೀವು ನೀರು ಕೊಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಕಾರಜೋಳ ಸಾಹೇಬರು ಯಾವುದೇ ಒಂದು ಭಾಗದ ಕರ್ನಾಟಕದ ಮಂತ್ರಿಗಳಲ್ಲ. ಸಮಗ್ರ ಕರ್ನಾಟಕದ ನೀರಾವರಿ ಮಂತ್ರಿಗಳು. ದಯಮಾಡಿ ತಾವು ಈ ರಾಜ್ಯದ

ಮಂತ್ರಿ ಎಂಬ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಬೇಕು. ಬೊಮ್ಮಾಯಿಯವರಾಗಲಿ, ಕಾರಜೋಳ ಸಾಹೇಬರಾಗಲಿ ಈ ರಾಜ್ಯದ ಸಚಿವರು ಎಂಬ ಭಾವನೆಯಿಂದ ಮಾತನಾಡಬೇಕು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಗೌಡರೇ, ಒಂದು ನಿಮಿಷ, ಅವರು ತಾವಾಗಿಯೇ ಈ ವಿಷಯ ಪ್ರಸ್ತಾಪ ಮಾಡಲಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಇಡೀ ರಾಜ್ಯಕ್ಕೆ ಸಚಿವನಾಗಿದ್ದೇನೆ. ಆದರೆ ಅವರು ವಿಷಯಕ್ಕೆ ಸೀಮಿತವಾಗಿ ಮಾತನಾಡಿದರೆ ನಾನು ಈ ರೀತಿ ಪ್ರಸ್ತಾಪ ಮಾಡುತ್ತಿರಲಿಲ್ಲ. ನಮಗೆ ನೂರು ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ. ನಾವು ಸಾಯುತ್ತೇವೆ ಎಂದರೆ ಏನರ್ಥ? ಇದರಲ್ಲಿ ಅರ್ಥ ಇದೆಯೆ? ಅವರು ಆ ರೀತಿ ಮಾತನಾಡಿದ್ದು ತಪ್ಪಲ್ಲವೆ?

ಅಧ್ಯಕ್ಷರು : ಅಭಯ ಚಂದ್ರರವರೇ ತಾವು ಹಿರಿಯರಿದ್ದೀರಿ, ಅವರನ್ನೆಲ್ಲಾ ಕರೆದುಕೊಂಡು ಹೋಗಿ ತಮ್ಮ ಸ್ಥಳಕ್ಕೆ ಹೋಗಿ.

ಅಧ್ಯಕ್ಷರು : ಸಚಿವರೇ ಪ್ಲೀಸ್, ತಾವು ಕುಳಿತುಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ : ನಿಮ್ಮ ಭಾಗಕ್ಕೆ ನಾವು ನಿರ್ಲಕ್ಷ್ಯ ಮಾಡುವುದಿಲ್ಲ. ನಿಮ್ಮ ಯೋಜನೆಗಳಿಗೆ ಎಷ್ಟು ಹಣ ಕೊಡಬೇಕೋ ಅಷ್ಟು ಕೊಟ್ಟು ಕೆಲಸ ಮಾಡುತ್ತೇವೆ. ಮಂಗಳೂರು ಕರಾವಳಿ ಪ್ರದೇಶದ ಮೇಲೆ ನಮಗೆ ಅಭಿಮಾನ ಇದೆ. ಮಂಗಳೂರು ನಮ್ಮ ರಾಜ್ಯಕ್ಕೆ ಸಮೃದ್ಧಿಯಲ್ಲಿ ಪಾಲು ಕೊಡುವಂಥ ಪ್ರದೇಶವಾಗಿದೆ. ನಿಸರ್ಗ ಭರಿತ ಪ್ರದೇಶ ನಮ್ಮ ಮಂಗಳೂರಿನಲ್ಲಿದೆ. ಈಗ ನೀರಿನ ವಿಷಯದಲ್ಲಿ ಈಗಾಗಲೇ Water wars ಆಗುತ್ತದೆ ಎನ್ನುವುದಕ್ಕೆ ಈಗಾಗಲೇ ಸಾಕ್ಷಿಗಳಾಗುತ್ತಿವೆ. ನೀರಿನ ಮೇಲೆ ಎಲ್ಲರ ಹಕ್ಕು ಇದೆ. ನೀರಿನ ಸದುಪಯೋಗಬೇಕು.

ಯಾವ್ಯಾವ ಪ್ರದೇಶಗಳಲ್ಲಿ ನದಿಗಳು ಹರಿದಿದೆ, ಅಲ್ಲಿ ನಮ್ಮ ಹಿರಿಯರೆಲ್ಲರೂ ಕೂಡ ಯೋಜನೆಗಳನ್ನು ಮಾಡಿದ್ದಾರೆ. ಇವತ್ತು ನಮ್ಮ ಮುಂದಿರುವಂತಹ ಸವಾಲು ಏನೆಂದರೆ, ಇದು ಎಲ್ಲರಿಗೂ ಗೊತ್ತಿದೆ. ಎತ್ತರ ಪ್ರದೇಶಕ್ಕೆ ನೀರನ್ನು ಒಯ್ಯುವುದು ನಮ್ಮ ಮುಂದಿರುವಂತಹ ಸವಾಲು. ಎಲ್ಲಿ ನದಿ ಪಾತ್ರವಿರುತ್ತದೆ ಅಲ್ಲಿ ನೀರಿದೆ. ಆದರೆ, ಇವತ್ತು ಭೂಮಿಯಲ್ಲಿ ನೀರು ಕಡಿಮೆಯಾಗಿದೆ, ಮಳೆ ಕಡಿಮೆಯಾಗಿದೆ, ನೀರಿನ ಅಭಾವವಾಗಿದೆ. ಮಲೆನಾಡಿನಲ್ಲೂ ಕೂಡ ನೀರಿನ ಅಭಾವವಾಗಿದೆ, ಇದರ ಅರಿವು ಸರ್ಕಾರಕ್ಕಿದೆ. ಆ ಹಿನ್ನೆಲೆಯಲ್ಲಿ ಇವತ್ತು ನಮ್ಮ ಮುಂದೆ ಇರುವಂತಹದ್ದು

ಮಧ್ಯ ಕರ್ನಾಟಕ. ಉದಾಹರಣೆಗೆ ಒಂದು ಕಾಲದಲ್ಲಿ ಅದನ್ನು drought prone ಎಂದು ಕರೆಯುತ್ತಿದ್ದರು, ಇವತ್ತು ಅದು ಹೋಗಿ desert prone ಆಗಿದೆ. ರಾಜಸ್ತಾನದ ನಂತರ ಅತೀ ಹೆಚ್ಚು ಮರುಭೂಮಿ ಆಗುವಂತಹ ಸಾಧ್ಯತೆ ಇರುವ ಪ್ರದೇಶವೆಂದರೆ ಚಿತ್ರದುರ್ಗ, ತುಮಕೂರಿನ ಭಾಗ, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ.

ಶ್ರೀ ಸಿ.ಎಸ್. ಪುಟ್ಟೇಗೌಡ : ಹಾಸನವೂ ಕೂಡ ಇದಕ್ಕೆ ಸೇರುತ್ತದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಇಲ್ಲಿ 1,500 feet ನಷ್ಟು ಕೆಳಗಡೆ ನೀರು ಹೋಗಿ, Fluorosis ಆಗಿ ಪ್ರತಿಯೊಂದು ಊರಿನಲ್ಲಿ ಕನಿಷ್ಠ 50 ರಿಂದ 100 ಮಕ್ಕಳ ಅಂಗವಿಕಲತೆಯನ್ನು ಇವತ್ತು ನಾವು ದಿನನಿತ್ಯ ನೋಡುತ್ತಿದ್ದೇವೆ. ಇದು ಅಲ್ಲದೆ ಬಿಜಾಪುರ ಜಿಲ್ಲೆಯಲ್ಲಿ ಐದು ನದಿಗಳು ಹರಿದಿದೆ. ಆಲಮಟ್ಟಿ ಡ್ಯಾಮ್ ಇದೆ. ಆದರೆ, ನೀರಾವರಿ ಮುಂದಿನ ಜಿಲ್ಲೆಗಳಿಗೆ ಆಗುತ್ತದೆಯೇ ಹೊರತಾಗಿ ಆ ಜಿಲ್ಲೆಗೆ ಇಲ್ಲ. ಅಲ್ಲಿರುವ ಎತ್ತರ ಪ್ರದೇಶಗಳಿಗೆ ಇವತ್ತು ಕೂಡ ನಾವು ನೀರು ಕೊಡುವುದಕ್ಕೆ ಆಗಿಲ್ಲ. ಸುಮಾರು 250 ಗ್ರಾಮಗಳಿಗೆ ಇವತ್ತು ಕೂಡ ಟ್ಯಾಂಕರ್‌ಗಳಿಂದ ನೀರು ಕೊಡುವಂತಹ ಪರಿಸ್ಥಿತಿ ಇದೆ. ಅದೇ ರೀತಿ ಚಿತ್ರದುರ್ಗ ಹಾಗೂ ಎಲ್ಲಾ ಕಡೆಗಳಲ್ಲಿಯೂ ಇದೆ. ಇವತ್ತು ನಿಮ್ಮ ಭಾಗದಲ್ಲಿ ಸುಮಾರು 2000 ಟಿ.ಎಂ.ಸಿ. ನೀರು ಹರಿದರೂ ಕೂಡ ನೀರನ್ನು ಹಿಡಿದು ಇಟ್ಟುಕೊಂಡಿರುವಂತಹ ಪರಿಸ್ಥಿತಿ ಇಲ್ಲ.

ಅಧ್ಯಕ್ಷರು : ನೀವು ವಿಪ್ ಆಗಿ ವೆಲ್‌ನಲ್ಲಿ ನಿಂತು ಮಾತನಾಡುವುದು ಸರಿಯಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ನನಗೆ ಹೇಳುವುದಕ್ಕೆ ಬಿಡಿ. ನಿಮಗೆ ಅಲ್ಲಿ ನೀರು ಇದ್ದರೂ ಕೂಡ ಅದನ್ನು ಉಪಯೋಗ ಮಾಡುವುದಕ್ಕಾಗು ವುದಿಲ್ಲ. ನಮ್ಮ ಸರ್ಕಾರ ಅದಕ್ಕೆ ಯೋಜನೆಗಳನ್ನು ಮಾಡಿ ಉತ್ತರ ಕೊಡುತ್ತಿದೆ. ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳುವುದಾದರೆ, ಇವತ್ತು ಉತ್ತರ ಕರ್ನಾಟಕದ ಬಯಲುಸೀಮೆ ಪ್ರದೇಶದಲ್ಲಿ ಕುಡಿಯುವುದಕ್ಕೆ ನೀರಿಲ್ಲದೆ 50–60 ವರ್ಷಗಳಾಗಿವೆ. ಒಂದು ಸಣ್ಣ ಉದಾಹರಣೆಯನ್ನು ಅವರು ಹೇಳಿದರು. ಬಿಜಾಪುರದಿಂದ, ಗುಲ್ಬರ್ಗಾದಿಂದ ಮಂಗಳೂರಿಗೆ ಇವತ್ತು ಜನರು ದುಡಿಯುವುದಕ್ಕೆ ಬರುತ್ತಿದ್ದಾರೆ. ನಿಮ್ಮ ಕ್ಷೇತ್ರದಲ್ಲಿ ಬಿಜಾಪುರ, ಗುಲ್ಬರ್ಗಾದಿಂದ ಬಂದ ಜನರಿಗೆ ಒಂದು ಟೌನ್ ಶಿಪ್ ಇದೆ. ನಮ್ಮ ಪರಿಸ್ಥಿತಿ

ಏನಿದೆ ಎಂದು ತಿಳಿದುಕೊಳ್ಳುವುದಕ್ಕೆ ಅದೇ ಒಂದು ಉದಾಹರಣೆ ಸಾಕು. ಮಹಾರಾಷ್ಟ್ರಕ್ಕೂ ಸಹ ಗುಳೆ ಹೋಗುತ್ತಾರೆ. ಅದಕ್ಕೆ ಯೋಜನೆಗಳನ್ನು ಮಾಡಿದ್ದೇವೆ. (ಗೊಂದಲ) ನೀರು ಇವತ್ತು ಎಲ್ಲರಿಗೂ ಬೇಕಾಗಿರುವಂತಹ ವಿಚಾರ. ನೀರಿನ scarcity ಇದೆ. scarcity ಇದ್ದಾಗ ನಾವೆಲ್ಲರೂ ಕೂಡ ಒಬ್ಬರಿಗೊಬ್ಬರಿಗೆ ಸಹಕಾರವಾಗಿ ಕೆಲಸ ಮಾಡಬೇಕು. ಯಥೇಚ್ಛವಾಗಿದ್ದಾಗ ಏನಾದರೂ ಮಾಡಬಹುದು. ಆದರೆ, ನೀರು ಕಡಿಮೆ ಇರುವ ಸಂದರ್ಭದಲ್ಲಿ ಎಲ್ಲರೂ ಹಂಚಿಕೊಳ್ಳಬೇಕಾಗುತ್ತದೆ. ಒಳ್ಳೆಯದನ್ನು ಹಂಚಿಕೊಂಡ ರೀತಿಯಲ್ಲಿ ಕೆಟ್ಟದ್ದನ್ನೂ ಸಹ ಈ ರಾಜ್ಯದಲ್ಲಿ ಹಂಚಿಕೊಳ್ಳಬೇಕಾಗುತ್ತದೆ. ಈ ನಿಸರ್ಗದ ಸಂಪತ್ತು ಕೆಲವು ವೇಳೆ ಒಳ್ಳೆಯದನ್ನು ಕೊಡುತ್ತದೆ ಹಾಗೂ ಕೆಲವು ವೇಳೆ ಕೆಟ್ಟದ್ದನ್ನೂ ಕೊಡುತ್ತದೆ. ಅತೀವೃಷ್ಟಿಯೂ ಆಗುತ್ತದೆ ಹಾಗೂ ಬರಗಾಲವೂ ಕೂಡ ಬರುತ್ತದೆ. ಈ ಸಂದರ್ಭದಲ್ಲಿ ನೀರನ್ನು ಒದಗಿಸುವಂತಹದ್ದು ನಮ್ಮ ಸರ್ಕಾರದ ಕರ್ತವ್ಯವಾಗಿದೆ. ಮೂಲಭೂತ ಸೌಲಭ್ಯವನ್ನು ಕಲ್ಪಿಸುವುದು ನಮ್ಮ ಸರ್ಕಾರದ ಕರ್ತವ್ಯ. ವಿಶೇಷವಾಗಿ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ನಿಮಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ಆ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಅವರು ಹಾಕಿಕೊಂಡು ಮಾಡುತ್ತಾರೆ. ಇದರಲ್ಲಿ ಅನ್ಯಥಾ ಭಾವಿಸುವ ಅವಶ್ಯಕತೆ ಇಲ್ಲ. ಅದೇ ರೀತಿ ನೀವು ಕೂಡ ಬಯಲುಸೀಮೆ ಪ್ರದೇಶಗಳಾದ ತುಮಕೂರು ಮತ್ತು ಇನ್ನು ಹಲವು ಜಿಲ್ಲೆಗಳಿಗೆ ನೀರನ್ನು ಕೊಡುವಂತಹ ಸಂದರ್ಭದಲ್ಲಿ ನೀವು ಕೂಡ ಅದೇ ಸಹಕಾರ ಮನೋಬಾವನೆಯನ್ನು ಇಟ್ಟುಕೊಂಡರೆ ಇಡೀ ಕರ್ನಾಟಕಕ್ಕೆ ಉಪಯೋಗವಾಗುತ್ತದೆ. ನಾನು ಒಂದು ಮಾತನ್ನು ಹೇಳುತ್ತೇನೆ. ಇವತ್ತು ನಾವೆಲ್ಲರೂ ಕೂಡ ಒಬ್ಬರಿಗೊಬ್ಬರು ಸಹಕಾರ ಮಾಡಿಕೊಂಡು ಯೋಜನೆಗಳನ್ನು ಮಾಡದೇ ಇದ್ದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ. ನಾನು ಹೇಳುವುದನ್ನು ಕೇಳಿ. ನಾವು ಸರಿಯಾದಂತಹ ಯೋಜನೆಗಳನ್ನು ಮಾಡದೇ ಇದ್ದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ. ನೀರಿನಲ್ಲಿ ರಾಜಕಾರಣ ಮಾಡಿದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ. ಆದ್ದರಿಂದ, ಆ ಪ್ರದೇಶ, ಈ ಪ್ರದೇಶವೆಂದು ಹೊಡೆದಾಡುವುದಕ್ಕೆ ಹೋಗಬೇಡಿ. ಇಡೀ ಕರ್ನಾಟಕ ಒಟ್ಟಾಗಿ, ಒಂದಾಗಿ ನೀರಿನ ಸಮಸ್ಯೆಯನ್ನು ಬಗೆಹರಿಸೋಣ. ನೀವೆಲ್ಲಾ ಹಿರಿಯರಾಗಿದ್ದೀರಿ. ನೀರಿನ ವಿಷಯದಲ್ಲಿ ಬಾವಿಗೆ ಬೀಳುವುದು ಬೇಡ. ನೀರಿಗೋಸ್ಕರ ಬಾವಿ ತೋಡೋಣ. ಆದರೆ, ನೀರಿನ ವಿಷಯದಲ್ಲಿ ಬಾವಿಗೆ ಬೀಳುವುದು ಬೇಡ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಬಾವಿಯಲ್ಲಿರುವ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಎನ್. ಯೋಗೀಶ್ ಭಟ್ : ಪಶ್ಚಿಮವಾಹಿನಿ ಯೋಜನೆ ಕೇವಲ ದಕ್ಷಿಣ ಕನ್ನಡ ಅಥವಾ ಕರಾವಳಿ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಅದರ ಉಪಯೋಗ ಹತ್ತಿರದ ಜಿಲ್ಲೆಗಳಿಗೆ ಆಗುತ್ತದೆ. ದಯವಿಟ್ಟು ಅರ್ಥ ಮಾಡಿಕೊಳ್ಳಿ. ಮಾನ್ಯ ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಖಂಡಿತವಾಗಿ ಪಶ್ಚಿಮವಾಹಿನಿ ಯೋಜನೆಯ ಲಾಭ ಎಲ್ಲರಿಗೂ ಆಗುತ್ತದೆ. ಕರಾವಳಿ ತೀರದ ಜನರು ಸ್ವಾರ್ಥಿಗಳಲ್ಲ. ಖಂಡಿತವಾಗಿಯೂ ಎಲ್ಲರಿಗೂ ಉಪಯೋಗವಾಗುತ್ತದೆ. ದಯವಿಟ್ಟು ಸಹಕರಿಸಿ.

(ಈ ಹಂತದಲ್ಲಿ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

(ಗೊಂದಲ)

ಅಧ್ಯಕ್ಷರು : ಈಗ ಇದನ್ನು ಮಕ್ತಾಯ ಮಾಡೋಣ.

ಶ್ರೀ ಬಿ.ರಮಾನಾಥ್ ರೈ : ಉತ್ತರ ಕರ್ನಾಟಕಕ್ಕೆ ಕೊಡುವಂತಹ ಯೋಜನೆಗಳಿಗೆ ನಾವು ಯಾವತ್ತೂ ವಿರೋಧ ಮಾಡಿಲ್ಲ. ನಾವು ವಿರೋಧ ಮಾಡಿದ್ದೇವೆಯೇ? ನಾನು ಮಂತ್ರಿಯಾಗಿದ್ದಾಗ ಕೊಟ್ಟಿಲ್ಲವೇ? ಎಲ್ಲಾ ಹಂತದಲ್ಲೂ ಕೊಡಲಿ, ಯಾರು ಬೇಡ ಎಂದು ಹೇಳಿದ್ದಾರೆ? (ಗೊಂದಲ) ನಾನು ಮಂತ್ರಿಯಾಗಿದ್ದೆ, ಶಾಸಕನಾಗಿ ಈ ಸಭೆಯಲ್ಲಿದ್ದ, ಉತ್ತರ ಕರ್ನಾಟಕಕ್ಕೆ ಕೊಡುವುದು ಬೇಡವೆಂದು ಹೇಳಿಲ್ಲ. ಅಪಾರ್ಥ ಮಾಡಿಕೊಳ್ಳುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ಮಾತನಾಡುತ್ತಿರುವುದು ಸರಿಯಲ್ಲ. ನಾನು ಎಷ್ಟೋ ವರ್ಷಗಳ ಕಾಲ ಮಂತ್ರಿಯಾಗಿದ್ದೆ, ಶಾಸಕನಾಗಿದ್ದೆ. ಆದರೆ, ಇದಕ್ಕೆ ನಾನು ಯಾವತ್ತೂ ವಿರೋಧ ಮಾಡಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ನೀವು ನನ್ನನ್ನು ಕೆಣಕುವ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಬಿ. ರಮಾನಾಥ್ ರೈ : ನಾನು ನಿಮ್ಮನ್ನು ಕೆಣಕಲಿಲ್ಲ. ನೀವು ನಮ್ಮನ್ನು ಕೆಣಕುತ್ತಿದ್ದೀರಿ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಉತ್ತರ ಕರ್ನಾಟಕಕ್ಕೆ ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಾಗ ನಾನು ಇಲ್ಲಿ ಇದ್ದೇನೆ. ಇಲ್ಲದಿದ್ದರೆ ನಾನು ಕೇಳುತ್ತಿರಲಿಲ್ಲ.

(ಗೊಂದಲ)

ಅಧ್ಯಕ್ಷರು : ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಇದು ಮುಕ್ತಾಯವಾಗಿದೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಶಾಸಕರಾಗಿರತಕ್ಕಂತಹವರು ಅವರ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಇದು ಸರ್ಕಾರ. ತಾವು ಕೇಳಬೇಕು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಇದು ಭಾವನೆಯಲ್ಲ. ಭಾವನೆಯನ್ನು ಅವರು ಹೇಳಲಿ. ನೀವು ತಾರತಮ್ಯ ಮಾಡಿದ್ದೀರಿ ಎಂದು ಹೇಳುತ್ತಿದ್ದಾರೆ. ಉತ್ತರ ಕರ್ನಾಟಕಕ್ಕೆ ಸಾವಿರ-ಸಾವಿರ ಕೋಟಿಗಳನ್ನು ಕೊಡುತ್ತಾರೆ, ನಮಗೆ ಕೊಡುತ್ತಿಲ್ಲವೆಂದು ವೀರಾವೇಶದಿಂದ ಮಾತನಾಡಿದರೆ ಹೇಗೆ ಆಗುತ್ತದೆ? ನಾವು ಏಕೆ ಇಲ್ಲಿ ಬಂದಿರುವುದು?

(ಗೊಂದಲ)

ಶ್ರೀ ಕೆ. ಅಭಯ್‌ಚಂದ್ರ ಜೈನ್ : ಈ ಸರ್ಕಾರ ಕೊಡಲಿಲ್ಲ. ಕೇಳುವುದು ನಮ್ಮ ಹಕ್ಕು. ಇದು ನಮ್ಮ ಹಕ್ಕು.

(ಗೊಂದಲ)

ಅಧ್ಯಕ್ಷರು : ಈಗ ಇದು ಮುಕ್ತಾಯವಾಗಿದೆ. ಮತ್ತೆ ಏಕೆ ಚರ್ಚೆ ಮಾಡುವುದು? ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ರಮನಾಥ್ ರೈ : ನಾನು ಮಂತ್ರಿಯಾಗಿದ್ದಾಗ ಆ ಭಾಗಕ್ಕೆ ಕೊಡಬಾರದು ಎಂದು ಯಾವತ್ತೂ ಹೇಳಿಲ್ಲ.

(ಗೊಂದಲ)

ಶ್ರೀ ಸಿದ್ದು ಸವದಿ : ಆ ಭಾಗಕ್ಕೆ ನಾವು ಬರುತ್ತೇವೆ. ಅಲ್ಲಿಗೆ ಬಂದು ಬಿಡುತ್ತೇವೆ.

ಶ್ರೀ ಬಿ. ರಮಾನಾಥ್ ರೈ : ಬನ್ನಿ ಬನ್ನಿ. ಸಂತೋಷ. ನಮ್ಮ ಭೌಗೋಳಿಕ ಪರಿಚಯವಾಗುತ್ತದೆ. ನಮ್ಮಲ್ಲೂ ಸಹ ಕಷ್ಟವಿದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ನಿಮಗೆ ಕಷ್ಟವಿದೆ ಎನ್ನುವುದಕ್ಕೋಸ್ಕರ ಹೇಳಿದೆ. ಕಳೆದ ವರ್ಷಕ್ಕಿಂತ ಹೆಚ್ಚು ಮಾಡಬೇಕೆಂದು ಹೇಳಿದ್ದೇನೆ. ನಾವು ಗಮನಹರಿಸಿದ್ದೇವೆ.

(ಗೊಂದಲ)

ಅಧ್ಯಕ್ಷರು : ನಾನು ಇದನ್ನು ಮುಕ್ತಾಯ ಮಾಡಿದ್ದೇನೆ, ಮತ್ತೆ ಏಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಬಿ. ರಮಾನಾಥ್ ರೈ : ನಮಗೆ ಸಮಂಜಸವಾದ ಉತ್ತರ ಕೊಡಬೇಕಾದುದು ನಿಮ್ಮ ಕರ್ತವ್ಯ ಒಂದು ಜವಾಬ್ದಾರಿಯುತವಾದ ಸ್ಥಾನಮಾನದಲ್ಲಿದ್ದಾರೆ. ಅವರ ಕರ್ತವ್ಯದಲ್ಲಿ ಲೋಪವಾಗಿದೆ. ಈ ರಾಜ್ಯದ ಮಂತ್ರಿಯಾಗಿ ಪ್ರತಿಯೊಬ್ಬ ಶಾಸಕರ ಭಾವನೆಗಳನ್ನು ಅರ್ಥಮಾಡಿಕೊಂಡು ಉತ್ತರ ಕೊಡಬೇಕಾದುದು ಇಲ್ಲಿ ಅಗತ್ಯವಾಗಿದೆ. ಅದರ ಬದಲಿಗೆ. . . .

(ಗೊಂದಲ)

ಅಧ್ಯಕ್ಷರು : ನಾನು ಇದನ್ನು ಮುಕ್ತಾಯ ಮಾಡಿದ್ದೇನೆ ಎಂದರೂ ಮತ್ತೆ ಮತ್ತೆ ಏಕೆ ಈ ವಿಷಯವನ್ನು ಮಾತನಾಡುತ್ತೀರಿ? (ಗೊಂದಲ) ಮಾನ್ಯ ಯೋಗೀಶ್‌ಭಟ್‌ರವರೇ, Please ಕುಳಿತುಕೊಳ್ಳಿ. ಮಾನ್ಯ ಎಸ್.ಆರ್.ಮಹೇಶ್ ರವರು ಈಗ ಮಾತನಾಡಬೇಕು. ಉತ್ತರ ಬಂದಿಲ್ಲವೆಂದು ಕಾಣುತ್ತದೆ. ಸಮಯ ಕೇಳಿದ್ದಾರೆ. ನಾಳೆ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಸ್.ಆರ್.ಮಹೇಶ್ : ಉತ್ತರ ಬಂದಿದೆ.

ಈ) ರಾಜ್ಯದಲ್ಲಿ ನ್ಯಾಷನಲ್ ರೂರಲ್ ಹೆಲ್ತ್ ಮಿಷನ್ (ಎನ್.ಆರ್.ಹೆಚ್.ಎಂ.) ಅಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೇಮಕ ಮಾಡಿಕೊಂಡಿರುವ ಶುಶ್ರೂಷಕ/ಶುಶ್ರೂಷಕಿಯವರನ್ನು ಖಾಯಂಗೊಳಿಸುವ ಬಗ್ಗೆ :

ಶ್ರೀ ಮಹೇಶ್ ಎಸ್.ಆರ್. : ಮಾನ್ಯ ಅಧ್ಯಕ್ಷರೆ, ನಿಯಮ –73 ರ ಅಡಿಯಲ್ಲಿ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ,

ಮಾನ್ಯ ಅಧ್ಯಕ್ಷರೆ :

ರಾಜ್ಯದಲ್ಲಿರುವ 2193 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ 975 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 24X7 ಆರೋಗ್ಯ ಕೇಂದ್ರಗಳೆಂದು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಮಾರ್ಪಡಿಸಲಾಗಿದೆ.

24X7 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಇಲ್ಲಿಯವರೆಗೆ ಒಟ್ಟು 2404 ಶುಶ್ರೂಷಕಿಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಅವರಿಗೆ ಮಾಸಿಕ ರೂ.7000/– ಸಂಚಿತ ವೇತನವನ್ನು ನೀಡಲಾಗುತ್ತಿದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಏಪ್ರಿಲ್ 2005 ರಲ್ಲಿ ಆರಂಭಗೊಂಡಿದ್ದು, 2012 ಕ್ಕೆ ಮುಕ್ತಾಯಗೊಳ್ಳಲಿದೆ. ಸದರಿ ಹುದ್ದೆಗಳು ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಮಂಜೂರಾದ ಹುದ್ದೆಗಳಾಗಿರುವುದಿಲ್ಲ. ಆದಾಗ್ಯೂ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24X7 ಘಂಟೆಗಳ ಕಾಲ ಹೆರಿಗೆ ಮತ್ತು ತುರ್ತು ಆರೋಗ್ಯ ಸೇವೆಗಳನ್ನು ಸದರಿ ಕೇಂದ್ರಗಳಲ್ಲಿ ಲಭ್ಯವಿರಬೇಕೆಂಬ ಕಾರಣದಿಂದ ಶುಶ್ರೂಷಕಿಯರನ್ನು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಯೋಜನಾ ಅವಧಿಗೆ ಸೀಮಿತಗೊಳಿಸಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.

ಸದರಿ ನೇಮಕಾತಿಯನ್ನು ಪ್ರತಿ ವರ್ಷವು ನವೀಕರಿಸಿಕೊಂಡು ಬಂದಿದ್ದು, ಇವು ಖಾಯಂ ನೇಮಕಾತಿಯಾಗಿರುವುದಿಲ್ಲ. ಆದಕಾರಣ, ಈ ಸಿಬ್ಬಂದಿಗಳ ಸೇವೆಯನ್ನು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಯೋಜನೆಯಡಿ ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

ಶ್ರೀ ಎಸ್. ಆರ್. ಮಹೇಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರದಲ್ಲಿ ಹೇಳಿರುವಂತೆ, ಇಡೀ ರಾಜ್ಯದಲ್ಲಿರುವ 2,100 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ 975 ಅನ್ನು ಮಾತ್ರ 24X7 ಪ್ರಾಥಮಿಕ ಆರೋಗ್ಯ ಕೇಂದ್ರಗಳೆಂದು ಘೋಷಿಸಿದ್ದಾರೆ. ಈ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 2,404 ವೈದ್ಯ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ ಮತ್ತು ಅವರಿಗೆ 7,000 ರೂ. ವೇತನ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ, ಅವರು ಹೇಳಿರುವಂತೆ 2012ಕ್ಕೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಮುಕ್ತಾಯಗೊಳ್ಳುವುದಾಗಿ

ತಿಳಿಸಿದ್ದಾರೆ. ಈಗ ತೆಗೆದುಕೊಂಡಿರುವ 2,404 ವೈದ್ಯ ಸಿಬ್ಬಂದಿಗೆ ಸುಮಾರು ಏಳು ವರ್ಷಗಳ ಕಾಲ ಗುತ್ತಿಗೆ ಆಧಾರದಲ್ಲಿ ಅವರು ಕೆಲಸ ಮಾಡಿದರೆ ಮುಂದಿನ ದಿನಗಳಲ್ಲಿ, ಅವರನ್ನು ಕೆಲಸದಿಂದ ತೆಗೆದು ಹಾಕುವ ಸಂದರ್ಭದಲ್ಲಿ ಅವರುಗಳಿಗೆ ವಯಸ್ಸಾಗಿರುತ್ತದೆ ಮತ್ತು ನೇಮಕಾತಿ ಯಾಗುವಾಗ ಅವರಿಗೆ age bar ಅಹ ಆಗಿರುತ್ತದೆ. ಆದುದರಿಂದ, ಈ ನಿಟ್ಟಿನಲ್ಲಿ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, 2,193 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಇವರುಗಳನ್ನೇ ಮುಂದೆ ನೇಮಕಾತಿ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆ (NRHM) ಯಡಿ ಸುಮಾರು 2,404 ನರ್ಸ್‌ಗಳು ಕೆಲಸ ಮಾಡುತ್ತಿದ್ದು, ಇವರುಗಳನ್ನು ಖಾಯಂಗೊಳಿಸಲು ನಮಗೆ ಯಾವುದೇ ಅಧಿಕಾರ ಇರುವುದಿಲ್ಲ. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ನಾವು ಕೆಲಸ ಮಾಡಬೇಕಾಗುತ್ತದೆ. ಇವತ್ತು ಕೇಂದ್ರ ಸರ್ಕಾರದ್ದು ಶೇಕಡ 85ರಷ್ಟು, ರಾಜ್ಯ ಸರ್ಕಾರದ್ದು ಶೇಕಡ 15ರಷ್ಟು ಪಾಲು ಇರುವ ಕಾರಣ ಮುಂದಿನ ದಿನಗಳಲ್ಲಿ ನನಗೆ ಗೊತ್ತಿರುವಂತೆ, ಬಹಳಷ್ಟು ನರ್ಸ್‌ಗಳು ನಮ್ಮ ಮನೆ ಎದುರು ಬಂದು ತಮ್ಮನ್ನು ಖಾಯಂ ಗೊಳಿಸಬೇಕೆಂದು ಮನವಿ ಮಾಡಿ ತಿಳಿಸಿದ್ದಾರೆ. ಮುಂಬರುವ ದಿನಗಳಲ್ಲಿ ಕೇಂದ್ರ ಸರ್ಕಾರದೊಂದಿಗೆ ನಾನು ಸಮಾಲೋಚನೆ ನಡೆಸುತ್ತೇನೆ. (NRHM) ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಖಾಯಂ ಮಾಡುವುದಕ್ಕೆ ಅವಕಾಶವಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಸುಧೀರ್ಘವಾಗಿ ಆಲೋಚಿಸಿ ಇದಕ್ಕೆ ಯಾವ ರೀತಿಯಲ್ಲಿ ಸೂಕ್ತ ಪರಿಹಾರ ಕಂಡುಕೊಳ್ಳಬೇಕೋ, ಆ ದಿಸೆಯಲ್ಲಿ ಕ್ರಮ ಕೈಗೊಳ್ಳುವುದಾಗಿ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತಿದ್ದೇನೆ.

ಉ) ರಾಜ್ಯದ ಖಾಸಗಿ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಗಳ ಷೇರುಧಾರರಿಗೆ ಸಮನಾಗಿ ಒಂದೇ ದರದಲ್ಲಿ ಸಕ್ಕರೆ ವಿತರಿಸುವ ಬಗ್ಗೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಹುಕ್ಕೇರಿ ಸದಲಗ) : ಮಾನ್ಯ ಅಧ್ಯಕ್ಷರೆ, ರಾಜ್ಯದ ಖಾಸಗಿ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಗಳ ಷೇರುದಾರರಿಗೆ ಸಮನಾಗಿ ಒಂದೇ ದರದಲ್ಲಿ ಸಕ್ಕರೆ ವಿತರಿಸುವ ಬಗ್ಗೆ ನಾನು ಮಾನ್ಯ ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಶಿವರಾಜ್ ಎಸ್ ತಂಗಡಗಿ : (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಮಾನ್ಯ ಅಧ್ಯಕ್ಷರೆ :

ರಾಜ್ಯದಲ್ಲಿರುವ ಹಲವಾರು ಖಾಸಗಿ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಗಳು ತಮ್ಮ ಸದಸ್ಯರುಗಳಿಗೆ ರಿಯಾಯ್ತಿ ದರದಲ್ಲಿ ಬೇರೆ ಬೇರೆ ಅನುಪಾತದಲ್ಲಿ ಸಕ್ಕರೆ ಒದಗಿಸುವ ವ್ಯವಸ್ಥೆ ಹೊಂದಿದೆ. ಪ್ರತಿ ಸದಸ್ಯರಿಗೆ ನೀಡಲಾಗುವ ಸಕ್ಕರೆ ಪ್ರಮಾಣವನ್ನು ಹಾಗೂ ದರಗಳನ್ನು ಆಯಾ ಕಾರ್ಖಾನೆಗಳ ಆಡಳಿತ ಮಂಡಳಿ ನಿರ್ಧರಿಸುತ್ತಿದೆ. ಕಾರ್ಖಾನೆಗೆ ಸದಸ್ಯರು ಸರಬರಾಜು ಮಾಡಿದ ಕಬ್ಬಿನ ಪ್ರಮಾಣದ ಅನುಸಾರ ಸಹ ಸಕ್ಕರೆ ಪ್ರಮಾಣ ನಿಗದಿಪಡಿಸಿಕೊಳ್ಳಲಾಗಿದೆ.

ಖಾಸಗಿ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಗಳು ತಮ್ಮದೇ ಆದ ಆಡಳಿತ ಮಂಡಳಿಗಳನ್ನು ಹೊಂದಿದ್ದು ಪ್ರತಿ ಸದಸ್ಯರಿಗೆ ಮಾರಾಟ ಮಾಡಬಹುದಾದ ಸಕ್ಕರೆ ಪ್ರಮಾಣ ಹಾಗೂ ದರಗಳನ್ನು ಅವರ ವಿವೇಚನೆಯಂತೆ ನಿರ್ಧರಿಸುತ್ತಿವೆ.

ಎಲ್ಲಾ ಖಾಸಗಿ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಾಮಾನ್ಯವಾಗಿ ಅನ್ವಯವಾಗುವ ನಿಯಮಗಳನ್ನು ಸರ್ಕಾರ ನಿಗದಿಪಡಿಸಿದಲ್ಲಿ ಖಾಸಗಿ: ಸಹಕಾರ ಸಕ್ಕರೆ ಕಾರ್ಖಾನೆಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿದಂತಾಗುವ ಕಾರಣ ಸರ್ಕಾರವು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದು ಉಚಿತವಾಗಲಾರದು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಸಕ್ಕರೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ದೊಡ್ಡ ಇಲಾಖೆಯೇ ಇದೆ. ಮಾನ್ಯ ಸಚಿವರು ಈ ತರಹ ಉತ್ತರ ಕೊಟ್ಟರೆ ನಮಗೆ ಅದು ಸಮರ್ಪಕವೆನಿಸುವುದಿಲ್ಲ. ಏಕೆಂದರೆ, ಸಕ್ಕರೆ ಕಾರ್ಖಾನೆಯಲ್ಲಿ ಏನು ವ್ಯವಹಾರ ನಡೆಯುತ್ತದೋ, ಅದನ್ನು ಸರಿಪಡಿಸುವ ಸಲುವಾಗಿ ಸಕ್ಕರೆ ಸಚಿವರನ್ನು ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ನೇಮಿಸಿ ಅವರಿಗೆ ಅಧಿಕಾರ ಕೊಟ್ಟಿದ್ದಾರೆ. ಅದರ ಪ್ರಕಾರ

ಸಕ್ಕರೆ ನಿರ್ದೇಶನಾಲಯದ ಸಾಕಷ್ಟು ಅಧಿಕಾರಿಗಳು ಕೂಡ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ. ನಾನು ಈ ವಿಷಯವನ್ನು ಸದನದಲ್ಲಿ ಏಕೆ ಪ್ರಸ್ತಾಪಿಸಿದ್ದೇನೆಂದರೆ, ನಮ್ಮ ರಾಜ್ಯದಲ್ಲಿ ಸುಮಾರು 27 ಸಕ್ಕರೆ ಕಾರ್ಖಾನೆಗಳಿದ್ದು, ಈ ಕಾರ್ಖಾನೆಗಳಲ್ಲಿ ಸುಮಾರು 10,000 ಕ್ಕಿಂತಲೂ ಹೆಚ್ಚು ಷೇರುದಾರರಿದ್ದಾರೆ. ಈ ಷೇರುದಾರರಿಗೆ ಪ್ರತಿ ವರ್ಷವೂ ಯಾವ ರೈತರು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸುತ್ತಾರೋ, ಅವರಿಗೆ ರಿಯಾಯಿತಿ ದರದಲ್ಲಿ 50 ಕೆಜಿ ಸಕ್ಕರೆ ಕೊಡುತ್ತಿದ್ದಾರೆ. ರಿಯಾಯಿತಿ ದರದಲ್ಲಿ ಸಕ್ಕರೆ ಏನು ಸಿಗುತ್ತದೆ ಮತ್ತು ಎಷ್ಟು ಪ್ರಮಾಣದಲ್ಲಿ ಸಕ್ಕರೆ ಕೊಡುತ್ತಾರೆಂಬುದನ್ನು ತಾವು ಈ ಸದನಕ್ಕೆ ತಿಳಿಸಬೇಕು. ಇವತ್ತು ರೈತ ಬಾಂಧವರಿಗೆ ಯಾವ ಯಾವ ಸಕ್ಕರೆ ಕಾರ್ಖಾನೆಗಳಿಂದ ಎಷ್ಟು ರೈತರು ಇದರ ಲಾಭ ಪಡೆದುಕೊಳ್ಳುತ್ತಿದ್ದಾರೆ ಎಂಬ ವಿಚಾರವನ್ನು ತಿಳಿಸಬೇಕು. ಹಾರಿಕೆ ಉತ್ತರ ಕೊಡುವ ಸಲುವಾಗಿ ನಾನು ಇದರ ಬಗ್ಗೆ ನಿಮ್ಮನ್ನು ಕೇಳಿಲ್ಲ. ಸುಮಾರು 30 ಲಕ್ಷದಷ್ಟು ಷೇರುದಾರರಿದ್ದು, ಈ ಕುರಿತು ಮಾನ್ಯ ಸಕ್ಕರೆ ಸಚಿವರೊಂದಿಗೆ ಮಾತನಾಡಿದಾಗ, ಇಷ್ಟು ಸಂಖ್ಯೆಯಲ್ಲಿರುವ ಷೇರುದಾರರು ಇದರ ಲಾಭ ಪಡೆಯುತ್ತಿದ್ದಾರೆ. ದಯವಿಟ್ಟು ಸವಿಸ್ತಾರವಾದ ಮಾಹಿತಿಯನ್ನು ಸದನಕ್ಕೆ ಕೊಡಬೇಕು. ತಾವು ಅಧಿಕಾರಿಗಳ ಮಾತು ಕೇಳಿ ಈ ತರಹ ನಾಲ್ಕು ಅಕ್ಷರಗಳನ್ನು ಬರೆದು ಕೊಡುವುದಾದರೆ ಹೇಗೆ? ತಾವು ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು. ತಾವು ಸರಿಯಾದ ಉತ್ತರವನ್ನು ಸದನಕ್ಕೆ ನೀಡಬೇಕು. ಇದರಿಂದ ನಿಮ್ಮ ಗೌರವವೂ ಹೆಚ್ಚಾಗುತ್ತದೆ. ಆದುದರಿಂದ, ಎಷ್ಟು ರೈತರಿಗೆ ರಿಯಾಯಿತಿ ದರದಲ್ಲಿ ಸಕ್ಕರೆ ಒದಗಿಸಿಕೊಡಲಾಗುತ್ತಿದೆ ಎಂಬುದರ ಬಗ್ಗೆ ಮಾನ್ಯ ಸಕ್ಕರೆ ಸಚಿವರು ಮತ್ತೊಮ್ಮೆ ಸದನದಲ್ಲಿ ಉತ್ತರಿಸಲು ಮಾನ್ಯ ಅಧ್ಯಕ್ಷರು ಅವರಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣ ಬೆಳಗೋಳ) : ಮಾನ್ಯ ಅಧ್ಯಕ್ಷರೆ, ಸಕ್ಕರೆ ಕಾರ್ಖಾನೆಗಳು ನನ್ನ ಮತಕ್ಷೇತ್ರದಲ್ಲಿಯೂ ಇದೆ. ಆದರೆ, ನಮ್ಮಲ್ಲಿ ಯಾವುದೇ ರೈತರಿಗೂ ರಿಯಾಯಿತಿ ದರದಲ್ಲಿ ಒಂದು ಕೆ.ಜಿ. ಸಕ್ಕರೆಯನ್ನೂ ಕೊಡುವುದಿಲ್ಲ. ಅಲ್ಲೆಲ್ಲಾ ಹೇಳುತ್ತಿರುವುದೇನೆಂದರೆ, ಎಲ್ಲರೂ ಕಬ್ಬು ಬೆಳೆಯುವವರೇ, ನೀವು ಬೆಲ್ಲದ ಕಾಫಿ ಕುಡಿಯಿರಿ, ಸಕ್ಕರೆಯನ್ನು ನಾವು ಹೊರಗಡೆಗೆ ರವಾನಿಸುತ್ತೇವೆಂದು ಕಾರ್ಖಾನೆಯನ್ನು ಗುತ್ತಿಗೆಗೆ ಕೊಟ್ಟು ಯಾವುದೇ ರೈತರಿಗೂ ಒಂದು ಕೆ.ಜಿ. ಸಕ್ಕರೆಯನ್ನೂ ಸಹ, ಆತನ

ಮನೆಯಲ್ಲಿ ಮದುವೆ ಕಾರ್ಯವಾದರೂ, ಯಾವುದಕ್ಕೂ ಕೊಡುವುದಿಲ್ಲ. ಈಗ ಇದರ ಬಗ್ಗೆ ಇವರೆಲ್ಲರೂ ಹೇಳುತ್ತಿರುವುದನ್ನು ನೋಡಿದರೆ, ಮಹಾರಾಷ್ಟ್ರದಲ್ಲಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ದಯಮಾಡಿ ನಮ್ಮ ಭಾಗದ ಮಂಡ್ಯ, ಹಾಸನದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲೂ ಈ ಪದ್ಧತಿ ಜಾರಿಗೆ ತರಬೇಕೆಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಕಾಸಾಹೇಬ ಪಾಂಡುರಂಗ ಪಾಟೀಲ್ (ನಿಪ್ಪಾಣಿ) : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಬೆಳಗಾಂ ಜಿಲ್ಲೆಯಲ್ಲಿ Cooperative sugar factories ಇವೆ, ಮತ್ತು ಮಹಾರಾಷ್ಟ್ರದಲ್ಲಿ 8-10 Sugar Factory, Multi-state Act ನಲ್ಲಿ ರಿಜಿಸ್ಟ್ರೇಶನ್ ಆಗುವ ಮುಖಾಂತರ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಹಲವಾರು ಪ್ರದೇಶಗಳು, ತಾಲ್ಲೂಕುಗಳು ಬರುತ್ತವೆ. ಅಲ್ಲಿ ಕೆಲವೊಂದು ಡಿವಿಡೆಂಡ್ ಅನ್ನು ನಾವು ಹೇಗೆ ಹಂಚುತ್ತೇವೋ.. ..

ಅಧ್ಯಕ್ಷರು : ನೀವು ಡಿವಿಡೆಂಡ್ ಬಗ್ಗೆ ಕೇಳಿದರೆ ಅವರು ಹೇಗೆ ಉತ್ತರಿಸುತ್ತಾರೆ? ತಾವು ಕೇಳುತ್ತಿರುವುದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ.

ಶ್ರೀ ಕಾಕಾಸಾಹೇಬ್ ಪಾಂಡುರಂಗ ಪಾಟೀಲ್ : ....ಆ ಪ್ರಕಾರ ಪ್ರತಿ ಸಕ್ಕರೆ ಕಾರ್ಖಾನೆಯವರು ರಿಯಾಯಿತಿ ದರದಲ್ಲಿ 50 ಕೆಜಿ ಸಕ್ಕರೆಯನ್ನು ಮತ್ತು ಮಹಾರಾಷ್ಟ್ರಕ್ಕೆ ಎಷ್ಟು ಪ್ರಮಾಣದಲ್ಲಿ ಕಬ್ಬು ಸಾಗಿಸುತ್ತಾರೋ, ಪ್ರತಿ ಟನ್‌ಗೆ ಇಂತಿಷ್ಟು ಸಕ್ಕರೆ ಎಂದು ಸಹ ಕೊಡುತ್ತಾರೆ. ಆದುದರಿಂದ.....

ಅಧ್ಯಕ್ಷರು : ಅದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ಸಚಿವರು ಉತ್ತರಿಸಬೇಕು.

ಶ್ರೀ ಕಾಕಾಸಾಹೇಬ್ ಪಾಂಡುರಂಗ ಪಾಟೀಲ್ : ಆದುದರಿಂದ, ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ತಡೆಹಿಡಿದು, ಮತ್ತೊಮ್ಮೆ ಇದರ ಬಗ್ಗೆ ಸಮರ್ಪಕವಾಗಿ ಉತ್ತರ ಕೊಡಲು ಅನುಕೂಲವಾಗುವಂತೆ ತಾವು ಅವಕಾಶ ಕಲ್ಪಿಸಿಕೊಡಬೇಕು.

ಅಧ್ಯಕ್ಷರು : ತಾವು ಸಹಿ ಮಾಡಿಲ್ಲ, ಕುಳಿತುಕೊಳ್ಳಬೇಕು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, 2009–10ನೇ ಸಾಲಿನಲ್ಲಿ ಪ್ರತಿಯೊಬ್ಬ ಸದಸ್ಯರಿಗೂ 50 ಕೆಜಿ ಸಕ್ಕರೆಯನ್ನು ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ವತಿಯಿಂದ ಮುಕ್ತಟೆಯಾಗಿ ಕೊಡುತ್ತೇವೆಂದು ಮಾನ್ಯ

0.17F-98

ಸಕ್ಕರೆ ಸಚಿವರು ಹೇಳಿದರು. ಈ ರೀತಿ ಮಾಡಿದರೆ ಕಬ್ಬು ಬೆಳೆಯುವ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ.

ಶ್ರೀ ಶಿವರಾಜ್ ಎಸ್. ತಂಗಡಗಿ : ಇದು ಸರ್ಕಾರದ ಕರ್ತವ್ಯವಲ್ಲ. ಅಲ್ಲಿರುವ ಪ್ರತಿಯೊಂದೂ ಸಕ್ಕರೆ ಕಾರ್ಖಾನೆಯಲ್ಲಿರುವ ಆಡಳಿತ ಮಂಡಳಿಯ ನಿರ್ಣಯದ ಮೇರೆಗೆ ಆಗುವ ವ್ಯವಸ್ಥೆ ಇದಾಗಿದೆ. ಪ್ರತಿ ಷೇರುದಾರರಿಗೆ ಇಂತಿಷ್ಟು ಪ್ರಮಾಣದಲ್ಲಿ ಸಕ್ಕರೆ ಕೊಡಬೇಕು, ಇಂತಿಷ್ಟೇ ದರದಲ್ಲಿ ಕೊಡಬೇಕೆಂದು ಹೇಳುವುದಕ್ಕೆ ಸರ್ಕಾರಕ್ಕೆ ಯಾವುದೇ ಅಧಿಕಾರವಿಲ್ಲ. ಅಲ್ಲಿನ ಆಡಳಿತ ಮಂಡಳಿಯವರ ನಿರ್ಣಯ ಅದಾಗಿರುತ್ತದೆ. ಆ ನಿರ್ಣಯವನ್ನು ಬೇಕಾದರೆ general Body ಯಲ್ಲಿ ಪ್ರಸ್ತಾಪಿಸಿ, ಅದಕ್ಕೆ ಅನುಮೋದನೆ ಪಡೆದುಕೊಂಡು ನಿಮ್ಮ ನಿಮ್ಮ ಸಕ್ಕರೆ ಕಾರ್ಖಾನೆಗಳಲ್ಲಿ ಆ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದಾಗಿದೆ. ನಿಮ್ಮ ಕಾರ್ಖಾನೆಗಳಲ್ಲಿ ಮೊದಲು ಇದನ್ನು ಸಾಂಕೇತಿಕವಾಗಿ ಪ್ರಾರಂಭಿಸಿ, ಅನಂತರ....

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಸಕ್ಕರೆ ಸಚಿವರ ಅಧೀನದಲ್ಲಿ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ಬರುವುದರಿಂದ, ದಯವಿಟ್ಟು ಅವರೇ ಈ ಕೆಲಸವನ್ನು ಮೊದಲು ಪ್ರಾರಂಭಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಶಿವರಾಜ್ ಎಸ್. ತಂಗಡಗಿ : ಅಧ್ಯಕ್ಷರೆ, ಮಾನ್ಯ ಸದಸ್ಯರೇ ಹೇಳಿದಂತೆ, ಬೇರೆ ಸಕ್ಕರೆ ಕಾರ್ಖಾನೆಗಳು, ಇವತ್ತು ಮಹಾತ್ಮಗಾಂಧಿ ಸಕ್ಕರೆ ಕಾರ್ಖಾನೆ ಇರಬಹುದು, ನಾರಂಜಾ ಸಕ್ಕರೆ ಕಾರ್ಖಾನೆ ಇರಬಹುದು, ಈ ರೀತಿಯ ಕೆಲವು ಸಕ್ಕರೆ ಕಾರ್ಖಾನೆಗಳಲ್ಲಿ ಸದಸ್ಯರಿಗೆ ಉಚಿತವಾಗಿ ಸಕ್ಕರೆಯನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ. ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಒಂದು ಕೆ.ಜಿ.ಗೆ 5 ರೂ.ನಂತೆ ಸಕ್ಕರೆ ಕೊಡುತ್ತಿದ್ದಾರೆ ಮತ್ತು ಕೆಲವು ಭಾಗಗಳಲ್ಲಿ ಕೆ.ಜಿ.ಗೆ 14 ರೂ. ಇದೆ. ಏಕೆಂದರೆ, ಸಹಕಾರಿ ರಂಗದಲ್ಲಿ 25 ಸಕ್ಕರೆ ಕಾರ್ಖಾನೆಗಳಿದ್ದರೆ, ಖಾಸಗಿ ರಂಗದಲ್ಲಿ 37 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಕಾರ್ಖಾನೆಗಳಲ್ಲಿ ತನ್ನದೇ ಆಡಳಿತ ಮಂಡಳಿ ಇರುವುದರಿಂದ, ಅಲ್ಲಿ ಈ ವಿಷಯವನ್ನು ಚರ್ಚಿಸಿದರೆ ನಮ್ಮ ಹಿರಿಯ ಸದಸ್ಯರಾದ ಹುಕ್ಕೇರಿ ಸಾಹೇಬರ ಮಾಲೀಕತ್ವದಲ್ಲಿ ಸಕ್ಕರೆ ಕಾರ್ಖಾನೆ ಇದ್ದು, ಅವರು ತಮ್ಮ ಸಕ್ಕರೆ ಕಾರ್ಖಾನೆಯಿಂದಲೇ ಈ ಕೆಲಸವನ್ನು ಪ್ರಾರಂಭಿಸಿದಲ್ಲಿ, ರಿಯಾಯಿತಿ ದರದಲ್ಲಿ ರೈತರಿಗೆ 50 ಕೆ.ಜಿ. ಸಕ್ಕರೆ ಕೊಡುವ ಕೆಲಸ ಮಾಡಿದರೆ ಸರ್ಕಾರವು ವಿಶೇಷವಾಗಿ ರೈತರ ಪರವಾಗಿ ಅವರಿಗೆ

ಅಭಿನಂದನೆಗಳನ್ನು ತಿಳಿಸುತ್ತದಲ್ಲದೆ, ನಂತರ ಸರ್ಕಾರವು SISMA (The South Indian Sugar Mills Association) ಅವರನ್ನೂ ಕರೆದು ಈ ಕುರಿತು ಚರ್ಚಿಸಿ, ಅವರಿಗೆ ಸರ್ಕಾರದ ವತಿಯಿಂದ ಸನ್ಮಾನ ಮಾಡುವ ಕೆಲಸ ಮಾಡುತ್ತೇವೆ. ಆದುದರಿಂದ, ಮೊದಲು ಪ್ರಕಾಶ್ ಬಾಬಣ್ಣ ಹುಕ್ಕೇರಿಯವರು ಈ ಕೆಲಸ ಪ್ರಾರಂಭಿಸಬೇಕು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಬಹಳ ಸಂತೋಷ. ಮೊದಲು ನಮ್ಮ ಸಕ್ಕರೆ ಕಾರ್ಖಾನೆ ವತಿಯಿಂದಲೇ ಈ ಕೆಲಸವಾಗಬೇಕೆಂದು ಮಾನ್ಯ ಸಚಿವರು ಹೇಳುವ ಮೂಲಕ ಅವರ ಬಾಯಿಂದ ಮುತ್ತಿನಂತಹ ಮಾತು ಬಂದಿದೆ. ಆದುದರಿಂದ; ದಯವಿಟ್ಟು ರಾಜ್ಯದಲ್ಲಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೂ ಅವರ ಹೆಸರನ್ನೇ ಇಟ್ಟುಬಿಡಿ.

ಶ್ರೀ ಪ್ರಕಾಶ್ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಬಹಳ ಸಂತೋಷ. ಸಕ್ಕರೆ ಸಚಿವರ ಬಾಯಿಯಿಂದ ಪ್ರಕಾಶ್ ಹುಕ್ಕೇರಿಯವ ಹೆಸರಿನಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆಯೆಂಬ ಮುತ್ತಿನಂಥ ಮಾತು ಬಂತು. ರಾಜ್ಯದಲ್ಲಿ ಎಲ್ಲೇ ಆದರು ನನ್ನ ಹೆಸರಿನಲ್ಲಿ ಸಕ್ಕರೆ ಕಾರ್ಖಾನೆ ಇದ್ದರೆ ಅವರು ಹೇಳಿಬಿಡಲಿ. ಸಕ್ಕರೆ ಕಾರ್ಖಾನೆಗೆ ಸದಸ್ಯನಾಗಿದ್ದೇನೆ, ನಿರ್ದೇಶಕನಾಗಿದ್ದೇನೆಯೇ ಹೊರತು ನನ್ನದೇ ಆದ ಸಕ್ಕರೆ ಕಾರ್ಖಾನೆ ಎಲ್ಲೂ ಇಲ್ಲ.

ಊ) 2500 ಜನ ಪರವಾನಿಗೆ ಭೂಮಾಪಕರನ್ನ ಖಾಯಂಗೊಳಿಸುವುದು ಅಥವಾ ಅವರಿಗೆ ಕನಿಷ್ಟ ವೇತನ ನಿಗದಿಗೊಳಿಸುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ : 2500 ಜನ ಪರವಾನಗಿ ಭೂಮಾಪಕರು 1998ರಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರಿ ಕೆಲಸಕ್ಕೆ ವಯೋಮಿತಿ ಮೀರುತ್ತಿರುವುದರಿಂದ ಅವರನ್ನು ಖಾಯಂಗೊಳಿಸುವುದು ಅಥವಾ ಕನಿಷ್ಟ ವೇತನ ನಿಗದಿಗೊಳಿಸುವ ಬಗ್ಗೆ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ.ಕೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ,

2002 ನೇ ಇಸವಿಯಿಂದ ಭೂಮಾಪನ ಇಲಾಖೆಯಲ್ಲಿ ಪರವಾನಗಿ ಭೂಮಾಪಕರ ಸೇವೆಯನ್ನು ಪಡೆಯಲಾಗುತ್ತಿದೆ. ಇಲ್ಲಿಯವರೆಗೆ

ಪಡೆಯಲಾಗಿರುವ ಹಾಗೂ ಕೆಲಸ ನಿರ್ವಹಿಸುತ್ತಿರುವ ಪರವಾನಗಿ ಭೂಮಾಪಕರ ವಿವರ ಈ ಕೆಳಕಂಡಂತಿರುತ್ತದೆ:-

2002 ನೇ ಸಾಲಿನಲ್ಲಿ	2107
2004 ನೇ ಸಾಲಿನಲ್ಲಿ	195
2009 ನೇ ಸಾಲಿನಲ್ಲಿ	1392
ಒಟ್ಟು	3694

ಈ ಮಧ್ಯೆ ಅನಧಿಕೃತ ಗೈರು ಹಾಜರಾಗಿರುವ ಮತ್ತು ಅನಧಿಕೃತ ನಕ್ಷೆ ತಯಾರಿಸಿರುವಂತಹ 611 ಪರವಾನಗಿ ಭೂಮಾಪಕರ ಪರವಾನಗಿಯನ್ನು ರದ್ದುಗೊಳಿಸಲಾಗಿದೆ. 660 ಪರವಾನಗಿ ಭೂಮಾಪಕರು ವೈಯಕ್ತಿಕ ಕಾರಣಗಳಿಂದಾಗಿ ಕೆಲಸ ನಿರ್ವಹಿಸುತ್ತಿಲ್ಲ. ಹಾಲಿ ಕೆಲಸ ನಿರ್ವಹಿಸುತ್ತಿರುವ ಒಟ್ಟು ಪರವಾನಗಿ ಭೂಮಾಪಕರ ಸಂಖ್ಯೆ 2423.

ಪರವಾನಗಿ ಭೂಮಾಪಕರ ಯೋಜನೆ ಜಾರಿಯಾದಾಗಿನಿಂದ ಸಾರ್ವಜನಿಕರಿಂದ ವಸೂಲು ಮಾಡಲಾಗುತ್ತಿದ್ದ ಒಟ್ಟು ಮೊತ್ತ ರೂ. 403/-, ಈ ಪೈಕಿ ರೂ.300/-ಗಳನ್ನು ಪರವಾನಗಿ ಭೂಮಾಪಕರಿಗೆ ಪ್ರಕರಣ ಒಂದಕ್ಕೆ ಪಾವತಿಸಲಾಗುತ್ತಿತ್ತು. ಉಳಿದ ರೂ.103/- ಗಳನ್ನು ಪರಿಶೀಲನೆ ಶುಲ್ಕ, ದೃಢೀಕೃತ ನಕಲು ಶುಲ್ಕ ಎಂದು ಸರ್ಕಾರಕ್ಕೆ ಜಮಾ ಮಾಡಲಾಗಿದೆ.

ಸರ್ಕಾರದ ಆದೇಶ ದಿನಾಂಕ: 12.8.2008 ರಿಂದ ಈ ಶುಲ್ಕವನ್ನು ಪರಿಷ್ಕರಿಸಿ ರೂ.600/-ಕ್ಕೆ ಹೆಚ್ಚಿಸಲಾಗಿದ್ದು, ಈ ಪೈಕಿ ರೂ.300/- ಗಳನ್ನು ಪರವಾನಗಿ ಭೂಮಾಪಕರಿಗೆ ಪ್ರತಿ ಒಂದು ಪ್ರಕರಣಕ್ಕೆ ಪಾವತಿಸುತ್ತಿದ್ದು, ಉಳಿದ ರೂ. 300/- ಗಳನ್ನು ಬಾಕಿ ಇರುವ ಹಳೇ ಮ್ಯುಟೇಶನ್ ಪೋಡಿ ಕಡತಗಳ ವಿಲೇವಾರಿಗಾಗಿ ಉಪಯೋಗಿಸುವಂತೆ ಕ್ರಮ ಜರುಗಿಸಲಾಗಿದೆ.

ಪರವಾನಗಿ ಭೂಮಾಪಕರಿಗೆ ಸರಾಸರಿ ಮಾಹೆಯಾನ 10 ಪ್ರಕರಣಗಳು ಲಭ್ಯವಾಗುತ್ತಿದ್ದು, ಸರ್ಕಾರದ ಆದೇಶ 12.8.2008 ರಂತೆ ತತ್ಕಾಲ್ ಹಾಗೂ ಹಳೇ ಪೋಡಿ ಪ್ರಕರಣಗಳನ್ನು ಸಹ ಪರವಾನಗಿ ಭೂಮಾಪಕರಿಗೆ ನೀಡಲಾಗುತ್ತಿದೆ. ತಕರಾರು ರಹಿತ ಹಿಡುವಳಿ ಜಮೀನು ಗಳಿಗೆ ಸಂಬಂಧಿಸಿದಂತೆ ಹದ್ದುಬಸ್ತು ಪ್ರಕರಣಗಳನ್ನು ಸಹ ಪರವಾನಗಿ ಭೂಮಾಪಕರಿಗೆ ನೀಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ. ಉದ್ದೇಶಿತ ಎಲ್ಲಾ ಪ್ರಕರಣಗಳನ್ನು ಪರವಾನಗಿ ಭೂಮಾಪಕರಿಗೆ

ನೀಡುವುದರಿಂದ ಇವರುಗಳಿಗೆ ಗರಿಷ್ಠ ಪ್ರಮಾಣದ ಕೆಲಸ ಲಭ್ಯವಾದಂತಾಗುತ್ತದೆ.

ಪರವಾನಗಿ ಭೂಮಾಪಕರುಗಳ ಸೇವೆಯನ್ನು ನೇರವಾಗಿ ಸಕ್ರಮ ಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಪರವಾನಗಿ ನೀಡುವ ಸಮಯದಲ್ಲಿ ಈ ವಿಷಯವನ್ನು ಅವರಿಗೆ ಮನದಟ್ಟು ಮಾಡಲಾಗಿದೆ. ದಿನಾಂಕ: 10.12.2009 ರಿಂದ ಜಾರಿಗೆ ಬಂದಿರುವ ಇಲಾಖಾ ವೃಂದ ಮತ್ತು ನೇಮಕಾತಿ ,ನಿಯಮಾವಳಿಗಳಂತೆ ಪರವಾನಗಿ ಭೂಮಾಪಕರಿಗೆ 2 ವರ್ಷ ಸೇವೆ ಸಲ್ಲಿಸಿರುವ ಹಾಗೂ ಜೆ.ಓ.ಸಿ. ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಭೂಮಾಪಕರ ಹುದ್ದೆಗೆ ಅರ್ಜಿ ಹಾಕಲು ಅವಕಾಶ ಕಲ್ಪಿಸಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮಂತ್ರಿಗಳು ತೆರೆದ ಮನಸ್ಸಿನಿಂದ ಈ ವಿಚಾರವನ್ನು ನಿಮ್ಮ ಹೃದಯಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇದೇ ವಿಚಾರವನ್ನು ಒಂದೂವರೆ ವರ್ಷಗಳ ಹಿಂದೆ ಬೆಳಗಾಂ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ತಾವು ಆಶ್ವಾಸನೆ ಕೊಟ್ಟಿದ್ದೀರಿ. ಇವರು 1998 ರಿಂದ ಅಂದರೆ ಕಳೆದ ಹತ್ತು ವರ್ಷಕ್ಕಿಂತಾ ಹೆಚ್ಚು ಸಮಯದಿದ ಈ ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ ಕೊಡುತ್ತಿರುವುದು 300 ರೂಪಾಯಿ. ತಾವು ಆಗ ಏನು ಆಶ್ವಾಸನೆ ಕೊಟ್ಟಿದ್ದಿರೆಂದರೆ, ಕನಿಷ್ಠ 6–7 ಸಾವಿರವಾದರು ಬರತಕ್ಕ ರೀತಿಯಲ್ಲಿ ನಾವು ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಿರಿ. ಈಗಲೂ ಅದೇ ಮಾತನ್ನು ಹೇಳುತ್ತಿದ್ದೀರಿ. ಹತ್ತು ಪ್ರಕರಣಗಳು ಲಭ್ಯವಾಗುತ್ತಿದೆ ಎಂಬ ಮಾತನ್ನು ಹೇಳಿದ್ದೀರಿ. ಹತ್ತು ಎಂದರೆ ಮೂರು ಸಾವಿರ ರೂಪಾಯಿ ಬರುತ್ತದೆ. ಹತ್ತು ವರ್ಷದಿಂದ ಅದೇ ಉದ್ಯೋಗ ಮಾಡಿಕೊಂಡಿರುವ ಇವರು ಇದರಿಂದ ಹೇಗೆ ಜೀವನ ಮಾಡಲು ಸಾಧ್ಯ? ಇಲ್ಲಾ ಅವರಿಗೆ ಕೈತುಂಬ ಕೆಲಸವನ್ನಾದರೂ ಕೊಡಬೇಕು ಅಥವಾ ಇನ್ನ್ಯಾವುದೇ ರೀತಿಯಲ್ಲಿ ಅವರಿಗೆ ಹೊಟ್ಟೆ ತುಂಬುವ ಕೆಲಸವನ್ನು ಮಾಡಬೇಕು. ಆ ರೀತಿ ಏನೂ ಮಾಡದೆಯೇ ಈ ರೀತಿಯಾಗಿ ನಮಗೆ ಏನೂ ಅವಕಾಶ ಇಲ್ಲ, ನಾವು ಮಾಡುವುದಕ್ಕೆ ಆಗುವುದಿಲ್ಲ ಎಂದರೆ ತಪ್ಪಾಗುತ್ತದೆ. ನಾನು ಒಂದು ಸಲಹೆ ಕೊಡತಕ್ಕದ್ದು, 600 ರೂಪಾಯಿ collect ಮಾಡುತ್ತೀರಿ. ಅವರಿಗೆ 300 ರೂಪಾಯಿ ಕೊಡುವುದರ ಬದಲು 600 ರೂಪಾಯಿಯನ್ನು ಕೊಟ್ಟಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಅವರು ತಿಂಗಳಗಟ್ಟಲೆ, ವರ್ಷಗಟ್ಟಲೆ ಮನೆ ಮಠವನ್ನೆಲ್ಲಾ ಬಿಟ್ಟು ಅಲ್ಲಿ ಬಂದು ಧರಣಿ ಮಾಡಲು ಕುಳಿತಿದ್ದಾರೆ. ಅವರ

ಹೋರಾಟದ ಬಗ್ಗೆ ಸ್ವಲ್ಪವಾದರೂ ತಾವು ಮಾನವೀಯತೆಯ ದೃಷ್ಟಿಯಿಂದ ಯೋಚನೆ ಮಾಡಬೇಕಾಗುತ್ತದೆ. ಅವರಿಗೆ ಉದ್ಯೋಗಕ್ಕೆ ಹೋಗುವುದಕ್ಕೆ ಅವಕಾಶವೇ ಇಲ್ಲ. ಏಕೆಂದರೆ ಅವರೆಲ್ಲರಿಗೂ age bar ಆಗಿ ಹೋಗಿದೆ. ಎಲ್ಲೂ ಅವರಿಗೆ ಕೆಲಸ ಸಿಗದ ಸ್ಥಿತಿಯಾಗಿದೆ. ಈಗ ಬೇರೆ ಬೇರೆ ಇಲಾಖೆಯಲ್ಲಿ ಅವಕಾಶ ಮಾಡಿದ್ದಾರೆ. ಯಾರು ಇವತ್ತು ಲೈಸೆನ್ಸ್ ಸರ್ವೆಯರ್ಸ್ ಇದ್ದಾರೆ ಅವರಿಗೆ 5 ವರ್ಷ ವಯೋಮಿತಿಯನ್ನು ಹೆಚ್ಚಿಸಲು ಅವಕಾಶ ಇದೆ. ಶಿಕ್ಷಣ ಇಲಾಖೆಯಲ್ಲಿ ಮತ್ತು ಬೇರೆ ಇಲಾಖೆಯಲ್ಲಿ ಅದನ್ನು ಮಾಡಿದ್ದಾರೆ. ಬೇಕಾದರೆ ನಿಮಗೆ ಆ ಆದೇಶವನ್ನು ಕೊಡುತ್ತೇನೆ. ಆ ರೀತಿ 5 ವರ್ಷ ವಯೋಮಿತಿಯನ್ನು ಹೆಚ್ಚಿಸುವ ಅವಕಾಶ ಮಾಡಿದರೆ ಸಹಾಯ ವಾಗುತ್ತದೆ. ಇವರಿಗೆ ಸರ್ಕಾರದ ಮೂಲಧನವೆನ್ನುವ ರೀತಿಯಲ್ಲಿ ಏನಾದರು fix ಮಾಡಿ ಅವರನ್ನು ಉಪಯೋಗಿಸಿಕೊಳ್ಳುವ ಕೆಲಸವನ್ನು ಮಾಡಿದರೂ ಸೂಕ್ತವಾಗುತ್ತದೆ. ಏಕೆಂದರೆ ಮೊನ್ನೆ ನೀವು ಮಾಡಿದಂಥ ವೃಂದ ಮತ್ತು ನಾಮಕಾತಿಯ ಬದಲಾವಣೆಯಲ್ಲಿ ಭೂಮಾಪಕರನ್ನು ನಿರ್ಲಕ್ಷ್ಯ ಮಾಡಲಾಗಿದೆ. ಆ ರೀತಿ ನಿರ್ಲಕ್ಷ್ಯ ಆಗಬಾರದು. ಏಕೆಂದರೆ ನೀವು ಪಿ.ಯು.ಸಿ.ಯವರಿಗೆ prefer ಮಾಡುತ್ತೀರಿ. ಜೆ.ಒ.ಸಿ. ಯವರಿಗೆ prefer ಮಾಡುವುದಿಲ್ಲ. ಏಕೆಂದರೆ ಅವರೆಲ್ಲಾ ಜೆ.ಒ.ಸಿ. training ಆಗಿರತಕ್ಕ ಲೈಸೆನ್ಸ್ ಹೊಂದಿ ಕೆಲಸ ಮಾಡುತ್ತಿರತಕ್ಕವರು. ಇವರನ್ನು ಖಾಯಂಗೊಳಿಸಿ ಯೆಂಬುದು ನಮ್ಮ ಒತ್ತಾಯ. ಅದನ್ನು ಮಾಡುವುದು ಕಷ್ಟವಾದರೆ ಕೊನೆಯ ಪಕ್ಷ ಅವರು ಬದುಕಲು ದಾರಿ ಮಾಡಿ ಕೊಡಬೇಕು. ಏಕೆಂದರೆ, ರೈತರಿಗೆ ಮೂಲ ಹಕ್ಕನ್ನು ಕೊಡತಕ್ಕ, ಅದು ತಾತ್ಕಾಲಿಕ ಪೋಡಿ ಕೊಡುವುದು ಇರಬಹುದು, ಬ್ಯಾಕ್‌ಲಾಗ್ ಪೋಡಿ ಇರಬಹುದು, ದರಕಾಸ್ತು ಮಾಡಿಕೊಡುವುದು ಇರಬಹುದು, ಇವೆಲ್ಲವೂ ರೈತರಿಗೆ ಬೇಕಾಗಿರತಕ್ಕದ್ದು. ಈ ಇಶ್ಯೂ ಪರಿಹಾರವಾಗದೆಯೇ ಆರು ಆರು ತಿಂಗಳು ಆದರೂ ಈ ಸಮಸ್ಯೆಗಳು ಬಗೆಹರಿಯುತ್ತಿಲ್ಲ.

ರೈತರಿಗೆ ಯಾವುದೂ ದಕ್ಕುತ್ತಿಲ್ಲ. ಈ ಸಮಸ್ಯೆ ಇದೆ. ಇದಕ್ಕೆ ನೀವು ಒಂದು ರೀತಿಯಲ್ಲಿ ಸಮಗ್ರವಾಗಿ ಯೋಚನೆ ಮಾಡಿ, ಮುಖ್ಯಮಂತ್ರಿ ಗಳೊಂದಿಗೆ ಚರ್ಚೆ ಮಾಡಿ ಏನಾದರು ಒಂದು ಪರಿಹಾರ ಕಂಡುಹಿಡಿಯ ಬೇಕಾಗುತ್ತದೆ. ನೀವು ನಮಗೆಲ್ಲರಿಗೂ ನಾವು ಭೂಪೋಡಿ ಪ್ರಕರಣದಲ್ಲಿ ಏನೇನು ಮಾಡುತ್ತಿದ್ದೇವೆ, ಸರ್ಕಾರದ ಕಾರ್ಯಕ್ರಮಗಳೇನು ಎಂಬುದನ್ನು

ವಿವರಿಸಿ ದೊಡ್ಡದಾಗಿ ಕಾಗದವನ್ನು ಬರೆದಿದ್ದೀರಿ. ಇಗ ಕೊಟ್ಟಿರುವ ಉತ್ತರವೇ ಅಂತಿಮ ಎನ್ನುವುದಕ್ಕಿಂತಾ ಹೆಚ್ಚಾಗಿ ಮಾನವೀಯತೆ ದೃಷ್ಟಿಯಿಂದ ಯೋಚನೆ ಮಾಡಿ ಸಮಗ್ರವಾದ ಉತ್ತರವನ್ನು ಕೊಡಿಸುವ ಕೆಲಸ ಮಾಡಿ. ಇವತ್ತಲ್ಲದಿದ್ದರೆ ನಾಳೆ ದಿವಸ ಉತ್ತರ ಕೊಡಿ. ಆದರೆ, ಸಮಸ್ಯೆ ಪರಿಹಾರವಾಗಬೇಕು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಕರಣಾಕರರೆಡ್ಡಿಯವರೆ, ಇದರಲ್ಲಿ ನೀವು ಸ್ವಲ್ಪ ಧಾರಾಳತನವನ್ನು ತೋರಿಸಬೇಕು. ಇವರೆಲ್ಲಾ ಪರವಾನಗಿ ಇರತಕ್ಕ ಭೂಮಾಪಕರು, 2423 ಜನ ಇದ್ದಾರೆಂದು ತಾವೇ ಉತ್ತರದಲ್ಲಿ ಹೇಳಿದ್ದೀರಿ. ಈ 2400 ಜನರಿಗೆ ನಿಮ್ಮ ವೃಂದ ಮತ್ತು ನೇಮಕಾತಿಯನ್ನು ಅವಕಾಶ ಇಲ್ಲದಂತೆ ಮಾಡಿಬಿಟ್ಟಿದ್ದೀರಿ. ಸುಮಾರು 7–8 ವರ್ಷಗಳಿಂದ ಇವರನ್ನು ದುಡಿಸಿ ಕೊಳ್ಳುತ್ತಿದ್ದೀರಿ. ಅವರಿಗೆ ಸರಾಸರಿ ಹತ್ತು ಪ್ರಕರಣ ಸಿಗುತ್ತದೋ ಗೊತ್ತಿಲ್ಲ. 4–5 ಪ್ರಕರಣಗಳು ಸಿಗಬಹುದು. ನಾವೆಲ್ಲಾ ಅವರು ಧರಣಿ ಮಾಡುವ ಸ್ಥಳಕ್ಕೆ ಹೋಗಿದ್ದೆವು. ತಾವೂ ಹೋಗಿ ಏನಾದರು ಸಹಾಯ ಮಾಡೋಣವೆಂದು ಭರವಸೆ ಕೊಟ್ಟು ಬಂದಿದೀರಿ. ಅವರೂ ಸಹ ಮಾನ್ಯ ಮಂತ್ರಿಗಳು ಬಂದಿದ್ದರು, ಭರವಸೆ ಕೊಟ್ಟಿದ್ದಾರೆಂದು ಹೇಳಿದರು. ಯಾವುದೇ ಕಾರಣಕ್ಕೆ ಇವರಿಗೆ ಯಾವ ರೀತಿಯಾಗಿ ಸಹಾಯ ಮಾಡಬೇಕು ಎಂಬುದನ್ನು ನಿಮಗೆ ನಿಯಮಾವಳಿಯಲ್ಲಿ ಬದಲಾವಣೆ ಮಾಡಿಕೊಳಲು ಅವಕಾಶ ಇದೆ. ಅದನ್ನು ಬದಲಾವಣೆ ಮಾಡಿಕೊಳ್ಳಿ, ಒಂದೇ ಸಲ ಅವರನ್ನೆಲ್ಲಾ ತೆಗೆದುಕೊಳ್ಳಲು ಆಗದಿದ್ದರೆ ಆ age relax ಮಾಡಿ ಯಾವ ರೀತಿ ತೆಗೆದುಕೊಳ್ಳಬೇಕೆಂಬುದನ್ನು ಮಾಡಲೇ ಬೇಕಾಗುತ್ತದೆ. ಅವರು ಉಪಯೋಗಕ್ಕೆ ಬರುತ್ತಾರೆ. ನೀವು ಹೊಸದಾಗಿ ತೆಗೆದುಕೊಂಡು ಅವರಿಗೆಲ್ಲ ತರಬೇತಿಕೊಟ್ಟು ಎಲ್ಲವನ್ನು ಮಾಡುವುದರ ಬದಲು these people are already trained. And they know the job. ಆ ಕಾರಣದಿಂದ ಇವರಿಗೆ ಯಾವುದೇ ಕಾರಣದಿಂದ ತೊಂದರೆ ಆಗದ ರೀತಿಯಲ್ಲಿ ಈ 2423 ಜನರಿಗೆ ಸಹಾಯ ಮಾಡುವ ತೀರ್ಮಾನ ಮಾಡಲೇ ಬೇಕು. ಇಲ್ಲಿ ತಮ್ಮ ಉತ್ತರ ಏನೇ ಇರಲಿ. ಅವರಿಗೆ ಸಹಾಯ ಆಗಬೇಕು. ಪಾಪ ಅವರೆಲ್ಲರೂ ತಿಂಗಳಗಟ್ಟಲೆ ಬನ್ನಪ್ಪ ಪಾರ್ಕ್‌ನಲ್ಲಿ ಕುಳಿತಿದ್ದರು. ನಾನು ಒಂದು ಸಲ ಅಲ್ಲಿಗೆ ಹೋಗಿ ನಾವು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ನೀವು ಚಳುವಳಿ ಬಿಡಿಯೆಂದು ಕೇಳಿಕೊಂಡಿದ್ದೆವು.

ನೀವೂ ಹೇಳಿದ ಮೇಲೆ ಅವರು ಚಳುವಳಿಯನ್ನು ಬಿಟ್ಟಿದ್ದಾರೆ. ಸರ್ವೆ settlement ಇಲಾಖೆಯಲ್ಲಿ ನಿಮ್ಮ ಅಧಿಕಾರಿಗಳ ಮಾತನ್ನು ಕೇಳುವುದಕ್ಕೆ ಹೋಗಬೇಡಿ. ಇದೊಂದು ಮಾನವೀಯತೆಯ ದೃಷ್ಟಿಯಿಂದ ಅವರಿಗೆ ಸಹಾಯ ಮಾಡುವ ಕೆಲಸವನ್ನು ಮಾಡಬೇಕು. ಇದನ್ನು positive ಆಗಿ ತೆಗೆದುಕೊಳ್ಳಬೇಕು.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಈ ಸಂಘಟನೆಯನ್ನು ಹುಟ್ಟು ಹಾಕಿದಾಗ ನಾನೂ ಕೂಡ ಇದ್ದೆ...

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆಯಾಗಿದೆ. Please ಕುಳಿತುಕೊಳ್ಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವ ಪೂರ್ಣವಾದ ಪ್ರಶ್ನೆಯಾಗಿದೆ. ಅಷ್ಟೊಂದು ಜನ ಇವತ್ತು ನಿರ್ಗತಿಕರಾಗುತ್ತಿದ್ದಾರೆ. ಸರ್ಕಾರ ಅವರ ನೆರವಿಗೆ ಬರದಿದ್ದರೆ ಹೇಗೆ?

ಶ್ರೀ ಸಿ.ಎಸ್. ಪುಟ್ಟೇಗೌಡ : ಇದು ಬಹಳ ಮಹತ್ವವಾದುದು. ದಯವಿಟ್ಟು ಎರಡೇ ನಿಮಿಷ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಆಯಿತು, ಮಾನ್ಯ ಪುಟ್ಟೇಗೌಡರು ಮಾತನಾಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಿದ್ರಾಮಣ್ಣನವರು ಬಹಳ ಗಂಭೀರವಾದ ವಿಚಾರವನ್ನು ಹೇಳಿದ್ದಾರೆ. ದಯಮಾಡಿ ಸರ್ಕಾರದ ಅವರ ನೆರವಿಗೆ ಬರಬೇಕು. ಅವರ ಜೀವನಕ್ಕೆ ಸಂಬಳ ಜಾಸ್ತಿ ಮಾಡುವುದೋ ಅಥವಾ ಅವರನ್ನು confirm ಮಾಡುವುದೋ ಮಾಡಿ. ಅದರ ಜೊತೆಗೆ ನಾನು ಹೇಳುವುದೇನೆಂದರೆ, ಇಡೀ ರಾಜ್ಯದ ರೈತರಿಗೆ ಸಮಸ್ಯೆಯಾಗಿದೆ. ಸಕಾಲಕ್ಕೆ survey ಮಾಡಿ sketch ಕೊಡದೆ, ರೈತರು ತಮ್ಮ ಜಮೀನು ಮಾರುವುದು ಅಥವಾ ಕೊಳ್ಳುವುದು, ಇದಕ್ಕೆಲ್ಲಾ ಬಹಳ ಪರದಾಟವಾಗಿದೆ. ಈ ಸರ್ವೆಯರ್‌ಗಳನ್ನು ನೀವು ಗಟ್ಟಿ ಮಾಡದಿದ್ದರೆ, ಖಂಡಿತವಾಗಿಯೂ ಇಡೀ ರಾಜ್ಯದ ರೈತರಿಗೆ ತೊಂದರೆ ಯಾಗುತ್ತದೆ. ಎಲ್ಲಾ ತಾಲ್ಲೂಕು ತಹಶೀಲ್ದಾರ್ ಆಫೀಸ್‌ಗಳಲ್ಲಿ ರೈತರು ಬಹಳ ಹೊತ್ತು ಇದಕ್ಕಾಗಿ ನಿಂತು ಪರದಾಡುತ್ತಿದ್ದಾರೆ. ಅವನ ಪ್ರಾಣ ಹೋಗುತ್ತಿರುತ್ತದೆ, ಅವನು ಜಮೀನು ಮಾರಬೇಕು, ಸರ್ವೆಯರ್ ಸ್ಕೆಚ್ ಕೊಡದಿದ್ದರೆ, ಅವನು ರಿಜಿಸ್ಟರ್ ಮಾಡಿಕೊಡುವುದಕ್ಕಾಗುವುದಿಲ್ಲ. ಮದುವೆಯೋ, ಮುಂಜಿಯೋ, ಅವನ ಮನೆಯಲ್ಲಿ ಕಾರ್ಯ ಇರುತ್ತದೆ. ಆ

ಕಾರಣವನ್ನೂ ಕೂಡ ನೋಡಿ. ಈ ಸರ್ವೆಯರ್‌ಗಳ ಸಂಬಳ ಜಾಸ್ತಿ ಮಾಡಿ ಅಥವಾ ಅವರ ಕೆಲಸವನ್ನು ಗಟ್ಟಿ ಮಾಡಿ. ಈ ಮೂಲಕ ರೈತರ ಜಮೀನಿನ ಸರ್ವೆ ಕಾರ್ಯಕ್ಕೆ ನೀವೂ ಕೂಡ ನೆರವಾಗಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮನವಿ ಮಾಡುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನನ್ನದೊಂದು ಬಿನ್ನಹ ಇದೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರು ನಿಂತಿದ್ದಾರೆ. ಮೊದಲು ಅವರು ಮಾತನಾಡಲಿ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, 3–4 ಸಾವಿರ ಸರ್ವೇಯರ್ಸ್ ಪೋಸ್ಟ್ಸ್ ಖಾಲಿ ಇವೆ. ಕೆಲವು ಕಡೆ ಪಕ್ಕಾ ಪೋಡಿ ಮಾಡಬೇಕಾಗಿದೆ. ಒಂದೊಂದು ಕಡೆ 2–3 ಸಾವಿರ applications pending ಇವೆ. ಒಂದೆರಡು ತಿಂಗಳಲ್ಲ, ಆರು ತಿಂಗಳಾದರೂ ಅವು ವಿಲೇಯಾಗುತ್ತಿಲ್ಲ. ಉದಾಹರಣೆಗೆ ಹೇಳುವುದಾರೆ, ನನ್ನ ವಿಧಾನ ಸಭಾ ಕ್ಷೇತ್ರದಲ್ಲಿ ಪಕ್ಕಾ ಪೋಡಿ ಮಾಡಬೇಕಾದರೆ ಆರು ತಿಂಗಳಾಗಿದೆ. ಈ ಬಗ್ಗೆ ನೀವು ವಿಚಾರ ಮಾಡಿ. ಬೇಕಾದರೆ ಜಿಲ್ಲಾವಾರು–ತಾಲ್ಲೂಕುವಾರು ಎಷ್ಟೆಷ್ಟು pending ಇದೆ ಎಂಬ ಬಗ್ಗೆ ಮಾಹಿತಿ ತರಿಸಿ. ಖಾಸಗಿಯವರಿಗೆ ಕೊಡುವ ಬದಲು ಇವರನ್ನೇ ಖಾಯಂ ಮಾಡಿ. ನೀವು ಬೇಕಾದರೆ ಅವರಿಗೆ ಸ್ಟೈಫಂಡ ಆಗಿ 4–5 ಸಾವಿರ ರೂ.ಗಳನ್ನು ಕೊಡಿ. 5 ವರ್ಷಗಳ ಕಾಲ ಯಾರು ಚೆನ್ನಾಗಿ ಕೆಲಸ ಮಾಡುತ್ತಾರೋ, ಅವರನ್ನೇ ಬೇಕಾದರೆ ನೀವು ಖಾಯಂ ಮಾಡಿ. ಯಾರೋ ಮಧ್ಯವರ್ತಿಗಳಿಗೆಲ್ಲಾ ಇದರಲ್ಲಿ ಅವಕಾಶ ಮಾಡಿಕೊಡುವುದಕ್ಕೆ ಹೋಗಬೇಡಿ. ಮಾನ್ಯ ಕಂದಾಯ ಸಚಿವರು ಈ ಸರ್ವೆಯರ್ಸ್ ವಿಚಾರದಲ್ಲಿ ಸಹಾಯ ಮಾಡುತ್ತೇನೆ ಎಂದು ಹೇಳಬೇಕು. ಈ ಬಗ್ಗೆ ಮಾನ್ಯ ಸಚಿವರು ಹಿಂದೇಟು ಹಾಕಬಾರದು.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಅಧ್ಯಕ್ಷರೆ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಹಿಂದೆ ಮಾನ್ಯ ಸೋಮಶೇಖರ್‌ರವರು ಕಂಧಾಯ ಸಚಿವರಾಗಿದ್ದಾಗ, ನಾನು ಶಾಸಕನಾಗಿರಲಿಲ್ಲ, ಕಾರ್ಪೊರೇಟರ್ ಆಗಿದ್ದೆ. ಅವತ್ತು ಅವರು ಸರ್ವೆ ಮಾಡಲಿಕ್ಕೆ ಇಲಾಖೆಗೆ ನಿವೃತ್ತರನ್ನು ತೆಗೆದು ಕೊಳ್ಳುತ್ತೇನೆ ಎಂದು ಹೇಳಿದಾಗ, ಈ ಸಂಘಟನೆಯನ್ನು ಹುಟ್ಟು

0.17F-90

ಹಾಕಲಾಯಿತು. ರಾಜ್ಯಾದ್ಯಂತ ಬಹಳಷ್ಟು ಸರ್ವೆ ಬಗ್ಗೆ ಕ್ವಾಲಿಟಿ JOC ಇದೆ. ಆದರೆ ಅಲ್ಲಿಂದ ಹೊರಬಂದಂತಹ ವಿದ್ಯಾರ್ಥಿಗಳಿಗೆ ಕೆಲಸ ಇರಲಿಲ್ಲ. ಇಲ್ಲಿ ಕೆಲಸ ಮಾಡಲು ನಿವೃತ್ತರು ಬೇಕಾಗಿಲ್ಲ, ಇಲ್ಲಿಗೆ youngsters ಬೇಕು ಎಂದು ಸಂಘಟನೆ ಮಾಡಿ ಹೋರಾಟ ಮಾಡಿದಾಗ, ಈ ರೀತಿ ಭೂ ಮಾಪಕರನ್ನು ನೇಮಿಸಿಕೊಳ್ಳಲಾಯಿತು. ಇವತ್ತು ಎಷ್ಟೇ technology ಬಂದಿದ್ದರೂ ಸಹ, C & R ಪ್ರಕಾರ ಇವತ್ತು ಅನುಭವ ಇಲ್ಲದಿರುವವರನ್ನು ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ ಎನ್ನುವುದಾದರೆ, ದಯಮಾಡಿ ಅದನ್ನು relax ಮಾಡಿ. 3200ಕ್ಕೂ ಹೆಚ್ಚು ಅನುಭವ ಇರುವವರು ನಿರುದ್ಯೋಗಿಯಾಗುತ್ತಾರೆ. ಬಹಳಷ್ಟು ಜನರಿಗೆ ತೊಂದರೆಯಾಗುತ್ತದೆ. ನಮ್ಮ human resources ಅನ್ನು ವ್ಯರ್ಥ ಮಾಡಬಾರದು. ಮಾನ್ಯ ಸಚಿವರು ದೊಡ್ಡ ಮನಸ್ಸು ಮಾಡಿ, ನಿಯಮ relax ಮಾಡಿ, ಅವರಿಗೆ ಅವಕಾಶ ಮಾಡಿಕೊಡಬೇಕು, ಈ ನಿರುದ್ಯೋಗಿ ಯುವಕರ ಬದುಕಿಗೆ ದಾರಿ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಸಚಿವರು ಎಲ್ಲರೂ ಮೆಚ್ಚುವಂತಹ ಉತ್ತರ ಕೊಡಬೇಕು.

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ರೇವಣ್ಣನವರು, ಮಾನ್ಯ ಪುಟ್ಟೇಗೌಡರು ಮತ್ತು ಇನ್ನೂ ಇಬ್ಬರು–ಮೂವರು ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ನನಗೂ ಕೂಡ ಅವರಿಗೆ ಸಹಾಯ ಮಾಡಬೇಕೆಂಬ ಮನಸ್ಸಿದೆ. ನಾನು ಅವರ ಜೊತೆಗೆ 4 ಸುತ್ತು ಸಭೆ ನಡೆಸಿ ಮಾತುಕತೆ ನಡೆಸಿದ್ದೇನೆ. ಅವರು strike ಮಾಡುತ್ತಿದ್ದಾಗ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ರೇವಣ್ಣನವರು ಇತರರೆಲ್ಲಾ ಅವರ ಹತ್ತಿರ ಹೋಗಿ ಬಂದಿದ್ದರು. ಅವರು ನನ್ನ ಹತ್ತಿರ 2–3 ಬಾರಿ ಬಂದಿದ್ದರು. ಅವರು ನನ್ನ ಬಳಿಗೆ ಬಂದಾಗ, ನಾನು ಅವರಿಗೆ ಒಂದು ವಿಚಾರ ಸ್ಪಷ್ಟಪಡಿಸಿದೆ. ಇವತ್ತು ನಾವು Law Department ನಿಂದ legal opinion ತೆಗೆದು ಕೊಳ್ಳಬೇಕಾಗುತ್ತದೆ. ಅದೇ ರೀತಿಯಾಗಿ ನಾವು ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಯ ಸಲಹೆ ಕೂಡ ಪಡೆಯಬೇಕಾಗುತ್ತದೆ. ಇದರ ಜೊತೆಗೆ ಹಣಕಾಸು ಇಲಾಖೆಯ ಸಲಹೆಯನ್ನೂ ಸಹ ಪಡೆಯಬೇಕಾಗುತ್ತದೆ. ಈ ಎಲ್ಲಾ ಇಲಾಖೆಗಳ ಮೀಟಿಂಗ್‌ವೊಂದನ್ನು ಫಿಕ್ಸ್ ಮಾಡುತ್ತೇನೆಂದು ನಾನು

ಅವತ್ತೇ ಅವರಿಗೆ ಭರವಸೆ ಕೊಟ್ಟಿದ್ದೆ. ಅದರ ಪ್ರಕಾರ ಮೀಟಿಂಗ್ ಡೇಟ್ ಅನ್ನು ಅವತ್ತೇ ಫಿಕ್ಸ್ ಮಾಡಲಾಗಿತ್ತು. ಇವತ್ತು ಬೆಳಿಗ್ಗೆ ಆ ಮೀಟಿಂಗ್ ಮಾಡಲಾಯಿತು. ಪರವಾನಗಿ ಪಡೆದ ಭೂ ಮಾಪಕರ ಪರವಾಗಿ ಐದು ಮಂದಿ representatives ಬಂದು, ಅವರ ಅಹವಾಲುಗಳನ್ನು ಇವತ್ತು ಹೇಳಿದ್ದಾರೆ. ನಾಲ್ಕು ಇಲಾಖೆಯ ಅಧಿಕಾರಿಗಳು ಮೀಟಿಂಗ್‌ನಲ್ಲಿದ್ದರು. ಇದಕ್ಕೆ ಸಂಬಂಧಪಟ್ಟ ಫೈಲ್ ಅನ್ನು ಆ ಇಲಾಖೆಗಳ ಸಲಹೆ/ಅಭಿಪ್ರಾಯಕ್ಕಾಗಿ ಕಳುಹಿಸಿಕೊಡುತ್ತೇನೆಂದು ನಾನು ಹೇಳಿದ್ದೇನೆ. ಆ ಮೂರೂ ಇಲಾಖೆಗಳ ಸಲಹೆ ಪಡೆದ ಮೇಲೆ ಸೂಕ್ತವಾದ ನಿರ್ಧಾರವೊಂದನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : Report ಬಂದ ಮೇಲೆಯೇ decision ತೆಗೆದುಕೊಳ್ಳುತ್ತೀರಾ?

ಶ್ರೀ ಜಿ.ಕರುಣಾಕರ ರೆಡ್ಡಿ : ಹೌದು.

ಶ್ರೀ ಸಿದ್ದರಾಮಯ್ಯ : ಎಲ್ಲಾ ಇಲಾಖೆಗಳ ಜಂಟಿ ಸಮಿತಿ ಮಾಡಿದ್ದೀರಾ?

ಶ್ರೀ ಜಿ.ಕರುಣಾಕರ ರೆಡ್ಡಿ : ಹೌದು.

ಶ್ರೀ ಸಿದ್ದರಾಮಯ್ಯ : ಅವರಿಗೆ ಸ್ವಲ್ಪ positive ಆಗಿ ವರದಿ ಕೊಡಿ ಎಂದು ಹೇಳಿ.

ಶ್ರೀ ಜಿ. ಕರುಣಾಕರ ರೆಡ್ಡಿ : ಮೂರು ಇಲಾಖೆಗಳವರನ್ನು ನಾನು ಮೀಟಿಂಗ್ ಗೆ ಕರೆಸಿದ್ದೆ. ಅವರ ಮುಂದೆಯೇ ತಮ್ಮ ಅಹವಾಲುಗಳನ್ನು ಅವರು ಹೇಳಿಕೊಂಡಿದ್ದಾರೆ. ಪರವಾನಗಿ ಪಡೆದ ಭೂ ಮಾಪಕರು ತಮ್ಮ details ಗಳನ್ನೆಲ್ಲಾ ಅವರ ಮುಂದೆ ಹೇಳಿಕೊಂಡು, ಈ ರೀತಿ ನಮಗೆ ಅವಕಾಶ ಕೊಡಿ ಎಂದು ಕೇಳಿದರು. ಅದರ ಬಗ್ಗೆ ಇಲಾಖೆಗಳ ಅಭಿಪ್ರಾಯ ಪಡೆದು ನಾವು ಮುಂದುವರೆಯುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ : ಅವರಿಗೆ ಕೊನೆಯ ಪಕ್ಷ 5-6 ಸಾವಿರ ರೂ.ಗಳನ್ನು ಕೊಡುವಂತೆ ಶಿಫಾರಸ್ಸು ಮಾಡಿ. ಈಗ ಅವರಿಗೆ ಯಾರಿಗೂ ಸಹ 3 ಸಾವಿರ ರೂ.ಗಳ ಮೇಲೆ ಬರುವುದಿಲ್ಲ.

(ಗೊಂದಲ)

ಶ್ರೀ ಜಿ. ಕರುಣಾಕರ ರೆಡ್ಡಿ : ನಾನು ಉತ್ತರದಲ್ಲಿ ಕ್ಲಿಯರ್ ಆಗಿ ಹೇಳಿದ್ದೇನೆ. ಪಕ್ಕಾ ಪೋಡಿ ಮಾಡುವಲ್ಲಿ ಅವರಿಗೆ ಅವಕಾಶ

ಮಾಡಿಕೊಡುತ್ತೇವೆಂದು ಹೇಳಿದ್ದೇವೆ. ಅದೇ ರೀತಿ ಹಿಡುವಳಿ ಜಮೀನಿಗೆ ಸಂಬಂಧಿಸಿದಂತೆ ಸರ್ವೆ ಮಾಡಲಿಕ್ಕೆ ಅವರಿಗೆ ಅವಕಾಶ ಕೊಡುತ್ತೇವೆ. ಅದರಿಂದ ಅವರಿಗೆ ಬರುವ ಇನ್ ಕಂ ಸಹ ಹೆಚ್ಚಾಗುತ್ತದೆ.

ಅಧ್ಯಕ್ಷರು :ಈಗ ಮಾನ್ಯ ನರೇಂದ್ರಬಾಬುರವರು ಮುಂದಿನ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸಬೇಕು. ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರೆ, ಮುಂದಿನ ಗಮನ ಸೆಳೆಯುವ ಸೂಚನೆ ತಮಗೆ ಸಂಬಂಧಪಟ್ಟಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಸಚಿವರು ಮಾನ್ಯ ರೇವಣ್ಣನವರ ಗಮನ ಸೆಳೆಯುತ್ತಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ಏನಿಲ್ಲ ಸಾರ್. ಬೆಂಗಳೂರಿನಲ್ಲಿ ನೀರು ಸರಬರಾಜು ಮತ್ತು ವಿದ್ಯುತ್ತಿನ ಸಮಸ್ಯೆ ಇದೆ. ಮಹಾನಗರ ಪಾಲಿಕೆ ಚುನಾವಣೆ ಬರುತ್ತಿರುವುದರಿಂದ ಆ ಸಮಸ್ಯೆಗಳನ್ನು ನೀವು ಬಗೆಹರಿಸಿ. ಇಲ್ಲದಿದ್ದರೆ ನಿಮಗೆ ಹೆಚ್ಚು ಕಡಿಮೆ ಆಗುತ್ತದೆ ಎಂದು ನಾನು ಅವರಿಗೆ ಹೇಳುತ್ತಿದ್ದೆ.

ಖ) ಕರ್ನಾಟಕ ಗೃಹ ಮಂಡಳಿಯಲ್ಲಿ ಕಳೆದ ಎರಡು ವರ್ಷಗಳಿಂದ ವಸತಿ ಹೀನರಿಗೆ ಮನೆಗಳನ್ನು ನಿರ್ಮಿಸಿಕೊಡುವ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗೃಹ ಮಂಡಳಿಯಲ್ಲಿ ಕಳೆದ ಎರಡು ವರ್ಷಗಳಿಂದ ವಸತಿ ಹೀನರಿಗೆ ಮನೆಗಳನ್ನು ನಿರ್ಮಿಸಿಕೊಡುವ ಬಗ್ಗೆ ಮಾನ್ಯ, ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೆ,

ಕರ್ನಾಟಕ ಗೃಹ ಮಂಡಳಿಯು ವಸತಿ ಹೀನರಿಗೆ ಬಡವಣೆ ಮತ್ತು ಮನೆಗಳನ್ನು ನಿರ್ಮಿಸುವ ಸಲುವಾಗಿ 2002ರಲ್ಲಿ 100 ವಸತಿ ಯೋಜನೆಯನ್ನು ಹಾಗೂ 2007ರಲ್ಲಿ ಸುವರ್ಣ ಕರ್ನಾಟಕ ಯೋಜನೆಯಡಿ 50

ಯೋಜನೆಗಳನ್ನು ಹಾಗೂ ಇತರೇ ವಸತಿ ಯೋಜನೆನಗಳನ್ನು ಹಮ್ಮಿಕೊಳ್ಳ ಲಾಗಿತ್ತು. ಒಟ್ಟು 150 ಯೋಜನೆಗಳ ಪೈಕಿ 97 ಯೋಜನೆಗಳು ಪೂರ್ಣಗೊಂಡು 20,748 ನಿವೇಶನಗಳು ಹಾಗು 5126 ಮನೆಗಳನ್ನು ಹಂಚಲಾಗಿದೆ. ಉಳಿದ ಯೋಜನೆಗಳ ಪೈಕಿ 65 ಯೋಜನೆಗಳು ಪ್ರಗತಿಯ ವಿವಿಧ ಹಂತದಲ್ಲಿದ್ದು, 7 ಯೋಜನೆಗಳಿಗಾಗಿ ಭೂಮಿಯು ಇನ್ನು ಲಭ್ಯವಾಗಿರುವುದಿಲ್ಲ.

ಇದಲ್ಲದೆ ಸರ್ಕಾರದ ಆದೇಶ ಸಂಖ್ಯೆ: ವಇ/103/ಕಗೃಮಂ/2002, ದಿನಾಂಕ: 18.9.2003 ರಂತೆ ಮಾನ್ಯ ಮುಖ್ಯ ಮಂತ್ರಿಗಳ ಮಾದರಿ ಪಟ್ಟಣ ವಸತಿ ಯೋಜನೆಯನ್ನು ಕರ್ನಾಟಕ ಗೃಹ ಮಂಡಳಿಯ ಮೂಲಕ ಜಾರಿಗೆ ತರಲು ಆದೇಶವಾಗಿರುತ್ತದೆ. ಈ ಆದೇಶದಂತೆ 176 ಸಣ್ಣ ಪಟ್ಟಣ ಮತ್ತು ಹೋಬಳಿ ಕೇಂದ್ರಗಳಲ್ಲಿ ವಸತಿ ಯೋಜನೆಯನ್ನು ಜಾರಿಗೆ ತರಲು ಆದೇಶವಾಗಿರುತ್ತದೆ. ಸದರಿ ಕಾರ್ಯಕ್ರಮದಲ್ಲಿ ಅನುಮೋದನೆಗೊಂಡ ಯೋಜನೆಯಂತೆ 30X40 ಅಡಿ ನಿವೇಶನವನ್ನು 36,000 – 40,000 ರೂ.ಗಳ ಬೆಲೆಯಲ್ಲಿ ಹಾಗೂ ಇದೇ ವಿಸ್ತೀರ್ಣದ ನಿವೇಶನದಲ್ಲಿ 450 ಚದರ ಅಡಿ ವಿಸ್ತೀರ್ಣದ ಮನೆಯನ್ನು ನಿವೇಶನದ ಬೆಲೆ ಸೇರಿ ರೂ.2.25 ಲಕ್ಷಗಳ ಬೆಲೆಯಲ್ಲಿ ಒದಗಿಸಬೇಕಾಗುತ್ತದೆ. ಈ ಯೋಜನೆಯನ್ನು ಜಾರಿಗೆ ತರುವುದು ಮಂಡಳಿಗೆ ಆರ್ಥಿಕವಾಗಿ ಕಷ್ಟ ಸಾಧ್ಯವಾದ ಕಾರಣ ಈ ಯೋಜನೆಯನ್ನು ಹಿಂದೆ ಕಾರ್ಯಗತಗೊಳಿಸಲಾಗಿಲ್ಲ. ಆದಾಗ್ಯೂ 4 ಸ್ಥಳಗಳಲ್ಲಿ ಮಂಡಳಿಯ ಸ್ವಾಧೀನದಲ್ಲಿದ್ದ ಜಮೀನುಗಳಲ್ಲಿ ಸದರೀ ಕಾರ್ಯಕ್ರಮದಡಿ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದೆ.

ಈ ಮೇಲಿನ ಕಾರ್ಯಕ್ರಮಗಳಲ್ಲದೆ ಗೃಹ ಮಂಡಳಿಯು ನಿವೇಶನ ರಚನೆ ಮತ್ತು ಮನೆಗಳ ನಿರ್ಮಾಣಕ್ಕಾಗಿ ಬೇರೆ ಯಾವುದೇ ಯೋಜನೆಯ ನೀಲಿ ನಕ್ಷೆಯನ್ನು ತಯಾರಿಸಿರುವುದಿಲ್ಲ. ಮತ್ತು ಈಗಾಗಿ ವಸತಿ ಹೀನರಿಗೆ ಯಾವುದೇ ಅನ್ಯಾಯವಾಗಿರುವುದಿಲ್ಲ.

ಇದಲ್ಲದೆ 2010–11ರಲ್ಲಿ ಹಾಗೂ ಮುಂದಿನ ವರ್ಷಗಳಲ್ಲಿ ಕಾರ್ಯರೂಪಕ್ಕೆ ತರಲು 225 ಸ್ಥಳಗಳನ್ನು ಗುರ್ತಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ.

ಮೇಲೆ ತಿಳಿಸಿದಂತೆ ಹಿಂದಿನ ಯೋಜನೆಗಳಿಗಾಗಿ 7 ಸ್ಥಳಗಳಲ್ಲಿ ಮತ್ತು ಹೊಸದಾಗಿ ಸರ್ಕಾರದ ಅನುಮೋದನೆಗೆ 225 ಸ್ಥಳಗಳಲ್ಲಿ ಅಂದರೆ ಒಟ್ಟಾರೆಯಾಗಿ ಅಂದಾಜು 230 ಸ್ಥಳಗಳಲ್ಲಿ ಯೋಜನೆಗಳನ್ನು ಹಮ್ಮಿಕೊಳ್ಳಲು

ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿರುತ್ತದೆ. ಹಾಲೀ 38 ಸ್ಥಳಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿರುತ್ತದೆ. ಭೂಸ್ವಾಧೀನ ಪ್ರಕ್ರಿಯೆಯು ಒಂದು ನಿಧಾನ ಪ್ರಕ್ರಿಯೆಯಾಗಿದ್ದು, ಕನಿಷ್ಠ 2 ರಿಂದ 3 ವರ್ಷಗಳ ಅವಧಿಯು ಭೂಸ್ವಾಧೀನಕ್ಕಾಗಿ ಬೇಕಾಗುತ್ತದೆ. ನೇರ ಭೂ ಖರೀದಿ ಮೂಲಕವು ಭೂಮಿಯನ್ನು ಸ್ವಾಧೀನ ಪಡೆಯಲು ಅವಕಾಶವಿದ್ದು, ಸರ್ಕಾರದ ಸೂಚನೆಯಂತೆ ತಾತ್ಕಾಲಿಕವಾಗಿ ಭೂಮಿಯ ನೇರ ಖರೀದಿಯನ್ನು ನಿಲ್ಲಿಸಲಾಗಿದೆ. ಸರ್ಕಾರದ ಅನುಮತಿ ದೊರೆತ ನಂತರ ಈ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಇನ್ನೊಂದು ಮುಖ್ಯವಾದುದು, ಕಳೆದ ಎರಡು ವರ್ಷಗಳಲ್ಲಿ ಗೃಹ ಮಂಡಳಿ ಸಾಧನೆ ಮಾಡಲಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ,

Year	EWS	LIG	MIG	HIG	ಒಟ್ಟು ನಿವೇಶನಗಳು
2001–2	44	320	349	139	892
2002–3	37	270	450	192	049
2003–4	17	237	557	243	1054
2004–5	95	790	1195	304	2384
2005–6	51	938	1246	322	2557
2006–7	11	1026	1369	269	2675
2007–08	6	1114	1305	512	2937
2008–09	4	2350	2155	1021	2937

ಅತಿ ಹೆಚ್ಚು ಸಾಧನೆ ಮಾಡಿದ್ದು 2008–09ನೇ ಸಾಲಿನಲ್ಲಿ. 2009–10ರಲ್ಲಿ EWS 14, LIG 1476, LIG 1094, HIG 688 ಒಟ್ಟು 3272, ಇದು ಸೆಕೆಂಡ್ ಪ್ಲೇಸ್, 2008–09ರಲ್ಲಿ ಅತಿ ಹೆಚ್ಚು ಸೈಟುಗಳನ್ನು ಮಾಡಲಾಗಿದ್ದು ಇದು ಮೊದಲನೇ ಪ್ಲೇಸ್‌ನಲ್ಲಿದೆ. ಇನ್ನು ಮನೆಗಳು/ಫ್ಲಾಟ್‌ಗಳಿಗೆ ಸಂಬಂಧಿಸಿದಂತೆ, 2001–02ರಲ್ಲಿ 1520, 2002–03ರಲ್ಲಿ 2506, 2003–04ರಲ್ಲಿ 2115, 2004–05ರಲ್ಲಿ 3719, 2005–06ರಲ್ಲಿ 5490 ಒಳ್ಳೆಯ ಪ್ರಗತಿಯಾಗಿದೆ, 2006–07ರಲ್ಲಿ 4536, 2007–08ರಲ್ಲಿ 4920,

ಅತಿ ಹೆಚ್ಚು 2008–09ರಲ್ಲಿ 6395, ಆದಾದ ನಂತರ ಪ್ರಸಕ್ತ 2009–10ರಲ್ಲಿ 3973 ಮನೆಗಳನ್ನು ನಾವು ನಿರ್ಮಾಣ ಮಾಡಿದ್ದೇವೆ. ಈ ಕಡೆ ಸೈಟುಗಳನ್ನು, ಮನೆಗಳನ್ನು ಮಾಡುವುದರಲ್ಲಿ ತಾವು ನಮ್ಮ ಗಮನವನ್ನೇನು ಸೆಳೆದಿದ್ದೀರಿ, ಅದು ಸತ್ಯಕ್ಕೆ ದೂರವಾದಂಥ ವಿಚಾರ, ನಾವು ಪ್ರಗತಿಯಲ್ಲಿದ್ದೇವೆನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಕೃತಜ್ಞತೆ ಹೇಳುತ್ತೇನೆ, ಏಕೆಂದರೆ, ನಿಯಮ 69ರ ಪ್ರಕಾರ ಅದನ್ನು ತಂದಾಗ, ಬದಲಾಯಿಸಿ ಕೇಳಲು ಅವಕಾಶವನ್ನು ಕಲ್ಪಿಸಿಕೊಟ್ಟಿರಿ. ಮಾನ್ಯ ವಸತಿ ಸಚಿವರು ಹೇಳಿದ್ದು ನೋಡಿದರೆ, ನಮ್ಮ ರಾಜ್ಯದಲ್ಲಿ ವಸತಿ ನಿವೇಶನಗಳ ಸಮಸ್ಯೆ ಇಲ್ಲವೆಂದು ಕಾಣುತ್ತದೆ, ಅಷ್ಟು ಸಾಧನೆಗಳಾಗಿವೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ಕಳೆದ 20 ವರ್ಷಗಳಲ್ಲಿ ವಿಶೇಷ ಗಮನವನ್ನು ಕೊಟ್ಟಿದ್ದರೆ, ಈ ಒಂದು ಅಕ್ರಮ ಸಕ್ರಮ ಸಮಸ್ಯೆ ಪಟ್ಟಣಗಳಲ್ಲಿ ಬರುತ್ತಿರಲಿಲ್ಲ. ನಾನು ಮಂತ್ರಿಯಾಗಿ ಎರಡು ವರ್ಷಗಳಾಗಿದೆ, 10 ವರ್ಷಗಳ ಪ್ರತಿ ಏನೆಂಬ ಅಂಕಿಅಂಶಗಳನ್ನು ತರಿಸಿಕೊಂಡಿದ್ದೇನೆ. ನಾನು ಯಾವ ಸರ್ಕಾರಗಳ ಬಗ್ಗೆಯು ದೂರನ್ನು ಹೇಳುತ್ತಿಲ್ಲ, ರೇವಣ್ಣನವರು ಕೈ ಎತ್ತಿ ನಾವು ಮಾಡಿಲ್ಲವೆ ಎಂದು ಹೇಳುವುದು ಬೇಡ, ತಾವು ಯಾರು ಕೂಡ ವಿಶೇಷವಾದ ಗಮನವನ್ನು ಕೊಡದಿರುವ ಕಾರಣ ಬೆಂಗಳೂರು ನಗರದಲ್ಲಿ ಸುಮಾರು 7 ಲಕ್ಷ ಮನೆಗಳನ್ನು ಈ ಒಂದು ಅಕ್ರಮ–ಸಕ್ರಮ ಮಾಡಲು ಹೊರಟಿದ್ದೇವೆ, ಅಲ್ಲಿ ಸಣ್ಣ ಸಣ್ಣ ರಸ್ತೆಗಳಾಗಿದ್ದಾವೆ, ಎಲ್ಲಾ ಸಮಸ್ಯೆಗಳಾಗಿದ್ದಾವೆ, ಅದಕ್ಕೆ ಕಾರಣ ನಾವೇ, ಇಲ್ಲಿ ಗುಡಿಸಲು ಬರಲು ಕಾರಣ ನಾವೇ, ಹೀಗಾಗಿ ಕಳೆದ 10–20 ವರ್ಷಗಳಿಂದ ನಮ್ಮ ಎಲ್ಲಾ ಸರ್ಕಾರಗಳ ನಮ್ಮ ದೂರದೃಷ್ಟಿಯ ಕೊರತೆಯಿಂದ ಇದಾಗಿದೆ, ನಾವು ತಪ್ಪು ಮಾಡಿದರು ತಪ್ಪೆ, ನಾವೇನು ಸಾಚಾಗಳೆಂದು ಹೇಳುತ್ತಿಲ್ಲ, ನಾವು ಕೂಡ ತಪ್ಪು ಮಾಡಿದರೆ ಸರಿ ಮಾಡಿಕೊಳ್ಳಬೇಕಾಗುತ್ತದೆ, ವಸತಿಗೆ ಹೆಚ್ಚು ಒತ್ತನ್ನು ಕೊಡಬೇಕಾಗಿದೆ, ಹೆಚ್ಚೆಚ್ಚು ಪರಿಣಾಮಕಾರಿಯಾಗಿ ಬಡವರಿಗೆ ಮನೆಗಳನ್ನು ಕೊಡುವುದನ್ನು ನಾವು ಮಾಡಬೇಕಾಗಿದೆ, ಇದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿ ಇವತ್ತು ರಾಜ್ಯಾದ್ಯಂತ ಎಲ್ಲಾ ಕಡೆ ಜನರು ಬಯಸುವುದೇನೆಂದರೆ, ನೆತ್ತಿಯ ಮೇಲೆ ಒಂದು ಸೂರಾದರೂ ಇರಲೆಂಬುದು. ಇವತ್ತು ಸಹ ಗೃಹಮಂಡಳಿಯ ಮುಂದೆ ವಸತಿ ಮತ್ತು ನಿವೇಶನಕ್ಕಾಗಿ 5 ಲಕ್ಷ ಅರ್ಜಿಗಳು

ಬಾಕಿ ಇವೆ. ಇಡೀ ರಾಜ್ಯದಲ್ಲಿ ಇದು ಬಡವರ ಮತ್ತು ಮದ್ಯಮ ವರ್ಗಗಳ ಸಮಸ್ಯೆ. ಇವತ್ತು ಗುಡಿಸಲು ರಹಿತ ರಾಜ್ಯವನ್ನಾಗಿ ಮಾಡುತ್ತೇವೆನ್ನುವ ಘೋಷಣೆಯನ್ನು ಸರ್ಕಾರಗಳು, ಬರುವ ಮುಖ್ಯಮಂತ್ರಿಗಳು ಮಾಡುತ್ತಾರೆ. ಇವತ್ತು ಯಾವ ನೀಲಿ ನಕಾಶೆಯನ್ನು ಎಷ್ಟು ವರ್ಷಗಳ ಅವಧಿಯಲ್ಲಿ ಹೇಗೆ ಕ್ರಿಯಾ ಯೋಜನೆಗಳನ್ನು ಮಾಡಿ, ಪರಿಣಾಮಕಾರಿಯಾಗಿ ಮಾಡುತ್ತಿದ್ದೇವೆಯೇ ಎನ್ನುವ ಪ್ರಶ್ನೆಯನ್ನು ಹಾಕಿಕೊಂಡಾಗ, ಪ್ರತಿವರ್ಷ ನಾವು ನಿರೀಕ್ಷಿತ ಮಟ್ಟದಲ್ಲಿ ಗುರಿಯನ್ನು ಮುಟ್ಟುತ್ತಿಲ್ಲ, ಅದಕ್ಕೆ ಹಲವಾರು ಕಾರಣಗಳಿವೆ. ಇವತ್ತು ಗೃಹಮಂಡಳಿಗೆ ನನಗೆ ಗೊತ್ತಿರುವಂತೆ 1982 ಎಂದು ಕಾಣುತ್ತದೆ, ಮಾನ್ಯ ಶ್ರೀ ಹೆಚ್.ಎಲ್. ತಿಮ್ಮೇಗೌಡರು ಅಧ್ಯಕ್ಷರಾಗಿದ್ದಾಗ, ಸದಾಶಿವ ನಗರದಿಂದ ಹಿಡಿದು ಗ್ರಾಮಾಂತರ ಪ್ರದೇಶದವರೆಗೂ ಹೌಸಿಂಗ್ ಬೋರ್ಡ್ ಮನೆಗಳನ್ನು ಕಟ್ಟುತ್ತಿದ್ದರು, ರಾಜಾಜಿ ನಗರದಲ್ಲೂ ಕೂಡ ಹೌಸಿಂಗ್ ಬೋರ್ಡ್ ಮನೆಗಳನ್ನೇ ಕಟ್ಟಿರುವುದು. ಅಷ್ಟು ಶಕ್ತಿ ಸಾಮರ್ಥ್ಯವಿರುವ ಗೃಹಮಂಡಳಿ, ಅಲ್ಲಿಗೆ ಒಬ್ಬ ಸಚಿವ ಸಂಪುಟ ದರ್ಜೆಯವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಾ ಐಎಎಸ್ ಅಧಿಕಾರಿಗಳಿದ್ದಾರೆ, ಟೆಕ್ನೋಕ್ರಾಟ್ಸ್ ಇದ್ದಾರೆ, ಇಂಜಿನಿಯರ್ಸ್ ಇದ್ದಾರೆ ಮತ್ತು ಬಹಳಷ್ಟು ಸಾಮರ್ಥ್ಯವಿರುವವರು ಏಕೆ ಇವತ್ತು ಬಡವರಿಗೆ, ಮಧ್ಯಮವರ್ಗದವರಿಗೆ ಮನೆಗಳನ್ನು ಕೊಡುವುದಕ್ಕಾಗುತ್ತಿಲ್ಲ? ಇವತ್ತು ಗೃಹಮಂಡಳಿಯನ್ನು ಏನು ಸರ್ಕಾರ ರಚನೆ ಮಾಡಿತು ಆ ಉದ್ದೇಶ ಸಾರ್ಥಕತೆಯನ್ನು ಪಡೆಯುತ್ತಿಲ್ಲ. ಇವತ್ತು ನಿಮಗೆ ಗೊತ್ತಿರುವಂತೆ ಹಾಸನದಲ್ಲಿ ರೈತರು ನಮ್ಮ ಜಮೀನುಗಳನ್ನು ತೆಗೆದುಕೊಳ್ಳಬೇಡಿ ಎಂದು ಧರಣಿಯನ್ನು ಮಾಡುತ್ತಿದ್ದಾರೆ. ಎಲ್ಲೆಲ್ಲಿ ಜಮೀನು ಕೊಡುತ್ತಾರೋ ಅಲ್ಲಿ ಜಮೀನುಗಳನ್ನು ತೆಗೆದುಕೊಳ್ಳಿ ಏಕೆ ಅವರ ಹತ್ತಿರ ಜಮೀನಿಗೋಸ್ಕರ ಒತ್ತಾಯ ಮಾಡಬೇಕು? ಖಂಡಿತವಾಗಿಯು ಹೇಳುತ್ತೇನೆ, ಇವತ್ತು ನೆರೆ ಬಂದಂಥ ಸಂದರ್ಭಗಳಲ್ಲಿ ಲಕ್ಷಾಂತರ ಮನೆಗಳನ್ನು ಕಟ್ಟಿಸುವ ಕೆಲಸವನ್ನು ರಾಜ್ಯ ಸರ್ಕಾರ ಗೃಹಮಂಡಳಿಯಿಂದ ಮಾಡಿಸಬಹುದಾಗಿತ್ತು. ಏಕೆ ನಮಗೆ ಅಷ್ಟು ಟೆಕ್ನಿಕಲ್ ಕೆಪಾಸಿಟಿ ಇಲ್ಲವೇ? ನೈಸ್ ಅಂಥ ಕಂಪನಿಗಳು ಅಲ್ಲಿ ಟೌನ್‌ಶಿಪ್ ಮಾಡುತ್ತಾರೆ, ಹೌಸಿಂಗ್ ಬೋರ್ಡಿಗೆ ಟೌನ್‌ಶಿಪ್ ಮಾಡುವ ಕೆಪಾಸಿಟಿ ಇಲ್ಲವೇ? ಇವತ್ತು ಬೆಂಗಳೂರನ್ನು ಸೆಟಲೈಟ್ ಟೌನ್‌ಗಳನ್ನು ಮಾಡಿ traffic easen ಮಾಡಬಹುದಾಗಿತ್ತು, congestion easen ಮಾಡಬಹುದಾಗಿತ್ತು, ಇವತ್ತು ದೂರದೃಷ್ಟಿಯ ಕೊರತೆ ಎದ್ದು

ಕಾಣುತ್ತಿದೆ. ನನಗೆ ಗೊತ್ತಿರುವಂತೆ discretionary quota ಎಂದಿದೆ, ಇವತ್ತು ಮನೆಗಳಾಗಲಿ ನಿವೇಶನಗಳಾಗಿ ಹಾಗೆಯೆ ನೆನೆಗುದಿಗೆ ಬಿದ್ದಿವೆ, ಕೋಟ್ಯಾಂತರ ಬೆಳೆಬಾಳುವುದನ್ನು ಇವತ್ತು ಸರ್ಕಾರ, ಬಹುಶಃ ನೇರವಾಗಿ ಹಂಚಬೇಕೆಂತಲೋ ಅಥವಾ ಏನು ಮಾಡಬೇಕೆಂತಲೋ ಯಾರಿಗೂ ಅಧಿಕಾರವನ್ನು ಕೊಡದೆ ಇವತ್ತೆಲ್ಲಾ ದೂಳಿಡುತ್ತಿದೆ, ಆ ಪ್ರಾಪರ್ಟಿಯು ಹಾಳಾಗುತ್ತಿದೆ. ನಾನು ವಿನಂತಿ ಮಾಡುತ್ತೇನೆ, ದಯಮಾಡಿ, ಇವತ್ತು ರಿಯಲ್ ಎಸ್ಟೇಟ್ ಹಾವಳಿ ಎಷ್ಟಾಗಿದೆ ಎಂದರೆ, ಯಾವುದೆ ಫ್ಲಾಟ್ ತೆಗೆದುಕೊಂಡರೆ ಗ್ಯಾರೆಂಟಿ ಇಲ್ಲ, ಆರ್‌ಎಮ್ಸ್ ಕೌಂಟಿ ಎಂದು ನಿಮಗೆ ಗೊತ್ತಿರಬಹುದು, ಬೇರೆ ಬೇರೆ ದೇಶಗಳಿಗೆ ಜಾಹಿರಾತನ್ನು ಕೊಟ್ಟು, ಲಕ್ಷಾಂತರ ರೂಪಾಯಿಗಳನ್ನು ತೆಗೆದುಕೊಂಡು, ಅಲ್ಲಿ ನೋಡಿದರೆ ಒಂದು ಫ್ಲಾಟು ಇಲ್ಲ ಏನೂ ಇಲ್ಲ ಸುಮ್ಮನೆ ಜಾಹಿರಾತು. ಹೀಗಾಗಿ ಒಂದು ಫ್ಲಾಟ್ ಆಗಲಿ, ಸೈಟ್ ಆಗಲಿ ಗ್ಯಾರೆಂಟಿ ಇಲ್ಲ, ಬಿಡಿಎ ಅಂತು ಬಿಟ್ಟುಬಿಡಿ, ಜೀವಮಾನದಲ್ಲಿ ಯಾರೂ ಸೈಟ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಅಂಥ ಸ್ಥಿತಿ ಇದೆ. ದಯಮಾಡಿ ಈ ಹೌಸಿಂಗ್ ಬೋರ್ಡ್ ಅನ್ನು ಎಕ್ಯುಪ್ ಮಾಡುವ ದಿಕ್ಕಿನಲ್ಲಿ ಅದನ್ನು ಎಂಪವರ್ ಮಾಡಿ ಪರಿಣಾಮಕಾರಿಯಾಗಿ ಇವತ್ತು ಮಾಡದೇ ಹೋದರೆ ಖಂಡಿತವಾಗಿಯು ಹೇಳುತ್ತೇನೆ, ಇವತ್ತು ಈ ಸರ್ಕಾರ ಆ ಸರ್ಕಾರವೆಂದು ಹೇಳುವುದಕ್ಕೆ ಹೋಗುವುದಿಲ್ಲ, ದಯವಿಟ್ಟು ಈ ಒಂದು ವ್ಯವಸ್ಥೆಯನ್ನು ಸಕ್ರಿಯವಾಗಿ ಮಾಡಿ, ಇವತ್ತು ನೆನಗುದಿಗೆ ಬಿದ್ದಿರುವ ಸೈಟ್‌ಗಳಾಗಿರಬಹುದು ನಿವೇಶನಗಳಾಗಿರಬಹುದು, ಹಂಚಬೇಕು ಮತ್ತು ಟೌನ್‌ಶಿಪ್‌ಗಳನ್ನು ಮಾಡಬೇಕು. ಇವತ್ತು ಬಂದಿರುವ 4 ಲಕ್ಷ ಅರ್ಜಿಗಳನ್ನು ವಿಲೇ ಮಾಡುವುದಕ್ಕೆ ಅತ್ಯಗತ್ಯವಾದ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ನಿಮ್ಮನ್ನು ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ನಾವು ಮೂರೂ ಜನ ಸಹಿ ಹಾಕಿದ್ದೇವೆ. ಈ ಹೌಸಿಂಗ್ Problem ಗೆ ಇತಿಶ್ರೀ ಹಾಡಬೇಕು. ಪ್ರತಿನಿತ್ಯ ನಿಮ್ಮ ಕ್ಷೇತ್ರಗಳಲ್ಲಿ ಮನೆ ಕಟ್ಟಿಸಿ ಕೊಡಿ ಎಂದು ನಿಮಗೆ ಕೇಳಬಹುದು. ಮಾನ್ಯ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದರು, ಸೈಟು ಕೊಡುತ್ತಾರಾ? ಮನೆ ಕೊಡುತ್ತಾರಾ? ಶಾಸಕರಾಗಿ ನೀವು ಇದುವರೆಗೆ ಒಂದು ಸೈಟು ಕೊಡಿಸಲಿಲ್ಲ. ಮನೆ ಕೊಡಿಸಲಿಲ್ಲ. ನಾನು 23 ವರ್ಷಗಳಿಂದ ಜನಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಾಗಲಿ, ನನ್ನ ವಾರ್ಡ್‌ನಲ್ಲಾಗಲಿ ಒಂದು ಸೈಟು

0.17F-100

ಕೊಡುವುದಕ್ಕಾಗಲಿಲ್ಲ. ಒಂದು flat ತೆಗೆದುಕೊಂಡು ಕೊಡತಕ್ಕಂತಹ ಶಕ್ತಿ ನಮಗೆ ಇಲ್ಲ. ಹೌಸಿಂಗ್ ಬಗ್ಗೆ ಹೇಳಬೇಕೆಂದರೆ, ಒಂದು ಪಕ್ಷಿ ಸಹ ಒಂದು ಗೂಡು ಕಟ್ಟುತ್ತದೆ. ಜೀವಮಾನದಲ್ಲಿ ಒಂದು ಮನೆ ಕಟ್ಟುವುದಕ್ಕೆ ಒಂದು ಶಕ್ತಿಯನ್ನು ಕೊಡದೇ ಹೋದರೆ, ಸ್ವತಂತ್ರ ಬಂದು ಇಷ್ಟು ವರ್ಷಗಳಾದವು ಅವರಿಗೆ ನಾವು ಏನು ಕೊಡುತ್ತೇವೆ? ಶ್ರೀಮಂತರು ಹೇಗೋ ಕಟ್ಟಿಕೊಳ್ಳುತ್ತಾರೆ. ಆದರೆ ಮಧ್ಯಮ ವರ್ಗದವರು ಹಾಗೂ ಬಡವರ ಗತಿ ಏನಾಗಬೇಕು? ಇದಕ್ಕೋಸ್ಕರ ಗುಡಿಸಲುಗಳು ಜಾಸ್ತಿಯಾಗುತ್ತಿವೆ. Real estate ದಂಧೆಯಿಂದ ರೆವಿನ್ಯೂ ಸೈಟ್‌ಗಳ ದರಗಳು ಜಾಸ್ತಿಯಾಗುತ್ತಿವೆ. ಅದರ ಜೊತೆ ಶಾಮೀಲಾಗಿದ್ದಾರಾ ಎಂದು ನನಗೆ ಸಂಶಯ ಬರುತ್ತದೆ.

ಅಧ್ಯಕ್ಷರು : ದಯವಿಟ್ಟು ಮುಗಿಸಿ ನೀವು.

ಶ್ರೀ ನೆ.ಲ. ನರೇಂದ್ರಬಾಬು : ಇದು ಬಹಳ ಮುಖ್ಯವಾದುದು ಮಹಾತ್ಮ ಗಾಂಧೀಯವರ ಕನಸು ಏನಾಗಿತ್ತು.

ಶ್ರೀ ಹೆಚ್.ಡಿ.ರೇವಣ್ಣ : ಹಾಸನದ ವಿಷಯ ಮಾತನಾಡಿದಾಗ ನಾವು ಹೇಳಬೇಕಾಗುತ್ತದೆ.

ಶ್ರೀ ನೆ.ಲ. ನರೇಂದ್ರಬಾಬು : ನನ್ನ ಹಳ್ಳಿ ನನ್ನ ಮನೆ ಎನ್ನತಕ್ಕಂಥದ್ದು ಆಗಲಿ, ಹೌಸಿಂಗ್ ಹಗರಣದಲ್ಲಿ ಜಮೀನು ಕೊಟ್ಟಿರುವ ಬಗ್ಗೆ ಮಾನ್ಯ ಮುಖ್ಯ ಕಾರ್ಯದರ್ಶಿಯವರಿಗೆ ವರದಿ ಕೊಡಿ ಎಂದು ಹೇಳಿದ್ದರು. ಮನಸ್ಸು ಮಾಡಿದರೆ ಏಳು ದಿನಗಳಲ್ಲಿ ಅ ವರದಿ ಕೊಡಬಹುದು. ಇದುವರೆಗೂ ಕೊಟ್ಟಿದ್ದಾರಾ ಸ್ವಾಮಿ? ಏಕೆ ಇಷ್ಟು ನಿಧಾನವಾಗಿದೆ? ಒಬ್ಬ ಮುಖ್ಯ ಕಾರ್ಯದರ್ಶಿಗಳು ಒಂದು ವರದಿ ತೆಗೆದುಕೊಳ್ಳುವುದಕ್ಕೆ ಇಷ್ಟು ದಿವಸ ಬೇಕಾ? ಜಮೀನು ಹಗರಣದಲ್ಲಿ ತೊಂದರೆ ಆಗಿರುವುದು ಅವರಿಗೆ ಗೊತ್ತಿದೆ, ಏಕೆ ಇಷ್ಟು ನಿಧಾನ ಮಾಡಿದ್ದಾರೆ? ಅದಕ್ಕೋಸ್ಕರ ಎಂಟೈರ್ ಇಲಾಖೆಯನ್ನೇ ಪಂಪ್ ಮಾಡಬೇಕಾ? ದಯವಿಟ್ಟು ರೈತರು ವಿರೋಧ ಮಾಡುವ ಜಮೀನು ತೆಗೆದುಕೊಳ್ಳಬೇಡಿ. ಜನ ಮುಂದೆ ಬರತಕ್ಕಂತಹ ಜಮೀನುಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಸಿ ಕೊಟ್ಟು ನೋಡಿ ಎಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡಿ ಮತ್ತೊಮ್ಮೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಅಧ್ಯಕ್ಷರು : ತನ್ವೀರ್ ಸೇಠ್‌ರವರು ಮಾತನಾಡಿ. ತಾವು ಸಹಿ ಮಾಡಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಹಾಸನದ ವಿಷಯ ಹೇಳಿದಾಗ ನಾವು ಹೇಳಬೇಕಾಗುತ್ತದೆ. ಮೊನ್ನೆ ನಾನು ಇರಲಿಲ್ಲ ಮೊನ್ನೆ ಕೂಡ ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ. ವಿಷಯ ಬಂದಾಗ ಹಾಸನ, 2007–08 ಮತ್ತು 2009ರಲ್ಲಿ ಸುಮಾರು 18,000 ಸೈಟ್ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಸತ್ಯ ಇರುವುದನ್ನು ಹೇಳುತ್ತಿದ್ದೇನೆ. 18,000 ದಲ್ಲಿ ಹಾಸನದ ಚನ್ನಪಟ್ಟಣದಲ್ಲಿ ಹಿಂದೆ 1999ನೇ ಇಸವಿಯಲ್ಲಿ ನಾನು ಹೌಸಿಂಗ್ ಮಿನಿಸ್ಟರ್ ಆಗಿದ್ದಾಗ ಅಲ್ಲಿಯ ರೈತರು ಬೇಡವೆಂದು ಹೇಳಿದರು. 4.56 ಲಕ್ಷ ದುಡ್ಡು ಕೊಡುವುದು ಒಂದು ಸೈಟು ಕೊಡುವುದು ಎಂದು ನಾವು ಮಾಡಿದ್ದೆವು. ಅದಾದ ಮೇಲೆ ಐದು ವರ್ಷ ಬಿಟ್ಟು ಅದೇ ಜಮೀನನ್ನು ಕಾಂಗ್ರೆಸ್‌ನವರು ಮಾಡಿದ್ದು, ಸ್ವಲ್ಪ ಮಾನ್ಯ ನರೇಂದ್ರಬಾಬುರವರು ತಿಳಿದುಕೊಳ್ಳಲಿ. ಐದು ವರ್ಷ ಬಿಟ್ಟು, ಅವತ್ತು ಬಡ್ಡಿ ಎಷ್ಟಾಗಿತ್ತು ಗೊತ್ತಾ? 10 ರಿಂದ 15 ಲಕ್ಷ ರೂ. ಒಂದು ಎಕರೆಗೆ ರೈತರಿಗೆ ಸಿಗುವುದು. ಮತ್ತೆ ಅವನಿಗೆ ಒಂದೊಂದು ಸೈಟ್ ಸಿಗುವುದು. ಕೇವಲ 4.50 ಲಕ್ಷಕ್ಕೆ ಐದು ವರ್ಷ ಬಿಟ್ಟು ಮಾಡಿದರು. ಇವತ್ತು ಐದು ಸಾವಿರ ಅರ್ಜಿಗಳು ಬಂದಿವೆ. ಒಟ್ಟು 18,000 ಅರ್ಜಿಗಳು ಇವೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಇದಕ್ಕಾಗಿ ಇವತ್ತು ಸ್ಟ್ರೈಕ್ ನಡೆಯುತ್ತಿದೆ. ನಾನು ರೈತರ ಪರ ಇದ್ದೇನೆ. ನಾಳೆ ಗಮನಸೆಳೆಯುವ ಸೂಚನೆ ತೆಗೆದುಕೊಂಡು ಪ್ರಸ್ತಾಪ ಮಾಡಿರುವುದು ಪೇಪರ್‌ನಲ್ಲಿ ಬಂದಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ದು : ಗಮನ ಸೆಳೆಯುವ ಸೂಚನೆ ಕ್ಯಾನ್ಸಲ್ ಮಾಡಿಕೊಳ್ಳಲಿ ಈಗಲೇ ಬೇಕಾದರೆ ಚರ್ಚೆ ಮಾಡೋಣ.

ಅಧ್ಯಕ್ಷರು : ಇದರಲ್ಲಿ ತಾವು ಸಹಿ ಮಾಡಿಲ್ಲ. ಇದು ಗಮನ ಸೆಳೆಯುವ ಸೂಚನೆ. ನೀವು ವಿಷಯಾಂತರಕ್ಕೆ ಹೋದರೆ ಹೇಗೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ದು : ಇವತ್ತೇ ಚರ್ಚೆ ಮಾಡಿಬಿಡಿ ಅದನ್ನೂ.

ಶ್ರೀ ಹೆಚ್.ಡಿ.ರೇವಣ್ಣ : ಅದನ್ನೂ ಹೇಳಿ ಬಿಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಹೇಳಬೇಕಾಗುತ್ತದೆ. ಚರ್ಚೆ ಮಾಡುವುದಕ್ಕೆ ನಾವೂ ಒಪ್ಪಿಕೊಂಡಿದ್ದೇವೆ, ಮಂತ್ರಿಗಳೂ ಒಪ್ಪಿಕೊಂಡಿದ್ದಾರೆ. ಇದು ಅತೀ ಜರೂರು. ಮಾನ್ಯ ನರೇಂದ್ರ ಬಾಬುರವರು. . . .

ಅಧ್ಯಕ್ಷರು : ಮಾನ್ಯ ನರೇಂದ್ರಬಾಬುರವರು ಕೇಳಿದ್ದು ಹೌಸಿಂಗ್ ಬೋರ್ಡ್ ಬಗ್ಗೆ. ನೀವು ಹಾಸನದಲ್ಲಿ ಸ್ಟ್ರೈಕ್ ಮಾಡುತ್ತಾರೆಂದು ಹೇಳಿ ಪ್ರಾರಂಭ ಮಾಡಿದರೆ ಹೇಗೆ?

ಶ್ರೀ ಹೆಚ್.ಡಿ.ರೇವಣ್ಣ : ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರು ಇದಕ್ಕೆ ಅನುಮತಿ ಕೊಡಬೇಕೆಂದು ಮನವಿ ಮಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಅಪ್ರಿಷಿಯೇಟ್ ಮಾಡಬೇಕಾಗುತ್ತದೆ. ಸಂಘ ಸಂಸ್ಥೆಗಳವರು ಅರ್ಜಿ ಕೊಟ್ಟಿರುವುದು ಬೇಕಾದರೆ ನಾನು ನಿಮಗೆ ಕೊಡುತ್ತೇನೆ. ಆದರೂ ಅವರು ಕೇರ್ ಮಾಡಲಿಲ್ಲ. ನಾವೇನೂ ಹೇಳುವುದಕ್ಕೆ ಹೋಗಲಿಲ್ಲ. 6(1)ನ್ನು ಅವೋಕ್ ಮಾಡಿದ್ದೀರಿ. ಮಾನ್ಯ ನರೇಂದ್ರಬಾಬುರವರು ಹೋಗಲಿ ಮಾನ್ಯ ಸಿದ್ದರಾಮಯ್ಯನವರು ಹೋಗಲಿ. ಆ ಜಮೀನು ಯಾವುದೋ ರಾಜಕೀಯ ದುರುದ್ದೇಶದಿಂದ ಮಾನ್ಯ ರೇವಣ್ಣರವರು ಮಾಡುತ್ತಿದ್ದಾರೆ ಎನ್ನುತ್ತಾರಲ್ಲ, ಅವಶ್ಯಕತೆ ಇದ್ದರೆ ಮಾಡಿ ಇಲ್ಲದಿದ್ದರೆ ಬಿಟ್ಟು ಹಾಕಿ. ಮಧ್ಯವರ್ತಿಗಳು ಯಾರು ಲ್ಯಾಂಡ್ ಮಾಫಿಯಾ ಇದ್ದಾರೆ ಅವರಿಗೆ ಅವಕಾಶ ಕೊಡಬೇಡಿ. ಇನ್ನು 18,000 ಅರ್ಜಿಗಳು ಇವೆ. ಚನ್ನಪಟ್ಟಣದಲ್ಲಿ 5,000 ಅರ್ಜಿಗಳು ಇವೆ. ನಾನೇನು ಯಾರಿಗೋ ಸೈಟ್‌ಕೊಡಿ ಎಂದು ಕೇಳುವುದಕ್ಕೆ ಬಂದಿಲ್ಲ. ಮೊನ್ನೆ 1200 ಸೈಟುಗಳನ್ನು ಲಾಟರಿಯಲ್ಲಿ ಹಂಚಿದ್ದಾರೆ. ಇವತ್ತು 520 ರೂ.ಗೆ ತೆಗೆದುಕೊಂಡು ಒಂದು ಸಾವಿರ ರೂ.ಗೆ ಮಾರುತ್ತಿದ್ದಾರೆ. ಒಂದು ಅರ್ಜಿ ನಿಮಗೆ ಕೊಟ್ಟಿದ್ದಾರೆ. ಆ ಊರು ಬಿಟ್ಟು ನನ್ನ ಕ್ಷೇತ್ರದಲ್ಲಿ 15 ಕಿ.ಮೀ. ದೂರದಲ್ಲಿ ಮಾಡಿ ಎಂದು ಹೇಳುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದಲ್ಲಿ ಕೃಷ್ಣಾ ನಗರ ಎಂದು ಮಾಡಿದರು, ಈ ಕೃಷ್ಣಾ ನಗರದಲ್ಲಿ ಐದು ವರ್ಷಗಳಲ್ಲಿ ಹಾಗೆಯೇ ಬಿದ್ದು ಹೋದವು. 12 ಕಿ.ಮೀ. ದೂರದಲ್ಲಿ ಮಾಡಿದರೆ ಏನಾಗುತ್ತದೆ ಯಾರೋ ಲ್ಯಾಂಡ್ ಓನರ್ ಅನ್ನು ತೃಪ್ತಿಪಡಿಸುವುದಕ್ಕೋಸ್ಕರ ಮಾಡಿದ್ದು ಸ್ವಾಮಿ. ಆದ್ದರಿಂದ ನೀವು ಯಾವುದೇ ವಿಷಯ ತೆಗೆದುಕೊಳ್ಳಿ, ರೈತರಿಗೆ ಅನ್ಯಾಯವಾಗಬಾರದು. ನಾವೇನು ಹೇಳುತ್ತೇವೆ, ಐದು ವರ್ಷ ಯಾರಿಗೂ ಮಾರಾಟ ಮಾಡಬಾರದು. ಬಿಡಿ ನಾನೇನು ಬೇಡವೆಂದು ಹೇಳುವುದಿಲ್ಲ. ಇಲ್ಲವೆಂದರೆ ನೀವು ರೈತರಿಗೆ ನೇರವಾಗಿ ಕರೆಯಿರಿ. ಮದ್ಯವರ್ತಿಗಳು ಪವರ್ ಆಫ್ ಅಟಾರ್ನಿ ಮಾಡಿಕೊಳ್ಳುತ್ತಿದ್ದಾರೆ. ಇಲ್ಲಿಯೇ ಒಂದು ಅರ್ಜಿ ತಾವು ಬರೆದಿದ್ದೀರಿ. ಆದರೂ ನೀವು ಮಾಡಿಲ್ಲ ಎಷ್ಟು ಒತ್ತಡಕ್ಕೆ ಬಗ್ಗಿಲ್ಲ. ನನಗೇನಿಲ್ಲ ಬೇಕಾದರೆ ನೀವು ಮಾಡಿ. ಸಿಟಿ ಒಳಗೆ ಮಧ್ಯ

ಇರುವುದನ್ನು ನೀವು ಮಾಡಿದರೆ ನನಗೆ ಯಾರ ಉದ್ದೇಶವೂ ಇಲ್ಲ. ಹೌಸಿಂಗ್ ಬೋರ್ಡ್‌ನಲ್ಲಿ ನಾವು ಇದ್ದಾಗ ಅದು ಮಾಡಿದ್ದು ಎಂದು ನನ್ನ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ. ಮಾಡಲಿ ನನ್ನದೇನೂ ಇಲ್ಲ. ನಾನೇನು ಅದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ ರೈತರಿಗೆ ನೇರವಾಗಿ ಹಣ ಹೋಗಬೇಕು. ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ಕೇಳುತ್ತಿದ್ದಾರೆ. ಅವತ್ತು ನಾವು ಹೌಸಿಂಗ್ ಬೋರ್ಡ್ ಮಾಡಿದ ಉದ್ದೇಶವೇನೆಂದರೆ, ಯಾರೋ 10–12 ಜನ ಅಲ್ಲಿ ಹೋಗಿ ಕುಳಿತು ಸ್ಟ್ರೈಕ್ ಮಾಡಿದರೆ ನಾವು ನಿಲ್ಲಿಸುವುದಕ್ಕಾಗುತ್ತಾ? ರೈತರು 60% ಸೈಟುಗಳಲ್ಲಿ 20% ಹೌಸಿಂಗ್ ಬೋರ್ಡ್‌ನವರು ತೆಗೆದುಕೊಂಡು ಬಾಕಿ ನಮಗೆ ಕೊಡಿ ಎಂದು ಹೇಳುತ್ತಿದ್ದಾರೆ. ಮಧ್ಯವರ್ತಿಗಳೆಲ್ಲಾ 2 ರಿಂದ 3 ಲಕ್ಷದವರೆಗೆ ಬರೆಸಿಕೊಂಡಿದ್ದಾರೆ. ಹೀಗೆ ಬರೆಸಿಕೊಂಡಿರುವವರು ಕುಳಿತು ಗಲಾಟೆ ಮಾಡುತ್ತಿದ್ದಾರೆ. ಅದು ಆಗಬಾರದು. ನಮ್ಮ ಉದ್ದೇಶ ನಿಜವಾದ ನಿವೇಶನದಾರರಿಗೆ ಸೈಟು ಸಿಗಬೇಕು. ಯಾರಿಗಾದರೂ ಮಾಡಿ. ಡಿ ನೋಟಿಫಿಕೇಷನ್ ಮಾಡಬೇಕಾದರೆ ಬೇಕಾದರೆ ಕೆಲವು ಕಡತಗಳನ್ನು ಕೊಡುತ್ತೇನೆ, ಆ ಮೇಲೆ ಚರ್ಚೆ ಮಾಡುವಾಗ ಹೇಳುತ್ತೇನೆ. ಯಾವ್ಯಾವು ಡಿ ನೋಟಿಫಿಕೇಷನ್ ಮಾಡುವುದಕ್ಕೆ ಯಾರ್ಯಾರಿಂದ ಪತ್ರಗಳನ್ನು ತೆಗೆದುಕೊಳ್ಳುತ್ತೀರಿ, ಏನೇನು ಮಾಡುತ್ತೀರಿ ಎಂದು ಬೇಕಾದರೆ ಹೇಳುತ್ತೇನೆ. ಇದು ಆಗಬಾರದು ಆ ರೈತರನ್ನು ಉಳಿಸಬೇಕು. ನನ್ನದೇನೂ ಅಭ್ಯಂತರವಿಲ್ಲ. ಒಟ್ಟಿನಲ್ಲಿ ಮಧ್ಯವರ್ತಿಗಳಿಗೆ ಅವಕಾಶವಾಗಬಾರದು. ಮಾನ್ಯ ವಸತಿ ಸಚಿವರನ್ನು ಹಾಗೂ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣರವರು ಪ್ರಸ್ತಾಪ ಮಾಡಿದ ವಿಷಯಕ್ಕೆ ನಾನು ಹಾಸನ ಜಿಲ್ಲೆಗೆ ಹೋಗಿದ್ದೆ. ನೆನ್ನೆ ನಾನು ಒಂದು ಫಂಕ್ಷನ್‌ಗೆ ಹೋಗಿದ್ದೆ ಹಾಗೆಯೇ ಅಲ್ಲಿಯ ರೈತರಿಗೆ ಭೇಟಿ ಮಾಡಿಕೊಂಡು ಬಂದೆ. ಮಾನ್ಯ ರೇವಣ್ಣರವರು ಹೇಳುವ ಕಂಡಿಷನ್, ಅಲ್ಲಿಗೆ ಹೋದಾಗ ಜಮೀನು ಅವರಿಗೇ ಬೇಕೆಂದು ಹೇಳುತ್ತಾರೆ. ಫಲವತ್ತಾದ ಜಮೀನು ನಾವು ಕೊಡುವುದಿಲ್ಲ, ನಮಗೆ ಸೈಟುಗಳ ಅಗತ್ಯವಿಲ್ಲ, ಬೇರೆ ಕಡೆ ಸೈಟುಗಳಿವೆ, ಮೊದಲು ಮಾಡಿರುವ ಸೈಟುಗಳು ಇವೆ ಎಂದು ಅವರು ಹೇಳುತ್ತಾರೆ. ಚಳುವಳಿ ಮಾಡುತ್ತಿರುವ ರೈತರನ್ನು ಕರೆದು, ಮಾನ್ಯ ರೇವಣ್ಣರವರು ಹೇಳಿದ ಹಾಗೆ ಜಮೀನು ಮಧ್ಯವರ್ತಿಗಳಿಗೆ ಕೊಡಬಾರದು. ನೀವು ವ್ಯವಸಾಯಕ್ಕೆ ಉಪಯೋಗಿಸುವ ಫಲವತ್ತಾದ ಜಮೀನು ಎಂದು

ಹೇಳುತ್ತೀರಿ ವ್ಯವಸಾಯಕ್ಕೆ ಅದನ್ನು ಉಪಯೋಗಿಸಿಕೊಳ್ಳಿ. ಅದನ್ನು ಬೇರೆಯವರಿಗೆ ಮಾರಾಟ ಮಾಡಬೇಡಿ ಎಂದು ಬೇಕಾದರೆ ಅವರಿಗೆ ಹೇಳಿ. ದಿನಾ ಡಿ.ಸಿ.ಕಛೇರಿ ಮುಂದೆ ಚಳುವಳಿ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ರೈತರನ್ನು ಕರೆದು ಕೇಳಿ. ನೀವು ಒಂದು ತೀರ್ಮಾನ ಮಾಡಿಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಿದ್ದರಾಮಯ್ಯನವರೇ ನಾನು ಈ ಮನೆಯ ಮೂಲಕ ಒಂದು ಕರೆ ಕೊಡುತ್ತೇನೆ. ಸತ್ಯಾಗ್ರಹ ವಾಪಸ್ ತೆಗೆದುಕೊಳ್ಳಿ, ಆ ಜಮೀನು ನಾವು ತೆಗೆದುಕೊಳ್ಳುವುದಿಲ್ಲ, ನಿಮಗೆ ನಿವೇಶನ ಬೇಡವೆಂದರೆ ನಾವು ಅದಕ್ಕೆ ಒತ್ತಾಯ ಮಾಡುವುದಿಲ್ಲ. ಪರಭಾರೆ ಮಾಡಿರುವ ಜಮೀನನ್ನು ಸ್ವಂತ ಉಪಯೋಗ ಮಾಡಿಕೊಳ್ಳಬೇಕೆಂಬ ಕಂಡಿಷನ್ ಮೇಲೆ ಆ ಜಮೀನಿನಲ್ಲಿ ನಾವು ಏನು ಪ್ರಯತ್ನ ಮಾಡುತ್ತಿದ್ದೇವೆ, ಅದನ್ನು ನಾವು ಹೌಸಿಂಗ್ ಬೋರ್ಡ್‌ಗೆ ತೆಗೆದುಕೊಳ್ಳುವುದು ಬೇಡ. ಆ ರೈತರಿಗೆ ವಾಪಸ್ ಆ ಜಮೀನು ಕೊಟ್ಟು ಬಿಡೋಣ. ನಾಳೆಯಿಂದ ಸತ್ಯಾಗ್ರಹ ನಿಲ್ಲಿಸಬೇಕೆಂದು ಈ ಮನೆಯ ಮೂಲಕ ಅವರಿಗೆ ವಿನಂತಿ ಮಾಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಐದು ವರ್ಷಗಳ ಕಾಲ ಯಾರೂ ಪರಭಾರೆ ಮಾಡಬಾರದು ಎಂದು ಕಂಡಿಷನ್ ಹಾಕಿ ಮಾಡಿ ನಮ್ಮದೇನೂ ಅಭ್ಯಂತರವಿಲ್ಲ. ಇಲ್ಲದೆ ಹೋದರೆ ಮಧ್ಯವರ್ತಿಗಳ ಪಾಲಾಗುತ್ತದೆ.

ಶ್ರೀ ಕಟ್ಟಾ ಸುಬ್ರಹಣ್ಯ ನಾಯ್ಡು : ಆ ರೀತಿ ಕಂಡಿಷನ್ ಹಾಕಿದರೆ ಎಲ್ಲರೂ ಕೋರ್ಟಿಗೆ ಹೋಗುತ್ತಾರೆ. ನಮ್ಮ ಸ್ವತ್ತನ್ನು ನಿಷೇಧ ಮಾಡುವುದಕ್ಕೆ ನೀವ್ಯಾರು?

ಶ್ರೀ ಟಿ.ಬಿ. ಜಯಚಂದ್ರ : ಐದು ವರ್ಷ ಮಾರಬಾರದು ಎಂದು ಆ ಕಂಡಿಷನ್ ಹಾಕುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಈ ತರಹ ಮಾಡಿದರೆ ನಮ್ಮದೇನೂ ಇಲ್ಲ, ಲ್ಯಾಂಡ್ ಓನರ್ ಜೊತೆ ಸೇರಿಕೊಂಡಿದ್ದೀರಿ ಎಂದ ಹಾಗಾಯಿತು.

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಅಧ್ಯಕ್ಷರೆ, ನಿಯಮ 73ರ ಅಡಿಯಲ್ಲಿ ಸರ್ಕಾರದ ಗಮನ ಸೆಳೆಯುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗಾಗಲೇ ಮಾನ್ಯ ನರೇಂದ್ರಬಾಬುರವರು ಸಾಕಷ್ಟು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾನಾದರೂ ಹೇಳುವುದಿಷ್ಟೇ. ವಸತಿ ಯೋಜನೆಗಾಗಿ ರೈತರ ಜಮೀನುಗಳನ್ನು ನಾವು ತೆಗೆದುಕೊಳ್ಳುವುದಕ್ಕೆ ಕಾಲಮಿತಿಯನ್ನು

ಹಾಕಿಕೊಳ್ಳಬೇಕು. ಆ ಜಮೀನನ್ನು ಒಂದು ಸೀಮಿತ ಸಮಯದಲ್ಲಿ ಪಡೆದು ಕೊಳ್ಳುವಂತಹ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ, ಮಾನ್ಯ ರೇವಣ್ಣನವರು ಹೇಳಿದ ಹಾಗೆ, ಚನ್ನಪಟ್ಟಣದಂತೆ 5-10 ವರ್ಷಗಳ ನಂತರ ತೆಗೆದು ಕೊಳ್ಳುವಂತಾದ್ದು ಆಗಬಾರದು. ಬಹುಶಃ ರೈತರಿಗೂ ಇದರಿಂದ ಅನಾನುಕೂಲವಾಗುತ್ತದೆ. ಏಕೆಂದರೆ, ಒಂದು ಸಾರಿ ಹೌಸಿಂಗ್ ಬೋರ್ಡ್‌ಗೆ ಆ ಜಮೀನನ್ನು ಕೊಡುವಂತಹ ಒಪ್ಪಂದವಾದ ನಂತರ, ಆ ರೈತರಿಗೆ ಬೆಳೆ ಸಾಲ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಆ ಜಮೀನಿನಲ್ಲಿ ಯಾವುದೇ ರೀತಿಯಲ್ಲೂ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಒಂದು ಸೀಮಿತವಾದಂತಹ ಸಮಯದಲ್ಲಿ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಿದಲ್ಲಿ, ಬಹುಶಃ ರಾಜ್ಯದಲ್ಲಿ ಇವತ್ತು ಇರುವಂತಹ ವಸತಿಯ ಬೇಡಿಕೆಯನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಎರಡನೆಯದಾಗಿ, ಇವತ್ತು ಅದೇ ರೀತಿಯಲ್ಲಿ ಮಾನ್ಯ ಬಾಲಕೃಷ್ಣರವರ ಕ್ಷೇತ್ರವಾದ ಮಾಗಡಿಯಲ್ಲಿ 2004ರಲ್ಲಿ 4[1] ಮಾಡಿರುವಂತಾದ್ದು, ಇವತ್ತಿನವರೆಗೂ ಹೌಸಿಂಗ್ ಬೋರ್ಡ್‌ನವರು ಆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಆಗಿಲ್ಲ. ಇವತ್ತು ಅಲ್ಲಿ ರೈತ ಬೇರೆಯವರಿಗೆ ಮಾರಾಟವನ್ನೂ ಮಾಡುವಂತಿಲ್ಲ ಅಥವಾ ಅವರು ಅಲ್ಲಿ ವ್ಯವಸಾಯ ಮಾಡುವುದಕ್ಕೂ ಅಥವಾ ಬೆಳೆ ಸಾಲ ತೆಗೆದುಕೊಂಡು ಬೇರೆ ಏನಾದರೂ ಮಾಡಿಕೊಳ್ಳಬೇಕು ಎಂದರೂ ಸಹ, ಅದಕ್ಕೆ ಅವಕಾಶ ಆಗುತ್ತಿಲ್ಲ. ಇವತ್ತು ರಾಜ್ಯದಲ್ಲಿ ಸುಮಾರು 5 ಲಕ್ಷ ಮನೆಗಳ ಬೇಡಿಕೆ ಅರ್ಜಿಗಳು ಹೌಸಿಂಗ್ ಬೋರ್ಡ್ ಮುಂದಿದೆ. ಕಳೆದ ಅಧಿವೇಶನದಲ್ಲಿ ನಾನು ಪ್ರಶ್ನೆ ಹಾಕಿದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಂತ್ರಿಗಳಿಂದಲೇ ಈ ಉತ್ತರ ಬಂದಿದೆ. ಇವತ್ತು ಜಮೀನು ಖರೀದಿಯಲ್ಲಿ ಆಗಿರುವಂತಹ ಅವ್ಯವಹಾರ ಆಗಿರಬಹುದು, ಮತ್ತೊಂದು ಆಗಿರಬಹುದು, ಏನೇನು ವಿಚಾರಗಳನ್ನು ನಾವು ಪ್ರಸ್ತಾಪಿಸಿದ್ದೆವು, ಅದಕ್ಕೆ ಸ್ಪಷ್ಟವಾದ ಉತ್ತರ ಬಂದಿದೆ, ಇದರಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲವೆಂದು ಸರ್ಕಾರ ಸ್ಪಷ್ಟವಾಗಿ ಹೇಳಿದೆ. ಮೈಸೂರು ಜಿಲ್ಲೆಯಲ್ಲಿ ಇವತ್ತು ನಗರಾಭಿವೃದ್ಧಿ ಪ್ರಾಧಿಕಾರದ ಮುಂದೆ ಸುಮಾರು ಒಂದೂವರೆ ಲಕ್ಷ ಅರ್ಜಿಗಳು ನಿವೇಶನಕ್ಕಾಗಿ ಬೇಡಿಕೆ ಇದೆ. ಇವತ್ತು ರಾಜ್ಯದಲ್ಲಿ ಯಾರ್ಯಾರಿಗೆ ನಿವೇಶನಗಳ ಹಂಚಿಕೆ ಮಾಡಿದ್ದೀರಿ, ಅವರು ಅದನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎಂದರೆ, ಅದನ್ನು ವಾಪಸ್ ಸರ್ಕಾರ ಮುಟ್ಟುಗೋಲು ಹಾಕಿಕೊಂಡು, ಅದನ್ನು ಬೇರೆಯವರಿಗೆ, ಅವಶ್ಯಕತೆ ಇರುವವರಿಗೆ ಕೊಟ್ಟಲ್ಲಿ, ಇವತ್ತೇನು ರಿಯಲ್ ಎಸ್ಟೇಟ್ ದಂಧೆ ನಡೆಯುತ್ತಿದೆ, ಅದಕ್ಕೆ ಕಡಿವಾಣ

ಹಾಕುವುದಕ್ಕೂ ಸಾಧ್ಯವಾಗುತ್ತದೆ. ಅದೇ ರೀತಿಯಲ್ಲಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿ ಸುಮಾರು 517 ಎಕರೆ ಜಮೀನನ್ನು ಇವತ್ತೇನು ತೆಗೆದುಕೊಂಡಿದ್ದೀರಿ, ಅಲ್ಲಿ ತಕ್ಷಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ. ಸುಮಾರು 225 -ಬೇಡಿಕೆ ಸ್ಥಳಗಳನ್ನು ಗುರ್ತಿಸಿ, ಸರ್ಕಾರದ ಮುಂದೆ ಅನುಮೋದನೆಗಾಗಿ ಕಳುಹಿಸಲಾಗಿದೆ. ಅದನ್ನು ತಕ್ಷಣ ಅನುಮೋದನೆ ಮಾಡಿಕೊಡಿ. ವಸತಿ ಸಚಿವರು ಈ ಸರ್ಕಾರದಲ್ಲಿ ನಾಲ್ಕು ಜನ ಬಂದರು. ತಾವು ಈಗೇನು ಜವಾಬ್ದಾರಿ ತೆಗೆದುಕೊಂಡಿದ್ದೀರಿ, ಬಹುಶಃ ತಮ್ಮಿಂದ ಒಳ್ಳೆಯದು ಮಾಡುತ್ತೀರಿ ಎಂಬ ನಿರೀಕ್ಷೆ ಇದೆ. ತಾವು ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ. ಹಿಂದಿನ 10 ವರ್ಷಗಳಲ್ಲಿ ಇದ ಸಾಧ್ಯವಾಗಿದೆ. ಆದರೂ ಸಹ ಬೇಡಿಕೆ ಹೆಚ್ಚಾಗಿರುವುದರಿಂದ, ಇವತ್ತು ಏಷ್ಯನ್ ಗೇಮ್ಸ್ ನಡೆದ ಸಂದರ್ಭದಲ್ಲಿ ಫ್ಲಾಟ್ ನಿರ್ಮಾಣ ಮಾಡುವಂತಾದ್ದು ಆಗಲಿ ಅಥವಾ ಬೇರೆ ಮತ್ತೊಂದು ಮಾಡುವುದಾಗಲಿ, ಸಮರ್ಥ ರೀತಿಯಲ್ಲಿ ಹೌಸಿಂಗ್ ಬೋರ್ಡ್ ಕಾರ್ಯನಿರ್ವಹಿಸುತ್ತಾ ಬಂದಿದೆ.

ಅಧ್ಯಕ್ಷರು : ಬೇಗ ಮುಗಿಸಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರುವುದರಿಂದ ಮತ್ತೊಂದು ವಿಚಾರ ಇದಕ್ಕೆ ಸೇರಿಸಿ ನಾನು ಹೇಳುವಂತಾದ್ದು ಏನೆಂದರೆ, ಇವತ್ತು ಆಶ್ರಯ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ರಾಜೀವ್ ಗಾಂಧಿ ವಸತಿ ಯೋಜನೆ ಅಡಿಯಲ್ಲಿ ಹೌಸಿಂಗ್ ಬೋರ್ಡ್ ಕಛೇರಿಯಲ್ಲೇ ಆ ಕಾರ್ಯವನ್ನು ನಾವು ಮಾಡುತ್ತಿದ್ದೇವೆ. ಈ ಕಾರ್ಯವನ್ನು ಹೌಸಿಂಗ್ ಬೋರ್ಡ್ ಜೊತೆಗೆ ನಾವು ಮಾಡಿದಂತಹ ಸಂದರ್ಭದಲ್ಲಿ ವಸತಿ ನಿರ್ಮಿಸಲು ನಮಗೆ ನಗರ ಪ್ರದೇಶಗಳಲ್ಲಿ ನಿವೇಶನಗಳು ಎಲ್ಲೂ ಸಿಗುತ್ತಿಲ್ಲ. ಹೌಸಿಂಗ್ ಬೋರ್ಡ್‌ಗೆ ಈ ಜವಾಬ್ದಾರಿ ವಹಿಸಿ. ನೀವೇನು ಜಮೀನನ್ನು ತೆಗೆದುಕೊಳ್ಳುತ್ತೀರೋ, ಅದರಲ್ಲಿ ಒಂದು ಭಾಗ ಬಡವರಿಗೆ ಆಶ್ರಯ ಮನೆಗಳನ್ನು ಕಟ್ಟುವುದಕ್ಕಾಗಿ ಕೊಡಿ. ಇದರಿಂದ ಬಡವರಿಗೆ ಮನೆಗಳನ್ನು ನಿರ್ಮಿಸಿ ಕೊಡುವಂತಾದ್ದು ಸಾಧ್ಯವಾಗುತ್ತದೆ ಎನ್ನುವುದನ್ನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ನಾನು ತರಬಯಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ನರೇಂದ್ರಬಾಬು ರವರು, ತನ್ವೀರ್ ಸೇಠ್‌ರವರು ಹಾಗೂ ರೇವಣ್ಣನವರು ಈ ಒಂದು ......

ಶ್ರೀ ಸಾ.ರಾ.ಮಹೇಶ್ : ಮಾನ್ಯ ಅಧ್ಯಕ್ಷರೆ, ಚನ್ನಪಟ್ಟಣದಲ್ಲಿ 50 ಎಕರೆ ಜಮೀನು ಸ್ವಾಧೀನ ಮೂರು ವರ್ಷವಾದರೂ ಮುಗಿದಿಲ್ಲ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರತಕ್ಕಂಥ ಜಮೀನುಗಳಿಗೆ 75 ಲಕ್ಷ ರೂ.ಗಳನ್ನು ಕೊಡಬೇಕೆಂದು ಸುಪ್ರೀಂಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಆದ್ದರಿಂದ ಇನ್ನೂ ಮೈಸೂರು ಮಹಾನಗರದ ನಿವೇಶನಗಳ ರೇಟ್ ಅನ್ನು ನಿಗದಿ ಮಾಡಲಿಕ್ಕೆ ಆಗುತ್ತಿಲ್ಲ ಮೊನ್ನೆ ನೀವು ಮೈಸೂರು ಮಹಾನಗರದಲ್ಲಿ ಹೌಸಿಂಗ್ ಬೋರ್ಡ್‌ನಿಂದ ಜಮೀನನ್ನು ತೆಗೆದುಕೊಳ್ಳಬೇಕೆಂದು ರೈತರಿಂದ mutual consent ನಲ್ಲಿ ಒಪ್ಪಿಗೆ ತೆಗೆದುಕೊಂಡಿದ್ದೀರಿ, ಕೂಡಲೇ ಆ ಬಗ್ಗೆ ನಿರ್ಧಾರ ಮಾಡಿ. ಸುಪ್ರೀಂಕೋರ್ಟ್‌ನಲ್ಲಿ ಏನಾದರೂ ಹಣ ನಿಗದಿಯಾದರೆ, ಆ ರೈತರೂ ಸಹ ಆ ಭೂಮಿಯನ್ನು ನಿಮಗೆ ಕೊಡುವುದಿಲ್ಲ.

ಶ್ರೀ ಸಿ.ಪುಟ್ಟರಂಗಶೆಟ್ಟಿ : ನಮ್ಮಲ್ಲಿ 8 ವರ್ಷಗಳ ಹಿಂದೆ 100–120 ಮನೆಗಳನ್ನು ಕಟ್ಟಿಸಿಕೊಟ್ಟಿದ್ದನ್ನು ಹೊರತುಪಡಿಸಿದರೆ, ಅಲ್ಲಿ ಸೈಟನ್ನಾಗಲಿ ಅಥವಾ ಮನೆಯನ್ನಾಗಲಿ ಇದುವರೆಗೂ ಕೊಟ್ಟಿಲ್ಲ. ಹೌಸಿಂಗ್ ಬೋರ್ಡ್ ನವರು ಅಲ್ಲಿ ಯಾವುದೇ ಜಾಗವನ್ನೂ ಸಹ purchase ಮಾಡಿಲ್ಲ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಗೃಹ ಮಂಡಳಿ ಅಧ್ಯಕ್ಷರು ಮತ್ತು ಮಾನ್ಯ ವಸತಿ ಸಚಿವರು ಇಬ್ಬರೂ ಸೇರಿ ಸಭೆಯನ್ನು ಮಾಡಿ, ನಿಮಗೆಲ್ಲರಿಗೂ ಸಾವಿರಾರು ಎಕರೆ ಜಮೀನನ್ನು purchase ಮಾಡಿ, ನಿಮಗೆಲ್ಲಾ ವಸತಿ ಮತ್ತು ಮನೆಗಳನ್ನು ಕೊಡುತ್ತೇವೆಂದು ಭಾಷೆ ಕೊಟ್ಟು ಬಂದರು. ನಮ್ಮದು ತುಂಬಾ ಬಡತನದಲ್ಲಿ ಇರತಕ್ಕ ಜಿಲ್ಲಾ ಕೇಂದ್ರವಾಗಿದೆ. ದಯಮಾಡಿ ಹೆಚ್ಚಿಗೆ ಜಮೀನನ್ನು ಅಲ್ಲಿ purchase ಮಾಡಿ, ಅವರಿಗೆ ಸೈಟು ಮತ್ತು ಮನೆಗಳನ್ನು ನೀವು ಮಾಡಿಕೊಡಬೇಕು. ಅಲ್ಲಿರುವವರೆಲ್ಲಾ ಬಡವರೇ ಆಗಿರುವುದರಿಂದ, ಕೂಡಲೇ ಈ ಕೆಲಸ ಮಾಡಬೇಕು. ಅಲ್ಲಿ ಸುಮಾರು 3 ವರ್ಷಗಳ ಹಿಂದೆ 440 ಸೈಟುಗಳನ್ನು ಆಶ್ರಯ ಸಮಿತಿಗಾಗಿ ತೆಗೆದುಕೊಂಡು, ಹಮಾಲರಿಗೆ 48 ಮನೆಗಳನ್ನು ಕೊಟ್ಟಿದ್ದನ್ನು ಹೊರತು ಪಡಿಸಿದರೆ, ಇನ್ನೂ 395 ಸೈಟುಗಳು ಹಾಗೆಯೇ ಇವೆ. ನಗರಸಭೆಯಲ್ಲಿ ಸುಮಾರು 4 ಸಾವಿರ ಅರ್ಜಿಗಳು ಪೆಂಡಿಂಗ್ ಇವೆ. ಹಾಗಾಗಿ ದಯಮಾಡಿ ಗೃಹ ಮಂಡಳಿಯವರು ಈ ಕಡೆ ಗಮನ ಹರಿಸಬೇಕು. ಜಮೀನು ನಮ್ಮಲ್ಲಿ ಕಡಿಮೆ ದರದಲ್ಲಿ ಸಿಗುತ್ತದೆ, ರೈತರನ್ನು ಒಲೈಸಿ ತೆಗೆದುಕೊಂಡು, ಅಲ್ಲಿ ಸೈಟನ್ನು ಮತ್ತು ಮನೆಯನ್ನು

0.17F-101

ಕಟ್ಟಿಕೊಡುವಂತಹ ಕೆಲಸವನ್ನು ಮಾಡಿಕೊಡಬೇಕೆಂದು ಸರ್ಕಾರವನ್ನು ತಮ್ಮ ಮುಖಾಂತರ ಕೋರುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ಈ ಗೃಹ ಮಂಡಳಿ ಏನಿದೆ, ಇದಕ್ಕೆ ಹಿಂದಿನ ಕಲ್ಪನೆಯೇ ಬೇರೆ ಇತ್ತು. ಜಮೀನು ಹೋದರೆ ಇಷ್ಟೊಂದು ಆತಂಕ ಪಡುವ ಕಾಲ ಹಿಂದೆ ಇರಲಿಲ್ಲ. ಈಗೇನಾಗಿದೆ ಎಂದರೆ, ನಗರ ಅಥವಾ ಟೌನ್ ಅಥವಾ ತಾಲ್ಲೂಕು ಹೆಡ್ ಕ್ವಾರ್ಟರ್‍ಸ್‌ಗಳಲ್ಲೆಲ್ಲಾ ಜಮೀನಿಗೆ ಚಿನ್ನದ ಬೆಲೆ ಇದೆ. ಚಿನ್ನವನ್ನು ಬೇಕಾದರೆ ಕೊಂಡುಕೊಳ್ಳ ಬಹುದು, ಆದರೆ ಜಮೀನನ್ನು ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ಹಿಂದೆ ಹಳೆಯ ಕಲ್ಪನೆ ಇಟ್ಟುಕೊಂಡು, ಜಮೀನು acquire ಮಾಡಿಕೊಳ್ಳುತ್ತಾ ಹೋದರೆ, ಪಾಪ! ಆ ಜಮೀನು ಕಳೆದುಕೊಳ್ಳುವವರಿದ್ದಾರಲ್ಲಾ, ಅವರು ಬೆದರುತ್ತಾರೆ. ಸುಮ್ಮನೆ ನೋಟಿಸ್ ಕೊಟ್ಟರೆ ಸಾಕು, ಯಾರೋ ನನ್ನಂತ ಹವನು ಮೀಡಿಯೇಟರ್ ಮಧ್ಯೆ ಬಂದು, ಅವನು ಒಳ್ಳೆಯ ಬೆಲೆಗೆ ತೆಗೆದುಕೊಳ್ಳುತ್ತಾನೆ. ಮಾನ್ಯ ಕುಮಾರಸ್ವಾಮಿಯವರ ಸರ್ಕಾರದಲ್ಲಿ ಒಂದು ಕಲ್ಪನೆ ಇತ್ತು. 60%ನ್ನು acquire ಮಾಡಿದರೆ, 40% ಸೈಟನ್ನೇ ಆ ರೈತರಿಗೆ ಕೊಡಲು ತೀರ್ಮಾನವಾಗಿತ್ತು. ಸೈಟುಗಳಿಗಾಗಿ 5-10 ಸಾವಿರ ಜನ ಅರ್ಜಿ ಕೊಟ್ಟಿದ್ದಾರೆ ಎನ್ನುತ್ತೀರಿ, ಅವನನ್ನು ನಿಲ್ಲಿಸಿಕೊಳ್ಳಿ, ಅವನು ಯಾರು ಕೊಡುತ್ತಾನೆ? ನನ್ನ ಅಳಿಯನೋ, ತಹಶೀಲ್ದಾರನ ಅಳಿಯನೋ, ಉಳ್ಳವರೇ ಹೌಸಿಂಗ್ ಬೋರ್ಡ್‌ಗೆ ಸೈಟು ಕೊಡಿ, ಮನೆ ಕೊಡಿ ಎಂದು ಅರ್ಜಿ ಹಾಕಿಕೊಂಡಿರುತ್ತಾರೆ. ಈ ಜಮೀನು ಕಳೆದುಕೊಳ್ಳುವವರಿದ್ದಾರಲ್ಲಾ, ಅವರು ಪಾಪ! ಪಹಣಿ ತೆಗದುಕೊಂಡು, ಲಾಯರ್ ಹತ್ತಿರ ಹೋಗುವುದಕ್ಕೂ ಶಕ್ತಿ ಇರುವುದಿಲ್ಲ. 40% ಆದರೂ ಕೊಡಿ, 30% ಆದರೂ ಕೊಡಿ. ಮಾನ್ಯ ಸಚಿವರೆ, ನಿಮ್ಮ ಕಾಲದಲ್ಲಿ ಅದನ್ನು ಮಾಡಿ. ಜಮೀನು ಕಳೆದುಕೊಳ್ಳುವವರಿಗೆ ಒಂದಷ್ಟು ಸೈಟುಗಳನ್ನು ಹೆಚ್ಚಾಗಿಯೇ ಕೊಡಿ. ಯಾರ ಜಮೀನನ್ನು ವಶಪಡಿಸಿಕೊಳ್ಳುತ್ತೀರೋ, ಅವರ ಜಮೀನಿನಲ್ಲೇ ಅವರಿಗೆ ಸೈಟುಗಳನ್ನು ಕೊಡುವುದಕ್ಕೆ ನೀವು ಏಕೆ ಹೊಟ್ಟೆಯುರಿ ಪಟ್ಟುಕೊಳ್ಳಬೇಕು? ಅರ್ಜಿ ಕೊಡುವವರೇನು 5 ಸಾವಿರವೇನು, 50 ಸಾವಿರ ಕೊಡುತ್ತಾರೆ. ನನ್ನ ಮಗನ ಹೆಸರಿನಲ್ಲಿ ಕೊಡುತ್ತೇನೆ, ನನ್ನ ಸೊಸೆ ಹೆಸರಿನಲ್ಲಿ ಕೊಡುತ್ತೇನೆ, ನನ್ನ ಅಳಿಯ ಹೆಸರಿನಲ್ಲಿಯೂ ಕೊಡುತ್ತೇನೆ. ಖಂಡಿತವಾಗಿಯೂ, ನೀವು ಅದನ್ನು ಮಾಡಿದರೆ ನಿಮಗೆ ಒಳ್ಳೆಯದಾಗುತ್ತದೆ. ಏಕೆಂದರೆ, ಪಾಪದವರು! ಜಮೀನು

ಕಳೆದುಕೊಂಡವರು ಎಷ್ಟೋ ಜನ ಗುಡಿಸಲು ಹಾಕಿಕೊಂಡಿದ್ದಾರೆ. ಹೌಸಿಂಗ್ ಬೋರ್ಡ್‌ಗೆ ಜಮೀನು ಕೊಟ್ಟಿದ್ದಾರಲ್ಲಾ, ಅವರ ಮನೆಗಳ ಎಲ್ಲೆಲ್ಲಿವೆ ಎಂಬುದನ್ನು ಹುಡುಕಿ. ಕೆಲವು ಮಗಳ ಹೆಸರಿನಲ್ಲೊಂದು, ಅಳಿಯ ಹೆಸರಿನ ಲ್ಲೊಂದು, ಇನ್ನೊಂದು ಹೆಸರಿನಲ್ಲೊಂದು ನಾಲ್ಕು-ನಾಲ್ಕು ಸೈಟುಗಳನ್ನು ತೆಗೆದುಕೊಂಡಿರುತ್ತಾರೆ. ಪಾಪ! ಆ ಜಮೀನು ಕಳೆದುಕೊಂಡಿರುವವರಲ್ಲಿ ದಿಕ್ಕಿಲ್ಲದೆ ಎಷ್ಟೋ ಜನರದ್ದು ವಂಶವೇ ಹಾಳಾಗಿದೆ. ದಯಮಾಡಿ ಅವರ ಮೇಲೆ ಕನಿಕರ ಇಡಿ. ಮಾನ್ಯ ಮುಖ್ಯಮಂತ್ರಿಗಳು ಸದನಲ್ಲಿದ್ದರೆ. 30% ಅಥವಾ 40% ಸೈಟುಗಳನ್ನೇ ಅವರಿಗೆ ಕೊಟ್ಟರೆ, ಅದು ಅವರಿಗೊಂದು asset ಆಗಿ ಉಳಿಯುತ್ತದೆ. ಅವರ ಮನೆಗೆ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ನೆ.ಲ. ನರೇಂದ್ರ ಬಾಬು : ಮಾನ್ಯ ಅಧ್ಯಕ್ಷರೆ, ನಾನು ಜಮೀನು ತೆಗೆದುಕೊಳ್ಳಬೇಡಿ ಎಂದೇನೂ ಹೇಳಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಒಂದನ್ನು ಹೇಳಿದರು. ನಾನು ಹೇಳುವುದೇನೆಂದರೆ, ಫಲವತ್ತಾದ ಭೂಮಿಯನ್ನು ತೆಗೆದುಕೊಳ್ಳದೆ,.....

ಅಧ್ಯಕ್ಷರು : ನೀವು ಈಗಾಗಲೇ ಮಾತನಾಡಿ ಎಲ್ಲವನ್ನೂ ಹೇಳಿದ್ದೀರಿ. ಮತ್ತೆ ಮತ್ತೆ ಅದನ್ನೇ repeat ಮಾಡಬೇಡಿ.

ಶ್ರೀ ನೆ.ಲ.ನರೇಂದ್ರ ಬಾಬು : ಮಾನ್ಯ ಅಧ್ಯಕ್ಷರೆ, ಮಳೆಯ ಆಶ್ರಯದಲ್ಲಿ ಇರತಕ್ಕ ಜಮೀನನ್ನು ನೇರವಾಗಿ ಕೊಂಡುಕೊಳ್ಳಲಿ. ಇದರಲ್ಲಿ ಮಧ್ಯವರ್ತಿಗಳಿಗೆ ಅವಕಾಶ ಕೊಡಬೇಡಿ. ಹಿಂದೆ ಬಿಡಿಎ ನವರು 70 : 30 ಎಂದು ಮಾಡಿದ್ದರು. ಆ ರೀತಿ ಮಾಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಕೊಡುವಾಗ ಅವರಿಗೆ ಇಂತಿಷ್ಟು ಪರ್ಸಂಟೇಜ್ ಸೈಟನ್ನೇ ಕೊಟ್ಟುಬಿಡಿ. ಅವರಿಗೆ ಅನುಕೂಲವಾಗುತ್ತದೆ. ಸುಮ್ಮನೆ ಅದೊಂದು ನೆಪ ಹೇಳಿ, ನನ್ನದಾದರೆ ಫಲವತ್ತಾದುದು, ಬಡವರಾದ್ದರೆ ಫಲವತ್ತಾದುದಲ್ಲ ಎಂದು ಹೇಳುತ್ತಾರೆ.

ಶ್ರೀ ಕಟ್ಟಾ ಸುಬ್ರಹಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ನರೇಂದ್ರ ಬಾಬುರವರು ಕೆಲವು ಪ್ರಶ್ನೆಗಳನ್ನು ಇಲ್ಲಿ ಕೇಳಿದ್ದಾರೆ. Discretionary quota ದಲ್ಲಿ ಇಡೀ ರಾಜ್ಯಾದ್ಯಂತ ಮನೆಗಳೆಲ್ಲಾ ಪಾಳು ಬೀಳುತ್ತಿವೆ, ಅಲ್ಲಿ ಯಾರಿಗೂ ಅಧಿಕಾರ ಕೊಡುವುದಿಲ್ಲ, ನೀವೂ ಹಂಚುವುದಿಲ್ಲ, ಏಕೆ ಈ discretionary quota ವನ್ನು ಇಟ್ಟುಕೊಂಡಿದ್ದೀರಿ ಎಂದು ಹೇಳಿದರು.

ಮಾನ್ಯ ಮುಖ್ಯಮಂತ್ರಿಗಳು ಬೇಗನೇ ಇದನ್ನು ಎಲ್ಲರಿಗೂ ಹಂಚಿ ಎಂದು ಹೇಳಿದ್ದಾರೆ. ಮುಂಬರುವ ಎರಡು ತಿಂಗಳುಗಳಲ್ಲಿ ಎಷ್ಟು ಬೇಡಿಕೆ ಬರುತ್ತದೋ, ಅದಕ್ಕನುಗುಣವಾಗಿ ಹಂಚಲಿಕ್ಕೆ ತಯಾರಾಗಿದ್ದೇವೆ. ಅದರಲ್ಲಿ ಹಿಂದೆ ಸರಿಯುವುದಿಲ್ಲ. ಎರಡನೆಯದಾಗಿ, ತಾವು ಟೌನ್ ಶಿಪ್ ಮಾಡಬೇಕು, 5 ಲಕ್ಷ ಮನೆಗಳ ನಿರ್ಮಾಣ ಮಾಡಬೇಕು ಎಂದು ಹೇಳಿದಿರಿ. ಹೌದು, ಮಾಡಬೇಕು. ಆದರೆ ಒಂದು ಕಡೆ ಪರ, ಇನ್ನೊಂದು ಕಡೆ ವಿರೋಧ ಆದರೆ, ಪ್ರಗತಿ ಹೇಗೆ ಆಗುತ್ತದೆ? ಪರ–ವಿರೋಧಗಳ ನಡುವೆ ಕೆಲಸ ಮಾಡುವುದು ಕಷ್ಟವಾಗುತ್ತದೆ. ಒಂದು ಕಡೆ ಜಮೀನು ತೆಗೆದುಕೊಳ್ಳಿ ಎನ್ನುತ್ತಾರೆ, ಇನ್ನೊಂದು ಕಡೆ ತೆಗೆದುಕೊಳ್ಳಬಾರದು ಎಂದು ವಿರೋಧ ಮತ್ತು ಪ್ರತಿಭಟನೆಗಳನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಹೇಗೆ ಪ್ರಗತಿ ಸಾಧನೆ ಮಾಡುವುದು? ಎಂದು ತೀರ್ಮಾನ ಮಾಡುವುದು ಒಳ್ಳೆಯದು. ರೈತರಿಗೆ ತೊಂದರೆ ಮಾಡಿ, ಜಮೀನು ತೆಗೆದುಕೊಳ್ಳಬೇಕು ಎನ್ನುವಂತಹ ಉದ್ದೇಶ ಸರ್ಕಾರಕ್ಕಿಲ್ಲ. ಅದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತು ಮಾನ್ಯ ಸಾ.ರಾ.ಮಹೇಶ್‌ರವರು ನಾವು ಜಮೀನು ಕೊಡುವುದಕ್ಕೆ ತಯಾರಿದ್ದೇವೆಂದು ಹೇಳಿದರು. ಅಂತಹ ಕಡೆ ಜಮೀನು ತೆಗೆದುಕೊಳ್ಳುವುದಕ್ಕೆ ನಾವೇನೂ ಹಿಂದೇಟು ಹಾಕುವುದಿಲ್ಲ. ಅಲ್ಲಿ ಸಮಸ್ಯೆ ಬರುವುದು, ಬೆಲೆ ಏಕೆ ಇಷ್ಟು ಕೊಟ್ಟಿರಿ? ಅದು ಯಾವ ಮಧ್ಯವರ್ತಿಗಳ ಪಾಲಾಯಿತು? ಸರ್ಕಾರ ಕೆಲವೊಂದು ತೀರ್ಮಾನಗಳನ್ನು ತೆಗೆದುಕೊಂಡಾಗ, ತೀರಾ ತಪ್ಪು ಎನಿಸಿದಾಗ ತಾವು ಕೇಳಬೇಕು. ಬೇರೆ ಸಮಯದಲ್ಲಿ ಎಲ್ಲದಕ್ಕೂ ಕೂಡ ನಾವು ಆತಂಕಗಳನ್ನು ಮಾಡಿಕೊಂಡು ಹೋದರೆ 5 ಲಕ್ಷ ಮನೆಗಳನ್ನೂ ಕಟ್ಟುವುದಕ್ಕಾಗುವುದಿಲ್ಲ, 5 ಸಾವಿರ ಮನೆಗಳನ್ನೂ ಸಹ ಕಟ್ಟುವುದಕ್ಕಾಗು ವುದಿಲ್ಲ. ಹಾಗಾಗಿ ದಯವಿಟ್ಟು ಇದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರರು ಎಲ್ಲರೂ ಕೂಡ ಸಹಕರಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ನಾನು ಬೇರೆ ಇನ್ನೇನೂ ಕೇಳುತ್ತಿಲ್ಲ, ಕೇವಲ ವಿನಂತಿ ಮಾತ್ರ ಮಾಡುತ್ತಿದ್ದೇನೆ. ಎರಡನೆಯದಾಗಿ, ನಗರ ವಸತಿ. ಯೋಜನೆಯಲ್ಲಿ ಮನೆಗಳನ್ನು ಈಗ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಗೆ ನೀಡಿರುವಂತೆ 1 ಲಕ್ಷ 25 ಸಾವಿರ ರೂ.ಗಳ ವೆಚ್ಚದಲ್ಲಿ ಕಟ್ಟುತ್ತೇವೆ. 50 ಸಾವಿರ ರೂ. ಸರ್ಕಾರ ದಿಂದ ಅನುದಾನ ಬರುತ್ತದೆ, 25 ಸಾವಿರ ರೂ.ಗಳಿಂದ 30 ಸಾವಿರ ರೂ.ಗಳನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ.

ಎರಡನೆಯದು ನಗರ ವಸತಿ ಯೋಜನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು 1,25,000 ರೂಪಾಯಿ ವೆಚ್ಚದ ಮನೆಗಳಿಗೆ 50,000 ರೂಪಾಯಿ ಸರ್ಕಾರದಿಂದ ಅನುದಾನ ಬರುತ್ತದೆ, ಅದರಲ್ಲಿ 25,000 ದಿಂದ 30,000 ರೂಪಾಯಿಗಳನ್ನು ಫಲಾನುಭವಿಗಳು ಹಾಕಬೇಕು, 50,000 ರೂಪಾಯಿಗಳನ್ನು seir help group ಮುಖಾಂತರ ಮಾಡಬೇಕು. ಪ್ರಥಮ ಹಂತದಲ್ಲಿ ನಗರ ಪ್ರದೇಶಗಳಲ್ಲಿ ಬಹುತೇಕ ವರ್ಷಗಳಿಂದ ಇರುವ ಬೇಡಿಕೆಯನ್ನು ಪೂರೈಸಬೇಕು ಎನ್ನುವ ವಿಚಾರವನ್ನು ಹೇಳಿದ್ದಾರೆ, ಅದನ್ನು ಬಜೆಟ್‌ನಲ್ಲಿ ಕೂಡ ಪ್ರಸ್ತಾವನೆಯನ್ನು ಮಾಡಿದ್ದಾರೆ. ಹಾಗಾಗಿ ಇದು ಒಂದು ಲಕ್ಷ ಮನೆಗಳು ಅಲ್ಲದೆ ಜಾಸ್ತಿ ಕಟ್ಟಿದರೂ ನಾನ್ನು ಕೊಡುತ್ತೇನೆಂದು ಹೇಳಿದ್ದಾರೆ, ಹಾಗಾಗಿ ನಗರ ಪ್ರದೇಶಲ್ಲಿರುವವರಿಗೆ ಶಾಸಕರು self help group ನಲ್ಲಿ ಫಲಾನುಭವಿಗಳನ್ನು ಗುರುತಿಸಿದರೆ, ಬ್ಯಾಂಕುಗಳು ಸಾಲ ಕೊಡುವುದಕ್ಕೆ ತಯಾರಿದ್ದಾರೆ. ಜನರದು ಸ್ವಂತ ಜಾಗ ಇದ್ದರೆ ಅದರಲ್ಲಿ ಕಟ್ಟಿ ಕೊಡುವುದಕ್ಕೂ ತಯಾರಿದ್ದೇವೆ. ಇಲ್ಲವೆಂದರೆ ಸರ್ಕಾರಿ ಜಾಗವನ್ನು ತಾವು ಕೊಟ್ಟರೆ ಆ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಡುವುದಕ್ಕೆ ತಯಾರಿದ್ದೇವೆ. 20X30 ಸೈಟ್‌ನಲ್ಲಿ, 1,25,000 ರೂಪಾಯಿಗೆ 285 ಚದರ ಅಡಿ ಎಂದರೆ ಇದರ ಅಂದಾಜು ಮಾರುಕಟ್ಟೆ ಬೆಲೆಯನ್ನು ತಾವೇ ಅರ್ಥ ಮಾಡಿಕೊಳ್ಳಿ. ಸುಮಾರು ಮೂರರಿಂದ ನಾಲ್ಕು ಲಕ್ಷ ರೂಪಾಯಿ ಬೆಲೆ ಬಾಳುವಂತಹ ಮನೆಯನ್ನು ಬಡವರಿಗಾಗಿ 1,25,000 ರೂಪಾಯಿಯಲ್ಲಿ ಕಟ್ಟಿಕೊಡುವಂತಹ ಯೋಜನೆಯನ್ನು ಮಾನ್ಯ ನರೇಂದ್ರಬಾಬುರವರೇ ಜಾರಿಗೆ ತಂದಿದ್ದೇವೆ. ಮತ್ತೊಂದು ವಿಚಾರವೇನೆಂದರೆ ಗುಡಿಸಲು ಮುಕ್ತ ರಾಜ್ಯ ಮಾಡಬೇಕೆಂದು ಇದೆ, ಹೌದು ಇದು ಮಾನ್ಯ ಮುಖ್ಯಮಂತ್ರಿಗಳ ಕನಸು, ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡಬೇಕೆಂದು ಆಸೆ ಇದೆ. ಅವರು ಈ ವರ್ಷದ ಬಜೆಟ್‌ನಲ್ಲಿ 40 ಸಾವಿರ ರೂಪಾಯಿ ಇಷ್ಟು ವರ್ಷ ಕೊಡುತ್ತಿದ್ದೆವು. ಇಂದಿರಾ ಅವಾಜ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿದ 26,600 ರೂಪಾಯಿ ಬರುತ್ತಿತ್ತು. ಅದಕ್ಕೆ ನಾವು 13,400 ರೂಪಾಯಿ ಹಾಕಿ 40,000 ರೂಪಾಯಿ ಮನೆಯನ್ನು ಕಟ್ಟುತ್ತಿದ್ದೇವೆ. ಅದು ಸಣ್ಣ ಮನೆಯಾಗಿದೆ. ಅದು ಸಾಲುವುದಿಲ್ಲ, ಬಡವರು ವಾಸ ಮಾಡುವುದಕ್ಕೆ ಯೋಗ್ಯವಿಲ್ಲ. ಕನಿಷ್ಠ 200 ಚದರ ಅಡಿಗಿಂತಲೂ ಮೇಲೆ ಕಟ್ಟಬೇಕೆಂದು ಅವರ ಕನಸಿದೆ. ಅವರ ಕನಸಿನಂತೆ 1,50,000 ಮನೆಗಳನ್ನು ಗ್ರಾಮೀಣ ಪ್ರದೇಶದಲ್ಲಿರುವವರಿಗೆ ಕೊಡಬೇಕೆಂದು

ಏನಿದೆ ಅದರ ಪ್ರಕಾರ ಹಂತಹಂತವಾಗಿ ಪ್ರಥಮ ಹಂತದಲ್ಲಿ ಎಲ್ಲಾ ವಿಧಾನಸಭಾ ಕ್ಷೇತ್ರಕ್ಕೆ ಸಮಾನವಾಗಿ ನಾವು ಹಂಚುತ್ತೇವೆ. ಇದನ್ನು ಆರೇಳು ತಿಂಗಳಲ್ಲಿ ಮುಗಿಸಬೇಕೆನ್ನುವ ಕಲ್ಪನೆಯನ್ನು ಇಟ್ಟುಕೊಂಡಿದ್ದೇವೆ. ಇದಕ್ಕೆ ತಾವು ಸಹಕರಿಸಬೇಕೆನ್ನುವುದು ಎರಡನೆಯ ವಿನಂತಿ. ಮೂರನೆಯದು ನನ್ನ ಮನೆ ಯೋಜನೆ. ನಗರದಲ್ಲಿರುವವರಿಗೆ ಅಂದರೆ ತರಕಾರಿ ಮಾರುವವರಿಗೆ, ಆಟೋರಿಕ್ಷಾ ಚಾಲಕರಿಗೆ, ಕ್ಲಾಸ್-4 ನೌಕರರಿಗೆ ಇವರಿಗೆಲ್ಲರಿಗೂ ಕೂಡ ಮನೆಗಳನ್ನು ಕಡಿಮೆ ದರದಲ್ಲಿ ಎಂದರೆ 3,60,000 ದಿಂದ 5,00,000 ರೂಪಾಯಿಯೊಳಗೆ ಮನೆಗಳನ್ನು ನಿರ್ಮಿಸಿ ಕೊಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ನನ್ನ ಮನೆ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಈ ಯೋಜನೆಯಲ್ಲಿ ಎಲ್ಲಾ ನಗರ ಪ್ರದೇಶದಲ್ಲಿ ಕೂಡ ಕಡಿಮೆ ದರದಲ್ಲಿ ನಾವು ಮನೆಗಳನ್ನು ನಿರ್ಮಾಣ ಮಾಡುವ ಕೆಲಸವನ್ನು ಈಗಾಗಲೇ ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ model house ಪ್ರಾರಂಭ ಮಾಡಿದ್ದೇವೆ. ಇದರಲ್ಲಿ ಕೂಡ ನಾವು ಹಿಂದೆ ಬೀಳುವುದಿಲ್ಲ. ಈ ಒಂದು ಯೋಜನೆ self financing 3,60,000 ರೂಪಾಯಿಗೆ 325 ಚದರ ಅಡಿಗೆ ಒಂದು ಮನೆ ಕಟ್ಟಿಕೊಡುತ್ತೇವೆ, ಅದಕ್ಕೆ ಅವರೇ ದುಡ್ಡು ಕಟ್ಟಬೇಕು ಇನ್ನು ಜಾಸ್ತಿ ಬೇಕಾದರೆ ಅವರಿಗೆ ಅನುಗುಣವಾಗಿ ಎ,ಬಿ,ಸಿ,ಡಿ ಎಂದು ಮಾಡುತ್ತೇವೆ. ಇದಕ್ಕೆ ಬೇಡಿಕೆ ಎಷ್ಟು ಬರುತ್ತದೆ ಎಂದರೆ ಮಾನ್ಯ ಜಯಚಂದ್ರರವರೇ, ತಮ್ಮ ಹತ್ತಿರ ರೆಕಮೆಂಡೇಷನ್‌ಗೆ ಬರುತ್ತಾರೆ, ತಮ್ಮಿಂದ ಸಿಕ್ಕಾಪಟ್ಟೆ demand ಬರುತ್ತದೆ. ಇದಾದ ಮೇಲೆ Chief Secretary ಯವರ ವರದಿ ಬಗ್ಗೆ ತಾವು ಹೇಳಿದಿರಿ. ಅವರ ಜೊತೆ ನಾವು ಸಧ್ಯದಲ್ಲಿ ಮಾತನಾಡಿದ್ದೇವೆ. ಅವರು ಸ್ಥಳ ಕೂಡ ಪರಿಶೀಲನೆ ಮಾಡಿದ್ದಾರೆ. ಅವರು ಸಧ್ಯದಲ್ಲಿ ರಿಪೋರ್ಟ್ ಕೊಡುತ್ತೇನೆಂದು......

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ನಮ್ಮ ಮನೆ Central Government Scheme ಅಲ್ಲವೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅಲ್ಲ, ನಮ್ಮ ಮನೆ ಬೇರೆ. ಅದನ್ನು ನಾನು ಹೇಳಲಿಲ್ಲ. ನಾನು ಅದರ ವಿಚಾರಕ್ಕೂ ಬರುತ್ತೇನೆ. ನಮ್ಮ ಮನೆ ಯೋಜನೆಯಲ್ಲಿ ಕೇಂದ್ರ ಸರ್ಕಾರ 3% ಬಡ್ಡಿಯಲ್ಲಿ ಒಂದು ಲಕ್ಷ ಮನೆಗಳನ್ನು ನಮ್ಮ ರಾಜ್ಯಕ್ಕೆ ಈ ವರ್ಷ ಕೊಟ್ಟಿದೆ. ಅದರಲ್ಲಿ ನಗರ ಪ್ರದೇಶದಲ್ಲಿರುವವರಿಗೆ 5% ಸಬ್ಸಿಡಿಯಲ್ಲಿ ಹುಡ್ಕೋ ಮುಖಾಂತರ ಕೊಡುತ್ತಾರೆ. ಅದು ಕೇಂದ್ರ

ಸರ್ಕಾರದಿಂದ ಒಂದು ಲಕ್ಷ ಮನೆಗಳನ್ನು ಕೊಡುವಂತಹ ಸ್ಕೀಮ್. ನಮ್ಮದು ನಗರ ವಸತಿಯಲ್ಲಿ ಒಂದು ಲಕ್ಷ ಮನೆಗಳು ಮತ್ತು ಗ್ರಾಮೀಣ ವಸತಿಯಲ್ಲಿ ಒಂದೂವರೆ ಲಕ್ಷ ಮನೆಗಳನ್ನು ಕೊಡುವಂತಹ ಸ್ಕೀಮ್ ಆಗಿದೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಎರಡು ಸರ್ಕಾರಗಳು ಮಾಡುವುದಿದೆ. ಇದರಲ್ಲಿ ಮುಚ್ಚುಮರೆ ಮಾಡುವುದು ಏನಿಲ್ಲ. ಇದು ನಮ್ಮ ಮನೆ, ಇನ್ನೊಂದು ನನ್ನ ಮನೆ, ಅಷ್ಟೇ ವ್ಯತ್ಯಾಸ.

ಶ್ರೀ ಸಿದ್ದರಾಮಯ್ಯ : ನೀವು ಉತ್ತರ ಮುಗಿಸಿದ್ದೀರಲ್ಲವೇ? ನಿಮ್ಮ ಉತ್ತರ complete ಆಗಿಲ್ಲವಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಎಲ್ಲರೂ ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಉತ್ತರ ಕೊಡಬೇಕಲ್ಲ.

ಶ್ರೀ ಸಿದ್ದರಾಮಯ್ಯ : ಸರ್ಕಾರ ಇರುವುದೇ ಅದಕ್ಕೋಸ್ಕರ. Assembly ಕರೆಯುವುದು ಏಕೆ? ನಿಮ್ಮ ಉತ್ತರ ಮುಗಿಯಿತೇ ಇಲ್ಲವೇ ಎಂದು ಕೇಳಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : Complete ಮಾಡಲೇ? ಎಲ್ಲರಿಗೂ ಉತ್ತರ ಕೊಡುತ್ತೇನೆ. ಇನ್ನು ಉತ್ತರ ಮುಗಿದಿಲ್ಲ.

ಶ್ರೀ ಸಿದ್ದರಾಮಯ್ಯ : ಆಯಿತು, ಉತ್ತರ ಹೇಳಿ. ಸರ್ಕಾರ ಇರುವುದು ಉತ್ತರ ಕೊಡುವುದಕ್ಕೆ ಅಲ್ಲವೇ?

ಶ್ರೀ ಕಟ್ಟಾ ಸುಬ್ರಮ್ಮಣ್ಯ : ಹೌದು ಸಾರ್, ತಾವು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಕೊಡುತ್ತಿದ್ದೇನೆ. Chief Secretary ವರದಿ ಸಧ್ಯದಲ್ಲಿ ಬರುತ್ತದೆ. ಅದಾದ ಕೂಡಲೇ ನೇರವಾಗಿ ಭೂಮಿಯನ್ನು ಖರೀದಿ ಮಾಡುವ ವ್ಯವಸ್ಥೆಗೆ ನಾವು ಮತ್ತೇ ಚಾಲನೆ ಕೊಡುತ್ತೇವೆ. ದಲ್ಲಾಳಿಗಳಿಗೆ ಅವಕಾಶ ಕೊಡುವುದಿಲ್ಲ. ನಮ್ಮ ಗಮನಕ್ಕೆ ಬಂದರೆ ಅವರಿಗೆ ನೇರವಾಗಿ ಯಾವ ಶಿಕ್ಷೆ ಆಗಬೇಕು ಅದನ್ನು ಮಾಡುವುದಕ್ಕೆ ತಯಾರಾಗಿದ್ದೇವೆ. ಸರ್ಕಾರ ಪಾರದರ್ಶಕವಾಗಿ ಕೆಲಸವನ್ನು ಮಾಡುತ್ತದೆ. ಒಟ್ಟು 5,00,000 ಮನೆಗಳನ್ನು ಕಟ್ಟಬೇಕಾದರೆ ಅದರ ಬಗ್ಗೆ ನಾನು ಕುಳಿತುಕೊಂಡು ಲೆಕ್ಕ ಹಾಕಿದ ಅಂದಾಜಿನ ಪ್ರಕಾರ ಇಡೀ ರಾಜ್ಯದಲ್ಲಿ ಅದಕ್ಕೆ 3,333 ಎಕರೆ ಜಮೀನು ಬೇಕು. ಅದಕ್ಕೆ ಎಲ್ಲರ ಸಹಕಾರ ಬೇಕಾಗಿದೆ. ಮಾನ್ಯ ತನ್ವೀರ್ ಸೇಠ್‌ರವರು acquisition proceedingsಗೆ ತುಂಬ ಸಮಯವಾಗುತ್ತದೆ ಎಂದು ಹೇಳಿದಿರಿ. ನೇರವಾಗಿ ಖರೀದಿ ಮಾಡಿದರೆ ಬೇಗವಾಗುತ್ತದೆ, ಆದರೆ

acquisition proceedings ಅನ್ನು ನಾವು ಕಾನೂನಿಗೆ ಅನುಗುಣವಾಗಿ ಮಾಡಬೇಕಾಗುತ್ತದೆ. ಇದಕ್ಕೆ Revenue Department 6(1) ಗೆ ಅನುಮತಿ ಕೊಡಬೇಕು, Finance Department ಗೆ ಹೋಗಬೇಕು ಅದು ಕ್ಯಾಬಿನೆಟ್‌ಗೆ ಬರಬೇಕು, ನಂತರ ನಮ್ಮಿಂದ 4(1) 5(1) ನೋಟಿಫಿಕೇಷನ್ ಆಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು request ಮಾಡಿಕೊಂಡಿದ್ದೇವೆ, KIADB ನಲ್ಲಿ ಯಾವ ರೀತಿ ಮಾಡುತ್ತಿದ್ದಾರೆ ಅದೇ ರೀತಿ ತೆಗೆದುಕೊಂಡು ಬನ್ನಿ, ಇಲ್ಲದಿದ್ದರೆ ಈ ಸ್ಕೀಮ್ ಅನ್ನು ತ್ವರಿತಗತಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗು ವುದಿಲ್ಲ ಎಂದು ಹೇಳಿದ್ದೇವೆ. ಅವರು ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ, ನಾವು ಅದನ್ನು ಮಾಡುತ್ತೇವೆ. ಮಾಗಡಿಯ ವಿಚಾರದಲ್ಲಿ ತಾವು ಹೇಳಿದಿರಿ. ಮಾಗಡಿಯಲ್ಲಿ ಈಗ ಮಾಡಿದ್ದು ಅಲ್ಲ. ಅದು main road ನಿಂದ ನಾಲ್ಕು ಕಿಲೋಮೀಟರ್ ಒಳಗಡೆ ಇದೆ. ಅಲ್ಲಿ ನೀರಿಲ್ಲ. ಅಲ್ಲಿ ಯಾರೂ ಹೋಗುವುದಿಲ್ಲ. ಜಮೀನು aquire ಮಾಡಿ ಬಿಟ್ಟಿದ್ದಾರೆ. ನಾನು ಹೋಗಿ ನೋಡಿದೆ. ಈ ಜಮೀನು ತೆಗೆದುಕೊಂಡರೆ ಜನ ಇಲ್ಲಿಗೆ ಬರುವವರು ಯಾರು ಎಂದು ಅದನ್ನು ಸ್ಥಗಿತ ಮಾಡಿದ್ದೇವೆ. ಏನು ಮಾಡಬೇಕೆಂದು ದಿಕ್ಕು ತೋಚುತ್ತಿಲ್ಲ. ಅಲ್ಲಿ ಬಿಟ್ಟರೆ ದುಡ್ಡು ತೆಗೆದುಕೊಂಡು ಬಿಟ್ಟಿದ್ದಾರೆಂದು ಹೇಳುತ್ತಾರೆ. ಬಿಡದಿದ್ದರೆ ರೈತರಿಗೆ ಅನ್ಯಾಯವಾಗುತ್ತದೆ. ಈ ಸಂದಿಗ್ಧದಲ್ಲಿ ನಾವಿದ್ದೇವೆ. ನಾನು ಮೈಸೂರಿನ ವಸತಿ ಬಗ್ಗೆ, ಆಶ್ರಯ ವಸತಿ ಬಗ್ಗೆ ನಾನು ಎಲ್ಲಾ ಸದಸ್ಯರಿಗೆ detail ಆಗಿ ಹೇಳಿದ್ದೇನೆ. ನಮ್ಮ ಮನೆ, ನನ್ನ ಮನೆ ಮತ್ತು ಗ್ರಾಮೀಣ ವಸತಿ ಯೋಜನೆ ಇದೆ. ಗ್ರಾಮೀಣ ವಸತಿಗೆ ಈ ಬಾರಿ ಇಂದಿರಾ ಅವಾಜ್ ಯೋಜನೆ ಜೊತೆಯಲ್ಲಿ ಬಸವ ವಸತಿ ಇಂದಿರಾ ಅವಾಜ್ ಯೋಜನೆ ಎಂದು ಹೆಸರಿಟ್ಟಿದ್ದೇವೆ. ಏಕೆಂದರೆ ನಮ್ಮ ಸರ್ಕಾರದಿಂದ ಹೆಚ್ಚು ದುಡ್ಡನ್ನು ಹಾಕುತ್ತಿರುವುದರಿಂದ ಆ ಗ್ರಾಮೀಣ ಪ್ರಾಂತ್ಯದಲ್ಲಿ ಮನೆ......

ಶ್ರೀ ಸಿದ್ಧರಾಮಯ್ಯ : ಇಂದಿರಾ ಅವಾಜ್ ವಸತಿ ಯೋಜನೆ ಎಂದು ಇರುವುದನ್ನು ಏಕೆ ತಿರುಚುವುದಕ್ಕೆ ಹೊರಟಿದ್ದೀರಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ತಿರುಚಲಿಲ್ಲ, ಮೊದಲು ಇಂದಿರಾ ಹೆಸರು ಹೇಳೋಣ, ಆಮೇಲೆ ಬಸವ ವಸತಿ ಎಂದು ಹೇಳೋಣ.

ಶ್ರೀ ಸಿದ್ದರಾಮಯ್ಯ : ನೀವು ಬೇರೆ ಬೇರೆ ಹೆಸರನ್ನು ಇಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅಷ್ಟೇ contribution ಇವರ ದುಡ್ಡು ಇದೆ.

ಶ್ರೀ ಸಿದ್ದರಾಮಯ್ಯ : ಇದು ಕೇಂದ್ರ ಸರ್ಕಾರದ ಕಾರ್ಯಕ್ರಮ, Centrally sponsored programme.

ಶ್ರೀ ಕಟ್ಟಾ ಸುಬ್ರಹಣ್ಯ ನಾಯ್ಡು : No, not at all. 36,000 by us, 34,000…..

ಶ್ರೀ ಸಿದ್ದರಾಮಯ್ಯ : ಅದನ್ನೇ ನಾನು ಹೇಳುತ್ತಿರುವುದು, Centrally sponsored scheme ಎಂದರೆ ಅದೇ ಅರ್ಥ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅದು ಹೇಗೆ? ನಮ್ಮದು ಭಾಗ ಇದೆ ಅಲ್ಲವೇ?

ಶ್ರೀ ಸಿದ್ದರಾಮಯ್ಯ : ಹಾಗಾದರೆ ಹೆಸರು change ಮಾಡುತ್ತೀರಾ?

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು: ಹೌದು ಮಾಡಬೇಕಾಗುತ್ತದೆ. ಅದರಲ್ಲಿ ತಪ್ಪೇನಿದೆ?

ಶ್ರೀ ಸಿದ್ದರಾಮಯ್ಯ : ಅದೇಕೆ? ಅದರ ಹಿಂದೆ ಏಕೆ ಮಾಡಲಿಲ್ಲ? ಈಗ ಏಕೆ ಮಾಡುತ್ತೀರಿ?

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ದುಡ್ಡು ಜಾಸ್ತಿ ಮಾಡಿದ್ದೀವಿ, ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಅವರ ದುಡ್ಡೇ ಬೇಡ, ನೀವೇ ಮಾಡಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅದು ಮಾಡುತ್ತಿದ್ದೇವಲ್ಲ...

ಶ್ರೀ ಸಿದ್ದರಾಮಯ್ಯ : ನಿಮ್ಮದು ದುಡ್ಡು ಜಾಸ್ತಿ ಇದೆ ಎಂದು ಮಾಡುತ್ತಿದ್ದೀರಾ?

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ವಾಜಿಪೇಯಿ ನಗರ ವಸತಿ ಯೋಜನೆಗೆ 1,25,000 ಮಾಡಿದ್ದೇವಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಅದೇನೋ ಬೇರೆ ಮಾಡುತ್ತೇವೆಂದು ಹೇಳಿದಿರಲ್ಲ ಮಾಡಿ.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ಆಯಿತು, ತಮ್ಮ ಸಲಹೆ ಬಗ್ಗೆ ಯೋಚನೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : ತಾವು ಚೇಂಜ್ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ಆಯಿತು ಸರ್, ಆದಾದಮೇಲೆ ಮೈಸೂರಿನಲ್ಲಿ ಎಂದರೆ ತಮ್ಮ ಊರಿನಲ್ಲಿ, ಈಗ ತಾವು ಅಲ್ಲಿಯೇ ಇದ್ದೀರಿ.

ಅಲ್ಲಿಂದ ಆರಿಸಿ ಬಂದಿರುವವರು ಈಗ 1,50,000 ಲಕ್ಷ ಸೈಟುಗಳ ಬೇಡಿಕೆ ಇದೆ ಎಂದು ಹೇಳಿದರು. ಅದಕ್ಕೆ ನಮಗೆ ಏನೂ ಅಭ್ಯಂತರವಿಲ್ಲ. ನಮಗೆ ಜಮೀನು ಕೊಡುವುದಾದರೆ ಜಮೀನು ತೆಗೆದುಕೊಂಡು ಕೆಲಸ ಮಾಡುವುದಕ್ಕೆ ನಾವು ತಯಾರಿದ್ದೇವೆ.

ಶ್ರೀ ಸಿದ್ದರಾಮಯ್ಯ : ಮೈಸೂರಿನಲ್ಲಿ ರೈತರು ಜಮೀನನ್ನು ಕೊಡುವುದಕ್ಕೆ ಮುಂದೆ ಬಂದರೆ ತೆಗೆದುಕೊಳ್ಳಿ ಮತ್ತು ನೇರವಾಗಿ ಅವರ ಹತ್ತಿರ ವ್ಯಾಪಾರ ಮಾಡಿ ತೆಗೆದುಕೊಳ್ಳಬೇಕು. ಇಲ್ಲದೆ ಹೋದರೆ ಮಧ್ಯವರ್ತಿಗಳ ಹಾವಳಿ ಜಾಸ್ತಿಯಾಗಿಬಿಟ್ಟಿದೆ. ನನಗೆ ಗೊತ್ತಿರುವ ಮಟ್ಟಿಗೆ ಹೌಸಿಂಗ್ ಬೋರ್ಡ್‌ನಲ್ಲೆಲ್ಲಾ 36,50,000 ರೂಪಾಯಿಗೆ ವ್ಯಾಪಾರ ಮಾಡಿರುವುದು. ನಾವು ನೀವು ಬೇಕಾದರೆ ರೈತರ ಹತ್ತಿರ ಹೋಗೋಣ. ಅಲ್ಲಿ ರೈತರಿಗೆ ಎಷ್ಟು ಹಣ ಬಂದಿದೆ ಎಂದು ಕೇಳೋಣ. ಆದರೆ ಅಲ್ಲಿ ರೈತರಿಗೆ ಹಣ ಸರಿಯಾಗಿ ಸಿಕ್ಕಿಲ್ಲ. ಮಧ್ಯವರ್ತಿಗಳು ಹೊಡೆದುಕೊಂಡು ಬಿಟ್ಟಿದ್ದಾರೆ, Power of attorney ಮಾಡಿಸಿಕೊಂಡು ಬಿಡುವುದು, ದುಡ್ಡು ಅವರಿಗೆ ಕೊಡುವುದಿಲ್ಲ, ರೈತರಿಗೂ ಸಿಗುವುದಿಲ್ಲ. ಯಾವನೋ ಮಧ್ಯವರ್ತಿ 20–25 ಲಕ್ಷ ರೂಪಾಯಿ ಹೊಡೆದುಕೊಂಡು ಬಿಡುವುದು. ಈ ರೀತಿ ಆಗಿಬಿಟ್ಟಿದೆ. ರೈತರ ಹತ್ತಿರ ಜಮೀನನ್ನು ನೇರವಾಗಿ ಅವರು ಕೊಡುವುದಾದರೆ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಿ, ಆದರೆ ಅವರ ಹತ್ತಿರ ಬಲಾತ್ಕಾರ ವಾಗಿ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಜಮೀನು ಫಲವತ್ತಾಗಿದೆ ಎಂದು ಅವರು objection ಹಾಕಿದರೆ don't proceed.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ತಾವು ಹೇಳುವುದು ಒಪ್ಪಬಹು ದಾಂತಹ ವಿಚಾರ. 60 x 40 ಸೈಟುಗಳಿಗೆ ನಾವು ಈಗಾಗಲೇ ಸರ್ಕಾರಿ ಆದೇಶವನ್ನು ಹೊರಡಿಸಿದ್ದೇವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಇತ್ತೀಚೆಗಷ್ಟೇ ಈ ತೀರ್ಮಾನವನ್ನು ತೆಗೆದುಕೊಂಡು ಸರ್ಕಾರಿ ಆದೇಶವನ್ನು ಹೊರಡಿಸಿದೆವು. ಅದರಲ್ಲಿ ಶೇಕಡ 60 ರಷ್ಟು ಸರ್ಕಾರಕ್ಕೆ ಮತ್ತು 40 ರಷ್ಟು ರೈತರಿಗೆ ಅಭಿವೃದ್ಧಿ ಪಡಿಸಿರುವ ಜಮೀನು ಕೊಡಬೇಕು. ಕಾರಣ ಏನೆಂದರೆ ಜಮೀನಿನ ಬೆಲೆ 10,00,000 ಲಕ್ಷ ರೂಪಾಯಿ ಇದ್ದರೆ, ಅಭಿವೃದ್ಧಿ ಮಾಡುವುದಕ್ಕೆ 20,00,000 ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ ಅಭಿವೃದ್ಧಿ ಪಾಲು ಜಾಸ್ತಿ ಇರುತ್ತದೆ. ಬೆಂಗಳೂರಿನಂತಹ ನಗರದಲ್ಲಿ ಜಮೀನಿನ ಪಾಲು ಜಾಸ್ತಿ ಇರುತ್ತದೆ.

ಅಭಿವೃದ್ಧಿ ಪಾಲು ಕಡಿಮೆ ಇರುತ್ತದೆ. ಇದನ್ನು ಲೆಕ್ಕಾಚಾರ ಮಾಡಿದಾಗ ಇದು ಗ್ರಾಮೀಣ ಜನರಿಗೆ ಅನುಕೂಲವಾಗಿದೆ ವಿನಹಃ ಪಟ್ಟಣ ವಾಸಿಗಳಿಗೆ ಅಲ್ಲ. ಹಾಗಾಗಿ ನಾವು ಎಲ್ಲಾ ಪ್ರದೇಶದಲ್ಲಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ತಾವು ಯಾವುದೇ ಶಾಸಕರು ಏನೇ ಪ್ರಪೋಸಲ್ಸ್ ತಂದರೆ ನಾವು ಮಾಡುವುದಕ್ಕೆ ಸಿದ್ಧವಿದ್ದೇವೆ. ತಾವು ಹೇಳಿದ ಸಲಹೆ ಸೂಕ್ತವಿದೆ ಎನ್ನುವ ಮಾತನ್ನು ಹೇಳುತ್ತೇನೆ.

ತಾವು ನೀಡಿದ ಸಲಹೆ ಸೂಕ್ತವಾಗಿದೆ ಎಂಬ ಮಾತನ್ನು ಹೇಳುತ್ತೇನೆ. ಮಾನ್ಯ ರೇವಣ್ಣನವರು ಏನು ಪ್ರಶ್ನೆಯನ್ನು ಕೇಳಿದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆಂಬ ಮಾತನ್ನು ಹೇಳುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸುಧಾಕರ್ ರವರೆ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ.. ..

ಅಧ್ಯಕ್ಷರು : Clarification ಇಲ್ಲ, ಇದು ಗಮನ ಸೆಳೆಯುವ ಸೂಚನೆಯಾಗಿದೆ, ತಾವು ಸಹಿ ಮಾಡಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ದಯಮಾಡಿ ಒಂದು ನಿಮಿಷ, ನನ್ನನ್ನು ಪ್ರಶ್ನೆ ಮಾಡಿದ್ದಾರೆ.

ಶ್ರೀ ಎ.ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ನಾವು ನಿನ್ನೆಯಿಂದ ಕಾಯುತ್ತಿದ್ದೇವೆ. ಬೇರೆಯವರಿಗೆ ಚರ್ಚೆ ಮಾಡುವುದಕ್ಕೆ ಒಂದು ಅವಕಾಶವನ್ನು ಕೊಡಿ, ಬಯಲು ಸೀಮೆಯಲ್ಲಿ ಜನರು ಕುಡಿಯುವ ನೀರಿಲ್ಲದೆ ಸಾಯುತ್ತಿದ್ದಾರೆ. ಅದರ ಬಗ್ಗೆ ಈಗ ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ, ಪ್ರಸ್ತಾಪ ಮಾಡುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ನೀವು ಸಹಿ ಮಾಡಿಲ್ಲ, ಪ್ರತಿಯೊಂದಕ್ಕೂ ಎದ್ದು ನಿಂತರೆ ಆಗುವುದಿಲ್ಲ. ಈ ವಿಚಾರ Housing Minister ಗೆ ಸಂಬಂಧಪಟ್ಟಿದ್ದು, ಮಾನ್ಯ ಮುಖ್ಯಮಂತ್ರಿಯವರಿಗೆ ಅಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮನ್ಯ ಮುಖ್ಯಮಂತ್ರಿಯವರು ಧಾರಾಳವಾಗಿ ಬಿಡುತ್ತೇವೆ, ನಾವೇನು ವಿರೋಧವಿಲ್ಲವೆಂದು ಸದನದಲ್ಲಿ ಹೇಳಿದ್ದಾರೆ. ನಾನು ಹೇಳುವುದೇನೆಂದರೆ ರೈತರ strike ನಡೆಯುತ್ತಿದೆಯಲ್ಲಾ ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಹೇಳಿರುವುದರಿಂದ ಸಂತೋಷ, ನಮ್ಮದು ಏನು ಅಭ್ಯಂತರವಿಲ್ಲ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರಿಗೆ ತಮ್ಮ ಮುಖೇನಾ ಒಂದು clarification ಕೇಳುತ್ತೇನೆ. ಈಗ ಏನಾಗಿದೆ ಎಂದರೆ ಕೆಲವು ಕಡೆ ಖರೀದಿ ನಿಲ್ಲಿಸಿದ್ದೀರಿ, DPC ಮಾಡಿ ಬಿಟ್ಟಿದ್ದೀರಿ. ಇದನ್ನು DPC ಮಾಡಿ ಒಂದು ವರ್ಷವಾಯಿತು. ಈಗ ಪುನಃ ಜಮೀನನ್ನು ಕೊಡಿ ಎಂದರೆ ರೈತರು ಏನು ಹೇಳುತ್ತಾರೆಂದರೆ ಇವತ್ತಿನ ರೇಟ್ ಕೊಡಿಯೆಂದು ಕೆಲವು ಕಡೆ ಕೇಳುತ್ತಿದ್ದಾರೆ. ತಾವು ಬೇಗನೆ acquire ಮಾಡಿಕೊಂಡು, possession ತೆಗೆದುಕೊಂಡು, ಕೆಲಸವನ್ನು ಪ್ರಾರಂಭ ಮಾಡಿ, ಇಲ್ಲವೆಂದರೆ ರೈತರಿಗೆ ಬಿಟ್ಟು ಕೊಡಿ. ಈ ಎರಡರಲ್ಲಿ ಒಂದನ್ನು ಮಾಡಿ.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : Okay. ..

ಶ್ರೀ ಸಿ.ಎಸ್. ನಾಡಗೌಡ : ತಾವು okay ಎಂದು ಹೇಳುತ್ತಿದ್ದೀರಿ, ತೆಗೆದುಕೊಳ್ಳುತ್ತೀರೀ ಅಥವಾ ಕೊಡುತ್ತೇವೆಂದು ಹೇಳಲಿಲ್ಲ. ತಾವು okay ಎಂದರೆ ಬಿಡುತ್ತೀರೋ ಅಥವಾ ತೆಗೆದುಕೊಳ್ಳುತ್ತೀರೋ?

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : Sir okay ಎನ್ನದೇ ಏನು no ಎನ್ನಲಾ? ನಾಡಗೌಡರು ಬುದ್ಧಿವಂತರು, ನಾನು ಅವರಿಗೆ ಇನ್ನು ಏನು ಹೇಳಲಿ. ತಾವು DPC ಮಾಡಿದ್ದು, ತಾವು ಬೇಗ ಮಾಡಿ ಇಲ್ಲವೆಂದರೆ ಕೈ ಬಿಡಿ ಎಂದು ಹೇಳಿದರು. ಕೈ ಬಿಡುವ ಜಾಗದಲ್ಲಿ ಕೈ ಬಿಡೋಣ, ಬೇಗ ಮಾಡುವ ಜಾಗದಲ್ಲಿ ಬೇಗ ಮಾಡೋಣ.

ಋ) ಸಾರ್ವಜನಿಕ ಸ್ಮಶಾನದ ಜಮೀನನ್ನು ತೆರವುಗೊಳಿಸುವ ಬಗ್ಗೆ.

ಡಾ: ಎಂ.ಸಿ.ಸುಧಾಕರ್ (ಚಿಂತಾಮಣಿ) : ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ತಾಲ್ಲೂಕು, ಮುಂಗಾನಹಳ್ಳಿ, ಹೋಬಳಿ, ಯನುಮಲಪಾಡಿ

ಗ್ರಾಮದ ಸಾರ್ವಜನಿಕ ಸ್ಮಶಾನದ ಜಮೀನು ಒತ್ತುವರಿ ಆಗಿರುವಂಥದ್ದನ್ನು ತೆರವುಗೊಳಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ,

ಚಿಂತಾಮಣಿ ತಾಲ್ಲೂಕು, ಮುಂಗಾನಹಳ್ಳಿ ಹೋಬಳಿ, ಯನುಮಲಪಾಡಿ ಗ್ರಾಮದ ಸ.ನಂ.200 ರಲ್ಲಿ 6.02 ಎಕರೆ ಸ್ಮಶಾನ ಜಮೀನಾಗಿದ್ದು, ಇದರಲ್ಲಿ ಒಟ್ಟು 15 ಜನ ಒತ್ತುವರಿ ಮಾಡಿಕೊಂಡಿರುವುದು ಅಳತೆಯಂತೆ ಕಂಡು ಬಂದಿರುತ್ತದೆ. ಒತ್ತುವರಿದಾರ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರಸ.	ಒತ್ತುವರಿದಾರರ ಹೆಸರು	ಎಕರೆ (ಎ–ಗು)
1	ಶ್ರೀ ಎಮ್.ಬಿ. ಶಕೂರ್ ಸಾಬ್	0.07
2	ಎಮ್.ಬಿ. ಇನಾಮ್ ಸಾಬ್	0.07
3	ಎಮ್. ಬಿ. ಶಕೂರ್ ಸಾಬ್	0.5
4	ಎಮ್. ಬಿ. ಬಾಬು ಸಾಬ್	0.16
5	ಶಕೂರ್ ಸಾಬ್	0.02
6	ಬಿ.ಹೆಚ್. ರಸೂಲ್ ಸಾಬ್	0.03
7	ಎಮ್. ರಸೂಲ್ ಸಾಬ್	0.07
8	ಎಮ್.ಟಿ. ಹೈದರ್ ವಲ್ಲಿ	0.18
9	ಸುಬ್ರಮಣಿ ಬಿನ್ ನರಸಪ್ಪ	1.00
10	ರಾಮಪ್ಪ ಬಿನ್ ಸಿತಾರಾಮನ್ನ	0.03
11	ಬದಿಕಾಯಪಲ್ಲಿ ಲಕ್ಷ್ಮನ್ನ	0.03
12	ಮಲ್ಲಿಕಾರ್ಜುನ	0.02
13	ಸುಬ್ಬರಾಯಪ್ಪ	0.06
14	ರಾಮಪ್ಪ	0.03
15	ರಾಮಪ್ಪ ಬಿನ್ ಸಿತಾರಾಮಪ್ಪ	0.15
	ಒಟ್ಟು	3.17

ಅವರನ್ನು ಖುಲ್ಲಾ ಪಡಿಸಲು ನಿಯಮಾನುಸಾರ ನೋಟೀಸು ಜಾರಿ ಮಾಡಲಾಗಿದ್ದು, ಜರೂರಾಗಿ ಖುಲ್ಲಾ ಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಡಾ: ಎಂ.ಸಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದು ಸುಮಾರು ದಿವಸಗಳಿಂದ ನಡೆಯುತ್ತಿರುವ ವಿಚಾರವಾಗಿದೆ. 2005ನೇ ಇಸವಿಯಲ್ಲಿ ತಹಶೀಲ್ದಾರರು ಆರಕ್ಷಕ, ವೃತ್ತ ನಿರೀಕ್ಷಕರಿಗೆ ಇದನ್ನು ತೆರವುಗೊಳಿಸಲು ಸಹಕಾರ ನೀಡಬೇಕೆಂದು ಪತ್ರ ಬರೆಯುತ್ತಾರೆ. ಇದಕ್ಕೆ ಯಾರು ಸಹಕಾರ ಕೊಟ್ಟಿಲ್ಲ. ಅಲ್ಲಿ ಈಗಾಗಲೇ ಸ್ವಲ್ಪ ಭಾಗದಲ್ಲಿ ಅಲ್ಪಸಂಖ್ಯಾತರು ಖಬರಸ್ಥಾನ ಇಟ್ಟುಕೊಂಡಿದ್ದಾರೆ. ಅಲ್ಲಿ ಗ್ರಾಮದ ಬೇರೆ ಜನರು ಆ ಜಾಗವನ್ನು ಖುಲ್ಲಾ ಮಾಡಿ ನಮಗೂ ಜಾಗ ಕೊಡಬೇಕೆಂದು ಕೇಳುತ್ತಿದ್ದಾರೆ. ಈ 6 ಎಕರೆ 02 ಗುಂಟೆ ಜಾಗ ಸ್ಮಶಾನದ ಜಾಗವಾಗಿದೆ ಅದು ಸ್ಮಶಾನದ ನಂಬರ್ ಇದೆ. ಇದನ್ನು ಕೊಡಬೇಕೆಂಬ ಬೇಡಿಕೆ ಸುಮಾರು ದಿವಸಗಳಿಂದ ನಡೆಯುತ್ತಿರುವಂಥದ್ದು, ಇಲ್ಲಿ ತಾವು ನೀಡಿರುವ ಮಾಹಿತಿ ಬಹಳ ಹಿಂದೆ ಸರ್ವೆ ಮಾಡಿರುವಂಥದ್ದು ಆಗಿದ್ದರೂ ಯಾರು ಇದನ್ನು ಖುಲ್ಲಾ ಪಡಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿಲ್ಲ, ಸಹಕಾರ ನೀಡುತ್ತಿಲ್ಲ. ನನಗೆ ಸರ್ಕಾರದಿಂದ ಸ್ಪಷ್ಟವಾಗಿ ಬೇಕಾದಂಥ ಉತ್ತರ ಇದನ್ನು ಯಾವಾಗ ಖುಲ್ಲಾ ಪಡಿಸುತ್ತೀರಿ? ನಂತರ ಗ್ರಾಮದಲ್ಲಿ ಮಾತನಾಡಿ ಹಿಂದೂಗಳಿಗೆ ಎಷ್ಟು ಜಾಗವನ್ನು ಕೊಡಬೇಕು, ಮುಸಲ್ಮಾನರಿಗೆ ಎಷ್ಟು ಜಾಗವನ್ನು ನಿಗದಿ ಮಾಡುವಂಥದ್ದು ಮುಂದೆ ಆಗಬೇಕಾಗಿದೆ. ಇದು ಗಡಿ ಭಾಗದಲ್ಲಿರುವಂಥ ಗ್ರಾಮ, ಇದರ ಪಕ್ಕದಲ್ಲಿ ಆಂಧ್ರದ ಭಾಗವಾಗಿದ್ದು, ಅಲ್ಲಿನ ಜನ ತಾಳ್ಮೆ ಕಳೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಅಲ್ಲಿನ ಪ್ರಭಾವ ಹೆಚ್ಚಿಗೆ ಇರುವಂಥದ್ದು. ಅಲ್ಲಿ ಬಹಳಷ್ಟು ಗಲಾಟೆಯಾಗುವಂಥ ಭಾಗವಾಗಿದೆ. ಇದು ಸುಮಾರು 2005 ರಿಂದ ಹಾಗೆ ಉಳಿದಿದೆ. ಸನ್ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ನಾನು ಇಲ್ಲಿ ಪ್ರಶ್ನೆ ಹಾಕಿದ ನಂತರ AC ಯವರು ಹಾಗೂ ಮತ್ತೊಬ್ಬರು ಹೋಗಿ ಮಹಜರ್‌ಗೆ ಬಹಳಷ್ಟು ಜನರ ಬಳಿ ಸಹಿ ಮಾಡಿಸಿಕೊಂಡು, ನಾವು ಖುಲ್ಲಾ ಮಾಡಿಸುತ್ತೇವೆಂದು ಹೇಳಿಕೆ ಮಾಡಿಕೊಂಡು ಬಂದಿದ್ದಾರೆ. ಆದರೆ ಸ್ಪಷ್ಟವಾಗಿ ತಾವು ಯಾವಾಗ ಖುಲ್ಲಾ ಮಾಡಿಸುತ್ತೀರೆಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಜಿ.ಕರುಣಾಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಇನ್ನು ಉಳಿದ 3 ಎಕರೆ ಜಮೀನು ಏನು ಇದೆ. ಅದರಲ್ಲಿ ಸುಮಾರು 11 ಜನರು ಒತ್ತುವರಿ ಮಾಡಿಕೊಂಡಿದ್ದಾರೆ. ಅದರಲ್ಲಿ 3 ಜನರು ಹತ್ತಿ ಬೆಳೆಯನ್ನು ಹಾಕಿದ್ದಾರೆ. ಇನ್ನು ಒಂದು ತಿಂಗಳಲ್ಲಿ ಬೆಳೆ ಕಟಾವ್ ಆಗುತ್ತದೆ. ಅದು ಆದಮೇಲೆ ಅವರು ಬಿಟ್ಟು ಕೊಡುತ್ತೇವೆಂದು ಹೇಳಿದ್ದಾರೆ. ಅದು ಅದ ತಕ್ಷಣ ಒಂದು ತಿಂಗಳಲ್ಲಿ ಖುಲ್ಲಾ ಪಡಿಸಿಕೊಡುತ್ತೇವೆ.

ಅಧ್ಯಕ್ಷರು : ಆಯಿತು.

ಡಾ: ಎಂ.ಸಿ.ಸುಧಾಕರ್ : ಮಾನ್ಯ ಅಧ್ಯಕ್ಷರೆ, ತಾವು ಬೇರೆಯದಕ್ಕೆ ಅವಕಾಶ ಕೊಟ್ಟಿದ್ದೀರಿ, ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಮಾನ್ಯ ಸಚಿವರು ಒಂದು ತಿಂಗಳು ಎಂದು ಹೇಳಿದ್ದಾರೆ. ಇದು ಗಮನ ಸೆಳೆಯುವುದು.

ಡಾ: ಎಂ.ಸಿ. ಸುಧಾಕರ್ : ಈಗ ಅಲ್ಲಿ ಅಲ್ಪಸಂಖ್ಯಾತರೆಲ್ಲಾ ಸ್ವಯಂ ಇಚ್ಛೆಯಿಂದ ಬಿಟ್ಟು ಕೊಡುವುದಕ್ಕೆ ತಯಾರಿದ್ದಾರೆ, ಒಂದಿಬ್ಬರು ಬೋರ್‌ವೆಲ್ ಹಾಕಿಕೊಂಡಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಅವರು ಒಂದು ತಿಂಗಳು ಎಂದು ಹೇಳಿದ್ದಾರಲ್ಲಾ, ಇನ್ನು ಏನು ಸ್ಪಷ್ಟೀಕರಣ ಬೇಕು?

ಡಾ: ಎಂ.ಸಿ.ಸುಧಾಕರ್ : ಒಂದು ತಿಂಗಳು ಎಂದು ಹೇಳಿದ್ದಾರೆ. ಈಗಾಗಲೇ ಹಲವಾರು ಬಾರಿ ಸದನದಲ್ಲಿ ಉತ್ತರ ಕೊಟ್ಟಿರುವಂಥದ್ದು ಯಾವುದು ಆಗಿಲ್ಲ.

ಅಧ್ಯಕ್ಷರು : ಈಗ ಪ್ರಕಟಣೆ.

8. ಪ್ರಕಟಣೆ :

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ: 11.03.2010 ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕ, 2009
2. ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2009

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು ಸಂಜೆ 8 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 12ನೇ ಮಾರ್ಚ್ ಮಾಹೆ 2010ರ ಶುಕ್ರವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

9. ಅನುಬಂಧ – 1

ರಾಜ್ಯದ ಮಾಜಿ ದೇವದಾಸಿಯರಿಗೆ ಮಾಸಾಶನ ನೀಡುವ ಬಗ್ಗೆ :

368 (617) ಶ್ರೀ ಆನಂದ ಸಿಂಗ್ (ಬಳ್ಳಾರಿ– ವಿಜಯನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ 2008ನೇ ಸಾಲಿನಲ್ಲಿ 2ನೇ ಹಂತದ ಮಾಜಿ ದೇವದಾಸಿಯರ ಸಮೀಕ್ಷೆಯನ್ನು ಮಾಡಲಾಗಿದ್ದು ಒಟ್ಟು ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ;

ಆ) ಹೊಸಪೇಟೆ ತಾಲ್ಲೂಕಿನಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ;

ಇ) ಈ ಫಲಾನುಭವಿಗಳಿಗೆ ಮಾಸಾಶನ ಮಂಜೂರು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಇಂತಹ ಪ್ರಕರಣಗಳನ್ನು ವಿಲೇ ಮಾಡಲು ಯಾವ ಕ್ರಮ ತೆಗೆದುಕೊಳ್ಳಲಾಗುತ್ತಿದೆ;

ಉ) ಬಳ್ಳಾರಿ ಜಿಲ್ಲೆ ವಿಜಯನಗರ ಮತಕ್ಷೇತ್ರದಲ್ಲಿ ಮಾಜಿ ದೇವದಾಸಿಯನ್ನು 2ನೇ ಹಂತದಲ್ಲಿ ಗುರುತಿಸಿದ್ದರೂ ಇದುವರೆವಿಗೂ ಯಾವುದೇ ರೀತಿಯ ಸರ್ಕಾರಿ ಸವಲತ್ತುಗಳನ್ನು ನೀಡಿರುವುದಿಲ್ಲ ಏಕೆ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) 23787

ಆ) 1819

ಇ) ಹೌದು

ಈ) 1993–94ನೇ ಸಾಲಿನಲ್ಲಿ ತಯಾರಿಸಿದ್ದು, ಮಾಜಿ ದೇವದಾಸಿಯರ ಫಲಾನುಭವಿಗಳ ಪಟ್ಟಿಯನ್ನು ಸರ್ಕಾರಿ ಆದೇಶ ಸಂಖ್ಯೆ:ಮಇ 14 ಮಆನಿ 2007 ದಿನಾಂಕ; 13.09.2007ರ ಮಾನದಂಡಗಳ ಪ್ರಕಾರ ಪರಿಷ್ಕರಣೆ ಮಾಡಲು ಬಾಕಿಯಿರುವುದರಿಂದ, ಯಾವುದೇ ಕ್ರಮ ಇದುವರೆವಿಗೂ ತೆಗೆದುಕೊಂಡಿರುವುದಿಲ್ಲ. ತದನಂತರ ನಿಯಮಗಳನುಸಾರ ಕ್ರಮ ವಹಿಸಲಾಗುವುದು.

ಉ) ರಾಜ್ಯದ ಇತರೆ ಜಿಲ್ಲೆಗಳಲ್ಲಿ ಪರಿಷ್ಕರಣಾ ಪಟ್ಟಿ ಅಂತಿಮಗೊಳ್ಳದೇ ಇರುವುದರಿಂದ, ಯಾವುದೇ ರೀತಿಯ ಸರ್ಕಾರಿ ಸವಲತ್ತುಗಳನ್ನು ನೀಡಿರುವುದಿಲ್ಲ.

ಭಾಗ್ಯಲಕ್ಷ್ಮಿ ಯೋಜನೆಯಡಿ ಬಂದಿರುವ ಅರ್ಜಿಗಳು

369 (618) ಶ್ರೀ ಆನಂದ್ ಸಿಂಗ್ (ವಿಜಯನಗರ–ಬಳ್ಳಾರಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯು ದಿನಾಂಕ:01–04–2006 ರಿಂದ ಅನುಷ್ಠಾನಕ್ಕೆ ಬಂದ ನಂತರ 2006–07ನೇ ಸಾಲಿನಲ್ಲಿ ಈ ಯೋಜನೆಯಡಿ ಮಂಜೂರಾತಿಗಾಗಿ ಬಂದ ಅರ್ಜಿಗಳೆಷ್ಟು;

ಆ) ಇವುಗಳಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಿಂದ ಬಂದಿರುವ ಅರ್ಜಿಗಳೆಷ್ಟು;

ಇ) ಇವುಗಳ ಪೈಕಿ ಅವಧಿ ಮೀರಿ ಬಂದಿರುವ ಅರ್ಜಿಗಳೆಷ್ಟು;

ಈ) ಈ ತರಹ ಅವಧಿ ಮೀರಿ ಬಂದಿರುವ ಅರ್ಜಿಗಳು ಈವರೆಗೂ ಮಂಜೂರಾತಿಗಾಗಿ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಇಂತಹ ಪ್ರಕರಣಗಳ ವಿಲೇವಾರಿಗಾಗಿ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) 2006-07ನೇ ಸಾಲಿನಲ್ಲಿ ಜನಿಸಿ, ಭಾಗ್ಯಲಕ್ಷ್ಮಿ ಯೋಜನೆಯಡಿ ಮಂಜೂರಾತಿಗಾಗಿ ಬಂದ ಅರ್ಜಿಗಳ ಸಂಖ್ಯೆ 2,36,830.

ಆ) 1675

ಇ) 735

ಈ) ಬಂದಿದೆ.

ಉ) ಸರ್ಕಾರದ ಆದೇಶದಂತೆ 2006-07ನೇ ಸಾಲಿನಲ್ಲಿ ಮಗು ಜನಿಸಿದ ದಿನಾಂಕದಿಂದ 15 ತಿಂಗಳವರೆಗೆ ಅರ್ಜಿ ಸಲ್ಲಿಸಿ ನೋಂದಾಯಿಸಿ ಕೊಳ್ಳಲು ಹಾಗೂ ಮಂಜೂರಾತಿ ನೀಡಲು ಕಾಲಾವಕಾಶ ನೀಡಲಾಗಿದ್ದು, ಈ ಅವಧಿಯ ನಂತರ ಸಲ್ಲಿಸಲ್ಪಟ್ಟ ಅರ್ಜಿಗಳನ್ನು ಯೋಜನೆಯಡಿ ನೋಂದಾಯಿಸಿಕೊಂಡು ಮಂಜೂರಾತಿ ನೀಡಲು ಅವಕಾಶವಿರುವುದಿಲ್ಲ.

ಬಳ್ಳಾರಿಯ ಹೊಸಪೇಟೆ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

370 (619) ಶ್ರೀ ಆನಂದ ಸಿಂಗ್ (ವಿಜಯನಗರ-ಬಳ್ಳಾರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರದಲ್ಲಿ ಹಾಲಿಯಿರುವ 100 ಹಾಸಿಗೆಯ ಸರ್ಕಾರಿ ಆಸ್ಪತ್ರೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ 250 ಹಾಸಿಗೆವುಳ್ಳ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಹಂತದಲ್ಲಿದೆಯೇ;

ಆ) ಇದ್ದಲ್ಲಿ, ಇದನ್ನು ಯಾವಾಗ ಮೇಲ್ದರ್ಜೆಗೆ ಏರಿಸಲಾಗುವುದು;

ಇ) ಹಾಲಿ ಹೊಸಪೇಟೆ ತಾಲ್ಲೂಕಿನಲ್ಲಿ ಖಾಲಿಯಿರುವ ಸಿಬ್ಬಂದಿಗಳ ಕೊರತೆಯನ್ನು ತುಂಬುವ ಬಗ್ಗೆ ಏನಾದರೂ ಕ್ರಮ, ಕೈಗೊಳ್ಳಲಾಗಿದೆಯೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೊಸಪೇಟೆ ಸಾರ್ವಜನಿಕ ಆಸ್ಪತ್ರೆಯು ಈಗಾಗಲೇ 100 ಹಾಸಿಗೆಗಳ ಆಸ್ಪತ್ರೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇಲ್ಲಿನ ಹಾಸಿಗೆಗಳ

ಬಳಕೆ ಪ್ರಮಾಣ ಶೇಕಡ 60 ರಷ್ಟು ಇದ್ದು ಹಾಸಿಗೆ ಸಾಮರ್ಥ್ಯವನ್ನು ಹೆಚ್ಚಿಸುವ ಅವಶ್ಯಕತೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ ಆಸ್ಪತ್ರೆಗೆ 80 ಸಿಬ್ಬಂದಿಗಳ ಹುದ್ದೆ ಮಂಜೂರಾಗಿದ್ದು 54 ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 26 ಹುದ್ದೆಗಳು ಖಾಲಿ ಇವೆ.

ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ 5,021 ಅರೆ ವೈದ್ಯಕೀಯ ಹುದ್ದೆಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಅದು ಪೂರ್ಣಗೊಂಡ ನಂತರ ಆದ್ಯತಾನುಸಾರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿದೆ.

ಪ್ರಸ್ತುತ ಗ್ರೂಪ್-ಡಿ ನೌಕರರ ವೃಂದದಲ್ಲಿ ನೇಮಕಾತಿ ಮಾಡಲು ನಿಷೇಧವಿದ್ದು, ಅವಶ್ಯವಿರುವೆಡೆ ಬಾಹ್ಯ ಮೂಲಗಳಿಂದ ಸೇವೆ ಪಡೆದು ನಿರ್ವಹಿಸಲು ಕ್ರಮವಹಿಸಲಾಗಿದೆ.

ಟ್ರಕ್ ಟರ್ಮಿನಲ್ ಸ್ಥಾಪಿಸುವ ಬಗ್ಗೆ

371 (620) ಶ್ರೀ ಆನಂದ ಸಿಂಗ್ (ವಿಜಯನಗರ-ಬಳ್ಳಾರಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ ಹೊಸಪೇಟೆಯ ಸಾರಿಗೆ ಸಂಪರ್ಕದಲ್ಲಿ ಕೇಂದ್ರ ಬಿಂದುವಾಗಿದ್ದು, ರಸ್ತೆಗಳ ಮೇಲೆ ವಾಹನಗಳ ಓಡಾಟ ಅಧಿಕವಾಗಿ ದಿನೇ ದಿನೇ ಸಂಚಾರ ವ್ಯತ್ಯಯವಾಗುತ್ತಿರುವುದರಿಂದ ಹಾಗೂ ಗಣ್ಯ ವ್ಯಕ್ತಿಗಳು ಇದೇ ಮಾರ್ಗದಲ್ಲಿ ಸಂಚರಿಸುತ್ತಿರುವ ಕಾರಣ ಮಾರ್ಗ ಮಧ್ಯ ಟ್ರಕ್ ಟರ್ಮಿನಲ್ ಅವಶ್ಯವೆಂದು ಟ್ರಕ್ ಟರ್ಮಿನಲ್ ಸ್ಥಾಪನೆಗೆ ಹಣ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಟರ್ಮಿನಲ್ ಪ್ರಕ್ರಿಯೆಯಗಳು ಯಾವ ಹಂತದಲ್ಲಿವೆ;

ಇ) ಇದಕ್ಕಾಗಿ ಸರ್ಕಾರದಿಂದ ಮಂಜೂರಾದ ಹಣವೆಷ್ಟು; ಹಾಗಿದ್ದಲ್ಲಿ ಕಾಮಗಾರಿ ಪ್ರಕ್ರಿಯೆಗಳು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಹೌದು, ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಅಮರಾವತಿ ಗ್ರಾಮದಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸುವುದು ಅವಶ್ಯವೆಂದು ಮನಗಂಡು, ಟ್ರಕ್ ಟರ್ಮಿನಲ್ ಸ್ಥಾಪನೆಗೆ ಹಣ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಅಮರಾವತಿ ಗ್ರಾಮದಲ್ಲಿ ಟ್ರಕ್ ಟರ್ಮಿನಲ್ ನಿರ್ಮಾಣಕ್ಕಾಗಿ ಒಟ್ಟು 37-82 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮೂಲಕ ಭೂಸ್ವಾಧೀನ ಪಡಿಸಿ ಕೊಳ್ಳಲು ಕ್ರಮ ಜಾರಿಯಲ್ಲಿದ್ದು ಕಲಂ 28(4) ರಡಿ ಅಂತಿಮ ಅಧಿಸೂಚನೆ ಹೊರಡಿಸುವ ಹಂತದಲ್ಲಿದೆ.

ಇ) ಸರ್ಕಾರವು ಸದರಿ ಜಮೀನ್ನು ಖರೀದಿಸಲು 2.50 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. ಈಗಾಗಲೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮುಂಗಡವಾಗಿ 99.74 ಲಕ್ಷ ರೂ.ಗಳನ್ನು ಪಾವತಿಸಿದೆ. ಮುಂದುವರಿದು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸದರಿ ಜಮೀನುಗಳನ್ನು ಭೂಸ್ವಾಧೀನಪಡಿಸಿ, ಕಂಪನಿಗೆ ಹಸ್ತಾಂತರಿಸಿದ ಕೂಡಲೇ ಟ್ರಕ್ ಟರ್ಮಿನಲ್ ನಿರ್ಮಿಸಲು ಕ್ರಮಕೈಗೊಳ್ಳ ಲಾಗುವುದು.

ವಸತಿ ಶಾಲೆಯ ನಿರ್ಮಾಣ

372 (87) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಮಡಿಕೇರಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ, ಸೋಮವಾರ ಪೇಟೆ ತಾಲ್ಲೂಕಿನ ಬಸವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ ಕಾಮಗಾರಿ ಅರ್ಧದಲ್ಲಿ ನಿಂತು ಹೋಗಲು ಕಾರಣವೇನು;

ಆ) ಈ ಕಾಮಗಾರಿಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ;

ಇ) ಕಾಮಗಾರಿಯನ್ನು ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು? ಯಾವ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಬಸವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಶಿಕ್ಷಣ ಇಲಾಖೆಯಿಂದ ಪ್ರಾರಂಭಿಸಿದ್ದು, ಗಂಡು ಮಕ್ಕಳ ವಸತಿ ಗೃಹ, ಹೆಣ್ಣು ಮಕ್ಕಳ ವಸತಿ ಗೃಹ, ಅಡುಗೆ ಮನೆ ಮತ್ತು ಬೋಜನಾ ಶಾಲೆಯ (3) ಕಟ್ಟಡಗಳ ನಿರ್ಮಾಣಕ್ಕೆ ರೂ.88.90 ಲಕ್ಷಗಳ ಅಂದಾಜು ವೆಚ್ಚಕ್ಕೆ ಶಿಕ್ಷಣ ಇಲಾಖೆಯು 2000-01ನೇ ಸಾಲಿನಲ್ಲಿ ಅನುಮೋದನೆ ನೀಡಿದ್ದು, ರೂ.50.80 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿತ್ತು. ಸದರಿ ಕಾಮಗಾರಿಯನ್ನು ಅಂದಿನ ಕರ್ನಾಟಕ ಭೂಸೇನಾ ನಿಗಮ ನಿಯಮಿತ (ಈಗಿನ ಕರ್ನಾಟಕ ರೂರಲ್ ಇನ್ಸ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್) ಸಂಸ್ಥೆಗೆ ವಹಿಸಿತ್ತು. ಕರ್ನಾಟಕ ಭೂಸೇನಾ ನಿಗಮ ನಿಯಮಿತವು ಈ ಕಾಮಗಾರಿಯ ಅಂದಾಜು ವೆಚ್ಚಕ್ಕೆ ಪೂರ್ಣವಾಗಿ ಅನುದಾನ ಬಿಡುಗಡೆ ಆಗದೇ ಇರುವುದರಿಂದ ಕಾಮಗಾರಿ ಯನ್ನು ಸ್ಥಗಿತಗೊಳಿಸಲಾಗಿತ್ತು.

ಆ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಶಿಕ್ಷಣ ಇಲಾಖೆಯಿಂದ ಬಿಡುಗಡೆಯಾದ ಒಟ್ಟಾರೆ ಅನುದಾನದಲ್ಲಿ ವೆಚ್ಚ ಭರಿಸಲಾಗುವುದು.

ಇ) ಮೇಲೆ ಹೇಳಿದ ವಸತಿ ಶಾಲೆಯನ್ನು 2003-04ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನಕ್ಕೆ ಒಳಪಡಿಸಲಾಯಿತು. ಕರ್ನಾಟಕ ಭೂಸೇನಾ ನಿಗಮ ನಿಯಮಿತವು ಬಾಕಿ ಉಳಿದ ಕಾಮಗಾರಿಯನ್ನು ಪೂರ್ಣ ಗೊಳಿಸಲು ಅಂದಾಜು ಪಟ್ಟಿಯನ್ನು ಪರಿಷ್ಕರಿಸಿ, ಪರಿಷ್ಕೃತ ಅಂದಾಜು ರೂ.44.90 ಲಕ್ಷಗಳಿಗೆ ದಿನಾಂಕ: 27-01-2009 ರಂದು ಅನುಮೋದನೆ ನೀಡಿದೆ.

ಕರ್ನಾಟಕ ಭೂಸೇನಾ ನಿಗಮ ನಿಯಮಿತವು ಅಡುಗೆ ಮನೆ, ಭೋಜನಾ ಶಾಲಾ ಕಟ್ಟಡ, ಗಂಡು ಮತ್ತು ಹೆಣ್ಣು ಮಕ್ಕಳ ವಸತಿ ನಿಲಯಗಳ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿ ದಿನಾಂಕ: 24-02-2010 ರಂದು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬಿಟ್ಟುಕೊಟ್ಟಿದೆ. ಅಂತಿಮ ಬಿಲ್ಲುಗಳು ಪಾವತಿ ಮಾಡಲು ಬಾಕಿ ಇವೆ.

ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ. ನಿವೃತ್ತ ನೌಕರರಿಗೆ ಬಸ್‌ಪಾಸು ವಿತರಿಸುವುದು

373 (739) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಸ್.ಆರ್.ಟಿ.ಸಿ. ಹಾಗೂ ಬಿ.ಎಂ.ಟಿ.ಸಿ. ಯಲ್ಲಿ ನಿವೃತ್ತಿ ಹೊಂದಿರುವ ನೌಕರರಿಗೆ ಉಚಿತ ಪಾಸ್ ಸೌಲಭ್ಯವನ್ನು ಸರ್ಕಾರವು ನೀಡುತ್ತಿದೆಯೇ;

ಹಾಗಿದ್ದಲ್ಲಿ ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಈ ಸೌಲಭ್ಯವನ್ನು ಎಷ್ಟು ಜನ ನಿವೃತ್ತ ನೌಕರರಿಗೆ ನೀಡಲಾಗಿದೆ.

ಆ) ಗ್ರಾಮೀಣ ಪ್ರದೇಶದ ನಿವೃತ್ತಿ ಹೊಂದಿದ ನೌಕರರು ಈ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಇದನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಆರ್. ಅಶೋಕ (ಸಾರಿಗೆ ಸಚಿವರು) :

ಅ) ಹೌದು.

5405

ಆ) ಹಾಲಿ ಈ ಸೌಲಭ್ಯವನ್ನು ನಗರ ಸಾರಿಗೆಯಲ್ಲಿ ಪ್ರಯಾಣಿಸಲು ಮಾತ್ರ ವಿಸ್ತರಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿನ ನಿವೃತ್ತ ನೌಕರರು ನಗರ ಸಾರಿಗೆಗಳು ಕಾರ್ಯಾಚರಣೆ ಮಾಡುವ ಸ್ಥಳಗಳಲ್ಲಿ ವಾಸಿಸುತ್ತಿದ್ದಲ್ಲಿ, ಅವರುಗಳು ಸಹ ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

ಇ) ಉಚಿತ ಬಸ್‌ಪಾಸ್ ಸೌಲಭ್ಯವನ್ನು ಗ್ರಾಮೀಣ ಪ್ರದೇಶಗಳು/ ಗ್ರಾಮೀಣ ಸೇವೆಗಳಿಗೆ ವಿಸ್ತರಿಸುವ ಪ್ರಸ್ತಾವನೆ ಸಧ್ಯ ಇರುವುದಿಲ್ಲ.

374 (740) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 5 ವರ್ಷಗಳಿಂದ ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನಿವೃತ್ತಿ ಹೊಂದಿದ ನೌಕರರುಗಳ ಸಂಖ್ಯೆ ಎಷ್ಟು?

ಆ) ಇವರುಗಳಿಗೆ ನಿವೃತ್ತಿ ನಂತರ ನೀಡಲಾಗುವ ಪಿಂಚಣಿ, ಗಳಿಕೆ ರಜೆ ಮತ್ತು ಇತರೆ ನಿವೃತ್ತಿ ಸೌಲಭ್ಯಗಳನ್ನು ಎಷ್ಟು ಮಂದಿಗೆ ನೀಡಲಾಗಿದೆ. (ಸಂಪೂರ್ಣ ವಿವರ ನೀಡುವುದು);

ಇ) ಇದೇ ಸಂಸ್ಥೆಯಲ್ಲಿ ಕಳೆದ 2 ವರ್ಷಗಳ ಹಿಂದೆ ನಿವೃತ್ತಿಯಾದ ನೌಕರರಿಗೆ ಈವರೆವಿಗೂ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ನೀಡದೇ ಇರುವುದಕ್ಕೆ ಕಾರಣವೇನು, ಇದಕ್ಕೆ ಕಾರಣರಾದವರ ಮೇಲೆ ಸರ್ಕಾರವು ಯಾವ ರೀತಿ ಕ್ರಮ ತೆಗೆದುಕೊಳ್ಳುವುದು ಮತ್ತು ನಿವೃತ್ತಿ ಹೊಂದಿದ ನೌಕರರಿಗೆ ಶೀಘ್ರವಾಗಿ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ಎಷ್ಟು ದಿನಗಳ ಒಳಗಾಗಿ ಸರ್ಕಾರವು ನೀಡಲಾಗುವುದು?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ** ದಿನಾಂಕ: 01.04.2005 ರಿಂದ 28.02.2010 ರವರೆಗೆ 1219 ಸಿಬ್ಬಂದಿಗಳು ಹಾಗೂ

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಳೆದ 5 ವರ್ಷಗಳಲ್ಲಿ 339 ನೌಕರರು ನಿವೃತ್ತಿ ಹೊಂದಿರುತ್ತಾರೆ.

ಆ) **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ** 1202 ಕುಟುಂಬ ಪಿಂಚಣಿ ಅಭ್ಯರ್ಥನಗಳನ್ನು ಇತ್ಯರ್ಥ ಮಾಡಲಾಗಿದೆ, 1098 ಸಿಬ್ಬಂದಿಗಳಿಗೆ ಗಳಿಕೆ ರಜೆಯನ್ನು ಮಂಜೂರು ಮಾಡಿ ಪಾವತಿಸಲಾಗಿದೆ. 1213 ಸಿಬ್ಬಂದಿಗಳ ಭವಿಷ್ಯನಿಧಿ ಅಭ್ಯರ್ಥನವನ್ನು ಮಂಜೂರು ಮಾಡಿ ಪಾವತಿಸಲಾಗಿದೆ ಹಾಗೂ 567 ನಿವೃತ್ತಿ ಹೊಂದಿದ ಸಿಬ್ಬಂದಿಗಳಿಗೆ ಉಪದಾನ ಪಾವತಿಸಲಾಗಿದೆ.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನಿವೃತ್ತಿ ನೌಕರರ ಪಿಂಚಣಿ ಅಭ್ಯರ್ಥನವು ಪ್ರಾದೇಶಿಕ ಭವಿಷ್ಯ ನಿಧಿ ಅಯುಕ್ತರ ಕಛೇರಿಯಿಂದ ಇತ್ಯರ್ಥವಾಗುತ್ತದೆ. ಉಳಿದಂತೆ ಈ.ಕ.ರ.ಸಾ.ಸಂಸ್ಥೆಯ ಎಲ್ಲಾ ನಿವೃತ್ತ ನೌಕರರ ಗಳಿಗೆ ರಜೆ ಮತ್ತು ಇತರೆ ಆರ್ಥಿಕ ಸೌಲಭ್ಯಗಳನ್ನು ಇತ್ಯರ್ಥಪಡಿಸಿ, ಪೂರ್ಣವಾಗಿ ಪಾವತಿಸಲಾಗಿದೆ.

ಇ) **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು** 2003–04, 2004–05, 2005–06, 2007–08, 2008–09 ನೇ ಸಾಲಿನಲ್ಲಿ ಅನುಭವಿಸಿದ ನಷ್ಟದಿಂದ ಸಂಸ್ಥೆಯ ಹಣಕಾಸಿನ ಪರಿಸ್ಥಿತಿ ಕ್ಲೀಷ್ಟಕರವಾಗಿರುವು ದರಿಂದ ದಿನಾಂಕ: 31.03.2009ರ ಅಂತ್ಯಕ್ಕೆ ಸಂಸ್ಥೆಯ ಸಂಚಿತ ನಷ್ಟ ರೂ.333.00 ಕೋಟಿ ಇರುವುದರಿಂದ ನಿವೃತ್ತಿ ಹೊಂದಿದ ಸಿಬ್ಬಂದಿಗಳಿಗೆ

ನಿವೃತ್ತಿ ಸೌಲಭ್ಯವನ್ನು ಪಾವತಿ ಮಾಡುವುದು ತುಂಬಾ ಕಷ್ಟಕರವಾಗಿದೆ. ಇಂತಹ ಆರ್ಥಿಕ ಕಠಿಣ ಪರಿಸ್ಥಿತಿಯಲ್ಲಿ ತಿಂಗಳಿಗೆ ರೂ.1.00 ಕೋಟಿಯಂತೆ ನಿವೃತ್ತಿ ಸೌಲಭ್ಯಗಳನ್ನು ಪಾವತಿ ಮಾಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಮುಂದುವರೆದು ಸಂಸ್ಥೆಯ ಹಣಕಾಸಿನ ಪರಿಸ್ಥಿತಿ ಸುಧಾರಿಸಿದಲ್ಲಿ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಪಾವತಿಸಲು ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಹೊಸದಾಗಿ ನೇಮಕಗೊಂಡ ಚಾಲಕ-ಕಂ-ನಿರ್ವಾಹಕರ ವೇತನ

375 (741) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹೊಸದಾಗಿ ನೇಮಕಾತಿ ಮಾಡಿಕೊಳ್ಳಲಾದ ಚಾಲಕ/ಚಾಲಕ ಕಂ ನಿರ್ವಾಹಕ ಇವರುಗಳಿಗೆ ಮಾಹೆಯಾನ ನೀಡುತ್ತಿರುವ ವೇತನವೆಷ್ಟು; ಯಾವ ಆಧಾರದ ಮೇಲೆ ಈ ವೇತನವನ್ನು ನಿಗದಿಪಡಿಸಲಾಗಿದೆ;

ಆ) ಈಗ ನೀಡಲಾಗುತ್ತಿರುವ ವೇತನವು ಖಾಸಗಿ ಸಂಸ್ಥೆಗಳು ನೀಡುತ್ತಿರುವ ವೇತನಕ್ಕಿಂತ ಕಮ್ಮಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈಗ ನೀಡುತ್ತಿರುವ ವೇತನದಿಂದ ಚಾಲಕ ಚಾಲಕ ಕಂ ನಿರ್ವಾಹಕ ಇವರುಗಳು ಸಂಸಾರ ನಿರ್ವಹಿಸುವುದು ಯಾವ ರೀತಿ ಸಾಧ್ಯ; ಇವರುಗಳ ವೇತನವನ್ನು ಹೆಚ್ಚಿಸಲು ಸರ್ಕಾರವು ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಆರ್. ಅಶೋಕ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಹೊಸದಾಗಿ ನೇಮಕಗೊಂಡ ಚಾಲಕರಿಗೆ ಮೊದಲನೆ ವರ್ಷ ರೂ.2800/- ಮತ್ತು 2 ನೇ ವರ್ಷ ರೂ.3,300/-ಹಾಗೂ ಚಾಲಕ ಕಂ ನಿರ್ವಾಹಕರಿಗೆ ಮೊದಲನೆ ವರ್ಷ ರೂ.2,500/- 2ನೇ ವರ್ಷ ರೂ.300/- ತರಬೇತಿ ಭತ್ಯೆ ನೀಡಲಾಗುತ್ತಿದೆ.

ಇದರ ಜೊತೆಗೆ ಈ ಕೆಳಕಾಣಿಸಿದ ಸೌಲಭ್ಯಗಳನ್ನು ನೀಡಲಾಗುತ್ತಿದೆ;

1. ತಿಂಗಳಲ್ಲಿ 22 ದಿನ ಕರ್ತವ್ಯ ನಿರ್ವಹಿಸಿದಲ್ಲಿ ಮಾಸಿಕ ರೂ.500/- ಹಾಜರಾತಿ ಪ್ರೋತ್ಸಾಹದನವಾಗಿ ನೀಡಲಾಗುತ್ತಿದೆ.
2. ಬೆಂಗಳೂರು ಹಾಗೂ ಮಂಗಳೂರು ಕೇಂದ್ರ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತರಬೇತಿ ನೌಕರರಿಗೆ ಮಾಸಿಕ ರೂ.500/- ಪರಿಶ್ರಮ ಭತ್ಯೆಯನ್ನು ನೀಡಲಾಗುತ್ತಿದೆ.
3. ಚಾಲಕ ಕಂ ನಿರ್ವಾಹಕ ಹುದ್ದೆಯ ಅಭ್ಯರ್ಥಿಗಳು ಎರಡೂ ಹುದ್ದೆಗಳಲ್ಲಿ ಒಟ್ಟಿಗೆ ಕರ್ತವ್ಯ ನಿರ್ವಹಿಸಿದಲ್ಲಿ ಒಂದು ಕರ್ತವ್ಯಕ್ಕೆ ರೂ.75/- ಪ್ರೋತ್ಸಾಹ ದನವನ್ನು ನೀಡಲಾಗುತ್ತಿದೆ.
4. ಕರ್ತವ್ಯ ನಿರ್ವಹಿಸಿ ಸಂದಾಯವಾದ ಒಟ್ಟು ಸಾರಿಗೆ ಆದಾಯದ ಶೇಕಡ 2 ರ ಮೊತ್ತವನ್ನು ಪ್ರೋತ್ಸಾಹ ದನವಾಗಿ ನೀಡಲಾಗುತ್ತಿದೆ.
5. ಸಮವಸ್ತ್ರ/ರೈನ್‌ಕೋಟ್/ಜರ್ಸಿ ವಿತರಿಸಲಾಗುತ್ತಿದ್ದು ಜೊತೆಗೆ ಹೊಲಿಗೆ ಖರ್ಚು ಹಾಗೂ ವಾಷಿಂಗ್ ಭತ್ಯೆಯನ್ನು ನೀಡಲಾಗುತ್ತಿದೆ.

ಈ ತರಭೇತಿ ಭತ್ಯೆಯನ್ನು ಮಂಡಳಿ ಅನುಮೋದನೆಯಂತೆ ನಿಗದಿ ಪಡಿಸಲಾಗಿದೆ.

ಆ) ಖಾಸಗಿ ಸಂಸ್ಥೆಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಹೆಚ್ಚು ಸೌಲಭ್ಯಗಳನ್ನು ನೀಡಲಾಗುತ್ತಿರುತ್ತದೆ. ಇದರಿಂದ ತರಬೇತಿ ನೌಕರರಿಗೆ ಜೀವನವನ್ನು ನಡೆಸಲು ಯಾವುದೇ ರೀತಿಯ ಹೊರೆಯಾಗುವುದಿಲ್ಲ.

ಇ) ಖಾಸಗಿ ಸಂಸ್ಥೆಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಹೆಚ್ಚು ಸೌಲಭ್ಯಗಳನ್ನು ನೀಡಲಾಗುತ್ತಿದೆ; ಇದರಿಂದ ತರಬೇತಿ ನೌಕರರಿಗೆ ಜೀವನವನ್ನು ನಡೆಸಲು ಯಾವುದೇ ರೀತಿಯ ಹೊರೆಯಾಗುವುದಿಲ್ಲ.

ಅಂಗನವಾಡಿ ಹಾಗೂ ಉಪ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವುದು

376 (380) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

0.17F-104

ಅ) ಅಂಗನವಾಡಿ ಮತ್ತು ಉಪ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳೇನು?

ಆ) ಬಿಜಾಪುರ ನಗರದಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಂಗನವಾಡಿ ಕೇಂದ್ರಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಿಜಾಪುರ ನಗರದಲ್ಲಿರುವ ಅಂಗನವಾಡಿ ಹಾಗೂ ಉಪ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು? ಅವು ಯಾವುವು? ವಿವರ ನೀಡುವುದು;

ಈ) ಬಿಜಾಪುರ ನಗರಕ್ಕೆ ಕಳೆದ ಮೂರು ವರ್ಷಗಳಿಂದ ಮಂಜೂರಾದ ಅಂಗನವಾಡಿ ಹಾಗೂ ಉಪ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು? ಅವು ಯಾವುವು?

ಉ) ಬಿಜಾಪುರ ನಗರದಲ್ಲಿ ಹೊಸದಾಗಿ ಅಂಗನವಾಡಿ ಹಾಗೂ ಉಪ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಕ್ರ.ಸಂ.	ನಗರ/ಜಿಲ್ಲೆ	ಬಂಧಿಸಲಾದ ಆರೋಪಿತರ ಸಂಖ್ಯೆ
1	ಬೀದರ್	ತನಿಖೆ ನಡೆದಿದ್ದು ಯಾರನ್ನು ಬಂಧಿಸಿರುವುದಿಲ್ಲ.
2	ಉಡುಪಿ	ತನಿಖೆ ನಡೆದಿದ್ದು ಯಾರನ್ನು ಬಂಧಿಸಿರುವುದಿಲ್ಲ.

2010ರಲ್ಲಿ ಚರ್ಚ್‌ಗಳ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ಬಂಧಿಸಲಾದ ಆರೋಪಿತರ ವಿವರ

ಕ್ರ.ಸಂ.	ನಗರ/ಜಿಲ್ಲೆ	ಬಂಧಿಸಲಾದ ಆರೋಪಿತರ ಸಂಖ್ಯೆ
1	ಮೈಸೂರು ನಗರ	ತನಿಖೆ ನಡೆದಿದ್ದು ಯಾರನ್ನು ದಸ್ತಗಿರಿ ಮಾಡಿರುವುದಿಲ್ಲ.
2	ಮಂಡ್ಯ	02
3	ಉಡುಪಿ	ತನಿಖೆ ನಡೆದಿದ್ದು ಯಾರನ್ನು ದಸ್ತಗಿರಿ ಮಾಡಿರುವುದಿಲ್ಲ.
	ಒಟ್ಟು	**02**

ಅಂಗನವಾಡಿ ಕಾರ್ಯಕರ್ತರ ಗೌರವ ಧನ

399 (965) ಶ್ರೀ ಗೋಪಾಲಭಂಡಾರಿ ಹೆಚ್ (ಕಾರ್ಕಳ) : ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ನೀಡಲಾಗುತ್ತಿರುವ ಗೌರವಧನ ಎಷ್ಟು; ಗೌರವಧನ ನೀಡುವಲ್ಲಿ ಆಗುತ್ತಿರುವ ತಾರತಮ್ಯ ಹಾಗೂ ವ್ಯತ್ಯಾಸಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಕೂಡಲೆ ಸರಿಪಡಿಸಲಾಗುವುದೇ;

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನದ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಚಿಕ್ಕಬಳ್ಳಾಪುರ, ಉಡುಪಿ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಈ ಹಿಂದಿನ ಸಾಲುಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ನಿಗದಿತ ಸಮಯದಲ್ಲಿ ಖಜಾನೆಯಿಂದ ಸೆಳೆಯದೆ ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ನೀಡುವಲ್ಲಿ ವಿಳಂಬವಾಗಿರುತ್ತದೆ. ಈ ರೀತಿಯ ಪ್ರಕರಣಗಳು ಉದ್ಭವಿಸಿದಾಗ ಕೂಡಲೆ ಸರ್ಕಾರದಿಂದ ಹೆಚ್ಚುವರಿ ಹಣ ಪಡೆದು ಸರಿಪಡಿಸಲಾಗುವುದು.

ಅನುಬಂಧ

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನದ ವಿವರ:

ಕ್ರ ಸಂ.	ವಿದ್ಯಾರ್ಹತೆಯ ವಿವರ	ಭಾರತ ಸರ್ಕಾರದಿಂದ ನೀಡುತ್ತಿರುವ ಗೌರವಧನ	ರಾಜ್ಯ ಸರ್ಕಾರ ದಿಂದ ನೀಡುತ್ತಿರುವ ಹೆಚ್ಚುವರಿ ಗೌರವಧನ	ಒಟ್ಟು
1	ಕಾರ್ಯಕರ್ತೆಯರಿಗೆ ಎಸ್.ಎಸ್.ಎಲ್.ಸಿ. ಫೇಲ್	ರೂ.1438	ರೂ.1000	ರೂ.2438
2	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 5 ವರ್ಷದ ಅನುಭವ	ರೂ.1469	ರೂ.1000	ರೂ.2469
3	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 10 ವರ್ಷದ ಅನುಭವ	ರೂ.1500	ರೂ.1000	ರೂ.2500

4	ಎಸ್.ಎಸ್.ಎಲ್.ಸಿ. ಉತ್ತೀರ್ಣ	ರೂ.1500	ರೂ.1000	ರೂ.2500
5	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 5 ವರ್ಷದ ಅನುಭವ	ರೂ.1531	ರೂ.1000	ರೂ.2531
6	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 10 ವರ್ಷದ ಅನುಭವ	ರೂ.1563	ರೂ.1000	ರೂ.2563
7	ಅಂಗನವಾಡಿ ಸಹಾಯಕಿಯರು	ರೂ.750	ರೂ.500	ರೂ.1250
8	ಮಿನಿ ಅಂಗನವಾಡಿ ಕಾರ್ಯಕರ್ತೆಯರು	ರೂ.750	ರೂ.500	ರೂ.1250

ಬಿ.ಎಂ.ಟಿ.ಸಿ. ಹವಾನಿಯಂತ್ರಿತ ಬಸ್ ಸೇವೆ

400 (941) ಶ್ರೀ ಹ್ಯಾರೀಸ್. ಎನ್.ಎ (ಶಾಂತಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಎಂ.ಟಿ.ಸಿ. ಹವಾನಿಯಂತ್ರಿತ ಬಸ್ ಸೇವೆಗಾಗಿ ಒಟ್ಟು ಎಷ್ಟು ಬಸ್‌ಗಳನ್ನು ಬಳಸಿಕೊಳ್ಳಲಾಗಿದೆ;

ಆ) ಹವಾ ನಿಯಂತ್ರಿತ ಬಸ್ ಸೇವೆಯನ್ನು ಲಾಭದಾಯಕ ಹಾಗೂ ಜಯಪ್ರಿಯಗೊಳಿಸಲು ಸರ್ಕಾರದ ಕಾರ್ಯಕ್ರಮಗಳೇನು;

ಇ) ಕಳೆದ ಎರಡು ವರ್ಷಗಳಲ್ಲಿನ ಲಾಭ-ನಷ್ಟದ ವಿವರಗಳೇನು; ಈ ಅವಧಿಯಲ್ಲಿನ ಬಸ್ ಖರೀದಿ ಕುರಿತು ವಿವರಗಳೇನು?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) ಬೆಂ.ಮ.ಸಾ.ಸಂಸ್ಥೆಯು ಹವಾನಿಯಂತ್ರಿತ ಬಸ್ಸು ಸೇವೆಗಾಗಿ ಒಟ್ಟು 530 ಬಸ್ಸುಗಳನ್ನು ಬಳಸಿಕೊಳ್ಳುತ್ತಿದೆ.

ಆ) ಹವಾನಿಯಂತ್ರಿತ ಸೇವೆಗಳನ್ನು ಜಯಪ್ರಿಯಗೊಳಿಸಲು ಮತ್ತು ಲಾಭದಾಯಕವನ್ನಾಗಿ ಮಾಡಲು ಬೆಂ.ಮ.ಸಾ.ಸಂಸ್ಥೆಯು ವಿವಿಧ ರೀತಿಯ ಕ್ರಮಗಳನ್ನು ಕೈಗೊಂಡಿರುತ್ತದೆ. ಅವುಗಳೆಂದರೆ :

- ಪ್ರಯಾಣಿಕರ ಆರ್ಥಿಕ ಮಟ್ಟವನ್ನು ಗಮನದಲ್ಲಿರಿಸಿಕೊಂಡು ಬಹುಮುಖ ದರ (ವಿವಿಧ ರೀತಿಯ ದರಗಳು) ವ್ಯವಸ್ಥೆಯನ್ನು ಜಾರಿಗೆ ತಂದಿದೆ.
- ಈ ಸೇವೆಗಳನ್ನು ಜನಪ್ರಿಯಗೊಳಿಸುವ ಸಲುವಾಗಿ ಸೆಪ್ಟೆಂಬರ್ 2008 ರಲ್ಲಿ 4 ದಿನಗಳ ಕಾಲ ಕೇವಲ ರೂ. 1/–ಕನಿಷ್ಟ ದರದಲ್ಲಿ ಆಚರಣೆಗೊಳಿಸಲಾಗಿದೆ.
- ಮಾಹಿತಿ ತಂತ್ರಜ್ಞಾನೇತರ ವಲಯಗಳಲ್ಲಿ ಆಮಂತ್ರಿತ ಕಡಿಮೆ ದರ ಪದ್ಧತಿಯನ್ನು ಜಾರಿಗೆ ತರಲಾಗಿದೆ.
- ಪರಿಗಣಿಸಲರ್ಹವಾದ ದರಗಳೊಂದಿಗೆ ಗೋಲ್ಡ್ ದಿನದ ಪಾಸುಗಳನ್ನು ಜಾರಿಗೆ ತರಲಾಗಿದೆ.
- ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಸಲಾಗುವ ಮಾಸಿಕ ಪಾಸುಗಳಿಗೆ ರಿಯಾಯಿತಿ ಜಾರಿಗೊಳಿಸಲಾಗಿದೆ.
- ವಾಯುವಜ್ರ ಸೇವೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಕರಪತ್ರಗಳು ಹಾಗೂ ಗುಣಮಟ್ಟದ ಪರಿಚಯ ಪತ್ರಗಳನ್ನು ವಿತರಿಸಲಾಗಿದೆ.
- ವಿಮಾನ ನಿಲ್ದಾಣದಲ್ಲಿ ವಾಯುವಜ್ರ ಸೇವೆಗಳ ಮಾಹಿತಿಯನ್ನು ಪ್ರದರ್ಶಿಸಲಾಗಿದೆ.'
- ಸುತ್ತುವಳಿ ಆಧಾರಿತ ಪ್ರಯಾಣ ಮತ್ತು ಆದಾಯದ ಅಧ್ಯಯನದೊಂದಿಗೆ ನಿರಂತರವಾಗಿ ಸೇವೆಗಳನ್ನು ಪರಿಷ್ಕರಿಸು ಪದ್ಧತಿ ಜಾರಿಯಲ್ಲಿದೆ.
- ಪ್ರಯಾಣಿಕರ ಸಂಖ್ಯೆಯನ್ನು ಹೆಚ್ಚಿಸುವ ಸಲುವಾಗಿ ವಿಮಾನ ನಿಲ್ದಾಣ ಸೇವೆಗಳಲ್ಲಿ ನಗರ ಪ್ರಯಾಣಿಕರ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ.

- ಸಾರ್ವಜನಿಕರ ವಿಶ್ವಾಸ ಗಳಿಸುವ ಸಲುವಾಗಿ ಸೇವೆಗಳ ಸಮಯಬದ್ಧ ಆಚರಣೆ.
- ಪ್ರಯಾಣಿಕರಿಗೆ ಮಾಹಿತಿ ಹಾಗೂ ಮೂಲಭೂತ ಸಹಾಯವನ್ನು ನೀಡುವ ಸಲುವಾಗಿ ವಾಯುವಜ್ರ ಸೇವೆಗಳ ಎಲ್ಲಾ ಪ್ರಾರಂಭದ ಸ್ಥಳಗಳಲ್ಲಿ ನಿಯಂತ್ರಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
- ಈ ಸೇವೆಗಳಿಗೆ ವಿಶೇಷವಾಗಿ ತರಬೇತುಗೊಂಡ, ಉತ್ತಮ ಕರ್ತವ್ಯ ನಿಪುಣತೆಯ ಹಾಗೂ ಸೌಜನ್ಯಯುತ ನಡವಳಿಕೆಯುಳ್ಳ ಸಿಬ್ಬಂದಿಗಳನ್ನು ವಿಶೇಷ ಸಮವಸ್ತ್ರದೊಂದಿಗೆ ನಿಯೋಜಿಸಲಾಗಿದೆ.

ಇ) ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಗಳಿಸಿದ ಆದಾಯ, ಭರಿಸಿದ ವೆಚ್ಚ ಮತ್ತು ಗಳಿಸಿದ ಲಾಭದ ವಿವರ ಈ ಕೆಳಕಂಡಂತಿವೆ.

(ರೂ.ಕೋಟಿಗಳಲ್ಲಿ)

ವರ್ಷ	ಆದಾಯ	ವೆಚ್ಚ	ಲಾಭ
2007–08	939.81	799.58	140.23
2008–09	1000.63	945.45	55.18

ಸಂಸ್ಥೆಯು ಕಳೆದ ಎರಡು ವರ್ಷಗಳಲ್ಲಿ 1572 ಬಸ್ಸುಗಳನ್ನು ಖರೀದಿಸಿದ್ದು ವಿವರಗಳು ಕೆಳಕಂಡಂತಿರುತ್ತದೆ.

ವರ್ಷ	ಬಸ್ಸುಗಳ ಸಂಖ್ಯೆ	ವೆಚ್ಚ (ಕೋಟಿ ರೂ.ಗಳಲ್ಲಿ)
2007–08	623	80.77
2008–09	949	298.33

ಸ್ತ್ರೀ ಶಕ್ತಿ ಯೋಜನೆಯ ಬಲವರ್ಧನೆ

401 (942) ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯ ಅನುಷ್ಠಾನದ ವಿವರಗಳೇನು; ಸದರಿ ಗುಂಪುಗಳ ಜಿಲ್ಲಾವಾರು ಸಂಖ್ಯಾ ವಿವರಗಳು ಹಾಗೂ ಉಳಿತಾಯ ಸಾಧನೆಯ ವಿವರಗಳನ್ನು ನೀಡುವುದು;

ಆ) ಕೌಟುಂಬಿಕ ಏಳಿಗೆಯಲ್ಲಿ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಗಣನೀಯ ಪಾತ್ರ ವಹಿಸುವ ಸ್ತ್ರೀಶಕ್ತಿ ಗುಂಪುಗಳಿಗೆ ಸರ್ಕಾರದ ಪ್ರೋತ್ಸಾಹಕ ಯೋಜನೆಗಳೇನು; ಅವು ಯಾವುವು;

ಇ) ತಾಲ್ಲೂಕು ಮಟ್ಟದಲ್ಲಿ ಸ್ತ್ರೀಶಕ್ತಿ ಭವನವನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯು 2000-01ನೇ ಸಾಲಿನಲ್ಲಿ ಜಾರಿಗೆ ಬಂದಿದ್ದು, ಈ ಯೋಜನೆಯಡಿ 1.40 ಲಕ್ಷ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದ್ದು, 20.73 ಲಕ್ಷ ಸದಸ್ಯರಿರುತ್ತಾರೆ. ಜಿಲ್ಲಾವಾರು ಸಂಖ್ಯಾ ವಿವರಗಳು ಹಾಗೂ ಉಳಿತಾಯ ಸಾಧನೆಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಈ ದಿಸೆಯಲ್ಲಿ ಸ್ತ್ರೀಶಕ್ತಿ ಗುಂಪುಗಳನ್ನು ಪ್ರೋತ್ಸಾಹಿಸಲು ಪ್ರತೀ ವರ್ಷ ಈ ಕೆಳಕಂಡ ಸಂಖ್ಯೆಯಲ್ಲಿ ಅತ್ಯುತ್ತಮ ಸ್ತ್ರೀಶಕ್ತಿ ಗುಂಪುಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ.

ತಾಲ್ಲೂಕು	175
ಜಿಲ್ಲೆ	29
ರಾಜ್ಯ	07

ಹಾಗೂ ತಾಲ್ಲೂಕು- ಸ್ತ್ರೀಶಕ್ತಿ ಭವನ/ಮಾರುಕಟ್ಟೆ ಮಳಿಗೆಗಳನ್ನು ನಿರ್ಮಿಸಲಾಗುತ್ತಿದೆ. ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ಕೂಡ ನೀಡಲಾಗುತ್ತಿದೆ.

ಇ) ಹೌದು, 18 ತಾಲ್ಲೂಕು ಸ್ತ್ರೀಶಕ್ತಿ ಭವನಗಳು ಈಗಾಗಲೇ ಪೂರ್ಣಗೊಂಡಿರುತ್ತದೆ. 81 ತಾಲ್ಲೂಕು ಸ್ತ್ರೀಶಕ್ತಿ ಮಳಿಗೆ ನಿರ್ಮಾಣಕ್ಕಾಗಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಒಟ್ಟು ಗುಂಪುಗಳ ಸಂಖ್ಯೆ	ಒಟ್ಟು ಉಳಿತಾಯ ಕೋಟಿಗಳಲ್ಲಿ
1	ಬೆಂಗಳೂರು (ನಗರ)	5021	43.86
2	ಬೆಂಗಳೂರು (ಗ್ರಾ)	3317	23.10
3	ಬಾಗಲಕೋಟೆ	4000	26.30
4	ಬೆಳಗಾಂ	14492	58.18
5	ಬಳ್ಳಾರಿ	5510	31.84
6	ಬೀದರ್	3068	23.82
7	ಬಿಜಾಪುರ	3821	17.89
8	ಚಾಮರಾಜನಗರ	3800	21.06
9	ಚಿಕ್ಕಮಗಳೂರು	3052	20.68
10	ಚಿಕ್ಕಬಳ್ಳಾಪುರ	4700	25.13
11	ಚಿತ್ರದುರ್ಗ	4948	33.85
12	ದಾವಣಗೆರೆ	4704	30.87
13	ದಕ್ಷಿಣ ಕನ್ನಡ	3870	24.90
14	ಧಾರವಾಡ	3114	14.73
15	ಗದಗ್	3267	12.90
16	ಗುಲ್ಬರ್ಗ	9063	58.17
17	ಹಾಸನ	6318	41.50
18	ಹಾವೇರಿ	4670	28.61
19	ಕೊಡಗು	981	8.45
20	ಕೋಲಾರ	4122	19.82
21	ಕೊಪ್ಪಳ	2830	12.41

22	ಮಂಡ್ಯ	6482	55.83
23	ಮೈಸೂರು	6456	35.58
24	ರಾಯಚೂರು	4982	21.57
25	ರಾಮನಗರ	4592	32.85
26	ಶಿವಮೊಗ್ಗ	4144	24.18
27	ತುಮಕೂರು	9787	57.04
28	ಉಡುಪಿ	2759	19.06
29	ಉತ್ತರ ಕನ್ನಡ	2130	11.07
	ಒಟ್ಟು	**140000**	**835.25**

ಮಕ್ಕಳ ಹಕ್ಕುಗಳ ಕುರಿತಾದ ರಕ್ಷಣಾ ನಿಯಮಗಳು

402 (943) ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕಾಗಿ ಸರ್ಕಾರ ನಿಯಮಗಳನ್ನು ರೂಪಿಸಿದೆಯೇ; ಅದರಲ್ಲಿ ಅಡಕವಾಗಿರುವ ಪ್ರಮುಖವಾದ ಅಂಶಗಳೇನು;

ಆ) ಸದರಿ ಆಯೋಗವು ಸುವ್ಯವಸ್ಥಿತವಾಗಿ ಹಾಗೂ ಪರಿಣಾಮ ಕಾರಿಯಾಗಿ ಕಾರ್ಯನಿರ್ವಹಣೆ ಮಾಡುವಂತಾಗಲು ಪೂರಕ ಮತ್ತು ಪ್ರೋತ್ಸಾಹಕವಾದ ಕ್ರಮ-ನಿಯಮಗಳನ್ನು ರೂಪಿಸಲು ಸರ್ಕಾರ ಮುಂದಾಗುವುದೇ;

ಇ) ಸರ್ಕಾರದ ನಿಗದಿತ ನಿಯಮಗಳನುಸಾರ ಆಯೋಗದ ಹಕ್ಕು-ಬಾಧ್ಯತೆಗಳೇನು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು) :

ಅ) ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ನಿಯಮಗಳು 2010ನ್ನು ರೂಪಿಸಲಾಗಿದೆ ಇದರಲ್ಲಿ ಅಧ್ಯಕ್ಷರು ಮತ್ತು ಇದರ ಸದಸ್ಯರ ನೇಮಕಾತಿಯ ಅರ್ಹತೆಯ ಮಾನದಂಡಗಳು, ಸದಸ್ಯ ಕಾರ್ಯದರ್ಶಿಯವರ ಅಧಿಕಾರ ಮತ್ತು ಕರ್ತವ್ಯಗಳು, ಅಧ್ಯಕ್ಷರು ಮತ್ತು

ಇತರ ಸದಸ್ಯರ ಕಾಲಾವಧಿ ಅವರ ವೇತನ ಭತ್ಯೆ ಇತ್ಯಾದಿ ಸವಲತ್ತುಗಳು, ಆಯೋಗದ ವ್ಯವಹಾರ ನಿರ್ವಹಣೆ ವಿಧಾನ, ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾದ ವಾರ್ಷಿಕ ವರದಿ ಹಾಗೂ ಆಯೋಗದ ಆರ್ಥಿಕ ಅಧಿಕಾರಗಳನ್ನು ವಿವರಿಸಲಾಗಿದೆ.

ಆ) ಹೌದು, ಅವಶ್ಯವಿದ್ದಲ್ಲಿ, ಕ್ರಮವನ್ನು ವಹಿಸಲಾಗುವುದು.

ಇ) ಮಕ್ಕಳ ಹಕ್ಕುಗಳ ರಕ್ಷಣೆಯ ಆಯೋಗಗಳ ಅಧಿನಿಯಮ 2005ರ ಪ್ರಕರಣ 24 ಮತ್ತು 13(1) ರಲ್ಲಿ ಆಯೋಗದ ಅಧಿಕಾರ, ಕಾರ್ಯಗಳನ್ನು ನಿಗಧಿಪಡಿಸಲಾಗಿದೆ.

ಭಾಗ್ಯ ಲಕ್ಷ್ಮಿ ಯೋಜನೆಯ ಅನುಷ್ಠಾನ

403 (944) ಶ್ರೀ ಹ್ಯಾರೀಶ್ ಎನ್.ಎ (ಶಾಂತಿನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಈವರೆಗೆ ಗುರುತಿಸಲಾಗಿರುವ ಒಟ್ಟು ಜಿಲ್ಲಾವಾರು ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಯೋಜನೆಯ ಫಲಾನುಭವಿಗಳೆಲ್ಲರಿಗೂ ಬಾಂಡ್ ಒದಗಿಸಿ ಕೊಡಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಇ) 2008–09ನೇ ಮತ್ತು 2009–10ನೇ ಸಾಲಿಗಾಗಿ ಎಷ್ಟು ಫಲಾನುಭವಿಗಳನ್ನು ಗುರುತಿಸಿ ಬಾಂಡ್ ನೀಡಲಾಗಿದೆ;

ಈ) ಸದರಿ ಯೋಜನೆಯಡಿಯಲ್ಲಿ ಮಕ್ಕಳು ಅಂಗನವಾಡಿಯಲ್ಲಿಯೇ ಓದಬೇಕೆಂಬ ನಿಯಮವನ್ನು ಸಡಿಲಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಬಡ ಜನರಿಗೆ ಅನುಕೂಲವಾಗಬಹುದಾದ ಯೋಜನೆಯನ್ನು ಹೆಚ್ಚು ವ್ಯವಸ್ಥಿತಗೊಳಿಸಲು ಸರ್ಕಾರದ ಕ್ರಮಗಳೇನು?

ಶ್ರೀ. ಪಿ.ಎಂ. ನರೇಂದ್ರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು) :

ಅ) ಈವರೆವಿಗೆ 9,49,167 ಫಲಾನುಭವಿಗಳನ್ನು ಗುರುತಿಸಲಾಗಿದೆ. ಜಿಲ್ಲಾವಾರು ಫಲಾನುಭವಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) 9,49,167 ಫಲಾನುಭವಿಗಳ ಪೈಕಿ 7,20,562 ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗಿದ್ದು ಅನುದಾನ ಲಭ್ಯವಾದ ಕೂಡಲೇ ಎಲ್ಲಾ ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗುವುದು.

ಇ) 2008-09 ಮತ್ತು 2009-10 ಸಾಲಿನಲ್ಲಿ 4,29,900 ಫಲಾನುಭವಿಗಳನ್ನು ಗುರುತಿಸಿ ಬಾಂಡ್ ವಿತರಿಸಲಾಗಿದೆ.

ಈ) ಫಲಾನುಭವಿ ಹೆಣ್ಣು ಮಗು ಅಂಗನವಾಡಿಯಲ್ಲಿಯೇ ಓದಬೇಕೆಂಬ ನಿಯಮವಿರುವುದಿಲ್ಲ, ಯಾವುದೇ ಶಾಲಾಪೂರ್ವ ಶಿಕ್ಷಣ ಕೇಂದ್ರಕ್ಕೆ ಹಾಜರಾಗಬಹುದು ಆದರೆ ಅಂಗನವಾಡಿಗಳಿರುವ ಪ್ರದೇಶಗಳಲ್ಲಿ ಈ ಯೋಜನೆಯಡಿಯಲ್ಲಿ ದಾಖಲಾದ ಹೆಣ್ಣು ಮಗುವು 0-6 ವರ್ಷದವರೆಗೆ ನಿರಂತರವಾಗಿ ಅಂಗನವಾಡಿ ಕೇಂದ್ರಕ್ಕೆ ಹಾಜರಾಗಬೇಕು ಹಾಗೂ ನಂತರದಲ್ಲಿ ಶಿಕ್ಷಣ ಇಲಾಖೆಯಿಂದ ಅಂಗೀಕರಿಸಲ್ಪಟ್ಟ ಶಾಲೆಗಳಲ್ಲಿ ದಾಖಲಾಗಿ ವ್ಯಾಸಂಗವನ್ನು ಮುಂದುವರಿಸಬೇಕಾಗಿದೆ. ಮಕ್ಕಳು ಹುಟ್ಟಿದಾಗಿನಿಂದ 18 ವರ್ಷ ತಲುಪುವವರೆಗೆ ಮಕ್ಕಳ ಅಭಿವೃದ್ಧಿಯನ್ನು ಹಿಂಬಾಲಿಸುವ ಸಲುವಾಗಿ ಎನ್.ಐ.ಸಿ. ಸಂಸ್ಥೆಯ ಸಹಯೋಗದೊಂದಿಗೆ ಚೈಲ್ಡ್ ಟ್ರ್ಯಾಕಿಂಗ್ ಸಾಫ್ಟ್‌ವೇರ್ ತಯಾರಿಸಲಾಗಿದೆ.

ಅನುಬಂಧ

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 944

ಭಾಗ್ಯಲಕ್ಷ್ಮಿ ಯೋಜನೆಯಡಿ ಗುರುತಿಸಲಾಗಿರುವ ಫಲಾನುಭವಿಗಳ ಜಿಲ್ಲಾವಾರು ವಿವರ

ಕ್ರ ಸಂ.	ಜಿಲ್ಲೆಯ ಹೆಸರು	ಫಲಾನುಭವಿಗಳ ಸಂಖ್ಯೆ
1	ಬಾಗಲಕೋಟೆ	38280
2	ಬೆಂಗಳೂರು (ನ)	50726
3	ಬೆಂಗಳೂರು (ಗ್ರಾ)	14223
4	ರಾಮನಗರ	20679
5	ಬೆಳಗಾಂ	90015
6	ಬಳ್ಳಾರಿ	43245
7	ಬೀದರ್	25421

0.17F-117

8	ಬಿಜಾಪುರ	38754
9	ಚಾಮರಾಜನಗರ	17943
10	ಚಿಕ್ಕಮಗಳೂರು	18148
11	ಚಿತ್ರದುರ್ಗ	32668
12	ದಕ್ಷಿಣ ಕನ್ನಡ	10205
13	ದಾವಣಗೆರೆ	40784
14	ಧಾರವಾಡ	22234
15	ಗದಗ	24055
16	ಗುಲ್ಬರ್ಗ	75049
17	ಹಾಸನ	30392
18	ಹಾವೇರಿ	39231
19	ಕೊಡಗು	5329
20	ಕೋಲಾರ	22860
21	ಚಿಕ್ಕಬಳ್ಳಾಪುರ	22071
22	ಕೊಪ್ಪಳ	26589
23	ಮಂಡ್ಯ	38678
24	ಮೈಸೂರು	49622
25	ರಾಯಚೂರು	37077
26	ಶಿವಮೊಗ್ಗ	29554
27	ತುಮಕೂರು	52690
28	ಉಡುಪಿ	13663
29	ಉತ್ತರ ಕನ್ನಡ	19012
ಒಟ್ಟು		**949167**

ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಕೋರ್ಸ್‌ಗಳ ಸೀಟು

404 (945) ಶ್ರೀ ಎನ್.ಎ.ಹ್ಯಾರೀಸ್ (ಶಾಂತಿನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಶಿಕ್ಷಣ ಕಾಲೇಜುಗಳಲ್ಲಿ ಸ್ನಾತಕೋತ್ತರ ವೈದ್ಯ ಶಿಕ್ಷಣ ಕೋರ್ಸ್‌ಗಳಿಗೆ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ;

ಆ) ಅರ್ಹ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ ಮತ್ತು ಇತರೆ ಆರ್ಥಿಕ ನೆರವಿನ ಸಹಾಯವನ್ನು ಸರ್ಕಾರ ಒದಗಿಸಿ ಕೊಡುತ್ತಿದೆಯೇ; ಆ ಕುರಿತು ವಿವರಗಳೇನು;

ಇ) ಬೇಡಿಕೆಗನುಗುಣವಾಗಿ ವೈದ್ಯ ಸ್ನಾತಕೋತ್ತರ ಸೀಟುಗಳ ಹೆಚ್ಚಿಸುವ ಕುರಿತು ಸರ್ಕಾರದ ಕ್ರಮಗಳೇನು?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ)

	ವೈದ್ಯಕೀಯ	ದಂತ ವಿಜ್ಞಾನ
ಸ್ನಾತಕೋತ್ತರ ಪದವಿ	844	604
ಸ್ನಾತಕೋತ್ತರ ಡಿಪ್ಲೊಮಾ	429	–

ಆ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಾತ್ರ ಶುಲ್ಕವನ್ನು ಸರ್ಕಾರವು ಹಿಂಬರಿಸುತ್ತದೆ.

ಇ) ಇದೂವರೆವಿಗೆ ಒಬ್ಬ ಪ್ರಾಧ್ಯಾಪಕರಿಗೆ ಒಂದು ಸ್ನಾತಕೋತ್ತರ ಸೀಟಿ ಇದ್ದು, 2010–11ನೇ ಸಾಲಿನಿಂದ ಒಬ್ಬರು ಪ್ರಾಧ್ಯಾಪಕರಿಗೆ 2 ಸ್ನಾತಕೋತ್ತರ ಸೀಟುಗಳನ್ನು ಕೇಂದ್ರ ಸರ್ಕಾರ ನಿಗಧಿಗೊಳಿಸಿದೆ. ತತ್ಫಲವಾಗಿ ಸೀಟುಗಳ ಸಂಖ್ಯೆ ದ್ವಿಗುಣಗೊಳ್ಳಲಿದೆ.

ವಾಯುವ್ಯ ಕರ್ನಾಟಕ ಸಾರಿಗೆಯ ನಷ್ಟ ಹಾಗೂ ಸೇವೆ.

405 (724) ಶ್ರೀ ಜೆ.ಡಿ.ನಾಯ್ಕ (ಭಟ್ಕಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕಳೆದ ಎಷ್ಟು ವರ್ಷಗಳಿಂದ ನಷ್ಟದಲ್ಲಿ ನಡೆಯುತ್ತಿದೆ (ವರ್ಷವಾರು ನಷ್ಟದ ವಿವರ ನೀಡುವುದು);

ಆ) ಈ ಸಂಸ್ಥೆ ನಷ್ಟ ಅನುಭವಿಸಲು ಕಾರಣಗಳು ಏನು;

ಇ) ಈ ಸಂಸ್ಥೆ ವ್ಯಾಪ್ತಿಯಲ್ಲಿ ಯಾವ ಯಾವ ಜಿಲ್ಲೆ ಬರುತ್ತದೆ;

ಈ) ಒಳ್ಳೆಯ ಗುಣಮಟ್ಟದ ಸಾರಿಗೆ ವ್ಯವಸ್ಥೆ ನೀಡಲು ವಿಜಾಪುರ ಜಿಲ್ಲೆಯನ್ನು ಈಕರಸಾಸಂಸ್ಥೆಗೆ ಸೇರಿಸಿದ ಹಾಗೇ ಉತ್ತರ ಕನ್ನಡ ಜಿಲ್ಲೆಯನ್ನು ಕರಾರಸಾಸಂಸ್ಥೆಗೆ ಸೇರಿಸಿದರೆ ಒಳ್ಳೆಯದಲ್ಲವೆ;

ಉ) ಈ ಸಂಸ್ಥೆಯ ಹಣಕಾಸಿನ ನಷ್ಟಕ್ಕೆ ಯಾವ ಯಾವ ಅಧಿಕಾರಿಗಳು ಭಾಗಿದಾರರು ಹಾಗೂ ಜವಾಬ್ದಾರರು (ಅಧಿಕಾರಿಗಳ ವಿವರ ಕೊಡುವುದು)

ಊ) ಈ ಅಧಿಕಾರಿಗಳ ಮೇಲೆ ಯಾವ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಶ್ರೀ ಆರ್ ಅಶೋಕ್ (ಸಾರಿಗೆ ಸಚಿವರು) :

ಅ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಅನುಭವಿಸಿದ ವರ್ಷವಾರು ನಷ್ಟದ ವಿವರ ಕೆಳಗಿನಂತಿರುತ್ತದೆ.

		ನಷ್ಟ
1) 2003–04	: ರೂ	9.68 ಕೋಟಿ
2) 2004–05	: ರೂ	62.38 ಕೋಟಿ
3) 2005–06	: ರೂ	30.20 ಕೋಟಿ
4) 2006–07	: ರೂ	———————
4) 2007–08	: ರೂ	67.06 ಕೋಟಿ
5) 2008–09	: ರೂ	68.56 ಕೋಟಿ

ಆ)

1. 01-04-2003ರಿಂದ ಕಾಂಟ್ರ್ಯಾಕ್ಟ್ ಕ್ಯಾರೇಜ್ ಕಾಯ್ದೆಯನ್ನು ಮರು ಪ್ರಾರಂಭಿಸಿದರಿಂದಾಗಿ ಖಾಸಗಿ ವಾಹನಗಳ ಮಾಲೀಕರು ಈ ಕಾಯ್ದೆಯಡಿಯಲ್ಲಿ ಪರವಾನಿಗೆಯನ್ನು ಪಡೆದು ಸಂಪೂರ್ಣ ರಾಷ್ಟ್ರೀಕೃತ ಮಾರ್ಗಗಳ ಮೇಲೆ 288 ವಾಹನಗಳು ಕಾಂಟ್ರ್ಯಾಕ್ಟ್ ಕ್ಯಾರೇಜ್‌ಯಾಗಿ ಕಾರ್ಯಾಚರಣೆ ಮಾಡದೇ ಸ್ಟೇಜ್ ಕ್ಯಾರೇಜ್‌ಯಾಗಿ ಸಂಸ್ಥೆಯ ವಾಹನಗಳ ಸಮಾನಾಂತ ರವಾಗಿ ಕಾರ್ಯಾಚರಣೆ ಮಾಡುತ್ತಿರುವುದರಿಂದಾಗಿ ಸಂಸ್ಥೆಗೆ ಸೇರಬೇಕಾದ ಪ್ರತಿ ವರ್ಷ ಸುಮಾರು ರೂ.63.00 ಕೋಟಿ ಆದಾಯವು ನಷ್ಟವಾಗುತ್ತಿದೆ.
2. ಹುಬ್ಬಳ್ಳಿ-ಧಾರವಾಡ ನಗರಗಳ ಮಧ್ಯೆ ಬೇಂದ್ರೆ ನಗರ ಸಾರಿಗೆ ಖಾಸಗಿ ಸಂಸ್ಥೆಗೆ ಪ್ರತಿ ದಿನ 40 ವಾಹನಗಳಿಂದ 320 ಟ್ರಿಪ್ಪುಗಳನ್ನು ಕಾರ್ಯಾಚರಣೆ ಮಾಡಲು ಪರವಾನಿಗೆ ನೀಡಿದ್ದು, ಇದರಿಂದಾಗಿ ಸಂಸ್ಥೆಗೆ ಸೇರಬೇಕಾದ ರೂ 5.47 ಕೋಟಿಗಳಷ್ಟು ಆದಾಯವು ನಷ್ಟವಾಗುತ್ತಿದೆ.
3. ಸಂಸ್ಥೆಯ ವ್ಯಾಪ್ತಿಯು ಸಂಪೂರ್ಣ ರಾಷ್ಟ್ರೀಕೃತವಾಗಿದ್ದು, ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೆ ಕಡ್ಡಾಯವಾಗಿ ಕನಿಷ್ಠ ಸಾರಿಗೆ ಸೌಲಭ್ಯಗಳನ್ನು ಒದಗಿಸುವುದು ಜವಾಬ್ದಾರಿಯಾ ಗಿರುತ್ತದೆ. ಆದುದರಿಂದ ಸಂಸ್ಥೆಯು ಗ್ರಾಮಾಂತರ ಪ್ರದೇಶಗಳಲ್ಲಿ 1689 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಿ 5.33 ಲಕ್ಷ ಕಿ.ಮೀ.ಗಳ ಕಾರ್ಯಾಚರಣೆ ಮಾಡುತ್ತಿದೆ. ಇದಲ್ಲದೇ 544 ಅನುಸೂಚಿಗಳನ್ನು ನಗರ ಮತ್ತು ಉಪ-ನಗರಗಳಲ್ಲಿ ಪ್ರತಿದಿನ 1.33 ಲಕ್ಷ ಕಿ.ಮೀ.ಗಳಷ್ಟು ಕಾರ್ಯಾಚರಣೆ ಮಾಡುತ್ತಿದೆ. ಈ ಎಲ್ಲಾ ಕಾರ್ಯಾಚರಣೆಯ ಅಸ್ಥಿರ ಮತ್ತು ಅದಕ್ಕಿಂತ ಕಡಿಮೆ ಆದಾಯವನ್ನು ಗಳಿಸಲಾಗುತ್ತಿರುವುದರಿಂದ ಪ್ರತಿ ವರ್ಷ ಸುಮಾರು ರೂ. 75.79 ಕೋಟಿಗಳ ಕೊರತೆಯನ್ನು ಅನುಭವಿಸುತ್ತಿದೆ.

4. ಸಂಸ್ಥೆಯ ವ್ಯಾಪ್ತಿಯಲ್ಲಿ 531 ಬಸ್ಸುಗಳು, 2967 ಟೆಂಪೋ/ಟ್ರ್ಯಾಕ್ಸ್, 2759 ಮ್ಯಾಕ್ಸಿಕ್ಯಾಬ್ಸ್, 1491 ಜೀಪ್‌ಗಳು, 2947 ಟಮ್-ಟಮ್‌ಗಳು ಹೀಗೆ ಒಟ್ಟಾರೆ 10695 ಅನಧೀಕೃತ ಖಾಸಗೀ ವಾಹನಗಳ ಕಾರ್ಯಾಚರಣೆಯಿಂದಾಗಿ ಸಂಸ್ಥೆಯ ನಷ್ಟಕ್ಕೆ ಕಾರಣವಾಗಿರುತ್ತದೆ.
5. ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವಂತವ ಕೆಲವೊಂದು ರಸ್ತೆಗಳು ತುಂಬಾ ಹದಿಗೆಟ್ಟಿರುವುದರಿಂದಾಗಿ ವಾಹನಗಳ ನಿರ್ವಹಣಾ ವೆಚ್ಚ ಹೆಚ್ಚಾಗಿ ನಷ್ಟಕ್ಕೆ ಕಾರಣವಾಗುತ್ತಿದೆ.

ಇ) ವಾಕರಸಾಸಂಸ್ಥೆಯ ವ್ಯಾಪ್ತಿಯಲ್ಲಿ ಈ ಕೆಳಗಿನ ಜಿಲ್ಲೆಗಳು ಬರುತ್ತವೆ.

ಧಾರವಾಡ, ಬೆಳಗಾವಿ, ಬಾಗಲಕೋಟೆ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆ.

ಈ) ಈ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ.

ಉ) ಮತ್ತು ಊ) 2006-07ನೇ ಸಾಲಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲು ವ್ಯವಸ್ಥಾಪಕರ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇವರನ್ನು ಕೋರಲಾಗಿತ್ತು. ಸದರಿ ವ್ಯವಸ್ಥಾಪಕ ನಿರ್ದೇಶಕರು ಇವರು ಕೆಳಕಾಣಿಸಿದ ಅಧಿಕಾರಿಗಳಿಗೆ ಕಾರಣ ಕೇಳುವ ನೋಟಿಸನ್ನು ದಿನಾಂಕ: 22.6.2009 ರಂದು ನೀಡಿರುತ್ತಾರೆ.

(i) ಶ್ರೀ ಎಸ್.ಕೆ.ಪರಮೇಶ್, ಆಗಿನ ವ್ಯವಸ್ಥಾಪಕ ನಿರ್ದೇಶಕರು, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.
(ii) ಶ್ರೀ ಬಾಬುರಾವ್ ಹೆಚ್., ಪ್ರಧಾನ ವ್ಯವಸ್ಥಾಪಕರು, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.
(iii) ಶ್ರೀ ಎನ್.ಆರ್.ಜೋಶಿ, ಆಗಿನ ಕಾರ್ಯ ವ್ಯವಸ್ಥಾಪಕರು, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.
(iv) ಶ್ರೀ ಎನ್.ಎ. ಮುತ್ತು ಕೃಷ್ಣನ್ ಆಗಿನ ಪ್ರಭಾರ ಮುಖ್ಯ ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.

(v) ಶ್ರೀ ಬಿ. ವೆಂಕಟೇಶ್, ಆಗಿನ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.

(vi) ಶ್ರೀ ಮಹಮ್ಮದ್ ಖಾಲಿದ್, ಆಗಿನ ಪ್ರಭಾರ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ.

ಸದರಿ ಅಧಿಕಾರಿಗಳು ಲಿಖಿತ ಸಮುಜಾಯಿಷಿಯನ್ನು ಸಲ್ಲಿಸಿದ್ದು, ಅವರುಗಳು ಸಲ್ಲಿಸಿದ್ದ ಸಮಜಾಯಿಷಿಯ ಸತ್ಯಾಸತ್ಯತೆಯನ್ನು ತಿಳಿಯಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇವರು ಒಂದು ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ವರದಿ ನೀಡಿರುತ್ತದೆ. ಸದರಿ ವರದಿಯನ್ನು ಸರ್ಕಾರವು ಪರಿಶೀಲಿಸಿ ಹೆಚ್ಚಿನ ಹಾಗೂ ವಿಶೇಷ ತನಿಖೆಯನ್ನು ನಡೆಸಿ ವರದಿ ನೀಡುವಂತೆ ಮಹಾಲೇಖಪಾಲರನ್ನು ಕೋರಲಾಗಿದೆ. ಮಹಾಲೇಖಪಾಲರ ವರದಿಯನ್ನು ನಿರೀಕ್ಷಿಸಲಾಗಿದೆ.

ಭಟ್ಕಳ ತಾಲ್ಲೂಕಿಗೆ ಖಾಸಗಿ ಬಸ್ಸುಗಳಿಗೆ ಕೊಟ್ಟ ಪರವಾನಗಿ ವಿವರ

406 (725) ಶ್ರೀ ಜೆ.ಡಿ.ನಾಯ್ಕ (ಭಟ್ಕಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಹಾಗೂ ಉಡುಪಿ ಜಿಲ್ಲೆಯ ಉಡುಪಿ ಹಾಗೂ ಕುಂದಾಪುರದಿಂದ ಯಾವ ಯಾವ ಕಂಪನಿಯ ಬಸ್ಸುಗಳಿಗೆ ಯಾವ ಯಾವ ವೇಳೆಯಲ್ಲಿ ಪರ್ಮಿಟ್ (ರಹದಾರಿ ಪತ್ರ) ನೀಡಲಾಗಿದೆ ಅಂತಹ ಬಸ್ಸುಗಳ ಹಾಗೂ ವೇಳೆಯ ವಿವರ ನೀಡುವುದು;

ಆ) ಸರ್ಕಾರದ ಅಧಿಕೃತ ಪರವಾನಗಿ ಹೊರತಾಗಿ ಅನಧಿಕೃತವಾಗಿ ದುರ್ಗಾಂಭ, ಎ.ಪಿ.ಎಂ. ದುರ್ಗಾ ಪ್ರಸಾದ, ಹೆಚ್.ಎಂ.ಟಿ. ಹಾಗೂ ಸರ್ವೇಶ್ವರ ಕಂಪನಿಯ ಹೆಸರಿನ ಬಸ್ಸುಗಳು ಭಟ್ಕಳಕ್ಕೆ ಅನಧಿಕೃತವಾಗಿ ಪ್ರಯಾಣಿಕರನ್ನು ಸಾಗಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯಾ;

ಇ) ಈ ಕಂಪನಿಯ ಹೆಸರಿನ ಬಸ್ಸುಗಳು ದಿನಾಗಲೂ ಅನಧಿಕೃತವಾಗಿ ಕಾರ್ಯಾಚರಣೆ ಮಾಡುತ್ತಿದ್ದರೂ ಸಾರಿಗೆ ಇಲಾಖೆ ಅಧಿಕಾರಿಗಳು ಈ ಬಸ್ಸುಗಳ ಮೇಲೆ ಕಾನೂನು ಕ್ರಮಕೈಗೊಳ್ಳದೇ ಇರಲು ಕಾರಣಗಳು ಏನು;

ಈ) ಈ ಎಲ್ಲಾ ಅಂಶಗಳಿಗೆ ವಿವರವಾದ ವರದಿ ನೀಡಿ ಈ ಬಗ್ಗೆ ಕೂಡಲೇ ಕ್ರಮ ಜರುಗಿಸಿ ವಿವರ ನೀಡಲಾಗುವುದೇ?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಬಸ್ಸುಗಳ ಸಂಖ್ಯೆ, ಪರವಾನಿಗೆಯ ವಿವರ ಹಾಗೂ ವೇಳಾಪಟ್ಟಿಯ ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಆ) ಹೌದು.

ಇ) 2009–10ನೇ ಸಾಲಿನಲ್ಲಿ 5 ವಾಹನಗಳನ್ನು ತಪಾಸಣೆ ಮಾಡಿ ವಾಹನದ ದಾಖಲೆಗಳನ್ನು ಹಾಜರುಪಡಿಸದಿರುವುದಕ್ಕೆ ಹಾಗೂ ರಹದಾರಿ ನಿಬಂಧನೆಗಳನ್ನು ಉಲ್ಲಂಘಿಸಿದ್ದಕ್ಕೆ ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಪ್ರಕರಣಗಳಲ್ಲಿ ರೂ. 4900/– ರಾಜಿದಂಡ ವಸೂಲಿ ಮಾಡಲಾಗಿದೆ ಹಾಗೂ ಜೆ.ಎಂ.ಎಫ್.ಎಸಿ ಭಟ್ಕಳದಲ್ಲಿ ಚಾರ್ಜ್‌ಷೀಟ್ ದಾಖಲಾಗಿದ್ದು 3 ಪ್ರಕರಣ ಗಳಲ್ಲಿ ತಲಾ 2000/– ರೂ ನಂತೆ ಒಟ್ಟು ರೂ.6000/– ದಂಡ ವಸೂಲಿಸ ಲಾಗಿದೆ. ಒಂದು ಪ್ರಕರಣ ಇನ್ನೂ ಜೆ.ಎಂ.ಎಫ್.ಸಿ ಯಲ್ಲಿ ಬಾಕಿ ಉಳಿದಿದೆ.

ಈ) ಅನಧಿಕೃತ ಹಾಗೂ ರಹದಾರಿ ನಿಬಂಧನೆಗಳನ್ನು ಉಲ್ಲಂಘಿಸಿ ವಾಹನಗಳು ಸಂಚರಿಸುವುದು ಕಂಡು ಬಂದಲ್ಲಿ ಕಾನೂನು ರೀತಿ ಕ್ರಮ ಜರುಗಿಸಲಾಗುವುದು.

0.17E-118

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿಗೆ ಮಂಗಳೂರು, ಉಡುಪಿ ಹಾಗೂ ಕುಂದಾಪುರದಿಂದ ಸಂಚರಿಸುವ ವಾಹನ ಸಂಖ್ಯೆ ಹಾಗೂ ರಹದಾರಿಗಳ ವಿವರ

ಕ್ರ. ಸಂ.	ಕಂಪನಿಯ ಹೆಸರು	ವಾಹನ ಸಂಖ್ಯೆ	ರಹದಾರಿ ಸಂಖ್ಯೆ ಹಾಗೂ ಮಾರ್ಗ	ವೇಳಾಪಟ್ಟಿಯ ವಿವರ	
1	ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪನಿ, ಉಡುಪಿ	ಕೆಎ-20/ಬಿ 4837	02/ಎಸ್/83-84 ಅವಧಿ: 07-07-2011 ಭಟ್ಕಳದಿಂದ – ಗುರುವಾಯನಕೆರೆ	ಭಟ್ಕಳ D 6.10 am A 9.05 pm	ಗುರುವಾಯನಕೆರೆ A 11.25 am D 01.00 pm
2	ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪನಿ, ಉಡುಪಿ	ಕೆಎ-20/ಬಿ 4737	01/ಉಡುಪಿ/99-00, ಅವಧಿ:31-03-2014 (ಹಳೆಯ ರಹದಾರಿ ಸಂಖ್ಯೆ: 67/ಎಸ್/85-88) ಗುರುವಾಯನಕೆರೆಯಿಂದ – ಭಟ್ಕಳ	ಗುರುವಾಯನಕೆರೆ D 6.50 am A 6.40 pm	ಭಟ್ಕಳ A 12.11 pm D 01.15 pm
3	ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪನಿ, ಉಡುಪಿ	ಕೆಎ-20/ 8860	6/86-87 ಶಿವಮೊಗ್ಗ– ಭಟ್ಕಳ	ಬೈಂದೂರು A 11.25 am D 11.30 am	ಭಟ್ಕಳ A 12.00 pm

4	ಎಸಿಎಂ ಮೋಟಾರ್ಸ್, ಹೆಬ್ರಿ	ಕೆಎ-20/ಬಿ 6147	7/ಐಸಿ/93-94, ಅವಧಿ: 11-04-13 ಕುಂದಾಪುರ-ಭಟ್ಕಳ-ಮಾರುಕೇರಿ	ಕುಂದಾಪುರ D 7.15 A 9.46 D 9.47 A 1.07 pm D 1.27 A 5,41 D 5.45 A 9.15 D 9.40 A 12.25 am Halt	ಭಟ್ಕಳ A 8.25 D 8.26 A 8.35 D 8.37 A 11.02 D 11.03 A 11.34 D 12.00 A 2.34 D 2.35 A 4.00 D 4.35 A 6.55 D 6.56 A 7.24 D 8.05 A 10.50 D 10.56 A 11.10 D 11.15	ಮಾರುಕೇರಿ A 8.30 am D 8.31 A 11.06 D 11.30 A 2.39 D 3.56 A 7.00 D 7.20 A 11.00 D 11.06
೫	ಅಂಜನಾ [illegible], ಉಡುಪಿ	ಕೆಎ-20/ಎಬಿ 6352	188/ಐಸಿ/88-89, ಅವಧಿ: 24-08-2013 ಮಂಗಳೂರು ಸರ್ವಿಸ್ ನಿಲ್ದಾಣ- ಭಟ್ಕಳ.	ಮಂಗಳೂರು ಸರ್ವಿಸ್ ನಿಲ್ದಾಣ D 6.33 am A 6.33 pm	ಭಟ್ಕಳ A 10.51 am D 2.15 pm	

6	ಶಿಶಿರ್ ಕುಮಾರ್ ಹೆಗಡೆ, ಉಡುಪಿ	ಕೆಎ-20/ಬಿ 2376	166/ಬಿಕೆ/98-99 ಅವಧಿ: 16-08-2013 ಭಟ್ಕಳದಿಂದ – ಮಂಗಳೂರು	ಭಟ್ಕಳ A – D 7.00 am A 8.45 D -	ಕುಂದಾಪುರ 8.35 8.45 7.00 7.10	ಮಂಗಳೂರು 11.15 - - 4.42
7	ಕೃಷ್ಣಾನಂದ ಶಾಸ್ತ್ರಿ ಕುಂದಾಪುರ	ಕೆಎ-20/ 4678	14/86-87 ಅವಧಿ: 28-12-2011 ಕುಂದಾಪುರ-ಸಾಗರ	ಕುಂದಾಪುರ A - D 8.15 am A 6.41 D -	ಭಟ್ಕಳ A 9.36 D 9.40 A 4.46 D 5.20	
8	ಹೆಚ್. ಪ್ರಸಾದ್ [illegible], ಉಡುಪಿ	ಕೆಎ-20/ಬಿ 6842	10/03-04 ಅವಧಿ: 09-09-2013 [illegible] – [illegible] [illegible]– [illegible] ವಯಾ: [illegible]	ಕುಂದಾಪುರ A 4.40 D 4.45 A 6.35 D 6.40 A 7.15 D 7.20 A 10.40 - D 10.45 - A 1.40 D 1.45 A 2.20 D 2.30 A 5.05	[illegible] A 5.40 D 5.40	[illegible] - - - - 8.35 - 9.25 - - - 12.00 12.25 - - A 3.45 D 3.50

				- D 5.15 - A 7.50 D 7.55		- A 6.20 - D 6.25 -
೮	ರಾಮಯ್ಯ ಶೇರುಗಾರ್, ಕುಂದಾಪುರ	ಕೆಎ-30/ 8403	11/03-04 ಅವಧಿ: 08-08-2013 ಕುಂದಾಪುರ – ಹಳ್ಳಿಹೊಳೆ ಹಳ್ಳಿಹೊಳೆ – ಕೋಟ ವಯಾ ಕುಂಭಾಶಿ	ಕೋಟ - - A 7.25 D 7.27	ಕುಂದಾಪುರ A 4.30 D 4.35 A 7.00 D 7.05 A 7.42 D 7.46 am - - A 11.27 D 11.55 - - A 02.52 D 04.09 - A 07.22 - - D 07.51 A 11.20 D 11.20	ಕುಂಭಾಶಿ- - - - - - - D 9.22 A 10.10 D 1.29 pm A 1.35 pm - - - A 5.32 - D 06.00 A 9.12 D 9.35 - - -

10	ಹೆಚ್. ಪ್ರತಿಬಾ ಬಲ್ಲಾಲ್, ಮಂಗಳೂರು	ಕೆಎ-20/ಬಿ 1037	26/ಎಸ್.ಕೆ. 76-78 ಅವಧಿ: 22-11-2011 ಅಲಬೆಕೋಡಿ – ದೇವಪುರ ಅಲಬೆಕೋಡಿ– ಕುಂದಾಪುರ	ಅಲಬೆಕೋಡಿ A – D 7.10 A 4.45 pm - - D 4.46 pm A 7.50 pm Halt	ಉಪ್ಪುಂದ A 7.30 am D 7.45 am A 4.35 am D 4.36 am A 5.02 am D 5.10 am A 7.25 D 7.30 pm	ಕುಂದಾಪುರ A 8.46 am D 8.48 am A 3.20 pm D 3.30 pm A 6.10 pm - - D 6.20 pm
11	ಹೆಚ್. ಪ್ರಸನ್ನ ಬಲ್ಲಾಲ್, ಮಂಗಳೂರು	ಕೆಎ-20/ಬಿ 4427	9/90-91 ಅವಧಿ: 19-08-2010 ಕಾಳ್ಗಿ – ಕುಂದಾಪುರ ಕಾಳ್ಗಿ– ತಿಥಲಪದವು	ಕಾಳ್ಗಿ A – D 6.30 am A- D- - - A 6.56 pm - - D 6.57 pm A 10.15 pm Halt	ಭಟ್ಕಳ A 6.45 am D 7.05 A 9.40 D – - D 9.45 am A 6.45 pm D 6.46 pm A 7.15 pm D 7.20 pm A 9.55 pm D 10.00 pm	ಕುಂದಾಪುರ A 8.10 am - - D 8.30 am A 10.55 D 11.01 A 5.22 pm D 5.35 pm A 8.45 - - 8.50 pm

12	ಶ್ರೀಮತಿ ಮಂಜುಳ ಅಭಯಚಂದ್ರ, ಮಂಗಳೂರು	ಕೆಎ-19/ಎ 3461	108/93-94 ಅವಧಿ: 08-04-2013 ತಲಗೋಡು – [illegible] ತಲಗೋಡು – ಉಡುಪಿ	ತಲಗೋಡು A – D 6.15 am A 3.31 am D – A – D 3.32 pm A 8.55 pm D Halt	ಭಟ್ಕಳ A 6.20 am D 6.40 am A 3.25 pm D 3.26 A 3.37 D 3.45 pm A 8.45 pm D 8.50 pm	ಕುಂದಾಪುರ A 7.55 D 7.58 A 2.05 pm D 2.15 A 4.55 D 4.56 pm A 7.08 pm D 7.30 pm
13	ವಿಜಯಕುಮಾರ, ಮಂಗಳೂರು	ಕೆಎ-19/ಎ 3848	1/89-90 ಅವಧಿ: 26-11-2014 ವಿಟ್ಲ-ಹಬ್ಬಳಿ	ಉಡುಪಿ A 11.08 D 11.12 A 5.04 D 5.05	ಕುಂದಾಪುರ A 12.12 pm D 12.15 pm A 4.00 D 4.03 pm	ಹಬ್ಬಳಿ A 1.26 D 3.00 pm
14	ವಿಜಯಕುಮಾರ ಮಂಗಳೂರು	ಕೆಎ-20/ಜಿ 6369	2/89-90 ಅವಧಿ: 26-11-2014 ಹಬ್ಬಳಿ– ವಿಟ್ಲ	ಹಬ್ಬಳಿ D 7.50 am A 8.16 pm Halt	ಕುಂದಾಪುರ A 9.08 am D 9.20 A 6.34 pm D 6.55 pm	ವಿಟ್ಲ A 1.45 pm D 2.07 pm
15	ವ್ಯವಸ್ಥಾಪಕ ಪಾಲುದಾರರು, ಮೆ: ದುರ್ಗಾಂಬಾ ಮೋಟಾರ್ಸ್, ಕುಂದಾಪುರ	ಕೆಎ-20/ಬಿ 7807	13/97-98 ಅವಧಿ: 18-08-2012 ಕನ್ಯಾನ – ಸಾಗರ	ಕುಂದಾಪುರ A 8.43 am D 8.51 A 8.52pm D 9.05 pm	ಭಟ್ಕಳ A 10.21 am D 10.30 A 6.59 D 7.00 pm	ಸಾಗರ A 2.00 pm D .345 pm
16	ಶ್ರೀ ಗಜಾನನ ಮೋಟಾರ್ ಟ್ರಾನ್ಸ್‌ಪೋರ್ಟ್ ಕಂಪನಿ ಲಿಮಿಟೆಡ್, ಸಾಗರ	ಕೆಎ-15/ 4604	131/99-2000 ಸಾಗರ – ಭಟ್ಕಳ	ಜೈನ್ ದಾರು D 7.00 am A 11.20	ಭಟ್ಕಳ A 7.30 am D 7.45 A 10.40 D 10.50	

				am D 1.45 pm A 7.00 pm	A 2.15 D 2.30 pm A 6.20 D 6.30 pm
17	ಶ್ರೀ ಗಜಾನನ ಮೋಟಾರ್ ಟ್ರಾನ್ಸ್ ಪೋರ್ಟ್ ಕಂಪನಿ ಲಿಮಿಟೆಡ್, ಸಾಗರ	ಕೆಎ-14/ಎ 573	132/99-2000 ಸಾಗರ - ಖಟ್ಟಳ	ಟೈಮ್ ದೂರು D 7.00 am A 11.20 am D 1.45 pm A 7.00 pm	ಖಟ್ಟಳ A 7.30 am D 7.45 A 10.40 D 10.50 A 2.15 D 2.30 pm A 6.20 D 6.30 pm

ರಾಜ್ಯದಲ್ಲಿ ಅಂಗನವಾಡಿ ಕಟ್ಟಡಗಳ ನಿರ್ಮಾಣ

409 (927) ಶ್ರೀ ಖಾದರ್ ಯು.ಟಿ.(ಮಂಗಳೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆ ಮಾಡಿರುವ ಹಣ ಎಷ್ಟು;

ಆ) ಇದರಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಹಣ ಎಷ್ಟು(ವಿವರ ನೀಡುವುದು);

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿರುವ ಹಣ ಎಷ್ಟು (ಕ್ಷೇತ್ರವಾರು ವಿವರ ನೀಡುವುದು);

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) 2009–10ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆ ಮಾಡಿರುವ ಹಣದ ವಿವರ ಈ ಕೆಳಗಿನಂತಿರುತ್ತದೆ.

1. ಇಲಾಖಾ ಅನುದಾನ – ರೂ.351.00 ಲಕ್ಷಗಳು
2. ನಬಾರ್ಡ್ ಸಹಯೋಗದಿಂದ – ರೂ.622.30 ಲಕ್ಷಗಳು
3. ವಿಶೇಷ ಅಭಿವೃದ್ಧಿ ಕಾರ್ಯಕ್ರಮ – ರೂ.1000.00 ಲಕ್ಷಗಳು

ಆ) ಅಂಗನವಾಡಿಗಳ ಕಟ್ಟಡ ನಿರ್ಮಾಣಕ್ಕೆ ಎಲ್ಲಾ ಹಣವನ್ನು ರಾಜ್ಯ ಸರ್ಕಾರವೇ ಭರಿಸುತ್ತದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಷೇತ್ರವಾರು ಅಂಗನವಾಡಿ ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿರುವ ಹಣ ವಿವರ ಈ ಕೆಳಗಿನಂತಿರುತ್ತದೆ.

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	ಬಿಡುಗಡೆ ಮಾಡಿರುವ ಹಣ
1	ಬಂಟ್ವಾಳ	ರೂ. 3.45 ಲಕ್ಷಗಳು
2	ಬೆಳ್ತಂಗಡಿ	ರೂ. 3.45 ಲಕ್ಷಗಳು
3	ಮಂಗಳೂರು	ರೂ. 3.45 ಲಕ್ಷಗಳು
4	ಸುಳ್ಯ	ರೂ. 3.45 ಲಕ್ಷಗಳು

ಕೊಪ್ಪಳ ಕ್ಷೇತ್ರವ್ಯಾಪ್ತಿಯ ಮುನಿರಾಬಾದ್ ಗ್ರಾಮದಲ್ಲಿರುವ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಬಗ್ಗೆ.

407 (606) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ತಾಲ್ಲೂಕಿನ ಮುನಿರಾಬಾದ್ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 50 ಹಾಸಿಗೆಗಳನ್ನಾಗಿಸಿ ಮೇಲ್ದರ್ಜೆಗೇರಿಸಲು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕೊಪ್ಪಳ ತಾಲ್ಲೂಕಿನ ಮುನಿರಾಬಾದ್ ಗ್ರಾಮದಲ್ಲಿ 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವು ಈಗಾಗಲೇ ಕಾರ್ಯನಿರ್ವಹಿಸುತ್ತಿದೆ. ಸದರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹಾಸಿಗೆಗಳ ಬಳಕೆ ಪ್ರಮಾಣ ಶೇಕಡ 60 ಕ್ಕಿಂತ ಕಡಿಮೆ ಇರುವುದರಿಂದ ಹಾಸಿಗೆಗಳ ಸಾಮರ್ಥ್ಯವನ್ನು ಇನ್ನೂ ಹೆಚ್ಚಿಸುವ ಅವಶ್ಯಕತೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಬಸ್ ಸೌಲಭ್ಯದ ಕೊರತೆ

410 (928) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶದವರು ಪ್ರಯಾಣಿಸಲು ಸರ್ಕಾರಿ ಮತ್ತು ಖಾಸಗಿ ಬಸ್ ಸೌಕರ್ಯಗಳಿಲ್ಲದೆ ಇರುವ ಗ್ರಾಮಗಳು ಯಾವುವು?

ಆ) ಇದುವರೆವಿಗೂ ಬಸ್ ಸೌಕರ್ಯವಿಲ್ಲದ ಗ್ರಾಮಗಳಾವುವು?

ಇ) ದಕ್ಷಿಣ ಕನ್ನಡ ಜಿಲ್ಲೆಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳನ್ನು ಗ್ರಾಮೀಣ ಪ್ರದೇಶಗಳಿಗೆ ಅನುಕೂಲವಾಗುವಂತೆ ಹೆಚ್ಚಿನ ಬಸ್ ಸೌಲಭ್ಯ ಒದಗಿಸಲು ಕೈಗೊಳ್ಳುವ ಕ್ರಮಗಳೇನು?

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 354 ಗ್ರಾಮಗಳಿವೆ. ಅವುಗಳಲ್ಲಿ 204 ಗ್ರಾಮಗಳು ರಾಷ್ಟ್ರೀಕೃತ ವಲ್ಲದ ವಲಯದಲ್ಲಿದ್ದು ಖಾಸಗಿ ಮತ್ತು ರಸ್ತೆ ಸಾರಿಗೆ ನಿಗಮದವರಿಂದ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದೆ. 150 ಗ್ರಾಮಗಳು ಸಾರಿಗೆ ನಿರ್ವಹಣೆಗೆ ರಾಷ್ಟ್ರೀಕೃತವಾಗಿರುವ ವಲಯದಲ್ಲಿ ರುತ್ತದೆ. ಸದರಿ ರಾಷ್ಟ್ರೀಕೃತ ವಲಯದಲ್ಲಿ ಬರುವ ಎಲ್ಲಾ ಗ್ರಾಮಗಳಿಗೆ ಸರ್ಕಾರಿ ಬಸ್ಸುಗಳ ವ್ಯವಸ್ಥೆಯನ್ನು ರಸ್ತೆ ಸಾರಿಗೆ ನಿಗಮದವರು ಒದಗಿಸಿರುತ್ತಾರೆ.

ಆ) ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಕೃತ ವಲ್ಲದ ವಲಯದಲ್ಲಿ ಎಲ್ಲಾ ಗ್ರಾಮಗಳಿಗೆ ಖಾಸಗಿ ಮತ್ತು ರಸ್ತೆ ಸಾರಿಗೆ ನಿಗಮದವರು ಹಾಗೂ ರಾಷ್ಟ್ರೀಕೃತ ವಲಯದಲ್ಲಿ ರಸ್ತೆ ಸಾರಿಗೆ ನಿಗಮದವರು ಸಾರಿಗೆ ಸೌಲಭ್ಯವನ್ನು ಒದಗಿಸಿರುವುದರಿಂದ ಸಾರಿಗೆ ಸೌಲಭ್ಯವಿಲ್ಲದ ಗ್ರಾಮಗಳು ಇರುವುದಿಲ್ಲ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸಾರ್ವಜನಿಕ ಪ್ರಯಾಣಿಕರು ನಿಗಮದ ವತಿಯಿಂದ ಸಾರಿಗೆ ಸೌಲಭ್ಯವನ್ನು ಒದಗಿಸಿಕೊಡುವಂತೆ ಕೋರಿರುವ ಹಿನ್ನಲೆಯಲ್ಲಿ ವಿವಿಧ ಮಾರ್ಗಗಳಲ್ಲಿ ಸಾರಿಗೆಗಳನ್ನು ಪ್ರಾರಂಭಿಸುವ ಸಲುವಾಗಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ. ಮಂಗಳೂರು ಇಲ್ಲಿ 25 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಪರವಾನಿಗಿಗಳು ಮಂಜೂರಾದ ನಂತರ ಸಾರಿಗೆಗಳನ್ನು ಅಳವಡಿಸಲು ಅಗತ್ಯ ಕ್ರಮವನ್ನು ತೆಗೆದುಕೊಳ್ಳ ಲಾಗುವುದು.

ಭಾಗ್ಯಲಕ್ಷ್ಮಿ ಯೋಜನೆ ಪ್ರಗತಿ ಬಗ್ಗೆ

411 (929) ಶ್ರೀ ಖಾದರ್. ಯು.ಟಿ. (ಮಂಗಳೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು (ಕ್ಷೇತ್ರವಾರು ಮತ್ತು ಜಿಲ್ಲಾವಾರು ವಿವರ ನೀಡುವುದು);

ಆ) ಕಳೆದ ವರ್ಷದಿಂದ ಈ ಯೋಜನೆಯ ಫಲಾನುಭವಿಗಳಿಗೆ ಸೌಲಭ್ಯಗಳು ಇಲ್ಲಿಯವರೆಗೂ ದೊರಕದೇ ಇರುವುದು ಸತ್ಯವೇ;

ಇ) ಬಾಕಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) 2007–08, 2008–09 ಮತ್ತು 2009–10ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ ಒಟ್ಟು 4,87,886 ಫಲಾನುಭವಿಗಳು ಭಾಗ್ಯಲಕ್ಷ್ಮಿ ಯೋಜನೆಯಡಿ ಪ್ರಯೋಜನ ಪಡೆದಿರುತ್ತಾರೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ. ಕ್ಷೇತ್ರವಾರು ಮಾಹಿತಿಯನ್ನು ಜಿಲ್ಲೆಗಳಿಂದ ಪಡೆದು ಒದಗಿಸಲಾಗುವುದು.

ಆ) ಇಲ್ಲ. ಇದುವರೆವಿಗೂ ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ಬಾಂಡ್‌ಗಳನ್ನು ವಿತರಿಸಲಾಗಿದೆ. ಬಾಕಿಯಿರುವ ಫಲಾನು ಭವಿಗಳಿಗೆ ಸಹ ಹಣ ಬಿಡುಗಡೆಯಾದ ಕೂಡಲೇ ಬಾಂಡ್ ವಿತರಿಸಲು ಕ್ರಮವಹಿಸಲಾಗುವುದು.

ಇ) ಫೆಬ್ರವರಿ 2010ರ ಅಂತ್ಯದವರೆಗೆ ಬಾಂಡ್ ವಿತರಣೆಗೆ ಬಾಕಿಯಿರುವ ಫಲಾನುಭವಿಗಳ ಸಂಖ್ಯೆ 2,28,605 ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ.

ಅನುಬಂಧ – 1

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 929

ಭಾಗ್ಯಲಕ್ಷ್ಮಿ ಯೋಜನೆಯಡಿ 2007–08 ರಿಂದ ಫೆಬ್ರವರಿ 2010ರ ವರೆಗೆ ಪ್ರಯೋಜನ ಪಡೆದುಕೊಂಡಿರುವ ಫಲಾನುಭವಿಗಳ ಜಿಲ್ಲಾವಾರು ಮಾಹಿತಿ.

ಕ್ರ ಸಂ.	ಜಿಲ್ಲೆಯ ಹೆಸರು	ಫಲಾನುಭವಿಗಳ ಸಂಖ್ಯೆ
1	ಬಾಗಲಕೋಟೆ	23451
2	ಬೆಂಗಳೂರು (ನ)	23907
3	ಬೆಂಗಳೂರು (ಗ್ರಾ)	8338
4	ರಾಮನಗರ	9449
5	ಬೆಳಗಾಂ	50761
6	ಬಳ್ಳಾರಿ	24375
7	ಬೀದರ್	13193

8	ಬಿಜಾಪುರ	23802
9	ಚಾಮರಾಜನಗರ	8317
10	ಚಿಕ್ಕಮಗಳೂರು	7241
11	ಚಿತ್ರದುರ್ಗ	14270
12	ದಕ್ಷಿಣ ಕನ್ನಡ	4261
13	ದಾವಣಗೆರೆ	23603
14	ಧಾರವಾಡ	11049
15	ಗದಗ	12177
16	ಗುಲ್ಬರ್ಗ	40673
17	ಹಾಸನ	17412
18	ಹಾವೇರಿ	20490
19	ಕೊಡಗು	3376
20	ಕೋಲಾರ	13124
21	ಚಿಕ್ಕಬಳ್ಳಾಪುರ	9542
22	ಕೊಪ್ಪಳ	11115
23	ಮಂಡ್ಯ	20185
24	ಮೈಸೂರು	25076
25	ರಾಯಚೂರು	14395
26	ಶಿವಮೊಗ್ಗ	15677
27	ತುಮಕೂರು	23692
28	ಉಡುಪಿ	5538
29	ಉತ್ತರ ಕನ್ನಡ	9397
	ಒಟ್ಟು	**487886**

ಅನುಬಂಧ – 2		
ವಿಧಾನ ಸಭಾ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 929		
ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಕಿ ಇರುವ ಅರ್ಜಿಗಳ ಜಿಲ್ಲಾವಾರು ಮಾಹಿತಿ.		
ಕ್ರ ಸಂ.	ಜಿಲ್ಲೆಯ ಹೆಸರು	ಫಲಾನುಭವಿಗಳ ಸಂಖ್ಯೆ
1	ಬಾಗಲಕೋಟೆ	6071
2	ಬೆಂಗಳೂರು (ನ)	13344
3	ಬೆಂಗಳೂರು (ಗ್ರಾ)	1700
4	ರಾಮನಗರ	5930
5	ಬೆಳಗಾಂ	21744
6	ಬಳ್ಳಾರಿ	10993
7	ಬೀದರ್	4913
8	ಬಿಜಾಪುರ	2115
9	ಚಾಮರಾಜನಗರ	5591
10	ಚಿಕ್ಕಮಗಳೂರು	6426
11	ಚಿತ್ರದುರ್ಗ	9148
12	ದಕ್ಷಿಣ ಕನ್ನಡ	2968
13	ದಾವಣಗೆರೆ	7544
14	ಧಾರವಾಡ	3195
15	ಗದಗ	5420
16	ಗುಲ್ಬರ್ಗ	18185
17	ಹಾಸನ	5953
18	ಹಾವೇರಿ	8783
19	ಕೊಡಗು	1114
20	ಕೋಲಾರ	4495
21	ಚಿಕ್ಕಬಳ್ಳಾಪುರ	7770
22	ಕೊಪ್ಪಳ	9321

23	ಮಂಡ್ಯ	10114
24	ಮೈಸೂರು	13852
25	ರಾಯಚೂರು	12958
26	ಶಿವಮೊಗ್ಗ	6770
27	ತುಮಕೂರು	12252
28	ಉಡುಪಿ	5769
29	ಉತ್ತರ ಕನ್ನಡ	4167
	ಒಟ್ಟು	**228605**

ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿನ PHC ಗಳಲ್ಲಿನ ಖಾಲಿ ಹುದ್ದೆ ಭರ್ತಿ ಮಾಡುವುದು

413 (94) ಶ್ರೀ ಕುಮಾರ ಸ್ವಾಮಿ .ಕೆ.ಜಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಗ್ರಾಮಾಂತರ ವಿಧಾನ ಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಿವಿಧ ಆರೋಗ್ಯ ಕೇಂದ್ರಗಳೆಷ್ಟು;

ಆ) ಈ ಕ್ಷೇತ್ರವಾರು ವ್ಯಾಪ್ತಿಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂದಿಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂಧಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು);

ಇ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಹುದ್ದೆಗಳು ಎಷ್ಟು ಖಾಲಿ ಇವೆ, (ಎಲ್ಲೆಲ್ಲಿದೆ, ವಿವರ ನೀಡುವುದು);

ಈ) ಈ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ, ಹಾಗೂ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿರುವ ಹೆಚ್ಚುವರಿ ಸಿಬ್ಬಂದಿಗಳನ್ನು ಮೇಲ್ಕಂಡ ಹುದ್ದೆಗಳಲ್ಲಿ ಭರ್ತಿ ಮಾಡಲಾಗುವುದೇ, (ವಿವರಿಸುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಶಿವಮೊಗ್ಗ ಗ್ರಾಮಾಂತರ ವಿಧಾನ ಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ 2 ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ 9 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಆ) ಈ ಆರೋಗ್ಯ ಕೇಂದ್ರಗಳಲ್ಲಿ 19 ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, 13 ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 6 ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ.

156 ಇತರೆ ಸಿಬ್ಬಂದಿಗಳ ಹುದ್ದೆಗಳು ಮಂಜೂರಾಗಿದ್ದು, 129 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 27 ಹುದ್ದೆಗಳು ಖಾಲಿ ಇವೆ.

ಇ) 1) ಕುಂಸಿ 2) ಹರಮಘಟ್ಟ 3) ಅರೆಬಿಳಚಿ ಈ 3 ಪ್ರಾಥಮಿಕ ಕೇಂದ್ರಗಳಲ್ಲಿ ತಲಾ ಒಂದು ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ.

ಈ) ವೈದ್ಯಾಧಿಕಾರಿಗಳ ಹುದ್ದೆಗಳು ಹಾಗೂ ಇತರೆ ಸಿಬ್ಬಂದಿಗಳ ಹುದ್ದೆಗಳು ಆಗಿಂದಾಗ್ಗೆ ವಯೋನಿವೃತ್ತಿ, ವರ್ಗಾವಣೆ ಮತ್ತು ಪದೋನ್ನತಿ ಯಿಂದ ತೆರವಾದ ಹುದ್ದೆಗಳಾಗಿವೆ.

ಶಿವಮೊಗ್ಗ ಜಿಲ್ಲೆಯ ಮೆಗ್ಗಾನ್ ಆಸ್ಪತ್ರೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯರು / ಸಿಬ್ಬಂದಿ ವರ್ಗದವರು ನಿಯೋಜನೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಅವರ ಸೇವೆಯನ್ನು ಹಂತ-ಹಂತವಾಗಿ ಹಿಂಪಡೆಯಲು ಕ್ರಮವಹಿಸಲಾಗುವುದು.

'ಆಶಾ' ಯೋಜನೆ ಅನುಷ್ಠಾನ

414 (95) ಶ್ರೀ ಕುಮಾರಸ್ವಾಮಿ ಕೆ.ಜಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಗ್ರಾಮೀಣ ಜನತೆಗೆ ಸಣ್ಣಪುಟ್ಟ ಕಾಯಿಲೆಗಳಿಗೆ ವೈದ್ಯರು ಗ್ರಾಮಗಳಿಗೆ ತೆರಳಿ ಉಪಚರಿಸುವ 'ಆಶಾ ಯೋಜನೆ' ಜಾರಿಗೆ ತರಲಾಗಿದೆ; ಕಳೆದ 3 ವರ್ಷಗಳಿಂದ ಈ ಯೋಜನೆಗಾಗಿ ಮಾಡಲಾದ ವೆಚ್ಚವೆಷ್ಟು;

ಆ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳ ಯಾವ ಗ್ರಾಮಗಳಲ್ಲಿ ಈ ಯೋಜನೆಯಡಿ

ರೋಗಿಗಳನ್ನು ಉಪಚರಿಸಲಾಗಿದೆ; ಗ್ರಾಮವಾರು ರೋಗಿಗಳ ಸಂಖ್ಯೆ ಹಾಗೂ ಮಾಡಲಾದ ವೆಚ್ಚವೆಷ್ಟು (ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದ ಒಟ್ಟು 30 ಜಿಲ್ಲೆಗಳಲ್ಲಿ ಆಶಾ ಯೋಜನೆಯನ್ನು ಜಾರಿಗೆ ತರಲಾಗಿದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಈ ಯೋಜನೆಗೆ ಒಟ್ಟು ರೂ. 59.62 ಕೋಟಿಗಳು ವೆಚ್ಚವಾಗಿದೆ.

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಆಶಾ ಯೋಜನೆಯನ್ನು 1-12-2009 ರಿಂದ ಪ್ರಾರಂಭ ಮಾಡಲಾಗಿದೆ. ಈ ಯೋಜನೆಯಡಿ ತರಬೇತಿ ಹೊಂದಿದ ಪ್ರತಿಯೊಬ್ಬ ಆಶಾ ಕಾರ್ಯಕರ್ತೆಯರಿಗೆ ಒಂದು ವೈದ್ಯಕೀಯ ಕಿಟ್‌ನ್ನು ಒದಗಿಸಲಾಗುವುದು. ಕಾರ್ಯಕರ್ತೆಯರು ಗ್ರಾಮೀಣ ಪ್ರದೇಶಗಳಿಗೆ ತೆರಳಿ ಸಣ್ಣ ಪುಟ್ಟ ಚಿಕಿತ್ಸೆ ನೀಡುವುದು, ಸಾಮಾನ್ಯ ಹೆರಿಗೆ ಮಾಡಿಸುವುದು, ತೊಂದರೆದಾಯಕ ಹೆರಿಗೆಗಳನ್ನು ಗುರುತಿಸಿ ಆಸ್ಪತ್ರೆಗಳಿಗೆ ಕೊಂಡೊಯ್ಯುವುದು ಹಾಗೂ ಸಮಗ್ರ ಆರೋಗ್ಯ ಶಿಕ್ಷಣ ಪಾಲನೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಇತ್ಯಾದಿ ಕರ್ತವ್ಯ ನಿರ್ವಹಿಸುವರು. ಇಲ್ಲಿಯವರೆಗೆ ಸೊರಬ, ಶಿಕಾರಿಪುರ, ತೀರ್ಥಹಳ್ಳಿ, ಹೊಸನಗರ ತಾಲ್ಲೂಕುಗಳಲ್ಲಿ ಒಟ್ಟು 238 ಆಶಾ ಕಾರ್ಯಕರ್ತೆಯರಿಗೆ ತರಬೇತಿ ನೀಡಲಾಗಿದೆ.

ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ ಕ್ರಮವಾಗಿ 200 ಮತ್ತು 215 ಆಶಾ ಕಾರ್ಯಕರ್ತೆಯರಿಗೆ ತರಬೇತಿ ನೀಡಲು ಗುರಿ ಹೊಂದಲಾಗಿದ್ದು, ಮುಂದಿನ ತಂಡಗಳಲ್ಲಿ ತರಬೇತಿ ನೀಡಲಾಗುತ್ತದೆ. ಆದುದರಿಂದ ಈ ಎರಡು ತಾಲ್ಲೂಕುಗಳಲ್ಲಿ ಈವರೆಗೆ ವೆಚ್ಚವಾಗಿರುವುದಿಲ್ಲ.

NHRM ಯೋಜನೆಯಡಿ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ NGO/ಸ್ವಯಂ ಸೇವಾ ಸಂಸ್ಥೆಗಳ ಪಾತ್ರ

415 (96) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರೋಗ್ಯ ಇಲಾಖೆಯು ಎನ್.ಆರ್.ಹೆಚ್.ಎಂ. ಮತ್ತು ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ ಎಷ್ಟು ಸ್ವಯಂ ಸೇವಾ ಸಂಸ್ಥೆಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ, ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಇವರ ಕಾರ್ಯವ್ಯಾಪ್ತಿ ಇರುತ್ತದೆ.;

ಆ) 2006–07, 2007–08, 2008–09ನೇ ಸಾಲುಗಳಲ್ಲಿ ಈ ಯೋಜನೆಯಡಿ ಈ ಸ್ವಯಂ ಸೇವಾ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಮೊಬಲಗು ಎಷ್ಟು; (ಘಟಕವಾರು ವಿವರ ಒದಗಿಸುವುದು);

ಇ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ಇಂತಹ ಎಷ್ಟು ಸ್ವಯಂ ಸೇವಾ ಸಂಸ್ಥೆಗಳು ಆ ಸಾರ್ವಜನಿಕ ಆರೋಗ್ಯ (Public Helath)ದ ಯಾವ ಉಪಶಾಖೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿವೆ (ಅವುಗಳ ವಿಳಾಸ ಇತ್ಯಾದಿ ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ.) ಅಡಿಯಲ್ಲಿ 41 ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ.) ಅಡಿಯಲ್ಲಿ 12 ಸ್ವಯಂ ಸೇವಾ ಸಂಸ್ಥೆಗಳು ಅಂದರೆ ಒಟ್ಟು 53 ಸ್ವಯಂ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಜಿಲ್ಲಾವಾರು ಕಾರ್ಯವ್ಯಾಪ್ತಿ ವಿವರವನ್ನು ಅನುಬಂಧ–1 ಹಾಗೂ–2 ರಲ್ಲಿ ನೀಡಲಾಗಿದೆ.

ಆ) ಕೆ.ಹೆಚ್.ಎಸ್.ಡಿ.ಆರ್.ಪಿ. ಯೋಜನೆಯಡಿ 2006–07, 2007–08 ನೇ ಸಾಲುಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೆ ಯಾವುದೇ ಮೊಬಲಗನ್ನು ಬಿಡುಗಡೆ ಮಾಡಿಲ್ಲ. 2008–09ನೇ ಸಾಲಿನಲ್ಲಿ, ಈ ಕೆಳಕಂಡಂತೆ ಸ್ವಯಂ ಸೇವಾ ಸಂಸ್ಥೆಗಳಿಗೆ ಮೊಬಲಗನ್ನು ಬಿಡುಗಡೆ ಮಾಡಲಾಗಿದೆ.

0175-120

ಸಂಸ್ಥೆಯ ಹೆಸರು	ಜಿಲ್ಲೆ
ಕರುಣಾ ಟ್ರಸ್ಟ್, ಬೆಂಗಳೂರು	12,91,500
ಉದ್ಭವ ಎಜುಕೇಷನಲ್ ಮತ್ತು ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಕೊಳ್ಳೆಗಾಲ	19,11,720
ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್, ಶಿವಮೊಗ್ಗ	18,86,304
ರೋಟರಿ ಸಂಸ್ಥೆ, ತರೀಕೆರೆ	17,83,200
ಸ್ಕೋಡ್‌ವೆಸ್, ಸಿರಸಿ	16,18,260
ಒಟ್ಟು ರೂ.	**84,90,984**

ಎನ್.ಆರ್.ಹೆಚ್.ಎಂ. ವ್ಯಾಪ್ತಿಯ ಸೇವಾ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಮೊಬಲಗಿನ ವಿವರಗಳನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.

ಇ) ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರದಲ್ಲಿ ಕೆ.ಹೆಚ್.ಎಸ್.ಡಿ.ಆರ್.ಪಿ. ಮತ್ತು ಎನ್.ಆರ್.ಹೆಚ್.ಎಂ. ಯೋಜನೆಗಳಡಿಯಲ್ಲಿ ಯಾವುದೇ ಸ್ವಯಂ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿಲ್ಲ.

ಅನುಬಂಧ – 1

ಎನ್.ಆರ್.ಹೆಚ್.ಎಂ. ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸೇವಾ ಸಂಸ್ಥೆಗಳ ವಿವರ:–

ಕ್ರಸಂ.	ಸ್ವಯಂ ಸೇವಾ ಸಂಸ್ಥೆ (ಘಟಕ)ಯ ಹೆಸರು	ಕಾರ್ಯವ್ಯಾಪಿ ಜಿಲ್ಲೆ
1	ವಿಶಾಲ್ ಎಂ.ಎನ್.ಜಿ.ಓ. ಬಿಜಾಪುರ	ಬಿಜಾಪುರ ಜಿಲ್ಲೆ.
2	ಪವಾರ್ ಎಫ್.ಎನ್.ಜಿ.ಓ. ಬಿಜಾಪುರ	ಬಿಜಾಪುರ ಜಿಲ್ಲೆ.
3	ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ಬಿಜಾಪುರ.	ಬಿಜಾಪುರ ಜಿಲ್ಲೆ.
4	ರೀಚ್ ಎಫ್.ಎನ್.ಜಿ.ಓ.	ಮುದ್ದೇಬಿಹಾಳ ತಾಲ್ಲೂಕು, ಬಿಜಾಪುರ ಜಿಲ್ಲೆ.
5	ಹಾಸನ ಅಭಿವೃದ್ಧಿ ಸೊಸೈಟಿ, ಸೋಷಿಯಲ್ ಡೆವಲಪ್‌ಮೆಂಟ್, ಹಾಸನ.	ಹಾಸನ ಜಿಲ್ಲೆ.

6	ಕಾರ್ಡಿಟ್ ಎಫ್.ಎನ್.ಜಿ.ಓ.	ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.
7	ಶ್ರೀಕಾಂತ ಎಫ್.ಎನ್.ಜಿ.ಓ.	ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.
8	ಪ್ರಚೋದನಾ ಎಫ್.ಎನ್.ಜಿ.ಓ.	ಚಾಮರಾಜನಗರ ತಾಲ್ಲೂಕು, ಹಾಸನ ಜಿಲ್ಲೆ.
9	ಜನಹಿತ ಎಂ.ಎನ್.ಜಿ.ಓ.	ರಾಯಚೂರು ಜಿಲ್ಲೆ.
10	ಜನಚೇತನ ಎಫ್.ಎನ್.ಜಿ.ಓ.	ರಾಯಚೂರು ಜಿಲ್ಲೆ.
11	ಶ್ರೀ ವೆಂಕಟೇಶ್ವರ ಅರ್ಬನ್ ಅಂಡ್ ರೂರಲ್ ಡೆವಲಪ್ ಮೆಂಟ್.	ಹಾವೇರಿ ಜಿಲ್ಲೆ.
12	ಪರಿವರ್ತನ ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.
13	ಪ್ರಗತಿ ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.
14	ಸ್ಫೂರ್ತಿ ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.
15	ವಾಹಕ್ ಎಂ.ಎನ್.ಜಿ.ಓ. ಬೆಂಗಳೂರು.	ಮೈಸೂರು ಜಿಲ್ಲೆ.
16	ಮೈತ್ರಿ ಇನ್ಸ್‌ಟಿಟ್ಯೂಟ್ ರೂರಲ್ ಡೆವಲಪ್‌ಮೆಂಟ್, ಎಫ್.ಎನ್.ಜಿ.ಓ.	ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ.
17	ಶ್ರೀ ಅನ್ನಪೂರ್ಣ ಚಾರಿಟಬಲ್ ಟ್ರಸ್ಟ್, ಎಫ್.ಎನ್.ಜಿ.ಓ. ಹುಣಸೂರು.	ಮೈಸೂರು ಜಿಲ್ಲೆ.
18	ನಿಸರ್ಗ ಫೌಂಡೇಷನ್, ಎಫ್.ಎನ್.ಜಿ.ಓ.	ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.
19	ವಿಕಾಸ್ ಆರ್.ಡಿ.ಓ. ಎಫ್.ಎನ್.ಜಿ.ಓ.	ಹೆಚ್.ಡಿ.ಕೋಟೆ.
20	ಶ್ರೀ ವೆಂಕಟೇಶ್ವರ ಹರ್ಬನ್ ಅಂಡ್ ರೂರಲ್ ಡೆವಲಪ್ ಮೆಂಟ್ ಸೊಸೈಟಿ, ಎಂ.ಎನ್.ಜಿ.ಓ.	ಹಾವೇರಿ ಜಿಲ್ಲೆ.

21	ಪರಿವರ್ತನ, ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.
22	ಪ್ರಗತಿ ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.
23	ಸ್ಫೂರ್ತಿ ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.
24	ಗೌರಿಶಂಕರ್, ಎಫ್.ಎನ್.ಜಿ.ಓ..	ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ.
25	ಮೈತ್ರಿ ಅಸೋಷಿಯೇಷನ್, ಎನ್.ಜಿ.ಓ.	ಗದಗ್ ಮತ್ತು ದಾವಣಗೆರೆ ಜಿಲ್ಲೆ.
26	ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಆಫ್ ಇಂಡಿಯಾ, ಬಿಜಾಪುರ.	ಬಿಜಾಪುರ ಜಿಲ್ಲೆ.
27	ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಆಫ್ ಇಂಡಿಯಾ, ಧಾರವಾಡ.	ಧಾರವಾಡ ಜಿಲ್ಲೆ.
28	ಕರುಣಾ ಟ್ರಸ್ಟ್, ಬೆಂಗಳೂರು.	ಚಿಕ್ಕಮಗಳೂರು ಜಿಲ್ಲೆ.
29	ವಿವೇಕಾನಂದ, ಎನ್.ಜಿ.ಓ.	ಕೋಲಾರ ಜಿಲ್ಲೆ.
30	ಸುರಕ್ಷಾ ಎನ್.ಜಿ.ಓ.	ಕೊಡಗು ಜಿಲ್ಲೆ.
31	ಸ್ಕೋಡ್ ವೇಸ್, ಎನ್.ಜಿ.ಓ.	ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆ.
32	ಕಡ್ಸ್, ಎನ್.ಜಿ.ಓ.	ಉಡುಪಿ ಜಿಲ್ಲೆ.
33	ವಿಮೋಚನಾ ಎನ್.ಜಿ.ಓ.	ಬೆಳಗಾಂ ಜಿಲ್ಲೆ.
34	ಕರುಣಾ ಟ್ರಸ್ಟ್, ಎನ್.ಜಿ.ಓ.	ಬೆಂಗಳೂರು.
35	ಸುರಕ್ಷಾ, ಎನ್.ಜಿ.ಓ.	ಬೆಂಗಳೂರು.
36	ವಿಶ್ವಭಾರತಿ ಕಲಾನಿಕೇತನ ಅಂಡ್ ಎಜುಕೇಷನ್ ಸೊಸೈಟಿ, ಬಳ್ಳಾರಿ.	ಚಿತ್ರದುರ್ಗ, ದಾವಣಗೆರೆ ಮತ್ತು ಗದಗ್ ಜಿಲ್ಲೆ.
37	ಸ್ನೇಹ ಚಾರಿಟಬಲ್ ಟ್ರಸ್ಟ್, ಬೆಂಗಳೂರು.	ಕೋಲಾರ ಜಿಲ್ಲೆ.
38	ಡೆಕ್ಕನ್ ಫೌಂಡೇಷನ್, ಮುಳಬಾಗಿಲು.	ಚಿಕ್ಕಬಳ್ಳಾಪುರ ಜಿಲ್ಲೆ.
39	ಸ್ವಾಮಿ ವಿವೇಕಾನಂದ ಇಂಟಗ್ರೇಟೆಡ್	ತುಮಕೂರು ಜಿಲ್ಲೆ.

	ರೂರಲ್ ಹೆಲ್ತ್ ಸೆಂಟರ್, ಪಾವಗಡ.	
40	ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಆಫ್ ಇಂಡಿಯಾ, ಧಾರವಾಡ.	ಧಾರವಾಡ ಜಿಲ್ಲೆ.
41	ಬಾಪೂಜಿ ಗ್ರಾಮೀಣ ವಿಕಾಸ ಸಮಿತಿ, ಕಾರವಾರ.	ಹಾವೇರಿ, ಉತ್ತರ ಕನ್ನಡ ಜಿಲ್ಲೆ.
42	ಇನ್ಸ್‌ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್, ಬೆಂಗಳೂರು	ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆ.

ಅನುಬಂಧ – 2

ಕೆ.ಹೆಚ್.ಎಸ್.ಡಿ.ಆರ್.ಪಿ. ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸೇವಾ ಸಂಸ್ಥೆಗಳ ವಿವರ:–

ಕ್ರಸಂ.	ಸ್ವಯಂ ಸೇವಾ ಸಂಸ್ಥೆ (ಘಟಕ) ಯ ಹೆಸರು	ಕಾರ್ಯವ್ಯಾಪ್ತಿ ಜಿಲ್ಲೆ
1	ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್, ಶಿವಮೊಗ್ಗ	ಶಿವಮೊಗ್ಗ (ಸಾಗರ, ತೀರ್ಥಹಳ್ಳಿ ತಾಲ್ಲೂಕುಗಳಿಗೆ ಸೀಮಿತವಾದಂತೆ)
2	ರೋಟರಿ ಸಂಸ್ಥೆ, ತರೀಕೆರೆ,	ಚಿಕ್ಕಮಗಳೂರು ಜಿಲ್ಲೆ.
3	ಕರುಣಾ ಟ್ರಸ್ಟ್	ಚಾಮರಾಜನಗರ ಜಿಲ್ಲೆ ಹಾಗೂ ತಾಲ್ಲೂಕು, ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ, ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿಗೆ, ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿಗೆ ಸೀಮಿತವಾದಂತೆ.

4	ಉದ್ಭವ್ ಎಜುಕೇಷನ್ ಅಂಡ್ ರೂರಲ್ ಸೊಸೈಟಿ, ಕೊಳ್ಳೇಗಾಲ.	ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕಿಗೆ ಸೀಮಿತವಾದಂತೆ.
5	ಸ್ಕೋಡ್ ವೆಸ್, ಸಿರಸಿ.	ಉತ್ತರ ಕನ್ನಡ, ಕುಮಟಾ, ಸಿದ್ದಾಪುರ ಮುಂಡಗೋಡು, ದಾಂಡೇಲಿ ತಾಲ್ಲೂಕಿಗೆ ಸೀಮಿತವಾದಂತೆ.
6	ಚೈತನ್ಯ ಅರ್ಬನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸಂಸ್ಥೆ, ಬೈಲಹೊಂಗಲ.	ಬೆಳಗಾಂ ಜಿಲ್ಲೆ, ಬೈಲಹೊಂಗಲ.
7	ಯುನೈಟೆಡ್ ಸೋಷಿಯಲ್ ವೆಲ್ ಫೇರ್ ಅಸೋಷಿಯೇಷನ್, ಬೆಳಗಾಂ.	ಬೆಳಗಾಂ ಜಿಲ್ಲೆ ರಾಯಬಾಗ್ ಹಾಗೂ ಖಾನಾಪೂರ್ ತಾಲ್ಲೂಕು.
8	ರಾಜಾಜಿ ಅಸೋಷಿಯೇಷನ್ ಬೀದರ್	ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕು.
9	ಕರ್ಡ್ಸ್, ಜಯನಗರ, ಬೆಂಗಳೂರು.	ಆನೇಕಲ್ ತಾಲ್ಲೂಕು.
10	ಪ್ರಜ್ವಲ್ ಆರೋಗ್ಯ ಸ್ವಯಂ ಸೇವಾ ಸಂಸ್ಥೆ, ಕೋಲಾರ.	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು.
11	ಸುರಕ್ಷಾ ಸಂಸ್ಥೆ, ಬೆಂಗಳೂರು.	ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ.
12	ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್ ಲರ್ನಿಂಗ್ ಅಂಡ್ ವೆಲ್‌ಫೇರ್ ಸೊಸೈಟಿ, ಗುಲ್ಬರ್ಗಾ.	ಬೀದರ್, ಗುಲ್ಬರ್ಗಾ, ರಾಯಚೂರು.

ಅನುಬಂಧ-3

ಎನ್.ಆರ್.ಹೆಚ್.ಎಂ. ಅಡಿಯಲ್ಲಿ ಅನುದಾನ ಬಿಡುಗಡೆಯ ವಿವರಗಳು :- 2006-07ನೇ ಸಾಲಿನಲ್ಲಿ ಎನ್.ಆರ್.ಹೆಚ್.ಎಂ. ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳಿಗೆ ಯಾವುದೇ ಅನುದಾನ ಬಿಡುಗಡೆ ಮಾಡಿಲ್ಲ. 2007-08 ಮತ್ತು 2008-09ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನದ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ.	ಸ್ವಯಂ ಸೇವಾ ಸಂಸ್ಥೆ (ಘಟಕ)ಯ ಹೆಸರು	ಕಾರ್ಯವ್ಯಾಪ್ತಿ ಜಿಲ್ಲೆ	2007-08	2008-09
1	ವಿಶಾಲ್ ಎಂ.ಎಸ್.ಜಿ.ಓ. ಬಿಜಾಪುರ	ಬಿಜಾಪುರ ಜಿಲ್ಲೆ.	62,500	ಇಲ್ಲ
2	ಪವಾರ್ ಎಫ್.ಎನ್.ಜಿ.ಓ. ಬಿಜಾಪುರ	ಬಿಜಾಪುರ ಜಿಲ್ಲೆ.	62,500	ಇಲ್ಲ
3	ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಆಫ್ ಇಂಡಿಯಾ, ಬಿಜಾಪುರ.	ಬಿಜಾಪುರ ಜಿಲ್ಲೆ.	62,500	ಇಲ್ಲ
4	ರೀಚ್ ಎಫ್.ಎನ್.ಜಿ.ಓ.	ಮುದ್ದೇಬಿಹಾಳ ತಾಲ್ಲೂಕು, ಬಿಜಾಪುರ ಜಿಲ್ಲೆ.	62,500	ಇಲ್ಲ
5	ಹಾಸನ ಅಭಿವೃದ್ಧಿ ಸೊಸೈಟಿ, ಸೋಷಿಯಲ್ ಡೆವಲಪ್ ಮೆಂಟ್, ಹಾಸನ.	ಹಾಸನ ಜಿಲ್ಲೆ.	62,500	ಇಲ್ಲ
6	ಕಾರ್ಡಿಟ್ ಎಫ್.ಎನ್.ಜಿ.ಓ.	ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.	62,500	ಇಲ್ಲ
7	ಶ್ರೀಕಾಂತ ಎಫ್.ಎನ್.ಜಿ.ಓ.	ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.	62,500	ಇಲ್ಲ
8	ಪ್ರಬೋಧನಾ ಎಫ್.ಎನ್.ಜಿ.ಓ.	ಚಾಮರಾಜನಗರ ತಾಲ್ಲೂಕು, ಹಾಸನ ಜಿಲ್ಲೆ.	62,500	ಇಲ್ಲ
9	ಜನಹಿತ ಎಂ.ಎನ್.ಜಿ.ಓ.	ರಾಯಚೂರು ಜಿಲ್ಲೆ.	62,500	ಇಲ್ಲ
10	ಜನಚೇತನ ಎಫ್.ಎನ್.ಜಿ.ಓ.	ರಾಯಚೂರು ಜಿಲ್ಲೆ.	62,500	ಇಲ್ಲ
11	ಶ್ರೀ ವೆಂಕಟೇಶ್ವರ ಅರ್ಬನ್ ಅಂಡ್ ರೂರಲ್ ಡೆವಲಪ್ ಮೆಂಟ್.	ಹಾವೇರಿ ಜಿಲ್ಲೆ.	62,500	ಇಲ್ಲ

12	ಪರಿವರ್ತನ ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.	62,500	ಇಲ್ಲ
13	ಪ್ರಗತಿ ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.	62,500	ಇಲ್ಲ
14	ಸ್ಫೂರ್ತಿ ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.	62,500	ಇಲ್ಲ
15	ವಾಹಕ್ ಎಂ.ಎನ್.ಜಿ.ಓ. ಬೆಂಗಳೂರು.	ಮೈಸೂರು ಜಿಲ್ಲೆ.	62,500	ಇಲ್ಲ
16	ಮೈತ್ರಿ ಇನ್ಸ್‌ಟಿಟ್ಯೂಟ್ ರೂರಲ್ ಡೆವಲಪ್‌ಮೆಂಟ್, ಎಫ್.ಎನ್.ಜಿ.ಓ.	ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ.	62,500	ಇಲ್ಲ
17	ಶ್ರೀ ಅನ್ನಪೂರ್ಣ ಚಾರಿಟಬಲ್ ಟ್ರಸ್ಟ್, ಎಫ್.ಎನ್.ಜಿ.ಓ. ಹುಣಸೂರು.	ಮೈಸೂರು ಜಿಲ್ಲೆ.	62,500	ಇಲ್ಲ
18	ನಿಸರ್ಗ ಫೌಂಡೇಷನ್, ಎಫ್.ಎನ್.ಜಿ.ಓ.	ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.	62,500	ಇಲ್ಲ
19	ವಿಕಾಸ್ ಆರ್.ಡಿ.ಓ. ಎಫ್.ಎನ್.ಜಿ.ಓ.	ಹೆಚ್.ಡಿ.ಕೋಟೆ.	62,500	ಇಲ್ಲ
20	ಶ್ರೀ ವೆಂಕಟೇಶ್ವರ ಹರ್ಬನ್ ಅಂಡ್ ರೂರಲ್ ಡೆವಲಪ್ ಮೆಂಟ್ ಸೊಸೈಟಿ, ಎಂ.ಎನ್.ಜಿ.ಓ.	ಹಾವೇರಿ ಜಿಲ್ಲೆ.	62,500	ಇಲ್ಲ
21	ಪರಿವರ್ತನೆ, ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.	62,500	ಇಲ್ಲ
22	ಪ್ರಗತಿ ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.	62,500	ಇಲ್ಲ
23	ಸ್ಫೂರ್ತಿ ಎಫ್.ಎನ್.ಜಿ.ಓ.	ಹಾವೇರಿ ಜಿಲ್ಲೆ.	62,500	ಇಲ್ಲ
24	ಗೌರಿಶಂಕರ್, ಎಫ್.ಎನ್.ಜಿ.ಓ.	ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ.	62,500	ಇಲ್ಲ
25	ಮೈತ್ರಿ ಅಸೋಷಿಯೇಷನ್, ಎನ್.ಜಿ.ಓ.	ಗದಗ್ ಮತ್ತು ದಾವಣಗೆರೆ ಜಿಲ್ಲೆ.	ಇಲ್ಲ	1,24,300
26	ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಆಫ್ ಇಂಡಿಯಾ, ಬಿಜಾಪುರ.	ಬಿಜಾಪುರ ಜಿಲ್ಲೆ.	ಇಲ್ಲ	1,24,300
27	ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಆಫ್ ಇಂಡಿಯಾ, ಧಾರವಾಡ.	ಧಾರವಾಡ ಜಿಲ್ಲೆ.	ಇಲ್ಲ	1,24,300
28	ಕರುಣಾ ಟ್ರಸ್ಟ್, ಬೆಂಗಳೂರು.	ಚಿಕ್ಕಮಗಳೂರು ಜಿಲ್ಲೆ.	ಇಲ್ಲ	1,24,300
29	ವಿವೇಕಾನಂದ, ಎನ್.ಜಿ.ಓ.	ಕೋಲಾರ ಜಿಲ್ಲೆ.	ಇಲ್ಲ	1,24,300
30	ಸುರಕ್ಷಾ ಎನ್.ಜಿ.ಓ.	ಕೊಡಗು ಜಿಲ್ಲೆ.	ಇಲ್ಲ	1,24,300

31	ಸ್ಕೋಡ್ ವೇಸ್, ಎನ್.ಜಿ.ಓ.	ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆ.	ಇಲ್ಲ	1,24,300
32	ಕರ್ಡ್ಸ್, ಎನ್.ಜಿ.ಓ.	ಉಡುಪಿ ಜಿಲ್ಲೆ.	ಇಲ್ಲ	1,24,300
33	ವಿಮೋಚನಾ ಎನ್.ಜಿ.ಓ.	ಬೆಳಗಾಂ ಜಿಲ್ಲೆ.	ಇಲ್ಲ	1,24,300
34	ಕರುಣಾ ಟ್ರಸ್ಟ್, ಎನ್.ಜಿ.ಓ.	ಬೆಂಗಳೂರು.	ಇಲ್ಲ	ಇಲ್ಲ
35	ಸುರಕ್ಷಾ, ಎನ್.ಜಿ.ಓ.	ಬೆಂಗಳೂರು.	ಇಲ್ಲ	ಇಲ್ಲ
36	ವಿಶ್ವಭಾರತಿ ಕಲಾನಿಕೇತನ ಅಂಡ್ ಎಜುಕೇಷನ್ ಸೊಸೈಟಿ, ಬಳ್ಳಾರಿ.	ಚಿತ್ರದುರ್ಗ, ದಾವಣಗೆರೆ ಮತ್ತು ಗದಗ್ ಜಿಲ್ಲೆ.	ಇಲ್ಲ	ಇಲ್ಲ
37	ಸ್ನೇಹ ಚಾರಿಟಬಲ್ ಟ್ರಸ್ಟ್, ಬೆಂಗಳೂರು.	ಕೋಲಾರ ಜಿಲ್ಲೆ.	ಇಲ್ಲ	ಇಲ್ಲ
38	ಡೆಕ್ಕನ್ ಫೌಂಡೇಷನ್, ಮುಳಬಾಗಿಲು.	ಚಿಕ್ಕಬಳ್ಳಾಪುರ ಜಿಲ್ಲೆ.	ಇಲ್ಲ	ಇಲ್ಲ
39	ಸ್ವಾಮಿ ವಿವೇಕಾನಂದ ಇಂಟಗ್ರೇಟೆಡ್ ರೂರಲ್ ಹೆಲ್ತ್ ಸೆಂಟರ್, ಪಾವಗಡ.	ತುಮಕೂರು ಜಿಲ್ಲೆ.	ಇಲ್ಲ	ಇಲ್ಲ
40	ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಆಫ್ ಇಂಡಿಯಾ, ಧಾರವಾಡ.	ಧಾರವಾಡ ಜಿಲ್ಲೆ.	ಇಲ್ಲ	ಇಲ್ಲ
41	ಬಾಪೂಜಿ ಗ್ರಾಮೀಣ ವಿಕಾಸ ಸಮಿತಿ, ಕಾರವಾರ.	ಹಾವೇರಿ, ಉತ್ತರ ಕನ್ನಡ ಜಿಲ್ಲೆ.	ಇಲ್ಲ	ಇಲ್ಲ
42	ಇನ್ಸ್‌ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್, ಬೆಂಗಳೂರು	ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆ.	ಇಲ್ಲ	ಇಲ್ಲ
	ಒಟ್ಟು ರೂ.		15,00,000	16,95,600

ಆಟೋಗಳಿಗೆ ಡಿಜಿಟಲ್ ಮೋಟಾರ್ ಅಳವಡಿಸುವುದು

416 (381) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಪರವಾನಿಗೆ ಹೊಂದಿರುವ ಆಟೋ ರಿಕ್ಷಾಗಳ ಸಂಖ್ಯೆ ಎಷ್ಟು? ಈ ಪೈಕಿ ಸಿ.ಎನ್.ಜಿ. ಪರಿವರ್ತಿತ ಆಟೋರಿಕ್ಷಾಗಳ ಸಂಖ್ಯೆ ಎಷ್ಟು?

ಆ) ಆಟೋರಿಕ್ಷಾಗಳಿಗೆ ಡಿಜಿಟಲ್ ಮೀಟರ್ ಅಳವಡಿಸಿ ಪ್ರತಿ ಕಿ.ಮೀ.ಗೆ ದರ ನಿಗದಿ ಪಡಿಸಲಾಗಿದೆಯೆ?

ಇ) ರಾತ್ರಿ ಹೊತ್ತಿನಲ್ಲಿ ಚಲಿಸುವ ಆಟೋಗಳಿಗೆ ಬೆಂಗಳೂರಿನ ಮಾದರಿಯಲ್ಲಿ ಗುರುತು ಚೀಟಿ ನೀಡಿ ಪ್ರದರ್ಶನ ಮಾಡಲು ತಾಂತ್ರಿಕ ತೊಂದರೆಗಳಿವೆಯೇ?

ಈ) ಕಳೆದ ಮೂರು ವರ್ಷಗಳಲ್ಲಿ ಹೆಚ್ಚುವರಿ ದರ ವಸೂಲು ಮಾಡುವ ಚಾಲಕರ ವಿರುದ್ಧ ಪೊಲೀಸ್ ಇಲಾಖೆ/ಸಾರಿಗೆ ಇಲಾಖೆಯಿಂದ ಹೂಡಿದ ಮೊಕದ್ದಮೆಗಳು ಎಷ್ಟು? ಈ ಪೈಕಿ ವಸೂಲಾದ ದಂಡದ ಮೊಬಲಗು ಎಷ್ಟು?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಶಿವಮೊಗ್ಗ ನಗರದಲ್ಲಿ ಡಿಸೆಂಬರ್ 2009ರ ಅಂತ್ಯಕ್ಕೆ ಒಟ್ಟು 3524 ಆಟೋರಿಕ್ಷಾಗಳು ಪರವಾನಿಗೆ ಹೊಂದಿರುತ್ತವೆ. ಸಿ.ಎನ್.ಜಿ.ಪರಿವರ್ತಿತ ಆಟೋರಿಕ್ಷಾಗಳು ಯಾವುದೂ ಇರುವುದಿಲ್ಲ. 460 ಆಟೋರಿಕ್ಷಾಗಳು ದ್ವಿ-ಇಂಧನ (ಎಲ್.ಪಿ.ಜಿ.) ವ್ಯವಸ್ಥೆ ಹೊಂದಿವೆ.

ಆ) ಆಟೋರಿಕ್ಷಾಗಳಿಗೆ ಡಿಜಿಟಲ್ ಮೀಟರ್ ಅಳವಡಿಸಿರುವುದಿಲ್ಲ.

ಇ) ಶಿವಮೊಗ್ಗ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಆಟೋರಿಕ್ಷಾ ಚಾಲಕರಿಗೆ ಚಾಲನಾ ಅನುಜ್ಞಾಪತ್ರ ಹೊರತುಪಡಿಸಿ ಇತರೆ ಗುರುತಿನ ಚೀಟಿ ನೀಡಿರುವುದಿಲ್ಲ.

ಸಂಚಾರಿ ಪೊಲೀಸ್ ವತಿಯಿಂದ ಬೆಂಗಳೂರು ನಗರದಲ್ಲಿ ಆಟೋರಿಕ್ಷಾ ಚಾಲಕರಿಗೆ ಗುರುತಿನ ಚೀಟಿ ನೀಡಲಾಗುತ್ತಿದೆ. ಶಿವಮೊಗ್ಗ ನಗರದಲ್ಲಿ ಈ ಮಾದರಿಯ ಗುರುತಿನ ಚೀಟಿ ನೀಡಲು ಪೊಲೀಸ್ ಇಲಾಖೆಯನ್ನು ಕೋರಲಾಗುವುದು.

ಈ) ಶಿವಮೊಗ್ಗ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.

ನಿವೃತ್ತಿ ಅಂಚಿನಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವ ಧನ

417 (604) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿವೃತ್ತಿ ಅಂಚಿನಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ 50000 ರೂ.ಗಳ ಗೌರವಧನ ನೀಡುವ ಸಲುವಾಗಿ ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ;

ಆ) ರಾಜ್ಯದಲ್ಲಿ ಒಟ್ಟು ಎಷ್ಟು ಅಂಗನವಾಡಿಗಳಿವೆ ಹಾಗೂ ಎಷ್ಟು ಸ್ವಂತ ಕಟ್ಟಡಗಳಿವೆ ಎಷ್ಟು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ;

ಇ) ರಾಜ್ಯದಲ್ಲಿ ಎಷ್ಟು ಜನ ಅಂಗನವಾಡಿ ಕಾರ್ಯಕರ್ತೆಯರಿದ್ದಾರೆ ಹಾಗೂ ಎಷ್ಟು ಜನ ಅಂಗನವಾಡಿ ಕಾರ್ಯಕರ್ತೆಯವರು ನಿವೃತ್ತಿ ಅಂಚಿನಲ್ಲಿದ್ದಾರೆ;

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ವಂತಿಗೆ ಆಧಾರಿತ ನಿವೃತ್ತಿ ವೇತನ ನೀಡುವ ಯೋಜನೆ ಜಾರಿಗೊಳಿಸುವ ಬಗ್ಗೆ 2010–11ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿರುತ್ತದೆ.

ಆ) ರಾಜ್ಯದಲ್ಲಿ 60046 ಅಂಗನವಾಡಿ ಕೇಂದ್ರಗಳು ಮತ್ತು 3331 ಮಿನಿ ಅಂಗನವಾಡಿ ಕೇಂದ್ರಗಳು ಮಂಜೂರಾಗಿರುತ್ತವೆ. 31981 ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿರುತ್ತವೆ. 6044 ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಉಳಿದ 25352 ಕೇಂದ್ರಗಳು ಬಾಡಿಗೆ ರಹಿತವಾಗಿ ಶಾಲೆ, ದೇವಸ್ಥಾನ, ಪಂಚಾಯತ್ ಕಟ್ಟಡ ಮಹಿಳಾ ಮಂಡಳಿ ಮತ್ತು ಯುವಕ ಮಂಡಳಿ ಇತ್ಯಾದಿಗಳಲ್ಲಿ ನಡೆಯುತ್ತಿವೆ.

ಇ) ರಾಜ್ಯದಲ್ಲಿ 60046 ಅಂಗನವಾಡಿ ಕಾರ್ಯಕರ್ತೆಯರು ಮತ್ತು 3331 ಮಿನಿ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳು ಮಂಜೂರಾಗಿರುತ್ತದೆ. 55900 ಅಂಗನವಾಡಿ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ನಿವೃತ್ತಿ ನೀಡುವ ಯೋಜನೆ ಜಾರಿಗೊಳಿಸುವ ಬಗ್ಗೆ 2010–11ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದ್ದು, ಇದನ್ನು ಸದ್ಯದಲ್ಲಿಯೇ ಅನುಷ್ಠಾನಗೊಳಿಸಲಾಗುವುದು. ಈ ಪ್ರಕ್ರಿಯೆಯನ್ನು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ನಿವೃತ್ತಿ ವಯಸ್ಸನ್ನು ನಿಗದಿ ಪಡಿಸಲಾಗುವುದು.

ಆಸ್ಪತ್ರೆಗಳನ್ನು ಪ್ರಾರಂಭಿಸುವುದು

418. (607) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ, ತುರುವೇಕೆರೆ ತಾಲ್ಲೂಕು, ಕೊಂಡಜ್ಜಿ ಮತ್ತು ಆನೇಕೆರೆಗೆ ಆಸ್ಪತ್ರೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಆಸ್ಪತ್ರೆಯನ್ನು ಸೀಗೆಹಳ್ಳಿ ಹಾಗೂ ಬ್ಯಾಲಹಳ್ಳಿಯಲ್ಲಿ ಪ್ರಾರಂಭಿಸಲು ಕೋರಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಆಸ್ಪತ್ರೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

ಈ) ತುರುವೇಕೆರೆ ತಾಲ್ಲೂಕು, ತಾಳಕೆರೆ ಆಸ್ಪತ್ರೆಗೆ ಸರ್ಕಾರದಿಂದ ವರ್ಷಗಳ ಹಿಂದೆಯೇ ನಿವೇಶನ ನೀಡಿ 50 ಲಕ್ಷ ರೂ.ಗಳನ್ನು ಮಂಜೂರು ಮಾಡಿದ್ದರೂ ಕೂಡ ಕಟ್ಟಡ ಪ್ರಾರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) 2001 ರ ಜನಗಣತಿ ಪ್ರಕಾರ, ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ಒಟ್ಟು ಗ್ರಾಮೀಣ ಜನಸಂಖ್ಯೆಯು 1,56,104 ಆಗಿರುತ್ತದೆ. ಮಾರ್ಗಸೂಚಿಗಳ ಪ್ರಕಾರ, ಈ ತಾಲ್ಲೂಕಿಗೆ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಬಹುದಾಗಿದ್ದು, ಈಗಾಗಲೇ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಆದುದರಿಂದ, ಸೀಗೇಹಳ್ಳಿ ಹಾಗೂ ಬ್ಯಾಲಹಳ್ಳಿಗಳಿಗೆ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಈ) ಬಂದಿದೆ.

ಉ) ಈ ಆಸ್ಪತ್ರೆಯ ಕಟ್ಟಡ ನಿರ್ಮಾಣ ಮಾಡಲು ಒದಗಿಸಿರುವ ನಿವೇಶನ ಕುರಿತಂತೆ ಸ್ಥಳೀಯರಿಂದ ಪ್ರತಿರೋಧ/ಆಕ್ಷೇಪಣೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.

ರಾಜ್ಯದಲ್ಲಿರುವ ಮೋಟಾರ್ ವೆಹಿಕಲ್ ಇನ್ಸ್‌ಪೆಕ್ಟರ್ ಹುದ್ದೆಗಳು

420 (15) ಶ್ರೀ ಎ.ಮಂಜು (ಅರಕಲಗೂಡು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಮೋಟಾರ್ ಮೋಟಾರ್ ಇನ್ಸ್‌ಪೆಕ್ಟರ್ ಹುದ್ದೆಗಳು ಎಷ್ಟು?

ಆ) ಎಷ್ಟು ಮೋಟಾರ್ ವೆಹಿಕಲ್ ಇನ್ಸ್‌ಪೆಕ್ಟರ್‌ಗಳು ಕರ್ತವ್ಯ ಲೋಪ ಆರೋಪ ಎದುರಿಸುತ್ತಿದ್ದಾರೆ; ಹೆಸರು ತಿಳಿಸುವುದು.

ಇ) ಎಷ್ಟು ಮೋಟಾರು ವೆಹಿಕಲ್ ಇನ್ಸ್‌ಪೆಕ್ಟರ್‌ಗಳನ್ನು ಆರೋಪ ದಿಂದ ಕೈಬಿಡಲಾಗಿದೆ; ಅವರು ಯಾರು; ಹೆಸರು ತಿಳಿಸುವುದು;

ಈ) ಆರೋಪ ಎದುರಿಸುತ್ತಿರುವ ವೆಹಿಕಲ್ ಇನ್ಸ್‌ಪೆಕ್ಟರ್‌ಗಳಿಗೆ ಎಕ್ಸಿಕ್ಯುಟಿವ್ ಹುದ್ದೆ ನೀಡಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಉ) ತಿಳಿದಿದ್ದರೆ, ಈ ನೌಕರರಿಗೆ ಯಾವ ಕಾರಣಕ್ಕಾಗಿ ಈ ಜವಾಬ್ದಾರಿ ನೀಡಲಾಗಿದೆ; ವಿವರ ಒದಗಿಸುವುದು;

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಸಾರಿಗೆ ಇಲಾಖೆಯಲ್ಲಿ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ:–

	ಮಂಜೂರಾದ	ಕಾರ್ಯನಿರತ	ಖಾಲಿ
	ಹುದ್ದೆಗಳ ಸಂಖ್ಯೆ		
ಮೋ.ವಾ.ನಿ.	421	279	142
ಹಿ.ಮೋ.ವಾ.ನಿ.	163	112	051
ಒಟ್ಟು	**584**	**391**	**193**

ಆ) ಪ್ರಸ್ತುತ, ಈ ಕೆಳಕಂಡ ಹಿರಿಯ / ಮೋಟಾರು ವಾಹನ ನಿರೀಕ್ಷಕರು ಕರ್ತವ್ಯಲೋಪ ಆರೋಪ ಎದುರಿಸುತ್ತಿದ್ದಾರೆ.

1) ಶ್ರೀ ಎ.ಪಿ.ಎನ್.ರಾವ್, ಹಿ.ಮೋ.ವಾ.ನಿ.,

2) ಶ್ರೀ ಕೆ.ಹೆಚ್.ಕೃಷ್ಣರಾಜ್, --ಮೋ.ವಾ.ನಿ.,

ಇ) ಸದರಿ ಪ್ರಕರಣಗಳು ಇನ್ನೂ ವಿಚಾರಣಾ ಹಂತದಲ್ಲಿವೆ. ಅಂತಿಮ ವಿಚಾರಣಾ ವರದಿಯನ್ನಾಧರಿಸಿ ಮುಂದಿನ ಕ್ರಮ ಜರುಗಿಸಲಾಗುವುದು.

ಈ) ಹೌದು.

ಉ) ಆರೋಪ ಸಾಬೀತಾಗದ ಹೊರತು ನೌಕರರ ವಿರುದ್ಧ ಯಾವುದೇ ಕ್ರಮ ಜರುಗಿಸಲು ಬರುವುದಿಲ್ಲ. ಕಾರಣ, ಅಂತಹ ನೌಕರರಿಗೆ ಇತರೆ ನೌಕರರಂತೆ ಕೆಲಸಗಳನ್ನು ನಿರ್ವಹಿಸಲು ಕರ್ತವ್ಯ ಹಂಚಿಕೆ ಮಾಡಲಾಗುತ್ತದೆ.

ಹಾಸನ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು

421 (16) ಶ್ರೀ ಮಂಜು.ಎ. (ಅರಕಲಗೂಡು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯಲ್ಲಿ ವಿವಿಧ ದರ್ಜೆಯ ಎಷ್ಟು ಹುದ್ದೆಗಳು ಖಾಲಿಯಿವೆ; ಹುದ್ದೆಗಳ ವಿವರ ನೀಡುವುದು;

ಆ) ಇದರಲ್ಲಿ ಅರಕಲಗೂಡು ಚುನಾವಣೆ ಕ್ಷೇತ್ರಕ್ಕೆ ಸಂಬಂಧಪಟ್ಟ ವಿವರ ನೀಡುವುದು;

ಇ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹಾಸನ ಜಿಲ್ಲೆಯಲ್ಲಿ 371 ವಿವಿಧ ವೃಂದದ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು 220 ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 151 ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ.

2712 ಸಿಬ್ಬಂದಿಗಳ ಹುದ್ದೆಗಳು ಮಂಜೂರಾಗಿದ್ದು 1579 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 1133 ಹುದ್ದೆಗಳು ಖಾಲಿ ಇವೆ.

ಆ) ಅರಕಲಗೂಡು ಚುನಾವಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹುದ್ದೆಗಳವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಪ್ರಶ್ನೆ ಸಂಖ್ಯೆ : 16

ಅರಕಲಗೂಡು (ಹಾಸನ ಜಿಲ್ಲೆ) ವಿಧಾನ ಸಭಾ ಕ್ಷೇತ್ರದ ಆರೋಗ್ಯ ಇಲಾಖೆಯ ಸಿಬ್ಬಂದಿ ವಿವರ

ಅನುಬಂಧ – 1

ಕ್ರಮ ಸಂಖ್ಯೆ	ಹುದ್ದೆ ವಿವರ	ಮಂಜೂರಾತಿ.	ಕಾರ್ಯ ನಿರತ	ಖಾಲಿ	ಷರಾ
1	ತಾಲ್ಲೂಕು ಆರೋಗ್ಯ ಅಧಿಕಾರಗಳು	1	0	1	
2	ತಜ್ಞ ವೈದ್ಯರು	12	4	8	
3	ಸಾಮಾನ್ಯ ಕರ್ತವ್ಯ ನಿರತ ವೈದ್ಯರು	29	20	9	
4	ದಂತ ಆರೋಗ್ಯಾಧಿಕಾರಿಗಳು	2	0	2	
5	ಸಹಾಯಕ ಆಡಳಿತಾಧಿಕಾರಿಗಳು	1	0	1	
6	ಕಛೇರಿ ಅಧೀಕ್ಷಕರು	0	0	0	
7	ಶುಶ್ರೂಷಕರು	25	12	13	
8	ಹಿರಿಯ ಫಾರ್ಮಸಿಸ್ಟ್	3	2	1	
9	ಫಾರ್ಮಸಿಸ್ಟ್	18	5	13	
10	ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು	1	0	1	

11	ಹಿರಿಯ ಆರೋಗ್ಯ ಸಹಾಯಕರು (ಪುರುಷ)	6	4	2	
12	ಹಿರಿಯ ಆರೋಗ್ಯ ಸಹಾಯಕರು (ಮಹಿಳೆ)	6	6	0	
13	ಕಿರಿಯ ಪುರುಷ ಆರೋಗ್ಯ ಸಹಾಯಕರು	28	11	17	
14	ಕಿರಿಯ ಮಹಿಳಾ ಆರೋಗ್ಯ ಸಹಾಯಕರು	56	44	12	
15	ವಾಹನ ಚಾಲಕರು	11	10	1	
16	ನೇತ್ರ ಸಹಾಯಕರು	2	2	0	
17	ಕ್ಷ–ಕಿರಣ ತಂತ್ರಜ್ಞರು	2	1	1	
18	ಹಿರಿಯ ಪ್ರಯೋಗ ಶಾಲಾ ತಂತ್ರಜ್ಞರು	1	0	1	
19	ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು	10	9	1	
20	ಪ್ರಥಮ ದರ್ಜೆ ಸಹಾಯಕರು	7	3	4	
21	ದ್ವಿತೀಯ ದರ್ಜೆ ಸಹಾಯಕರು	8	5	3	
22	ಗ್ರೂಪ್ 'ಡಿ'	90	50	40	
		319	**188**	**131**	

ಅನುಬಂಧ – 2
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡಿರುವ/ತೆಗೆದುಕೊಳ್ಳಲಿರುವ ಕ್ರಮಗಳ ವಿವರ

1. ತಜ್ಞ ವೈದ್ಯರ ಖಾಲಿ ಹುದ್ದೆಗಳನ್ನು 2010 ರಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಗೆ ಸ್ಥಳನಿಯುಕ್ತಿ ಮಾಡುವ ಮೂಲಕ ಆದ್ಯತಾನುಸಾರ ಭರ್ತಿ ಮಾಡಲು ಕ್ರಮವಹಿಸ ಲಾಗುವುದು.
2. (1) ಮಕ್ಕಳ ತಜ್ಞರು, (2) ಅರವಳಿಕೆ ತಜ್ಞರು ಹಾಗೂ (3) ಸ್ತ್ರೀರೋಗ ತಜ್ಞರುಗಳ ಕೊರತೆಯನ್ನು ನೀಗಿಸಲು ಮಾಸಿಕ ಗರಿಷ್ಠ ರೂ.50,000 ರವರೆಗೆ ಗೌರವ ಧನ ನೀಡಿ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ (ಎನ್.ಆರ್. ಹೆಚ್.ಎಂ.) ಅಡಿ ಅವಕಾಶ ಕಲ್ಪಿಸಲಾಗಿದೆ. ಹಾಗೂ ಇದೇ ಯೋಜನೆಯಡಿ ಪ್ರಕರಣವಾರು ಆಧಾರದ ಮೇಲೆ ಪ್ರತೀ ಪ್ರಕರಣವೊಂದಕ್ಕೆ (1) ಮಕ್ಕಳ ತಜ್ಞರಿಗೆ ರೂ. 500, (2) ಅರೆವಳಿಕೆ ತಜ್ಞರಿಗೆ ರೂ.1,000 ಹಾಗೂ (3) ಸ್ತ್ರೀರೋಗ ತಜ್ಞರಿಗೆ ರೂ.1,500 ರಂತೆ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.
3. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ) ರ ಅಡಿಯಲ್ಲಿ ಮೇಲಿನ ಕ್ರಮ ಸಂಖ್ಯೆ: 2 ರಲ್ಲಿ ತಿಳಿಸಿರುವ 3 ತಜ್ಞತೆಗಳನ್ನು ಹೊರತುಪಡಿಸಿ ಉಳಿದ ತಜ್ಞತೆಯಲ್ಲಿ ಮಾಸಿಕ ರೂ.5,000 ಗೌರವ ಧನ ನೀಡಿ ರಿಟೈನರ್ ಶಿಪ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದೇ ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ, ಸದರಿ ತಜ್ಞರು ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ. 1.000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ ವಾರಕ್ಕೆ ಎರಡು ದಿನಕ್ಕೆ ಮಾತ್ರ ಅಂತಹ ಸೇವೆಯನ್ನು ಪಡೆಯಲು ಮಿತಿಗೊಳಿಸಲಾಗಿದೆ.

4. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು ಈ ಮೂಲಕ ಸ್ತ್ರೀ ರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.
5. ಇಲಾಖೆಯಲ್ಲಿ ಖಾಲಿ ಇರುವ 562 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲು ಕರ್ನಾಟಕ ಲೋಕಸೇವಾ ಅಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಮುಗಿದ ನಂತರ ಆದ್ಯತಾನುಸಾರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.
6. ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ 5021 ಅರೆವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
7. ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.
8. ಪ್ರಸ್ತುತ ಗ್ರೂಪ್–ಡಿ ನೌಕರರ ವೃಂದದಲ್ಲಿ ನೇಮಕಾತಿ ಮಾಡಲು ನಿಷೇಧವಿದ್ದು, ಅವಶ್ಯವಿರುವೆಡೆ ಬಾಹ್ಯ ಮೂಲಗಳಿಂದ ಸೇವೆ ಪಡೆದು ನಿರ್ವಹಿಸಲು ಕ್ರಮವಹಿಸಲಾಗಿದೆ.

ಎಸ್.ಸಿ./ಎಸ್.ಟಿ. ವರ್ಗಗಳ ನಿರ್ದೇಶನಾಲಯ ಸ್ಥಾಪನೆ

422 (615) ಶ್ರೀ ಮಂಜು.ಎ. (ಅರಕಲಗೂಡು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಸ್ಥಾಪನೆ ಆಗಿದ್ದು ಯಾವಾಗ;

ಆ) ನಿರ್ದೇಶನಾಲಯ ವೃಂದ ಮತ್ತು ನೇಮಕಾತಿ ನಿಯಮ ರಚಿಸಲಾಗಿದೆಯೇ;

ಇ) ರಚಿಸದಿದ್ದಲ್ಲಿ, ಯಾವಾಗ ರಚನೆ ಮಾಡಲಾಗುವುದು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) 07–01–1999

ಆ) ಇಲ್ಲ.

ಇ) ಈ ಕುರಿತಂತೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚಿಸಲಾಗಿದ್ದು, ತ್ವರಿತವಾಗಿ ರಚಿಸಲಾಗುವುದು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರುಗಳ ವೇತನ

423 (616) ಶ್ರೀ ಮಂಜು.ಎ (ಅರಕಲಗೂಡು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಎಷ್ಟು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಕೆಲಸ ನಿರ್ವಹಿಸುತ್ತಿದ್ದಾರೆ (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಷ್ಟು ಪ್ರಮಾಣದಲ್ಲಿ ಹಣ ನೀಡುತ್ತಿದೆ.

ಇ) ಈ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ವೇತನ ಹೆಚ್ಚಳ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಈ) ಈ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಹಾಸನ ಜಿಲ್ಲೆಯಲ್ಲಿ 2131 ಅಂಗನವಾಡಿ ಕಾರ್ಯಕತೆಯರು ಹಾಗೂ 2202 ಅಂಗನವಾಡಿ ಸಹಾಯಕಿಯರು ಕೆಲಸ ನಿರ್ವಹಿಸುತ್ತಿದ್ದಾರೆ ತಾಲ್ಲೂಕುವಾರು ವಿವರವನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ಆ) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನದ ವಿವರವನ್ನು ಅನುಬಂಧ–2 ರಲ್ಲಿ ಒದಗಿಸಿದೆ.

ಇ) ಇಲ್ಲ.

ಈ) ಇಲ್ಲ.

ಅನುಬಂಧ-1 (ಪ್ರಶ್ನೆ - 616)

ಹಾಸನ ಜಿಲ್ಲೆಯಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಮಾಹಿತಿ

		ಸಿಂಧನೂರು	180.4	193.82
		ಮಸ್ಕಿ	187.2	178.53
		ಲಿಂಗಸಗೂರು	36.96	34.23
		ದೇವದುರ್ಗ	157.32	189.59
		ಒಟ್ಟು	**916.26**	**1003.08**
26	ಶಿವಮೊಗ್ಗ	ಸೊರಬ	98.62	156.63
		ಸಾಗರ	66.195	98.56
		ಭದ್ರಾವತಿ	98.25	112.99
		ಶಿವಮೊಗ್ಗ	20.64	38.1
		ಶಿವಮೊಗ್ಗ ಗ್ರಾಮಾಂತರ	90.75	139.21
		ತೀರ್ಥಹಳ್ಳಿ	71.445	107.67
		ಶಿಕಾರಿಪುರ	98.32	132.76
		ಒಟ್ಟು	**544.22**	**785.92**
27	ತುಮಕೂರು	ತುಮಕೂರು ಗ್ರಾ	151.54	136.95
		ತುಮಕೂರು ನಗರ	59.14	61.57
		ಗುಬ್ಬಿ	96.35	98.76
		ಕುಣಿಗಲ್	116.2	100.36
		ತುರುವೇಕೆರೆ	113.1	126.51
		ತಿಪಟೂರು	93.97	102.78
		ಚಿಕ್ಕನಾಯಕನಹಳ್ಳಿ	142.17	137.51
		ಪಾವಗಡ	112.86	100.21
		ಮಧುಗಿರಿ	103.67	99.35
		ಕೊರಟಗೆರೆ	82.95	80.97
		ಶಿರಾ	111.39	111.4
		ಒಟ್ಟು	**1183.34**	**1156.37**
28	ಉಡುಪಿ	ಉಡುಪಿ	62.27	58.68
		ಕಾಪು	87.57	82.51

		ಕುಂದಾಪುರ	121.29	207.00
		ಬೈಂದೂರು	51.75	103.50
		ಕಾರ್ಕಳ	78.1	77.10
		ಒಟ್ಟು	**400.98**	**528.79**
29	ಉತ್ತರ ಕನ್ನಡ	ಕಾರವಾರ	49.3	67.10
		ಜೋಯಿಡಾ	37.71	49.56
		ಕುಮಟಾ	34.63	71.97
		ಹೊನ್ನಾವರ	86.39	85.49
		ಭಟ್ಕಳ	63.29	63.60
		ಶಿರಸಿ	50.05	64.58
		ಸಿದ್ದಾಪುರ	47.32	57.80
		ಹಳಿಯಾಳ	57.04	73.48
		ಯಲ್ಲಾಪುರ	32.88	62.57
		ಮುಂಡಗೋಡ	38.78	65.28
		ಒಟ್ಟು	**497.39**	**661.43**
		ಒಟ್ಟು	**21677.63**	**25392.80**

ವಿದ್ಯಾರ್ಥಿ ನಿಲಯಗಳು ಇಲ್ಲದಿರುವುದು

457 (951) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ತೊಂಡೇಬಾವಿ, ಹೋಬಳಿ ಮಟ್ಟದಲ್ಲಿ ಬಹುದೊಡ್ಡ ಹೋಬಳಿ ಆಗಿದ್ದು ಇಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಇ) ಅಸಂಘಟಿತ ಕಾರ್ಮಿಕರ ಕಲ್ಯಾಣದ ಅಭಿವೃದ್ಧಿಯ ಬಗ್ಗೆ ಸರ್ಕಾರ ರೂಪಿಸಿರುವ ನೀತಿ ಏನು ಹಾಗೂ ಕಾರ್ಯಕ್ರಮಗಳೇನು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಉಲ್ಲೇಖಿತ ಸ್ಥಳದಲ್ಲಿ ವಿದ್ಯಾರ್ಥಿನಿಲಯ ಪ್ರಾರಂಭಿಸಲು ಬೇಡಿಕೆ ಬಂದಿದ್ದು, ಅನುದಾನದ ಲಭ್ಯತೆ ಹಾಗೂ ಇತರೆ ಅಂಶಗಳ ಮೇರೆಗೆ ಪರಿಶೀಲಿಸಲಾಗುವುದು.

ಇ) ಈ ವಿಷಯವು ಕಾರ್ಮಿಕ ಇಲಾಖೆಗೆ ಸಂಬಂಧಿಸಿರುವುದರಿಂದ, ಆ ಇಲಾಖೆ ಒದಗಿಸಿದ ಮಾಹಿತಿಯಂತೆ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಸರ್ಕಾರದ ನೀತಿಯಾಗಿದ್ದು, ಈ ನೀತಿಯನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆ 2008ರ ಅಡಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ರಚಿಸಲಾಗಿದೆ. ಪ್ರಥಮ ಹಂತದಲ್ಲಿ ದರ್ಜಿಗಳು, ದೋಬಿ, ಹಮಾಲರು, ಆಟೋ ಮತ್ತು ಟ್ಯಾಕ್ಸಿ ಚಾಲಕರು, ಹೋಟೆಲ್ ಕಾರ್ಮಿಕರು, ಇವರನ್ನು ಸಾಮಾಜಿಕ ಭದ್ರತಾ ಯೋಜನೆ ಅಡಿ ತರಲು ಉದ್ದೇಶಿಸಲಾಗಿದೆ. ಈ ದಿಸೆಯಲ್ಲಿ ಯೋಜನೆ ರೂಪಿಸುವ ಸಲುವಾಗಿ ವಿಶೇಷ ಸಮಿತಿ ರಚಿಸಲಾಗಿದ್ದು, ಸಮಿತಿಯು ಈ ಮೇಲೆ ನಮೂದಿಸಿರುವ ಕ್ಷೇತ್ರಗಳ ಕಾರ್ಮಿಕರು ಹಾಗೂ ಮಾಲೀಕರುಗಳ ಜೊತೆ ಚರ್ಚಿಸಿದ ನಂತರ ಕೆಲವು ಅಂಶಗಳನ್ನೊಳಗೊಂಡ ಕರಡನ್ನು ಸಿದ್ಧಪಡಿಸಿದೆ.

ಶಾದಿಮಹಲ್ ನಿರ್ಮಾಣ

458 (952) : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) : ಮಾನ್ಯ ಹಜ್, ವಕ್ಫ್ & ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್ ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಲ್ಲದಿದ್ದಲ್ಲಿ, ಎಷ್ಟು ಹಣ ಬಿಡುಗಡೆಯಾಗಿದೆ, ಎಷ್ಟು ಖರ್ಚಾಗಿದೆ ಹಾಗೂ ಕೆಲಸ ಯಾವ ಹಂತದಲ್ಲಿದೆ;

ಇ) ಶಾದಿಮಹಲ್ ಪೂರ್ತಿಯಾಗಲು ಎಷ್ಟು ಹಣ ಬೇಕಾಗಬಹುದು, ಆರ್ಥಿಕ ಮೂಲಗಳು ಯಾವುವು?

ಪ್ರೊ: ಡಾ.ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ & ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಹೌದು.

ಆ) ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್/ಸಮುದಾಯ ಭವನಗಳಿಗೆ ಬಿಡುಗಡೆಯಾದ, ಖರ್ಚಾದ ಅನುದಾನದ ವಿವರ ಹಾಗೂ ಕಾಮಗಾರಿ ಹಂತದ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಇ) ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್/ಸುಮದಾಯ ಭವನ ಪೂರ್ಣಗೊಳ್ಳಲು ಬೇಕಾಗಬಹುದಾದ ಅನುದಾನ ವಿವರ ಹಾಗೂ ಆರ್ಥಿಕ ಮೂಲಗಳ ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

ಅನುಬಂಧ-1

ಶ್ರೀ ಶಿವಶಂಕರ ರೆಡ್ಡಿ.ಎನ್.ಹೆಚ್(ಗೌರಿಬಿದನೂರು) ವಿಧಾನ ಸಭಾ ಸದಸ್ಯರ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 952ಕ್ಕೆ ಅನುಬಂಧ-1

ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್/ಸಮುದಾಯಭವನ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾದ, ಖರ್ಚಾದ ಅನುದಾನದ ವಿವರ ಹಾಗೂ ಕಾಮಗಾರಿಯ ವಿವರ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಸಂಸ್ಥೆಯ ಹೆಸರು	ಮಂಜೂರಾದ ಅನುದಾನ	ಬಿಡುಗಡೆ ಯಾದ ಅನುದಾನ	ಕಾಮಗಾರಿಯ ಹಂತ
1	ಬೈತುಲ್ ಮಾಲ್ ಅಂಡ್ ಮದರಸಾ ಇ ಅಲೇ ಅರೇಬಿಯಾ ಅನ್ವರ್ ಅಲ್ಲಾ ಬಖೀಯತ್ ಕಮಿಟಿ, ಗೌರಿಬಿದನೂರು	10.00	7.50	ಅಡಿಪಾಯದ ಕೆಲಸ ಮುಗಿದಿದ್ದು, ಕಾಲಂಗಳ ಕೆಲಸ ಪ್ರಗತಿಯಲ್ಲಿದೆ
2	ದಾರುಜ್ ಜೊಹರಾ ಸೋಷಿಯಲ್ ಅಂಡ್ ವೆಲ್ ಫೇರ್	18.00	18.00	ಕಾಮಗಾರಿಯು ಪೂರ್ಣ ಗೊಂಡಿರುವುದು

	ಟ್ರಸ್ಟ್ (ರಿ), ಅಲಿಪುರ,			
3	ಅಂಜುಮನ್ ಇ ಅಹ್ಲೆ ಸುನ್ನತುಲ್ಲಾ ಜಮಾತ್ ಜಾಮಿಯಾ ಮಸೀದಿ, ದಾರಿನಾಯಕನಪಾಳ್ಯ	20.00	10.00	ನೆಲಮಹಡಿಯ ಆರ್.ಸಿ.ಸಿ ಮುಗಿದಿದ್ದು, ಮೊದಲ ಮಹಡಿ ಮೇಲ್ಚಾವಣಿ ಹಂತದ ಕೆಲಸ ಪ್ರಗತಿಯಲ್ಲಿದೆ.

ಅನುಬಂಧ-2

ಶ್ರೀ ಶಿವಶಂಕರ ರೆಡ್ಡಿ.ಎನ್.ಹೆಚ್(ಗೌರಿಬಿದನೂರು) ವಿಧಾನ ಸಭಾ ಸದಸ್ಯರ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 952ಕ್ಕೆ ಅನುಬಂಧ-2 ಗೌರಿಬಿದನೂರು ತಾಲ್ಲೂಕಿನಲ್ಲಿ ಶಾದಿಮಹಲ್/ಸಮುದಾಯಭವನ ಕಟ್ಟಡ ನಿರ್ಮಾಣಕ್ಕೆ ಬೇಕಾದ ಬಹುದಾದ ಅನುದಾನದ ವಿವರ ಹಾಗೂ ಆರ್ಥಿಕ ಮೂಲಗಳ ವಿವರ

ಕ್ರ ಸಂ.	ಸಂಸ್ಥೆಯ ಹೆಸರು	ಆರ್ಥಿಕ ಮೂಲಗಳ ವಿವರ
1	ಬೈತುಲ್ ಮಾಲ್ ಅಂಡ್ ಮದರಸಾ ಇ ಅಲೇ ಅರೇಬಿಯಾ ಅನ್ವರ್ ಅಲ್ಲಾ ಬಖೀಯತ್ ಕಮಿಟಿ, ಗೌರಿಬಿದನೂರು	ಸದರಿ ಕಟ್ಟಡದ ಅಂದಾಜು ವೆಚ್ಚವು ರೂ. 59.82 ಲಕ್ಷಗಳಿದ್ದು, ಸರ್ಕಾರದಿಂದ ಗರಿಷ್ಟ ರೂ.20.00 ಲಕ್ಷಗಳನ್ನು ಬಿಡುಗಡೆ ಮಾಡಲು ಅವಕಾಶವಿರುತ್ತದೆ. ಉಳಿದ ಅನುದಾನವನ್ನು ಸಂಸ್ಥೆಯವರು ದಾನಿಗಳು, ಚಂದಾದಾರರು ಹಾಗೂ ವಕ್ಫ್ ಕೌನ್ಸಿಲ್‌ನಿಂದ ಹಾಗೂ ಇತರೆಯವರಿಂದ ಪಡೆಯುವುದಾಗಿ ಸಂಸ್ಥೆಯವರು ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತಾರೆ.

0.17F-136

2	ದಾರುಜ್ ಜೊಹರಾ ಸೋಷಿಯಲ್ ಅಂಡ್ ವೆಲ್ ಫೇರ್ ಟ್ರಸ್ಟ್ (ರಿ), ಅಲಿಪುರ,	ಕಾಮಗಾರಿಯು ಪೂರ್ಣಗೊಂಡಿರುವುದು
3	ಅಂಜುಮನ್ ಇ ಅಹ್ಲೆ ಸುನ್ನತುಲ್ಲಾ ಜಮಾತ್ ಜಾಮಿಯಾ ಮಸೀದಿ, ದಾರಿನಾಯಕನಪಾಳ್ಯ	ಸದರಿ ಕಟ್ಟಡದ ಅಂದಾಜು ವೆಚ್ಚವು ರೂ.65.00 ಲಕ್ಷಗಳಿದ್ದು, ಸರ್ಕಾರದಿಂದ ಗರಿಷ್ಟ ರೂ.20.00 ಲಕ್ಷಗಳನ್ನು ಬಿಡುಗಡೆ ಮಾಡಲು ಅವಕಾಶವಿರುತ್ತದೆ. ಉಳಿದ ಅನುದಾನವನ್ನು ದಾನಿಗಳು, ಸಾರ್ವಜನಿಕರು, ಚಂದಾದಾರರು ಹಾಗೂ ದೇಣಿಗೆ ಮುಖಾಂತರ ಪಡೆಯುವುದಾಗಿ ಸಂಸ್ಥೆಯವರು ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತಾರೆ.

ತೇರದಾಳು ಮತಕ್ಷೇತ್ರದಲ್ಲಿಯ ಆಸ್ಪತ್ರೆಯಲ್ಲಿಯ ವೈದ್ಯರ ತಾಂತ್ರಿಕ ಸಿಬ್ಬಂದಿ ಕೊರತೆ

459 (936) ಶ್ರೀ ಸಿದ್ದು ಸವದಿ (ತೆರದಾಳ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ ಮತ ಕ್ಷೇತ್ರದಲ್ಲಿರುವ ಒಟ್ಟು ಆಸ್ಪತ್ರೆಗಳ ಸಂಖ್ಯೆ ಎಷ್ಟು; ಅವು ಯಾವುವು;

ಆ) ಈ ಆಸ್ಪತ್ರೆಗಳಲ್ಲಿರುವ ಸಿಬ್ಬಂದಿಯ ಕೊರತೆಗಳೆಷ್ಟು; ಯಾವಾಗ ಸರಿಪಡಿಸುವಿರಿ;

ಇ) ಇಲ್ಲವಾದಲ್ಲಿ ಉತ್ತಮ ಚಿಕಿತ್ಸೆ ಇಲ್ಲದೆ, ರೋಗಿಗಳು ಪರದಾಡುತ್ತಿದ್ದಾರೆ ಅವರುಗಳಿಗೆ ಯಾವ ರೀತಿ ಚಿಕಿತ್ಸೆ ಕೊಡಿಸುವಿರಿ;

ಈ) ಗುತ್ತಿಗೆ ಆಧಾರದಲ್ಲಿಯಾದರೂ ವೈದ್ಯರನ್ನು ಆಯ್ಕೆ ಮಾಡುವ ಆಲೋಚನೆ ಇದೆಯೇ, ಇಲ್ಲದಿದ್ದಲ್ಲಿ ಪರಿಹಾರವೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ತೇರದಾಳ ಮತ ಕ್ಷೇತ್ರದಲ್ಲಿ 2 ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ 3 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಸಮುದಾಯ ಆರೋಗ್ಯ ಕೇಂದ್ರ

1. ರಬಕವಿ-ಬನಹಟ್ಟಿ, ಜಮಖಂಡಿ ತಾಲ್ಲುಕು
2. ಮಹಾಲಿಂಗಪೂರ, ಮುಧೋಳ ತಾಲ್ಲೂಕು.

ಪ್ರಾಥಮಿಕ ಆರೋಗ್ಯ ಕೇಂದ್ರಗಳು

1. ತೇರದಾಳ
2. ಹಿಪ್ಪರಗಿ
3. ಚಿಮ್ಮಡ

ಆ) ಸಮುದಾಯ ಆರೋಗ್ಯ ಕೇಂದ್ರದಲ್ಲಿ 4 ತಜ್ಞ ವೈದ್ಯರ ಕೊರತೆ ಇದ್ದು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 3 ವೈದ್ಯಾಧಿಕಾರಿಗಳ ಕೊರತೆ ಇದೆ ಹಾಗೂ ಸದರಿ ಕೇಂದ್ರಗಳಲ್ಲಿ 38 ಇತರೆ ಸಿಬ್ಬಂದಿಯ ಹುದ್ದೆಗಳ ಕೊರತೆ ಇದೆ.

ವೈದ್ಯರ ಮತ್ತು ಇತರೆ ಸಿಬ್ಬಂದಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮದ ವಿವರಗಳನ್ನು ಅನುಬಂಧ-1 ರಲ್ಲಿ ವಿವರಿಸಲಾಗಿದೆ.

ಇ) ಲಭ್ಯವಿರುವ ವೈದ್ಯರು ಮತ್ತು ಸಿಬ್ಬಂದಿಗಳಿಂದ ರೋಗಿಗಳಿಗೆ ತೊಂದರೆಯಾಗದ ರೀತಿ ಚಿಕಿತ್ಸೆ ನೀಡಲಾಗುತ್ತಿದೆ.

ಈ) ಖಾಲಿ ಇರುವ 562 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿದೆ. ಅಲ್ಲದೆ, ಈಗಾಗಲೇ ಅನುಬಂಧ-1 ರಲ್ಲಿ ವಿವರಿಸಿರುವ ಹಾಗೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿದೆ.

ಅನುಬಂಧ – 1

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡಿರುವ/ತೆಗೆದುಕೊಳ್ಳಲಿರುವ ಕ್ರಮಗಳ ವಿವರ

1. ತಜ್ಞ ವೈದ್ಯರ ಖಾಲಿ ಹುದ್ದೆಗಳನ್ನು 2010 ರಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಗೆ ಸ್ಥಳನಿಯುಕ್ತಿ ಮಾಡುವ ಮೂಲಕ ಆದ್ಯತಾನುಸಾರ ಭರ್ತಿ ಮಾಡಲು ಕ್ರಮವಹಿಸ ಲಾಗುವುದು.
2. (1) ಮಕ್ಕಳ ತಜ್ಞರು, (2) ಅರವಳಿಕೆ ತಜ್ಞರು ಹಾಗೂ (3) ಸ್ತ್ರೀರೋಗ ತಜ್ಞರುಗಳ ಕೊರತೆಯನ್ನು ನೀಗಿಸಲು ಮಾಸಿಕ ಗರಿಷ್ಠ ರೂ. 50,000 ರವರೆಗೆ ಗೌರವಧನ ನೀಡಿ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ (ಎನ್.ಆರ್.ಹೆಚ್.ಎಂ.) ಅಡಿ ಅವಕಾಶ ಕಲ್ಪಿಸಲಾಗಿದೆ. ಹಾಗೂ ಇದೇ ಯೋಜನೆಯಡಿ ಪ್ರಕರಣವಾರು ಆಧಾರದ ಮೇಲೆ ಪ್ರತೀ ಪ್ರಕರಣವೊಂದಕ್ಕೆ (1) ಮಕ್ಕಳ ತಜ್ಞರಿಗೆ ರೂ.500, (2) ಅರೆವಳಿಕೆ ತಜ್ಞರಿಗೆ ರೂ.1,000 ಹಾಗೂ (3) ಸ್ತ್ರೀರೋಗ ತಜ್ಞರಿಗೆ ರೂ.1,500 ರಂತೆ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.
3. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ) ರ ಅಡಿಯಲ್ಲಿ ಮೇಲಿನ ಕ್ರಮ ಸಂಖ್ಯೆ:2 ರಲ್ಲಿ ತಿಳಿಸಿರುವ 3 ತಜ್ಞತೆಗಳನ್ನು ಹೊರತುಪಡಿಸಿ ಉಳಿದ ತಜ್ಞತೆಯಲ್ಲಿ ಮಾಸಿಕ ರೂ.5,000 ಗೌರವ ಧನ ನೀಡಿ ರಿಟೈನರ್ ಶಿಪ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದೇ ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ, ಸದರಿ ತಜ್ಞರು ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ.1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ ವಾರಕ್ಕೆ ಎರಡು ದಿನಕ್ಕೆ ಮಾತ್ರ ಅಂತಹ ಸೇವೆಯನ್ನು ಪಡೆಯಲು ಮಿತಿಗೊಳಿಸಲಾಗಿದೆ.

4. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು ಈ ಮೂಲಕ ಸ್ತ್ರೀ ರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.
5. ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ 5021 ಅರೆವೈದ್ಯಕೀಯ ಹುದ್ದೆಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಅದು ಪೂರ್ಣಗೊಂಡ ನಂತರ ಆದ್ಯತಾನುಸಾರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
6. ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 562 ವೈದ್ಯರ ಹಾಗೂ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿದೆ.
7. ಪ್ರಸ್ತುತ ಗ್ರೂಪ್–ಡಿ ನೌಕರರ ವೃಂದದಲ್ಲಿ ನೇಮಕಾತಿ ಮಾಡಲು ನಿಷೇಧವಿದ್ದು, ಅವಶ್ಯವಿರುವೆಡೆ ಬಾಹ್ಯ ಮೂಲಗಳಿಂದ ಸೇವೆ ಪಡೆದು ನಿರ್ವಹಿಸಲು ಕ್ರಮವಹಿಸಲಾಗಿದೆ.

ಸಮುದಾಯ ಭವನದ ಸೌಲಭ್ಯವನ್ನು ಎಲ್ಲಾ ನೇಕಾರ ಒಳ ಪಂಗಡಗಳಿಗೂ ಪೂರೈಸುವ ಕುರಿತು.

461 (938) ಶ್ರೀ ಸಿದ್ದು ಸವದಿ (ತೇರದಾಳ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳಡಿಯಲ್ಲಿ ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ನೇಕಾರ ಸಮುದಾಯಕ್ಕೆ ದೇವಾಂಗ ಸಮುದಾಯ ಭವನ ಅಂತ ಹೆಸರಿನಿಂದ ರೂ.5 ಲಕ್ಷದವರೆಗೆ ಸೌಲಭ್ಯ ಒದಗಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ;

ಆ) 2009–10ನೇ ಎಷ್ಟು ಸಮುದಾಯ ಭವನಗಳಿಗೆ ಆರ್ಥಿಕ ಸೌಲಭ್ಯ ಕೊಡಲಾಗಿದೆ, ಅವುಗಳಲ್ಲಿ ಯಾವ ಯಾವ ಪಂಗಡಗಳ ನೇಕಾರರಿಗೆ ಕೊಡಲಾಗಿದೆ;

ಇ) ನೇಕಾರರಲ್ಲಿಯೇ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುವ ಕುರುವಿನಶೆಟ್ಟಿ ಅಂತ ಉಪಪಂಗಡವಿದ್ದು ಅವರುಗಳಿಗೆ ಸಮುದಾಯ ಭವನ ಮತ್ತು ವಿದ್ಯಾರ್ಥಿ ವೇತನಗಳನ್ನು ಕೊಡದೇ ಇರುವುದು ತಮ್ಮ ಗಮನಕ್ಕೆ ಇದೆಯೇ;

ಈ) ಇದ್ದಲ್ಲಿ ಕಾಲಂ. ನಂ-4 ರಲ್ಲಿ ದೇವಾಂಗ/ಕುರುವಿನ ಶೆಟ್ಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಸಮುದಾಯ ಭವನಗಳಿಗೆ ಸೌಲಭ್ಯ ಅಂತಾ ಮಾರ್ಪಾಡು ಮಾಡಲಾಗುವುದೇ?

ಶ್ರೀ ಡಿ ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ದೇವಾಂಗ ಸಮಾಜದವರಿಗೆ ಸಮುದಾಯ ಭವನ/ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣಕ್ಕಾಗಿ ರೂ.5.00 ಲಕ್ಷಗಳನ್ನು ಮಂಜೂರು ಮಾಡುವ ಕಾರ್ಯಕ್ರಮ ಇರುತ್ತದೆ.

ಆ) 2009-10ನೇ ಸಾಲಿನಲ್ಲಿ ಒಟ್ಟು 29 ದೇವಾಂಗ ಸಮುದಾಯ ಭವನ ಹಾಗೂ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ನೇಕಾರ ಇತರ ಪಂಗಡಗಳಿಗೆ ಸಮುದಾಯ ಭವನಗಳ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಇ) ಮತ್ತು ಈ)

2009-10 ನೇ ಕುರುಹೀನ ಶೆಟ್ಟಿ ಸಮಾಜದವರು ಹಾಸನ ನಗರದಲ್ಲಿ ನಿರ್ಮಿಸುವ ಸಮುದಾಯ ಭವನಕ್ಕೆ ರೂ.5.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಸಮಾಜದವರ ಅರ್ಹ ವಿದ್ಯಾರ್ಥಿಗಳಿಗೆ ಹಣದ ಲಭ್ಯತೆ, ಆದಾಯ ಮತ್ತು ಮೆರಿಟ್ ಆಧಾರದ ಮೇಲೆ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಜಿಲ್ಲೆಗಳಲ್ಲಿ ಮಂಜೂರು ಮಾಡಲಾಗುತ್ತಿದೆ.

ಭಾಗ್ಯಲಕ್ಷ್ಮಿ ಬಾಂಡ್ ಸೌಲಭ್ಯದಿಂದ ವಂಚಿತರಾದ ಬಡ ಮಕ್ಕಳಿಗೂ ಸೌಲಭ್ಯ

462 (939) ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ ಯಾವಾಗಿನಿಂದ ಪ್ರಾರಂಭಿಸಲಾಯಿತು, ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ಮಕ್ಕಳಿಗೆ ಬಾಂಡ್ ವಿತರಿಸಲಾಗಿದೆ, ಪ್ರತಿ ವರ್ಷ ಬಾಂಡ್ ವಿತರಣೆ ಮಾಡಿದ ಮಾಹಿತಿಯನ್ನು ಯೋಜನೆ ಪ್ರಾರಂಭದ ದಿನದಿಂದ ನೀಡುವುದು;

ಆ) ಸದರಿ ಯೋಜನೆಯಿಂದ ವಂಚಿತರಾಗಿ ಇನ್ನೂ ಬಡ ಮಕ್ಕಳು ಸೌಲಭ್ಯದಿಂದ ಉಳಿದು ಹೋಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ, ಆ ಮಕ್ಕಳ ಸಂಖ್ಯೆ ಎಷ್ಟು;

ಇ) ಯಾವುದೋ ಕಾರಣಕ್ಕಾಗಿ ವಂಚಿತರಾದ ಮಕ್ಕಳಿಗೆ ಭಾಗ್ಯಲಕ್ಷ್ಮಿ ಬಾಂಡ್ ಯಾವಾಗ ಕೊಡಲಾಗುವುದು;

ಈ) ಯಾವ ಕಾರಣಕ್ಕಾಗಿ ಈ ಯೋಜನೆಯಿಂದ ಮಕ್ಕಳು ವಂಚಿತರಾಗಿದ್ದಾರೆ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಭಾಗ್ಯಲಕ್ಷ್ಮಿ ಯೋಜನೆಯನ್ನು 2006–07ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಇಲ್ಲಿಯವರೆಗೆ 7,20,562 ಮಕ್ಕಳಿಗೆ ಬಾಂಡ್ ವಿತರಿಸಲಾಗಿದೆ. ಪ್ರತಿ ವರ್ಷ ಬಾಂಡ್ ವಿತರಣೆ ಮಾಡಿದ ಮಾಹಿತಿಯು ಕೆಳಕಂಡಂತಿದೆ.

ವರ್ಷ	ಬಾಂಡ್ ವಿತರಣೆಯಾದ ಫಲಾನುಭವಿಗಳ ಸಂಖ್ಯೆ
2006–07	2,32,676
2007–08	57,986
2008–09	2,97,764
2009–10	1,32,136
ಒಟ್ಟು	**7,20,562**

ಆ) ಇಲ್ಲ.

ಇ) ಸರ್ಕಾರದ ಆದೇಶದನ್ವಯ ಮಗು ಜನಿಸಿದ 1 ವರ್ಷದೊಳಗೆ ಯೋಜನೆಯಡಿ ನೋಂದಣಿಯಾಗಬೇಕಾಗಿರುತ್ತದೆ. ನಿಗಧಿತ ಸಮಯ ದೊಳಗೆ ಅರ್ಜಿ ಸಲ್ಲಿಸಿ ಯೋಜನೆಯಡಿ ನೋಂದಣಿ ಯಾಗದಿದ್ದಲ್ಲಿ ಹಾಗು ಅಗತ್ಯ ದಾಖಲೆಗಳನ್ನು ಸಲ್ಲಿಸದ ಮಕ್ಕಳಿಗೆ ಬಾಂಡ್ ನೀಡಲು ಯೋಜನೆಯಡಿ ಅವಕಾಶವಿರುವುದಿಲ್ಲ.

ಈ) ಮಗು ಜನಿಸಿದ 1 ವರ್ಷದೊಳಗೆ ಯೋಜನೆಯಡಿ ಅರ್ಜಿ ಸಲ್ಲಿಸಿ ನೋಂದಣಿಯಾಗದಿದ್ದಲ್ಲಿ ಹಾಗೂ ಸೂಕ್ತ ದಾಖಲೆಗಳನ್ನು ನಿಗಧಿತ ಅವಧಿಯೊಳಗೆ ಸಲ್ಲಿಸದಿದ್ದಲ್ಲಿ, ಅಂತಹ ಮಕ್ಕಳಿಗೆ ಸೌಲಭ್ಯವನ್ನು ವಿಸ್ತರಿಸಲು ಯೋಜನೆಯಡಿ ಅವಕಾಶವಿರುವುದಿಲ್ಲ.

ಜಮಖಂಡಿ ಮತ್ತು ಮುಧೋಳ ಘಟಕಗಳಿಗೆ ಹೊಸ ಬಸ್ ಪೂರೈಸುವ ಕುರಿತು

463 (940) ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದತವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಮತ್ತು ಮುಧೋಳ ಬಸ್ ಘಟಕಗಳಲ್ಲಿ ಅವಧಿ ಮೀರಿದ ಬಸ್‌ಗಳ ಸಂಖ್ಯೆ ಎಷ್ಟು?

ಆ) ಅವಧಿ ಮೀರಿದ ಬಸ್‌ಗಳನ್ನು ಬದಲಾಯಿಸಿ ಹೊಸ ಬಸ್‌ಗಳನ್ನು ಕೊಡಲು ಇರುವ ತೊಂದರೆಗಳೇನು?

ಇ) ಸದರಿ ತೊಂದರೆಗಳಿಂದ ಪ್ರಯಾಣಿಕರಿಗೆ ಮತ್ತು ಶಾಲಾ ಮಕ್ಕಳಿಗೆ ದಿನಂಪ್ರತಿ ತೊಂದರೆ ಆಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವಾಗ ಸರಿಪಡಿಸಲಾಗುವುದು ಮತ್ತು ಯಾವ ರೀತಿ ಸರಿಪಡಿಸಲಾಗುವುದು?

ಈ) ಸದರಿ ಎರಡೂ ಘಟಕಗಳಲ್ಲಿ ಅನೇಕ ಮಾರ್ಗಗಳನ್ನು ನಿಲ್ಲಿಸಲು ಕಾರಣಗಳೇನು? ಅವುಗಳನ್ನು ಪುನರ್ ಪ್ರಾರಂಭಿಸುವಿರಾ?

ಉ) ಹೊಸ ಮಾರ್ಗಗಳ ಬೇಡಿಕೆ ಇದ್ದು, ಅವುಗಳಿಗೆ ಹೊಸ ಬಸ್‌ಗಳನ್ನು ಪೂರೈಸಲಾಗುವುದೇ?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಜಮಖಂಡಿ ಬಸ್ ಘಟಕದಲ್ಲಿ–11.

ಮುಧೋಳ ಬಸ್ ಘಟಕದಲ್ಲಿ–6

ಆ) ಪ್ರಸ್ತುತ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದಿರುವುದರಿಂದ ಯೋಜನೆಯಂತೆ ಹೊಸ ಬಸ್ಸುಗಳನ್ನು ಹಂತ–ಹಂತವಾಗಿ ಒದಗಿಸಲಾಗುವುದು.

ಇ) ಪ್ರಯಾಣಿಕರಿಗೆ ಮತ್ತು ಶಾಲಾ ಮಕ್ಕಳಿಗೆ ದಿನಂಪ್ರತಿ ತೊಂದರೆ ಆಗುತ್ತಿರುವ ಬಗ್ಗೆ ದೂರುಗಳು ಇರುವುದಿಲ್ಲ.

ಈ) ಜಮಖಂಡಿ ತಾಲ್ಲೂಕಿನಲ್ಲಿರುವ ಎಲ್ಲಾ 64 ಹಳ್ಳಿಗಳಿಗೆ ಹಾಗೂ ಮುಧೋಳ ತಾಲ್ಲೂಕಿನಲ್ಲಿರುವ 77 ಹಳ್ಳಿಗಳಿಗೆ ಅವಶ್ಯಕ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಆದರೆ ವಿರಳ ಸಾರಿಗೆ ನಿಮಿತ್ಯ ಢವಳೇಶ್ವರ ಮತ್ತು ಮಾರಾಪುರ ಹಳ್ಳಿಗಳಿಗೆ ಕಲ್ಪಿಸಲಾದ ಸೌಲಭ್ಯವನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ, ಸಾರ್ವಜನಿಕ ಹಾಗೂ ವಿದ್ಯಾರ್ಥಿಗಳ ಬೇಡಿಕೆ ಮೇರೆಗೆ ಪುನಃ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಉ) ಹೊಸ ಮಾರ್ಗಗಳ ಬೇಡಿಕೆ ಇದ್ದಲ್ಲಿ, ಹೊಸ ಬಸ್ಸುಗಳನ್ನು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಐ.ಟಿ.ಐ. ಕಾಲೇಜು ಪ್ರಾರಂಭಿಸುವುದು

464 (673) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಬಸರಾಳು, ಗ್ರಾಮವು ಹಿಂದುಳಿದ ಹೋಬಳಿ ಕೇಂದ್ರವಾಗಿದ್ದು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಗ್ರಾಮದಲ್ಲಿ ತಾಂತ್ರಿಕ ಶಿಕ್ಷಣ ಪಡೆಯಲು ಐಟಿಐ ಕಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಸರಾಳು ಗ್ರಮದಲ್ಲಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಐಟಿಐ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಬಂದಿರುತ್ತದೆ.

ಆ) ಬಂದಿರುತ್ತದೆ.

ಇ) ಇಲ್ಲ.

ಈ) ಅನುದಾನದ ಲಭ್ಯತೆ ಆಧರಿಸಿ ಪರಿಶೀಲಿಸಲಾಗುವುದು.

ಚೇಳೂರಿ ಹೋಬಳಿ ಮಣ್ಣೆಮಾರಿ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ತೆರೆಯುವುದು

465 (735) ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್ (ಗುಬ್ಬಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಬ್ಬಿ ತಾಲ್ಲೂಕು, ಚೇಳೂರು ಹೋಬಳಿ, ಮಣ್ಣೆಮಾರಿ ದೇವಸ್ಥಾನದ ಹತ್ತಿರ ಸರ್ಕಾರಿ ಆಸ್ಪತ್ರೆ ಈ ಹಿಂದೆ 2006–07ನೇ ಸಾಲಿನಲ್ಲಿ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಆಸ್ಪತ್ರೆಯ ಕಟ್ಟಡಕ್ಕಾಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ;

ಇ) ಹಾಗಿದ್ದಲ್ಲಿ, ಆಸ್ಪತ್ರೆಯ ಕಟ್ಟಡದ ಕಾಮಗಾರಿಗಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು;

ಈ) ಆಸ್ಪತ್ರೆಯ ಕಟ್ಟಡದ ಕಾಮಗಾರಿಯು ಪ್ರಾರಂಭವಾಗಿದೆಯೇ;

ಉ) ಹಾಗಿಲ್ಲದಿದ್ದಲ್ಲಿ, ಕಟ್ಟಡದ ಕಾಮಗಾರಿಯು ಪ್ರಾರಂಭವಾಗದಿರಲು ಕಾರಣಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಗುಬ್ಬಿ ತಾಲ್ಲೂಕು, ಚೇಳೂರು ಹೋಬಳಿ, ಮಣ್ಣೆಮಾರಿ ದೇವಸ್ಥಾನದ ಹತ್ತಿರ 2007–08ನೇ ಸಾಲಿನಲ್ಲಿ ಅಂದರೆ ದಿನಾಂಕ: 04/10/2007 ರ ಸರ್ಕಾರಿ ಆದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಈ ಕೆಳಕಂಡ 3 ಷರತ್ತುಗಳನ್ನು ಗ್ರಾಮಸ್ಥರು ಪೂರೈಸಬೇಕೆಂಬ ಷರತ್ತು ವಿಧಿಸಿ, ಮಂಜೂರು ಮಾಡಲಾಗಿತ್ತು.

1. ಒಂದು ವರ್ಷದೊಳಗೆ ರೂ.1 ಲಕ್ಷ ವಂತಿಗೆ ನೀಡಬೇಕು.
2. ಎರಡು ಎಕರೆ ಜಮೀನು ನೀಡಬೇಕು.
3. ಉಚಿತ ತಾತ್ಕಾಲಿಕ ಕಟ್ಟಡ ನೀಡಬೇಕು.

ಆ) ಇ) ಈ) ಮತ್ತು ಉ)

ಸದರಿ ಗ್ರಾಮಸ್ಥರು ಮೇಲ್ಕಂಡ ನಿಬಂಧನೆಗಳನ್ನು ಪೂರೈಸಿಲ್ಲದ ಕಾರಣ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಲು ಅನುಮತಿ

ನೀಡಿರುವುದಿಲ್ಲ. ಆದುದರಿಂದ, ಭೂಸ್ವಾಧೀನ ಅನುದಾನ ನಿಗದಿಪಡಿಸುವಿಕೆ ಹಾಗೂ ಕಟ್ಟಡ ಕಾಮಗಾರಿಗಳ ಪ್ರಶ್ನೆ ಉದ್ಭವಿಸುವುದಿಲ್ಲ.

ಕುಶಲಕರ್ಮಿಗಳ ಮನೆಗಳನ್ನು ನಿರ್ಮಿಸಲು ಸಹಾಯ ಧನ

466 (372) ಶ್ರೀ ಸುಭಾಷ್ ಆರ್.ಗುತ್ತೇದಾರ್ : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 03 ವರ್ಷಗಳಲ್ಲಿ (2007–08, 2008–09, 2009–10) ಗುಲ್ಬರ್ಗಾ ಜಿಲ್ಲೆಯಲ್ಲಿ ವಂಶಪಾರಂಪರ್ಯವಾಗಿ ಬಂದ ಕುಶಲಕರ್ಮಿಗಳು ಮನೆ ಕಟ್ಟಿಕೊಳ್ಳಲು ಸರ್ಕಾರ ನೀಡಿರುವ ಸಹಾಯಧನದ ಮೊತ್ತವೆಷ್ಟು?

ಆ) ಈ ಸಹಾಯಧನವನ್ನು ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು, ತಾಲ್ಲೂಕುವಾರು ಫಲಾನುಭವಿಗಳ ಹೆಸರು ಮತ್ತು ಇತರೆ ವಿವರಗಳನ್ನು ನೀಡುವುದು;

ಇ) ಇವರುಗಳಿಗೆ ನೀಡಿತ್ತಿರುವ ಸಹಾಯಧನದ ಪ್ರಮಾಣವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಈ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು ಮತ್ತು ಯಾವಾಗಿನಿಂದ ಜಾರಿಗೆ ತರಲಾಗುವುದು;

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಕುಶಲಕರ್ಮಿಗಳಿಗೆ ಮನೆ ನಿರ್ಮಿಸಲು ಸಹಾಯಧನ ಒದಗಿಸುವಂತಹ ಯೋಜನೆಗಳನ್ನು ಅನುಷ್ಠಾನ ಗೊಳಿಸುತ್ತಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ

467 (744) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ ಶುಲ್ಕ ವಿನಾಯಿತಿ ನೀಡಲು ಉಪಯೋಗಿಸುವ ಮಾನದಂಡಗಳೇನು; ಯಾವ ಮಾರ್ಗಸೂಚಿಯನ್ನು ಅನುಸರಿಸಲಾಗುತ್ತಿದೆ;

ಇ) ಯಾವ ದಿನಾಂಕದಿಂದ ಆದೇಶ ಹೊರಡಿಸಲಾಗಿದೆ; ಆದೇಶದ ಪ್ರತಿಯನ್ನು ನೀಡುವುದು;

ಈ) ಇದುವರೆಗೆ ಎಷ್ಟು ಜನ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ; ಶುಲ್ಕದ ವಿನಾಯಿತಿ ಎಷ್ಟು; ಮಾಹಿತಿ ನೀಡುವುದು?

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಸರ್ಕಾರದ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ 229 ಬಿಸಿಎ 80, ದಿನಾಂಕ: 16.12.1982ರ ಪ್ರಕಾರ ಶುಲ್ಕ ವಿನಾಯಿತಿ ಸೌಲಭ್ಯವನ್ನು ಯಾವುದೇ ಜಾತಿ ಮತವನ್ನು ಪರಿಗಣಿಸದೆ ಮೆಟ್ರಿಕ್ ನಂತರದ ಕೋರ್ಸು ಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ಅರ್ಜಿ ಸಲ್ಲಿಸಿದ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಈ ಸೌಲಭ್ಯದ ಪ್ರಯೋಜನ ಪಡೆಯುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ.11,000/–ದೊಳಗೆ ಇರಬೇಕಾಗುತ್ತದೆ. ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ. ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡಲು ಅವಕಾಶ ಇರುತ್ತದೆ.

ಇ) ಸರ್ಕಾರದ ಆದೇಶ ಸಂ: ಎಸ್‌ಡಬ್ಲ್ಯೂಎಲ್ 229 ಬಿಸಿಎ 80, ದಿನಾಂಕ: 16.12.1982 ರಂದು ಆದೇಶ ಹೊರಡಿಸಲಾಗಿದೆ. (ಆದೇಶದ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ಈ) 2007–08ನೇ ಸಾಲಿನಲ್ಲಿ 442305 ವಿದ್ಯಾರ್ಥಿಗಳಿಗೆ ರೂ. 3407.13 ಲಕ್ಷಗಳನ್ನು, 2008–09ನೇ ಸಾಲಿನಲ್ಲಿ 473338 ವಿದ್ಯಾರ್ಥಿಗಳಿಗೆ ರೂ.4088.61 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 2009–10ನೇ ಸಾಲಿನ ಆಯವ್ಯಯದಲ್ಲಿ ರೂ.2000.00 ಲಕ್ಷಗಳನ್ನು ಒದಗಿಸಿದ್ದು, ಮಾರ್ಚ್ 2010ರಲ್ಲಿ ಹೆಚ್ಚುವರಿಯಾಗಿ ರೂ.2500.00 ಲಕ್ಷಗಳನ್ನು ಒದಗಿಸಿದೆ. 2009–10ನೇ ಸಾಲಿನಲ್ಲಿ ದಿನಾಂಕ: 9–3–2010ರ ವರೆಗೆ 232054 ವಿದ್ಯಾರ್ಥಿಗಳಿಗೆ ರೂ.1822.67 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

K.S.R.T.C. ಡಿಪೋ ಪ್ರಾರಂಭಿಸುವುದು

468 (745) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋ ಪ್ರಾರಂಭಿಸಲು ಉದ್ದೇಶಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು; ಇದುವರೆಗೆ ಇಲಾಖೆಯಿಂದ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಆ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋ ಪ್ರಾರಂಭಿಸಲು ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬಹುತೇಕ ಸಾರಿಗೆ ಅವಶ್ಯಕತೆಗಳನ್ನು ಖಾಸಗಿ ಬಸ್ ಮಾಲೀಕರು ನಿರ್ವಹಿಸುತ್ತಿದ್ದು, ರಸ್ತೆ ಸಾರಿಗೆ ನಿಗಮದ ಅವಶ್ಯಕತೆಗಳನ್ನು ತಿಪಟೂರು, ತುರುವೇಕೆರೆ ಹಾಗೂ ತುಮಕೂರು ಘಟಕಗಳಿಂದ ಕಾರ್ಯಾಚರಣೆಗೊಳಿಸಲಾಗುತ್ತಿದೆ. ಮುಂದಿನ ದಿನಗಳ ಸಾರಿಗೆ ಅವಶ್ಯಕತೆಗಳನ್ನು ಪೂರೈಸಲು ನಿವೇಶನವನ್ನು ಗುರುತಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಿಸುವುದು

469 (746) ಶ್ರೀ ಸುರೇಶ್ ಬಾಬು. ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ. ಸ್ವಂತ ಕಟ್ಟಡದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಹಾಗಿದ್ದಲ್ಲಿ, ಸ್ವಂತ ಕಟ್ಟಡ ನಿರ್ಮಿಸಲು ಏನು ಕ್ರಮಕೈಗೊಳ್ಳಲಾಗಿದೆ. ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಇ) ಇನ್ನೆಷ್ಟು ದಿನಗಳಲ್ಲಿ ಸ್ವಂತ ಕಟ್ಟಡದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪ್ರಾರಂಭಿಸಲಾಗುವುದು;

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಅಂದಾಜು ವೆಚ್ಚ ರೂ. 4.7 ಕೋಟಿ ಇರುತ್ತದೆ.

ಇ) ಮೇ 2011 ರ ಅಂತ್ಯಕ್ಕೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ವಸತಿ ಶಾಲೆಯನ್ನು ಸ್ವಂತ ಕಟ್ಟಡಕ್ಕೆ ವರ್ಗಾಯಿಸಲಾಗುವುದು.

ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಮತ್ತು ಶೌಚಾಲಯಗಳನ್ನು ನಿರ್ಮಿಸುವುದು

470 (747) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸ್ವಂತ ಕಟ್ಟಡಗಳ ಅವಶ್ಯಕತೆಯಿರುವ ಅಂಗನವಾಡಿ ಕಟ್ಟಡಗಳೆಷ್ಟು; ಶೌಚಾಲಯಗಳ ಅವಶ್ಯಕತೆ ಯಿರುವ ಅಂಗನವಾಡಿಗಳೆಷ್ಟು;

ಆ) ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಮತ್ತು ಶೌಚಾಲಯ ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಈ ವರ್ಷದ ಅನುದಾನದಲ್ಲಿ ಈ ಕಾಮಗಾರಿಗಳಿಗೆ ಹಣ ಕಾಯ್ದಿರಿಸಲಾಗುವುದೇ;

ಶ್ರೀ ಸಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 232 ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿರುತ್ತವೆ ಉಳಿದ 100 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳ ಅವಶ್ಯಕತೆ ಇರುತ್ತವೆ. 191 ಕೇಂದ್ರಗಳಲ್ಲಿ ಶೌಚಾಲಯಗಳಿದ್ದು 141 ಕಟ್ಟಡಗಳಿಗೆ ಶೌಚಾಲಯದ ಅವಶ್ಯಕತೆಯಿರುತ್ತದೆ.

ಅ) ನಿವೇಶನ ಮತ್ತು ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗುವುದು. ಶೌಚಾಲಯಗಳ ಅವಶ್ಯಕತೆ ಇರುವ ಕಡೆ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದಡಿ ಶೌಚಾಲಯ ನಿರ್ಮಿಸಲು ಕ್ರಮ ವಹಿಸಲಾಗುತ್ತಿದೆ.

ಇ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 2009-10ನೇ ಸಾಲಿನಲ್ಲಿ ಇಲಾಖಾ ಅನುದಾನದಿಂದ 4 ಕಟ್ಟಡಗಳನ್ನು ನಿರ್ಮಿಸಲು ರೂ.2,00,000, ನಬಾರ್ಡ್ ಸಹಯೋಗದಿಂದ 1 ಕಟ್ಟಡ ನಿರ್ಮಿಸಲು ರೂ. 3,31,000. ಹಾಗೂ ವಿಶೇಷ ಅಭಿವೃದ್ಧಿ ಕಾರ್ಯಕ್ರಮದಡಿ 8 ಕಟ್ಟಡಗಳನ್ನು ನಿರ್ಮಿಸಲು ರೂ.28,80,000ಗಳನ್ನು, ಒಟ್ಟು ರೂ.34,11,000 ಮುಂದಿನ ವರ್ಷ 2010-11ಕ್ಕೆ ಅನುದಾನವನ್ನು ಕಾಯ್ದಿರಿಸಲಾಗಿದೆ.

ತಜ್ಞ ವೈದ್ಯರು ಮತ್ತು ಸಿಬ್ಬಂದಿ ವರ್ಗದವರ ಕೊರತೆ

471 (748) ಶ್ರೀ. ಸುರೇಶ್ ಬಾಬು ಸಿ.ಬಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದ ಆಸ್ಪತ್ರೆಯಲ್ಲಿ ತಜ್ಞ ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿ ಮತ್ತು ಗ್ರೂಪ್ 'ಡಿ' ನೌಕರರ ಖಾಲಿ ಹುದ್ದೆಗಳು ಎಷ್ಟು; ಖಾಲಿ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ; ಇನ್ನೆಷ್ಟು ದಿನಗಳಲ್ಲಿ ಭರ್ತಿ ಮಾಡಲಾಗುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹುದ್ದೆಗಳು ಖಾಲಿ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ, ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಅನುಬಂಧ – 1

ವಿಧಾನ ಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 748 ಕ್ಕೆ ಸಂಬಂಧಿಸಿದಂತೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿನ ವೈದ್ಯರು ಮತ್ತು ಸಿಬ್ಬಂದಿ ವರ್ಗದವರ ಖಾಲಿ ಹುದ್ದೆಗಳ ಬಗ್ಗೆ ಕೇಳಿರುವ ಮಾಹಿತಿ ಕುರಿತು.

ಕ್ರಮ ಸಂಖ್ಯೆ	ಹುದ್ದೆಗಳ ವಿವರ	ಮಂಜೂರಾತಿ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಣೆಯ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1	ತಜ್ಞ ವೈದ್ಯರು	6	3	3
2	ಶುಶ್ರೂಷಕರು	4	4	0
3	ಕಛೇರಿ ಅಧೀಕ್ಷಕರು	–	–	–
4	ಪ್ರ.ದ.ಸ.	1	1	0
5	ದ್ವಿ.ದ.ಸ.	2	2	0
6	ಫಾರ್ಮಾಸಿಸ್ಟ್	1	–	1
7	ಪ್ರ.ಶಾ.ತಂತ್ರಜ್ಞರು	1	1	0
8	ಕ್ಷ–ಕಿರಣ ತಂತ್ರಜ್ಞರು	1	1	0
9	ಕ್ಷೇ.ಆ.ಶಿ	1	0	1
10	ನೇತ್ರ ಸಹಾಯಕರು	1	1	0
11	ಹಿ.ಮ.ಆ.ಸ	–	–	–
12	ಕಿ.ಮ.ಆ.ಸ	4	4	0
13	ಹಿ.ಪು.ಆ.ಸ	1	0	1
14	ಕಿ.ಪು.ಆ.ಸ	3	3	0
15	ವಾಹನ ಚಾಲಕರು	2	0	2
16	ಗ್ರೂಪ್ ಡಿ	8	2	6

ಅನುಬಂಧ – 2

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡಿರುವ/ತೆಗೆದುಕೊಳ್ಳಲಿರುವ ಕ್ರಮಗಳ ವಿವರ

1. ತಜ್ಞ ವೈದ್ಯರ ಖಾಲಿ ಹುದ್ದೆಗಳನ್ನು 2010 ರಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಗೆ ಸ್ಥಳನಿಯುಕ್ತಿ ಮಾಡುವ ಮೂಲಕ ಆದ್ಯತಾನುಸಾರ ಭರ್ತಿ ಮಾಡಲು ಕ್ರಮವಹಿಸ ಲಾಗುವುದು.
2. (1) ಮಕ್ಕಳ ತಜ್ಞರು, (2) ಅರವಳಿಕೆ ತಜ್ಞರು ಹಾಗೂ (3) ಸ್ತ್ರೀರೋಗ ತಜ್ಞರುಗಳ ಕೊರತೆಯನ್ನು ನೀಗಿಸಲು ಮಾಸಿಕ ಗರಿಷ್ಠ ರೂ. 50,000 ರವರೆಗೆ ಗೌರವಧನ ನೀಡಿ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ (ಎನ್.ಆರ್. ಹೆಚ್.ಎಂ.) ಅಡಿ ಅವಕಾಶ ಕಲ್ಪಿಸಲಾಗಿದೆ. ಹಾಗೂ ಇದೇ ಯೋಜನೆಯಡಿ ಪ್ರಕರಣವಾರು ಆಧಾರದ ಮೇಲೆ ಪ್ರತೀ ಪ್ರಕರಣವೊಂದಕ್ಕೆ (1) ಮಕ್ಕಳ ತಜ್ಞರಿಗೆ ರೂ.500, (2) ಅರೆವಳಿಕೆ ತಜ್ಞರಿಗೆ ರೂ.1,000 ಹಾಗೂ (3) ಸ್ತ್ರೀರೋಗ ತಜ್ಞರಿಗೆ ರೂ.1,500 ರಂತೆ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.
3. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ) ರ ಅಡಿಯಲ್ಲಿ ಮೇಲಿನ ಕ್ರಮ ಸಂಖ್ಯೆ:2 ರಲ್ಲಿ ತಿಳಿಸಿರುವ 3 ತಜ್ಞತೆಗಳನ್ನು ಹೊರತುಪಡಿಸಿ ಉಳಿದ ತಜ್ಞತೆಯಲ್ಲಿ ಮಾಸಿಕ ರೂ.5,000 ಗೌರವ ಧನ ನೀಡಿ ರಿಟೈನರ್ ಶಿಪ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದೇ ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ, ಸದರಿ ತಜ್ಞರು ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ.1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ ವಾರಕ್ಕೆ ಎರಡು ದಿನಕ್ಕೆ ಮಾತ್ರ ಅಂತಹ ಸೇವೆಯನ್ನು ಪಡೆಯಲು ಮಿತಿಗೊಳಿಸಲಾಗಿದೆ.
4. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು ಈ ಮೂಲಕ

0.17F-138

ಸ್ತ್ರೀ ರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.

5. ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ 5021 ಅರೆವೈದ್ಯಕೀಯ ಹುದ್ದೆಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಅದು ಪೂರ್ಣಗೊಂಡ ನಂತರ ಆದ್ಯತಾನುಸಾರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
6. ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 562 ವೈದ್ಯರ ಹಾಗೂ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿದೆ.
7. ಪ್ರಸ್ತುತ ಗ್ರೂಪ್-ಡಿ ನೌಕರರ ವೃಂದದಲ್ಲಿ ನೇಮಕಾತಿ ಮಾಡಲು ನಿಷೇಧವಿದ್ದು, ಅವಶ್ಯವಿರುವೆಡೆ ಬಾಹ್ಯ ಮೂಲಗಳಿಂದ ಸೇವೆ ಪಡೆದು ನಿರ್ವಹಿಸಲು ಕ್ರಮವಹಿಸಲಾಗಿದೆ.

ರಾಜ್ಯದಲ್ಲಿನ ಅಲ್ಪಸಂಖ್ಯಾತರ ವಸತಿ ಶಾಲೆಗಳು

472 (953) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಹಜ್, ವಕ್ಫ್ & ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಅಲ್ಪಸಂಖ್ಯಾತರ ಪದವಿ ಹಾಗೂ ಪದವಿ ಪೂರ್ವ ವಸತಿ ನಿಲಯಗಳಿವೆ; ಎಷ್ಟು ವಿದ್ಯಾರ್ಥಿಗಳಿದ್ದಾರೆ (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಎಷ್ಟು ವಸತಿ ನಿಲಯಗಳು ಸ್ವಂತ ಕಟ್ಟಡದಲ್ಲಿವೆ, ಎಷ್ಟು ಬಾಡಿಗೆ ಕಟ್ಟಡದಲ್ಲಿವೆ;

ಇ) ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಸತಿ ನಿಲಯಗಳನ್ನು ಸ್ವಂತ ಕಟ್ಟಡಗಳಿಗೆ ಸ್ಥಳಾಂತರಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಪ್ರೊ॥ಡಾ. ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ (5 ರಿಂದ 10ನೇ ತರಗತಿವರೆಗೆ) ವಿದ್ಯಾರ್ಥಿನಿಲಯಗಳು 52 ಇರುತ್ತವೆ.

ಅಲ್ಪಸಂಖ್ಯಾತರ ಮೆಟ್ರಿಕ್ ನಂತರ (ಎಸ್.ಎಸ್.ಎಲ್.ಸಿ. ನಂತರ ಸ್ನಾತಕೋತ್ತರ ಪದವಿ ವರೆಗಿನ ಕೋರ್ಸುಗಳು) ವಿದ್ಯಾರ್ಥಿನಿಲಯಗಳು 71 ಇರುತ್ತವೆ.

ಒಟ್ಟು 5049 ವಿದ್ಯಾರ್ಥಿಗಳಿದ್ದಾರೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ)

ಆ) 14 ವಸತಿ ನಿಲಯಗಳಿಗೆ ಸ್ವಂತ ಕಟ್ಟಡಗಳಿರುತ್ತದೆ. 109 ವಸತಿನಿಲಯಗಳು ಬಾಡಿಗೆ ಕಟ್ಟಡದಲ್ಲಿವೆ.

ಇ) ವಿದ್ಯಾರ್ಥಿನಿಲಯಗಳ ಸ್ವಂತ ಕಟ್ಟಡಗಳ ನಿರ್ಮಾಣಕ್ಕೆ ಅಗತ್ಯ ನಿವೇಶನಗಳನ್ನು ಆಯಾ ಜಿಲ್ಲಾಧಿಕಾರಿಗಳಿಂದ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಿಗಳಿಂದ ಪಡೆದುಕೊಳ್ಳಲಾಗುತ್ತಿದೆ. ಸರ್ಕಾರಿ ನಿವೇಶನಗಳು ಲಭ್ಯವಿಲ್ಲದಂತಹ ಕಡೆಗಳಲ್ಲಿ ಅಗತ್ಯ ಜಾಗವನ್ನು ಸಾರ್ವಜನಿಕರಿಂದ ಖರೀದಿಸಲಾಗುತ್ತದೆ. ಹಾಲಿ 37 ವಿದ್ಯಾರ್ಥಿನಿಲಯಗಳ ಕಟ್ಟಡಗಳು ವಿವಿಧ ನಿರ್ಮಾಣದ ಹಂತದಲ್ಲಿರುತ್ತದೆ. ಸ್ವಂತ ಕಟ್ಟಡಗಳ ನಿರ್ಮಾಣದ ನಂತರ ವಿದ್ಯಾರ್ಥಿಗಳನ್ನು ಸ್ವಂತ ಕಟ್ಟಡಗಳಿಗೆ ಸ್ಥಳಾಂತರಿಸಲಾಗುವುದು.

ಸ್ವಂತ ಕಟ್ಟಡಗಳ ನಿರ್ಮಾಣಕ್ಕಾಗಿ ಕಳೆದ 3 ವರ್ಷಗಳಿಂದ ವೆಚ್ಚ ಮಾಡಿರುವ ಅನುದಾನ ವಿವರ

ವರ್ಷ	ಖರ್ಚು ಮಾಡಿದ ಅನುದಾನ
2007–08	600.00 (ರೂ. ಲಕ್ಷಗಳು)
2008–09	1493.00 "
2009–10	1161.88 "

ಅನುಬಂಧ-1

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) ಎಂ.ಎಲ್.ಎ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ [illegible] ಕ್ಕೆ ಅನುಬಂಧ-1

ರಾಜ್ಯದಲ್ಲಿ ಅಲ್ಪಸಂಖ್ಯಾತರ ವಸತಿನಿಲಯಗಳಲ್ಲಿ ಸೌಲಭ್ಯ ಪಡೆಯುತ್ತಿರುವ ಒಟ್ಟು ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ಈ ಕೆಳಕಂಡಂತಿದೆ

ಕ್ರ.ಸಂ	ಜಿಲ್ಲೆ	ವಿದ್ಯಾರ್ಥಿನಿಲಯದ ಸ್ಥಳ	ನಿಲಯಗಳ ವಿವರ	ಸೌಲಭ್ಯ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ	ಷರಾ
1	2	3	4	5	
1	ಬೆಂಗಳೂರು ನಗರ	ಬೆಂಗಳೂರು ನಗರ	ಮೆಟ್ರಿಕ್ ಪೂರ್ವಬಾಲಕಿಯರು	50	
1		ಬೆಂಗಳೂರು ನಗರ	ಮೆಟ್ರಿಕ್ ಪೂರ್ವಬಾಲಕಿಯರು	50	
2		ಬೆಂಗಳೂರು ತಾ।। ಪೂರ್ವ	ಮೆಟ್ರಿಕ್ ನಂತರ ಬಾಲಕಿಯರು	17	
3		ಬೆಂಗಳೂರು ತಾ।। ದಕ್ಷಿಣ	ಮೆಟ್ರಿಕ್ ನಂತರ ಬಾಲಕರ	50	
4		ಕೃಷಿ ವಿಶ್ವವಿದ್ಯಾನಿಲಯ ಹೆಬ್ಬಾಳ	ಮೆಟ್ರಿಕ್ ನಂತರ ಬಾಲಕರ	ಪ್ರಾರಂಭಿಸಿಲ್ಲ.	2009-10ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದ್ದು ಕಟ್ಟಡ [illegible] ಅರ್ಹ ವಿದ್ಯಾರ್ಥಿಗಳ ಕೊರತೆ ಪ್ರಾರಂಭಿಸಲಾಗಿರುವುದಿಲ್ಲ, 2010-11 ರಲ್ಲಿ ಪ್ರಾರಂಭಿಸಲಾಗುವುದು.
5	ಬೆಂಗಳೂರು ಗ್ರಾ	ಹೊಸಕೋಟೆ	ಮೆಟ್ರಿಕ್ ನಂತರ ಬಾಲಕರ	ಪ್ರಾರಂಭಿಸಿಲ್ಲ.	ಅರ್ಹ [illegible] ಕೊರತೆಯಿಂದ ಪ್ರಾರಂಭವಾಗಿರುವುದಿಲ್ಲ 2010-11 ರಿಂದ ಪ್ರಾರಂಭಿಸಲು [illegible].
6		ನೆಲಮಂಗಲ	ಮೆಟ್ರಿಕ್ ಪೂರ್ವಬಾಲಕರ	28	
7	ಬಾಗಲಕೋಟೆ	ಬಾಗಲಕೋಟೆ ಟೌನ್	ಮೆಟ್ರಿಕ್ ನಂತರ ಬಾಲಕಿಯರು	49	
8		ಇಳಕಲ್	ಮೆಟ್ರಿಕ್ ಪೂರ್ವ ಬಾಲಕಿಯರು	50	
9		ಜಮಖಂಡಿ	ಮೆಟ್ರಿಕ್ ಪೂರ್ವ ಬಾಲಕಿಯರು	50	
10		ಬಾದಾಮಿ	ಮೆಟ್ರಿಕ್ ಪೂರ್ವ ಬಾಲಕಿಯರು	50	
11		ಬಾಗಲಕೋಟೆ	ಮೆಟ್ರಿಕ್ ಪೂರ್ವಬಾಲಕಿಯರು	34	
12		ಬಾಗಲಕೋಟೆ ನಗರ	ಮೆಟ್ರಿಕ್ ನಂತರ ಬಾಲಕರ	60	
13	ಬೀದರ್	ಬೀದರ್ ನಗರ	ಮೆಟ್ರಿಕ್ ನಂತರ ಬಾಲಕಿಯರು	50	
14		ಬೀದರ್ ನಗರ	ಮೆಟ್ರಿಕ್ ನಂತರ ಬಾಲಕರ	50	
15		ಬಸವಕಲ್ಯಾಣ	ಮೆಟ್ರಿಕ್ ನಂತರ ಬಾಲಕರ	50	
16		ಬೀದರ್ ನಗರ	ಮೆಟ್ರಿಕ್ ಪೂರ್ವಬಾಲಕಿಯರು	50	
17		ಬೀದರ್	ಮೆಟ್ರಿಕ್ ಪೂರ್ವಬಾಲಕರ	50	

18	ಬಳ್ಳಾರಿ	ಬಳ್ಳಾರಿ ನಗರ	ಮೆಟ್ರಿಕ್ ನಂತರ ಬಾಲಕಿಯರು	37	
19		ಬಳ್ಳಾರಿ ನಗರ	ಮೆಟ್ರಿಕ್ ನಂತರ ಬಾಲಕರ	40	
20		ಸಂಡೂರು	ಮೆಟ್ರಿಕ್ ಪೂರ್ವ ಬಾಲಕಿಯರು	50	
21		ಹಡಗಲಿ	ಮೆಟ್ರಿಕ್ ಪೂರ್ವ ಬಾಲಕರ	39	
22		ಬಳ್ಳಾರಿ	ಮೆಟ್ರಿಕ್ ಪೂರ್ವಬಾಲಕಿಯರು	50	
23		ಕೂಡ್ಲಿಗಿ	ಮೆಟ್ರಿಕ್ ಪೂರ್ವ ಬಾಲಕರ	50	
24		ಬಳ್ಳಾರಿ ನಗರ	ಮೆಟ್ರಿಕ್ ಪೂರ್ವ ಬಾಲಕರ	48	
25	ಬಿಜಾಪುರ	ಬಿಜಾಪುರ ನಗರ	ಮೆಟ್ರಿಕ್ ಪೂರ್ವ ಬಾಲಕಿಯರು	50	
26		ಬಿಜಾಪುರ ನಗರ	ಮೆಟ್ರಿಕ್ ಪೂರ್ವ ಬಾಲಕರ	50	
27		ಬಿಜಾಪುರ ನಗರ	ಮೆಟ್ರಿಕ್ ಪೂರ್ವ ಬಾಲಕಿಯರು	50	
28		ಮುದ್ದೇಬಿಹಾಳ	ಮೆಟ್ರಿಕ್ ನಂತರ ಬಾಲಕರ	50	
29		ಬ.ಬಾಗೇವಾಡಿ (ನಿಡುಗುಂದಿ)	ಮೆಟ್ರಿಕ್ ಪೂರ್ವ ಬಾಲಕರ	50	
30		ಇಂಚಗೇರಿ	ಮೆಟ್ರಿಕ್ ನಂತರ ಬಾಲಕಿಯರು	50	
31		ಮಹಿಳಾ ವಿಶ್ವವಿದ್ಯಾನಿಲಯ ಬಿಜಾಪುರ	ಮೆಟ್ರಿಕ್ ನಂತರ ಬಾಲಕಿಯರು	ಪ್ರಾರಂಭಿಸಿಲ್ಲ	2009-10ರ ಅಂತ್ಯದಲ್ಲಿ ಮಂಜೂರು ಮಾಡಲಾಗಿದ್ದು [illegible] ವಿದ್ಯಾರ್ಥಿಗಳ [illegible] ಪ್ರಾರಂಭವಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
32	ಬೆಳಗಾಂ	ಬೆಳಗಾಂ ನಗರ	ಮೆಟ್ರಿಕ್ ಪೂರ್ವ ಬಾಲಕಿಯರು	42	
33		ಬೆಳಗಾಂ ನಗರ	ಮೆಟ್ರಿಕ್ ನಂತರ ಬಾಲಕಿಯರು	50	
34		ಮೂಡಲಗಿಗೋಕಾಕ ತಾ:	ಮೆಟ್ರಿಕ್ ಪೂರ್ವ ಬಾಲಕರ	50	
35		ಬೈಲಹೊಂಗಲ	ಮೆಟ್ರಿಕ್ ಪೂರ್ವ ಬಾಲಕರ	35	
36		ಬಾಲಕರ ವಿ.ನಿಲಯ ಬೆಳಗಾಂ	ಮೆಟ್ರಿಕ್ ನಂತರ ಬಾಲಕರ	45	
37	ಚಿಕ್ಕಮಗಳೂರು	ಚಿಕ್ಕಮಗಳೂರು ನಗರ	ಮೆಟ್ರಿಕ್ ಪೂರ್ವ ಬಾಲಕಿಯರು	50	
38		ಬೀರೂರು	ಮೆಟ್ರಿಕ್ ನಂತರ ಬಾಲಕರು	44	
39		ಕಡೂರು	ಮೆಟ್ರಿಕ್ ಪೂರ್ವ ಬಾಲಕಿಯರು	35	

40	ಚಿತ್ರದುರ್ಗ	ಚಿತ್ರದುರ್ಗ ನಗರ	ಮೆಟ್ರಿಕ್ ನಂತರ ಬಾಲಕಿಯರು	42	
41		ಹಿರಿಯೂರು	ಮೆಟ್ರಿಕ್ ಪೂರ್ವ ಬಾಲಕಿಯರು	36	
42		ಚಿತ್ರದುರ್ಗ	ಮೆಟ್ರಿಕ್ ನಂತರ ಬಾಲಕರು	50	
43	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಮೆಟ್ರಿಕ್ ನಂತರ ಬಾಲಕಿಯರು	36	
44		ಚಿಕ್ಕಬಳ್ಳಾಪುರ (ಚಿಂತಾಮಣಿ)	ಮೆಟ್ರಿಕ್ ಪೂರ್ವ ಬಾಲಕರು	50	
45		ಚಿಕ್ಕಬಳ್ಳಾಪುರ	ಮೆಟ್ರಿಕ್ ಪೂರ್ವ ಬಾಲಕರ	48	
46	ಚಾಮರಾಜನಗರ	ಚಾಮರಾಜನಗರ	ಮೆಟ್ರಿಕ್ ನಂತರ ಬಾಲಕಿಯರು	50	
47	ದಕ್ಷಿಣ ಕನ್ನಡ	ಮಂಗಳೂರು ಚಿಲಿಂಬಿ	ಮೆಟ್ರಿಕ್ ನಂತರ ಬಾಲಕಿಯರು	50	
48		ಮಂಗಳೂರ, ಗುರುಕುಂಬಳ	ಮೆಟ್ರಿಕ್ ನಂತರ ಬಾಲಕಿಯರು	33	
49		ಮಂಗಳೂರು ವಿಶ್ವವಿದ್ಯಾನಿಲಯ	ಮೆಟ್ರಿಕ್ ಪೂರ್ವ ಬಾಲಕಿಯರು	35	
50	ಧಾರವಾಡ	ಧಾರವಾಡ ನಗರ	ಮೆಟ್ರಿಕ್ ಪೂರ್ವ ಬಾಲಕಿಯರು	50	
51		ನವಲಗುಂದ	ಮೆಟ್ರಿಕ್ ಪೂರ್ವ ಬಾಲಕರ	50	
52		ಹುಬ್ಬಳ್ಳಿ	ಮೆಟ್ರಿಕ್ ಪೂರ್ವ ಬಾಲಕರ	50	
53		ಕುಂದಗೋಳ	ಮೆಟ್ರಿಕ್ ಪೂರ್ವ ಬಾಲಕರ	50	
54		ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ	ಮೆಟ್ರಿಕ್ ನಂತರ ಬಾಲಕಿಯರು	ಪ್ರಾರಂಭಿಸಿಲ್ಲ	2009-10ರ ಡಿಸೆಂಬರ್ ಅಂತ್ಯದಲ್ಲಿ ಮಂಜೂರು ಮಾಡಲಾಗಿದ್ದು, ಪಿಯುಸಿ, ಪದವಿ ಮತ್ತು ಇತರೆ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭಿಸಲಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
55		ಮಹಿಳಾ ಶಿಕ್ಷಣ ತರಬೇತಿ ಕೇಂದ್ರ ಆವರಣ	ಮೆಟ್ರಿಕ್ ನಂತರ ಬಾಲಕಿಯರು	ಪ್ರಾರಂಭಿಸಿಲ್ಲ	2009-10ರ ಡಿಸೆಂಬರ್ ಅಂತ್ಯದಲ್ಲಿ ಮಂಜೂರು ಮಾಡಲಾಗಿದ್ದು, ಪಿಯುಸಿ, ಪದವಿ ಮತ್ತು ಇತರೆ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭಿಸಲಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
56	ದಾವಣಗೆರೆ	ಕರೆಬಿಳಚಿ, ಚನ್ನಗಿರಿ ತಾ:	ಮೆಟ್ರಿಕ್ ನಂತರ ಬಾಲಕಿಯರು	47	
57		ದಾವಣಗೆರೆ ನಗರ	ಮೆಟ್ರಿಕ್ ನಂತರ ಬಾಲಕಿಯರು	50	
58		ದಾವಣಗೆರೆ ನಗರ	ಮೆಟ್ರಿಕ್ ನಂತರ ಬಾಲಕರ	50	
59		ಹರಿಹರ	ಮೆಟ್ರಿಕ್ ಪೂರ್ವ ಬಾಲಕಿಯರು	42	
60	ಗುಲ್ಬರ್ಗಾ	ಗುಲ್ಬರ್ಗಾ ನಗರ	ಮೆಟ್ರಿಕ್ ನಂತರ ಬಾಲಕಿಯರು	50	
61		ಗುಲ್ಬರ್ಗಾ ನಗರ	ಮೆಟ್ರಿಕ್ ನಂತರ ಬಾಲಕರ	50	
62		ಜೇವರ್ಗಿ	ಮೆಟ್ರಿಕ್ ಪೂರ್ವ ಬಾಲಕರ	50	
63		ಷಹಾಪುರ	ಮೆಟ್ರಿಕ್ ಪೂರ್ವ ಬಾಲಕಿಯರು	50	

64		ಗುಲ್ಬರ್ಗಾ ನಗರ	ಮೆಟ್ರಿಕ್ ನಂತರ ಬಾಲಕಿಯರು	50	
65		ಚಿಂಚೋಳಿ	ಮೆಟ್ರಿಕ್ ನಂತರ ಬಾಲಕರ	50	
66		ಯಾದಗಿರಿ	ಮೆಟ್ರಿಕ್ ನಂತರ ಬಾಲಕರ	50	
67		ಗುಲ್ಬರ್ಗಾ ವಿಶ್ವವಿದ್ಯಾನಿಲಯ	ಮೆಟ್ರಿಕ್ ನಂತರ ಬಾಲಕಿಯರು	50	
68	ಗದಗ	ಗದಗ ನಗರ	ಮೆಟ್ರಿಕ್ ನಂತರ ಬಾಲಕರು	ಪ್ರಾರಂಭಿಸಿಲ್ಲ	2009-10ನೇ ಸೆಪ್ಟೆಂಬರ್ ಅಂತ್ಯದಲ್ಲಿ ಮಂಜೂರು ಮಾಡಲಾಗಿದ್ದು, ಹೊಸ ಕಟ್ಟಡ ಹಾಗೂ ಅಗತ್ಯ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭವಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
69		ಗದಗ (ಮುಂಡರಗಿ)	ಮೆಟ್ರಿಕ್ ನಂತರ ಬಾಲಕರು	50	
70		ಗದಗ ನಗರ	ಮೆಟ್ರಿಕ್ ಪೂರ್ವ ಬಾಲಕರ	೫೦	
71	ಹಾವೇರಿ	ಹಾವೇರಿ	ಮೆಟ್ರಿಕ್ ಪೂರ್ವ ಬಾಲಕಿಯರು	28	
72		ಹಿರೇಕೆರೂರು	ಮೆಟ್ರಿಕ್ ನಂತರ ಬಾಲಕರ	50	
73		ಹಾವೇರಿ ನಗರ	ಮೆಟ್ರಿಕ್ ಪೂರ್ವ ಬಾಲಕರ	ಪ್ರಾರಂಭಿಸಿಲ್ಲ	2009-10ನೇ ಸೆಪ್ಟೆಂಬರ್ ಅಂತ್ಯದಲ್ಲಿ ಮಂಜೂರು ಮಾಡಲಾಗಿದ್ದು, ಹೊಸ ಕಟ್ಟಡ ಹಾಗೂ ಅಗತ್ಯ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭವಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
74	ಹಾಸನ	ಹಾಸನ ನಗರ	ಮೆಟ್ರಿಕ್ ನಂತರ ಬಾಲಕಿಯರು	50	
75		ಅರಕಲಗೂಡು, ಕೊಣನೂರು	ಮೆಟ್ರಿಕ್ ಪೂರ್ವ ಬಾಲಕರ	45	
76		ಸಕಲೇಶಪುರ	ಮೆಟ್ರಿಕ್ ಪೂರ್ವ ಬಾಲಕಿಯರು	50	
77		ಚನ್ನರಾಯಪಟ್ಟಣ	ಮೆಟ್ರಿಕ್ ಪೂರ್ವ ಬಾಲಕಿಯರು	32	
78		ಆಲೂರು ಟೌನ್	ಮೆಟ್ರಿಕ್ ಪೂರ್ವ ಬಾಲಕಿಯರು	50	
79		ಬೇಲೂರು	ಮೆಟ್ರಿಕ್ ಪೂರ್ವ ಬಾಲಕರ	39	
80		ಹೊಳೇನರಸೀಪುರ	ಮೆಟ್ರಿಕ್ ನಂತರ ಬಾಲಕರ	39	
81		ಬಾಲಕರ ವಿದ್ಯಾರ್ಥಿನಿಲಯ ಹಾಸನ	ಮೆಟ್ರಿಕ್ ನಂತರ ಬಾಲಕರ	50	
82	ಕೊಪ್ಪಳ	ಕೊಪ್ಪಳ ನಗರ	ಮೆಟ್ರಿಕ್ ಪೂರ್ವ ಬಾಲಕರ	50	
83		ಕೊಪ್ಪಳ ನಗರ	ಮೆಟ್ರಿಕ್ ನಂತರ ಬಾಲಕಿಯರು	50	
84		ಗಂಗಾವತಿ	ಮೆಟ್ರಿಕ್ ಪೂರ್ವ ಬಾಲಕಿಯರು	50	

85		ಗಂಗಾವತಿ	ಮೆಟ್ರಿಕ್ ಪೂರ್ವ ಬಾಲಕರು	50	
86		ಗಂಗಾವತಿ	ಮೆಟ್ರಿಕ್ ನಂತರ ಬಾಲಕರು	50	
87		ಗಂಗಾವತಿ	ಮೆಟ್ರಿಕ್ ಪೂರ್ವ ಬಾಲಕರು	50	
88		ಬಸವಪಟ್ಟಣ	ಮೆಟ್ರಿಕ್ ನಂತರ ಬಾಲಕರು	50	
91	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಮೆಟ್ರಿಕ್ ನಂತರ ಬಾಲಕರು	ಪ್ರಾರಂಭಿಸಿಲ್ಲ	2009-10ನೇ ಸಾಲಿನಲ್ಲಿ [illegible] ನಿಲಯವು ಮಂಜೂರಾಗಿದ್ದು, ಸೀಟ್ ಭರ್ತಿ ಮಾಡಲು ಅಗತ್ಯ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭವಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
89	ಕೋಲಾರ	ಮುಳಬಾಗಿಲು ಟೌನ್	ಮೆಟ್ರಿಕ್ ಪೂರ್ವ ಬಾಲಕರು	50	
90		ಮುಳಬಾಗಿಲು	ಮೆಟ್ರಿಕ್ ಪೂರ್ವ ಬಾಲಕಿಯರು	44	
92		ಕೋಲಾರ ನಗರ	ಮೆಟ್ರಿಕ್ ನಂತರ ಬಾಲಕಿಯರು	ಪ್ರಾರಂಭಿಸಿಲ್ಲ	2009-10ನೇ ಸಾಲಿನಲ್ಲಿ [illegible] ನಿಲಯವು ಮಂಜೂರಾಗಿದ್ದು, ಸೀಟ್ ಭರ್ತಿ ಮಾಡಲು ಅಗತ್ಯ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭವಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
93	ಕೊಡಗು	ಮಡಿಕೇರಿ ನಗರ	ಮೆಟ್ರಿಕ್ ನಂತರ ಬಾಲಕಿಯರು	50	
94		ಕೊಡಗು ನಗರ	ಮೆಟ್ರಿಕ್ ನಂತರ ಬಾಲಕರ	39	
95	ಮಂಡ್ಯ	ಮಂಡ್ಯ	ಮೆಟ್ರಿಕ್ ನಂತರ ಬಾಲಕಿಯರು	ಪ್ರಾರಂಭಿಸಿಲ್ಲ	ಅಗತ್ಯ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭವಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
96	ಮೈಸೂರು	ಮೈಸೂರು ನಗರ	ಮೆಟ್ರಿಕ್ ಪೂರ್ವ ಬಾಲಕಿಯರು	44	
97		ಮೈಸೂರು ನಗರ	ಮೆಟ್ರಿಕ್ ನಂತರ ಬಾಲಕಿಯರು	49	
98		ಹಲಗನ ಹಳ್ಳಿ	ಮೆಟ್ರಿಕ್ ನಂತರ ಬಾಲಕರ	50	
99	-	ಮೈಸೂರು ವಿಶ್ವವಿದ್ಯಾನಿಲಯ	ಮೆಟ್ರಿಕ್ ನಂತರ ಬಾಲಕಿಯರು	ಪ್ರಾರಂಭಿಸಿಲ್ಲ	2009-10ನೇ ಸಾಲಿನಲ್ಲಿ [illegible] ನಿಲಯವು ಮಂಜೂರಾಗಿದ್ದು, ಸೀಟ್ ಭರ್ತಿ ಮಾಡಲು ಅಗತ್ಯ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭವಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
100	ರಾಯಚೂರು	ರಾಯಚೂರು ನಗರ	ಮೆಟ್ರಿಕ್ ಪೂರ್ವ ಬಾಲಕಿಯರು	50	
101		ರಾಯಚೂರು ನಗರ	ಮೆಟ್ರಿಕ್ ಪೂರ್ವ ಬಾಲಕರ	50	
103		ರಾಯಚೂರು ನಗರ	ಮೆಟ್ರಿಕ್ ನಂತರ ಬಾಲಕಿಯರು	45	
104		ಕಲ್ಮಲ	ಮೆಟ್ರಿಕ್ ನಂತರ ಬಾಲಕರ	49	
105		ಲಿಂಗಸಗೂರು	ಮೆಟ್ರಿಕ್ ಪೂರ್ವ ಬಾಲಕರ	50	
106		ದೇವದುರ್ಗ	ಮೆಟ್ರಿಕ್ ಪೂರ್ವ ಬಾಲಕರ	45	

107	ರಾಮನಗರ ನಗರ	ರಾಮನಗರ ನಗರ	ಮೆಟ್ರಿಕ್ ಪೂರ್ವ ಬಾಲಕಿಯರು	38	
108		ರಾಮನಗರ ನಗರ	ಮೆಟ್ರಿಕ್ ಪೂರ್ವ ಬಾಲಕರ	43	
109		ಚನ್ನಪಟ್ಟಣ ಟೌನ್	ಮೆಟ್ರಿಕ್ ನಂತರ ಬಾಲಕಿಯರು	48	
110		ರಾಮನಗರ ನಗರ	ಮೆಟ್ರಿಕ್ ನಂತರ ಬಾಲಕರ	ಪ್ರಾರಂಭಿಸಿಲ್ಲ	2009-10ರ ಡಿಸೆಂಬರ್ ಅಂತ್ಯದಲ್ಲಿ ಮಂಜೂರು ಮಾಡಲಾಗಿದ್ದು, ಹಾಸ್ಟೆಲ್ ಕಟ್ಟಡ ಹಾಗೂ ಅರ್ಹ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭವಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
111	ಶಿವಮೊಗ್ಗ	ಶಿವಮೊಗ್ಗ ನಗರ	ಮೆಟ್ರಿಕ್ ನಂತರ ಬಾಲಕಿಯರು	50	
112		ಶಿಕಾರಿಪುರ	ಮೆಟ್ರಿಕ್ ಪೂರ್ವ ಬಾಲಕರ	50	
113		ಶಿಕಾರಿಪುರ ಪಟ್ಟಣ	ಮೆಟ್ರಿಕ್ ಪೂರ್ವ ಬಾಲಕರು	50	
114		ಶಿರಾಳಕೊಪ್ಪ	ಮೆಟ್ರಿಕ್ ಪೂರ್ವ ಬಾಲಕಿಯರು	50	
115		ಶಿರಾಳಕೊಪ್ಪ	ಮೆಟ್ರಿಕ್ ಪೂರ್ವ ಬಾಲಕಿಯರು	50	
116		ಭದ್ರಾವತಿ	ಮೆಟ್ರಿಕ್ ನಂತರ ಬಾಲಕರ	50	
117		ಕುವೆಂಪು ವಿಶ್ವವಿದ್ಯಾನಿಲಯ ಶಿವಮೊಗ್ಗ	ಮೆಟ್ರಿಕ್ ನಂತರ ಬಾಲಕಿಯರು	ಪ್ರಾರಂಭಿಸಿಲ್ಲ	2009-10ರ ಡಿಸೆಂಬರ್ ಅಂತ್ಯದಲ್ಲಿ ಮಂಜೂರು ಮಾಡಲಾಗಿದ್ದು, ಹಾಸ್ಟೆಲ್ ಕಟ್ಟಡ ಹಾಗೂ ಅರ್ಹ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭವಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
118	ತುಮಕೂರು	ತುಮಕೂರು ನಗರ	ಮೆಟ್ರಿಕ್ ನಂತರ ಬಾಲಕಿಯರು	41	
119		ಶಿರಾ	ಮೆಟ್ರಿಕ್ ಪೂರ್ವ ಬಾಲಕಿಯರು	47	
120		ತುರುವೇಕೆರೆ	ಮೆಟ್ರಿಕ್ ಪೂರ್ವ ಬಾಲಕರ	43	
121		ತುಮಕೂರು ನಗರ	ಮೆಟ್ರಿಕ್ ನಂತರ ಬಾಲಕರ	40	
122	ಉತ್ತರ ಕನ್ನಡ	ಭಟ್ಕಳ	ಮೆಟ್ರಿಕ್ ನಂತರ ಬಾಲಕಿಯರು	ಪ್ರಾರಂಭಿಸಿಲ್ಲ	ಹಾಸ್ಟೆಲ್ ಕಟ್ಟಡ ಹಾಗೂ ಅರ್ಹ ವಿದ್ಯಾರ್ಥಿಗಳ ಕೊರತೆಯಿಂದ ಪ್ರಾರಂಭವಾಗಿರುವುದಿಲ್ಲ, 2010-11 ರಿಂದ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
123	ಉಡುಪಿ	ಉಡುಪಿ	ಮೆಟ್ರಿಕ್ ನಂತರ ಬಾಲಕಿಯರು	39	
	ಒಟ್ಟು			5049	

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಬಗ್ಗೆ

473 (954) ಶ್ರೀ. ತನ್ವೀರ್ ಸೇಠ್, ಎಂ.ಎಲ್.ಎ. (ನರಸಿಂಹರಾಜ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಜಿಲ್ಲಾ ವಕ್ಫ್ ಸಲಹಾ ಸಮಿತಿಗಳ ಸಂಖ್ಯೆ ಎಷ್ಟು?

ಆ) ಎಷ್ಟು ಜಿಲ್ಲಾ ವಕ್ಫ್ ಸಲಹಾ ಮಂಡಳಿಗಳ ಪುನರ್ ರಚನೆಯಾಗಿದೆ (ಮಾಹಿತಿ ನೀಡುವುದು);

ಇ) ಎಷ್ಟು ಜಿಲ್ಲಾ ವಕ್ಫ್ ಸಲಹಾ ಸಮಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಾಗಿದೆ?

ಈ) ಆಡಳಿತಾಧಿಕಾರಿಗಳ ಬದಲಾಗಿ ವಕ್ಫ್ ಸಲಹಾ ಮಂಡಳಿಗಳ ಪುನರ್ ರಚನೆ ಸರ್ಕಾರದ ಕ್ರಮಗಳೇನು?

ಉ) ವಕ್ಫ್ ಆಸ್ತಿಗಳ ಸಂರಕ್ಷಣೆಗೆ ಸರ್ಕಾರ ಈವರೆವಿಗೂ ಕೈಗೊಂಡಿರುವ ಕ್ರಮಗಳೇನು?

ಪ್ರೊ.ಡಾ: ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 29 ಜಿಲ್ಲೆಗಳ ಪೈಕಿ 22 ಜಿಲ್ಲೆಗಳಲ್ಲಿ ವಕ್ಫ್ ಸಲಹಾ ಸಮಿತಿಗಳನ್ನು 3 ವರ್ಷದ ಅವಧಿಗೆ ರಚಿಸಲಾಗಿದೆ.

ಆ) ರಚನೆಯಾಗಿರುವ 22 ಜಿಲ್ಲಾ ವಕ್ಫ್ ಸಲಹಾ ಸಮಿತಿಗಳ ಆಡಳಿತ ಅವಧಿಯು 3 ವರ್ಷವಾಗಿಲ್ಲದಿರುವುದರಿಂದ ಅವಧಿಯು ಮುಗಿದ ಬಳಿಕ ಇವುಗಳ ಪುನರ್ ರಚನೆಗೆ ಕ್ರಮ ಕೈಗೊಳ್ಳಲಾಗುವುದು.

ಇ) ಉಳಿದ 7 ಜಿಲ್ಲೆಗಳ ಜಿಲ್ಲಾ ವಕ್ಫ್ ಸಲಹಾ ಸಮಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಆಡಳಿತಾಧಿಕಾರಿಗಳಾಗಿ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಥವಾ ಸೂಕ್ತ ಸರ್ಕಾರಿ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಈ) ಆಡಳಿತಾಧಿಕಾರಿಗಳ ಬದಲಾಗಿ ವಕ್ಫ್ ಸಲಹಾ ಮಂಡಳಿಗಳನ್ನು ಪುನರ್ ರಚಿಸುವ ಬಗ್ಗೆ ಶೀಘ್ರವೇ ಕ್ರಮಕೈಗೊಳ್ಳಲಾಗುವುದು.

ಉ) 1) ಕರ್ನಾಟಕ ರಾಜ್ಯ ಸರ್ಕಾರವು ವಕ್ಫ್ ಆಸ್ತಿಗಳ ಸಂರಕ್ಷಣೆಗಾಗಿ (Wakf Properties Review Committee) ವಕ್ಫ್ ಆಸ್ತಿಗಳ

ಪರಿಶೀಲನಾ ಸಮಿತಿಯನ್ನು ಹಜ್, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಿದೆ.

2) KPP Act, 1974 ರ ಅಡಿಯಲ್ಲಿ ವಕ್ಫ್ ಆಸ್ತಿಗಳಲ್ಲಿರುವ ಅನಧಿಕೃತ ಕಬ್ಜೆದಾರರನ್ನು ತೆರವುಗೊಳಿಸುವ ಸಕ್ಷಮ ಪ್ರಾಧಿಕಾರವಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

3) ವಕ್ಫ್ ಕಾಯ್ದೆ 1995ರ ಕಲಂ 54ರ ಅಡಿಯಲ್ಲಿ ವಕ್ಫ್ ಆಸ್ತಿಯಲ್ಲಿರುವ ಒತ್ತುವರಿಯನ್ನು ತೆರವುಗೊಳಿಸುವ ಕ್ರಮ ಜರುಗಿಸಲಾಗಿದೆ.

ಹೆಚ್.ಐ.ವಿ. ಭಾದಿತರ ಮಾಹಿತಿ

475 (180) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹೆಚ್.ಐ.ವಿ. ಪೀಡಿತರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಹೆಚ್.ಐ.ವಿ. ಒಂದನೇ ಹಂತದಲ್ಲಿರುವ ರೋಗಿಗಳಿಗೆ ಸರ್ಕಾರ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಿದೆ;

ಇ) ಹೆಚ್.ಐ.ವಿ. 2ನೇ ಹಂತದಲ್ಲಿರುವ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಈ) 2ನೇ ಹಂತದಲ್ಲಿರುವವರ ಚಿಕಿತ್ಸೆಗೆ ಸರ್ಕಾರ ಯಾವುದೇ ರೀತಿಯ ಸೌಲಭ್ಯವನ್ನು ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಬದುಕಬೇಕೆಂಬ ಆಸೆಯಿಂದ ದಿನನಿತ್ಯ ಕಾಯಿಲೆಯ ವಿರುದ್ಧ ಹೋರಾಡುತ್ತಿರುವ ರೋಗಿಗಳಿಗೆ ಸರ್ಕಾರ ಉಚಿತವಾಗಿ ವೈದ್ಯಕೀಯ ನೆರವನ್ನು ನೀಡುವುದೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಹೆಚ್.ಐ.ವಿ. ಬಾಧಿತರ ಒಟ್ಟು ಸಂಖ್ಯೆ 1,71,166. ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಒಂದನೇ ಹಂತದಲ್ಲಿರುವ ಹೆಚ್.ಐ.ವಿ ಸೋಂಕಿತರಿಗೆ ಉಚಿತ ಆಪ್ತಸಮಾಲೋಚನೆ ಮತ್ತು ಸಾಂದರ್ಭಿಕ ಸೋಂಕುಗಳ ಚಿಕಿತ್ಸೆ ಜೊತೆಗೆ ಸಿಡಿ4 ಪರೀಕ್ಷೆಯ ಸೌಲಭ್ಯ ಒದಗಿಸಿದೆ.

ಇ) ಹೆಚ್.ಐ.ವಿ. 2ನೇ ಹಂತ ಚಿಕಿತ್ಸೆಯಲ್ಲಿರುವವರ ಸಂಖ್ಯೆ 25, ಬೆಂಗಳೂರಿನ ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆಯನ್ನು ಸೆಂಟರ್ ಆಫ್ ಎಕ್ಸಲೆನ್ಸ್ ಎಂದು ಗುರುತಿಸಲಾಗಿದ್ದು, ಇಲ್ಲಿ ಕರ್ನಾಟಕ ಮತ್ತು ಕೇರಳ ರಾಜ್ಯಗಳ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಜಿಲ್ಲಾವಾರು ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಜಿಲ್ಲೆ	ಹೆಚ್.ಐ.ವಿ. 2ನೇ ಹಂತದ ಪೀಡಿತರ ಸಂಖ್ಯೆ
1	ಬಳ್ಳಾರಿ	02
2	ಬೆಂಗಳೂರು	08
3	ಚಿತ್ರದುರ್ಗ	01
4	ಧಾರವಾಡ	05
5	ಗದಗ	01
6	ಗುಲ್ಬರ್ಗಾ	01
7	ಹಾಸನ	02
8	ಕೋಲಾರ	01
9	ಮಂಗಳೂರು	01
10	ಮೈಸೂರು	01
11	ತುಮಕೂರು	01
12	ಉಡುಪಿ	01
	ಒಟ್ಟು	25

ಈ) 2ನೇ ಹಂತದಲ್ಲಿರುವವರಿಗೆ ಉಚಿತ ಪರೀಕ್ಷೆ ಮತ್ತು ಚಿಕಿತ್ಸೆ ಜೊತೆಗೆ ಸಿ.ಡಿ. 4 ಮತ್ತು ವೈರಲ್ ಲೋಡ್ ಪರೀಕ್ಷೆ ಸೌಲಭ್ಯ ಕಲ್ಪಿಸಲಾಗಿದೆ.

ಉ) ಚಿಕಿತ್ಸೆ ಮತ್ತು ಅಗತ್ಯವಿರುವ ವೈದ್ಯಕೀಯ ನೆರವುಗಳನ್ನು ಸರ್ಕಾರವು ಉಚಿತವಾಗಿ ನೀಡುತ್ತಿದೆ.

ಅನುಬಂಧ – 1

ರಾಜ್ಯದಲ್ಲಿ ಹೆಚ್.ಐ.ವಿ. ಸೋಂಕಿತರ ಜಿಲ್ಲಾವಾರು ಸಂಖ್ಯೆ (1997 ರಿಂದ ಜನವರಿ 2010 ರವರೆಗೆ)

ಒಟ್ಟು ಹೆಚ್.ಐ.ವಿ ಬಾಧಿತರ ಸಂಖ್ಯೆ: 171166 ಜಿಲ್ಲಾವಾರು ವಿವರ (1997 ರಿಂದ 2010 ಜನವರಿ)		
ಕ್ರಮ ಸಂಖ್ಯೆ	ಜಿಲ್ಲೆ	ಹೆಚ್.ಐ.ವಿ ಸೋಂಕಿತರು
1	ಬಾಗಲಕೋಟೆ	16931
2	ಬೆಂಗಳೂರು ನಗರ	14317
3	ಬೆಂಗಳೂರು ಗ್ರಾಮೀಣ	775
4	ಬೆಳಗಾವಿ	16022
5	ಬಳ್ಳಾರಿ	10288
6	ಬೀದರ್	2087
7	ಬಿಜಾಪುರ	11223
8	ಚಾಮರಾಜನಗರ	1926
9	ಚಿಕ್ಕಬಳ್ಳಾಪುರ	791
10	ಚಿಕ್ಕಮಗಳೂರು	2094
11	ಚಿತ್ರದುರ್ಗ	2376
12	ದಕ್ಷಿಣ ಕನ್ನಡ	5753
13	ದಾವಣಗೆರೆ	5844
14	ಧಾರವಾಡ	14802
15	ಗದಗ	4472
16	ಗುಲ್ಬರ್ಗಾ	6420
17	ಹಾಸನ	3346
18	ಹಾವೇರಿ	3049
19	ಕೊಡಗು	1219
20	ಕೋಲಾರ	3339
21	ಕೊಪ್ಪಳ	5973

22	ಮಂಡ್ಯ	3887
23	ಮೈಸೂರು	10275
24	ರಾಯಚೂರು	6151
25	ರಾಮನಗರ	853
26	ಶಿವಮೊಗ್ಗ	3094
27	ತುಮಕೂರು	5359
28	ಉಡುಪಿ	5943
29	ಉತ್ತರ ಕನ್ನಡ	1583
30	ಯಾದಗಿರಿ	974

ವಸತಿ ಶಾಲೆ ಮಂಜೂರಾತಿ

476 (749) ಶ್ರೀ ವೀರಬದ್ರಪ್ಪ ಹಾಲಹರವಿ (ಹುಬ್ಬಳ್ಳಿ ಧಾರವಾಡ ಪೂರ್ವ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಪೂರ್ವ ಮೀಸಲು ವಿಧಾನ ಸಭಾ ಕ್ಷೇತ್ರಕ್ಕೆ ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮಂಜೂರಾತಿ ನೀಡುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಆ) ಇದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು?

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಆ) ಮತ್ತು ಇ)

2010–11ನೇ ಸಾಲಿನಲ್ಲಿ ಅನುದಾನದ ಲಭ್ಯತೆ ಅನುಸಾರ ಕ್ರಮ ಜರುಗಿಸಲಾಗುವುದು.

ಡಾ|| ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ

478 (374) ಶ್ರೀ ವೆಂಟಕಸ್ವಾಮಿ (ದೇವನಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ತಾಲ್ಲೂಕಿನಲ್ಲಿ ಡಾ||ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣದ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಈ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಹೆಚ್ಚುವರಿ ಹಣ ಬಿಡುಗಡೆ ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಕಾಮಗಾರಿ ಪೂರ್ಣಗೊಳಿಸಲಾಗುವುದು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಮತ್ತು ಇ) ದೇವನಹಳ್ಳಿಯಲ್ಲಿ ಈ ಹಿಂದೆ ಒಂದು ಮಿನಿ ಅಂಬೇಡ್ಕರ್ ಭವನ ನಿರ್ಮಿಸಲಾಗಿತ್ತು. ಈ ಭವನದ ಪಕ್ಕದಲ್ಲಿ ಖಾಲಿ ಇರುವ ಸ್ಥಳದಲ್ಲಿ ಇನ್ನೊಂದು ಅಂಬೇಡ್ಕರ್ ಭವನ ನಿರ್ಮಿಸಲು 2006-07ನೇ ಸಾಲಿನಲ್ಲಿ ರೂ.76.50 ಲಕ್ಷಗಳ ಮೊತ್ತದ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ರೂ.15.00 ಲಕ್ಷಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿರುತ್ತದೆ. ಆದರೆ ಕಟ್ಟಡ ಕಾಮಗಾರಿಗಳು ಇನ್ನೂ ಪ್ರಾರಂಭವಾಗಿರುವುದಿಲ್ಲ.

ಸಮುದಾಯ ಭವನ ನಿರ್ಮಾಣ

479 (375) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಹೋಬಳಿ ಗ್ರಾಮಗಳಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲಾಗುವುದು (ವಿವರಗಳನ್ನು ತಿಳಿಸುವುದು);

ಆ) ಹಾಗಿದ್ದಲ್ಲಿ, ಆ ಗ್ರಾಮಗಳು ಯಾವುವು;

ಇ) ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು, ಇದಕ್ಕೆ ತಗಲುವ ಅನುದಾನ ಎಷ್ಟು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) 209-10ನೇ ಸಾಲಿನಲ್ಲಿ ದೇವನಹಳ್ಳಿ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ವಿಜಯಪುರ ಹೋಬಳಿಯಲ್ಲಿ ಒಂದು ಸಮುದಾಯ ಭವನ ಮಂಜೂರು ಮಾಡಲಾಗಿದೆ.

ಆ) ವಿಜಯಪುರ ಗ್ರಾಮ, ವಿಜಯಪುರ ಹೋಬಳಿ, ದೇವನಹಳ್ಳಿ ತಾಲ್ಲೂಕು.

ಇ) ರೂ.5.00 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ ಕಾಮಗಾರಿಯನ್ನು ಸಧ್ಯದಲ್ಲೆ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಾರಿಗೆ ಘಟಕದ ಸ್ಥಾಪನೆ

480 (377) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ತಾಲ್ಲೂಕಿನಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಘಟಕ ಸ್ಥಾಪನೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದರೆ, ಕಾಮಗಾರಿಯನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು; ಇದರ ಅಂದಾಜು ಅನುದಾನದ ಮೊತ್ತ ಎಷ್ಟು?

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) :

ಅ) ಹೌದು.

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವತಿಯಿಂದ ಘಟಕ ನಿರ್ಮಿಸಲು ನಿವೇಶನವನ್ನು ಗುರುತಿಸಿದ್ದು, ಕಂದಾಯ ಇಲಾಖಾ ವತಿಯಿಂದ ಹಸ್ತಾಂತರಿಸಿದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಸದರಿ ಯೋಜನೆಗೆ ಆಯವ್ಯಯದಲ್ಲಿ 300.00 ಲಕ್ಷ ರೂ.ಗಳನ್ನು ಅಳವಡಿಸಲಾಗಿದೆ.

ಅನುಬಂಧ– II

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಐದನೇ ಅಧಿವೇಶನ

ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2010
(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 8)

2010–2011ನೇ ಹಣಕಾಸು ಭಾಗದ ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೆಯಕ.

2010–11ನೇ ಹಣಕಾಸು ಭಾಗದ ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮವಾಗಲಿ.

1. **ಸಂಕ್ಷಿಪ್ತ ಹೆಸರು :–** ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಲೇಖಾನುದಾನ) ಅಧಿನಿಯಮ, 2010 ಎಂದು ಕರೆಯತಕ್ಕದ್ದು.

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2010–2011ನೇ ಹಣಕಾಸು ಭಾಗದ ವರ್ಷಕ್ಕಾಗಿ 2399571.80 ಲಕ್ಷ ರೂಪಾಯಿಗಳ ನೀಡಿಕೆ :–** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟ ಪಡಿಸಲಾದ ಸೇವೆಗಳ ಸಂಬಂಧದಲ್ಲಿ 2010–2011ನೇ ಹಣಕಾಸು ಭಾಗದ ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಇಪ್ಪತ್ತೂರು

0.17F-140

ಸಾವಿರದ ಒಂಭೈನೂರ ತೊಂಭತ್ತೈದು ಕೋಟಿ ಎಪ್ಪತ್ತೊಂದು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿನಿಂದ ಸಂದಾಯ ಮಾಡತಕ್ಕದ್ದು.

3. **ಧನವಿನಿಯೋಗ :–** ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ರೂ. ಲಕ್ಷಗಳಲ್ಲಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು: ವಿಧಾನಸಭೆಯಿಂದ ಪುರಸ್ಕೃತವಾದುದನ್ನು	ಮೀರದ ಮೊಬಲಗು: ಸಂಚಿತನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
1	2		3	4	5
01	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	68784.51	8.21	68792.72
		ಬಂಡವಾಳ	2604.56	-	2604.56
02	ಪಶು ಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	26613.16	-	26613.16
		ಬಂಡವಾಳ	2950.38	-	2950.38
03	ಆರ್ಥಿಕ	ರಾಜಸ್ವ	204064.72	5.00	204069.72
		ಬಂಡವಾಳ	1167.83	-	.1167.83
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜಸ್ವ	10385.37	3158.63	13544.00
		ಬಂಡವಾಳ	-	-	-
05	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	80441.79	-	80441.79
		ಬಂಡವಾಳ	13530.29	-	13530.29
06	ಮೂಲಭೂತ ಸೌಕರ್ಯ	ರಾಜಸ್ವ	330.77	-	330.77
		ಬಂಡವಾಳ	22654.99	-	22654.99
07	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್	ರಾಜಸ್ವ	69705.20	-	69705.20
		ಬಂಡವಾಳ	48842.44	-	48842.44
08	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ	ರಾಜಸ್ವ	18429.38	3001.68	21431.06
		ಬಂಡವಾಳ	133.00	-	133.00
09	ಸಹಕಾರ	ರಾಜಸ್ವ	13849.16	-	13849.16
		ಬಂಡವಾಳ	446.17	-	446.17

1	2		3	4	5
10	ಸಮಾಜ ಕಲ್ಯಾಣ	ರಾಜಸ್ವ	79644.66	-	79644.66
		ಬಂಡವಾಳ	9296.81	-	9296.81
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	57109.52	-	57109-52
		ಬಂಡವಾಳ	49901.01	-	49901.01
12	ವಾರ್ತೆ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	ರಾಜಸ್ವ	7606.56	-	7606.56
		ಬಂಡವಾಳ	4595.40	-	4595.40
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	30541.65	0.90	30542.55
		ಬಂಡವಾಳ	599.40	-	599.40
14	ಕಂದಾಯ	ರಾಜಸ್ವ	90506.15	-	90506.15
		ಬಂಡವಾಳ	6901.36	-	6901.36
15	ಮಾಹಿತಿ ತಂತ್ರಜ್ಞಾನ	ರಾಜಸ್ವ	2589.11	-	2589.11
		ಬಂಡವಾಳ	507.83	-	507.83
16	ವಸತಿ	ರಾಜಸ್ವ	29237.43	-	29237.43
		ಬಂಡವಾಳ	4153.30	-	4153.30
17	ಶಿಕ್ಷಣ	ರಾಜಸ್ವ	343985.41	-	343985.41
		ಬಂಡವಾಳ	9305.35	-	9305.35
18	ವಾಣಿಜ್ಯ ಮತ್ತು ಕೈಗಾರಿಕೆ	ರಾಜಸ್ವ	33840.92	0.09	33841.01
		ಬಂಡವಾಳ	3507.24	-	3507.24
19	ನಗರಾಭಿವೃದ್ಧಿ	ರಾಜಸ್ವ	151561.25	-	151561.25
		ಬಂಡವಾಳ	50299.65	-	50299.65
20	ಲೋಕೋಪಯೋಗಿ	ರಾಜಸ್ವ	43673.30	-	43673.30
		ಬಂಡವಾಳ	68282.45	-	68282.45
21	ಜಲಸಂಪನ್ಮೂಲ	ರಾಜಸ್ವ	13321.09	-	13321.09
		ಬಂಡವಾಳ	168507.87	-	168507.87

1	2		3	4	5
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	75738.12	-	75738.12
		ಬಂಡವಾಳ	13464.19	-	13464.19
23	ಕಾರ್ಮಿಕ	ರಾಜಸ್ವ	15354.46	-	15354.46
		ಬಂಡವಾಳ	499.50	-	499.50
24	ಇಂಧನ	ರಾಜಸ್ವ	95396.43	70.93	95467.36
		ಬಂಡವಾಳ	22633.01	-	22633.01
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	6737.79	-	6737.79
		ಬಂಡವಾಳ	699.63	-	699.63
26	ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	2062.12	-	2062.12
		ಬಂಡವಾಳ	8215.11	-	8215.11
27	ಕಾನೂನು	ರಾಜಸ್ವ	12483.32	-	12483.32
		ಬಂಡವಾಳ	299.70	-	299.70
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	2902.27	51.24	2953.51
		ಬಂಡವಾಳ	-	-	-
29	ಋಣ ಮೇಲುಸ್ತುವಾರಿ	ರಾಜಸ್ವ	-	210322.80	210322.80
		ಬಂಡವಾಳ	-	126969.24	126969.24
	ಒಟ್ಟು		2055983.09	343588.71	2399571.80

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2010–2011ನೇ ಹಣಕಾಸು ಭಾಗದ ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

* * * * *

ಮುದ್ರಕರು: ಸರ್ಕಾರಿ ಭದ್ರತಾ ಮುದ್ರಣಾಲಯ, ಪೀಣ್ಯ, ಬೆಂಗಳೂರು.